ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಡಿಸೆಂಬರ್ ತಾರೀಖು ೩ ನೆಯ ಸೋಮವಾರ | ಸಂಚಿಕೆ ೧೫.

ವರದಿಯು ಪ್ರಕಟವಾಯಿತು; ಮುಂದೇನು?

ಡ್ಯಾ. ಜಯಕರ.

"ಸರ್ವಪಕ್ಷೀಯ ಪರಿಷತ್ತಿನಲ್ಲಿ

ಏಕಮುಖವಾಗಿ ನಿರ್ಣಯಿಸಿರಿ."

—ಸಪ್ರು-ಜಯಕರ.

ಸರ್. ಸಪ್ರು.

ರಾಷ್ಟ್ರೀಯ ಸಭೆಯು ವಿಚಾರಿಸುತ್ತಲಿದೆ.

ಮಿತ್ರದ್ವಯರ ಪ್ರಕಟನೆ.

ಸರ್ ತೇಜ ಬಹಾದ್ದೂರ ಸಪ್ರು ಮತ್ತು ಶ್ರೀ ಜಯಕರರು ಜಾ. ಪಾ. ಕ. ವರದಿಯ ವಿಷಯವಾಗಿ ಒಂದು ವಿಸ್ತಾರವಾದ ಪ್ರಕಟನೆಯನ್ನು ಹೊರಡಿಸಿದ್ದಾರೆ. ಕೊನೆಯಲ್ಲಿ "ಸರ್ವ ಪಕ್ಷಗಳೂ ಒಮ್ಮನಸಿನಿಂದ ಏನಾದರೊಂದು ನಿರ್ಣಯ ಮಾಡಬೇಕು. ನಮ್ಮಲ್ಲಿಯ ಅನೈಕ್ಯದಿಂದಲೇ ನಮಗೆ ಇಂಥ ಅನಿಷ್ಟ ವರದಿಯು ಪ್ರಾಪ್ತವಾಗಿದೆ" ಎಂದು ಮುಂತಾಗಿ ಸೂಚಿಸಿರುವರು.

ರಾಷ್ಟ್ರ ಸಭೆಯ ವಿಚಾರ

ಇದೇ ೫ ನೆಯ ತಾರೀಖಿಗೆ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ ಮತ್ತು ಕಾಂಗ್ರೆಸ್ ವರ್ಕಿಂಗ ಕಮಿಟಿಗಳು ಜಾ. ಪಾ. ಕ. ವರದಿಯನ್ನು ವಿಚಾರಿಸಲು ನೆರೆಯುವವು. ಆಗ್ಗೆ ಸರ್ವಪಕ್ಷೀಯ ಪರಿಷತ್ತು ಈ ವರದಿಯ ಬಗ್ಗೆ ಮಾಡಿದ ನಿರ್ಣಯವನ್ನು ರಾಷ್ಟ್ರೀಯ ಸಭೆಯು ಅಂಗೀಕರಿಸಬಹುದೆ? ಎಂಬ ಪ್ರಶ್ನೆಯು ಪ್ರಾಮುಖ್ಯವಾಗಿ ವಿಚಾರಿಸಲ್ಪಡುವದು. ಈಗಾಗಲೆ ಸರದಾರ ವಲ್ಲಭಭಾಯಿ ಪಟೇಲ, ಶ್ರೀ ರಾಜಗೋಪಾಲಾಚಾರ್ಯ, ಶ್ರೀ ಗಂಗಾಧರರಾವ ದೇಶಪಾಂಡೆ ಮೊದಲಾದವರು ಇದೇ ವಿಷಯವಾಗಿ ವರ್ಧಾದಲ್ಲಿ ಚರ್ಚಿಸುತ್ತಿರುವರು. ಇವರು ನಿರ್ಣಯಮಾಡುವ ಪೂರ್ವದಲ್ಲಿ ಈ ವಿಷಯಕ್ಕೆ ಮಹಾತ್ಮಾಜಿಯವರ ಸಮ್ಮತಿಯನ್ನು ಕೇಳುವವರಿರುವರು.

ಮೂರು ರಾಷ್ಟ್ರಗಳ ನೌಕಾಬಲಚರ್ಚೆ.

ಶಸ್ತ್ರ ಸನ್ಯಾಸ ಪರಿಷತ್ತಿನ ಮಾತಂತೂ ತೀರಿತಷ್ಟೆ. ಈಗ ಅನೇಕ ದಿವಸಗಳಿಂದಲೂ ಇಂಗ್ಲಂಡ, ಜಪಾನ ಮತ್ತು ಅಮೇರಿಕಾ ದೇಶದ ಪ್ರತಿನಿಧಿಗಳು ಕೂಡಿ ಲಂಡನ್ ಪಟ್ಟಣದಲ್ಲಿ ನೌಕಾಬಲದ ವಿಷಯಕ್ಕೆ ಚರ್ಚೆನಡೆಯಿಸಿದ್ದಾರೆ—ಜಪಾನದ ಪ್ರತಿನಿಧಿಯು ಅನ್ನುವದೇನಂದರೆ—"ನಾವು ಒಬ್ಬರಿಗೊಬ್ಬರು ಉಪದ್ರವಕೊಡಲಾಗದು. ಅಥವಾ ಏರಿಬರಲಾಗದು. ಆದುದರಿಂದ ಈಗ ನಮ್ಮ ಮೇಲಿರುವ ಶಸ್ತ್ರಾಸ್ತ್ರನಿರ್ಬಂಧವನ್ನು ಅಂದರೆ ಇಂತಿಷ್ಟೇ ಬಲವಿರಬೇಕೆಂಬ ನಿರ್ಬಂಧವನ್ನು ತೆಗೆದುಬಿಡೋಣ. ಸದ್ಯಕ್ಕೆ ಸರ್ವ ಸಾಮಾನ್ಯವಾಗಿ ನಮಗೆ ಶಕ್ಯವಿದ್ದಷ್ಟು ಬಲವನ್ನು ಹೆಚ್ಚಿಸೋಣ ಅಂದರೆ ಶಾಂತತೆಯಿರುವದು."

ಇದಕ್ಕೆ ಅಮೇರಿಕೆಯ ಪ್ರತಿನಿಧಿಯು ಅನ್ನುವದೇನಂದರೆ "ವಾಶಿಂಗಟನ್ ಒಪ್ಪಿಗೆಯಂತೆ ಜಪಾನವು ನಡೆಯದಿದ್ದರೆ ಅಮೇರಿಕೆಯೂ ತನ್ನ ನೌಕಾಬಲವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುವದು." ಹೀಗಾಗಿ ಈ ಚರ್ಚೆಯು ಇನ್ನೂ ಬೆಳೆಯುತ್ತಲೇ ಇದೆ.

ಸ್ವಾತಂತ್ರ್ಯವೀರನ ಸ್ಮಾರಕ ಸ್ಥಲ.

ನಮ್ಮ ದೇಶದಲ್ಲಿ ಅನೇಕ ಭವ್ಯವಾದ ದೇವಾಲಯಗಳುಳ್ಳ ತೀರ್ಥ ಕ್ಷೇತ್ರಗಳು ಎಷ್ಟೋ ಇವೆ. ಲಕ್ಷಾವಧಿ ಯಾತ್ರಿಕರು ಅವು ಪೂಜ್ಯವೆಂದೂ ಪವಿತ್ರವೆಂದೂ ಅಲ್ಲಿಗೆ ಹೋಗಿಬರುತ್ತಾರೆ. ಅವರು ಬಂದಮೇಲೆ ನೀವು ಏನು ಕಂಡುಬಂದಿರಿ ಎಂದು ಯಾರಾದರು ಕೇಳಿದರೆ ಯಾತ್ರೆ ಮಾಡಿದವರು— ನಾವು ಹಿಂದೆ ಮಾಡಿದ ಪಾಪವೆಲ್ಲಾ ತೊಳೆದುಹೋಯಿತು. ಎಂದು ಒಂದೇ ಉತ್ತರಕೊಡುತ್ತಾರೆ. ತೀರ್ಥಯಾತ್ರೆಯ ಫಲವೆಂದರೆ ಇದೆ! ಆದರೆ ಅಮೇರಿಕೆಯಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪುಣ್ಯ ಪುರುಷರ ಸಮಾಧಿಗಳು ಇಲ್ಲವೆ ಸ್ವಾತಂತ್ರ್ಯ ದ್ಯೋತಕ ಮೂರ್ತಿಗಳು ಇರುವ ಸ್ಥಾನಗಳೇ ಪವಿತ್ರ ಕ್ಷೇತ್ರಗಳಾಗಿವೆ. ಇಂಥವುಗಳಲ್ಲಿ “ಅಮೇರಿಕೆಯ ಸ್ವಾತಂತ್ರ್ಯ ದೇವತೆ” ಎಂಬ ಲೇಖನದಲ್ಲಿ ಹಿಂದೊಮ್ಮೆ ಅಮೇರಿಕನ್ನರಿಗೆ ಸ್ವಾತಂತ್ರ್ಯದ ವಿಷಯಕ್ಕಿರುವ ಉತ್ಕಟ ಅಭಿಮಾನವನ್ನು ತಿಳಿಸಿದ್ದಾಗಿದೆ. ಈ ಲೇಖನದಲ್ಲಿ ಅಮೇರಿಕೆಯ ಸ್ವಾತಂತ್ರ್ಯ ಜನಕನಾದ ಜಾರ್ಜ ವಾಶಿಂಗಟನ್ನನ ಸಮಾಧಿ ಇರುವ ಸ್ಥಾನವನ್ನೂ ಮತ್ತು ಅದನ್ನು ಅಮೇರಿಕನ್ನರು ಎಷ್ಟು ಪೂಜ್ಯತೆಯಿಂದ ಕಾಣುತ್ತಿರುವರೆಂಬುದನ್ನೂ ತೋರಿಸಲಾಗುವುದು.

ಜಾರ್ಜ ವಾಶಿಂಗಟನ್ನನು ಬಾಲ್ಯಕಾಲದಲ್ಲ ‘ಮಾವುಂಟ ವ್ಹರ್ನನ್’ ಎಂಬ ಸ್ಥಾನದಲ್ಲಿರುತ್ತಿದ್ದನು. ಅವನು ವಿವಾಹವಾಗಲು ಹೆಂಡತಿಯ ಕಡೆಯಿಂದ ಅಗಣಿತ ದ್ರವ್ಯವು ದೊರೆಯಿತು. ಆ ದ್ರವ್ಯದಿಂದ ಅವನು ತನ್ನ ಮನೆಯ ಸುತ್ತಲಿನ ೧೫ ಸಾವಿರ ಎಕರೆ ಭೂಮಿಯನ್ನು ಕೊಂಡುಕೊಂಡನು. ತಾರುಣ್ಯಕಾಲದಲ್ಲ ಅತುಲ ಸಂಪತ್ತಿನಿಂದಲೂ ಪ್ರೀತಿಯ ಪತ್ನಿಯಿಂದಲೂ ಕೂಡಿಕೊಂಡು ಅವನು ಈ ಪ್ರದೇಶದಲ್ಲಿ ಅನೇಕ ಸುಖಗಳನ್ನು ಭೋಗಿಸಿದನು. ಒಮ್ಮೆ ಒಕ್ಕಲತನ ಮಾಡಿಸುವನು; ಮತ್ತೊಮ್ಮೆ ಹಾವುಂಡ ನಾಯಿಗಳನ್ನು ಸಾಕಿ ಬೇಟೆಯಾಡುವನು ಒಮ್ಮೆ ಶರ್ಯತ್ತಿನಲ್ಲಿ ಭಾಗವಹಿಸಿದರೆ ಇನ್ನೊಮ್ಮೆ ನೌಕಾ ವಿಹಾರಮಾಡುವನು.

ಇಷ್ಟರಲ್ಲಿ ೧೭೭೫ ನೆಯ ಇಸ್ವಿಯು ಬಂದಿತು. ಅಮೇರಿಕೆಯ ಸ್ವಾತಂತ್ರ್ಯ ಯುದ್ಧವು ಪ್ರಾರಂಭವಾಯಿತು. ವಾಶಿಂಗಟನ್ನನು ಇಂಥ ಸಮಯದಲ್ಲಿ ಆಟನೋಟಗಳಲ್ಲಿಯೇ ಕಾಲಕಳೆಯುವವನೇ? ಸಂಸಾರದ ಸುಖಗಳನ್ನೆಲ್ಲ ಸರಿಸಿಟ್ಟು ಸ್ವಾತಂತ್ರ್ಯ ಸಮರಕ್ಕೆ ಸನ್ನದ್ಧನಾದನು. ದೇಶವು ಅವನೇ ಮುಖ್ಯ ನಾಯಕನಾಗಲು ತಕ್ಕವನೆಂದು ಸ್ವೀಕರಿಸಿತು. ವಾಶಿಂಗಟನ್ನನಿಗೆ ಆಗ್ಗೆ ೪೩ ವರ್ಷ. ಬಳಿಯಲ್ಲಿ ಸಾಕಷ್ಟು ಸೈನ್ಯವಿಲ್ಲ; ನೌಕಾಬಲವಂತೂ ಮೊದಲೇ ಇಲ್ಲ. ಹೋರಾಡಬೇಕಾದುದು ಒಂದು ಪ್ರಬಲರಾಷ್ಟ್ರವಾಗಿದ್ದ ಬ್ರಿಟನ್ನಿನ ಸಂಗಡ ಅದರ ನೌಕಾಬಲವು ಅಜಿಂಕ್ಯವಾಗಿದ್ದಿತು. ಇಂಥ ಕಾಲದಲ್ಲಿ ತರುಣ ವಾಶಿಂಗಟನ್ನನಿಗೆ ಕೇವಲ ಅವನ ಸ್ವಾತಂತ್ರ್ಯ ಪ್ರೇಮವೇ ಬಲವು. ಅವನಂತೆಯೇ ಸ್ವಾತಂತ್ರ್ಯಕ್ಕಾಗಿ ಜೀವಕ್ಕೆ ಜೀವ ಕೊಡಲು ಸಿದ್ಧರಾದ ಅವನ ದೇಶಬಂಧುಗಳ ಉಜ್ವಲವಾದ ದೇಶಾಭಿಮಾನವ ಬಲವೇ ಬಲವು. ೮ ವರುಷಗಳ ವರೆಗೆ ಅವನು ಸ್ವಾತಂತ್ರ್ಯಕ್ಕಾಗಿ ಹೋರಾಡಿದನು. ಈ ಅವಧಿಯಲ್ಲಿ ಅವನು ತೋರಿಸಿದ ಸಾಹಸ, ಚಾತುರ್ಯ, ಶೌರ್ಯಗಳು ಮನನೀಯವಾಗಿವೆ. ಅವನು ಸಂಕಟಪಟ್ಟುದು ಅಷ್ಟಿಷ್ಟಲ್ಲ. ಅವನ ಜನ್ಮವು ಸಾರ್ಥಕವಾಯಿತು ಅಮೇರಿಕೆಯು ಸ್ವಾತಂತ್ರ್ಯವನ್ನು ಸಂಪಾದಿಸಿತು. ರಾಷ್ಟ್ರಸೇವೆಗಾಗಿ ದೇಹ ಮನ ಪ್ರಾಣಗಳನ್ನೇ ಧಾರೆಯೆರೆದಿದ್ದ ಅವನು ಭೂದೇವಿಯ ಋಣವನ್ನು ತೀರಿಸಿದನು. ಅಮೇರಿಕಾ ಸಂಯುಕ್ತ ಸಂಸ್ಥಾನಗಳೆಲ್ಲ ಸ್ವತಂತ್ರವಾಗಿ ತೀರಿಸಲಾರದಷ್ಟು ಅವನಿಗೆ ಋಣಿಯಾದವು.

ಸ್ವಾತಂತ್ರ್ಯ ಸಂಪಾದನೆಯಿಂದ ಅಮೇರಿಕನ್ನರಿಗಾದ ಆನಂದವು ಅಷ್ಟಿಷ್ಟಲ್ಲ. ಅವನು ಹೋರಾಟ ತೀರಿದ ಮೇಲೆ ಪುನಃ ತನ್ನ ಪೂರ್ವದ ವಾಸಸ್ಥಾನದಲ್ಲಿಯೇ ಬಂದಿರಹತ್ತಿದರೂ ಜನರು ಆತನ ದರ್ಶನಕ್ಕೆ ಗುಂಪುಗುಂಪಾಗಿ ಬರುತ್ತಿದ್ದರು. ಜಗತ್ತಿನ ಪ್ರಮುಖ ರಾಷ್ಟ್ರಗಳ ರಾಯಭಾರಿಗಳೂ, ಅತಿಥಿಗಳೂ ವಾಶಿಂಗಟನ್ನನನ್ನು ಕಾಣದೆ ಹೋಗುತ್ತಿದ್ದಿಲ್ಲ ಹೀಗಾಗಿ ಆ ಕಾಲದಿಂದಲೇ ಅವನ ವಾಸಸ್ಥಳವು ಒಂದು ಪವಿತ್ರ ಕ್ಷೇತ್ರವಾಗಿ ಪರಿಣಮಿಸಿತು.

ರಾಷ್ಟ್ರವನ್ನು ಸ್ವತಂತ್ರಮಾಡಿಕೊಟ್ಟಮೇಲೆ ಅದನ್ನು ಸರಿಯಾಗಿ ಸಂಘಟನೆಮಾಡಿ ಶಾಸನ ಮಾಡುವ ಭಾರವೂ ವಾಶಿಂಗಟನ್ನನಿಗೇ ಒಪ್ಪಿಸಲ್ಪಟ್ಟಿತು. ಶಾಸನ ಸಭೆಯ ಪ್ರಧಾನಪದವನ್ನು ಸ್ವೀಕರಿಸಲು ಅವನಿಗೆ ವಿಜ್ಞಾಪಿಸಿಕೊಳ್ಳಲಾಯಿತು. ವಾಶಿಂಗಟನ್ನನು ರಣದಲ್ಲಿ ಧುರೀಣನಾಗಿದ್ದಂತೆ ರಾಜಕಾರಣದಲ್ಲಿ ಚಾಣಾಕ್ಷನೂ ಆಗಿದ್ದನು. ನಾಲ್ಕು ತಿಂಗಳುಗಳ ವರೆಗೆ ಪ್ರಯತ್ನಿಸಿ ರಾಜ್ಯಘಟನೆಯನ್ನು ಸಿದ್ಧಗೊಳಿಸಿದನು. ಆದುದರಿಂದಲೇ ಅವನಿಗೆ “The Father of the American Constitution” ಎಂಬ ಸಾರ್ಥಕವಾದ ಹೆಸರು ಕೊಡಲ್ಪಟ್ಟಿತು ಈ ನವೀನ ಸಂಘಟನೆಯ ಮೇರೆಗೆ ಅಮೇರಿಕೆಯ ಅಧ್ಯಕ್ಷಸ್ಥಾನವು ವಾಶಿಂಗಟನ್ನನಿಗೇ ಕೊಡಲ್ಪಟ್ಟಿತು. ವಾಶಿಂಗಟನ್ನನು ೮ ವರ್ಷಗಳ ವರೆಗೆ ಅಮೇರಿಕೆಯ ರಾಜ್ಯಭಾರವನ್ನು ವಹಿಸಿ ಅದನ್ನು ಶಾಶ್ವತಗೊಳಿಸಿದನು.

ವಾಶಿಂಗಟನ್ನನ ರಾಷ್ಟ್ರಸೇವೆಯು ಸಂಪೂರ್ಣವಾಯಿತು. ಅನಂತರ ಅವನು ಪುನಃ ತನ್ನ ಪೂರ್ವದ ಪ್ರೀತಿಯ ವಾಸಸ್ಥಾನವಾದ ಮಾವುಂಟವ್ಹರ್ನನಕ್ಕೆ ಬಂದಿರಹತ್ತಿದನು. ಅಲ್ಲಿ ಎರಡುವರೆ ವರ್ಷಗಳ ವರೆಗಿದ್ದು ವೀರಸ್ವರ್ಗವನ್ನು ಹೊಂದಿದನು ಅವನ ಇಚ್ಛೆಯಂತೆ ಅವನ ಸಮಾಧಿಯನ್ನು ಮಾವುಂಟವ್ಹರ್ನನದಲ್ಲಿಯೇ ಮಾಡಲಾಯಿತು.

ವಾಶಿಂಗಟನ್ನನು ತೀರಿಕೊಂಡ ಮೇಲೆ ಅವನ ಆಸ್ತಿಯ ಮತ್ತು ಸಮಾಧಿಯ ವ್ಯವಸ್ಥೆಯು ಅವನ ಬಂಧುಬಾಂಧವರಿಂದ ಸರಿಯಾಗಿ ಸಾಗಲಿಲ್ಲ ಅವರು ಆ ಆಸ್ತಿಯನ್ನು ಅನ್ಯರಿಗೆ ಮಾರಲು ಸಿದ್ಧರಾದರು.

ಇದನ್ನು ಕಂಡು ಮಿಸ್ ಕನಿಂಗಹ್ಯಾಮ ಎಂಬ ಯುವತಿಗೆ ಒಳ್ಳೇ ಸಂತಾಪವಾಯಿತು. ಯಾವನು ದೇಶೋದ್ಧಾರಕ್ಕಾಗಿ ತನ್ನ ಸರ್ವಸ್ವವನ್ನರ್ಪಿಸಿದನೊ, ಯಾವನು ಪಾರತಂತ್ರ್ಯದ ಶೃಂಖಲೆಗಳನ್ನು ಕಡಿದುಹಾಕಿ ಅಮೇರಿಕೆಯನ್ನು ಸ್ವತಂತ್ರಗೊಳಿಸಿದನೊ ಮತ್ತು ಯಾವನು ರಣದಲ್ಲಿ, ರಾಜಕಾರಣದಲ್ಲಿ, ರಾಷ್ಟ್ರದ ಹೃದಯದಲ್ಲಿ ಪ್ರಥಮ ಸ್ಥಾನವನ್ನು ಪಡೆದಿರುವನೊ ಅಂಥ ಮಹಾತ್ಮನ ಪವಿತ್ರವಾದ ಸಮಾಧಿ ಸ್ಥಲವು ಅನ್ಯರಪಾಲು ಮಾಡುವದು ದೇಶದ್ರೋಹವೆಂದು ತಿಳಿದು ಆ ಸ್ವದೇಶಾಭಿಮಾನಶಾಲಿನಿಯು ಅವನದೊಂದು ಅದ್ವಿತೀಯವಾದ ಸ್ಮಾರಕವನ್ನು ಶಾಶ್ವತವಾಗಿ ಉಳಿಯುವಂತೆ ಮಾಡಬೇಕೆಂದು ಪ್ರಯತ್ನಿಸಹತ್ತಿದಳು. ಇದಕ್ಕಾಗಿ ಆ ಮಹಿಳೆಯು ತನ್ನಂಥ ಅಭಿಮಾನಶಾಲಿನಿಯರಾದ ಸ್ತ್ರೀಯರ ಒಂದು ಸಂಘವನ್ನೇ ಸ್ಥಾಪಿಸಿ ಅಮೇರಿಕೆಯ ಪ್ರತಿಯೊಂದು ಸಂಸ್ಥಾನಕ್ಕೆ ಒಬ್ಬೊಬ್ಬಳಂತೆ

ಸ್ಮಾರಕನಿಧಿಯನ್ನು ಕೂಡಿಸಲು ಕಳುಹಿಕೊಟ್ಟಳು. ಈ ಕಾರ್ಯಕ್ಕಾಗಿ ಹಿಂಯರೂ ಕಿರಿಯರೂ ಎಲ್ಲರೂ ಧನ ಸಹಾಯಮಾಡಿದರು. ಒಬ್ಬ ವಿದ್ವಾಂಸನು ಈ ಕಾರ್ಯಕ್ಕಾಗಿ ಅನೇಕಕಡೆ ವ್ಯಾಖ್ಯಾನಗಳನ್ನು ಮಾಡಿ ೬೯೦೯೪ ಡಾಲರ್ಸಗಳನ್ನು ಕೂಡಿಸಿಕೊಟ್ಟನು. ಆಸ್ತಿಯ ಮೇಲಿದ್ದ ೨ ಲಕ್ಷ ಡಾಲರುಗಳ ಸಾಲತೀರಿಸಿ ೨೩ ಸಾವಿರ ಡಾಲರುಗಳಿಂದ ಆ ಸ್ವಾತಂತ್ರ್ಯವೀರನ ಭವನ, ಸಮಾಧಿ ಮತ್ತು ಉಳಿದ ಕಟ್ಟಡಗಳನ್ನು ಸರಿಯಾಗಿ ಕಟ್ಟಿಸಿ ಉತ್ತಮ ವ್ಯವಸ್ಥೆ ಇಡಲಾಯಿತು.

ಈಗ ಈ ಸ್ಥಲವು ಜಗತ್ತಿನ ಎಲ್ಲ ಭಾಗಗಳಿಂದ ಯಾತ್ರಿಕರನ್ನು ಆಕರ್ಷಿಸುತ್ತದೆ. ಇದು ವಾಶಿಂಗಟನ್ನ ಪಟ್ಟಣದಿಂದ ೨೩ ಮೈಲುಗಳ ಮೇಲಿದೆ. ನಾಲ್ಕಾರು ಮೋಟಾರುಗಳು ಒಮ್ಮೆಲೆ ಎದುರು ಬದರು ಓಡಾಡುವಷ್ಟು ವಿಸ್ತೀರ್ಣವಾದ ರಾಜಮಾರ್ಗವು ಮಾಡಲ್ಪಟ್ಟಿದೆ. ರಾಜಮಾರ್ಗವನ್ನು ಒಳ್ಳೇ ಅಚ್ಚುಕಟ್ಟಾಗಿಟ್ಟಿರುವರು. ಮಧ್ಯದಲ್ಲಿ ಪೋಟೋಮ್ಯಾಕ್ ಎಂಬ ನದಿಯು ಹರಿಯುತ್ತಿರುತ್ತದೆ. ಇಲ್ಲಿಯ ನೈಸರ್ಗಿಕ ಸೌಂದರ್ಯವು ಅವರ್ಣನೀಯವಾಗಿದೆ. ಕಟ್ಟಡಗಳನ್ನು ಪ್ರವೇಶಿಸುವ ಹೆಬ್ಬಾಗಿಲಿನ ಮುಂದೆ ("Smoking not Allowed; Respect the Dead") ತಂಬಾಕು ಸೇದಲಾಗದು. ಮೃತರ ಬಗ್ಗೆ ಆದರ ವಹಿಸಿರಿ. ಎಂಬ ಹಲಿಗೆಯನ್ನು ಹಚ್ಚಿರುವರು.

ವಾಶಿಂಗಟನ್ನನು ವಾಸಿಸುವ ಗೃಹವು ಸ್ವಚ್ಛವಾಗಿರಿಸಲಾಗಿದೆ. ೧೪೦ ವರ್ಷಗಳ ಹಿಂದಿನ ಅವನ ಗಡಿಯಾಳವು ಇನ್ನೂ ನಡೆಯುತ್ತಿದ್ದು ಸರಿಯಾದ ವೇಳೆಯನ್ನು ತೋರಿಸುತ್ತದೆ ಅವನು ಓದುವ ಪುಸ್ತಕಗಳು, ಅವುಗಳಲ್ಲಿಯೂ Holy Bible ಗ್ರಂಥವು ನೋಡುವಂಥದಿರುತ್ತದೆ. ಯಾವ ಖಡ್ಗಗಳಿಂದ ಅವನು ಯುದ್ಧಮಾಡಿ ದೇಶವನ್ನು ಸ್ವತಂತ್ರಪಡಿಸಿದನೊ ಆ ಅವನ ಪ್ರೀತಿಯ ನಾಲ್ಕು ಖಡ್ಗಗಳು ಅಲ್ಲಿ ತೂಗಾಡುತ್ತಲಿವೆ. ಅವನ ಹಸ್ತಾಕ್ಷರಗಳು, ಅವನ ಪತ್ನಿಯ ಹೊಲಿಗೆಯ ಕೆಲಸಗಳು ಸರಿಯಾಗಿ ಇಡಲ್ಪಟ್ಟಿವೆ. ವಿಶೇಷವೇನಂದರೆ ಅವನು ನೂಲುತ್ತಿದ್ದ ನಾನಾಕರದ ರಾಟೆಗಳೂ ಇರುತ್ತವೆ. ಅಡಿಗೆಯಮನೆಯಲ್ಲಿ ಅಡಿಗೆಯ ಪಾತ್ರೆಗಳು, ಕಸ ಉಡುಗುವ ಕಸಬರಿಗೆಯು ಮತ್ತು ಸೆರಿ ಹಾಕುವ ಬುಡ್ಡಲಿಕೆಗಳು ಇದ್ದಕ್ಕಿದ್ದಂತೆ ಇಡಲ್ಪಟ್ಟಿರುತ್ತವೆ.

ಅವನ ಸಮಾಧಿಯಿರುವ ಸ್ಥಾನದ ಮುಂಭಾಗದಲ್ಲಿ 'Silence' ಶಾಂತತೆ ಎಂಬ ಹಲಿಗೆಯನ್ನು ಹಚ್ಚಿರುವರು.

ಅಮೇರಿಕನ್ನರು ಅನೇಕ ವಿಷಯಗಳಲ್ಲಿ ಸ್ವೈರಾಚರಣೆಯುಳ್ಳವರಾಗಿದ್ದರೂ ತಮ್ಮ ಸ್ವಾತಂತ್ರ‍್ಯ ವೀರನ ವಿಷಯದಲ್ಲಿ ಒಳ್ಳೇ ಪೂಜ್ಯತೆಯನ್ನು ವಹಿಸಿ ... ಪವಿತ್ರವಾದ ಪ್ರದೇಶದಲ್ಲಿ ತಂಬಾಕಿನ ಹೊಗೆಯು ಎಲ್ಲಿಯೂ ಕಂಡುಬರುವುದಿಲ್ಲ. ನೋಡಿದರೆ ಅಮೇರಿಕನ್ನರಷ್ಟು ತಂಬಾಕವನ್ನು ಯಾವ ದೇಶದವರೂ ಸೇದುತ್ತಿರುವದಿಲ್ಲ. ಸಮಾಧಿಯ ಹತ್ತಿರ ಸಾವಿರಾರು ಜನರು ನೆರೆಯಲಿ; ಸ್ವಲ್ಪಾದರೂ ಶಬ್ದವಾಗುವದಿಲ್ಲ ಒಂದು ಟಾಚಣಿಯು ಬಿದ್ದರೂ ಕೇಳಿಸಬಹುದಷ್ಟು ಶಾಂತತೆಯಿರುತ್ತದೆ ಇಂಥ ಅಗಾಧವಾದ ಶಾಂತತೆ ಮತ್ತು ಅನುಪಮವಾದ ನಿಸರ್ಗ ಸೌಂದರ್ಯದಿಂದ ಆ ಪ್ರದೇಶಕ್ಕೆ ಆಗಮಿಸಿದವರಿಗೆ ಆ ಗಂಭೀರವಾದ ವಾತಾವರಣದಲ್ಲಿ ಸ್ವಾತವೀರನ ವಿಷಯಕ್ಕೆ ನಮ್ರತೆಯೂ ಪೂಜ್ಯತೆಯೂ ಏಕಕಾಲದಲ್ಲಿ ಉತ್ಪನ್ನವಾಗುತ್ತವೆ. ಅಂಥ ನೋಟವನ್ನು ನೋಡಿದವರಿಗೆ ದೇಶಾಭಿಮಾನದ ವಿಷಯಕ್ಕೆ ಅನೇಕ ಅತ್ಯುಚ್ಚ ವಿಚಾರಗಳು ತಾವಾಗಿಯೇ ಹೊಳೆಯುತ್ತವೆ

ಕ್ಷೇತ್ರ ತೀರ್ಥಗಳಿಗೆ ಹೋಗುವ ಲಾಭವಿದು. ನಮ್ಮ ದೇಶದಲ್ಲಿಯೂ ಇಂಥ ಮಹಾಪುರುಷರು ಅಸಂಖ್ಯರಾಗಿದ್ದಾರೆ ಯಾವ ದೇಶವೂ ಇಲ್ಲಿಯಷ್ಟು ಅದ್ವಿತೀಯ ಪುತ್ರರತ್ನಗಳನ್ನು ಪ್ರಸವಿಸಿಲ್ಲ! ಹೀಗಿದ್ದು ಅವರ ಸ್ಮಾರಕದ ನೆನಪು ಯಾರಿಗಾದರೂ ಉಳಿದಿದೆಯೋ? ಅನೇಕ ತೀರ್ಥಯಾತ್ರೆಗಳನ್ನು ಮೇಲಿಂದ ಮೇಲೆ ಮಾಡುತ್ತ ಜನರು ತೀರ್ಥ ಮೇಲಿಂದ ಮೇಲೆ ... ರೆಂಬ ಕಲ್ಪನೆಯನ್ನು ತಾವಾಗಿಯೇ ತಂದ ಕೊಟ್ಟಂತಾಗುತ್ತದೆ. ಆದುದರಿಂದ ಇನ್ನು ಮೇಲೆ ದೇಶಕ್ಕಾಗಿ, ಸಮಾಜಕ್ಕಾಗಿ, ಈ ತನು ಮನ ಧನಗಳನ್ನು ಸವೆಸಿದ ಮಹನೀಯರ ಸ್ಥಾನಗಳು ನಮ್ಮ ತೀರ್ಥಯಾತ್ರಾ ಸ್ಥಾನಗಳಾಗಲಿ ಮತ್ತು ಇಂಥ ಉದಾಹರಣೆಗಳನ್ನು ಮುಂದಿಟ್ಟುಕೊಂಡು ... ದೇಶೋದ್ಧಾರಕ್ಕಾಗಿ ಟೊಂಕಕಟ್ಟಲಿ!

ನಿಮ್ಮ ಮನೆಗೆ ಅಲಂಕಾರವಾದ ಅನೇಕ ಬಣ್ಣಗಳಿಂದ ಕೂಡಿರುವ 10X14 ಸೈಜಿನ ಪಠಗಳು ಬೇಕೆ? ಹಾಗಾದರೆ ಕೆಳಗೆ ಕಂಡವುಗಳ ಪೈಕಿ 12 ಪಠಗಳು ಮಾತ್ರ ಒಂದು ರೂಪಾಯಿ ಕಳುಹಿಸಿದಲ್ಲಿ ಯಾವ ಖರ್ಚು ಇಲ್ಲದೆ ಕಳುಹಿಸುತ್ತೇವೆ.

ವಿ ಪಿ ಕಳುಹಿಸುವದಿಲ್ಲ.

1 ಗಣಪತಿ	8. ಲಕ್ಷ್ಮೀ.
2. ಕೋದಂಡರಾಮ	9 ಸರಸ್ವತಿ.
3. ರಾಧರುಕ್ಮಿಣಿ ಕೃಷ್ಣ	10. ಮಹಾತ್ಮಗಾಂಧಿ
4. ಶ್ರೀ ಕೃಷ್ಣ.	11. ಮಹಾವಿಷ್ಣು.
5. ಧ್ರುವನಾರಾಯಣ.	12. ಮಾಧವನನಿರೀಕ್ಷಣೆ
6. ಮಾರುತಿ	13. ರಾಧೆಯನಿರೀಕ್ಷಣೆ
7. ಅನಂತಪದ್ಮನಾಭ	14. ಕೃಷ್ಣಲೀಲಾ

15. ಬಸವೇಶ್ವರ.

12X16 ರ ಸೈಜು, ಬಸವೇಶ್ವರ 1 ಕ್ಕೆ 0-3 0

ಯುಬಮಾ ಅಂಡ್ ಸ, ಬೆಂಗಳೂರು ಸಿಟಿ.

ಹಿಂದು ಸಂಘಟನೆಯೆ? ವಿಘಟನೆಯೆ?

[ಲೇಖಕರು— ಶ್ರೀ. ನಾರಾಯಣ ಕೇಶವ ಬೆಹೆರೆ ಎಂ. ಎ; ಬಿ ಎಸ್ ಸಿ.]

ಹಿಂದುಸ್ಥಾನದ ರಾಜಕೀಯ ಮತ್ತು ಸಾಮಾಜಿಕ ಸುಖ ಶಾಂತಿಗಳಿಗೆ ಹಿಂದು ಸಂಘಟನೆಯು ಒಂದು ಮುಖ್ಯ ಸಾಧನವಾಗಿದೆ. ಈ ವಿಷಯದ ಉಪೇಕ್ಷೆಯು ಮುಂದಣ ಅನರ್ಥದ ಪೂರ್ವ ಸಿದ್ಧತೆಯೇ ಸರಿ. ಆದಕಾರಣ ಈ ದೇಶದ ಹಿತಚಿಂತಕರು ಕೇವಲ ರಾಜಕೀಯ ಗುಂಗಿನಲ್ಲಿಯೇ ಇರದೆ ಈ ವಿಷಯದ ಕಡೆಗೂ ತುಂಬಾ ಲಕ್ಷಿಸ ಬೇಕಾಗಿದೆ. ಈ ಸಂಬಂಧವಾಗಿ ಶ್ರೀ ಬೆಹೆರೆ ನಾರಾಯಣರಾಯರು **ಚಿತ್ರಮಯ ಜಗತ್** ಎಂಬ ಪತ್ರಿಕೆಯಲ್ಲಿ ಬರೆದ ಅತ್ಯಂತ ಮಹತ್ವವಾದ ಲೇಖನದಲ್ಲಿಯ ಮುಖ್ಯಾಂಶವನ್ನು ಕೊಟ್ಟಿದೆ.

ಸಂಘಟನೆಯೇಕೆ?

ಹಿಂದುಸಂಘಟನೆಯು ಅವಶ್ಯಕವೇ? ಇದು ಕ್ಷೇಮಕರವೇ? ಎಂದು ಕೇಳುವುದು ಹಾಸ್ಯಾಸ್ಪದವೇ ಸರಿ. ಏಕೆಂದರೆ ಸಂಘಟನೆಯೆಂದರೆ ಐಕಮತ್ಯ. ಐಕಮತ್ಯವೆಂದರೆ ಸಾಮರ್ಥ್ಯ. ಸಾಮರ್ಥ್ಯವೇ ಪ್ರಭುತ್ವಕ್ಕೆ ಮೂಲ. ಆದಕಾರಣ ಸಂಘಟನೆ ಬೇಡವೆಂದು ಯಾರು ಹೇಳುವರು? ಆದರೆ ಅದು ಐಕಮತ್ಯವರ್ಧನೆ ಆಗಬೇಕೇ ವಿನಾ ಅನೈಕಮತ್ಯವನ್ನುಂಟು ಮಾಡುವದಕ್ಕೆ ಬೇಡ. ದೇಶದಲ್ಲಿ ಪರಸ್ಪರ ಪ್ರೇಮಾದರಗಳನ್ನುಂಟು ಮಾಡಲು ಬೇಕೇ ವಿನಾ ದ್ವೇಷಾಸೂಯೆಗಳನ್ನು ಹೆಚ್ಚಿಸಲು ಬೇಡ.

ಹಿಂದು ಸಂಘಟನೆಯಿಂದ ಈ ದೇಶದಲ್ಲಿರತಕ್ಕ ಮುಸಲ್ಮಾನ ಕ್ರೈಸ್ತ ಮೊದಲಾದ ಬೇರೆ ಸಮಾಜಗಳ ಸಂಗಡ ಪ್ರೇಮಾದರಗಳು ಹೆಚ್ಚಬೇಕೇ ವಿನಃ ದ್ವೇಷಾಸೂಯೆಗಳುಂಟಾಗಬಾರದು. ಅನ್ಯರನ್ನು ತುಳಿಯುವದಕ್ಕಾಗಿ ಸಂಘಟನೆಯಲ್ಲ. ಅನ್ಯರನ್ನು ಪ್ರೇಮಾದರಗಳಿಂದ ಆಲಿಂಗಿಸಲು ಸಂಘಟನೆಯು ಅವಶ್ಯಕ. ಇಲ್ಲದಿದ್ದರೆ ಈ ದೇಶಕ್ಕೆ ಮಹತ್ತರವಾದ ಅನರ್ಥವೇ ಬರುವದು.

ಹಿಂದುಗಳಲ್ಲಿ ಬಲವೆಲ್ಲಿ?

ಹಿಂದುಗಳ ಪ್ರಬಲ ರಾಜಕೀಯ ಪ್ರಭುತ್ವವು ಜಗತ್ತಿನಲ್ಲಿದ್ದಿದ್ದರೆ, ಹಿಂದುಗಳಿಗೆ ರಾಜಕೀಯ ಸಾಮರ್ಥ್ಯದ ಬೆಂಬಲವಿದ್ದಿದ್ದರೆ, ಹಿಂದು ಸಂಘಟನೆಯ ಪ್ರಶ್ನೆಯೇ ಉಂಟಾಗುತ್ತಿರಲಿಲ್ಲ. ಕ್ರೈಸ್ತ ಧರ್ಮಕ್ಕೆ ಅಪಾರವಾದ ರಾಜಕೀಯ ಪ್ರಭುತ್ವವೂ ಅದ್ವಿತೀಯವಾದ ಸಾಂಪತ್ತಿಕ ವೈಭವವೂ ಸಹಾಯವಾಗಿವೆ. ಹಿಂದುಸ್ಥಾನದಲ್ಲಿರುವ ಮುಸಲ್ಮಾನರಿಗೆ ಹಿಂದುಗಳಂತೆಯೇ ಪಾರತಂತ್ರ್ಯವಿದ್ದರೂ ಹಿಂದುಸ್ಥಾನದ ಹೊರಗೆ ಅರೆಬಿಯಾ, ಅಫಗಾಣಿಸ್ಥಾನ, ಇರಾಣ, ತುರ್ಕ್, ಈಜಿಪ್ತ, ಮೊರಕ್ಕೋ ಮೊದಲಾದ ಜಗತ್ತಿನ ನಾನಾ ಭಾಗಗಳಲ್ಲಿ ಮುಸಲ್ಮಾನ ರಾಜಕೀಯ ಪ್ರಭುತ್ವಗಳು ಮೆರೆಯುತ್ತಿದ್ದುದು ಅಪ್ರತ್ಯಕ್ಷವಾಗಿ ಈ ದೇಶದ ಮುಸಲ್ಮಾನರಿಗೆ ಸಹಾಯವಾಗಿದೆ.

ಹಿಂದುಸ್ಥಾನದ ಹೊರಗಿನ ಮುಸಲ್ಮಾನ ರಾಜಕೀಯ ಸಾಮರ್ಥ್ಯದ ಮೇಲೆಯೂ ಧಾರ್ಮಿಕ ಬಲದ ಮೇಲೆಯೂ ಇಲ್ಲಿಯ ಮುಸಲ್ಮಾನರು ವಿಶ್ವಾಸವುಳ್ಳವರಾಗಿರುವದರಿಂದ ಇವರಲ್ಲಿ ಆತ್ಮವಿಶ್ವಾಸ ಮತ್ತು ಬಲಗಳು ಹೆಚ್ಚುತ್ತಲಿವೆ. ಆದರೆ ಹಿಂದುಧರ್ಮವು ಈಗ ಸೋತು ಮೂಲೆಗುಂಪಾಗಿರುವ ನಿರ್ಬಲರ ಧರ್ಮವಾಗಿದೆ ಇವರಿಗೆ ದೇಶದಲ್ಲಿಯೂ ರಾಜಕೀಯ ಶಕ್ತಿಯ ಸಹಾಯವಿಲ್ಲ. ಪರದೇಶಗಳಲ್ಲಿಯೂ ಇವರಿಗೆ ನೆರವಾಗುವವರಿಲ್ಲ. ಯಾವ ರಾಜಕೀಯ ಶಕ್ತಿಯ ಆಶ್ರಯವೂ ಈ ಧರ್ಮಕ್ಕಿಲ್ಲ. ಇದು ತಾನೇ ತನ್ನ ಸಾಮರ್ಥ್ಯದಿಂದ ಬದುಕಬೇಕಾಗಿದೆ.

ಬದುಕುವುದು ಹೇಗೆ?

ಹಿಂದು ಜನಾಂಗವು ಇಂಥ ಶೋಚನೀಯ ಸ್ಥಿತಿಯಲ್ಲಿ ಬದುಕುವುದು ಹೇಗೆ? ಪ್ರೇಮಯುಕ್ತ ಸಂಘಟನೆಯೊಂದರಿಂದಲೇ ಸರಿ. ಎಂಬತ್ತು ಕೋಟಿ ಜನಸಂಖ್ಯೆಯುಳ್ಳ, ಅಪಾರವಾದ ರಾಜಕೀಯ ಶಕ್ತಿಗಳಿಂದ ಕೂಡಿದ ಕ್ರೈಸ್ತ ಜನಾಂಗದ ಮತ್ತು ಮೂವತ್ತು ಕೋಟಿ ಜನಸಂಖ್ಯೆಯುಳ್ಳ ವಿಶೇಷವಾದ ಧಾರ್ಮಿಕ ಮತ್ತು ರಾಜಕೀಯ ಸಾಮರ್ಥ್ಯಗಳ ಬೆಂಬಲವುಳ್ಳ ಮುಸಲ್ಮಾನ ಜನಾಂಗದ ಸಂಗಡ ವೈರಭಾವದಿಂದ ನಾಮಮಾತ್ರದಲ್ಲಿರುವ ೨೫ ಕೋಟಿ ಹಿಂದುಗಳು ಸುಖ ಶಾಂತಿಗಳಿಂದ ಜೀವಿಸುವರೆ? ಇವರ ಅಸ್ತಿತ್ವವುಳಿಯುದೇ? ಸಂಘಟನೆಯಾಗದಿದ್ದರೆ ಹಿಂದುಗಳು ನಾಮಶೇಷವಾಗಲು ಬಹುಕಾಲ ಬೇಕೆ?

ಬುದ್ಧನ ಅಹಿಂಸಾವಾದವನ್ನು ಸ್ವೀಕರಿಸಿ ಪೂರ್ವದ ಹಿಂದು ಧರ್ಮವು ಹೇಗೆ ಬದುಕಿತೋ ಹಾಗೆಯೇ ಮುಸಲ್ಮಾನ ಧರ್ಮದಲ್ಲಿಯ ಬಂಧುತ್ವದ ತತ್ವವನ್ನೂ ಕ್ರೈಸ್ತ ಧರ್ಮದಲ್ಲಿಯ ಪ್ರಯತ್ನವಾದವನ್ನೂ ಹಿಂದು ಧರ್ಮವು ಈಗ ಸ್ವೀಕರಿಸಿ ಬದುಕಬೇಕಾಗಿದೆ. ಇವುಗಳನ್ನು ಸ್ವೀಕರಿಸದಿದ್ದರೆ ಇದು ಬದುಕುವ ಸಂಭವವೇ ಇಲ್ಲ. ಆದಕಾರಣ ಬಂಧುತ್ವ ಪ್ರಯತ್ನವಾದಗಳೇ ಹಿಂದು ಸಂಘಟನೆಯ ಮುಖ್ಯಾಂಗಗಳು.

ಪ್ರಾಚೀನ ದೇವಾಲಯಗಳು ಬೇಕಾದಷ್ಟು ಇದ್ದು ಅವುಗಳಲ್ಲಿ ಕತ್ತೆ ನಾಯಿಗಳು ಅಲೆದಾಡುತ್ತಿದ್ದರೂ ಅವುಗಳ ಜೀರ್ಣೋದ್ಧಾರ ಮಾಡದೆ ಹೊಸ ದೇವಾಲಯಗಳನ್ನು ಕಟ್ಟಿಸುವದರಿಂದ ಹಿಂದು ಧರ್ಮವು ಉಳಿಯುವದೇ? ನಿರುದ್ಯೋಗಿಗಳೂ ಪರಾವಲಂಬಿಗಳೂ ತಿರುಪೆಯಿಂದ ಜೀವಿಸುವವರೂ ಕಾವಿ ಬಟ್ಟೆಯ ಮರೆಯಲ್ಲಿ ಕನಕ ಕಾಂತೆಯರ ಬೆನ್ನುಹತ್ತಿರುವ ಗುರುಗಳೆಂಬುವವರೂ ಅಥವಾ ಗೋಸಾವಿ, ಸಾಧುಸಂತ, ಸನ್ಯಾಶಿಗಳೆಂಬುವವರೂ ಹಿಂದು ಧರ್ಮವನ್ನು ರಕ್ಷಿಸುವರೇ? ಬ್ರಾಹ್ಮಣಾದಿ ಚಾತುರ್ವರ್ಣಗಳು ಜನ್ಮವಿಶಿಷ್ಟವೆಂದು ತಿಳಿದುದರಿಂದ ಅಸಂಖ್ಯ ಜಾತಿಗಳು ತಲೆದೋರಿ ಹಿಂದು ಸಮಾಜದಲ್ಲುಂಟಾದ ಮೇಲು ಕೀಳುಗಳ ವಿಷವು ಹಿಂದುಧರ್ಮವನ್ನು ಕಾಪಾಡುವದೇ? ಈ ಎಲ್ಲವೂ ಹಿಂದುಧರ್ಮದ ಸಮಾಧಿಯನ್ನು ಸಿದ್ಧಗೊಳಿಸುವವು. ಈ ಅನಾಚಾರಗಳೂ ಮೂರ್ಖ ಕಲ್ಪನೆಗಳೂ ಸಂಪೂರ್ಣ ನಾಶವಾಗಲೇಬೇಕು.

ಹಿಂದುಗಳು ನಿವೃತ್ತಿಪರವಾದ ಮಾರ್ಗವನ್ನು ಬಿಟ್ಟು ಪ್ರವೃತ್ತಿಪರರಾಗಬೇಕು, ಕರ್ಮಯೋಗಿಗಳಾಗಬೇಕು. ಪ್ರಯತ್ನವಾದಿಗಳಾಗಬೇಕು. ಅನರ್ಥಕಾರಿಯಾದ ಅದೃಷ್ಟವಾದವನ್ನು ಬಿಡಬೇಕು. ಕ್ರೈಸ್ತ ಜನಾಂಗದಿಂದ ಈ ಪ್ರಯತ್ನವಾದವನ್ನು ಹಿಂದುಗಳು ಕಲಿಯಲೇಬೇಕು. ಹೀಗಾದಾಗಲೇ ಹಿಂದುಧರ್ಮವು ಬದುಕುವದು. ಈ ದೃಷ್ಟಿಯಿಂದಲೇ ಆರ್ಯ ಸಮಾಜವು ಪಂಜಾಬ, ಸಂಯುಕ್ತ ಪ್ರಾಂತಗಳಲ್ಲಿ ಹಿಂದು ಸಂಘಟನೆಯನ್ನು ಮಾಡುತ್ತಿದೆ. ಆರ್ಯ ಸಮಾಜದ ತೇಜವೇ ಹಿಂದುಧರ್ಮರಕ್ಷಣೆಗೆ ಸಾಧನವಾಗಿದೆ. ಹಿಂದುಗಳು ಹೀಗೆಯೇ ಮೂಢ ವೃತ್ತಿಯಿಂದ ನಡೆದರೆ ಜಾಗ್ರತಿ ನಾಶಹೊಂದುವರು.

ಶ್ರೀಯುತ ಬಿ. ಶಿವಮೂರ್ತಿ ಶಾಸ್ತ್ರಿಗಳ

ಲೇಖಾಂಕಗಳ ವಿಮರ್ಶೆ.

[ಶ್ರೀ ಶಿವಮೂರ್ತಿ ಶಾಸ್ತ್ರಿಗಳು ಬರೆದ ಉತ್ತರಕ್ಕೆ ಪ್ರತ್ಯುತ್ತರವಾಗಿ ‘ಶ್ರೀ ಕುಮಾರರು’ ಪುನಃ ಅವರ ಪ್ರಕಟನೆಯ ಇಮ್ಮಡಿ ವಿಸ್ತಾರವಾದ ಲೇಖನ ಬರೆದಿರುವರು. ಶ್ರೀ ಶಾಸ್ತ್ರಿಗಳ ಲೇಖನದ ಮೇಲೆ ಈಗಾಗಲೇ ಅನೇಕರು ಚರ್ಚಿಸಿ ಸಮಾಧಾನಪಡಿಸಿದ್ದಾರೆ. ಇಷ್ಟು ವಿಸ್ತಾರ ಪ್ರಕಟನೆಗಳನ್ನು ಪ್ರಸಿದ್ಧಿಸುವದು ಇನ್ನು ಅವಶ್ಯವಿಲ್ಲ. ಆದುದರಿಂದ ‘ಶ್ರೀ ಕುಮಾರರ’ ಲೇಖನದಲ್ಲಿಯ ಅಲ್ಲಲ್ಲಿಯ ಸಂಗತಿಗಳನ್ನಷ್ಟೇ ಆರಿಸಿ ಪ್ರಕಟಿಸಿದ್ದಾಗಿದೆ. ಇಷ್ಟರಲ್ಲೇ ಶ್ರೀ ಶಾಸ್ತ್ರಿಗಳ ಶಂಕಾಸಮಾಧಾನವಾಗಿರಬಹುದು. (ಸಂಪಾದಕ.)]

ಶ್ರೀ ಶಾಸ್ತ್ರಿಗಳು ಎಲ್ಲ ವಿಶ್ವ ಧರ್ಮಗಳಿಂದಲೂ ಮನ್ನಣೆ ಪಡೆದ ವೇದವನ್ನು ವೀರಶೈವರ ಮತಗ್ರಂಥವೆಂದು ಹೇಳಿದ್ದರು. ಅದರ ಬೆಳಕಿನಲ್ಲಿ ಶಕ್ತಿವಿಶಿಷ್ಟಾದ್ವೈತ ಮತವನ್ನು ಚರ್ಚಿಸುವದು ಅವರ ಅಭಿಪ್ರಾಯವಿದ್ದಿರಬಹುದು. ಅವರು ತಮ್ಮ ಲೇಖನದಲ್ಲಿ ವೇದಗಳ **ಏಕದೇವೋಪಾಸನೆಯ** ತತ್ವವನ್ನು ಹಿಡಿದು ವೀರಶೈವರ ಧರ್ಮದಲ್ಲಿ ಅದಕ್ಕಿರುವ ಸಾಮ್ಯಕ್ಕಾಗಿ, ವೇದವನ್ನು ವೀರಶೈವರ ಮತಗ್ರಂಥವೆಂದು ಹೇಳಿರುವರು. “ಏಕಮೇವಾದ್ವಿತೀಯಂಬ್ರಹ್ಮ” ಎಂಬ ವಿಶ್ವಮಾನ್ಯವಾದ ಒಂದು ಹೇಳಿಕೆಯನ್ನು ವೀರಶೈವರ ಆಚಾರ್ಯನಾದ ಬಸವೇಶ್ವರನು ಮನ್ನಿಸಿರಬಹುದು. ಜಗತ್ತಿನ ಎಲ್ಲ ಮತಾಚಾರ್ಯರೂ ಅದನ್ನೇ ಹೇಳುವರು. ಅಷ್ಟು ಮಾತ್ರಕ್ಕೇ ಅದು ವೀರಶೈವರ ಮತಗ್ರಂಥವಾಗಬೇಕೆಂಬುದು ತರ್ಕವಲ್ಲ. ವೇದವು ತನ್ನ ಏಕದೇವೋಪಾಸನೆಯನ್ನು ಜಗತ್ತಿನ ಮುಂದಿರಿಸದಿದ್ದಿದ್ದರೆ ಬಸವಾದಿಗಳಿಗೆ ಆ ತತ್ವವು ಸಿಗುತ್ತಲೇ ಇರಲಿಲ್ಲವೆನ್ನುವ ಹಾಗಿದ್ದರೆ, ಶಾಸ್ತ್ರಿಗಳು ಅದೊಂದಕ್ಕಾಗಿ ವೇದಕ್ಕೆ ಶರಣು ಹೇಳಬಹುದು. ವೇದವನ್ನು ಮತಗ್ರಂಥಗಳ ಗುಂಪಿನಲ್ಲಿ ಸೇರಿಸಬೇಕಾಗಿದ್ದರೆ, ಅದರಲ್ಲಿರುವ ಎಲ್ಲ ಅಭಿಪ್ರಾಯಗಳಿಗೂ ಅವರು (ಶಿವಶರಣರು) ತಮ್ಮ ಒಪ್ಪಿಗೆಯನ್ನು ಕೊಡಬೇಕಾಗುತ್ತಿದ್ದಿತು. ಮತಗ್ರಂಥದ ಮುಖ್ಯಾಂಶಗಳಿಗೆಲ್ಲಾ ವೇದದಿಂದಲೇ ಉದಾಹರಣೆಯನ್ನು ತೆಗೆದುಕೊಳ್ಳಬೇಕಾಗಿದ್ದಿತು. ಆದರೆ ಶರಣರು ಹಾಗೆ ಮಾಡದೆ ಕೆಲವೆಡೆಗಳಲ್ಲಿ ವೇದದ ಮೇಲೆ ಗದಾಪ್ರಹಾರ ಮಾಡಿರುವುದನ್ನೂ ನಾವು ನೋಡಬಹುದು.

‘ಇಂದಿನ ಜಗಜ್ಜೀವನದಲ್ಲಿ’ ಭಾರತೀಯ ಸಂಸ್ಕೃತಿಯು ಸಂಗಡ ಪಾಶ್ಚಾತ್ಯ ಸಂಸ್ಕೃತಿಯ ಮಿಲನವಾಗಿದೆ. ಅದಕ್ಕಾಗಿ ನಮ್ಮಗಳ ಸಭ್ಯತೆಯು ಹಿಂದೂ ಸಭ್ಯತೆಯಾಗದೆ ಪಾಶ್ಚಾತ್ಯ ಸಭ್ಯತೆಯಾಗಲಿ, ಅಥವಾ ಮತ್ತಾವ ಸಭ್ಯತೆಯಾಗಲಿ ಆಗಬಹುದೇ? ಆರ್ಯ ದ್ರಾವಿಡ ಸಂಸ್ಕೃತಿಗಳ ಕೆಲ ಸಂಗತಿಗಳು ಪರಸ್ಪರ ಮಿಲಿತವಾಗಿರಬಹುದು; ಮತ್ತು ಮಿಲಿತವಾಗಿವೆಯೆಂಬುದಕ್ಕೆ ನಮ್ಮ ಒಪ್ಪಿಗೆಯಿದೆ. ಆದರೆ ಅದಕ್ಕಾಗಿ ನಮ್ಮ ರಕ್ತರಕ್ತದಲ್ಲೂ ಪ್ರಧಾನ ಸ್ಥಾನವನ್ನು ಅಲಂಕರಿಸಿರುವ ದ್ರಾವಿಡ ಸಭ್ಯತೆಯನ್ನು ನಾವು ಮರೆಯಲಾಗುವುದಿಲ್ಲ. ಅದಕ್ಕಾಗಿ ಗೌಣಸ್ಥಾನದಲ್ಲಿರುವ ಆರ್ಯ ಸಂಸ್ಕೃತಿಗೆ ಪ್ರಧಾನಪಟ್ಟವನ್ನು ನಾವು ಕಟ್ಟಲಾಗುವುದಿಲ್ಲ. ಇನ್ನಾದರೂ ಶಾಸ್ತ್ರಿಗಳು “ವೇದವು ಎಲ್ಲ ಧರ್ಮಗಳ ಮೂಲ ತಳಹದಿಯಾಗಿದೆಯೆಂದು” ಹೇಳಲಾರರೆಂದು ಭಾವಿಸುತ್ತೇವೆ. ಆ ವಾಕ್ಯವನ್ನು ಅವರು ಹಿಂದಕ್ಕೆ ತೆಗೆದುಕೊಳ್ಳಬೇಕು. ಆರ್ಯ ಸಂಸ್ಕೃತಿಗೆ ಜೀವವಿದೆ. ದ್ರಾವಿಡ ಸಂಸ್ಕೃತಿಗೆ ಜೀವವಿಲ್ಲವೋ! ದ್ರಾವಿಡರು ಮನುಷ್ಯರಲ್ಲವೊ? ಅವರಿಗೆ ಧರ್ಮ, ಕಲೆ, ಮತ, ತತ್ವಗಳ ಚರ್ಚೆಯಿಲ್ಲವೋ? ಆರ್ಯರು ಮುಂದೆ ಹೋಗಿರಬಹುದು; ಅದಕ್ಕಾಗಿ ದ್ರಾವಿಡರನ್ನು ಯಾರೂ ಪಾತಾಳಕ್ಕೆ ತುಳಿಯಲಾಗುವುದಿಲ್ಲ. ನಮ್ಮ ಜೀವದ ಉಸಿರನ್ನು ನಾವು ಬದುಕುವ ತನಕ ಯಾರೂ ತಡೆಯಲಾರರು. ನಮ್ಮ ಕೆಚ್ಚಿನ ರಕ್ತವು ನಮ್ಮ ದೇಹದಲ್ಲಿರುವತನಕ ಯಾರೂ ಅದನ್ನು ನಾಶಮಾಡಲಾರರು.

ಪ್ರಣವ ಪಂಚಾಕ್ಷರಿಯದೊಂದು ಹುಚ್ಚು ಬಹು ಜನರಿಗೆ ಹತ್ತಿರುತ್ತದೆ. ಪಂಚಾಕ್ಷರಿಯ ರೂಪವು ಸಂಸ್ಕೃತದ ರೂಪವಹುದು; ಆದರೆ ಅದರ ಸಭ್ಯತೆಯು ದ್ರಾವಿಡರದು. ದ್ರಾವಿಡರ ಅನೇಕ ಮಾತುಗಳು ಸಂಸ್ಕೃತದ ಭಂಡಾರದಲ್ಲಿ ರೂಪ ನಿಷ್ಪತ್ತಿಯನ್ನು ಕಾಣದೆ ಬಿದ್ದಿರುತ್ತವೆ. ‘ನೀರು’ ಎಂಬ ದ್ರಾವಿಡಪದದಿಂದ ‘ನೀರೋಜ’ ಎಂಬ ಸಂಸ್ಕೃತ ಹುಟ್ಟಿದೆ. ನೀರು ಸಂಸ್ಕೃತವಾಗಿದ್ದರೆ ಅದು ಸಂಸ್ಕೃತದಿಂದ ಹುಟ್ಟಿದ ಇತರ ಗೌಡ ಭಾಷೆಗಳಲ್ಲಿ ಇರಬೇಕಿದ್ದಿತು. ಆದರೆ ಅದಿಲ್ಲ. ಹೀಗೆಯೇ ಶಿವ ಎಂಬ ಶಬ್ದವು ದ್ರಾವಿಡರ ‘ಲಿಂಗ’ವೆಂಬ ಶಬ್ದದ ಒಂದು ರೂಪಕ. ಅದು ಆದಿ ವೇದವಾದ ಋಗ್ವೇದದಲ್ಲಿಲ್ಲ. ಆದುದರಿಂದ ‘ಶಿವ’ ಶಬ್ದವನ್ನು ದ್ರಾವಿಡರಿಂದ ತೆಗೆದುಕೊಂಡು “ನಮಃ ಶಿವಾಯ” ಎಂದು ಆರ್ಯರ ಸಂಸ್ಕೃತದ ರೂಪಕದಲ್ಲಿ ಇರಿಸಿರುತ್ತಾರೆ. ಮುಂದಿನ ವೇದಗಳಲ್ಲಿ ಅನಂತರ ಸೇ

([illegible] ನೆಯ ಪುಟಕ್ಕೆ ಮುಂದುವರಿದಿದೆ.)

ವಿಘಟನೆ ಯಾವುದು?

ಹಿಂದುಗಳಲ್ಲಿರುವ ನಾನಾ ಜಾತಿಗಳು ಲಯವಾಗಲೇಬೇಕು. ಸಹಭೋಜನ ಮತ್ತು ಶರೀರ ಸಂಬಂಧಗಳುಂಟಾಗಲೇಬೇಕು. ಶ್ರೀ ದೇವದಾಸ ಗಾಂಧಿ ಮತ್ತು ಲಕ್ಷ್ಮೀದೇವಿಯವರ ವಿವಾಹದಂತೆ ಮಿಶ್ರವಿವಾಹಗಳು ಜರುಗಲೇಬೇಕು. ಅವರವರ ಶೀಲಾಚಾರ ಅಂತಸ್ತುಗಳಿಗನುಗುಣವಾಗಿಯೇ ಈ ಶರೀರ ಸಂಬಂಧಗಳುಂಟಾಗುತ್ತಿರುವುದು ಸ್ವಾಭಾವಿಕ. ಆದಕಾರಣ ಇಂಥವುಗಳಿಗೆ ಜನ್ಮವಿಶಿಷ್ಟ ಜಾತಿಯ ತೊಡಕೇನೂ ಬೇಕಾಗಿಲ್ಲ. ಹಿಂದುಗಳಲ್ಲಿರುವ ಜನ್ಮವಿಶಿಷ್ಟವಾದ ಜಾತಿಯ ಕಲ್ಪನೆಯು ನಾಶವಾದ ವಿನಾ ಹಿಂದು ಸಂಘಟನೆಯು ಶಕ್ಯವೇ ಇಲ್ಲ.

ಈಗ ಹಿಂದು ಸಂಘಟನೆಯ ಸಂಬಂಧವಾಗಿ ನಡೆಯುತ್ತಿರುವ ಚಟುವಟಿಕೆಗಳು ತೋರಿಕೆಯವುಗಳಾಗಿವೆ. ಮುಸಲ್ಮಾನರಂತೆ ತಾವು ಸಂಘಟನೆ ಮಾಡಬೇಕೆಂದು ನಟನೆಗಾಗಿ ಹಿಂದು ಸಂಘಟನೆಯ ಕಾರ್ಯ ನಡೆದಿದೆಯೇ ವಿನಾ ಹಿಂದು ಸಮಾಜಕ್ಕೆ ಶಕ್ತಿಯುಂಟಾಗುವಂತಹ ಸಂಘಟನೆ ನಡೆದಿಲ್ಲ. ಇಷ್ಟೇ ಅಲ್ಲ, ಸುಶಿಕ್ಷಿತವಾದ ಬ್ರಾಹ್ಮಣ ಸಮಾಜವು ಕೂಡಾ ತನ್ನಲ್ಲಿ ಕರ್ಹಾಡೆ, ಚಿತ್ಪಾವನ, ಸಾರಸ್ವತ, ಋಗ್ವೇದಿ, ಯಜುರ್ವೇದಿ ಎಂಬ ನಾನಾ ಸ್ವತಂತ್ರ ಸಂಘಗಳನ್ನು ಏರ್ಪಡಿಸಿಕೊಂಡು ಪ್ರತ್ಯೇಕವಾದ ಪ್ರಯತ್ನಗಳಿಂದ ಹಿಂದು ಸಂಘಟನೆಯ ಕಾರ್ಯಗಳನ್ನು ಪ್ರಾರಂಭಿಸಿದೆ. ಈ ಪ್ರಕಾರ ಜಾತೀಯ ಮತ್ತು ಉಪಜಾತೀಯ ಸಂಘಗಳ ಬೇರೆ ಬೇರೆಯಾದ ಪ್ರಯತ್ನಗಳು ಹಿಂದುಸಂಘಟನೆಯ ಕಾರ್ಯಗಳು.

ಜನ್ಮವಿಶಿಷ್ಟವಾದ ಈ ಜಾತಿಯ ಕಲ್ಪನೆಯೆಂಬ ಸರ್ಪವು ತನ್ನ ವಿಷಜ್ವಾಲೆಯಿಂದ ಹಿಂದು ಧರ್ಮವನ್ನು ಸುಡುತ್ತದೆ. ಇದನ್ನು ನಾಶಮಾಡುವ ವಿನಾ ಹಿಂದು ಸಂಘಟನೆಯಾಗುವದಿಲ್ಲ. ಹಿಂದು ಸಂಘಟನೆಯ ವಿನಾ ಹಿಂದುಸಮಾಜ ಬದುಕುವುದಿಲ್ಲ.

ಬಾಲ ಮೃತ್ಯುವೂ-ಸಂತತಿನಿಯಮನವೂ.

ಹಿಂದುಸ್ಥಾನದ ಸ್ತ್ರೀಯರಲ್ಲಿ ಜಾಗೃತಿಯಾಗಹತ್ತಿದ ಹಾಗೆ ಅವರ ಶಕ್ತಿ ಹ್ರಾಸಕ್ಕೆ ಕಾರಣವಾದ ಅನೇಕ ಸಂಗತಿಗಳು ಬೈಲಿಗೆ ಬರಹತ್ತಿವೆ. ಇವುಗಳಲ್ಲಿ ಬಾಲಮೃತ್ಯುವು ಒಂದಾಗಿದೆ. ಜಗತ್ತಿನ ಯಾವದೇ ದೇಶದ ದೊಡ್ಡ ನಗರಗಳಲ್ಲಿಯ ಬಾಲಮೃತ್ಯು ಸಂಖ್ಯೆಗಿಂತಲೂ ಹಿಂದುಸ್ಥಾನದ ನಗರಗಳ ಬಾಲಮೃತ್ಯು ಸಂಖ್ಯೆಯು ವಿಶೇಷವಾಗಿ ಹೆಚ್ಚಿದೆ. ಬಾಲಕರ ಮೃತ್ಯು ಪ್ರಮಾಣವು ಲಂಡನದಲ್ಲಿ ೭.೧ ಮತ್ತು ಪ್ಯಾರಿಸ್, ಬರ್ಲಿನಗಳಲ್ಲಿ ೯.೩ ಮತ್ತು ೮.೨ ಇದ್ದರೆ ಮುಂಬಯಿ ಮತ್ತು ಮದ್ರಾಸ ಪಟ್ಟಣಗಳಲ್ಲಿ ಅದು ೩೩.೧ ಮತ್ತು ೩೦.೫ ಇರುತ್ತದೆ. ಅಂದರೆ ಪಾಶ್ಚಾತ್ಯ ದೇಶಗಳಿಗಿಂತಲೂ ನಮ್ಮಲ್ಲಿಯ ಮಕ್ಕಳ ಮೃತ್ಯುವು ಸಾಧಾರಣ ನಾಲ್ಕು ಪಟ್ಟು ಹೆಚ್ಚಿದೆ.

ಬಾಲಕರ ಈ ಅಪರಿಮಿತ ಮೃತ್ಯುವಿಗೆ ಕಾರಣವೇನಂದರೆ ಸ್ತ್ರೀಯರು ತೀವ್ರವೇ ಹಡೆಯುವದು ಮತ್ತು ಒಮ್ಮೆ ಹಡೆದ ಕೂಡಲೆ ಒಂದೇ ವರ್ಷದಲ್ಲಿ ಪುನಃ ಹಡೆಯುವದು ಹಾಗೂ ಒಬ್ಬ ಸ್ತ್ರೀಯು ತನ್ನ ಜೀವಮಾನದಲ್ಲಿ ೧೦-೨೦ ಸಾರೆ ಹಡೆಯುವದು ಇವೇ ಕಾರಣವಾಗಿವೆ. ಬಾಲಮೃತ್ಯುವಿನ ವಿಷಯದಲ್ಲಿ ವಿಶೇಷ ಜ್ಞಾನವುಳ್ಳ ಎ. ಮ್ಯಾಥ್ಯೂಜ ಎಂಬ ಸ್ತ್ರೀಯು ಹೇಳುವದೇನಂದರೆ—

ಎರಡು ಪ್ರಸವ ಕಾಲಗಳ ಅಂತರವು ಹೇಗೆ ಹೇಗೆ ಕಡಿಮೆಯಾಗುತ್ತಹೋಗುತ್ತದೆಯೋ ಹಾಗೆ ಹಾಗೆ ಬಾಲಮೃತ್ಯುವಿನ ಸಂಖ್ಯೆಯು ವೃದ್ಧಿಯಾಗುತ್ತಹೋಗುತ್ತದೆ. ಸಾಧಾರಣವಾಗಿ ಒಂದು ಕೂಸು ಹುಟ್ಟಿದ ಮೇಲೆ ಒಂದೇ ವರ್ಷದಲ್ಲಿ ಮತ್ತೊಂದು ಕೂಸು ಹುಟ್ಟಿದರೆ ಅವು ನೂರಕ್ಕೆ ೮೦.೪ ಪ್ರಮಾಣದಲ್ಲಿ ಸಾಯುತ್ತವೆ. ಹಾಗೆಯೇ ೧½ ವರ್ಷ, ೨ ವರ್ಷ, ೨½ ವರ್ಷಗಳ ನಂತರ ಹುಟ್ಟಿದ ಕೂಸುಗಳು ಅನುಕ್ರಮವಾಗಿ ನೂರಕ್ಕೆ ೭೦.೩; ೫೧.೮, ಮತ್ತು ೨೦.೪ ಪ್ರಮಾಣದಲ್ಲಿ ಸಾಯುತ್ತವೆ. ಇದರ ಮೇಲಿಂದ ಬಾಲಮೃತ್ಯುವಿಗೆ ತೀವ್ರವಾಗಿ ಹಡೆಯುವದೇ ಬಲವಾದ ಕಾರಣವಾಗಿದೆ.

ಈ ಬಾಲಮೃತ್ಯುವಿನ ಅನಿಷ್ಟ ಪರಿಣಾಮವು ಭಾವೀ ಜನಾಂಗವನ್ನು ಅಲ್ಪಾಯುವೂ ದುರ್ಬಲವೂ ಆಗುವಂತೆ ಮಾಡುವದಲ್ಲದೆ ಸ್ತ್ರೀಯರ ಶಕ್ತಿಯನ್ನೂ ಬಹು ಪರಿಯಾಗಿ ಕುಂದಿಸುತ್ತದೆ. ೮-೧೦ ವರ್ಷಗಳಲ್ಲಿ ಒಬ್ಬ ತಾಯಿಯು ೮-೧೦ ಕೂಸುಗಳನ್ನು ಹೆತ್ತರೆ ಮನೆಯವರೆಲ್ಲ ಹಿರಿಹಿರಿ ಹಿಗ್ಗುತ್ತಾರೆ. ಆದರೆ ಅವುಗಳಲ್ಲಿ ಉಳಿಯುವವೆಷ್ಟು? ಅದರ ಭಾರ ದೇವರ ಮೇಲೆ? ಈ ರೀತಿ ಹೆತ್ತ ತಾಯಿಯು ಮೂವತ್ತು ವರ್ಷಗಳಲ್ಲಿಯೇ ಮುದುಕಿಯಾಗುವಳು. ಭಯಂಕರ ಅಶಕ್ತತೆಯಿಂದ ಅವಳಿಗೆ ಅತಿ ಭಯಂಕರವಾದ ರೋಗಗಳು ಅಂಟಿಕೊಳ್ಳುವವು. ಸೌಖ್ಯಕ್ಕಾಗಿ ಶ್ರೀಮಂತರ ಮನೆಯಲ್ಲಿ ಜನ್ಮಿಸಿದ ಅವಳ ಸುಖವು ಮಾಯವಾಗಿ ದೇವಾ! ಎಂದು ಸತ್ತೇನೊ ಎಂದು ಹಲುಬಹತ್ತುವಳು.

ಇನ್ನು ಬಡವರ ವಿಚಾರ. ಬಡವರು ಮೇಲಿಂದ ಮೇಲೆ ಹಡೆಯುವದರಿಂದ ದುಡಿಯುವವರಿಗೆ ಅಸಹ್ಯವಾದ ಹೊರೆಯಾಗುವದು. ದುಡಿತದ ಶಕ್ತಿಯು ಕಡಿಮೆಯಾಗಿ ಬಡತನ ಹೆಚ್ಚುವದು. ಇವರ ಮಕ್ಕಳು ಅಷ್ಟೊಂದು ಸಾಯುವದಿಲ್ಲವೆಂಬುದು ನಿಜ. ಆದರೆ ಮೇಲಿಂದ ಮೇಲೆ ಹುಟ್ಟಿದ ನಾಲ್ಕಾರು ಶಿಸುಗಳು ತಂದೆ ತಾಯಿಗಳು ತಮ್ಮ ಆಯುಷ್ಯವನ್ನು ಸವೆಸಿ ಸವೆಸಿ ದುಡಿದು ತಂದುದನ್ನೆಲ್ಲ ತಂದು ಮತ್ತೆ ತಾ ಎಂದು ಪೀಡಿಸಹತ್ತುವವು. ಉರ್ಲುಹಾಕಿಕೊಳ್ಳುವುದು ಬೇಕು ಈ ಮಕ್ಕಳ ಕಾಟ ಬೇಡ. ಎಂದು ಪ್ರತಿಯೊಬ್ಬ ತಾಯಿಯು ಗೋಳಿಡಹತ್ತುವಳು.

ಹೀಗಾಗಿ ಈ ಸಂತತಿ ನಿರ್ಮಾಣವು ಬಡವರಿಗೂ ಸುಖವಿಲ್ಲ; ಶ್ರೀಮಂತರಿಗಂತೂ ಮೊದಲೇ ಇಲ್ಲ. ಕೆಲವರು ಶ್ರೀಮಂತರಿಗೆ ಮಕ್ಕಳೇ ಇರುವದು ಕಡಿಮೆ, ಒಂದಾದರೂ ಹುಟ್ಟಿದರೆ ಸಾಕೆಂದು ಇಚ್ಛಿಸುತ್ತಿರುತ್ತಾರೆ; ಆದುದರಿಂದ ಸಂತತಿ ನಿಯಮನವು ಅವರಿಗೆ ಅವಶ್ಯಕವೋ ಎಂದು ಪ್ರಶ್ನಿಸಬಹುದು. ಶ್ರೀಮಂತರಿಗೆ ಮಕ್ಕಳಾಗುವದಿಲ್ಲವೆಂಬುದೂ ಆದರೂ ಬಾಳುವದಿಲ್ಲವೆಂಬುದೂ, ಬಾಳಿದರೂ ಬಲವಿರುವದಿಲ್ಲವೆಂಬುದೂ ನಿಜ. ಆದರೆ ಮಕ್ಕಳಾಗದಿದ್ದರೆ ಅಥವಾ ಹುಟ್ಟಿದ ಮಕ್ಕಳು ಬಲಹೀನರಾದರೆ ತಾಯಿಯಾಗಲಿ ಅಥವಾ ತಂದೆಯಾಗಲಿ ಅಥವಾ ಒಮ್ಮೊಮ್ಮೆ ಇಬ್ಬರೂ ನಿರ್ಬಲರಿರುವರೆಂದು ತಿಳಿಯಬೇಕಲ್ಲವೆ? ಇಂಥ ನಿರ್ಬಲಾವಸ್ಥೆಯಲ್ಲಿ ಸಂತತಿ ನಿರ್ಮಾಣ ಮಾಡುವದು ಅವರಿಗೂ ಅವರ ವಂಶಕ್ಕೂ ಘಾತುಕವಾದುದಾಗಿದೆ.

ಮಕ್ಕಳಿರಬೇಕೆಂದೇ ಇಚ್ಛಿಸಿದರೆ ಬೀದಿಯಲ್ಲಿರುವ ಬಡವರ ಬಲವುಳ್ಳ ಕೂಸನ್ನೊಂದು ಆರಿಸಿಕೊಂಡು ಪೋಷಿಸುವದು ಹಿತಕರ. ಇನ್ನು ಬಡವರು ದುಡಿಯುವದೇ ದಿನಕ್ಕೆ ನಾಲ್ಕಾಣೆ. ಇಷ್ಟರಲ್ಲಿ ಹೆಂಡರು ಮಕ್ಕಳ ಸಂರಕ್ಷಣೆಯಾಗಬೇಕಾದರೆ ಆ ಮಕ್ಕಳು ತಿನ್ನುವದೇನು? ಅರಹೊಟ್ಟೆ ಉಂಡು ಅವರು ಜೀವಿಸಿರುವುದು ಹೇಗೆ?

ಆದುದರಿಂದ ನಮ್ಮ ದೇಶದಲ್ಲಿ ಸಂತತಿ ಸಂಯಮನವು ಅತ್ಯವಶ್ಯವಾಗಿದೆ. ಆದರೆ ಕೆಲ ಮಹಾಶಯರು— ಓಹೋ! ಮಕ್ಕಳನ್ನು ಹುಟ್ಟಿಸುವದು ಬಿಡುವುದು ನಮ್ಮ ಕೈಯಲ್ಲುಂಟೆ? ಯಾರ ಲಭ್ಯವು ಎಷ್ಟಿರುವದೋ ಅಷ್ಟು ಅವರಿಗೆ ಆಗೇ ಆಗುತ್ತದೆ. ಹುಟ್ಟಿಸಿದ ದೇವರು ಹುಲ್ಲು ಮೇಯಿಸುವನೇ? ಇದೆಲ್ಲ ದೇವರ ರೀತಿಗೆ ವಿರುದ್ಧವಾದದ್ದು ಎಂದು ಮುಂತಾಗಿ ಆಕ್ಷೇಪಣೆ ಮಾಡುತ್ತಾರೆ. ದೇವರು ನಮ್ಮ ಹಿತಾಹಿತಗಳನ್ನು ತಿಳಿದುಕೊಂಡು ಅದರಂತೆ ಆಚರಿಸಿ ಹಿತಮಾಡಿಕೊಳ್ಳಲೆಂದು ನಮಗೆ ಬುದ್ಧಿಯನ್ನೂ ವಿವೇಕವನ್ನೂ ಕೊಟ್ಟಿರುವನೆಂಬುದನ್ನು ಇಂಥವರು ಏಕೆ ವಿಚಾರಿಸುವುದಿಲ್ಲ? ದೇವರೇ ಎಲ್ಲವನ್ನು ಸಾಗಿಸುವದಾದರೆ ನಮಗೆ ಬುದ್ಧಿಕೊಡುವ ಅವಶ್ಯಕತೆಯೇ ಇರಲಿಲ್ಲ. ಇನ್ನು ನಮ್ಮ ಜೀವನದಲ್ಲಿ ನಾವು ಅದೆಷ್ಟು ನಿಸರ್ಗಸಿದ್ಧವಾಗಿ ನಡೆಯುತ್ತೇವೆ? ಪಶುಗಳಾದರೂ ನಿಸರ್ಗಕ್ಕೆ ಸರಿಯಾಗಿ ಭೋಗಿಸುತ್ತವೆ. ಆದರೆ ಮನುಷ್ಯನು? ಅಂದ ಮೇಲೆ ಕೃತ್ರಿಮವಾಗಿರುವ ನಮ್ಮ ಜೀವನ ಸಮಸ್ಯೆಯನ್ನು ನಾವೇ ಬಿಡಿಸಿಕೊಳ್ಳಬೇಕಾಗಿದೆ.

ಈ ಸಂತತಿ ಸಂಯಮನ ಪ್ರಶ್ನೆಯು ಮುಖ್ಯವಾಗಿ ಸ್ತ್ರೀಯರಿಗಿಂತಲೂ ಪುರುಷರನ್ನೇ ಹೆಚ್ಚಾಗಿ ಅವಲಂಬಿಸಿದೆ. ಪತ್ನಿಯ ಸಮಾಗಮವನ್ನು ಬಿಡಿಸಿದರೆ ತರುಣರು ಮನಸ್ಸು ತಡೆಯದೆ ಅನೀತಿಪರರಾಗುವರೆಂಬುದೂ ಒಂದು ಆಕ್ಷೇಪಣೆಯು ಬರುತ್ತದೆ. ಆದರೆ ಈ ದುರ್ನಡತೆಯು ಉಂಟುಮಾಡುತ್ತಿರುವ ಹಾವಳಿಯನ್ನು ಮನಃಪೂರ್ವಕವಾಗಿ ತಿಳಿದ ಅದಾವ ತರುಣನು ಅನೀತಿಪರನಾಗಬಲ್ಲನು? ಈ ರೀತಿಯಾಗಿ ಲೋಕ ಶಿಕ್ಷಣ ಕೊಡುವದೂ ಅವಶ್ಯಕವಾಗಿದೆ.

ಪ್ರಜೋತ್ಪಾದನೆಯನ್ನು ಈ ರೀತಿ ಪ್ರತಿಬಂಧಿಸಿದರೆ ಪ್ರಜೆಗಳ ಸಂಖ್ಯೆಯು ಕಡಿಮೆಯಾಗಿ ಎಲ್ಲವೂ ಲೋಪವಾಗುವದೆಂದು ತಿಳಿಯುವದೂ ತಪ್ಪು ಸ್ತ್ರೀಯರಿಗೆ ಸ್ವಾಭಾವಿಕವಾಗಿ ಒಂದಾದರೂ ಮಗುವನ್ನು ಪಡೆಯಬೇಕೆಂಬ ಆಶೆಯು ಇದ್ದೇ ಇರುವದಿಲ್ಲವೇ?

ಹಿಂದೂ ಜನರಿಗೆ ಈ ನಿಯಮವು ಅಪರಿಚಿತವೇನೂ ಅಲ್ಲ. ಪೂರ್ವಕಾಲದಲ್ಲಿ ಸ್ಮೃತಿ ಗ್ರಂಥಗಳಲ್ಲಿ ಕೂಡಾ ಈ ನಿಯಮವನ್ನು ಉಲ್ಲೇಖಿಸಿದೆ. ಗೃಹಸ್ಥನು ಎಷ್ಟು ಮಕ್ಕಳನ್ನೇ ಹುಟ್ಟಿಸಬೇಕು ಮತ್ತು ಎಷ್ಟೆಷ್ಟು ವರ್ಷಗಳ ಅಂತರವೇ ಹುಟ್ಟಿಸಬೇಕೆಂಬುದೂ ಅವುಗ

ಜಪಾನಿನ ಉನ್ನತ ಸ್ಥಿತಿ.

ಲೇಖಕರು:— ಶ್ರೀ ಆರ್. ಎಸ್. ಆರಾಧ್ಯ ಮಂಡೀ ಪೇಟೆ ತುಮಕೂರು.

ಜಪಾನಿನವರ ದೇಶಾಭಿಮಾನ, ರಾಜಭಕ್ತಿ, ಧೈರ್ಯಸ್ಥೈರ್ಯಗಳೇ ಜಪಾನ ದೇಶವನ್ನು ಇಷ್ಟು ಉನ್ನತ ಸ್ಥಿತಿಗೆ ತಂದಿವೆ. ಇಲ್ಲಿಯ ಜನಗಳು ಯಾವಾಗಲೂ ಸಂತೋಷಚಿತ್ತರಾಗಿಯೂ, ಸಿಗವಿಗಳಾಗಿಯೂ ಇರುವರು. ತಾವೇ ಎಲ್ಲಾ ವಿಷಯದಲ್ಲೂ ಮೇಲು ಎಂಬ ಭಾವನೆ ಇವರಿಗಿಲ್ಲ. ಇತರರನ್ನು ಮೋಸಗೊಳಿಸಬೇಕೆಂಬುದಾಗಲಿ, ತೊಂದರೆಗೀಡುಮಾಡಬೇಕೆಂಬುದಾಗಲಿ ಕೊಂಚವಾದರೂ ಇವರ ಸರಳ ಹೃದಯದಲ್ಲಿ ಹುಟ್ಟುವುದಿಲ್ಲ. ಇವರು ಹೊಸಬರನ್ನು ಬಹಳ ಮಮತೆಯಿಂದ ಸತ್ಕರಿಸುತ್ತಾರೆ. ನಮ್ಮ ಜನಗಳ ಹಾಗೆ ತಮ್ಮ ಕಾರ್ಯಗಳನ್ನು ಗುಟ್ಟಾಗಿಡುವುದಿಲ್ಲ. ಸಾಧ್ಯವಾದಮಟ್ಟಿಗೂ ಅದನ್ನು ತಮ್ಮವರಿಗೋಸ್ಕರ ಪ್ರಕಾಶಿಸಲು ಪ್ರಯತ್ನಪಡುತ್ತಾರೆ. ಅನ್ಯದೇಶದ ಕೈಗಾರಿಕೆ, ವ್ಯವಸಾಯ, ವ್ಯಾಪಾರ ಮುಂತಾದವುಗಳಲ್ಲಿನ ನೂತನ ಪದ್ಧತಿಗಳನ್ನು ಕಲಿಯಬೇಕೆಂಬುದು ಜಪಾನರಿಗೆ ಬಹಳ ಆಶೆ. ಇಂತಹ ಆಶೆ, ಇವರಲ್ಲಿರುವ ಕಾರ್ಯತತ್ಪರತೆ, ಪ್ರಮಾಣಿಕತೆಗಳೇ ಜಪಾನವನ್ನು ಇಷ್ಟು ಅದ್ಭುತ ಉನ್ನತ ಸ್ಥಿತಿಗೆ ತಂದಿವೆ.

ಜಪಾನ ದೇಶವು ಇಂತಹ ಅಭಿವೃದ್ಧಿ ಸ್ಥಿತಿಗೆ ಬರಲು ಕಾರಣವೇನು ಎಂದು ನೋಡಿದರೆ, ದೇಶೋನ್ನತಿಗೆ ಮಾಡಬೇಕಾದ ಕರ್ತವ್ಯಗಳೆಲ್ಲವನ್ನೂ ಅಲ್ಲಿಯ ಜನರು ಮಾಡುತ್ತಿದ್ದಾರೆ ಎಂಬುದು ಕಾಣಬರುತ್ತದೆ. ಜಪಾನರು ಯಂತ್ರಗಳೋಪಾದಿಯಲ್ಲಿ ತಮ್ಮ ತಮ್ಮ ಕೆಲಸಗಳನ್ನು ನಿತ್ಯವೂ ತಪ್ಪದೇ ಮಾಡುವರು. ತಮ್ಮ ದೇಶದಲ್ಲಿ ಸುಳ್ಳಾಡಿದರೆ, ಕಳ್ಳತನ, ಮೋಸ, ದರೋಡೆಗಳನ್ನು ಮಾಡಿದರೆ ತಮ್ಮ ಜನಾಂಗದವರಿಗೆ ಹಾನಿಯೆಂಬುದನ್ನು ಜಪಾನರು ಚೆನ್ನಾಗಿ ಅರಿತಿರುವದರಿಂದಲೇ ಆ ದೇಶದಲ್ಲಿ ಕಳ್ಳತನ, ದರೋಡೆಗಳು ಅತ್ಯಲ್ಪ. ಸತ್ಯವು ರಾಷ್ಟ್ರದ ಅಭ್ಯುದಯಕ್ಕೆ ಅತ್ಯಗತ್ಯ. ಒಂದು ಜನಾಂಗವಾಗಲಿ ಅಥವಾ ದೇಶವಾಗಲಿ ಏಳಿಗೆಗೆ ಬರಬೇಕಾದರೆ ಜನರು ಒಬ್ಬರನ್ನೊಬ್ಬರು ನಂಬಬೇಕು. ಈ ನಂಬಿಕೆಗೆ ಪ್ರಮಾಣಿಕತೆ ಮತ್ತು ವಿಶ್ವಾಸಗಳೇ ಕಾರಣವೆಂದು ಜಪಾನಿನವರು ಚೆನ್ನಾಗಿ ತಿಳಿದಿರುವರು. ಇವರಲ್ಲಿ ಐಕಮತ್ಯ ಬಹಳ ಹೆಚ್ಚು. ಅಲ್ಲಿನ ದೇಶವೇ ಒಂದು ಸಂಘ. ಆ ಸಂಘಕ್ಕೋಸ್ಕರ ಪ್ರತಿಯೊಬ್ಬರೂ ಹಲಬಾಗಿ ಹಗಲಿರುಳು ಕೆಲಸಮಾಡುತ್ತಿದ್ದಾರೆ. ಪ್ರಪಂಚದಲ್ಲೆಲ್ಲ ಜಪಾನದವರು ಅತಿಕಷ್ಟಸಹಿಷ್ಣುಗಳೆಂದು ಹೆಸರುಪಡೆದಿರುವರು. ಇವರ ಹಾಗೆ ಕಾರ್ಯತತ್ಪರತೆಯಿಂದ ಕೆಲಸ ಮಾಡತಕ್ಕವರು ಇನ್ಯಾವ ಜನಾಂಗದವರೂ ಇಲ್ಲ. ಯಾವ ಹುದ್ದೆಯಲ್ಲಿ ಇರುವವನೇ ಆಗಲಿ ತನ್ನ ಕಾರ್ಯವನ್ನು ಯಾವ ವೇಳೆಯಲ್ಲಿ ಬೇಕಾದರೂ ಮಾಡಲು ಸಿದ್ಧನಾಗಿರುತ್ತಾನೆ. ತಮ್ಮ ಕಾರ್ಯಾಲಯಗಳಲ್ಲಿ ಮಾಡುವುದಲ್ಲದೆ ಅನೇಕ ವೇಳೆ ತಮ್ಮ ವಾಸಸ್ಥಾನದಲ್ಲಿಯೂ ಕೂಡ ಬೇಜಾರುಪಟ್ಟುಕೊಳ್ಳದೆ ತಮ್ಮ ಕೆಲಸಗಳನ್ನು ಮಾಡಲು ಸಿದ್ಧನಾಗಿರುತ್ತಾನೆ. ಇಲ್ಲಿಯ ಸರಕಾರದಲ್ಲಿ ಯಾವ ಕುಂದಕವೇ ಕಂಡುಬರಲಿ ಅದನ್ನು ಪ್ರಜೆಗಳು ಹೆಚ್ಚಿಗೆ ಮನಸ್ಸಿಗೆ ತಂದುಕೊಳ್ಳುವದಿಲ್ಲ. ಅಲ್ಲದೆ ಅಂತಹ ಹುಳುಕುಗಳನ್ನು ತೆಗೆದು ಹಾಕಿ ಒಬ್ಬರಿಗೊಬ್ಬರಿಗೆ ಎತ್ತಿ ಗಟ್ಟೆ ಗಲಾಟೆಯನ್ನು ಮಾಡಲು ಜಪಾನಿನವರು ಎಂದಿಗೂ ಇಷ್ಟಪಡುವುದಿಲ್ಲ. ಈ ವಿಷಯದಲ್ಲಿ ಪ್ರಜೆಗಳು ಮತ್ತು ಸರಕಾರದವರು ಬಹಳ ಸಹಕರಿಸಿ ನಡೆಯುವರು. ಇಲ್ಲಿಯ ಜನಗಳಿಗೆ ತಮ್ಮ ರಾಷ್ಟ್ರದ ಬಗ್ಗೆ ಹೇಳತೀರದಷ್ಟು ಅಭಿಮಾನ.

ಜಪಾನಿನಲ್ಲಿ ಸುಮಾರು ೨|| ಕೋಟಿ ಪ್ರಜೆಗಳಿರುವರು. ಇದರಲ್ಲಿ ಸುಮಾರು ಮೂರರಲ್ಲಿ ಒಂದು ಭಾಗವು ಕೃಷಿಯಿಂದಲೇ ಜೀವಿಸುವದು. ಕೃಷಿಗಾರರು ನಮ್ಮ ರೈತರಂತೆ ಹಿಂದಿನ ಪದ್ಧತಿಗನುಸಾರವಾಗಿ ಮಾಡುತ್ತಿಲ್ಲ. ಹಿಂದಿನ ಪದ್ಧತಿಗಳಲ್ಲಿನ ಲೋಪವೆಲ್ಲವನ್ನೂ ಹೋಗಲಾಡಿಸಿ ನೂತನ ವಿಧಾನದಿಂದ ವ್ಯವಸಾಯಮಾಡುತ್ತಿರುವರು. ನಮ್ಮ ಇಂಡಿಯಾ ದೇಶದ ವ್ಯವಸಾಯದ ಇಲಾಖೆಯವರೂ ಕೂಡ ಈ ನೂತನ ಪದ್ಧತಿಯನ್ನು ಒಪ್ಪಿ ನಮ್ಮ ದೇಶದ ರೈತರಿಗೆ ಮಾದರಿಯಾಗಿ ತೋರಿಸುತ್ತಿರುವರು. ಅಲ್ಲಿನ ಕೂಲಿಗಾರರನ್ನು ನೋಡಿದರೆ ಎಲ್ಲರೂ ಹೆಮ್ಮೆಪಡಬೇಕು. ತಮ್ಮ ದೇಶೋನ್ನತಿಗೆ ನೆರವಾಗಲು ತಾವೂ ಕೈಲಾದಮಟ್ಟಿಗೂ ಸಹಾಯ ಮಾಡುತ್ತಿರುವರು. ಅವರು ತಮಗೆ ಖರ್ಚಾಗುವದಕ್ಕಿಂತ ಹೆಚ್ಚಿಗೆ ಕೂಲಿಯನ್ನು ತೆಗೆದುಕೊಳ್ಳಲು ಇಷ್ಟಪಡುವುದಿಲ್ಲ. ಆದ್ದರಿಂದ ಜಪಾನಿನಲ್ಲಿ ಕೂಲಿಖರ್ಚು ಬಹಳ ಕಡಿಮೆ. ಈ ಖರ್ಚು ಕಡಿಮೆಬಿದ್ದುದರಿಂದಲೇ ಅಲ್ಲಿಯ ಕೈಗಾರಿಕೆ ಹೆಚ್ಚಲು ಅವಕಾಶವಾಯಿತು. ಜೊತೆಗೆ ಕೈಗಾರಿಕೆಗೆ ಬೇಕಾದಷ್ಟು ಉತ್ತೇಜನವಿದೆ. ಇಲ್ಲಿಯ ಹೆಂಗಸರು ಮಕ್ಕಳು ತಮ್ಮ ತಮ್ಮ ಮನೆಗಳಲ್ಲಿ ಸಣ್ಣಪುಟ್ಟ ಸಾಮಾನುಗಳನ್ನು ಮಾಡಿ ಅವನ್ನು ಕಾರ್ಖಾನೆಗಳಲ್ಲಿ ಜೋಡಿಸುತ್ತಾರೆ. ಪ್ರತಿಯೊಬ್ಬರೂ ಸುಮ್ಮನೆ ಕಾಲಕಳೆಯಲು ಇಷ್ಟಪಡುವುದಿಲ್ಲ. ಕೈಗಾರಿಕೆಯ ವಿಷಯದಲ್ಲಿ ಇಷ್ಟೊಂದು ಅಭಿವೃದ್ಧಿ ಬರಲು ಇನ್ನೊಂದು ಕಾರಣವೇನೆಂದರೆ- ಜಪಾನಿನವರಿಗೆ ಚಿತ್ರಕಲಾಕೌಶಲ್ಯವೆಂದರೆ ಬಹಳ ಆಶೆ. ಜಪಾನಿನಲ್ಲಿ ಒಬ್ಬ ಕೂಲಿಯವನಿಂದ ಹಿಡಿದು ದೊರೆಯವರೆವಿಗೂ ಹಸ್ತಕೌಶಲ್ಯದಲ್ಲಿ ಬಹು ನಿಪುಣರಾಗಿದ್ದಾರೆ. ಈ ಮಹಿಮೆಯು ಪ್ರತಿಯೊಬ್ಬನಿಗೂ ಹುಟ್ಟುತ್ತಲೇ ಬಂದಿದೆಯೆಂದು ಹೇಳಬಹುದು. (ಮುಂದುವರಿಯುವದು.)

ಳಲ್ಲಿ ವಿವೇಚಿಸಲಾಗಿದೆ.

ಹೀಗಿದ್ದು ಇದು ನವೀನ ನಿಯಮವೆಂಬುವ ಕಾರಣವೇ ಇಲ್ಲ. ಸದ್ಯಕ್ಕೆ ಪ್ರತಿಯೊಂದು ಸ್ತ್ರೀಸಭೆಯಲ್ಲಿ ಈ ಸಂತತಿ ಸಂಯಮನ ಗೊತ್ತುವಳಿಯು ಏಕಮುಖದಿಂದ ಪಾಸಾಗುತ್ತಿರುವದು ಶುಭಲಕ್ಷಣವೆಂದು ತಿಳಿಯಬೇಕು. ಇಟಲಿ, ಜರ್ಮನಿ ದೇಶಗಳನ್ನು ಬಿಟ್ಟು ಉಳಿದ ದೇಶಗಳಲ್ಲೆಲ್ಲಾ ಈ ಸಂತತಿ ನಿಯಮನವು ಒಪ್ಪಿಗೆಯಾಗಿದೆ. ಇದನ್ನು ಪ್ರಚಾರಮಾಡಲು ಇಂಗ್ಲಂಡದಲ್ಲಿ ೩೭ ಕೇಂದ್ರಸ್ಥಾನಗಳಿವೆ, ಅಮೇರಿಕೆಯಲ್ಲಿ ೫೮ ಕೇಂದ್ರಗಳಿವೆ; ರಶಿಯಾದಲ್ಲಿ ೨೮ ಕೇಂದ್ರಗಳಿವೆ. ಇವುಗಳಲ್ಲಿ ಅನೇಕ ಕೇಂದ್ರಗಳು ಅಲ್ಲಿಯ ಸರಕಾರಗಳಿಂದಲೂ ಕೆಲವು ಸಾರ್ವಜನಿಕ ಪಟ್ಟೀ ಹಣದಿಂದಲೂ ನಡೆಯಿಸಲ್ಪಡುತ್ತಲಿವೆ. ಜಪಾನದಲ್ಲಿಯಂತೂ ಮಿತಿಮೀರಿ ಪ್ರಜಾಸಂಖ್ಯೆಯು ಬೆಳೆಯುತ್ತಿದೆ. ಆ ದೇಶದಲ್ಲಿ ಒಂದು ಗಂಟೆಗೆ ೨೪೯ ಕೂಸುಗಳಂತೆ ಪ್ರಜಾವೃದ್ಧಿಯಾಗುತ್ತಿದೆ. ಆದಕಾರಣ ಆ ಸರಕಾರದ ಪ್ರಜೆಗಳಿಗೆ ಸಂತತಿ ನಿಯಮನ ಮಹತ್ವವನ್ನು ತಿಳಿಸಿಕೊಡುವದಕ್ಕಾಗಿ ಸರಕಾರಿ ಡಾಕ್ಟರರನ್ನು ನಿಯಮಿಸಿದ್ದಾರೆ.

ಹಿಂದುಗಳಿಗೆ ಸಂಯಮನವು ಅವರ ಸಂಸ್ಕಾರವಿಶೇಷವಾಗಿದೆ. ಆದುದರಿಂದ ಅವರು ಸಂಯಮನ ಪೂರ್ವಕ ಪ್ರಜೋತ್ಪಾದನೆ ಮಾಡಿ ಸ್ವಲ್ಪಾದರೂ ಬಲಶಾಲಿಗಳಾದ ಪುತ್ರ ಪುತ್ರಿಯರನ್ನು ಪಡೆಯಲಿ. ಯಾಕಂದರೆ ದೇಶದ ಅಭ್ಯುದಯವು ಅದರ ನಿವಾಸಿಗಳ ಬಲದ ಮೇಲೆಯೇ ಅವಲಂಬಿಸಿಲ್ಲವೇ? ("ಸಕಾಳ.")



ಶಾ. ಶ. ೧೮೫೬ ನೆಯ ಕಾರ್ತಿಕ ಬ||೧೨ ಸೋಮವಾರ.

ಕ್ರಾಂತಿಯೇನೋ ಬೇಕು; ಆದರೆ ಮಾಡುವವರಾರು?

ಜಗತ್ತಿನಲ್ಲಿ ಅದ್ಭುತವಾದ ವಿಚಾರಕ್ರಾಂತಿಯಾಗುತ್ತಲಿದೆ. ಹಿಂದುಸ್ಥಾನದಲ್ಲಿಯೂ ಆ ಕ್ರಾಂತಿಯ ಅಲೆಗಳು ಏಳುತ್ತಲಿವೆ. ರಾಜಕೀಯ ಕ್ರಾಂತಿಯೊಂದೇ ಶಾಂತಿಯುಕ್ತವಾದ ಅಹಿಂಸಾ ಮೂಲಕ ಸಂಭವಿಸಬೇಕೆಂದು ರಾಷ್ಟ್ರವು ಇಚ್ಛಿಸುತ್ತಿದೆಯೆಂದಲ್ಲ. ಈ ಪ್ರಕಾರ ಹಿಂದುಸ್ಥಾನದಲ್ಲಿ ಧಾರ್ಮಿಕ ವಿಚಾರಕ್ರಾಂತಿಯಾಗಬೇಕೆಂತಲೂ ಹಿಂದು ಜನಾಂಗದ ಸುಶಿಕ್ಷಿತ ವರ್ಗವು ಅಪೇಕ್ಷಿಸುತ್ತಿದೆ.

ಧಾರ್ಮಿಕ ಮೂಢಾಚಾರಗಳೂ, ಧರ್ಮಗುರುಗಳ ಬಲಾತ್ಕಾರ ಹಿಂಸೆಗಳೂ, ಅನರ್ಥಕಾರಿಯಾದ ಸಾಮಾಜಿಕ ರೂಢಿಗಳೂ ಬಹು ಜನರಿಗೆ ಬೇಕಾಗಿಲ್ಲ. ಇವುಗಳನ್ನು ಬಿಟ್ಟುಬಿಡಲು ಅಸಂಖ್ಯರು ಆತುರರಾಗಿದ್ದಾರೆ. ಈ ವಿಧವಾದ ಕ್ರಾಂತಿಯೇನೋ ಮಧ್ಯಮತರದ ಸುಶಿಕ್ಷಿತ ಜನಾಂಗಕ್ಕೆ ಮಾತ್ರ ಬೇಕಾಗಿದೆ. ಆದರೆ ಅದನ್ನು ಮಾಡುವವರಾರು?

ಸಮಾಜದಲ್ಲಿ ಶ್ರೇಷ್ಠರೆಂಬುವವರಿಗೆ ಈ ಕ್ರಾಂತಿಯು ಬೇಕಾಗಿಲ್ಲ. ಇದರಿಂದ ತಮ್ಮ ಘನತೆ ಗೌರವ ಸುಖ ಸೌಲಭ್ಯಗಳು ಲೋಪವಾಗುತ್ತವೆಂದು ಇವರು ಈ ಕ್ರಾಂತಿಯನ್ನು ವಿರೋಧಿಸುವವರಾಗಿದ್ದಾರೆ. ಸಮಾಜದ ಅಶಿಕ್ಷಿತವಾದ ಜನ ಸಮೂಹಕ್ಕೆ ಇನ್ನೂ ತನ್ನ ಅಧೋಗತಿಯ ಮತ್ತು ಕಷ್ಟನಷ್ಟಗಳ ಅರುವುಂಟಾಗಿಲ್ಲ. ಸಮಾಜದ ಶ್ರೇಷ್ಠ ವರ್ಗವು ಆ ಅಜ್ಞ ಸಮೂಹವನ್ನು ತನ್ನ ಕಡೆ ಗಟ್ಟಿಕೊಂಡಿದೆ. ಈಗಿನ ಕ್ರಾಂತಿಯ ವಿಚಾರತರಂಗಗಳು ಜನಸಾಮಾನ್ಯರಲ್ಲಿ ಪ್ರಸಾರವಾಗಬಾರದೆಂದು ಆ ಮೇಲಣ ವರ್ಗವು ಪ್ರಯತ್ನಿಸುತ್ತಲಿದೆ. ಎಲ್ಲ ಮತಪಂಗಡಗಳ ಗುರುಗಳೆಂಬುವವರ ಕೈಯಲ್ಲಿಯೇ ಹಿಂದು ಜನಾಂಗದ ಅಶಿಕ್ಷಿತ ಸಮೂಹವು ಸಿಕ್ಕಿಕೊಂಡಿದೆ. ತೋಳನ ಕೈಯಲ್ಲಿ ಸಿಕ್ಕ ಕುರಿಗಳಂತೆ ಈ ಪ್ರತಿಷ್ಠಿತ ವರ್ಗದ ಕೈಯಲ್ಲಿ ಹಿಂದು ಸಮಾಜದ ಕೋಟ್ಯಾಂತರ ಜನರು ಸಿಕ್ಕಿಕೊಂಡಿದ್ದಾರೆ. ಆದಕಾರಣ ಧಾರ್ಮಿಕ ವಿಚಾರ ಕ್ರಾಂತಿಗೆ ಬಲವಾದ ಪ್ರತಿಬಂಧವಾಗಿದೆ.

ಬಂಡುವಾಳಗಾರರ ಸ್ವಾರ್ಥದಿಂದ ಕೂಲಿಕಾರರು ನರಳುತ್ತಿರುವಂತೆ ಆಳರಸರ ಸ್ವಾರ್ಥದಿಂದ ಪ್ರಜೆಗಳು ದುಃಖಪಡುವಂತೆ ಗುರುಗಳೆಂಬುವವರೇ ಮೊದಲಾದ ಜಾತಿಯ ಪ್ರತಿಷ್ಠಿತ ವರ್ಗದವರ ಸ್ವಾರ್ಥದಿಂದ ಭಾವಿಕರಾದ ಜನಸಾಮಾನ್ಯರು ಬಳಲುತ್ತಿದ್ದಾರೆ. ಆದಕಾರಣ ಸಾಂಪತ್ತಿಕ ಮತ್ತು ರಾಜಕೀಯ ವಿಚಾರ ಕ್ರಾಂತಿಗಳು ಹಿಂದುಸ್ಥಾನದಲ್ಲಿ ಎಷ್ಟು ಅವಶ್ಯಕವೋ ಅಷ್ಟೇ ಧಾರ್ಮಿಕ ವಿಚಾರ ಕ್ರಾಂತಿಯೂ ಅತ್ಯಗತ್ಯ. ಇಷ್ಟೇ ಅಲ್ಲ, ಹಿಂದುಸ್ಥಾನದ ರಕ್ತನಾಳಗಳಲ್ಲಿ ತುಂಬಿರುವ ಧಾರ್ಮಿಕ ಪ್ರವೃತ್ತಿಯನ್ನು ನೋಡಿದರೆ ಈ ಧಾರ್ಮಿಕ ವಿಚಾರಕ್ರಾಂತಿಯಾದ ವಿನಾ ಆರ್ಥಿಕ ಮತ್ತು ರಾಜಕೀಯ ವಿಚಾರ ಕ್ರಾಂತಿಗಳಿಗೆ ಸ್ಥಿರತ್ವವು ಬರಲಾರದೆಂದೇ ಹೇಳಬಹುದು.

ರಶಿಯಾ ದೇಶದ ರಾಜಕೀಯ ಸಾಂಪತ್ತಿಕ ಪರಿವರ್ತನೆಗಳಾಗಬೇಕಾದರೆ ಧಾರ್ಮಿಕ ವಿಚಾರದಲ್ಲಿ ಅತ್ಯದ್ಭುತವಾದ ಕ್ರಾಂತಿಯಾಗಲಿಲ್ಲವೆ? ತುರ್ಕಸ್ಥಾನದ ಅಭಿವೃದ್ಧಿಯನ್ನು ಮಾಡುವಾಗ ಕೇಮಾಲ ಪಾಶಾರವರಿಗೆ ಧಾರ್ಮಿಕ ಮೂಢಾಚಾರ ವಿಚಾರಗಳಲ್ಲಿ ಕ್ರಾಂತಿಯನ್ನುಂಟುಮಾಡುವುದು ಅವಶ್ಯಕವಾಗಿ ತೋರಲಿಲ್ಲವೆ? ಆದುದರಿಂದ ರಾಷ್ಟ್ರದ ನಿಜವಾದ ಉನ್ನತಿಯು ಸಂಭವಿಸಿ ಅದು ಸ್ಥಿರಗೊಳ್ಳಬೇಕಾದರೆ ಧಾರ್ಮಿಕ ವಿಚಾರಕ್ರಾಂತಿಯು ಅತ್ಯವಶ್ಯಕವೆಂದೇ ಸಿದ್ಧವಾಗುತ್ತದೆ.

ಈ ಸತ್ಯ ಸಿದ್ಧಾಂತವು ಈ ದೇಶದಲ್ಲಿಯೂ ಅನೇಕರಿಗೆ ಮನವರಿಕೆಯಾಗಿ ಹಿಂದುಗಳ ಧಾರ್ಮಿಕ ತಪ್ಪು ಆಚಾರವಿಚಾರಗಳನ್ನು ತಿದ್ದಲು ಅಲ್ಲಲ್ಲಿ ಪ್ರಯತ್ನಗಳನ್ನು ಮಾಡಲುಪಕ್ರಮಿಸಿದ್ದಾರೆ. ಈ ಪ್ರಯತ್ನಗಳು ಹೇಗಾಗಬೇಕು? ಈ ಧಾರ್ಮಿಕ ವಿಚಾರಕ್ರಾಂತಿಯನ್ನು ಹೇಗುಂಟುಮಾಡಬೇಕು? ಇಂಥ ಕ್ರಾಂತಿಯೇನೋ ರಾಷ್ಟ್ರಕ್ಕೆ ಈಗ ಅತ್ಯಾವಶ್ಯಕವೇ ಆಗಿದೆ. ಅದನ್ನು ಅಸಂಖ್ಯರು ನಿರೀಕ್ಷಿಸುತ್ತಲೂ ಇದ್ದಾರೆ. ಆದರೆ ಅದನ್ನು ಮಾಡುವವರಾರು?

ಹಿಂದಿನ ಕಾಲದಲ್ಲಿ ರಾಜರಿಂದಲೂ ಋಷಿಗಳಿಂದಲೂ ಧಾರ್ಮಿಕ ಪರಿವರ್ತನೆಗಳು ಸಂಭವಿಸುತ್ತಿದ್ದವು. ನಾನಾ ಸ್ಮೃತಿಗ್ರಂಥಗಳು ಹೀಗಾಗಿಯೇ ಆಯಾಯ ಕಾಲಕ್ಕೆ ಯುಕ್ತಕಂಡಂತೆ ಏರ್ಪಟ್ಟವು. ಈಗ ಆ ಪ್ರಕಾರ ಒಂದು ವ್ಯಕ್ತಿಯ ಕೈಯಲ್ಲಿ ಯಾವ ಅಧಿಕಾರವೂ ಉಳಿದಿಲ್ಲ. ಇದು ಪ್ರಜಾಪ್ರಭುತ್ವದ ಕಾಲ. ರಾಜಕೀಯ ಸೂತ್ರವು ಹೇಗೆ ರಾಜರ ಕೈಯಿಂದ ಪ್ರಜೆಗಳ ಕೈಯಲ್ಲಿ ಬರಲಾರಂಭಿಸಿದೆಯೋ ಹಾಗೆಯೇ ಧಾರ್ಮಿಕ ಸೂತ್ರವೂ ಗುರುಗಳೆಂಬುವವರ ಕೈಯಿಂದ ಶಿಷ್ಯರ ಕೈಯಲ್ಲಿ ಬರಬೇಕು.

ಶಿಷ್ಯರು ಸಂಘ ಮೂಲಕ ಧಾರ್ಮಿಕ ವಿಚಾರ ಕ್ರಾಂತಿಯ ಕಾರ್ಯವನ್ನು ಕೈಕೊಳ್ಳಬೇಕು. ಆಳರಸರ ಕೈಯಿಂದ ಅಧಿಕಾರವನ್ನು ಕಿತ್ತುಕೊಳ್ಳಲು ಮತ್ತು ಬಂಡುವಾಳಗಾರರ ಸ್ವಾರ್ಥಕ್ಕೆ ಬರೆಕೊಡಲು ಹೇಗೆ ರಾಜಕೀಯ ಮತ್ತು ಕೂಲಿಕಾರರ ಸಂಘಗಳು ಏರ್ಪಡುತ್ತಲಿದ್ದು ಚಟುವಟಿಕೆಗಳನ್ನು ನಡೆಸುತ್ತಲಿವೆಯೋ ಹಾಗೆಯೇ ಗುರುಗಳೆಂಬುವವರ ಮತ್ತು ಜನ್ಮದಿಂದಲೇ ಧಾರ್ಮಿಕ ಶ್ರೇಷ್ಠತ್ವವನ್ನು ಹೊಂದಿರುವವರ ಕೈಯಲ್ಲಿರುವ ಧಾರ್ಮಿಕ ಸಾಮಾಜಿಕ ಬಲಾತ್ಕಾರಗಳ ಸೂತ್ರಗಳನ್ನು ಸೆಳೆದುಕೊಳ್ಳಲು ಪ್ರತ್ಯೇಕವಾದ ಆಯಾಯ ಮತೀಯ ಶಿಷ್ಯರ ಸಂಘಗಳೂ ಏರ್ಪಡಬೇಕು.

ಈ ಪ್ರಕಾರ ಹಿಂದುಗಳಲ್ಲಿರುವ ಪ್ರತಿಯೊಂದು ಮತೀಯರೂ ತಮ್ಮ ತಮ್ಮ ಮತೀಯರಲ್ಲಿರುವ ಅನೇಕ ಧಾರ್ಮಿಕ ತಪ್ಪು ಆಚಾರವಿಚಾರಗಳನ್ನು ತೆಗೆದುಹಾಕಲು ಪ್ರತ್ಯೇಕವಾದ ಧಾರ್ಮಿಕ ಸಂಘಗಳು ಏರ್ಪಡಬೇಕು ಮತ್ತು ಹಿಂದು ಸಂಘಟನೆಗೆ ಅವಶ್ಯಕವಾದ ಸಂಗತಿಗಳನ್ನು ಪ್ರಸಾರಗೊಳಿಸಲು ಎಲ್ಲ ಮತಪಂಥಗಳ ಇಂಥ ಸಂಘಗಳು ಏಕಮುಖವಾಗಿ ಪ್ರಯತ್ನಿಸಬೇಕು. ಈ

ಲೇಖನ ಸಾಕು; ಕೆಲಸ ಪ್ರಾರಂಭವಾಗಲಿ.

ವೀರಶೈವ ಸಮಾಜದಲ್ಲಿರುವ ಈಗಿನ ಅನೇಕ ಧಾರ್ಮಿಕ ಆಚಾರ ವಿಚಾರಗಳ ಭಿನ್ನಾಭಿಪ್ರಾಯಗಳನ್ನೂ ಶ್ರೀ ಬಸವಾದಿ ಪ್ರಮಥರ ದೂಷಣೆಯ ದುಷ್ಟ ಚಟುವಟಿಕೆಗಳನ್ನೂ ಕುರಿತು ಕಳೆದ ಮೂರು ವರ್ಷಗಳಲ್ಲಿ ನೂರಾರು ಲೇಖನಗಳನ್ನು ಪ್ರಕಟಿಸಿ ನಿಜ ತತ್ವಗಳನ್ನು ಅರಿತುಕೊಳ್ಳಬೇಕೆಂಬ ನಿಷ್ಪಕ್ಷಪಾತಿಗಳಾದ ಜಿಜ್ಞಾಸುಗಳಿಗೆ ತುಂಬಾ ಸೌಲಭ್ಯಗಳನ್ನುಂಟುಮಾಡಿಕೊಟ್ಟಿದ್ದಾಯಿತಷ್ಟೆ.

ಈ ಸಂಬಂಧವಾದ ವಿಚಾರ ವಿನಿಮಯಕ್ಕೆ ಜನಸಾಮಾನ್ಯರಿಗೆ ಎಷ್ಟು ಅವಕಾಶವಿದೆಯೋ ಅದಕ್ಕಿಂತಲೂ ಹೆಚ್ಚಾಗಿಯೇ ಈ ಪತ್ರಿಕೆಯಲ್ಲಿ ಆ ಎಲ್ಲಾ ಸಂಗತಿಗಳು ವಿವರವಾಗಿಯೇ ಚರ್ಚಿಸಲ್ಪಟ್ಟವು. ಉಭಯ ಪಕ್ಷಗಳ ಅಭಿಪ್ರಾಯಗಳೂ ಸ್ಪಷ್ಟವಾಗಿಯೇ ವ್ಯಕ್ತವಾದವು. ಅನೇಕ ವಿದ್ವಾಂಸರು ಧರ್ಮಗ್ರಂಥಗಳ ಆಧಾರಗಳಿಂದಲೇ ಈ ವಿಷಯಗಳನ್ನೆಲ್ಲಾ ಚರ್ಚಿಸಿದರು.

ಇತ್ತೀಚೆಗೆ ಬರುವ ಅನೇಕ ಲೇಖನಗಳಲ್ಲಿ ಆ ಹಿಂದಣ ಸಂಗತಿಗಳೇ ಪುನಃ ಬರಲಾರಂಭಿಸಿವೆ. ಯಾರು ಎಷ್ಟು ಸಾರೆ ಬರೆದರೂ ತಮ್ಮ ಅಭಿಪ್ರಾಯವನ್ನು ದೃಢೀಕರಿಸಲು ಅವೇ ಪ್ರಮಾಣಗಳನ್ನು ಪುನಃ ಉದಾಹರಿಸುತ್ತಿದ್ದಾರೆ. ಆದಕಾರಣ ಈ ಸಂಬಂಧವಾದ ಇಂಥ ಲೇಖನಗಳು ಇನ್ನು ಸಾಕು.

ಕಳೆದ ಮೂರು ವರುಷಗಳ ಈ ಚರ್ಚೆಗಳಿಂದ ಯಾರ ಅಭಿಪ್ರಾಯವು ವ್ಯತ್ಯಾಸವಾಗಲಿಲ್ಲವೋ ಅವರನ್ನು ತಮ್ಮ ಅಭಿಪ್ರಾಯಕ್ಕೆ ಒಪ್ಪುವಂತೆ ಪರಿವರ್ತನಗೊಳಿಸುವದು ಲೇಖನಗಳಿಂದ ಅಶಕ್ಯವೇ ಸರಿ. ಪುನಃ ಪುನಃ ಅವೇ ಸಂಗತಿಗಳನ್ನು ಬರೆಯುತ್ತ ಹೋಗುವದು ಶಕ್ತಿಯ ಅಪವ್ಯಯವಲ್ಲವೆ? ಆದಕಾರಣ ಇನ್ನು ಮೇಲೆ ಈ ಸಂಬಂಧವಾದ ಲೇಖನಗಳಿಗೆ ಈ ಪತ್ರಿಕೆಯಲ್ಲಿ ಅವಕಾಶವಿಲ್ಲ.

ಈ ವರೆಗಿನ ಚರ್ಚೆಗಳಿಂದುಂಟಾದ ಮುಖ್ಯ ಸಿದ್ಧಾಂತಗಳನ್ನು ಈ ಕೆಳಗೆ ಉದಾಹರಿಸಿದ್ದಾಗಿದೆ. ಇವುಗಳಂತೆ ಇನ್ನು ಆಚರಣೆಯಲ್ಲಿ ತರಲು ಸಕಲರೂ ಪ್ರಯತ್ನಿಸಬೇಕು. ಇವುಗಳಲ್ಲಿ ಯಾರು ಯಾವ ಸಂಗತಿಯನ್ನು ತಾವು ಆಚರಣೆಯಲ್ಲಿ ತಂದರೆಂಬುದನ್ನೂ, ಆ ವಿಚಾರವಾಗಿ ತಾವು ಮಾಡಿದ ಪ್ರಯತ್ನವನ್ನೂ ಅದಕ್ಕುಂಟಾದ ಅನಾನುಕೂಲ ಪ್ರತಿಕೂಲಗಳನ್ನೂ ಸಕಲರಲ್ಲಿಯೂ ಈ ನಿಜ ತತ್ವಗಳು ಆಚರಣೆಯಲ್ಲಿ ಬರಬೇಕಾದರೆ ಯಾವ ವಿಧಾಯಕ ಏರ್ಪಾಟು ಮಾಡಲ್ಪಡಬೇಕೆಂಬುದನ್ನೂ ಕುರಿತು ಬರೆಯುವ ಲೇಖನಗಳಿಗೆ ಮಾತ್ರ ಅವಕಾಶಕೊಡಲಾಗುವದು. ಸಂಶೋಧಾತ್ಮಕ ಲೇಖನಗಳನ್ನು ಶಿವಾನುಭವ ಪತ್ರಿಕೆಗೆ ಬರೆಯುವುದುತ್ತಮ.

ಮತ್ತು ಈ ವರೆಗಿನ ಚರ್ಚೆಯಿಂದ ನಿರ್ಣಯವಾದ ಈ ಕೆಳಗಿನ ಸಂಗತಿಗಳ ವಿನಾ ವೀರಶೈವಮತತತ್ವಗಳಿಗೂ ಸಮಾಜ ಸುಧಾರಣೆಗೂ ಸಂಬಂಧಪಟ್ಟ ಬೇರೆ ಲೇಖನಗಳಿಗೂ ಅವಕಾಶಕೊಡಲಾಗುವದು. ಆದಕಾರಣ ಲೇಖಕ ಮಹಾಶಯರು ಈ ಎಲ್ಲ ಸಂಗತಿಗಳನ್ನು ಲಕ್ಷಿಸಿ ಲೇಖನಗಳನ್ನು ಬರೆದು ಕಳುಹಿಸಬೇಕು ಮತ್ತು ಈ ಕೆಳಗಿನ ತತ್ವಗಳನ್ನು ವೀರಶೈವ ಮತಾಭಿಮಾನಿಗಳು ತಾವು ಆಚರಣೆಯಲ್ಲಿ ತರುವುದಲ್ಲದೆ ತಮ್ಮ ಮತಬಾಂಧವರೂ ಆಚರಣೆಯಲ್ಲಿ ತರುವಂತೆ ಕೆಲಸ ಪ್ರಾರಂಭಿಸಬೇಕೆಂದು ಪ್ರಾರ್ಥನೆ.

ಪ್ರಕಾರ ಧಾರ್ಮಿಕ ವಿಚಾರ ಕ್ರಾಂತಿಗಾಗಿ ಅದ್ಭುತ ಪ್ರಮಾಣದಲ್ಲಿ ಸರ್ವತ್ರ ಪ್ರಯತ್ನ ಜರುಗದ ವಿನಾ ಹಿಂದು ಜನಾಂಗಕ್ಕೂ ಹಿಂದುಸ್ಥಾನಕ್ಕೂ ಕ್ಷೇಮವಿಲ್ಲ. ಆದುದರಿಂದ ಅಂಥ ಕ್ರಾಂತಿಯು

ಈ ವರೆಗಿನ ಚರ್ಚೆಯಿಂದ ಗೊತ್ತಾದ ಆಚರಣೆಯಲ್ಲಿ ತರಬೇಕಾದ ಸಂಗತಿಗಳು.

೧ ಶ್ರೀ ಪ್ರಭುದೇವಾದಿ ನಿರಂಜನ ಮೂರ್ತಿಗಳೂ ಶ್ರೀ ರೇಣುಕಾದಿ ಆಚಾರ್ಯರೂ ಶ್ರೀ ಬಸವಾದಿ ಪ್ರಮಥರೂ ಬೋಧಿಸಿರುವ ವೀರಶೈವ ಮತತತ್ವಗಳು ಒಂದೇ ಇದ್ದು ಅವು ಇಡೀ ವೀರಶೈವ ಸಮಾಜಕ್ಕೇನೇ ಮಾನ್ಯವಾಗಿರುತ್ತವೆ. ಅದ್ದರಿಂದ ಇವರೆಲ್ಲರೂ ಸಮಸ್ತ ವೀರಶೈವರಿಗೆ ಪೂಜ್ಯರೂ ವಂದ್ಯರೂ ಆಗಿದ್ದಾರೆ. ಹೀಗಿರುವಾಗ ಈ ಮಹಾ ವಿಭೂತಿಗಳಲ್ಲಿ ಕೆಲವರನ್ನು ನಿಂದಿಸುವ ನಾನಾ ಬಗೆಯ ಚಟುವಟಿಕೆಗಳು ಸಮಾಜದಲ್ಲಿ ಇತ್ತೀಚೆಗೆ ನಡೆದಿದ್ದು ಅವು ಸಮಾಜಕ್ಕೆ ಘಾತಕವಾದುದರಿಂದ ಅಂಥ ಚಟುವಟಿಕೆಗಳನ್ನು ಸಂಪೂರ್ಣ ನಿಷೇಧಿಸಬೇಕು ಮತ್ತು ಅಂಥ ಚಟುವಟಿಕೆಗಾರರಿಗೆ ಯಾವತರದ ಧಾರ್ಮಿಕ ಮಾನಮನ್ನಣೆಗಳನ್ನೂ ಸಹಾಯ ಸೌಲಭ್ಯಗಳನ್ನೂ ಕೊಡಕೂಡದು.

೨ ಅಷ್ಟಾವರಣಯುಕ್ತರಾದ ವೀರಶೈವರಲ್ಲಿ ಬ್ರಾಹ್ಮಣಾದಿ ಚಾತುರ್ವರ್ಣಗಳಾಗಲಿ ಭಕ್ತ ಮಾಹೇಶ ಎಂಬ ಜಾತಿಗಳಾಗಲಿ ಇಲ್ಲ.

೩ ಗುರು ಜಂಗಮ ತ್ವಗಳು ಜನ್ಮದಿಂದಲ್ಲ. ಅವು ಅಷ್ಟಾವರಣಯುಕ್ತ ವೀರಶೈವರಲ್ಲಿ ಯಾರಿಗಾದರೂ ಶೀಲಾಚಾರಗಳಿಂದಲೂ ವಿಧಿವತ್ತಾದ ಸಂಸ್ಕಾರಗಳಿಂದಲೂ ಲಭ್ಯವಾಗುತ್ತವೆ.

೪ ಅಷ್ಟಾವರಣಯುಕ್ತ ವೀರಶೈವರಲ್ಲಿರುವ ಈಗಿನ ಸಮಾಜ ಪಂಗಡಗಳು ಅವರವರ ಉದ್ಯೋಗ ಶೀಲ ವ್ರತಗಳಿಂದುಂಟಾದವುಗಳಾದಕಾರಣ ಅವು ಜನ್ಮವಿಶಿಷ್ಟ ಜಾತಿಗಳಲ್ಲ. ಕೀಳುಮೇಲೆಂಬ ಭಾವನೆಯಿಲ್ಲದೆ ಪರಸ್ಪರ ಅನ್ನೋದಕ ವ್ಯವಹಾರ ಮತ್ತು ಶರೀರ ಸಂಬಂಧಗಳನ್ನು ಬೆಳೆಯಿಸಬೇಕು.

೫ ಲಿಂಗಧಾರಿಗಳಾದ ಶುದ್ಧಾಚಾರಶೀಲರನ್ನು ಶಿವದೀಕ್ಷೆಯಿಂದ ಬಳಕೆಯಲ್ಲಿ ತೆಗೆದುಕೊಳ್ಳುವುದು

೬ ಯಾವ ಕಾರಣದಿಂದಲಾದರೂ ವೀರಶೈವ ಮತದಿಂದ ದೂರಾಗಿ ಅನ್ಯ ಧರ್ಮವನ್ನು ಹೊಂದಿದವರೂ ಪುನಃ ಈ ಮತದಲ್ಲಿ ಬರಲು ಇಷ್ಟಪಟ್ಟು ಶುದ್ಧಾಚಾರಶೀಲರಾಗಿರಲು ಸಿದ್ಧರಿದ್ದರೆ ಅವರನ್ನು ಶಿವದೀಕ್ಷೆಯಿಂದ ಮತದಲ್ಲಿ ತೆಗೆದುಕೊಳ್ಳುವುದು.

೭ ಅನ್ಯ ಧರ್ಮದವರು ಈ ಮತಕ್ಕೆ ಬರಲು ಇಷ್ಟಪಟ್ಟು ಈ ಮತದ ಶುದ್ಧಾಚಾರಗಳಂತೆ ನಡೆಯಲು ಸಿದ್ಧರಿದ್ದರೆ ಅವರಿಗೆ ಲಿಂಗಧಾರಣೆಯನ್ನು ಮಾಡಿ ಅವರ ಶೀಲಾಚಾರಗಳ ಮೇಲಿಂದ ಬಳಕೆಯಲ್ಲಿ ತೆಗೆದುಕೊಳ್ಳುವದು

೮ ಈ ಮೇಲಣ ನಿಜತತ್ವಗಳಿಗನುಸರಿಸಿ ನಡೆಯುವ ಯಾವ ವೀರಶೈವ ವ್ಯಕ್ತಿಗಾಗಲಿ ಅಥವಾ ವ್ಯಕ್ತಿ ಸಮೂಹಕ್ಕಾಗಲಿ ನ್ಯಾಯವಾಗಿರುವ ಈ ಧಾರ್ಮಿಕ ಸ್ವಾತಂತ್ರ್ಯಕ್ಕೆ ಪ್ರತಿಬಂಧಗೊಳಿಸುವ ಅಥವಾ ಮಾನಮನ್ನಣೆಗಳಿಗೆ ಚ್ಯುತಿಗೊಳಿಸುವ ಬಹಿಷ್ಕಾರ ಮೊದಲಾದ ಅನ್ಯಾಯವಾದ ನಡತೆಗಳು ಯಾರಿಂದ ಸಂಭವಿಸಿದರೂ ಅವರ ಮೇಲೆ ಕಾಯಿದೆ ಪ್ರಕಾರ ನ್ಯಾಯಸ್ಥಳದಲ್ಲಿ ವ್ಯಾಜ್ಯವನ್ನು ಹೂಡುವದು.

೯ ವೀರಶೈವ ಮತತತ್ವಗಳ ಮನವರಿಕೆಯಾಗುವದಕ್ಕೂ ಮತ್ತು ಪ್ರಸಾರಕ್ಕೂ ಅನುಕೂಲವಾಗುವಂತೆ ಶಿವಾನುಭವ ಮಂಟಪಗಳನ್ನು ಏರ್ಪಡಿಸಿಕೊಂಡು ವಚನಶಾಸ್ತ್ರಗಳ ಅಧ್ಯಯನ ಮತ್ತು

ಪತ್ರಗಳ ಸಾರಾಂಶ.

ವಿಜಾಪುರ ದುಷ್ಕಾಳ ನಿವಾರಕ ಸಂಸ್ಥೆಯ ವಸ್ತು ಸಂಗ್ರಹಾಲಯ.

ವಿಜಾಪುರ ಬಾಜಾರದಿಂದ ಸ್ಟೇಶನ ಕಡೆಗೆ ಹೋಗುವ ದೊಡ್ಡ ಹಾದಿಯ ಮೇಲೆ ವಿಲ್ಸನ್ ದುಷ್ಕಾಳ ನಿವಾರಕ ಸಂಸ್ಥೆಯ ಭವ್ಯವ ಸುಂದರವಾದ ಕಟ್ಟಡವಿರುವದು. ಅಲ್ಲಿ ಉಪಯುಕ್ತ ಮಾಹಿತಿಯನ್ನು ಕೊಡುವ ವಸ್ತು ಸಂಗ್ರಹಾಲಯವಿರುವದು. ಅದರಲ್ಲಿ ಇರತಕ್ಕ ಸಾಮಾನುಗಳ ವಿವರಃ—

೧ ಮುಂಬಯಿ ಇಲಾಖೆಯಲ್ಲಿ ಸಿಗುವ ಕಲ್ಲು, ಮಣ್ಣಿನ ನಮೂನೆಗಳು. ೨ ನಾನಾತರದ ಮಾದರಿಯ ಒಡ್ಡುಗಳು ಮತ್ತು ಸಾಂಡು ಮೋರಿಗಳ ಮಾದರಿಯ ನಮೂನೆಗಳು ೩ ಸಮಪಾತಳಿ ಇದ್ದ, ಇಲ್ಲದೆ ಇದ್ದ, ಜಮೀನಗಳ ತುಲನಾ ತೋರಿಸುವ ಮಾದರಿಯ ನಮೂನೆಗಳು. ೪ ಆಯಾ ಪ್ರದೇಶದಲ್ಲಿ ಆಯಾ ಕಾಲಕ್ಕೆ ಆಗುವ ಮಳೆಯ ಪ್ರಮಾಣ ಮತ್ತು ಬೆಳೆಯ ಪ್ರಮಾಣ ಇವುಗಳ ಪಟಗಳು. ೫ ನಾನಾತರದ ಗೊಬ್ಬರದ ನಮೂನೆಗಳು. ೬ ನಾನಾತರದ ಒಕ್ಕಲತನದ ಸಾಮಾನುಗಳ ನಮೂನೆಗಳು. ೭ ಎಲ್ಲ ತರದ ಹುಲ್ಲಿನ ಬೀಜಗಳು. ೮ ಮುಖ್ಯ ಬೆಳೆಗಳ ನಮೂನೆ; ಸುಧಾರಿಸಿದ ಪದ್ಧತಿಯಿಂದ ತಯಾರ ಆದ ತರತರದ ರೋಗಗಳಿಗೆ ಆಸ್ಪದ ಕೊಡದ ಗೋದಿ, ಹತ್ತಿ, ಜೋಳ, ಸಜ್ಜಿ, ಸೇಂಗಾ ಮುಂತಾದ ಬೀಜದ ನಮೂನೆಗಳು. ೯ ಎಲ್ಲ ತರದ ಹಣ್ಣಿನ ಮಾದರಿಯ ನಮೂನೆಗಳು. ೧೦ ಬೆಳೆ ನಾಶಮಾಡುವ ಹುಳಗಳ ಎಲ್ಲ ತರದ ನಮೂನೆಗಳು ಮತ್ತು ಬೆಳೆಯ ರೋಗಾದಿಗಳ ನಮೂನೆಗಳು ೧೧ ಈ ಜಿಲ್ಲೆಯಲ್ಲಿ ಹುಟ್ಟತಕ್ಕ ನೂಲು, ಉಣ್ಣೆ, ಕಲ್ಲು, ಕಟ್ಟಿಗೆಯ ಸಾಮಾನುಗಳು. ಇದಲ್ಲದೆ ಬೇರೆ ಕೈಗಾರಿಕೆಯ ಸಾಮಾನುಗಳು. ೧೨ ದನಗಳ ಜೋಪಾನ ಮತ್ತು ಅವುಗಳ ಚಿಕಿತ್ಸೆಯ ಪಟಗಳು. ೧೩ ಪದ್ಧತಿಶೀರ ಕಟ್ಟಿಸಿದ ಮನೆಯ ಮಾದರಿಯ ನಮೂನೆ. ೧೪ ಮೈಲೀ ಬೇನೆ, ಮಾಂಕಾ, ಪ್ಲೇಗ, ಮಹಾರೋಗ ಇತ್ಯಾದಿಗಳ ರೋಗಗಳ ಪ್ರತಿಬಂಧಕ ಮತ್ತು ಪೂರ್ವೋಪಾಯದ ಚಿಕಿತ್ಸೆಯ ಬಗ್ಗೆ ಮಾಡಿಟ್ಟ ಪಟಗಳು.

ಇವಲ್ಲದೆ ಇನ್ನೂ ಅನೇಕ ತರದ ಮಾದರಿಯ ಪದಾರ್ಥಗಳೂ, ಪಟಗಳೂ ನೋಡಲಿಕ್ಕೆ ಸಿಗುವವು. ಇಲ್ಲಿಯ ಕಾರ್ಯದರ್ಶಿಗಳು ನೋಡಲಿಕ್ಕೆ ಬಂದವರನ್ನು ಕರಕೊಂಡು ಹೋಗಿ ಪ್ರತಿಯೊಂದು ಪದಾರ್ಥದ ಪೂರ್ಣ ಜ್ಞಾನವನ್ನು ಮಾಡಿಕೊಡುವರು. ಮತ್ತು ಗ್ರಾಮ ಸುಧಾರಣೆಯ ಬಗ್ಗೆ ಯಾವತ್ತು ಮಾಹಿತಿ ಕೊಡುವರು.

ವಿಜಾಪೂರ ರೈತರು ಮತ್ತು ಸಭ್ಯಗೃಹಸ್ಥರು ಈ ವಸ್ತುಸಂಗ್ರಹಾಲಯಕ್ಕೆ ಒಮ್ಮೆಯಾದರೂ ಭೆಟ್ಟಿಕೊಟ್ಟು ಅದರಲ್ಲಿದ್ದ ಯಾವತ್ತು ವಸ್ತುಗಳ ಮತ್ತು ಪಟಗಳ ಜ್ಞಾನವನ್ನು ಪಡೆಯಬೇಕು. ಒಕ್ಕಲುತನವನ್ನು ಸುಧಾರಿಸುವದಕ್ಕೆ ಮತ್ತು ಗ್ರಾಮವನ್ನು ಎಲ್ಲ ತರದಿಂದ ಸುಧಾರಿಸಲಿಕ್ಕೆ ಬೇಕಾಗುವ ಯಾವತ್ತು ಉಪಯುಕ್ತ ಮಾಹಿತಿಯು ಇಲ್ಲಿ ಸುಲಭ ರೀತಿಯಿಂದ ಸಿಗುತ್ತದೆ. ಇಂಥ ಸುಸಂಧಿಯನ್ನು ಯಾರೂ ಕಳೆದುಕೊಳ್ಳಬಾರದು. ಇಲ್ಲಿಯ ಕಾರ್ಯದರ್ಶಿಗಳು ರೈತರಿಗೆ ಬೇಕಾಗುವ ಎಲ್ಲ ತರದ ಜ್ಞಾನವನ್ನು ಮಾಡಿ ಕೊಡಲಿಕ್ಕೆ ಯಾವಾಗಲೂ ತತ್ಪರರಿರುತ್ತಾರೆ ರೈತರಿಗೆ ಸಹಾಯ ಮಾಡಬೇಕೆಂಬ ಸದುದ್ದೇಶದಿಂದ ಸ್ಥಾಪಿಸಿದ. ಈ ಸಂಸ್ಥೆಗೆ ಯಾವತ್ತರೂ ಭೆಟ್ಟಿಕೊಟ್ಟು ಜ್ಞಾನ ಸಂಪಾದನೆ ಮಾಡಿಕೊಳ್ಳಬೇಕೆಂದು ನಮ್ಮ ಕೋರಿಕೆ.

ಕಾಯದರ್ಶಿ	ಪ್ರಸಿಡೆಂಟ
ಆರ್. ಆರ್. ಪಾಟೀಲ.	ಕಲೆಕ್ಟರ ವಿಜಾಪುರ

ರಾಯಚೂರಿನ ಕರ್ನಾಟಕ ಸಾಹಿತ್ಯ ಸಮ್ಮೇಳನ.

ಈ ನಡುವೆ ಕರ್ನಾಟಕ ಸಾಹಿತ್ಯ ಸಮ್ಮೇಳನದ ವಿಷಯದಲ್ಲಿ ರಾಯಚೂರಿನಲ್ಲಿ ಪಕ್ಷಭೇದಗಳಿವೆ ಎಂಬ ವಾರ್ತೆಗಳು ಹೊರಬಿದ್ದವು. ಮತಭೇದಗಳಿದ್ದುದು ನಿಜ. ಆ ಮತಭೇದಗಳಾದರೂ ಸಮ್ಮೇಳನದ ಕಾರ್ಯವು ಸುವ್ಯವಸ್ಥಿತವಾಗಿ ನಡೆಯಬೇಕೆಂಬ ಉದ್ದೇಶದಿಂದ ಉಂಟಾದವುಗಳೇ ವಿನಃ ಪಕ್ಷಭೇದಗಳಾಗಿ ಪರಿಣಮಿಸತಕ್ಕವುಗಳಲ್ಲ. ಈಗ ಆ ಮತಭೇದಗಳು ಕೂಡ ಇಲ್ಲದಂತಾಗಿ ಕಾರ್ಯವು ಭರದಿಂದ ನಡೆದಿದೆ. ವಕೀಲರು, ಸಾಹುಕಾರರು, ಅಧ್ಯಾಪಕರು, ವಿದ್ಯಾರ್ಥಿಗಳು, ಇನ್ನಿತರರು ಎಲ್ಲರೂ ಒಕ್ಕಟ್ಟಾಗಿ ಸ್ವಾಗತ ಮಂಡಳದ ಸದಸ್ಯರಾಗುತ್ತಲಿರುವರು. ಕಾರ್ಯಗಳ ವಿಷಯದಲ್ಲಿ ಮೇಲಿಂದ ಮೇಲೆ ಸಭೆಗೂಡಿ ಚರ್ಚೆ ನಡೆದು ಉಪಮಂಡಳಗಳ ವ್ಯವಸ್ಥೆಯಾಗಹತ್ತಿದೆ. ಇದಲ್ಲದೆ ಇಲ್ಲಿಯ ದೊಡ್ಡ ಅಧಿಕಾರಿಗಳಾದ ಶ್ರೀಮಾನ್ ಎಸ್. ಜಿ. ಕುರಪಾಡರವರು ಕಾರ್ಯಭಾಗವನ್ನು ವಹಿಸಿ ಜನರಲ್ಲಿ ಹೊಸ ಹುರುಪನ್ನೀಡಿರುವರು. ಸಮ್ಮೇಳನಕ್ಕಾಗಿ ಬರಲಿಚ್ಛಿಸುವ ಮಹನೀಯರಿಗಾಗಿ ವ್ಯವಸ್ಥೆ, ಊಟ, ವಸತಿಗಾಗಿ ೨॥ ರೂ. ಪ್ರತಿನಿಧಿಯ ತಿಕೀಟ ೧ ರೂ. ಸ್ತ್ರೀ ಪ್ರತಿನಿಧಿಗಳಿಗೆ ಯಾವ ತರದ ಫೀ ಇಲ್ಲ. ವಿದ್ಯಾರ್ಥಿಗಳಿಗಾಗಿ ಪ್ರತಿನಿಧಿತ್ವದ ಫೀ ಇಟ್ಟಿಲ್ಲ. ಆದರೆ ಅವರು ಹೆಡ್ಡಮಾಸ್ತರರಿಂದ ಸರ್ಟಿಫಿಕೇಟ ಹೊಂದಿರುವದು ಅವಶ್ಯಕ.

ರಾಯಚೂರು ಜಿ. ಆಯ್, ಪಿ. ಮತ್ತು ಎಸ್. ಎಮ್. ಆರ್. ರೇಲ್ವೆಗಳ ಜಂಕ್ಶನ್; ಕರ್ನಾಟಕದ ಮಧ್ಯಭಾಗ, ಎಲ್ಲರಿಗೂ ಬರಲು ಅನುಕೂಲ; ಗಂಡುಮೆಟ್ಟಾದ ಹವೆ, ಇತಿಹಾಸ ಪ್ರಸಿದ್ಧ ಸ್ಥಳ.

ಕನ್ನಡ ಭಾಷಾಭಿಮಾನಿಗಳು ರಾಯಚೂರಿಗೆ ಬಂದು ಸಮ್ಮೇಳನವನ್ನು ಯಶಸ್ವಿಯನ್ನಾಗಿ ಮಾಡಬೇಕೆಂದು ವಿಜ್ಞಾಪನೆ. ಬರುವವರು ೧೫-೧೨-೩೪ ರೊಳಗಾಗಿ ಸ್ವಾಗತ ಮಂಡಲಕ್ಕೆ ತಿಳಿಸಿದಲ್ಲಿ ತಕ್ಕ ವ್ಯವಸ್ಥೆಮಾಡಲು ಅನುಕೂಲವಾಗುವದು.

ಹನಮಂತರಾವ ಗುಡಿಹಾಳ ವಕೀಲ
ಸ್ವಾಗತಾಧ್ಯಕ್ಷ

ಇಳಕಲ್ಲ.

ಶ್ರೀ ಹರ್ಡೇಕರ ಮಂಜಪ್ಪನವರು ವೀರಶೈವ ಮಹಾಸಭೆಯ ಗೊತ್ತುವಳಿಗಳು ಕಾರ್ಯ ರೂಪದಲ್ಲಿ ಬರಲು ಜನರಲ್ಲಿ ಜಾಗೃತಿಯನ್ನುಂಟುಮಾಡಲು ಇಲ್ಲಿಗೆ ಬಂದಿದ್ದರು. ಇಲ್ಲಿಯ ಶ್ರೀ ಮಹಾಂತೇಶ ಮಠದಲ್ಲಿ ಮಂಗಳವಾರ ಸಾಯಂಕಾಲ ಸಭೆಸೇರಿತ್ತು. ಮಹಾಸಭೆಯಲ್ಲಾದ ಠರಾವುಗಳಲ್ಲಿ ಶಿಕ್ಷಣ ಪ್ರಸಾರ ಉದ್ಯೋಗಾಭಿವೃದ್ಧಿ ಮತ್ತು ವೀರಶೈವ ಏಕೀಕರಣ ಸಂಬಂಧವಾಗಿ ಭಾಷಣಮಾಡಿದರು.

ಮರುದಿನ ಇಲ್ಲಿಯ ಶ್ರೀ ಮಹಾಂತ ಸ್ವಾಮಿಗಳ ಮಠದಲ್ಲಿಯ ಥೇಟರಿನಲ್ಲಿ ಹಿಂದು ಸಂಘಟನೆ ಎಂಬ ವಿಷಯದಲ್ಲಿ ಭಾಷಣ ಮಾಡಿ ಹಿಂದು ಧರ್ಮರಕ್ಷಣೆ ಸಮಾಜ ಸುಧಾರಣೆ ಹಿಂದುಸ್ಥಾನದ ರಾಜಕೀಯ ಅಭಿವೃದ್ಧಿಗಳಿಗಾಗಿ ಹಿಂದು ಸಂಘಟನೆಯಾಗುವ ಅಗತ್ಯವನ್ನು ರೀತಿಗಳನ್ನು ತಿಳಿಸಿದರು. ಪ್ರತ್ಯಕ್ಷದರ್ಶಿ.

ಆರ್ಯ ಸಮಾಜದ ಅದ್ವಿತೀಯ ಕಾರ್ಯ.

ಹಿಂದುಸ್ಥಾನದಲ್ಲಿ ಕಳೆದ ಶತಮಾನದಲ್ಲಿ ಆಗಿಹೋದ ಮಹಾ ವಿಭೂತಿಗಳಲ್ಲಿ ಸ್ವಾಮಿ ದಯಾನಂದ ಸರಸ್ವತಿಯವರು ಒಬ್ಬ ಪ್ರಮುಖರು ಇವರು ಪರಲೋಕವಾಸಿಗಳಾಗಿ ೫೦ ವರ್ಷಗಳಾದವು. ಈ ಮಹಾಪುರುಷರೇ ಆರ್ಯಸಮಾಜವನ್ನು ಸ್ಥಾಪಿಸಿದರು. ಈಗ ಈ ಸಮಾಜವು ಹಿಂದುಜನಾಂಗದಲ್ಲಿ ಒಂದು ಪ್ರಬಲ ಸಮಾಜವಾಗಿದೆ. ಇದು ಕಳೆದ ಅರ್ಧಶತಮಾನದಲ್ಲಿ ಮಾಡಿದ ಅದ್ವಿತೀಯ ಕಾರ್ಯಗಳನ್ನು ಪ್ರತಿಯೊಂದು ಸಮಾಜದವರೂ ತಮ್ಮ ಮುಂದಿಟ್ಟುಕೊಂಡು ತಮ್ಮ ತಮ್ಮ ಸಮಾಜೋನ್ನತಿಗಾಗಿ ಅಪ್ರತಿಮ ಪ್ರಯತ್ನಿಸಿದ್ದಾದರೆ ಹೀನಾವಸ್ಥೆಗೀಡಾಗುತ್ತಿರುವ ಹಿಂದುಸಮಾಜವು ಸ್ವಲ್ಪ ಕಾಲದಲ್ಲಿಯೇ ಅಭಿವೃದ್ಧಿಹೊಂದಲು ಅಡ್ಡಿಯಿಲ್ಲ

(೧) ಆರ್ಯಸಮಾಜದ ಶಾಖೆಗಳು ಜಗತ್ತಿನಲ್ಲಿ ಸಾಧಾರಣ ೧೮೦೦ ಇವೆ. ಆರ್ಯಮಂದಿರಗಳು ೮೩೪ ಇವೆ. ಈ ಸಮಾಜದ ಸಭಾಸದರ ಸಂಖ್ಯೆಯು ಸಾಧಾರಣ ೧೦ ಲಕ್ಷ ಇದೆ.

(೨) ಆರ್ಯಸಮಾಜದ ತತ್ವಗಳನ್ನು ಪ್ರಸಾರಗೊಳಿಸಲು ೭೨ ಜನ ವೇತನ ಹೊಂದಿರುವ ಪ್ರಚಾರಕರು ೨೫೮ ಉಚಿತವಾಗಿ ಪ್ರಚಾರಗೊಳಿಸುವವರು ಇದ್ದಾರೆ. ಇವರ ವಿನಾ ೧೩೦ ಸನ್ಯಾಸಿಗಳು ೩೪ ವ್ಯಾಖ್ಯಾತರು ೩೭ ಮಹಿಳಾ ಪ್ರಚಾರಕರು ಈ ಸಮಾಜದ ಉನ್ನತಿಗಾಗಿ ಪ್ರಯತ್ನಿಸುತ್ತಿದ್ದಾರೆ.

(೩) ಸಮಾಜದ ಕಾರ್ಯಗಳಿಗಾಗಿ ೩೦ ಮುದ್ರಣ ಯಂತ್ರಗಳು ೧೫೦ ಗ್ರಂಥವಿಕ್ರಯದ ಅಂಗಡಿಗಳು ಹಿಂದಿ, ಉರ್ದು, ಗುಜರಾಥಿ, ತೆಲುಗು, ಸಿಂಧಿ, ಇಂಗ್ಲಿಷ ಮೊದಲಾದ ಭಾಷೆಗಳಲ್ಲಿ ದೈನಿಕ ಸಾಪ್ತಾಹಿಕ ಕೂಡಿ ಒಟ್ಟು ೭೫ ಪತ್ರಿಕೆಗಳು ಹೊರಡುತ್ತವೆ.

(೪) ಈ ಸಮಾಜದವರು ೧೦ ಕಾಲೇಜು ೨೦೦ ಹೈಸ್ಕೂಲು, ೧೫೧ ಮಿಡಲ್ ಸ್ಕೂಲ್ ೨೦೦ ಪ್ರಾಥಮಿಕ ಶಾಲೆ ೪೨ ರಾತ್ರಿ ಶಾಲೆ ೫೩ ಗುರುಕುಲ ೩೦೦ ಸಂಸ್ಕೃತ ಪಾಠಶಾಲೆ ೩ ಕನ್ಯಾ ಗುರುಕುಲ ೩ ಉಪದೇಶ ವಿದ್ಯಾಲಯ ೨ ಕನ್ಯಾ ಕಾಲೇಜ ೨ ಕನ್ಯಾ ಹಾಯಸ್ಕೂಲ್ ೭೦೦ ಕನ್ಯಾಪಾಠಶಾಲೆಗಳನ್ನು ಸ್ಥಾಪಿಸಿ ಧಾರ್ಮಿಕ ಶಿಕ್ಷಣದೊಂದಿಗೆ ಆಧುನಿಕ ಶಿಕ್ಷಣ ಪ್ರಸಾರವನ್ನು ಮಾಡುತ್ತಿದ್ದಾರೆ. ಈ ಮಹತ್ಕಾರ್ಯಕ್ಕೆ ಪ್ರತಿವರ್ಷ ೨೦ ಲಕ್ಷ ರೂ. ಗಳ ವರೆಗೆ ವೆಚ್ಚಮಾಡುತ್ತಿದ್ದಾರೆ.

(೫) ೫೦ ಅನಾಥಾಲಯಗಳು, ೪೭ ವಿಧವಾ ಗ್ರಾಮಗಳು, ೧೪ ವೈದ್ಯಾಲಯಗಳು ೨೧ ವಿರಕ್ತಾಶ್ರಮಗಳು ದಿಲ್ಲಿಯಲ್ಲಿ ಒಂದು ಪ್ರಚಂಡವಾದ ಪ್ರವಾಸಾಶ್ರಮ ಈ ಸಮಾಜದಿಂದ ಸ್ಥಾಪಿತವಾಗಿವೆ.

(೬) ಲಖನೌ ಪಟ್ಟಣದಲ್ಲಿ ಒಂದು ಮಧ್ಯವರ್ತಿ ಕೋ-ಅಪರೇಟಿವ್ಹ ಬ್ಯಾಂಕ ಇದೆ ೪೭ ಶುದ್ಧಿಕರಣದ ಸಂಸ್ಥೆಗಳಿವೆ. ಇವುಗಳಲ್ಲಿ ಹೆಚ್ಚಾಗಿ ಆದಿಜನರನ್ನು ಶುದ್ಧಗೊಳಿಸಿ ಆರ್ಯಸಮಾಜದಲ್ಲಿ ತೆಗೆದುಕೊಳ್ಳುವ ಕಾರ್ಯನಡೆಯುತ್ತದೆ.

(೭) ದಯಾನಂದ ಆಂಗ್ಲೋವೇದಿಕ ಕಾಲೇಜ, ಗುರುದತ್ತ ಭವನ, ದಯಾನಂದ ಬ್ರಹ್ಮವಿದ್ಯಾಲಯ, ವೈದಿಕಾಶ್ರಮ ಮತ್ತು ಲಾಹೋರಿನ ಮೂರುಪ್ರಚಂಡ ಗ್ರಂಥಾಲಯಗಳಲ್ಲಿ ಧರ್ಮಸಂಶೋಧನಕ್ಕೆ ಅನೇಕ ಸೌಲಭ್ಯಗಳಿವೆ.

(೮) ಈ ಸಮಾಜದ ಮುಖ್ಯ ಕೇಂದ್ರಗಳು ಲಾಹೋರ, ಆಗ್ರಾ, ಕಲಕತ್ತಾ, ಅಜಮೀರ, ಮುಂಬೈ, ರಂಗೂನ, ದಕ್ಷಿಣಹೈದರಾಬಾದ, ಸಿಂಧಹೈದರಾಬಾದ, ಮೊದಲಾದ ಹಿಂದುಸ್ಥಾನದ ಮುಖ್ಯ ಪಟ್ಟಣಗಳಲ್ಲಿಯು ಮತ್ತು ಆಫ್ರಿಕಾ, ಕಾನಡಾ, ಫ್ರಾನ್ಸ, ಇಂಗ್ಲಂಡ, ಜರ್ಮನಿ, ಇರಾಣ, ಅರೆಬಿಯಾ, ತಿಬೇಟ, ಚೀನ, ಜಪಾನ ಮೊದಲಾದ ಅನ್ಯದೇಶಗಳಲ್ಲಿಯು ಇವೆ.

ಪರಲೋಕ ವಿದ್ಯಾಪರಿಷತ್ತಿನ ಗೊತ್ತುವಳಿಗಳು.

ಶ್ರೀ ವಿ. ಡಾ. ಋಷಿಯವರ ವ್ಯಾಖ್ಯಾನ.

ಪರಲೋಕ ವಿದ್ಯಾವಿಶಾರದರಾದ ಶ್ರೀ. ಋಷಿಯವರು ತಮ್ಮ ಪತ್ನಿ ಶ್ರೀ. ಪ್ರಭಾವತಿ ಋಷಿಯವರೊಡನೆ ಸ್ಪೇನದೇಶದ ಬಾರ್ಸಿಲೋನ ಪಟ್ಟಣದಲ್ಲಿ ಕೂಡಿದ ಪರಿಷತ್ತಿಗೆ ಹೋಗಿದ್ದರು. ಅವರು ೨೩ ನೆಯ ತಾರೀಖಿನ ದಿವಸ ಪುಣೆಯಲ್ಲಿ ಈ ರೀತಿ ಭಾಷಣ ಮಾಡಿದರು.

ಅಂತರ ರಾಷ್ಟ್ರೀಯ ಪ. ವಿ. ಪರಿಷತ್ತು ಮೂರು ವರುಷಕ್ಕೊಮ್ಮೆ ಕೂಡುತ್ತದೆ. ಈ ಸಾರೆ ಬಾರ್ಸಿಲೋನಾದಲ್ಲಿ ಸೇರಿದ ಪರಿಷತ್ತಿಗೆ ೩೫ ದೇಶಗಳಿಂದ ಪ್ರತಿನಿಧಿಗಳು ಆಗಮಿಸಿದ್ದರು. ಆದರೆ ಅಖಿಲ ಏಶಿಯಾ ಖಂಡದಲ್ಲೆಲ್ಲ ಹಿಂದುಸ್ಥಾನದ ನಮ್ಮನ್ನು ಬಿಟ್ಟು ಯಾವ ಪ್ರತಿನಿಧಿಗಳೂ ಬಂದಿರಲಿಲ್ಲ. ಪರಿಷತ್ತಿನ ಮಹಾಮಂಡಲಕ್ಕೂ ನಮ್ಮನ್ನು ಸೇರಿಸಿಕೊಳ್ಳಲಾಗಿದೆ. ಪರಿಷತ್ತಿನಲ್ಲಿ ಪುನರ್ಜನ್ಮದ ವಿಷಯಕ್ಕೆ ಒಳ್ಳೇ ಚರ್ಚೆಯಾಯಿತು. ಇಂಗ್ಲಂಡ, ನಾರ್ವೆ, ಯುನಾಯಿಟೆಡ್ ಸ್ಟೇಟ್ಸ್, ಜರ್ಮನಿ ಈ ದೇಶಗಳ ಪ್ರತಿನಿಧಿಗಳು ಪುನರ್ಜನ್ಮದ ಅಸ್ತಿತ್ವವು ಸಿದ್ಧವಾಯಿತೆಂದು ನಂಬಿರುವದಿಲ್ಲ. ಆದರೆ ಸ್ಪೇನ, ಫ್ರಾನ್ಸ, ಇಟಲಿ, ದಕ್ಷಿಣ ಅಮೇರಿಕಾ, ಹಿಂದುಸ್ಥಾನ ಈ ದೇಶದ ಪ್ರತಿನಿಧಿಗಳು ಪುನರ್ಜನ್ಮವು ಸಿದ್ಧವಾಯಿತೆಂದು ಮಾನಿಸಿರುವರು. ಆದರೆ ಏಕಮತವಿಲ್ಲದೆ ಬಹು ಮತದ ಮೇಲಿಂದ ಇಂಥ ಗೊತ್ತುವಳಿಗಳು ಪಾಸ ಮಾಡಲ್ಪಡಲಾಗುವದಿಲ್ಲವಾದುದರಿಂದ "ಮರಣಾನಂತರವೂ ಮನುಷ್ಯನ ವ್ಯಕ್ತಿತ್ವವು ಉಳಿದುಕೊಂಡು ಅವನ ಆಧ್ಯಾತ್ಮಿಕ ಶಕ್ತಿ ಮತ್ತು ಪ್ರಗತಿಯನ್ನು ಹೊಂದುತ್ತದೆಂದೂ, ಆ ಪ್ರಗತಿಯು ಒಂದುವೇಳೆ ಈ ಲೋಕದಲ್ಲಿ ಜನ್ಮಿಸಿಯೇ ಆಗಲಿ ಅಥವಾ ಜನ್ಮಿಸದಿದ್ದರೂ ಆಗಲಿ, ಆಗುತ್ತದೆಂದೂ" ಗೊತ್ತುವಳಿಯು ಏಕಮತದಿಂದ ಪಾಸುಮಾಡಲ್ಪಟ್ಟಿತು.

ಇದಲ್ಲದೆ "ಪ್ರತಿಯೊಬ್ಬ ಮನುಷ್ಯನು ತಾನು ಮಾಡಿದ ಕರ್ಮಕ್ಕೆ ತಾನೇ ಹೊಣೆಯಾಗಿದ್ದು ಆ ಕರ್ಮದ ಫಲವನ್ನು ಅವನೇ ಭೋಗಿಸುವನೆಂದೂ" ಒಮ್ಮನದಿಂದ ಸ್ವೀಕೃತವಾಯಿತು. ಮತ್ತು ಸ್ಥೂಲ ದೇಹವನ್ನು ಬಿಟ್ಟನಂತರ ಲಿಂಗದೇಹವು ಸ್ಥೂಲಶರೀರವನ್ನು ತ್ಯಜಿಸಿ ಇರಬಹುದೇ? ಎಂಬ ಪ್ರಶ್ನೆಗೆ ಇರಬಲ್ಲದೆಂಬ ಉತ್ತರವು ಏಕಕಂಠವಾಗಿ ಬಂದು ಅದೂ ಪಾಸುಮಾಡಲ್ಪಟ್ಟಿತು ಇನ್ನುಳಿದ ಔಪಚಾರಿಕ ಗೊತ್ತುವಳಿಗಳೂ ಪಾಸುಮಾಡಲ್ಪಟ್ಟು ಮುಂದಿನ ಪರಿಷತ್ತು ಗ್ಲಾಸಗೊ ಪಟ್ಟಣದಲ್ಲಿ ನೆರೆಯಬೇಕೆಂದು ಗೊತ್ತಾಯಿತು.

ಪರಿಷತ್ತಿನ ಕಾರ್ಯ ಪೂರೈಸಿದ ಮೇಲೆ ನಾವು ಪ್ಯಾರಿಸ್, ಹೇಗ ಮತ್ತು ಲಂಡನ್ ನಗರಗಳಿಗೆ ಹೋದೆವು. ಲಂಡನದಲ್ಲಿ ಪರಲೋಕ ವಿದ್ಯೆಯ ದುಭಾಷಿಗಳು (Mediums) ಒಳ್ಳೇ ಜಾಣ್ಮೆಗಾರರಿದ್ದಾರೆ. ಅವರ ಮುಖಾಂತರ ಮೃತಾತ್ಮರನ್ನು ಕರೆಯಿಸಿ ಆ ಮೃತಾತ್ಮರ ಫೋಟೋತೆಗೆಯಿಸಿಕೊಂಡಿದ್ದೇನೆ. ಇದರಲ್ಲಿ ಮೋಸಗಾರಿಕೆಯಾಗಬಾರದೆಂದು ಪ್ಲೇಟಿನ ಮೇಲೆ ನಾನೇ ಸಹಿಮಾಡಿಕೊಡುತ್ತಿದ್ದೆನು. ಈ ಫೋಟೋಗಳಲ್ಲಿ ಹಿಂದೀಜನರ ಫೋಟೋಗಳೇ ವಿಶೇಷವಾಗಿವೆ. ಈ ಫೋಟೋಗಳ ಮೇಲಿಂದ ಮೃತಾತ್ಮರ ಅಸ್ತಿತ್ವವು ಪ್ರತ್ಯಕ್ಷವಾಗಿ ಸಿದ್ಧವಾಗುತ್ತದೆ."

ಇಷ್ಟಾದ ಮೇಲೆ ಶ್ರೀ ಋಷಿಯವರು ನೆರೆದ ಜನರಿಗೆಲ್ಲ ಫೋಟೋಗಳನ್ನು ತೋರಿಸಿದರು. ಪ್ರಶ್ನೋತ್ತರಕ್ಕೆ ಕಾಲವು ಉಳಿಯದಿದ್ದುದರಿಂದ ಅವಕ್ಕೆ ಮತ್ತೊಂದು ಕಾಲವನ್ನು ಗೊತ್ತುಪಡಿಸುವದಾಗಿ ಹೇಳಿದರು.

ಶ್ರೀಯುತ ಬಿ. ಶಿವಮೂರ್ತಿ ಶಾಸ್ತ್ರಿಗಳ ಲೇಖಾಂಕಗಳ ವಿಚಾರ.

(೭ ನೆಯ ಪುಟದಿಂದ ಬಂದುದು.)

ರಿದೆ. ಅದು ದ್ರಾವಿಡರ ಸಭ್ಯತೆಗೆ ತನ್ನ ಕಾಣಿಕೆಯನ್ನು ಅರ್ಪಿಸಬೇಕಾಗಿದೆ. ಪರಸ್ಪರ ಸಂಸ್ಕೃತಿಗಳ ಮಿಲನದಿಂದ ಆರ್ಯರ ರೂಪಕವು ಅದಕ್ಕಿದೆ. ಆ ರೂಪವು ಹೋದರೆ ದೇವರು ಒಲಿಯಲಾರನೇ? ಅದಕ್ಕೆ ಬದಲಾಗಿ “ಶಿವಶರಣು” ಅಂದರೆ ಅಷ್ಟಾವರಣಗಳು ಸಿದ್ಧಿಸಲಾರವೇ? ದೇವರನ್ನೂ ಒಂದು ಆಯತದ ಆಳತೆಯಲ್ಲಿ ಬಂಧಿಸುವ ಮನುಷ್ಯನು ಆವನ ಲೀಲೆಯನ್ನಾಗಲಿ, ಶಕ್ತಿಯನ್ನಾಗಲಿ ಜಗತ್ತಿನಲ್ಲಿ ತಿಳಿದೇ ಇಲ್ಲವೆಂದು ಹೇಳಬಹುದು. ಅಂತಹರು “ದೇವರು” ಇದಕ್ಕೆ ಅಪಾರ್ಥಮಾಡುತ್ತಾರೆ. ಮಾಡುವ ಕರ್ಮಗಳಿಗೆಲ್ಲಾ ವೇದಮಂತ್ರವಿರಬೇಕು. ಅದಿಲ್ಲದಿದ್ದರೆ ಅವು ಸಿದ್ಧಿಸಲಾರವೆಂಬುದು ಒಂದು ಅರ್ಥವಿಲ್ಲದ ಮಾತು. ಕರ್ಮದ ತಿರುಳಿನ ಕಡೆ ಲಕ್ಷ್ಯಕೊಟ್ಟು ಅದನ್ನು ಅನುಭವವು ಅರಗಿಸಿಕೊಟ್ಟರೆ ಸಾಕು ಮಾತು ಸಂಸ್ಕೃತವಾದರೇನ? ಕನ್ನಡವಾದರೇನು? ನಮಗೆ ಚನ್ನಾಗಿ ತಿಳಿದು ನೇರವಾಗಿ ನಮ್ಮ ಹೃದಯವನ್ನು ಮುಟ್ಟುವ ಭಾಷೆಯಾದರೆ ಸಾಕು. ದೇವರಿಗೆ ಯಾವ ಜಾತಿಯ ಭಾಷೆಯುಂಟು? ಎಲ್ಲರಿಗೂ ಒಲಿಯುವನು' ಹೀಗಿರುವಾಗ, ‘ವೇದ ಮಂತ್ರಗಳ ಮೂಲಕ ಆ ಸಂಸ್ಕಾರ ನಿರ್ವಹಿಸುತ್ತಿರುವ, ವೀರಶೈವರ ಗತಿಯೇನು?” ಎಂದು ಶಾಸ್ತ್ರಿಗಳು ಕೇಳಿದರೆ ನಮಗೆ ಇನ್ನೂ ಹೆಚ್ಚು ನಗೆ ಬರುತ್ತದೆ.

“ಇಂದಿನ ಹಿಂದೂ ಸಮಾಜದಲ್ಲಿ ಆರ್ಯ ದ್ರಾವಿಡ ಸಂಸ್ಕೃತಿಗಳೆರಡೂ ಹಾಸುಹೊಕ್ಕಾಗಿ ಸೇರಿರುವವೆಂಬ ವಿದ್ವಾಂಸರ ಮತ ತಮಗೆ ಸಮ್ಮತವೇ?” ಎಂದು ಶಾಸ್ತ್ರಿಗಳು ಕೇಳಿರುವರು. ಈ ಕಾಕದಂತ ಪರೀಕ್ಷೆಯಿಂದ ಅವರಿಗೆ ಬಂದ ಲಾಭವೇನು? ಇಂದಿನ ಹಿಂದೂ ಸಮಾಜದಲ್ಲಿ ಎರಡು ಸಭ್ಯತೆಗಳೂ ಮಿಲನವಾಗಿರಬಹುದು; ಮತ್ತು ಮಿಲನವಾಗಿವೆ. ಇಂದಿನ ಹಿಂದೂ ಸಮಾಜದಲ್ಲಾಗಲಿ ವೀರಶೈವ ಸಮಾಜದಲ್ಲಾಗಲಿ ಸಭ್ಯತೆಗಳೆರಡು ಮಿಲನವಾಗಿದ್ದರೆ ಅದು ಮತಗ್ರಂಥಗಳ ಹಾದಿಯಲ್ಲಿ ಹೇಗೆ ಬರುತ್ತದೆಯೋ ನಮಗೆ ತಿಳಿಯದು. ಇಂದಿನ ಜೀವನದಲ್ಲಿ ಭಾರತೀಯ ಸಂಸ್ಕೃತಿಯು ಪಾಶ್ಚಾತ್ಯ ಸಭ್ಯತೆಯ ಸಂಗಡ ಒಂದುಗೂಡುತ್ತಿದೆ. ಆದುದರಿಂದ ಶಾಸ್ತ್ರಿಗಳವರ ತರ್ಕದಂತೆ ಪಾಶ್ಚಾತ್ಯರ ಬೈಬಲ್ ಗ್ರಂಥವು ನಮ್ಮ ಮತೀಯ ಗ್ರಂಥವಾಗಬೇಕಷ್ಟೆ.

ಶಾಸ್ತ್ರಿಗಳವರ ಎಂಟನೆಯ ಪ್ರಶ್ನೆಯು ಅಷ್ಟಾಗಿ ನಿರಾಕರಿಸತಕ್ಕದಲ್ಲ. ಆದರೆ ನಮ್ಮ ದುರ್ಭಾಗ್ಯದಿಂದ ಇತಿಹಾಸವು ನಮಗೆ ಕೇಳಿದನ್ನು ವಸ್ತು ಸಂಗ್ರಹವನ್ನು ಒದಗಿಸಿಕೊಟ್ಟಿರುವುದಿಲ್ಲವೆಂದು ವ್ಯಸನಪಡುವುದೇ ಶಾಸ್ತ್ರಿಗಳವರ ಪ್ರಶ್ನೆಗೆ ಉತ್ತರವಾಗಿ ಪರಿಣಮಿಸಬೇಕಾಗಿದೆ. ಮಾತುಗಳು ತಿಳಿದಿರುವಂತೆ ಅವುಗಳ ವ್ಯವಹಾರಿಕ ಅರ್ಥಗಳು ನಮಗೆ ಉಪಲಬ್ಧವಾಗಿಲ್ಲ. ಒಟ್ಟಿನಲ್ಲಿ ಅವುಗಳು ಬಸವಾದಿಗಳ ನಂತರ ಬಂದ ತತ್ವಗಳಂತೆ ಅತಿ ಸೂಕ್ಷ್ಮವಾಗಿರದೆ ಅಷ್ಟೊಂದು ಗಂಭೀರವಾದ ಅರ್ಥದ ತಿರುಳನ್ನು ಹೊಂದದೆ ಕೇವಲ ಸ್ಥೂಲ ರೂಪದಲ್ಲಿ ಇದ್ದುವೆನ್ನಬಹುದು. ಅವು ಇದ್ದುದಾದರೂ ಹಾಗೆಯೇ ಎಂದು ಕೆಲವು ಅನುಮಾನಗಳಿಂದ ನಿರ್ಧರಿಸಬಹುದು. ಪೂರ್ಣವಾಗಿ ವಿಕಾಸವಾದ ಅವಸ್ಥೆಯಲ್ಲಿದ್ದಿದ್ದರೆ ವಚನ ಗ್ರಂಥಗಳಿಗಿಂತಲೂ ಅತಿ ಪ್ರಾಚೀನವಾಗಿಯೂ ಸುಂದರವಾಗಿಯೂ ಇರತಕ್ಕ ಗ್ರಂಥಗಳು ಅನೇಕವಾಗಿ ನಮಗೆ ದೊರಕುತ್ತಿದ್ದವು. ಅಂತಹ ಬೆಳವಣಿಗೆಯು ಇಲ್ಲದ್ದರಿಂದಲೇ ಆಗ್ರಂಥ ರಚನೆಯ ಭಾಗವೂ ಹಿಂದುಳಿದಿದೆ.

ರುದ್ರಾಕ್ಷಿ ಧಾರಣೆಯ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ದ್ರಾವಿಡರು ಉಷ್ಣವಲಯದವರು. ಆರ್ಯರು ಶೀತವಲಯದವರು. ಉಷ್ಣವಲಯಗಳಲ್ಲಿ (Tropical regions) ಪ್ರಕೃತಿಯ ಬೆಳವಣಿಗೆಗೆ ಸೌಲಭ್ಯಗಳೇ ಹೆಚ್ಚು. ಮರಗಿಡಗಳು ಅನಂತವಾಗಿ, ಒತ್ತೊತ್ತಾಗಿ ಬೆಳೆದಿರುತ್ತವೆ. ದಕ್ಷಿಣ ಆಫ್ರಿಕಾದ ಕಾಡೂ, ಅಮಾಝಾ ನದಿಯ ಮೇಲಣ ಸೀಕವಾಸ್ ಕಾಡುಗಳೂ ಅದಕ್ಕೆ ಸಾಕ್ಷಿಗಳಾಗಿವೆ. ಆದುದರಿಂದ ಜೀವನ ವಿಕಾಸವು ಸಾತ್ವಿಕ ಪ್ರವೃತ್ತಿಯಲ್ಲಿದ್ದು, ದ್ರಾವಿಡರು ಚೈತನ್ಯ ಶಕ್ತಿಯ ಅದ್ಭುತ ಲೀಲೆಗಳನ್ನು ಕಂಡು ಅವುಗಳನ್ನು ಆರಾಧಿಸುತ್ತಿದ್ದರು. ಹಾಗೆಯೇ ಲಿಂಗಪೂಜೆ ಅವರಲ್ಲಿ ಹುಟ್ಟಿರುವುದು. ಆರ್ಯರು ಶೀತವಲಯದವರಾದುದರಿಂದ' ಅವರಿಗೆ ಪ್ರಕೃತಿಯು ಮಂಜು ಮುಸುಕಿದ ವಿಶಾಲ ವಿಶ್ವವಾಗಿ ಮುಂದೆ ನಿಲ್ಲುತ್ತದೆ. ಅವರಿಗೆ ಅದರಲ್ಲೇ ಅದ್ಭುತಗಳು ಕಾಣುತ್ತವೆ. ಆದಕ್ಕಾಗಿಯೇ ಆರ್ಯರು ಆಕಾಶ, ಸೂರ್ಯ, ಚಂದ್ರಾದಿಗಳನ್ನು ಆರಾಧಿಸುತ್ತಿದ್ದರು. ಈ ದೃಷ್ಟಿಯಿಂದ, ಮರಗಿಡಗಳ ಸಂಬಂಧದ ಪೂಜೆಯು ದ್ರಾವಿಡರದೇ ಆಗುತ್ತದೆ. ರುದ್ರಾಕ್ಷಿಯು ಮರದ ಬೀಜವಾದುದರಿಂದಲೂ ,ಅದು ದ್ರಾವಿಡ ಸಭ್ಯತೆಗೆ ಸೇರಿದುದರಿಂದಲೂ, ದ್ರಾವಿಡರು ಉತ್ತರಹಿಂದುಸ್ಥಾನದಲ್ಲೆಲ್ಲ (ಆರ್ಯರಿಗಿಂತ ಮುಂಚೆ) ವ್ಯಾಪಕರಾಗಿದ್ದುದರಿಂದಲೂ ಅದು ದ್ರಾವಿಡರಿಂದ ಆರ್ಯರಿಗೆ ಬಂದಿರುತ್ತದೆಯೇ ಹೊರತು ಆರ್ಯರಿಂದ ದ್ರಾವಿಡರಿಗೆ ಬರಲವಕಾಶವಿಲ್ಲ. ಆದುದರಿಂದ ರುದ್ರಾಕ್ಷಿ ಧಾರಣೆಯು ಕೇವಲ ಲಿಂಗಪೂಜೆಯಂತೆ ದ್ರವಿಡ ಸಂಸ್ಕೃತಿಯ ಗರ್ಭದಿಂದ ಹೊರಬಿದ್ದಿರುತ್ತದೆ. ಶಾಸ್ತ್ರೀಮಹೋದಯರು ಅದಕ್ಕೆ ಏನೂ ಹೇಳುವಂತಿಲ್ಲ.

ಒಟ್ಟಿನಲ್ಲಿ ಶಾಸ್ತ್ರಿಗಳವರಲ್ಲಿ ನಮ್ಮ ವಿಜ್ಞಾಪನೆಯೊಂದು. ಮನುಷ್ಯತ್ವವು ಕಂಡಕಂಡದುದನ್ನೆಲ್ಲಾ “ಮಹತ್ವ”ದ್ದೆಂದು ಭಾವಿಸಿ ಶರಣು ಹೋಗತಕ್ಕದಲ್ಲ; ವ್ಯಕ್ತಿತ್ವವು ದಾಸ್ಯದ ಮಡಲಿನಲ್ಲಿ ಬೆಳೆಯಬೇಕಾಗಿಲ್ಲ. ಅದಕ್ಕೆ ಅದರ ಸ್ವತಂತ್ರ ರಾಜ್ಯವಿದೆ. ತರ್ಕಬದ್ಧವೂ ಅನುಭವ ಸಿದ್ಧವೂ ಆದ ಮಹಾತತ್ವಗಳು ಅವನಿಗೆ ನಿಜವಾಗಿ ಮಹಾ ತತ್ವಗಳಾಗಿ ಕಂಡು ಬಂದಾಗ ಮಾತ್ರ ಅವನು ಅವುಗಳಿಗೆ ಶರಣು ಹೋಗುವನು. ಅವೇ ದೊಡ್ಡ ವಿಷಯಗಳೆಂದು ಅವಕ್ಕಿಂತಲೂ ಉತ್ತಮವಾದವುಗಳನ್ನು ನಿರಾಕರಿಸಿ ಅಭಿಮಾನಕ್ಕೆ ಏಕೆ ಸೆರೆ ಬೀಳಬೇಕು? ದ್ರಾವಿಡ ಆರ್ಯರ ಮಿಲನವಾಗಿದೆಯೆಂಬುದರಲ್ಲಿ ನಮ್ಮ ಒಪ್ಪಿಗೆಯಿದೆ. ಆದರೆ ಅದಕ್ಕಾಗಿ ಪ್ರಧಾನವಾಗಿ ತಿಳಿದುಕೊಂಡು ನಮ್ಮ ಜೀವ ಜೀವಗಳಲ್ಲೂ ಬೇರುಬಿಟ್ಟುಕೊಂಡಿರುವ ದ್ರಾವಿಡ ಸಭ್ಯತೆಯನ್ನು ನಾವು ಹೇಗೆ ಬಿಡಲಾಗುವದು? ದ್ರಾವಿಡರೆಂದೂ ದ್ರಾವಿಡರೇ ಅದಕ್ಕಾಗಿ ಯಾರೂನಾಚಿಕೆಪಡಬೇಕಾಗಿಲ್ಲ. ಪಂಚಾಕ್ಷರಿಯ ಒಂದು ರೂಪಕ್ಕಾಗಿ ವೇದವೆಲ್ಲವನ್ನು ತಂದು ವೀರಶೈವರ ತಲೆಯ ಮೇಲೆ ಹೊರಿಸಬೇಕಾಗಿದ್ದರೆ ಅದು ನ್ಯಾಯವಾಗಲಾರದು. **ಪಂಚಾಕ್ಷರಿಯಲ್ಲಿ ದ್ರಾವಿಡರ ಜೀವವಿದೆ.** (Spirit of the Dravidian culture and the form of the Aryans.) **ಆರ್ಯರ ರೂಪವಿದೆ,** ನಿಗೂಢವಾದ ಸೃಷ್ಟಿಯಲ್ಲಿ ತತ್ವಾನ್ವೇಷಣೆಯ ಸಾಧನೆಯಿಂದ, ಅನೇಕ ಶತಮಾನಗಳ ತನಕ ಹೊರದೆಗೆದ ಏಕೋತ್ತರ ಶತಸ್ಥಲಗಳ ಮಹಾ ತತ್ವ ಸಮುದಾಯವು ಅನಂತವಾಗಿ ಆಕಾಶದ ವರೆಗೂ ಸುರಿದು ಬಿದ್ದಿರುವಾಗ ಅದರಲ್ಲಿ ಸೇರಿಕೊಂಡಿರುವ ಒಂದು ಸಣ್ಣ ರೂಪಕ್ಕಾಗಿ ಧರ್ಮವೆಲ್ಲವನ್ನೂ ಮತ್ತೊಂದರ ಚರಣದಲ್ಲಿ ಇಡಲಾಗುವದಿಲ್ಲ ಇನ್ನ “ಆಗಮಾದಿಗಳಿಗೆ ನೈಚ್ಯವನ್ನು” ಕಲ್ಪಿಸಿರೆಂದು ಯಾರೂ ಹೇಳಲಿಲ್ಲ. “ವಚನಗಳ ಶ್ರೇಷ್ಠತೆಯನ್ನು” ಮಾತ್ರ ತೋರಿಸಿದ್ದೆವು. ಸತ್ಯವಾದ ವಿಷಯಗಳನ್ನು “ಪಕ್ಷಾಭಿಮಾನದ್ಯೋತಕ” ವೆಂದು ಭಾವಿಸುವುದಾದರೆ ನಾವು ಏನೂ ಹೇಳಲಾರೆವು. “ಪಕ್ಷಾಭಿಮಾನದದ್ಯೋತಕವು” ಹೋಗಲಿ, ಎಲ್ಲರ ಹಿತವಾಗಲಿ ಎಂದೇ ಅನೇಕರು ಈ ವಾದಗ್ರಸ್ತ ವಿಚಾರಗಳಿಗೆ ಈ ರೀತಿಯಾಗಿ ಉತ್ತರ ಬರೆಯಬೇಕಾಯಿತು.

“ಶ್ರೀ ಕುಮಾರ”

ವರ್ತಮಾನ ಸಾರ.

—೨೦೦ ಜನರು ಕುಳಿತುಕೊಳ್ಳಬಹುದಾದ ಬಹು ದೊಡ್ಡ ವಿಮಾನವನ್ನು ಜರ್ಮನಿಯು ಕಟ್ಟುತ್ತಿರುವದು. ಇದು ಸಿದ್ಧವಾದ ನಂತರ ಯುರೋಪ ಖಂಡದಿಂದ ನ್ಯೂಗಿನಿ ಮೊದಲಾದ ಪೌರ್ವಾತ್ಯ ದೇಶಗಳ ವರೆಗೆ " ಸರ್ವಿಸ " ಇಡಲಾಗುವದಂತೆ.

—ಅಮೇರಿಕೆಯು ಇನ್ನು ೮೦೦ ವಿಮಾನಗಳನ್ನು ಕಟ್ಟುವದಿದ್ದು ಅವು ಸಿದ್ಧವಾದರೆ ಅದರ ಹತ್ತಿರ ಒಟ್ಟಿಗೆ ೨೪೦೦ ವಿಮಾನುಗಳ ಸಂಗ್ರಹವಾಗುವದು.

—ರಾಮಟೇಕದ ಅಂಬಾಲಾ ಸರೋವರದಲ್ಲಿ ತಮಗೂ ಸ್ನಾನಮಾಡಲು ದೊರೆಯಬೇಕೆಂದು ಆದಿ ಜನರು ಸತ್ಯಾಗ್ರಹ ಹೂಡಿದ್ದರಷ್ಟೆ. ಆವಾಗ್ಗೆ ದೇವಸ್ಥಾನದ ಪಂಚರು ಆದಿಜನರು ಸರೋವರದ ಒಂದು ಮೂಲೆಯಲ್ಲಿ ಸ್ನಾನಮಾಡಬೇಕೆಂದು ಒಪ್ಪಂದಮಾಡಿಕೊಂಡರು.

—ಸಂಭಾಜಿ ಮಹಾರಾಜನ ವಿಷಯಕ್ಕಿರುವ ರೆಕಾರ್ಡುಗಳಿಗೆ ನಿಝಾಮ ರಾಜ್ಯದಲ್ಲಿ ಪ್ರತಿಬಂಧವಾಗಿದ್ದು ರಾಜ್ಯದಲ್ಲಿ ಈ ಗಿರುವ ಎಲ್ಲ ಪ್ಲೇಟುಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಆಜ್ಞೆಯಾಗಿದೆ

—ನೈರೋಬಿಯ ಅರಣ್ಯದಲ್ಲಿ ಮಿ. ಜಾಕಯಂಗರ ಎಂಬುವವನು ತನ್ನ ಮಿತ್ರನ ಸಂಗಡ ಬೇಟೆಯಾಡಲು ಹೋಗಿದ್ದನು. ಅವರು ಒಂದು ಗಿಡದ ಗುಂಪಿನಲ್ಲಿ ಒಂದು ಸಿಂಹವು ಗಾಯಪಟ್ಟು ಮಲಗಿರುವದನ್ನು ಮೊದಲೇ ತಿಳಿದು ಭಿನ್ನ ಭಿನ್ನ ಮಾರ್ಗದಿಂದ ಹುಡುಕಲು ಹೊರಟರು. ಸ್ವಲ್ಪ ಕಾಲದ ಮೇಲೆ ಜಾಕನು ತಾನು ಅಡಗಿಕೊಂಡು ಕೂತಿದ್ದ ಗುಂಪಿನೊಳಗಿಂದ ಅಲ್ಲಾಡಲು ಅವನ ಮಿತ್ರನು ಅದು ಸಿಂಹವೇ ಎಂದು ತಿಳಿದು ಗುಂಡುಹಾಕಿದನು. ಪಾಪ! ಜಾಕನು ತತ್‌ಕ್ಷಣವೇ ಮರಣ ಹೊಂದಿದನು. ದೈವಲೀಲೆ!

—ಕಾನಡಾ ದೇಶದಲ್ಲಿ ಸಿಗುವ ಬಂಡೆಗಲ್ಲುಗಳ ಮೇಲೆ ಒಂದು ಪ್ರಕಾರದ ಪದಾರ್ಥವಿರುವದು. ಅದರಿಂದ ಹತ್ತಿಯ ಹಾಗೆ ದಾರ ತೆಗೆಯಲಿಕ್ಕೆ ಬರುವದು. ಇದರಿಂದ ಒಂದು ಹೊಸ ಕೈಗಾರಿಕೆಯೇ ಉಂಟಾಗುವದೆಂದು ಕೆಲವರ ಅಭಿಪ್ರಾಯ.

—ಕಾಸುಸೆತ್ತಮ್ಮ ಎಂಬ ಸ್ತ್ರೀಯಳು ಕೋಟಿರೆಡ್ಡಿ ಎಂಬವನ ಸ್ನೇಹದಲ್ಲಿರುತ್ತಿದ್ದು ಅವನ ಸಹಾಯದಿಂದ ಪ್ರತಿಬಂಧಕನಾದ ತನ್ನ ಪತಿಯನ್ನು ಕೊಲ್ಲಿಸಿದಳು. ಆದಕಾರಣ ಗುಂಟೂರು ಕೋರ್ಟಿನಲ್ಲಿ ಅವಳಿಗೂ ಮತ್ತು ಕೋಟಿರೆಡ್ಡಿಗೂ ಮರಣ ದಂಡನೆಯ ಶಿಕ್ಷೆಯನ್ನು ವಿಧಿಸಲಾಯಿತು.

—ಟಾಟಾ ಕಂಪನಿಯ ಡಾಯರೆಕ್ಟರರಾಗಿದ್ದ ಮಿ. ಎಸ್ ಎಂ. ಮುಜುಮುದಾರರವರು ತಾವು ವಾಸವಾಗಿರುವ ಗೃಹದ ೫ ನೆಯ ಅಂತಸ್ತಿನಿಂದ ೨ ನೆಯ ಅಂತಸ್ತಿಗೆ ಉರುಳಿ ಬಿದ್ದು ಮೃತಪಟ್ಟರು.

—ಫ್ರಾನ್ಸದಲ್ಲಿ ೩|| ಲಕ್ಷ ಜನರು ಉದ್ಯೋಗಹೀನರಾಗಿರುವರೆಂದು ಮುಖ್ಯ ಮಂತ್ರಿಗೆ ಕಂಡುಬಂದದ್ದರಿಂದ ಇವರಿಗೆ ಉದ್ಯೋಗ ದೊರೆಯುವವರೆಗೆ ಹೊರಗಿನಿಂದ ಉದ್ಯೋಗ ದೊರಕಿಸಲು ಬರುವ ಜನರಿಗೆ ಪ್ರತಿಬಂಧ ಮಾಡಲ್ಪಟ್ಟಿದೆ. ದೇಶವು ಸ್ವತಂತ್ರವಿರುವ ಫಲವಿದು.

—ಮೌಲಾನಾ ನಜೀಮುದ್ದೀನ ಎಂಬ ಗೋರಕ್ಷಕರು ನಿಝಾಮ ರಾಜ್ಯದಲ್ಲಿ ಸಂಚರಿಸುತ್ತ ಗೋಹತ್ಯ ಮಾಡಬಾರದಾಗಿ ಎಚ್ಚರಿಸುತ್ತಿರುವರು. ಇವರು ಜಾಮಖೇಡದಲ್ಲಿಯ ಗೋಶಾಲೆಗೆ ಸಹಾಯವನ್ನು ದೊರೆಕಿಸುತ್ತಿರುವರು.

—ಜಾಲಂದರದಲ್ಲಿಯ ಹಳ್ಳಿಯ ಬ್ರಾಹ್ಮಣ ವಿದ್ಯಾರ್ಥಿಗಳಿಗಾಗಿ ಒಂದು ಔದ್ಯೋಗಿಕ ಶಾಲೆಯನ್ನು ಸ್ಥಾಪಿಸುವವರಿದ್ದಾರೆ. ನೋಡಿರಿ! ವರ್ಣಾಶ್ರಮ ವ್ಯವಸ್ಥೆ.

—ಹೋದವರ್ಷ ಬೆಂಗಳೂರಿನಲ್ಲಿ ೫೫೮೭ ಕೂಸುಗಳು ಜನಿಸಿದವು. ಮರಣ ಸಂಖ್ಯೆ ೪೮೯೦.

—ಹುಬ್ಬಳ್ಳಿಯಲ್ಲಿ ಅನಾಥ ಬಾಲಕಾಶ್ರಮವು ಪ್ರಾರಂಭವಾಗಿದ್ದು ೫ ವರ್ಷಗಳ ಕೆಳಗಿನ ಅನಾಥ ಮಕ್ಕಳು ಎಲ್ಲಿಯಾದರೂ ಅಸಹಾಯವಾಗಿದ್ದರೆ ಹುಬ್ಬಳ್ಳಿ " ತರುಣ ಕರ್ನಾಟಕ" ಆಫೀಸಿಗೆ ತಂದು ಮುಟ್ಟಿಸಬೇಕು.

—ಸರ್ಚಲಾಯಿಟಿನ ತೀಕ್ಷ್ಣ ಪುಂಜಪ್ರಕಾಶವನ್ನು ಸಮುದ್ರದ ಮೇಲೆ ಬೀರಲು ಒಳಗಿರುವ ಮೀನುಗಳು ಅದು ಆಹಾರವೆಂದು ತಿಳಿದು ತಿನ್ನಲು ಬರುತ್ತವೆ. ಆಗ್ಗೆ ಅವುಗಳನ್ನು ವಿಪುಲವಾಗಿ ಹಿಡಿಯಬಹುದೆಂಬ ಯುಕ್ತಿಯನ್ನು ಮಾಡಲಾಗಿದೆ.

—ಫ್ರಾನ್ಸಕ್ಕೂ ಜರ್ಮನಿಗೂ ಯುದ್ಧವು ಪ್ರಾರಂಭವಾದರೆ ರಶಿಯಾ ದೇಶವು ಫ್ರಾನ್ಸಕ್ಕೆ ಸಹಾಯಮಾಡುವಂತೆ ಒಂದು ರಹಸ್ಯ ಒಪ್ಪಂದವು ಆಗುತ್ತಿದೆಯಂತೆ.

—ಕಳೆದ ಅಕ್ಟೋಬರ ತಿಂಗಳವರೆಗೆ ೧೦ ತಿಂಗಳಲ್ಲಿ ೧೩೩೦೦೦ ಜನರು ಅಂದರೆ ಹೋದ ವರ್ಷಕ್ಕಿಂತ ಆರು ಪಾಲು ಹೆಚ್ಚು ಕೂಲಿಯವರು ಹಿಂದುಸ್ಥಾನದಿಂದ ಸಿಂಹಲದ್ವೀಪಕ್ಕೆ ದುಡಿಯಲು ಹೋಗಿದ್ದಾರೆ.

—ಮೈಸೂರು ಸಂಸ್ಥಾನಕ್ಕೆ ರಾಜಕಾರಣ ಶಿಕ್ಷಣವನ್ನು ಪಡೆಯಲು ಬಂದ ಅಕ್ಕಲಕೋಟೆ ಸಂಸ್ಥಾನಿಕರು ಬೆಂಗಳೂರಿನಲ್ಲಿ ಸಿಟಿ ಮ್ಯಾಜಿಸ್ಟ್ರೇಟ ಕೋರ್ಟ ಮುಂತಾದವುಗಳನ್ನು ಸಂದರ್ಶಿಸಿದರು.

—ಕೋಲಂಬೋ ಬಂದರದ ದಂಡೆಯ ಮೇಲೆ ೧೫ ರಿಂದ ೧೮ ಅಡಿ ಉದ್ದ ಮತ್ತು ೬ ಅಡಿ ವ್ಯಾಸವುಳ್ಳ ೨೦೦ ತಿಮಿಂಗಿಲುಗಳು ಬಂದು ಬಿದ್ದಿರುವವಂತೆ. ಅವುಗಳಲ್ಲಿ ಕೆಲವು ಸತ್ತಿದ್ದು ಇನ್ನು ಕೆಲವು ಜೀವಾ ಹಿಡಿದುಕೊಂಡಿರುವವು. ಜನರು ತಂಡೋಪತಂಡವಾಗಿ ನೋಡಲು ಬರುತ್ತಾರೆ.

—ಕಪುರ್ಥಳಾ ಸಂಸ್ಥಾನದಲ್ಲಿ ಹಿಂದು ಮತ್ತು ಶೀಖ ಮುಂದಾಳುಗಳು ಮುಖ್ಯ ಮಂತ್ರಿಗಳನ್ನು ತೆಗೆದುಹಾಕಿರೆಂದು ಸಂಸ್ಥಾನಿಕರಿಗೆ ಬಿನ್ನವಿಸಿಕೊಂಡಿದ್ದರಷ್ಟೇ. ಅದಕ್ಕೆ ಮುಖ್ಯ ಮಂತ್ರಿಗಳಾದ ಸರ ಅಬ್ದುಲ್ ಹಮೀದರವರು ತಾನೇ ತಮ್ಮ ಸ್ಥಾನವನ್ನು ಬಿಟ್ಟುಕೊಟ್ಟರು.

—ಅಹಮ್ಮದನಗರ ಹಿಂದು ಸಭೆಯವರು ಕಳೆದ ತಿಂಗಳ ೧೬ನೆಯ ತಾರೀಖಿನ ದಿವಸ ಹರಿ ರಾಘೋಬಾ ಅಮೋಲಿಕ ಎಂಬ ಕ್ರಿಸ್ತೀ ಗೃಹಸ್ಥನನ್ನು ಹಿಂದು ಧರ್ಮದಲ್ಲಿ ತೆಗೆದುಕೊಂಡರು.

—ಆಸಾಮ ಪ್ರಾಂತದ ಮುಖ್ಯ ಪಟ್ಟಣವಾದ ಗೌಹಾಟಿಯ ಹತ್ತಿರ ೫೦ ಮೈಲುಗಳ ಅಂತರದ ಒಂದು ಹಳ್ಳಿಯಲ್ಲಿ ಒಂದು ಅತಿ ಪ್ರಾಚೀನ ಶಿವಾಲಯದ ಶೋಧವಾಗಿದ್ದು ಅದರಲ್ಲಿ ಶಿವನ ಮೂರು ಮೂರ್ತಿಗಳು ದೊರೆತಿವೆ. ಒಬ್ಬ ಗೃಹಸ್ಥನ ಸ್ವಪ್ನದಲ್ಲಿ ದೇವಿಯು ಪ್ರಸನ್ನಳಾಗಿ ಆ ಶಿವಾಲಯವಿದ್ದ ಸ್ಥಾನವನ್ನು ಅಗಿದು ತೆಗೆಯಲು ಹೇಳಿದ್ದಳಂತೆ

—ಅಮೃತಸರದಲ್ಲಿ ಅ. ಭಾ. ಸ್ವದೇಶೀ ಪ್ರದರ್ಶನವು ಪಂಜಾಬದ ಗವ್ಹರ್ನರರಿಂದ ಪ್ರಾರಂಭಿಸಲ್ಪಟ್ಟಿತು. ಆಗ್ಗೆ ಅವರು ಒಕ್ಕಲಿಗರು ತಮ್ಮ ಒಕ್ಕಲತನದ ಜೊತೆಗೆ ರೇಶಿಮೆ, ಉಣ್ಣೆ ಮೊದಲಾದವುಗಳ ಕೈಗಾರಿಕೆಯನ್ನು ಕೈಕೊಳ್ಳಲಿಕ್ಕೆ ಹೇಳಿದರು.

ಪ್ಲೇಗ ಸಂಜೀವಿನಿ.

ಅತ್ಯಾಶ್ಚರ್ಯಕರವಾದ ಗುಣ! **ಕೇವಲ ೬ ತಾಸುಗಳಲ್ಲಿಯೇ ಗುಣ!**

ಇದನ್ನು ಸೇವನೆ ಮಾಡುವದರಿಂದ ಪ್ಲೇಗಿನ ಭಯವೇ ಇಲ್ಲ!

೧೦೦ ಕ್ಕೆ ೧೦೦ ರಂತೆ ಗುಣ!!

ಶ್ರೀ ಮನ್ನಿರಂಜನ **ಶಾಂತವೀರ ಸ್ವಾಮಿಗಳು ಗುರುಮಠಕಲ್** ಇವರು ಲೋಕ ಕಲ್ಯಾಣಾರ್ಥವಾಗಿ **ಪ್ಲೇಗ ಸಂಜೀವಿನಿ** ಎಂಬ ದಿವ್ಯ ಔಷಧಿಯನ್ನು ಶೋಧಮಾಡಿರುವರು. ಪ್ಲೇಗ ರೋಗವು ಎಷ್ಟು ಘಾತುಕವದೆಯೆಂಬುದನ್ನು ಹೇಳುವ ಅವಶ್ಯವಿಲ್ಲ. ಈ ಪ್ಲೇಗಿನಿಂದ ಸಾವಿರಾರು ಜನರು ಸಾಯುತ್ತಿರುತ್ತಾರೆ. ಇದನ್ನು ತಡೆಯುವದಕ್ಕಾಗಿ ಎಷ್ಟೋ ಔಷಧಗಳನ್ನು ತಯಾರ ಮಾಡಿರುವರು. ಅವುಗಳಿಂದೇನೂ ಗುಣವಾದದ್ದು ಕಂಡು ಬರುವದಿಲ್ಲ. ಈ ಪ್ಲೇಗ ಸಂಜೀವಿನಿಯಿಂದ ಆರೇ **ತಾಸುಗಳಲ್ಲಿಯೇ** ಗುಣವಾಗುತ್ತದೆ. ಇದರ ಒಂದು ಬಾಟ್ಲಿಯ ಕಿಮ್ಮತ್ತು ೧ ರೂ. ೪ ಆಣೆ.

ವಿಶೇಷ ಮಾಹಿತಿಯನ್ನು ಅನುಪಾನ ಪತ್ರಿಕೆಯಲ್ಲಿ ನೋಡಿರಿ.

ವಿಶೇಷ ಸೂಚನೆ— ಅನುಪಾನ ಪತ್ರಿಕೆಯ ಸೂಚನೆಯ ಮೇರೆಗೆ ಔಷಧವನ್ನು ತೆಗೆದುಕೊಂಡಲ್ಲಿ ಖಾತ್ರಿಯಿಂದ ಗುಣವಾಗುವದು. ಎಲ್ಲ ಕಡೆಗೂ ಏಜಂಟರು ಬೇಕು. ವಿಳಾಸ—

ಏಜಂಟ್
ಬಶೆಟ್ಟೆಪ್ಪ ಬಸಪ್ಪ ಹಲಕುರ್ಕಿ,
ಬಾಗಲಕೋಟೆ.

ಪ್ಲೇಗ ಸಂಜೀವಿನಿ ಆಫೀಸ್
ಗುಲಬಗಾರ್.

ನೋಟೀಸು.

ವಿ ಜಾ ಪು ರ ಜಿ ಲ್ಲೆ ಯ
ಸಮಸ್ತ ಜನರಿಗೆ ತಿಳಿಸುವದೇನಂದರೆ-

ನಾವು ನಿಮ್ಮ ಜಿಲ್ಲೆಯ ಏಜನ್ಸಿಯನ್ನು ಶ್ರೀ. ಬಶೆಟ್ಟೆಪ್ಪ ಬಸಪ್ಪ ಹಲಕುರ್ಕಿ ಬಾಗಲಕೋಟೆ ಇವರಿಗೆ ಕೊಟ್ಟಿರುವೆವು. ಆದ್ದರಿಂದ ದಯ ಮಾಡಿ ತಾವೆಲ್ಲರೂ ಪ್ಲೇಗ ಸಂಜೀವಿನಿಯ ಆರ್ಡರ್ ಕೊಡಬೇಕಾದರೆ ಸದರಿಯವರಿಗೇನೇ ಕೊಡಬೇಕೆಂದು ಸವಿನಯ ವಿನಂತಿ.

ಮ್ಯಾನೇಜರ್
ಪ್ಲೇಗ್ ಸಂಜೀವಿನಿ ಆಫೀಸ,
ಗುಲಬಗಾರ್.

ಶ್ರೀ ಬಸವೇಶ್ವರ ಆಯುರ್ವೇದಿಕ ಔಷಧಾಲಯ
ರಾಮದುರ್ಗ.

ಆಯುಃ ಕಾಮಯಮಾನೇನ ಧರ್ಮಾರ್ಥಸುಖಸಾಧಕಮ್।
ಆಯುರ್ವೇದೋಪದೇಶೇಷು ವಿಧೇಯಃ ಪರಮಾದರಃ॥

ಸುಕುಮಾರ ಲೇಹ್ಯವು— ಈ ಲೇಹ್ಯವು ೧೦ ವರುಷದ ಅನುಭವಪೂರ್ವಕ. ಇದು ೨೨ ... ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟಿರುತ್ತದೆ. ಇದನ್ನು ಬೆಳಿಗ್ಗೆ ಊಟದ ಮೊದಲು ರಾತ್ರಿ ಊಟದ ... ತೊಲೆಯಿಂದ ೧ ತೊಲೆಯವರೆಗೆ ಸೇವಿಸಿ ಮೇಲೆ ಕಾಸಿ ಆರಿಸಿದ ಹಾಲನ್ನು ಕುಡಿಯುವದರಿಂದ ಪ್ರಮೇಹ, ಸ್ವಪ್ನಸ್ಖಲನ, ಧಾತು ಹೋಗುವದು, ಉರಿಮೂತ್ರ ಗುಣಪಡಿಸಿ ದೀಪನವನ್ನೂ, ರುಚಿಯನ್ನೂ, ಧಾತುವರ್ಧನವನ್ನೂ. ಬಲವನ್ನೂ ಹಾಗೂ ಚೈತನ್ಯವನ್ನುಂಟುಮಾಡುವದು. ೨೪ ತೊ. ಡಬ್ಬಿಗೆ ೨-೦-೦.

ಜೀವಾಮೃತ ಲೇಹ್ಯವು— ಶಾಸ್ತ್ರಜ್ಞರಿಗೆ ಕಪ್ಪುಶಗುಡ್ಡವು ಹೇಗೆ ಪ್ರಸಿದ್ಧವಿರುವದೋ ಹಾಗೆ ನಮ್ಮಲ್ಲಿ ಮೇಗುಂಡೇಶ್ವರ ಕೊಳ್ಳವು ಪ್ರಸಿದ್ಧವಿರುವದು ಅಲ್ಲಿಯ ೩೦ ವನಸ್ಪತಿಗಳಿಂದ ಇದು ತಯಾರಿಸಲ್ಪಟ್ಟಿರುತ್ತದೆ. ಇದನ್ನು ರಾತ್ರಿ ಊಟವಾದ ನಂತರ ೧ ತೊಲೆಯಂತೆ ಸೇವಿಸಿ ಸ್ವಲ್ಪ ಬಿಸಿನೀರನ್ನು ಕುಡಿದರೆ ಸುಖವಿರೇಚನೆಯಾಗುವದಲ್ಲದೆ ಉಷ್ಣ, ಪಿತ್ತ, ವಾತ, ನೋವು, ಅಜೀರ್ಣ, ಅಗ್ನಿಮಾಂದ್ಯ ಮೊದಲಾದ ವ್ಯಾಧಿಗಳನ್ನು ಗುಣಪಡಿಸಿ ರಕ್ತಶುದ್ಧಿಮಾಡುವದು. ೨೪ ತೊಲಿ ಡಬ್ಬಿಗೆ ೧-೮-೦.

ಕಾಡುಕವಡಿಕಾಯಿ (ಇಂದ್ರವಾರುಣಿ) ತೈಲವು— ಮಾಧವನಿದಾನ ಪ್ರಕಾರ ಮನುಷ್ಯರಿಗೆ ೮೦ ತರದ ವಾತನೋವುಗಳೂ ೮ ತರದ ಹೊಟ್ಟೆ ಶೂಲಿಗಳಿರುವವು. ಸ್ತ್ರೀಯರಿಗೆ ಹೊಲೆಕಟ್ಟು ಅಂದರೆ ಗರ್ಭ ನಿಲ್ಲದೆ ೧೦-೧೫ ದಿವಸಕ್ಕೆ ರಕ್ತ ಹೋಗುತ್ತಿದ್ದರೆ ಸ್ತ್ರೀ ಸಂಬಂಧವಾದ ಮೇಲ್ಕಂಡ ಎಲ್ಲ ರೋಗಗಳಿಗೆ ಖಾತ್ರಿಯಾಗಿ ಗುಣಕಾರಿಯಾಗಿದೆ ಅನುಪಾನ ಪತ್ರಿಕೆಯು ಬಾಟ್ಲಿಯ ಮೇಲೆ ಇರುವದು. ೪ ಔಂಸಿನ ಬಾಟ್ಲಿಗೆ ೧-೪-೦.

ನಾರಿನ ವೈರಿಯು— ಕಾಲಿಗೆ ಅರಿವೆ ಕಟ್ಟಿಕೊಂಡು ನರಳುವ ಸಾವಿರಾರು ಜನರು ಈ ನಾರಿನ ರೋಗದಿಂದ ವಾಸಿಯಾಗಿರುವರು. ಕ್ರ. ೮ ಆಣೆ. ೨೪ ತಾಸಿನಲ್ಲಿ ಗುಣವು.

ನಮ್ಮ ನಂದೀ ಛಾಪಿನ ಹುರುಕಿನ ಔಷಧವನ್ನು ಎಲ್ಲ ಕಡೆಯಲ್ಲಿ ಅಂಗಡಿಕಾರರು ಮಾರುತ್ತಾರೆ. ದರ-೧೦೦ಕ್ಕೆ ೩ರೂ. ೩ರೇ ದಿವಸಗಳಲ್ಲಿ ಗುಣವು. ಪತ್ರಿಕೆಯಲ್ಲಿ ಕೊಟ್ಟಾರೆಂದು ಓದಿ ಧಿಕ್ಕರಿಸಬೇಡಿರಿ ಒಂದು ವೇಳೆಯಾದರೂ ಪರೀಕ್ಷಿಸಿ ನೋಡಿರಿ. ಬಡವರಿಗೂ ಶ್ರೀಮಂತರಿಗೂ ಸೋಯಿ ದರದಿಂದ ಕೊಡಲ್ಪಡುವದು.

ಪತ್ತಾ:—ವೈದ್ಯ ಮಡಿವಾಳಪ್ಪ ಮುಳ್ಳೂರು, ಸಂ. ರಾಮದುರ್ಗ. S. M. C.

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೨-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆಯ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಕಾಯಕವೆ ಕೈಲಾಸ	೦-೩-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ವಿಜಯವಾಣಿ	೦-೨-೦
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ** ಪೋ. ಆಲಮಟ್ಟಿ ಜಿ. ವಿಜಾಪುರ.

ಓಂ

ವಿಚಾರ ಕ್ರಾಂತಿಯನ್ನುಂಟು ಮಾಡುವ ಹೊಸ ಪುಸ್ತಕ.

ವೀರಶೈವ ಮತಾಚಾರ್ಯರ

ಕಾಲ ನಿರ್ಣಯ.

ಲೇಖಕರು—

ಕರ್ಲಮಂಗಲಂ ಶ್ರೀಕಂಠಯ್ಯನವರು.

ಪ್ರತಿಯೊಬ್ಬ ವೀರಶೈವನೂ ಅತ್ಯವಶ್ಯಕವಾಗಿ ಓದತಕ್ಕ ಪುಸ್ತಕ.

ಜಾಗ್ರತೆ ತರಿಸಿರಿ. ಬೆಲೆ ೧೨ ಆಣೆ.

ಮ್ಯಾನೇಜರ್— ಶರಣ ಸಂದೇಶ

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸನ್ನೆಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

ಜಿ. ಎಸ್. ಗಂಗಾಧರಯ್ಯ,

ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ, ತುಮಕೂರು.

(ಮೈಸೂರು ಸ್ಟೇಟ್)

ಹತ್ತು ತಿಂಗಳುಗಳಲ್ಲಿ

೫,೯೫,೫೦೦ ರೂ. ಗಳ ಪಾಲಿಸಿಗಳು ಕೊಡಲ್ಪಟ್ಟಿವೆ!

ಜನನ, ವಿವಾಹ, ಜೀವ ವಿಮೆಗಳು ಯಾವತ್ತೂ ತರಹದ ಜನರಿಗೆ— —ಉಪಯೋಗ ಬೀಳಲೆಂಬ ಉದ್ದೇಶದಿಂದ ನಿರ್ಮಿಸಲ್ಪಟ್ಟಿವೆ.

ಪ್ರವೇಶ ಧನ ರೂ. ೫, ತಿಂಗಳ ಕಂತ ೧.

ವಾರ್ಷಿಕ ಚಂದಾ ರೂ. ೧.

ಈ ಕಂಪನಿಯಲ್ಲಿ ಕೆಲಸಮಾಡಲಿಕ್ಕೆ ಯಾವತ್ತು ಭಾಗಗಳಲ್ಲಿ ಸಮರ್ಥರಾದ ಏಜಂಟರುಗಳು ಆರ್ಗನಾಯಜರು, ಪಗಾರ ಅಥವಾ ಕಮಿಶನ್ ತೆಗೆದುಕೊಂಡು ಕೆಲಸ ಮಾಡಲುಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಯನ್ನು ಕಂಪನಿಗೆ ಬರೆದು ತಿಳಿದುಕೊಳ್ಳಿರಿ.

ಎಮ್. ಎಸ್. ಕೇಸರಿ ಬಿ. ಎ. ಎಲ್ ಎಲ್. ಬಿ.

ಮ್ಯಾನೇಜಿಂಗ್ ಏಜಂಟ್ಸ್,

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರನ್ಸ ಕಂ. ಲಿ. ಧಾರವಾಡ.

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ!   **ಉತ್ತಮ ಸೌಕರ್ಯ.**   **ಎಲ್ಲಕ್ಕಿಂತ ಅನುಕೂಲ ಸ್ಥಳ.**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಡಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪ ವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸತತ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ   ಎರಡೂಹೊತ್ತು ಭೋಜನ ೧೫-೦-೦ ತಿಂಗಳೊಂದಕ್ಕೆ.
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ   ಊಟ ಒಂದಕ್ಕೆ ೦-೫-೦

ಕೂಪನ್ ಕ್ರಮ— ೧೦೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೫೦ ,, ,, ,, ೧೫-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ
ಕಷ್ಟಪಡುತ್ತಿರುವಿರೋ?
ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ
ಹುಲಗಿಲ ಎಣ್ಣೆಯ ಸತ್ವವು ಅಧಿಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ
ಡಾ. ಎಂ. ಸಿ. **ತುಮ್ಮಿನಕಟ್ಟಿ,** ಎಂ. ಎಸ್‌ಸಿ., **ಪಿಎಚ್.** ಡಿ. ಇವರು ತಯಾರಿಸಿದ
" ಹೊಂಗೊಲ್ "
ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ
ಕೊಬ್ಬು **(ಚರಬಿ)** ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.
ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು
ಯಾರಿಗೆ ಬೇಕಾಗಿಲ್ಲ?
ಹಾಗಾದರೆ ಒಸಡಿಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಧಿಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ.** ಎಂ. ಸಿ. **ತುಮ್ಮಿನಕಟ್ಟಿ** ಎಂ. ಎಸ್‌ಸಿ., **ಪಿಎಚ್. ಡಿ.** ಇವರಿಂದ ತಯಾರಿಸಲ್ಪಟ್ಟ
" ಕಚ್ಯೂರ "
ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತ ವಾಗಿ ನಮೂನೆಗಳನ್ನು ದೊರೆಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿ ಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ!

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟುವ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.** ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತ ಲಕ್ಷಿಸುವಿರಾ?

ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ—
ಶಿವಸಂಗಪ್ಪಣ್ಣಾ ಕುಪಸ್ತ,
ಬಾಗಲಕೋಟಿ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ನ ಇಚಲಕರಂಜಿ.
(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗೆಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ಕಂಪಾಜಟರು ಬೇಕಾಗಿದ್ದಾರೆ.

ಕನ್ನಡವನ್ನ ಚೆನ್ನಾಗಿ ಬಲ್ಲ ಒಳ್ಳೆಯ ಕಂಪಾಜಟರು ಬೇಕಾಗಿದ್ದಾರೆ ಅವರ ಕೆಲಸದ ಮೇಲಿಂದ ವೇತನ ದೊರೆಯುವುದು. ಇಷ್ಟವುಳ್ಳವರು ಜಾಗ್ರತೆ ಬರೆದುಕೊಳ್ಳಬೇಕು.

ಮ್ಯಾನೇಜರ್
"ಶರಣ ಸಂದೇಶ"

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ** ಪ್ರಕಟಸಲ್ಪಟ್ಟಿತು.

NGAM CLOTH STORE
Prop: M. S. Hundekar & Sons,
P.O: TERDAL-587 315
Dt. Bijapur, (Karnataka)

REGISTERED No. B. 28

ಶರಣ ಸಂದೇಶ

Sharana Sandesh.

ನ್ಯಾಯನಿಷ್ಠುರಿ! ದಾಕ್ಷಿಣ್ಯಪರನಾನಲ್ಲ! ಲೋಕವಿರೋಧಿ! ಶರಣನಾರಿಗೂ ಅಂಜುವವನಲ್ಲ!
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ವ. ೨೨೫ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ ರೂ.

ಪ್ರತಿ ಸೋಮವಾರದಂದು ಪ್ರಕಟವಾಗುವುದು.

ಸಂಪುಟ೪.	ಆಲಮಟ್ಟಿ- ಸೋಮವಾರ ತಾರೀಖು ೧೦ ನೆಯ ಡಿಶಂಬರ್ ೧೯೩೪.	ಸಂಚಿಕೆ೧೬.

ಮಹಾತ್ಮಾಜಿಯವರ ನಿರ್ಧಾರ?

ಸರಹದ್ದ ಪ್ರಾಂತದಲ್ಲಿ ವಾಸಮಾಡಲು ಬೇಡಿಕೆ.

ಮಹಾತ್ಮಾ ಗಾಂಧೀಜಿಯವರು ತಾವು ಸರಹದ್ದ ಪ್ರಾಂತದಲ್ಲಿ ವಾಸಮಾಡಲು ಅಪ್ಪಣೆ ದೊರೆಯಬೇಕಾಗಿ ವ್ಹಾಯಿಸರಾಯರ ಕಡೆಗೆ ವಿಜ್ಞಾಪನೆ ಮಾಡಿಕೊಂಡಿರುವರು. ಅನುಮತಿ ದೊರೆತರೆ ಅವರು ಇದೇ ತಿಂಗಳ ೧೫ ನೇ ತಾ॥ ಗೆ ಸರಹದ್ದ ಪ್ರಾಂತಕ್ಕೆ ಹೊರಡುವರು.

ಅಪ್ಪಣೆ ದೊರೆಯದಿದ್ದ ಪಕ್ಷದಲ್ಲಿ ಅವರೊಬ್ಬರೇ ಸತ್ಯಾಗ್ರಹವನ್ನು ಪ್ರಾರಂಭಿಸುವರೆಂದೂ ಊಹಿಸಲಾಗಿದೆ.

ಸರಹದ್ದ ಪ್ರಾಂತದಲ್ಲಾಗುವ ಅನೇಕ ಕೊಲೆಗಳೇ ಈ ಅಹಿಂಸಾ ಮೂರ್ತಿಯ ಗಮನಕ್ಕೆ ಕಾರಣವಾಗಿದೆಯೆ?

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಆಬಿಡ್ಸ ಬಿಲ್ಡಿಂಗ
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ !

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟಿಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ— ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು— ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ— ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು— ಏನು ಹೇಳಲೆಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ನೂರುಮಂದಿ ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ— ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿಲ್ಲ. ಈಗ [illegible]ಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವಕ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು— ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಶ್ರೀ ಹೂಲಿ ಸಿದ್ಧಾಂತ ಪಂಚಾಂಗದಲ್ಲಿ

ಜಾಹೀರಾತ

ಕೊಡುವವರು ಜರೂರ ಕಳಿಸಿರಿ.

ಪಂಚಾಂಗವು ಅಚ್ಚಾಗುತ್ತಲಿದೆ. ಕಾರಣ ತಡಮಾಡದೆ ಕಳಿಸಿರಿ.

ವಿಶೇಷ— ಹೆಚ್ಚಿನ ಮಾಹಿತಿಯು ಬಗ್ಗೆ ಪತ್ರ ಬರೆಯಿರಿ.

ಪಂಚಾಂಗ ಪ್ರಕಾಶಕರು,
ಸಿ. ಕೆ. ಲಿಂಗಯ್ಯಾಸ್ವಾಮಿ
ಶ್ರೀ ಲಕ್ಷ್ಮೀ ವಿಲಾಸ ಪುಸ್ತಕಾಲಯ ಗದಗ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಡಿಶಂಬರ್ ತಾರೀಖು ೧೦ ನೆಯ ಸೋಮವಾರ | ಸಂಚಿಕೆ ೧೬.

ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ನಿರ್ಣಯ.

ತ್ರಿವಿಧ ಕಾರ್ಯಗಳ ಅಂಗೀಕಾರ! ಜಾ. ಪಾ. ವರದಿಯ ತಿರಸ್ಕಾರ!!

ಸಮಿತಿಯ ಅಂಗೀಕೃತ ನಿರ್ಣಯಗಳು.

"ರಾಷ್ಟ್ರವು ರಾಷ್ಟ್ರೀಯ ಸಭೆಯ ವಿನಂತಿಯನ್ನು ಮಾನ್ಯ ಮಾಡಿ ಕ್ಷಿಪ್ತದಲ್ಲಿಯೇ ಆದ ಅಸೆಂಬ್ಲಿ ಚುನಾವಣೆಯಲ್ಲಿ ಬಹ ಸಂಖ್ಯೆಯಾಗಿ ರಾಷ್ಟ್ರೀಯ ಕಾರ್ಯಕರ್ತರನ್ನೇ ಆರಿಸಿ ಕಳಿಸಿದ್ದಕ್ಕಾಗಿ ಈ ಕಾರ್ಯಕಾರಿ ಸಮಿತಿಯು ರಾಷ್ಟ್ರವನ್ನು ಅಭಿನಂದಿಸುತ್ತದೆ. ಹಾಗೆಯೇ ಸರ್ವ ಕಾಂಗ್ರೆಸ್ ಭಕ್ತರು ಮತ್ತು ಸಂಸ್ಥೆಗಳು ಮುಂದಿನ ಮೂರು ತಿಂಗಳುಗಳ ವರೆಗೆ ತಮ್ಮ ಲಕ್ಷವೆಲ್ಲವನ್ನು ಈ ತ್ರಿವಿಧ ಕಾರ್ಯಕ್ರಮಕ್ಕೆ ಪೂರೈಸಬೇಕು.—

೧ ಕಾಂಗ್ರೆಸ್ ಸದಸ್ಯರನ್ನು ಹೆಚ್ಚಿಸುವದು ಮತ್ತು ನವಘಟನೆಯ ಮೇರೆಗೆ ಕಾಂಗ್ರೆಸ್ ಕಮೀಟಿಗಳನ್ನು ಸ್ಥಾಪಿಸುವದು.

೨ ಅ. ಭಾ. ಗ್ರಾಮೋದ್ಯೋಗ ಸಂಘದ ನೇತೃತ್ವದಲ್ಲಿ ಹಳ್ಳಿಯ ಕೈಗಾರಿಕೆಗಳನ್ನು ಊರ್ಜಿತಗೊಳಿಸುವ ಬಗ್ಗೆ ಮಾಡಲ್ಪಡುವ ಕಾರ್ಯಕ್ಕೆ ಸಹಾಯಮಾಡುವದಕ್ಕಾಗಿ ಹಳ್ಳಿಗಳಲ್ಲಿಯ ಕಲಾ ಕೈಗಾರಿಕೆಗಳ ಬಗ್ಗೆ ಎಲ್ಲ ಮಾಹಿತಿಯನ್ನು ಶುದ್ಧವಾಗಿ ಸಂಗ್ರಹಿಸತಕ್ಕದ್ದು.

೩ ಕರಾಚಿ ಕಾಂಗ್ರೆಸ್ಸಿನಲ್ಲಿ ಜನತೆಯ ಮೂಲಹಕ್ಕು ಮತ್ತು ಕರ್ತವ್ಯ ಮತ್ತು ಆರ್ಥಿಕ ಕಾರ್ಯಕ್ರಮದ ವಿಷಯವಾಗಿ ಪಾಸುಮಾಡಿದ ನಿರ್ಣಯವನ್ನು ಮತ್ತು ಅದನ್ನೇ ಮುಂಬಯಿಯಲ್ಲಿ ಅ. ಭಾ.ಕಾಂಗ್ರೆಸ್ ಕಮೀಟಿಯವರು ಹೆಚ್ಚಿಸಿದ ಅಂಶವನ್ನು, ಅದರ ಕಲ್ಪನೆಯಾಗುವಂತೆ ಜನತೆಯಲ್ಲಿ ಪ್ರಸಾರಗೊಳಿಸಬೇಕು."

ಸಮಿತಿಯ ತಿರಸ್ಕೃತ ನಿರ್ಣಯ.

ಜಾಯಿಂಟ ಪಾರ್ಲಿಮೆಂಟರಿ ಕಮೀಟಿ ರಿಪೋರ್ಟಿನ ಬಗ್ಗೆ ಕಾರ್ಯಕಾರಿ ಸಮಿತಿಯೂ ಮತ್ತು ಪಾರ್ಲಿಮೆಂಟರಿ ಬೋರ್ಡೂ ಕೂಡಿ ಒಂದು ವಿಸ್ತಾರವಾದ ಗೊತ್ತುವಳಿಯನ್ನು ಪಾಸುಮಾಡಿ ಆ ವರದಿಯನ್ನು ತಿರಸ್ಕರಿಸಲಾಗಿದೆ. ಈ ಗೊತ್ತುವಳಿಯ ಸಾರಾಂಶವು ಹೀಗಿದೆ—

ರಾಷ್ಟ್ರೀಯ ಸಭೆಯು ಸಂಪೂರ್ಣ ವಿಚಾರಮಾಡಿ ಶ್ವೇತಪತ್ರಿಕೆಯಲ್ಲಿಯ ರಾಜಕೀಯ ಘಟನೆಯನ್ನು ತಿರಸ್ಕರಿಸಬೇಕೆಂದೇ ಸದ್ಯದ ಚುನಾವಣೆಯ ಕಾಲದಲ್ಲಿ ಸ್ಪಷ್ಟವಾಗಿ ನಿರ್ಣಯಿಸಿದೆ. ಆ ಜಾ. ಪಾ. ಕ. ವರದಿಯ ಅಂಶಗಳಾದರೊ ಶ್ವೇತಪತ್ರಿಕೆಯಲ್ಲಿಯ ಅಂಶಗಳಿಗಿಂತಲೂ ಅತಿ ಹೀನವಾಗಿರುವದರಿಂದ ಹಿಂದುಸ್ಥಾನದ ಸರ್ವ ಅಭಿಪ್ರಾಯದವರೂ ಇದನ್ನು ಪ್ರತಿಗಾಮಿಯೆಂದೂ ಸ್ವೀಕಾರಕ್ಕೆ ಅನರ್ಹವೆಂದೂ ಖಂಡಿಸಿದ್ದಾರೆ. ಇದು ಕೇವಲ ಪರದೇಶಸ್ಥರು ಆರ್ಥಿಕ ಮುಸುಕಿನಲ್ಲಿ ಹಿಂದುಸ್ಥಾನವನ್ನು ಆಳಿ ಹೀರುವದಕ್ಕಾಗಿಯೇ ಉಂಟುಮಾಡಲಾಗಿರುವದರಿಂದ ಸದ್ಯಕ್ಕಿರುವ ಘಟನೆಯಕಿಂತಲೂ ಹೆಚ್ಚು ಅಪಾಯಕಾರಕವೂ ಅಹಿತಕಾರಕವೂ ಆಗಿದೆ. ಸದ್ಯದ ರಾಜಕೀಯ ಘಟನೆಯು ಅಸಹ್ಯವೂ ಅಪಮಾನಕಾರಕವೂ ಆಗಿದೆಯೆಂಬುದು ರಾಷ್ಟ್ರೀಯ ಸಭೆಗೆ ಚನ್ನಾಗಿ ಗೊತ್ತಿದೆ. ಕಾನ್‌ಸ್ಟಿಟ್ಯುಅಂಟ ಅಸೆಂಬ್ಲಿ (ಸಂಯುಕ್ತ ಸಂಘ) ಯವರು ರಾಷ್ಟ್ರೀಯ ಸಭೆಯವರು ನಿರ್ಣಯಿಸಿದ ಮೇರೆಗೆ ಒಂದು ಹೊಸ ಘಟನೆಯನ್ನು ಇದರ ಸ್ಥಾನದಲ್ಲಿ ಸ್ಥಾಪಿಸುವ ವರೆಗೆ ಹೋರಾಡಬೇಕಾದ ಪ್ರಸಂಗ ಬಂದರೂ ರಾಷ್ಟ್ರೀಯ ಸಭೆಯು ಈ ಅನಿಷ್ಟ ವರದಿಯನ್ನು ದೂರೀಕರಿಸುತ್ತದೆ.

—ಕಳೆದ ಒಂದು ವರ್ಷ ಭಯಂಕರ ವ್ಯಾಜ್ಯದಲ್ಲಿ ಸಿಲ್ಕಿದ್ದ ನಿಜಾಮ ರಾಜ್ಯದ ಮುಬಲಗುಂಡಿಯ ಸುಪ್ರಸಿದ್ಧ ವ್ಯಾಪಾರಿಗಳಾದ ಶ್ರೀ ಘತ್ತೀಪುರ ಶಿವಶರಣಪ್ಪನವರು ಕಳೆದ ಶನಿವಾರ ನಿರ್ದೋಷಿಗಳೆಂದು ತೀರ್ಮಾನಿಸಲ್ಪಟ್ಟು ಬಿಡುಗಡೆ ಮಾಡಲ್ಪಟ್ಟರು.

—ಖಾನ ಅಬ್ದುಲ್ ಗಫಾರಖಾನರನ್ನ ವರ್ಧಾದಲ್ಲಿ ಬಂಧಿಸಲಾಯಿತು. ಮುಂಬಯಿಯಲ್ಲಿ ಮಾಡಿದ ಭಾಷಣವೇ ಕಾರಣವಂತೆ. ಅವರನ್ನು ಬಿಟ್ಟು ಸರಿಯಾಗಿ ೧೦೦ ದಿವಸಗಳಾಗಿಗನ್ನ

ಜಪಾನಿನ ಉನ್ನತ ಸ್ಥಿತಿ.

ಲೇಖಕರು:— ಶ್ರೀ ಆರ್. ಎಸ್. ಆರಾಧ್ಯ ಮಂಡೀ ಪೇಟೆ ತುಮಕೂರು.

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಜರ್ಮನಿಯವರು ಈ ವಿಷಯದಲ್ಲಿ ಹೆಸರು ಪಡೆದಿದ್ದರೂ, ಜಪಾನದವರನ್ನು ಈಗ ಮೀರಲಾರರು. ನಮ್ಮ ಹಿಂದು ದೇಶದವರಿಗೆ ಇವರ ಸಾಮಾನುಗಳ ವಿಷಯದಲ್ಲಿ ತುಂಬಾ ಅಪನಂಬಿಕೆ ಮತ್ತು ಅವು ಅಷ್ಟು ಬಾಳಿಕೆಯಾದವುಗಳಲ್ಲವೆಂಬ ಅಭಿಪ್ರಾಯ. ಆದರೆ ಇದಕ್ಕೆ ಕಾರಣವೇನೆಂಬುದನ್ನು ನಾವೇ ತಿಳಿಯಬೇಕು. ಜಪಾನಿನವರು ಒಳ್ಳೆಯ ಅಂದರೆ ಬಾಳಿಕೆಯಾದ ಸಾಮಾನುಗಳನ್ನು ತಯಾರುಮಾಡಿದರೂ ನಮ್ಮ ದೇಶದ ವ್ಯಾಪಾರಸ್ಥರು ಅವುಗಳನ್ನು ತರಿಸಿಕೊಳ್ಳದೆ ಕಮ್ಮಿ ಖರೀದಿ ಸಾಮಾನುಗಳನ್ನು ತರಿಸಿಕೊಳ್ಳುತ್ತಾರೆ; ಆದ್ದರಿಂದಲೇ ನಮಗೆ ಜಪಾನಿನವರ ಸಾಮಾನುಗಳೆಲ್ಲವೂ ಬಾಳಿಕೆಯುಳ್ಳವಲ್ಲವೆಂಬ ಅಭಿಪ್ರಾಯ ಬಂದಿದೆ ಇವರ ಒಳ್ಳೆಯ ಸಾಮಾನುಗಳೆಲ್ಲವೂ ಅಮೇರಿಕಾ ಮತ್ತು ಯುರೋಪ ದೇಶಗಳಿಗೆ ಹೋಗುತ್ತವೆ. ಇವೇ ಸಾಮಾನುಗಳನ್ನು ನಮ್ಮ ದೇಶದ ವ್ಯಾಪಾರಸ್ಥರು ತರಿಸಿಕೊಳ್ಳುವುದಾದರೆ ಈ ತರದ ಅಪನಂಬಿಕೆಯೇ ನಮಗೆ ಹುಟ್ಟುವುದಿಲ್ಲ

ಜಪಾನಿನವರು ಪ್ರತಿಯೊಂದು ದೇಶದಿಂದಲೂ ಒಂದೊಂದು ನೂತನ ವಿಧಾನವನ್ನು ಕಲಿತುಕೊಂಡಿರುವರು. ಇವರು ಕೈಗಾರಿಕೆ ಸಾಮಾನುಗಳನ್ನು ಮಾಡುವ ವಿಧಾನ ತಿಳಿದುಕೊಂಡದ್ದು ಚೀನ ದೇಶದವರಿಂದ. ಅನ್ಯದೇಶಗಳಿಗೆ ತಮ್ಮ ಜನಗಳನ್ನು ಕಳುಹಿಸಿ ಅಲ್ಲಿಯ ಕೃಷಿ, ಕೈಗಾರಿಕೆಯ ವಿಷಯಗಳನ್ನು ಕೂಲಂಕುಷವಾಗಿ ತಿಳಿದುಕೊಂಡು ತಮ್ಮ ರಾಷ್ಟ್ರದಲ್ಲಿ ಅವುಗಳನ್ನು ಪಕ್ರಮಗೊಳಿಸಿರುವರು. ಆದರೆ ಇವರು ಮಾತ್ರ ತಮ್ಮ ಕಾರ್ಖಾನೆಗಳೊಳಗೆ ಇತರ ದೇಶದವರನ್ನು ಬಿಡುವದಿಲ್ಲ ಮತ್ತು ಅದರ ಯಾವ ತರಹದ ಗುಟ್ಟುಗಳನ್ನು ಹೇಳುವದಿಲ್ಲ. ಇಂದು ಪ್ರಪಂಚದ ಪ್ರತಿಯೊಂದು ಭಾಗದಲ್ಲಿಯೂ ಜಪಾನಿನವರ ಸಾಮಾನುಗಳಿವೆ. ಇವರು ಪ್ರತಿಯೊಂದು ಸಾಮಾನಿನಲ್ಲಿಯೂ ಪೈಪೋಟಿ ಮಾಡಲು ಸಿದ್ಧರಾಗಿದ್ದಾರೆ. ಆದರೆ ತಮ್ಮ ದೇಶದಲ್ಲಿ ಸಾಮಾನುಗಳನ್ನು ತಯಾರಮಾಡಲು ಮಾತ್ರ ಇವರು ಪೈಪೋಟಿ ಮಾಡಲು ಇಷ್ಟಪಡುವುದಿಲ್ಲ. ಒಂದೇ ತರಹದ ಸಾಮಾನುಗಳನ್ನು ಹೆಚ್ಚು ಕಾರ್ಖಾನೆಗಳಲ್ಲಿ ತಯಾರ ಮಾಡಲು ಕೈಹಾಕುವುದಿಲ್ಲ. ಅಲ್ಲದೆ ಒಂದೇ ಕಾರ್ಖಾನೆಯಲ್ಲಿ ಅನೇಕ ತರಹದ ಸಾಮಾನುಗಳನ್ನು ಕೂಡ ಮಾಡುವುದಿಲ್ಲ. ಇದರಿಂದ ಆಗುವ ನಷ್ಟವನ್ನು ಜಪಾನಿನವರು ಚನ್ನಾಗಿ ಅರಿತಿರುವರು. ಕೂಲಿಕಾರರು ಬಹಳ ಕಡಿಮೆ ಕೂಲಿ ತೆಗೆದಕೊಳ್ಳಲು ಇನ್ನೊಂದು ವಿಚಾರವುಂಟು. ಕಾರ್ಖಾನೆಗಳ ಮಾಲಿಕರು ಕೂಲಿಯವರಿಗೆ ಬೇಕಾದ ಸೌಕರ್ಯಗಳೆಲ್ಲವನ್ನೂ ತಮ್ಮ ಕಾರ್ಖಾನೆಯ ಆವರಣದಲ್ಲಿಯೇ ಒದಗಿಸಿಕೊಟ್ಟಿರುತ್ತಾರೆ ಮನೆ, ಆಸ್ಪತ್ರೆ, ವಾಚನಾಲಯ, ವಿಹಾರಮಂದಿರ ಮತ್ತು ಆಟಕ್ಕೆ ಬೇಕಾದ ಜಾಗ ಇವೆಲ್ಲವೂ ಈ ಆವರಣದಲ್ಲಿಯೇ ಇರುತ್ತವೆ. ಈ ತರಹದ ಸೌಲಭ್ಯವನ್ನು ಒದಗಿಸಿಕೊಟ್ಟಿರುವದರಿಂದಲೂ ಮತ್ತು ಅಲ್ಲಿಯ ಕೂಲಿಯವರಿಗೆ ತಮ್ಮ ದೇಶದ ಮೇಲೆ ಬಹಳ ಅಭಿಮಾನವಿರುವದರಿಂದಲೂ ಅವರು ಹೆಚ್ಚಿಗೆ ಕೂಲಿಯನ್ನು ತೆಗೆದುಕೊಳ್ಳದೆ ಕೈಗಾರಿಕೆಗೆ ಹೆಚ್ಚು ಸಹಾಯಮಾಡುತ್ತಿರುವರು. ದೈವ ಸಹಾಯದಿಂದ ಈ ದೇಶದ ವಾಯು ಗುಣವು ಸಮಶೀತೋಷ್ಣವಾಗಿರುವುದು.

ಒಂದು ರಾಜ್ಯವು ಉನ್ನತ ಸ್ಥಿತಿಗೆ ಬರಬೇಕಾದರೆ ಸ್ವಾತಂತ್ರ್ಯದ ಮಹಿಮೆ ಜನಗಳಿಗೆ ತಿಳಿಯಬೇಕು. ಇಡೀ ಜಪಾನ್ ಜನಾಂಗಕ್ಕೆ ಇದು ಚನ್ನಾಗಿ ಮನದಟ್ಟಾಗಿದೆ. ಇತರ ಜನಾಂಗಗಳೆಲ್ಲವೂ ತಮ್ಮನ್ನು ಆದರ್ಶಕವಾಗಿ ಇಟ್ಟುಕೊಳ್ಳಬೇಕೆಂಬ ಉದ್ದೇಶದಿಂದ ಜಪಾನರು ದೇಶದ ಆರ್ಥಿಕ ಸ್ಥಿತಿಯನ್ನು ಗಮನಿಸುತ್ತಿದ್ದಾರೆ. ಮಹಾಯುದ್ಧವಾದ ಮೇಲೆ ಜಪಾನಿನವರು ಅಭಿವೃದ್ಧಿಯಾಗಲು ಅನುಕೂಲವಾಯಿತು. ಯಾಕಂದರೆ ಮೊದಲು ಕೈಗಾರಿಕೆಗೆ ಸಹಾಯವಾಗಿ ಇವರಿಗೆ ದ್ರವ್ಯದೊರೆಯುತ್ತಿರಲಿಲ್ಲ ಈಗ ವ್ಯಾಪಾರದಲ್ಲಿ ಪ್ರಪಂಚದ ಯಾವ ದೇಶವು ಕೂಡ ಜಪಾನಿನ ವಿದೇಶದ ವ್ಯಾಪಾರದೊಡನೆ ಸಮಕೊಡಲಾರದು. ಹಿಂದಿನ ವರುಷ ವಿದೇಶದ ವ್ಯಾಪಾರವು ನೂರಕ್ಕೆ ಫ್ರಾನ್ಸದೇಶದಲ್ಲಿ ಐದರಂತೆಯೂ, ಇಂಗ್ಲೆಂಡಿನಲ್ಲಿ ಆರರಂತೆಯೂ, ಅಮೇರಿಕಾದಲ್ಲಿ ಏಳರಂತೆಯೂ ಮತ್ತು ಜರ್ಮನಿಯಲ್ಲಿ ಹದಿನಾಲ್ಕರಂತೆಯೂ ಕಡಿಮೆಯಾಗಿರುತ್ತದೆ. ಆದರೆ ಜಪಾನಿನಲ್ಲಿ ವಿದೇಶ ವ್ಯಾಪಾರವು ನೂರಕ್ಕೆ ನಾಲ್ವತ್ತರಂತೆ ಹೆಚ್ಚುಯುತ್ತದೆ. ಎಂದ ಮೇಲೆ ಇದರ ಏಳಿಗೆಯನ್ನು ಹೇಳಲಿಕ್ಕಾದೀತೆ? ಕಳೆದ ಮೂವತ್ತು ವರ್ಷಗಳಿಂದಲೂ ತನ್ನ ವ್ಯಾಪಾರ, ಕೈಗಾರಿಕೆಗಳನ್ನು ಬಹಳ ಅಭಿವೃದ್ಧಿಪಡಿಸಿಕೊಂಡಿದೆ. ಈ ದುಷ್ಕಾಲದಲ್ಲಿ ಪಾಶ್ಚಿಮಾತ್ಯ ದೇಶಗಳಿಗಿಂತಲೂ ಒಂದು ಪಾಲು ಹೆಚ್ಚಾಗಿ ಜಪಾನ್ ದೇಶವು ಅಭಿವೃದ್ಧಿ ಹೊಂದಿರುವುದರಿಂದ ಎಷ್ಟು ಹೇಳಿದರೂ ಉತ್ಪ್ರೇಕ್ಷೆಯಾಗುವುದಿಲ್ಲ.

ನಮ್ಮಲ್ಲಿ ಫೋಟೋ, ಲೈನ್ ಬ್ಲಾಕುಗಳು, ಹಿತ್ತಾಳೆ ಮತ್ತು ಸೀಸದ ಬ್ಲಾಕುಗಳು, ಅರಗಿನ ಸೀಲು ಜವಾನರ ಬಿಲ್ಲೆಗಳು, ರಬ್ಬರ್ ಮೊಹರುಗಳು, ದೇವರ ತ್ರಿಬಣ್ಣದ ಪಟಗಳು, ಕ್ಯಾಲೆಂಡರುಗಳು ನಿಮ್ಮ ಮನ ಒಪ್ಪುವಂತೆ ತಯಾರಾಗುತ್ತವೆ.

ವೀರಶೈವ ಶುದ್ಧಿ ಸಂಘಟನೆ ಸಂಘ ಇಳಕಲ್ಲ.

ವೀರಶೈವರಲ್ಲಿ ಕಾಯಕ ಭೇದದಿಂದ ಆದ ಪಂಗಡಗಳು ಅನೇಕವಿದ್ದರೂ, ಧರ್ಮದ ದೃಷ್ಟಿಯಿಂದ ಆ ಪಂಗಡಗಳಲ್ಲಿ ಹೆಚ್ಚು ಕಡಿಮೆ ಎಂಬ ಭೇದವಿಲ್ಲ. ಪುರಾತನ ಕಾಲದಲ್ಲಿ ಕಾಯಕದಿಂದ ಜೀವಿಸುವದೇ ಧರ್ಮವೆಂದು ಅನೇಕ ಶಿವಶರಣರು ಹಗ್ಗ ಹೊಸೆಯುವದೂ, ನೇಯುವದೂ, ವ್ಯಾಪಾರ ಮಾಡುವದೂ, ಮತ್ತು ಒಕ್ಕಲತನ ಮಾಡುವದೂ, ಇಷ್ಟೇ ಅಲ್ಲ; ಅತ್ಯಂತ ಹೀನವಾದದೆಂದು ಈಗ ತಿಳಿಯುವ ಮೊಚ್ಚೆ ಹೊಲೆಯುವ ಕಾಯಕದಿಂದ ಗುರು ಲಿಂಗ ಜಂಗಮ ತೃಪ್ತಿ ಮಾಡುತ್ತಿದ್ದರು. ಆಗ ಆ ಕಾಯಕಗಳಲ್ಲಿ ಇದು ಶ್ರೇಷ್ಠ ಇದು ಕನಿಷ್ಠವೆಂದು ಯಾರೂ ತಿಳಿಯುತ್ತಿರಲಿಲ್ಲ. ಇಷ್ಟೇ ಅಲ್ಲ; ಪ್ರಾಮಾಣಿಕತನದಿಂದ ಮಾಡುವ ಯಾವ ಕಾಯಕವೂ ಹೀನವಲ್ಲವೆಂಬ ಭಾವನೆಯು ಬೇರೂರಿತ್ತು. ಆದರೆ ಮುಂದೆ ದುರ್ದೈವದಿಂದ ಕಾಯಕಗಳಲ್ಲಿ ಉಚ್ಚ ನೀಚ-ಒಳ್ಳೆ ಕೆಟ್ಟವೆಂಬ ಕಲ್ಪನೆಯು ಬೇರೂರಿ ಪಂಗಡಗಳು ನಿರ್ಮಾಣವಾದವು. ಬರಬರುತ್ತ ಈ ಪಂಗಡಗಳಲ್ಲಿ ಅನ್ನೋದಕ ವ್ಯವಹಾರಗಳೂ ಕಟ್ಟಾಗಿ ಅಸ್ಪೃಶ್ಯವು ಬೆಳೆಯಿತು. ಅತಿವರ್ಣದವರಾದ ವೀರಶೈವರಲ್ಲಿ ವರ್ಣ ಭೇದಗಳು ಧರ್ಮಜ್ಞಾನವಿಲ್ಲದೆ ತಲೆದೋರಹತ್ತಿದವು. ಈ ಪರಿಸ್ಥಿತಿಯನ್ನು ಬದಲು ಮಾಡಿ ವೀರಶೈವ ಮಹಾಜನಗಳಲ್ಲಿ ನಿಜವಾದ ಧರ್ಮಜ್ಞಾನವನ್ನು ಹುಟ್ಟಿಸಿ, ಎಲ್ಲ ಪಂಗಡಗಳನ್ನು ಏಕೀಕರಿಸುವದೇ ಈ ಸಂಘದ ಉದ್ದೇಶ. ಇದಲ್ಲದೆ ಸದಾಚಾರ ಸಂಪನ್ನರಾದ ಅಲಿಂಗಿಗಳು ಒಂದು ವೇಳೆ ವೀರಶೈವ ಧರ್ಮದಲ್ಲಿ ಪೂರ್ಣ ಭಕ್ತಿ ವಿಶ್ವಾಸಗಳನ್ನಿಟ್ಟು ಈ ಸಂಘಕ್ಕೆ ಪ್ರಾರ್ಥನೆಮಾಡಿಕೊಂಡಲ್ಲಿ ಪುರಾತನರ ನೇಮದಂತೆ ಅವರಿಗೆ ಲಿಂಗದೀಕ್ಷೆಕೊಟ್ಟು ವೀರಶೈವರನ್ನಾಗಿ ಮಾಡಿಕೊಳ್ಳುವದೂ ಮತ್ತೊಂದು ಉದ್ದೇಶ. ಈ ಉದ್ದೇಶಗಳನ್ನು ಅಮಲಿನಲ್ಲಿ ತರಲು ಒಪ್ಪಿಕೊಂಡಂಥ ಮಹಾಜನರು ಈ ಪ್ರತಿಜ್ಞಾ ಪತ್ರಕ್ಕೆ ತಮ್ಮ ಸಹಿಮಾಡಿದ್ದಾರೆ—

ಮಿತಿ|| ಭಾದ್ರಪದ ಶು. ೨ ಶ, ೧೮೫೬

೧ ಚನ್ನವೀರಪ್ಪ ಸಂಗಪ್ಪ ಶೆಟ್ಟರ
೨ ಶಿದ್ಧಲಿಂಗಪ್ಪ ರುದ್ರಪ್ಪ ಕಂಠಿ
೩ ಚನ್ನಬಸಪ್ಪ ರೇವಣಸಿದ್ಧಪ್ಪ ಹರಿಹರ
೪ ಮಹಾಂತಪ್ಪ ಶಿವರುದ್ರಪ್ಪ ಗೊಂಗಡಶೆಟ್ಟಿ
೫ ಮಹಾಂತಪ್ಪ ಮಲ್ಲಪ್ಪ ಚನ್ನಿ
೬ ಮಹಾಂತಪ್ಪ ಚನ್ನವೀರಪ್ಪ ಶೆಟ್ಟರ
೭ ಶಿವಪ್ಪ ವೀರಪ್ಪ ಅಕ್ಕಿ
೮ ರೇವಣಸಿದ್ಧಪ್ಪ ಮಡಿವಾಳಪ್ಪ ಹರಿಹರ
೯ ಶಿವರುದ್ರಪ್ಪ ಬಸಪ್ಪ ಗೊಂಗಡಶೆಟ್ಟಿ
೧೦ ಸಂಗಪ್ಪ ಚಂದಪ್ಪ ಕರಡಕಲ್ಲ
೧೧ ಶಿವಪ್ಪ ರುದ್ರಪ್ಪ ಕೊಡಗಲಿ
೧೨ ವೀರಪ್ಪ ವೀರಬಸಪ್ಪ ಬಾಳೀಕಾಯಿ
೧೩ ಬಸವನಗೌಡ ದೇವೇಂದ್ರಗೌಡ ಮೆಣಸಿಗಿ
೧೪ ಕಾಶೀನಾಥ ಶಾಸ್ತ್ರಿ ನೆರೆಗಲ್ಲ
೧೫ ಕೆ. ಪ್ಹಿ. ರಾಯನಗೌಡರ
೧೬ ಪ್ರಭಣ್ಣ ಚನಬಸಪ್ಪ ಬಳಗಾನೂರ
೧೭ ಜಿ. ಎಮ್. ಸಜ್ಜನ ಬಿ. ಎ.
೧೮ ರುದ್ರಪ್ಪ ಸಿದ್ಧಲಿಂಗಪ್ಪ ಕಂಠಿ
೧೯ ಮಹಾಂತಪ್ಪ ಅಚ್ಚಳ್ಳಿ
೨೦ ಬಸಪ್ಪ ಪರಪ್ಪ ಸೊಬರದ
೨೧ ಪರನಗೌಡ ಸಿದ್ಧನಗೌಡ ಪಾಟೀಲ
೨೨ ಮರಿಗೌಡ ಮಲ್ಲನಗೌಡ ಪಾಟೀಲ
೨೩ ಬಸನಗೌಡ ಪರನಗೌಡ ಪಾಟೀಲ
೨೪ ಮಹಾಂತಪ್ಪ ಚೋಳಪ್ಪ ಸೂಡಿ
೨೫ ಬಸಪ್ಪ ವೀರಪ್ಪ ನಿಡಸೋಸಿ
೨೬ ಕರಬಸಪ್ಪ ಗುರಪ್ಪ ನಿಡಸನೂರ
೨೭ ರುದ್ರಯ್ಯಾ ಮಹಾರುದ್ರಯ್ಯ ಮಠದ
೨೮ ಈಶ್ವರಪ್ಪ ಸೂಗೂರೆಪ್ಪ ಕವಿಶೆಟ್ಟಿ
೨೯ ಪರಪ್ಪ ಮಹಾಮಲ್ಲಪ್ಪ ಜಾಪಗಾಲ
೩೦ ಷಣ್ಮುಖಪ್ಪ ಚನ್ನಬಸಪ್ಪ ದೋಟಿಹಾಳ
೩೧ ವೀರಪ್ಪ ಶಿವಲಿಂಗಪ್ಪ ರಾಜಮನಿ
೩೨ ಬಸವಶೆಟ್ಟೆಪ್ಪ ಮಹಾಂತಪ್ಪ ಕಾವಲಿ
೩೩ ಕರಕಪ್ಪ ಬಸವಲಿಂಗಪ್ಪ ಪಟ್ಟಣಶೆಟ್ಟಿ
೩೪ ಹಾವಪ್ಪ ಕೊಟ್ರಪ್ಪ ಪಟ್ಟಣಶೆಟ್ಟಿ
೩೫ ಗುರುಬಸವಪ್ಪ ಬಸಪ್ಪ ನಾಲವಾಡ
೩೬ ರಾಚಪ್ಪ ಶರಬಣ್ಣ ಕನಕೇರಿ
೩೭ ಕಳಕಪ್ಪ ಭೀಮಣ್ಣ ನೀಲಗಾರ
೩೮ ಗಂಗಪ್ಪ ಭೀಮಪ್ಪ ನೀಲಗಾರ
೩೯ ವೀರಪ್ಪ ಹುಚ್ಚಪ್ಪ ಗೋನಾಳ
೪೦ ವೀರಭದ್ರಪ್ಪ ನೂರಂದಪ್ಪ ಕನಕೇರಿ
೪೧ ವೀರಪ್ಪ ಮಲಕಾಜಪ್ಪ ಚನ್ನಿ
೪೨ ಸಂಗಪ್ಪ ಬಸಲಿಂಗಪ್ಪ ಹೊರವ್ಯಾಟಿ
೪೩ ವೀರಬಸಪ್ಪ ಚಿನ್ನಪ್ಪ ನಾಲ್ವಾಡ
೪೪ ವೀರಪ್ಪ ಬಸಪ್ಪ ನಾಲ್ವಾಡ
೪೫ ಚನ್ನಪ್ಪ ಬಸಪ್ಪ ಪಟ್ಟಣಶೆಟ್ಟಿ ಬಲಕುಂದಿ
೪೬ ಷಣ್ಮುಖಪ್ಪ ಸಂಗಪ್ಪ ತಾಳೀಕೋಟಿ
೪೭ [illegible]
೪೮ [illegible] ಗೋನಾಳ
೪೯ ವೀರಬಸಪ್ಪ ಹಿಂದಗಿ
೫೦ ಸಂಗನಗೌಡ ಕೋಟೆಪ್ಪಗೌಡ ಪಾಟೀಲ
೫೧ ಈಶ್ವರಪ್ಪ ಮಹಾಂತಪ್ಪ ಶೆಟ್ಟರ
೫೨ ಚನ್ನನಗೌಡ ಲಿಂಗನಗೌಡ ಚಳಗೇರಿ
೫೩ ವೀರಭದ್ರಪ್ಪ ದೊಡ್ಡಪ್ಪ ಕರಡಿ
೫೪ ಆದಪ್ಪ ಮಲ್ಲಪ್ಪ ಕುಟಗಮರಿ
೫೫ ಸಂಗಪ್ಪ ಅಮರಪ್ಪ ಬುದ್ದಿನ್ನಿ
೫೬ ಚನ್ನಪ್ಪ ವೀರಪ್ಪ ಸಜ್ಜನರ
೫೭ ಚಿನ್ನಪ್ಪ ಬಸಪ್ಪ ಮುದಗಲ್ಲ
೫೮ ವೀರಪ್ಪ ಬಸಪ್ಪ ಮುದಗಲ್ಲ
೫೯ ನಾಗಪ್ಪ ವೀರಭದ್ರಪ್ಪ ಚನ್ನಿ
೬೦ ಪರಪ್ಪ ತಿಪ್ಪಣ್ಣ ಕಸ್ತೂರಿ
೬೧ ಅಡಿವೆಪ್ಪ ಜಂಬಣ್ಣ ಕಸ್ತೂರಿ
೬೨ ಶಿವಲಿಂಗಪ್ಪ ರುದ್ರಪ್ಪ ಕಂಠಿ
೬೩ ವೀರಪ್ಪ ಶಂಕರಪ್ಪ ಬಳ್ಳೊಳ್ಳಿ

ಸೆಕ್ರೆಟರಿ, ಚನ್ನಬಸಪ್ಪ ರೇವಣಸಿದ್ಧಪ್ಪ ಹರಿಹರ

ಔಂಧ ಸಂಸ್ಥಾನಿಕರ ಯಶಸ್ವಿ ರಾಜ್ಯಕಾರಭಾರ.

ಕಳೆದ ತಿಂಗಳ ೧೬ ನೆಯ ತಾರೀಖಿಗೆ ಔಂಧ ಸಂಸ್ಥಾನಾಧಿಪತಿಗಳು ಪಟ್ಟವೇರಿ ೨೫ ವರ್ಷಗಳಾದವು. ಇವರ ಪೂರ್ವಜರು ೬ ಲಕ್ಷ ಆದಾಯವುಳ್ಳ ಆಸ್ತಿಗೆ ಒಡೆಯರಾಗಿದ್ದರೂ ಅವರು ಮೇಲಧಿಕಾರಿಗಳೊಡನೆ ಸಹಕರಿಸಿ ನಡೆಯಲಿಲ್ಲವಾದುದರಿಂದ ೬೦ ಸಾವಿರ ಆದಾಯದ ರಾಜ್ಯವಷ್ಟೇ ಇವರ ಪಾಲಿಗೆ ಉಳಿಯಿತು. ಆದರೆ ಸದ್ಯದ ಉತ್ಪನ್ನವು ೪|| ಲಕ್ಷ ರೂ. ಆಗಿದೆ. ಇವರಿಗೆ ಹಾಯಕೋರ್ಟಿನ ಅಧಿಕಾರವು ಕೊಡಲ್ಪಟ್ಟಿದೆ. ಆದರೆ ದಕ್ಷಿಣ ಸಂಸ್ಥಾನಗಳಿಗೆಲ್ಲಕ್ಕೂ ಒಂದೇ ಹಾಯಕೋರ್ಟಿದ್ದರೆ ನೆಟ್ಟಗೆಂದು ಇವರು ಪ್ರಯತ್ನಿಸುತ್ತಿರುವರು. ಇವರು ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿ ಅದರ ಅಧ್ಯಕ್ಷಸ್ಥಾನವನ್ನು ಪ್ರಜೆಗಳಿಗೆ ಕೊಟ್ಟಿದ್ದಾರೆ. ಇದರಲ್ಲಿ ಸ್ತ್ರೀಯರಿಗೂ ಸದಸ್ಯತ್ವವಿರುವದು

ಇವರು ಸಂಸ್ಥಾನದಲ್ಲಿ ಬೆಳೆದ ಹತ್ತಿಯ ಕೈನೂಲಿನ ಬಟ್ಟೆಗಳನ್ನೇ ಧರಿಸುತ್ತಾರೆ. ಪ್ರಾತಿನಿಧಿಕ ಸಭೆಯವರು ಸಂಸ್ಥಾನಿಕರಿಗಾಗಿ ನಿರ್ಣಯಿಸಿದ ಹಣಕ್ಕಿಂತಲೂ ಕಡಿಮೆ ಇವರ ವೆಚ್ಚವಿರುತ್ತದೆ. ಇವರ ಹಳ್ಳಿಗಳಿಗೆಲ್ಲ ಶಾಲೆಗಳಿವೆ. ಔದ್ಯೋಗಿಕ ಪ್ರದರ್ಶನಗಳೂ ನೆರವೇರಿಸಲ್ಪಡುತ್ತಲಿವೆ. ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಕೈನೂಲನ್ನು ತೆಗೆಯಲು ಕಲಿಸಲಾಗುವದು. ಅವರು ಉತ್ತಮವಾದ ನೂಲು ತೆಗೆಯ ಹತ್ತಿದರೆ ಅದನ್ನು ಸರಕಾರದವರೇ ಕೊಂಡುಕೊಂಡು ಯೋಗ್ಯಬೆಲೆ ಕೊಡುವರು. ಎಲ್ಲ ವಿದ್ಯಾರ್ಥಿಗಳು ಸೂರ್ಯ ನಮಸ್ಕಾರ ವ್ಯಾಯಾಮ ಮಾಡಬೇಕೆಂಬ ನಿರ್ಬಂಧವಿದೆ. ಅಸ್ಪೃಶ್ಯತೆಯು ಶಾಲೆಗಳಲ್ಲೆಲ್ಲ ತೆಗೆದು ಹಾಕಲ್ಪಟ್ಟಿದೆ. ಆದಿಜನರ ಮಕ್ಕಳು ಉಳಿದ ಬಾಲಕರೊಡನೆ ಸಂಸ್ಥಾನಿಕರ ಮಕ್ಕಳ ಸಂಗಡ ಸಹ ಒಂದೇ ವರ್ಗದಲ್ಲಿರುವರು. ಔಂಧದಲ್ಲಿ ವಿವಿಧ ವಿಷಯದ ಗ್ರಂಥಗಳುಳ್ಳ ಒಂದು ದೊಡ್ಡ ಪುಸ್ತಕಾಲಯವಿದೆ. ಪ್ರಜೆಗಳು ಬೇನೆಬಿದ್ದರೆ ಸಂಸ್ಥಾನದ ತಾಲೂಕುಗಳಲ್ಲೆಲ್ಲ ಔಷಧವು ಉಚಿತವಾಗಿ ದೊರೆಯುತ್ತದೆ. ಇದರಿಂದ ಪ್ರತಿವರ್ಷ ೨೦ ಸಾವಿರ ಪ್ರಜೆಗಳು ಔಷಧ ಹೊಂದುತ್ತಾರೆ.

ಇವರ ಸಂಸ್ಥಾನದಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಪ್ರಸಿದ್ಧಿಯನ್ನು ಪಡೆದಿರುವ ಕಿರ್ಲೋಸ್ಕರ ಕಂಪನಿಯ ಕಬ್ಬಿಣ ಯಂತ್ರ ಸಿದ್ಧಗೊಳಿಸುವ ಕಾರ್ಯಾಲಯವೂ ಓಗಲೆ ಗ್ಲಾಸ್ ವರ್ಕ್ಸ ಎಂಬ ಕಾಜಿನ ಪದಾರ್ಥಗಳನ್ನು ಸಿದ್ಧಗೊಳಿಸುವ ಕಾರ್ಯಾಲಯವೂ ಇರುತ್ತವೆ. ಉತ್ತಮವಾಗಿ ನೂಲು ಹೊರಡುವ ಮತ್ತು ದಿನಕ್ಕೆ ೮ ಆಣೆಯವರೆಗೆ ಕೂಲಿಸಿಗಬಹುದಾದ ರಾಟೆಯ ಯಂತ್ರವನ್ನು ಇವರ ಸಂಸ್ಥಾನದಲ್ಲಿ ಶ್ರೀ ಕಾಳೆಯವರು ಶೋಧಿಸಿದ್ದಾರೆ. ಇದಲ್ಲದೆ ಇವರು ಚಿತ್ರಕಲೆಗೂ ಒಳ್ಳೇ ಪ್ರೋತ್ಸಾಹಿಸಿದ್ದಾರೆ. ಸಂಸ್ಥಾನದ ಕಬ್ಬಿನ ಹುಟ್ಟುವಳಿಯ ಮೇಲಿಂದ ಅಲ್ಪ ಪ್ರಮಾಣದಲ್ಲಿ ಸಕ್ಕರೆ ತಯಾರಿಸುವ ಕಾರ್ಯಕ್ಕೂ ಪ್ರಯತ್ನಿಸಿದ್ದಾರೆ.

ಇವರ ಎಲ್ಲಕ್ಕೂ ಸ್ತುತ್ಯ ಉಪಕ್ರಮವೆಂದರೆ ರೈತರ ಉದ್ಧಾರ, ಅವರನ್ನು ಋಣಮುಕ್ತರನ್ನಾಗಿ ಮಾಡುವದಕ್ಕಾಗಿ ಇವರು ೨೦ ಸಾವಿರ ರೂ. ಗಳನ್ನು ಪ್ರಾರಂಭಕ್ಕೆ ತೆಗೆದಿಟ್ಟು ಅದರಿಂದ ಮೊದಲು ನಾಲ್ಕೈದೇ ಗ್ರಾಮಗಳ ಋಣವಿಮೋಚನೆ ಮಾಡಲು ಎತ್ನಿಸುವರು. ಸರಕಾರವು ಕೊಟ್ಟ ಸಾಲವನ್ನು ಹಳ್ಳಿಗರು ೧೦ ವರ್ಷಗಳಲ್ಲಿ ಕಂತಿನಂತೆ ತೀರಿಸಬೇಕು. ಈ ಸಾಲಕ್ಕೆ ಬಡ್ಡಿಯಿಲ್ಲ. ಸಾಲಕ್ಕಾಗಿ ಸರಕಾರದ ಸಾಲತಂದವರು ಬೇರೆ ಕಡೆಗೆ ಮತ್ತೆ ಸಾಲಮಾಡದಂತೆ ಎಚ್ಚರಿಕೆಯನ್ನು ತೆಗೆದುಕೊಳ್ಳಲಾಗುವದು.

ಇನ್ನೊಂದು ವಿಶೇಷವೆಂದರೆ ಒಕ್ಕಲಿಗರು ಸರಕಾರಿ ತೆರಿಗೆಯನ್ನು ಕಾಳಿನ ರೂಪದಲ್ಲಿ ಕೊಡಬಹುದು ಇಲ್ಲವೆ ನೂಲು ನೂತು ಕೊಟ್ಟರೂ ತೆಗೆದುಕೊಳ್ಳುವರು. ಇದರಿಂದ ಮನೆಯ ಹೆಣ್ಣುಮಕ್ಕಳೇ ಮನೆಯಲ್ಲಿ ದುಡಿದು ತೆರಿಗೆಯನ್ನು ತೀರಿಸಬಹುದು.

ಈ ಸಂಸ್ಥಾನಿಕರ ಗ್ರಾಮೋದ್ಧಾರದ ತತ್ವಗಳು

೧ ಮೊದಲು ಒಕ್ಕಲಿಗನು ಋಣಮುಕ್ತನು ಹೇಗಾಗುವನೆಂಬುದನ್ನು ನೋಡಬೇಕು.

೨ ಪುನಃ ಅವನು ಸಾಲಮಾಡದಂತೆ ಮಿತವ್ಯಯದಿಂದಿರಲು ಅವನಿಗೆ ಕಲಿಸಬೇಕು.

೩ ಹೊಲದ ಕೆಲಸವನ್ನು ಮಾಡಿ ಉಳಿದ ವೇಳೆಯಲ್ಲಿ ಅವನು ಮತ್ತು ಅವನ ಕುಟುಂಬಲ್ಲಿಯ ಸಮರ್ಥರಾದ ವಯಸ್ಸಿನ ಜನರು ಏನಾದರೊಂದು ಉದ್ಯೋಗ ಮಾಡಿ ತಮ್ಮ ಸಂಪಾದನೆಯನ್ನು ಹೆಚ್ಚಿಸಿಕೊಳ್ಳಬೇಕು.

೪ ಎಲ್ಲ ಹಳ್ಳಿಗಳ ವ್ಯವಸಾಯಕ್ಕೆ ತಕ್ಕ ಹೊಲಗಳೆಲ್ಲವೂ ಚಳಿಗಾಲದಲ್ಲಿ ಮತ್ತು ಬೇಸಿಗೆಯಲ್ಲಿ ರೆಂಟೆ ಮತ್ತು ಗಳೆ ಹೊಡೆಯಲ್ಪಟ್ಟು ಸಿದ್ಧವಾಗಿರುವಂತೆ ಹಳ್ಳಿಯ ಒಕ್ಕಲಿಗ ಸಂಘದವರು ನೋಡಿಕೊಳ್ಳಬೇಕು.

೫ ಹಳ್ಳಿಗಳಿಗೆ ಅವಶ್ಯಕವಿರುವ ಧಾನ್ಯ, ಹುಲ್ಲು ಇವು ಮೊದಲಿಗೆ ಬೆಳೆದುಬರುವಂತೆ ಇಂಥ ಧಾನ್ಯಗಳನ್ನು ಮೊದಲು ಬಿತ್ತಬೇಕು. ನಂತರ ಹತ್ತಿ, ಶೇಂಗಾ, ಕಬ್ಬು ಮೊದಲಾದವುಗಳನ್ನು ಬಿತ್ತಬೇಕು.

೬ ಹಳ್ಳಿಯ ಸಣ್ಣ ದೊಡ್ಡ ದಿವಾಣಿ ಮತ್ತು ಫೌಜದಾರಿ ವ್ಯಾಜ್ಯಗಳನ್ನು ಹಳ್ಳಿಯ ಪಂಚರೇ ತೀರಿಸಬೇಕು; ತೀರ ನಿರ್ವಾಹವಿಲ್ಲದ ಪಕ್ಷದಲ್ಲಿ ಕೋರ್ಟಿಗೆ ಹೋಗಬಹುದೆಂಬ ನಿರ್ಬಂಧವಿರಬೇಕು.

೭ ಪ್ರತಿಯೊಂದು ಸಣ್ಣ ಮನೆಗೂ ಸಹ ಒಂದಾದರೂ ಆಕಳು ಇರತಕ್ಕದ್ದು; ಮತ್ತು ಐದು ಎಕರೆ ಭೂಮಿಗೆ ಒಂದರಂತೆ ಯತ್ತು ಇರತಕ್ಕದ್ದು.

೮ ದನಗಳ ಸೆಗಣಿಯನ್ನು ಸುಡಲಿಕ್ಕೆ ಉಪಯೋಗಿಸಲಾಗದು. ಉರುವಲಕ್ಕೆ ಬೇಕಾದರೆ ಹೊಲದ ಒಡ್ಡಿಗೆ ಇಲ್ಲವೆ ಹಳ್ಳದ ದಂಡೆಗೆ ಗಿಡಗಳನ್ನು ಬೆಳೆಯಿಸಿ ಅವನ್ನು ಉಪಯೋಗಿಸಿಕೊಳ್ಳಬೇಕು. ಗೊಬ್ಬರವನ್ನು ಹೊಲದಲ್ಲಿ ತಗ್ಗು ತೋಡಿ ಸಂಗ್ರಹಿಸಿ ಉಪಯೋಗಿಸಿಕೊಳ್ಳಬೇಕು.

೯ ಪ್ರತಿಯೊಬ್ಬ ಒಕ್ಕಲಿಗನು ಆದಷ್ಟು ಆಡು ಕುರಿಗಳನ್ನು ಸಾಕಬೇಕು. ಅವಕ್ಕೆ ವಿಶೇಷ ಹುಲ್ಲುಮೇವು ಬೇಕಾಗಿಲ್ಲ. ಹಾಗೂ ಅವು ಹೊಲದಲ್ಲಿ ನಿಂತರೆ ಹಿಕ್ಕಿಗಳಿಂದ ಉತ್ತಮ ಗೊಬ್ಬರದ ಪೂರೈಕೆಯಾಗುವದು. ಅವುಗಳ ಉಣ್ಣೆಯಂತೂ ಒಳ್ಳೇ ಉಪಯೋಗವಿದೆ.

೧೦ ಹಳ್ಳಿಯ ಸ್ತ್ರೀ, ಪುರುಷ, ಪ್ರತಿಯೊಬ್ಬರೂ ಅಕ್ಷರಜ್ಞರಾಗುವಂಥ ಮತ್ತು ಅವರಿಗೆ ತಮ್ಮ ಹಿತ, ಸರಕಾರದ ರಾಜ್ಯವ್ಯವಸ್ಥೆ, ಸಾವುಕಾರನ ಸಾಲದ ಸಂಕಟ, ಸದಾಚಾರ, ಸದ್ಧರ್ಮ, ಸಹಕಾರಗಳ ತಿಳಿವು ಉಂಟಾಗುವಂಥ ಶಾಲೆಗಳನ್ನು ಪ್ರತಿಯೊಂದು ಹಳ್ಳಿಗೂ ಸ್ಥಾಪಿಸಬೇಕು.

೧೧ ಇವೆಲ್ಲ ಸುಧಾರಣೆಗಳನ್ನು ಹಳ್ಳಿಯ ಗೌಡ, ಕಾನುಬೋವರೂ, ಶಾಲೆಯ ಮಾಸ್ತರರೂ ಮಾಡುವದೂ ಮತ್ತು ಅವರ ಮೇಲೆ ತಾಲೂಕಿನ ಮಾಮಲೇದಾರನು ಯೋಗ್ಯ ನಿರೀಕ್ಷಣೆಮಾಡುತ್ತಿರುವ ಬಗ್ಗೆ ದರಬಾರದಿಂದ ವ್ಯವಸ್ಥೆಯಾಗುವದೂ ಅವಶ್ಯವಿದೆ.

ಹೀಗಾದರೆ ೧೦ ವರ್ಷಗಳಲ್ಲಿ ಗ್ರಾಮೋದ್ಧಾರದ ವಿಷಯದಲ್ಲಿ ಸ್ವಲ್ಪಾದರೂ ಅಭಿವೃದ್ಧಿಯಾಗುವದೆಂಬುದರಲ್ಲಿ ಸಂಶಯವಿಲ್ಲ.

ಪಂಡಿತ ಶ್ರೀ. ಗೌರೀಶಂಕರ ಶಾಸ್ತ್ರಿಗಳವರ ಭಾಷಣ.

[ಶ್ರೀಮನ್ನಿರಂಜನ ಜ. ಜಯದೇವ ಮಹಾಸ್ವಾಮಿಗಳ "ಶ್ರೀ ಬೋರ್ಡಿಂಗಿನಲ್ಲಿ" ಶ್ರೀ ಬಸವ ಜಯಂತಿಯ ಸಮಯದಲ್ಲಿ ವಿದ್ಯಾರ್ಥಿಗಳಿಗಾಗಿ ಮಾಡಿದುದು.]

ಸಂಗ್ರಾಹಕರು— ಶ್ರೀ ಸಿದ್ಧಬಸವದೇವರು ತಾಳೀಕೋಟಿ, ವಾಸಸ್ಥಳ ಕಾಶೀ.

"ಸಮುದ್ರದಲ್ಲಿ ಹಡಗಗಳು ಸುರಕ್ಷಿತವಾಗಿ ಹೋಗುಬರುವುದರ ಅನುಕೂಲತೆಗಾಗಿ ಬಲ್ಲವರು ಮಾರ್ಗವನ್ನು ಕಂಡುಹಿಡಿದು ಅಲ್ಲಿ ದೀ ಪ ಸ್ತಂ ಭ ಗ ಳ ನ್ನೇ ರ್ಪ ಡಿ ಸು ವ ದುಂ ಟು. ಅದರಿಂದ ಹಡಗಗಳು ರಾತ್ರಿಯಲ್ಲಿಯು ಕೂಡ ತಮ್ಮ ಪ್ರಯಾಣವನ್ನು ಮಾಡಬಲ್ಲವು. ಮತ್ತು ತಮ್ಮ ಸಂಕೇತ ಸ್ಥಾನವನ್ನು ಯಾವ ಆತಂಕವಿಲ್ಲದೆ ಸೇರಬಲ್ಲವು." ಎಂದು ೧೮ ನೆಯ ಶತಮಾನದಲ್ಲಿ ಆಗಿಹೋದ ಒಬ್ಬ ಇಂಗ್ಲಿಷ ಕವಿಯು ಹೇಳಿರುವನು. ಅದರಂತೆಯೇ ಈ ಸಂಸಾರವೆಂಬ ಸಮುದ್ರದಲ್ಲಿ ಸೂಕ್ಷ್ಮ ಶರೀರವೇ ಹಡಗವಾಗಿದೆ. ಈ ಹಡಗವನ್ನು ನಡಿಸುವಾತನು ಜೀವಾತ್ಮನಾಗಿದ್ದಾನೆ. ಮಹಾತ್ಮರ, ಮಹನೀಯರ ಸದಾಚಾರ, ಸದುಪದೇಶ, ಸದ್ವಾಕ್ಯಗಳೇ ಈ ಸಂಸಾರವೆಂಬ ಸಾಗರದಲ್ಲಿರಬೇಕಾದ ದೀಪಸ್ತಂಭಗಳಾಗಿವೆ. ಇವುಗಳ ಸಹಾಯದಿಂದಲೇ ಜೀವಾತ್ಮನು ಅಜ್ಞಾನವೆಂಬ ಕತ್ತಲೆಯಲ್ಲಿಯು ಕೂಡ ತನ್ನ ಹಡಗವನ್ನು ತನ್ನ ಸಂಕೇತ ಸ್ಥಾನಕ್ಕೆ (ಮೋಕ್ಷಕ್ಕೆ) ನಡೆಯಿಸಿಕೊಂಡುಹೋಗಲು ಸಮರ್ಥನಾಗಬಲ್ಲನು. ಮುಂದೆ ಪಂಡಿತರು ಹೇಳಿದುದೇನೆಂದರೆ— ಮ ಹಾ ತ್ಮ ರ ಸದಾಚಾರವನ್ನೇ ನಾವು ಧ್ಯೇಯವಾಗಿಟ್ಟುಕೊಳ್ಳುವುದರಿಂದ ಮುಕ್ತಿಯು ದೊರೆಯಬಲ್ಲದೆಂದಬಳಿಕ, ಶಾಸ್ತ್ರಗಳ ಅಧ್ಯಯನದಿಂದಲಾದರೂ ಪ್ರಯೋಜನವೇನು? ಎಂಬ ಸಂದೇಹವು ಸರ್ವರಿಗೂ ಉಂಟಾಗುವದು ಸಹಜವೇ ಸರಿ. ಎಂದ ಮೇಲೆ ಇದರ ಮೇಲಿಂದಲೇ ಶಾಸ್ತ್ರಗಳ ಅಧ್ಯಯನವನ್ನು ಬಿಡಬೇಕೆಂಬರ್ಥಲ್ಲ. ಆದರೆ ಶಾಸ್ತ್ರಗಳು ಬಹಳ ಗೂಢ ಮತ್ತು ಘನವಾಗಿರುವುದರಿಂದ ಅವನ್ನು ಸಾದ್ಯಂತವಾಗಿ ತಿಳಿದುಕೊಂಡು ಆಚರಿಸುವದು ಸಾಧಾರಣ 'ಜನರ ಮಾತೇ ಅಲ್ಲ. ಏಕೆಂದರೆ ಶಾಸ್ತ್ರದಲ್ಲಿ ಒಂದು ಕಡೆ **ಅಹಿಂಸಾ ಪರಮೋ ಧರ್ಮಃ** "ಹಿಂಸೆಯನ್ನು ಮಾಡದಿರುವುದೇ ಶ್ರೇಷ್ಠವಾದ ಧರ್ಮ" ಎಂದು ಉಲ್ಲೇಖವಿದ್ದಾಗ ಮತ್ತೊಂದುಕಡೆ **ಅಗ್ನಿಷ್ಟೋಮೀಯಂ ಪಶುಮಾಲಭೇತ** "ಅಗ್ನಿಷ್ಟೋಮಯಾಗದಲ್ಲಿ ಪಶು ಹಿಂಸೆಯನ್ನು ಮಾಡಬೇಕು." ಎಂದು ಉಲ್ಲೇಖ ಇರುವುದು. ಇದರಿಂದ ಸಾಧಾರಣ ಜನಕ್ಕೆ ಒಂದು ನಿಶ್ಚಿತಮಾರ್ಗವನ್ನೇ ಅನುಸರಿಸಿ ನಡೆಯಲು ಬಹಳೇ ತೊಂದರೆಯಾಗಿ ತೋರುತ್ತದೆ. ಈ ವಿಷಯದಲ್ಲಿ ನನ್ನ ಸ್ವಂತ ಅನುಭವವನ್ನೇ ಇಲ್ಲಿ ಹೇಳುವದು ಅವಶ್ಯವಾಗಿದೆ.

೩-೪ ದಿವಸಗಳ ಹಿಂದೆ ನಾನು ತಿರುಗಾಡುತ್ತ ಹೊರಗಾದ ಮನೆಯೊಳಗೆ ಹೋಗುವಷ್ಟರಲ್ಲಿ ಒಂದು ಬೆಕ್ಕು ಇಲಿಯನ್ನು ತನ್ನ ಬಾಯಿಯೊಳಗೆ ಕಚ್ಚಿಕೊಂಡು ಹೋಗುವುದನ್ನು ನೋಡಿ ಮನಸ್ಸಿಗೆ ಬಹಳೇ ಕಳವಳವಾಗಿ ನನ್ನ ಕೈಯಲ್ಲಿಯ ಛತ್ರಿಯನ್ನು ಬಲವಾಗಿ ಆ ಬೆಕ್ಕಿಗೆ ಒಗೆಯಲು ಅದು ಛತ್ರಿಯ ನೋವನ್ನು ತಾಳಲಾರದೆ ತನ್ನ ಬಾಯೊಳಗಿನ ಇಲಿಯನ್ನು ಬಿಟ್ಟು ಓಡಿಹೋಯಿತು. ಜೀವದಿಂದಿದ್ದ ಆ ಇಲಿಗೆ ಶೈತೋಪಚಾರ ಮಾಡಲು ೩ ತಾಸುಗಳ ವರೆಗಿದ್ದು ಅದಾದರೂ ಸತ್ತುಹೋಯಿತು. ಇದರಿಂದ ನನ್ನ ಮನಸ್ಸಿಗೆ ಮತ್ತಿಷ್ಟು ವ್ಯಥೆಯಾಗಿ ನಾನು ಮಾಡಿದ್ದೆಲ್ಲ ಪಾಪದ್ದೊ ಅಥವಾ ಪುಣ್ಯದ್ದೊ ಎಂದು ಬಹಳೇ ವಿಚಾರಿಸುತ್ತಿರಲು **ತಸ್ಮಾತ್ ಶಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ|** "ಯಾವುದು ಕಾರ್ಯವು, ಯಾವುದು ಅಕಾರ್ಯವು ಎಂಬ ವಿಷಯದಲ್ಲಿ ನಿನಗೆ ಶಾಸ್ತ್ರವೇ ಪ್ರಮಾಣವಾಗಿದೆ" ಎಂಬ ತತ್ವಕ್ಕನುಸಾರವಾಗಿ ಶಾಸ್ತ್ರದ ಕಡೆಗೇನೇ ಹೋಗಬೇಕಾಯಿತು. **ಆತತಾಯಿನಮಾಯಾಂತಂ ಹನ್ಯಾದೇವಾವಿಚಾರಯನ್|** "ಮೇಲೆ ಬರತಕ್ಕ ಹಿಂಸಕನನ್ನು ಪುಣ್ಯಪಾಪಗಳ ವಿಚಾರವಿಲ್ಲದಲೇ ಕೊಲ್ಲತಕ್ಕದ್ದು" ಎಂಬ ಮನುಸ್ಮೃತಿಯ ವಾಕ್ಯವು ನಾನು ಬೆಕ್ಕನ್ನು ಹೊಡೆದದ್ದೇ (ಇಲಿಯಿಂದ ದೂರಮಾಡಿದ್ದೇ) ಯೋಗ್ಯವಾಯಿತೆಂದು ನನಗೆ ಬೆಂಬಲ ಕೊಟ್ಟಿತು. ಇಷ್ಟರಲ್ಲಿ ಸ್ಕಂದ ಪುರಾಣದಲ್ಲಿಯ ಒಂದು ಕಥೆಯು ನೆನಪಿಗೆ ಬಂದಿತು. ಸತತವಾಗಿ ೧೨ ವರ್ಷಗಳ ವರೆಗೆ ಬರಗಾಲವು ಬಿದ್ದಿರುವಾಗ ಒಬ್ಬ ಋಷಿಕುಮಾರನು ನದಿಯಲ್ಲಿ ತನ್ನ ಸ್ನಾನವನ್ನು ಪೂರೈಸಿಕೊಂಡು ಆಶ್ರಮದ ಕಡೆಗೆ ಹೊರಟಾಗ ಮಾರ್ಗಮಧ್ಯದಲ್ಲಿ ಒಬ್ಬ ಭಿಕ್ಷುಕನನ್ನು ಕಂಡನು. ಆ ಭಿಕ್ಷುಕನು ಎಲ್ಲಿಂದಲೋ ಒಂದು ಹಿಡಿ ಕಾಳನ್ನು ತಿರಿದುಕೊಂಡು ಬಂದು ಆ ಕಾಳನ್ನು ಒಂದು ಸಣ್ಣ ತಟ್ಟೆಯಲ್ಲಿ ನೆನೆಹಾಕಿದ್ದನು; ಆ ಕಾಳನ್ನು ನೋಡಿ ಋಷಿಕುಮಾರನು ತನಗೆ ಕೊಡೆಂದು ಬೇಡಲು, ಆ ಭಿಕ್ಷುಕನು ಕೂಡಲೇ ಆ ಕಾಳನ್ನೆಲ್ಲಾ ಬಾಯಿಯಲ್ಲಿ ಹಾಕಿಕೊಂಡನು. ಇದರಿಂದ ಕೃದ್ಧನಾದ ಆ ಋಷಿಕುಮಾರನು ಆ ಭಿಕ್ಷುಕನ ಗಂಟಲನ್ನು ಶಕ್ತಿಯಿಂದ ಹಿಡಿದು ಬಾಯೊಳಗಿನ ಆ ಕಾಳನ್ನು ಹೊರಗೆಹಾಕಿಸಿ ತಾನೇ ತಿಂದುಬಿಟ್ಟನು. ಈ ಸಂಗತಿಯನ್ನೆಲ್ಲ ಆಶ್ರಮದಲ್ಲಿದ್ದ ತನ್ನ ಗುರುವಿಗೆ ತಿಳಿಸಲು **ಅನಂತಂ ನರಕಂ ಗಚ್ಛೇತ್ ಮುಖಾದ್ಗ್ರಾಸಾಪಹರಣ್!** "ಅವನ ಬಾಯೊಳಗಿನ ತುತ್ತನ್ನು ಅಪಹರಿಸಿದ್ದರಿಂದ ನೀನು ಅನಂತ ನರಕವನ್ನು ಅನುಭವಿಸಬೇಕಾಗುವದು" ಎಂದು ಶಿಷ್ಯನಿಗೆ ಆ ಗುರುವು ಹೇಳಿದನು. ಇದರಿಂದ ಬೆಕ್ಕಿನ ಬಾಯೊಳಗಿನ ತುತ್ತಾದ ಇಲಿಯನ್ನು ಬಿಡಿಸಿದ್ದರಿಂದ ನಾನು ಮಾಡಿದ್ದು ಪಾಪದ್ದೇ ಎಂದು ಮತ್ತೆ ತಿಳಿದುಬಂದಿತು. ಶಾಸ್ತ್ರವು ನಾನು ಮಾಡಿದ್ದು ಪಾಪದ್ದೆಂದು, ಮತ್ತೊಮ್ಮೆ ಅದೇ ಶಾಸ್ತ್ರವು ಪುಣ್ಯದ್ದೆಂದು ಹೇಳುವಲ್ಲಿ ಮೊದಲೇ ನೀನು ಬೆಕ್ಕಿನಿಂದ ಇಲಿಯನ್ನು ಬಿಡಿಸಬಾರದೇ ಆಗಿದ್ದಿತು ಎಂದು ನೀವೆಲ್ಲರು ನನಗೆ ಕೇಳಬಹುದು. ಅದರಂತೆ ನಾನು ಮಾಡಿದ್ದರೆ ಮಾತ್ರ ಕೃತ, ಕಾರಿತ, ಅನುಮೋದಿತ ಎಂಬೀ ಮೂರು ಹಿಂಸೆಗಳಲ್ಲಿ ನನಗೆ ಅನುಮೋದಿತ ಹಿಂಸೆಯನ್ನು (ಬೆಕ್ಕು ಮಾಡಿದ ಹಿಂಸೆಯಲ್ಲಿ ಸಹಾನುಭೂತಿಯನ್ನು ತೋರಿಸಿ ಸುಮ್ಮನಿದ್ದ ಪಕ್ಷದಲ್ಲಿ) ಮಾಡಿದಂತಾಗುತ್ತಿದ್ದಿತು.

ಮುಂದೆ ಅವರು ಉಪದೇಶಿಸಿದುದೇನೆಂದರೆ—

ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥಕೋಟಿಭಿಃ| ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ

ಶನಮ್ || "ಪರಪೀಡೆಯೇ ಪಾಪ, ಪರೋಪಕಾರವೇ ಪುಣ್ಯ ಎಂಬ ತತ್ವವನ್ನೇ ಕೋಟಿಗ್ರಂಥಗಳಲ್ಲಿ ಹೇಳಿದೆ ಅದೇ ತತ್ವವನ್ನು ಇಲ್ಲಿ ಅರ್ಧ ಶ್ಲೋಕದಲ್ಲಿ ಹೇಳುವೆನು" "ದುರಿತ ಕರ್ಮವನೊಲ್ಲದಿರು ಪುಣ್ಯವನೆ ಮಾಡು" ಎಂಬ ವ್ಯಾಸ ಮತ್ತು ನಿಜಗುಣ ಶಿವಯೋಗಿಗಳ ತತ್ವಗಳಂತೆ ಬೆಕ್ಕಿನಿಂದ ಇಲಿಯನ್ನು ಬಿಡಿಸುವದು ಪುಣ್ಯವೆಂದೇ ತಿಳಿದುಹೋದಲ್ಲಿ ಶಾಸ್ತ್ರಗಳಲ್ಲಿಯ ಕೆಲವು ತತ್ವಗಳು ಅದನ್ನೇ ಪಾಪವೆಂದು ಹೇಳುವವು. ಇದರಿಂದ ಯಾವದು ದುರಿತ ಕರ್ಮವು ಮತ್ತು ಯಾವುದು ಪುಣ್ಯ ಕರ್ಮವು ಎಂಬುದನ್ನು ನಿರ್ಧರಿಸುವದೇ ಅಶಕ್ಯವಾಗಿದೆ. ಮಹಾತ್ಮಾ ಗಾಂಧಿಯವರು ಎಬ್ಬಿಸಿದ ಖಾದಿ ಆಂದೋಲನವು ನಮ್ಮ ದೃಷ್ಟಿಯಿಂದ ನಮ್ಮ ಭರತಖಂಡಕ್ಕೆ ಬಹಳೇ ಪುಣ್ಯಕರ್ಮವಾದದ್ದಾದರೂ ಲ್ಯಾಂಕೇಶಾಯರದವರಿಗೆ ಮಾತ್ರ ಈ ಚಳವಳಿಯು ಬಹಳೇ ದುರಿತಕರ್ಮವಾದದ್ದಾಗಿದೆ. Rob Peter to pay Paul ಒಬ್ಬನಿಗೆ ಕೊಡುವದಕ್ಕಾಗಿ (ಉಪಕಾರ ಮಾಡುವದಕ್ಕಾಗಿ) ಮತ್ತೊಬ್ಬನನ್ನು ಸುಲಿ" ಇವೇ ಮೊದಲಾದ ಶಾಸ್ತ್ರೀಯ ತತ್ವಗಳನ್ನು ವಿಚಾರಿಸಲು ಅವುಗಳಲ್ಲಿಯೇ ಪರಸ್ಪರವಾಗಿ ಭೇದ ಕಂಡುಬರುತ್ತದೆ. ಎಂದ ಮೇಲೆ ಒಂದೇ ಒಂದು ನಿಶ್ಚಿತವಾದ ತತ್ವವನ್ನು ಕಂಡುಹಿಡಿಯಬಹುದಾದ ಬಗೆಯಾವದರೂ ಹೇಗೆ? ಈ ಮುಂಚೆ ಹೇಳಿದಂತೆ ಈ ಮಾತು ಎಂದರೆ ಶಾಸ್ತ್ರದಿಂದ ಒಂದು ನಿಶ್ಚಿತ ಮಾರ್ಗವನ್ನು ಕಂಡು ಹಿಡಿದು ನಡೆಯುವದು ನಮ್ಮಂಥ ಸರ್ವಸಾಧಾರಣ ಜನರಿಗೆ ಸಾಧ್ಯವೇ ಅಲ್ಲ. ಅಂತೆಯೇ **ಧರ್ಮಸ್ಯ ತತ್ವಂ ನಿಹಿತಂ ಗುಹಾಯಾಂ ಮಹಾಜನೋ ಯೇನ ಗತಃ ಸ ಪಂಥಾಃ**| "ಧರ್ಮದ ತತ್ವವು ಬಹಳೇ ರಹಸ್ಯವಾಗಿದೆ ಆದ್ದರಿಂದ ಮಹಾತ್ಮರು ಹಾಕಿಹೋದ ಮಾರ್ಗವೇ ನಮ್ಮ ಮಾರ್ಗವಾಗಿದೆ" ಎಂದು ಮಹಾಭಾರತದಲ್ಲಿ ಹೇಳಿದಂತೆ, ನಾವೆಲ್ಲರು ಶಾಸ್ತ್ರಗಳ ಕಡೆಗೆ ಹೋಗದೆ ಮಹಾಪುರುಷರು ಮಹಾತ್ಮರು ನಿರ್ಣಯಿಸಿ ಆಚರಿಸಿಹೋದ ಮಾರ್ಗವನ್ನೇ ಅಂತಃಕರಣ ಪೂರ್ವಕವಾಗಿ ಆಚರಿಸುತ್ತ ಹೋಗುವದೇ ನಮಗೆ ಉಚಿತವಾಗಿದೆ

ಕಿಂ ಕರ್ಮ ಕಿಮಕರ್ಮೇತಿ ಕವಯೋಽಪ್ಯತ್ರ ಮೋಹಿತಾಃ| "ಯಾವುದು ಪಾಪ, ಯಾವುದು ಪುಣ್ಯ ಮಾಡದ ಇರುವದು ಎಂಬುದನ್ನು ಕವಿಗಳು ಕೂಡ ತಿಳಿಯದೆ ಮತಿಗೆಟ್ಟವರು ಆಗಿರಲು" ನಮ್ಮಂದವರ ಪಾಡೇನು? ಈ ವಿಷಯದಲ್ಲಿ ಒಬ್ಬ ಶಿವಶರಣರಾದರೂ ಹೇಳಿರುವದೇನೆಂದರೆ—. ....' ಧರ್ಮಾಧರ್ಮದ ದಂದುಗಕ್ಕೊಳಗಾಗಿ ಸಂಸಾರದ ಕೆಟ್ಟಿತಯ್ಯಾ, ಧರ್ಮವೆಂದರಿಯರು, ಅಧರ್ಮವೆಂದರಿಯರು, ನಮ್ಮ ಅಸಂಖ್ಯಾತ ಪುರಾತನರು ನಡೆದು ನುಡಿದು ತೋರಿದ ಮಾರ್ಗವೇ ಧರ್ಮಮಾರ್ಗವೆಂದರಿಯದೆ ಸಂಸಾರವ ಕೆಟ್ಟಿತಯ್ಯ ಅಖಂಡೇಶ್ವರ"

ಆಚರಣವೇ ನಮಗೆ ಬಹಳ ಮಹತ್ವದ್ದಾಗಿರುವುದರಿಂದ ಅದೇ ನಮಗೆ ಆದರ್ಶವಸ್ತುವಾಗಿದೆ. ಆದುದರಿಂದ ಒಳ್ಳೆಯ ಆಚರಣವುಳ್ಳ ಶ್ರೀ ಬಸವೇಶ್ವರ, ಶಿವಾಜಿ ಮೊದಲಾದ ಮಹಾತ್ಮರು ನಮಗೆ ಆದರ್ಶ ಪುರುಷರಾಗಿದ್ದಾರೆ. ಇದೇ ರೀತಿಯಾಗಿ ನಮ್ಮ ಜೀವಿತದ ಪ್ರತಿಯೊಂದು ವಿಭಾಗದಲ್ಲ ಆಯಾಯ ಮಹಾತ್ಮರನ್ನು ಆದರ್ಶವಾಗಿಟ್ಟುಕೊಂಡು ನಾವು ನಡೆಯಬೇಕಾಗಿದೆ. ಇದರಂತೆ ದಿವಸದ ಪ್ರತಿಯೊಂದು ಕ್ಷಣದಲ್ಲಿ ಆ ಮಹಾತ್ಮರ ಆದರ್ಶವನ್ನು ಮುಂದಿಟ್ಟುಕೊಂಡು ನಡೆಯುವದಂತೂ ಬಹಳೇ ಉತ್ತಮವಾದದ್ದಾಗಿದೆ. ಮತ್ತು ಇದೇ ನಮ್ಮ ಮುಖ್ಯ ಕರ್ತವ್ಯವಾಗಿದೆ ಇದು ಶಕ್ಯವಿರದಿದ್ದಲ್ಲಿ ವರ್ಷದಲ್ಲಿ ಒಂದು ಸಲವಾದರೂ ಅವರ ಗುಣ ಚರಿತ್ರಗಳನ್ನು ಸ್ಮರಿಸಿ ಅವನ್ನು ಆದರ್ಶವಾಗಿಟ್ಟುಕೊಂಡು ನಡೆಯಬೇಕಾಗುದು ಅನಿವಾರ್ಯವೇ ಆಗಿದೆ. ಆ ದಿನ ಅವರ ಬಗ್ಗೆ ಧ್ಯಾನ ಸ್ತೋತ್ರಗಳನ್ನು ಮತ್ತು ಅವರ ಉದಾತ್ತ ನಡೆನುಡಿಗಳನ್ನು ಸ್ಮರಣಕ್ಕೆ ತಂದು ಅವರಂತೆ ಶಕ್ಯವಿದ್ದಷ್ಟಿಗೆ ಆಚರಿಸುವ ಪ್ರಯತ್ನಮಾಡುತ್ತ ಹೋಗಬೇಕು ಇಲ್ಲವೆ ಶಕ್ಯವಿದ್ದಲ್ಲಿ ಅವರಿಗಿಂತ ಒಂದು ಹೆಜ್ಜೆಯನ್ನಾದರೂ ಮುಂದೆ ಆಚರಿಸುತ್ತ ಹೋಗುವದಂತೂ ಬಹು ಒಳ್ಳೆಯದೇ ಆಗಿದೆ ಇದೇ ಜಯಂತಿಯು. ಇದೇ ಜಯಂತಿಯ ತಾತ್ಪರ್ಯವು.

ವೀರಶೈವ ಮತವು ಮತ್ತು ಅದರ ಸ್ಥಾಪಕರು.

ಮುಂದೆ ಗುರುಗಳು ಆಪ್ಪಣೆಕೊಡಿಸಿದುದೇನೆಂದರೆ— ಮತಸ್ಥಾಪಕರ ಜಯಂತಿಯನ್ನೇ ಆಚರಿಸುವದು ಯಥಾರ್ಥವಾಗಿದ್ದು ಶ್ರೀ ಬಸವೇಶ್ವರರು ಮತಸ್ಥಾಪಕರಾಗದೆ ಇದ್ದು ಅವರ ಜಯಂತಿಯನ್ನು ಏಕೆ ಆಚರಿಸಬೇಕು? ಎಂದು ನಮ್ಮವರಲ್ಲಿಯ ಕೆಲಕೆಲವರ ಅಭಿಪ್ರಾಯವುಂಟು. ಈ ತರಹದ ಅವರ ಅಭಿಪ್ರಾಯವು ಅಷ್ಟು ಸಮಂಜಸವೂ ಸಪ್ರಮಾಣಿಕವೂ ತೋರುವುದಿಲ್ಲ. ಏಕೆಂದರೆ ಶ್ರೀ ಹನುಮಂತ, ಶ್ರೀಮಹಾರಾಣಾ ಪ್ರತಾಪಸಿಂಹ ಶ್ರೀ ತುಳಸೀದಾಸ ಮತ್ತು ಶ್ರೀಮತಿ ಅಹಲ್ಯಾಬಾಯಿ ಮೊದಲಾದವರು ಯಾವ ಮತಕ್ಕೂ ಸ್ಥಾಪಕರಾಗದೆ ಇದ್ದು ಇವರೆಲ್ಲರ ಜಯಂತಿಯನ್ನು ಆಚರಿಸುವ ಕಾರಣವೇನು? ಎಂದ ಮೇಲೆ ಮತಸ್ಥಾಪಕರದೇ ಜಯಂತಿಯನ್ನು ಆಚರಿಸಬೇಕೆಂಬುದು ನಿರ್ಧಾರಿತವಾದಂತಾಗಲಿಲ್ಲ.

ಶ್ರೀ ಶಂಕರಾಚಾರ್ಯ, ಮಧ್ವಾಚಾರ್ಯ ಮೊದಲಾದವರು ಯಾವ ಯುಕ್ತಿ-ಪ್ರಯುಕ್ತಿಗಳಿಂದ ಮತಸ್ಥಾಪಕರೆಂದು ಹೇಳಿಸಿಗೊಳ್ಳುವರೋ ಅವೇ ಯುಕ್ತಿ-ಪ್ರಯುಕ್ತಿಗಳಿಂದ ಶ್ರೀ ಬಸವೇಶ್ವರರೂ ಮತಸ್ಥಾಪಕರೆಂದು ಹೇಳಿಸಿಗೊಳ್ಳಲು ಯಾವ ಅಭ್ಯಂತರವೂ ಇಲ್ಲ. ಏಕೆಂದರೆ ಯಾಜ್ಞವಲ್ಕ್ಯ ಋಷಿಗಳು ತಮ್ಮ ಮೈತ್ರೇಯಿಯೆಂಬ ಧರ್ಮಪತ್ನಿಯವರಿಗೆ ಮತ್ತು ಅನೇಕ ಋಷಿಗಳು ತಮ್ಮ ತಮ್ಮ ಶಿಷ್ಯರಿಗೆ ಅದ್ವೈತ ತತ್ವ(ಮತ)ವನ್ನುಪದೇಶಿಸಿದ್ದುದು ಉಪನಿಷತ್ತುಗಳಿಂದ ಕಂಡು ಬರುತ್ತದೆ. ಎಂದ ಮೇಲೆ ಪೂರ್ವದಲ್ಲಿದ್ದ ಅದೇ ಅದ್ವೈತ ಮತವನ್ನು ೧೨೦೦ ವರ್ಷಗಳ ಪೂರ್ವದಲ್ಲಿ ಉಪದೇಶಿಸಿ ಹೋದ ಶ್ರೀ ಶಂಕರಾಚಾರ್ಯರು ಆ ಮತಕ್ಕೆ ಹೇಗೆ ಸ್ಥಾಪಕರು? ಅಥವಾ ಸ್ಥಾಪನಾಚಾರ್ಯರು? ಎಂದರೆ ಅದ್ವೈತ ಮತಕ್ಕೆ ಒಂದು ವಿಶಿಷ್ಟ ಸ್ವರೂಪವನ್ನು ಅವರು ತಂದುಕೊಟ್ಟು ಪ್ರಸಾರಮಾಡಿದ್ದರಿಂದ ಆ ಅದ್ವೈತ ಮತದ ಸ್ಥಾಪನಾಚಾರ್ಯರೆಂದು ಅವರಿಗೆ ಹೇಳುವದು ಪ್ರಸಿದ್ಧವಷ್ಟೆ! ಅದರಂತೆ ೧೧ ನೆಯ ಶತಮಾನದ ಅಂತ್ಯದಲ್ಲಿ ಮತ್ತು ೧೨ ನೆಯ ಶತಮಾನದ ಆದಿಭಾಗದಲ್ಲಿ ಶೈವಮತಕ್ಕೆ ವೈದಿಕರ (ಕರ್ಮ ಕಾಂಡಿಗಳ) ಮತ್ತು ಅವೈದಿಕರ ಆಘಾತವು ಮೇಲಿಂದ ಮೇಲೆ ಸಂಭವಿಸುತ್ತಿದ್ದಿತು ಇಂಥ ಸಮಯದಲ್ಲ ಒಬ್ಬ ಮಹಾತ್ಮನ ಅವತಾರವು ಬಹಳೇ ಅವಶ್ಯಕವಾಗಿದ್ದರಿಂದ ಶ್ರೀ ಬಸವೇಶ್ವರರು ಉದಯಿಸಿ ಆ ಶೈವಮತಕ್ಕೆ ವಿಶಿಷ್ಟ ಸ್ವರೂಪವನ್ನು ತಂದುಕೊಟ್ಟದ್ದರಿಂದ ಅದು ವೀರಶೈವ ಮತವೆಂದೆನಿಸಿತು. ಮಾತ್ರ ಅದಕ್ಕೆ ಅವರೇ ಸ್ಥಾಪಕರಾದರು. ಎಂದ ಮೇಲೆ ಇವರ ಜಯಂತಿಯನ್ನು ದರೂ ಆಚರಿಸಲು ಅಭ್ಯಂತರವೇನು?

ರೇಣುಕಾಚಾರ್ಯರೇ ಈ ವೀರಶೈವ ಮತಕ್ಕೆ ಮೂಲವೆಂದು ಒಂದು ವೇಳೆ ನಂಬಿದ ಪಕ್ಷದಲ್ಲಿ ಆ ಆಚಾರ್ಯರು ಶಿವನಿಂದುಕ್ತಗಳಾದ ಆಗಮಗಳನ್ನೇ ಮುಖ್ಯವಾಗಿಟ್ಟುಕೊಂಡು ಧರ್ಮಪ್ರಸಾರ ಮಾಡಿದರೆಂದ ಮೇಲೆ ಈ ಮತವು ಈಶ್ವರ ಪ್ರಣೀತವಾದುದಲ್ಲದೆ ಆಚಾರ್ಯ ಪ್ರಣೀತವು ಹೇಗಾಗುವದು? ಎಂದ ಮೇಲೆ ಆಚಾರ್ಯರಿಗೆ ಮತಸ್ಥಾಪಕರೆಂದು ಹೇಗೆ ಹೇಳಬೇಕು? ಇದಲ್ಲದೆ ಕೆಲವರು ೫ ಮಂದಿ ಆಚಾರ್ಯರೆಂದು ಹೇಳುವುದುಂಟು. ಆದರೆ ಮತಿ (ಬುದ್ಧಿ) ವಿಷಯಕವಾದುದೇ ಮತವಾಗಿದೆ. ಎಂದ ಮೇಲೆ ರೇಣುಕರ ಮತ ವಿಷಯಕವಾದ (ಅವರಿಂದುತ್ಪನ್ನವಾದ) ವೀರಶೈ

ವ ಮತವು ಬೇರೆಯಾಗಿಯೂ ದಾರುಕರ ಮತಿ ವಿಷಯುಕವಾದ ವೀರಶೈವ ಮತವು ಬೇರೆಯಾಗಿಯೂ ಈ ರೀತಿಯಾಗಿ ೫ ಮಂದಿ ಆಚಾರ್ಯರ ಮತಿ ವಿಷಯುಕವಾದ ವೀರಶೈವ ಮತವು ಬೇರೆ ಬೇರೆ ಯಾದಂತಾಯಿತು. ಎಂದ ಮೇಲೆ ಈಗಿರುವ ಒಂದೇ ಈ ವೀರಶೈವ ಮತಕ್ಕೆ ೫ ಮಂದಿ ಹೇಗೆ ಸ್ಥಾಪಕರಾಗುವರು? ಮತಿ ವಿಷಯುಕವಾದುದೇ ಮತವೆಂದು ಶಾಸ್ತ್ರದಿಂದ ತಿಳಿದುಬರುವುದರಿಂದ ರೇಣುಕರ ಮತಿ ವಿಷಯುಕವಾದ ಈ ಮತಕ್ಕೆ ರೇಣುಕರೇ ಸ್ಥಾಪಕರೆಂದು ಹೇಳಬಹುದು. ಎಂದ ಮೇಲೆ ಉಳಿದ ಆಚಾರ್ಯರು ಈ ಮತಕ್ಕೆ ಹೇಗೆ ಕಾರಣರು? ಮತ್ತು ಜಗತ್ತಿನಲ್ಲಿಯ ಪ್ರತಿಯೊಂದು ಮತವು ಈಶ್ವರೋಕ್ತವಾದುದರಿಂದ (ಈಶ್ವರ ಮತಿ ವಿಷಯುಕವಾದುದರಿಂದ) ರೇಣುಕರಾದರೂ ಹೇಗೆ ಮತಸ್ಥಾಪಕರು? ಈಶ್ವರೋಕ್ತಗಳಾದ ಮತಗಳನ್ನು ಯಾರು ಪರಿಶುದ್ಧ ಮಾಡುವರೋ ಇಲ್ಲವೆ ಅವುಗಳಿಗೆ ವಿಶೇಷ ಸ್ವರೂಪವನ್ನು ಕೊಡುವರೋ ಅವರೇ ಆ ಮತಕ್ಕೆ ಸ್ಥಾಪಕರೆಂದು ಹೇಳಬೇಕಾಗಿದೆ. ಎಂದ ಮೇಲೆ ಈ ಮತದಲ್ಲಿ ಅಷ್ಟಾವರಣ, ಪಂಚಾಚಾರ ಮುಂತಾದ ಉಚ್ಚ ತತ್ವಗಳನ್ನು ಶ್ರೀ ಬಸವೇಶ್ವರರು ನಿರ್ಮಿಸಿ ಅವುಗಳಿಂದ ಈ ಮತವನ್ನು ಪರಿಶುದ್ಧ ಮಾಡಿದರೆಂಬುದು ಶಿವಶರಣ, ಶಿವಶರಣೆಯರ ಆಯಾಯ ವಚನಗಳಿಂದ ಒಡೆದು ತೋರುವ ಕಾರಣ ಈ ಮತಕ್ಕೆ ಶ್ರೀ ಬಸವೇಶ್ವರರೇ ಸ್ಥಾಪಕರೆಂದು ಹೇಳುವಲ್ಲಿ ಸಂದೇಹವೇನು? ಈ ವೀರಶೈವ ಮತವನ್ನು ಅವರು ಉಚ್ಚ ಗುಣಗಳಿಂದ ಅತ್ಯಂತ ಪರಿಶುದ್ಧ ಮಾಡಿರುವುದರಿಂದ ಶ್ರೀ ಬಸವೇಶ್ವರರಿಗೆ ಗುಣರತ್ನಾಕರರೆಂದು ಹೇಳಿದರೂ ಅತಿಶಯೋಕ್ತಿಯಾಗಲಾರದು.

ಶ್ರೀ ಬಸವೇಶ್ವರರೂ ಆಶ್ರಮಾವರಣಗಳೂ

ಶ್ರೀ ಶಂಕರಾಚಾರ್ಯ ಮೊದಲಾದವರು ಸನ್ಯಾಸಾಶ್ರಮವನ್ನು ವಹಿಸಿದರೇನೇ ಬ್ರಹ್ಮ ವಿದ್ಯೆಯು ಲಭಿಸುವದು; ಮತ್ತು ಅದರಿಂದ ಮೋಕ್ಷವು ದೊರೆಯುವದೆಂದು ಉಪದೇಶಿಸಿದರು. ಆದರೆ ಶ್ರೀ ಜನಕ ಮಹಾರಾಜರು ಸನ್ಯಾಸಾಶ್ರಮವನ್ನು ವಹಿಸಿಯೇ ಸಂಸಾರದಲ್ಲಿ ಮನಸ್ಸಿನಿಂದ ನಿಷ್ಕಾಮಕರ್ಮಯೋಗಿಗಳಾಗಿದ್ದುದರಿಂದ ಅವರು ಬ್ರಹ್ಮಜ್ಞಾನಿಗಳಾಗಿಯೇ ಹೋದರು ಶ್ರೀ ಜನಕ ಮಹರ್ಷಿಗಳು ಎಂಥ ನಿಷ್ಕಾಮಕರ್ಮಯೋಗಿಗಳಿದ್ದರೆಂಬುದನ್ನು ಅವರೇ ತಮ್ಮ ಒಂದು ವಚನದಲ್ಲಿ ಆಡಿತೋರಿಸಿರುವರು. **ಅನಂತಂ ಬತ ಮೇ ವಿತ್ತಂ ಯಸ್ಯಮೇನಾಸ್ತಿ ಕಿಂಚನ| ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇದಹತಿ ಕಿಂಚನ||** "ಮಿಥಿಲಾ ಪಟ್ಟಣದಲ್ಲಿ ನನ್ನ ದ್ರವ್ಯವು ವಿಪುಲವಾಗಿದ್ದರೂ ಅದರ ಒಂದು ಸ್ವಲ್ಪ ಭಾಗವು ಕೂಡಾ ನನ್ನದಿಲ್ಲ ಮತ್ತು ಮಿಥಿಲಾಪಟ್ಟಣವು ಸುಡುತ್ತಿದ್ದರೂ ನನ್ನದೇನೂ ಸುಡುವಂತಿಲ್ಲ." ಈ ರೀತಿಯಾಗಿ ಅವರು ಕರ್ಮಯೋಗಿಗಳಾಗಿಯೇ ತಮ್ಮ ಇಷ್ಟವಸ್ತುವನ್ನು (ಮೋಕ್ಷವನ್ನು) ಹೊಂದಿದರು. ಅದನ್ನೇ ಈ ಮುಂದಿನ ಶ್ಲೋಕವು ದೃಢೀಕರಿಸುತ್ತಿದೆ "**ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾಃ ಜನಕಾದಯಃ**"

ಮುಂದೆ ಶ್ರೀ ಪಂಡಿತರು ಸ್ಪಷ್ಟಪಡಿಸಿದುದೇನೆಂದರೆ— ನಮ್ಮ ಬಸವೇಶ್ವರರು ಈ ಸಂಸಾರದಲ್ಲಿ ಕರ್ಮಜ್ಞಾನಗಳೆರಡೂ ಮುಕ್ತಿಗೆ ಸಮಾನಗಳಾದ ಸಾಧನಗಳೆಂದು ಪ್ರತಿಪಾದಿಸಿ ಅದರಂತೆ ನಡೆದು ತೋರಿಸಿದರು. ಈ ತತ್ವವನ್ನೇ ಅವರು ಈ ಕೆಳಗಿನ ಎರಡು ವಚನಗಳ ಪ್ರಮಾಣದಿಂದ ದೃಢೀಕರಿಸಿರುವರು.

ಧಾರುಣಿಯ ಮೇಲೊಂದು ಅಂಗಡಿಯನಿಕ್ಕಿ ಹರದಕುಳ್ಳಿರ್ದ ನಮ್ಮ ಮಹಾದೇವಶೆಟ್ಟಿ| ಒಮ್ಮನವಾದಡೆ ಒಡನೆ ನುಡಿವನು. ಇಮ್ಮನವಾದಡೆ ನುಡಿಯನು| ಕಾಣೆಯ ಸೋಲ ಅರ್ಥಕಾಣೆಯ ಗೆಲ| ಜಾಣ ನೋಡಾ ನಮ್ಮ ಕೂಡಲ ಸಂಗಮದೇವ|

ಸಂಸಾರವೆಂಬುದು ಕರ್ತಾರನ ಕಮ್ಮಟವಯ್ಯಾ| ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು| ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ| ಕೂಡಲ ಸಂಗಮದೇವ|| ಅಂಧ ಪಂಗುನ್ಯಾಯದಂತೆ (ಹೆಳವನು ಕುರುಡನಿಗೆ, ಕುರುಡನು ಹೆಳವನಿಗೆ ಪರಸ್ಪರ ಸಹಾಯಕನಾಗುವಂತೆ) ವೀರಶೈವನಿಗೆ ಕರ್ಮಜ್ಞಾನಗಳೆರಡೂ ಪರಸ್ಪರವಾಗಿ ಮೋಕ್ಷಕ್ಕೆ ಸಾಧನಗಳಾಗಿವೆ. ಐಕ್ಯಸ್ಥಲಕ್ಕೆ ಹೋದರೂ ಹಿಂದಿನ ಐದು ಸ್ಥಲಗಳ ಆಚರಣವನ್ನು ಆಚರಿಸಲೇಬೇಕಾಗಿದೆ. ಆದರೆ ಐಕ್ಯನ ಐಕ್ಯಸ್ಥಲದಲ್ಲಿ ಎಂದರೆ ನಿಃಶಬ್ದ ಬ್ರಹ್ಮಸ್ಥಲದಲ್ಲ ಯಾವದೂ ಇರುವದಿಲ್ಲ. ಈ ಐಕ್ಯನ ಐಕ್ಯಸ್ಥಲಕ್ಕೆ ಹೋಗುವ ವರೆಗೆ ಕರ್ಮವು ಎಂದೂ ಬಿಟ್ಟದ್ದಲ್ಲ. ಕರ್ಮದೊಡನೆ ಜ್ಞಾನವನ್ನು ಸಂಪಾದಿಸುತ್ತ ಮುಕ್ತಿಯನ್ನು ಹೊಂದಬೇಕಾಗಿದೆ.

ಶ್ರೀ ಬಸವೇಶ್ವರರಲ್ಲಿ ನಿರಹಂಕಾರದ ದಾಸೋಹಂಭಾವವು ಎಷ್ಟರ ಮಟ್ಟಿಗೆ ಇದ್ದಿತು; ಮತ್ತು ಅದನ್ನು ಅವರು ಎಷ್ಟರ ಮಟ್ಟಿಗೆ ಆಚರಣದಲ್ಲಿ ತಂದಿದ್ದರೆಂಬುದನ್ನ ಕಲ್ಯಾಣದಲ್ಲಿ ಜರುಗಿದ ಒಂದು ಘಟನೆಯನ್ನು ಶ್ರೀ ಪಂಡಿತರು ಉದಾಹರಿಸಿದರು. ಅದಕ್ಕೆ ಶೂನ್ಯಸಂಪಾದನೆ ಗ್ರಂಥದಲ್ಲಿ "ಶ್ರೀ ಪ್ರಭುದೇವರು ಕಲ್ಯಾಣಕ್ಕೆ ಬಂದ ಸಂಪಾದನೆಯು." ಎಂದು ಕರೆದದ್ದಾಗಿದೆ. ಈ ಸಂಪಾದನೆಯನ್ನು ಸಾದ್ಯಂತವಾಗಿ ಉತ್ತಮೋತ್ತಮ ವಚನಗಳಿಂದ ಉದಾಹರಿಸಿ ಈ ರೀತಿಯಾಗ ತಮ್ಮ ಭಾಷಣವನ್ನು ಪೂರೈಸಿದರು.

ಇದೆಂಥ ಆಶ್ಚರ್ಯ!

ಮೋಟಾರಿನ ಮುಂದಿನ ಗಾಜಿನಂತೆಯೇ ಕನ್ನಡಕಗಳಿಗೂ ಒಡೆಯದಂಥ ಕನ್ನಡಿಗಳನ್ನು ಒಬ್ಬ ಶೋಧಕನು ಕಂಡ್ರಿಸಿದ್ದಾನೆ. ಇಂಥ ಕನ್ನಡಿಗೆ ಅವನು "ನಿರ್ಭಯ" ಎಂಬ ಹೆಸರಿಟ್ಟಿದ್ದಾನೆ ಕನ್ನಡಕವನ್ನು ಹಾಕಿಕೊಂಡು ಮೇಲೆ ಸುತ್ತಿಗೆಯಿಂದ ಹೊಡೆದರೂ ಕನ್ನಡಿಗಳು ಒಡೆಯುವದಿಲ್ಲ.

* * * * *

ಡಾಯುಸಿ ಮತ್ತು ವ್ಹಾಯಿಟ್ ಎಂಬ ಇಬ್ಬರು ಅವಳಿ ಜವಳಿ ಮಕ್ಕಳು ಹೊಂದಿಕೊಂಡೇ ಇದ್ದಾರೆ. ಇಬ್ಬರೂ ನೃತ್ಯಕಲೆಯಲ್ಲಿ ಪಾರಂಗತರಿರುವರು. ಇವರಲ್ಲಿ ಒಬ್ಬಳನ್ನು ಒಬ್ಬ ಯುರೋಪಿಯನ್ ಸಿನೇಮಾನಟನು ಲಗ್ನವಾಗಲು ನಿಶ್ಚಯಿಸಿರುವನು!

* * * * *

ಬೇಸಿಗೆಯಲ್ಲಿ ಅದೆಷ್ಟು ತಾಪ! ವಿದ್ಯುತ್ತಿನ ಬೀಸಣಿಕೆಯಿಂದ ಬೀಸಿಕೊಂಡರೂ, ಸೋಡಾ, ಆಯಿಸ ಕ್ರೀಮುಗಳನ್ನು ಸೇವಿಸಿದರೂ ತಾಪ ನಿವಾರಣೆ ಯಾಗುವದಿಲ್ಲ. ಆದರೆ ಒಬ್ಬ ಅಮೇರಿಕನ್ ಶಾಸ್ತ್ರಜ್ಞನು ಒಂದು ಬರ್ಫದ ಡಬ್ಬಿಯನ್ನು ಸಿದ್ಧಗೊಳಿಸಿದ್ದಾನೆ. ಅದನ್ನು ಗಡಿಯಾಲದಂತೆ ಮುಂಗೈಗೆ ಕಟ್ಟಿದ ಕೂಡಲೆ ದಟ್ಟಾದ ನೆರಳಿನಲ್ಲಿ ಕುಳಿತಂತೆ ಶರೀರವೆಲ್ಲ ತಂಪಾಗುತ್ತದೆ!

* * * * *

ಹಲ್ಲಿನ ಬೇನೆಯನ್ನು ಕಳೆಯುವದಕ್ಕಾಗಿ ಅಮೇರಿಕೆಯ ಡಾ. ಓರ್ಟಲ್ ಮತ್ತು ಡಾ. ವುಲ್ಫ ಎಂಬವರು ರೇಡಿಯೋದ ಉಪಯೋಗವನ್ನು ಮಾಡುತ್ತಿದ್ದಾರೆ ರೇಡಿಯೋದ ತರಂಗಗಳು ಹಲ್ಲನ್ನು ಪ್ರವೇಶಿಸಿ ಹಲ್ಲಿನೊಳಗಿನ ಹುಳಗಳನ್ನು ಕೊಲ್ಲುವವಂತೆ!



ಶಾ. ಶ. ೧೮೫೬ ನೆಯ ಮಾರ್ಗಶೀರ್ಷ ಶು|| ೪ ಸೋಮವಾರ.

ಧಾರ್ಮಿಕ ಸ್ವಾತಂತ್ರ್ಯವು ಆತ್ಮಸಿದ್ಧ ಹಕ್ಕು.

ಸಾಂಪ್ರತ ಕಾಲದಲ್ಲಿ ಧರ್ಮದ ವಿಷಯಕ್ಕೆ ಅಲ್ಲಲ್ಲಿ ಅನೇಕ ಚರ್ಚೆಗಳುಂಟಾಗಹತ್ತಿವೆಯಷ್ಟೆ. ಕೆಲವರು ಶಾಸ್ತ್ರ ಪುರಾಣಗಳ ಆಧಾರ ತೋರಿಸಿದರೆ ಕೆಲವರು ಐತಿಹಾಸಿಕ ಅಂಶಗಳನ್ನು ಗಮನಿಸುತ್ತಾರೆ. ಕೆಲವರು ರೂಢಿ ಪರಂಪರೆಯನ್ನು ಆಶ್ರಯಿಸಿದರೆ ಕೆಲವರು ಜಾತಿ ಪರಂಪರೆಯನ್ನು ಅವಲಂಬಿಸುತ್ತಿದ್ದಾರೆ.

ಧರ್ಮವು ಶಾಸ್ತ್ರ, ಪುರಾಣ, ಇತಿಹಾಸ ರೂಢಿ ಜಾತಿಗಳಿಗೆ ಸಿಲ್ಕಿ ಬಿದ್ದಿದೆಯೇ? ಛೆ ಎಂದಿಗೂ ಇಲ್ಲ. ಧರ್ಮವು ಆತ್ಮನ ಸಹಜ ಗುಣವಾಗಿದೆ. ಆತ್ಮನು ಅಜಾತ ಮತ್ತು ಅಮರನಿರುವಂತೆ ಧರ್ಮವೂ ಅಜಾತ ಮತ್ತು ಅಮರವಾಗಿದೆ. ಆತ್ಮನು ಸರ್ವತಂತ್ರ ಸ್ವತಂತ್ರನಾಗಿರುವಂತೆಯೇ ಧರ್ಮವೂ ಸ್ವತಂತ್ರವಾಗಿದೆ. ಬಂಧನದಿಂದಲೇ ಮರವೆ. ಸ್ವಾತಂತ್ರ್ಯದಿಂದಲೇ ಅರಿವು. ಆತ್ಮನ ಅರಿವುಂಟಾಗಬೇಕಾದರೆ ಧರ್ಮಸ್ವಾತಂತ್ರ್ಯವು ಅವಶ್ಯವಾದುದಾಗಿದೆ.

ವೀರಶೈವ ಧರ್ಮವು ಈ ಸ್ವಾತಂತ್ರ್ಯವನ್ನೇ ಬೋಧಿಸುತ್ತದೆ. ಈ ಸ್ವಾತಂತ್ರ್ಯದ ಹೆಗ್ಗುರುತಿನಿಂದಲೇ ಇದು 'ವೀರ'ಎಂಬುದಾಗಿ ಸಂಬೋಧಿಸಲ್ಪಡುತ್ತಿದೆ. ವೀರಶೈವ ಧರ್ಮವು ಅನುಭವ ಧರ್ಮವಾಗಿದೆ. ಧರ್ಮಾನುಭವವಾಗಬೇಕಾದರೆ ಧಾರ್ಮಿಕ ಸ್ವಾತಂತ್ರ್ಯವಿರಬೇಕಾದುದು ಅತ್ಯಾವಶ್ಯಕ.

ಶಿವಶರಣರು ಇದೇ ಧಾರ್ಮಿಕ ಸಂದೇಶವನ್ನು ನಮಗಾಗಿ ಆಚರಿಸಿ ತೋರಿಸಿದರು. "ಎನ್ನ ತನ್ನಂತೆ ಮಾಡಿದ ಗುರುವೇ"ಎಂದು ಶ್ರೀ ಸಿದ್ಧರಾಮೇಶ್ವರನು ಶ್ರೀ ಚನ್ನಬಸವಣ್ಣನವರ ಪಾದಕ್ಕೆರಗಿದನು. "ಶ್ರೀ ಸಿದ್ಧರಾಮೇಶನ ನಿಲವಿಂಗೆ ನಮೋ ನಮೋ ಎಂಬೆ" ಎಂದು ಶ್ರೀ ಚನ್ನಬಸವಣ್ಣನವರು ಆ ಸಿದ್ಧರಾಮ ಶಿವಯೋಗಿಯನ್ನು ಮನ್ನಿಸಿದರು. ಆ ಶರಣರ ಸ್ವಾತಂತ್ರ್ಯಕ್ಕೆ ಜಾತಿ ಭೇದವು ಅಡ್ಡಿಮಾಡಲಿಲ್ಲ; ಸ್ತ್ರೀ ಪುರುಷ ಭೇದವು ಅಡ್ಡಬರಲಿಲ್ಲ; ಬಾಲವೃದ್ಧ ಭೇದವು ತೊಂದರೆಕೊಡಲಿಲ್ಲ. ಶರಣರು ಪರಸ್ಪರರ ಯೋಗ್ಯತೆಯನ್ನು ಶ್ರೇಷ್ಠವೆಂದೇ ಕೊಂಡಾಡಿರುವರು. ಆದುದರಿಂದಲೇ ಅವರು ಸಾಮರಸ್ಯ ಧರ್ಮವನ್ನು ಬೋಧಿಸಲು ಶಕ್ತರಾಗಿದ್ದರು.

ಬರಬರುತ್ತ ಅಂದಿನ ಸ್ವಾತಂತ್ರ್ಯವು ಮರೆಯಾಗುತ್ತ ಬಂದಿತು. ಜಾತಿವಿಶೇಷಗಳು ಮೈದೋರಿ ವಿಶಿಷ್ಟಸಂಸ್ಕಾರವು ಜನ್ಮಸಿದ್ಧವೆಂದು ಸಾಧಿಸಹತ್ತಿದವು. ಸಲ್ಲದ ಸಾವಿರಾರು ಭೇದಗಳುಂಟಾದವು. ಅವಕ್ಕೆಲ್ಲ ಶಾಸ್ತ್ರಗಳ ಮುದ್ರೆಯನ್ನೊತ್ತುವ ಸಾಹಸವೂ ಮಾಡಲಾಯಿತು. ಹೀಗಾಗಿ ಒಂದಾನೊಂದು ಕಾಲಕ್ಕೆ ಜಾತೀಯತ್ವಕ್ಕೆ ಕುಠಾರ ಪ್ರಾಯವಾಗಿ ಅತಿವರ್ಣ ಧರ್ಮವೆಂದು ಜಗತ್ತಿನಲ್ಲಿ ಬೆಳಗಿದ ಶಿವಶರಣರ ಈ ವೀರ ಧರ್ಮವು ಜಾತಿಕಾರರ ಚಾಪಲ್ಯದಿಂದ ಛಿದ್ರಿತವಾಗಿ ಅನ್ಯ ಧರ್ಮದ ವರ್ಣಾಶ್ರಮಗಳನ್ನು ಅನುಕರಿಸಲು ಸೂಚಿಸಲ್ಪಡುವಂತಾಯಿತು!

ನಮ್ಮ ವೀರಶೈವ ಧರ್ಮವು ದ್ರಾವಿಡ ಸಂಸ್ಕೃತಿಯ ಸಾರವೆಂದು ತಿಳಿದಿದ್ದರೂ ಹಲಕೆಲವರು ಹುರುಳಿಲ್ಲದ ವರ್ಣಾಶ್ರಮಗಳನ್ನೇಕೆ ಅವಲಂಬಿಸುತ್ತಿದ್ದಾರೆ? ಯಾಕಂದರೆ ಆ ಯೋಜನೆಯಿಂದ ಅವರಿಗೆ ವಂಶ ಪಾರಂಪರ್ಯವಾಗಿ ಶ್ರೇಷ್ಠತ್ವವು ಲಭಿಸುತ್ತದೆಂದು. ದಿನಾಲು ಕೈತುಂಬ ರೊಕ್ಕ ಚೊಕ್ಕ ಭೋಜನಗಳು ದುಡಿಯದೇ ದೊರೆಯುವವೆಂದು. ಗುರುಕಾಣಿಕೆಯೆಂದು ಭಕ್ತರನ್ನು ಗೋಳಾಡಿಸಿ,ಕೆಲ ಪಶುಗಳನ್ನು ಪೋಷಿಸುವದಕ್ಕಾಗಿ ಅದು ತಮ್ಮ ಜನ್ಮಸಿದ್ಧ ಹಕ್ಕೆಂದು ಸ್ಥಾಪಿಸುವದೇ ಅವರ ಧ್ಯೇಯ. ಇದಕ್ಕಾಗಿ ನಿರಂತರವೂ ಈ ವೀರ ಕೋಟೆಯನ್ನು ದಾಸ್ಯತ್ವದಲ್ಲಿಡಲು ಅವರು ಹೊಂಚುಹಾಕುತ್ತಿರುವರು.

ವೀರಶೈವರೆ, ಈ ಹೊಂಚು ನಿಮಗೆ ತಿಳಿಯದೇ? ಇದು ನಮ್ಮ ಶಾಶ್ವತ ಅಧೋಗತಿಯ ಚಿಹ್ನವಲ್ಲವೇ? ಆತ್ಮನು ಸಾಕ್ಷಿಭೂತನಾಗಿ ಪ್ರತಿಯೊಬ್ಬನ ದೇಹದಲ್ಲಿ ವಾಸಿಸುತ್ತಿರಲು ಅವನ ಸ್ವಾತಂತ್ರ್ಯಕ್ಕೆ ಈ ರೀತಿಯ ಆತಂಕವೇ? ಅಂದ ಮೇಲೆ ನಾವು ಉದ್ಧಾರವನ್ನು ಹೊಂದುವ ಬಗೆಯೆಂತು?

ಆತ್ಮೋದ್ಧಾರಕ್ಕಾಗಿ ಧರ್ಮೋದ್ಧಾರವಾಗಬೇಕಾದುದು ಅವಶ್ಯಕ. ಧರ್ಮೋದ್ಧಾರವಾದರೂ ಧಾರ್ಮಿಕ ಸ್ವಾತಂತ್ರ್ಯ ಸಮಾನತೆಗಳಿಂದಲೇ ಉಂಟಾಗುತ್ತದೆ. ಉದ್ಧಾರವನ್ನು ಬಯಸುವ ನಾವೆಲ್ಲ ನಮ್ಮಲ್ಲಿಯ ವಿಷಮತೆಯ ಕಲ್ಪನೆಯನ್ನು ತೆಗೆದುಹಾಕಬೇಕು. ಜನ್ಮದಿಂದಲೇ ಹೆಚ್ಚುಕಡಿಮೆಯೆಂಬ ಭಿನ್ನ ಭೇದವನ್ನು ನಾವು ಎಲ್ಲಿಯವರೆಗೆ ಬಿಡಲು ಸಿದ್ಧರಿಲ್ಲವೋ ಅಲ್ಲಿಯವರೆಗೆ ನಮ್ಮ ಉದ್ಧಾರವಾಗುವದು ಶಕ್ಯವೇ ಇಲ್ಲ.

ಧಾರ್ಮಿಕ ಸ್ವಾತಂತ್ರ್ಯವಿಲ್ಲದೆ ಯಾವ ಚರ್ಚೆಮಾಡಿದರೇನು ಫಲ? ಯಾವ ಶಾಸ್ತ್ರ ಯಾವ ಪುರಾಣಗಳನ್ನು ಮುಂದಿಟ್ಟು ಹುಡುಕಿದರೇನು ಫಲ? ಯಾವ ಲೇಖನ ಯಾವ ವ್ಯಾಖ್ಯಾನಗಳಿಂದ ಶಕ್ಯ? ಇವೆಲ್ಲವುಗಳಿಂದ ಆತ್ಮೋದ್ಧಾರವಾಗದು! ಧಾರ್ಮಿಕ ಸ್ವಾತಂತ್ರ್ಯದಿಂದಲ್ಲದೆ ಲಿಂಗಾನುಭವ ದೊರೆಯದು.

ಆದುದರಿಂದ ಈ ಧಾರ್ಮಿಕ ಸ್ವಾತಂತ್ರ್ಯವು ನಮ್ಮ ಧ್ಯೇಯವಾಗಲಿ. ಶರಣರ ಈ ಸಂದೇಶವೇ ನಮ್ಮ ಮಾರ್ಗದರ್ಶಿಯಾಗಲಿ! ಯಾವ ಸಂಸ್ಕಾರವೂ ಒಂದು ವಿಶಿಷ್ಟ ಜಾತಿಗೆ ಮೀಸಲಾಗಿರಕೂಡದು. ಇದಕ್ಕಾಗಿ ಅಲ್ಲಲ್ಲಿ ಸಂಘಮೂಲಕ ಪ್ರಯತ್ನಗಳುಂಟಾಗತಕ್ಕದ್ದು.

ಇಳಕಲ್ಲನ ಮಹಾ ಜನರು ಈ ವಿಚಾರವಾಗಿ ಶರಣಸಂಘವನ್ನೇರ್ಪಡಿಸಿದುದು ಸ್ತುತ್ಯವಾಗಿದೆ. ಇದೇ ರೀತಿಯಿಂದ ಎಲ್ಲ ಕಡೆಯ ಮಹಾ ಜನರು ತಮ್ಮ ತಮ್ಮ ಸ್ಥಲಗಳಲ್ಲಿ ಶರಣಸಂಘಗಳನ್ನು ನಿರ್ಮಿಸಿ ಸಮಾಜೋದ್ಧಾರಕ ಮತ್ತು ಧರ್ಮೋದ್ಧಾರಕ ಕಾರ್ಯಗಳನ್ನು ಮಾಡಲು ಮುಂದೆ ಬರಲೆಂದೇ ನಾವು ಹಾರೈಸುತ್ತೇವೆ.

ಸ್ಫುಟ ಸೂಚನೆ.

ಜರ್ಮನಿಯಲ್ಲಿ ಭೀಕರ ಪರಿಸ್ಥಿತಿ.

ಜರ್ಮನಿಯು ಈಗ ಸಂಗ್ರಾಮ ಸಿದ್ಧವಾದುದರಿಂದ ಅತಿಭಯಂಕರವಾಗಿದೆ. ಜರ್ಮನಿ ಮತ್ತು ಫ್ರಾನ್ಸಗಳ ನಡುವಿನ ಸಾರಪ್ರಾಂತವನ್ನು ಫ್ರಾನ್ಸವು ಸೆಳೆದುಕೊಂಡುದು ಜರ್ಮನಿಗೆ ಸಹನವಿಲ್ಲ. ಅದನ್ನು ಪೂರ್ವದಂತೆ ಪಡೆಯಬೇಕೆಂದೇ ಜರ್ಮನಿಯ ಆಕಾಂಕ್ಷೆ. ಆದರೆ ಫ್ರಾನ್ಸವು ಅದರಲ್ಲಿಯ ಖಣಿಗಳಿಗಾಗಿ ಕೋಟ್ಯಂತರ ನಾಣ್ಯಗಳನ್ನು ವೆಚ್ಚಮಾಡಿದ್ದು ಅದನ್ನು ಬಿಟ್ಟು ಬಿಡಲಾರದಾಗಿದೆ. ಹೀಗಾಗಿ ಎರಡೂ ರಾಷ್ಟ್ರಗಳ ಕಣ್ಣು ಸಾರಪ್ರಾಂತದ ಕಡೆಗೆ ಇದೆ. ಇದಕ್ಕಾಗಿ ಜರ್ಮನಿಯ ಸರ್ವಾಧಿಕಾರಿಯಾದ ಹೇರ ಹಿಟ್ಲರರು ಹೇಳುವದೇನಂದರೆ—ಜರ್ಮನಿಯನ್ನು ಉಳಿದ ರಾಷ್ಟ್ರಗಳು ತಮ್ಮ ಸಮಾನವೆಂದು ಎಣಿಸಬೇಕು. ಜರ್ಮನಿಯು ವಿಷಮತೆಯ ಅಪಮಾನವನ್ನೆಂದೂ ಸಹಿಸದು. ಈ ಅಪಮಾನವು ಅಳಿಸಿ ಹೋಗುವವರೆಗೆ ನನಗೆ ನಿದ್ದೆಯಿಲ್ಲ— ಎಂಬ ಈ ಮಾತುಗಳನ್ನು ಕೇಳಿದರೆ ಪರಿಸ್ಥಿತಿಯಲ್ಲಿ ವಿಕೋಪವುಂಟಾಗಿ ಭಾವಿಪ್ರಚಂಡ ಯುದ್ಧಕ್ಕೆ ಇವು ಪೂರ್ವ ಸೂಚಕವಾಗಲಿಕ್ಕಿಲ್ಲನಷ್ಟೆ ಎಂದೆನಿಸುತ್ತದೆ.

ಜರ್ಮನಿಯು ತಲೆ ಈ ಪ್ರಕಾರ ತಿರುಗಿರಲು ಅದನ್ನು ಮತ್ತಷ್ಟು ತಿರುಗಿಸುವ ಪ್ರಸಂಗವೊಂದು ಪ್ರಕಟವಾಗಿದೆ. ಏನೆಂದರೆ ಹಿಟ್ಲರನು ದೊರೆಯಾಗುವ ಪೂರ್ವದಲ್ಲಿ ಜರ್ಮನಿಯ ರಾಯಸ್ಟ್ಯಾಗ ಎಂಬ ನ್ಯಾಯಸ್ಥಾನಕ್ಕೆ ಬೆಂಕಿಹಚ್ಚಲಾಯಿತು. ಇದರ ವಿಚಾರಣೆಯಾಗಿ ವ್ಹಾನ್-ಡೆರ್-ಲಬ್ಬೆ ಎಂಬವನು ಅಪರಾಧಿಯೆಂದೆಣಿಸಿ ಅವನಿಗೆ ಮರಣ ದಂಡನೆಯಾಯಿತು. ಆದರೆ ಈಗ ಮತ್ತೊಬ್ಬನು ತಾನೇ ಅದನ್ನು ಫಾಸ್ಫರಸಿನ ಮೂಲಕ ಜನರಲ್ ಗೋರಿಂಗರವರ ಹೇಳಿಕೆಯ ಮೇರೆಗೆ ಹಚ್ಚಿದೆನೆಂದು ಹೇಳುತ್ತಾನೆ. ಜ. ಗೋರಿಂಗರೆಂದರೆ ಹಿಟ್ಲರನ ಬಲಗೈ ಇದ್ದಂತೆ. ಇಂಥ ಅನ್ಯಾಯವನ್ನು ಸ್ವತಃ ಸೇನಾಪತಿಯೇ ಮಾಡಿದನೆಂಬುದನ್ನು ಕೇಳಿ ಜರ್ಮನಿಯಲ್ಲಿ ಮತ್ತೇನು ಅನಾಹುತವುಂಟಾಗುವದೊ!

ಶಾಸ್ತ್ರಿಗಳಿಗೆ ಬೋಧೆ.

ಪಂ. ಗೌರೀಶಂಕರ ಶಾಸ್ತ್ರಿಗಳವರು ಬಸವ ಜಯಂತಿಯಲ್ಲಿ ಗೈದ ಅಮೋಘವಾದ ಭಾಷಣವನ್ನು ಇದೇ ಸಂಚಿಕೆಯಲ್ಲಿ ಕೊಡಲಾಗಿದೆ. ಸದ್ಯಕ್ಕೆ ಅನೇಕ ಶಾಸ್ತ್ರಿಗಳು ಪುನಃ ಶಾಸ್ತ್ರಗಳನ್ನು ಮುಂದೊಡ್ಡುತ್ತಿರುವದುಂಟು. ಅದಕ್ಕಾಗಿ ಈ ಹಿರಿ ಶಾಸ್ತ್ರಿಗಳವರ ಶಾಸ್ತ್ರಾಭಿಪ್ರಾಯವನ್ನು ಕೊಡಲಾಗಿದೆ. ಶ್ರೀ ಗೌರೀಶಂಕರ ಶಾಸ್ತ್ರಿಗಳವರ ಪಾಂಡಿತ್ಯದ ವಿಷಯದಲ್ಲಿ ಭಿನ್ನಾಭಿಪ್ರಾಯವೇ ಇಲ್ಲ ಅನ್ಯಮತೀಯರು ಅವರ ಪಾಂಡಿತ್ಯಬಾಹುಲ್ಯವನ್ನು ವಿಶೇಷವಾಗಿ ಗೌರವಿಸುತ್ತಾರೆ. ಅಂಥ ವಿದ್ವಾಂಸರು ಸಹ ಶಾಸ್ತ್ರದ ಬಗ್ಗೆ ಏನು ಅಭಿಪ್ರಾಯ ಪಡುತ್ತಾರೆ? ಶಾಸ್ತ್ರಗಳು ಅನೇಕ ವಿಧವಾಗಿವೆ. ಅವುಗಳನ್ನು ತನ್ನ ಹೃದಯದ ಒಲವಿನಂತೆ ಹೊಂದಿಕೆಮಾಡಿಕೊಂಡು ಅರ್ಥಮಾಡಿಕೊಳ್ಳುವದು ಮಹಾ ಕಠಿಣ ಧರ್ಮವಾದರೊ ಕೇವಲ ಅನುಭವ ಪ್ರಾಪ್ತವಾಗಿದೆ. ಧರ್ಮವು ಅನುಭವಿಸಿಯೇ ಅರಿಯಬೇಕಾದುದು. ಇಂಥ ಪ್ರಸಂಗದಲ್ಲಿ ನಾವು ಮಹಾನುಭವಿಗಳನ್ನೇ ಆದರ್ಶವಾಗಿಟ್ಟುಕೊಳ್ಳಬೇಕಲ್ಲದೆ ಶಾಸ್ತ್ರದ ಕೆಸರಿನಲ್ಲಿ ಸಿಗಬೀಳಬಾರದು. ಮತಸ್ಥಾಪನೆಯ ವಿಷಯದಲ್ಲಿಯೂ ಅನೇಕ ಶಾಸ್ತ್ರಗಳು. ಶಾಸ್ತ್ರಗಳನ್ನೇ ಗಮನಿಸುವದುಂಟು ಇಂಥವರಿಗೆ ಈ ಮಹಾ ಶಾಸ್ತ್ರಿಗಳು ಶಾಸ್ತ್ರಾಧಾರದಿಂದಲೇ ಶಾಸ್ತ್ರೀಯವಾಗಿ ಬೋಧಿಸಿದ್ದಾರೆ.

ಶಾಸ್ತ್ರಿಗಳೆಂಬುವರು ಇನ್ನಾದರೂ ತಮ್ಮ ಅಭಿಪ್ರಾಯವನ್ನು ತಿದ್ದಿಕೊಳ್ಳಲಿ!

ಹಿಂದುಗಳ ಹೀನಸ್ಥಿತಿ.

ಹಿಂದುತ್ವದ ಪ್ರಶ್ನೆಯು ಹಿಂದುಗಳ ಜೀವಾಳವಾಗಿದ್ದರೂ ಅಖಿಲ ಹಿಂದುಗಳು ಅತ್ತಕಡೆಗೆ ಲಕ್ಷಕೊಡುವದೊಂದು ಅಗೌರವವೆಂದೇ ಭಾವಿಸುವದುಂಟು. ಹಿಂದುಗಳ ಪ್ರಶ್ನೆಯು ಪಂಜಾಬ ಬಂಗಾಲಗಳ ಮಟ್ಟಿಗೇನೇ ಎಂದು ಶ್ರೀ ರಾಜಗೋಪಾಲಾಚಾರ್ಯರ ಅನ್ನುವಿಕೆ. ಅಲ್ಲಿಯ ಮುಸಲ್ಮಾನರ ತೊಂದರೆಯು ತಮಗೆ ಸಂಬಂಧವಿಲ್ಲವೆಂದೇ ಇವರ ಕಲ್ಪನೆ. ಶ್ರೀ ರಾಜಾಜಿಯವರಿಗೆ ಯಾವ ಧರ್ಮದ ತೊಡಕೂ ಉಂಟಾಗಲಿಕ್ಕಿಲ್ಲವಷ್ಟೆ. ನಾಳೆ ಮದ್ರಾಸ ಪ್ರಾಂತದ ಕ್ರಿಸ್ತೀಯರು ಹಿಂದು ಧರ್ಮಕ್ಕೆ ಆಘಾತಮಾಡಹತ್ತಿದರೆ ಪಂಜಾಬ ಅಥವಾ ಬಂಗಾಲದವರು ಹೀಗೇ ಅನ್ನಬೇಕಾಯಿತಲ್ಲವೆ?

ಹಿಂದು ಮುಸಲ್ಮಾನರಾಗಲಿ ಅಥವಾ ಹಿಂದುಸ್ಥಾನದ ಪ್ರತಿಯೊಂದು ಧರ್ಮದವರಾಗಲಿ ಒಕ್ಕಟ್ಟಿನಿಂದಿರಬೇಕಾದುದು ಸ್ವರಾಜ್ಯ ಸಂಪಾದನೆಗೆ ಅತ್ಯಾವಶ್ಯಕವೆಂದೇ ಕಾಂಗ್ರೆಸ್ಸಿನವರ ಅಭಿಪ್ರಾಯವಲ್ಲವೆ? ಒಂದು ಧರ್ಮದ ಮೇಲೆ ಅತ್ಯಾಚಾರ ನಡೆಯಿಸುತ್ತಿದ್ದ ಪುಂಡರನ್ನು ಮತ್ತೊಂದು ಧರ್ಮದವರು ಧರ್ಮವೀರರೆಂದೂ ಗಾಝಿಗಳೆಂದೂ ಪುರಸ್ಕರಿಸುತ್ತಿದ್ದರೆ ಐಕ್ಯವಾಗುವ ಪರಿಯೆಂತು? ಇದು ರಾಷ್ಟ್ರೀಯ ಸಭೆಗೆ ತಿಳಿದಿದ್ದರೂ ಇವರ ವಿಷಯಕ್ಕೆ ಚಕಾರವನ್ನಾದರೂ ಅದು ಆಡಿದೆಯೇ?

ಇನ್ನು ಮಹಾ ಸಭೆಯು ಹಿಂದುಗಳ ಪ್ರಶ್ನೆಯನ್ನು ಕೈಕೊಳ್ಳುವದೇನೋ ನಿಜ. ಆದರೆ ಇದರಲ್ಲಿ ಸಂಘಟನೆಯಿಲ್ಲ. ಹಿಂದು ಎಂಬ ಅರ್ಥದಲ್ಲಿಯೇ ಇನ್ನೂ ವ್ಯತ್ಯಾಸ. ಕೆಲವರು ಚಾತುರ್ವರ್ಣಗಳಷ್ಟೇ ಹಿಂದುಗಳೆಂದರೆ ಕೆಲವರು ಆರ್ಯರೇ ಹಿಂದುಗಳೆಂದೂ ಹೇಳುತ್ತಾರೆ. ಹೀಗಾಗಿ ಈ ಪ್ರಶ್ನೆಯು ದಕ್ಷಿಣದಲ್ಲಿ ಪ್ರಸಾರವಾಗದೆ ಉಳಿದಿದೆ. ದಕ್ಷಿಣದಲ್ಲಿ ಹಿಂದು ಮಹಾಸಭೆಯ ಶಾಖೆಗಳಿಲ್ಲ; ಕಮೀಟಿಗಳಿಲ್ಲ; ಪ್ರಚಾರಕರಿಲ್ಲ; ಅಂದಮೇಲೆ ಉತ್ತರೀಯ ಹಿಂದುಗಳ ಗೋಳು ದಕ್ಷಿಣದವರಿಗೆ ತಿಳಿಯುವ ಬಗೆಯೆಂತು?

ನುರಿತ ಮುಂದಾಳುವನ್ನು ಬಿಡಬಹುದೇ?

ಸದ್ಯಕ್ಕೆ ಧರ್ಮಾತ್ಮಾ ಮಾಲವೀಜಿಯವರು ಅಲಾಹಾಬಾದದಲ್ಲಿ ವಿಶ್ರಾಂತಿಯನ್ನು ಹೊಂದುತ್ತಲಿದ್ದಾರೆ ೪ ನೆಯ ತಾರೀಖಿಗೆ ಶ್ರೀ. ವಲ್ಲಭಭಾಯಿ ಪಟೇಲ, ಶ್ರೀ. ಭುಲಾಭಾಯಿ ದೇಸಾಯಿ ಮತ್ತು ಶ್ರೀ ರಾಜಗೋಪಾಲಾಚಾರ್ಯ ಇವರು ಪಾಟಣಾಕ್ಕೆ ಹೊರಡುವ ಪೂರ್ವದಲ್ಲಿ ಅಲಾಹಾಬಾದದಲ್ಲಿಳಿದು ಶ್ರೀ ಮಾಲವೀಜಿಯವರನ್ನು ಕಂಡರು. ರಾಜಕೀಯ ಚರ್ಚೆಯೇನೂ ಆಗಲಿಲ್ಲ. ಆದರೆ ಅವರ ಅಭಿಪ್ರಾಯವು ಮಾಲವೀಜಿಯವರನ್ನು ಅಸೆಂಬ್ಲಿಗೆ ಹೋಗುವಂತೆ ಮನವೊಲಿಸುವದೇ ಆಗಿದ್ದಿತೆಂದು ತೋರುತ್ತದೆ. ಈ ಬಗ್ಗೆ ಅಲಾಹಾಬಾದ ರಾಷ್ಟ್ರೀಯ ಕಮೀಟಿಯವರು ಮಿ. ಶಾಲಿಗ್ರಾಮ ಜಯಸ್ವಾಲರ ಮುಖಾಂತರ ಶ್ರೀ ಬಾಬು ರಾಜೇಂದ್ರ ಪ್ರಸಾದರವರಿಗೆ ತಂತಿಯನ್ನು ಕಳಿಸಿದ್ದು ಅದರಲ್ಲಿ ಪಂ. ಮಾಲವೀಜಿಯವರಂಥ ನುರಿತ ಮುಂದಾಳುಗಳನ್ನು ಬಿಟ್ಟು ಬಿಡುವದು ರಾಷ್ಟ್ರಘಾತಕವೆಂದೂ ಅವರಿಗೂ ಕಾಂಗ್ರೆಸ್ಸಿಗೂ ಕೇವಲ ಒಂದೇ ಪ್ರಶ್ನೆಯ ಬಗ್ಗೆ ಮತಭೇದವಿರುವದರಿಂದ ಅವರನ್ನು ಪಾರ್ಲಿಮೆಂಟರಿ ಬೋರ್ಡಿನ ಮುಖಾಂತರ ಅಸೆಂಬ್ಲಿಗೆ ಕಳಿಸಲು ಅಭ್ಯಂತರವಿಲ್ಲವೆಂದೂ ಸೂಚಿಸಿರುವರು.

ರಾಷ್ಟ್ರೀಯ ಕಾರ್ಯಕಾರೀ ಮಂಡಲವು ಜಾ. ಪಾ. ವರದಿಯನ್ನು ತಳ್ಳುತ್ತಿರುವದರಿಂದ ಜಾತಿ ನಿರ್ಣಯವೂ ಅದರ ಸಂಗಡನೇ ಹಾರಿಹೋಗಬಹುದಾದುದರಿಂದ ಪಂ. ಮಾಲವೀಯರೂ ಇದಕ್ಕೆ ಸಮ್ಮತಿಸಬಹುದೆಂದು ತೋರುತ್ತದೆ

ಪತ್ರಗಳ ಸಾರಾಂಶ.

ಕಮತಗಿಯ ವರ್ತಮಾನ.

ತಾ ೩೦-೧೧-೧೯೩೪ ಶುಕ್ರವಾರ ಹುಚ್ಚೇಶ್ವರ ಪ್ರಾಸಾದಿಕ ಸಂಗೀತ ನಾಟಕ ಮಂಡಳಿ ಶಿವಾಚಾರದವರು ಹೇಮರಡ್ಡಿ ಮಲ್ಲಮ್ಮನ ನಾಟಕವನ್ನು ಸದ್ಯದ ಪರಿಸ್ಥಿತಿ ಮೇಲೆ ಉತ್ತಮ ರೀತಿಯಿಂದ ಆಡಿತೋರಿಸಿದರು.

ಈ ದಿನವೇ ಬನಶಂಕರಿ ಪ್ರಾಸಾದಿಕ ಸಂಗೀತ ನಾಟಕ ಮಂಡಳಿಯವರ ಥೇಟರದಲ್ಲಿ ಅಮೀನಗಡದವರು ದ್ರೌಪದಿ ವಸ್ತ್ರಹರಣ ನಾಟಕವನ್ನು ಒಳ್ಳೇ ಉತ್ತಮ ರೀತಿ ಸದ್ಯ ಸ್ಥಿತಿ ಮೇಲೆ ಜನರಿಗೆ ಮನೋರಂಜನ ಆಗುವಂತೆ ಆಡಿತೋರಿಸಿದರು.

(೧) ಇಲ್ಲಿಯ ಹವೆ ಚನ್ನಾಗಿ ಇದ್ದು ನಾಲ್ಕಾರು ದಿವಸದಿಂದ ಕೆಟ್ಟ ಗಾಳಿ ಬೀಸಿ ಬೆಳೆಗಳು ಕೆಡಲಿಕ್ಕೆ ಹತ್ತಿರುತ್ತವೆ. ಮೊಹರಬಾನ ಕಲೆಕ್ಟರ ಸಾಹೇಬರು ಇಲ್ಲಿ ನಾಲ್ಕಾರು ದಿವಸದ ಮುಕ್ಕಾಂ ಇದ್ದು ಯಾವತ್ತು ಊರುಗಳಲ್ಲಿ ಸಂಚಾರ ಮಾಡಿ ಗ್ರಾಮ ಸುಧಾರಣಾ ಪಂಚಾಯತಿ ಕೋರ್ಟ ಸ್ಥಾಪಿಸಲಿಕ್ಕೆ ಪ್ರತಿಒಂದು ಊರು ಪ್ರಮುಖ ಜನರಿಗೆ ತಿಳಿಸಿಹೇಳಿದರು. ಮೊಹರಬಾನ ಕಲೆಕ್ಟರ ಸಾಹೇಬರ ಮುಕ್ಕಾಮು ಹುನಗುಂದ ತಾಲೂಕದಲ್ಲಿ ಎಂಟು ದಿವಸ ಇದ್ದು ಪ್ರತಿಯೊಂದು ಊರ ಗ್ರಾಮಸ್ಥರ ಕಷ್ಟನಿವಾರಣೆಯನ್ನು ವಿಚಾರ ಮಾಡುವಸಲುವಾಗಿ ಹೆಚ್ಚು ಪ್ರಯತ್ನ ಮಾಡಿರುತ್ತಾರೆ.

(೨) ನಿನ್ನೆ ಸಂಜೆಯ ಮುಂದೆ ಶಾಲಾ ಹೆಡ್ ಮಾಸ್ತರರಾದ ಜಿ. ಯಸ್. ಅಂಗಡಿಯವರು ತಮ್ಮ ಶಾಲೆಯಲ್ಲಿ ಕೀರ್ತನವನ್ನು ಸದ್ಯದ ಪರಿಸ್ಥಿತಿಯ ಮೇಲೆ ಮಾಡುವಂಥ ಶ್ರೀ ಶಿವಯ್ಯ ಹಿರೇಮಠ ಸಾ| ಬಿಸಲದಿನ್ನಿಯವರ ಕಡೆಯಿಂದ ಜನರಿಗೆ ಮನೋರಂಜನವಾಗುವಂತೆ ಕೀರ್ತನ ಮಾಡಿಸಿದ್ದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಇಂಥ ಸಭ್ಯಗೃಹಸ್ಥರಿಗೆ ಈಶ್ವರನು ಆರೋಗ್ಯಕೊಟ್ಟು ಪರೋಪಕಾರ ಮಾಡಲಿಕ್ಕೆ ಸಹಾಯಮಾಡಲೆಂದು ಆಶಿಸುತ್ತೇನೆ.

ಶುಕ್ರವಾರ ತಾ ೨-೧೨-೧೯೩೪ ನೆಯ ದಿವಸ ಇಲ್ಲಿಯ ಕಾಂಗ್ರೆಸ ಮಂಡಳಿಯವರು ಮಹಾರಾಣಾ ಪ್ರತಾಪಸಿಂಹ ಎಂಬ ನಾಟಕವನ್ನು ಸದ್ಯದ ಪರಿಸ್ಥಿತಿಯ ಮೇಲೆ ಆಡಿತೋರಿಸುತ್ತಾರೆ.

ಕಮತಗಿ ಗ್ರಾಮಸುಧಾರಣೆಯ ಒಂದನೆಯ ಸಭೆ ಕೂಡಿಸಲಾಯಿತು. ತಾ ೩-೧೨-೩೪ ಸೋಮವಾರ ಈ ದಿವಸ ಚಾವಡಿಯಲ್ಲಿ ಸಭೆಗೆ ೧೫೦ ರೈತರು ಆಗಮಿಸಿದ್ದರು. ಇಲ್ಲಿಯ ಹೆಡ್ ಮಾಸ್ತರರಾದ ಜಿ. ಎಸ್. ಅಂಗಡಿ ಅಧ್ಯಕ್ಷರಾಗಿದ್ದರು. (೧) ಮೊದಲು ಮಿ|| ಚನಮಲ್ಲಪ್ಪನವರು ಶಟ್ಟರ ಇವರು ಹಳ್ಳಿಗಳ ಮೊದಲಿನ ಸ್ಥಿತಿಯು ಮತ್ತು ಈಗಿನ ಸ್ಥಿತಿಯು ಈ ವಿಷಯದ ಮೇಲೆ ಮತ್ತು ಕೃಗಾರಿಕೆಯ ವಿಷಯದ ಮೇಲೆ ಜನರಿಗೆ ಮನೋರಂಜನವಾಗುವಂತೆ ಭಾಷಣ ಮಾಡಿದರು.

(೨)ಆ ಮೇಲೆ ಅಧ್ಯಕ್ಷರು ಒಕ್ಕಲತನ ಆರೋಗ್ಯ ಶಿಕ್ಷಣ ಕೃಗಾರಿಕೆ ಗ್ರಾಮ ಪಂಚಾಯತಿಯಿಂದಾಗುವ ಲಾಭಗಳು ಈ ವಿಷಯದ ಮೇಲೆ ಜನರಿಗೆ ತಿಳಿಯುವ ಹಾಗೆ ಭಾಷಣಮಾಡಿದರು ಇತ್ಯಾದ ಬಳಿಕ ಸಭೆ ವಿಸರ್ಜನೆಯಾಯಿತು.

ಬಿ. ಮ. ಪುರಾಣಿಕ ಮಠ.

ಕೊಪ್ಪಳ ಜಿಲ್ಲೆಯ ರೈತರ ಪರಿಷತ್ತಿನ ಅವಶ್ಯಕತೆ.

ಯಾವ ದೇಶವಾಗಲಿ ಸಂಸ್ಥಾನವಾಗಲಿ ಸುಧಾರಣೆಯ ಶಿಖರವನ್ನೇರಬೇಕಾದರೆ ಉನ್ನತಾವಸ್ಥೆಯಲ್ಲಿರಬೇಕಾದರೆ ಅಲ್ಲಿಯ ಪ್ರಜೆಗಳು ಸುಶಿಕ್ಷಿತರೂ ಶಿಸ್ತುಳ್ಳವರೂ ಐಕ್ಯತೆಯಿಂದ ಕಾರ್ಯಮಾಡುವವರೂ ಇರಬೇಕಾಗುತ್ತದೆ. ಪ್ರಜೆಗಳ ಬೇಡಿಕೆಯನ್ನು ಮಾನ್ಯಮಾಡುವಷ್ಟು ಅಲ್ಲಿಯ ಸರಕಾರವು ಸಿದ್ಧವಿರದಿದ್ದರೆ ತಮ್ಮ ಸಂಘ ಶಕ್ತಿಯಿಂದಲೂ ಲೇಖನ, ಭಾಷಣಗಳಿಂದಲೂ ಪ್ರಸಾರ ಕಾರ್ಯಮಾಡಿ ಜನಜಾಗೃತಿಯನ್ನು ಹುಟ್ಟಿಸಿ, ಸರಕಾರದ ದೃಷ್ಟಿಗೆ ಗೋಚರವಾಗುವಂತೆ ಮಾಡಿ ತಮ್ಮ ಹಿತದ ಕಾರ್ಯಗಳನ್ನು ಮಾಡಿಸಿಕೊಳ್ಳುತ್ತಿರುವರು ಯಾವದೇ ಪ್ರದೇಶದ ರೈತರು ತಮತಮಗೆ ಅನುಕೂಲವಾದಂತೆ ರೈತರ ಪರಿಷತ್ತನ್ನು ಕೂಡಿಸಿಕೊಂಡು ಅದರ ಮುಖಾಂತರ ತಮ್ಮ ಬೇಡಿಕೆಗಳನ್ನು ಮಂಡಿಸುವರು ಮತ್ತು ಆ ಪ್ರಕಾರ ಕಾರ್ಯವಾಗುವಂತೆ ಆ ಸಂಸ್ಥೆಯಿಂದ ಸತತ ಪ್ರಯತ್ನವಾಗುತ್ತಿರುವದು. ಸದ್ಯದ ಪರಿಸ್ಥಿತಿಯಲ್ಲಿ ಸಂಘಶಕ್ತಿಯ ಮುಂದೆ ಯಾವ ಪ್ರಬಲ ವ್ಯಕ್ತಿಯ ಆಟವೂ ನಡೆಯಲಾರದೆಂಬುವದು ಎಲ್ಲರಿಗೂ ಮನವರಿಕೆಯಾಗಿದೆ. ಹೀಗಿದ್ದು ಕಠಿಣ ಪ್ರಸಂಗ ಬಂದಾಗ ಕೇವಲ ಕೆಲವು ಜನರ ಸಹಿಯ ಅರ್ಜಿಯನ್ನು ಕಳುಹಿಸುವದರಿಂದ ಯಾವ ಪ್ರಯೋಜನವೂ ಆಗಲಾರದು. ಇದನ್ನು ಸ್ಪಷ್ಟ ಶಬ್ದಗಳಿಂದ ಹೇಳಬೇಕಾದರೆ ಇಲ್ಲಿಯ ವರೆಗೆ ನಾವು ನಮ್ಮ ನವಾಬಸಾಹೇಬರವರ ಸನ್ನಿಧಿಯಲ್ಲಿ ಕಳಿಸಿದ ಅರ್ಜಿಗಳ ಉದಾಹರಣೆಯೇ ಸಾಕು. ನಮ್ಮಲ್ಲಿ ಅಂಥ ಬಲವತ್ತರ ಸುಸಂಘಟಿತ ಸತತ ಕಾರ್ಯಮಾಡುವ ಸಂಸ್ಥೆಯು ಇಲ್ಲದ್ದರಿಂದಲೂ ನಮ್ಮ ಶಿಕ್ಷಣದ ಅಭಾವದಿಂದಲೂ ಸದ್ಯಕ್ಕೆ ಅನ್ನ ನೀರುಗಳೂ ದನಕರುಗಳಿಗೆ ಮೇವೂ ಸಿಗದೆ ಹೊಟ್ಟೆಯ ಪಾಡಿಗಾಗಿ, ಪರಸ್ಥಳಕ್ಕೆ ಎಷ್ಟೋ ಜನರು ಹೋಗಿದ್ದರೂ ಇನ್ನೂ ಹೋಗುತ್ತಲೇ ಇದ್ದರೂ ನಮ್ಮ ಸರಕಾರವು ಕರಿಗೆಯ ವಿಷಯವಾಗಿ ಒಂದೂ ಚಕಾರ ಶಬ್ದವನ್ನು ತೆಗೆದಿರುವದಿಲ್ಲ. ಇದಕ್ಕೆ ನಾವೇ ಮುಖ್ಯಕಾರಣರು. ಎಲ್ಲಿಯ ವರೆಗೆ ನಮ್ಮಲ್ಲಿ ರೈತಪರಿಷತ್ತನ್ನು ಕೂಡಿಸಲು ಸಾಧ್ಯವಿಲ್ಲವೊ, ಶಕ್ಯವಿಲ್ಲವೊ, ಅಲ್ಲಿಯ ತನಕ ನಮ್ಮ ಬೇಡಿಕೆಗಳಿಗೆ ಉಪೇಕ್ಷೆಯೇ ಸರಿ. ಈ ಪ್ರಸಂಗದಲ್ಲಿ ನಮ್ಮಲ್ಲಿಯ ಪ್ರಮುಖರು ಪರಿಷತ್ತನ್ನು ಕೂಡಿಸಿ ಏಕಮುಖ ಬೇಡಿಕೆಗಳನ್ನು ಮಂಡಿಸುವದು ಒಳಿತಲ್ಲವೇ?

ತಾ. ೫-೧೨-೧೯೩೪. ಜಿಲ್ಹೆಯ ಓರ್ವ ರೈತ.

'ಜಗದ್ಗುರು' ಮರಿಗಳ ಸಂಚಾರ.

ಶ್ರೀ ಉಜ್ಜನಿ 'ಜಗದ್ಗುರುಗಳ' ಮರಿಗಳಾದ ಶ್ರೀ ಸಿದ್ಧಲಿಂಗಸ್ವಾಮಿಗಳು ಸೊಲ್ಲಾಪೂರ ತಾಲೂಕದಲ್ಲಿ ದಕ್ಷಿಣೆಯ ಸಲುವಾಗಿ ಸಂಚಾರ ನಡಿಸಿದ್ದಾರೆ. ಮಳಕೊಟಗಿಯಲ್ಲಿ ೩೫೦ ರೂ. ವಸೂಲ. ಮನಮಿ ಮತ್ತು ಅದರ ಸುತ್ತಲಿನ ಹಳ್ಳಿಗಳಲ್ಲಿ ಕೂಡಿ ೧೦೦೦ ರೂ. ವಸೂಲು ಮಾಡಿದ್ದಾರೆ. ಭಕ್ತರು ಬಹಳ ಗೋಳಾಡಹತ್ತಿದ್ದಾರೆ ಭಕ್ತರಿಗೆ ತಿನ್ನಲಿಕ್ಕೆ ಕೂಳಿಲ್ಲ. ಮನೆಯ ಜನರಿಗೆ ಅರಿವೆ ಅಂಚಡಿಗಳಿಲ್ಲ. ಇಂಥ ಸ್ಥಿತಿಯಲ್ಲಿ ಭಕ್ತರ ಮೇಲೆ ಗುರುಗಳ ವಸೂಲಿ ನಡೆದದೆ. ಗುರುಗಳು ಕೇವಲ ಹಣವನ್ನೆತ್ತುವದು ಕಲಿತಿರುತ್ತಾರೆ. ಇವರ ಸಂಗಡ ಆನೆ, ಕುದುರೆ ಮತ್ತು ಎತ್ತುಗಳಿವೆ. ಭಕ್ತರು ಎತ್ತು,ಕುರಿ ಮಾರಿ ಕೊಟ್ಟ ದಕ್ಷಿಣದಿಂದ ಇವರು ಆನೆ, ಕುದುರೆಗಳಮೇಲೆ ಮೆರೆಯುತ್ತಲಿದ್ದಾರೆ. ನನ್ನ ದೃಷ್ಟಿಯಿಂದ ಇದೊಂದು ತರದ ಸುಲಿಗೆಯೆಂದೇ ಅನಿಸುತ್ತದೆ. ಇವರಿಗೇನನ್ನಬೇಕು ನೀವೇ ನೋಡಿರಿ.

ಕಲ್ಲಯ್ಯಾ ದೋಙಾರ ಸೊಲ್ಲಾಪೂರ

ವಿವಿಧ ವಿಷಯ.

ಅನ್ಯಾಯವಾಯಿತು,

ಶಿಕಾರಿಪುರ ತಾ|| ಬೆಳಗಾವಿಯಲ್ಲಿ ಮೈಸೂರಿನ ಪ್ರಾಚೀನ ಅವಶೇಷಗಳ ಮೂರ್ತಿಮಂತ ಸ್ತಂಭವೋ ಎಂಬಂತೆ ನಿಂತಿದ್ದ ಗಂಡಭೇರುಂಡ ಸ್ತಂಭದ ಮೇಲಣ ಮನುಷ್ಯರೂಪೀ ಗಂಡಭೇರುಂಡ ಮೂರ್ತಿಯು ಕೆಳಕ್ಕುರುಳಿ ಚೂರುಚೂರಾಗಿಹೋದ ಸಮಾಚಾರವನ್ನು ಕೇಳಿ ನಾವು ತುಂಬಾ ವಿಷಾದಿಸುತ್ತೇವೆ. ಪ್ರಾಚೀನ ಅವಶೇಷಗಳ ರಕ್ಷಣೆಗೆ ಉತ್ತರವಾದಿಗಳಾದ ಅಧಿಕಾರಿಗಳು ಅದರ ಗತಿಯನ್ನು ಅಷ್ಟು ದೂರ ಹಾಯಗೊಟ್ಟುದರಲ್ಲಿ ಅರ್ಥವೇನು?

ಸ್ತಂಭವು 'ಗಂಡಭೇರುಂಡ' ಸ್ತಂಭ. ಮೈಸೂರರಸರ ಮನೆ ಗುರುತು. ಶಿಲ್ಪಕಲೆಯ ಉಚ್ಚ ಆದರ್ಶ. ಅಂತಹ ಸ್ತಂಭವು ಮೈಸೂರಲ್ಲಲ್ಲ—ಎಲ್ಲಿಯೂ ಮತ್ತೊಂದಿಲ್ಲ; ಇದ್ದುದು ಒಂದೇ ಒಂದು, ಇದು ಪುಷ್ಪದಂತೆ ಸಂರಕ್ಷಿಸಲ್ಪಡಬೇಕಾಗಿದ್ದ ವಸ್ತು. ಹೀಗಿದ್ದೂ ಅದರ ಅವಸ್ಥೆ ಹೀಗಾದುದು ಪರಮ ಅನ್ಯಾಯ.

ಸ್ತಂಭವು ಅಮೂಲ್ಯವಾದುದೆಂಬುದಕ್ಕೆ ಎರಡು ಮಾತನ್ನಾರೂ ಆಡಲಾರರು. ಅದು ಸುಮಾರು ೪೦ ಅಡಿಗಳ ಕಂಬ; ಅದರ ಮೇಲೆ ಮನುಷ್ಯಾಕೃತಿಯ ಪ್ರತಿಮೆಗೆ ಗಂಡಭೇರುಂಡನ ಮುಖ. ದಿವ್ಯವಾದ ಕೆತ್ತನೆಯ ಕೆಲಸ. ಒಂದು ಸಾವಿರ ವರುಷಗಳ ಅವಶೇಷವದು. ಚಾಮುಂಡರಾಯನಿಂದ ಸ್ಥಾಪಿತವಾದುದು. ಚಾಮುಂಡರಾಯನಾರು? ಸುಪ್ರಸಿದ್ಧ ಗೋಮಟೇಶ್ವರ ವಿಗ್ರಹವನ್ನು ಸ್ಥಾಪಿಸಿದ ಮಹಾನುಭಾವ. ಅವನಿಂದಲೇ ಈ ಸ್ತಂಭದ ಸ್ಥಾಪನೆಯೂ ಆದುದು. ಆ ಕಂಬದ ಮೇಲಣ ವಿಗ್ರಹವು ಕೆಳಗೆ ಬಿದ್ದು ಒಡೆದು ಚೂರುಚೂರಾಗಿ ಹೋಗುವವರೆಗೂ ಯಾರಾದರೂ ಉದಾಸೀನ ಮಾಡಿದ್ದರೆ, ಅದು ಅಕ್ಷಮ್ಯ ಅಪರಾಧ!

ಒಡೆದ ಚೂರುಗಳನ್ನಾದರೂ ಕೂಡಿಸಿ ಆ ಪ್ರಾಚೀನ ಅವಶೇಷದ ಅವಶೇಷವೊಂದನ್ನು ಎಲ್ಲಾದರೊಂದುಕಡೆ (ಬೆಂಗಳೂರು ಪ್ರಾಚೀನವಸ್ತು ಸಂಗ್ರಹಾಲಯ—ಮ್ಯೂಜಿಯಂ-ಆಗಬಹುದು.) ಇಡುವ ಏರ್ಪಾಡನ್ನಾದರೂ ಮಾಡಬಾರದೆ? "ಸ್ವ. ಸ. ಪತ್ರಿಕೆ"

ಕ್ಷಯರೋಗದ ಅಸ್ತಿತ್ವ.

ಅನೇಕ ಜನರು ಕ್ಷಯರೋಗವು ಅರ್ವಾಚೀನ ಕಾಲದ ಸುಧಾರಣೆಯಿಂದ ಬಂದುದೆಂದು ಭಾವಿಸುತ್ತಾರೆ. ಆದರೆ ಆಯುರ್ವೇದದಲ್ಲಿಯೂ ಪೌರಾಣಿಕ ಗ್ರಂಥಗಳಲ್ಲಿಯೂ ಈ ರೋಗದ ಸ್ವರೂಪ ವರ್ಣನೆಯುಂಟು. ಇದು ಪೂರ್ವದಲ್ಲಿ ಚಂದ್ರನಿಗೆ ಅಂಟಿಕೊಂಡದ್ದರಿಂದ ಇದಕ್ಕೆ ರಾಜಯಕ್ಷ್ಮಾ ಎಂಬ ಹೆಸರೂ ಚರಕ ಸಂಹಿತೆಯಲ್ಲಿ ಕೊಡಲ್ಪಟ್ಟಿದೆ.

ಯುರೋಪಿಯನ್ನರಿಗೆ ಈ ರೋಗದ ಅಸ್ತಿತ್ವವು ಕ್ರಿ. ಶ. ಮೂರನೆಯ ಶತಕದಲ್ಲಿಯೇ ತಿಳಿದಿದ್ದರೂ ವಿಶೇಷವಾಗಿ ೧೭ ನೆಯ ಶತಮಾನದ ವರೆಗೆ ಇದರ ಉಪಾಯವೇ ಅವರಿಗೆ ಗೊತ್ತಿರಲಿಲ್ಲ. ೧೮ ನೆಯ ಶತಕದ ಪ್ರಾರಂಭದಲ್ಲಿ ಲೆನೆಕ್ ಎಂಬವನು ಈ ರೋಗವು ಪುಪ್ಪುಸದಲ್ಲಿ ಹುಟ್ಟುತ್ತದೆಂದು ಕಂಡುಕೊಂಡನು. ಮುಂದೆ ೧೮೬೫ರಲ್ಲಿ ಫ್ರೆಂಚ ಡಾ. ವ್ಹಿಲೆಮನ್ ಎಂಬವನು ಈ ರೋಗದ ಒಂದು ಪ್ರಕಾರದ ವಿಷವಿರುತ್ತದೆಂಬುದನ್ನರಿತನು. ಕಡೆಗೆ ಜರ್ಮನ್ ಡಾ. ಕಾಚ್ ಎಂಬವನು ಈ ರೋಗವು ಜಂತುಗಳಿಂದುಂಟಾಗುವದೆಂದು ಶೋಧಿಸಿದನು.

ದೂಷಿತ ಆಹಾರ ಮತ್ತು ಹವೆಯನ್ನು ಸೇವಿಸುವದರಿಂದಲೂ ಕ್ಷಯರೋಗಿಗಳ ಸಂಸರ್ಗದಿಂದಲೂ, ಹೋಟಲುಗಳಲ್ಲಿ ಕ್ಷಯರೋಗಿಗಳು ಬಾಯಿಹಚ್ಚಿ ಕುಡಿದ ಇಲ್ಲವೆ ಕೈಹಚ್ಚಿ ತಿಂದ ಕಾಫಿ ತಿಂಡಿಗಳನ್ನು ಸೇವಿಸುವವರಿಂದಲೂ ಈ ರೋಗವು ಅಂಟಿಕೊಳ್ಳುತ್ತದೆ. ಇದು ಮಹಾ ಭಯಂಕರವಾದುದರಿಂದ ಒಮ್ಮೆ ಅಂಟಿಕೊಂಡಿತೆಂದರೆ ಬಿಟ್ಟುಹೋಗುವದೇ ಕಠಿಣ. ಆದುದರಿಂದ ಇಂಥ ಅಪಾಯಕ್ಕೊಳಗಾಗದಂತೆ ಜನರು ಮೊದಲೇ ಎಚ್ಚರಿಕೆಯಿಂದಿರುವದು ಹಿತಕರ.

ಈ ರೋಗದ ಪೂರ್ವಚಿಹ್ನವೆಂದರೆ ಗಂಟಲು ಗುಸು ಗುಸು ಅನ್ನಹತ್ತಿ ಕಫವು ಬೀಳುವದು; ಶ್ವಾಸನಾಳದಲ್ಲಿ ನೋವಾಗುವದು; ಸಂಜೆಯ ಮುಂದೆ ಸ್ವಲ್ಪ ಮೈ ಬೆಚ್ಚಗಾಗುವದು; ಕೆಮ್ಮಿದ ಕೂಡಲೆ ರಕ್ತ ಬೀಳುವದು; ದೇಹವು ಸಣ್ಣಾಗುತ್ತ ಹೋಗುವದು; ಹಸಿವೆ ಆಗುವದಿಲ್ಲ; ಇವೇ ಮೊದಲಾದ ಕಾರಣಗಳಾಗಿವೆ.

ಇಂಥ ಚಿಹ್ನವು ಕಂಡ ಕೂಡಲೆ ಅದಕ್ಕೆ ಯೋಗ್ಯ ಉಪಚಾರ ಮಾಡಬೇಕು. ಪೂರ್ವಕಾಲದಲ್ಲಿ ಇದು ಅಸಾಧ್ಯ ರೋಗವೆಂದು ತಿಳಿದು ಸಣ್ಣಾಗಿ ಸಾಯುವದೇ ಒಂದು ಔಷಧವೆಂದು ತಿಳಿಯುತ್ತಿದ್ದರು. ಆದರೆ ಈಗ ೪೦ ವರ್ಷಗಳ ಹಿಂದೆ ಶೋಧಿಸಲ್ಪಟ್ಟ Sirolin Roche ಶಿರೊಲಿನ್ ರೋಶ ಎಂಬ ಔಷಧವು ಸ್ವಿತ್ಸರ್ಲಂಡದ ಎಲ್ಲ ಆಸ್ಪತ್ರಿಗಳಲ್ಲಿ ಉಪಯೋಗಿಸಲ್ಪಡುತ್ತದೆ. ಪ್ರಾರಂಭದಲ್ಲಿಯೇ ಈ ಔಷಧವನ್ನು ತೆಗೆದುಕೊಂಡರೆ ಅದು ತೀವ್ರವೇ ಗುಣವಾಗುವದು. ನೇಪಲ್ಸದಲ್ಲಿ ನೆರೆದ ಕ್ಷಯ ರೋಗ ಪ್ರತಿಬಂಧಕ ಪರಿಷತ್ತಿನಲ್ಲಿ ಅಧ್ಯಕ್ಷರಾಗಿದ್ದ ಪ್ರೊ. ರೇಂಝಿಯವರು ಇದು ದಿವ್ಯೌಷಧಿಯೆಂದು ಇದಕ್ಕೆ ೧ನೇ ನಂಬರಿನ ಪಾರಿತೋಷಕ ಕೊಟ್ಟಿದ್ದಾರೆ. ಆದುದರಿಂದ ಜನರು ಮೊದಲೇ ಇಂಥ ಭಯಂಕರ ರೋಗಗಳಿಂದ ದೂರಾಗಿರಬೇಕು. ಇಲ್ಲದಿದ್ದರೆ ಉತ್ತಮ ಉಪಾಯದಿಂದ ತೀವ್ರವೇ ಗುಣಪಡಿಸಿಕೊಳ್ಳಬೇಕು.

ಅಂಚೆಯ ಸೌಕರ್ಯ.

ಪರಿಚಯ ನಿದರ್ಶಕ ಕಾರ್ಡು

ವ್ಯಾಪಾರಸ್ಥರು ವ್ಯಾಪಾರನಿಮಿತ್ತವಾಗಿ ಪರಪ್ರಾಂತಗಳಿಗೆ ಹೋದಾಗ್ಗೆ ಪೋಸ್ಟ ಆಫೀಸಿನಲ್ಲಿ ತಮ್ಮ ಹೆಸರಿನಿಂದ ಬರುವ ಮನಿ ಆರ್ಡರ, ವಿಮೆ ಇವುಗಳನ್ನು ಪರಿಚಯವಿಲ್ಲದ್ದಕ್ಕಾಗಿ ಸ್ವೀಕರಿಸುವದಕ್ಕೆ ಬಹಳ ತೊಂದರೆಯಾಗುತ್ತದೆ; ಮತ್ತು ರೂಪಾಯಿ ಕೊಡುವ ಜವಾಬ್ದಾರಿಕೆಯು ಪ್ರಶ್ನೆಯಾದುದರಿಂದ ಅವನೊಬ್ಬ ವ್ಯಾಪಾರಸ್ಥನು ತನ್ನ ಯೋಗ್ಯ ಗುರುತನ್ನು ತೋರಿಸಿಕೊಡದಿದ್ದರೆ ಪೋಸ್ಟ ಮಾಸ್ತರನಿಗೂ ನಿರ್ವಾಹವಿಲ್ಲದ ಪ್ರಸಂಗಬರುತ್ತದೆ. ಈ ತೊಂದರೆಯನ್ನು ತಪ್ಪಿಸುವದಕ್ಕಾಗಿ ಅಂಚೆಯ ಖಾತೆಯವರು ಈಗ ನಾಲ್ಕು ವರುಷಗಳ ಹಿಂದೆ ಒಂದು ವಿಧಾನವನ್ನುಂಟು ಮಾಡಿದ್ದಾರೆ.

ಯಾವದಾದರೂ ಹೆಡ್ ಆಫೀಸಿನಲ್ಲಿ "ಅಯಡೆಂಟಿಫಿಕೇಶನ್ ಕಾರ್ಡ" ಎಂದರೆ ಗುರುತು ತೋರಿಸುವ ಕಾರ್ಡುಗಳು ದೊರೆಯುತ್ತವೆ. ಇದಕ್ಕೆ ಒಂದು ರೂಪಾಯಿ ಫೀ ಕೊಡಬೇಕಾಗುತ್ತದೆ. ಮತ್ತು ಇದು ಮೂರು ವರ್ಷಗಳ ವರೆಗೆ ನಡೆಯುತ್ತದೆ. ನಂತರ ಪುನಃ ಮತ್ತೊಂದು ಕಾರ್ಡು ತೆಗೆದುಕೊಳ್ಳಬೇಕು. ಈ ಕಾರ್ಡನ್ನು ಪಡೆಯಲಿಚ್ಛಿಸುವ ಮನುಷ್ಯನು ತಾನು ಆ ಭಾಗದ ಎಲ್ಲ ಜನರಿಗೆ ಪರಿಚಯದವನಾಗಿರುವನೆಂಬದನ್ನು ತನ್ನ ಭಾಗದ ಪೋಸ್ಟಮಾಸ್ತರನಿಗೆ ತೋರಿಸಿಕೊಡಬೇಕು. ಹಾಗೂ ಗುರ್ತು ತೋರಿಸುವ ಕಾರ್ಡಿನ ಮೇಲೆ ಅಂಟಿಸುವದಕ್ಕಾಗಿ ತನ್ನ ಸಣ್ಣದೊಂದು ಫೋಟೋ ಕೊಡಬೇಕು. ಆ ಕಾರ್ಡಿನಲ್ಲಿ ಸ್ವೀಕರಿಸುವವನ ವರ್ಣನೆ— ಅಂದರೆ ಅವನ ಜನ್ಮ ತಾರೀಖು, ಜನ್ಮ ಸ್ಥಳ, ಅವನ ಎತ್ತರ, ಅವನ ಬಣ್ಣ, ಕಲೆ

ವರ್ತಮಾನ ಸಾರ.

—ಜಾರ್ಜ ಬಾದಶಹರ ಕಿರಿಯ ಪುತ್ರರಾದ ಡ್ಯೂಕ ಆಫ್ ಕೆಂಟರವರು ಗ್ರೀಕ ರಾಜಕನ್ಯಾ ಮೆರೀನಾ ಇವರನ್ನು ಲಗ್ನವಾದರು. ಆ ಕಾಲಕ್ಕೆ ವೆಸ್ಟ ಮಿನಿಸ್ಟರ್ ಅಬೆಯಲ್ಲಿ ಹಿಂದುಸ್ಥಾನದ ಪರಿಯಿಂದ ಸರ್ ಭೂಪೇಂದ್ರನಾಥ ಮಿತ್ರರವರು ಉಪಸ್ಥಿತರಾಗಿದ್ದರು.

—ಪಂ. ಜವಾಹರಲಾಲರ ಮಾತೋಶ್ರೀಯವರಾದ ಶ್ರೀಮತಿ ಸ್ವರೂಪರಾಣಿ ನೆಹರುರವರು ಮುಂಬಯಿಯಲ್ಲಿ ಕ್ಷ. ಕಿರಣಗಳಿಂದ ಪ್ರಕೃತಿಯನ್ನು ಪರೀಕ್ಷಿಸಿಕೊಳ್ಳುವದಕ್ಕಾಗಿ ಒಂದು ತಿಂಗಳ ವಾಸವಾಗಿರುವರು.

—ಸಿಂಧದಲ್ಲಿ ಪಂ. ನಥುರಾಮರವರನ್ನು ಕೊಲೆಮಾಡಿದ ಅಬ್ದುಲ ಕಾಯುಮ ಎಂಬವನಿಗೆ ವಿಧಿಸಲ್ಪಟ್ಟ ಮರಣ ಶಾಸನಕ್ಕಾಗಿ ಹಾಯಕೋರ್ಟಿಗೆ ಅಪೀಲು ಮಾಡಲ್ಪಟ್ಟಿತು. ಅಲ್ಲಿಯೂ ಮರಣ ದಂಡನೆಯೇ ಸ್ಥಿರವಾಯಿತು. ಈಗ ವ್ಹಾಯಿಸರಾಯರ ಕಡೆಗೆ ಮುಸಲ್ಮಾನ್ ಪ್ರತಿಷ್ಠಿತರ ಶಿಷ್ಟಮಂಡಲವು ಹೋಗಿ ಅವನ ಸಲುವಾಗಿ ದಯಾಯಾಚನೆ ಮಾಡುವರಂತೆ.

—ಬನಾರಸ ವಿಶ್ವವಿದ್ಯಾಲಯದ ೧೮ ನೆಯ ವಾರ್ಷಿಕ ಸಭೆಯು ಕಳೆದ ತಿಂಗಳ ೧೯ ನೆಯ ತಾರೀಖಿನ ದಿವಸ ನೆರೆದು ಬಿಕಾನೇರದ ಮಹಾರಾಜರನ್ನು ಚಾನ್ಸಲರರನ್ನಾಗಿಯೂ ಜೋಧಪುರ ಮತ್ತು ಜಯಪುರ ಮಹಾರಾಜರನ್ನು ಪ್ರೊ ಚಾನ್ಸಲರರನ್ನಾಗಿಯೂ ಹಾಗೂ ಪಂ. ಮಾಲವೀಯರನ್ನು ವ್ಹಾಯಿಸ ಚಾನ್ಸಲರರನ್ನಾಗಿಯೂ ಮಾಡಲಾಯಿತು.

—ಸೀಖ ಮತ್ತು ಹಿಂದುಗಳಿಗೆ ಪವಿತ್ರವಾದ ಅರಳಿಯ ಮರವನ್ನು ಏರುತ್ತಿದ್ದ ಒಬ್ಬ ಮುಸಲ್ಮಾನ ಹುಡುಗನಿಗೆ ಕೆಲ ಸೀಖರು ಬಡಿಸಲು ಅದೇ ಕಾರಣವಾಗಿ ಸೀಖ ಮತ್ತು ಮುಸಲ್ಮಾನರಿಗೆ ಹೊಡೆದಾಟವಾಗಿ ಆತಾರಿಯ ೩ ಮುಸಲ್ಮಾನರು ತೀವ್ರ ಗಾಯಪಟ್ಟಿರುವರು.

—ಮುಂಬಯಿ ಸರಕಾರದವರು ಸಂಯುಕ್ತ ಪಾರ್ಲಿಮೆಂಟರಿ ವರದಿಯ ಸಾರಾಂಶವನ್ನು ದೇಶೀ ಭಾಷೆಗಳಲ್ಲಿ ಪ್ರಸಿದ್ಧಿಸಿರುವರು.

ಮೊದಲಾದ ಗುರುತುಗಳು, ಉದ್ಯೋಗ ಮತ್ತು ನಿತ್ಯವೂ ವಾಸಿಸುವ ಗ್ರಾಮ, ಅವನ ಸಹಿ, ಭಾವಚಿತ್ರ ಮೊದಲಾದವುಗಳಿರುತ್ತವೆ. ಸಹಿಯನ್ನು ಪೋಸ್ಟ ಮಾಸ್ತರನ ಸಮಕ್ಷಮವೇ ಮಾಡಬೇಕಾಗುತ್ತದೆ.

ಇಷ್ಟರ ಮೇಲಿಂದ ಪರಿಚಯವು ಪ್ರಕಟವಾಗಬಹುದು. ಅದರೂ ಪೋಸ್ಟಿನವರು ಇನ್ನೂ ಅನೇಕ ಸಂಗತಿಗಳನ್ನು ವಿಚಾರಿಸಬಹುದು. ಮೂರು ವರುಷಗಳೊಳಗಾಗಿ ಮುಖ ಮುದ್ರೆಯು ವ್ಯತ್ಯಾಸವಾಗಿ ಗುರುತು ಹತ್ತುವದು ಕಠಿಣವೆನಿಸಿದರೆ ಪುನಃ ಹೊಸದೊಂದು ಭಾವಚಿತ್ರವನ್ನು ಅಂಟಿಸಬಹುದು.

ಈ ಕಾರ್ಡು ೪|| ಇಂಚು ಉದ್ದ ಮತ್ತು ೩||| ಇಂಚು ಅಗಲವಿದ್ದು ಅರಿವೆಯ ಹೊದಿಕೆಯಲ್ಲಿ ಕಾರ್ಡನ್ನಿಟ್ಟಿರುವುದರಿಂದ ಅದನ್ನು ಕಾಯ್ದಿಟ್ಟುಕೊಳ್ಳಲು ಕಠಿಣವಾಗದು. ಇದರಿಂದ ಪ್ರವಾಸಿಗಳು, ಯಾತ್ರಿಕರು, ದೊಡ್ಡ ಕಂಪನಿಗಳ ಸಂಚರಿಸುವ ಗುಮಾಸ್ತರು; ಇವರೆಲ್ಲರಿಗೆ ತಮ್ಮ ಗುರುತಿನ ಕಾರ್ಡು ತೋರಿಸಿ ಏನೊಂದು ಅಡ್ಡಿಯಿಲ್ಲದೆ ಬೇಕಾದ ಪೋಸ್ಟ ಆಫೀಸಿನಲ್ಲಿ ತಮ್ಮ ವಿಳಾಸದ ರಜಿಸ್ಟರ, ಮನಿ ಆರ್ಡರ, ಮೊದಲಾದವುಗಳನ್ನು ತೆಗೆದುಕೊಳ್ಳಬಹುದು. ಹಾಗೂ ಇದೇ ಗುರ್ತಿನ ಕಾರ್ಡಿನ ಆಧಾರದಿಂದ ಉಳಿದ ವ್ಯವಹಾರಗಳಲ್ಲಿಯೂ ತಮ್ಮ ಪರಿಚಯವನ್ನು ಸ್ಪಷ್ಟಮಾಡಿ ತೋರಿಸಲು ಅನುಕೂಲವಾಗುವದು.

—ಹಿಂದೂ ಬಾಲೆಯರನ್ನು ಎಬ್ಬಿಸಿಕೊಂಡು [illegible]ುವ ಒಂದು ತಂಡವನ್ನು ಸಿಂಧದಲ್ಲಿ ಪೋಲೀಸರು ಗೊತ್ತು ಹಚ್ಚಿದ್ದಾರೆ. ಆ ತಂಡದವರು ಇಲ್ಲಿಯ ವರೆಗೆ ನೂರಾರು ತರುಣಿಯರನ್ನು ಅಪಹಾರ ಮಾಡಿರುವರಂತೆ.

—ಬಂಗಾಲದಲ್ಲಿ ಬಂಧಿಸಲ್ಪಟ್ಟ ವಿದ್ಯಾರ್ಥಿಗಳಲ್ಲಿ ೧೪೬ ಜನರು ಪರೀಕ್ಷೆಗೆ ಕೂಡ್ರಲು ವಿಶ್ವವಿದ್ಯಾಲಯದವರು ಅಪ್ಪಣೆ ಕೊಟ್ಟಿದ್ದಾರೆ.

—ಬಾಬು ಸುಭಾಸಚಂದ್ರಬೋಸರ ತಂದೆಯವರಾದ ಶ್ರೀ ಜಾನಕೀನಾಥ ಬೋಸರವರು ೩ ನೆಯ ತಾರೀಖಿನ ದಿವಸ ಸ್ವರ್ಗಸ್ಥರಾದರು. ಆಗ್ಗೆ ಸುಭಾಸ ಬಾಬುಗಳ ಅಣ್ಣಂದಿರಾದ ಶ್ರೀ ಶರಚ್ಚಂದ್ರ ಬೋಸರವರು ಅವರ ಹತ್ತಿರ ಇದ್ದರು.

—ಪಂಜಾಬ ಪ್ರಾಂತಿಕ ಕಾಂಗ್ರೆಸ್ ಕಮೀಟಿಯ ಅಧ್ಯಕ್ಷರಾದ ಡಾ. ಸತ್ಯಪಾಲ ಇವರು ದಿಲ್ಲಿಯಲ್ಲಿ ಅಸೆಂಬ್ಲಿ ಚುನಾವಣೆಯ ಬಗ್ಗೆ ಮಾಡಿದ ಭಾಷಣದ ಆಕ್ಷೇಪದಿಂದ ಬಂಧಿಸಲ್ಪಟ್ಟು ಸದ್ಯಕ್ಕೆ ೨ ಸಾವಿರ ರೂ.ಮುಚ್ಚಳಿಕೆಯ ಮೇಲೆ ಬಿಡುಗಡೆ ಹೊಂದಿದ್ದಾರೆ.

—ನಾತಾಳ ಸೂಟಿಯಲ್ಲಿ ಪುಣೆಯಲ್ಲಿ ಸೇರುವ ಪ್ರಾಗತಿಕ ಪರಿಷತ್ತಿನ ಅಧ್ಯಕ್ಷಪದವು ಪಂ. ಹೃದಯನಾಥ ಕುಂಝುರು ಅವರಿಗೆ ಕೊಡಲ್ಪಡುವದು.

—ನಿಜಾಮ ಸಾಹೇಬರ ಸಿಲ್ವರ ಜ್ಯುಬಿಲಿ ಉತ್ಸವವು ಆ ಸಂಸ್ಥಾನದಲ್ಲಿ ತೀವ್ರವೇ ನೆರವೇರಿಸಲ್ಪಡುವದು. ಸದ್ಯಕ್ಕೆ ಮಹಾರಾಜಾ ಸರ ಕಿಶನ್‌ಪ್ರಸಾದರವರ ಅಧ್ಯಕ್ಷತೆಯಲ್ಲಿ ಒಂದು ಮಂಡಲವು ನಿರ್ಮಿತವಾಗಿದೆ.

—ಬನಾರಸ ಹಿಂದು ವಿಶ್ವವಿದ್ಯಾಲಯದಲ್ಲಿಯ ರುದ್ರದತ್ತನೆಂಬ ವಿದ್ಯಾರ್ಥಿಯು ಬಂಧಿಸಲ್ಪಟ್ಟಿದ್ದಾನೆ. ಅಜಮೀರದ ಗುಪ್ತ ಕಾರಸ್ಥಾನದಲ್ಲಿ ಅವನ ಅಂಗವಿದೆಯೆಂಬ ಸಂಶಯವೇ ಇದಕ್ಕೆ ಕಾರಣ.

—ಸರಹದ್ದ ಪ್ರಾಂತದೊಳಗಿನ ಹಳ್ಳಿಗಳನ್ನು ನಿರೀಕ್ಷಿಸುವದಕ್ಕಾಗಿ ಮಹಾತ್ಮಾ ಗಾಂಧಿಯವರು ಸರಕಾರದವರ ಅನುಮತಿಯನ್ನು ಬೇಡಿದ್ದಾರೆ.

—ಅಸೆಂಬ್ಲಿಯ ಅಧ್ಯಕ್ಷಸ್ಥಾನವನ್ನು ಶ್ರೀ ಶರಚ್ಚಂದ್ರ ಬೋಸರವರಿಗೆ ಕೊಡಬೇಕೆಂದು ರಾಷ್ಟ್ರೀಯಪಕ್ಷದವರು ಸೂಚಿಸಿದ್ದಾರೆ.

—ಪಂ. ಮಾಲವೀಜಿಯವರ ಪತ್ನಿಯವರ ಪ್ರಕೃತಿಯು ನೆಟ್ಟಗಾಗಿದ್ದು ಈಗ ಎಥಾಕ್ರಮ ಆಹಾರ ಸೇವಿಸುತ್ತಿದ್ದಾರೆ.

—ಆಲ್ಫ್ರೆಲ್ ಗೋಮೇಜ ಎಂಬ ಮದ್ರಾಸಿ ಕ್ರಿಸ್ತೀ ಗೃಹಸ್ಥನನ್ನು ದೇವಾಸದಲ್ಲಿ ಹಿಂದು ಧರ್ಮಕ್ಕೆ ತೆಗೆದುಕೊಳ್ಳಲಾಯಿತು. ಅವನಿಗೆ ರಂಗಸ್ವಾಮಿ ಸುಬ್ರಹ್ಮಣ್ಯ ಪಿಳ್ಳೆ ಎಂಬ ಹೆಸರಿಡಲಾಗಿದೆ.

—ಸಂಯುಕ್ತಪ್ರಾಂತ ಸರಕಾರದವರು ಆದಿ ಜನರ ಶಿಕ್ಷಣಕ್ಕಾಗಿ ಒಟ್ಟಿಗೆ ೧ ಲಕ್ಷ ೨೦ ಸಾ. ರೂ. ತೆಗೆದಿಟ್ಟಿದ್ದಾರೆ. ಅಲ್ಲಿ ಜಿಲ್ಲೆಗೊಂದರಂತೆ ಅವರಿಗಾಗಿ ಶಿಕ್ಷಣ ಮಂಡಲಗಳನ್ನು ಸ್ಥಾಪಿಸಿರುವರು.

—ಬಳ್ಳಾರಿ ಜಿಲ್ಲೆಯ ಕನ್ನಡಿಗರು ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವಾಗಬೇಕೆಂದು ವ್ಹಾಯಿಸರಾಯರ ಕಡೆಗೊಂದು ಮನವಿಯನ್ನು ಮಾಡಿಕೊಂಡಿದ್ದಾರೆ.

—ಅಮೇರಿಕಾ ಸರಕಾರದವರು ತಮ್ಮ ದೇಶದಲ್ಲಿ ನಿರುದ್ಯೋಗಿಗಳಾಗಿದ್ದ ೧ ಕೋಟಿ ೭೦ ಲಕ್ಷ ಜನರನ್ನು ಕೂಲಿಗೆ ಹಚ್ಚಿದ್ದಾರೆ.

—ಸರಹದ್ದ ಪ್ರಾಂತದಲ್ಲಿ ಒಂದು ವರ್ಷದೊಳಗೆ ೫೩ ಕೊಲೆಗಳಾಗಿವೆ. ಇಷ್ಟು ಕೊಲೆಗಳು ಜಗತ್ತಿನಲ್ಲಿ ಎಲ್ಲಿಯೂ ಆಗಿಲ್ಲ.

—[illegible] ಖಾನ ಅಬ್ದುಲ್ ಗಫರಖಾನರು ತಮ್ಮ ಭಾಷಣದಲ್ಲಿ, ನಮ್ಮ ಅನೈಕ್ಯವೇ ಗುಲಾಮಗಿರಿಯ ಕಾರಣವೆಂದೂ ಹಿಂದುಸ್ಥಾನದಲ್ಲಿ ೩೫ ಕೋಟಿ ಶಕ್ತಿಗಳು ಸಹ ಗುಲಾಮಗಿರಿಯನ್ನು ಸಹಿಸಲಾರವೆಂದೂ ಹೇಳಿದರು.

—ಶ್ರೀ ರಂಭಾಪುರಿ ಸ್ವಾಮಿಗಳವರು ನಂಜನಗೂಡಿಗೆ ದಯಮಾಡಿಸುವವರಿದ್ದಾರೆ. ಇವರ ಆನೆಯು ಮೈಸೂರಿನಲ್ಲಿ ತಪ್ಪಿಸಿಕೊಂಡು ಬಂದು ಮಹಾರಾಜಾ ಕಾಲೇಜಿನ ವಾರ್ಡನನ ಮನೆಯ ಪೌಳಿಯ ಗೋಡೆಯನ್ನೂ ಇನ್ನೂ ಅನೇಕ ಗೋಡೆಗಳನ್ನು ಕೆಡವಿತ್ತು.

—ಮೈಸೂರು, ಬಡೋದೆ ಮೊದಲಾದ ಸಂಸ್ಥಾನಗಳಲ್ಲಿ ಮಂತ್ರಿಯ ಪದದಲ್ಲಿದ್ದ ವ್ಹಿ. ಪಿ. ಮಾಧವರಾವ ಎಂಬ ಕನ್ನಡಿಗರು ತಮ್ಮ ೮೫ ನೆಯ ವಯಸ್ಸಿನಲ್ಲಿ ಮರಣ ಹೊಂದಿದರು, ಅವರ ಸ್ಮರಣಾರ್ಥವಾಗಿ ಬಡೋದಾ ಸಂಸ್ಥಾನದ ಶಾಲೆ, ಕಾಲೇಜ ಕೋರ್ಟು ಕಚೇರಿಗಳಿಗೆ ಸೂಟೀ ಕೊಡಲಾಗಿದ್ದಿತು.

—ಲಾಹೋರ ಭಾರತ ಮುದ್ರಣಾಲಯದಲ್ಲಿದ್ದ ಒಬ್ಬ ಜವಾನನು ಯಜಮಾನನು ತನ್ನ ನಾಲ್ಕು ತಿಂಗಳ ವೇತನಕೊಡಲಿಲ್ಲವೆಂದು ಅವನ ಮುದ್ರಣ ಶಾಲೆಗೆ ಬೆಂಕಿಹಚ್ಚಿದನು. ಅವನನ್ನು ಬಂಧಿಸಿ ಕೋರ್ಟಿಗೆ ಕಳಿಸಲು ನ್ಯಾಯಾಧೀಶರು ಅವನಿಗೆ ೭ ತಿಂಗಳ ಕಠಿಣ ಶಿಕ್ಷೆ ವಿಧಿಸಿದರು.

—ಶ್ರೀ ರಂಗಪಟ್ಟಣದ ಜಲಾಶಯದ ಪ್ರಾರಂಭೋತ್ಸವವು ಶ್ರೀ ಜಯ ಚಾಮರಾಜ ಒಡೆಯರವರಿಂದ ಪ್ರಾರಂಭಿಸಲ್ಪಟ್ಟಿತು. ಆ ಕಾಲಕ್ಕೆ ಯುವರಾಜರು ಒಂದು ಚಿಕ್ಕ ಭಾಷಣದಲ್ಲಿ ಆ ಕಾರ್ಯಕ್ಕೆ ಧನವನ್ನು ಕೊಟ್ಟ ಶ್ರೀ ರಾಮಯ್ಯನವರನ್ನು ಗೌರವಿಸಿ ಸಾರ್ವಜನಿಕ ಕಾರ್ಯದಲ್ಲಿ ತಾವು ಭಾಗವಹಿಸಿದ್ದು ಇದೇ ಮೊದಲೆಂದು ತಿಳಿಸಿದರು.

—ಮೈಸೂರು ಸಂಸ್ಥಾನದ ತಿರಕಣಾಂಬಿಯ ಖಾದಿ ಕೇಂದ್ರವನ್ನು ಬದನವಾಳ ಕೇಂದ್ರಕ್ಕೆ ಕೂಡಿಸಿ ಉಳಿತಾಯವಾದ ಹಣದಿಂದ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಖಾದಿ ಕೇಂದ್ರಗಳನ್ನು ಸ್ಥಾಪಿಸುವರು.

—ಶ್ರೀ ಸುಭಾಸಚಂದ್ರ ಬೋಸರು ವಿಮಾನ ಮಾರ್ಗವಾಗಿ ಕರಾಚಿಗೆ ಬರಲು ತಂದೆ ತೀರಿದ ಸುದ್ದಿಹತ್ತಿತು. ಕೂಡಲೆ ಅವರ ಕಣ್ಣುಗಳು ಉಬ್ಬಿ ಬಂದು ಹಾಗೇ ಅವರು ಕಲಕತ್ತೆಗೆ ಬಂದಿಳಿದರು ಈಗ ಅವರು ಮನೆಯವರ ಹೊರತು ಯಾರ ಸಂಗಡಲೂ ಮಾತಾಡಲಾಗದೆಂದೂ, ಯಾವ ಅಭಿಪ್ರಾಯವನ್ನೂ ವ್ಯಕ್ತಮಾಡಲಾಗದೆಂದೂ ಇದಕ್ಕೆ ತಪ್ಪಿದರೆ ೭ ವರ್ಷ ಶಿಕ್ಷೆಯೆಂದೂ ವಿಧಿಸಲಾಗಿದೆ.

—ಬಿಹಾರ ಸೆಂಟ್ರಲ್ ರಿಲೀಫ ಕಂಪನಿಯವರು ಭೂಕಂಪ ಪೀಡಿತ ಜನರಿಗಾಗಿ ಒಂದು ಆದರ್ಶ ಹಳ್ಳಿಯನ್ನು ನಿರ್ಮಿಸಲಿಕ್ಕೆ ೪೦ ಸಾವಿರ ರೂ. ಕೊಟ್ಟಿರುವರು. ಇವರಲ್ಲಿ ೨೦೦೦ ಜನರು ವಾಸಮಾಡಬಲ್ಲರು.

—ತುರ್ಕಸ್ಥಾನದಲ್ಲಿ ೨೨ ವರ್ಷಕ್ಕೆ ಮೇಲ್ಪಟ್ಟ ಸ್ತ್ರೀಯರಿಗೆ ಮತವಿರುವ ಅಧಿಕಾರವನ್ನು ಕೊಡಲಾಗಿದೆ. ೩೦ ವರ್ಷದ ಮೇಲಿನ ಸ್ತ್ರೀಯರು ಅಲ್ಲಿ ಡೆಪ್ಯುಟಿಗಳಾಗಬಹುದು.

—ಸರ ಪ್ರಫುಲ್ಲಚಂದ್ರರಾಯರವರು ಒಂದು ಪತ್ರಿಕ ಹೊರಡಿಸಿ ಪ್ರಸಿದ್ಧ ಕಮ್ಯುನಿಸ್ಟ ಮುಂದಾಳುಗಳಾದ ಶ್ರೀ. ಎಮ್. ಎನ್. ರಾಯರವರು ಕಾರಾಗೃಹದಲ್ಲಿ ಅತಿ ಅಸ್ವಸ್ಥರಾದುದರಿಂದ ಮುಕ್ತ ಮಾಡಬೇಕೆಂದು ಸರಕಾರಕ್ಕೆ ಸೂಚಿಸಿದ್ದಾರೆ.

—ಅ. ಭಾ. ಹರಿಜನ ಸಂಘದ ಮಧ್ಯವರ್ತಿ ಸಭೆಯು ದಿಲ್ಲಿಯಲ್ಲಿ ಇದೇ ತಿಂಗಳ ಕೊನೆಗೆ ಸೇರ ವದು. ಅದಕ್ಕೆ ಮಹಾತ್ಮರು ಉಪಸ್ಥಿತರಾಗುವರು.

ಪ್ರಾಚೀನ ನಾಣ್ಯಗಳ ಶೋಧ.

ಇಂಗ್ಲಂಡದಲ್ಲಿ ಒಂದು ಕಂದಕವನ್ನು ಅಗಿಯುವಾಗ್ಗೆ ಒಬ್ಬ ಕೂಲಿಯವನಿಗೆ ೩೬೦ ನಾಣ್ಯಗಳು ದೊರೆತವು. ಅವನ್ನು ಅವನು ಒಬ್ಬ ದಾಗಿಣಕಾರನಿಗೆ ೫ ಶಿಲಿಂಗುಗಳಿಗೆ (ಸಾಧಾರಣ ೪ ರೂಪಾಯಿ) ಮಾರಿದನು. ಆ ದಾಗಿಣಕಾರನು ಅವನ್ನು ಸರಾಫರಲ್ಲಿ ಮಾರಲಿಕ್ಕೆ ಒಯ್ದನು. ಅವು ಅವರಿಗೆ ಬಹು ಮೂಲ್ಯ ನಾಣ್ಯಗಳೆಂದು ತಿಳಿದು ಬಂದಿತು. ಅವುಗಳಲ್ಲಿ ಅನೇಕ ನಾಣ್ಯಗಳು ಬಂಗಾರದವಿದ್ದವು. ಅವು ಬಹಳೇ ಪುರಾತನವೆಂದು ಕಂಡುಬಂದದ್ದರಿಂದ ಅವರು ಆ ಮನುಷ್ಯನನ್ನೂ ಆ ನಾಣ್ಯಗಳನ್ನೂ ವಸ್ತು ಸಂಗ್ರಹಾಲಯ (Britisb museum) ಕ್ಕೆ ಕಳಿಸಿಕೊಟ್ಟರು. ಅಲ್ಲಿಯ ಅಧಿಕಾರಿಗಳು ಅವು ಬಹು ಮಹತ್ವವಾದವುಗಳೆಂದು ಅಭಿಪ್ರಾಯ ಪಡುತ್ತಾರೆ. ಒಬ್ಬರು ಅವು ಕ್ರಿ. ಪೂ. ೬೫ ನೆಯ ಇಸ್ವಿಯವೆಂದು ಹೇಳುತ್ತಾರೆ. ಸದ್ಯಕ್ಕೆ ಪೋಲೀಸರು ಅವುಗಳನ್ನು ಅಗಿದು ತೆಗೆದ ಮನುಷ್ಯನನ್ನು ಶೋಧಿಸುತ್ತಿದ್ದಾರೆ. ಕಗ್ಗೇನುಬಲ್ಲ ಕಸ್ತೂರಿಯ ವಾಸನೆಯ!

ವಿರೂಪಾಕ್ಷಪಂಡಿತಕೃತ

ಚೆನ್ನಬಸವ ಪುರಾಣ

ಮೂಲಕಾವ್ಯ ಮುನ್ನುಡಿ ಪ್ರಸ್ತಾವನೆ ಕಥಾಸಾರಾಂಶ ಕೋಶಗಳನ್ನೊಳಗೊಂಡು

ಗ್ರಂಥದ ಒಟ್ಟು ಪುಟಗಳು ೧೦೩೨

ಅಂದವಾದ ಮುದ್ರಣ ಚೆಂದವಾದ ಕಟ್ಟು

ಸುಂದರವಾದ ನಾನಾ ಬಣ್ಣಗಳ ಚಿತ್ರಗಳು

ಈ ಬಗ್ಗೆ ಪ್ರಾಕ್ತನವಿಮರ್ಶವಿಚಕ್ಷಣ ಮಹಾಮಹೋಪಾಧ್ಯಾಯ ರಾವಬಹದ್ದೂರ **ಆರ್ ನರಸಿಂಹಾಚಾರ್ಯರು ಅಂದಿರುವುದೇನೆಂದರೆ:**

“ಗ್ರಂಥದ ಮುದ್ರಣ, ಕಟ್ಟು, ಚಿತ್ರಗಳು ನೇತ್ರಗಳಿಗೆ ಆನಂದದಾಯಕವಾಗಿವೆ. ವೀರಶೈವ ಪುರಾಣಗಳಲ್ಲಿ ಇಷ್ಟು ಅಂದವಾಗಿ ಮುದ್ರಿಸಿರುವ ಪುರಾಣವನ್ನು ನಾನು ನೋಡಿಲ್ಲ. ಈ ಕಾರ್ಯವು ಸ್ತುತ್ಯವಾಗಿದೆ. ಶೋಧನದ ವಿಷಯದಲ್ಲಿಯೂ ಹಲವು ಕೈಬರಹದ ಪತ್ರಿಗಳನ್ನು ಸಂಪಾದಿಸಿ ವಿಮರ್ಶಿಸಿ ಕಾರ್ಯವನ್ನು ನಿರ್ವಹಿಸಿರುವದು ಶ್ಲಾಘನೀಯವಾಗಿದೆ. **ತಮ್ಮ ಸಂಸ್ಥೆಯವರು ಈ ಗ್ರಂಥವನ್ನು ಇಷ್ಟು ಮುದ್ದಾಗಿ ಮುದ್ರಿಸಿ ವೀರಶೈವರಿಗೆ ಮಾತ್ರವೇ ಅಲ್ಲ ಕನ್ನಡಿಗರಿಗೆಲ್ಲ ಬಹಳ ಉಪಕಾರ ಮಾಡಿದ್ದಾರೆಂಬುವುದರಲ್ಲಿ ಸಂದೇಹವಿಲ್ಲ.**”

ನುಣುಪಾದ ಕಾಗದ	ರೇಶಿಮೆಯ ಕಟ್ಟು		ರೂ.	೮—೦—೦
ಬೆಂಡ ಕಾಗದ	,,	,,	,,	೮—೮—೦
ನುಣುಪು ಕಾಗದ	ಕ್ಯಾಲಿಕೋ ಕಟ್ಟು		,,	೬—೦—೦
ಬೆಂಡ ಕಾಗದ	,,	,,	,,	೬—೮—೦
,, ,,	ಲಾಯಬ್ರರಿ ಎಡಿಶನ್		,,	೮—೦—೦

ವ್ಹಿ. ಪಿ. ವೆಚ್ಚ ಬೇರೆ.

ಅನುಕೂಲವಿದ್ದಲ್ಲಿ ಒಂದು ಅಥವಾ ಹೆಚ್ಚು ಪ್ರತಿಗಳನ್ನು ರೇಲ್ವೇ ಪಾರ್ಸಲದಿಂದ ತರಿಸಿಕೊಂಡರೆ ವೆಚ್ಚವು ಬಹಳ ಕಡಿಮೆ ಬೀಳುವದು.

ಲಾಯಬ್ರೇರಿಯನ್, ವಾಙ್ಮಯಶಾಖೆ

ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ

ಪ್ಲೇಗ ಸಂಜೀವಿನಿ.

ಅತ್ಯಾಶ್ಚರ್ಯಕರವಾದ ಗುಣ! **ಕೇವಲ ೬ ತಾಸುಗಳಲ್ಲಿಯೇ ಗುಣ!**

ಇದನ್ನುಸೇವನೆ ಮಾಡುವದರಿಂದ ಪ್ಲೇಗಿನ ಭಯವೇ ಇಲ್ಲ!

೧೦೦ ಕ್ಕೆ ೧೦೦ ರಂತೆ ಗುಣ!!

ಶ್ರೀ ಮನ್ನಿರಂಜನ ಶಾಂತವೀರ ಸ್ವಾಮಿಗಳು ಗುರುಮಠಕಲ್ ಇವರು ಲೋಕ ಕಲ್ಯಾಣಾರ್ಥವಾಗಿ **ಪ್ಲೇಗ ಸಂಜೀವಿನಿ** ಎಂಬ ದಿವ್ಯ ಔಷಧಿಯನ್ನು ಶೋಧನಮಾಡಿರುವರು. ಪ್ಲೇಗ ರೋಗವು ಎಷ್ಟು ಘಾತುಕವದೆಯೆಂಬುದನ್ನು ಹೇಳುವ ಅವಶ್ಯವಿಲ್ಲ. ಈ ಪ್ಲೇಗಿನಿಂದ ಸಾವಿರಾರು ಜನರು ಸಾಯುತ್ತಿರುತ್ತಾರೆ. ಇದನ್ನು ತಡೆಯುವದಕ್ಕಾಗಿ ಎಷ್ಟೋ ಔಷಧಗಳನ್ನು ತಯಾರ ಮಾಡಿರುವರು. ಅವುಗಳಿಂದೇನೂ ಗುಣವಾದದ್ದು ಕಂಡು ಬರುವದಿಲ್ಲ. ಈ ಪ್ಲೇಗ ಸಂಜೀವಿನಿಯಿಂದ **ಆರೇ ತಾಸು**ಗಳಲ್ಲಿಯೇ ಗುಣವಾಗುತ್ತದೆ. ಇದರ ಒಂದು ಬಾಟ್ಲಿಯ ಕಿಮ್ಮತ್ತು ೧ ರೂ. ೫ ಆಣೆ.

ವಿಶೇಷ ಮಾಹಿತಿಯನ್ನು ಅನುಪಾನ ಪತ್ರಿಕೆಯಲ್ಲಿ ನೋಡಿರಿ.

ವಿಶೇಷ ಸೂಚನೆ— ಅನುಪಾನ ಪತ್ರಿಕೆಯ ಸೂಚನೆಯ ಮೇರೆಗೆ ಔಷಧವನ್ನು ತೆಗೆದುಕೊಂಡಲ್ಲಿ ಖಾತ್ರಿಯಿಂದ ಗುಣವಾಗುವದು. ಎಲ್ಲ ಕಡೆಗೂ ಏಜಂಟರು ಬೇಕು. ವಿಳಾಸ—

ಏಜಂಟ್
ಬಸೆಟ್ಟೆಪ್ಪ ಬಸಪ್ಪ ಹಲಕುರ್ಕಿ,
ಬಾಗಲಕೋಟೆ.

ಪ್ಲೇಗ ಸಂಜೀವಿನಿ ಆಫೀಸ್
ಗುಲಬರ್ಗಾ.

ನೋಟೀಸು.

ವಿಜಾಪುರ ಜಿಲ್ಲೆಯ
ಸಮಸ್ತ ಜನರಿಗೆ ತಿಳಿಸುವದೇನಂದರೆ-

ನಾವು ನಿಮ್ಮ ಜಿಲ್ಲೆಯ ಏಜನ್ಸಿಯನ್ನು ಶ್ರೀ. ಬಸೆಟ್ಟೆಪ್ಪ ಬಸಪ್ಪ ಹಲಕುರ್ಕಿ ಬಾಗಲಕೋಟಿ ಇವರಿಗೆ ಕೊಟ್ಟಿರುವೆವು. ಆದ್ದರಿಂದ ದಯಮಾಡಿ ತಾವೆಲ್ಲರೂ ಪ್ಲೇಗ ಸಂಜೀವಿನಿಯ ಆರ್ಡರ್ ಕೊಡಬೇಕಾದರೆ ಸದರಿಯವರಿಗೇನೇ ಕೊಡಬೇಕೆಂದು ಸವಿನಯ ವಿನಂತಿ.

ಮ್ಯಾನೇಜರ್
ಪ್ಲೇಗ್ ಸಂಜೀವಿನಿ ಆಫೀಸ,
ಗುಲಬರ್ಗಾ.

ಶ್ರೀ ಬಸವೇಶ್ವರ ಆಯುರ್ವೇದಿಕ ಔಷಧಾಲಯ
ರಾಮದುರ್ಗ.

ಆಯುಃ ಕಾಮಾಯಮಾನೇನ ಧರ್ಮಾರ್ಥಸುಖಸಾಧಕಮ್।
ಆಯುರ್ವೇದೋಪದೇಶೇಷು ವಿಧೇಯಃ ಪರಮಾದರಃ॥

ಸುಕುಮಾರ ಲೇಹ್ಯವು— ಈ ಲೇಹ್ಯವು ೧೦ ವರುಷದ ಅನುಭವಪೂರ್ಣವಿದ್ದು. ಇದು ೨೨ ವನಸ್ಪತಿಗಳಿಂದ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟಿರುತ್ತದೆ. ಇದನ್ನು ಬೆಳಗ್ಗೆ ಊಟದ ಮೊದಲು ರಾತ್ರಿ ಊಟವಾದ ನಂತರ ಅರ್ಧ ತೊಲೆಯಿಂದ ೧ ತೊಲೆಯವರೆಗೆ ಸೇವಿಸಿ ಮೇಲೆ ಕಾಸಿ ಆರಿಸಿದ ಹಾಲನ್ನು ಕುಡಿಯುವದರಿಂದ ಪ್ರಮೇಹ, ಸ್ವಪ್ನೇಂದ್ರಿಯ, ಧಾತು ಹೋಗುವದು, ಉರಿಮೂತ್ರ ಗುಣಪಡಿಸಿ ದೀಪನವನ್ನೂ, ರುಚಿಯನ್ನೂ, ಧಾತುವರ್ಧನವನ್ನೂ, ಬಲವನ್ನೂ ಹಾಗೂ ಚೈತನ್ಯವನ್ನುಂಟುಮಾಡುವದು. ೨೪ ತೊ. ಡಬ್ಬಿಗೆ ೨-೦-೦.

ಜೀವಾಮೃತ ಲೇಹ್ಯವು— ಶಾಸ್ತ್ರಜ್ಞರಿಗೆ ಕರ್ಪುರಗುಡ್ಡವು ಹೇಗೆ ಪ್ರಸಿದ್ಧವಿರುವದೋ ಹಾಗೆ ನಮ್ಮಲ್ಲಿ ಮೇಗುಂಡೇಶ್ವರ ಕೊಳ್ಳವು ಪ್ರಸಿದ್ಧವಿರುವದು. ಅಲ್ಲಿಯ ೩೦ ವನಸ್ಪತಿಗಳಿಂದ ಇದು ತಯಾರಿಸಲ್ಪಟ್ಟಿರುತ್ತದೆ ಇದನ್ನು ರಾತ್ರಿ ಊಟವಾದ ನಂತರ ೧ ತೊಲೆಯಂತೆ ಸೇವಿಸಿ ಸ್ವಲ್ಪ ಬಿಸಿನೀರನ್ನು ಕುಡಿದರೆ ಸುಖವಿರೇಚನೆಯಾಗುವದಲ್ಲದೆ ಉಷ್ಣ, ಪಿತ್ತ, ವಾತ, ನೋವು, ಅಜೀರ್ಣ, ಅಗ್ನಿಮಾಂದ್ಯ ಮೊದಲಾದ ವ್ಯಾಧಿಗಳನ್ನು ಗುಣಪಡಿಸಿ ರಕ್ತಶುದ್ಧಿಮಾಡುವದು. ೨೪ ತೊಲಿ ಡಬ್ಬಿಗೆ ೧-೮-೦.

ಕಾಡುಕವಡಿಕಾಯಿ (ಇಂದ್ರವಾರುಣಿ) ತೈಲವು— ಮಾಧವನಿದಾನ ಪ್ರಕಾರ ಮನುಷ್ಯರಿಗೆ ೮೦ ತರದ ವಾತನೋವುಗಳೂ ೮ ತರದ ಹೊಟ್ಟೆ ಶೂಲಿಗಳಿರುವವು. ಸ್ತ್ರೀಯರಿಗೆ ಹೊಲೆಕುಟ್ಟು ಅಂದರೆ ಗರ್ಭ ನಿಲ್ಲದೆ ೧೨-೧೫ ದಿವಸಕ್ಕೆ ರಕ್ತ ಹೋಗುತ್ತಿದ್ದರೆ ಸ್ತ್ರೀ ಸಂಬಂಧವಾದ ಮೇಲ್ಕಂಡ ಎಲ್ಲ ರೋಗಗಳಿಗೆ ಖಾತ್ರಿಯಾಗಿ ಗುಣಕಾರಿಯಾಗಿದೆ. ಅನುಪಾನ ಪತ್ರಿಕೆಯು ಬಾಟ್ಲಿಯ ಮೇಲೆ ಇರುವದು. ೪ ಔಂಸಿನ ಬಾಟ್ಲಿಗೆ ೧-೪-೦

ನಾರಿನ ವೈರಿಯು— ಕಾಲಿಗೆ ಅರಿವೆ ಕಟ್ಟಿಕೊಂಡು ನರಳುವ ಸಾವಿರಾರು ಜನರು ಈ ನಾರಿನ ರೋಗದಿಂದ ವಾಸಿಯಾಗಿರುವರು. ಕ್ರಿ. ೮ ಆಣೆ. ೨೪ ತಾಸಿನಲ್ಲಿ ಗುಣವು.

ನಮ್ಮ ನಂದೀ ಛಾಪಿನ ಗುರುತಿನ ಔಷಧವನ್ನು ಎಲ್ಲ ಕಡೆಯಲ್ಲಿ ಅಂಗಡಿಕಾರರು ಮಾರುತ್ತಾರೆ. ಹಲ ರೋಗಂಕ್ಕೆ ೩ರೂ ೩ರ ದಿವಸಗಳಲ್ಲಿ ಗುಣವು. ಪತ್ರಿಕೆಯಲ್ಲಿ ಕೊಟ್ಟಿರುವ ಓದಿ ಧಿಕ್ಕರಿಸಬೇಡಿರಿ. **ಒಂದು ವೇಳೆಯಾದರೂ ಪರೀಕ್ಷಿಸಿ** ನೋಡಿರಿ. ಬಡವರಿಗೂ ಶ್ರೀಮಂತರಿಗೂ ಸೋಯಿ ದರದಿಂದ ಕೊಡಲ್ಪಡುವದು.

ಪತ್ತೆ:—**ವೈದ್ಯ ಮಡಿವಾಳಪ್ಪ ಮುಳ್ಳೂರು, ಸಂ. ರಾಮದುರ್ಗ.** S. M. C.

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೧-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಕಾಯಕವೆ ಕೈಲಾಸ	೦-೩-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ವಿಜಯವಾಣಿ	೦-೨-೦
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ** ಪೋ. ಆಲಮಟ್ಟಿ ಜಿ. ವಿಜಾಪುರ.

ಓಂ

ವಿಚಾರ ಕ್ರಾಂತಿಯನ್ನುಂಟು ಮಾಡುವ
ಹೊಸ ಪುಸ್ತಕ.

ವೀರಶೈವ ಮತಾಚಾರ್ಯರ

ಕಾಲ ನಿರ್ಣಯ.

ಲೇಖಕರು—
ಕರ್ಣಮಂಗಲಂ ●ಕಂಠಯ್ಯನವರು.

ಪ್ರತಿಯೊಬ್ಬ ವೀರಶೈವನೂ
ಅತ್ಯವಶ್ಯಕವಾಗಿ ಓದತಕ್ಕ ಪುಸ್ತಕ.

ಜಾಗ್ರತೆ ತರಿಸಿರಿ. ಬೆಲೆ ೧೨ ಆಣೆ.

ಮ್ಯಾನೇಜರ— ಶರಣ ಸಂದೇಶ

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಸ್ಯೆಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಒಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವವರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

ಜಿ ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ, ತುಮಕೂರು
(ಮೈಸೂರು ಸ್ಟೇಟ್)

ಹತ್ತು ತಿಂಗಳುಗಳಲ್ಲಿ

೫,೯೫,೫೦೦ ರೂ. ಗಳ ಪಾಲಿಸಿಗಳು ಕೊಡಲ್ಪಟ್ಟಿವೆ!

ಜನನ, ವಿವಾಹ, ಜೀವ ವಿಮೆಗಳು ಯಾವತ್ತೂ ತರಹದ ಜನರಿಗೆ—
—ಉಪಯೋಗ ಬೀಳಲೆಂಬ ಉದ್ದೇಶದಿಂದ ನಿರ್ಮಿಸಲ್ಪಟ್ಟಿವೆ.

ಪ್ರವೇಶ ಧನ ರೂ. ೫, ತಿಂಗಳ ಕಂತ ೧.

ವಾರ್ಷಿಕ ಚಂದಾ ರೂ. ೧.

ಈ ಕಂಪನಿಯಲ್ಲಿ ಕೆಲಸಮಾಡಲಿಕ್ಕೆ ಯಾವತ್ತು ಭಾಗಗಳಲ್ಲಿ ಸಮರ್ಥರಾದ ಏಜಂಟರುಗಳು ಆರ್ಗನಾಯಜರರ್ಸ, ಪಗಾರ ಅಥವಾ ಕಮಿಶನ್ ಕೆಗೆದುಕೊಂಡು ಕೆಲಸ ಮಾಡಲುಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಯನ್ನು ಕಂಪನಿಗೆ ಬರೆದು ತಿಳಿದುಕೊಳ್ಳಿರಿ

ಎಮ್. ಎಸ್. ಕೇಸರಿ ಬಿ. ಎ. ಎಲ್ ಎಲ್. ಬಿ.
ಮ್ಯಾನೇಜಿಂಗ್ ಏಜಂಟ್ಸ,
ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಸೂರನ್ಸ ಕಂ. ಲಿ. ಧಾರವಾಡ.

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! **ಉತ್ತಮ ಸೌಕರ್ಯ.** **ಎಲ್ಲಕ್ಕಿಂತ ಅನುಕೂಲ ಸ್ಥಳ.**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಡಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .... ಅಂದವಾಗಿ ಸಿಂಗರಿಸಿದ **ಖೋಲಿಗಳು**! ರಮ್ಯವಾದ ಸ್ಥಾನ! ಸುತ ಬೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ **ತಿಂಗಳೊಂದಕ್ಕೆ** ಎರಡೂಹೊತ್ತು ಭೋಜನ ೧೬-೦-೦ **ತಿಂಗಳೊಂದಕ್ಕೆ**

ಭೋಜನ ಮತ್ತು ವಸತಿ ೧-೮-೦ **ದಿನ ಒಂದಕ್ಕೆ** ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦

೬೦ ,, ,, ,, ೧೬-೮-೦

೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟಲ್**

ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ **ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ**

ಹುಲಗಿಲ ಎಣ್ಣೆಯ ಸತ್ವವು ಅಧಿಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ **ಸಂಶೋಧನದಿಂದ**

ಡಾ. ಎಂ. ಸಿ. ಕುಮ್ಮನಕಟ್ಟಿ, ಎಂ. ಎಸ್‌ಸಿ, ಪಿಎಚ್. ಡಿ. ಇವರು ತಯಾರಿಸಿದ

" ಹೊಂಗೋಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ

ಕೊಬ್ಬು (ಚರಬಿ) ಅಥವಾ ಅಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೋಲ್ ಮುಲಾಮಿನಲ್ಲಿ ಮಿಶ್ರವಾಗಿಲ್ಲ.**

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡುಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡುಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ ಹೂವುಗಳ** ಸತ್ವವು ಅಧಿಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ ಡಾ. ಎಂ. ಸಿ. **ಕುಮ್ಮನಕಟ್ಟಿ** ಎಂ. ಎಸ್‌ಸಿ., **ಪಿಎಚ್. ಡಿ, ಇವರಿಂದ ತಯಾರಿಸಲ್ಪಟ್ಟ**

" ಕಚ್ಚೂರ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಸೂಚನೆ—ಔಷಧಿಗಳನ್ನು ಮಾರುವ **ದೊಡ್ಡ** ಅಂಗಡಿಕಾರರಿಂದಾಗಲಿ ಅಥವಾ **ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು** ದೊರಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ **ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ** ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. **ಇಷ್ಟವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.**

ತಯಾರಿಸುವವರು,

ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು

ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್
ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟಿ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.
(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಿಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ವ್ಯ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ಕಂಪೋಜಿಟರು ಬೇಕಾಗಿದ್ದಾರೆ.

ಕನ್ನಡವನ್ನು ಚೆನ್ನಾಗಿ ಬಲ್ಲ ಒಳ್ಳೆಯ ಕಂಪೋಜಿಟರು ಬೇಕಾಗಿದ್ದಾರೆ ಅವರ ಕೆಲಸದ ಮೇಲಿಂದ ವೇತನ ದೊರೆಯುವುದು. ಇಷ್ಟವುಳ್ಳವರು ಜಾಗ್ರತೆ ಬರೆದುಕೊಳ್ಳಬೇಕು.

ಮ್ಯಾನೇಜರ್
"ಶರಣ ಸಂದೇಶ"

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೇಕರ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

REGISTERED No. B. 2891

ನ್ಯಾಯನಿಷ್ಠುರಿ! ದಾಕ್ಷಿಣ್ಯಪರನಲ್ಲ! ಲೋಕವಿರೋಧಿ! ಶರಣನಾರಿಗೂ ಅಂಜುವವನಲ್ಲ!
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ವ. ೨೨೧ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ವರ್ಗಣಿ:- ಅಂಚೆಯ ವೆಚ್ಚ ಸೇರಿ ೩ರೂ.

ಸಂಪುಟ೪. ‖ ಆಲಮಟ್ಟಿ- ಸೋಮವಾರ ತಾರೀಖು ೩೧ ನೆಯ ಡಿಶಂಬರ್ ೧೯೩೪. | ಸಂಚಿಕೆ೧೯

ಧರ್ಮಾತ್ಮಾ ಪಂ. ಮಾಲವೀಜಿಯವರ

೭೪ ನೆಯ ವರ್ಧಂತಿ ಉತ್ಸವ.

೫೦ ವರ್ಷಗಳ ಯಶಸ್ವಿ ರಾಷ್ಟ್ರ ಸೇವೆ.

"ದೇಶದ ಈ ಪರಿಸ್ಥಿತಿಯಲ್ಲಿ
ನನ್ನ
ವರ್ಧಂತ್ಯುತ್ಸವ ವಿಜೃಂಭಣೆಯನ್ನು
ಮಾಡಬೇಡಿರಿ!"

"ವರ್ಧಂತಿ ವರ್ಷಗಳು
ಬರುತ್ತವೆ ಮತ್ತು ಹೋಗುತ್ತವೆ.
ಆದರೆ
ನಾವು ಸತತವಾಗಿ
ರಾಷ್ಟ್ರದ ಕಲ್ಪನೆಯನ್ನೇ
ಮುಂದಿಟ್ಟುಕೊಳ್ಳಬೇಕು!"

ಧರ್ಮಾತ್ಮಾ ಮಾಲವೀಜಿಯವರ ವರ್ಧಂತಿ ಉತ್ಸವವು ಕಳೆದ ೨೫ ನೆಯ ತಾರೀಖಿನ ದಿವಸ ಆಚರಿಸಲ್ಪಟ್ಟು
ಅವರ ೫೦ ವರ್ಷಗಳ ಅದ್ವಿತೀಯ ರಾಷ್ಟ್ರಸೇವೆಯನ್ನು ಶ್ಲಾಘಿಸಲಾಯಿತು.
ಅವರು ತಮ್ಮ ಉತ್ಸವ ಮಾಡುವವರಿಗೆಲ್ಲ ದೇಶದ ಇಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ
ವರ್ಧಂತಿ ಉತ್ಸವವನ್ನು ಮಾಡಬೇಡಿರೆಂದು
ಹೇಳುತ್ತಿದ್ದಾರೆ.

SANGAM CLOTH STORES
Prop: M. S. Hundekar & Sons,
P.O: TERDAL - 587 315
Dt Bijapur, (Karnataka)

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
೨ ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ
ತಿಜೋರಿ ಮೇಕರ್ಸ
ಒಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ದಕ್ಷಿಣ)

ಗಂಡಾಂತರಕ್ಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನ?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾಲಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕನ್ನೋದು ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಯಾಗ, ಒಟ್ಟ ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ, ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾಲ [illegible] ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೆ ನೋಡೀ [illegible] ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು

ಶ್ರೀ ಹೂಲಿ ಸಿದ್ಧಾಂತ ಪಂಚಾಂಗದಲ್ಲಿ

ಜಾಹೀರಾತ

ಕೊಡುವವರು ಜರೂರ ಕಳಿಸಿರಿ.

ಪಂಚಾಂಗವು ಅಚ್ಚಾಗುತ್ತಲಿದೆ. ಕಾರಣ ತಡಮಾಡದೆ ಕಳಿಸಿರಿ.

ವಿಶೇಷ— ಹೆಚ್ಚಿನ ಮಾಹಿತಿಯು ಬಗ್ಗೆ ಪತ್ರ ಬರೆಯಿರಿ.

ಪಂಚಾಂಗ ಪ್ರಕಾಶಕರು,

ಸಿ. ಕೆ. ಲಿಂಗಯ್ಯಾಸ್ವಾಮಿ

ಶ್ರೀ ಲಕ್ಷ್ಮೀ ವಿಲಾಸ ಪುಸ್ತಕಾಲಯ ಗದಗ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಡಿಶಂಬರ್ ತಾರೀಖು ೩೧ ನೆಯ ಸೋಮವಾರ | ಸಂಚಿಕೆ ೧೯.

ಕಟ್ಟಕಡೆಗೆ ರಾಯಚೂರ ವೀರಶೈವರೂ ಸಹಕರಿಸಿದರು.

ಸಾಹಿತ್ಯಸಮ್ಮೇಲನವು ಜಯಪ್ರದವಾಗಿ ಜರುಗಿತು.

[ಡಿಶಂಬರ್ ೨೯ ನೆಯ ವರೆಗಿನ ಸುದ್ದಿ.]

ವೀರಶೈವರ ಸಹಕಾರ

ಪರಸ್ಥಳಗಳಿಂದ ವೀರಶೈವ ಪ್ರಮುಖರನೇಕರು ಸಮ್ಮೇಲನ ತಾ|| ೨೬ ರೊಳಗಾಗಿಯೇ ಬಂದಿದ್ದರು. ಇಲ್ಲಿಯ ಸುಪ್ರಸಿದ್ಧ ಕೀಲರೂ ಕರುಣ ತುಂದಾಳುಗಳೂ ಆದ ಶ್ರೀಮಾನ್ ಪಾಟೀಲ ಸವನಗೌಡರು ಸಮ್ಮೇಲನದ ಕಾರ್ಯಗಳಿಗೆ ಮೊದಲಿನಿಂದಲೂ ಹಾಯಮಾಡುತ್ತಿದ್ದರು. ಸ್ವಾಗತಸಂಘದಿಂದ ತಿದ್ದುಪಾಟಿನ ತ್ರಿಕೆ ಪ್ರಕಟವಾದನಂತರ ತಾ|| ೨೬ ನೆಯ ದಿನ ಸೇರಿದ ವೀರ ಶೈವರ ಸಭೆಯಲ್ಲಿ ಬಹು ಜನರ ಇಷ್ಟದಂತೆ ಸಹಕರಿಸುವುದನ್ನೇ ಇಲ್ಲಿಯ ನಾಲ್ಕಾರು ಪ್ರಮುಖ ಮಹಶಯರೂ ಒಪ್ಪಿಕೊಂಡ ಮರುದಿನ ಪರಸ್ಥಳದವರಿಗೆ ಬನ್ನಿರೆಂದು ತಿಳಿಸಿದ್ದರೆ ಬಹು ಜನ ವೀರಶೈವ ಮಹಾಶಯರು ಬರಲು ಅನುಕೂಲವಾಗುತ್ತಿದ್ದಿತು.

ಅನಂತರ ತಾ|| ೨೭ ನೆಯ ದಿನ ಶ್ರೀ ಆಲೂರು ವೆಂಕಟರಾಯರ ಕೋರಿಕೆಯಂತೆ ಈ ಪ್ರಮುಖರು ನಡೆಯಿಸಿಕೊಟ್ಟಿದ್ದರೆ ಇಲ್ಲಿಯ ಸುತ್ತುಮುತ್ತಲಿನ ಜನರಾದರೂ ವಿಶೇಷ ಬರಲು ಅನುಕೂಲವಾಗುತ್ತಿದ್ದಿತು. ಸ್ವಾಗತಸಂಘದವರು ತಾ|| ೨೭ ನೆಯ ಪತ್ರವನ್ನು ಮರುಗಿ ತೆಗೆದುಕೊಂಡಿರುವುದಾಗಿ ಪ್ರಕಟಿಸಿದ ನಂತರ ತಾ|| ೨೭ ನೆಯ ದಿನ ಅಸಹಕಾರದ ಕಟ್ಟು ಬಿಚ್ಚಿದ ಮೇಲಾದರೂ ಈ ಪ್ರಮುಖರು ಸಹಕರಿಸಿದ್ದರೆ ಬಂದ ವೀರಶೈವರಿಗಾದ ಅನಾನುಕೂಲತೆಗಳಾದರೂ ತಪ್ಪುತ್ತಿದ್ದವು. ಕಟ್ಟಕಡೆಗೆ ತಾ|| ೨೮ ನೆಯ ದಿನ ಮಧ್ಯಾಹ್ನ ೧೨|| ಗಂಟೆಗೆ ಶ್ರೀಯುತರುಗಳಾದ ಮುನಸೀಫ ಭದ್ರಪ್ಪನವರು ಮಂಡ್ಯ, ವಕೀಲ ಶಂಕರಗೌಡರು ವಿಜಾಪುರ, ಆಪ್ಪಿರಿ ವೀರಭದ್ರಪ್ಪನವರು ಗದಗ, ಜಂಗಿನ ಮುರಿಗಯ್ಯನವರು ಬಾಗಲಕೋಟಿ ಇವರುಗಳ ಸೂಚನೆಯನ್ನಾದರೂ ಈ ಪ್ರಮುಖರು ಲಕ್ಷಿಸಿ ಸಹಕರಿಸಿ ರಾಯಚೂರ ವೀರಶೈವರು ಸಮ್ಮೇಲನಕ್ಕೆ ಸಹಕರಿಸಲಿಲ್ಲವೆಂಬ ಅಪವಾದಕ್ಕೆ ಅವಕಾಶವಿಲ್ಲದಂತೆ ಮಾಡಿದುದಕ್ಕಾಗಿ ಸ್ಮರಿಸ್ಯರ ಈ ವೀರಶೈವ ಪ್ರಮುಖರನ್ನು ಹೃದಯಪೂರ್ವಕ ಅಭಿನಂದಿಸಬೇಕಾಗಿದೆ.

ಸಮ್ಮೇಲನ ಪ್ರಾರಂಭ

೨೦ ನೆಯ ಕರ್ನಾಟಕ ಸಾಹಿತ್ಯ ಸಮ್ಮೇಲನವು ತಾ|| ೨೮ ನೆಯ ಮಧ್ಯಾಹ್ನ ೧|| ಗಂಟೆಗೆ ಸೇರಿತು. ಮೈಸೂರು, ಕೊಡಗು, ಮದ್ರಾಸಕರ್ನಾಟಕ, ಮುಂಬೈಕರ್ನಾಟಕ, ನಿಜಾಮಕರ್ನಾಟಕ ಮೊದಲಾದ ಭಾಗಗಳಿಂದ ನೂರಾರು ಪ್ರಮುಖ ಸಾಹಿತಿಗಳೂ ಪ್ರತಿನಿಧಿಗಳೂ ಸ್ಥಳದ ಪರಸ್ಥಳಗಳಿಂದ ಸಾವಿರಾರು ಪ್ರೇಕ್ಷಕರೂ ಆಗಮಿಸಿದ್ದರು. ಮೊದಲು ಮಂಗಲಗೀತೆ ಸ್ವಾಗತ ಪದ್ಯಗಳು ಹೇಳಲ್ಪಟ್ಟನಂತರ ಸಮ್ಮೇಲನವನ್ನು ಉಪಕ್ರಮಗೊಳಿಸುವ ಸಮಾರಂಭವು ಇಲ್ಲಿಯ ತಾಲೂಕದಾರ ಸಾಹೇಬರಾದ (ಕಲೆಕ್ಟರರಾದ) ಮೀರ್ ಅಹಮ್ಮದ ಅಲ್ಲಿ ಖಾನಸಾಹೇಬರವರಿಂದ ಜರುಗಿತು. ಇವರ ಅತ್ಯಂತ ಮಹತ್ವವಾದ ಇಂಗ್ಲಿಷ ಭಾಷಣವನ್ನು ಇಲ್ಲಿಯ ವ್ಯವಸಾಯ ಶಾಖಾಧಿಕಾರಿಗಳೂ ಸಾಹಿತ್ಯ ಸಮ್ಮೇಲನವು ಜಯಪ್ರದವಾಗಿ ಜರುಗಲು ಮುಖ್ಯರೂ ಆಗಿರುವ ಶ್ರೀಮಾನ್ ಕೆ. ಗುಂಡಪ್ಪನವರು ಓದಿ ಹೇಳಿದರು.

ಅನಂತರ ಸ್ವಾಗತ ಸಂಘಾಧ್ಯಕ್ಷರಾದ ಶ್ರೀಮಾನ್ ಗುಡಿಹಾಳ ಹನುಮಂತರಾಯರು ವಿಚಾರಾತ್ಮಕವಾದ ಅನೇಕ ಸಂಗತಿಗಳಿಂದ ಕೂಡಿದ ತಮ್ಮ ಭಾಷಣವನ್ನು ಓದಿದ ಮೇಲೆ ಬೇರೆ ಬೇರೆ ಭಾಗಗಳ ಮಹಾಶಯರು ಅಧ್ಯಕ್ಷರನ್ನಾರಿಸಿದರು.

ಅಧ್ಯಕ್ಷರ ಭಾಷಣ

ಸಮ್ಮೇಲನದ ಅಧ್ಯಕ್ಷರಾದ ಶ್ರೀಮಾನ್ ಪಂಜೆ ಮಂಗೇಶರಾಯರು ತಮ್ಮ ಅಮೋಘವಾದ, ಬಹು ರಸವತ್ತಾದ ಮತ್ತು ಬೋಧಪರವಾದ ಭಾಷಣವನ್ನು ತೇಜೋಮಯವಾದ ವಾಣಿಯಿಂದ ಬಹು ಪರಿಣಾಮಕಾರಿಯಾಗುವಂತೆ ಓದಿದರು. ತಮ್ಮ ದಿವ್ಯ ಭಾಷಣದ ಕೊನೆಯಲ್ಲಿ ಹೀಗೆ ನುಡಿದರು.

" ಬಂಗಾಲವು ಟಾಗೋರರ ಬಾಯಿಂದ ಗೀತಾಂಜಲಿಯನ್ನು ಹಾಡಿಸಿದೆ; ತಮಿಳುನಾಡು ರಾಮನರ ಕೈಯಿಂದ ವರ್ಣರಶ್ಮಿಯನ್ನು ಬೆಳಗಿಸಿದೆ; ಮಹಾರಾಷ್ಟ್ರವು ಲೋಕಮಾನ್ಯರಿಂದ ಗೀತಾರಹಸ್ಯವನ್ನು ಓದಿಸಿದೆ; ಗುಜರಾತು ಮಹಾತ್ಮರ ತ್ರಿಕರಣಗಳಿಂದ ಅಹಿಂಸ ಮಂತ್ರವನ್ನು ಉಪದೇಶಿಸಿದೆ; ಕರ್ನಾಟಕ ಮಾತೆ? ನಿನ್ನ ಹರಕೆ ಸಲ್ಲಿಸಿ ನಿನ್ನ ಹೆಸರ ಹೇಳಿಸುವ ಕಾಣಿಕೆಯನ್ನು ನಮ್ಮ ಕೈಗಿತ್ತು ನವ್ಯನ್ನು ಒಗ್ಗೂಡಿಸಿ ಎಂದು ಕಳುಹುವೆ? "

ಅನಂತರ ಅಭಿನಂದನಪರವಾದ ತಂತೀಸಮಾಚಾರಗಳನ್ನು ಓದಿದ್ದಾಯಿತು. ಶ್ರೀ. ಬಿಂದುರಾಯರು ಭಾರತವನ್ನು ಬಹು ರಸವತ್ತಾಗಿ ಓದಿದರು. ವಿಷಯನಿಯಾಮಕಮಂಡಲ ಕಾರ್ಯ ಜರುಗಿತು.

‘ಶ್ರೀಕುಮಾರ’ರ ಕೆಲವು ವಿಚಾರಗಳು.

[ಶ್ರೀ ಶಿವಮೂರ್ತಿ ಶಾಸ್ತ್ರಿಗಳು ತುಮಕೂರು ಇವರ ಲೇಖನದ ಬಗ್ಗೆ ಉತ್ತರ ರೂಪವಾಗಿ ಬರೆದ ಶ್ರೀ ಕುಮಾರರ ವಿಸ್ತಾರ ಲೇಖನದ ಕೆಲ ವಿಚಾರಗಳನ್ನು ಮಾತ್ರ ಸಂಕ್ಷಿಪ್ತವಾಗಿ ಕೊಡಲಾಗಿದೆ. ಸಂಪಾದಕ.]

—(ಕಳೆದ ಸಂಚಿಕೆಯಿಂದ ಬಂದುದು.)—

ಈ ಶರಣರು ಬರುವದಕ್ಕೆ ಮುಂಚೆ ವೀರಶೈವರಾಗಿದ್ದರೆಂಬುವುದಕ್ಕೆ ನಮಗೆ ಆಧಾರಗಳು ಸಿಕ್ಕಿಲ್ಲ. ಅನುಭವ ಮಂಟಪದಲ್ಲಿದ್ದಾಗಲಂತೂ ವೀರಶೈವರಾಗಿದ್ದುದಕ್ಕೆ ಹೆಚ್ಚು ಆಧಾರಗಳಿವೆ. ಸಿದ್ಧರಾಮೇಶನ ವೀರಶೈವ ದೀಕ್ಷಾಸಂಸ್ಕಾರವಾದ ಮೇಲೆ ಬಂದವರ ಬಾಳಲ್ಲಾ ಅದೇ ಆಗಿರಬೇಕು. ಒಂದು ವಿಷಯವನ್ನು ಹೇಳಿದ ಮೇಲೆ ಉಳಿದವುಗಳೆಲ್ಲವನ್ನು ಅದೇ ರೀತಿಯಾಗಿ ಬೆಳಸದೆ ವಚನಕಾರರು ಬಿಟ್ಟಿರಬಹುದು. ಕಲ್ಯಾಣಕ್ಕೆ ಬಂದವರ ಪಾಡೆಲ್ಲಾ ಸಿದ್ಧರಾಮೇಶ್ವರನ ಪಾಡೇ ಆದ ಮೇಲೆ ಅದಕ್ಕೆ ಮತ್ತೆ ಮತ್ತೆ ಎಲ್ಲರ ಲಿಂಗಧಾರಣೆಗಳನ್ನೂ ಕುರಿತು ಬರೆಯುವ ಅವಶ್ಯಕತೆಯೇನೂ ಇಲ್ಲ. ಆದುದರಿಂದ ಅವರ ಲಿಂಗಧಾರಣೆಯು ಸ್ವಾಭಾವಿಕವೇ ಸರಿ. ಕಾಶ್ಮೀರದಲ್ಲಿ ವೀರಶೈವರಿದ್ದರೆ, ಅಲ್ಲಿನ ಅಗಣಿತ ಗ್ರಂಥಭಂಡಾರದಲ್ಲಿ ವೀರಶೈವರ ಗ್ರಂಥವೊಂದಾದರೂ ಇಲ್ಲವೇಕೆ? ಅವರು ಹೊರಗಡೆಯಿದ್ದಾಗ ಸಾತ್ವಿಕ ಪ್ರವೃತ್ತಿಯಿಂದಿದ್ದು ಸ್ಥಾವರ ಲಿಂಗಪೂಜಕರಾಗಿದ್ದಿರಬಹುದು; ಕಲ್ಯಾಣಕ್ಕೆ ಬಂದ ನಂತರ ಇಷ್ಟಲಿಂಗ ಪೂಜಕರಾಗಿರಬೇಕು. ಅವರು ವೀರಶೈವರನ್ನಲು ಇಷ್ಟಲಿಂಗಪೂಜೆಯ ಕುರುಹಿಲ್ಲ; ಷಟ್ಸ್ಥಲಗಳ ತಿಳುವಳಿಕೆಯೇ ಇಲ್ಲ; ಯಾವುದೂ ಇಲ್ಲದೆ ಶಿವನ ಔಪಾಸಕರೆಂದು ತೋರಿದ ಮಾತ್ರಕ್ಕೆ ಅವರು ಶೈವರಾಗದೆ ವೀರಶೈವರಾಗಲು ಹೇಗೆ ಸಾಧ್ಯ?

ಇನ್ನು ಶಿವಯೋಗಿ ಶಾಂತಿಮಯ್ಯನ ವಿಚಾರವು ಸದ್ಯಕ್ಕೆ ಅನವಶ್ಯಕವಿದ್ದಿತು; ಅದರ ವಿಚಾರವಾಗಿ ಹೀಗೆ ಹೇಳಲೇಕೆ? ಈ ರೇವಣಸಿದ್ಧನು, ಬಸವಾದಿಗಳಗಿಂತ ಮುಂಚಿನ ವೀರಶೈವನಾಗಿ ಮತಸ್ಥಾಪಕರ ಹೆಸರಿನಲ್ಲಿ ತನ್ನ ಸ್ಥಾನವನ್ನು ಅಲಂಕರಿಸಬಹುದೆಂಬ ಭ್ರಮೆಯಿರಬಹುದು. ಹಾಗ ಪ್ರಯತ್ನಿಸುವುದಾದರೆ ಶಾಸ್ತ್ರಿಗಳ ಪ್ರಯತ್ನವು ಫಲಕಾರಿಯಾಗಲಾರದು. ಅವರು ಈ ನಿಸ್ಸಹಾಯಕ ಸ್ಥಿತಿಯನ್ನು ಹಿಂದೆಯೇ ಒಪ್ಪಿಕೊಂಡಿರುವರು. ಸಕಲೇಶ ಮಾದರಸ ಮತ್ತು ಏಕಾಂತ ರಾಮಯ್ಯ ಇವರುಗಳ ವಿಚಾರದಲ್ಲಿ ಹಿಂದೆ ನಿರ್ಧರಿಸಿದಂತೆಯೇ ಶಾಸ್ತ್ರಿಗಳು ಈಗಲೂ ನಿರ್ಧರಿಸಿರುವರು. “ ಹರಿಹರನ ರಗಳೆಯ ಆಧಾರದಿಂದ ಈ ಪ್ರಶ್ನೆ ಮಾಡಿದೆ ” ಎಂದು ಶಾಸ್ತ್ರಿಗಳು ಬಹು ಚೆನ್ನಾಗಿ ಹೇಳಿರುವರು. ಇರಲಿ. ಹರಿಹರನ ರಗಳೆಯಲ್ಲಿರುವುದನ್ನೇ ತೆಗೆದುಕೊಳ್ಳೋಣ!

“ ಆಗಿಸುತ್ತಿರಲೆಂಟನೆಯ ವರುಷದೊಳು ಮಗನಂ ನೋಡಿ ಮಿಗೆ ಸಂತಸಂಬಟ್ಟು ಶೈವೋಪದೇಶಮಂ ತಾನೆ ಕರುಣಿಸಿ ” ಎಂದಿರುತ್ತದೆ. ಹಾವಿನ ಹಾಳು ಕಲ್ಲಯ್ಯನ ವಿಚಾರದಲ್ಲಿ, ‘ ರುದ್ರಮುನಿದೇವನಿಂ ಕರುಣಮಂ ಮಾಡಿಸುತೆ| ರುದ್ರನಣುಗಂ ಶೈವದೀಕ್ಷೆಯಂ ನೀಡಿಸುತೆ ” ಎಂದಿರುತ್ತದೆ. ಇಷ್ಟಲಿಂಗ ಸಂಸ್ಕಾರವೆಂದು ಹೇಳಿಲ್ಲ; “ ಶೈವೋಪದೇಶ ” ವೆಂಬ ಮಾತೇ ಶೈವರೆಡೆಗೆಳೆಯುತ್ತದೆ. ಅದು ಹೇಗೆ ವೀರಶೈವವೆಂಬ ಅರ್ಥ ಕೊಡುತ್ತದೆ? ಉಪನಯನ ಸಂಸ್ಕಾರದಂತೆ ಇದೂ ಒಂದು ಸಂಸ್ಕಾರವಿರಬಹುದೇ ಹೊರತು ಅದನ್ನು ಶಾಸ್ತ್ರಿಗಳವರು ವೀರಶೈವರ ದೀಕ್ಷಾ ಸಂಸ್ಕಾರದ ಅರ್ಥದಲ್ಲಿ ಉಪಯೋಗಿಸುವಂತಿಲ್ಲ. ಸುಮ್ಮನೆ ಶಾಸ್ತ್ರಿಗಳಿಗೆ ಶೈವವೆಲ್ಲವೂ ವೀರಶೈವವೆಂದು ಪ್ರಬೋಧೆಯಾದ ಮಾತ್ರಕ್ಕೆ ಅದು ಐತಿಹಾಸಿಕ ಸಂಗತಿಗಳ ಗುಂಪಿನಲ್ಲಿ ತನ್ನ ಮಾನ್ಯತೆಯನ್ನು ಪಡೆಯಲಾರದು.

ಏಕಾಂತದ ರಾಮಯ್ಯನ ವಿಚಾರದಲ್ಲೂ ಶಾಸ್ತ್ರಿಗಳು ಇವೇ ವಿಷಯಗಳನ್ನು ಮತ್ತೆ ಪ್ರಸ್ತಾಪಿಸಿರುವುದರಿಂದ ಅದಕ್ಕೂ ಹಿಂದಿನ ಉತ್ತರವೇ. ಉಳಿದ ಪ್ರಶ್ನೆಗಳು ಪುರಾಣದ ಆಧಾರದಿಂದ ಬಂದವುಗಳು. ಅವುಗಳು ಇತಿಹಾಸದ ಒರೆಗಲ್ಲಿನ ಮೇಲೆ ಗಟ್ಟಿ ಬಣ್ಣದಿಂದ ನಿಲ್ಲಲಾರವು. ಅವು ಪ್ರಾಮಾಣಿಕ ಸಂಗತಿಗಳಲ್ಲ. **ಕವಿಯು ಉತ್ಪ್ರೇಕ್ಷೆಗೆ ಕೊಡಬೇಕಾದುದನ್ನು ಕೊಟ್ಟು, ಕಾಲಾತೀತವಾಗಿ ಬರೆದ ಗ್ರಂಥದಲ್ಲಿ ಸಂಭವಿಸುವ ವಸ್ತುವಿಪರ್ಯಾಸಕ್ಕೆ ಕೊಡಬೇಕಾದುದನ್ನೂ ಕೊಟ್ಟು,** ಉಳಿದುದನ್ನು ಸ್ವೀಕರಿಸಬೇಕು. ಆಗ ಉಳಿಯುವುದು ಬಹು ಸ್ವಲ್ಪವೇ ಸರಿ. ಈಚೀಚೆಗೆ ಬರೆಯುವವರು ಆ ರೀತಿಯಾಗಿ ಬರೆದಿರುತ್ತಾರೆ. ಆದುದರಿಂದ ಪುರಾಣಗಳು ನಮಗೆ ಆಧಾರಗಳಲ್ಲ. ಇತಿಹಾಸ ಸಂಶೋಧನೆಯು ಪುರಾಣಗಳ ಬಲದಿಂದ ಮುಂದರಿಯಲಾರದು.

ಇನ್ನು ಅರ್ಜುನವಾಡದ ಶಿಲಾಶಾಸನದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬಹುದು. ಶಾಸ್ತ್ರಿಗಳವರ ಆರನೆಯ ಪ್ರಶ್ನೆಯು ಪೂರ್ತಿ ತಪ್ಪಾಗಿ ಕೇಳಲ್ಪಟ್ಟಿದೆ. ಆ ಶಾಸನದಲ್ಲಾಗಲಿ, ಶ್ರೀಯುತ ಹಳಕಟ್ಟಿಯವರು ಶಾಸನದಿಂದ ನಿರ್ಧರಿಸಿರುವ ವಸ್ತುಸಂಗ್ರಹದಲ್ಲಾಗಲಿ ವೀರಶೈವ ಮತೋದ್ಧಾರಕನೆಂದು ಹೇಳಿರುವುದಿಲ್ಲ. “ ಶ್ರೀಮತ್ತರದವಾಡಿ, ಮಧ್ಯಗ್ರಾಮ ಬಾಗವಾಡಿ ಪ್ರವರಾಧೀಶ್ವರ ಮಾದಿರಾಜನ ತನೂಜಂ ಬಸವರಾಜನು ಎಂತೆಂದೊಡೆಃ— ಮಂಗಳಕೀರ್ತಿ ಪುರಾತನ ಜಂಗಮಲಿಂಗ ಲಿಂಗೈಕಭಕ್ತಿನಿರ್ಭರಲೀಲಾ ಸಂಗಂ ಸಂಗನ ಬಸವಂ ಸಂಗತಿಯಂ ಮಾಳ್ಕೆ ಭಕ್ತಿಯೊಳಗನವರತಂ ” ಎಂದು ಶಾಸನದಲ್ಲಿ ಬರೆದಿರುತ್ತದೆ. ಶ್ರೀ ಹಳಕಟ್ಟಿಯವರು, “ ಇವನು ಪುರಾತನರಲ್ಲಿಯೂ ಲಿಂಗ ಜಂಗಮರಲ್ಲಿಯೂ ಪ್ರೇಮವುಳ್ಳವನೆಂತಲೂ ಇಲ್ಲಿ ಹೇಳಿದೆ. ಈ ಎಲ್ಲ ಸಂಗತಿಗಳಿಂದ ಈ ಶಿಲಾಶಾಸನದಲ್ಲಿ ಉಲ್ಲೇಖಿಸಲ್ಪಟ್ಟ ಬಸವರಾಜನು ವೀರಶೈವ ಮತೋದ್ಧಾರಕನಾದ ಬಸವೇಶ್ವರನೇ ಇರಬೇಕೆಂದು ಗೊತ್ತಾಗುತ್ತದೆ.” ಎಂದು ಬರೆದಿರುವರು. ಶಾಸನದಲ್ಲಿ ಬಸವೇಶ್ವರನು ‘ ಮತೋದ್ಧಾರಕ ’ ನೆಂದು ಹೇಳಿರುವುದಿಲ್ಲ. ಶ್ರೀಯುತ ಹಳಕಟ್ಟಿಯವರು ಉಪಯೋಗಿಸಿರುವ “ ವೀರಶೈವ ಮತೋದ್ಧಾರಕ ” ನೆಂಬ ಮಾತು ಶಿಲಾಶಾಸನದ ವಸ್ತುಗಳಿಂದ ಶೋಧಿಸಿ ತೆಗೆದುದಲ್ಲ. ಅದು ಅವರ ವೈಯಕ್ತಿಕ ಅಭಿಪ್ರಾಯ. ಅದು ಶಾಶ್ವತವಾದುದಲ್ಲ. ಸಂಶೋಧನೆಯು ನಡೆದಂತೆಲ್ಲಾ ಮಾರ್ಪಡುತ್ತದೆ. ಇತಿಹಾಸದ ಮುಂದೆ ವ್ಯಕ್ತಿಯ ಅಭಿಪ್ರಾಯಗಳಿಲ್ಲ. ಆದುದರಿಂದ ಶಾಸ್ತ್ರಿಗಳ ಈ ಪ್ರಶ್ನೆಯು ಅಷ್ಟು ಆಧಾರಯುಕ್ತವಾಗಿ ಕೇಳಿದುದಲ್ಲ.

ಒಟ್ಟಿನಲ್ಲಿ ಕೊನೆಯದಾಗಿ ಒಂದೆರಡು ಮಾತುಗಳನ್ನು ಬರೆಯಬೇಕಾಗುತ್ತದೆ. ಹಿಂದೆ ಹೇಳಿದಂತೆ ಇತಿಹಾಸವು ಎಂದೂ ಅಪೂರ್ಣವಾದುದು. ಅದು ಪೂರ್ಣವಾಗುವತನಕ ಯಾರೂ ‘ ಹೀಗೆಯೇ ಸರಿ ’ ಎಂದು ಹೇಳಲಾಗದಿದ್ದರೂ ಇರುವ ಆಧಾ-

ರಗಳಿಂದಲೇ ಒಂದು ನಿರ್ಧರಕ್ಕೆ ಬರಬಹುದು. ಏಕೆಂದರೆ ಆ ಭಾಗವು ಅಲ್ಲಿಗೇ ನಿಂತು ಬಿಟ್ಟರೆ ಅದೇ ಉಳಿಯುತ್ತದೆ. ಹೆಚ್ಚು ವಿಷಯಗಳು ದೊರಿತರೆ, ಅದು ಬೆಳೆಯುತ್ತದೆ. ಹಿಂದಿನ ಲಕುಲೀಶ, ಕಾಳಾಮುಖ, ಪಾಶುಪತಾದಿ ಶೈವಪಂಥಗಳು ವಿಕಾಸ ಹೊಂದಿ, ವೀರಶೈವದಲ್ಲಿ ಪರ್ಯವಸಾನ ಹೊಂದಿವೆ. ವೇದ ಧರ್ಮವು ಅದರ ಪೂರ್ಣ ಪರಿಪಕ್ವತೆಗೆ ಮೊದಲು ಒಂದು ಒರಟು ಒರಟಾದ ರೂಪದಲ್ಲಿತ್ತು. ಅನಂತವಾದ ಕಾಲಗರ್ಭದಲ್ಲಿ ಹಾದು ಬರುವಾಗ ಅದು ವಿಕಾಸ ಹೊಂದಿ, ಬೆಳೆದು, ಜಗತ್ತಿನ ಮನ್ನಣೆಗೆ ಪಾತ್ರವಾಯಿತು. ಈಗ ಇದರ ಸ್ಥಾಪಕರಾರೆಂದು ಕೇಳುವಂತಿಲ್ಲ ಹೇಳಲೂ ಬರುವಂತಿಲ್ಲ. ಹಾಗೆಯೇ ತಾಮಸಿಕ ವೃತ್ತಿಗಳು ಕೇವಲ, ಮಾನಸಿಕವಾದ ವಿಕಾಸವಾದದಂತೆ (Theory of evolution in mind) ಸಾತ್ವಿಕ ವೃತ್ತಿಗಳಿದು ಬಂದು ಜಗತ್ತಿನಲ್ಲಿ ಒಂದು ಸ್ಥಾನವನ್ನು ಪಡೆದಿವೆ. ಅದೇ ವಿಧವಾದ ಸ್ವಾಭಾವಿಕ ಬದಲಾವಣೆಯು ವಿಶ್ವದ ಒಂದು ನಿಯಮ. ವೀರಶೈವಮತವಾದರೂ ಅಂಥ ಲಕುಲೀಶಾದಿ ತಾಮಸಿಕ ವೃತ್ತಿಯ ಪಂಗಡಗಳಿಂದ ಹಾದು, ಬೆಳೆದು, ಸತ್ವಗುಣ ಪ್ರಧಾನಾತ್ಮಕವಾದ ತತ್ವಸಮುದಾಯಕಗಳಲ್ಲಿ ಕೊನೆಯಾಗಿರುತ್ತದೆ. ಹಿಂದಿನ ಲೇಖನದಲ್ಲಿ, "ವೀರಶೈವಮತದ ಗುರು ಲಿಂಗ ಜಂಗಮವೇ ಮೊದಲಾದವುಗಳು ಬಸವಣ್ಣನವರಿಗಿಂತಲೂ ಮೊದಲಿದ್ದವು" ಎಂದು ಬರೆದಿದ್ದಿತು. ಅವುಗಳು ಈ ಪೂರ್ಣ ವಿಕಾಸ ಹೊಂದದ ಅವಸ್ಥಾವಿಶೇಷಗಳ ಪ್ರಥಮಾಂಕದ ದೃಶ್ಯಗಳು. ಅನಂತರ ಅವು ಷಟ್ಸ್ಥಲಗಳ ಬಿಕ್ಕಟ್ಟಿನಿಂದಲೂ, ಇಷ್ಟಲಿಂಗ ಪೂಜೆಯ ಬೆಳವಣಿಗೆಯಿಂದಲೂ ಪರಿಪೂರ್ಣವಾಗಿ ಈ ರೂಪವನ್ನು ಪಡೆದವು. ಅದಕ್ಕಾಗಿಯೇ (ಬಸವಣ್ಣನವರ ಕೈಕೆಳಗೆ ಅದು ಆ ಅವಸ್ಥೆಯನ್ನು ಪಡೆದುದರಿಂದ) ಅದರ ಕೀರ್ತಿಯು ಬಸವಣ್ಣನವರಿಗೆ ಸಲ್ಲುತ್ತದೆ.

ಷಟ್ಸ್ಥಲ ಸ್ಥಾಪನೆಯು ಹಿಂದಿನದಾಗಿದ್ದರೆ ಚನ್ನಬಸವಣ್ಣನವರಿಗೆ ಷಟ್ಸ್ಥಲ ಸ್ಥಾಪನಾಚಾರ್ಯ, ಷಟ್ಸ್ಥಲ ಚಕ್ರವರ್ತಿ, ಎಂಬ ಬಿರುದುಗಳು ಬರುತ್ತಿರಲಿಲ್ಲ. ವೀರಶೈವರ ಇಷ್ಟಲಿಂಗ ಪೂಜೆಯು ಪೂರ್ಣ ವಿಕಾಸ ಆಗ್ಗೆ ಹೊಂದಿದ್ದಿದ್ದರೆ ಅಲ್ಲಮಪ್ರಭುದೇವರು ಅನಿಮಿಷಯ್ಯನಿಂದ ಲಿಂಗವನ್ನು ತೆಗೆದುಕೊಳ್ಳದೆ ದೀಕ್ಷಾಸಂಸ್ಕಾರದಿಂದ ಸ್ವೀಕರಿಸಬೇಕಿದ್ದಿತು. ಸಿದ್ಧರಾಮೇಶ್ವರನನ್ನು ಶಿಷ್ಯನನ್ನಾಗಿ ಸ್ವೀಕರಿಸಿ ಅಲಿಂಗಿಯಾದವನನ್ನು ಶಿವಾನುಭವ ಮಂಟಪಕ್ಕೆ ಕರೆತರುತ್ತಲೂ ಇರಲಿಲ್ಲ. ಲಿಂಗಧಾರಣೆಯು ಆಗ ತಾನೆ ಆರಂಭವಾಗಿ, ಪೂರ್ಣವಾಗಿ ಬಿಕ್ಕಟ್ಟಿಗೆ ಬರದೆ ಇದ್ದ ಸ್ಥಿತಿಯಲ್ಲಿ ಇಂಥ ವಿಷಯಗಳಾಗುತ್ತವೆ. ಇವುಗಳಲ್ಲಿ ಲಿಂಗಧಾರಣೆಯು ಆ ಕಾಲದಲ್ಲೇ ಆರಂಭವಾಗಿರಬೇಕೆಂದು ಹೃದಯಕ್ಕೆ ಪ್ರಬೋಧೆಯಾಗುತ್ತದೆ. ಹಾಗಿಲ್ಲದಿದ್ದರೆ ಲಿಂಗಪೂಜೆಯು ಅಷ್ಟೊಂದು ಅವ್ಯವಸ್ಥೆಯಲ್ಲಿರುತ್ತಿರಲಿಲ್ಲ ಬಸವಣ್ಣನವರ ಮುಂದಾಳುತನದಲ್ಲಿ ಅದು ಅಸ್ಪಷ್ಟವಾಗಿ ರೂಪುಗೊಂಡುದರಿಂದಲೇ ಅವರು ಸಿದ್ಧರಾಮನನ್ನು ಒಳಕ್ಕೆ ಬಿಡದೆ, ಪಟ್ಟುಹಿಡಿದು ಕುಳಿತಿದ್ದುದು ಇದು ತಾರ್ಕಿಕ ದೃಷ್ಟಿಯಿಂದ ಮನಸ್ಸಿಗೆ ತಟ್ಟುವ ಅಭಿಪ್ರಾಯ. ಇದರ ವಿಷಯವಾಗಿ ಶಾಸ್ತ್ರಿಗಳವರೂ ಯೋಚಿಸಬಹುದು. ಶೈವದ ವಿಕಾಸ, ವೀರಶೈವದ ಆರಂಭ, ಈ ಸಂದಿಗ್ಧ ಸಮಯದಲ್ಲಿನ ಅವಸ್ಥೆಯು ಅಕ್ಕಮಹಾದೇವಿ ಸಕಲೇಶ ಮಾದರಸ, ಮುಂತಾದವರಲ್ಲಿ ತೋರಿಬರುತ್ತದೆ ಸಕಲೇಶ ಮಾದರಸನ ವಚನವನ್ನು ನೋಡಿರಿ, " ಭಕ್ತನೆಂಬೆನು ಬಸವಣ್ಣನ; ಶರಣನೆಂಬೆನು ಪ್ರಭುದೇವರ; ಐಕ್ಯನೆಂಬೆನು ಅಜಗಣ್ಣನ; ಹಿಂದೆ ಆದವರಿಲ್ಲ; ಇನ್ನು ಮುಂದೆ ಆಗುವರಿಲ್ಲ; ಸಕಳೇಶ್ವರ ದೇವಾ ನಿಮ್ಮ ಶರಣರು ಮೂವರೆ. " ಈ ಅರ್ಥಗರ್ಭಿತ ಅಭಿಪ್ರಾಯವು ನಮ್ಮ ಹೇಳಿಕೆಗೆ ಮನ್ನಣೆ ಕೊಡುತ್ತದೆ.

ಅರ್ಜುನವಾಡದ ಶಿಲಾಶಾಸನದ ಕಾಲದಲ್ಲಿ ಬಸವೇಶ್ವರನು ಮತಸ್ಥಾಪಕನೆಂಬ ವಿಚಾರವನ್ನು ಚರ್ಚಿಸುವ ಅವಶ್ಯಕತೆಯಿದ್ದಿಲ್ಲ. ಅದಕ್ಕೆ ಈ ಮತದ ವಿಕಾಸ ರೂಪವೇ ಕಾರಣವಾಗಿರುವುದು. ಕಣ್ಣಿನಲ್ಲಿ ಕಣ್ಣಿಟ್ಟು ಬಸವಣ್ಣನವರ ಕರ್ತೃತ್ವವನ್ನು ತಿಳಿದವರು ಅದನ್ನು ಬರೆದಿಟ್ಟಿದ್ದಾರೆ. ತಿಳಿಯದವರಿಗೆ ಅದು ಮತದ ವಿಕಾಸದ ಕಡೆಗೆ ಅವರ ದೃಷ್ಟಿಯನ್ನೆಳೆಯುತ್ತದೆ. ಹಿಂದಿನ ಅವ್ಯವಸ್ಥೆಯು ಮುಂದೆ ವ್ಯವಸ್ಥೆಗೆ ಬಂದದ್ದು, ಒಂದು ಸಾವಧಾನದ ರೂಪದಲ್ಲಿ (As gradual as a curve and not abrupt.) ಇಂದು ಜಗತ್ತು ಪೂರ್ಣವಾಗಿ ಇತಿಹಾಸ ಸಂಶೋಧನೆಯನ್ನು ನಡೆಯಿಸುತ್ತಿದೆ. ಆ ವಿಕಾಸಕ್ಕೆ ಕೇಂದ್ರೀಯ ವ್ಯಕ್ತಿಯಾದ (Central figure) ಬಸವೇಶ್ವರನನ್ನು ಕಂಡು ಹಿಡಿದಿದೆ. ಆದುದರಿಂದ ಅವನನ್ನು ಮತಸ್ಥಾಪಕನೆಂದು ಕರೆದಿದೆ. ಇದರಲ್ಲಿ ಅಭಿಮಾನವೆಲ್ಲಿ ಬಂತು? ಶಾಸ್ತ್ರಿಗಳವರು ಹೇಳುವಂತೆ, " Basava is the heart of Veerashaivism" ಅಷ್ಟೇ ಅಲ್ಲ. " Basava is the founder of this religion and the sole spirit of its progress " ಎಂಬ ವಾಕ್ಯವೂ, " ನಿಜವಾಗಿಯೂ ಅರ್ಥಪೂರ್ಣವಾಗಬಲ್ಲುದು. ಅದಕ್ಕೆ ಆಧಾರಗಳು ಬೇಕಲ್ಲದೆ ಅಭಿಮಾನವು ಬೇಕಿಲ್ಲ. ಆದುದರಿಂದ ಶಾಸ್ತ್ರಿಗಳು ನಮ್ಮ ವಿನಂತಿಯನ್ನು ಸ್ವೀಕರಿಸಿ ತಮ್ಮ ಅಭಿಪ್ರಾಯವನ್ನು ತಿಳಿಸುವರೆಂದು ನಂಬಿರುತ್ತೇನೆ.

ಶಾಸ್ತ್ರಿಗಳ ಮೇಲಾಗಲಿ, ವಿಷಯಗಳ ಮೇಲಾಗಲಿ ಯಾರಿಗೇನೂ ದ್ವೇಷವಿಲ್ಲ. ಮನೆ ಮನೆಗೂ, ಹಳ್ಳಿ ಹಳ್ಳಿಗೂ ಸುತ್ತಿ ಕನ್ನಡಿಗರ ಸಂಸ್ಕೃತಿಯನ್ನು ಉತ್ತಮಗೊಳಿಸಲು ಪ್ರಚಾರ ಕಾರ್ಯ ಮಾಡುತ್ತಿರುವವರು ನಿರಾಧಾರವಾದ ವಿಷಯಗಳನ್ನು ಹರಡಬಾರದೆಂಬುದೇ ನಮ್ಮ ವಿನಂತಿ. ಜೊಳ್ಳು ಪುರಾಣಗಳಿಂದಲೂ ಕಟ್ಟುಕಥೆಗಳಿಂದಲೂ ನಡೆದು ಬಂದಿರುವ ಸಂಸ್ಕೃತಿಯಿಂದ ಭಾರತವರ್ಷವು ಇಂದೂ ಈ ಗಳಿಗೆಯಲ್ಲೂ ಯಾರೋ ಮಾಡಿದ ಪಾಪದ ಫಲವನ್ನು ಅನುಭವಿಸುತ್ತಿದೆ; ಅದಕ್ಕಾಗಿ ಕಣ್ಣೀರು ಸುರಿಸುತ್ತಿದೆ. ಅದನ್ನು ನಾವು ಮತ್ತಷ್ಟು ಬೆಳೆಸಬಾರದು. ಧಾರ್ಮಿಕವಂತೆಯೇ ರಾಜಕೀಯ, ಸಾಮಾಜಿಕ ಮತ್ತು ಸಾಹಿತ್ಯಕ ಅಂಗಗಳೂ ಜೀವನಿಗೆ ಇವೆ. ಒಂದೊಂದರಲ್ಲೇ ಇಷ್ಟೊಂದು ಅನರ್ಥಗಳಾದರೆ, ಎಲ್ಲದರಿಂದಲೂ ಇನ್ನೆಷ್ಟು ಅನರ್ಥಗಳು ಸಂಭವಿಸಬಹುದು! ಆದುದರಿಂದ ಸತ್ಯಧರ್ಮಗಳ ತಳಹದಿಯ ಮೇಲೆ ಬೇಕಾದಷ್ಟನ್ನು ನಿರ್ಧರಿಸೋಣ ಎಲ್ಲರೂ ಆದರದಿಂದ ಅದನ್ನು ಸ್ವೀಕರಿಸುವರು. ಈ ವಿಷಯವನ್ನು ಶಾಸ್ತ್ರಿಗಳವರು ಮನಸ್ಸಿಗೆ ತಂದುಕೊಳ್ಳುವರೆಂದು ಭಾವಿಸಿ ನಾವು ನಮ್ಮ ಲೇಖನಿಯನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇವೆ.

"ಶ್ರೀ ಕುಮಾರ"

—ಇಟಲಿ ಮತ್ತು ಅಬಸೀನಿಯಾ ದೇಶಗಳಲ್ಲಿ ಯುದ್ಧವು ನಡೆದಿದೆ. ಅಬಸೀನಿಯಾ ಸರಕಾರದವರು, ಇಟಲಿಯು ಅನ್ಯಾಯವಾಗಿ ಉಲ್ ಉಲ್ ಎಂಬ ಪ್ರದೇಶವನ್ನು ಕೈವಶಮಾಡಿಕೊಂಡಿದೆಯೆಂದು ರಾಷ್ಟ್ರ ಸಂಘಕ್ಕೆ ತಿಳಿಸಿದ್ದಾರೆ.

—ಸಾರಪ್ರಾಂತ್ಯದ ಚುನಾವಣೆಯಲ್ಲಿ ಗಲಭೆಯಾಗಬಾರದೆಂದು ಒಂದು ಅಂತರ ರಾಷ್ಟ್ರೀಯ ಸೈನ್ಯವನ್ನು ಕಳುಹಿಸಲಾಗಿದೆ. ಇಂಗ್ಲೀಷ ಸೈನಿಕರು ಸಾರಪ್ರಾಂತಕ್ಕೆ ಹೋಗುತ್ತಿರುವಾಗ ಮಾರ್ಗದಲ್ಲಿ ಫ್ರೆಂಚ ಸೈನಿಕರು ಅವರನ್ನು ಅಭಿನಂದಿಸಿದರು.

—ದಕ್ಷಿಣ ಹಿಂದುಸ್ಥಾನದಲ್ಲಿ ವಿಮಾನ ಗೃಹಗಳನ್ನು (Aerodromes) ಕಟ್ಟುವದಕ್ಕಾಗಿ ಸರಕಾರದವರು ಕಡಪಾ, ಎಲ್ಲೂಪುರಮ್, ನಾಗಪಟಮ್, ರಾಮೇಶ್ವರಮ್, ಮತ್ತು ಕಾವಲಿ (ನೆಲೂರ ಜಿಲೆ) ಈ ಐದು ಸ್ಥಲಗಳನ್ನು ಗೊತ್ತುಪಡಿಸಿದಾರೆ

'ಶಿವಾನುಭವ' ಪತ್ರಿಕೆಗೆ ಪ್ರೋತ್ಸಾಹ.

(ಲೇಖಕರು— ಬಿ. ಶಿವಮೂರ್ತಿ ಶಾಸ್ತ್ರಿ, ಕೀರ್ತನಕೇಸರಿ ಕವಿರತ್ನ ಹುಲ್ಯಂಟಿಮಠ ತುಮಕೂರು.)

ಪ್ರಪಂಚದಲ್ಲಿಯ ಯಾವ ದೇಶವಾಗಲಿ ಸಮಾಜವಾಗಲಿ ಸುಧಾರಿಸಲಿಕ್ಕೆ ಪತ್ರಿಕೆಗಳ ಅವಶ್ಯಕವೆಂಬುದು ಈಗ ಎಲ್ಲರಿಗೂ ಗೊತ್ತಿರುವ ವಿಚಾರ. ಪಶ್ಚಿಮ ದೇಶಗಳಲ್ಲಿ ಸರ್ಕಾರದವರೂ ಜನರೂ ತಮ್ಮ ದೇಶದ ಪತ್ರಿಕೆಗಳಿಗೆ ಬಹಳವಾಗಿ ಪ್ರೋತ್ಸಾಹಕೊಡುತ್ತಾರೆ. ಆದ್ದರಿಂದಲೇ ಅಲ್ಲಿಯ ಜನರು ಸರ್ವತೋಮುಖವಾಗಿ ಅಭಿವೃದ್ಧಿಗೆ ಬರುತ್ತಿದ್ದಾರೆ. ಪಾಶ್ಚಿಮಾತ್ಯರು ಉತ್ತಮ ನಾಗರೀಕನ ಅವಶ್ಯ ಕರ್ತವ್ಯಗಳಲ್ಲಿ ಪತ್ರಿಕಾ ವಾಚನ ಒಂದೆಂದು ಭಾವಿಸಿದ್ದಾರೆ. ನಮ್ಮ ಹಿಂದುಸ್ಥಾನದಲ್ಲಿ ಅಂಥ ಭಾವನೆಯು ಇನ್ನೂ ಬಹು ಜನರಲ್ಲಿ ನೆಲೆಗೊಂಡಿಲ್ಲ.

ಭರತ ಖಂಡದ ಇತರ ಪ್ರಾಂತಗಳಂತೆಯೇ ಕರ್ನಾಟಕದಲ್ಲಿಯೂ ಈಗ ಪತ್ರಿಕೆಗಳ ಚಟುವಟಿಕೆಯು ತಕ್ಕಷ್ಟಾಗಿ ಸಾಗಿದೆ. ಕರ್ನಾಟಕದ ಬಹುಜನ ಸಮಾಜವಾದ ವೀರಶೈವರಲ್ಲಿ ಮಾತ್ರ ಪತ್ರಿಕಾ ಪ್ರಚಾರವು ತಕ್ಕಷ್ಟಾಗಿ ಆಗಿಲ್ಲವೆಂದೇ ಹೇಳಬಹುದು. ಕೆಲವು ವೀರಶೈವ ಪತ್ರಿಕೆಗಳು ಮಾತ್ರ ಉತ್ತಮ ಕೆಲಸಮಾಡುತ್ತವೆ. ಅವುಗಳಲ್ಲಿ "ಶಿವಾನುಭವ" ಪತ್ರಿಕೆಯು ಈಗ ೯ ವರ್ಷಗಳಿಂದಲೂ ವೀರಶೈವ ಸಮಾಜಕ್ಕೆ ಮಾಡುತ್ತಿರುವ ಸೇವೆಯು ಸಾಮಾನ್ಯವಾದುದಲ್ಲ. ಇದು ವರೆಗೆ ಈ ಪತ್ರಿಕೆಯ ಆಶ್ರಯದಲ್ಲಿಯೇ ಬಸವೇಶ್ವರ ವಚನ, ಚೆನ್ನಬಸವೇಶ್ವರ ವಚನ, ಸಿದ್ಧರಾಮೇಶ್ವರ ವಚನ, ಅಕ್ಕ ಮಹಾದೇವಿ ವಚನ, ಘನಲಿಂಗಿ ವಚನ, ಶೂನ್ಯಸಂಪಾದನೆ, ಪ್ರಭುದೇವರ ವಚನ, ಆದಯ್ಯನ ವಚನ ಮೊದಲಾದ ಶ್ರೇಷ್ಠತರದ ವಚನಗ್ರಂಥಗಳೂ ಕೊಡಗಿನ ರಾಜೇಂದ್ರನಾಮೆ ಬೀಳಗಿ ಅರಸರ ವಂಶಾವಳಿ, ಶಿವಾನುಭವಸೂತ್ರ ಮೊದಲಾದ ಗ್ರಂಥಗಳೂ ಪ್ರಕಟವಾಗಿವೆ. ವೀರಶೈವ ಇತಿಹಾಸ, ಸಂಸ್ಕೃತಿ, ತತ್ವಜ್ಞಾನಕ್ಕೆ ಸಂಬಂಧಪಟ್ಟ ಅನಂತ ಮಹತ್ವದ ಲೇಖನಗಳು ವೀರಶೈವ ಪಂಡಿತರಿಂದ ಶಿವಾನುಭವ ಪತ್ರಿಕೆಯಲ್ಲಿ ಬರೆಯಲ್ಪಟ್ಟವೆ. ಈ ಶಿವಾನುಭವ ಪತ್ರಿಕೆಯ ಪ್ರಭಾವದಿಂದ ವೀರಶೈವ ಸಮಾಜದಲ್ಲಿ ಒಂದು ಹೊಸ ಚೈತನ್ಯವೇ ಉಂಟಾಗಿದೆಯೆಂದು ಹೇಳಬಹುದು.

ಇದರ ಸಂಪಾದಕರಾದ ಶ್ರೀಮಾನ್ ರಾವಸಾಹೇಬ ಪಿ. ಜಿ. ಹಳಕಟ್ಟಿ ವಕೀಲರು ವೀರಶೈವ ಸಮಾಜದ ಹಿತಚಿಂತಕರಾದ ಓರ್ವ ಮುಂದಾಳುಗಳಾಗಿದ್ದಾರೆ. ಅಲ್ಲದೆ ಇವರು ಕರ್ನಾಟಕದಲ್ಲಿ ಸಹ ಹೆಸರಾದ ಪ್ರಮುಖರಾಗಿದ್ದಾರೆ.

ವೀರಶೈವ ಸಮಾಜವನ್ನು ಕಾಡ್ಗಿಚ್ಚಿನಂತೆ ಆವರಿಸಿರುವ ಗುರುವರ್ಗ—ವಿರಕ್ತವರ್ಗದ ಚಳವಳಿಗೆ ಸಿಗದೆ ಅವರ ಕೇವಲ ಸತ್ಯ ಸಂಶೋಧಕರಾಗಿ ದೇಶದ ಸಮಾಜದ ಮೇಲ್ಮೆಗಾಗಿ ಹೆಣಗಾಡುತ್ತಿದ್ದಾರೆ. ಅಲ್ಲದೆ ಮೊನ್ನೆ ತಾನೇ ನಡೆದ ಧಾರವಾಡದ ಅ. ಭಾ. ವೀ. ಮಹಾಸಭೆಯ ಅಧ್ಯಕ್ಷಸ್ಥಾನವನ್ನು ಅಲಂಕರಿಸಿ ಅವರ ಇಡೀ ವೀರಶೈವ ಸಮಾಜಕ್ಕೇ ವಂದ್ಯರಾಗಿದ್ದಾರೆ. ಇಂಥ ಶ್ರೇಷ್ಠತಮ ಮಹಾಪುರುಷರಿಂದ ನಡೆಯಿಸಲ್ಪಡುತ್ತಿರುವ ಶಿವಾನುಭವ ಪತ್ರಿಕೆಯು ಅಖಿಲ ವೀರಶೈವ ಸಮಾಜಕ್ಕೂ ಕರ್ನಾಟಕ ಸಾಹಿತ್ಯಕ್ಕೂ ಮಹೋಪಕಾರವನ್ನು ಮಾಡುತ್ತಿದೆಯೆಂಬುದರಲ್ಲಿ ಆತಿಶಯವೇನು?

೪೦ ಲಕ್ಷ ವೀರಶೈವರ ಹಿತಕ್ಕಾಗಿ ಹೆಣಗಾಡುವ ಶಿವಾನುಭವ ಪತ್ರಿಕೆಗೆ ಈಗ ಎರಡು ವರ್ಷಗಳಿಂದ ಅಪಾರವಾದ ನಷ್ಟ ಪ್ರಾಪ್ತವಾಗುತ್ತಿದೆ. ಸುಮಾರು ಒಂದೂವರೆ ಸಾವಿರ ರೂಪಾಯಿಗಳಷ್ಟು ನಷ್ಟವನ್ನು ಅವರ ಸಂಪಾದಕರು ಸಹಿಸಿದ್ದಾರೆ. ಈ ವಿಚಾರವು ವೀರಶೈವ ಸಮಾಜಕ್ಕೆ ಲಾಂಛನಾಸ್ಪದವಾಗಿದೆ. ಇನ್ನು ಮುಂದೆ ಹೀಗೆಯೇ ನಷ್ಟವನ್ನು ಸೋಸುತ್ತಾ ಶಿವಾನುಭವವನ್ನು ನಡೆಸುವುದು ಪ್ರಾಯಃ ಸಾಧ್ಯವಾಗಲಾರದು. ಅದು ಕಾರಣ ಶಿವಾನುಭವವು ಚಿರಜೀವಿಯಾಗಿ ನಡೆಯುವಂತೆ ಮಾಡುವ ಭಾರವು ವೀರಶೈವ ಸಮಾಜಾಭಿಮಾನಿಗಳನ್ನೇ ಕೂಡಿದೆ. ಶಿವಾನುಭವದಂಥ ಶ್ರೇಷ್ಠವೂ ಪ್ರೌಢವೂ ಅವಶ್ಯಕವೂ ಆದ ಪತ್ರಿಕೆಯನ್ನು ಉಳಿಸಿಕೊಳ್ಳದಿದ್ದರೆ ವೀರಶೈವ ಸಮಾಜವು ನಿರ್ಜೀವ ಸಮಾಜವೆಂಬ ಹೆಸರಿಗೂ ಸಾಹಿತ್ಯ ಭಕ್ತರ ಶಾಪಕ್ಕೂ ಗುರಿಯಾಗಬೇಕಾಗುತ್ತದೆ. ಶಿವಾನುಭವಕ್ಕೆ ಪ್ರೋತ್ಸಾಹಕೊಡಬಹುದಾದ ಮಾರ್ಗಗಳು:—

(೧) ವೀರಶೈವ ಸಮಾಜದ ಹಿತಚಿಂತಕರೆಲ್ಲರೂ ಶಿವಾನುಭವಕ್ಕೆ ಚಂದಾದಾರರಾಗುವುದು.

(೨) ಶಿವಾನುಭವ ಕಾರ್ಯಾಲಯದಲ್ಲಿ ಅಚ್ಚಾದ ಗ್ರಂಥಗಳನ್ನು ವಾಚನಾಭಿರುಚಿಯುಳ್ಳವರೂ, ಹಣವಿರತಕ್ಕವರೂ ತರಿಸಿಕೊಂಡು ಪ್ರೋತ್ಸಾಹ ಕೊಡುವುದು.

(೩) ಧನವಂತರಾದವರು ಶಿವಾನುಭವ ಗ್ರಂಥ ಮಾಲೆಯಲ್ಲಿ ಪ್ರಕಟಿಸಬೇಕೆಂದಿರುವ (ಬಸವ ರಾಜೀಯ, ಏಕೋರಾಮ ಪುರಾಣ, ದೇವರ ದಾಸಿಮಯ್ಯನ ಪುರಾಣ) ಮೊದಲಾದ ಗ್ರಂಥಗಳಿಗೆ ಸಹಾಯಮಾಡುವುದು.

ಈ ವಿಚಾರದಲ್ಲಿ ಹಗಲಿರುಳೂ ವೀರಶೈವ ಸಮಾಜದ ಹಿತವನ್ನು ಬಯಸುತ್ತಿರುವ ಹುಬ್ಬಳ್ಳಿ ಮೂರುಸಾವಿರ ಮಠಾಧೀಶರಾದ ಶ್ರೀ ಜಗದ್ಗುರು ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳು "ಪ್ರಭುದೇವರ ವಚನ" ಕ್ಕೆ ಸಹಾಯಮಾಡಿಯೂ ಮೌನವಾಗಿ ಕುಳಿತು ಸಮಾಜ ಸೇವೆಮಾಡುತ್ತಿರುವ ಅನಾಸಕ್ತಯೋಗಿಗಳಾದ ಶ್ರೀಮಾನ್ ವಿ. ಬಿ. ಹಾಲಭಾವಿ ಸಾಹೇಬರು "ಶೂನ್ಯಸಂಪಾದನೆ" ಪ್ರಕಟಿಸುವುದಕ್ಕೆ ಸಹಾಯಮಾಡಿಯೂ ಶಿವಾನುಭವ ಗ್ರಂಥಮಾಲೆಗೆ ಸಹಾಯಮಾಡಲೂ ಇತರರಿಗೆ ಮಾರ್ಗದರ್ಶಿಗಳಾಗಿದ್ದಾರೆ.

(೪) ಕರ್ನಾಟಕದಲ್ಲಿರುವ ಎಲ್ಲ ಭಾಗದ ವೀರಶೈವ ಪಂಡಿತರೂ ಶಿವಾನುಭವಕ್ಕೆ ಉತ್ತಮವಾದ ಲೇಖನಗಳನ್ನು ಬರೆದೂ ವೀರಶೈವ ವಿಭೂತಿಗಳ, ಕ್ಷೇತ್ರಗಳ, ಮಠಗಳ ಚಿತ್ರಗಳನ್ನು ಒದಗಿಸಿಕೊಡುವುದರ ಮೂಲಕವೂ ಸಹಾಯಮಾಡಬಹುದಾಗಿದೆ.

(೫) ವೀರಶೈವ ಸಮಾಜದ ಹಾಗೂ ಶಿವಾನುಭವದ ಹಿತಚಿಂತಕರಾದವರು ತಮ್ಮ ಮನೆಗಳಲ್ಲಾಗುವ ವಿವಾಹ, ದೀಕ್ಷೆ, ಲಿಂಗಧಾರಣೆ ಮೊದಲಾದ ಶುಭ ಸಮಯಗಳಲ್ಲಿ ಶಿವಾನುಭವಕ್ಕೆ ಯಥಾಶಕ್ತಿ ಕಾಣಿಕೆಯನ್ನು ಅಥವಾ ಸಹಾಯವನ್ನ ಕೊಡುವುದು.

ಮೈಸೂರು ಸೀಮೆಯಲ್ಲಿ ಕೈ|| ಯಜಮಾನ ವೀರಸಂಗಪ್ಪನವರಿಂದ ವೀರಶೈವ ಸಮಾಜಕ್ಕಾದ ಮಹೋಪಕಾರದ ಸ್ಮರಣಾರ್ಥವಾಗಿ ಲಿಂಗವಂತರ ಮನೆಗಳಲ್ಲಾಗುವ ವಿವಾಹದ ಕಾರ್ಯಗಳಲ್ಲಿ ಕೈ|| ವೀರಸಂಗಪ್ಪನವರ ಅನ್ನಕಾಂಬಳಿಯೆಂಬ ಹೆಸರಿನಿಂದ ಕಾಣಿಕೆಯ ಹಣವನ್ನು ತೆಗೆದು "ಮೈಸೂರ್ ಸ್ಟಾರ್"

ಆಹ್ವಾನ ಪತ್ರಿಕೆಯ ಮುಂಭಾಗದಲ್ಲಿರುವ ವಿಷಯವನ್ನು ನಾವು ಬರೆದು ಕಳುಹಿಸಿಲ್ಲವೆಂತಲೂ ಮಾನವಿ ವಿಚಾರವಾಗಿ ಬರೆದುದರಲ್ಲಿ "ಜಗನ್ನಾಥದಾಸರ ಜನ್ಮಸ್ಥಳ" ಎಂದು ನಾವು ಬರೆಯದೆ "ಜಗನ್ನಾಥದಾಸರ ಸ್ಥಳ" ಎಂದು ಬರೆದಿದ್ದೇನೆಂತಲೂ ಅದು ಬೆಂಗಳೂರಿನ ಅಚ್ಚಿನಲ್ಲಿ ತಪ್ಪಾಗಿ ಅಚ್ಚಾಗಿದೆಯೆಂತಲೂ ಸ್ವಾಗತಸಂಘಾಧ್ಯಕ್ಷರು ತಮ್ಮ ಕಾಗದ ಪತ್ರಗಳನ್ನು ತೋರಿಸಿದರು. ಬೆಂಗಳೂರಲ್ಲಿರುವ ಪರಿಷತ್ತಿನವರು ಈ ಸಂಗತಿಗಳನ್ನು ಪ್ರಕಟನೆಗಾಗಿ ಕೇಳುತ್ತಾರೆಂಬುದು ನಮಗೆ ಗೊತ್ತಾಗದಿದ್ದುದರಿಂದ ವೀರಶೈವರೇ ಮೊದಲಾದ ಅನ್ಯಮತೀಯರ ಪವಿತ್ರ ಕ್ಷೇತ್ರಗಳನ್ನು ಬರೆಯಲಿಲ್ಲವೆಂತಲೂ ಕೇವಲ ತಮ್ಮ ತಿಳುವಳಿಕೆಗಾಗಿ ಕೇಳುತ್ತಾರೆಂದು ಭಾವಿಸಿ ಬ್ರಾಹ್ಮಣರ ಪವಿತ್ರ ಕ್ಷೇತ್ರಗಳನ್ನು ಬರೆದೆವೆಂತಲೂ ಸ್ವಾಗತಸಂಘಾಧ್ಯಕ್ಷರು ತಿಳಿಸಿದರು.

ನಿಜ ಸ್ಥಿತಿಯು ಹೇಗೇ ಇದ್ದರೂ ಮಾನವಿಯ ವಿವರಣೆಯಲ್ಲಿ "ಜಗನ್ನಾಥದಾಸರ ಜನ್ಮಸ್ಥಳ" ಎಂಬ ತಪ್ಪು ಸಂಗತಿ ಪ್ರಕಟವಾದುದು ಮೇಲಿನ ಎಲ್ಲ ಕಾರಣಗಳಿಂದ ಇಲ್ಲಿಯ ವೀರಶೈವರ ಆಕ್ಷೇಪಣೆಗೆ ಅವಕಾಶವನ್ನೇನೋ ಉಂಟುಮಾಡಿತು ಈ ಸಂಬಂಧವಾಗಿ ವ್ಯಾಜ್ಯನಡೆದದ್ದರಿಂದ ಇಲ್ಲಿಯ ವೀರಶೈವರ ಆಕ್ಷೇಪಣೆಯು ಅಸಂಗತವಾದುದೆಂದು ಹೇಳಲಿಕ್ಕಾಗುವದಿಲ್ಲವೆಂದೇ ನಾನು ಸ್ವಾಗತಸಂಘಾಧ್ಯಕ್ಷರಿಗೆ ತಾ|| ೧೯ ನೆಯ ದಿನ ತಿಳಿಸಿದೆನು

ನಾನು ಬರುವ ಮುಂಚೆಯೇ ಎಂದರೆ ತಾ|| ೧೬-೧೨-೩೪ ನೆಯ ದಿನವೇ ಇಲ್ಲಿಯ ವೀರಶೈವರು ಒಂದು ಪ್ರಕಟನೆಯನ್ನು ಹಂಚಿದ್ದರು. ಆದರಲ್ಲಿ ಈ ಕೆಳಗಿನ ಸಂಗತಿಯಿದ್ದಿತು. "**ಐತಿಹಾಸಿಕ ಮತ್ತು ಪುಣ್ಯಕ್ಷೇತ್ರದ ಹೇತುವಿನಿಂದ ಮಾನ್ವಿಯು ಜಗನ್ನಾಥದಾಸರ ಜನ್ಮಸ್ಥಳವೆಂದು ಸಾರ್ವಜನಿಕ ಕಾರ್ಯದಲ್ಲಿ ಪ್ರಕಟಿಸಿದ್ದರಿಂದ ಇಲ್ಲಿಯ ವೀರಶೈವರು ಕರ್ನಾಟಕ ಸಮ್ಮೇಳನಕ್ಕೆ, ವೀರಶೈವರು ಸಹಕರಿಸಬಾರದೆಂದು** ತಾ. ೧೪-೧೨-೩೪ **ನೆಯ ದಿನ ಸಾಯಂಕಾಲದ ಸಭೆಯಲ್ಲಿ** ನಿಶ್ಚಯಿಸಿದ್ದಾರೆ.

ಈ ಪ್ರಕಾರ ಪ್ರಕಟಿಸುವ ಮುಂಚೆ ತಾ|| ೧೪ ನೆಯ ಸಾಯಂಕಾಲ ಸ್ವಾಗತಸಂಘದವರಿಗೆ ತಿಳಿಸಿದ್ದರಲ್ಲಿ ಕೂಡಾ ಸಮ್ಮೇಲನಕ್ಕೆ ಸಹಕರಿಸುವುದಿಲ್ಲವೆಂತಲೂ ನೀವು ನಾಳೆ ೧೧ ಗಂಟೆಯೊಳಗಾಗಿ ಪರ್ಯಾಲೋಚಿಸಿ ತಿಳಿಸತಕ್ಕದ್ದೆಂತಲೂ ಬರೆದಿದ್ದರು. ಹೀಗೆ ಒಮ್ಮೆಲೇ ಸಹಕರಿಸುವುದಿಲ್ಲವೆಂದು ಠರಾವು ಮಾಡಿದುದು ಅನುಚಿತವೆಂತಲೂ ಸ್ವಾಗತಸಂಘದವರು ನಿಮ್ಮ ದೃಷ್ಟಿಯಿಂದ ಯಾವುದನ್ನು ತಪ್ಪು ಮಾಡಿದ್ದಾರೆಂದು ನೀವು ತಿಳಿದಿರುವಿರೋ ಆ ತಪ್ಪನ್ನು ತಿದ್ದಿಕೊಳ್ಳಬೇಕೆಂದು ಅವರಿಗೆ ತಿಳಿಸಿ ಹಾಗೆ ತಿದ್ದಿಕೊಳ್ಳದಿದ್ದರೆ ನಾವು ಸಹಕರಿಸುವುದಿಲ್ಲವೆಂದು ತಿಳಿಸಬೇಕಾಗಿದ್ದಿತೆಂತಲೂ ನಾನು ಇಲ್ಲಿಯ ವೀರಶೈವ ಮಹಾಜನರಿಗೆ ತಿಳಿಸಿದೆನು.

ಸ್ವಾಗತಸಂಘದ ಸಭೆ

ಈ ಪ್ರಕಾರ ಬ್ರಾಹ್ಮಣ ಮತ್ತು ಲಿಂಗಾಯತರ ಮಾನವಿ ವ್ಯಾಜ್ಯವು ಸಾಹಿತ್ಯ ಸಮ್ಮೇಲನದ ಕಾರ್ಯದಲ್ಲಿ ಸೇರಿದ್ದರಿಂದ ಮುಂದೇನು ಮಾಡಬೇಕೆಂಬ ವಿಷಯದಲ್ಲಿ ಯೋಚಿಸಲು ತಾ|| ೨೦ ನೆಯ ದಿನ ಸ್ವಾಗತ ಸಂಘದ ಸಭೆಸೇರಿತು. ಅದಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಗೊತ್ತುಮಾಡಿದರು. ಸ್ವಾಗತ ಸಂಘದಿಂದ ಪ್ರಕಟವಾದ ಆಹ್ವಾನ ಪತ್ರಿಕೆಯ ವಿಷಯವು ಸ್ವಾಗತ ಸಂಘದ ಒಪ್ಪಿಗೆಯಿಂದ ಪ್ರಕಟವಾಗಿಲ್ಲವೆಂದು ಸಭಿಕರು ಆಕ್ಷೇಪಿಸಿದರು ಸ್ವಾಗತ ಸಂಘಾಧ್ಯಕ್ಷರು ಆ ಪ್ರಕಾರ ಎಲ್ಲ ಪತ್ರ ವ್ಯವಹಾರಗಳನ್ನು ಸ್ವಾಗತ ಸಂಘದವರ ಒಪ್ಪಿಗೆಯಿಂದಲೇ ಮಾಡುವುದು ಶಕ್ಯವಿಲ್ಲವೆಂತಲೂ ಒಂದು ವೇಳೆ ಈ ವಿಷಯದಲ್ಲಿ ನನ್ನಿಂದ ತಪ್ಪಾಗಿದ್ದರೆ ಕ್ಷಮಿಸಬೇಕೆಂತಲೂ ಕೇಳಿಕೊಂಡರು. ಅನಂತರ ಆ ಆಹ್ವಾನ ಪತ್ರಿಕೆಯನ್ನು ಸ್ವಾಗತ ಸಂಘದವರು ಒಪ್ಪಿದುದಾಗಿದೆಯೆಂದೇ ಗ್ರಹಿಸಿ ಮುಂದಣ ಕಾರ್ಯ ಪ್ರಾರಂಭವಾಯಿತು.

ವೀರಶೈವರ ಆಕ್ಷೇಪಣೆಗೆ ಅವಕಾಶವಿದೆಯೆಂದು ನಾನು ಹೇಳಿ ತಾ|| ೧೪-೧೨-೩೪ ನೆಯ ದಿನ ಅವರು ಸ್ವಾಗತ ಸಂಘಕ್ಕೆ ತಿಳಿಸಿದನಂತರ ಸ್ವಾಗತ ಸಂಘದಿಂದ ಆ ವಿಚಾರವಾಗಿ ಯಾವ ಕಾರ್ಯಗಳಾದವೆಂಬುದನ್ನು ಸಭಿಕರಿಗೆ ತಿಳಿಸಲು ಕೇಳಿಕೊಂಡೆನು. ಕಾರ್ಯದರ್ಶಿಗಳಾದ ಶ್ರೀ ಶೆಟ್ಟರ ಸಿದ್ಧಣ್ಣನವರು ಹೇಳಿದುದರ ಸಾರಾಂಶ— "ವೀರಶೈವ ಪ್ರಮುಖರಿಗೆ ತಾ|| ೧೫ ನೆಯ ದಿನ ನಾನು ಕಂಡೆನು. ಅವರು ತಮಗೆ ಹೇಗೆ ತಿದ್ದುಪಡೆಯಾದರೆ ಸಮಾಧಾನವಾಗುತ್ತದೆಂಬಂಶವನ್ನು ಒಂದು ಚೀಟಿಯಲ್ಲಿ ಬರೆಸಿಕೊಟ್ಟರು. ಅದನ್ನು ಈ ಸಮ್ಮೇಲನದ ಕಾರ್ಯ ನಿರ್ವಹಿಸಲು ಪ್ರಮುಖರಾಗಿರುವ ವ್ಯವಸಾಯಶಾಖಾಧಿಕಾರಿಗಳಾದ ಶ್ರೀಮಾನ್ ಕೆ. ಗುಂಡಪ್ಪನವರ ಕಡೆಗೆ ಕೊಟ್ಟೆನು. ಅವರು ಬೆಂಗಳೂರಿಗೆ ಬರೆಯುತ್ತೇವೆಂದು ಹೇಳಿದರು, ಅವರು ಏನು ಬರೆದರೋ ನನಗೆ ಗೊತ್ತಿಲ್ಲ. ಇಲ್ಲಿಯ ವೀರಶೈವ ಪ್ರಮುಖರು ಬರೆಸಿಕೊಟ್ಟುದರ ನಕಲೂ ನನ್ನಲ್ಲಿಲ್ಲ. ಅದರಲ್ಲಿ ಏನಿದ್ದಿತೆಂಬುದನ್ನೂ ನಾನು ಹೇಳಲಾರೆ."

ಶ್ರೀಮಾನ್ ಕೆ. ಗುಂಡಪ್ಪನವರ ನೇತೃತ್ವದಲ್ಲಿಯೇ ಸಮ್ಮೇಲನದ ಕಾರ್ಯಗಳು ನಡೆಯುವುದು ಈ ಮುಂಚೆಯೇ ಸರ್ವಾನುಮತದಿಂದ ಗೊತ್ತಾಗಿದ್ದುದರಿಂದ ಅವರು ಬೆಂಗಳೂರಲ್ಲಿರುವ ಪರಿಷತ್ತಿನವರಿಗೆ ಬರೆಯಲು ಅಧಿಕಾರವುಳ್ಳವರಾಗಿದ್ದರು. ಆದಕಾರಣ ಅವರ ಅಭಿಪ್ರಾಯವಿಲ್ಲದೆ **ಈ ಕಾರ್ಯ ಮುಂವರಿಸಲಾಗದೆಂದು** ಆ ಸಭೆಯಲ್ಲಿ ಠರಾವಾಯಿತು ಶ್ರೀಮಾನ್ ಗುಂಡಪ್ಪನವರು ಪರಸ್ಥಳದಿಂದ ಶನಿವಾರ ಬರುವರೆಂದು ತಿಳಿದ ಕಾರಣ ತಾ|| ೨೨ನೇ ದಿನ ಸ್ವಾಗತ ಸಂಘದ ಸಭೆಯನ್ನು ಇಟ್ಟನ್ನಾಯಿತು.

ತಪ್ಪು ತಿಳುವಳಿಕೆ

ನಾನು ವೀರಶೈವನಾದುದರಿಂದಲೂ ವೀರಶೈವರ ಆಕ್ಷೇಪಣೆಯು ಅಸಂಗತವಾದುದಲ್ಲವೆಂತಲೂ ಹೇಳಿದುದರಿಂದ ಕೆಲವು ಬ್ರಾಹ್ಮಣರು ನಾನು ವೀರಶೈವರ ಪರವಾಗಿದ್ದೇನೆಂದು ತಿಳಿಯುವುದು ಸ್ವಾಭಾವಿಕ. ನನ್ನನ್ನು ಸ್ವಾಗತ ಸಂಘಾಧ್ಯಕ್ಷರಾದ ಶ್ರೀ ಹನುಮಂತರಾಯರು ಕರೆಸಿದ್ದರಿಂದಲೂ ತಾ|| ೧೪ ನೆಯ ದಿನದ ವೀರಶೈವರ ಠರಾವಿನಲ್ಲಿ ಮೊದಲೇ ಸಹಕರಿಸುವುದಿಲ್ಲವೆಂದು ನಿರ್ಧರಿಸಿದ್ದು ಸರಿಯಾಗಿಲ್ಲವೆಂದು ಲಿಂಗಾಯತ ಪ್ರಮುಖರಿಗೆ ನಾನು ಹೇಳಿದ್ದರಿಂದಲೂ ಇಲ್ಲಿಯ ಓರ್ವ ವೀರಶೈವನ ಪ್ರಕಟನೆಯನ್ನು ನಾನು ಪತ್ರಿಕೆಯಲ್ಲಿ ಪ್ರಕಟಿಸದೆ ಬಿಟ್ಟದ್ದರಿಂದಲೂ ವೀರಶೈವರು ಹೋಗದಿದ್ದ ಸ್ವಾಗತ ಸಂಘದ ಸಭೆಗೆ ನಾನು ಹೋಗಿ ಅಧ್ಯಕ್ಷನಾದುದರಿಂದಲೂ ನಾನು ಶ್ರೀ ಹನುಮಂತರಾಯರ ಪಕ್ಷದವನೆಂದು ಕೆಲವು ವೀರಶೈವರು ಗ್ರಹಿಸಿದರು. ಈ ಪ್ರಕಾರ ನನ್ನ ವಿಷಯದಲ್ಲಿ ತಪ್ಪು ತಿಳುವಳಿಕೆಯುಂಟಾದುದರಿಂದ ಉಭಯರಲ್ಲಿ ಸಂಧಿಯಾಗಬೇಕೆಂಬ ನನ್ನ ಪ್ರಯತ್ನಕ್ಕೆ ತೊಡಕುಗಳು ಹೆಚ್ಚಾದವು

ಎರಡನೆಯ ಸಭೆ

ಶ್ರೀಮಾನ್ ಕೆ. ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಂಘದ ಎರಡನೆಯ ಸಭೆಯು ತಾ|| ೨೨ ನೆಯ ಸಾಯಂಕಾಲ ಕೂಡಿತು. ಆಗ ಅಧ್ಯಕ್ಷಮಹಾಶಯರು ತಾವು ಬೆಂಗಳೂರಿಗೆ ಬರೆದುದನ್ನು ತಿಳಿಸಿದರು. ಅಷ್ಟರಲ್ಲಿ ಆಹ್ವಾನ ಪತ್ರಿಕೆಯ

(೧೧ನೆಯ ಪುಟಕ್ಕೆ ಮುಂದುವರಿದಿದೆ.)



ಶಾ. ಶ. ೧೮೫೬ ನೆಯ ಮಾರ್ಗಶೀರ್ಷ ಬ|| ೧೦ ಸೋಮವಾರ.

ಧರ್ಮಾತ್ಮಾ ಮಾಲವೀಜಿಯವರ ವರ್ಧಂತಿ.

ಕಳೆದ ೨೫ ನೆಯ ತಾರೀಖಿಗೆ ಧರ್ಮಾತ್ಮಾ ಪಂ. ಮದನಮೋಹನ ಮಾಲವೀಯವರಿಗೆ ೭೩ ವರ್ಷಗಳು ಪೂರ್ಣವಾದುದರಿಂದ ಅವರ ೭೪ ನೆಯ ವರ್ಧಂತಿ ಉತ್ಸವವು ಆಚರಿಸಲ್ಪಟ್ಟಿತು. ಬನಾರಸದಲ್ಲಿಯಾದರೂ ಅವರ ಮಿತ್ರಮಂಡಳಿಯವರು ಒಳ್ಳೇ ಆಡಂಬರದಿಂದ ಆ ಉತ್ಸವವನ್ನು ಮಾಡಬೇಕೆಂದು ನಿಶ್ಚಯಿಸಿದುದನ್ನು ಅವರು ಇಂಥ ಕಠಿಣ ಪರಿಸ್ಥಿತಿಯಲ್ಲಿ ಹಾಗೆ ಮಾಡುವದು ತಕ್ಕದ್ದಲ್ಲವೆಂದು ಬಿಡಿಸಿದರು. ಆದರೂ ಮುಖ್ಯ ಪಟ್ಟಣಗಳಲ್ಲೆಲ್ಲ ಈ ಮಹನೀಯರ ಉಜ್ವಲವಾದ, ಅಖಂಡವಾದ, ಮತ್ತು ಅರ್ಧ ಶತಮಾನ ಕಾಲದ ದೀರ್ಘವಾದ ರಾಷ್ಟ್ರಸೇವೆಯನ್ನು ಎಲ್ಲರೂ ಕೊಂಡಾಡಿದರು.

ಪಂ. ಮಾಲವೀಯವರು ಒಳ್ಳೇ ರಾಷ್ಟ್ರೀಯ ಕಾರ್ಯದಕ್ಷರು. ಹಿಂದುಸಂಸ್ಕೃತಿಯ ವಿಷಯದಲ್ಲಿಯೂ ಅಗಾಧ ಪಾಂಡಿತ್ಯವುಳ್ಳವರಾಗಿರುವರು. ಹಿಂದುಸಂಘಟನೆ, ಸಮತೆ ಮೊದಲಾದವುಗಳ ವಿಷಯವಾಗಿ ಅವಿಶ್ರಾಂತವಾಗಿ ಪ್ರಯತ್ನಿಸಿರುವರು. ಅವರು ಸ್ಥಾಪಿಸಿರುವ ಹಿಂದು ವಿಶ್ವವಿದ್ಯಾಲಯವು ಅವರ ಪ್ರಯತ್ನದ ಫಲವಾಗಿದೆ. ಹಿಂದು ಮಹಾಸಭೆಯ ಸ್ಥಾಪನಕ್ಕೆ ಕಾರಣರಾದ ಪ್ರಮುಖರಲ್ಲಿ ಇವರೂ ಒಬ್ಬರು. ಹಿಂದುಮಹಾಸಭೆಯ ಅವಶ್ಯಕತೆಯು ಹಿಂದುಗಳಿಗೆ ಎಷ್ಟಿರುವದೆಂಬುದನ್ನು ಅವರು ನಿರಂತರವೂ ಹೇಳುತ್ತಬಂದಿದ್ದಾರೆ.

ಆದಿಜನರ ಬಗ್ಗೆ ಪಂಡಿತಜೀಯವರಲ್ಲಿರುವ ಕರುಣಾಯುಕ್ತ ಭಾವನೆಯೇ ಅವರ ಧರ್ಮ ಪಾವಿತ್ರ್ಯದ ನಿದರ್ಶಕವಾಗಿದೆ. ಇವರು ಸಂಸ್ಕೃತ ಭಾಷೆಯನ್ನು ಚನ್ನಾಗಿ ಬಲ್ಲವರು. ವೇದ, ಶಾಸ್ತ್ರ, ಪುರಾಣಗಳ ಅಂತರಾಳವನ್ನು ಪರಿಶೀಲಿಸಿದವರು. ಇವರೇ ಹಿಂದು ಧರ್ಮಗ್ರಂಥಗಳಲ್ಲಿ ಅಸ್ಪೃಶ್ಯತೆಗೆ ಆಧಾರವಿಲ್ಲವೆಂದು ಹೇಳುತ್ತಿದ್ದಾರೆ. ಇಷ್ಟೇ ಅಲ್ಲ ಈ ಅಸ್ಪೃಶ್ಯತೆಯೆಂಬ ಮಹಾರೋಗವೇ ಹಿಂದುಧರ್ಮವನ್ನು ನಾಶಗೊಳಿಸುತ್ತಿದೆಯೆಂದು ಅವರು ಹಿಂದುಗಳೆಲ್ಲರಿಗೆ ಎಚ್ಚರಿಕೆ ಕೊಟ್ಟಿದ್ದಾರೆ. ಹಿಂದುಗಳೆಲ್ಲರಿಗೂ ಸಾರ್ವಜನಿಕ ಸಮಾನಾಧಿಕಾರವಿರಬೇಕೆಂಬ ಗೊತ್ತುವಳಿಯು ಅವರ ಅಧ್ಯಕ್ಷತೆಯಲ್ಲಿಯೇ ಪಾಸಾಯಿತು.

ರಾಷ್ಟ್ರೀಯ ಕಾರ್ಯಕ್ಕಂತೂ ಅವರು ತಮ್ಮ ಸರ್ವಸ್ವವನ್ನು ಅರ್ಪಿಸಿದ್ದಾರೆಂದು ಹೇಳಬಹುದು. ರಾಷ್ಟ್ರಸೇವೆಗಾಗಿ, ನಾನು ಬೇಕಾದ ತೊಂದರೆಯನ್ನು ಸಹಿಸಬಲ್ಲೆನೆಂದು ಅವರು ಇಂಗ್ಲಂಡಕ್ಕೆ ದುಂಡುಮೇಜಿನ ಪರಿಷತ್ತಿಗೆ ಹೋಗುವಾಗ್ಗೆ ಹೇಳಿದ್ದು ಎಲ್ಲರಿಗೂ ನೆನಸಿರಬಹುದು. ಆರ್ಯರು ಸಮುದ್ರ ಪ್ರವಾಸ ಮಾಡಬಾರದೆಂಬ ಶಾಸ್ತ್ರನಿರ್ಬಂಧವುಂಟೆಂದು ಕೆಲವರು ಆಕ್ಷೇಪಿಸಲು ಅವರು ರಾಷ್ಟ್ರಕಾರ್ಯಕ್ಕಾಗಿ ಇಂಥ ಅನಾವಶ್ಯಕ ನಿರ್ಬಂಧಗಳನ್ನು ಗಮನಿಸುವದು ಯುಕ್ತವಲ್ಲವೆಂದು ಅವರಿಗೆ ತಿಳಿಸಿ ಹೇಳಿದರು.

ಸ್ವದೇಶಿ ಪ್ರಸಾರಣೆಗಾಗಿ ಇವರು ಅತ್ಯಂತ ಪರಿಶ್ರಮಪಟ್ಟಿರುವರು. ರಾಷ್ಟ್ರೀಯ ಸಭೆಯು ಶಾಸನಭಂಗದ ಚಟವಟಿಕೆಯನ್ನು ನಡೆಯಿಸಿದಾಗ ಅನೇಕ ಮುಂದಾಳುಗಳು ಕಾರಾಗೃಹವಾಸಿಗಳಾದ ಕಾಲಕ್ಕೆ ಇವರು ರಾಷ್ಟ್ರಕ್ಕೆ ವಿಧಾಯಕ ಮಾರ್ಗವನ್ನು ತೋರಿಸಿಕೊಡುವದಕ್ಕಾಗಿ ಹಿಂದುಸ್ಥಾನದಲ್ಲೆಲ್ಲ ಸ್ವದೇಶಿ ಸಂಘಗಳನ್ನು ಸ್ಥಾಪಿಸಲೂ, ಸ್ವದೇಶಿ ಪ್ರದರ್ಶನಗಳನ್ನು ನಡೆಸಲೂ ಪ್ರೋತ್ಸಾಹಿಸಿದರು. ಖಾದಿ ಬಟ್ಟೆಯ ಬಗ್ಗೆ ಇವರಲ್ಲಿ ಅದ್ವಿತೀಯವಾದ ನಿಷ್ಠೆಯಿದೆ.

ಇವರು ಅತ್ಯಂತ ನಿಷ್ಠಾಯುಕ್ತ ಹಿಂದುಧರ್ಮಾವಲಂಬಿಗಳಾಗಿದ್ದರೂ ಅನ್ಯಧರ್ಮದವರನ್ನು ಎಂದೂ ವಿಷಮತೆಯಿಂದ ನೋಡರು. ಹಿಂದುಜಾತಿಯ ಉದ್ಧಾರವಾಗಬೇಕೆಂದು ಬಯಸುತ್ತಿದ್ದರೂ ಅನ್ಯಜಾತಿಗಳಿಗೆ ಕೇಡಾಗಬೇಕೆಂದು ಎಂದೂ ಭಾವಿಸರು. ಹಿಂದುಸ್ಥಾನದ ಸರ್ವಜಾತಿಯವರೂ ಪರಸ್ಪರರಲ್ಲಿ ಐಕ್ಯತೆಯಿಂದಲೂ, ಶಾಂತತೆಯಿಂದಲೂ ಇರಬೇಕೆಂಬುದೇ ಇವರ ಹೃದಯದ ಬಯಕೆ. ಅದಕ್ಕಾಗಿ ಅವರು ಅನೇಕ ಸಾರೆ ಪ್ರಯತ್ನಿಸಿರುವರು.

ರಾಜಕಾರಣದಲ್ಲಿಯೂ ಹಿಂದುಸ್ಥಾನದ ಎಲ್ಲ ಜಾತಿಗಳನ್ನು ಒಂದುಗೂಡಿಸುವದಕ್ಕಾಗಿ ಅವರು ಪ್ರಯತ್ನಿಸಿದುದು ಪ್ರಸಿದ್ಧವೇ ಆಗಿದೆ. ಎರಡು ಸಾರೆ ಅವರು ಈ ಕಾರ್ಯಕ್ಕಾಗಿ ದೀರ್ಘವಾಗಿ ಪ್ರಯತ್ನಿಸಿದ್ದಾರೆ. ಅವರಿಗೆ ಈ ಕಾರ್ಯದಲ್ಲಿ ಜಯಪ್ರದವಾಯಿತೆನ್ನುವದರಲ್ಲಿಯೇ ವಿಘ್ನವುಂಟಾಗಿ ಅದು ಅಷ್ಟಕ್ಕೇ ನಿಂತಿತು. ಈಗಾದರೂ ಅವರು ಎಲ್ಲ ಜಾತಿಗಳಿಗೆ ಸಮ್ಮತವಾಗುವಂಥ ರಾಜ್ಯಘಟನೆಯನ್ನು ಹುಟ್ಟುಮಾಡುವದು ಶಕ್ಯವಿದೆಯೆಂದೇ ಹೇಳುತ್ತಿರುವರು.

ಸದ್ಯಕ್ಕೆ ಹಿಂದುಸಮಾಜಕ್ಕೊದಗಿದ ಜಾತಿನಿರ್ಣಯವೆಂಬ ವಿಪತ್ತನ್ನು ದೂರುಮಾಡಲು ಅವರು ಸನ್ನದ್ಧರಾಗಿದ್ದಾರೆ. ಇದಕ್ಕಾಗಿ ಅವರು ರಾಷ್ಟ್ರೀಯ ಪಕ್ಷವೆಂಬ ಒಂದು ಬೇರೆ ಪಕ್ಷವನ್ನು ಸ್ಥಾಪಿಸಬೇಕಾಯಿತು. ಅವರು ತಮಗೆ ಅತ್ಯಂತ ಪ್ರಿಯವಾಗಿರುವ ರಾಷ್ಟ್ರೀಯ ಸಭೆಯಿಂದ ಅಗಲಬೇಕಾಯಿತು. ಆದರೂ ಅವರಿಗೂ ರಾಷ್ಟ್ರೀಯಸಭೆಗೂ ಈ ಜಾತೀಯನಿರ್ಣಯದಲ್ಲಿ ಯಾವ ಅಭಿಪ್ರಾಯವಿರಬೇಕೆಂಬ ಒಂದೇ ಒಂದು ಪ್ರಶ್ನೆಯ ಬಗ್ಗೆ ವ್ಯತ್ಯಾಸವಿದೆ.

ಇಂಥ ರಾಷ್ಟ್ರಸೇವಾತಪಸ್ವಿಯೂ, ರಾಷ್ಟ್ರಹಿತೈಕ ಕರ್ಮಯೋಗಿಯೂ ಆದ ಈ ಧರ್ಮಾತ್ಮರಿಗೆ ಪರಮಾತ್ಮನು ದೀರ್ಘಾಯುರಾರೋಗ್ಯಗಳನ್ನು ದಯಪಾಲಿಸಿ ಅಧಿಕವಾಗಿ ರಾಷ್ಟ್ರದ ಕಲ್ಯಾಣವುಂಟಾಗುವಂತೆ ಮಾಡಲೆಂದು ನಾವು ಹಾರೈಸುತ್ತೇವೆ.

ವಿಜಯನಗರ ಸ್ಮಾರಕೋತ್ಸವ ಸಭೆ.

ರಾಯಚೂರ ತರುಣ ಸಂಘದವರ ಪ್ರಯತ್ನ ವಿಶೇಷದಿಂದ ತಾ. ೩೦ ನೆಯ ದಿವಸ ಬ್ಯಾರಿಸ್ಟರ್ ಸೆಟ್ಟಾರರ ಅಧ್ಯಕ್ಷತೆಯಲ್ಲಿ ವಿಜಯನಗರ—ಸ್ಮಾರಕೋತ್ಸವ—ಸಭೆಯು ಸಂಭ್ರಮದಿಂದ ಜರುಗಿತು ಶ್ರೀಮಾನ್ ಪಾಟೀಲ ಬಸವನಗೌಡರು ಸ್ವಾಗತ ಸಂಘಾಧ್ಯಕ್ಷರಾಗಿದ್ದರು.

ರಾಷ್ಟ್ರೀಯಪಕ್ಷದ ಅಧಿವೇಶನ.

ಕಳೆದ ೨೭ ನೆಯ ತಾರೀಖಿನ ದಿವಸ ಬನಾರಸದಲ್ಲಿ ರಾಷ್ಟ್ರೀಯಪಕ್ಷದ ಅಧಿವೇಶನವು ಪಂ. ಮಾಲವೀಜಿಯವರ ನೇತೃತ್ವದಲ್ಲಿ ಕೂಡಿದ್ದಿತು. ಜಾತಿನಿರ್ಣಯವನ್ನು ವಿರೋಧಿಸುವದಕ್ಕಾಗಿ ಯಾವ ಯೋಜನೆಗಳನ್ನು ಕೈಕೊಳ್ಳಬೇಕೆಂಬುವ ಬಗ್ಗೆ ಮುಖ್ಯವಾಗಿ ಚರ್ಚಿಸಲಾಯಿತು. ಹಾಗೂ ರಾಷ್ಟ್ರೀಯಪಕ್ಷವ ಪುನರ್ಘಟನೆಯನ್ನು ಮಾಡಿ ಬನಾರಸದಲ್ಲಿ ಒಂದು ಮಧ್ಯವರ್ತಿ ಸಮಿತಿಯನ್ನು ಏರ್ಪಡಿಸಬೇಕೆಂದು ಚರ್ಚೆಯಾಯಿತು.

ಒಂದು ಕೋಟಿ ಸಹಿಗಳ ಸೂಚನೆ.

ಪಂಜಾಬ ರಾಷ್ಟ್ರೀಯಪಕ್ಷದ ಕಾರ್ಯದರ್ಶಿಗಳಾದ ಶ್ರೀ ಎ. ಎಸ್. ಸತ್ಯಾರ್ಥಿಯವರು, ರಾಷ್ಟ್ರೀಯಪಕ್ಷಕ್ಕೆ ಬೆಂಬಲವುಳ್ಳ ಒಂದು ಕೋಟಿ ಜನರ ಸಹಿಗಳನ್ನು ಕೂಡಿಸಬೇಕೆಂದು ಸೂಚಿಸಿರುವರು. ಹೀಗಾದರೆ ತಮ್ಮ ಪಕ್ಷದ ಬಲವೂ ವೃದ್ಧಿಯಾಗುವದಲ್ಲದೆ ಈ ಜಾತಿನಿರ್ಣಯದ ಬಗ್ಗೆ ತಟಸ್ಥ ವೃತ್ತಿಯನ್ನು ಸ್ವೀಕರಿಸಿರುವ ರಾಷ್ಟ್ರೀಯ ಸಭೆಯೂ ಈ ಪ್ರಶ್ನೆಯನ್ನು ಪುನಃ ವಿಚಾರಿಸಬಹುದೆಂದು ಅವರ ನಂಬಿಗೆ. ಇದಕ್ಕಾಗಿ ಪಂಜಾಬ, ದಿಲ್ಲಿ, ಗಡಿನಾಡುಗಳಲ್ಲಿ ೧೦ ಲಕ್ಷ ಸಹಿಗಳನ್ನು ಕೂಡಿಸಲು ಸಿದ್ಧನಾಗಿರುವೆನೆಂದು ಅವರು ವ್ಯಕ್ತಪಡಿಸಿರುವರು.

ರಾಯಚೂರಿನಲ್ಲಿ ಕೂಡಿದ

ಕ. ಸಾಹಿತ್ಯ ಸಮ್ಮೇಳನದ ಪೂರ್ವ ವೃತ್ತಾಂತ

(೯ ನೆಯ ಪುಟದಿಂದ ಬಂದುದು)

೫ ನೆಯ ಕಲಮಿನ ಮಾನವಿ ವಿವರಣೆಯ ತಿದ್ದುಪಾಟಿನ ಪ್ರಕಟನೆಗಳು ಸ್ವಾಗತಸಂಘಾಧ್ಯಕ್ಷರ ಕಡೆಗೆ ಬಂದಿದ್ದವು. ಆ ಪ್ರಕಟನೆಯನ್ನು ಸಭಿಕರಲ್ಲಿ ಹಂಚಲಾಯಿತು. ಇದರಿಂದ ವೀರಶೈವರು ಸಮಾಧಾನಹೊಂದಿ ಸಹಕರಿಸುವರೇ ಹೇಗೆಂಬ ಪ್ರಶ್ನೆಯು ಉಂಟಾಯಿತು. ಆಗ ಅಧ್ಯಕ್ಷರು ಈ ಪ್ರಕಾರ ತಿಳಿಸಿದರು.

"ಇಲ್ಲಿಯ ವೀರಶೈವರ ಅಭಿಪ್ರಾಯದ ಮೇಲಿಂದ ನನಗೆ ಯುಕ್ತಕಂಡುದನ್ನು ನಾನು ಪರಿಷತ್ತಿಗೆ ಬರೆದು ಈ ಪ್ರಕಾರ ತಿದ್ದುಪಾಟನ್ನು ಮಾಡಿಸಿದ್ದೇನೆ. ಇದರಿಂದ ವೀರಶೈವರು ಸಮಾಧಾನವಾಗಬಹುದೆಂದು ನನ್ನ ನಂಬಿಕೆ. ಒಂದುವೇಳೆ ಆಗದಿದ್ದರೆ ಯಾರು ಮಾಡುವುದೇನು? ಬ್ರಾಹ್ಮಣರು ಹೇಗೆ ಸಮಾಧಾನವಾಗುವರು? ಅಥವಾ ವೀರಶೈವರು ಹೇಗೆ ಸಮಾಧಾನವಾಗುವರು? ಎಂಬುದನ್ನು ನೋಡುವುದು ಸಮ್ಮೇಳನದ ಕಾರ್ಯವಲ್ಲ. ನ್ಯಾಯದ ಮಾರ್ಗದಲ್ಲಿ ನಾವು ನಡೆಯಬೇಕು. ಸಮ್ಮೇಳನದಲ್ಲಿ ಈ ಜಾತಿ ಸಂಬಂಧ ವಿಚಾರ ಬರಕೂಡದು."

ವೀರಶೈವರ ಸಭೆ

ಈ ತಿದ್ದುಪಾಟಿನ ವಿಚಾರವಾಗಿ ಯೋಚಿಸಲು ವೀರಶೈವರ ಸಭೆಯು ತಾ. ೨೫ ನೆಯ ದಿನ ಸಾಯಂಕಾಲ ಕೂಡಿತು. ಸ್ವಾಗತ ಸಂಘದಿಂದ ಮಾನವಿ ವಿವರಣೆಯಲ್ಲಾದ ಈ ತಿದ್ದುಪಾಟು ಸಮಾಧಾನಕರವಾಗಿದೆ. ಮತ ಸಂಬಂಧವಾದ ಯಾವ ಆಕ್ಷೇಪಕ್ಕೂ ಇನ್ನು ಅವಕಾಶವೇ ಉಳಿಯಲಿಲ್ಲ. ಅದಕಾರಣ ವೀರಶೈವರು ಸಮ್ಮೇಳನದಲ್ಲಿ ಸಹಕರಿಸಬೇಕೆಂದೇ ನಾನು ವಿವರವಾಗಿ ತಿಳಿಸಿದೆನು. ಸಭಿಕರಲ್ಲಿ ಬಹುಜನರಿಗೆ ನನ್ನ ಅಭಿಪ್ರಾಯ ಯುಕ್ತವಾಗಿ ತೋರಿತು, ಕೆಲವರಿಗೆ ಮಾತ್ರ ಸರಿತೋರಲಿಲ್ಲ. ಆಗ ಅವರು ಹೇಳುವ ಸಂಗತಿಗಳಿಂದ ಸಮ್ಮೇಳನದಲ್ಲಿ ಸಹಕರಿಸದಿದ್ದುದಕ್ಕೆ ಈ ಮತ ಸಂಬಂಧವಾದ ಆಕ್ಷೇಪಣೆಯಲ್ಲದೆ ಬೇರೊಂದು ಸಂಗತಿಯಿದೆಯೆಂದು ನಾನು ತಿಳಿದೆನು. ಅನೇಕರೂ ಹಾಗೆಯೇ ಹೇಳಿದರು. ಹೆಚ್ಚು ಹೊತ್ತಾಯಿತೆಂಬ ನಿಮಿತ್ತದಿಂದ ಆ ದಿನದ ಸಭೆಯನ್ನು ಮುಂದೆ ಹಾಕಿ ಮರುದಿನ ಕೂಡಬೇಕೆಂದು ಗೊತ್ತುಮಾಡಿದರು.

ಎರಡನೆಯ ಸಭೆ

ತಾ. ೨೬ ನೆಯ ಸಾಯಂಕಾಲ ವೀರಶೈವರ ಸಭೆ ಸೇರಿತು. ಆ ದಿನದ ಸಭೆಯಲ್ಲಿ ನಾನು ಯಾವ ಭಾಗವನ್ನೂ ವಹಿಸದೆ ಪ್ರೇಕ್ಷಕನಾಗಿರಬೇಕೆಂದೇ ಯೋಚಿಸಿದ್ದೆನು. ಆ ದಿನ ಸಾಯಂಕಾಲ ೩॥ ಗಂಟೆಗೆ ಸ್ವಾಗತ ಸಂಘದಿಂದ ವೀರಶೈವ ಪ್ರಮುಖರಿಗೆ ಒಂದು ವಿಸ್ತಾರವಾದ ಪತ್ರ ಬಂದಿದ್ದಿತು. ಅದನ್ನು ಸಭೆಯಲ್ಲಿಟ್ಟರು. ಅದರಲ್ಲಿ ಈ ಕೆಳಗಿನ ಸಂಗತಿಯಿದ್ದಿತು.

"ಆಹ್ವಾನ ಪತ್ರಿಕೆಯಲ್ಲಿ ಬರೆದಿರುವದು ಜಗನ್ನಾಥದಾಸರ ಜನ್ಮಸ್ಥಳದ ವಿಷಯವಾಗಿ. ಇದರ ವಿಷಯವಾಗಿ ಯಾವ ತರದ ಕಟ್ಟಳೆ (ಇಲ್ಲಿ ಖಟ್ಲೆ ಎಂದಿರಬೇಕಾಗಿದ್ದಿತು.) ನಡೆಯುತ್ತಿಲ್ಲವೆಂದು ಕಂಡುಬಂದಿದೆ. ಆದಾಗ್ಯೂ ಈ ಸಾಹಿತ್ಯ ಪರಿಷತ್ತು ಸಮ್ಮೇಳನದ ಕಾರ್ಯದಲ್ಲಿ ಕನ್ನಡಿಗರೆಲ್ಲರೂ ಸಂತೋಷದಿಂದ ಭಾಗಿಗಳಾಗಿರಬೇಕೆಂಬ ಆಶಯದಿಂದ ತಮ್ಮ ಕೋರಿಕೆ ಪ್ರಕಾರ ಈ ತಿದ್ದುಪಾಟು ಚೀಟಿಯನ್ನು ಪ್ರಕಟಿಸಿರುತ್ತದೆ."

ಇದರಿಂದ ಸ್ವಾಗತ ಸಂಘದವರು ಮಾನವಿಯು ಜಗನ್ನಾಥದಾಸರ ಜನ್ಮಸ್ಥಳವೆಂದೇ ಸಾಧಿಸುವದು ಉದ್ದೇಶವುಳ್ಳವರಾಗಿದ್ದಾರೆಂಬ ಧ್ವನಿಬರುವ ಕಾರಣ ಸಹಕರಿಸಬಾರದೆಂದೇ ವೀರಶೈವರು ನಿರ್ಧರಿಸಿ ಆ ಪ್ರಕಾರ ತಾ. ೨೫ ನೆಯ ದಿನ ಸ್ವಾಗತ ಸಂಘಕ್ಕೆ ತಿಳಿಸಿದರು.

ಈ ಪತ್ರವನ್ನು ಬರೆದವರ ಉದ್ದೇಶ ಸಂಧಿಗೆ ಅನುಕೂಲ ವಾತಾವರಣವುಂಟಾಗಲೆಂಬುದೇ ಇದ್ದಿತೆಂದು ಆ ಪತ್ರವನ್ನೆಲ್ಲ ಓದಿದವರಿಗೆ ತಿಳಿಯುತ್ತಿದ್ದರೂ ಮೇಲಿನ ವಾಕ್ಯಗಳಿಂದ ವೀರಶೈವರು ಆಕ್ಷೇಪಿಸುವ ಅರ್ಥವೂ ಬರುವಂತಿದ್ದಿತು. ಆದಕಾರಣ ಈ ಪತ್ರವನ್ನು ಸ್ವಾಗತಸಂಘದವರು ತಿರುಗಿ ತೆಗೆದುಕೊಂಡಿದ್ದಾದರೆ ಸಹಕರಿಸಲು ಅಡ್ಡಿಯಿಲ್ಲವೆಂದೇ ನಾನು ಆಗ ಯೋಚಿಸಿದೆನು. ಆ ಪ್ರಕಾರ ಸಭಿಕರಿಗೆ ತಿಳಿಸಲು ನಾನು ಇಷ್ಟಪಡಲಿಲ್ಲ. ಇದಕ್ಕೆ ನನ್ನ ವಿಚಾರದಲ್ಲುಂಟಾದ ಜನರ ತಪ್ಪುತಿಳುವಳಿಕೆಯೇ ಮುಖ್ಯ ಕಾರಣ.

ಪುನಃ ಪ್ರಯತ್ನ

ಶ್ರೀಮಾನ್ ಆಲೂರು ವೆಂಕಟರಾಯರು ತಾ. ೨೫ ನೆಯ ದಿನ ವೀರಶೈವ ಪ್ರಮುಖರಲ್ಲಿ ವಿಚಾರ ವಿನಿಮಯ ಮಾಡಿದರು. ಸ್ವಾಗತ ಸಂಘದವರು ಬರೆದ ಪತ್ರವನ್ನು ತಿರುಗಿ ತೆಗೆದುಕೊಳ್ಳುವಂತೆ ಮಾಡಬಹುದೆಂತಲೂ ತಿಳಿಸಿದರು. ಆದರೂ ಪ್ರಮುಖರು ಒಪ್ಪುವಂತೆ ತೋರಲಿಲ್ಲ. ತಾ. ೨೭ ನೆಯ ದಿನ ನಡೆದ ಪ್ರಸಂಗಗಳು ಈ ಮುಂದಿನ ಪುಟದಲ್ಲಿಯ ಪತ್ರವ್ಯವಹಾರಗಳಿಂದ ಗೊತ್ತಾಗಬಹುದು.

ಚಂದ್ರಶೇಖರ ಪಾಟೀಲ.

ವೀರಶೈವ ಮಹಾಜನರಿಗೆ—
ಸಮ್ಮೇಳನದಲ್ಲಿ ಸಹಕರಿಸಲು ವಿಜ್ಞಾಪನೆ

ಬಳ್ಳಾರಿ ನವಸಂದೇಶ ಪತ್ರಿಕಾಕರ್ತರ ಅಭಿಪ್ರಾಯವನ್ನೂ ಮ. ರಾ. ಹರ್ಡೇಕರ ಮಂಜಪ್ಪನವರ ಅಭಿಪ್ರಾಯವನ್ನೂ ಇದರಡಿಯಲ್ಲಿ ಕೊಟ್ಟಿದೆ.

೧ ಡಿಸಂಬರ ೨೪, ೧೯೩೪ ನೆಯ ತಾರೀಖಿನ ನವಸಂದೇಶ ಪತ್ರಿಕೆಯಲ್ಲಿ ಪ್ರಕಟವಾದ ಸಂಪಾದಕರ ಅಭಿಪ್ರಾಯ.

ಕರ್ನಾಟಕ ಸಾಹಿತ್ಯ ಸಮ್ಮೇಳನ.

ಮುಂದಿನ ವಾರದಲ್ಲಿ ರಾಯಚೂರುನಗರದಲ್ಲಿ ಜರುಗಲಿರುವ ಕರ್ನಾಟಕ ಸಾಹಿತ್ಯಪರಿಷತ್ತು ಹಲವು ದೃಷ್ಟಿಗಳಿಂದ ವಿಶೇಷ ಮಹತ್ವಪೂರ್ಣವಾಗಿರುವದು. ಇದರ ಬಗ್ಗೆ ಹಲವು ವಿಘ್ನ ಪರಂಪರೆಗಳು ಒದಗಿದ್ದು ನಮ್ಮೆಲ್ಲರ ಸುದೈವದಿಂದ ಅವುಗಳು ದೂರೀಕರಿಸಲ್ಪಟ್ಟಿವು. ಈಗ ಮತ್ತೊಂದು ದೊಡ್ಡ ವಿಘ್ನವು ಸಂಭವಿಸಲಿದ್ದಿತು. ಸಮ್ಮೇಳನದವರು ತಮ್ಮ ಆಹ್ವಾನ ಪತ್ರಿಕೆಯಲ್ಲಿ ಮಾನವಿ ಜಗನ್ನಾಥದಾಸರ ಜನ್ಮಸ್ಥಳವೆಂದು ಪ್ರಸಿದ್ಧಗೊಳಿಸಿದ್ದರು. ಇದು ಚರ್ಚಾತ್ಮಕ ವಿಷಯವಾಗಿದ್ದು ನ್ಯಾಯಸ್ಥಳದ ವಿಚಾರಣೆಯಲ್ಲಿರುವದಂತೆ. ಇದೇ ಕಾರಣವಾಗಿ ಅಲ್ಲಿಯ ವೀರಶೈವ ಮಹಾಜನರು ಸಮ್ಮೇಳನವನ್ನು ಬಹಿಷ್ಕರಿಸಿ ಪ್ರಕಟನೆಯನ್ನು ಹೊರಡಿಸಿದ್ದರಿಂದ ಸಮ್ಮೇಳನಕ್ಕೆ ಹೋಗಬೇಕೆಂದು ಅತ್ಯುತ್ಸಾಹದಿಂದ ಕಾದುಕೊಂಡಿದ್ದ ಅಖಿಲ ವೀರಶೈವ ಸಮಾಜದವರು ಪರಿಷತ್ತಿನ ಬಗ್ಗೆ ನಿರುತ್ಸಾಹಿಗಳಾಗಿರುವದು ಸಹಜವು. ಈ ದಿನವೇ ಸಾಹಿತ್ಯ ಪರಿಷತ್ತಿನವರು ಪ್ರಕಟಿಸಿರುವ ಬೇರೊಂದು ಪ್ರಕಟನೆಯು ನಮ್ಮ ಹಸ್ತಗತವಾಗಿದೆ. ಅದರಲ್ಲಿ ಪರಿಷತ್ತಿನವರು ಮಾನವಿ ಜಗನ್ನಾಥದಾಸರ ಜನ್ಮಸ್ಥಳವಲ್ಲವೆಂದು ವೀರಶೈವ ಪ್ರಮುಖರಿಂದ ತಿಳಿದು ಬಂದಿದ್ದರಿಂದಲೂ ತಪ್ಪು ಸುದ್ದಿಯು ಪ್ರಕಟವಾದುದಕ್ಕೆ ವಿಷಾದಿಸುತ್ತೇವೆಂದೂ, ರಾಯಚೂರು ಸುತ್ತಮುತ್ತಲೂ ನೋಡತಕ್ಕಂಥ ವೀರಶೈವ ಕ್ಷೇತ್ರಗಳು ಬಹಳ ಇರುತ್ತವೆಂದೂ, ಪ್ರಕಟಿಸಿರುವರು. ಪರಿಷತ್ತಿನವರ ಈ ಸ್ಪಷ್ಟೀಕರಣವು ರಾಯಚೂರು ವೀರಶೈವ ಮಹಾಜನರಿಗೆ ತೃಪ್ತಿಕರವಾಗಿರುವುದಾಗಿ ನಾವು ಭಾವಿಸುವೆವಲ್ಲದೆ ಅವರು ಶೀಘ್ರ ತಮ್ಮ ಬಹಿಷ್ಕಾರವನ್ನು ಹಿಂದೆಗೆದುಕೊಂಡಂತೆ ಎಲ್ಲಕಡೆಗೂ ಪ್ರಕಟಿಸಬೇಕಾಗಿ ನಮ್ಮ ವಿನಂತಿ. ಇಲ್ಲವಾದರೆ ಬಹುಜನ ವೀರಶೈವರು ಸಮ್ಮೇಳನಕ್ಕೆ ಬರುವ ಸಂಭವವಿರುವುದಿಲ್ಲ. ಸಮ್ಮೇಳನವು ಕೂಡುವದಕ್ಕೆ ಇನ್ನು ಸ್ವಲ್ಪ ದಿನಗಳು ಮಾತ್ರ ಉಳಿದಿರುವವು. ಪರಿಷತ್ತಿನವರು ಸಹ ತಮ್ಮ ಪ್ರಕಟನೆಯನ್ನು ಎಲ್ಲ ವರ್ತಮಾನ ಪತ್ರಿಕೆಗಳಲ್ಲಿ ಪ್ರಚುರಗೊಳಿಸುವುದು ಅತ್ಯಂತಾವಶ್ಯಕವು. ನಿರ್ಮಲವಾದ ಪ್ರೇಮವಾತಾವರಣದಿಂದ ಕೂಡಿದ ಸಾಹಿತ್ಯ ಕ್ಷೇತ್ರದಲ್ಲಿ ಮತದ್ವೇಷಾದಿ ಭೂತಗಳ ಪ್ರವೇಶಕ್ಕೆ ಅವಕಾಶವೇ ಇಲ್ಲ. ಮೊನ್ನಿನ ಚುನಾವಣೆಗಳಲ್ಲಿ ರಾಜಕೀಯ ರಂಗದಿಂದ ಸಹಾ ಈ ಭೂತವನ್ನು ಉಚ್ಚಾಟನಗೊಳಿಸಿರುವ ಕನ್ನಡಿಗರಿಗೆ ನಾವು ಹೆಚ್ಚು ಹೇಳುವುದೇ ಬೇಕಿಲ್ಲ.

ಮ|| ರಾ|| ಹರ್ಡೇಕರ ಮಂಜಪ್ಪನವರ ಸಮಕ್ಷಮಕ್ಕೆ—
ವಿಜ್ಞಾಪನೆಗಳು.

ಮಹಾಶಯರೆ, ಇದರ ಸಂಗಡ ಕಳುಹಿಸಿರುವ ೨೦ ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನದ ಆಹ್ವಾನ ಪತ್ರಿಕೆಯ ೫ ನೆಯ ಕಲಮಿನ ತಿದ್ದುಪಾಟಿನ ವಿಚಾರವಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಪ್ರಾರ್ಥನೆ.

ರಾಯಚೂರು ನಗರದ ವೀರಶೈವ ಮಹಾಜನರಿಗೂ ಈ ಸಾಹಿತ್ಯ ಸಮ್ಮೇಳನದ ಸ್ವಾಗತಮಂಡಲದವರಿಗೂ ಉಂಟಾಗಿರುವ ಭಿನ್ನಾಭಿಪ್ರಾಯಗಳ ನಿವಾರಣೆಗಾಗಿ ತಾವು ಕಳೆದ ೭-೮ ದಿವಸಗಳಿಂದ ಇಲ್ಲಿ ಪ್ರಯತ್ನಿಸುತ್ತಿರುವದರಿಂದ ಎಲ್ಲ ವಿದ್ಯಮಾನಗಳನ್ನು ಅರಿತವರೇ ಆಗಿದ್ದೀರಿ. ಆದಕಾರಣ ಸಾರ್ವಜನಿಕವಾಗಿ ಪ್ರಕಟಿಸಲು ತಮ್ಮ ಅಭಿಪ್ರಾಯವು ಅತ್ಯಾವಶ್ಯಕವಾಗಿರುವದರಿಂದ ದಯವಿಟ್ಟು ತಿಳಿಸುವಿರೆಂದು ನಂಬಿದ್ದೇನೆ. ಇತಿ ವಿಜ್ಞಾಪನೆಗಳು.

ರಾಯಚೂರು — ತಮ್ಮ ವಿಧೇಯ
ತಾ|| ೨೬-೧೨-೩೪ — **ಸಿ. ಕೆ. ವೆಂಕಟರಾಮಯ್ಯ**
ಗೌರವ ಕಾರ್ಯದರ್ಶಿ
ಕರ್ನಾಟಕ ಸಾಹಿತ್ಯ ಪರಿಷತ್ತು

ರಾಯಚೂರು — ತಾ|| ೨೬-೧೨-೩೪
ಮ|| ರಾ|| ಸಿ. ಕೆ. ವೆಂಕಟರಾಮಯ್ಯನವರ ಸಮಕ್ಷಮಕ್ಕೆ—

ವಿಜ್ಞಾಪನೆ, ಮಹಾಶಯರೇ ತಾವು ಕಳುಹಿಸಿದ ಪತ್ರವು ಮುಟ್ಟಿ ಅಭಿಪ್ರಾಯವಾಯಿತು. ೨೦ ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನದ ಆಹ್ವಾನ ಪತ್ರಿಕೆಯ ೫ ನೆಯ ಕಲಮಿನ ತಿದ್ದುಪಾಟನ್ನು ನಾನು ಓದಿದ್ದೇನೆ. ಆದರಿಂದ ರಾಯಚೂರು ವೀರಶೈವ ಮಹಾಜನರು ಮೊದಲನೆಯ ಆಹ್ವಾನ ಪತ್ರಿಕೆಯಲ್ಲಿ ಮಾನವಿ ವಿವರಣೆಯ ವಿಚಾರವಾಗಿ ಆಕ್ಷೇಪಿಸಿ ತಾ|| ೧೬-೧೨-೩೪ ನೆಯ ದಿವಸ ಪ್ರಕಟಿಸಿದ ವೀರಶೈವರ ಬಿಡುಗಡೆ ಎಂಬ ಪತ್ರಿಕೆಯಲ್ಲಿ ಪ್ರತಿಪಾದಿಸಿದ ಆಕ್ಷೇಪಣೆಯು ಸಂಪೂರ್ಣ ನಿವಾರಣೆಯಾಗಿ ಮತಸಂಬಂಧವಾದ ಈಗಿನ ಯಾವ ಆಕ್ಷೇಪಣೆಗೂ ಅವಕಾಶವೇ ಉಳಿಯಲಿಲ್ಲವೆಂದು ನನಗೆ ತೋರುತ್ತದೆ. ಆದಕಾರಣ ಸಕಲ ವೀರಶೈವರೂ ಅತ್ಯಾವಶ್ಯಕವಾಗಿ ಈ ಸಮ್ಮೇಳನದ ಕಾರ್ಯದಲ್ಲಿ ಸಹಕರಿಸಿ ಸಾಹಿತ್ಯ ದೇವಿಯ ಸೇವೆಯನ್ನು ಮಾಡುವರೆಂದೇ ನಾನು ತುಂಬಾ ನಂಬಿದ್ದೇನೆ.

ತಮ್ಮ ವಿಧೇಯ
ಹರ್ಡೇಕರ ಮಂಜಪ್ಪ

ರಾಯಚೂರು ವೀರಶೈವ ಮಹಾಜನರಲ್ಲಿ ವಿಜ್ಞಾಪನೆ

೨೦ ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನದ ಮೊದಲನೆಯ ಆಹ್ವಾನ ಪತ್ರಿಕೆಯ ೫ ನೆಯ ಕಲಮಿನ ತಿದ್ದುಪಾಟು ತಮಗೆ ಮಾನ್ಯವಾಗಲು ಸಹಾಯವಾಗಲೆಂಬ ಸದುದ್ದೇಶದಿಂದಲೇ ತಾ|| ೨೪-೧೨-೩೪ ನೆಯ ದಿವಸ ಸಾಯಂಕಾಲ ೩ ಘಂಟೆಗೆ ಒಂದು ವಿವರವಾದ ಲೇಖನವನ್ನು ತಮ್ಮಲ್ಲಿಗೆ ಕಳುಹಿಸಿದ್ದೆವು. ಆದರೆ ಅದು ತಮಗೆ ಅಸಮಾಧಾನಕರವಾಗಿ ತೋರಿತೆಂದು ತಮ್ಮ ತಾ ೨೫-೧೨-೩೪ ನೆಯ ಉತ್ತರದಿಂದ ತೋರಿದ ಕಾರಣ ಆ ಲೇಖನವನ್ನು ತಿರುಗಿ ತೆಗೆದುಕೊಂಡಿದ್ದೇವೆ. ಆದಕಾರಣ ಮೊದಲನೆಯ ಆಹ್ವಾನ ಪತ್ರಿಕೆಯ ತಿದ್ದುಪಾಟಿನ ವಿಚಾರದಲ್ಲಿ ವೀರಶೈವ ಮುಂದಾಳುಗಳಾದ ಮೇಲಿನ ಉಭಯ ಮಹಾಶಯರ ಅಭಿಪ್ರಾಯಗಳನ್ನು ಗಮನಕ್ಕೆ ತಂದು ಈ ಸಮ್ಮೇಳನದ ಕಾರ್ಯಕ್ಕೆ ಇನ್ನು ಮೇಲಾದರೂ ಸಹಕರಿಸಿ ರಾಯಚೂರಿಗೆ ಕೀರ್ತಿಬರುವಂತೆ ಮಾಡಬೇಕಾಗಿ ಪ್ರಾರ್ಥನೆ. ತಾರೀಖು ೨೬-೧೨-೩೪

ಹರದರ ಗೋಪಾಲರಾವ — **ಹಣಮಂತರಾವ ದೇಶಪಾಂಡೆ**
ಸೆಕ್ರಟರಿ — ಅಧ್ಯಕ್ಷ

ಸ್ವಾಗತ ಮಂಡಳ ರಾಯಚೂರು

ವಿವಿಧ ವರ್ತಮಾನ.

ಸಾಹಸಿ ಸೆರೆಯಾಳು

ಹಿಂದಿನ ಸಂಚಿಕೆಯಲ್ಲಿ ಜಿ. ಐ ಪಿ. ರೇಲ್ವೆಬಂಡಿಯ ಶೌಚ ಕೂಪದ ಕಿಡಿಕಿಯ ಕಾಜನ್ನು ಒಡೆದು ಜೋಸೆಫ ಟರ್ನರನೆಂಬ ಆಸ್ಟ್ರಿಯನ್ ಸೆರೆಯಾಳು ಓಡುವ ಬಂಡಿಯಿಂದ ಜಿಗಿದು ಪಾರಾದ ನೆಂದು ತಿಳಿಸಲಾಗಿದ್ದಿತಷ್ಟೆ. ಅವನ ಮುಂದಿನ ಅವಸ್ಥೆಯು ಈ ಪ್ರಕಾರವಾಗಿದೆ— ಉಗಿಬಂಡಿಯಿಂದ ಹಾರಿದ್ದರಿಂದ ಅವನಿಗೆ ಮೈತುಂಬ ಗಾಯುಗಳಾಗಿ ರಕ್ತವೆಲ್ಲಾ ಸೋರಿ ಹೋಗಿದ್ದಿತು. ರಾತ್ರಿಯೆಲ್ಲವೂ ಅಡಗಿಕೊಂಡು ಕಡೆಗೆ ಹಸಿವೆಯಿಂದ ವ್ಯಾಕುಲನಾಗಿ ಖಂಡಾಳೆ ಘಟ್ಟದಲ್ಲಿಯ ಕಾವಲುಗಾರನ ಕಡೆಗೆ ಬಂದು ಅನ್ನ ಕೊಡೆಂದು ಕೇಳಿದನು. ಅವನನ್ನು ಕಂಡ ಕೂಡಲೆ ಕಾವಲ ಗಾರನಿಗೆ ಪೋಲೀಸರು ಹಿಂದಿನ ದಿವಸ ಹುಡುಕಿ ಹೋದ ಅಪರಾಧಿಯು ಇವನೇ ಇರಬಹುದೆಂದು ತಿಳಿದುಬಂತು. ಆ ಕಾವಲುಗಾರನು ಕೂಡಲೆ ಈ ಸಂಗತಿಯನ್ನು ಸ್ಟೇಶನ್‌ಮಾಸ್ತರನಿಗೆ ತಿಳಿಸಲು ಅವನು ಟೆಲಿಫೋನಿನಿಂದ ಮುಂಬಯಿ ಮತ್ತು ಪುಣೆಯ ಪೋಲೀಸಕಟ್ಟೆಗೆ ಈ ಸಂಗತಿ ತಿಳಿಸಿದನು. ಟರ್ನರನಿಗೆ ಇದು ತಿಳಿದ ಕೂಡಲೆ ಅಂಥ ಅಶಕ್ತ ಸ್ಥಿತಿಯಲ್ಲಿಯೂ ಅವನು ಜಾರಿಕೊಂಡು ಒಂದು ಹುಲ್ಲಿನ ಗುಂಪಿನಲ್ಲಿ ಅಡಗಿಕೊಂಡನು. ಆದರೆ ಕಾವಲುಗಾರನು ಅವನ ಮೇಲೆ ಸರಿಯಾದ ಕಣ್ಣಿಟ್ಟು ಪೋಲೀಸರು ಬರಲು ಅವರಿಗೆ ಹುಲ್ಲಿನ ಗುಂಪಿಯನ್ನು ತೋರಿಸಿಬಿಟ್ಟನು. ಅಲ್ಲಿಂದ ಅವನು ತಾನಾಗಿಯೇ ಪೋಲೀಸರ ವಶವಾದನು.

ಟರ್ನರನು ತರುಣ ಇಂಜಿನೀಯರನಿದ್ದಾನೆ. ಈ ಮೊದಲೆ ಅವನು ಸಿಂಗಾಪುರದಿಂದ ಹಿಂದುಸ್ಥಾನಕ್ಕೆ ಬರುವ ಹಡಗದಿಂದ ತಪ್ಪಿಸಿಕೊಂಡು ಬಂದು ಇಟಲಿ ದೇಶದ ಹಡಗದಲ್ಲಿ ಕುಳಿತು ಮಾರ್ಮಾಗೋವಾ ಸಮೀಪಕ್ಕೆ ಬಂದು ಅಲ್ಲಿಂದ ಸಮುದ್ರದಲ್ಲಿ ಹಾರಿಕೊಂಡು ಪಾರಾಗಿ ಬಂದರಕ್ಕೆ ಮುಟ್ಟಿದನು. ಮಾರ್ಮಾಗೋವಾದಿಂದ ಉಗಿಬಂಡಿಯಲ್ಲಿ ಮುಂಬೈಗೆ ಬಂದನು. ಮುಂಬೈಯಲ್ಲಿ ಅವನ ಸುಳುವು ತಿಳಿದು ಪೋಲೀಸರು ಹಿಡಿಯಬರಲು ಅವನು ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದನು. ಅದು ನಿಷ್ಫಲವಾಯಿತು. ಅಲ್ಲಿಂದ ಅವನನ್ನು ಎರವಡಾ ಕಾರಾಗೃಹಕ್ಕೆ ಒಯ್ಯುವಾಗ್ಗೆ ಈ ಮೇಲಿನ ಸಾಹಸ ಮಾಡಿದನು.

ಸಾಧು ವಾಸವಾನಿಯವರ ಉಪದೇಶ.

ಸಾಧು ಟಿ. ಎಲ್ ವಾಸವಾನಿಯವರು ಮುಂಬಯಿಯಲ್ಲಿ ವಿದ್ಯಾರ್ಥಿಗಳ ಮುಂದೆ ಭಾಷಣಮಾಡುತ್ತಿರುವಾಗ— “ ಸದ್ಯದ ವಿದ್ಯಾರ್ಥಿಗಳು ಸೊಗಸಿನ ಬೆನ್ನುಹತ್ತಿದ್ದಾರೆ. ಮತ್ತು ಕೋಮಲ ಜೀವನವನ್ನು ಬಯಸುತ್ತಿದ್ದಾರೆ. ಆದರೆ ವಿದ್ಯಾರ್ಥಿಗಳೆ, ಕಷ್ಟ ಸಹಿಷ್ಣುತೆಯನ್ನು ಕಲಿಯಿರಿ; ಸಂಯಮ ಜೀವನವನ್ನು ಪಾಲಿಸಿರಿ; ಪೊಳ್ಳು ಆಡಂಬರಗಳನ್ನೆಲ್ಲ ಬಿಡಿರಿ; ಹೀಗಾದರೆ ರಾಷ್ಟ್ರವು ಊರ್ಜಿತವಾಗುವದರಲ್ಲಿ ಸಂದೇಹವೇ ಇಲ್ಲ.

ಸದ್ಯದ ವಿದ್ಯಾರ್ಥಿಯು ಕೇವಲ ಪರೀಕ್ಷೆಯ ಗುಲಾಮನಾಗಿದ್ದಾನೆ. ಆದರ ಅಂಜಿಕೆಯು ಅವನನ್ನು ಯಾವಾಗಲೂ ಅಳುಕಿಸುತ್ತಿದೆ. ಒಟ್ಟಿನ ಮೇಲೆ ಪರೀಕ್ಷೆಯು ಶಿಕ್ಷಣದ ಮಹತ್ವವನ್ನೇ ಮರೆಮಾಡಿಬಿಟ್ಟಿದೆ.

ತರುಣರು ತಮ್ಮ ಧರ್ಮತತ್ವಗಳನ್ನು ಪಾಲಿಸತಕ್ಕದ್ದು. ತಮ್ಮ ಮಹಾಪುರುಷರನ್ನು ಮನ್ನಿಸತಕ್ಕದ್ದು ಮತ್ತು ತಮ್ಮ ಸಂಸ್ಕೃತಿಯ ಮುಖ್ಯ ತತ್ವಗಳ ಬಗ್ಗೆ ಅಭಿಮಾನದಿಂದ ವರ್ತಿಸಬೇಕು ಹೀಗಾದರೇನೇ ಅಂಥ ರಾಷ್ಟ್ರವು ಪ್ರಬಲವಾಗುವದು. ಈ ಸಂದರ್ಭದಲ್ಲಿ ಮಹಾತ್ಮಾ ಗಾಂಧೀಜಿಯವರಿಗೆ ನಾನು ಧನ್ಯವಾದವನ್ನರ್ಪಿಸುತ್ತೇನೆ. ಇಂಥ ಪವಿತ್ರಾತ್ಮರ ಸಂಗದಲ್ಲಿರುವದೂ ಒಂದು ಮಹತ್ವದ ಶಿಕ್ಷಣವಾಗಿದೆ. ” ಎಂದು ಮುಂತಾಗಿ ಹೇಳಿದರು.

ಶುಕ್ರಗ್ರಹದಲ್ಲಿ ಜಗತ್ತಿನ ಉದ್ಭವ

ಲಂಡನ್ನಿನ ಸುಪ್ರಸಿದ್ಧ ಖಗೋಲ ಶಾಸ್ತ್ರಜ್ಞರಾದ ಸರ್ ಜೇಮ್ಸರವರು ತಮ್ಮ ಒಂದು ಭಾಷಣದಲ್ಲಿ ಹೇಳಿದ್ದೇನಂದರೆ—ಪೃಥ್ವಿಗಿಂತಲೂ ಶುಕ್ರನ ಸೂರ್ಯನ ಸಮೀಪಕ್ಕೆ ಇದ್ದಾನೆ ಸೂರ್ಯನು ಪೃಥ್ವಿಯ ಎರಡರಷ್ಟು ಬೆಳಕನ್ನು ಸೆಕೆಯನ್ನು ಅದಕ್ಕೆ ಕೊಡುತ್ತಾನೆ. ಅದರಮೇಲಿನ ವಾತಾವರಣವು ಸದ್ಯಕ್ಕೆ ಪ್ರವಹಿಸುವ ರೂಪದಲ್ಲಿದ್ದರೂ ಬರಬರುತ್ತ ಅದು ಪೃಥ್ವಿಯಂತೆಯೇ ಆಗುವದು ಈಗ ಆ ಗ್ರಹವೆಲ್ಲ ಮೋಡಗಳಿಂದ ಮುಚ್ಚಿಕೊಂಡಿರುವುದರಿಂದ ಭೂಪೃಷ್ಠವು ಕಾಣಿಸುವದಿಲ್ಲ. ಲಕ್ಷಾವಧಿವರ್ಷಗಳಹಿಂದೆ ಭೂಮಿಯು ಯಾವ ಸ್ಥಿತಿಯಲ್ಲಿದ್ದಿತೊ ಆ ಸ್ಥಿತಿಯಲ್ಲಿಯೇ ಈಗ ಶುಕ್ರಗ್ರಹವು ಇದೆ ಪೃಥ್ವಿಯಲ್ಲಿ ಪ್ರಾಣಿಗಳ ಜನನವಾಗುವ ಪೂರ್ವದಲ್ಲಿ ಮೊದಲು ಹುಲ್ಲುಹೊದೆ ಗಿಡ ಮರಗಳು ಉದ್ಭವವಾದಂತೆಯೇ ಶುಕ್ರನಲ್ಲಿ ಇನ್ನುಮುಂದೆ ಉದ್ಭವಿಸಬಹುದು. ಸದ್ಯಕ್ಕೆ ಪ್ರಾಣವಾಯುವು ಅಲ್ಲಿ ಇರುವಂತೆ ತೋರುವದಿಲ್ಲ ಪ್ರಾಣವಾಯುವು ಉಂಟಾದೊಡನೆಯೇ ಅಲ್ಲಿ ಪ್ರಾಣಿಗಳು ಉದ್ಭವವಾಗಬಹುದು.

ಈ ಪ್ರಕಾರವಾಗಿ ಶುಕ್ರನು ಪೃಥ್ವಿಯ ಪ್ರಾಚೀನ ಕ್ರಮವನ್ನೇ ಅನುಸರಿಸುವನು

ಅಮೇರಿಕೆಯ ವಿಮಾನ ಸನ್ನಾಹ

ಭವಿಷ್ಯ ಕಾಲದ ಮಹಾಯುದ್ಧವು ಒಂದು ವೇಳೆ ಪ್ರಾರಂಭವಾದರೆ ಅದು ಅಂತರೀಕ್ಷದಲ್ಲಿಯೇ ಆಗುವದೆಂದು ಎಲ್ಲ ದೇಶದವರೂ ಅಭಿಪ್ರಾಯಪಟ್ಟಿದ್ದಾರಷ್ಟೆ. ಪಾಶ್ಚಾತ್ಯ ರಾಷ್ಟ್ರಗಳು ಈ ಕಾರಣದಿಂದಲೇ ಒಂದನ್ನು ನೋಡಿ ಮತ್ತೊಂದು ಹೆಚ್ಚು ಹೆಚ್ಚಾಗಿ ತಮ್ಮ ವೈಮಾನಿಕ ಬಲವನ್ನು ಬೆಳಿಸುತ್ತಲಿವೆ ಇಂಗ್ಲಂಡದ ಬಹು ದೊಡ್ಡ ವಿಮಾನವಾದ ‘ಕ್ವೀನಮೇರಿ’ ಎಂಬುದನ್ನೂ ಮತ್ತು ಫ್ರಾನ್ಸದ ಅತಿ ದೊಡ್ಡ ವಿಮಾನವಾದ ‘ನಾರ್ಮಂಡಿ’ ಎಂಬುದನ್ನೂ ನೋಡಿ ಅಮೇರಿಕಾ ಸಂಯುಕ್ತ ಸಂಸ್ಥಾನದವರು ಹಿಂದೆ ಎಂದೂ ಕಟ್ಟಿರದಂಥ ಅತಿದೊಡ್ಡ ವಿಮಾನಗಳನ್ನು ಸಿದ್ಧಗೊಳಿಸುವವರಿದ್ದಾರೆ. ಇವುಗಳಿಗಾಗಿ ಅವರು ೫೫ ಲಕ್ಷಪೌಂಡುಗಳನ್ನು ವೆಚ್ಚ ಮಾಡಲಿರುವರು. ಈ ವಿಮಾನುಗಳು ಸಿದ್ಧವಾದ ಮೇಲೆ ಅವುಗಳಲ್ಲಿ ೩೦ ರಿಂದ ೧೦೦ ಜನರ ವರೆಗೆ ಕೂಡ್ರಬಹುದು. ಉಗಿಹಡಗದಲ್ಲಿರಬಹುದಾದ ಸೌಕರ್ಯಗಳೆಲ್ಲವೂ ಈ ವಿಮಾನಗಳಲ್ಲಿಯೂ ಸಿದ್ಧಮಾಡಲ್ಪಡುವವು. ಇದಲ್ಲದೆ ಮುಂದಿನ ಮೂರು ವರ್ಷಗಳಲ್ಲಿ ಅಮೇರಿಕೆಯು ೬೦೦ ವಿಮಾನುಗಳನ್ನು ನಿರ್ಮಿಸಲಿಚ್ಛಿಸುತ್ತಿದೆಯೆಂದ ತಿಳಿಯುತ್ತಿದೆ. ಹೀಗಾದರೆ ಶಾಂತಿಗೆ ಸ್ಥಲವೆಲ್ಲಿ?

—ಬಿಹಾರದ ‘ ಹರಿಜನ ಸೇವಕ ಸಂಸ್ಥೆ’ಯ ಕಾರ್ಯಕರ್ತರು ಮತ್ತು ಕೆಲ ವಿದ್ಯಾರ್ಥಿಗಳು ಪಾಟನಾ ಜಿಲ್ಲೆಯಲ್ಲೆಲ್ಲ ಸಂಚರಿಸಿ ಜನರಿಗೆ ಆದಿಜನರ ಬಗ್ಗೆ ಸಹಾನುಭೂತಿಯನ್ನು ಹುಟ್ಟಿಸಲು ಪ್ರಯತ್ನಿಸುತ್ತಿದ್ದಾರೆ ಇವರು ಹೋದಲ್ಲೆಲ್ಲ ಜನರು ಉದಾರ ಹಸ್ತದಿಂದ ಸಹಾಯಮಾಡಬೇಕೆಂದು ಶ್ರೀ ರಾಜೇಂದ್ರ ಪ್ರಸಾದರು ವಿಜ್ಞಾಪಿಸಿಕೊಂಡಿರುವರು.

ಪ್ಲೇಗ ಸಂಜೀವಿನಿ ಔಷಧವನ್ನೇ ಕೊಳ್ಳಿರಿ!

ಗುಳೇದಗುಡ್ಡದ ಮಹಾಜನರಿಂದಃ—

ಪ್ರಶಸ್ತಿ ಪತ್ರಿಕೆ.

ಪ್ಲೇಗ ಸಂಜೀವಿನಿ ಔಷಧದ ಏಜಂಟ
ರಾ|| ರಾ|| **ಬಶೆಟ್ಟೆಪ್ಪ ಬಸಪ್ಪ ಹಲಕುರ್ಕಿ ಬಾಗಲ ಕೋಟೆ ಇವರಿಗೆ—**

ಈ ಕೆಳಗೆ ಸಹಿಮಾಡಿರುವ ಗುಳೇದಗುಡ್ಡದ ನಿವಾಸಿಗಳಾದ ನಾವು ಅತ್ಯಂತ ಸಂತೋಷದಿಂದ ಬರೆದುಕೊಡುವ ಸರ್ಟಿಫೀಕೇಟ ಏನಂದರೆ—

ನಮ್ಮ ಊರಲ್ಲಿ ಪ್ಲೇಗ ರೋಗ ಹಬ್ಬಿ ೩-೪ ತಿಂಗಳಾಯಿತು. ಈ ರೋಗ ನಿವಾರಣೆಗೆ ನೀವು ಪ್ರಚಾರಮಾಡಿದ "**ಪ್ಲೇಗ ಸಂಜೀವಿನಿ**" ಔಷಧವು ಬಹಳ ಗುಣಕಾರಿಯಾಯಿತು. ನಿಮ್ಮ ಔಷಧವನ್ನು ಇಲ್ಲಿ ೪೦-೫೦ ಜನರಿಗೆ ಕೊಟ್ಟಿದ್ದಾಯಿತ. ಎಲ್ಲರಿಗೂ ಗುಣಬಂದಿತು.

ಪ್ಲೇಗ ರೋಗ ಬಂದಕೂಡಲೇ ಔಷಧ ಕೊಡುವದು ಮಾತ್ರ ಅಗತ್ಯ. ನೀವು ಈ ಔಷಧವನ್ನು ಇನ್ನೂ ಹೆಚ್ಚು ಪ್ರಚಾರ

ವಿಜ್ಞಾಪನಾ ಪತ್ರಿಕೆ.

ಸಮಸ್ತ ಜನರಿಗೆ ತಿಳಿಸುವದೇನಂದರೆ—

ಗುಳೇದಗುಡ್ಡದಲ್ಲಿ ಪ್ಲೇಗ ಇದ್ದಿತು. ಪ್ಲೇಗ ಸಂಜೀವಿನಿ ಎಂಬ ಔಷಧಿಯನ್ನು ಬಾಗಲಕೋಟೆಯ ರಾ|| ಬಶೆಟ್ಟೆಪ್ಪ ಒಸಪ್ಪ ಹಲಕುರ್ಕಿ-ಏಜಂಟ ಪ್ಲೇಗ ಸಂಜೀವಿನಿ ಇವರು ಇಲ್ಲಿ ತಂದು ಪ್ರಚಾರ ಮಾಡಿದರು **೪೦-೫೦ ಜನರಿಗೆ ಕೊಟ್ಟಿದ್ದರಲ್ಲಿ ಎಲ್ಲರಿಗೂ ಗುಣಬಂದಿತು.** ಆದಕಾರಣ ಎಲ್ಲ ಕಡೆಗೆ ಇದನ್ನು ತರಿಸಿಕೊಂಡು ಪ್ಲೇಗ ರೋಗಕ್ಕೆ ತುತ್ತಾಗುವದನ್ನು ತಪ್ಪಿಸಿಕೊಳ್ಳಬೇಕು. ಪ್ಲೇಗ ಬಂದ ಕೂಡಲೆ ಆರು (೬) ತಾಸುಗಳೊಳಗಾಗಿಯೇ ಈ ಔಷಧಿಯನ್ನು ತೆಗೆದುಕೊಳ್ಳಬೇಕಾದದ್ದು ಮಾತ್ರ ಅತ್ಯಗತ್ಯ.

ಗೊಳಿಸಿ ಈ ಭಯಂಕರ ರೋಗಕ್ಕೆ ತುತ್ತಾಗುತ್ತಿರುವ ಅಸಂಖ್ಯ ಜನರ ಪ್ರಾಣವನ್ನು ಉಳಿಸಬೇಕೆಂದು ಕೋರುತ್ತೇವೆ. ಈ ದಿವ್ಯ ಔಷಧವನ್ನು ಶೋಧಿಸಿದ ಶ್ರೀ ಗುರುಮಠಕಲ್ಲ ಸ್ವಾಮಿಗಳಿಗ ನಾವು ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇವ.

ಸಹಿಗಳು

೧ ಶಿವಲಿಂಗಪ್ಪ ಲಿಂಗಪ್ಪ ತಿಪ್ಪಾ ಮುನ್ಸಿಪಲ್ ಪ್ರೆಸಿಡೆಂಟ ವ ಬ್ರ್ಯಾಂಚ ಮ್ಯಾಜಿಸ್ಟ್ರೇಟ
೨ ದಾನಪ್ಪ ಮುರಗೆಪ್ಪ ರಾಜನಾಳ ಬ್ರ್ಯಾಂಚ ಮ್ಯಾಜಿಸ್ಟ್ರೇಟ.
೩ ಕಂಬೀರಸಾಬ ಮುದ್ದೇಬಿಹಾಳ, ಬ್ರ್ಯಾಂಚ ಮ್ಯಾಜಿಸ್ಟ್ರೇಟ ಮತ್ತು (ಮ್ಯುನಿಸಿಪಾಲಟಿ ಕೌನ್ಸಿಲರ)
೪ ರಾಚಪ್ಪ ಬಸಪ್ಪ ಮಂಟಾ (ಮ್ಯುನ್ಸಿಪಾಲಟಿ ಕೌನ್ಸಿಲರ)
೫ ಸೋಮಲಿಂಗಪ್ಪ ರುದ್ರಪ್ಪ ಗೌಡರ (ಮ್ಯುನ್ಸಿಪಾಲಟಿ ಕೌನ್ಸಿಲರ)
೬ ವ್ಹಿ. ಪಿ. ಪೆಂತೆದ (ಜನರಲ್ ಮರ್ಚಂಟ)
೭ ಎಸ್. ವ್ಹಿ. ಗಣಾಚಾರ, (ಪ್ರೆಸಿಡೆಂಟ ಲೋಕಲ್ ಬೋರ್ಡ)
೮ ಜಿ. ಪಿ ಕಟ್ಟಿ ಹೆ ಮಾಸ್ತರ ಮುನಿಸಿಪಲ್, ಎ. ವ್ಹಿ. ಸ್ಕೂಲ
೯ ಗುಂಡೋ ಅಣ್ಣಾ ಕುಲಕರ್ಣಿ (ಮುನಿಸಿಪಾಲಿಟಿ ಮೆಂಬರ)

ಔಷಧ ಸಿಗುವ ಸ್ಥಳ— ಶ್ರೀ ಬಶೆಟ್ಟೆಪ್ಪ ಬಸಪ್ಪ ಹಲಕುರ್ಕಿ ಏಜಂಟ ಬಾಗಲಕೋಟೆ.

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೨-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಕಾಯಕವೆ ಕೈಲಾಸ	೦-೩-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ವಿಜಯವಾಣಿ	೦-೨-೦
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ.** ಪೋ. ಆಲಮಟ್ಟಿ ಜಿ. ವಿಜಾಪುರ.

ಓಂ

ವಿಚಾರ ಕ್ರಾಂತಿಯನ್ನುಂಟು ಮಾಡುವ
ಹೊಸ ಪುಸ್ತಕ.

ವೀರಶೈವ ಮತಾಚಾರ್ಯರ

ಕಾಲ ನಿರ್ಣಯ.

ಲೇಖಕರು—
ಕರ್ಣಮಂಗಲಂ ಶ್ರೀಕಂಠಯ್ಯನವರು.

ಪ್ರತಿಯೊಬ್ಬ ವೀರಶೈವನೂ
ಅತ್ಯವಶ್ಯಕವಾಗಿ ಓದತಕ್ಕ ಪುಸ್ತಕ.

ಜಾಗ್ರತೆ ತರಿಸಿರಿ. ಬೆಲೆ ೧೨ ಆಣೆ.

ಮ್ಯಾನೇಜರ— ಶರಣ ಸಂದೇಶ

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಸ್ಸೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯ ಉಪಯೋಗಿಸಿ ಇದರ ನಿಜ ನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು [illegible] ಸ್ನಾನ[illegible] ತಲೆ ಕಾಯಿಸಲು ಶೀತಬಾಧಾ ಪರಿಹ ರವಾಗ[illegible]

N. B ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

ಜಿ. ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೀ ಪೇಟೆ, ತುಮಕೂರು
(ಮೈಸೂರು ಸ್ಟೇಟ್)

ವಾರ್ಷಿಕ ಫೀ ಪುಕ್ಕಟೆ!

ದಿ ಸ್ವರಾಜ್ಯ ಬ್ಯಾಂಕಿಂಗ ಮತ್ತು ಇನ್ಸ್ಯುರನ್ಸ ಕಂಪನಿ ಲಿಮಿಟೆಡ್

ಧಾರವಾಡ.

ಡಿಶೆಂಬರ ತಿಂಗಳಲ್ಲಿ ಪಾಲಸಿಗಳನ್ನು ತೆಗೆದುಕೊಂಡವರಿಗೆ

ವಾರ್ಷಿಕ ಫೀ ಮಾಫೀ ಮಾಡುವದರಲ್ಲಿ ಬರುವದು.

ಎಮ್. ಎಸ್. ಕೇಸರಿ ಬಿ. ಎ. ಎಲ್ ಎಲ್. ಬಿ.

ಮ್ಯಾನೇಜಿಂಗ್ ಏಜಂಟ್ಸ,

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ ಕಂ. ಲಿ. ಧಾರವಾಡ.

ಪ್ಲೇಗ ಸಂಜೀವಿನಿ.

ಅತ್ಯಾಶ್ಚರ್ಯಕರವಾದ ಗುಣ! ಕೇವಲ ೬ ತಾಸುಗಳಲ್ಲಿಯೇ ಗುಣ!

ಇದನ್ನು ಸೇವನೆ ಮಾಡುವದರಿಂದ ಪ್ಲೇಗಿನ ಭಯವೇ ಇಲ್ಲ!

೧೦೦ ಕ್ಕೆ ೧೦೦ ರಂತೆ ಗುಣ!!

ಶ್ರೀ ಮನ್ನಿರಂಜನ ಶಾಂತವೀರ ಸ್ವಾಮಿಗಳು ಗುರುಮಠಕಲ್ ಇವರು ಲೋಕ ಕಲ್ಯಾಣಾರ್ಥವಾಗಿ **ಪ್ಲೇಗ ಸಂಜೀವಿನಿ** ಎಂಬ ದಿವ್ಯ ಔಷಧಿಯನ್ನು ಶೋಧಮಾಡಿರುವರು. ಪ್ಲೇಗ ರೋಗವು ಎಷ್ಟು ಘಾತುಕವದೆಯೆಂಬುದನ್ನು ಹೇಳುವ ಅವಶ್ಯವಿಲ್ಲ. ಈ ಪ್ಲೇಗಿನಿಂದ ಸಾವಿರಾರು ಜನರು ಸಾಯುತ್ತಿರುತ್ತಾರೆ. ಇದನ್ನು ತಡೆಯುವದಕ್ಕಾಗಿ ಎಷ್ಟೋ ಔಷಧಗಳನ್ನು ತಯಾರ ಮಾಡಿರುವರು. ಅವುಗಳಿಂದೇನೂ ಗುಣವಾದದ್ದು ಕಂಡು ಬಂದಿಲ್ಲ. ಈ ಪ್ಲೇಗ ಸಂಜೀವಿನಿಯಿಂದ ಆರೇ ತಾಸುಗಳಲ್ಲಿಯೇ ಗುಣವಾಗುತ್ತದೆ. ಇದರ ಒಂದು ಬಾಟ್ಲಿಯ ಕಿಮ್ಮತ್ತು ೧ ರೂ. ೫ ಆಣೆ.

ವಿಶೇಷ ಮಾಹಿತಿಯನ್ನು ಅನುಪಾನ ಪತ್ರಿಕೆಯಲ್ಲಿ ನೋಡಿರಿ.

ವಿಶೇಷ ಸೂಚನೆ— ಅನುಪಾನ ಪತ್ರಿಕೆಯ ಸೂಚನೆಯ ಮೇರೆಗೆ ಔಷಧವನ್ನು ತೆಗೆದುಕೊಂಡಲ್ಲಿ ಖಾತ್ರಿಯಿಂದ ಗುಣವಾಗುವದು. ಎಲ್ಲ ಕಡೆಗೂ ಏಜಂಟರು ಬೇಕು.

ಏಜಂಟ್
ಬಸೆಟ್ಟೆಪ್ಪ ಬಸಪ್ಪ ಹಲಕುರ್ಕಿ,
ಬಾಗಲಕೋಟೆ.

ವಿಳಾಸ—
ಪ್ಲೇಗ ಸಂಜೀವಿನಿ ಆಫೀಸ್
ಗುಲಬರ್ಗಾ.

ಮಹಾರೋಗ ಸಂಜೀವಿನಿ.

ಶ್ರೀಮನ್ನಿರಂಜನ ಗುರುಮಠಕಲ್ಲ ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ

ಮಹಾರೋಗ ಸಂಜೀವಿನಿ,

ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.

ಇತ್ತಿತ್ತಲಾಗಿ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ಮಿತಿಮೀರಿ ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. ಈ ಕೆಟ್ಟಬೇನೆಯು (ಪ್ಲೇಗ ಮಾರಿಕಾ,) ಖಜ್ಜಿಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ ತಗಲತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ಮೃತ್ಯುವಿನ ತುತ್ತಾಗುವರು ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಖಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ನಾರಸಂಹಾರಿ, ಕೂಸುಗಳ ಹೊಟ್ಟೆಯೊಳಗಿನ ಬೇನೆ** ವಗೈರೆ ರೋಗಗಳ ಮೇಲೆ ಆಶ್ಚರ್ಯಕಾರಕ ಔಷಧಿಗಳನ್ನು ಕಂಡು ಹಿಡಿದ ಸದರಿ ಪೂಜ್ಯಪಾದರೇ ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ ಔಷಧಿಯನ್ನು ಶೋಧಮಾಡಿ ಪ್ರಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೆಯುಳ್ಳವರು ಮುದ್ದಾಂ ಬಂದು ತಮ್ಮ ರೋಗ ಲಕ್ಷಣಗಳನ್ನೆಲ್ಲ ತೋರಿಸಿದರೆ ಅದಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ. ಮೊದಲು ಔಷಧದ ಅರ್ಧ ಕಿಮ್ಮತ್ತು ಕೊಟ್ಟು ಔಷಧ ತಕ್ಕೊಳ್ಳಲು ಪ್ರಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಅಗ್ಗಿ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳತಕ್ಕದ್ದು. ವಿಶೇಷ ಸಂಗತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು.

ಮ್ಯಾನೇಜರ ಆರೋಗ್ಯ ಮಂದಿರ, ಕಿರೀಟಮಠ ಕಸಬಾ ಕ್ಯಾಂಪ **ಸೊಲ್ಲಾಪುರ ಸಿಟಿ.**

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! ಉತ್ತಮ ಸೌಕರ್ಯ. ಎಲ್ಲಕ್ಕಿಂತ ಅನುಕೂಲ ಸ್ಥಳ.

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಡಕ್ಕೂ ಟ್ರಾಮಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ಸೂಡವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ಉಂಥೆಗಳಿಗೆ ಕೇಂದ್ರಸ್ಥಾನ ... .
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ನಾನ! ಸ ೯ ಬೂ ಜಿ ಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮ್ಯಾನೇಜರ **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ಮಾಣಿಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಇಸಬು. ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ
ಹುಲಗಿಲ ಎಣ್ಣೆಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ
ಡಾ ಎಂ. ಸಿ **ತುಮ್ಮಿನಕಟ್ಟಿ**, ಎಂ. ಎಸ್‌ಸಿ, ಪಿಎಚ್. ಡಿ ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ
ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.
ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್ ಡಿ, ಇವರಿಂದ ತಯಾರಿಸಲ್ಪಟ್ಟ

" ಕಚ್ಯೂರ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಯಾವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ **ಉಚಿತ**ವಾಗಿ ನಮೂನೆಗಳನ್ನು ದೊರಕಿಸಿ ಪ್ರಕ್ರಿಯನ್ನು ಮಾಡಿಕೊಳ್ಳಿರಿ ನಮ್ಮಲ್ಲಿ ತಯಾರಾಗುವ ಮಾಲುಗಳನ್ನು **ಪಲ್ಲಾಣಿ** ದರದಿಂದ ಮಾರುವದಕ್ಕೆ ಕರ್ನಾಟಕದ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ ಇಷ್ಟವಿದ್ದವರು **ಹೆಚ್ಚಿನ ಮಾಹಿತಿಗೋಸ್ಕರ** ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಿಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಶ್ರೀ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್
ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಪತ್ತಲ ಸೀರೆಗಳನ್ನೇ ಉಪಯೋಗಿಸಿರಿ!

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತ ಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
ಶಿವಸಂಗಪ್ಪಣ್ಣಾ ಕುಪಸ್ತ,
ಬಾಗಲಕೋಟೆ.

ಶ್ರೀರಾಮ ವೀವ್ಹಿಂಗ್ ಮಿಲ್ಸ ಇಚಲಕರಂಜಿ.
(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದ ಗಹನವಾದ ವಿಷಯಗಳು, ರಹಸ್ಯದ ಸ್ಪಷ್ಟಾರ್ಥಗಳು ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದ್ದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.



ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. R. 2[illegible]

Harijana Sandesh.

ನ್ಯಾಯನಿಷ್ಠುರಿ| ದಾಕ್ಷಿಣ್ಯಪರನಲ್ಲ| ಲೋಕವಿರೋಧಿ| ಶರಣನಾರಿಗೂ ಅಂಜುವವನಲ್ಲ|
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ || ವ. ೨೨೮ || ಮಹಾನುಭಾವಿ **ಬಸವಣ್ಣನವರು.**

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಪ್ರತಿಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ ರು.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೧. | **ಆಲಮಟ್ಟಿ- ಸೋಮವಾರ** ತಾರೀಖು ೭ ನೆಯ ಜನವರಿ ೧೯೩೫. | **ಸಂಚಿಕೆ ೧**

ಹಿಂದು ಧರ್ಮವೋ? ಅಸ್ಪೃಶ್ಯತೆಯೋ?
ಯಾವುದು ಬೇಕು?

ಒಂದು
ಉಳಿದರೆ

ಇನ್ನೊಂದು
ಅಳಿವುದು.

ಶ್ರೀ ಬಿರ್ಲಾರವರು ನಿರ್ಮಿಸಿದ ಆದಿಜನ ವಸತಿಗೃಹದ ಶಂಕು ಸ್ಥಾಪನೆಯ ಕಾಲಕ್ಕೆ ಮಹಾತ್ಮರು ಈ ಪ್ರಕಾರ ಹೇಳಿದರು—

"ಹಿಂದು ಧರ್ಮವು ಜೀವಿಸಬೇಕಾಗಿದ್ದರೆ ಅಸ್ಪೃಶ್ಯತೆಯು ನಾಶವಾಗಲೇಬೇಕು ಇಸ್ಪೃಶ್ಯತೆಯೇ ಉಳಿಯುವದಾದರೆ ಹಿಂದು ಧರ್ಮಕ್ಕೆ ಅಳಿಗಾಲವೆಂದು ತಿಳಿಯಿರಿ. ಹರಿಜನರು ಹಿಂದು ಸಮಾಜದ ಸೇವೆಯನ್ನು ಅನೇಕ ರೀತಿಯಿಂದ ಮಾಡಿರುವರು, ಅವರನ್ನು ಬಲಾತ್ಕಾರ ಪೂರ್ವಕ ದುಡಿಸಿಕೊಳ್ಳುವ ಪದ್ಧತಿಯನ್ನು ಕಿತ್ತುಹಾಕಲೇಬೇಕು."

SANGAM CLOTH STORES
Prop: M S Hunaekar & Sons,
P.O: TERDAL - 53[illegible]
Di. Bijapur, (Karnata[illegible])

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.

ಕಳಕೊಳ್ಳುವ ಮೊದಲು.
ಎಚ್ಚರಾಗಿರಿ!

ಸಿದ್ಧೇಶ್ವರ ಮತ್ತು ಕಂಪನಿ
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ!
ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮಜಿ— ಯಾಕರೀ ಶೆಟ್ಟರೀ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು, ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮಜಿ—ಏನರೀ ಶೆಟ್ಟರೀ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮಜಿ—ಹಾಗಾದರೆ ಹೀಂಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕ್ಯಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕನ್ನೂದೂ ನನಗೆ ಗೊತ್ತಿದ್ದ ಹಾಗ ಹತ್ತು ಹನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ನಿ, ಸರಾಫರ ಅನ್ನಿ ಶ್ರೀಮಂತ ಜನರ ಅನ್ನಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಆದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಶ್ರೀ ಹೂಲಿ ಸಿದ್ಧಾಂತ ಪಂಚಾಂಗದಲ್ಲಿ

ಜಾಹೀರಾತ

ಕೊಡುವವರು ಜರೂರ ಕಳಿಸಿರಿ.

ಪಂಚಾಂಗವು ಅಚ್ಚಾಗುತ್ತಲಿದೆ. ಕಾರಣ ತಡಮಾಡದೆ ಕಳಿಸಿರಿ.

ವಿಶೇಷ— ಹೆಚ್ಚಿನ ಮಾಹಿತಿಯ ಬಗ್ಗೆ ಪತ್ರ ಬರೆಯಿರಿ.

ಪಂಚಾಂಗ ಪ್ರಕಾಶಕರು,
ಸಿ. ಕೆ. ಲಿಂಗಯ್ಯಾಸ್ವಾಮಿ
ಶ್ರೀ ಲಕ್ಷ್ಮೀ ವಿಲಾಸ ಪುಸ್ತಕಾಲಯ ಗದಗ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಜನವರಿ ತಾರೀಖು ೭ ನೆಯ ಸೋಮವಾರ | ಸಂಚಿಕೆ ೨೦.

೧೯ನೇ ಸ್ತ್ರೀಸಮ್ಮೇಲನಕ್ಕೆ ಮಹಾತ್ಮರ ಆಶೀರ್ವಾದ

ಗ್ರಾಮೋದ್ಯೋಗ ಕೈಕೊಳ್ಳಿರಿ! ಐಕ್ಯತೆ ಕಳೆಯಬೇಡಿರಿ!! ಪುರುಷರಿಗೆ ಆದರ್ಶವಾಗಿರಿ!!

"ಸ್ತ್ರೀಯರು ದೇಶ ಸೇವೆಗೆ ಸಿದ್ಧರಾಗಿದ್ದಾರೆ. ಯಾವದೇ ಪಕ್ಷ ಪಂಗಡಕ್ಕಾಗಿ ಅಲ್ಲ."

—ಸೌ. ಸರೋಜಿನಿ ದೇವಿ.

ಅಖಿಲ ಭಾರತ ಸ್ತ್ರೀ ಸಮ್ಮೇಲನವು ಕರಾಚಿಯಲ್ಲಿ ನೆರವೇರಿತು. ಸಭೆಗೆ ಎಲ್ಲಾ ಭಾಗಗಳಿಂದ ೨೦೦ ಕ್ಕಿಂತ ಮೇಲ್ಪಟ್ಟು ಸ್ತ್ರೀ ಪ್ರತಿನಿಧಿಗಳು ಆಗಮಿಸಿದ್ದರು. ಮುಸಲ್ಮಾನ್ ಸ್ತ್ರೀ ಪ್ರತಿನಿಧಿಗಳು ವಿಶೇಷವಾಗಿ ಬಂದಿದ್ದರು. ಸಮ್ಮೇಲನವು ಪ್ರಾರಂಭವಾಗುತ್ತಲೇ ಮಹಾತ್ಮಾಜಿಯವರಿಂದ ಕಳಿಸಲ್ಪಟ್ಟ ಆಶೀರ್ವಾದ ಸಂದೇಶವನ್ನು ಓದಲಾಯಿತು. ಸಭೆಯಲ್ಲಿ ಈ ಕೆಳಗಿನ ಗೊತ್ತುವಳಿಗಳು ಮುಖ್ಯವಾಗಿ ತೀರ್ಮಾನಿಸಲ್ಪಟ್ಟವು.

ಸ್ತ್ರೀಸಮಾನತೆ:— ಸ್ತ್ರೀಸಮಾನತೆಯ ಬಗ್ಗೆ ಕಟ್ಟಳೆಯ ತೊಡಕನ್ನು ಕಳೆಯುವದಕ್ಕಾಗಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರವರು ನಿವೇದಿಸುತ್ತ—"ಈ ವಿಷಯದಲ್ಲಿ ತುರ್ಕಸ್ಥಾನವು ಮಹತ್ಕ್ರಾಂತಿಯನ್ನೇ ಮಾಡಿದೆ. ಮುಸ್ತಾಫಾ ಕೇಮಾಲಪಾಶಾರವರು ಈ ಸಾಮಾಜಿಕ ವಿಷಮತೆಯ ಮೂಲವನ್ನೇ ನಿರ್ಮೂಲ ಮಾಡಿದ್ದಾರೆ." ಎಂದು ಹೇಳಿದರು.

ಗ್ರಾಮೋದ್ಯೋಗ ಸಂಘ:— ರಾಜಕುಮಾರಿ ಅಮೃತಕುವರ ಇವರು ಮಹಾತ್ಮರು ಸ್ಥಾಪಿಸಿದ ಗ್ರಾಮೋದ್ಯೋಗ ಚಟುವಟಿಕೆಯನ್ನು ಕೈಕೊಳ್ಳುವದಕ್ಕಾಗಿ ಹೇಳುತ್ತ—"ಇದರಲ್ಲಿ ರಾಜಕೀಯ ಅಂಶವೇನೂ ಇಲ್ಲ. ಇದು ಕೇವಲ ಹಳ್ಳಿಯ ಸಾಂಪತ್ತಿಕ ಮತ್ತು ನೈತಿಕ ಉದ್ಧಾರಾರ್ಥವಾಗಿಯೇ ಇರುವುದರಿಂದ ಇದನ್ನು ನಾವು ನಮ್ಮ ಕಾರ್ಯಕ್ರಮದ ಮುಖ್ಯಾಂಗವಾಗಿ ತಿಳಿಯಬೇಕು" ಎಂದು ಹೇಳಿದರು.

ರಾಷ್ಟ್ರಭಾಷೆ:— ಶ್ರೀ ರಾಜವಾಡೆಯ ರಾಣಿಯವರು ರಾಷ್ಟ್ರಭಾಷೆಯಾದ ಹಿಂದೀಯನ್ನು ಪುರಸ್ಕರಿಸಬೇಕೆಂದು ವಿಜ್ಞಾಪಿಸುತ್ತ—"ಹಿಂದುಸ್ಥಾನದ ಹೊರತು ಯಾವ ರಾಷ್ಟ್ರವೂ ತನ್ನ ಮನೋಭಾವನೆಗಳನ್ನು ವ್ಯಕ್ತಪಡಿಸಲಿಕ್ಕೆ ಪರಭಾಷೆಯನ್ನಂಗೀಕರಿಸಿರುವದಿಲ್ಲ" ಎಂದು ಹೇಳಿದರು.

ಮೋರೆಮುಸುಕು:— ಶ್ರೀಮತಿ ರುಸ್ತುಮಜಿಯವರು ಮೋರೆಗೆ ಮುಸುಕುಹಾಕುವ ಪದ್ಧತಿಯನ್ನು ನಿವಾರಿಸಲು ಕಳಕಳಿಯಿಂದ ಹೇಳಿದರು. 'ಈ ಅನಿಷ್ಟ ಪದ್ಧತಿಯು ಸ್ತ್ರೀಯರಲ್ಲಿ ಕುಷ್ಠುಕರೋಗಗಳನ್ನುಂಟುಮಾಡುತ್ತದೆಂದು' ಅವರು ಎಚ್ಚರಿಸಿದರು.

ಬಹುಪತ್ನೀತ್ವ:— ಒಬ್ಬ ಪುರುಷನು ಅನೇಕ ಜನ ಸ್ತ್ರೀಯರನ್ನು ಲಗ್ನಮಾಡಿಕೊಳ್ಳುವ ಪದ್ಧತಿಯ ಬಗ್ಗೆ ಬಲವಾಗಿ ನಿಷೇಧಿಸಲಾಯಿತು. ಒಬ್ಬ ಪತ್ನಿಯು ಇರುತ್ತಿರುವಾಗ ಇನ್ನೊಬ್ಬ ಸ್ತ್ರೀ ಮದುವೆಯಾಗಬೇಕೆನ್ನುವ ಪುರುಷನನ್ನು ಕುಮಾರಿಯರು ಎಂದೂ ವರಿಸಕೂಡದೆಂದು ಸೂಚಿಸಲಾಯಿತು. ಈ ಬಗ್ಗೆ ಮುಸಲ್ಮಾನ ಮಹಿಳೆಯರು—"ಇಸ್ಲಾಮಧರ್ಮದಲ್ಲಿ ಇನ್ನೊಬ್ಬ ಪತ್ನಿಯನ್ನು ಅತ್ಯಂತಾವಶ್ಯಕವಿದ್ದ ಪಕ್ಷದಲ್ಲಿಯೇ ವರಿಸಲು ಹೇಳಿದೆ. ಮುಖ್ಯವಾಗಿ ಪ್ರಥಮ ಪತ್ನಿಯಿಂದ ಸಂತತಿಯಾಗದಿದ್ದರೇನೇ ಇನ್ನೊಬ್ಬಳನ್ನು ಲಗ್ನವಾಗಲು ಅಪ್ಪಣೆ ಕೊಟ್ಟಿದೆ" ಎಂದು ತಿಳಿಸಿದರು.

ಇವಲ್ಲದೆ ಸಂತತಿ ಸಂಯಮನ, ಒತ್ತಾಯದ ಶಿಕ್ಷಣ, ಡಾ. ವಾ. ಕಮೀಟಿ ವರದಿಯ ನಿಷೇಧ, ಮೊದಲಾದವುಗಳ ಬಗ್ಗೆ ಗೊತ್ತುವಳಿಗಳು ಮಾಡಲ್ಪಟ್ಟವು.

—ಶ್ರೀ ಅಭ್ಯಂಕರರ ಮರಣದಿಂದ ನನ್ನ ಸ್ವಂತ ಹಾನಿಯಾದಂತಾಗಿದೆಯೆಂದು, ಗಾಂಧೀಜಿಯವರು ಹೇಳಿದರು.

ವಾಯುಯಾನಗಳ ಆವಶ್ಯಕತೆ.

ವಿಮಾನಗಳು ಅರ್ವಾಚೀನ ಜಗತ್ತಿನಲ್ಲಿ ಒಂದು ಮಹ ತ್ಕ್ರಾಂತಿಯನ್ನೇ ಉಂಟುಮಾಡಿವೆ. ಹಾಗೆಯೇ ಚಿಕ್ಕ ಬಾಲಕರು ಮೊದಲ್ಗೊಂಡು ಮಹಾ ಮಹಾ ಶಾಸ್ತ್ರೀಯ ಶೋಧಕರ ವರೆಗೆ ಎಲ್ಲರೂ ವಿಮಾನಗಳ ಬಗ್ಗೆ ಒಳ್ಳೇ ಆದರವುಳ್ಳವರಾಗಿದ್ದಾರೆ. ಯಾಕಂದರೆ ವಿಮಾನಗಳು ಮನುಷ್ಯನನ್ನು ಒಂದು ಜಗತ್ತಿನಿಂದ ಮತ್ತೊಂದು ಜಗತ್ತಿಗೆ ಚಲಿಸುವಂತೆ ಮಾಡುವದೇ ಅವುಗಳ ಪ್ರಾಮುಖ್ಯತೆಗೆ ಕಾರಣವಾಗಿದೆ ಅಭೇದ್ಯವಾದ ಗಿರಿಕಂದರಗಳನ್ನು ವಿಮಾನಗಳಿಂದ ಸುರಕ್ಷಿತವಾಗಿ ದಾಟಬಹುದು ದುಸ್ತರವಾದ ನದಿ ಸರೋವರ, ಸಾಗರ ಮಹಾಸಾಗರಗಳು ಕೆಳಗೆ ಭೋರ್ಗರೆಯುತ್ತಿದ್ದರೂ ಮೇಲೆ ಗರುಡ ವೇಗದಿಂದ ಹಾಯ್ದುಹೋಗುತ್ತಿರುವ ವಿಮಾನಕ್ಕೆ ಏನೂ ಮಾಡಲಾರವು. ಈ ಪ್ರಕಾರ ಪ್ರಸ್ತುತ ಕಾಲದಲ್ಲಿ ವಿಮಾನ ಹಾರಿಸವದು ಒಳ್ಳೇ ಉತ್ಸಾಹ ಜನಕವಾಗಿದೆ.

ಆದರೆ ಈ ವಿದ್ಯೆಯು ಕಂಡ ಕಂಡವರಿಗೆ ಲಭಿಸುವಂತಿಲ್ಲ ಭವಿಷ್ಯ ಕಾಲದಲ್ಲಿ ವಿಮಾನ ನಡೆಯಿಸುವದು ಕಾಲು ಗಾಡಿಯನ್ನು ನಡೆಯಿಸುವಷ್ಟು ಸುಲಭವಾಗಬಹುದು. ಆದರೂ ಈಗ ವಿಮಾನ ವಿದ್ಯೆಗಾಗಿ ಅನೇಕ ಜನರು ಬಲಿದಾನವಾಗಬೇಕಾಗಿದೆ ಮಹಾ ಮಹಾ ಸಂಶೋಧಕರು ತಮ್ಮ ಅಪೂರ್ವ ಆಯುಷ್ಯವನ್ನು ಈ ವಿದ್ಯೆಯನ್ನು ಸುಲಭ ಮಾಡುವದಕ್ಕಾಗಿ ವೆಚ್ಚಮಾಡುತ್ತಿದ್ದಾರೆ. ಮರ ಣಕ್ಕಂಜದ ಸಾಹಸಿಗರಾದ ವೈಮಾನಿಕರು ಅತ್ಯುತ್ಸಾಹದಿಂದ ವಿಮಾನಗಳನ್ನು ನಡೆಯಿಸಿ ಜನರಲ್ಲಿ ವಿಶ್ವಾಸವನ್ನೂ ಧೈರ್ಯವನ್ನೂ ತಂದುಕೊಡುತ್ತಿರುವರು. ಆಕಸ್ಮಿಕವಾಗಿ ಅವರಿಗೆ ವಿಮಾನದಲ್ಲಿಯೇ ಮರಣ ಒದಗಬಹುದು. ಮುಂದೆ ಮುಂದೆ ಅವರು ಪ್ರಾಣಾರ್ಪಣೆ ಮಾಡಿದಂತೆ ಹಿಂದಿನವರು ಹಿಂಜರಿಯದೆ ಇಮ್ಮಡಿ ಉತ್ಸಾಹದಿಂದ ವೈಮಾನಿಕ ವಿದ್ಯೆಯನ್ನು ಮುಂದುವರಿಸುತ್ತಿರುವರು.

ಈ ಮಹತ್ವದ ವಿದ್ಯೆಯನ್ನು ಕಲಿಯುವ ಪೂರ್ವದಲ್ಲಿ ಸಾಧಕನಿಗೆ ಅಂತರಿಕ್ಷದಲ್ಲಿ ಸಂಚಾರ ಮಾಡುವ ಕುತೂಹಲವನ್ನು ಹುಟ್ಟಿಸುವದು ಅವಶ್ಯಕವಾಗಿದೆ. ಅದೇ ಕುತೂಹಲದಿಂದ ಅವನು ಧೈರ್ಯದಿಂದ ವಿಮಾನ ನಡೆಯಿಸಲು ಶಕ್ತನಾಗುವನು. ಕೇವಲ ಅಂತರಿಕ್ಷದಲ್ಲಿ ಹೋಗಲು ವಾಯುಗೋಲಗಳೂ (Baloons) ಮತ್ತು ವಾಯುಯಾನಗಳೂ (Cliders) ಉಂಟುಮಾಡಲ್ಪಟ್ಟಿವೆ. ಸಮುದ್ರದಲ್ಲಿಯ ಪಟಯುಕ್ತ ಡೋಣಿಗಳಂತೆ ಇವು ಇರುತ್ತವೆ. ಇವುಗಳು ಯಂತ್ರ ಸಹಾಯದಿಂದ ಮೇಲಕ್ಕೆ ಹೋಗುವುದಿಲ್ಲ. ಆದರೆ ಹವೆಯ ತರಂಗಗಳ ಮೂಲಕ ಅಂತರಿಕ್ಷದಲ್ಲಿ ಚಲಿಸುತ್ತವೆ. ಏರಲು, ಹಾರಲು, ಇಳಿಯಲು ಇವುಗಳಿಂದ ತೊಂದರೆಯಿಲ್ಲ.

ಆದುದರಿಂದ ವಿಮಾನ ವಿದ್ಯೆಯನ್ನು ಪ್ರಾರಂಭಿಸುವ ಪೂರ್ವದಲ್ಲಿ ವಾಯುಯಾನಗಳ ಮೂಲಕ ಅಂತರಿಕ್ಷದಲ್ಲಿ ಹಾರಾಡಲು ಮತ್ತು ಮುಂದೆ ಸಾಗಲು ಕಲಿಯಬೇಕು. ಶಾಲೆಯ ಬಾಲಕರಿಗೆ ಈ ವಾಯುಯಾನಗಳ ಸಂಚಾರವನ್ನು ಕಲಿಸುವದುತ್ತಮ ಜರ್ಮನಿಯಲ್ಲಿ ಶಾಲೆಗಳಲ್ಲಿಯೇ ಈ ವಿದ್ಯೆ ಕಲಿಸಲ್ಪಡುತ್ತದೆ. ಇವುಗಳಿಗೆ ೨೦ ಪೌಂಡುಗಳಿಂದ ೧೦೦ ಪೌಂಡುಗಳವರೆಗೆ ಬೆಲೆ ಬೀಳುತ್ತದೆ ಏರಬೇಕಾದರೆ ಇದು ಬಹು ಎತ್ತರ ಏರಬಲ್ಲದು, ಮುಂದಕ್ಕೆ ಚಲಿಸಬೇಕಾದರೆ ಮಾತ್ರ ಸ್ವಲ್ಪ ಕೆಳಗಿಳಿಯುತ್ತದೆ ಇದು ನೆಲದ ಮೇಲೆ ಇಳಿಯುವಾಗಲೂ ಅಪಾಯವಾಗಲಾರದು ಅಗ್ನಿಸ್ಫೋಟ, ಯಂತ್ರ ಕೆಡುವದು ಮೊದಲಾದ ವಿಮಾನಗಳ ತೊಂದರೆಗಳು ಇಲ್ಲಿ ಆಗುವಂತಿಲ್ಲ

ಆದುದರಿಂದ ಎಲ್ಲ ದೇಶಗಳೂ ಬಾಲಕರಿಗೆ ಈ ವಾಯುಯಾನದ ಶಿಕ್ಷಣವನ್ನು ವೈಮಾನಿಕ ಶಿಕ್ಷಣದ ಆರಂಭದ ಪಾಠವೆಂದು ಕಲಿಸುತ್ತಲಿವೆ ಬ್ರಿಟಿಶ ವಾಯುಯಾನ ಮಂತ್ರಿಮಂಡಲದವರು ಈ ಶಿಕ್ಷಣವನ್ನು ಕೊಡುವದಕ್ಕೆ ಪ್ರತಿವರ್ಷ ೩೦೦೦ ಪೌಂಡಗಳಂತೆ ೫ ವರ್ಷಗಳವರೆಗೆ ಕೊಡಲು ನಿಶ್ಚಯಿಸಿರುವರು.

ನಮ್ಮ ಹಿಂದುಸ್ಥಾನದಲ್ಲಿ ಈ ಶಿಕ್ಷಣವು ಇನ್ನೂ ಪ್ರಚಾರದಲ್ಲಿಲ್ಲ. ಈಗ ಮೂರು ವರ್ಷಗಳ ಪೂರ್ವದಲ್ಲಿ ಪ್ರಸಿದ್ಧ ವೈಮಾನಿಕರಾದ ಮಿ. ಪಿ. ಎಮ್. ಕಾಬಾಲಿಯವರು ಮುಂಬಯಿಯಲ್ಲಿ "ಭಾರತ ವೈಮಾನಿಕ ಸಂಘ"ವನ್ನು ಸ್ಥಾಪಿಸಿರುವರು. ಇವರು ಈ ವಿಷಯದಲ್ಲಿ ಸ್ವತಃ ಜರ್ಮನಿಯಲ್ಲಿದ್ದುಕೊಂಡು ಅಭ್ಯಾಸಮಾಡಿರುವರು.

ಈ ವಾಯುಯಾನಗಳನ್ನು ಹಾರಿಸಲಿಕ್ಕೆ ಹಿಂದುಸ್ಥಾನದ ವಾತಾವರಣವು ಜಗತ್ತಿನ ಅನ್ಯ ದೇಶಗಳಿಗಿಂತಲೂ ಅತ್ಯುತ್ತಮವಾದುದಾಗಿದೆ. ಆದರೆ ಹಿಂದುಸ್ಥಾನದ ಸರಕಾರದವರು ಇದಕ್ಕೆ ಅಷ್ಟು ಲಕ್ಷ ಪೂರೈಸಿಲ್ಲವಾದುದರಿಂದ ಈ ಮಹತ್ವದ ವಿದ್ಯೆಯು ಹಿಂದೆ ಬಿದ್ದಿದೆ. ಆದರೆ ಔಂಧ ಸಂಸ್ಥಾನಿಕರು ಶ್ರೀ ಕಾಬಾಲಿಯವರು ಸ್ಥಾಪಿಸಿದ ಸಂಸ್ಥೆಗೆ ತಮ್ಮ ಸಂಸ್ಥಾನದಲ್ಲಿ ಒಂದು ವಿಸ್ತೀರ್ಣವಾದ ಪ್ರದೇಶವನ್ನು ಕೊಟ್ಟಿರುವರು. ಈ ಸಂಸ್ಥೆಯವರು ಈಗ ೩ ವಾಯುಯಾನಗಳನ್ನು— ಒಂದು ಅಮೇರಿಕೆಯಿಂದ, ೨ ಜರ್ಮನಿಯಿಂದ ತರಿಸಿದ್ದಾರೆ. ಕಳೆದ ವರುಷ ಅವರು ೧೧ ಜನರನ್ನು ಈ ವಿದ್ಯೆಯಲ್ಲಿ ನಿಷ್ಣಾತರನ್ನಾಗಿ ಮಾಡಿರುವರು.

ಒಟ್ಟಿನ ಮೇಲೆ ವಾಯುಯಾನದ ಸಂಚಾಲನವು ಒಳ್ಳೇ ಉತ್ಸಾಹ ಜನಕ ಆಟವಾಗಿದೆ. ಮಳೆಗಾಲವೊಂದನ್ನು ಬಿಟ್ಟು ಉಳಿದೆಲ್ಲ ಕಾಲಗಳಲ್ಲಿ ಇದರಲ್ಲಿ ಸಂಚರಿಸಬಹುದು. ಇದು ಮುಂದೆ ಪ್ರಸಿದ್ಧ ವೈಮಾನಿಕರಾಗಲು ಪ್ರಾರಂಭದ ಪಾಠವಾಗಿದೆ ಇವುಗಳ ಕಟ್ಟುವಿಕೆಯು ಸುಲಭವಾಗಿರುವುದರಿಂದಲೂ ಬೆಲೆಯಲ್ಲಿ ಇವು ಅಗ್ಗವಾಗಿರುವದರಿಂದಲೂ ಎಲ್ಲ ಜನರೂ ಇದರ ಆನಂದವನ್ನು ಪಡೆಯಬಹುದ ಆದುದರಿಂದ ನಮ್ಮ ದೇಶದಲ್ಲಿ ಮುಖ್ಯವಾಗಿ ಚಿಕ್ಕ ತರುಣರಲ್ಲಿ ಈ ವಾಯುಯಾನಗಳು ಪ್ರಸಾರವಾಗಬೇಕಾದುದು ಆವಶ್ಯಕವಾಗಿಲ್ಲವೇ?

ಕ್ಷಾಮ ಪೀಡೆ

ಕೊಳ್ಳೇಗಾಲ ತಾಲೂಕಿನಲ್ಲಿ ಈಗ ೩-೪ ತಿಂಗಳುಗಳಿಂದಲೂ ಮಳೆಯೇ ಆಗದಿದ್ದುದರಿಂದ ಕುಂಬಾ ಕ್ಷಾಮಪೀಡೆಯುಂಟಾಗಿದೆ. ಹಸ್ತದಮಳೆ ಕೊಂಚ ಆದುದರಿಂದ ಸ್ವಲ್ಪ ಸಮಾಧಾನವಾಗಿದ್ದಿತು. ಅಂದಿನಿಂದ ಮಳೆಯೇ ಇಲ್ಲ. ಬೆಳೆಗಳೆಲ್ಲ ನಾಶವಾಗಿ ಹೋದುದರಿಂದ ಕ್ಷಾಮಪೀಡೆಯು ಬಂದಿರುತ್ತೆ.

ಪ್ರಮಥಾಚಾರ್ಯನ ಪ್ರಚಾರ ಪದ್ಧತಿ.

ಲೇಖಕರು:— ಶ್ರೀ. ಮ. ನಿ. ಪ್ರ. ಶ್ರೀ ಸಂಗನಬಸವಸ್ವಾಮಿಗಳು ಬಂಥನಾಳ

ವೀರಶೈವ ಮತದ ನಿರ್ಣಾಯ ಕರ್ತೃವಾದ ಆ ಭಗವಾನ್ ಬಸವಾಚಾರ್ಯನು ಬೋಧಿಸಿದ ತತ್ವಗಳು ಹಾಗೆಯೇ ಆಚರಿಸಿ ತೋರಿಸಿದ ಆಚರಣೆಗಳು ಪೂರ್ವದ ಸರ್ವ ಮತಾಚಾರ್ಯರಿಗಿಂತಲೂ ಅತ್ಯಂತ ಮಾನ್ಯವಾದವುಗಳಾಗಿ ಸ್ವಮತೀಯ ಹಾಗೂ ಪರಮತೀಯ, ಪಾಮರರಿಂದ ಪರಮ ಪಂಡಿತರ ವರೆಗೆ, ಸರ್ವರಿಗೂ ಆದರಣೀಯವಾಗಿವೆಯಷ್ಟೆ.

ಇದಕ್ಕೆ ಕಾರಣವೆಂದರೆ, ಹಿಂದಿನ ಮತಾಚಾರ್ಯರು ಶಾಸ್ತ್ರಗಳ ವಕೀಲಿಯನ್ನು ಮಾಡಿದರೆ, ಈ ಪ್ರಮಥಾಗ್ರಣಿಯು ಅರಿವಿನ ವಕೀಲವನ್ನು ಆರುಹಿಕೊಟ್ಟನು. ಅವರ ದೃಷ್ಟಿಯು ಶಾಸ್ತ್ರಗಳ ವಾಕ್ಯಸಮನ್ವಯದ ಕಡೆಗೆ ಇದ್ದರೆ ಈ ನ್ಯಾಯವಾದಿಯ ದೃಷ್ಟಿಯು ಸಮಾಜದ ಸಮಾನತೆಯ ಕಡೆಗೆ ಇದ್ದಿತು. ದೇವವಾಣಿಯೊಂದರಲ್ಲೇ ಸರ್ವ ಜ್ಞಾನ ಭಾಂಡಾರವೆಂದು ತೋರುವದು ಅವರ ಹಂಬಲ. ಜನನುಡಿಯಲ್ಲಿಯೇ ಸನಾತನಧರ್ಮವು ಬಿಂಬಿತವಾಗಬಲ್ಲುದೆಂದು ತೋರಿಸಿತು ಈತನ ಅಮೃತವಾಣಿ. ಹಿಂದಿನ ಆಚಾರ್ಯರು ಮೋಕ್ಷಸಿದ್ಧಿಗೆ ವ್ರತ, ಉಪವಾಸ, ಜಪ, ತಪ, ಯೋಗ, ತ್ಯಾಗಗಳನ್ನು ಹೇಳಿದರೆ ಈ ಪ್ರಮಥಾಧಿಪತಿಯು ಭಾವದಲ್ಲಿ ದೇವನೆಂದು, ಭಕ್ತಿಮಾರ್ಗವೇ ಪರಮಾತ್ಮ ಪ್ರಾಪ್ತಿಗೆ ಸುಲಭೋಪಾಯವೆಂದು ಅನುಭವದಿಂದ ಹೇಳಿದನು. ಹಿಂದಿನವರಂತೆ ಧರ್ಮವನ್ನು ಅಗ್ಗ ತುಟ್ಟಿಮಾಡಿ ಮಾರುವದು ತಕ್ಕುದಲ್ಲವೆಂದು ಆ ಮಹಾನುಭಾವನು ಬೋಧಿಸಿದನು. ನಾನು ವೇದತೀರ್ಥ-ನಾನು ಸ್ಮೃತಿತೀರ್ಥ-ನಾನು ಕಾವ್ಯತೀರ್ಥ ಎಂಬ ಅನರ್ಥ ಅಹಂಕಾರದಿಂದ ವ್ಯರ್ಥ ಬ್ರಹ್ಮರಾಕ್ಷಸರಾಗುವ ಮದೋನ್ಮತ್ತರ ಪಾಂಡಿತ್ಯಕ್ಕಿಂತ ಪವಿತ್ರ ಭಾವನೆಯಿಂದುಂಟಾಗುವ ಈಶ್ವರ ಪ್ರಾಪ್ತಿಯ ಜ್ಞಾನವು ಅತಿಶಯ ಶ್ರೇಷ್ಠತರವಾದುದೆಂಬ ಜಯಭೇರಿಯ ನಿನಾದವು ನಮ್ಮ ಪ್ರಮಥಾಚಾರ್ಯನಿಂದಲೇ ಮೊಳಗಿಸಲ್ಪಟ್ಟಿತು.

ಜನ್ಮದಿಂದ ವರ್ಣಾಶ್ರಮ ಧರ್ಮಗಳುಂಟೆಂದು ಸಾಧಿಸುವ ಸ್ವಾರ್ಥಿಗಳ ಸುಡಿಗಡಣವನ್ನು ಹಾರಿಸಿಬಿಡುವದಕ್ಕಾಗಿಯೇ ಪ್ರಮಥರ ಸ್ವಾನುಭವ ಪೂರಿತ ವಾಚನ ವಾಙ್ಮಯವೆಂಬ ಝಂಝಾಮಾರುತವು ಉದ್ಭವಿಸಿತು.

ಬಸವನ ಪೂರ್ವದಲ್ಲಿ ಹಿಂದುಸಮಾಜವು ಅತಿಹೀನವಾಗಿತ್ತು. ಅಭಕ್ಷ್ಯಭಕ್ಷಣ, ಅಪೇಯ ಪಾನ, ಅನ್ಯಾಯ ಅತ್ಯಾಚಾರವು ದಿನಚರ್ಯಗಳಾಗಿದ್ದವು. ಇಂಥ ಹಿಂದುಸಮಾಜದಲ್ಲಿ ಸತ್ಯಅಹಿಂಸಾದಿಗಳು ನೆಲಸಿ ಪತಿತವಾದ ಸಮಾಜವನ್ನು ಪುನೀತವಾಗಿ ಮಾಡಿಸಿ ಮಹೋಪಕಾರವನ್ನುಂಟುಮಾಡಿದನು ಆ ಮಹಿಮನು. ಅವನ ದಿವ್ಯಪ್ರಚಾರ ಕಾರ್ಯದಲ್ಲಿ ಹಿಂದುಸಮಾಜವು ಪುಟಕೊಟ್ಟ ಸುವರ್ಣದಂತೆ ವಿಶುದ್ಧತೆಯನ್ನು ಪಡೆಯಿತು. ಅವನ ಪ್ರಚಾರ ಕಾರ್ಯದ ಕೆಲ ವಿಧಾನಗಳನ್ನು ಮಾತ್ರ ಕೆಳಗೆ ಕಾಣಿಸಿದೆ:—

೧ ವೇದಾಗಮೋಪನಿಷತ್ತುಗಳಲ್ಲಿರುವ ತತ್ವಜ್ಞಾನದ ಶ್ರೇಷ್ಠವಾದ ಭಂಡಾರವನ್ನು ಸಾಮಾನ್ಯ ಜನರಿಗೂ ಕೂಡ ದೊರೆಯುವಂತೆ ಬಳಕೆಯ ಭಾಷೆಯಲ್ಲಿ ತಂದು ಭಕ್ತಿ ಭುಕ್ತಿ ಮುಕ್ತಿಗಳ ಭಿಕ್ಷತೆಯನ್ನೊದಗಿಸಿಕೊಟ್ಟು ಸ್ವಸಮಾಜದ ಸ್ವಭಾಷೆಯ ಸ್ವಸ್ಮೃತಿಯ ಸಂರಕ್ಷಣೆಯನ್ನುಂಟು ಮಾಡಿದನು.

೨ ವ್ರತ-ಉಪವಾಸಾದಿಗಳ (ಆರೋಗ್ಯದ ಸಲುವಾಗಿ ಮಾಡುವುಗಳ ಹೊರತಾಗಿ) ಪ್ರಾಬಲ್ಯವನ್ನು ಕಡಿಮೆ ಮಾಡಿ ಭಿಕ್ಷುಕ ಪುಂಡಾಟವನ್ನು ಹೊಡೆದೋಡಿಸಿ ಗುರು ಜಂಗಮರು ಸಹ ಕಾಯಕದಿಂದಲೇ ಜೀವಿಸಬೇಕೆಂಬುದನ್ನು 'ಗುರುವಾದರೂ ಕಾಯಕದಿಂದಲೇ ಮುಕ್ತಿ' ಎಂದು ಹೇಳಿ ಆತ್ಮಾವಲಂಬನೆಯ ತತ್ವವನ್ನು ಜನಾಂಗಕ್ಕೆ ಕಲಿಸಿಕೊಟ್ಟನು.

೩ ಸಮಾಜದೊಳಗಿನ ಜಾತಿಯಲ್ಲಿರುವ ಉಚ್ಚ-ನೀಚ ಎಂಬ ಭಾವನೆಯನ್ನು ತೆಗೆದು ಹಾಕಿ ಪರಮಾತ್ಮನ ಸ್ಥಾನದಲ್ಲಿ ಸರ್ವ ಸಮಾನರಾಗಿರುವರೆಂಬುವುದನ್ನು 'ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರನೊಂದೇ ಎಂಬೆ. ಹಾರುವ ಮೊದಲು ಶ್ವಪಚ ಕಡೆಯಾಗಿ ಭವಿಯಾದವರನೊಂದೇ ಎಂಬೆ. ಹೀಗೆಂದು ನಂಬುವದು ಎನ್ನ ಮನವು' ಎಂದು ಬಾಹುಗಳನ್ನೆತ್ತಿ ಸಾರಿದನು.

೪ ದೇವರ ಹೆಸರಿನಲ್ಲುಂಟಾದ ಅನೇಕ ಮೂರ್ತಿಗಳ ಕಲಕಲಾಟವನ್ನು ಖಂಡನೆಮಾಡಿ ಸತ್ಯ ಉದಾತ್ತ ಪಂಮಕಾರಣೀಭೂತವಾದ ಪರಮಾತ್ಮನ ಸ್ವರೂಪದ ಯಥಾರ್ಥ ಕಲ್ಪನೆಯನ್ನು ಅಂದು 'ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ| ಸಕಲ ವಿಸ್ತಾರದರೂಹ ನೀನೇ ದೇವ| ವಿಶ್ವತೋ ಮುಖ ನೀನೇ ದೇವ| ವಿಶ್ವತೋ ಚಕ್ಷು ನೀನೇ ದೇವ| ವಿಶ್ವತೋ ಬಾಹು ನೀನೇ ದೇವ| ವಿಶ್ವತೋ ಪಾದ ನೀನೇ ದೇವ|| ಎಂಬ ಸಂದೇಶವನ್ನು ಸಮಾಜಕ್ಕೆ ಕಲಿಸಿಕೊಟ್ಟನು.

೫ ಈಶ್ವರಪ್ರಾಪ್ತಿಯ ಸಲುವಾಗಿ ಕಠಿಣತರವಾದ ಹಠ ಯೋಗಾದಿಗಳೂ ಕೃಚ್ಛ್ರಚಾಂದ್ರಾಯಣಾದಿ ವ್ರತಗಳೂ ಶಿವಕಾಯಕರಹಿತವಾದ ಸನ್ಯಾಸಾದಿ ಆಶ್ರಮಗಳೂ ಗರ್ಹಣೀಯವೆಂದು ನಿಶ್ಚಯಿಸಿ ಭಕ್ತಿಯ ಸೋಪಾನದಿಂದ ಪ್ರಪಂಚದಲ್ಲಿಯೇ ಪಾರಮಾರ್ಥವು ಸಾಧ್ಯವೆಂಬುದನ್ನು ತೋರಿಸಿದನು. 'ನಾದಪ್ರಿಯನೆಂಬರು ಶಿವನು ನಾದಪ್ರಿಯನಲ್ಲವಯ್ಯ| ವೇದಪ್ರಿಯನೆಂಬರು ಶಿವನು ವೇದಪ್ರಿಯನಲ್ಲವಯ್ಯ| ನಾದವ ನುಡಿಸಿದ ರಾವಣಂಗೆ ಅರೆ ಆಯುಷ್ಯವಾಯಿತ್ತು| ವೇದವನೋದಿದ ಬ್ರಹ್ಮಂಗೆ ಶಿರಹೋಯಿತ್ತು| ವೇದಪ್ರಿಯನೂ ಅಲ್ಲ ನಾದಪ್ರಿಯನೂ ಅಲ್ಲ| ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವ' ಎಂದು ನುಡಿದು ನಡೆದು ಪಡೆದು ಜಗತ್ತಿನ ಅಣ್ಣನಂತೆ ಅರುಹಿಕೊಟ್ಟನು.

೬ ಕರ್ಮಠರ ಕರ್ಮೋಪಾಸನೆಯನ್ನು ಅಂದರೆ ಕರ್ಮ ಮಾಡಿದರೆ ಸದ್ಗತಿ ದೊರೆಯುವದೆಂಬುವನ್ನು 'ಹಾಗದ ಕೆರಹ ಹೊರಗೆ ಕಳೆದು ದೇಗುಲಕ್ಕೆ ಹೋಗಿ ನಮಸ್ಕಾರ ಮಾಡುವವನಂತೆ ತನ್ನ ಕೆರಹಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲ' ಎಂದು ಕೇವಲ ಕರ್ಮಠತನವನ್ನು ತಿರಸ್ಕರಿಸಿಯೂ ಮತ್ತು ಅದ್ವೈತಿಗಳ ಜ್ಞಾನೋಪಾಸನೆಯನ್ನು ಅಂದರೆ ಕೇವಲ ಜ್ಞಾನದಿಂದಲೇ ಮೋಕ್ಷವೆಂಬುದನ್ನು 'ಕೆಂಚ ಕರಿಕನ ನೆನೆದಡೆ ಕರಿಕನಾಗಬಲ್ಲನೆ ಕರಿಕ ಕೆಂಚನ ನೆನೆದಡೆ ಕೆಂಚನಾಗಬಲ್ಲನೆ........... ಮುನ್ನಿನ ಪುರಾತನರ ನೆನೆದು ಧನ್ಯನಾದೆನೆಂಬ ಮಾತಿನ ರಂಜಕರನೇನೆಂಬೆ ಕೂಡಲ ಸಂಗಮದೇವ' ಎಂದು ಕೇವಲ ಜ್ಞಾನವು ಕೂಡ ಅಪೂರ್ಣವಾದುದೆಂದು ತಿರಸ್ಕರಿಸಿ ಕರ್ಮಜ್ಞಾನಗಳ ಸಮುಚ್ಚಯದಿಂದಲೇ ಮೋಕ್ಷವು ಸಿದ್ಧಿಸುವದೆಂಬುದನ್ನು ಷಟ್‌ಸ್ಥಲಗಳ ಸ್ಥಾಪನೆಯ ಮೂಲಕ ಸಿದ್ಧ ಮಾಡಿದನು.

ರಾಯಚೂರಿನಲ್ಲಿ ನಡೆದ

ಇಪ್ಪತ್ತನೆಯ ಕನ್ನಡ ಸಾಹಿತ್ಯ ಸಮ್ಮೇಲನದ

ಸ್ವಾಗತಾಧ್ಯಕ್ಷರ ಭಾಷಣದ ಮುಖ್ಯಾಂಶ—

ಮಾನ್ಯರಾದ ಅಧ್ಯಕ್ಷ ಮಹಾಶಯರೆ, ಸಭಾಸದರಾದ ಮಹನೀಯರೆ, ಮತ್ತು ಭಗಿನಿಯರೆ,

ಈ ನಾಡು ಹಿಂದಿನ ಕಾಲದಲ್ಲಿ ಕುಂತಳದ ಒಂದು ಭಾಗವಾಗಿತ್ತು. ರಾಜಕೀಯ ಪರಿವಿಭಾಗವನ್ನನುಸರಿಸಿ ಇದನ್ನು ಈಗ ನಿಜಾಮ ಕರ್ನಾಟಕವೆನ್ನಬಹುದು. ಕೃಷ್ಣಾ ಮತ್ತು ತುಂಗಾ ಇವೆರಡು ನದಿಗಳ ನಡುವಿನ ಪ್ರದೇಶಕ್ಕೆ ಪೂರ್ವಕಾಲದಲ್ಲಿ "ಎಡತೊರೆ," ಅನಂತರ "ದೋಆಬಾ" ಎಂದು ಹೆಸರು. ಅದೇ ಈಗ ರಾಯಚೂರ ಜಿಲ್ಲೆಯಾಗಿದೆ ಭೀಮರಥೀ ಮತ್ತು ತುಂಗಾ ನದಿಗಳು ಇದೇ ಜಿಲ್ಲೆಯಲ್ಲಿ ಕೃಷ್ಣೆಗೆ ಕೂಡಿದ ಸ್ಥಳಗಳು ಭಾವಿಕರಿಗೆ ಪವಿತ್ರಸ್ಥಳಗಳಾಗಿವೆ.

ಅಶೋಕನ ಶಾಸನವು ಇದೇ ಜಿಲ್ಲೆಯ ಮಸ್ಕಿಯೆಂಬ ಗ್ರಾಮದಲ್ಲಿ ದೊರೆತಿದ್ದುದರಿಂದ ಈ ನಾಡು ಅಶೋಕನ ಕಾಲಕ್ಕೆ ಪ್ರಸಿದ್ಧಿ ಪಡೆದಿತ್ತೆಂದು ಹೇಳಬಹುದು. ಆಂಧ್ರಭೃತ್ಯರು, ವಾಕಾಟಕರು, ಚಾಳುಕ್ಯರು, ರಾಷ್ಟ್ರಕೂಟರು ಇವರೇ ಮುಂತಾದ ಕನ್ನಡ ಅರಸುಮನೆತನಗಳ ಆಡಳಿತಕ್ಕೆ ಈ ನಾಡು ಒಳಪಟ್ಟಿತ್ತು. ಕಲ್ಯಾಣದ ಚಾಳುಕ್ಯರ ಅನಂತರ ಮುದುಗಲ್ ದುರ್ಗವು ದೇವಗಿರಿಯ ಯಾದವರ ಕೈಸೇರಿತು ರಾಯಚೂರ ದುರ್ಗವು ಓರಗಲ್ಲಿನ ಕಾಕತೀಯರ ಅಧೀನವಾಯಿತು. ದೇವಗಿರಿಯ ಯಾದವರೂ ಓರಗಲ್ಲಿನ ಕಾಕತೀಯರೂ ಹೊಯ್ಸಳ ಬಲ್ಲಾಳರೂ ತಮ್ಮ ತಮ್ಮ ರಾಜ್ಯಗಳ ಸೀಮೆಯ ಸಲುವಾಗಿ ಹೋರಾಡಿದ ಸ್ಥಳವೇ ಈ ನಾಡು. "ನಾರಾಯಣ ಚಕ್ರವರ್ತಿಯ ಪಾದಪದ್ಮೋಪಜೀವಿಯಾದ ಹಂದೆಯ ಮಗನಾದ ಬಿಜ್ಜ ಎಂಬ ಚೇದಿ ಅರಸನು" ಇಲ್ಲಿಯೇ ಆಳಿರುವನೆಂದು ಹೊಸದಾಗಿ ಉಪಲಬ್ಧವಾಗಿರುವ ಶ್ರೀರಾಮಲಿಂಗೇಶ್ವರ ದೇವಾಲಯದ ಅಂಗಳದಲ್ಲಿರುವ ಶಾಸನದಿಂದ ತಿಳಿದುಬರುತ್ತದೆ.

ಅಲ್ಲದೆ ಗೋರೆ ಗಂಗಯ್ಯ ರೆಡ್ಡಿ ಎಂಬ ದಂಡನಾಯಕನಿಂದ ೧೨೯೪ ನೆಯ ಇಸವಿಯಲ್ಲಿ ರಾಯಚೂರ ದುರ್ಗವು ಕಟ್ಟಲ್ಪಟ್ಟಿದೆ ಎಂದು ಕಿಲ್ಲೆಯಲ್ಲಿಯ ಒಂದು ದೊಡ್ಡ ಶಾಸನದಿಂದ ಗೊತ್ತಾಗುತ್ತದೆ. ಕಲ್ಬುರ್ಗಿಯ ಸುಲ್ತಾನ ಮತ್ತು ವಿಜಯನಗರ ರಾಯರ ರಣಾಂಗಣವೇ ಈ ರಾಯಚೂರ ಜಿಲ್ಲೆಯೆಂಬುದು ಎಲ್ಲರಿಗೂ ತಿಳಿದ ವಿಷಯ. ಸುಲ್ತಾನ ಮತ್ತು ರಾಯರ ಕಾಲದ ಅನಂತರ, ವಿಜಾಪುರದ ಆದಿಲ್ ಶಾಹಿ ರಾಜ್ಯಕ್ಕೊಳಪಟ್ಟು ಔರಂಗಜೇಬನಿಂದ ಮೊಗಲರ ವಶವಾಗಿ ಕಡೆಗೆ ಈಗಿನ ನಿಜಾಮರ ಆಡಳಿತದಲ್ಲಿದೆ. ಯಾವಾಗಲೂ ಈ ನಾಡು ವೀರರ ರಣಾಂಗಣವು ಕಾಳಗವಿಲ್ಲದಿದ್ದರೆ ಬರಗಾಲ ತಪ್ಪಿದ್ದಲ್ಲ. ಅಂತೂ ಇಲ್ಲಿಯ ಜನರು ಯಾವಾಗಲೂ ಹೋರಾಡಲೇಬೇಕಾಗಿದೆ ಎಂಬುದು ಇತಿಹಾಸದಿಂದ ತಿಳಿದುಬರುತ್ತದೆ.

ಇಂತಹ ಒಂದಿಲ್ಲೊಂದು ಹೋರಾಟದಲ್ಲಿ ತೊಡಗಿದ ಇಲ್ಲಿಯ ಕನ್ನಡಿಗರು ಸಾಂಸ್ಕೃತಿಕ ಚಳವಳಿಯಲ್ಲಿ ಭಾಗವಹಿಸಿಲ್ಲವೆಂದು ತಾವು ಸಹಜವಾಗಿ ಊಹಿಸಬಹುದು. ಅಸಂಖ್ಯಾತವಾಗಿ ದೊರೆಯುತ್ತಿರುವ ಇಲ್ಲಿಯ ಶಾಸನಗಳೂ, ಮನೆ ಮನೆಗಳಲ್ಲಿ ಗೆದಲು ತಿನ್ನುತ್ತ ಕಣ್ಣಿಗೆ ಬೀಳುವ ಹಳೆಯ ಗ್ರಂಥಗಳೂ, ಓಲೆಯ ಪುಸ್ತಕಗಳೂ ಪ್ರಕಾಶಕ್ಕೆ ಬಂದಿಲ್ಲವೆಂದು ಹೇಳಿಕೊಳ್ಳುವ ದುರದೃಷ್ಟವು ನಮ್ಮ ಪಾಲಿಗೆ ಬಂದಿದೆಯೆಂದು ವಿಷಾದಪಡುತ್ತೇವೆ.

ಕನ್ನಡ ಭಾಷಾ ಪ್ರವಾಹವನ್ನು ತಡೆದು ನಿಲ್ಲಿಸಿ ಬಂಧನಕ್ಕೊಳಪಡಿಸಿ ಮಹಾಸಾಗರದಂತೆ ಶೋಭಾಯಮಾನವಾದ ಗಂಭೀರವಾದ ಚಂಪೂ ಪ್ರಬಂಧಕ್ಕೆ ರೂಪುಗೊಟ್ಟದ್ದೂ, ಮತ್ತೆ ತಡೆಗಡಿದು ನಿಯಮ ನಿರ್ಬಂಧವಿಲ್ಲದೆ ಬಿಡಿ ಬಿಡಿಯಾಗಿ ಚಲ್ಲಾಪಿಲ್ಲಿಯಾಗಿ ಹರಿಬಿಟ್ಟು ಜನಸಾಮಾನ್ಯರಲ್ಲಿ ಸೂರೆಯಾದ ವಚನ ಪದ್ಧತಿಯುಂಟಾದದ್ದೂ, ಪುನಃ ಆ ಹರಿಗಳನ್ನು ಒಟ್ಟುಗೂಡಿಸಿ ಮೇಳೈಸಿ ಒಂದು ಮಾಡಿ ಯೋಗ್ಯವಾದ ಮಾರ್ಗದಲ್ಲಿ ಸರಳವಾದ ಮಂಜುಳ ಧ್ವನಿಯಿಂದ ಕಿವಿಗಿಂಪಾಗಿ ಹರಿಯುವಂತೆ ಷಟ್ಪದೀ ಶೈಲಿಯುಂಟಾದದ್ದೂ ಕಡೆಗೆ ಭಾಷೆಯನ್ನು ಸಂಗೀತಕ್ಕೊಳಪಡಿಸಿ ನುಡಿಯ ಸೊಬಗನ್ನು ಮೇಲು ಕೀಳೆನ್ನದೆ ಪಂಡಿತಸಭೆ ಕೇರಿ ಬೀದಿಗಳೆನ್ನದೆ ಮನೆ ಮನೆಯಲ್ಲಿಯೂ ಎಲ್ಲರಿಗೂ ಕೇಳಬರುವಂತೆ ಆನಂದದಿಂದ ನಲಿನಲಿದಾಡಿಸುವ ಸಂಗೀತದ ಶೈಲಿಯು ಬೆಳೆದದ್ದೂ—ಇದೇ ನಿಜಾಮ ಕರ್ನಾಟಕದಲ್ಲಿಯಲ್ಲವೆ?

ಆದರೆ ಇದೆಲ್ಲ ಗತಗೋಷ್ಠಿ. ಈಗಿನ ಸ್ಥಿತಿಯೆಂದರೆ ನಿಜಾಮ ಕರ್ನಾಟಕದಲ್ಲಿ ಕನ್ನಡಿಗರ ಜನಸಂಖ್ಯೆ ಒಟ್ಟು ೧೬ ಲಕ್ಷ ೨೦ ಸಾ. ೯೪ (೧೬,೨೦,೦೯೪):—

ಕಲ್ಬುರ್ಗಿ ಜಿಲ್ಲೆ	...	....	೬,೦೪,೪೦೯
ರಾಯಚೂರ ಜಿಲ್ಲೆ	....	....	೫,೯೮,೫೧೦
ಬೀದರ ಜಿಲ್ಲೆ	....	....	೨,೬೦,೭೮೭
ಇತರ ಸ್ಥಳಗಳಲ್ಲಿ	....	....	೧,೫೬,೩೮೮

ಬೀದರ ಜಿಲ್ಲೆಯ ಕನ್ನಡಿಗರಿಗೆ ಕನ್ನಡ ಅಕ್ಷರಾಭ್ಯಾಸವು ಇಲ್ಲ. ಕಲ್ಬುರ್ಗಿ ಜಿಲ್ಲೆಯ ಕನ್ನಡಿಗರು ಸ್ವಲ್ಪ ಹೆಚ್ಚು ಕಡಿಮೆ ಇದೇ ಸ್ಥಿತಿಯಲ್ಲಿರುವರು. ರಾಯಚೂರ ಜಿಲ್ಲೆಯಲ್ಲಿ ಈ ಸ್ಥಿತಿ ಇಲ್ಲವೆಂದು ಹೇಳಬಹುದು, ರಾಯಚೂರ ಜಿಲ್ಲೆಯು ತೆಲಗು ಕನ್ನಡಗಳ ಗಡಿನಾಡು. ಬಳ್ಳಾರಿ ಅನಂತಪುರ ಜಿಲ್ಲೆಗಳಲ್ಲಿದ್ದಂತೆ ಇಲ್ಲಿ ತೆಲುಗರ ಉಪಟಳವಿಲ್ಲ. ಕಲ್ಬುರ್ಗಿ ಬೆಳಗಾಂವಿ ಮುಂತಾದ ಸ್ಥಳಗಳಲ್ಲಿದ್ದಂತೆ ಮರಾಠರ ಆಕ್ರಮಣವಿಲ್ಲ. ಆದಾಗ್ಯೂ ನಮ್ಮಲ್ಲಿಯ ರಾಜಕೀಯ ಭಾಷೆ ಉರ್ದು. ಅದಕ್ಕೆ ಪ್ರಾಶಸ್ತ್ಯ ಹೆಚ್ಚು. ಸರ್ಕಾರದ ವಿದ್ಯಾಭ್ಯಾಸ ಕ್ರಮದಲ್ಲಿ ಪ್ರಾಥಮಿಕ ಶಿಕ್ಷಣವು ಮಾತೃಭಾಷೆಯಾದ ಕನ್ನಡದಲ್ಲಿಯೇ ನಡೆಯಬೇಕೆಂಬ ಶಿಕ್ಷಣ ತಜ್ಞರ ಸೂತ್ರಾನುಸಾರವಾಗಿ

೭ ಮೊದಲಿದ್ದ ಸ್ತ್ರೀ ಪಾರತಂತ್ರ್ಯದ ಸಂಕೋಲೆಯನ್ನು ಕಡಿದೊಗೆದು 'ಉಭಯ ದೃಷ್ಟಿಯಿಂದ ದೃಷ್ಟವ ಕಾಂಬಂತೆ ದಂಪತಿ ಏಕಭಾವವಾಗಿ ನಿಂದಲ್ಲಿ ಗುಹೇಶ್ವರಲಿಂಗಕ್ಕೆ ಅರ್ಪಿತ ವಾಯಿತ್ತು ಸಂಗನಬಸವಣ್ಣಾ' ಎಂದು ಆದ್ಯ ಜಗದ್ಗುರು ಪ್ರಭುವು ಉಪದೇಶಿಸಿದಂತೆ ಬಸವಾಚಾರ್ಯನು ಸ್ತ್ರೀ ಪುರುಷರಿಬ್ಬರು ಪ್ರಪಂಚದಲ್ಲಾಗಲೀ ಪಾರಮಾರ್ಥದಲ್ಲಾಗಲೀ ಸಮಾನಾಧಿಕಾರವುಳ್ಳರಿರುವರೆಂಬುದನ್ನು ಸಿದ್ಧಮಾಡುವದರ ಸಲುವಾಗಿ ಸ್ತ್ರೀಯರಿಗೂ ಸಹ ಪುರುಷರಂತೆ ಶಿವದೀಕ್ಷಾ ಸಂಸ್ಕಾರವಾಗುವಂತೆ ವ್ಯವಸ್ಥೆ ಮಾಡಿದನು.

ವಾಚಕ ಮಹಾಶಯರೆ, ಈ ವರೆಗೂ ವಿವೇಚನೆ ಮಾಡಲ್ಪಟ್ಟ ಭಗವಾನ್ ಬಸವಾಚಾರ್ಯನ ಧರ್ಮ ಸುಧಾರಣೆಯ ಪ್ರಚಾರ ಕಾರ್ಯವು ಈಹೊತ್ತು ನಮಗೆ ಸಾಮಾನ್ಯ ಸ್ವರೂಪದ್ದಾಗಿ ತೋರಬಹುದು. ಆದರೆ ಯಾವ ಕಾಲದಲ್ಲಿ ಚತುರ್ವರ್ಣಗಳೇ ಧರ್ಮವೆಂದು ರಾಜಾಧಿರಾಜರು ಕೂಡ ದೃಢವಾಗಿ ನಂಬಿ ಆಚರಿಸುತ್ತಿದ್ದರೋ ಇದಕ್ಕೆ ಚ್ಯುತಿ ಬಂದಲ್ಲಿ ರಾಜಶಾಸನದಿಂದಲೇ ಶಿಕ್ಷೆ ವಿಧಿಸಲ್ಪಡುತ್ತಿದ್ದಿತೋ, ಧರ್ಮವು ಕೆಲವು ಆರಿಸಿದ ಜನರಿಗಾಗಿಯೇ ಇರುವುದೆಂಬ ಭಾವನೆಯು ಲೋಕಾರೂಢವಾಗಿದ್ದಿತೋ ಅಂಥ ಅಂಧ ಶ್ರದ್ಧೆಯ ಕಾಲದಲ್ಲಿ ಮೇಲೆ ಉದಾಹರಿಸಿದ ಸುಧಾರಣೆಗಳನ್ನು ಆಚರಣೆಯಲ್ಲಿ ತರಬೇಕಾದರೆ ಆ ದಿವ್ಯ ಮೂರ್ತಿಗೆ ಎಷ್ಟು ವಿಘ್ನ ಎಷ್ಟು ಶ್ರಮ ಭ ನೆಯ ಸಂಭವಿಸಿರಬಹುದೆಂಬುದನ್ನು ಮನದಲ್ಲಿ ತಂದರೆ ಎದೆಯಾದರೂ ಕಂಪಿತವಾಗದಿರದು

ನೈಜಾಮು ಕನ್ನಡಿಗರ ಕರ್ತವ್ಯ.

ಕನ್ನಡನಾಡು ಹಲವು ಪ್ರಭುತ್ವಗಳಿಗೆ ಹಂಚಿಹೋದುದರಿಂದ ಇದರ ಉನ್ನತಿಗೆ ತೊಂದರೆಯಾಗಿದೆಯಷ್ಟೆ. ಶಕ್ಯವಿದ್ದ ಮಟ್ಟಿಗಾದರೂ ಈ ತೊಂದರೆಯನ್ನು ನಿವಾರಣೆಮಾಡುವುದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವು. ಕನ್ನಡನಾಡಿನ ರಾಜಕೀಯ ಏಕೀಕರಣದ ವಿಷಯ ಹಾಗಿರಲಿ. ಬ್ರಿಟಿಶ ಕರ್ನಾಟಕದ ಏಕೀಕರಣದ ವಿಷಯವನ್ನು ಸಂಸ್ಥಾನಗಳಲ್ಲಿರುವ ಕನ್ನಡಿಗರು ಲಕ್ಷಿಸದಿರಲಿ. ಆದರೆ ಕನ್ನಡ ಭಾಷೆಯ ಏಕೀಕರಣ, ಅಭಿವೃದ್ಧಿ, ಪ್ರಸಾರಗಳಿಗಾದರೂ ಪ್ರಭುತ್ವ, ಪ್ರಾಂತ, ಮುಂತಾದವುಗಳನ್ನು ಗಮನಿಸದೆ ಸಕಲರೂ ಏಕಮುಖವಾಗಿ ಪ್ರಯತ್ನಿಸುವುದು ವಿಹಿತವೂ ಶಕ್ಯವೂ ಆಗಿಲ್ಲವೆ?

ಈ ವಿಷಯದ ಕಡೆಗೆ ನೈಜಾಮು ಕನ್ನಡಿಗರು ಹೆಚ್ಚು ಲಕ್ಷಿಸಬೇಕಾದುದು ಅತ್ಯಾಗತ್ಯವಾಗಿದೆ ಏಕೆಂದರೆ ಮುಂಬೈ, ಮದ್ರಾಸ, ಮೈಸೂರು ಪ್ರಾಂತಗಳ ಕನ್ನಡಿಗರಿಗೆ ತಮ್ಮ ಕನ್ನಡ ನುಡಿಯ ಬೆಳವಣಿಗೆಗೆ ಇರತಕ್ಕಷ್ಟು ಅನುಕೂಲತೆಗಳು ಕೂಡಾ ನೈಜಾಮು ಕನ್ನಡಿಗರಿಗಿಲ್ಲ. ನೈಜಾಮುರಾಜ್ಯದಲ್ಲ ಸಾಧಾರಣ ೧೬ ಲಕ್ಷ ಕನ್ನಡಿಗರಿದ್ದಾರೆ. ಆದರೆ ಇವರು ಕನ್ನಡ ಮಾತನ್ನಾಡುವವರೆ ವಿನಾ ಕನ್ನಡಲಿಪಿಯನ್ನು ಅಕ್ಷರಜ್ಞಾನ ಸಂಖ್ಯಾ ಪ್ರಮಾಣದಂತಾದರೂ ಅರಿತವರಲ್ಲ

ನೈಜಾಮು ಕನ್ನಡಿಗರು ತೆಲಗು ಮತ್ತು ಮರಾಠಿಗಳ ಕತ್ತರಿಯಲ್ಲಿ ಸಿಕ್ಕಿಕೊಂಡಿದ್ದಾರೆ. ಮರಾಠಿ ಭಾಗದ ಕಡೆಗಿರುವ ಕನ್ನಡಿಗರ ಮಕ್ಕಳು ಮರಾಠಿ, ಉರ್ದು, ಇಂಗ್ಲೀಷಗಳನ್ನು ಕಲಿಯುತ್ತಿದ್ದಾರೆ. ತೆಲಗು ಭಾಗದಲ್ಲಿಯ ಕನ್ನಡ ಹುಡುಗರು ತೆಲುಗು, ಉರ್ದು, ಇಂಗ್ಲಿಷಗಳನ್ನು ಕಲಿಯುತ್ತಿದ್ದಾರೆ. ಕನ್ನಡ ಕಲಿಯುವ ಅಗತ್ಯವೇ ಅವರಿಗೆ ತೋರುವದಿಲ್ಲ. ಉರ್ದು ಭಾಷೆಯಂತೂ ಅವರ ರಾಜಭಾಷೆ. ಪ್ರೌಢಶಿಕ್ಷಣಕ್ಕೆ ಇಂಗ್ಲಿಷಭಾಷೆ ಬೇಕೇಬೇಕು. ವ್ಯಾಪಾರ ಮಾಡುವವರಿಗೆ ಮರಾಠಿ ಅಥವಾ ತೆಲಗು ಭಾಷೆಗಳೇ ಉಪಯುಕ್ತವಾದವುಗಳಾಗಿ ತೋರುತ್ತವೆ.

ಆದಕಾರಣ ನೈಜಾಮು ಕನ್ನಡಿಗರಲ್ಲಿ ಕನ್ನಡವನ್ನು ಕಲಿಯಬೇಕೆಂಬ ಕುತೂಹಲವೇ ಇಲ್ಲ. ಮಾತಾಡುವುದು ಕನ್ನಡ, ಮನೆಯ ಕಾಗದ ಪತ್ರಗಳಾದರೋ ಮರಾಠಿ ಅಥವಾ ತೆಲುಗು. ಸರಕಾರಿ ಕಾಗದ ಪತ್ರಗಳಂತೂ ಉರ್ದು. ಎಂದಮೇಲೆ ಕನ್ನಡದ ಗತಿಯೇನು? ಕನ್ನಡ ಕಲಿತು ನಾವೇನು ಪುರಾಣ ಹೇಳಬೇಕಾಗಿದೆಯೋ? ಎಂದು ಬಹು ಜನರು ಹೇಳುತ್ತಿದ್ದಾರೆ. ಈ ದಡ್ಡತನವು ಆ ಭಾಗದ ಬಹು ಜನರಲ್ಲಿರುವುದರಿಂದ ಕನ್ನಡ ಓದು ಬರಹಗಳ ಜ್ಞಾನವೇ ಕಡಿಮೆ.

ಕಲ್ಬುರ್ಗಿ ಮೊದಲಾದ ಅಚ್ಚ ಕನ್ನಡನಾಡಿನ ಸ್ಥಳಗಳಲ್ಲಿ ಕನ್ನಡ ಭಾಷೆಯ ಪ್ರಕಟನೆಗಳು ದೇವನಾಗರಿಯ ಲಿಪಿಯಲ್ಲಿ ಪ್ರಕಟವಾಗುತ್ತಲಿವೆ. ಈ ದುರವಸ್ಥೆಯು ಹೋಗಬೇಕಾದರೆ ಕನ್ನಡ ಕಲಿಯುವುದರ ಕಡೆಗೆ ಕನ್ನಡಿಗರು ಗಮನಿಸುವಂತೆ ಆ ಭಾಗದ ಕನ್ನಡಾಭಿಮಾನಿಗಳೇ ಪ್ರಯತ್ನಿಸಬೇಕಲ್ಲವೆ? ಇದು ಅವರ ಪವಿತ್ರ ಕರ್ತವ್ಯವಲ್ಲವೆ?

ಕರ್ನಾಟಕ ಸಾಹಿತ್ಯ ಸಮ್ಮೇಲನವು ಈವರೆಗೆ ಅಲ್ಲಿ ಎರಡು ಸಾರೆ ನೈಜಾಮು ರಾಜ್ಯದಲ್ಲಿ ತನ್ನ ಚಟುವಟಿಕೆಯನ್ನು ನಡೆಸಿದ್ದಾಗಿದೆ ಆ ಭಾಗದ ಕನ್ನಡಾಭಿಮಾನಿಗಳು ಜಿಲ್ಲಾ ಮತ್ತು ತಾಲೂಕು ಕರ್ನಾಟಕ ಸಂಘಗಳನ್ನು ಸ್ಥಾಪಿಸಿಕೊಂಡು ಆ ಮೂಲಕ ಕನ್ನಡ ಪ್ರಸಾರಣೆಗಾಗಿ ಪ್ರಯತ್ನಿಸಬೇಕು. ಮಕ್ಕಳಿಗೆ ಕನ್ನಡವನ್ನು ಕಲಿಯುವಂತೆ ಜನರ ಮನಸ್ಸನ್ನು ಒಲಿಸಬೇಕು. ಸರಕಾರದವರು ಸೌಲಭ್ಯವನ್ನುಂಟು ಮಾಡಿಕೊಡಲು ಸಿದ್ಧರಿದ್ದಾರೆ. ಆದರೆ ಜನಗಳೇ ಕನ್ನಡ ಕಲಿಯುವುದರಲ್ಲಿ ಅಭಿರುಚಿಯುಳ್ಳವರಾಗಿಲ್ಲ.

ತಾಯಿ ನುಡಿ ಬೇರೆ. ನಾಡನುಡಿ ಬೇರೆ. ನಾಡನುಡಿಗೆ ಆ ನಾಡಿನಲ್ಲಿ ನೆಲೆಸಿ ಜೀವಿಸುವವರೆಲ್ಲರೂ ತಲೆ ಬಾಗಿ ಅದರ ಸೇವೆಯನ್ನು ಮಾಡಲೇ ಬೇಕು. ಅವರ ತಾಯಿನುಡಿಯು ಮರಾಠಿಯಿರಲಿ, ಅಥವಾ ತೆಲಗು ಇರಲಿ, ಇಲ್ಲವೆ ಉರ್ದು ಇರಲಿ, ಕನ್ನಡಿಗರಲ್ಲಿ ಕೂಡಿ ಮನಬೆರಸಿ ನಡೆಯಬೇಕಾದರೆ ನಾಡನುಡಿಯಾದ ಕನ್ನಡವನ್ನು ಕಲಿಯುವುದು ಅವರ ಕರ್ತವ್ಯವೇ ಆಗಿದೆ.

ಹೀಗಿರುವಾಗ ಕನ್ನಡವು ಯಾರ ತಾಯಿನುಡಿ ಮತ್ತು ನಾಡನುಡಿಯಾಗಿದೆಯೋ ಅವರೇ ಕನ್ನಡವನ್ನು ಕಲಿಯದಿದ್ದುದು ಮಹಾಪಾಪವಲ್ಲವೆ? ಕನ್ನಡ ತಾಯಿಗೆ ದ್ರೋಹಮಾಡಿದಂತಲ್ಲವೆ? ಕನ್ನಡ ಸಾಹಿತ್ಯ ಸಂಸ್ಕೃತಿಗಳ ಕೊಲೆಗೆ ಸಹಾಯ ಮಾಡಿದಂತಲ್ಲವೆ? ಅರಿಯದೆ ಆಚರಿಸುತ್ತಿದ್ದ ಈ ಅಪರಾಧವನ್ನು ಅರಿತವರಾದ ನೈಜಾಮದ ಕನ್ನಡಿಗರು ಬಿಡಿಸುವುದು ಅವರ ಪ್ರಥಮ ಕರ್ತವ್ಯವಾಗಿಲ್ಲವೆ?

ಶಾಲೆಗಳಿದ್ದಿದ್ದರೆ, ಬೀದರ ಮತ್ತು ಕಲ್ಬುರ್ಗಿ ಜಿಲ್ಲೆಗಳಲ್ಲಿಯ ಕನ್ನಡಿಗರಿಗೆ ಕನ್ನಡ ಅಕ್ಷರಾಭ್ಯಾಸವು ಇಲ್ಲದಿರುವ ದುರವಸ್ಥೆಯು ನೀಗುತ್ತಿತ್ತು. ವಿದ್ಯಾಖಾತೆಯವರು ಆ ಶಿಕ್ಷಣ ತತ್ವದಂತೆ ಶಾಲೆಗಳು ನಡೆಯಬೇಕೆಂದು ಪ್ರಯತ್ನಿಸುತ್ತಿರುವುದು ಸ್ತುತ್ಯವಾಗಿದೆ. ಅವರ ಇದಿಚ್ಛೆಯು ಇನ್ನೂ ಪೂರ್ಣವಾಗಿಲ್ಲವೆಂದು ಹೇಳಬಹುದು. ಮಿಡ್ಲ ಸ್ಕೂಲುಗಳಲ್ಲಿ ಶಿಕ್ಷಣ ಭಾಷೆಯು ಉರ್ದು. ಕನ್ನಡವನ್ನು ಬರಿಯ ಪ್ರಥಮ ಭಾಷೆಯಾಗಿ ಕಲಿಯಬೇಕೆಂದು ಅಭ್ಯಾಸ ಕ್ರಮವಿದ್ದರೂ ಆ ರೀತಿ ಕಲಿಯಲು ಶಾಲೆಗಳಲ್ಲಿ ಅನುಕೂಲವಿಲ್ಲ. ಏಕೆಂದರೆ ಮುಂದೆ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಹಾಯಸ್ಕೂಲಿನ ಅಭ್ಯಾಸ ಕ್ರಮದಲ್ಲಿ ಕನ್ನಡವು ಐಚ್ಛಿಕ ವಿಷಯವಾಗಿ, ಉರ್ದು ಪ್ರಥಮ ಭಾಷೆಯಾಗಿ ಕಲಿಯಬೇಕಾಗುತ್ತದೆ. ಇದಲ್ಲದೆ ಪ್ರಾಥಮಿಕ ಅಭ್ಯಾಸ ಕ್ರಮಕ್ಕನುಸಾರವಾಗಿ ಭೂವಿವರಣೆ, ಚರಿತ್ರೆ ಮೊದಲಾದ ಯಾವುದೇ ತರದ ಕನ್ನಡ ಪಠ್ಯಪುಸ್ತಕಗಳು ಇನ್ನೂ ಹುಟ್ಟಿಲ್ಲ. ಹಿಂದಿನ ವರ್ಷದ ೧೩೩೮ ನೆಯ ಫಸಲಿಯಲ್ಲಿ ಕನ್ನಡ ಕಲಿಯುವ ವಿದ್ಯಾರ್ಥಿಗಳು (೩೫೬೫೧) ಇದ್ದು ೧೩೪೭ ನೆಯ ಫಸಲಿಯಲ್ಲಿ ೩೫,೫೧೨)—ಎಂದರೆ ೧೩೯ ವಿದ್ಯಾರ್ಥಿಗಳು ಕಡಿಮೆ—ಆದದ್ದು ಕಂಡುಬರುತ್ತದೆ. ಇದರಿಂದ ಮುಂದಿನ ಸ್ಥಿತಿಯನ್ನು ಊಹಿಸಬಹುದು.

ಮಹಾಶಯರೇ, ಒಂದು ಕಾಲದಲ್ಲಿ ನೃಪತುಂಗನು ಕನ್ನಡಂಗಳನ್ನು ಒಂದುಗೂಡಿಸಿದನು ಈಗ ಪುನಃ ಕನ್ನಡವು ಕನ್ನಡಂಗಳಾಗುತ್ತಿದೆ, ಈಗಿನ ನೃಪತುಂಗನು ಶ್ರೀಮನ್ ಮಹಿಸೂರ ಮಹಾರಾಜರವರು! ಶ್ರೀವಿಜಯನೇ ಕರ್ನಾಟಕ ಸಾಹಿತ್ಯ ಪರಿಷತ್ತು! ಇನ್ನು ಮುಂದೆ ಇವರೇ ಮಾರ್ಗದರ್ಶಕರು. ಇಂತಹ ಶ್ರೀ ಮತ್ತು ವಿಜಯ ಇವೆರಡರ ಸಂಗಮದಿಂದ ರಾಯಚೂರು ಇಂದು ಪಾವನವಾಯಿತು.

—ಬಂಗಾಲ ಸರಕಾರವು ಶ್ರೀ ಸುಭಾಸ ಬೋಸರಿಗೆ ತಿರುಗಿ ಪರದೇಶಕ್ಕೆ ಪ್ರಕೃತಿಯನ್ನು ಸುಧಾರಿಸಿ ಕೊಳ್ಳಲು ಹೋಗುವದಕ್ಕಾಗಿ ಅನುಮತಿಯನ್ನು ಕೊಟ್ಟಿರುವದು.

ಸಭೆಗಳ ಸುಗ್ಗಿ.

ಡಿಸೆಂಬರ ತಿಂಗಳ ಕೊನೆಯವಾರ ಸಭೆ ಸಮ್ಮೇಲನಗಳ ಸುಗ್ಗಿ. ಎಲ್ಲ ಕಡೆಗೂ ಎಲ್ಲ ವಿಷಯಗಳ ಸಂಬಂಧವಾದ ಸಭೆ ಸಮ್ಮೇಲನಗಳು ಜರುಗುವುದು ಈ ಕಾಲದಲ್ಲಿಯೇ. ಹೆಚ್ಚು ಕೆಲವು ಸಭೆಗಳ ಮಹತ್ವದ ಠರಾವಿನ ಭಾಷಣಗಳನ್ನು ಇಲ್ಲಿ ಕೊಟ್ಟಿದೆ.

ಮರಾಠಿ ಸಾಹಿತ್ಯ ಸಮ್ಮೇಲನ—ಬಡೋದಾ ಪಟ್ಟಣದಲ್ಲಿ ೧೯ ನೆಯ ಮರಾಠಿ ಸಾಹಿತ್ಯ ಸಮ್ಮೇಲನವು ಕೂಡಿದ್ದಿತು. ಈ ಸಮ್ಮೇಲನದವರು ಹೀಗೆ ಠರಾವಿಸಿದರು. "ಸರಕಾರದವರು ಅಂಚೆಯ ವೆಚ್ಚವನ್ನು ಹೆಚ್ಚಿಸುವುದರಿಂದ ವಾಙ್ಮಯ ಪ್ರಸಾರದ ಕಾರ್ಯಕ್ಕೆ ತುಂಬಾ ತೊಂದರೆಯುಂಟಾಗಿದೆ. ಆದಕಾರಣ ಅಂಚೆಯ ವೆಚ್ಚವನ್ನು ಮೊದಲಿನಂತೆ ಕಡಿಮೆಮಾಡಬೇಕು." ಇದು ಬಹು ಯುಕ್ತವಾದ ಪ್ರಾರ್ಥನೆ. ಆದರೆ ಸರಕಾರವು ಲಕ್ಷಿಸುವುದೆ?

ಥಿಯಾಸಫಿಯರ ಸಮ್ಮೇಲನ—ಥಿಯಾಸಫಿಕಲ್ ಸೊಸೈಟಿಯ ಅಂತರ ರಾಷ್ಟ್ರೀಯ ಸಮ್ಮೇಲನವು ಈ ಸೊಸೈಟಿಯ ಅಧ್ಯಕ್ಷರಾದ ಡಾ. ಅರುಂಡೆಲ್‌ರವರ ಅಧ್ಯಕ್ಷತೆಯಲ್ಲಿ ಮದ್ರಾಸಿನ ಹತ್ತಿರ ಅಡಿಯಾರದಲ್ಲಿ ಜರುಗಿತು. ಅಮೇರಿಕ., ಆಸ್ಟ್ರೇಲಿಯಾ, ಇಂಗ್ಲಂಡ, ಸ್ಕಾಟಲಂಡ್, ಸ್ಪೇನ ಮೊದಲಾದ ಅನ್ಯ ರಾಷ್ಟ್ರಗಳಿಂದ ಪ್ರತಿನಿಧಿಗಳು ಆಗಮಿಸಿದ್ದರು.

ಈ ದೇಶದ ನೂರಾರು ಪ್ರತಿನಿಧಿಗಳೂ ಬಂದಿದ್ದರು. ಅಧ್ಯಕ್ಷರು ತಾವು ಮುಂದೆ ಐದು ವರುಷಗಳಲ್ಲಿ ಮಾಡುವ ಕಾರ್ಯಕ್ರಮಗಳನ್ನು ತಿಳಿಸಿದರು. ಡಾ. ಅನಿಬಿಜಂಟ್ ಅಮ್ಮನವರ ಲೋಹಪ್ರತಿಮೆಯನ್ನು ಸ್ಥಾಪಿಸುವ ಸಮಾರಂಭ ಜರುಗಿತು. ಶ್ರೀ ಜಿನರಾಜದಾಸ ಎಂಬ ಮಹಾ ವಿದ್ವಾಂಸರು ಈ ಸಂಘದ ಸದಸ್ಯರಿಂದ ಜಗತ್ತಿಗಾಗುವ ಪ್ರಯೋಜನವನ್ನು ಕುರಿತು ಸ್ವಾರಸ್ಯವಾದ ಭಾಷಣವನ್ನು ಮಾಡಿದರು.

ಡಾ. ಅರುಂಡೆಲ್‌ರವರ ಪತ್ನಿಯವರಾದ ಸೌ ರುಕ್ಮಿಣಿ ದೇವಿಯವರು ಇಜಿಪ್ತ ದೇಶದವರ ನಾಟ್ಯಪದ್ಧತಿಯನ್ನು ಮತ್ತು ಗೌತಮ ಬುದ್ಧನ ಚರಿತ್ರೆಯಲ್ಲಿಯ ಒಂದು ಪ್ರಸಂಗವನ್ನು ನಾಟ್ಯ ಮೂಲಕ ತೋರಿಸಿದರು.

ಗ್ರಾಮೋದ್ಧಾರಕ ಪರಿಷತ್ತು—ಖಾನದೇಶ ಜಿಲ್ಲೆಯ ಧುಳೆ ಎಂಬ ನಗರದಲ್ಲಿ ಮಧ್ಯಭಾಗದ ಕಮಿಶನರ್ ಸಾಹೇಬರಾದ ಮಿ. ಸ್ಮಾರ್ಟ್ ಇವರ ಅಧ್ಯಕ್ಷತೆಯಲ್ಲಿ ಈ ಪರಿಷತ್ತು ಕೂಡಿದ್ದಿತು. ಗ್ರಾಮಗಳ ಸ್ವಚ್ಛತೆ, ಶಿಕ್ಷಣ ಪ್ರಸಾರ, ಉದ್ಯೋಗಾಭಿವೃದ್ಧಿ ಮೊದಲಾದ ಜನಹಿತದ ಕಾರ್ಯಗಳನ್ನು ಮಾಡುವದಕ್ಕಾಗಿಯೆ ಜಿಲ್ಲಾ ಗ್ರಾಮೋದ್ಧಾರಕ ಸಂಘ ಸ್ಥಾಪನೆಯಾಯಿತು.

ಅಧ್ಯಕ್ಷರಾದ ಮಿ. ಸ್ಮಾರ್ಟರವರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು. "ಸಂಘದ ನಿಯಮಗಳನ್ನು ಮಾಡಿದ ಮಾತ್ರದಿಂದ ಕಾರ್ಯವಾಗುವುದಿಲ್ಲ. ಸ್ವಾವಲಂಬನೆ ಮತ್ತು ಸೇವೆಗಳೇ ಈ ಸಂಘದ ಧ್ಯೇಯಗಳಾಗಿರಬೇಕು. ಹಣಕ್ಕಿಂತಲೂ ಈ ಗುಣಗಳೇ ಹೆಚ್ಚು ಫಲಕಾರಿಯಾಗಿವೆ. ನಾಶಿಕ ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ಜನರು ತಮ್ಮ ತಮ್ಮ ಕಾರ್ಯಗಳನ್ನು ತಾವೇ ನೆರವೇರಿಸಿಕೊಂಡಿದ್ದರೆ, ಗ್ರಾಮೋದ್ಧಾರದ ಕಾರ್ಯಗಳನ್ನು ಎಷ್ಟು ಹೆಚ್ಚು ಮಾಡಿದರೋ ಅಷ್ಟು ಅಲ್ಲಿಯ ಜನರಲ್ಲಿ ಜಾಗೃತಿಯುಂಟಾಗಿ ಅವರು ಉನ್ನತಾವಸ್ಥೆಗೆ ಬರುವರು."

ಸಿಟಿಸ್ಕೌಲ ಸಮ್ಮೇಲನ—ಡಾ. ಮುಂಜೆಯವರ ಅಧ್ಯಕ್ಷತೆಯಲ್ಲಿ ಧುಳೆ ಸಿಟಿಸ್ಕೂಲಿನ ಸಮ್ಮೇಲನ ಜರುಗಿತು. ಅಲ್ಲಿಯ ಕಲೆಕ್ಟರರಾದ ಮಿ. ಭಿಡೆಯವರು ಡಿಸ್ಟ್ರಿಕ್ಟ ಜಜ್‌ರಾದ ಮಿ. ಗುಗ್ಗಳಿಯವರು ಸಮ್ಮೇಲನಕ್ಕೆ ಆಗಮಿಸಿದ್ದರು. ಅಧ್ಯಕ್ಷರಾದ ಡಾ. ಮುಂಜೆಯವರು ಶಾರೀರಿಕ ಶಿಕ್ಷಣದ ವಿಷಯವಾಗಿ ಹೀಗೆ ಹೇಳಿದರು.

"ಇಂಗ್ಲಂಡಿನಲ್ಲಿ ಹೇಗೆ ವಿದ್ಯಾರ್ಥಿಗಳಿಗೆ ಶಾರೀರಿಕ ಶಿಕ್ಷಣವನ್ನು ಕೊಡುತ್ತಾರೆಯೋ ಹಾಗೆಯೇ ಈ ದೇಶದಲ್ಲಿಯೂ ಕೊಡಬೇಕು. ಇಂಗ್ಲೀಷರು ಒಳ್ಳೆಯ ಬ್ರಾಹ್ಮಣರು; ಅವರು ಒಳ್ಳೆಯ ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ ಆಗಿದ್ದಾರೆ. ಸ್ವರಾಜ್ಯ ದೊರೆತರೆ ಮಾತ್ರ ಕೌಶಲ್ಯ ಇಲ್ಲದವರಿಗೆ ಅದನ್ನು ರಕ್ಷಿಸುವುದು ಎಷ್ಟು ಸುಲಭವೋ ಅಷ್ಟು ಪಂಡಿತ ಮಾಲವೀಯರವರಿಗೆ ಸುಲಭವಲ್ಲ. ಏಕೆಂದರೆ ಇವರಿಗೆ ಹಿಂದುಗಳಲ್ಲಿಯ ನಾನಾ ಜಾತಿ ಮತ ಪಂಥಗಳ ಒಡಕುಗಳು ವಿಘ್ನವನ್ನುಂಟುಮಾಡುತ್ತವೆ. ನಾವು ನಮ್ಮ ಗುಣಕರ್ಮಗಳಿಂದ ಬ್ರಾಹ್ಮಣಾದಿ ವರ್ಣದವರಾಗುತ್ತಿದ್ದರೂ ಸಕಲರೂ ಯುದ್ಧಕಲೆಯನ್ನು ಕಲಿಯಲೇಬೇಕು.

ಸ್ಮಾರಕೋತ್ಸವ ಸಭೆ—ರಾಯಚೂರ ತರುಣ ಸಂಘದವರ ಪ್ರಯತ್ನ ವಿಶೇಷದಿಂದ ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ ಸಭೆಯ ಎರಡನೆಯ ಅಧಿವೇಶನವು ತಾ|| ೩೦ ನೆಯ ಸಾಯಂಕಾಲ ೫ ಗಂಟೆಗೆ ಫಲಕಾರಿಯಾಗಿ ಜರುಗಿತು. ಸ್ವಾಗತ ಸಂಘಾಧ್ಯಕ್ಷರಾದ ಶ್ರೀಮಾನ್ ಶಿರವಾರ ಪಾಟೀಲ ಬಸವನಗೌಡರು ತಮ್ಮ ಭಾಷಣದಲ್ಲಿ ವಿಜಯನಗರ ಸಾಮ್ರಾಜ್ಯೋತ್ಸವದ ಮಹತ್ವವನ್ನೂ ರಾಯಚೂರ ಸುತ್ತಮುತ್ತಲು ನಡೆದ ಧಾರ್ಮಿಕ ಕಾರ್ಯಗಳನ್ನೂ ಆಗಿಹೋದ ಕವಿಗಳ ಸಂಗತಿಗಳನ್ನೂ ವಿವರಿಸಿದರು. ಅಧ್ಯಕ್ಷರಾದ ಬ್ಯಾ. ಸರದಾರರು ವಿಜಯನಗರದ ಸ್ಮಾರಕೋತ್ಸವದ ಆವಶ್ಯಕತೆ ಅದರಿಂದಾಗುವ ಫಲಪ್ರಯೋಜನಗಳನ್ನು ವಿವರಿಸಿದರು.

ಶ್ರೀಯುತರುಗಳಾದ ಡಿ ವ್ಹಿ. ಗುಂಡಪ್ಪನವರು ಬಿ. ರಾಮರಾಯರು ಹರ್ದೇಕರ ಮಂಜಪ್ಪನವರು ಪ್ರೊ. ಗೋಕಾಕರು ಪ್ರೊ. ಸಾಸನೂರರು ಪ್ರಿನ್ಸಿಪಾಲ ಚಂದ್ರಶೇಖರ ಶಾಸ್ತ್ರಿಗಳು ಜಂಗಿನ ಮುರಿಗಯ್ಯನವರು ಪಾಟೀಲ ಶಂಕರಗೌಡರು ಶ್ರೀಮತಿ ಕಲ್ಯಾಣಮ್ಮನವರು ಮೊದಲಾದವರು ಈ ವಿಷಯವಾಗಿ ಸೊಗಸಾದ ವ್ಯಾಖ್ಯಾನಗಳನ್ನು ಮಾಡಿದರು.

ಶ್ರೀ ಮುದವೀಡು ಕೃಷ್ಣರಾಯರು ಈ ಸಭಾಕಾರ್ಯದ ಚಾಲಕರಾಗಿದ್ದರು. ಕೊನೆಯಲ್ಲಿ ಇಲ್ಲಿಯ ಪ್ರಸಿದ್ಧ ವಕೀಲರಾದ ಶ್ರೀ ಪಿ. ಕಿಶನ್‌ರಾಯರು ಉರ್ದು ಭಾಷೆಯಲ್ಲಿ ಸೊಗಸಾದ ಭಾಷಣ ಮಾಡಿ ಅಭಿನಂದಿಸಿದರು.

ಆದಿಜನ ಮಧ್ಯವರ್ತಿ ಪರಿಷತ್ತು:— ಆದಿಜನ ಸೇವಕರ ದುಸ್ಥಿತಿಯನ್ನು ಸುಧಾರಿಸಲು ನಗರ ಸಭೆಗಳಿಗೆ ವಿನಂತಿ ಮಾಡಿಕೊಳ್ಳುವದು, ಆದಿಜನ ಸೇವೆಗಾಗಿ ಒಂದು ವರ್ಷದ ಶಿಕ್ಷಣಕೊಡುವದಕ್ಕಾಗಿ ಉಮೇದುವಾರರನ್ನು ಅಧ್ಯಕ್ಷರೇ ಮೂರು ವರ್ಷಗಳ ವರೆಗೆ ಆರಿಸುವದು ಮತ್ತು ಈ ಸೇವೆಮಾಡುವವರಿಗೆ ೩೫ ರಿಂದ ೧೦೦ ರೂ. ವರೆಗೆ ಅವರವರ ಯೋಗ್ಯತೆಯ ಮೇರೆಗೆ ವೇತನಕೊಡುವದು; ಈ ಪ್ರಕಾರವಾಗಿ ದಿಲ್ಲಿಯಲ್ಲಿ ಕೂಡಿದ ಆದಿಜನ ಮಧ್ಯವರ್ತಿ ಪರಿಷತ್ತಿನಲ್ಲಿ ನಿರ್ಣಯಿಸಲ್ಪಟ್ಟಿತು.

ಹೊಸದಾಗಿ ಹುಟ್ಟಿದ ಹಸುಗೂಸು.

(ಮಹಾತ್ಮಾ ಗಾಂಧಿಯವರು— "ಹರಿಜನ" ತಾ॥ ೨೧-೧೨-೧೯೩೪)

ಅಖಿಲ ಭಾರತ ಗ್ರಾಮೋದ್ಯೋಗ ಸಂಘವು ಜನ್ಮಿಸಿದೆ. ಅದಕ್ಕಾಗಿ ಎಲ್ಲೆಲ್ಲಿಯೂ ಮಾತುಕತೆಗಳು ನಡೆದಿವೆ. ಆದರೆ ಅದು ಹುಟ್ಟಿದುದು ಶಾಂತವಾತಾವರಣದಲ್ಲಿ. ಕಳೆದ ಡಿಸೆಂಬರ ೧೪ನೆಯ ತಾರೀಖಿನ ದಿವಸ ವರ್ಧಾದಲ್ಲಿ ಇದು ಜನ್ಮಿಸಿದಾಗ್ಗೆ ಯಾವ ಉತ್ಸವ ಸಮಾರಂಭಗಳೂ ಜರುಗಲ್ಪಡಲಿಲ್ಲ. ಇನ್ನು ಮುಂದೆ ಅದರ ಮುಖ್ಯ ಕಾರ್ಯಾಲಯವು ವರ್ಧಾದಲ್ಲಿಯೇ ಇರುವದು. ಯಾಕಂದರೆ ಈ ಸಂಸ್ಥೆಗೆ ದಾನಶೂರ ಶ್ರೀ ಜಮನಾಲಾಲ ಬಜಾಜರವರು ಅನೇಕ ಹೊಲಗಳನ್ನೂ ಕಟ್ಟಡಗಳನ್ನೂ ಕೊಟ್ಟಿರುವರು.

ಮೊದಲು ನಾವು ಸಂಸ್ಥೆಯನ್ನು ಸ್ಥಾಪಿಸಿದ ಮಹನೀಯರ ಪರಿಚಯವನ್ನು ಮಾಡಿಕೊಳ್ಳೋಣ. ಈ ಜನರನ್ನೇ ಸಂಸ್ಥೆಯ ಆಡಳಿತದ ಪ್ರಥಮ ಮಂಡಲದಲ್ಲಿ ತೆಗೆದುಕೊಳ್ಳಲಾಗಿದೆ.

ಈ ಸಂಸ್ಥೆಯ ಅಧ್ಯಕ್ಷರು ಶ್ರೀ ಶ್ರೀಕೃಷ್ಣದಾಸ ಜಾಜು ಇವರು ಶಾಲೆಯಲ್ಲಿ ಕಲಿಯುತ್ತಿರುವಾಗಲೇ ಇವರು ಪ್ರಖ್ಯಾತರಾದವರು. ತಮ್ಮ ವ್ಯವಸಾಯವು ಸರಿಯಾಗಿ ಲಾಭದಾಯಕವಾಗಿದ್ದರೂ ಅದನ್ನು ಬಿಟ್ಟುಕೊಟ್ಟು ಈ ಕಾರ್ಯ ವಹಿಸಿರುವರು. ಇವರು ಅ. ಭಾ. ಚರಖಾಸಂಘದ ಮಹಾರಾಷ್ಟ್ರ ಶಾಖೆಯ ಅಧ್ಯಕ್ಷರೂ ಇರುವರು

ಸಂಸ್ಥೆಯ ಸಂಚಾಲಕರು ಮತ್ತು ಸಹಾಯ ಕರ್ತೃಗಳು ಶ್ರೀ ಕುಮಾರಪ್ಪ ಇವರಿರುವರು. ಇವರು ಚಾರ್ಟರ್ಡ್ ಅಕೌಂಟಂಟ ವೃತ್ತಿಯಲ್ಲಿ ಕೆಲಸ ಮಾಡುತ್ತಿದ್ದವರು. ಅದನ್ನು ಬಿಟ್ಟು ಗುಜರಾಥ ವಿದ್ಯಾಪೀಠದಲ್ಲಿ ಕೆಲಸಮಾಡುತ್ತಿದ್ದರು. ಬಿಹಾರ ಭೂಕಂಪ ನಿವಾರಕ ಸಂಸ್ಥೆಯಲ್ಲಿ ಇವರು ಆಯವ್ಯಯದ ಸಲಹೆಗಾರರಾಗಿದ್ದರು.

ಸದಸ್ಯರಲ್ಲೊಬ್ಬರಾದ ಶ್ರೀಮತಿ ಗೋಶೀಬೆನ್ ಕ್ಯಾಪ್ಟನ್ ವರು ಪ್ರಸಿದ್ಧ ನೌರೋಜಿ ಕುಟುಂಬದ ನಾಲ್ವರು ಭಗಿನಿಯರಲ್ಲಿ ಒಬ್ಬರು ಈ ನಾಲ್ವರು ಸಹೋದರಿಯರು ಖಾದಿಯ ಪ್ರಸಾರಕ್ಕೆಗಾಗಿ ಸರ್ವಕಾಲವೂ ಪ್ರಯತ್ನಿಸುತ್ತಿರುವರು.

ಸೇಠ ಸೂರಜಿ ವಲ್ಲಭದಾಸರು ಮುಂಬಯಿಯ ಪ್ರಸಿದ್ಧ ವ್ಯಾಪಾರಿಗಳು. ಖಾದಿಯ ಕೇಂದ್ರವನ್ನು ಅವರು ನಡೆಯಿಸುವರು. ಸ್ವದೇಶಿ ಬಜಾರವು ಅಸ್ತಿತ್ವದಲ್ಲಿ ಬರಬೇಕಾದರೆ, ಸ್ಥಾಪಿಸಲ್ಪಡಬೇಕಾದರೆ ಕೇವಲ ಇವರ ಪರಿಶ್ರಮದಿಂದಲೇ ಈ ಸ್ವದೇಶಿ ಬಜಾರದಲ್ಲಿ ದೊರೆತ ಲಾಭವು ಹಳ್ಳಿಯ ವ್ಯವಸಾಯಗಳ ಸಲುವಾಗಿಯೇ ವೆಚ್ಚಮಾಡಲ್ಪಡುತ್ತದೆ.

ಇನ್ನು ಸಂಸ್ಥೆಯ ಘಟನೆಯಾದರೊ ಸರಲವಾದುದಾಗಿದೆ ಉದಾರ ನಾಗರಿಕರು ಅಂತಃಕರಣ ಪೂರ್ವಕವಾಗಿ ಇದಕ್ಕೆ ಸಹಾಯಮಾಡಿದರೆ ಹಳ್ಳಿಗಳಲ್ಲಿ ವಾಸಿಸುವ ಲಕ್ಷಾವಧಿ ಹಳ್ಳಿಗರಿಗೆ ಒಳ್ಳೇ ದಿನಗಳು ಪ್ರಾಪ್ತವಾಗಬಹುದು; ಸದ್ಯದ ಹಾಗೆ ಪಟ್ಟಣಿಗರು ಹಳ್ಳಿಗರನ್ನು ಹೀರುವದನ್ನು ಬಿಟ್ಟು ಇನ್ನು ಮುಂದೆ ಸಹಾಯಮಾಡಬಹುದು; ಹಾಗೂ ಸಾಮಾನ್ಯ ಜನರಲ್ಲಿ ಮತ್ತು ಸುಶಿಕ್ಷಿತರಲ್ಲಿ ಸಂಬಂಧವುಂಟಾಗಿ ಪರಸ್ಪರರಲ್ಲಿರುವ ಭೇದಭಾವವು ದೂರಾಗಬಹುದು. ಸದ್ಯಕ್ಕೆ ಹಿಂದುಸ್ಥಾನದಲ್ಲಿ ಪ್ರತಿಷ್ಠಿತ ಜನರು ಕೇವಲ ಅಪೂರ್ಣ ಸರಕನ್ನಷ್ಟು ಸಿದ್ಧಗೊಳಿಸುತ್ತಿದ್ದಾರೆ. ಡಾ. ಖಾನಸಾಹೇಬ ಇವರು ಖಾನ ಅಬ್ದುಲ್ ಗಫಾರಖಾನರ ಹಿರಿಯ ಅಣ್ಣಂದಿರು. ಖಾನ ಅಬ್ದುಲ್ ಗಫಾರಖಾನರನ್ನೇ ಈ ಮಂಡಲದಲ್ಲಿ ತೆಗೆದುಕೊಳ್ಳಲಾಗುತ್ತಿದ್ದಿತು. ಆದರೆ ಅವರು ಕಾರಾಗೃಹ ಹೋದುದರಿಂದ ಅವರ ಸ್ಥಾನವನ್ನು ಡಾ. ಖಾನಸಾಹೇಬರಿಗೆ ಕೊಡಲಾಗಿದೆ. ಶ್ರೀ ಲಕ್ಷ್ಮೀನಿವಾಸ ಪುರುಷೋತ್ತಮ ಇವರು ಮುಂಬಾರದಲ್ಲಿ ಪ್ರಸಿದ್ಧ ವ್ಯಾಪಾರಿಗಳಾಗಿದ್ದರು. ಡಾ. ಪ್ರಫುಲ್ಲ ಘೋಷ ಇವರು ಸರ್. ಪಿ. ಸಿ. ರಾಯರವರ ಪ್ರೀತಿಯ ಶಿಷ್ಯರಲ್ಲೊಬ್ಬರು ಸರಕಾರಿ ಟಂಕಶಾಲೆಯಲ್ಲಿಯ ದೊಡ್ಡ ಅಧಿಕಾರವನ್ನು ಬಿಟ್ಟು ಚರಿತಾರ್ಥದಷ್ಟಕ್ಕೆ ವೇತನ ತೆಗೆದುಕೊಂಡು ಕೆಲಸಮಾಡುತ್ತಿರುತ್ತಾರೆ. ಶ್ರೀ ಶಂಕರಲಾಲ ಬ್ಯಾಂಕರ (ಎಮ್. ಎ) ಇವರು ಇಂಗ್ಲಂಡದಲ್ಲಿ ರಸಾಯನ ಶಾಸ್ತ್ರವನ್ನು ಅಭ್ಯಾಸಮಾಡುತ್ತಿದ್ದರು. ಅ. ಭಾ. ಚರಖಾಸಂಘದ ಕಾರ್ಯದರ್ಶಿಗಳಾಗಿದ್ದರು. ಅವರಿಗೆ ಖಾದಿಯಲ್ಲಿ ಮತ್ತು ಹಳ್ಳಿಯ ಬಗ್ಗೆ ಒಳ್ಳೇ ಜ್ಞಾನವುಂಟು.

ಸೇಠ ಸೂರಜಿಭಾಯಿಯವರನ್ನು ಬಿಟ್ಟರೆ ಉಳಿದ ಸದಸ್ಯರೆಲ್ಲರೂ ತಮ್ಮ ಬೇರೆ ಯಾವ ಉದ್ಯೋಗ ಅಥವಾ ಆಸ್ತಿಪಾಸ್ತಿಗಳ ವ್ಯವಸ್ಥೆ ಮಾಡುವಂಥವರಿರುವದಿಲ್ಲ. ಅವರೆಲ್ಲರೂ ಈ ಗ್ರಾಮೋದ್ಯೋಗ ಕಾರ್ಯಕ್ಕಾಗಿಯೇ ತಮ್ಮ ಆಯುಷ್ಯವನ್ನು ಅರ್ಪಿಸಿದವರಾಗಿದ್ದಾರೆ. ಆದರೆ ಇನ್ನು ಮೇಲೆ ಹಳ್ಳಿಗರೇ ಪಟ್ಟಣಿಗರಿಗೆ ಅವಶ್ಯಕವಾದ ಪದಾರ್ಥಗಳನ್ನು ಸಿದ್ಧಪಡಿಸುವರು.

ಇಂಥ ಕಾರ್ಯಕ್ಕೆ ರಾಜಕೀಯ ವಿಷಯದ ಕಡೆಗಿರುವ ದೃಷ್ಟಿಯು ಕೂಡದು. ಆದುದರಿಂದ ಈ ಕಾರ್ಯದಲ್ಲಿ ಭಾಗವಹಿಸಬೇಕೆಂಬುವವರು ತಮ್ಮ ಅಭಿರುಚಿಯನ್ನು ನೋಡಿಕೊಂಡು ಕೂಡಿಕೊಳ್ಳಬೇಕು. ಸಂಸ್ಥೆಯ ಮುಂದಿರುವ ಕಾರ್ಯವು ಘನವಾದುದಾಗಿದೆ. ಇಂಥ ಕಾರ್ಯವು ಪರಮೇಶ್ವರನ ಕೃಪೆಯಿಂದಲೇ ಕೈಗೂಡುವದು. ಪರಮಾತ್ಮನಾದರೂ ಚಾಣಾಕ್ಷತನದಿಂದ ಸತತ ಪ್ರಯತ್ನಿಸುವವರ ಮೇಲೆಯೇ ಕೃಪೆಮಾಡುತ್ತಾನೆ.

ಈ ಸಂಸ್ಥೆಯನ್ನು ರಾಷ್ಟ್ರೀಯ ಸಭೆಯೇ ನಿರ್ಮಿಸಿದ್ದರೂ ಇದು ಬುದ್ಧಿ ಪುರಃಸರವಾಗಿಯೇ ರಾಜಕಾರಣದಿಂದ ಅಲಿಪ್ತವಾಗಿರುವಂತೆ ಮಾಡಲ್ಪಟ್ಟಿದೆ. ಇದರ ಆಡಳಿತೆಯಾದರೂ ಸ್ವತಂತ್ರವಾಗಿಯೇ ನಡೆಯಲ್ಪಡುವದು. ಈ ಸಂಸ್ಥೆಯ ಸದಸ್ಯರಾಗಿರುವವರೆಗೆ ನಾವು ಯಾವದೇ ತರದ ಸವಿನಯ ಶಾಸನಭಂಗದಲ್ಲಿ ಭಾಗವಹಿಸುವದಿಲ್ಲವೆಂದು ಸದಸ್ಯರು ಪ್ರತಿಜ್ಞೆಮಾಡಬೇಕಾಗುತ್ತದೆ. ಹಳ್ಳಿಗರ ಶಾರೀರಿಕ, ನೈತಿಕ, ಆರ್ಥಿಕ ಸುಧಾರಣೆಗಳನ್ನು ಮಾಡುವದೇ ಈ ಸಂಸ್ಥೆಯ ಉದ್ದೇಶವು. ಇದರ ಹೊರ್ತು ಈ ಸಂಸ್ಥೆಗೆ ಬೇರೆ ಯಾವ ಉದ್ದೇಶವೂ ಇರುವದಿಲ್ಲ. ಇದನ್ನು ನಾನು ಈ ಸಂಸ್ಥೆಯ ಮಾರ್ಗದರ್ಶಕನೆಂಬ ಸಂಬಂಧದಿಂದ ಹೇಳಬಯಸುತ್ತೇನೆ.

ಇದಕ್ಕೆ ವೇತನವನ್ನಪೇಕ್ಷಿಸದ ಏಜಂಟರುಗಳು ಬೇಕಾಗಿದೆ. ಸದ್ಯದಮಟ್ಟಿಗಾದರೂ ಅಂಥವರೇ ಬೇಕಾಗಿದೆ. ತನ್ನ ಕಾರ್ಯಕ್ಷೇತ್ರವನ್ನು ಆರಿಸಿಕೊಳ್ಳುವದು ಆ ಏಜಂಟನನ್ನೇ ಕೂಡಿದೆ. ಶಕ್ಯವಿದ್ದಷ್ಟು ಮಧ್ಯವರ್ತಿ ಮಂಡಲದ ಹೊಣೆಯನ್ನು ಕಡಿಮೆ ಮಾಡಿ ಅಲ್ಪವೆಚ್ಚದಲ್ಲಿಯೇ ಕಾರ್ಯವು ನಡೆಯುವಂತೆ ಮಾಡಬೇಕಾಗಿದೆ. ಇಂಥ ಕಾರ್ಯಕ್ಕಾಗಿ ಬೇಕಾಗುವ ಜನರು ಅತ್ಯ ಸಂತೋಷದಿಂದ ಮುಂದು ಬರುವರೆಂದು ನಾನು ಆಶಿಸುತ್ತೇನೆ.



ಶಾ. ಶ. ೧೮೫೬ ನೆಯ ಭಾವ ಸಂ|| ೩ ಸೋಮವಾರ.

ಅಸಹಕಾರದ ಸೂಚನೆ.

ರಾಯಚೂರಲ್ಲಿ ಜರುಗಿವ ೨೦ ನೆಯ ಕರ್ನಾಟಕ ಸಾಹಿತ್ಯ ಸಮ್ಮೇಲನಕ್ಕೆ ವೀರಶೈವರು ಸಹಕರಿಸಬಾರದೆಂದು ರಾಯಚೂರ ವೀರಶೈವ ಮಹಾಜನರು ಮಾಡಿದ ಸೂಚನೆಯು ಯುಕ್ತವಾಗಿದ್ದಿತೆ? ಯುಕ್ತವಾಗಿದ್ದಿದ್ದರೆ ಅದರ ವ್ಯಾಪ್ತಿಯು ಎಷ್ಟರ ಮಟ್ಟಿಗಿರಬೇಕಾಗಿದ್ದಿತು? ಆನ ಭಾಗಗಳ ವೀರಶೈವರು ಈ ಅಸಹಕಾರದ ಸೂಚನೆಯನ್ನು ಯಾವ ರೀತಿ ಮಾನ್ಯಮಾಡಬೇಕಾಗಿದ್ದಿತು? ಈ ಎಲ್ಲ ಸಂಗತಿಗಳನ್ನು ಸರಿಯಾಗಿ ತಿಳಿದುಕೊಳ್ಳುವುದು ಅತ್ಯಾವಶ್ಯಕವು. ಅಸಹಕಾರವು ಈಗ ಬಳಕೆಯಲ್ಲಿ ಬಹಳವಾಗಿ ಬರಲುಪಕ್ರಮಿಸಿದ್ದು ಅದರ ರೀತಿನೀತಿಗಳನ್ನು ತಪ್ಪಾಗಿ ತಿಳಿದುಕೊಂಡು ಆಚರಿಸಿದ್ದಾದರೆ ಆಗುವ ಅನರ್ಥವೇನೂ ಕಡಿಮೆಯಾಗುವದಿಲ್ಲ. ಅದಕಾರಣ ಸಾರ್ವಜನಿಕ ಕಾರ್ಯಗಳಲ್ಲಿ ಅಸಹಕಾರವನ್ನು ಪ್ರಾರಂಭಿಸುವಾಗ ಹೆಚ್ಚಿನ ಸಾವಧಾನವನ್ನು ತಾಳುವುದು ಅಗತ್ಯ.

ಅಹಿಂಸಾ ಮಾರ್ಗದಿಂದ ಸತ್ಯವನ್ನು ಸ್ಥಾಪಿಸುವಾಗ ಅಸಹಕಾರವು ಕೊನೆಯ ಉಪಾಯವಾಗಿದೆ. ಎಲ್ಲ ಪ್ರಯತ್ನಗಳೂ ವಿಫಲವಾದನಂತರ ಕೊನೆಗೆ ಈ ಪ್ರಯತ್ನವನ್ನು ಮಾಡಬೇಕು. ಶಾಂತಿಯುದ್ಧದಲ್ಲಿ ಇದು ಮೊದಲೇ ಹಿಡಿಯಲ್ಪಡತಕ್ಕ ಶಸ್ತ್ರವಲ್ಲ. ಎಲ್ಲ ಆಯುಧಗಳ ಸಾಮರ್ಥ್ಯವೂ ವಿಫಲವಾದನಂತರವೇ ಈ ಕೊನೆಯ ದಿವ್ಯಾಸ್ತ್ರವನ್ನು ಉಪಯೋಗಿಸಬೇಕು. ಅದಕಾರಣ ೨೦ ನೆಯ ಸಮ್ಮೇಲನದ ಸ್ವಾಗತಸಂಘದವರಿಂದಾದ ತಪ್ಪನ್ನು ತಿದ್ದಿಸಲು ಅಲ್ಲಿಯ ವೀರಶೈವ ಮಹಾಜನರು ಮೊದಲು ಯಾವ ಯಾವ ಪ್ರಯತ್ನಗಳನ್ನು ಮಾಡಿದರು? ಅಸಹಕಾರದ ಈ ಕೊನೆಯ ಮಾರ್ಗವನ್ನನುಸರಿಸುವ ಪ್ರಸಂಗವು ಅವರಿಗೇಕೆ ಬಂದಿತು? ಎಂಬಂಶಗಳನ್ನು ತಿಳಿದುಕೊಳ್ಳುವುದು ವಿಹಿತವಲ್ಲವೆ?

ಈ ನ್ಯಾಯವಾದ ರೀತಿಯಲ್ಲಿ ವಿಚಾರಿಸಿದರೆ ರಾಯಚೂರ ವೀರಶೈವ ಮಹಾಜನರು ಸರಿಯಾದ ಕ್ರಮವನ್ನು ಅನುಸರಿಸಲಿಲ್ಲವೆಂದೇ ಅತ್ಯಂತ ವಿಷಾದದಿಂದ ಹೇಳಬೇಕಾಗಿದೆ. ಮಾನವಿ ವಿವರಣೆಯನ್ನು ಬರೆಯುವಾಗ ಮತ್ತು ರಾಯಚೂರ ಸುತ್ತಮುತ್ತಲಿನ ಪುಣ್ಯಕ್ಷೇತ್ರಗಳನ್ನು ತಿಳಿಸುವಾಗ ಸ್ವಾಗತಸಂಘದವರು ತಪ್ಪು ಮಾಡಿದ್ದಾರೆ. ಆ ತಪ್ಪು ಉದ್ದೇಶಪೂರ್ವಕವಾದುದೋ ಅಥವಾ ನಿರುದ್ದೇಶದಿಂದ ಸಂಭವಿಸಿದುದೋ ಎಂಬುದು ಪ್ರಕೃತದ ಪ್ರಶ್ನೆಯಲ್ಲ. ತಪ್ಪಾದುದಂತೂ ನಿಜವಷ್ಟೆ. ಈ ವಿಷಯದಲ್ಲಿ ಮತಭೇದಕ್ಕೆ ಅವಕಾಶವೇ ಇಲ್ಲ.

ಸ್ವಾಗತಸಂಘದಿಂದಾದ ಈ ತಪ್ಪು ನಿವಾರಣೆಯಾಗುವಂತಿರಲಿಲ್ಲವೆ? ಆ ತಪ್ಪಿನ ವ್ಯಾಪ್ತಿಯು ಎಷ್ಟರ ಮಟ್ಟಿಗೆ? ತಪ್ಪಿನ ನಿವಾರಣೆಗೆ ಮಾಡಬೇಕಾದ ಪ್ರಯತ್ನವಾವುದು? ಈ ಸಂಗತಿಗಳಲ್ಲಿ ತಾರತಮ್ಯವಿಲ್ಲವೆ? ರಾಯಚೂರ ವೀರಶೈವ ಮಹಾಜನರು ತಾ. ೧೪ ನೆಯ ದಿನ ಸೇರಿದ ಸಭೆಯಲ್ಲಿ ಸ್ವಾಗತಸಂಘದಿಂದ ಮಾಡಲ್ಪಟ್ಟ ತಪ್ಪು ಯಾವ ರೀತಿ ತಿದ್ದಲ್ಪಡಬೇಕೆಂಬುದನ್ನು ಮೊದಲು ನಿರ್ಧರಿಸಬೇಕಾಗಿದ್ದಿತು. ಮತ್ತು ಆ ಪ್ರಕಾರ ತಿದ್ದುಪಾಟುಮಾಡಲು ಸ್ವಾಗತಸಂಘಕ್ಕೆ ತಿಳಿಸಬೇಕಾಗಿದ್ದಿತು. ಅದಕ್ಕೆ ಸ್ವಾಗತಸಂಘದವರು ಒಪ್ಪದಿದ್ದರೆ ಬೆಂಗಳೂರಿನಲ್ಲಿರುವ ಪರಿಷತ್ತಿನವರಿಗೆ ತಿಳಿಸಬೇಕಾದುದು ಅತ್ಯಗತ್ಯವಾಗಿದ್ದಿತು. ಆ ತಪ್ಪಿಗೆ ಅವರೂ ಭಾಗಿಗಳಾಗಲಿಲ್ಲವೆ? ಅವರೂ ತಪ್ಪನ್ನು ತಿದ್ದಿಕೊಳ್ಳಲು ಒಪ್ಪಬೇಕಾಗಿರಲಿಲ್ಲವೆ? ಈ ಪ್ರಕಾರ ಯಾವ ತರದ ಕ್ರಮಗಳನ್ನೂ ಅನುಸರಿಸದೆ ಸಮ್ಮೇಲನದ ಕಾರ್ಯದಲ್ಲಿ ಸಹಕರಿಸುವದಿಲ್ಲವೆಂದು ಮೊದಲೇ ಸೂಚಿಸಿದುದು ಅನ್ಯಾಯವಲ್ಲವೆ?

ಈ ಅಸಹಕಾರದ ವ್ಯಾಪ್ತಿಯು ಎಷ್ಟರ ಮಟ್ಟಿಗಿರಬೇಕಾಗಿದ್ದಿತು? ವೀರಶೈವ ಸಮಾಜವೆಲ್ಲಾ ಇದಕ್ಕೆ ಆಹುತಿಯಾಗಬೇಕೆ? ಸಂಭವಿಸಿದ ತಪ್ಪು ಎಷ್ಟು? ಅದರಿಂದಾಗುವ ಪರಿಣಾಮವೇನು? ಅದಕ್ಕಾಗಿ ಸಮಾಜವೇ ಅಸಹಕಾರ ಮಾರ್ಗವನ್ನನುಸರಿಸಬೇಕೆಂದು ನಿರೀಕ್ಷಿಸಿ ಮಾಡಿದ ಪ್ರಚಂಡ ಪ್ರಯತ್ನವೆಷ್ಟು? ಕುದುರೆ ಕೆಡವಿದರೆ ಲಾಯಕ್ಕೆ ಬೆಂಕಿಯೆ?

ಮಾನವಿ ವ್ಯಾಜ್ಯದಲ್ಲಿ ಬ್ರಾಹ್ಮಣರಿಗು ಮತ್ತು ಲಿಂಗಾಯತರಿಗು ಭಿನ್ನಾಭಿಪ್ರಾಯವಿದ್ದರೆ ಸಾಹಿತ್ಯಸಮ್ಮೇಲನದಲ್ಲಿ ಅದು ಎಷ್ಟರ ಮಟ್ಟಿಗೆ ಸಂಬಂಧಪಡುತ್ತದೆ? ಸಾಹಿತ್ಯಸಮ್ಮೇಲನದ ಸ್ವಾಗತಸಂಘದವರ ಅಭಿಪ್ರಾಯಕ್ಕೆ ಈ ಸಮ್ಮೇಲನಕ್ಕೆ ಬಂದ ವೀರಶೈವರೆಲ್ಲರೂ ಒಪ್ಪಿದಂತಾಗುತ್ತದೆಂದು ತಿಳಿಯುವುದು ಯಾವ ನ್ಯಾಯ? ರಾಯಚೂರು ವೀರಶೈವ ಮಹಾಜನರು ಸೂಚಿಸಿದ ತಿದ್ದುಪಾಟನ್ನು ಸ್ವಾಗತಸಂಘದವರು ಒಪ್ಪದೆ ಕೊನೆಗೆ ಅಸಹಕಾರವನ್ನೇ ಮಾಡಬೇಕಾದ ಪ್ರಸಂಗ ಬಂದಿದ್ದರೂ ಅದು ೨೦ ನೆಯ ಸಾಹಿತ್ಯಸಮ್ಮೇಲನದ ಸ್ವಾಗತಸಂಘದಲ್ಲಿ ಸೇರಿದ್ದ ವೀರಶೈವರಿಗೆ ಮಾತ್ರವೇ ಸಂಬಂಧಪಟ್ಟದ್ದಾಗಿದ್ದಿತೇ ವಿನಾ ಅನ್ಯ ವೀರಶೈವರಿಗೇನೂ ಸಂಬಂಧಿಸಿದ್ದಾಗಿರಲಿಲ್ಲ ಏಕೆಂದರೆ ಸ್ವಾಗತಸಂಘದಿಂದ ಪ್ರಕಟವಾಗಿದ್ದ ಆಹ್ವಾನಪತ್ರಿಕೆಯಲ್ಲಿಯ ಅಭಿಪ್ರಾಯಗಳಿಗೆ ಆ ಸಂಘಕ್ಕೆ ಸೇರಿದ್ದ ವೀರಶೈವರು ಮಾತ್ರ ಬದ್ಧರೇ ವಿನಾ ಅನ್ಯರು ಹೇಗೆ ಬದ್ಧರಾಗುತ್ತಾರೆ? ಜಗನ್ನಾಥರಾಯರು ಮಾನವಿಯಲ್ಲಿ ಹುಟ್ಟಿದವರೆಂದೂ ಅದು ಪವಿತ್ರಕ್ಷೇತ್ರವೆಂದೂ ಸಾಹಿತ್ಯಸಮ್ಮೇಲನದ ಸ್ವಾಗತಸಂಘದಲ್ಲಿರುವ ವೀರಶೈವರು ಒಪ್ಪಿದ್ದಾದರೆ ಸಮ್ಮೇಲನಕ್ಕೆ ಬರುವ ವೀರಶೈವರೆಲ್ಲರೂ ಒಪ್ಪಿದಂತಾಗುತ್ತದೆಯೆ? ಸ್ವಾಗತಸಂಘದ ಅಭಿಪ್ರಾಯಕ್ಕೆ ಸಮ್ಮೇಲನವೇ ಒಪ್ಪಿತೆಂದು ತಿಳಿಯುವುದು ಎಲ್ಲಿಯಾದರೂ ಉಂಟೆ?

ಈ ಎಲ್ಲಾ ಸಂಗತಿಗಳನ್ನು ಸಂಪೂರ್ಣ ಯೋಚಿಸದೆ ಇದಕ್ಕೆ ಸಮಾಜಸ್ವರೂಪವನ್ನು ಕೊಟ್ಟು ವೀರಶೈವರಾರೂ ಸಮ್ಮೇಲನದಲ್ಲಿ ಸಹಕರಿಸಬಾರದೆಂದು ರಾಯಚೂರ ವೀರಶೈವ ಮಹಾಜನಗಳು ಬಹು ಗಲಾಟೆ ಮಾಡಿದುದಕ್ಕಾಗಿ ನಾವು ತುಂಬಾ ವಿಷಾದಿಸುತ್ತೇವೆ

ರಾಯಚೂರಲ್ಲಿ ಜರುಗಿದ ಸಾಹಿತ್ಯಸಮಾರಂಭ.

ರಾಯಚೂರು ಕನ್ನಡನಾಡಿನ ಗಂಡು ಮೆಟ್ಟು. ಆದರೂ ಇಲ್ಲಿ ಕನ್ನಡನಾಡಿನ ಬೇರೆ ಭಾಗಗಳಂತೆ ಯಾವ ಚಟುವಟಿಕೆಗಳೂ ಹೆಚ್ಚಾಗಿ ಜರುಗುತ್ತಾ ಇಲ್ಲ. ಈ ಭಾಗದ ಜನರು ಆಧುನಿಕ ವಿಚಾರ ಜಾಗೃತಿಯುಳ್ಳವರೂ ಸಾರ್ವಜನಿಕ ಕಾರ್ಯ ಕಲಾಪಗಳಿಗೆ ಅವಶ್ಯಕವಾದ ಸ್ವಾತಂತ್ರ್ಯ ಸೌಲಭ್ಯಗಳುಳ್ಳವರೂ ಆಗಿಲ್ಲದಿರುವುದೇ ಇದಕ್ಕೆ ಮುಖ್ಯಕಾರಣ. ಆದುದರಿಂದ ಕಳೆದ ವಾರ ರಾಯಚೂರಿನಲ್ಲಿ ಜರುಗಿದ ಸಾಹಿತ್ಯ ಸಮಾರಂಭವೇ ಈ ನಗರದ ಆಧುನಿಕ ಇತಿಹಾಸದಲ್ಲಿ ದೇಶೋನ್ನತಿಯ ಮೊದಲನೆಯ ಸಾರ್ವಜನಿಕ ಮಹತ್ಕಾರ್ಯವೆಂದು ಪರಿಗಣಿಸಲ್ಪಡಬಹುದು.

ಆದುದರಿಂದ ರಾಯಚೂರ ಸಾಹಿತ್ಯ ಸಮಾರಂಭವು ಅಲ್ಲಿಯ ಜನರಿಗೆ ಅಭೂತಪೂರ್ವವಾದುದಾಗಿದ್ದಿತೆಂದು ಹೇಳಲು ಅಡ್ಡಿಯಿಲ್ಲ. ಈ ಸಾಹಿತ್ಯ ಸಮಾರಂಭದ ವಿಚಾರವಾಗಿ ಕಳೆದೊಂದು ತಿಂಗಳಿಂದಲೂ ತೊಡಕುಗಳು ದಿನೇ ದಿನೇ ಹೆಚ್ಚುತ್ತ ಬಂದುದರಿಂದ ಯಾರ ಬಾಯಲ್ಲಾದರೂ ಯಾವಾಗಲೂ ಇದೊಂದು ಚರ್ಚೆಯ ವಿಷಯವಾಗಿಯೇ ಇದ್ದಿತು. ಅಂತೂ ರಾಯಚೂರು ಸಾಹಿತ್ಯ ಸಮ್ಮೇಲನವನ್ನು ಮತ್ತು ಸಾಹಿತ್ಯ ಸಮ್ಮೇಲನವು ರಾಯಚೂರನ್ನು ಒಂದಲ್ಲ ಒಂದು ರೀತಿಯಿಂದ ಪ್ರಸಿದ್ಧಿಗೆ ಬರುವಂತೆ ಮಾಡಿದುದರಿಂದ ಕನ್ನಡನಾಡಿನಲ್ಲಿ ಕೂಡಾ ಕಳೆದ ವಾರ ಇದೊಂದು ಮಹತ್ವದ ಸಂಗತಿಯಾಗಿಯೇ ಇದ್ದಿತು.

ಮೆರವಣಿಗೆ

ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾದ ಶ್ರೀಮಾನ ಮಂಗೇಶರಾಯರ ಮತ್ತು ಹಿಂದಿನ ಅಧ್ಯಕ್ಷರುಗಳಾದ ಶ್ರೀಮಾನ್ ಬಿ ಎಂ ಶ್ರೀಕಂಠಯ್ಯನವರ, ಶ್ರೀಮಾನ್ ಬಿ. ರಾಮರಾಯರ ಮತ್ತು ಅನೇಕ ಸುಪ್ರಸಿದ್ಧ ಸಾಹಿತಿಗಳ ಮೆರವಣಿಗೆಯು ತಾ|| ೨೭ ನೆಯ ಸಾಯಂಕಾಲ ಸಂಭ್ರಮದಿಂದ ಜರುಗಿತು. ಈ ಮೆರವಣಿಗೆಯು ಆಯಾಯ ವ್ಯಕ್ತಿಗಳ ಮೆರವಣಿಗೆಯಲ್ಲ ಕನ್ನಡ ಸಾಹಿತ್ಯ ದೇವಿಯ, ಆ ನಮ್ಮ ಹೆತ್ತಮ್ಮನ ನುಡಿಯ ಮೆರವಣಿಗೆಯು.

ತಾ|| ೩೦ ನೆಯ ಬೆಳಿಗ್ಗೆ ೯ ಗಂಟೆಗೆ ವಿಜಯನಗರ ಸಾಮ್ರಾಜ್ಯಸ್ಥಾಪನೋತ್ಸವದ ಎರಡನೆಯ ಅಧಿವೇಶನದ ಅಧ್ಯಕ್ಷರಾದ ಶ್ರೀಮಾನ್ ಬ್ಯಾರಿಸ್ಟರ ಕರಮರ ಮತ್ತು ಶ್ರೀಮಾನ್ ಮಂಗೇಶರಾಯರೇ ಮೊದಲಾದ ಪ್ರಸಿದ್ಧ ಸಾಹಿತಿಗಳ ಮೆರವಣಿಗೆಯು ಮೊದಲನೆಯ ಮೆರವಣಿಗೆಗಿಂತ ಇಮ್ಮಡಿ ಸಂಭ್ರಮದಿಂದ ಜರುಗಿತು. ಇದು ಕೂಡಾ ಆ ವಿಜಯನಗರ ಸಾಮ್ರಾಜ್ಯದ ಘಟನೆಯ ವಿಷಯದಲ್ಲಿ ಜನರಿಗಿರತಕ್ಕ ಅತ್ಯಧಿಕವಾದ ಆದರಾಭಿಮಾನಗಳನ್ನು ವ್ಯಕ್ತಗೊಳಿಸತಕ್ಕದಾಗಿಯೇ ಇದ್ದಿತು. ಈ ಉಭಯ ಮೆರವಣಿಗೆಗಳನ್ನು ರಾಯಚೂರು ಕಣ್ಣುತುಂಬ ನೋಡಿ ಬಾಯಿತುಂಬಾ ಹೊಗಳಿತು.

ಇವರ ಅಸಹಕಾರದ ಸೂಚನೆಯನ್ನು ಮಾನ್ಯಮಾಡಿ ಯಾರಾದರೂ ಪರಸ್ಥಳಗಳಿಂದ ಸಮ್ಮೇಲನಕ್ಕೆ ಬಾರದೆ ಇದ್ದಿದ್ದರೆ ಅವರ ವಿಷಯದಲ್ಲಿ ಖೇದವೆನಿಸುತ್ತದೆ. ಅಸಹಕಾರದ ಸೂಚನೆ ಮತ್ತು ಮಾನ್ಯತೆಗಳ ವಿಷಯದಲ್ಲಿ ಇನ್ನು ಮೇಲಾದರೂ ಜನರು ಬಹು ಜಾಗರೂಕರಾಗಿರುವುದು ಅಗತ್ಯವಲ್ಲವೆ?

ಸಾಹಿತ್ಯ ಸಮ್ಮೇಲನ

ಈ ಸಾರೆಯ ಸಮ್ಮೇಲನದ ಅಧ್ಯಕ್ಷ ಸ್ಥಾನಕ್ಕೆ ತಮ್ಮ ಜೀವಿತವನ್ನೇ ಕನ್ನಡನುಡಿಯ ಬೆಳವಣಿಗೆಗಾಗಿ ಧಾರೆಯೆರೆದ ಶ್ರೀಮಾನ್ ಮಂಗೇಶರಾಯರು ದೊರೆತುದು ಅಲಭ್ಯಲಾಭ. ರಾಯಚೂರು ವೀರಶೈವರು ಅಸಹಕಾರದ ಅನುಚಿತವಾದ ಗೊಂದಲವನ್ನೆಬ್ಬಿಸಿದ್ದರಿಂದ ಕನ್ನಡ ಸಾಹಿತಿಗಳೂ ಸಾಹಿತ್ಯಾಭಿಮಾನಿಗಳೂ ಆದ ವೀರಶೈವರಲ್ಲಿ ಬಹು ಜನರು ಬರಲಿಲ್ಲ. ಇದೊಂದು ಹೆಚ್ಚಿನ ಕೊರತೆ.

ಕಳೆದ ವರುಷಕ್ಕಿಂತ ಸ್ತ್ರೀಪ್ರತಿನಿಧಿಗಳು ಈ ಸಾರೆ ಹೆಚ್ಚು ಬಂದಿದ್ದರು. ಇದರಿಂದ ಸಾಹಿತ್ಯ ಸಮ್ಮೇಲನದ ವಿಚಾರವಾಗಿ ಜನರಲ್ಲಿ ದಿನೇ ದಿನೇ ಆದರಾಭಿಮಾನಗಳು ಹೆಚ್ಚುತ್ತಿದ್ದಂತೆ ತೋರುತ್ತದೆ. ಆದರೆ ಅದಕ್ಕನುಗುಣವಾಗಿ ಈ ಸಾರೆ ಸಾಹಿತ್ಯದ ನಾನಾ ಅಂಗಗಳ ಪ್ರದರ್ಶನವು ಮಾತ್ರ ಜರುಗಲಿಲ್ಲ. ಹೊಸ ಏರ್ಪಾಟುಗಳಾವುವೂ ಇರಲಿಲ್ಲ. ಈ ದೃಷ್ಟಿಯಿಂದ ನೋಡಿದರೆ ಕಳೆದ ಹುಬ್ಬಳ್ಳಿಯ ಸಮ್ಮೇಲನಕ್ಕಿಂತ ಇದು ಬಹು ಕಡಿಮೆ ತರದಲ್ಲಿ ಕೊನೆಗಂಡಿತೆಂದು ಹೇಳಬಹುದು. ಹೀಗಾಗಲು ಸಾಹಿತ್ಯದ ನಾನಾ ಅಂಗಗಳ ಸಂಬಂಧವಾಗಿ ಹೊಸದೇ ಆದ ಕಾರ್ಯಕಲಾಪಗಳ ಪರಿಜ್ಞಾನವು ಈ ಭಾಗದ ಜನರಲ್ಲಿ ಹೆಚ್ಚಾಗಿಲ್ಲದಿರುವುದು ಮತ್ತು ಅಂತಃಕಲಹಾಗ್ನಿಯ ನಾನ ಕಡೆ ಹಬ್ಬಿಕೊಂಡುದು ಮುಖ್ಯಕಾರಣ. ಇಂತಹ ಸ್ಥಿತಿಯಲ್ಲಿ ಇದು ಜಯಪ್ರದವಾಗಿ ಜರುಗಿದುದಕ್ಕೆ ಇಲ್ಲಿಯ ಶ್ರೀಮಾನ್ ಕೆ. ಗುಂಡಪ್ಪನವರನ್ನು, ಶ್ರೀ ಗುಡಿಹಾಳ ಹನುಮಂತರಾಯರೇ ಮೊದಲಾದ ಕಾರ್ಯಕರ್ತರನ್ನು ಕನ್ನಡಾಭಿಮಾನಿಯು ತಂಬಾ ಶ್ಲಾಘಿಸದಿರಲಾರನು.

ಸ್ವಾಗತಸಂಘಾಧ್ಯಕ್ಷರ ಭಾಷಣವು ನೈಜಾಮ ಕರ್ನಾಟಕದ ನಿಜಸ್ಥಿತಿಯನ್ನು ವ್ಯಕ್ತಗೊಳಿಸಿತು. ಅಧ್ಯಕ್ಷ ಮಹಾಶಯರ ಅಮೋಘ ಭಾಷಣವು ಕನ್ನಡಿಗರಿಗೆ ಮಾರ್ಗದರ್ಶಿಯಾಯಿತು. ವಚನಗಳ ಸಂಬಂಧವಾದ ದಾವಣಗೆರೆ ಶ್ರೀ ಹುಲ್ಲುಬಾದಿ ವೀರಭದ್ರಪ್ಪನವರ ಮತ್ತು ಗಾಥೆಯ ಮಾತುಗಳನ್ನು ಕುರಿತು ಬರೆದ ಹೈದರಾಬಾದಿನ ಶ್ರೀ ಸ್ವಾಮಿ ನಾಯಕರ ನಿಬಂಧಗಳು ಬಹು ಮಹತ್ವವಾದವುಗಳೂ ಬೋಧಪರವಾದವುಗಳೂ ಇದ್ದವು. ಶ್ರೀ ಶ್ರೀನಿವಾಸ ಮೂರ್ತಿಗಳು ಮತ್ತು ಶ್ರೀ ಹರ್ಡೇಕರ ಮಂಜಪ್ಪನವರು ವಚನ ಸಾಹಿತ್ಯವನ್ನು ಕುರಿತು ಮಾಡಿದ ಭಾಷಣಗಳು ಬಹು ಪರಿಣಾಮಕಾರಿಯಾಗಿ ಪರಿಣಮಿಸಿದವು.

ಕವಿಸಮ್ಮೇಲನ

ಶ್ರೀಮಾನ್ ವ್ಹಿ. ಕೆ. ಗೋಕಾಕ ಎಂ. ಎ. ಇವರ ಅಧ್ಯಕ್ಷತೆಯಲ್ಲಿ ತಾ|| ೩೦ ನೆಯ ದಿನ ಪ್ರಾತಃಕಾಲ ೯ ಗಂಟೆಗೆ ಗದ್ಯ ಪದ್ಯ ಲೇಖಕರ ಕೂಟವು ಕೂಡಿದ್ದಿತು. ಶ್ರೀಮಾನ್ ಗೋಕಾಕರ ಭಾಷಣವು ವಿಚಾರಪರಿಪ್ಲುತವಾಗಿದ್ದಿತು. ಪ್ರೊ ಜಹಗೀರದಾರ ಮತ್ತು ಪ್ರೊ. ಸಾಸನೂರು ಈ ಮಹಾಶಯರು ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳ ಸಂಬಂಧವಾಗಿ ಮಾಡಿದ ಭಾಷಣಗಳು ವಿಚಾರ ಕ್ರಾಂತಿಯನ್ನುಂಟುಮಾಡತಕ್ಕವುಗಳಾಗಿದ್ದವು.

ಸಾಹಿತ್ಯ ಪ್ರೇಮಿ.

ಇಪ್ಪತ್ತನೆಯ
ಕರ್ನಾಟಕ ಸಾಹಿತ್ಯ ಸಮ್ಮೇಲನದ
ಅಧ್ಯಕ್ಷರ ಭಾಷಣದ ಮುಖ್ಯಾಂಶ.

ಕರ್ನಾಟಕ ಸಾಹಿತ್ಯ ಸಮ್ಮೇಲನದ ಈ ಅಧಿವೇಶನಕ್ಕೆ ಇಲ್ಲಿ ಕೂಡಿ ಬಂದ ಹತ್ತು ಸಮುಸ್ತರ ಮುಂದೆ ಶಿಂಕು ನಾನು ಬಿನ್ನವಿಸಿಕೊಳ್ಳುವದೇನೆಂದರೆ:--

ನನ್ನನ್ನು ಇಂದಿನ ಅಧಿವೇಶನವ ಅಧ್ಯಕ್ಷಪದವಿಗೆ ಏರಿಸಿಟ್ಟ ಗೌರವಕ್ಕೆ ಸ್ವಾಗತಮಂಡಳಿಯವರಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸಿ, ಸದಸ್ಯರಿಗೆ ತಲೆಬಾಗಿ, ಎಲ್ಲರಿಗೂ ಕೈಮುಗಿದು, ಈ ಪದವಿಯನ್ನು ಅಂಗೀಕರಿಸುತ್ತೇನೆ.

ಒಂದು ಭಾಷೆ ವೋಳ್ಗೆಗವಾದರೆ ಆ ಭಾಷೆಯ ಜನಗಳ ಬೆಳವಣಿಗೆ ಮುರಿದುವರಿಯುತ್ತದೆಂದೂ, ಇಳಿಮೊಗವಾದರೆ ಜನಾಂಗವು ಕ್ಷಯಿಸುತ್ತದೆಂದೂ ಬಹುಮಟ್ಟಿಗೆ ಹೇಳಬಹುದು.

ಕನ್ನಡವು ಸುಮಾರು ಒಂದು ಕೋಟಿ ಜನರು ಆಡುವ ಮುದ್ದು ಮಾತಿನ ಚೆಲುವ ಭಾಷೆ. ಇಷ್ಟು ಪ್ರಾಚೀನವಾದ, ಪಕ್ವವಾದ ಪ್ರೌಢಭಾಷೆ ಹಿಂದುಸ್ಥಾನದಲ್ಲಿ ಮತ್ತೊಂದು ಇದ್ದೀತೇ ಎಂಬುದೊಂದು ಶಂಕೆ ನನ್ನನ್ನು ಬಿಟ್ಟಿಲ್ಲ. ಇಂಥ ಒಳ್ನುಡಿಯಲ್ಲಿ ಸಂದೇಹವೇನು? ಕ್ರಿಸ್ತಶಕದ ಪ್ರಾರಂಭದ ಮುಂಚೆಯೇ ಕರ್ನಾಡಿನ ಕವಿಗಳಲ್ಲಿಯೂ ನಾಡುಗಳಲ್ಲಿಯೂ ಅದುರು ಅದುರುಗಳಾಗಿ ಅಲ್ಲಲ್ಲಿ ಚೆಲ್ಲವರಿದಂತಿದ್ದ—ತರುವಾಯ ಪಂಡಿತ್ನೆಯವರೂ ಹಾಡುಗಾರರೂ ಚಿತ್ರಾಣ ಮುಂತಾದ ಪಾತ್ರಗಳಲ್ಲಿ ಹೊಳೆಟ್ಟಿದ್ದ—೬ನೆಯ ಶತಮಾನದಿಂದ ಉಭಯ ಭಾಷಾಕವಿಗಳಾದ ಜೈನರು ತಮ್ಮ ರತ್ನತ್ರಯಗಳನ್ನು ಬಳಿತಗೊಳಿಸತಕ್ಕ ವಿಷಮಗತಿಯ ವೃತ್ತಗಳಿಗೆ ಅಳವಡುವಂತೆ ಸಂಸ್ಕೃತಮಿಶ್ರಣದಿಂದ ಘಟಕ್ಕಿಟ್ಟ ಸೂಳ್ಳುಗಳಿಗೆ ಸರಿಬರುವ ಹಾಗೆ ಹೊಡೆದು ಬಡಿದು ಮಾರ್ಪಡಿಸಿದ್ದ—ವಚನಗಳ ಚಳುವಳಿಗಾಗಿ ಶಿವಶರಣರು ಚಿಕ್ಕದೊಡ್ಡ ನಾಣ್ಯಗಳಾಗಿ ಹೊಡೆಯಿಸಿದ್ದ—೧೫ನೆಯ ಶತಮಾನದಿಂದ ಷಟ್ಪದಿಕಾರರು ಕಥಾವಿಸ್ತರಕ್ಕೆ, ದಾಸಕೂಟದವರು ಜನರಂಜನೆಗೆ, ಯಕ್ಷಗಾನದವರು ಅರ್ಥಸೌಲಭ್ಯಕ್ಕೆ ಬೇಕುಬೇಕಾದಂತೆ ಬೆರಕೆ ಮಾಡಿ ಬಣ್ಣ ಕೊಟ್ಟಿದ್ದ—ಈಗಲೂ ಕಾಲಿಟ್ಟ ಕಡೆ ಕರ್ನಾಟಕದಲ್ಲಿ ಕಾಣ ಸಿಕ್ಕುವ ಇತಿಹಾಸನಿಕ್ಷೇಪರೂಪವ ಶಿಲಾಶಾಸನಗಳಲ್ಲಿ ಎರಕ ಹೊಯ್ದಂತಿದ್ದ ಹೊಂಗನ್ನಡದ ಭಾಂಡಾರಕ್ಕೆ ಭಾಗಿಯಾದ ಕನ್ನಡಿಗನು ಎಷ್ಟು ಧನಾಢ್ಯನು! ಎಷ್ಟು ಧನ್ಯನು! ಈ ಧನವಿರುವಷ್ಟು ಕಾಲ ಕನ್ನಡಿಗನಿಗೆ ನುಡಿಗೆ ಕಡಿಮೆ ಇತ್ತೇ? ಭಾವಕ್ಕೆ ಬಡತನವಿತ್ತೇ? ರಚನೆಗೆ ಕೊರತೆ ಇತ್ತೇ?

ಹೀಗಿದ್ದರೂ ಕನ್ನಡವು ಮುಂದೆ ಮುನ್ನೂರು ವರ್ಷ ಸೊರಗಿ ಮುಗ್ಗಿ ಹೋಯಿತಷ್ಟೆ. ವಿಜಯನಗರಸಾಮ್ರಾಜ್ಯವು ಧ್ವಂಸವಾಗಿ ಕನ್ನಡನಾಡಿನ ಬೇರೆ ಬೇರೆ ತುಂಡುಗಳು ಇತರ ಭಾಷೆಗಳ ಅಧಿಪತ್ಯಕ್ಕೆ ಒಳಪಟ್ಟು, ತನ್ನ ಮನೆಯ ಅಡಳಿತವೇ ತನಗೆ ತಪ್ಪಿದಂತಾಗಲು, ಕನ್ನಡವನ್ನು ಕೇಳುವವರಿಲ್ಲದೆ ಹೋಯಿತು. ಸಾಲದುದಕ್ಕೆ ಸುತ್ತಲು ಆಗಾಗ ನಡೆಯುತ್ತಿದ್ದ ಕಳಹಗಳಗಳು, ಬರಗಾಲದ ಕಷ್ಟಗಳು, ದೇಶದಲ್ಲಿ ಭದ್ರತೆಯಿಲ್ಲ ರಕ್ಷಣೆಯಿಲ್ಲ; ಇಂಥ ದುಃಸ್ಥಿತಿಯಲ್ಲಿ ಕನ್ನಡವು ಕುಟುಕು ಜೀವ ಹಿಡಿದುಕೊಂಡು ಬದುಕಿರುವುದೇ ಆಶ್ಚರ್ಯವೆನ್ನಿಸುತ್ತದೆ. ಕನ್ನಡದ ಇಂಥ ಶೋಚನೀಯ ಅವಸ್ಥಾಂತರವಾದ ಅತಂತ್ರಸ್ಥಿತಿ ಕನ್ನಡಕ್ಕೇ ಬಹಳ ಕಾಲ ತಿಳಿಯಲಿಲ್ಲ. ಇಂಗ್ಲಿಷ್ ವಿದ್ಯಾಭ್ಯಾಸವು ಬಂದು ಹಿಂದುಸ್ಥಾನವನ್ನು ಕೈಹಿಡಿದು ಎಬ್ಬಿಸುವ ವರೆಗೆ ಕನ್ನಡವು ಚೇತರಿಸಿಕೊಳ್ಳುವಷ್ಟು ಸಮರ್ಥವಾಗಿರಲಿಲ್ಲ. ದೂರದ ದಿಗಂತದಲ್ಲಿಯ ಹೊಸ ಪ್ರಪಂಚವನ್ನು ಕನ್ನಡಿಗನ ಮುಂದೆ ತೋರಿ 'ನೋಡಲ್ಲಿ ಮುಂಬೆಳಗು ಮೂಡುತಿದೆ ಹೊಂಬಿಸಿಲು' ಎಂಬ ಸೊಲ್ಲನ್ನು ಕನ್ನಡಿಗನ ಕಿವಿಯಲ್ಲಿ ಹಾಡಿದುದು ಇಂಗ್ಲಿಷ್ ಇತಿಹಾಸ! ಭಾಷಾ ಪ್ರೇಮ, ದೇಶವಾತ್ಸಲ್ಯ, ಐಕ್ಯಸಾಧನೆ, ಸ್ವಾತಂತ್ರ್ಯಸಿದ್ಧಿ ಎಂಬೀ ಉದಾತ್ತ ವಿಚಾರಗಳನ್ನು ಅವನ ಮನಸ್ಸಿನಲ್ಲಿ ಒತ್ತಿದುದು ಇಂಗ್ಲಿಷ್ ವಾಙ್ಮಯ! ಈ ವಿಚಾರಗಳ ಪ್ರೇರಣೆಯ ಫಲವೇ ಈ ಸಾಹಿತ್ಯಸಮ್ಮೇಲನ.

ಜ್ಞಾನ ಮತ್ತು ಸಂಸ್ಕೃತಿ, ಇವೆರಡು ಮಾತುಗಳು ಕನ್ನಡದಲ್ಲಿ ಸಮಾನಾರ್ಥದಲ್ಲಿ ಬಳಕೆಯಾಗಿದ್ದರೂ ಭಿನ್ನಾರ್ಥಕಗಳಾಗಿವೆ. ಒಂದು ಜನಾಂಗದ ಜ್ಞಾನ ಬೇರೆ, ಸಂಸ್ಕೃತಿ ಬೇರೆ. ಜ್ಞಾನವೆಂದರೆ ಆ ಜನಾಂಗದ ಜನರು ತಿಳಿದಿರುವ ಗಣಿತ ಸಿದ್ಧಾಂತಗಳ, ವಿಜ್ಞಾನದ ಶೋಧಗಳ, ಕಸುಬು ಕೈಗಾರಿಕೆಗಳ ಒಟ್ಟು ತಿಳುವಳಿಕೆ. ಒಂದು ಜನಾಂಗದ ಸಂಸ್ಕೃತಿ ಎಂದರೆ ಅದರ ಧರ್ಮ, ಆಧ್ಯಾತ್ಮಿಕ ವಿಚಾರ, ನೀತಿಕಲ್ಪನೆ, ಆಹಾರ ವ್ಯವಹಾರಗಳು, ಇತ್ಯಾದಿ. ಮಾನವ ವರ್ಗದ ಸಂಸ್ಕೃತಿಯು ಮೊಟ್ಟಮೊದಲು ಜ್ಞಾನದಿಂದ ಜನಿಸಿ, ಮನುಷ್ಯನು ಮುಂದುವರಿದು ಹೇಗೆ ಹೇಗೆ ಸಮುನ್ನತಿಯನ್ನು ಪಡೆಯುತ್ತಾನೆಯೋ ಹಾಗೆ ಹಾಗೆ ಅಲ್ಲಿಯ ಸಂಸ್ಕೃತಿಯು ಬೇರೆಯಾಗಿ ನಿಂತು ತನಗೆ ಅನುಗುಣವಾದ ಅನುರೂಪವಾದ ಸ್ಥಿತಿಯನ್ನು ತಾಳುವುದು. ಹೀಗಾಮದರಿಂದ ಒಂದೊಂದು ಜನಾಂಗದ ಸಂಸ್ಕೃತಿಯು ಒಂದೊಂದು ವಿಧವಾಗಿರಬಹುದು. ಆದರೆ ಜ್ಞಾನದಲ್ಲಿ ಮಾತ್ರ ವೈವಿಧ್ಯವಿಲ್ಲ; ಅದು ಎಲ್ಲ ಕಾಲದಲ್ಲಿಯೂ ಎಲ್ಲ ಜನಾಂಗಗಳಲ್ಲಿಯೂ ಒಂದೇಯಾಗಿರುತ್ತದೆ. ಜ್ಞಾನವನ್ನು ಪರರಿಗೆ ಕೊಟ್ಟು ಪರರಿಂದ ತರಬಹುದು; ಆದರೆ ಸಂಸ್ಕೃತಿಯ ಪ್ರಸಾರಣೆ ಸುಲಭವೂ ಅಲ್ಲ, ಸಾಧ್ಯವೂ ಅಲ್ಲ. ಒಂದು ರಾಷ್ಟ್ರದ ಉನ್ನತಿಗೆ ಜ್ಞಾನ ಮತ್ತು ಸಂಸ್ಕೃತಿ ಇವೆರಡರ ಅಭಿವೃದ್ಧಿಯೂ ಅಗತ್ಯ. ಆದರೆ ರಾಷ್ಟ್ರೋನ್ನತಿಯು ಜ್ಞಾನವನ್ನು ಹೊರತು ಸಂಸ್ಕೃತಿಯನ್ನು ಅಷ್ಟು ಅವಲಂಬಿಸುವುದಿಲ್ಲ. ಹೀಗಿರುವುದರಿಂದ, ಸಂಸ್ಕೃತಿಯಿಲ್ಲದೆ ಬರಿಯ ಜ್ಞಾನವೃದ್ಧಿಯ ಬಲದಿಂದಲೇ ಮೇಲೇರಿದ ರಾಷ್ಟ್ರೋನ್ನತಿಯು ವಿಗಸ್ತದ ಉನ್ನತಿಯಂತೆ ಚಿರಕಾಲ ಬಾಳಲಾರದು.

ಪಂಪಾದಿ ಕವಿಗಳೂ ಪೊನ್ನಮ್ಮಾದಿ ಕವಯಿತ್ರಿಯರೂ ರಚಿಸಿದ ಪುರಾತನ ಸಾಹಿತ್ಯ ಮತ್ತು ಅದರಿಂದ ಜನಿಸಿದ ಆಧುನಿಕ ಸಾಹಿತ್ಯ, ಹೀಗೆ ಸಕಲ ಕನ್ನಡ ಸಾಹಿತ್ಯಕ್ಕೆ—ಹಲವು ತಲೆ ಮಾರು ಕಳೆದ ನಮ್ಮ ಕೈಗೆ ಬಂದ ಇಷ್ಟು ವಿಸ್ತಾರವಾದ ಈ ಆಸ್ತಿಗೆ ಕನ್ನಡಿಗರು, ಮುಸಲ್ಮಾನರು, ಕ್ರೈಸ್ತರು, ಹಿಂದೂಗಳು, ಬೃಹತ್ ಕರ್ನಾಟಕದವರೆಲ್ಲರೂ ಹಕ್ಕುದಾರರು. ಕನ್ನಡ ಸಾಹಿತ್ಯದ ಮುಂದಿನ ಕೃಷಿಕಾರ್ಯವು ನಡೆಯಬೇಕು ನಮ್ಮ ಯುವಕರಿಂದ; ಭಾಷಾಭಕ್ತರೂ ಸಾಹಿತ್ಯಪ್ರೇಮಿಗಳೂ ಉತ್ತಮ ಚರಿತರೂ ಉದ್ಯೋಗಶೀಲರೂ ಆಗಿರುವ ವೀರ ಯುವಕರಿಂದ. ಅಂಥವರ ಕೈಗಳಿಗೆ ಹಿರಿಯರ ಹೆಗಲ ಮೇಲಿನ ನೇಗಿಲು ಬರಲಿಕ್ಕಿದೆ. ಆಗ ಕನ್ನಡ ಸಾಹಿತ್ಯ ಕಾರ್ಯವು ಇನ್ನೂ ಉತ್ತಮವಾಗಿ, ಬಹುಮುಖ

ವಾಗಿ, ಆಶ್ಚರ್ಯಕರವಾಗಿ, ಕಾರ್ಯೋತ್ತೇಜಕವಾಗಿ, ಸತ್ಫಲಪ್ರದಾಯಕವಾಗಿ ನಡೆಯುವುದು. ಕರ್ನಾಟಕವು ಪ್ರಪಂಚದ ಶ್ರೇಯೋಭಿವೃದ್ಧಿಗಾಗಿ ತನ್ನ ಹರಕೆಯನ್ನು ಸಲ್ಲಿಸಲಿಕ್ಕಿದೆ. ಬಂಗಾಲವು ಟಾಗೋರರ ಬಾಯಿಂದ ಗೀತಾಂಜಲಿಯನ್ನು ಹಾಡಿಸಿದೆ; ತಮಿಳ್‌ನಾಡು ರಾಮನರ ಕೈಯಿಂದ ವರ್ಣರಶ್ಮಿಯನ್ನು ಬೆಳಗಿಸಿದೆ; ಮಹಾರಾಷ್ಟ್ರವು ಲೋಕಮಾನ್ಯರಿಂದ ಗೀತಾರಹಸ್ಯವನ್ನು ಓದಿಸಿದೆ; ಗುಜರಾತು ಮಹಾತ್ಮರ ತ್ರಿಕರಣಗಳಿಂದ ಅಹಿಂಸಾ ಮಂತ್ರವನ್ನು ಉಪದೇಶಿಸಿದೆ; ಕರ್ನಾಟಕ ಮಾತೇ! ನಿನ್ನ ಹರಕೆ ಸಲ್ಲಿಸಿ ನಿನ್ನ ಹೆಸರ ಹೇಳಿಸುವ ಕಾಣಿಕೆಯನ್ನು ನಮ್ಮ ಕೈಗಿತ್ತು ನಮ್ಮನ್ನು ಒಗ್ಗೂಡಿಸಿ ಎಂದು ಕಳುಹುವೆ?

ರಾಯಚೂರು ಕರ್ನಾಟಕ ಸಾಹಿತ್ಯಸಮ್ಮೇಲನದಲ್ಲಿ

ಮೀರ ಅಹಮ್ಮದ ಅಲಿಖಾನ (ಕಲೆಕ್ಟರ ರಾಯಚೂರ)

ಇವರು ಮಾಡಿದ

ಭಾಷಣದ ಮುಖ್ಯಾಂಶ.

ಮಹನೀಯರೆ, ಮತ್ತು ಮಹಿಳೆಯರೆ,

ಈ ಸಮ್ಮೇಲನವನ್ನು ಪ್ರಾರಂಭಿಸುವದಕ್ಕಾಗಿ ನೀವು ನನ್ನ ಮೇಲೆ ಕೃಪೆಯಿಟ್ಟು ಆಮಂತ್ರಿಸಿದಕ್ಕಾಗಿ ನನಗೆ ಅತ್ಯಾನಂದವೆನಿಸುತ್ತದೆ. ನಾನೊಬ್ಬ ಸರಕಾರದ ಪ್ರತಿನಿಧಿಯು. ನಮ್ಮ ಸರಕಾರದವರು ಪೌರ್ವಾತ್ಯ ವಿದ್ಯೆಗಳನ್ನು ಮುಂದುವರಿಸುವದಕ್ಕಾಗಿ ಶಕ್ಯವಿದ್ದಷ್ಟು ಯತ್ನಿಸುತ್ತಿದ್ದಾರೆ. ಆದುದರಿಂದ ನೀವು ಕೈಕೊಂಡ ಈ ಬಗೆಯ ಚಟುವಟಿಕೆಗೆ ಸಹಾಯಮಾಡುವದು ನನ್ನ ಕರ್ತವ್ಯವಿಷ್ಟೇ ಅಲ್ಲದೆ ಅಭಿಮಾನವೆಂದು ನಾನು ಭಾವಿಸುತ್ತೇನೆ. ಆದುದರಿಂದ ನೆರೆಯ ಪ್ರಾಂತಗಳಿಂದಲೂ ಸಂಸ್ಥಾನಗಳಿಂದಲೂ ಆಗಮಿಸಿದ ತಮ್ಮೆಲ್ಲರಿಗೆ ನಾನು ಸ್ವಾಗತವನ್ನು ಕೋರಿ ತಮಗೆ ಈ ರಾಯಚೂರು ಪ್ರವಾಸವು ಸುಖದಾಯಕವಾಗಲೆಂದು ಬಯಸುತ್ತೇನೆ.

ರಾಯಚೂರು ಉದ್ಯೋಗ ವ್ಯವಸಾಯಗಳ ಕೇಂದ್ರವಾಗಿದೆ. ಇಲ್ಲಿಯ ಕೋಟೆಯು ಅನೇಕ ರಣಗಳ ಚಿಹ್ನವಾಗಿದೆ. ಆದರೂ ಶಾಂತತೆಯ ಕಾಲದಲ್ಲಿ ವಿವಿಧ ರಾಜವಂಶಗಳು ಇಲ್ಲಿಯ ವಿದ್ಯೆ, ಸಾಹಿತ್ಯ, ಕಲಾಕೈಗಾರಿಕೆಗಳಿಗೆ ಉತ್ತೇಜನ ಕೊಟ್ಟಿವೆ. ಇಲ್ಲಿಯ ಕೋಟೆಯ ಪ್ರಾಕಾರದಲ್ಲಿ ನಾವು ಜೈನ, ವೀರಶೈವ ಮತ್ತು ವೈಷ್ಣವರ ವಿರಿಕೆಯ ಕುರುಹುಗಳನ್ನು ಕಾಣಬಹುದು. ಅನಂತರ ಬಂದ ಮುಸಲ್ಮಾನರ ಮತ್ತು ಕ್ರಿಸ್ತೀಯರ ಚಿಹ್ನಗಳೂ ಇಲ್ಲಿ ಸಿಗುತ್ತವೆ. ಆ ಕಾಲಕ್ಕೆ ಒಂದು ಸುಧಾರಣೆಯು ಮತ್ತೊಂದನ್ನು ಹತ್ತೊತ್ತಿರಬಹುದು. ಅಥವಾ ಒಂದು ಮತ್ತೊಂದರಿಂದ ಪೋಷಿತವೂ ಆಗಿರಬಹುದು ಒಟ್ಟಿನ ಮೇಲೆ ಕರ್ನಾಟಕ ಸಂಸ್ಕೃತಿಯೂ ಉಳಿದವುಗಳಂತೆ ಆ ಕಾಲಗಳಲ್ಲಿ ಕೆಲವು ರೀತಿಯಿಂದ ನಾಶವಾದರೆ ಕೆಲವು ರೀತಿಯಿಂದ ವೃದ್ಧಿಯಾಗಿದೆ.

ಸುದೈವದಿಂದ ನಾವು ಈಗ ಶಾಂತಕಾಲದಲ್ಲಿ ವಾಸಿಸುತ್ತಿದ್ದೇವೆ. ಈ ಕಾಲಕ್ಕೆ ನಾವು ನಮ್ಮ ಸಂಸ್ಕೃತಿಯನ್ನು ವೃದ್ಧಿಪಡಿಸುವದಕ್ಕಾಗಿ ಆತ್ಮಾರ್ಪಣೆ ಮಾಡಬಹುದು. ಈ ಸಂಸ್ಕೃತಿಯು ನಮ್ಮ ಭೌತಿಕ ಮತ್ತು ನೈತಿಕ ಕಲ್ಯಾಣವನ್ನುಂಟುಮಾಡುವದಾಗಿದೆ. ಇದು ಬೆಳೆಯ ಬೇಕಾದರೆ ಸಾಹಿತ್ಯವು ವೃದ್ಧಿಯಾಗಬೇಕಾದುದು ಅತ್ಯಂತಾವಶ್ಯಕವಾದುದೆಂದು ನಾನು ತಿಳಿಯುತ್ತೇನೆ.

ಸರಕಾರದ ಕಾರ್ಯಭಾಗದಲ್ಲಿ ನಾನು ಸಾಕಷ್ಟು ಕನ್ನಡ ಕಲಿಯುವದಾಗಲಿಲ್ಲ. ಆದರೂ ಕನ್ನಡಿಗರ ವಿಚಾರ ಮತ್ತು ಅವ್ರ

ಗಳನ್ನು ಹೊರಪಡಿಸುವ ರೀತಿಗಳನ್ನು ಇಂಗ್ಲೀಷಿನ ಮುಖಾಂತರ ಅರಿತುಕೊಂಡೆನು. ಕನ್ನಡವಾದರೂ ನವನರಿತ ಭಾಷೆಗಳಂತೆಯೇ ಉತ್ಸಾಹ ಪೂರ್ಣವಿರುವದೆಂದು ನಾನು ಭಾವಿಸುತ್ತೇನೆ. ಪ್ರಾಚೀನ ದ್ರಾವಿಡ ಭಾಷೆಗಳ ವಿಷಯವಾಗಿ ಇನ್ನೂ ಅಷ್ಟು ಸಂಶೋಧನೆಯಾಗಿಲ್ಲ ಆದರೂ ೧೯ ನೆಯ ಶತಮಾನದ ಪ್ರಾರಂಭದಿಂದ ಹಿಂದುಸ್ಥಾನದ ಭಾಷೆಗಳೆಲ್ಲವು ತಮ್ಮ ತಮ್ಮ ಸಂಸ್ಕೃತಿಯನ್ನು ಕಾಯ್ದುಕೊಳ್ಳಲು ಯತ್ನಿಸುತ್ತಲಿವೆ. ಇವುಗಳಲ್ಲಿ ಸಾಂಸ್ಕೃತಿಕ ಜೀವನವು ಬೆರೆತುಕೊಳ್ಳುತ್ತಲಿದೆ. ಈ ಭಾಷಾ ಭಗಿನಿಯರೆಲ್ಲ ಐಕ್ಯರೀತಿಯಿಂದ ನಡೆದು ಎಲ್ಲರ ಕಲ್ಯಾಣವಾಗಲೆಂದು ನಾನು ಹಾರೈಸುತ್ತೇನೆ.

ಮಹನೀಯರೆ, ಮಹಿಳೆಯರೆ, ಇನ್ನು ಈ ಸಮ್ಮೇಲನವು ಪ್ರಾರಂಭಿಸಲ್ಪಟ್ಟಿತೆಂದು ನಾನು ವ್ಯಕ್ತಪಡಿಸಿ ಇದು ಇಲ್ಲಿ ಸೇರಿದುದು ಅಮೂಲ್ಯ ಫಲಪ್ರದವಾಗಲೆಂದು ಅಂತಃಕರಣಪೂರ್ವಕವಾಗಿ ಇಚ್ಛಿಸುತ್ತೇನೆ

ಸಮ್ಮೇಲನದ ಅಧ್ಯಕ್ಷರ ಆಗಮನ

೨೦ ನೆಯ ಕರ್ನಾಟಕ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾದ ಶ್ರೀಮಾನ್ ಪಂಜೆ ಮಂಗೇಶರಾಯರು ತಮ್ಮ ಪರಿವಾರದೊಂದಿಗೆ ತಾ|| ೨೭ ನೆಯ ದಿವಸ ದಯಮಾಡಿಸಿದರು. ಆ ದಿನವೇ ಅನೇಕ ಪ್ರಸಿದ್ಧ ಸಾಹಿತಿಗಳೂ ಸಾಹಿತ್ಯಾಭಿಮಾನಿಗಳೂ ಆಗಮಿಸಿದರು. ಸಾಯಂಕಾಲ ೫ ಗಂಟೆಯಿಂದ ಅಧ್ಯಕ್ಷ ಮಹಾಶಯರ ಮತ್ತು ಇತರ ಪ್ರಮುಖರ ಮೆರವಣಿಗೆಯು ಬಹು ವಿಜೃಂಭಣೆಯಿಂದ ಜರುಗಿತು.

ಆ ಸಮಯಕ್ಕೆ ಶ್ರೀಯುತರುಗಳಾದ ಬಿ. ಎಂ. ಶ್ರೀಕಂಠಯ್ಯನವರು, ಬಿ. ರಾಮರಾಯರು, ಡಿ ವಿ ಗುಂಡಪ್ಪನವರು, ವಿ ಕೆ ಗೋಕಾಕರು, ವೆಂಕಣ್ಣಯ್ಯನವರು, ಮಂಡ್ಯದ ಮುನಸೀಫರಾದ ರುದ್ರಪ್ಪನವರು, ಆಲೂರು ವೆಂಕಟರಾಯರು, ಹರ್ಡೇಕರ ಮಂಜಪ್ಪನವರು, ಗದಗಿನ ಬಳ್ಳಾರಿ ವೀರಭದ್ರಪ್ಪನವರು, ರಾಜಪುರೋಹಿತರು, ಹುಬ್ಬಳ್ಳಿ ಮಿರ್ಜಿಯವರು, ದಾವಣಗೆರೆ ಮಲ್ಲಭದ್ರಪ್ಪನವರು, ಮುದವೀಡು ಕೃಷ್ಣರಾಯರು ಮೊದಲಾದ ಪ್ರಮುಖರು ಆಗಮಿಸಿದ್ದರು.

ಪತ್ರಗಳ ಸಾರಾಂಶ.

ಶ್ರೀ ಆನಂದಕವಿಗಳು ಕುರುಗುಂದ ಮತ್ತು ಶ್ರೀ ಅನ್ನದಾನೀಶ್ವರ ವಿರಕ್ತಮಠ ಇವರು ಹುಬ್ಬಳ್ಳಿಯ 'ಹರಿಜನ ಸಂಸ್ಥೆ' ಯನ್ನು ನೋಡಿಕೊಂಡು ಹೊಸಪೇಟೆಯ ಮಾರ್ಗವಾಗಿ ರಾಯಚೂರು ಸಾಹಿತ್ಯ ಸಮ್ಮೇಲನಕ್ಕೆ ಹೋಗಿದ್ದರು. ಶ್ರೀ ಆನಂದಕವಿಗಳು ತಮ್ಮ ಕವನಗಳಿಂದ ಎಲ್ಲರನ್ನು ಸಂತೋಷಪಡಿಸಿದರು. ಶ್ರೀ ಅನ್ನದಾನೀಶ್ವರರು ಜೀವದಯಾ ಸಂಘದಬಗ್ಗೆ ಪ್ರಕಟನೆಗಳನ್ನು ಹಂಚಿದರು.

ಮುದ್ದೇಬಿಹಾಳದ ಹೊಸಮಠದಲ್ಲಿ ಶ್ರೀ ವೀರಯ್ಯ ಶಾಸ್ತ್ರಿಗಳು ಶ್ರೀ ಶಿವಯೋಗಮಂದಿರದಿಂದ ಆಜ್ಞಾಪಿತರಾಗಿ ಬಂದು ಭಕ್ತಿ, ಜ್ಞಾನ, ವೈರಾಗ್ಯ, ಅಷ್ಟಾವರಣ, ಪಾತಿವ್ರತ್ಯ ಮೊದಲಾದವುಗಳ ಬಗ್ಗೆ ಚನ್ನಾಗಿ ಕೀರ್ತನ ಮಾಡಿದರು.

ವಿಜಾಪುರ ಜಿಲ್ಲಾ ಸಹಕಾರಿ ಪರಿಷತ್ತು ಕೆಲವು ಅನಾನುಕೂಲತೆಗಳ ಮೂಲಕ ವಿಜಾಪುರದ ಟೌನ್ ಹಾಲಿನಲ್ಲಿ ಕೂಡದೆ ಸಿದ್ಧೇಶ್ವರ ಹಾಯಸ್ಕೂಲಿನಲ್ಲಿ ಕೂಡುವದು.

ವರ್ತಮಾನ ಸಾರ.

—ಕಳೆದ ತಿಂಗಳ ೩೧ ನೆಯ ತಾರೀಖಿಗೆ ಜಮಖಂಡಿಯಲ್ಲಿ ೫೦ ಮೈಲಿನ ಕಾಲುಗಾಡಿಯ ಜಿದ್ದು ಇಡಲ್ಪಟ್ಟಿತ್ತು. ಭಾಗವಹಿಸಿ ಕೊಂಡವರ ಜನರಲ್ಲಿ ಅಥಣಿಯ ಶ್ರೀ ದೇವಪ್ಪ ನರವಟೆ ಎಂಬುವವರು ಪ್ರಥಮರು ಬಂದರು.

—ಅಂಗೋಲಾದಲ್ಲಿ ಭಯಂಕರ ಬಿರುಗಾಳಿಯಿದ್ದು ಸಿಡಿಲಿನ ಹೊಡೆತದಿಂದ ನೂರಾರು ವರ್ಷಗಳ ಪೂರ್ವದ ಒಂದು ಹಳೆಯ ಮರವು ಬೇರೊಡನೆ ಕಿತ್ತುಬಿದ್ದಿತು. ಅದೇ ಕಾಲಕ್ಕೆ ಒಂದು ಮೋಟಾರು ಅದರ ಕೆಳಕ್ಕೆ ಸಿಕ್ಕು ಪುಡಿಪುಡಿಯಾಯಿತು. ಮೋಟಾರಿನ ಮೂವರು ಯರೋಪಿಯನ್ನರು ಸತ್ತರು. ಡ್ರಾಯವ್ಹರನು ದಿಙ್ಮೂಢನಾಗಿ ನಿಂತುಬಿಟ್ಟನು.

—ಜರ್ಮನಿಯ ಅಧ್ಯಕ್ಷರಾದ ಹೇರಹಿಟ್ಲರರು ಹೊಸ ವರ್ಷದ ದಿನ "ಸಾರ ಪ್ರಾಂತದವರೆಲ್ಲ ಈ ದಿನ ನಾವೆಲ್ಲ ಜರ್ಮನರೆಂದು ಹೇಳಲಿ! ೧೫ ತಿಂಗಳ ಪೂರ್ವದಕಿಂತಲೂ ನಾಝಿಗಳು ಈಗ ಬಲಿಷ್ಠರಾಗಿದ್ದಾರೆ. ನಾವು ಸಮಾನದಿಂದಲೂ ಶಾಂತತೆಯಿಂದಲೂ ಜೀವಿಸಬೇಕೆಂದೇ ಬಯಸುತ್ತೇವೆ. ದೇವರ ದಯೆಯಿಂದ ನಮ್ಮ ಕರ್ತವ್ಯವು ನಮಗೆ ದಿನದ ರೊಟ್ಟಿಯನ್ನು ತಾನೇ ಕೊಡುವದು." ಎಂದು ಹೇಳಿದರು.

—ಕಾಠಿಯಾವಾಡದಲ್ಲಿ ಶ್ರೀ ವಲ್ಲಭಭಾಯಿ ಪಟೇಲರು ತಮ್ಮ ಹಿರಿಯ ಅಣ್ಣಂದಿರಾದ ಶ್ರೀ ವಿಠ್ಠಲಭಾಯಿಯವರ ಭಾವಚಿತ್ರದ ಅನಾವರಣ ಸಮಾರಂಭವನ್ನು ನೆರವೇರಿಸುವಾಗ್ಗೆ— "ನನ್ನ ಬಂಧು [illegible] ಅದರೆ ನಾನು [illegible] ಹೊಂದಿ ಅವರ ಅಂತ್ಯ ಸಂಸ್ಕಾರಮಾಡಿದರೆ ಅವರ [illegible] ಕುಂದುಬರುವದೆಂದೇ ನಾನು ಹಾಗೆ ಮಾಡಲಿಲ್ಲವೆಂದು" ಹೇಳಿದರು.

—ಲಾಹೋರದಲ್ಲಿ ಹಿಂದುಸಭೆಯ ಕಾರ್ಯಕಾರಿಮಂಡಳವು ಕೂಡಿ ಸಣ್ಣ [illegible] ಗ್ರಾಮಗಳಲ್ಲಿಯೂ ಹಿಂದುಸಂಘಗಳನ್ನು [illegible] ಮತ್ತು ಒಂದು ದೈನಿಕ ಹಿಂದೀಪತ್ರವನ್ನು ಕೂಡಲೆ ಪ್ರಾರಂಭಿಸ [illegible] ಯೂ ನಿರ್ಣಯಿಸಿತು.

—[illegible] ಪುರದ (ಸಂಯುಕ್ತ ಪ್ರಾಂತ) ಪೋಲೀಸ [illegible] ದ ಮಿ. ಅಂಡ್ರ್ಯೂ ಜಾರ್ಜ ಕ್ರೆಫರ್ಡ ಎಂಬುವವನನ್ನು ಅವರ ಸೇವಕನು ಗುಂಡ ಹಾಕಿ ಕೊಂದನು.

—ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರವರು ಮುಂಬಯಿ [illegible] ಕಾಂಗ್ರೆಸ್ ಕಮಿಟಿಯ ಸದಸ್ಯತ್ವವನ್ನು ಬಿಟ್ಟುಕೊಟ್ಟಿದ್ದಾರೆ.

—ಬಂಗಾಲ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಪದವನ್ನು ಶ್ರೀ ಬಿಧನಚಂದ್ರರಾಯರವರು ಬಿಟ್ಟುಕೊಟ್ಟರು. ಯಾವುದೊಂದು ಕಾರ್ಯಮಾಡಬೇಕಾದರೆ ಸಂಪೂರ್ಣವಾಗಿ ಅದರಲ್ಲಿಯೇ ತೊಡಗಬೇಕಾಗುವುದರಿಂದ ಇದು ತಮಗೆ ಶಕ್ಯವಿಲ್ಲವೆಂದು ಅವರು ಅಂದರು.

—ನಾಗಪುರ ನಗರಸಭೆಯ ಕಾರ್ಯದರ್ಶಿಗಳಾದ ಶ್ರೀ ಚೌಬೆ ಎಂಬವರ ಮಗಳು ಕ್ರಿಸ್ತೀ ಧರ್ಮಕ್ಕೆ ಸೇರಿದ್ದಳು. ಅವಳನ್ನು ಶುದ್ಧೀಕರಿಸಿ ಮೋಹಿನಿ ಎಂಬ ಹೆಸರಿಡಲಾಯಿತು. ಅವಳನ್ನು ಶ್ರೀ ಜಗರಾವ ನಾಯುಡು ಎಂಬುವವರು ವಿವಾಹವಾದರು.

—ಮುಂಬಯಿ ಚರ್ಚಗೇಟಸ್ಟೇಶನ್ನಿನಲ್ಲಿ ಒಂದು ಪೆಟ್ಟಿಗೆಯನ್ನು ಯಾರೋ ಬಿಟ್ಟುಹೋಗಿದ್ದರು. ಅದನ್ನು ಒಡೆದು ನೋಡಲು ಒಳಗೆ ಅದೇ ಜನ್ಮಿಸಿದ ಒಂದು ಕೂಸು ಇಡಲ್ಪಟ್ಟಿತ್ತು. ಅದರ ಸುತ್ತಲೂ ಕಟ್ಟಿಗೆಯ ಪುಡಿ ಮತ್ತು ಅರಳೆ ಹಾಕಿದಿತು. ಪೋಲೀಸರು ಶೋಧ ನಡೆಸಿದ್ದಾರೆ.

—ಗಡಿನಾಡಿನ ಗಾಂಧಿಯವರ ಅಣ್ಣಂದಿರಾದ ಡಾ. ಖಾನ ಸಾಹೇಬರ ನಿರ್ಬಂಧವನ್ನು ತೆಗೆಯಲಾಗಿದೆ. ಇನ್ನು [illegible] ಕೂಡಲೆ ತಮ್ಮ ಗಡಿನಾಡಿನ ಪ್ರಾಂತಕ್ಕೆ ಹೋಗುವರಂತೆ.

—ಜಪಾನವು ತುರ್ಕಸ್ಥಾನದ ಹತ್ತಿ, ತಂಬಾಕು ಮೊದಲಾದ ಅಶುದ್ಧ ಸರಕುಗಳನ್ನು ತೆಗೆದುಕೊಂಡು ಅವಕ್ಕೆ ಪ್ರತಿಯಾಗಿ ತಾನು ಸಿದ್ಧಪಡಿಸಿದ ಸರಕುಗಳನ್ನು ಕೊಡಬೇಕೆಂದು [illegible] ಕೊಂಡಿದೆ.

—ಅಲಹಾಬಾದ ಜಿಲ್ಲೆಯ ಒಂದು ಸಂಸ್ಥಾನದಲ್ಲಿ ಪುರಾತನ ಕಾಲದ ಒಂದು ಆನೆಯ ಎಲುವಿನ ಹಂದರವು ದೊರೆತಿದೆ. ಅದು ಒಂದು ಲಕ್ಷ ವರ್ಷ ಪೂರ್ವದ್ದೆಂದು ತರ್ಕಿಸಲಾಗಿದೆ. ಈ ಪ್ರಚಂಡ ಗಜದ ಹಲ್ಲುಗಳೇ ೧೨ ಅಡಿಗಿಂತಲೂ ಉದ್ದವಿರುತ್ತವೆ. ಅಂದಮೇಲೆ ಅದರ ಶರೀರವೆಂಥದಿರಬೇಕು! ಇದನ್ನು ಆ ಸಂಸ್ಥಾನಿಕರು ಕಾಶೀ ವಿಶ್ವವಿದ್ಯಾಲಯಕ್ಕೆ ಸಂಶೋಧನೆಗಾಗಿ ಕಳಿಸಿಕೊಟ್ಟಿದ್ದಾರೆ.

—ನಂಗಾಪರ್ವತವನ್ನು ಏರುವ ಕೆಲಜನ ಜರ್ಮನರಲ್ಲಿ ಒಬ್ಬರಾಗಿದ್ದ ಹರ್ ವಾಲ್ಟರ ರೇಶಿ ಎಂಬುವವರು ಬವೇರಿಯಾದಲ್ಲಿ ಒಂದು ಪರ್ವತದ ಮೇಲಿಂದ ಕೆಳಕ್ಕುರುಳಿ ಮೃತರಾದರು.

—ಲಂಡನ್ನಿನಿಂದ ಭಯಂಕರ ವೇಗದಲ್ಲಿ ಹೋಗುತ್ತಿದ್ದ ಎಕ್ಸಪ್ರೆಸ್ ಉಗಿಬಂಡಿಯು ಉಗಿಯು ಹೆಚ್ಚಾಗಿ ಡ್ರಾಯವ್ಹರನ ಕೈ ಮೀರಿತು. ಬ್ರೇಕು ತಪ್ಪವಾದುದರಿಂದ ಡ್ರಾಯವ್ಹರನು ಹಿಡಿಯದಾದನು. ಆದರೆ ಅವನು ಎಲ್ಲರ ಸುರಕ್ಷಿತೆಯನ್ನು ನೆನಿಸಿ ತನ್ನ ಗಂಡಾಂತರವನ್ನು ಲಕ್ಷಿಸದೆ ಧೈರ್ಯದಿಂದ ಬಂಡಿಯನ್ನು ನಿಲ್ಲಿಸಿದನು. ಎಲ್ಲರೂ ಪಾರಾದರು. ಅವನು ಈಗ ಆಸ್ಪತ್ರೆಯಲ್ಲಿದ್ದಾನೆ.

—ನಿಜಾಮ ಸರಕಾರದವರು ಟಾಟಾ ವಿಮಾನ ಕಂಪನಿಯೊಡನೆ ಅಂಚೆಯ ವಿಮಾನವು ಮುಂಬಯಿಯಿಂದ ಮದ್ರಾಸಕ್ಕೆ ಹೋಗುವಾಗ್ಗೆ ಹೈದರಾಬಾದಕ್ಕೆ ಇಳಿಯಬೇಕೆಂದು ಗೊತ್ತುಮಾಡಿಕೊಂಡಿದ್ದಾರೆ. ಆದುದರಿಂದ ಆ ವಿಮಾನವು ಇನ್ನು ಬಳ್ಳಾರಿಗೆ ಬರುವದಿಲ್ಲ.

—ನಾಗಪುರದ ಸುಪ್ರಸಿದ್ಧ ರಾಷ್ಟ್ರೀಯ ಮುಂದಾಳುಗಳಾದ ಶ್ರೀ ಅಭ್ಯಂಕರರು ನಿಧನ ಹೊಂದಿದರು. ಇವರು ಮೊನ್ನಿನ ಚುನಾವಣೆಯಲ್ಲಿ ಡಾ. ಮುಂಜೆಯವರನ್ನು ಸೋಲಿಸಿ ಕೇಂದ್ರ ಶಾಸನ ಸಭೆಯ ಸದಸ್ಯರಾಗಿದ್ದರು.

—ಶ್ರೀ ದಿವಾಕರ ರಂಗರಾಯರೂ ಮತ್ತು ಶ್ರೀ ದೇಶಪಾಂಡೆ ಗಂಗಾಧರರಾಯರೂ ಕೂಡಿ ಕಾರವಾರ ಜಿಲ್ಲೆಯ ರೈತಬಾಂಧವರ ಉದ್ಧಾರಾರ್ಥವಾಗಿ ೨ ಲಕ್ಷ ರೂ. ಗಳ ಅವಶ್ಯಕತೆ ಇದೆಯೆಂಬ ಪ್ರಕಟನೆ ಹೊರಡಿಸಿದ್ದಾರೆ.

—ಸಾರಪ್ರಾಂತದ ಚುನಾವಣೆಗಾಗಿ ಒಂದು ಲಕ್ಷ ಪೌಂಡು ವೆಚ್ಚವಾಗುವದು.

—ಗುಜರಾಥ ವಿದ್ಯಾಪೀಠವನ್ನು ಪುನಃ ಪ್ರಾರಂಭಿಸಬೇಕೆಂದು ಅದರ ಪೂರ್ವದ ಸ್ಥಾಪಕರು ಸರದಾರ ವಲ್ಲಭಭಾಯಿಯವರಿಗೆ ವಿನಂತಿಮಾಡಿಕೊಂಡಿದ್ದಾರೆ. ಅದರ ಬಗ್ಗೆ ಆಲೋಚನೆಯಾಗಿ ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಅದು ಶಕ್ಯವಿಲ್ಲವೆಂದು ತಿಳಿಸಲಾಗಿದೆ.

—ಕೆಲ ದಿನಗಳ ಹಿಂದೆ ಅನಟೋಲಿಯಾದಲ್ಲಿ ಆದ ಭೂಕಂಪದ ಆಘಾತವು ಹಿಮಾಲಯ ಪರ್ವತಗಳಿರದಿದ್ದರೆ ಉತ್ತರಹಿಂದುಸ್ಥಾನದಲ್ಲಿಯೇ ಆಗುತ್ತಿತ್ತು. ಹಿಂದುಸ್ಥಾನವು ಒಂದು ದೊಡ್ಡ ಕುತ್ತಿನಿಂದ ಪಾರಾಯಿತೆಂದು ಕಾಬುಲ [illegible] ಹೇಳಿದೆ.

ವಿ ವಿ ಧ ವಿ ಷ ಯ.

ಮುಂಬಯಿಯಲ್ಲಾಗುವ ಅಪಘಾತಗಳು.

ಕಿದ ವರ್ಷದಲ್ಲಿ ಮುಂಬಯಿಯಲ್ಲಿ ಉಂಟಾದ ಆಕಸ್ಮಿಕಗಳನ್ನು ಮುಂಬಯಿ ಪೋಲೀಸರು ಈ ಪ್ರಕಾರವಾಗಿ ಪ್ರಸಿದ್ಧಿಸಿದ್ದಾರಿ— ಹೋದ ವರ್ಷ ಮುಂಬಯಿಯಲ್ಲಿ ೪೦೦೦ ಅಪಘಾತಗಳಾದವು. ಇವುಗಳಲ್ಲಿ ಎಲ್ಲಕ್ಕೂ ಹೆಚ್ಚು ಅಪಘಾತಗಳು ಕ್ವೀನ್ಸರೋಡ ಮತ್ತು ಹಾರ್ನಬರೋಡಿನಲ್ಲಿ ಆಗುತ್ತವೆ. ಅವುಗಳಲ್ಲಿ ಸರಿಯಾಗಿ ೧೩೩ ಅಪಾಯಗಳಾಗಿವೆ. ಅವುಗಳ ತರುವಾಯ ಕಾಲಬಾದೇವಿ, ಭುಲೇಶ್ವರ, ಗಿರಗಾಂವ, ಠಾಕುರದ್ವಾರ, ಲ್ಯಾಮಿಂಗ್ಟನ್ ರೋಡ, ಗ್ರ್ಯಾಂಟರೋಡ ಓಣಿಗಳಲ್ಲಿ ಅಪಘಾತದ ಸಂಖ್ಯೆಯು ಇಳಿಯುತ್ತ ಬಂದಿದೆ. ಈ ಎಲ್ಲ ಅಪಘಾತಗಳಲ್ಲಿ ಒಟ್ಟಿಗೆ ೭೦ ಜನರು ಸತ್ತರು.

ಮುಂಬಯಿಯಲ್ಲಿ ಒಟ್ಟಿಗೆ ೧೧೩೦೦ ಮೋಟಾರುಗಳಿವೆ. ಇವು ಒಂದಕ್ಕೊಂದು ಹಾಯುವದರಿಂದ ಇಲ್ಲವೆ ಮೋಟಾರುಗಳು ವ್ಹಿಕ್ಟೋರಿಯಾಗಳಿಗೆ ತಗಲುವದರಿಂದ ಅಪಘಾತಗಳಾಗುತ್ತವೆ. ಈ ಪ್ರಕಾರ ಮೋಟಾರುಗಳು ಎದುರಿನ ಮೋಟಾರಿಗೆ ಹಾಯ್ದು ೫೨೩ ಅಪಘಾತಗಳೂ ವ್ಹಿಕ್ಟೋರಿಯಾಗಳಿಗೆ ಅಪ್ಪಳಿಸಿ ೪೧೩ ಟ್ರಾಮಿಗೆ ಬಡಿದು ೪೧೩ ಮತ್ತು ಸಾಯಕಲ್ಲುಗಳಿಗೆ ಹೊಡೆದು ೩೭೫ ಅಪಘಾತಗಳಾಗಿವೆ.

ಅಂಚೆಯ ಸೌಕರ್ಯ

ಉತ್ತರ ಹೊಂದುವ ಬಗ್ಗೆ ಅನುಕೂಲತೆ.

ನಾವು ಬರೆಯುವ ಪತ್ರಕ್ಕೆ ಉತ್ತರ ಬೇಕಾದರೆ ಡಬಲ್ ಕಾರ್ಡಿನಲ್ಲಿ ಬರೆಯುವದುಂಟು ಇಲ್ಲವೆ ಪಾಕೀಟಿನಲ್ಲಿ ಟಿಕೀಟು ಕಳಿಸುವದುಂಟು. ಈ ರೀತಿಯಲ್ಲಿ ಸ್ವಲ್ಪ ಅನನುಕೂಲತೆಯಾಗುತ್ತದೆ. ಟಿಕೀಟು ಕಳಿಸಿದ ಮೇಲೆ ಉತ್ತರ ಬಂದರಂತೂ ಸರಿಯೆ; ಒಂದು ವೇಳೆ ಉತ್ತರ ಕೊಡದೆ ಹೋದರೆ ನಾವು ಕಳಿಸಿದ ಟಿಕೀಟು ಸುಮ್ಮನೆ ವೆಚ್ಚವಾದಂತಾಗುವದು. ಈ ರೀತಿಯಿಂದಲೇ ವ್ಯವಹಾರ ಮಾಡಲಿರುವವರಿಗೆ ಇದೊಂದು ದೊಡ್ಡ ಹಾನಿಯೇ ಆಗುತ್ತದೆ. ಇದನ್ನು ತಪ್ಪಿಸುವದಕ್ಕಾಗಿ "ಬಿಝಿನೆಸ್ ರಿಪ್ಲಾಯ ಕಾರ್ಡ ಮತ್ತು ಬಿಝಿನೆಸ್ ರಿಪ್ಲಾಯ ಎನವ್ಹಲಪ್" ಎಂಬವುಗಳ ಅನುಕೂಲತೆಯನ್ನು ಅಂಚೀ ಶಾಖೆಯವರು ಮಾಡಿದ್ದಾರೆ.

"ಈ ಬಿಝಿನೆಸ್ ರಿಪ್ಲಾಯ ಕಾರ್ಡ, ಎನವ್ಹಲಪ" ಗಳಿಗೆ ನಾವು ಯಾರಿಂದ ಉತ್ತರ ಬಯಸುತ್ತೀವೆಯೋ ಅವರಿಗೆ ಟಿಕೀಟು ಕಳಿಸಬೇಕಾಗಿಲ್ಲ. ಒಂದುವೇಳೆ ಅವರು ಇವುಗಳಲ್ಲಿ ಉತ್ತರ ಬರೆದರೆ ಸ್ವೀಕರಿಸುವವನಿಗೆ ನಾಟ ಪೇಡ ಎಂದು ಇಮ್ಮಡಿ ಚಾರ್ಜ ಕೊಡಬೇಕಾಗಿಲ್ಲ. ಈ ತರಹದ ಸೌಕರ್ಯ ಪಡೆಯ ಬಯಸುವವನು ತನ್ನ ಪತ್ರಗಳು ದೊರೆಯುವ ಪೋಸ್ಟಿನ ಮಾಸ್ತರನ ಕಡೆಗೆ ಅರ್ಜಿ ಮಾಡಬೇಕು. ಅರ್ಜಿಯ ಸಂಗಡ ೧೦ ರೂ. ವಿಶ್ವಾಸ ಧನವೆಂದ ವರುಷ ವರುಷಕ್ಕೆ ತುಂಬಬೇಕು ನಂತರ ಅವನಿಗೆ ಪೋಸ್ಟಮಾಸ್ತರ ಜನರಲ್ಲರ ಕಡೆಯಿಂದ ಅಪ್ಪಣೆ ದೊರೆಯುತ್ತದೆ. ವ್ಯಾಪಾರಿಯು ಈ ಸೌಕರ್ಯ ದೊರೆತ ಮೇಲೆ ತಾನು ಬರೆಯುವ ಕಾರ್ಡು ಪಾಕೀಟುಗಳ ಮೇಲೆ "ಬಿಝಿನೆಸ್ ರಿಪ್ಲಾಯ ಕಾರ್ಡು ಅಥವಾ ಬಿಝಿನೆಸ್ ರಿಪ್ಲಾಯ ಎನವ್ಹಲಪ್" ಎಂಬ ಶಬ್ದಗಳನ್ನು ಮುದ್ರಿಸಬೇಕು ಅಥವಾ ಬರೆಯಬೇಕು. ಹಾಗೆಯೇ ಅದರ ಮೇಲೆ ತನಗೆ ಅಪ್ಪಣೆ ದೊರೆತ ನಂಬರ ಮತ್ತು ಆ ನಂಬರ ದೊರೆತ ಅಂಚೀಕಟ್ಟೆಯ ಹೆಸರು ಮತ್ತು ಮುದ್ರಿತ ಅಕ್ಷರಗಳಲ್ಲಿ ನಂಬರ ಸ್ವೀಕರಿಸಿದವನ ಹೆಸರು ಮತ್ತು ವಿಳಾಸಗಳಿರಬೇಕು "ಅಂಚೀವೆಚ್ಚವನ್ನು ಡಿಲಿವ್ಹರಿ ಸ್ವೀಕರಿಸುವವನು ಕೊಡುವನು" ಎಂಬ ಅಕ್ಷರಗಳೂ ಇರಬೇಕು.

"ಈ ಬಿಝಿನೆಸ್ ರಿಪ್ಲಾಯ" ಕಾರ್ಡು ಪಾಕೀಟುಗಳನ್ನು ಮತ್ತೊಂದು ಪಾಕೀಟಿನಲ್ಲಿಟ್ಟು ಕಳಿಸಬೇಕಷ್ಟೆ. ಕಾರ್ಡನ್ನು ಬೇಕಾದರೆ ಡಬಲ್ ಕಾರ್ಡಿನಂತೆಯೂ ಮಾಡಿಕೊಳ್ಳಬಹುದು. ಆದರೆ ತಾನು ಯಾರಿಗೆ ಬರೆಯುತ್ತಾನೋ ಅವರಿಗೆ ತಕ್ಕ ಟಿಕೀಟುಗಳನ್ನು ಹಚ್ಚಲೇಬೇಕು. ಮತ್ತು ತನ ತಿರುಗಿ ಉತ್ತರ ಬಂದಾಗ್ಗೆ ಆ ರಿಪ್ಲಾಯ ಕಾರ್ಡಿನ ಅಥವಾ ಪಾಕೀಟಿನ ವೆಚ್ಚವನ್ನು ಕೊಡದಿದ್ದರೆ ಅವನಿಗೆ ದೊರೆತ ಸೌಕರ್ಯವನ್ನು ನಿಲ್ಲಿಸಲಾಗುವದು.

ಈ ಯೋಜನೆಯು ಕೇವಲ ಕಾರ್ಡು ಪಾಕೀಟುಗಳಿಗಷ್ಟೇ ಅನ್ವಯಿಸುತ್ತದೆ. ಬುಕ್ಕ ಪಾಕೀಟಿಗೆ ಅನ್ವಯಿಸುವದಿಲ್ಲ.

ಖಾದಿ ಅಂದರೆ ಜೀವನದ ಕ್ರಾಂತಿ

ಶ್ರೀ. ಸರೋಜಿನಿ ನಾಯಿಡು ಇವರು ಹೈದರಾಬಾದ (ಸಿಂಧ)ಕ್ಕೆ ಹೋದಾಗ್ಗೆ ರಾಷ್ಟ್ರಧ್ವಜಾರೋಹಣ ಸಮಾರಂಭವು ಜರುಗಿತು. ಆವಾಗ್ಗೆ ದೇವಿಯವರು—"ಈ ಧ್ವಜದಡಿಯಲ್ಲಿ ಸಾವಿರಾರು ರಾಷ್ಟ್ರಸೈನಿಕರು ಪ್ರೇಮ ಮತ್ತು ತ್ಯಾಗಗಳ ಶಸ್ತ್ರಗಳಿಂದ ಮಹಾತ್ಮಾಜಿಯ ಆಜ್ಞೆಯಂತೆ ಸಿದ್ಧರಾಗಿರುವರು. ಅವರು ಸಶಕ್ತರಿರಬಹುದು; ಅಶಕ್ತರಿರಬಹುದು. ಅವರೆಲ್ಲರಿಗೂ ಈ ಧ್ವಜವು ಪೂಜಾರ್ಹವಾದ, ದೇಶದ ಸನ್ಮಾನನೀಯ ಸೊತ್ತಾಗಿದೆ.

ಸದ್ಯದ ವಿಮಾನಯುಗದಲ್ಲಿ ಮಹಾತ್ಮಾಜಿಯವರು ನಮ್ಮನ್ನು ಎತ್ತಿನ ಬಂಡಿಯ ಕಡೆಗೆ ಸಾಗಿಸುತ್ತಿದ್ದಾರೆ. ಜೀರ್ಣೋದ್ಧಾರ ಮಾಡಬೇಕೆಂಬ ಉತ್ಕಟೇಚ್ಛೆಯು ದಶದಿಶೆಗಳಲ್ಲೂ ಹಬ್ಬುತ್ತಲಿದೆ. ಆ ಇಚ್ಛೆಗೆ ಮೂರ್ತಸ್ವರೂಪವನ್ನು ಕೊಡುವದಕ್ಕಾಗಿಯೇ ಗಾಂಧಿಜಿಯವರು ಗ್ರಾಮೋದ್ಯೋಗಸಂಘವನ್ನು ಸ್ಥಾಪಿಸಿರುವರು ಗ್ರಾಮಜೀವನವೇ ರಾಷ್ಟ್ರೀಯ ಜೀವನದ ಪ್ರಾಣವು.

ಸ್ವತಃ ನಾನು ಸೊಗಸು ಬಯಸುವ ಸ್ತ್ರೀಯಳು. ಆದರೆ ನಾನೂ ಖಾದಿ ಧರಿಸುತ್ತೇನೆ. ಯಾಕಂದರೆ ಖಾದಿಯು ರಾಷ್ಟ್ರೀಯ ಸಂಸ್ಕೃತಿಯಾಗಿದೆ. ಖಾದಿಯು ತಕ್ಷಕಲೆ, ಸಂಗೀತ, ಮಾತೃಭಾಷೆಗಳ ಉದ್ದೀಪಕವಾಗಿದೆ. ಇಷ್ಟೇ ಅಲ್ಲ ಖಾದಿಯು ಜೀವನದ ಕ್ರಾಂತಿಯಾಗಿದೆ. ರಾಟಿಯೇ ರಾಷ್ಟ್ರೀಯ ಜೀವನಕ್ಕೆ ಆಧಾರವು." ಎಂದು ಹೇಳಿದರು.

ರಾಷ್ಟ್ರೀಯ ಕ್ರಿಸ್ತೀಯರ ಅಭಿವಚನ.

ರಾಷ್ಟ್ರೀಯ ಕ್ರಿಸ್ತೀಯರ ಕಾರ್ಯದರ್ಶಿಯು ತಿಳಿಸಿರುವದೇನಂದರೆ- ಮ್ಯಾಕಡೋನಾಲ್ಡ ಸಾಹೇಬರು ಜಾತಿನಿರ್ಣಯವೆಂಬ ಒಂದು ಮಾಯೆಯನ್ನು ಪಸರಿಸಿರುವರು. ಇದರಿಂದ ಜಾತೀಯತ್ವವು ಬಲವಾಗಿ ರಾಷ್ಟ್ರೀಯತ್ವವು ನಿರ್ಬಲವಾಗುವದು. ಆದರೆ ಈ ಜಾತೀಯ ಪ್ರಶ್ನೆಗಳನ್ನು ಬಿಡಿಸಲು ಸರ್ವ ಪಕ್ಷೀಯ ಪರಿಷತ್ತು ಮಾತ್ರ ಸಮರ್ಥವಾದುದೆಂದು ರಾಷ್ಟ್ರೀಯ ಕ್ರಿಸ್ತೀಯರಾದ ನಾವು ತಿಳಿಯುತ್ತೇವೆ. ಎಲ್ಲ ಜಾತಿಗಳಲ್ಲಿ ಐಕ್ಯವೂ ಶಾಂತತೆಯೂ ಇರುವುದೇ ಉತ್ಕರ್ಷದ ಸಾಧನವಾಗಿದೆ ನಮ್ಮ ಈ ಸಂಘವು ಜಾತೀಯ ನಿರ್ಣಯವನ್ನು ನಿಷೇಧಿಸುವದಲ್ಲದೆ ಸಂಯುಕ್ತ ಮತದಾರ ಪದ್ಧತಿಗೆ ಬೆಂಬಲವಾಗಲು ಸಿದ್ಧವಿರುವದು.

ಪ್ಲೇಗಸಂಜೀವಿನಿ ಔಷಧವನ್ನೇ ಕೊಳ್ಳಿರಿ!

ಗುಳೇದಗುಡ್ಡದ ಮಹಾಜನರಿಂದಃ-

ಪ್ರಶಸ್ತಿ ಪತ್ರಿಕೆ.

ಪ್ಲೇಗ ಸಂಜೀವಿನಿ ಔಷಧದ ಏಜಂಟ
ರಾ|| ರಾ|| ಬಶೆಟ್ಟೆಪ್ಪ ಬಸಪ್ಪ ಹಲಕುರ್ಕಿ ಬಾಗಲ
ಕೋಟೆ ಇವರಿಗೆ—

—ಈ ಕೆಳಗೆ ಸಹಿಮಾಡಿರುವ ಗುಳೇದಗುಡ್ಡದ ನಿವಾಸಿಗಳಾದ ನಾವು ಅತ್ಯಂತ ಸಂತೋಷದಿಂದ ಬರೆದುಕೊಡುವ ಸರ್ಟಿಫೀಕೇಟ ಏನಂದರೆ—

ನಮ್ಮ ಊರಲ್ಲಿ ಪ್ಲೇಗ ರೋಗ ಹಬ್ಬಿ ೩-೪ ತಿಂಗಳಾಯಿತು. ಈ ರೋಗ ನಿವಾರಣೆಗೆ ನೀವು ಪ್ರಚಾರಮಾಡಿದ "ಪ್ಲೇಗ ಸಂಜೀವಿನಿ" ಔಷಧವು ಬಹಳ ಗುಣಕಾರಿಯಾಯಿತು. ನಿಮ್ಮ ಔಷಧವನ್ನು ಇಲ್ಲಿ ೪೦-೫೦ ಜನರಿಗೆ ಕೊಟ್ಟದ್ದಾಯಿತು. ಎಲ್ಲರಿಗೂ ಗುಣಬಂದಿತು.

ಪ್ಲೇಗ ರೋಗ ಬಂದಕೂಡಲೇ ಔಷದ ಕೊಡುವದು ಮಾತ್ರ ಅಗತ್ಯ. ನೀವು ಈ ಔಷಧವನ್ನು ಇನ್ನೂ ಹೆಚ್ಚು ಪ್ರಚಾರ

ವಿಜ್ಞಾಪನಾ ಪತ್ರಿಕೆ.

ಸಮಸ್ತ ಜನರಿಗೆ ತಿಳಿಸುವದೇನಂದರೆ –

ಗುಳೇದಗುಡ್ಡದಲ್ಲಿ ಪ್ಲೇಗ ಇದ್ದಿತು ಪ್ಲೇಗ ಸಂಜೀವಿನಿ ಎಂಬ ಔಷಧಿಯನ್ನು ಬಾಗಲಕೋಟೆಯ ರಾ|| ಬಶೆಟ್ಟೆಪ್ಪ ಬಸಪ್ಪ ಹಲಕುರ್ಕಿ ಏಜಂಟ ಪ್ಲೇಗ ಸಂಜೀವಿನಿ ಇವರು ಇಲ್ಲಿ ತಂದು ಪ್ರಚಾರ ಮಾಡಿದರು ೪೦-೫೦ ಜನರಿಗೆ ಕೊಟ್ಟಿದ್ದರಲ್ಲಿ ಎಲ್ಲರಿಗೂ ಗುಣಬಂದಿತು. ಆದಕಾರಣ ಎಲ್ಲ ಕಡೆಗೆ ಇದನ್ನು ತರಿಸಿಕೊಂಡು ಪ್ಲೇಗ ರೋಗಕ್ಕೆ ತುತ್ತಾಗುವದನ್ನು ತಪ್ಪಿಸಿಕೊಳ್ಳಬೇಕು ಪ್ಲೇಗ ಬಂದ ಕೂಡಲೆ ಆರು (೬) ತಾಸುಗಳೊಳಗಾಗಿಯೇ ಈ ಔಷಧಿಯನ್ನು ತೆಗೆದುಕೊಳ್ಳಬೇಕಾದದ್ದು ಮಾತ್ರ ಅತ್ಯಗತ್ಯ.

ಗೊಳಿಸಿ ಈ ಭಯಂಕರ ರೋಗಕ್ಕೆ ತುತ್ತಾಗುತ್ತಿರುವ ಅಸಂಖ್ಯ ಜನರ ಪ್ರಾಣವನ್ನು ಉಳಿಸಬೇಕೆಂದು ಕೋರುತ್ತೇವೆ. ಈ ದಿವ್ಯ ಔಷಧವನ್ನು ಶೋಧಿಸಿದ ಶ್ರೀ ಗುರುಮಠಕಲ್ಲ ಸ್ವಾಮಿಗಳಿಗೆ ನಾವು ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಸಹಿಗಳು

೧ ಶಿವಲಿಂಗಪ್ಪ ಲಿಂಗಪ್ಪ ತಿಪ್ಪಾ ಮುನ್ಸಿಪಲ್ ಪ್ರೆಸಿಡೆಂಟ ವ ಬ್ರ್ಯಾಂಚ ಮ್ಯಾಜಿಸ್ಟ್ರೇಟ
೨ ವಾನಪ್ಪ ಮುರಿಗೆಪ್ಪ ರಾಜನಾಳ ಬ್ರ್ಯಾಂಚ ಮ್ಯಾಜಿಸ್ಟ್ರೇಟ.
೩ ಕಂಬೀರಸಾಬ ಮುದ್ದೇಬಿಹಾಳ್ಳ ಬ್ರ್ಯಾಂಚ ಮ್ಯಾಜಿಸ್ಟ್ರೇಟ ಮತ್ತು (ಮ್ಯುನಿಸಿಪಾಲಟಿ ಕೌನ್ಸಿಲರ)
೪ ರಾಚಪ್ಪ ಬಸಪ್ಪ ಮಂಟಾ (ಮ್ಯುನ್ಸಿಪಾಲಟಿ ಕೌನ್ಸಿಲರ)
೫ ಸೋಮಲಿಂಗಪ್ಪ ರುದ್ರಪ್ಪ ಗೌಡರ (ಮ್ಯುನ್ಸಿಪಾಲಟಿ ಕೌನ್ಸಿಲರ)
೬ ವ್ಹಿ. ಪಿ. ಮೆಂತೆದ (ಜನರಲ್ ಮರ್ಚಂಟ)
೭ ಎಸ್. ವ್ಹಿ. ಗಣಾಚಾರ, (ಪ್ರೆಸಿಡೆಂಟ ಲೋಕಲ್ ಬೋರ್ಡ)
೮ ಜಿ. ಪಿ ಕಟ್ಟಿ ಹೆಡ್ ಮಾಸ್ತರ ಮುನಿಸಿಪಲ್, ಎ. ವ್ಹಿ ಸ್ಕೂಲ
೯ ಗುಂಡೋ ಅಣ್ಣಾ ಕುಲಕರ್ಣಿ (ಮುನಿಸಿಪಾಲಿಟಿ ಮೆಂಬರ)

ಔಷಧ ಸಿಗುವ ಸ್ಥಳ— ಶ್ರೀ ಬಶೆಟ್ಟೆಪ್ಪ ಬಸಪ್ಪ ಹಲಕುರ್ಕಿ ಏಜಂಟ ಬಾಗಲಕೋಟೆ.

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦- ೬
ವೀರಶೈವ ಮತತತ್ವ	೨-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೨-೦	ಸುಕಲಾದೇವಿಯ ಕಥೆ	೨-೧-೬
ಕಾಯಕವೆ ಕೈಲಾಸ	೦-೩-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ವಿಜಯವಾಣಿ	೦-೨-೦
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಆದಿಜನ ಸಂಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸಃ- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ** ಪೋ. ಆಲಮಟ್ಟಿ ಜಿ. ವಿಜಾಪುರ.

ಓಂ

ವಿಚಾರ ಕ್ರಾಂತಿಯನ್ನುಂಟು ಮಾಡುವ

ಹೊಸ ಪುಸ್ತಕ.

ವೀರಶೈವ ಮತಾಚಾರ್ಯರ

ಕಾಲ ನಿರ್ಣಯ.

ಲೇಖಕರು—

ಕರ್ಣಮಂಗಲಂ ಶ್ರೀಕಂಠಯ್ಯನವರು.

ಪ್ರತಿಯೊಬ್ಬ ವೀರಶೈವನೂ
ಅತ್ಯವಶ್ಯಕವಾಗಿ ಓದತಕ್ಕ ಪುಸ್ತಕ.

ಜಾಗ್ರತೆ ತರಿಸಿರಿ. ಬೆಲೆ ೧೨ ಆಣೆ.

ಮ್ಯಾನೇಜರ— ಶರಣ ಸಂದೇಶ

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸವಾಗುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಸಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

ಜಿ ಎಸ್. ಗಂಗಾಧರಯ್ಯ,

ಸುಗಂಧರಾಜ ದಶಾಂಗ ಕಾರಖಾನೆ, ಅರಳೀ ಪೇಟೆ, ತುಮಕೂರು

(ಮೈಸೂರು ಸ್ಟೇಟ್)

ವಾರ್ಷಿಕ ಫೀ ಫುಕ್ಕಟೆ!

ದಿ ಸ್ವರಾಜ್ಯ ಬ್ಯಾಂಕಿಂಗ ಮತ್ತು ಇನ್ಶ್ಯೂರನ್ಸ ಕಂಪನಿ ಲಿಮಿಟೆಡ್

ಧಾರವಾಡ.

ಡಿಶೆಂಬರ ತಿಂಗಳಲ್ಲಿ ಪಾಲಸಿಗಳನ್ನು ತೆಗೆದುಕೊಂಡವರಿಗೆ

ವಾರ್ಷಿಕ ಫೀ ಮಾಫೀ ಮಾಡುವದರಲ್ಲಿ ಬರುವದು.

ಎಮ್. ಎಸ್. ಕೇಸರಿ ಬಿ. ಎ. ಎಲ್ ಎಲ್. ಬಿ.

ಮ್ಯಾನೇಜಿಂಗ್ ಏಜಂಟ್ಸ,

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರನ್ಸ ಕಂ. ಲಿ. ಧಾರವಾಡ.

ಪ್ಲೇಗ ಸಂಜೀವಿನಿ.

ಅತ್ಯಾಶ್ಚರ್ಯಕರವಾದ ಗುಣ! ಕೇವಲ ೩ ತಾಸುಗಳಲ್ಲಿಯೇ ಗುಣ!

ಇದನ್ನು ಸೇವನೆ ಮಾಡುವದರಿಂದ ಪ್ಲೇಗಿನ ಭಯವೇ ಇಲ್ಲ!

೧೦೦ ಕ್ಕೆ ೧೦೦ ರಂತೆ ಗುಣ!!

ಶ್ರೀ ಮನ್ನಿರಂಜನ ಶಾಂತವೀರ ಸ್ವಾಮಿಗಳು ಗುರುಮಠಕಲ್ ಇವರು ಲೋಕ ಕಲ್ಯಾಣಾರ್ಥವಾಗಿ **ಪ್ಲೇಗ ಸಂಜೀವಿನಿ** ಎಂಬ ದಿವ್ಯ ಔಷಧಿಯನ್ನು ಶೋಧಮಾಡಿರುವರು. ಪ್ಲೇಗ ರೋಗವು ಎಷ್ಟು ಘಾತುಕವಿದೆಯೆಂಬುದನ್ನು ಹೇಳುವ ಅವಶ್ಯವಿಲ್ಲ. ಈ ಪ್ಲೇಗಿನಿಂದ ಸಾವಿರಾರು ಜನರು ಸಾಯುತ್ತಿರುತ್ತಾರೆ. ಇದನ್ನು ತಡೆಯುವದಕ್ಕಾಗಿ ಎಷ್ಟೋ ಔಷಧಗಳನ್ನು ತಯಾರ ಮಾಡಿರುವರು. ಅವುಗಳಿಂದೇನೂ ಗುಣವಾದದ್ದು ಕಂಡು ಬರುವದಿಲ್ಲ. ಈ ಪ್ಲೇಗ ಸಂಜೀವಿನಿಯಿಂದ ಆರೇ ತಾಸುಗಳಲ್ಲಿಯೇ ಗುಣವಾಗುತ್ತದೆ. ಇದರ ಒಂದು ಬಾಟ್ಲಿಯ ಕಿಮ್ಮತ್ತು ೧ ರೂ. ೫ ಆಣೆ.

ವಿಶೇಷ ಮಾಹಿತಿಯನ್ನು ಅನುಪಾನ ಪತ್ರಿಕೆಯಲ್ಲಿ ನೋಡಿರಿ.

ವಿಶೇಷ ಸೂಚನೆ— ಅನುಪಾನ ಪತ್ರಿಕೆಯ ಸೂಚನೆಯ ಮೇರೆಗೆ ಔಷಧವನ್ನು ತೆಗೆದುಕೊಂಡಲ್ಲಿ ಖಾತ್ರಿಯಿಂದ ಗುಣವಾಗುವದು. ಎಲ್ಲ ಕಡೆಗೂ ಏಜಂಟರು ಬೇಕು.

ಏಜಂಟ್
**ಬಶೆಟ್ಟೆಪ್ಪ ಬಸಪ್ಪ ಹಲಕುರ್ಕಿ,
ಬಾಗಲಕೋಟೆ.**

ವಿಳಾಸ—
ಪ್ಲೇಗ ಸಂಜೀವಿನಿ ಆಫೀಸ್
ಗುಲಬರ್ಗಾ.

ಮಹಾರೋಗ ಸಂಜೀವಿನಿ.

ಶ್ರೀಮನ್ನಿರಂಜನ ಗುರುಮಠಕಲ್ಲ ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ

ಮಹಾರೋಗ ಸಂಜೀವಿನಿ,

ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.

ಇತ್ತೀಚೆಗೆ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ಮಿತಿಮೀರಿ ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. ಈ ಕೆಟ್ಟಬೇನೆಯು (ಪ್ಲೇಗ ಮಾರಿಕಾ,) ಖಜ್ಜಿಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ ತಗಲತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ಮೃತ್ಯುವಿನ ತುತ್ತಾಗುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಖಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ ಪ್ಲೇಗ, ಮಾರಿಕಾ, ನಾರಸಂಹಾರಿ, ಕೂಸುಗಳ ಹೊಟ್ಟೆಯೊಳಗಿನ ಬೇನೆ ವಗೈರೆ ರೋಗಗಳ ಮೇಲೆ ಆಶ್ಚರ್ಯಕಾರಕ ಔಷಧಿಗಳ ಶೋಧ ಹಿಡಿದ ಸದರಿ ಪೂಜ್ಯರಾದರೇ ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ ಔಷಧಿಯನ್ನು ಶೋಧಮಾಡಿ ಪ್ರಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೆಯುಳ್ಳವರು ಮುದ್ದಾಂ ಬಂದು ತಮ್ಮ ರೋಗ ಲಕ್ಷಣಗಳನ್ನೆಲ್ಲ ತೋರಿಸಿದರೆ ಅದಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ. ಮೊದಲು ಔಷಧದ ಅರ್ಧ ಕಿಮ್ಮತ್ತು ಕೊಟ್ಟು ಔಷಧ ತಕ್ಕೊಳ್ಳಲು ಪ್ರಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಅಗ್ಗಿ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳತಕ್ಕದ್ದು. ವಿಶೇಷ ಸಂಗತಿಗಳ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ಕೇಳಿಕೊಳ್ಳಬಹುದು.

ಮ್ಯಾನೇಜರ ಆರೋಗ್ಯ ಮಂದಿರ, ಕಿರೀಟಮಠ ಕಸಬಾ ಕ್ಯಾಂಪ **ಸೊಲ್ಲಾಪುರ ಸಿಟಿ.**

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! **ಉತ್ತಮ ಸೌಕರ್ಯ.** **ಎಲ್ಲಕ್ಕಿಂತ ಅನುಕೂಲ ಸ್ಥಳ.**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರಪಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುಶಬೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ	೩೦-೦-೦ ತಿಂಗಳೊಂದಕ್ಕೆ	ಎರಡೂಹೊತ್ತು ಭೋಜನ	೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ	೧-೮-೦ ದಿನ ಒಂದಕ್ಕೆ	ಊಟ ಒಂದಕ್ಕೆ	೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೪-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆಯ** ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ**, ಎಂ. ಎಸ್‌ಸಿ., ಪಿಎಚ್. ಡಿ ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ

ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ ಹೊಂಗೊಲ್ ಮುಲಾಮಿನಲ್ಲಿ ಮಿಶ್ರವಾಗಿಲ್ಲ

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ. ಇವರಿಂದ ತಯಾರಿಸಲ್ಪಟ್ಟ

" ಕಚ್ಯೂರ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಶ್ರೀ. ಶ. ೧೯೩೧ ನೇಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತಗಪದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರೆಗಳನ್ನು ಉಪಯೋಗಿಸಿರಿ!

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಅನೇಕ ವರುಷದಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತ ಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟಿ

ಶ್ರೀರಾಮ ವೀವ್ಹಿಂಗ್ ಮಿಲ್ಸ ಇಚಲಕರಂಜಿ.
(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು.)

ರಮುಲ ವಿದಾ ಗಹಸ.

ಉತ್ತಮವಾಗಿ ಬರೆದಿದ್ದಾರೆ. ರಮುಲಜ್ಜರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಳ್ಳಿ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ವ ಹಾಗಾಂವ್, ಜಿ. ಗುಲಬರ್ಗಾ.



ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 2891.

ಶರಣ ಸಂದೇಶ

Sharana Sandesh.

ನ್ಯಾಯನಿಷ್ಠುರಿ| ದಾಕ್ಷಿಣ್ಯಪರನಲ್ಲ| ಲೋಕವಿರೋಧಿ| ಶರಣನಾರಿಗೂ ಅಂಜುವವನಲ್ಲ|
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ || ವ ೨೨೪ | ಮಹಾನುಭಾವ ಬಸವಣ್ಣನವರು.

ಸಂಪಾದಕರು:-
ಡಾ. ಹರ್ಡೇಕರ ಮಂಜಪ್ಪನವರು,

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ವರ್ಗಣಿ:- ಅಂಚೆಯ ವೆಚ್ಚ ಸೇರಿ ೩ ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೪.	ಆಲಮಟ್ಟಿ- ಸೋಮವಾರ ತಾರೀಖು ? ನೇಯ ಫೆಬ್ರವರಿ ೧೯೩೪.	ಸಂಚಿಕೆ ೨೪

ಜನಸೇವೆಯೇ ದೇವರ ಸೇವೆ

ಸಹಕಾರದ ಎರಡನೆ ಅಪಜಯ.

ಇಂಡೋ-ಬ್ರಿಟಿಶ್ ವ್ಯಾಪಾರಿ ಒಪ್ಪಂದಕ್ಕೆ ಅಸೆಂಬ್ಲಿ ಒಪ್ಪಲಿಲ್ಲ.

ಇಂಡೋ-ಬ್ರಿಟಿಶ್ ವ್ಯಾಪಾರಿ ಒಪ್ಪಂದವನ್ನು ಮಾನ್ಯ ಮಾಡಬೇಕಾಗಿ ಸರ್. ಜೋಸೆಫ್ ಭೋರ್ ಇವರು ತಂದ ಗೊತ್ತುವಳಿಯು ಬಿದ್ದು ಹೋಯಿತು.

ಈಗಾದ ಒಪ್ಪಂದ ಅಮಾನ್ಯವೆಂದು ೬೬, ಮಾನ್ಯವೆಂದು ೫೮, ಸಭಾಸದರು ಹೇಳಿ ಅಮಾನ್ಯತೆಯೇ ನಿರ್ಣಯವಾಯಿತು.

ಬ್ಯಾ. ಜಿನಾ ಮತ್ತು ಭುಲಾಭಾಯಿಯವರ ಭಾಷಣವು ಚಿರಸ್ಮರಣೀಯ.

ದೇಹವೇ ದೇವಾಲಯ.

SANGAM CLOTH STORES
Prop· M S Hundekar & Sons.
P.O: TERDAL – 587 315
Dt B apur, (Karnataka)

ಕಳಕೂಬ್ಬವ ಮೊದಲು

ಎಚ್ಚರಾಗಿರಿ !

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ,
ಶ್ರೀಶೈಲಪ್ಪಾ ಗೋಟಿ.
ವಿವಾರಪೇಟ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿದ್ ಬಿಲ್ಡಿಂಗ್
ಹೈದ್ರಾಬಾದ (ಡಕ್ಕ)

ಗಂಡಾಂತರಕ್ಕೊಳಗಾಗಬೇಡಿರಿ !

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು—'ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣಯುಬರಹ ನೋಡು, ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರೆ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕನ್ನೋದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ ಒಟ್ಟು ನಮ್ಮ ...ಗ ಬ್ಯಾಂಕಿನವರ, ಅಲ್ಲ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಹೂರಿ ನೋಡಿದ ನಮ್ಮ ...ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜೋತಿಷಾಲಂಕಾರ ವೇ| ಬ್ರ| ಶ್ರೀ| ಸಿದ್ಧಾಂತಿ ಶಿವಬಸವ ಶಾಸ್ತ್ರಿಗಳು ಹೂಲಿ,
ಇವರಿಂದ ತಯಾರಿಸಲ್ಪಟ್ಟ ಶಕೆ ೧೮೫೭ ನೆಯ ಯುವ ಸಂವತ್ಸರದ

ಶ್ರೀ ಹೂಲಿ (ಪೂವಲಿ) ಪಂಚಾಂಗಗಳು

ಸದ್ಯಕ್ಕೆ ಮಾರಾಟಕ್ಕೆ ತಯಾರಾಗಿರುವವು.

ಇವು ಎಲ್ಲ ಪಂಚಾಂಗಗಳಿಗಿಂತಲೂ ಹೆಚ್ಚು ಮತ್ತು ಅವಶ್ಯಕ ವಿಷಯಗಳಿಂದ ಕೂಡಿರುತ್ತವೆಂದು ಬಹು ಜನರಿಂದ ಶ್ಲಾಘಿಸಲ್ಪಟ್ಟಿರುತ್ತವೆ. ಈ ಪಂಚಾಂಗವು ೭೦ ಪುಟಗಳುಳ್ಳದ್ದಾಗಿ ಮೇಲ್ಭಾಗದಲ್ಲಿ ಶ್ರೀ ಗಜಾನನ ಮತ್ತು ೧೨ ರಾಶಿಗಳ ಭಾವಚಿತ್ರಗಳಿಂದ ಅಂದವಾಗಿ ಮುದ್ರಿತವಾಗಿರುತ್ತದೆ. ಮಾರಾಟದ ದರವನ್ನು ಬಹು ಕಡಿಮೆ ಅಂದರೆ— ಪಂಚಾಂಗ ೧ ಕ್ಕೆ ೪ ಆಣೆ, ೫ ಕ್ಕೆ ೧ ರೂಪಾಯಿ, ವ್ಯಾಪಾರಸ್ಥರಿಗೆ— ೧೦೦ ಪಂಚಾಂಗಕ್ಕೆ ೧೦ ರೂಪಾಯಿ, ೫೦೦ ಪಂಚಾಂಗಗಳಿಗಿಂತ ಹೆಚ್ಚು ತರಿಸಿದವರಿಗೆ ಹೆಚ್ಚಾಗಿ ಸವಲತ್ತು ಕೊಡುವೆವು.

ಇದಲ್ಲದೆ ಮಹಾಗಾಂವ, ಸವಣೂರ ಕನ್ನಡ ಮತ್ತು ಮರಾಠಿ, ಶ್ರೀ ಬಸವೇಶ್ವರ, ಜೋಗೂರ, ರತ್ತಿ, ಸೊಲ್ಲಾಪುರ, ಹರಪನಹಳ್ಳಿ, ಟಿಳಕ ಮೊದಲಾದ ಪಂಚಾಂಗಗಳು ಠೋಕ ವ ಚಿಲ್ಲರ ಧಾರಣಿಯಿಂದ ದೊರೆಯುವವು.

ಶ್ರೀ ಹೂಲಿ (ಪೂವಲಿ) ಪಂಚಾಂಗ ಪ್ರಕಾಶಕರು,
ಸಿ. ಕೆ. ಲಿಂಗಯ್ಯ ಸ್ವಾಮಿ
ಶ್ರೀ ಲಕ್ಷ್ಮೀ ವಿಲಾಸ ಪುಸ್ತಕಾಲಯ ಗದಗ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲನುಟ್ಟ್ವ ಫೆಬ್ರವರಿ ತಾರೀಖು ೪ ನೆಯ ಸೋಮವಾರ | ಸಂಚಿಕೆ ೨೪.

ನಂಜನಗೂಡಿನ

ವೀರಶೈವ ಮತಾಭಿಮಾನಿಗಳ ಅಸಹಕಾರ.

ಶ್ರೀ ಬಾಳೆಹಳ್ಳಿ ಸ್ವಾಮಿಗಳು ನಂಜನಗೂಡಿಗೆ ಬಂದಾಗ ಅಲ್ಲಿಯ ಶ್ರೀಯುತರುಗಳಾದ ಹೆಚ್. ಜಿ. ಮಹದೇವಪ್ಪನವರು, ವೈ. ವೀರಪ್ಪನವರು, ಪುಟ್ಟ ಸ್ವಾಮಯ್ಯನವರು, ಎನ್ ಸುಬ್ಬಯ್ಯನವರೇ ಮೊದಲಾದ ವೀರಶೈವ ಮಹಾ ಜನರು ಅಸಹಕಾರವಮಾಡಿ ಆ ದಿವ ಆ ಗ್ರಾಮವನ್ನೇ ಬಿಟ್ಟು ಮೂಲೆಹೊಳೆ ಕ್ಷೇತ್ರಕ್ಕೆ ಹೋಗಿದ್ದರು ಅವರ ಛಾಯಚಿತ್ರವಿದು

ಚರ್ಚಿಲ್ ದೈವಜ್ಞರ ಭವಿಷ್ಯ!

ಇಂಗ್ಲೆಂಡಿನ ಮೋರೆಗೆ ಕಪ್ಪು ಹತ್ತುವದಂತೆ!

ಹಿಂದುಸ್ಥಾನದ ರಾಜಕೀಯ ಸುಧಾರಣೆಯ ಗೊತ್ತುವಳಿ ಇದೇ ವಾರ ಕಾಮನ್ಸ ಸಭೆಯಲ್ಲಿ ಬರುವುದು. ತಾ. ೬-೭-೮-೧೧ ಈ ನಾಲ್ಕೇ ದಿನ ಚರ್ಚೆಯಾಗಿ ಬೇರೊಂದು ಕಮೀಟಿಯ ಕಡೆಗೆ ಹೋಗುವುದು. ಅಲ್ಲಿ ೩೦ ದಿನ ಚರ್ಚೆ ನಡೆಯುವುದು.

ಈ ಸುಧಾರಣೆಯ ಗೊತ್ತುವಳಿಗೆ ಚರ್ಚಿಲ್ ಪಕ್ಷವು ವಿರೋಧಿಸುವುದು. ಚರ್ಚಿಲ್ ಸಾಹೇಬರು ಈ ಸುಧಾರಣೆಯನ್ನು ಹಿಂದುಸ್ಥಾನಕ್ಕೆ ಕೊಡಬೇಡಿರೆಂದು ಬೊಬ್ಬೆಯಿಡುತ್ತಿದ್ದಾರೆ. ಕೊಟ್ಟರೆ ಬ್ರಿಟಿಶ್ ಸಾಮ್ರಾಜ್ಯಕ್ಕೆ ಗಂಡಾಂತರ, ಹಿಂದುಸ್ಥಾನದ ಕೂಲಿಕಾರರಿಗೂ ಒಕ್ಕಲಿಗರಿಗೂ ವಿಪತ್ತು, ಕೊನೆಗೆ ಇಂಗ್ಲೆಂಡಿನ ಮುಖಕ್ಕೂ ಕಪ್ಪು ಎಂದು ಇವರ ಭವಿಷ್ಯ! ಹಿಂದುಸ್ಥಾನದವರಿಗಾದರೂ ಈ ಸುಧಾರಣೆ ಎಲ್ಲಿ ಬೇಕಾಗಿದೆ ? ತಾರೀಖು ೭ ನೆಯ ದಿನ ನೋಡಿರಿ.

ಮುಂದಿನ ಸಂಚಿಕೆ ಹೊರಡುವುದಿಲ್ಲ. ಪದ್ಧತಿಯ ಪ್ರಕಾರ ವಿದ್ಯಾಲಯಕ್ಕೆ ಮಾಘ ಶುದ್ಧದಲ್ಲಿ ವಿಶ್ರಾಂತಿಯಿರುವುದರಿಂದ ತಾ. ೧೧ ನೆಯ ಪತ್ರಿಕೆಯು ಪ್ರಕಟವಾಗದೆ ತಾ. ೧೮-೨-೩೫ನೆಯ ದಿನ ಪ್ರಕಟವಾಗುವುದು. ಮ್ಯಾನೇಜರ್.

ಕರ್ನಾಟಕ ವಣಿಕ್ ಸಂಘದ ತ್ರೈಮಾಸಿಕ ಸಭೆ.

ಮೊದಲೇ ನಿರ್ಣೀತವಾದ ಮೇರೆಗೆ ಕರ್ನಾಟಕ ವಣಿಕ್ ಸಂಘದ ೬ ನೆಯ ವರ್ಷದ ಕಾರ್ಯಕಾರಿ ಮಂಡಲದ ೧ ನೆಯ ತ್ರೈಮಾಸಿಕ ಸಭೆಯು ಬಳ್ಳಾರಿ ನಗರದಲ್ಲಿ ಬೆಳಿಗ್ಗೆ ೮|| ಗಂಟೆಗೆ ಸಂಘದ ಅಧ್ಯಕ್ಷರಾದ ಮ|| ರಾ|| ರಾ|| ಶ್ರೀ. ವೈ. ಮಹಾಬಳೇಶ್ವರಪ್ಪನವರ ಅಂಗಡಿಯ ಅಟ್ಟದಲ್ಲ ಅವರ ಅಧ್ಯಕ್ಷತೆಯಲ್ಲಿಯೇ ಕೂಡಿತು. ಸಭೆಗೆ ಬಾಗಲಕೋಟೆ, ಗದಗ, ಹೊಸಪೇಟೆ, ಬಳ್ಳಾರಿ ನಗರಗಳಿಂದ ಸದಸ್ಯರು ಆಗಮಿಸಿದ್ದರು. ಕಳೆದ ವಾರ್ಷಿಕ ಸಭೆಯಿಂದ ಈ ವರೆಗಾದ ಸಂಘದ ಕಾರ್ಯದ ವರದಿಯು ಓದಲ್ಪಟ್ಟು ಅದು ಸದಸ್ಯರಿಂದ ಒಪ್ಪಲ್ಪಟ್ಟಿತು. ಆ ನಂತರ ಕೆಳಗೆ ಕಾಣಿಸಿದ ಗೊತ್ತುವಳಿಗಳ ಮೇಲೆ ಚರ್ಚೆ ಭಾಷಣಗಳಾಗಿ ಅವು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟವು.

ದುಃಖ ಪ್ರದರ್ಶನ.

೧ "ಈ ಸಂಘದ ಸದಸ್ಯರೂ ಬಳ್ಳಾರಿಯ ಸುಪ್ರಸಿದ್ಧ ಕರ್ನಾಟಕ ವಿದ್ಯಾಭಿಮಾನಿಗಳೂ ದಾನಶಾಲಿಗಳೂ ಆಗಿದ್ದ ಮ|| ರಾ|| ರಾ|| ಶ್ರೀ. ಕುಪ್ಪಗಲ್ಲ ಅಯ್ಯಪ್ಪನವರು ಕೈಲಾಸವಾಸಿಗಳಾದರೆಂಬ ಆಕಸ್ಮಿಕ ವಾರ್ತೆಯನ್ನು ಕೇಳಿ ಈ ಸಭೆಗೆ ಅತ್ಯಂತ ದುಃಖವಾಗಿದ್ದು, ಕೈಲಾಸವಾಸಿಗಳ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲೆಂದು ಪ್ರಾರ್ಥಿಸಲಾಗುತ್ತದೆ. ಹಾಗು ಅವರ ಕುಟುಂಬದ ಖೇದದಲ್ಲಿ ಈ ಸಂಘದ ಸದಸ್ಯರು ತಾವೂ ಪಾಲುಗಾರರಾಗಿದ್ದೇವೆಂದು ಈ ಮೂಲಕ ತಮ್ಮ ದುಃಖವನ್ನು ವ್ಯಕ್ತಪಡಿಸುತ್ತಾರೆ."

ಜಾ. ಪಾ. ಕಮಿಟಿಯ ವರದಿಯ ನಿಷೇಧ

೨ "ಹಿಂದುಸ್ಥಾನದ ಪ್ರಗತಿಯ ಬಗ್ಗೆ ಯಾವ ವಿಧವಾದ ಉತ್ತೇಜಕ ಮಾರ್ಗಗಳನ್ನೂ ತೋರಿಸದಿರುವ ಮತ್ತು ಸ್ವದೇಶೀಯ ವ್ಯಾಪಾರೋದ್ಯಮಗಳಿಗೆ ಸರಿಯಾದ ಪ್ರೋತ್ಸಾಹ ಹಾಗು ಸಂರಕ್ಷಣೆಗಳನ್ನು ಕೊಡದೆ ಬ್ರಿಟಿಷ ವ್ಯಾಪಾರೋದ್ಯಮಗಳಿಗೆ ಪ್ರೋತ್ಸಾಹವನ್ನು ಹೆಚ್ಚಾಗಿ ತೋರಿಸುವ ಜಾಯಿಂಟ ಪಾರ್ಲಿಮೆಂಟರಿ ಕಮಿಟಿಯ ವರದಿಯನ್ನು ಈ ಚೇಂಬರವು ನಿಷೇಧಿಸುತ್ತ—ಸಿಂಧ ಮತ್ತು ಉತ್ಕಲ ಪ್ರಾಂತಗಳಿಗಿಂತ ಆರ್ಥಿಕ ಮತ್ತು ವಿಸ್ತೀರ್ಣ ವಿಷಯದಲ್ಲಿ ಕರ್ನಾಟಕವು ಎಷ್ಟೋ ಪಾಲು ಶ್ರೇಷ್ಠವಾಗಿರುವದನ್ನು ಲಕ್ಷಿಸದೆ ಕರ್ನಾಟಕದ ಪ್ರತ್ಯೇಕ ಪ್ರಾಂತ ರಚನೆಯ ಯೋಜನೆಯನ್ನು ಜಾ. ಪಾ. ಕಮಿಟಿಯು ಕೈಬಿಟ್ಟಿರುವದಿಷ್ಟೇ ಅಲ್ಲದೆ ಭಾಷಾನುಗುಣ ಪ್ರಾಂತ ರಚನೆಯ ಕ್ರಮವನ್ನು ಈಗಿನ ರಾಜ್ಯಘಟನೆಯೊಳಗಿನ ಆ ವಿಷಯಕವಾದ ಕ್ರಮಕ್ಕಿಂತಲೂ ಅತ್ಯಂತ ಕಠಿಣವಾಗಿ ಮಾಡಿಟ್ಟಿರುವ ಬಗ್ಗೆ ಈ ಚೇಂಬರದ ಕಮಿಟಿಯವರು ತಮ್ಮ ಬಲವಾದ ವಿರೋಧವನ್ನು ವ್ಯಕ್ತಪಡಿಸುತ್ತಾರೆ."

ಅಭಿನಂದನ.

೩ "ಚೇಂಬರಕ್ಕೆ ೧೫೦ ರೂ. ಗಳ ಧನ ಸಹಾಯವನ್ನು ಸದ್ಯಕ್ಕೆ ಮಾಡುವುದಾಗಿ ಅಧ್ಯಕ್ಷರಾದ ಮ|| ರಾ|| ರಾ|| ಶ್ರೀ. ವೈ. ಮಹಾಬಳೇಶ್ವರಪ್ಪನವರು ಅಪ್ಪಣೆ ಕೊಡಿಸಿದ್ದಕ್ಕಾಗಿ ಈ ಸಭೆಯು ಅಂತಃಕರಣಪೂರ್ವಕವಾಗಿ ಅಭಿನಂದನಪರ ವಂದನೆಗಳನ್ನು ತನ್ನ ಅಧ್ಯಕ್ಷರಿಗೆ ಅರ್ಪಿಸುತ್ತದೆ."

ಅಕ್ಕಲಕೋಟೆಯಲ್ಲಿ ಕನ್ನಡಕ್ಕೆ ಪ್ರೋತ್ಸಾಹ.

೪ "ಅಕ್ಕಲಕೋಟೆ ಸಂಸ್ಥಾನದಲ್ಲಿ ೩ ಕ್ಕಿಂತಲೂ ಹೆಚ್ಚಿಗೆ ಪ್ರಜಾಜನರು ಕನ್ನಡಿಗರಿದ್ದುದರಿಂದ ತಮ್ಮ ಸಂಸ್ಥಾನದಲ್ಲಿ ಕನ್ನಡ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಬೇಕೆಂದೂ ಮತ್ತು ದೇಶ ಭಾಷೆಯಾದ ಕನ್ನಡವನ್ನೇ ಸಂಸ್ಥಾನದ ಕೋರ್ಟು ಕಚೇರಿಗಳ ವ್ಯವಹಾರದ ಭಾಷೆಯನ್ನಾಗಿ ನ್ಯಾಯವಾಗಿ ಸ್ವೀಕರಿಸಬೇಕೆಂದೂ ಅಕ್ಕಲಕೋಟೆಯ ಯುವರಾಜರ ಮುಖಾಂತರವಾಗಿ ಅಲ್ಲಿಯ ರೀಜಂಟರಾದ ರಾಣೀಸಾಹೇಬರಿಗೆ ಬೆಂಗಳೂರಿನ ಕರ್ನಾಟಕ ಸಾಹಿತ್ಯ ಪರಿಷತ್ತಿನವರು ವಿಜ್ಞಾಪಿಸಿಕೊಂಡದ್ದನ್ನು ಈ ಸಭೆಯು ಸಮರ್ಥಿಸುತ್ತ ಮೇಲಣ ಬೇಡಿಕೆಯನ್ನು ಕೂಡಲೇ ಮನ್ನಿಸಿ ಜಾರಿಯಲ್ಲಿ ತರಬೇಕೆಂದು ಅಕ್ಕಲಕೋಟೆಯ ರಾಣೀಸಾಹೇಬರಿಗೆ ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತದೆ."

ಕನ್ನಡ ಟಾಯಿಪ ರಾಯಿಟರ ಯಂತ್ರಕ್ಕೆ ಉತ್ತೇಜನ.

೫ "ಕನ್ನಡ ಟಾಯಿಪ ರಾಯಿಟರ ಯಂತ್ರದ ಯೋಜನೆಯನ್ನು ಮಾಡಿದ್ದಕ್ಕಾಗಿ ಬೆಂಗಳೂರಿನ ಮ|| ರಾ|| ರಾ|| ಶ್ರೀ. ಎಂ. ನರಸಿಂಹಮೂರ್ತಿ ಬಿ. ಎ, ಇವರನ್ನು ಈ ಸಭೆಯು ವಿಶ್ವಾಸಪೂರ್ವಕವಾಗಿ ಅಭಿನಂದಿಸುತ್ತದೆ. ಮತ್ತು ಆ ಯಂತ್ರವು ಬೇಗನೆ ಪೇಟೆಗೆ ಮಾರಾಟಕ್ಕೆ ಬರುವ ಕಾರ್ಯದಲ್ಲಿ ಸುಮಾರು ೨೦೦-೨೫೦ ರೂ. ಬೆಲೆ ಬಾಳುವ ೧೦೦ ಪೋರ್ಟೆಬಲ್ ಆಕಾರದ ಯಂತ್ರಗಳ ಮಾರಾಟದ ಹೊಣೆಯನ್ನು ಅವರ ಕಂಪನಿಗೆ ಕೊಟ್ಟಿರುವದನ್ನು ಅನುಲಕ್ಷಿಸಿ, ಯಂತ್ರಗಳು ಸಿದ್ಧವಾಗುವಷ್ಟರಲ್ಲಿ ಮುಂಗಡ ಬೇಡಿಕೆಗಳನ್ನು ಕೊಟ್ಟಾಗಲಿ ಅಥವಾ ಸಿದ್ಧವಾದ ಬಳಿಕ ಕ್ಷಿಪ್ರದಲ್ಲಿಯೇ ಅವುಗಳನ್ನು ಕೊಂಡಾಗಲಿ ಈ ಯಂತ್ರಯೋಜನೆಯ ಸಾಹಸದಲ್ಲಿ ಕೈಹಾಕಿದ ಶ್ರೀ. ನರಸಿಂಹಮೂರ್ತಿಗಳಿಗೆ ಉತ್ತೇಜನ ಕೊಡಬೇಕೆಂದು ಅಖಿಲ ಕರ್ನಾಟಕ ಜನತೆಯಲ್ಲಿ ಈ ಸಭೆಯು ವಿಜ್ಞಾಪಿಸಿಕೊಳ್ಳುತ್ತದೆ. ಮತ್ತು ಆ ಯಂತ್ರದ ಪ್ರಚಾರ ಕಾರ್ಯದಲ್ಲಿ ಅದರ ಮೂಲಯೋಜಕರಿಗೆ ಸಂಪೂರ್ಣ ಬೆಂಬಲವನ್ನು ಒದಗಿಸಿ ಕೊಡುವುದಾಗಿ ಈ ಸಭೆಯು ಆಶ್ವಾಸನಕೊಡುತ್ತದೆ."

ಉತ್ಪನ್ನದ ಕರದ ಕಾನೂನಿನಲ್ಲಿ ತಿದ್ದುಪಡಿ.

೬ "ಉತ್ಪನ್ನದ ಕರದ ಅಪೀಲುಗಳು ಇನ್‌ಕಮ್‌ಟ್ಯಾಕ್ಸ ಕಮೀಶನರರ ಮುಂದೆ ಈಗ ನಡೆಯುವದರಿಂದ ಅಲ್ಲಿ ಯೋಗ್ಯ ನ್ಯಾಯವು ಸಿಗುವದಿಲ್ಲವೆಂದು ವರ್ತಕರ ನಿಕಟ ಕಟು ಅನುಭವವಿದ್ದ ಮೂಲಕ ಇನ್ನು ಮುಂದೆ ಈ ಬಗೆಯ ಅಪೀಲುಗಳು ನ್ಯಾಯಖಾತೆಯಲ್ಲಿ ನಡೆಯುವಂತೆ ಇನ್‌ಕಮ್‌ಟ್ಯಾಕ್ಸ ಆಕ್ಟಿನಲ್ಲಿ ಬದಲಾಗುವಂತೆ ವ್ಯವಸ್ಥೆ ಮಾಡಲು ಹಿಂದುಸ್ಥಾನ ಸರಕಾರದವರಿಗೂ ಮತ್ತು ಹಾಗೆ ವ್ಯವಸ್ಥೆ ಮಾಡಿಸಲು ಅಸೆಂಬ್ಲಿಯ ಸದಸ್ಯರಿಗೂ ಈ ಚೇಂಬರವು ವಿಜ್ಞಾಪಿಸಿಕೊಳ್ಳುತ್ತದೆ.

ಈ ಸಂಬಂಧವಾಗಿ ಇದೇ ಅಸೆಂಬ್ಲಿಯ ಅಧಿವೇಶನದಲ್ಲಿ ತಿದ್ದುಪಡೆಯ ಮಸೂದೆಯ ಸೂಚನೆಯನ್ನು ಕೊಟ್ಟಿದ್ದಕ್ಕಾಗಿ ಶ್ರೀ. ಚೌಧರಿ ಎಂ. ಎಲ್. ಎ. ಇವರನ್ನು ಅಭಿನಂದಿಸಿ ಅವರಿಗೆ ಬೆಂಬಲ ಕೊಡಬೇಕೆಂದು ಕರ್ನಾಟಕದ ಪ್ರತಿನಿಧಿಗಳಿಗೆ ಕೇಳಿಕೊಳ್ಳುತ್ತದೆ. ಬೆಂಬಲ ಕೊಡುವ ಕಾಲಕ್ಕೆ 'ಜುಡಿಸಿಯಲ್ ಟ್ರಿಬ್ಯು

ನಲ್' ಎಂಬುದು ನಿಯಮಿಸಲ್ಪಡಬೇಕೆಂದು ಶ್ರೀಯುತರು ಉಲ್ಲೇಖಿಸಿದ್ದರಲ್ಲಿ ಆಯಾ ಪ್ರದೇಶವು ಯಾವ ಚೇಂಬರದ ಕ್ಷೇತ್ರದಲ್ಲಿ ಬರುತ್ತದೋ ಆ ಚೇಂಬರಕ್ಕೆ ಅಲ್ಲಿ ಪ್ರಾತಿನಿಧ್ಯವಿದ್ದು ಚೇಂಬರದ ಪರವಾಗಿ ಒಬ್ಬರನ್ನು ಅಲ್ಲಲ್ಲಿಯ ಟ್ರಿಬ್ಯುನಲ್‌ದಲ್ಲಿ ತೆಗೆದುಕೊಳ್ಳಬೇಕೆಂಬುದಾಗಿ ಮಾರ್ಪಾಟನ್ನು ಸೂಚಿಸಲು ಕರ್ನಾಟಕದ ಪ್ರತಿನಿಧಿಗಳನ್ನು ಕೇಳಿಕೊಳ್ಳುತ್ತದೆ."

ಮುಂಬಯಿ ಕಾಟನ್ ಮಾರ್ಕೆಟ್ ಆಕ್ಟ (೧೯೩೭) ನಿಷೇಧ.

(೭) " ಬೈಲಹೊಂಗಲದಲ್ಲಿ ಅಲ್ಲಿಯ ಸಕಲ ವ್ಯಾಪಾರಸ್ಥರನ್ನೂ ವಿಚಾರಿಸದೆ ಒಕ್ಕಲತನದ ಶಾಖಾಧಿಕಾರಿಗಳು ಒಂದು ಕಮಿಟಿಯನ್ನು ಮಾಡಿ ೧೯೩೭ ರ ಮುಂಬಯಿ ಕಾಟನ್ ಮಾರ್ಕೆಟ್ ಆಕ್ಟನ್ನು ಪ್ರಚಾರದಲ್ಲಿ ತರಬೇಕೆಂದು ಮಾಡಿರುವದನ್ನು ಲಕ್ಷ್ಯದಲ್ಲಿ ತಂದು, ಈ ಆಕ್ಟು ಅನವಶ್ಯವೆಂದು ಈ ಸಂಘವು ಈ ಒಳಗಾಗಿ ನಿಷೇಧಿಸಿದ್ದನ್ನು ಪುನಃ ಈಗ ಒತ್ತಿ ಹೇಳುತ್ತದೆ. ಮತ್ತು ಈ ಆಕ್ಟಿನಿಂದ ರೈತರಿಗೇ ಆಗಲಿ ವ್ಯಾಪಾರಸ್ಥರಿಗೇ ಆಗಲಿ ಯಾವದೇ ರೀತಿಯ ಹಿತವಿಲ್ಲವೆಂದೂ ಹಾಗೂ ಈ ಆಕ್ಟಿನ ಉದ್ದೇಶವು ಸ್ಥಾನಿಕ ಸಂಘಗಳಿಂದ ಈಗಾಗಲೆ ನೆರವೇರುತ್ತಿರುವದರಿಂದ ಅದನ್ನು ಅಮಲಿನಲ್ಲಿ ತಂದು ಇಲ್ಲದ ನಿರ್ಬಂಧಗಳನ್ನು ವರ್ತಕರಿಗೆ ತಂದೊಡ್ಡುವದು ಅತ್ಯಂತ ನಿಷ್ಪ್ರಯೋಜಕವೆಂದೂ ಈ ಸಭೆಯು ಅಭಿಪ್ರಾಯಪಡುತ್ತದೆ. "

(೮) " ಮೇಲ್ಕಾಣಿಸಿದ ೭ ನೆಯ ಗೊತ್ತುವಳಿಗನುಸರಿಸಿ ಮುಂಬಯಿ ಕಾಟನ್ ಮಾರ್ಕೆಟ್ ಆಕ್ಟ (೧೯೩೭) ದ ಉದ್ದೇಶವು ಈಡೇರುವಂತೆ ಸ್ಥಾನಿಕ ಸಂಘಗಳು ಅನುಸರಿಸಬೇಕಾದ ನಿಯಮಗಳನ್ನು ತಯಾರಿಸಿ ಅವುಗಳನ್ನು ಪಾಲಿಸುವ ವಿಷಯದಲ್ಲಿ ಅರಳೆಯ ವರ್ತಕರನ್ನು ಉದ್ದೇಶಿಸಿ ಅವುಗಳನ್ನು ಪ್ರಕಟಿಸಬೇಕೆಂಬ ಕೆಲಸವು ಆವಶ್ಯಕವೆನಿಸುವದರಿಂದ ಅಂಥ ನಿಯಮಗಳನ್ನು ಸಿದ್ಧಗೊಳಿಸಲು ಮ. ರಾ. ರಾ. ಶ್ರೀಯುತರುಗಳಾದ ಕುಬೇರಪ್ಪನವರು ಗದಗ, ವಿರುಪಾಕ್ಷಪ್ಪನವರು ಸೆಟ್ಟಿ (ಗದಗ) ಮತ್ತು ಕೇಶವರಾವ ಕಾಮತ (ಬೈಲಹೊಂಗಲ) ಈ ಮೂವರ ಉಪಮಂಡಲವೊಂದನ್ನು ಈ ಸಭೆಯು ನಿಯಮಿಸುತ್ತದೆ."

ಪ್ರಾಂತಿಕ ರೋಡಬೋರ್ಡುಗಳಲ್ಲಿ ಈ ಚೇಂಬರಕ್ಕೆ ಪ್ರಾತಿನಿಧ್ಯ.

(೯) " ಮುಂಬಯಿ ಮತ್ತು ಮದ್ರಾಸ ಸರಕಾರದವರು ತಮ್ಮ ಪ್ರಾಂತಿಕ ರೋಡಬೋರ್ಡುಗಳಲ್ಲಿ ಕರ್ನಾಟಕ ಚೇಂಬರ ಆಫ್ ಕಾಮರ್ಸ್‌ಕ್ಕೆ ಒಂದು ಸ್ಥಳವನ್ನು ಕೊಡುವ ಸಂದರ್ಭದಲ್ಲಿ ಈ ವರೆಗೆ ಅಲಕ್ಷ್ಯವನ್ನು ಮಾಡಿದ್ದಕ್ಕಾಗಿ ಈ ಸಭೆಯವರು ಅತ್ಯಂತ ವಿಷಾದವನ್ನು ವ್ಯಕ್ತಪಡಿಸುತ್ತಾರಲ್ಲದೆ ಆಯಾಸ್ಥಳವನ್ನು ತೀವ್ರವೇ ದಯಪಾಲಿಸುವ ವಿಷಯದಲ್ಲಿ ಪುನರ್ವಿಚಾರಣೆ ಮಾಡಬೇಕೆಂದು ಆಯಾ ಪ್ರಾಂತಿಕ ಸರಕಾರಗಳಿಗೆ ಆಗ್ರಹಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುತ್ತಾರೆ.

ತರುವಾಯ ಪ್ರಾಂತಿಕ ಮತ್ತು ಕೇಂದ್ರಶಾಸನ ಸಭೆಗಳಲ್ಲಿ ಈ ಚೇಂಬರಕ್ಕೆ ಪ್ರಾತಿನಿಧ್ಯವು ದೊರೆಯಬೇಕೆಂಬದಾಗಿ ಪುನಃ ಸರ್ವವಿಧದಿಂದಲೂ ಪ್ರಯತ್ನಮಾಡಬೇಕೆಂಬದಾಗಿ ಚರ್ಚೆಯು ನಡೆದು ಆ ಬಗ್ಗೆ ನಿರ್ಣಯವಾಯಿತು. ತದನಂತರ (೧) 'ಮದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆ' ಹೆಸರನ್ನು ' ಮದ್ರಾಸ ಮತ್ತು ಕರ್ನಾಟಕ' ರೇಲ್ವೆ ಎಂಬದಾಗಿ ಬದಲಿಸಬೇಕು. (೨) ಹರಿಹರ ಸ್ಟೇಶನ್ನದ ಊಟದ ಮನೆಗಳಲ್ಲಿ ಬ್ರಾಹ್ಮಣ, ಹಿಂದೂ ಹೀಗೆ ನ್ಯಾಯವಲ್ಲದ ಭೇದಗಳನ್ನು ವ್ಯವಸ್ಥೆಯಿದ್ದುದನ್ನು ಮತ್ತು ಹುಬ್ಬಳ್ಳಿ, ಬೆಂಗಳೂರು ರೆಸ್ಟೋರಂಟ ಕಾರುಗಳಲ್ಲಿ ಕೂಡ ಇದೇ ಬಗೆಯ ಅವ್ಯವಸ್ಥೆಯಿದ್ದುದನ್ನು ಹೋಗಲಾಡಿಸಬೇಕೆಂದು ಕೆಲವು ಜಾತಿಯ ವರ್ತಕರು ತಮಗಾದ ತೊಂದರೆಗಳನ್ನು ನಿವೇದಿಸಿದ ಮೇರೆಗೆ ಆ ಬಗ್ಗೆ ಯೋಗ್ಯವಾಗಿ 'ಹಿಂದು' ಎಂಬದಾಗಿ ಒಂದೇ ವ್ಯವಸ್ಥೆ ಇತ್ಯಾದಿಯಾಗಿ ಏರ್ಪಾಡಾಗಬೇಕು. (೩) ಕರ್ನಾಟಕದಲ್ಲಿರುವ ಎಲ್ಲ ಸ್ಟೇಶನ್ನುಗಳ ಹೆಸರನ್ನು ಎಲ್ಲ ಕಡೆಗೂ ಕನ್ನಡದಲ್ಲಿಯೇ ಬರೆಯುವ ಹಾಗೂ ಕನ್ನಡವಲ್ಲದ ಭಾಷೆಯ ಪ್ರಕಟನೆ ಮೊದಲಾದವುಗಳನ್ನು ಕರ್ನಾಟಕದ ಸ್ಟೇಶನ್ನುಗಳಿಗೆ ಪೂರೈಸಲೇಬಾರದೆನ್ನುವ ವ್ಯವಸ್ಥೆಯಾಗಬೇಕು—ಈ ಮೊದಲಾದ ವಿಷಯಗಳನ್ನು ರೇಲ್ವೆ ಅಡ್ವೈಜರಿ ಕಮಿಟಿಯಲ್ಲಿ ನಮ್ಮ ಚೇಂಬರದ ಪ್ರತಿನಿಧಿಗಳು ಚರ್ಚೆಗೆ ತಂದು ಪರಾಮರ್ಶಿಸಬೇಕಾಗಿ ಅವರಿಗೆ ಸೂಚಿಸಬೇಕೆಂದೂ ಗೊತ್ತಾಯಿತು.

ತದನಂತರ, ಸಭೆಯ ಕಾರ್ಯವನ್ನು ಅತ್ಯಂತ ಸಮರ್ಪಕವಾಗಿಯೂ ಶಾಂತರೀತಿಯಿಂದಲೂ ನಡೆಸಿದ್ದಕ್ಕೆ ಅಧ್ಯಕ್ಷರ ಆಭಾರವನ್ನೂ ಮತ್ತು ಪ್ರಯಾಣದ ಆಯಾಸವನ್ನು ಲೆಕ್ಕಿಸದೆ ಪರಸ್ಥಳಗಳಿಂದ ಬಹುದೂರ ಸಭೆಗೆ ಬಂದ ಸದಸ್ಯರ ಆಭಾರವನ್ನೂ ಗೌ. ಕಾರ್ಯದರ್ಶಿಗಳಾದ ಶ್ರೀ. ಜಂಗಿನ ಮುರಿಗಯ್ಯನವರು ಮನ್ನಿಸಿದರು. ಅಲ್ಲದೆ ಪರ ಊರುಗಳ ಸದಸ್ಯರಿಗೆ ಅವಶ್ಯವಿದ್ದ ಎಲ್ಲ ಸೌಕರ್ಯಗಳನ್ನು ಒದಗಿಸಿಕೊಟ್ಟುದಕ್ಕೆ ಮ. ರಾ. ರಾ. ಶ್ರೀ. ವೈ. ಮಹಾಬಳೇಶ್ವರಪ್ಪನವರಿಗೆ ವಿಶೇಷ ವಂದನೆಗಳನ್ನು ಪರಸ್ಥಳೀಯ ಸದಸ್ಯರ ಪರವಾಗಿ ಗೌ. ಕಾರ್ಯದರ್ಶಿಗಳು ಅರ್ಪಿಸಿದರು.

ಕೊನೆಗೆ, ವಿಜಯನಗರ ಸ್ಮಾರಕೋತ್ಸವ ಕಾರ್ಯ ಸಮಿತಿಯ ಸಭೆಗೆಂದು ಬಳ್ಳಾರಿಗೆ ಬಂದ ಬ್ಯಾ. ಸರದಾರ ಮತ್ತು ಶ್ರೀ. ಹಾಭಾವಿ (ರಿಟೈರ್ಡ ಸಬ್‌ಜಜ್) ಇವರಿಬ್ಬರು ಮಹನೀಯರು ಚೇಂಬರದ ಸಭೆಗೆ ಸನ್ಮಾನ್ಯ ಅತಿಥಿಗಳಾಗಿ ಬಂದದ್ದು ಸಭೆಯು ಜರುಗಿದ ವಿಷಯಗಳ ಚರ್ಚೆಯಲ್ಲಿ ಬೆಲೆಯುಳ್ಳ ಸಲಹೆಗಳನ್ನು ಇತ್ತುದಕ್ಕಾಗಿ ಅವರಿಬ್ಬರಿಗೂ ಸಂಘದ ಪರವಾಗಿ ಅಧ್ಯಕ್ಷರು ವಿಶ್ವಾಸಪೂರ್ವಕ ವಂದನೆಗಳನ್ನರ್ಪಿಸಿದ ಮೇಲೆ ಹಗಲು ೧೨ ಗಂಟೆಗೆ ಸಭೆಯು ವಿಸರ್ಜನವಾಯಿತು.

ಗದಗ,
ತಾ. ೨೧-೧-೧೯೩೫.

ಮು. ಸೋ. ಜಂಗಿನ.
ವೀ. ಬ. ಬಳ್ಳಾರಿ.
(ಗೌ. ಕಾರ್ಯದರ್ಶಿಗಳು.)



ಬೆನೆಟೊ ಮುಸೋಲಿನಿ.

ಇಂದು ಪ್ರಪಂಚದಲ್ಲಿರುವ ಆರು ಜನ ಮಹಾ ಪುರುಷರಲ್ಲಿ ಮುಸೋಲಿನಿಯೂ ಒಬ್ಬನೆಂಬುದನ್ನು ಯಾರೂ ಮರೆಯುವಂತಿಲ್ಲ ಈ ಮಹಾ ಪುರುಷನು ಸುಪ್ರಸಿದ್ಧ ಇಟಲಿ ದೇಶದ ಡೊವಿಯಾ ಎಂಬ ಹಳ್ಳಿಯಲ್ಲಿ ಜನ್ಮವೆತ್ತಿದನು. ಈತನ ತಂದೆಯಾದ ಅಲೆಕ್ಸಾಂಡರ್ ಮುಸೋಲಿನಿಯೂ ತಾಯಿಯೂ ಸಹ ಕೇವಲ ಚಿಕ್ಕ ಪ್ರಾಮದವರಾಗಿಯೇ ಇದ್ದರು. ಆ ಯೌವನದ ದಂಪತಿಗಳು ಪಡೆದ ಸುಭಾಗ್ಯದ ಮಗುವೇ ಈಗ ಇಟಲಿಯ ಉದ್ಧಾರಕನಾದನು. ಮುಸೋಲಿನಿಯ ತಂದೆಯು ಕಮ್ಮಾರನಾಗಿ ಜೀವಿಸುತ್ತಿದ್ದನು. ಆತನೇನೂ ಅಷ್ಟು ವಿದ್ಯಾವಂತನಲ್ಲವಾದರೂ ರಾಜಕೀಯ ವಿಷಯದಲ್ಲಿಯೂ ಅಂತರ ರಾಷ್ಟ್ರೀಯ ವಿಷಯದಲ್ಲಿಯೂ ಬಹಳ ಶ್ರದ್ಧೆಯಿದ್ದಿತು. ಈತನು ಸಮಾಜ ಸತ್ತ್ವವಾದಿ. ತನ್ನ ರಾಷ್ಟ್ರಕ್ಕಾಗಿ ಹೋರಾಡಲು ಬಹಳ ಆತುರಪಡುತ್ತಿದ್ದನು. ತನ್ನ ರಾಷ್ಟ್ರದ ಸೇವೆಗೋಸ್ಕರ ಜೀವನದ ಕಸುಬನ್ನು ಬಿಟ್ಟು ರಾಜಕೀಯ ಕ್ಷೇತ್ರಕ್ಕಿಳಿದು ಅಂತರರಾಷ್ಟ್ರೀಯ ಶಾಂತತೆಗೆ ಪ್ರಯತ್ನಿಸತೊಡಗಿದ ಕೊಂಚ ದಿವಸಗಳಲ್ಲಿ ತನ್ನ ಮತವನ್ನು ಬಲಪಡಿಸುವ ಒಂದು ಭಾರಿ ಸಂಸ್ಥೆಯನ್ನು ಮಾಡಿ ಅದರ ಅಧಿನಾಯಕನಾದನು. ಆದರೆ ಕೆಲವು ದಿನಗಳಲ್ಲಿಯೇ ಸೆರೆಮನೆಯನ್ನು ಸೇರಬೇಕಾಯಿತು. ಇದರ ಫಲದಿಂದ ಭಾವಿ ಮುಸೋಲಿನಿಗೆ ಹೆಚ್ಚು ಪ್ರಯೋಜನಕಾರಿಯಾಯಿತು. ತನ್ನ ತಂದೆಯ ರಾಷ್ಟ್ರ ಪ್ರೇಮವನ್ನೂ ಧೃಢಮನಸ್ಸನ್ನೂ ಕಂಡು ಆತನ ಹೃದಯವು ಹಿಗ್ಗಿತು. ತನ್ನ ತಂದೆಯ ಆಕೆ ಆತನು ಮಾಡುತ್ತಿದ್ದ ಯತ್ನಗಳೆಲವನ್ನೂ ಕಂಡು ರಾಷ್ಟ್ರದ ಮೇಲೆ ಹೆಚ್ಚು ಅಭಿಮಾನ

ಬೆನೆಟೊ ಮುಸೋಲಿನಿಯ ಶಿಕ್ಷಣವು ಮೊದಲು ವಿದ್ಯಾವತಿಯೂ ಸುಗುಣಿಯೂ ಆದ ಆತನ ತಾಯಿಯಿಂದಲೇ ಪ್ರಾರಂಭವಾಯಿತು. ಆಕೆಯು ಒಂದು ಬಾಲಪಾಠಶಾಲೆಯ ವಿದ್ಯಾದಾಯಿಯಾಗಿದ್ದು ತನ್ನ ಮಗನನ್ನು ಹೆಚ್ಚು ಮುತುವರ್ಜಿಯಿಂದ ತರಬೇಕೆಂಮ ಮಾಡುತ್ತಿದ್ದಳು ತಾಯಿಗೆ ತನ್ನ ಮಗನ ಮೇಲೆ ಬಹಳ ಪ್ರೇಮ. ಅಂತೆಯೇ ಮುಸೋಲಿನಿಯೂ ಕೂಡ ತಂದೆಗಿಂತಲೂ ತಾಯಿಯನ್ನು ಬಹಳ ಪ್ರೀತಿಯಿಂದಲೂ ಗೌರವದಿಂದಲೂ ಕಾಣುತ್ತಿದ್ದನು. ಇವನು ತನ್ನ ೬ ನೆಯ ವಯಸ್ಸಿನಲ್ಲಿ ಪಾಠಶಾಲೆಯನ್ನು ಸೇರಬೇಕಾಯಿತು. ಮುಸೋಲಿನಿಯು ಜನ್ಮತಃ ಸ್ವತಂತ್ರ ಜೀವಿ ಆತನು ಶಾಲೆಯ ನಿಯಮಗಳನ್ನು ನಿರಾಕರಿಸಿ ತನ್ನ ಇಷ್ಟದಂತೆ ನಡೆಯತೊಡಗಿದನು. ತುಂಟರ ತಂಡದ ಅಧಿನಾಯಕನೇ ಹೊರತು ಸಾಮಾನ್ಯ ಜೀವನದ ಪ್ರಾಣಿಯಂತಿರಲಿಲ್ಲ. ಜಗಳವಾಡುವುದರಲ್ಲಿಯೂ ಕದಿಯುವುದರಲ್ಲಿಯೂ ನಿಸ್ಸೀಮ. ಕದಿಯುತ್ತಿದ್ದುದು ಕೇವಲ ಹಣ್ಣಿಗಾಗಲಿ, ತಿಂಡಿಗಾಗಲಿ ಮಾತ್ರ. ದುಡ್ಡಿಗಲ್ಲ ಅಂತೂ ಮುಸೋಲಿನಿಯು ತುಂಟತನದಲ್ಲಿ ಪ್ರಚಂಡ. ಈ ನೈಪುಣ್ಯವನ್ನು ತೋರಿಸುವ ಕಾಲದಲ್ಲಿ ಏಟುಗಳನ್ನೂ ತಿಂದಿರುವನು. ಈಗಲೂ ಕೂಡ ಅವನ ಅಂಗಾಂಗವೆಲ್ಲವೂ ಗಾಯದ ಮಚ್ಚೆಗಳಿಂದ ತುಂಬಿರುತ್ತದೆ. ಯಾರಾದರೂ ತನ್ನನ್ನು ಅಪಮಾನ ಮಾಡಿದರೆ ಪ್ರತೀಕಾರ ಮಾಡದೆ ಆತನಿಗೆ ನಿದ್ದೆ ಸಹ ಬರುತ್ತಿರಲಿಲ್ಲ. ಅಂತೂ ಆತನು ಸೇಡನ್ನು ತೀರಿಸಿಕೊಳ್ಳುವುದರಲ್ಲಿ ತುಂಬಾ ಜಾಗರೂಕನಾಗಿದ್ದನು. ಹೈಸ್ಕೂಲಿಗೆ ಸೇರಿದ ತರುವಾಯ ಇವನದೇ ಒಂದು ಸಂಸ್ಥೆಯನ್ನು ಮಾಡತೊಡಗಿದನು. ಭಾಷಣ ಮಾಡುವುದೆಂದರೆ ಈತನಿಗೆ ನೀರು ಕುಡಿದಂತೆ. ಒಂದು ದಿವಸ ಸ್ಕೂಲಿನಲ್ಲಿ ಭಾಷಣಮಾಡುತ್ತ ಇಟಲಿ ದೇಶದ ದೊರೆಯಾದ ಅಂಬೋರ್ಟೊವನ್ನು ಕೊಲೆಮಾಡಿದ್ದಕ್ಕೆ ತನ್ನ ಸಮರ್ಥತೆಯನ್ನು ತೋರಿಸಿದನು. ಇದನ್ನು ನೋಡಿ ಪಾಠಶಾಲೆಯ ಮುಖ್ಯೋಪಾಧ್ಯಾಯರು ಪಾಠಶಾಲೆಯಿಂದ ಹೊರ ಹೊರಡಿಸಿದರು. ಆದರೆ ಕೆಲವು ಉಪಾಧ್ಯಾಯರುಗಳು ಇವನ ಧೈರ್ಯ, ಸ್ಥೈರ್ಯಗಳನ್ನು ನೋಡಿ ಪುನಃ ಶಾಲೆಗೆ ಸೇರಿಸಿದರು. ಕಾಲೇಜಿನಲ್ಲಿ ಓದಿ ಪದವೀಧರನಾದ ಮೇಲೆ ಲಾಲ್ ಟೋರಿಯೋ ಎಂಬಲ್ಲಿ ಉಪಾಧ್ಯಾಯನಾದನು. ಆದರೂ ಆತನು ರಾಜಕೀಯ ಕ್ಷೇತ್ರದಿಂದಲೂ ತನ್ನ ಸಂಸ್ಥೆಯಿಂದಲೂ ಬೇರೆಯಾಗಲಿಲ್ಲ. ಮನೆಯಲ್ಲಿ ಆತನ ತಾಯಿಯು "ಈ ರಾಜಕೀಯ ವಿಷಯಗಳು ನಮಗೇತಕ್ಕೆ" ಎಂದು ಕೇಳಿದರೆ, ಮುಂದೆ ಇಟಲಿಯನ್ನು ತಾನೇ ಆಳಬೇಕಾದ ಸಮಯ ಬರಬಹುದೆಂದು ಮುಸೋಲಿನಿಯು ಹೇಳುತ್ತಿದ್ದನಂತೆ. ಅದೀಗ ನಿಜವಾಯಿತು. ಇಟಲಿಯ ಮಹಾ ಪುರುಷ ಆ ಮುಸೋಲಿನಿಯು ಈಗ ತನ್ನ ಮಾತಿನಂತೆ ಇಟಲಿ ದೇಶದ ಅಧಿನಾಯಕನಾಗಿದ್ದಾನೆ.

ಮಹಾಯುದ್ಧದಕಿಂತ ಮೊದಲು ಮುಸೋಲಿನಿಯು ಇಟಲಿಯ ಪತ್ರಿಕೆಯೊಂದಕ್ಕೆ ಸಂಪಾದಕನಾಗಿದ್ದನು. ಇವನ ಆಸೆ, ರಾಷ್ಟ್ರಪ್ರೇಮ ಇವೆರಡೂ ಅವನನ್ನು ಆ ಕೆಲಸದಿಂದ ತಪ್ಪಿಸಿ, ರಣರಂಗಕ್ಕೆ ಇಳಿಸಿದವು. ಮಹಾಯುದ್ಧದಲ್ಲಿ ಮತ್ತು ಅದರ ತರುವಾಯ ಮುಸೋಲಿನಿಯಂತಹ ಮಹಾ ಪುರುಷನಿಲ್ಲದಿದ್ದರೆ ಇಟಲಿಯು ಇಂದು ಎಂತಹ ಸ್ಥಿತಿಗೆ ಬರುತ್ತಿತ್ತೋ ಹೇಳಲಾಗುತ್ತಿರಲಿಲ್ಲ. ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿ ಇಟಲಿಯನ್ನು ಉದ್ಧಾರಮಾಡಿ ಹೊಸ ಜೀವವನ್ನು ತುಂಬಿದನು. ಇಟಲಿ ದೇಶವೊಂದಕ್ಕೇ ಆತನು ಜೀವ ಕಳೆಯನ್ನು ತುಂಬಲಿಲ್ಲ. ಪ್ರತಿಯೊಂದು ದೇಶಕ್ಕೂ ಮಾರ್ಗದರ್ಶಕನಾಗಿರುವನೆಂದು ಹೇಳಬಹುದು.

ಮುಸೋಲಿನಿಯು ಇಟಲಿಯ ರಾಷ್ಟ್ರನಾಯಕ. ಆದರೂ ನಿಗರ್ವಿ, ರೈತರಿಗೆ, ರೈತ. ಆಡಳಿತಗಾರರಿಗೆ, ಆಡಳಿತಗಾರ. ಸೈನಿಕರಿಗೆ, ಸೇನಾನಿ. ಇಂದು ಆತನ "ರಾಷ್ಟ್ರನಾಯಕನಾದರೂ ರೈತರ ಅಡಿಯಾಳು" ಎಂಬುದನ್ನೂ "ರೈತರಿಂದ ರಾಷ್ಟ್ರ" ವೆಂಬುದನ್ನೂ ಜಗತ್ತಿಗೆ ತೋರಿಸಿರುವನು. ಹಿಂದಿನ ವರುಷ ಸ್ವತಃ ತಾನೇ ಹಾರೆ ಗುದ್ದಲಿಗಳನ್ನು ಹಿಡಿದು ಶೀತ, ತಾಪಗಳನ್ನೆಣಿಸದೆ ಹೊಲದಲ್ಲಿ ೩-೪ ಗಂಟೆಗಳ ಕಾಲ ಏಕರೀತಿಯಾಗಿ ಕೆಲಸಮಾಡಿದ. ಇಟಲಿಯ ಪೊಂಟೈನ್ ದೇಶವು ಜೌಗು ಪ್ರದೇಶವಾಗಿದ್ದಿತು. ಇದನ್ನು ಕೃಷಿ ಕ್ಷೇತ್ರವನ್ನಾಗಿ ಮಾಡುವ ಸಮಾರಂಭವನ್ನು ಮುಸೋಲಿನಿಯ ಮಾಡಬೇಕಾಯಿತು. ರಾಜಭವನದಿಂದ ಮೊದಲು ಸೇನಾಧಿಕಾರಿಗಳ ಜೊತೆಯಲ್ಲಿ ಮೋಟಾರಿನ ಮೇಲೆ ಹೊರಟು, ಪೊಂಟೈನಿಗೆ ಬಂದಿಳಿದು ಸಾಮಾನ್ಯ ರೈತನಂತೆ ಉಡುಪನ್ನು ಧರಿಸಿ ನಗೆಮೊಗದಿಂದ ಮುಸೋಲಿನಿಯು ಕೆಲಸ ಮಾಡಿದನು. ಎಲ್ಲಾ ರೈತರಂತೆ ತಾನೂ ದಿನಗೂಲಿಯ ತಿಂಡಿಯನ್ನು ತಿಂದು ಜನರೆಲ್ಲರಿಗೂ ಆದರ್ಶವಾಗಿರುವಂತೆ ಮಾಡಿದ ಮಹಾ ಪುರುಷನಿವನು. ಈತನು ಇಟಲಿಯಲ್ಲಿ ಮಾಡಿರುವ ಏರ್ಪಾಡುಗಳಂತೂ ಹೇಳತೀರದು. ತನ್ನ ದೇಶದ ಅಭ್ಯುದಯಕ್ಕೆ ಬೇಕಾದ ಸೌಕರ್ಯಗಳೆಲ್ಲವನ್ನೂ ಮಾಡುತ್ತಿರುವನು.

ಈಗ ಯುರೋಪ ದೇಶದಲ್ಲಿ ಯುದ್ಧದ ಕಾರ್ಮುಗಿಲು ಆಡುತ್ತಿದ್ದರೂ ಇಟಲಿಯು ಮಾತ್ರ ಶಾಂತತೆಯ ನೆಲೆಬೀಡಾಗಿದೆ. ಈ

ಮಹಾ ಪುರುಷನು ತನ್ನ ರಾಷ್ಟ್ರದ ಉನ್ನತಿಯನ್ನು ಹೊಂದಿದ ಮೇಲೆ ಇತರ ರಾಷ್ಟ್ರದ ಉನ್ನತಿಗೆ ಕೂಡ ತವಕಪಡುತ್ತಿರುವನು. ಮುಸೋಲಿನಿಯು ಮೇಲೆ ಅನೇಕ ಆರೋಪಣೆಗಳು ಬಂದಿದ್ದರೂ ಅವುಗಳನ್ನು ನಂಬುವುದಾಗುವುದಿಲ್ಲ. ಯಾಕಂದರೆ ಅವು "ಫೆನಿಸ್ಟ ಪಂಗಡದ" ಶತ್ರುಗಳ ಆರೋಪಣೆಗಳೇ ಹೊರ್ತು ಅನ್ಯಥಾ ಅಲ್ಲ. ಈಗ ಮುಸೋಲಿನಿಯು ತನ್ನ ರಾಷ್ಟ್ರದ ಬಗ್ಗೆ ಹೇಳತೀರದಷ್ಟು ಅಭಿಮಾನವನ್ನು ಇಟ್ಟುಕೊಂಡಿದ್ದಾನೆ. ಇಟಲಿಯಲ್ಲಿ ನವಚೇತನವನ್ನು ಉಂಟುಮಾಡಲು ವಿವಿಧ ಸಾಮಾಜಿಕ, ರಾಜಕೀಯ ಮಾರ್ಪಾಡುಗಳನ್ನು ಮಾಡುತ್ತಿರುವನು. ಇವುಗಳಲ್ಲಿ ಕೆಲವು ನಮಗೆ ವಿಚಿತ್ರವಾಗಿ ಕಂಡರೂ ಅವುಗಳಲ್ಲಿ ಮಹತ್ವವಿದೆಯೆಂದು ತಿಳಿಯದಿರದು. ಮಾದರಿಗಾಗಿ ಹೊಸ ದಂಪತಿಗಳ ಮೇಲೆ ಹಾಕಿರುವ ಕಾನೂನನ್ನು ಈ ಕೆಳಗೆ ಕೊಟ್ಟಿದೆ.

೧ ಒಬ್ಬೊಬ್ಬ ದಂಪತಿಗಳು ಕಡೆಯವಾಗಿ ೧೨ ಮಕ್ಕಳನ್ನು ಹೆರಬೇಕೆಂಬ ಅಭಿಪ್ರಾಯದಿಂದ ದಂಪತಿಗಳ ಸರ್ಟಿಫಿಕೇಟಿನಲ್ಲಿ ೧೨ ಭಾಗಗಳನ್ನು ಮಾಡಿ ಅದರಲ್ಲಿ ಪ್ರತಿಯೊಬ್ಬ ಮಗುವಿನ ಹೆಸರನ್ನು ಬರೆಯಬೇಕೆಂಬ ನಿಯಮವನ್ನು ಮಾಡಿದ್ದಾನೆ.

೨ ದಂಪತಿಗಳು ವಿವಾಹಾನಂತರ ಅನ್ಯೋನ್ಯವಾಗಿ ನಡೆದುಕೊಳ್ಳುತ್ತಾ ತಮ್ಮ ಪ್ರೀತಿಯನ್ನು ಹೆಚ್ಚಿಸಿಕೊಳ್ಳುತ್ತಾ ಬರಬೇಕು.

೩ ಸತಿಯು, ಪತಿಯ ಅಜ್ಞೆಯಂತೆ ನಡೆಯಬೇಕು. ಯಾವ ವಿಷಯದಲ್ಲೂ ಸತಿಗೆ ಹೆಚ್ಚು ಸ್ವಾತಂತ್ರ್ಯವಿಲ್ಲ. ಪತಿಯೇ ಮನೆಯ ಸರ್ವಾಧಿಕಾರಿ.

೪ ತಂದೆ ತಾಯಿಗಳು ತಮ್ಮ ಮಕ್ಕಳ ಉನ್ನತಿಗೂ ಜೀವನಕ್ಕೂ ಅನುಕೂಲ ಮಾಡಕೊಡಬೇಕು.

೫ ತಮ್ಮ ಮಕ್ಕಳಿಗೆ ವಿವಾಹ ವಿಚಾರದಲ್ಲಿ ಒಳ್ಳೇ ತಿಳವಳಿಕೆಯನ್ನು ಕೊಟ್ಟು ಅವರು ದೊಡ್ಡವರಾಗುವ ವರೆಗೂ ಒಳ್ಳೇ ಹಾದಿಯಲ್ಲಿ ತರಲು ಪ್ರಯತ್ನಮಾಡಬೇಕು.

೬ ತಂದೆಯಾದವನು ಗಂಡುಮಕ್ಕಳನ್ನೂ ಹೆಣ್ಣುಮಕ್ಕಳನ್ನೂ ಪ್ರಾಪ್ತವಯಸ್ಕರಾಗುವ ವರೆಗೂ ಹತೋಟಿಯಲ್ಲಿಟ್ಟಿರಬೇಕು. ಹಾಗೆ ಅವನಿಗೆ ಅದು ಅಸಾಧ್ಯವಾದರೆ, ಆ ಕಾರ್ಯವು ತಾಯಿಯದಾಗಿರುತ್ತದೆ.

೭ ಮಕ್ಕಳು ಮಾತ್ರ ಸರ್ವವಿಧದಲ್ಲಿಯೂ ತಾಯಿ ತಂದೆಗಳ ಅಪ್ಪಣೆ ಮೀರಿ ನಡೆಯಕೂಡದು. ಈ ಕಾನೂನುಗಳನ್ನು ಮೀರಿದವರಿಗೆ ತಕ್ಕ ಶಿಕ್ಷೆಯು ವಿಧಿಸಲ್ಪಡುವುದು.

ಮುಸೋಲಿನಿಯು ಮಾಡುತ್ತಿರುವ ಕಾರ್ಯ, ಅವನಲ್ಲಿರುವ ಉತ್ಸಾಹ ಇಟಲಿಯನ್ನು ಮುಂದೆ ತರುವುದರಲ್ಲಿ ಸಂದೇಹವಿಲ್ಲ. ಈಗ ಪ್ರಪಂಚದ ಸರ್ವ ಭಾಗದಲ್ಲಿಯೂ ನಿರುದ್ಯೋಗದ ಸಮಸ್ಯೆಯು ಹೆಚ್ಚುತ್ತಿದ್ದರೆ. ಇಟಲಿಯಲ್ಲಿ ಮಾತ್ರ ಕಡಿಮೆಯಾಗುತ್ತಿದೆ. ಎಂದ ಮೇಲೆ ಮುಸೋಲಿನಿಯು ಮಾಡುತ್ತಿರುವ ಕಾರ್ಯಗಳನ್ನು ಹೊಗಳದಿರಲಾದೀತೆ? ಈಗಲೂ ಕೂಡ ಇಟಲಿಯಲ್ಲಿ ಈ ಮಹಾ ಪುರುಷನು ಹುಟ್ಟಿದ ದಿನವು ಮಹಾ ಸಂತೋಷದ ಹಬ್ಬವಾಗಿದೆ. ಇಟಲಿಯನ್ನು ಮುಂದಕ್ಕೆ ತಂದು ಈಗಿನ ಆಧುನಿಕ ರಾಷ್ಟ್ರಗಳಲ್ಲೆಲ್ಲ ತಾನೇ ಮುಂದೆಂದು ಹೇಳಕೊಳ್ಳುವಷ್ಟು ಶಕ್ತಿಯನ್ನು ಕೊಟ್ಟಂಥ ಮಹಾನುಭಾವನೆಂದರೆ ಯಾರು ತಾನೇ ಪೂಜಿಸದಿರಲಾರರು? ಅವನು ಹುಟ್ಟಿದ ಬೀದಿ ಅವನ ಹೆಸರಿಂದಲೇ ಕರೆಯಲ್ಪಡುತ್ತದೆ ಇವನು ಹುಟ್ಟಿದ ಗುಡಿಸಲನ್ನು ಅಲ್ಲಿಯ ರೈತರು ತಮ್ಮ ಖರ್ಚಿನಿಂದ ಪುನಃ ಕಟ್ಟಿಸಿರುವರು. ಆ ಮಹಾ ಪುರುಷ ಬೆನೆಟೋ ಮುಸೋಲಿನಿಯು ಹುಟ್ಟಿದ ಸ್ಥಳ ಇಂದು ಇಟಲಿಯನರಿಗೆ ಪವಿತ್ರ ಸ್ಥಳವಾಗಿದೆ.

ಆರ್. ಎಸ್. ತುಮಕೂರು.

ಸಾದರ ಸ್ವೀಕಾರ.

ಜಗದ್ಗುರು ಶಿವಯೋಗಿ ಸಿದ್ಧರಾಮ— ಇದು ಸೊಲ್ಲಾಪುರದಲ್ಲಿ ಹೊರಡುತ್ತಿರುವ ಮರಾಠಿ "ಸುದರ್ಶನ" ಪತ್ರಿಕೆಯ ವಿಶೇಷಾಂಕ. ೮೧ ಪುಟಗಳುಳ್ಳದ್ದಾಗಿದೆ ಶ್ರೀ ರೇವಣಸಿದ್ಧೇಶನು ಸುಗ್ಗಲದೇವಿಗೆ ನಮಸ್ಕರಿಸಿದ ಪ್ರಸಂಗದ ಭಾವಚಿತ್ರದಿಂದ ಬ್ರಾಹ್ಮಣ ಗರ್ವಹರಣದ ಚಿತ್ರದ ವರೆಗೆ ಒಟ್ಟು ೧೩ ಸುಂದರ ಚಿತ್ರಗಳಿವೆ. ಶ್ರೀ ಸಿದ್ಧರಾಮೇಶನ ವಿಚಾರವಾಗಿ ಪ್ರಸಿದ್ಧ ಲೇಖಕರು ಬರೆದ ೧೫ ಲೇಖಗಳಿವೆ.

ಈ ವಿಶೇಷಾಂಕದಿಂದ ಶ್ರೀ ಸಿದ್ಧರಾಮೇಶನ ಮತ್ತು ವೀರಶೈವಮತದ ಅನೇಕ ಮಹತ್ವದ ಸಂಗತಿಗಳು ಗೊತ್ತಾಗುತ್ತವೆ. ಮಹಾರಾಷ್ಟ್ರದ ವೀರಶೈವರು ಇದನ್ನು ಅವಶ್ಯಕವಾಗಿ ಓದಬೇಕು. ಈ ಪತ್ರಿಕೆಯ ವಿದ್ವಾನ್ ಸಂಪಾದಕರಾದ ಶ್ರೀಯುತ ಕಲ್ಯಾಣಶೆಟ್ಟಿ ಸಿದ್ಧಮಲ್ಲಪ್ಪನವರು ಬಹು ಪ್ರಯತ್ನಪೂರ್ವಕ ಈ ವಿಶೇಷಾಂಕವು ಸಕಲ ರೀತಿಗಳಲ್ಲಿಯೂ ಸುಂದರವಾಗುವಂತೆ ಪ್ರಯತ್ನಿಸಿದ್ದಕ್ಕಾಗಿ ಇವರನ್ನು ಹೃದಯಪೂರ್ವಕ ಅಭಿನಂದಿಸುತ್ತೇವೆ. ಈ ಪತ್ರಿಕೆಯು ಹೊರಟು ಸ್ವಲ್ಪೇ ಕಾಲವಾದರೂ ಈ ಪ್ರಕಾರ ವಿಶೇಷಾಂಕವನ್ನು ಪ್ರಕಟಿಸಿ ಮಹಾರಾಷ್ಟ್ರದ ವೀರಶೈವರಲ್ಲಿ ಧರ್ಮಜಾಗೃತಿಯನ್ನುಂಟುಮಾಡಿರುವ ಇವರ ಸಾಹಸವನ್ನು ತುಂಬಾ ಶ್ಲಾಘಿಸದಿರಲಾರೆವು.

ಉದಯ— ಇದು ವಿಜಾಪುರದಲ್ಲಿ ಹೊರಡುತ್ತಿರುವ ಉದಯ ಪತ್ರಿಕೆಯ ವಿಶೇಷಾಂಕ ಇದರಲ್ಲಿ ಚಿಕ್ಕದೊಡ್ಡ ೫೪ ಚಿತ್ರಗಳಿವೆ. ಮಹಾತ್ಮಾ ಗಾಂಧಿಯವರೇ ಮೊದಲಾದ ಅಖಿಲ ಭಾರತೀಯ ಮುಖಂಡರ ಮತ್ತು ಕನ್ನಡನಾಡಿನ ದೇಶ ಸೇವಕ[illegible]ವನ್ನು ಹೊಂದಿರುವ ಮೈಸೂರು ಮಹಾರಾಜರ [illegible] ಗಳ ಈ ಪ್ರಕಾರ ಎಲ್ಲತರದ ಪ್ರಮುಖರ ಚಿತ್ರಗಳ[illegible] ಬೇರೆ ಬೇರೆ ವಿಷಯಗಳಮೇಲೆ ಪ್ರಸಿದ್ಧ ವಿದ್ವಾಂಸರ ೫೦-೫೫ ಲೇಖನಗಳಿವೆ. ಪತ್ರಿಕೆಯ ಆಕಾರದ ೬೦ ಪುಟಗಳುಳ್ಳದ್ದಾಗಿದೆ. ಸಂಪಾದಕರು ಪ್ರಸಿದ್ಧ ಲೇಖಕರಿಂದ ಈ ಪ್ರಕಾರ ಲೇಖನಗಳನ್ನು ಬರೆಯಿಸಿ ತರಿಸಿ ಸಂಕ್ರಾಂತಿಯ ಕಾಲಕ್ಕೆ ಕನ್ನಡಿಗರಿಗೆ ಹಂಚಿದುದು ನಿಜವಾಗಿಯೂ 'ಎಳ್ಳುಬೆಲ್ಲ' ಕೊಟ್ಟಂತೆಯೇ ಸರಿ. ಇವರ ಈ ಸತ್ತ್ಯ ಪ್ರಯತ್ನವನ್ನು ನಾವು ಹೃದಯಪೂರ್ವಕ ಅಭಿನಂದಿಸುತ್ತೇವೆ.

ಹೋಳಿ ಸಿದ್ಧಾಂತ ಪಂಚಾಂಗವು— ಗದಗಿನ ಶ್ರೀ ಸಿ. ಕೆ. ಲಿಂಗಯ್ಯ ಸ್ವಾಮಿಗಳು ಪ್ರಕಾಶಗೊಳಿಸಿದ ಹೋಳಿ ಸಿದ್ಧಾಂತ ಪಂಚಾಂಗವು ಬಹು ಅಂದವಾಗಿ ಅಚ್ಚಾಗಿದೆ. ೭೦ ಪುಟಗಳಿವೆ. ಕ್ರಯ ೪ ಆಣೆ.

ಶೋಚನೀಯ ನಿಧನ.

ಅಸೆಂಬ್ಲಿಯ ಹಿಂದಣ ಸಭಾಸದರಾಗಿದ್ದ ಮತ್ತು ಮದ್ರಾಸ ವರ್ಣಾಶ್ರಮ ಸ್ವರಾಜ್ಯ ಸಂಘದ ಅಧ್ಯಕ್ಷರಾಗಿದ್ದ ಶ್ರೀ. ಎಂ. ಕೆ. ಆಚಾರ್ಯರು ಇವರು ತಾ. ೨೮ನೆಯ ರಾತ್ರಿ ಮದ್ರಾಸಿನಲ್ಲಿ ಹೃದಯ ವಿಕಾರದಿಂದ ಅಕಸ್ಮಾತ್ತಾಗಿ ಮೃತಪಟ್ಟರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಆ ದಿನ ಸಾಯಂಕಾಲ ಒಂದು ಸಂತೋಷದ ಸಮಾರಂಭಕ್ಕೆ ಕೂಡಾ ಹೋಗಿದ್ದರು. ಇವರಿಗೆ ಮರಣ ಕಾಲದಲ್ಲಿ ೪೧ ವರುಷಗಳು ಮಾತ್ರ. ಇವರು ಇಂಗ್ಲಿಷಿನಲ್ಲಿ ಬಹು ಗಟ್ಟಿಗರಿದ್ದರು. ಶಾರದಾಬಿಲ್ಲಿಗೆ ಅಸೆಂಬ್ಲಿಯಲ್ಲಿ ವಿರೋಧಿಸಿದ್ದರು. ಇವರ ಅಕಾಲ ಮೃತ್ಯುವಿನಿಂದ ಸನಾತನ ಪಕ್ಷಕ್ಕೆ ತುಂಬಾ ನಷ್ಟವಾಯಿತು. ಇವರ ಸಾಹಸವು ಅನುಕರಣೀಯವಾಗಿದ್ದಿತು. ಇವರ ಆತ್ಮಕ್ಕೆ ಶಾಂತಿದೊರೆಯಲಿ.

ದಾಸಿಮಯ್ಯಗಳ ವಿಚಾರವಾಗಿ ಶಾಸ್ತ್ರಿಗಳ ಅಭಿಪ್ರಾಯ.

ದೇವರ ದಾಸಿಮಯ್ಯನವರು ಶೈವರೆ? ಅಥವಾ ವೀರಶೈವರೆ? ಇವರ ಕಾಲವಾವುದು? ಜಯಸಿಂಹನ ಕಾಲದ ದಾಸಿಮಯ್ಯನವರು ಮತ್ತು ಬಸವೇಶನ ಕಾಲದ ವಚನಕಾರರಾದ ದಾಸಿಮಯ್ಯನವರು ಬೇರೆ ಬೇರೆಯೇ? ಅಥವಾ ಇಬ್ಬರೂ ಒಂದೇ? ಎಂಬ ಸಂಗತಿಗಳನ್ನು ಕುರಿತು ಅನೇಕ ವಿದ್ವಾಂಸರು ಶರಣ ಸಂದೇಶ ಪತ್ರಿಕೆಯಲ್ಲಿಯೂ ಬೇರೆ ಪುಸ್ತಕಗಳಲ್ಲಿಯೂ ಚರ್ಚಿಸಿದ್ದಾರಷ್ಟೆ.

ಈ ವಿಚಾರವಾಗಿ ಕೀರ್ತನ ಕೇಸರೀ ಶ್ರೀ. ಶಿವಮೂರ್ತಿ ಶಾಸ್ತ್ರಿಗಳವರು ಬೆಳಗಾವಿಯ ಸಂಯುಕ್ತ ಕರ್ನಾಟಕ ಎಂಬ ದಿನ ಪತ್ರಿಕೆಯ ತಾ. ೨೮-೧೨-೩೪ ರಿಂದ ತಾ. ೨-೧-೩೫ ರ ವರೆಗಿನ ಸಂಚಿಕೆಗಳಲ್ಲಿ ಒಂದು ವಿಸ್ತಾರವಾದ ಲೇಖನವನ್ನು ಪ್ರಕಟಗೊಳಿಸಿ ಅದನ್ನು ಈ ಶರಣ ಸಂದೇಶದಲ್ಲಿಯೂ ಪ್ರಸಿದ್ಧಿಸಬೇಕಾಗಿ ಕಳುಹಿಸಿದ್ದಾರೆ. ಈ ಘನವಾದ ಲೇಖನವನ್ನು ಪ್ರತಿವಾರ ಎರಡೆರಡು ಪುಟಗಳಲ್ಲಿ ಪ್ರಕಟಿಸಿದರೂ ೭-೮ ವಾರಗಳು ಬೇಕಾಗಬಹುದು. ಹೀಗೆ ಪ್ರಕಟಿಸುವುದು ವಾರಪತ್ರಿಕೆಗೆ ಅನುಕೂಲವಲ್ಲ. ಮತ್ತು ಅದನ್ನು ಸಂಪೂರ್ಣವಾಗಿ ಈ ಪತ್ರಿಕೆಯಲ್ಲಿ ಪ್ರಕಟಿಸುವ ಅಗತ್ಯವೂ ಇಲ್ಲ.

ಏಕೆಂದರೆ, ಜಯಸಿಂಹನ ಕಾಲದ ದಾಸಿಮಯ್ಯನೇ ಬೇರೆ; ಬಸವೇಶನ ಕಾಲದಲ್ಲಿದ್ದ ವಚನಕಾರನಾದ ದಾಸಿಮಯ್ಯನೇ ಬೇರೆ, ಎಂಬ ವಿಚಾರದಲ್ಲಿ ಶ್ರೀ. ಮಾಳವಾಡರಿಗೂ ಶ್ರೀ. ಕಲ್ಲುಮಂಗಲ ಶ್ರೀ ಕಂಠಯ್ಯನವರಿಗೂ ಶ್ರೀ. ಶಾಸ್ತ್ರಿಗಳವರಿಗೂ ಭಿನ್ನಾಭಿಪ್ರಾಯವಿಲ್ಲ. ಎಂದಮೇಲೆ ಆ ಸಂಗತಿಯ ಆಧಾರಕ್ಕಾಗಿ ಬರೆದ ವಿಷಯಗಳು ಈ ಪತ್ರಿಕೆಯಲ್ಲಿ ಪ್ರಕಟಿಸುವುದೇಕೆ? ಜಯಸಿಂಹನ ಕಾಲದಲ್ಲಿದ್ದ ದಾಸಿಮಯ್ಯ ಶೈವನೆಂದು ಅವರು ಹೇಳಿದ್ದಾರೆ. ಶಾಸ್ತ್ರಿಗಳಾದರೋ ವೀರಶೈವನೆಂದು ಹೇಳುತ್ತಿದ್ದಾರೆ ಆದಕಾರಣ ಈ ಭಿನ್ನಾಭಿಪ್ರಾಯದ ಸಂಬಂಧವಾಗಿ ಶಾಸ್ತ್ರಿಗಳು ಯಾವ ಯಾವ ಆಧಾರಗಳನ್ನು ತಮ್ಮ ಪರವಾಗಿ ಪ್ರತಿಪಾದಿಸಿದ್ದಾರೆಯೋ ಅವು ತಿಳಿಯಬೇಕಾದುದು ಅವಶ್ಯಕ. ಅದಕ್ಕಾಗಿ ಆ ಸಂಗತಿಯನ್ನೇ ಶಾಸ್ತ್ರೀಗಳವರ ಲೇಖನದಿಂದ ಎತ್ತಿತೆಗೆದು ಸಂಕ್ಷಿಪ್ತವಾಗಿ ಇಲ್ಲಿ ಕೊಟ್ಟಿದೆ. [ಸಂಪಾದಕ]

“ಪೊಟ್ಟಲಕೆರೆಯಲ್ಲಿ ಜಯಸಿಂಹನ ಕಾಲಕ್ಕೆ (ಎಂದರೆ ಶ್ರೀ. ಶ. ೧೦೦೮ ರಿಂದ ೧೦೪೦ ರ ವರೆಗೆ) ಇದ್ದ, ಆತನ ಪತ್ನಿಗೆ ಗುರುವಾದ ಮತ್ತು ೨೦ ಸಾವಿರ ಜೈನರನ್ನು ಸೋಲಿಸಿ ಅವರಿಗೆ ಶಿವದೀಕ್ಷೆಕೊಟ್ಟ ಶಿವನಿಗೆ ಪೀತಾಂಬರವನ್ನು ಕೊಟ್ಟು ತಪಸಿದ್ಧಿಯನ್ನು ಹೊಂದಿದ ದೇವರ ದಾಸಿಮಯ್ಯ ಅಥವಾ ಜೇಡರ ದಾಸಿಮಯ್ಯ ಎಂಬುವವರು ವೀರಶೈವರು. ಇವರ ಕಾಲಕ್ಕೇನೇ ಶಂಕರ ದಾಸಿಮಯ್ಯನವರೂ ಇದ್ದರು. ಇವರೂ ವೀರಶೈವರು. ಸೂಜಿಯ ಕಾಯಕವನ್ನು ಮಾಡುತ್ತಿದ್ದರು. ದೇವರ ದಾಸಿಮಯ್ಯನವರ ಗರ್ವಭಂಗಮಾಡಿದವರೂ ಇದೇ ಶಂಕರ ದಾಸಿಮಯ್ಯನವರು. ಈ ವಿಷಯವಾಗಿ ಪ್ರಮಾಣಗಳು.

ಪುರಾಣಗಳ ಪ್ರಮಾಣ.

(೧) ಮಹಾಕವಿ ಹರಿಹರದೇವನು ಬರೆದಿರುವ ರಘಟಾ ಕಾವ್ಯಾಂತರ್ಗತ “ಶಂಕರ ದಾಸಿಮಯ್ಯಗಳ ರಗಳೆ” ಎಂಬ ಗ್ರಂಥದಲ್ಲಿ ಶಂಕರ ದಾಸಿ ಜಡೆ ಶಂಕರಲಿಂಗದಿಂದ ಲಿಂಗಧಾರಣೆ ಹೊಂದಿದನೆಂದು ಈತನು ಮತ್ತು ಜೇಡರ ದಾಸಿಗಳು ಸಮಕಾಲೀನರೆಂದೂ ವೀರಶೈವರೆಂದೂ ಹೇಳಿದೆ (೨) ಮಹಾಕವಿ ಪಾಲ್ಕುರಿಕೆ ಸೋಮನಾಥನು ಆಂಧ್ರ ಭಾಷೆಯಲ್ಲಿ ಬರೆದಿರುವ “ಬಸವ ಪುರಾಣಮು” ಎಂಬ ಗ್ರಂಥದಲ್ಲಿ “ಜೇಡರ ದಾಸಿ-ಶಂಕರ ದಾಸಿಗಳು ಸಮಕಾಲೀನರು. ಜೇಡರ ದಾಸಿಯು ಪೊಟ್ಟಲಕೆರೆಯ ರಾಜಸಭೆಯವರನ್ನು ಜೈಸಿ ಶಿವದೀಕ್ಷೆಯನ್ನು ಕೊಟ್ಟನು.” ಎಂದು ಬರೆದಿದೆ. (೩) ಕನ್ನಡ ಬಸವ ಪುರಾಣದಲ್ಲಿ ಭೀಮ ಕವಿಯು “ಪೊಟ್ಟಲಕೆರೆಯಲ್ಲಿ ೨೦ ಸಾವಿರ ಜೈನರನ್ನು ದೇವರ ದಾಸಿಮಯ್ಯನು ಸೋಲಿಸಿ ಅವರಿಗೆ ಶಿವದೀಕ್ಷೆಯನ್ನು ಕೊಟ್ಟನೆಂದೂ ದೇವರ ದಾಸಿಮಯ್ಯ ಶಂಕರ ದಾಸಿಮಯ್ಯ ಸಮಕಾಲೀನರೆಂದೂ” ಹೇಳಿದ್ದಾನೆ. (೪) ಮಹಾಕವಿ ಷಡಕ್ಷರ ದೇವನು ತನ್ನ ವೃಷಭೇಂದ್ರ ವಿಜಯ ಮಹಾ ಕಾವ್ಯದಲ್ಲಿ ಶಂಕರ ದಾಸಿಮಯ್ಯ ಮತ್ತು ದೇವರ ದಾಸಿಮಯ್ಯಗಳ ಕಥೆಯನ್ನು ಬರೆದು ಈ ಉಭಯರೂ ವೀರಶೈವರೆಂದೂ ಮಹಾ ಮಹಿಮಾಶಾಲಿಗಳೆಂದೂ ಹೇಳಿದ್ದಾನೆ.

(೫) ವ್ಯಾಸೋಕ್ತ ಬಸವಪುರಾಣವೆಂಬ ಸಂಸ್ಕೃತ ಬಸವ ಪುರಾಣದಲ್ಲಿ ಹೀಗೆ ಹೇಳಿದೆ—“ಶಂಕರ ದಾಸಿ - ದೇವರ ದಾಸಿಮಯ್ಯಗಳು ಸಮಕಾಲೀನರು. ದೇವರ ದಾಸಿಮಯ್ಯನವರು ಪೊಟ್ಟಲಕೆರೆಗೆ ಹೋಗಿ ೨೦ ಸಾವಿರ ಜೈನರನ್ನು ಸೋಲಿಸಿ ಅವರಿಗೆ ಲಿಂಗಧಾರಣೆಮಾಡಿದರು.” (೬) ಕಾಂಚಿ ಶಂಕರಾರಾಧ್ಯನು ಬರೆದಿರುವ ಬಸವೇಶ ವಿಜಯದಲ್ಲಿ “ಶಂಕರ ದಾಸಿ ದೇವರ ದಾಸಿಗಳು ಸಮಕಾಲೀನರು. ಶಂಕರ ದಾಸಿಮಯ್ಯನು ದೇವರ ದಾಸಿಮಯ್ಯನ ಗರ್ವಭಂಗಮಾಡಿದನು. ದೇವರ ದಾಸಿಮಯ್ಯನು ಪೊಟ್ಟಲಕೆರೆಯಲ್ಲಿ ೨೦ ಸಾವಿರ ಜೈನರನ್ನು ಸೋಲಿಸಿ ಎಲ್ಲರಿಗೂ ಲಿಂಗಧಾರಣೆಮಾಡಿದನು.” ಎಂದು ಬರೆದಿದೆ.

ಇತಿಹಾಸ ಪಂಡಿತರ ಅಭಿಪ್ರಾಯ.

(೧) ಪಾಲ್ಕುರಿಕೆ ಸೋಮನಾಥನ ಆಂಧ್ರ ಭಾಷೆಯ ಬಸವ ಪುರಾಣಕ್ಕೆ ಪೀಠಿಕೆಯನ್ನು ಬರೆದಿರುವ ಶ್ರೀ. ವೇಮಾರು ಪ್ರಭಾಕರ ಶಾಸ್ತ್ರಿಗಳು ಆ ಪೀಠಿಕೆಯಲ್ಲಿ ಹೀಗೆ ಹೇಳಿದ್ದಾರೆ—ಶಂಕರ ದಾಸ ಮತ್ತು ಜೇಡರ ದಾಸ ಸಮಕಾಲೀನರು. ಶಂಕರ ದಾಸಿಯು ಜಯಸಿಂಹನ ರಾಜಧಾನಿಗೆ ಬಂದು ವಿಷ್ಣು ಮೂರ್ತಿಯನ್ನು ಚೂರುಚೂರಾಗಿ ಮಾಡಿದನು. ಜೇಡರ ದಾಸಿಯು ಜೈನರನ್ನೆಲ್ಲಾ ಶಿವಭಕ್ತರನ್ನಾಗಿ ಜೈನ ಮಠಗಳನ್ನೆಲ್ಲಾ ಶಿವಾಲಯಗಳನ್ನಾಗಿ ಮಾಡಿದನು.

(೨) ಶ್ರೀ. ಎಂ.-ಎಂ. ಕಲ್ಯಾಣಶೆಟ್ಟಿಯವರು ಮರಾಠಿಯಲ್ಲಿ ಬರೆದ ವೀರಶೈವರ ಸ್ಥಿತಿ ಎಂಬ ಪುಸ್ತಕದಲ್ಲಿ ಹೀಗಿದೆ—“ಜಯಸಿಂಹನ ಹೆಂಡತಿ ಸುಗ್ಗಲದೇವಿಗೆ ದೇವರ ದಾಸಿಮಯ್ಯನು ವೀರಶೈವ ದೀಕ್ಷೆಯನ್ನು ಕೊಟ್ಟನೆಂದು ಫ್ಲೀಟ ಸಾಹೇಬರು ಹೇಳುತ್ತಾರೆ.”

(೩) ಶ್ರೀ. ಹರ್ಡೇಕರ ಮಂಜಪ್ಪನವರು ಬರೆದ ಬಸವ ಚರಿತ್ರೆಯಲ್ಲಿ ಹೀಗಿದೆ ಮಿ. ಫ್ಲೀಟಸಾಹೇಬರು “ಕನ್ನಡ ಜಿಲ್ಹೆಯ

ವಂಶಗಳು " ಎಂಬ ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ—"ಕ್ರಿ. ಶ. ೧೦೧೬ ರಿಂದ ೧೦೪೦ ರ ವರೆಗೆ ಪೊಟ್ಟಲಕೆರೆಯಲ್ಲಿ ಆಳಿದ ಜಯಸಿಂಹ ರಾಜನು ದೇವರ ದಾಸಿಮಯ್ಯನಿಂದ ವೀರಶೈವಮತ ದೀಕ್ಷೆಯನ್ನು ಹೊಂದಿದನು."

(೪) ಮಹಾ ಮಹೋಪಾಧ್ಯಾಯ ರಾವಬಹದ್ದೂರ್ ಆರ್. ನರಸಿಂಹಾಚಾರ್ಯರು ಕನ್ನಡ ಕವಿಚರಿತ್ರೆಯ ಒಂದನೆಯ ಭಾಗದಲ್ಲಿ ಹೀಗೆ ಬರೆದಿದ್ದಾರೆ—"ಜೇಡರ ದಾಸಿಮಯ್ಯನು ಕ್ರಿ.ಶ. ೧೦೪೦ ರಲ್ಲಿದ್ದರು. ಜೈನರನ್ನು ಜಯಿಸಿ ತನ್ನ ಶಿಷ್ಯಳಾದ ಸುಗ್ಗಲದೇವಿಯ ಗಂಡ ಜಯಸಿಂಹನನ್ನು ವೀರಶೈವನನ್ನಾಗಿ ಮಾಡಿದಂತೆ ತಿಳಿಯುತ್ತದೆ."

(೫) ಧೀನವಂತರಾದ ರಾ. ಸಾ. ಹಳಕಟ್ಟಿಯವರು ದಾಸಿಮಯ್ಯಗಳ ವಚನ ಗ್ರಂಥದ ಪೀಠಿಕೆಯಲ್ಲಿ ಹೀಗೆ ಹೇಳಿದ್ದಾರೆ. " ದೇವರ ದಾಸಿಮಯ್ಯನು ಕ್ರಿ. ಶ. ೧೦೦೮ ರಿಂದ ೧೦೪೦ ರ ವರೆಗಿದ್ದ ಜಯಸಿಂಹನ ಕಾಲದಲ್ಲಿದ್ದನು. ಫ್ಲೀಟ ಸಾಹೇಬನು ಹೇಳಿದ, ಹರಿಹರನು ಪಂಪಾ ಶತಕದಲ್ಲಿ ಉಲ್ಲೇಖಿಸಿದ, ಭೀಮ ಕವಿಯು ಬಸವ ಪುರಾಣದಲ್ಲಿ ಬರೆದ, ಮತ್ತು ಬಸವೇಶನು ತನ್ನ ವಚನಗಳಲ್ಲಿ ಹೇಳಿರುವ ದಾಸಿಮಯ್ಯನು ಈತನೇ. ಆದಕಾರಣ ವೀರಶೈವ ಮತ ಪ್ರಸಾರದ ಸಂಭವವು ಕರ್ನಾಟದಲ್ಲಿ ಬಸವನಗಿಂತಲೂ ೧೦೦-೧೫೦ ವರುಷಗಳ ಮುಂಚೆಯೇ ಪ್ರಾರಂಭವಾಗಿರಬಹುದೆಂದು ಊಹೆಗೆ ಆಸ್ಪದ ಕೊಡುತ್ತದೆ."

(೬) ಕರ್ನಾಟಕದ ಸುಪ್ರಸಿದ್ಧ ಇತಿಹಾಸ ಪಂಡಿತರಾದ ಶ್ರೀಮಾನ್ ಡಾ. ನಂದಿಮಠ ಎಂ. ಎ., ಪಿ. ಎಚ್. ಡಿ. ಅವರು ಶಿವಾನುಭವದ ೬ ನೇ ಸಂಪುಟ ೫ ನೇ ಸಂಚಿಕೆಯಲ್ಲಿ ಹೀಗೆ ಬರೆದಿದ್ದಾರೆ—" ಸ್ವತಃ ಲಿಂಗಧಾರಿಗಳಾಗಿದ್ದು ವೀರಶೈವರ ಆಚಾರವನ್ನು ಪ್ರಸಾರಮಾಡಲು ಹೆಣಗಾಡಿದವರಲ್ಲಿ ನಮಗೆ ಗೊತ್ತಿದ್ದ ಮಟ್ಟಿಗೆ ಜೇಡರ ದಾಸಿಮಯ್ಯರೊಬ್ಬರು. ಕ್ರಿ. ಶ. ೧೧೪೮ ರಲ್ಲಿ ಹುಟ್ಟಿದ ಗೊಬ್ಬೂರು ಶಿಲಾಶಾಸನದಲ್ಲಿ ಜೇಡರ ದಾಸಿಮಯ್ಯನ ಹೆಸರಿದೆ. ಈತನು ೧೦೦೮ ರಿಂದ ೧೦೪೦ ರ ವರೆಗೆ ಆಳಿದ ಜಯಸಿಂಹನ ಕಾಲದಲ್ಲಿದ್ದನು. ನಮಗೆ ಗೊತ್ತಿದ್ದ ವೀರಶೈವರ ಐತಿಹಾಸಿಕ ಪುರುಷರಲ್ಲಿ ಇವರೇ ಮೊದಲನೆಯವರೆಂದು ಅನ್ನಬಹುದು. ಆದುದರಿಂದ ಪ್ರಸ್ತುತಕ್ಕೆ ನಾವು ವೀರಶೈವರ ಇತಿಹಾಸವನ್ನು ಇವರ ಕಾಲದಿಂದ ಅಂದರೆ ೧೧ ನೆಯ ಶತಮಾನದಿಂದಲೇ ಆರಂಭಿಸಬೇಕಾಗುವದು."

(೭) ಶ್ರೀ. ಸಿದ್ಧಲಿಂಗಪ್ಪ ಮಹಾಂತಣ್ಣನವರ ಎಂಬುವವರು ಶಿವಾನುಭವದ ೬ ನೆಯ ಸಂಚಿಕೆಯಲ್ಲಿ ಹೀಗೆ ಬರೆದಿದ್ದಾರೆ. "ಜಯಸಿಂಹನ ಹೆಂಡತಿಯಾದ ಸುಗ್ಗಲದೇವಿಯು ದಾಸಿಮಯ್ಯನನ್ನು ತನ್ನ ಗುರುವನ್ನಾಗಿ ಮಾಡಿಕೊಂಡಳು. ದಾಸಿಮಯ್ಯನು ಜೈನರನ್ನು ಸೋಲಿಸಲು ಅವರು ಆತನಿಂದ ದೀಕ್ಷಾಬದ್ಧರಾಗಿ ವೀರಶೈವಮತವನ್ನಂಗೀಕರಿಸಿದರು."

(೮) ಶ್ರೀ. ಹಲಸಂಗಿಯ ಚೆನ್ನಮಲ್ಲಪ್ಪನವರು ಶಿವಾನುಭವ ಪತ್ರಿಕೆಯ ೧೧ ನೆಯ ಸಂಚಿಕೆಯಲ್ಲಿ ಹೀಗೆ ತಿಳಿಸಿದ್ದಾರೆ—

"ಮೈಸೂರು ಸೀಮೆಯ ಬೇಲೂರು ತಾಲೂಕಿನ ೧೧೨ ನೇ ನಂಬರಿನ ಶಿಲಾಶಾಸನದ ಒಂದು ಪದ್ಯದಲ್ಲಿ ದೇವರ ದಾಸಿಮಯ್ಯನ ಶಿಷ್ಯರೆನಿಸಿದ ಜಯಸಿಂಹ-ಸುಗ್ಗಲದೇವಿಯರ ಹೆಸರು ಬಂದಿದೆ. ಸುಗ್ಗಲದೇವಿಯು ಶಿವದೀಕ್ಷೆಹೊಂದಿರದಿದ್ದರೂ ಶಿವಶರಣರನ್ನು ಮನ್ನಿಸಿರುವ ಸಂಭವವಾದರೂ ಇದೆ. ಇದರ ಮೇಲಿಂದ ಬಸವಣ್ಣನವರ ಕಾಲದ ಶಿವಶರಣರ ಚಳವಳದ ಆರಂಭವು ಅವರಿಗಿಂತ ನೂರು ವರುಷಗಳ ಮೊದಲೇ ಸಣ್ಣಾಗಿ ಆರಂಭವಾಗಿತ್ತೆಂದು ತಿಳಿಯುತ್ತದೆ."

(೯) ಕ್ರಿ. ಶ. ೧೧೨೫ ರಲ್ಲಿದ್ದ ಬ್ರಹ್ಮಶಿವನು ತನ್ನ ಸಮಯ ಪರೀಕ್ಷೆಯಲ್ಲಿ ಜೇಡರ ದಾಸಿಯ ಹೆಸರನ್ನು ಎತ್ತಿದ್ದಾನೆಂದು ಕವಿಚರಿತ್ರೆಯ ೧ ನೇ ಭಾಗದ ೨೦೧ ನೇ ಪುಟದಲ್ಲಿ ಶ್ರೀ. ಆರ್. ನರಸಿಂಹಾಚಾರ್ಯರು ಹೇಳಿದ್ದಾರೆ, ಈ ಬ್ರಹ್ಮಶಿವನು ಪೊಟ್ಟಣಗೆರೆಯವನೆಂದು ಅವರೇ ನಿಶ್ಚಯಿಸಿದ್ದಾರೆ. ಈ ಬ್ರಹ್ಮಶಿವನು ಮೊದಲು ವೀರಶೈವನಾಗಿದ್ದು ಅನಂತರ ಜೈನನಾದನೆಂದು ಕವಿಚರಿತ್ರೆಯಲ್ಲಿ ಹೇಳಿದೆ.

ಪಿರಿದಲ್ತಿಯಿಂದೆ ಮಾಹೇಶ್ವರ ಧರ್ಮದೊಳೊಳ್ಪುಗಾಣದೆ ಮಗುಳ್ದೀ | ಪರಮ ಜಿನಧರ್ಮದೊಳಪ್ಪೊ | ಕ್ಕುರಾಗಿ ಪೊಡೆಸು ಕವಿ ಬ್ರಹ್ಮಶಿವನೇ ಬಲ್ಲಂ ||

ಎಂಬ ಬ್ರಹ್ಮಶಿವನ ಗ್ರಂಥದಲ್ಲಿಯ ಪದ್ಯದಿಂದ ಈತನು ಮೊದಲು ಮಾಹೇಶ್ವರ ಧರ್ಮ ಎಂದರೆ ವೀರಶೈವ ಧರ್ಮವನ್ನು ಸ್ವೀಕರಿಸಿ ಅನಂತರ ಮತ್ತೆ ಜೈನನಾದನೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ."

ಈ ಪ್ರಕಾರ ಪುರಾಣಗಳ ಮತ್ತು ಇತಿಹಾಸ ಪಂಡಿತರ ಅಭಿಪ್ರಾಯಗಳ ಮೇಲಿಂದ ಜಯಸಿಂಹನ ಕಾಲದ ದೇವರ ದಾಸಿಮಯ್ಯ ಶಂಕರ ದಾಸಿಮಯ್ಯ ಇವರು ವೀರಶೈವರೂ ವೀರಶೈವ ಮತ ಪ್ರಸಾರಕರೂ ಆಗಿದ್ದರೆಂದು ಶ್ರೀ. ಶಾಸ್ತ್ರಿಗಳವರು ಪ್ರತಿಪಾದಿಸಿದ್ದಾರೆ.

ಮುಖ್ಯಮಂತ್ರಿಗಳ ಮೇಲೆ ಭಯಂಕರ ಟೀಕೆ!

ತಾ. ೨೮ ನೆಯ ದಿನ ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಮುಖ್ಯಮಂತ್ರಿಗಳಾದ ಮಿ. ಮೆಕಡೊನೆಲ್ಡರವರ ಮೇಲೆ ಭಯಂಕರ ಟೀಕೆ. ನಿರುದ್ಯೋಗಿಗಳ ಸಹಾಯಾರ್ಥ [illegible] ಕೌಂಡು ಸಹಾಯಬೇಕೆಂಬ ಚರ್ಚೆ ಪ್ರಾರಂಭವಾಯಿತು. ಅನೇಕ ಸ್ತ್ರೀಯರು ರಾಷ್ಟ್ರೀಯ ಸರಕಾರಕ್ಕೆ ಧಿಕ್ಕಾರವಿರಲಿ. ಮಕ್ಕಳಿಗೆ ಹೊಟ್ಟೆಗಿಲ್ಲದಂತೆ ಮಾಡಿರುವ ಸರಕಾರಕ್ಕೆ ಧಿಕ್ಕಾರವಿರಲಿ. ಎಂದು ಪಾರ್ಲಿಮೆಂಟನಲ್ಲಿ ಕೂಗಿ ಕೂಗಿ ಹೇಳಿ ಗೊಂದಲಮಾಡಿದರು.

ಮಿ. ಬುಕ್‌ನನ್ ಎಂಬ ಸಭಾಸದರು ಹೀಗೆ ಹೇಳಿದರು—" ಮೆಕಡೊನೆಲ್ಡರಿಗೆ ಕುದುರೆ ಚಬಕದಿಂದ ಹೊಡೆದು ಅವರನ್ನು ಸಾರ್ವಜನಿಕ ಕಾರ್ಯಕ್ಷೇತ್ರದಿಂದ ತಳ್ಳಿಬಿಡಬೇಕು."

ಹೈದರಾಬಾದ.

ಇಲ್ಲಿ ಮದ್ಯಪಾನವು ಬಹು ಜನರಲ್ಲಿ ಹೆಚ್ಚುತ್ತಿರುವದರಿಂದ ಈ ದುಷ್ಟವ್ಯಸನವನ್ನು ಬಿಡಿಸಲು ಅಂದೋಲನಯುಕ್ತ ಪಿಕೆಟಿಂಗ್ ಪ್ರಾರಂಭವಾಗಿದೆ. ಮದ್ಯದಂಗಡಿಗೆ ಹೋಗುವವರಿಗೆ ಸದುಪದೇಶಮಾಡುತ್ತಿರುವುದರಿಂದ ಎಷ್ಟೋ ಜನರು ಕುಡಿಯಲಿಕ್ಕೆ ಹೋಗದೆ ತಿರುಗಿ ಬರುತ್ತಿದ್ದಾರೆ. ಪೋಲೀಸರು ಯಾವ ಅಡ್ಡಿಯನ್ನೂ ಮಾಡಿಲ್ಲ.

ನೈಜಾಮ ರಾಜ್ಯದಲ್ಲಿ ೯ ಲಕ್ಷದವರೆಗೆ ವೀರಶೈವರಿದ್ದರೂ ಈ ಸಾರೆ ಬಿ. ಎ. ಪರೀಕ್ಷೆಗೆ ಒಬ್ಬಾತನೇ ವಿದ್ಯಾರ್ಥಿಯಿದ್ದಾನೆ!

ಮೊಯಿಸುದ್ದೀನ ಎಂಬ ಎಂ. ಎ. ಪರೀಕ್ಷೆಗೆ ತತ್ವಜ್ಞಾನ ತೆಗೆದುಕೊಂಡ ವಿದ್ಯಾರ್ಥಿ ಉಸ್ಮಾನಿಯಾ ವಿಶ್ವವಿದ್ಯಾಲಯದ ಒಬ್ಬನೇ! ಒಬ್ಬನ ಪರೀಕ್ಷೆಗೆ ಸಿದ್ಧಗೊಳಿಸುವುದು ಬಹು ವೆಚ್ಚದ್ದೆಂದು ವಿಶ್ವವಿದ್ಯಾಲಯದವರು ಪರೀಕ್ಷೆಯೇ ಇಲ್ಲವೆಂದರು. ಇದರಿಂದ ತನಗೆ ಬಹಳ ನಷ್ಟವಾಯಿತೆಂದು ವಿಶ್ವವಿದ್ಯಾಲಯದವರ ಮೇಲೆ ೧೨ ಸಾವಿರ ರೂ. ಗಳಿಗಾಗಿ ವಿದ್ಯಾರ್ಥಿಯು ವ್ಯಾಜ್ಯಹೂಡುವವನಿದ್ದಾನೆ!



ಶಾ. ಶ. ೧೮೫೬ ನೆಯ ಮಾಘ ಶು|| ೧ ಸೋಮವಾರ.

ಹಿಂದುಸ್ಥಾನದವರ ಹೀನಾವಸ್ಥೆ.

ಹಿಂದುಸ್ಥಾನವು ಜಗತ್ತಿನ ರಾಷ್ಟ್ರಗಳಲ್ಲಿ [illegible]ಯಿಂದ ಮೊದಲನೆಯದಾಗಿದೆ. ಖನಿಜ, ಉದ್ಭಿಜ ಮೊದಲಾದ ಅಸಂಖ್ಯ ವಸ್ತುಗಳ ಬೆಳವಣಿಗೆ, ಪ್ರಕೃತಿಯ ನಾನಾ ವಿಚಿತ್ರ ಸುಖ ಸೌಲಭ್ಯಗಳಲ್ಲಿ ಮೊದಲನೆಯದಾಗಿದೆ. ಆದರೆ ಈ ದೇಶದವರ ಬಾಳುವೆ, ಮಾನ ಮನ್ನಣೆಗಳು ಮಾತ್ರ ಜಗತ್ತಿನ ಎಲ್ಲ ಸುಧಾರಿಸಿದ ರಾಷ್ಟ್ರದವರಗಿಂತ ಕಟ್ಟಕಡೆಗಿವೆ. ಹಿಂದುಸ್ಥಾನದವರು ಅನ್ಯ ರಾಷ್ಟ್ರದವರಿಗೆ ಬಹು ತುಚ್ಛರೂ, ಕ್ಷುದ್ರರೂ, ಆಗಿತೋರುತ್ತಿದ್ದಾರೆ. ಯಾಕೆಂದರೆ ಇವರು ಪರತಂತ್ರದಲ್ಲಿದ್ದಾರಲ್ಲವೆ ?

ಪರತಂತ್ರದಲ್ಲಿರುವವರ ಬಾಳುವೆಯು ಸ್ವದೇಶದಲ್ಲಿಯೂ ಕಷ್ಟ; ಪರದೇಶದಲ್ಲಂತೂ ಮತ್ತೂ ಕಷ್ಟ. ನಮ್ಮ ಕಷ್ಟವನ್ನೇ ತಿಳಿದುಕೊಳ್ಳಲು ನಾವು ಸಿದ್ಧರಾಗದಿದ್ದಾಗ ಅನ್ಯರ ದುಃಖವನ್ನೇನು ತಿಳಿಯುವೆವು ? ನಮ್ಮ ದುರವಸ್ಥೆಯ ಇನ್ನೊಂದು ಹೊಸ ಮಾದರಿ ಈಗ ತಾನೆ ವ್ಯಕ್ತವಾಗಿದೆ.

ಆಫ್ರಿಕಾಖಂಡದ ದಂಡೆಯಲ್ಲಿ ಝಾಂಝಿಬಾರ ಎಂಬ ಒಂದು ದ್ವೀಪವಿದೆ. ಅದು ೬೪೦ ಚದುರು ಮೈಲು ವಿಸ್ತಾರವುಳ್ಳದ್ದು. ಇದರ ಉತ್ತರ ಭಾಗಕ್ಕೆ ೩೮೦ ಚದುರು ಮೈಲುಗಳುಳ್ಳ ಪೆಂಬಾ ಎಂಬ ಇನ್ನೊಂದು ದ್ವೀಪವಿದೆ. ಈ ಎರಡೂ ದ್ವೀಪಗಳಲ್ಲಿ ಒಟ್ಟು ೩೫೪೭೨ ಜನರಿದ್ದಾರೆ. ಇವರಲ್ಲಿ ೧೮೬೪೬೧ ಜನರು ಆಫ್ರಿಕೆಯವರು ೩೩೪೯೬ ಜನರು ಅರಬರು ೧೪೨೪೨ ಜನರು ಹಿಂದುಸ್ಥಾನದವರು ೧೭೮ ಜನರು ಯುರೋಪಿಯನರು ಇದ್ದಾರೆ.

ಈ ಝಾಂಝಿಬಾರ ದ್ವೀಪವು ಒಬ್ಬ ಸುಲ್ತಾನರ ಪ್ರಭುತ್ವದಲ್ಲಿದೆ. ಆದರೆ ಅವರು ಬ್ರಿಟಿಶ್ ರೆಸಿಡೆಂಟರ ಸಲಹೆಯಿಂದ ರಾಜ್ಯಭಾರ ನಡೆಯಿಸಬೇಕು. ಆ ಸುಲ್ತಾನರು ಯಾವ ಅಪ್ಪಣೆಯನ್ನು ಮಾಡಿದರೂ ಅದಕ್ಕೆ ಬ್ರಿಟಿಶ್ ರೆಸಿಡೆಂಟರು ರುಜು ಹಾಕದಿದ್ದರೆ ಅದು ರಾಜಶಾಸನವಾಗುವುದಿಲ್ಲ.

ಈ ಝಾಂಝಿಬಾರ ದ್ವೀಪದಲ್ಲಿ ಲವಂಗ ಬೆಳೆಯುವುದೇ ಅತ್ಯಧಿಕ. ಪ್ರಪಂಚವು ಉಪಯೋಗಿಸುತ್ತಿರುವ ಲವಂಗದಲ್ಲಿ ೧೦೦ ಕ್ಕೆ ೮೦ ಪಾಲು ಲವಂಗವು ಈ ದ್ವೀಪದಲ್ಲಿಯೇ ಬೆಳೆಯುತ್ತದೆ. ೪೮ ಸಾವಿರ ಎಕರೆ ಭೂಮಿಯಲ್ಲಿ ೩೦ ಲಕ್ಷ ಲವಂಗದ ಗಿಡಗಳಿವೆ. ಪ್ರತಿವರುಷ ಒಂದು ಕೋಟಿ ರೂ. ಬೆಲೆಬಾಳುವ ೧೧ ಸಾವಿರ ಟನ್ ಲವಂಗ ಇಲ್ಲಿಂದಲೇ ಪರದೇಶಗಳಿಗೆ ಹೋಗುತ್ತದೆ. ಇದರ ವಿನಾ ಸಾಧಾರಣ ೪೦ ಲಕ್ಷ ರೂ. ಬೆಲೆಬಾಳುವ ತೆಂಗಿನ ಕಾಯಿಗಳೂ ಇಲ್ಲಿಂದ ಅನ್ಯ ದೇಶಗಳಿಗೆ ಹೋಗುತ್ತವೆ.

ಈ ಪ್ರಕಾರ ಲವಂಗ ಮತ್ತು ತೆಂಗಿನಕಾಯಿಗಳ ಪ್ರಮುಖ ವ್ಯಾಪಾರ ಸ್ಥಳವಾದ ಆ ದ್ವೀಪಕ್ಕೆ ಹಿಂದುಸ್ಥಾನದಿಂದ ಅನೇಕರು ಹೋಗಿ ಅಲ್ಲಿಯೇ ಲಕ್ಷಾಂತರ ರೂ. ಗಳನ್ನು ವೆಚ್ಚಮಾಡಿ ಕಳೆದ ೭೦-೮೦ ವರುಷಗಳಿಂದಲೂ ಆ ದ್ವೀಪದ ವ್ಯಾಪಾರವನ್ನು ಎಷ್ಟೋ ಅಭಿವೃದ್ಧಿಗೆ ತಂದಿದ್ದಾರೆ. ಅಲ್ಲಿಯ ಭೂಮಿಗಳಿಗೆ ೮೦ ಲಕ್ಷ ರೂ. ಬಂಡವಾಳ ಹಾಕಿದ್ದಾರೆ. ಹಿಂದುಸ್ಥಾನದ ಜನರು ಅಲ್ಲಿ ಅಭಿವೃದ್ಧಿ ಹೊಂದುತ್ತಿರುವುದನ್ನು ಸಹಿಸಲಾರದೆ ಅಲ್ಲಿಂದ ತಾವೇ ಹೊರಟು ಹೋಗಲೆಂಬ ಹಂಚಿಕೆಯಿಂದ ಅಲ್ಲಿಯ ಸರಕಾರವು ಅನ್ಯಾಯವಾದ ಶಾಸನವನ್ನು ಮಾಡಿದೆ.

ಯಾವುದೊಂದು ಭೂಮಿಯು ಅರಬರ ಅಥವಾ ಆಫ್ರಿಕೆಯವರ (ನಿಗ್ರೋಜನರ) ವಿನಾ ಬೇರೆಯವರಿಗೆ ಮಾರಲ್ಪಡುವುದಿದ್ದರೆ ಇಲ್ಲವೆ ಅಡವು ಹಾಕಲ್ಪಡುವುದಿದ್ದರೆ ಬ್ರಿಟಿಶ್ ರೆಸಿಡೆಂಟರ ಅಪ್ಪಣೆಯನ್ನು ಹೊಂದಬೇಕಂತೆ, ಎಂದಮೇಲೆ ಹಿಂದುಸ್ಥಾನದವರಿಗೆ ಎಷ್ಟರ ಮಟ್ಟಿಗೆ ಒಪ್ಪಿಗೆ ಕೊಡಬಹುದು? ಬ್ರಿಟಿಶ್ ರೆಸಿಡೆಂಟರ ಸಲಹೆಯಿಂದ ಲವಂಗದ ತೋಟಗರ ಒಂದು ಸಂಘ ಏರ್ಪಟ್ಟಿದೆ. ಆ ಸಂಘವು ಯಾರಿಗೆ ಒಪ್ಪಿಗೆಕೊಡುತ್ತದೋ ಅವರೇ ಅಲ್ಲಿಂದ ಲವಂಗವನ್ನು ಪರದೇಶಗಳಿಗೆ ಕಳುಹಿಸಬೇಕಂತೆ. ಲವಂಗದ ಕ್ರಯ ಮೊದಲಾದವುಗಳನ್ನು ಗೊತ್ತುಮಾಡುವುದೂ ಆ ಸಂಘದ ಕೈಯಲ್ಲಿ. ಈ ವಿಧವಾದ ಶಾಸನದಿಂದ ಹಿಂದುಸ್ಥಾನದವರ ಕೈಯಲ್ಲಿರತಕ್ಕ ವ್ಯಾಪಾರವು ದಿನೇ ದಿನೇ ಅರಬರ ಮತ್ತು ಯುರೋಪ್ಯರ ಕೈಯಲ್ಲಿ ಹೋಗುವುದಿಲ್ಲವೆ ? ಆ ಮೇಲೆ ಅಲ್ಲಿರುವ ಹಿಂದುಸ್ಥಾನದ ವ್ಯಾಪಾರಿಗಳು ಅಲ್ಲಿ ಕೂಲಿಗಳಾಗಿರಬೇಕು ಇಲ್ಲವೇ ಅಲ್ಲಿಂದ ಹೊರಟು ಬರಬೇಕು.

ಈ ಶಾಸನದ ವಿಚಾರದಲ್ಲಿ ಅಲ್ಲಿರತಕ್ಕ ಹಿಂದುಸ್ಥಾನದವರ ಅಭಿಪ್ರಾಯವೇನೆಂಬುದನ್ನು ತಿಳಿದುಕೊಂಡು ಅಲ್ಲಿಯ ಎಲ್ಲ ಸಂಗತಿಗಳಿಗೂ ಒಂದು ವರದಿಯನ್ನು ಸಿದ್ಧಗೊಳಿಸಬೇಕೆಂದು ಹಿಂದುಸ್ಥಾನ ಸರಕಾರದವರು ಶ್ರೀ. ಕೆ. ಪಿ. ಮೆನನ್ ಎಂಬುವವರನ್ನು ಝಾಂಝಿಬಾರಕ್ಕೆ ಕಳುಹಿಸಿದ್ದರು. ಇವರು ಅಲ್ಲಿಯ ಎಲ್ಲ ಸ್ಥಿತಿಗಳನ್ನು ಕಣ್ಣಾರೆ ನೋಡಿ, ಒಂದು ವರದಿಯನ್ನು ಸಿದ್ಧಗೊಳಿಸಿ ಹಿಂದುಸ್ಥಾನ ಸರಕಾರಕ್ಕೆ ಕಳೆದ ಆಗಷ್ಟ ತಿಂಗಳಲ್ಲೇ ಕೊಟ್ಟಿದ್ದರು. ಸರಕಾರವು ಅದೇಕೋ ಈ ವರೆಗೂ ಬೈಲಿಗೆ ಹಾಕಿರಲಿಲ್ಲ. ಕಳೆದ ೨೮ ನೆಯ ತಾರೀಖಿನ ದಿನ ಆ ವರದಿಯನ್ನು ಪ್ರಕಟಿಸಿದ. ಅದರಲ್ಲಿ ಶ್ರೀ. ಮೆನನ್‌ರವರು ಆ ಶಾಸನವು ಅನ್ಯಾಯವಾದ್ದೆಂದೂ ಹಿಂದುಸ್ಥಾನದವರಿಗೆ ಹೀನಾವಸ್ಥೆಯನ್ನುಂಟುಮಾಡುವದೆಂದೂ ಸ್ಪಷ್ಟವಾಗಿ ತಿಳಿಸಿದ್ದಾರೆ.

ಹಿಂದುಸ್ಥಾನ ಸರಕಾರವು ಈ ವಿಷಯದಲ್ಲಿ ಜಾಗ್ರತೆ ಲಕ್ಷಿಸುವದೆ ? ಅಸೆಂಬ್ಲಿಯಲ್ಲಿ ಈ ವಿಷಯವಂತೂ ಬಂದೇ ಬರುತ್ತದೆ. ಹಿಂದುಸ್ಥಾನದವರಿಗೆ ಅವರ ದೇಶದಲ್ಲಿ ಹೆಚ್ಚಿನ ರಾಜಕೀಯ ಸ್ವಾತಂತ್ರ್ಯವನ್ನು ಕೊಡುತ್ತಿದ್ದೇವೆಂದು ಹೇಳಿಕೊಳ್ಳುತ್ತಿರುವ ಬ್ರಿಟಿಶ್ ಸರಕಾರವು ಪರದೇಶಗಳಲ್ಲಿದ್ದ ಅವರ ಸಮಾನವಾದ ಅಧಿಕಾರವನ್ನು ಕಿತ್ತುಕೊಳ್ಳಲು ಸಹಾಯಮಾಡುವದೆ ?

ಸ್ಫುಟ ವಿಚಾರ.

ಗ್ರಾಮ ಸುಧಾರಣೆಯ ರೀತಿ.

ಸಾತಾರಾ ಜಿಲ್ಲೆಯ ಆದಿಜನರ ಸಭೆಯು ಶ್ರೀ ಕ್ಷಾತ್ರ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಗ್ರಾಮ ಸುಧಾರಣೆಯ ರೀತಿಗಳನ್ನು ಗೊತ್ತುಮಾಡುವುದೇ ಈ ಸಭೆಯ ಮುಖ್ಯೋದ್ದೇಶವಾಗಿದ್ದಿತು. ಶ್ರೀ ಜಗದ್ಗುರುಗಳು ಸೂಚಿಸಿರತಕ್ಕ ಸಂಗತಿಗಳು ಅತ್ಯಂತ ಮಹತ್ವವಾದವುಗಳಾಗಿವೆ. ಇವರು ತಮ್ಮ ಭಾಷಣದಲ್ಲಿ ಹೀಗೆ ಅಪ್ಪಣೆ ಕೊಡಿಸಿದರು—

"ಹಳ್ಳಿಗಳು ಈ ದೇಶದ ಮೂಲ ನಿವಾಸಿಗಳಾದ ಹೊಲೆಯರಿಂದಲೇ ಉಂಟಾದವು. ಆ ಮೇಲೆ ಆರ್ಯರು ಬಂದು ಇವುಗಳಲ್ಲಿ ವಾಸವಾದರು. ಯಾರು ಹಳ್ಳಿಗಳೆಂಬ ಬೀಜಗಳನ್ನು ಬಿತ್ತಿದರೋ ಆ ಅಸ್ಪೃಶ್ಯರೇ (ಆದಿಜನರೇ) ಈಗ ಗ್ರಾಮ ಸುಧಾರಣೆಯ ವಿಚಾರವಾಗಿ ಆಲೋಚಿಸುವ ಪ್ರಸಂಗ ಬಂದಿದೆ. ನಮ್ಮ ದೇಶದಲ್ಲಿ ಹಳ್ಳಿಗಳೇ ವಿಶೇಷವಾಗಿರುವುದರಿಂದ ಇವುಗಳ ಸುಧಾರಣೆಯಾದ ವಿನಾ ದೇಶೋನ್ನತಿಯಾಗುವುದು ಶಕ್ಯವೇ ಇಲ್ಲವೆಂಬುದು ಈಗ ಸಿದ್ಧಾಂತವಾದ ಸಂಗತಿ.

(೧) ಹಳ್ಳಿಗಾಡಿನ ಜನರ ಆರೋಗ್ಯ ಸುಧಾರಣೆ (೨) ಇವರಲ್ಲಿ ವಿದ್ಯಾಪ್ರಸಾರವಾಗಿ ಅದು ನಿತ್ಯ ಜೀವನದ ಬಳಕೆಗೆ ಬರುವಂತಾಗುವುದು. (೩) ಒಕ್ಕಲತನ ಕೈಗಾರಿಕೆಗಳು ಸುಧಾರಿಸಿ ಇವರ ಸಾಂಪತ್ತಿಕ ಸ್ಥಿತಿ ಹೆಚ್ಚುವುದು. (೪) ಧಾರ್ಮಿಕ ಮೂಢ ನಂಬಿಕೆಯನ್ನು ತೆಗೆದು ಹಾಕಿ ಸತ್ಯಧರ್ಮ ಮತ್ತು ನೈತಿಕ ಶೀಲಾಚಾರಗಳು ಆಚರಣೆಯಲ್ಲಿ ಬರುವಂತೆ ಮಾಡುವುದು. (೫) ಲಗ್ನ ಮುಂತಾದ ಶುಭ ಕಾರ್ಯಗಳಲ್ಲಿ ಮುಂದು ವೆಚ್ಚಮಾಡದೆ ದುರ್ವ್ಯಸನಗಳನ್ನು ಬಿಟ್ಟು ಮಿತವ್ಯಯದಿಂದ ನಡೆದ ಕೊಳ್ಳುವಂತೆ ಜನರ ಮನಸ್ಸನ್ನು ತಿರುಗಿಸುವುದು. ಇವೇ ಗ್ರಾಮ ಸುಧಾರಣೆಯ ಮುಖ್ಯ ಕಾರ್ಯಗಳು.

ಆದಿಜನರು ತಮ್ಮ ಹೆಜ್ಜೆಯ ಮೇಲೆ ತಾವೇ ನಿಲ್ಲುವುದನ್ನು ಕಲಿಯಬೇಕು. ಅನ್ಯರು ತಮ್ಮನ್ನು ಉನ್ನತ ಸ್ಥಿತಿಗೆ ತರುವರೆಂಬ ಆಸೆಯನ್ನು ಎಳ್ಳಷ್ಟಾದರೂ ಇಟ್ಟುಕೊಳ್ಳಬಾರದು. ಯಾರಿಗೆ ಹಿಂಸೆಯಾಗುತ್ತಿವೆಯೋ ಅವರೇ ಆ ಹಿಂಸೆಯನ್ನು ನಿವಾರಣೆಮಾಡಿಕೊಳ್ಳಬೇಕೇ ವಿನಾ ನಮ್ಮ ಹಿಂಸೆಯನ್ನು ಅನ್ಯರು ನಿವಾರಣೆಮಾಡಿದ್ದು ಜಗತ್ತಿನ ಚರಿತ್ರೆಯಲ್ಲಿಯೇ ವಿರಳ. ಸ್ವಾತಂತ್ರ್ಯದ ಹಕ್ಕು ಅದೇನೋ ಒಂದು ಗಿಡದಿಂದ ತಾನಾಗಿಯೇ ನಮ್ಮ ಬಾಯಲ್ಲಿ ಬಂದು ಬೀಳುವ ಫಲವಲ್ಲ. ಅದನ್ನು ಸ್ವಂತ ಶಕ್ತಿಯಿಂದ ಸಂಪಾದಿಸಬೇಕಾಗುತ್ತದೆ. ಅದಕ್ಕಾಗಿ ಎಷ್ಟೋ ಸ್ವಾರ್ಥತ್ಯಾಗಮಾಡಬೇಕಾಗುತ್ತದೆ.

ಬಹು ಜನರ ಅಭಿಪ್ರಾಯ ನೋಡಿ ನಡೆಯೋಣವೆಂದರೆ ಅದು ಸಾಧ್ಯವಲ್ಲ. ನೀರು ಹರಿಯುವುದು ನಿಂತಾಗಲೇ ಹೊಳೆ ದಾಟೋಣವೆಂದು ನಿರೀಕ್ಷಿಸಿದವನಂತೆಯೇ ನಗೆಗೀಡಾಗಬೇಕಾದೀತು. ಮಹಾತ್ಮಾ ಗಾಂಧಿಯವರ ಪ್ರಯತ್ನ ವಿಶೇಷದಿಂದ ಈ ಮಧ್ಯೆ ಅಸ್ಪೃಶ್ಯತಾ ನಿವಾರಣೆಯ ಚಟುವಟಿಕೆ ಹೆಚ್ಚಿದ್ದೇನೋ ನಿಜ. ಆದರೆ ಅದು ಜನಗಳ ವಿಚಾರದಲ್ಲಾದ ಸುಧಾರಣೆಯೇನೂ ಅಲ್ಲ. ಗಾಂಧೀಜಿಯವರ ವಿಷಯದಲ್ಲಿ ಜನಗಳಿಗಿರುವ ಆತ್ಮಾದರ ಭಾವನೆ ಮುಂದಲೇ ಹಾಗೆ ತೋರಿತೇ ವಿನಾ ಅದು ನಿಜವಾದ ಅಭಿಪ್ರಾಯ ಪರಿವರ್ತನೆಯೆಂದು ತಿಳಿಯಬೇಡಿರಿ.

ಅಸ್ಪೃಶ್ಯತೆಯು ಹಿಂದು ಜನರಲ್ಲಿ ಸಾವಿರಾರು ವರುಷಗಳಿಂದ ಬೇರೂರಿರುವ ಒಂದು ಭಯಂಕರ ಹಳೆಯ ರೋಗವು. ಅದನ್ನು ನಿವಾರಣೆ ಮಾಡಲು ನೀವು ದೀರ್ಘಕಾಲದ ವರೆಗೆ ದೀರ್ಘಪ್ರಯತ್ನವನ್ನು ಮಾಡಲೇಬೇಕಾಗುವುದು.

ನೀವು ಶುಚಿಯಾಗಿರುವುದನ್ನು ಮೊದಲು ಕಲಿಯಿರಿ. ಸತ್ತ ದನಗಳ ಮಾಂಸ ತಿನ್ನುವುದನ್ನು ಜಾಗ್ರತೆ ಬಿಡಿರಿ. ಅಸ್ಪೃಶ್ಯರು ಸತ್ತ ದನಗಳ ಮಾಂಸ ತಿನ್ನುವುದನ್ನು ಬಿಡಲೆಂಬ ಇಂಗಿತದಿಂದಲೇ ನಾನು ಅನೇಕರಿಗೆ ಜನಿವಾರವನ್ನು ಹಾಕಿದೆನು. ಹಾಗಾದರೂ ಅವರು ಕಲಿತ ಚಾಳಿಯನ್ನು ಬಿಡಲಿಲ್ಲ. ನೀವು ನಿಮ್ಮ ನಡತೆಯನ್ನು ಸುಧಾರಿಸಿಕೊಳ್ಳಿರಿ"

ಶ್ರೀ ಕ್ಷಾತ್ರ ಜಗದ್ಗುರುಗಳಂತೆಯೇ ಎಲ್ಲ ಮಠಗಳ ಜಗದ್ಗುರುಗಳೂ ಗ್ರಾಮ ಸುಧಾರಣೆಯ ಕಡೆಗೆ ಗಮನಿಸಿ ಹಳ್ಳಿಯ ಜನರಿಗೆ ಮೊದಲು ಹೊಟ್ಟೆ ತುಂಬಾ ರೊಟ್ಟಿ, ಮೈತುಂಬಾ ಬಟ್ಟೆ ದೊರೆಯುವಂತಹ ಧರ್ಮಾಚಾರಂಗಳನ್ನೇ ಬೋಧಿಸುವುದು ಅತ್ಯವಶ್ಯಕವಾಗಿಲ್ಲವೆ?

ಮೂಕ ಪ್ರಾಣಿಗಳ ಮೊರೆ!

ಸ್ವತಂತ್ರ ರಾಷ್ಟ್ರಗಳಲ್ಲಿಯ ಜನರಿಗೂ ಪರತಂತ್ರದಲ್ಲಿರುವ ಭಾರತೀಯರಿಗೂ ಹೋಲಿಸಿ ನೋಡಿದರೆ ನಮ್ಮ ಮೊರೆಯನ್ನು ಕೇಳುವವರೇ ಇಲ್ಲ. ಎಂದ ಮೇಲೆ ನಮ್ಮ ದೇಶದ ಸಂಸ್ಥಾನಗಳಲ್ಲಿರುವ ಜನಗಳ ಮೊರೆಯನ್ನಂತೂ ಕೇಳುವವರಾರು? ಕೆಲವು ಸಂಸ್ಥಾನಗಳಲ್ಲಿಯ ಜನರಂತೂ ಮೂಕ ಪ್ರಾಣಿಗಳೆಂದೇ ಹೇಳಬಹುದು! ಅವರಿಗೆ ತಮ್ಮ ಕಷ್ಟ ನಷ್ಟಗಳ ಕಲ್ಪನೆಯೇ ಇಲ್ಲ; ಇದ್ದರೂ ಹೇಳಿಕೊಳ್ಳಲಿಕ್ಕೆ ಬರುವುದಿಲ್ಲ.

ಈ ಪ್ರಕಾರ ಹಿಂದುಸ್ಥಾನದ ಸಂಸ್ಥಾನಗಳಲ್ಲಿಯ ಪ್ರಜೆಗಳ ದುರವಸ್ಥೆಯನ್ನು ನಿವಾರಣೆ ಮಾಡಲು ಪ್ರಯತ್ನಿಸುವುದು ಇತರ ಭಾರತೀಯರಿಗೂ ಇಂಗ್ಲಿಷ ಸರಕಾರದವರಿಗೂ ಕರ್ತವ್ಯವಾಗಿಯೇ ಇದೆ. ಮೈಸೂರು ಮತ್ತು ಮದ್ರಾಸ ಹೈಕೋರ್ಟುಗಳಲ್ಲಿ ಕೆಲಸ ಮಾಡಿ ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾಗಿದ್ದ ಒಬ್ಬ ದೊಡ್ಡ ಮನುಷ್ಯರು ಈ ವಿಚಾರವಾಗಿ ಹೀಗೆ ಹೇಳಿದ್ದಾರೆ—

"ಹಿಂದುಸ್ಥಾನದ ಸಂಸ್ಥಾನಗಳಲ್ಲಿ ಒಟ್ಟು ೮ ಕೋಟಿ ೧೦ ಲಕ್ಷಕ್ಕೆ ಮೀರಿದಷ್ಟು ಪ್ರಜೆಗಳಿದ್ದಾರೆ. ಎಂದರೆ ಗ್ರೇಟ ಬ್ರಿಟನ್ ಜನಸಂಖ್ಯೆಗಿಂತ ಒಂದೂವರೆ ಪಟ್ಟು, ಜಪಾನ ಅಥವಾ ಜರ್ಮನ್ ರಾಷ್ಟ್ರಗಳಿಗಿಂತ ಹೆಚ್ಚು, ಇದ್ದಾರೆ ಇಷ್ಟು ಪ್ರಜಾ ಸಂಖ್ಯೆಯ ಯೋಗಕ್ಷೇಮದ ವಿಚಾರದಲ್ಲಿ ಇಂಗ್ಲಿಷ ಸರಕಾರವು ತುಂಬಾ ನಿರ್ಲಕ್ಷಿಸಿರುವುದು ಸರಿಯಲ್ಲ. ಬ್ರಿಟಿಶ್ ಹಿಂದುಸ್ಥಾನದ ಪ್ರಜೆಗಳಿಗಿಂತ ಸಂಸ್ಥಾನಗಳ ಪ್ರಜೆಗಳೇನೂ ಕೀಳಲ್ಲ. ಅವರನ್ನು ಸಂಸ್ಥಾನಾಧಿಪತಿಗಳ ಸ್ವಾಧೀನಮಾಡಿ ಬಿಡುವುದು ಧರ್ಮವಲ್ಲ. ಬ್ರಿಟಿಶ್ ಹಿಂದುಸ್ಥಾನದ ಜನರು ಸಂಸ್ಥಾನಗಳಲ್ಲಿರುವ ತಮ್ಮ ದೇಶಬಾಂಧವರನ್ನು ಉಪೇಕ್ಷಿಸುವುದು ನ್ಯಾಯವಲ್ಲ. ಸಂಸ್ಥಾನಗಳಲ್ಲಿಯ ಪ್ರಜೆಗಳಾದರೋ ಪರಾವಲಂಬಿಗಳಾಗದೆ ತಾವು ಜಾಗೃತರಾಗಿ ಏಕಮತ್ಯದಿಂದ ಸಂಯುಕ್ತ ರಾಜ್ಯ ಘಟನೆಯಲ್ಲಿ (ಫೆಡರೇಶನ್) ಸೇರಿ ಬ್ರಿಟಿಶ್ ಹಿಂದುಸ್ಥಾನದ ಪ್ರಜೆಗಳಂತೆ ಸ್ವಾತಂತ್ರ್ಯ ಸೌಲಭ್ಯಗಳನ್ನು ಹೊಂದಲು ಪ್ರಯತ್ನಿಸಬೇಕು."

ಫೆಬ್ರವರಿ ೭ ನೆಯ ತಾರೀಖು!

ಜಾಯಿಂಟ ಪಾರ್ಲಮೆಂಟರಿ ಕಮಿಟಿಯ ವರದಿಯನ್ನು ನಿಷೇಧಿಸುವ ದಿನವಾಗಿ ಆಚರಿಸಲ್ಪಡಬೇಕೆಂದು ಕಾಂಗ್ರೆಸ ಅಧ್ಯಕ್ಷರು ತಿಳಿಸಿದ್ದಾರೆ.

ಮಠಗಳು ಏಕೆ ಏರ್ಪಟ್ಟವು?

ಹಿಂದು ಧರ್ಮದವರಲ್ಲಿ ಅನೇಕ ಮತದವರಿದ್ದಾರಷ್ಟೆ. ಇವರೆಲ್ಲರೂ ತಮ್ಮ ತಮ್ಮ ಮತದ ಮಠಗಳನ್ನು ಕಟ್ಟಿಸಿಯೇ ಇದ್ದಾರೆ. ಕೆಲವು ಮತದವರು ಹೆಚ್ಚು ಕಟ್ಟಿಸಿರಬಹುದು. ಕೆಲವರ ಮಠಗಳು ಕಡಿಮೆ ಇರಬಹುದು. ಅಂತೂ ಮಠಗಳು ಮಾತ್ರ ಇದ್ದೇ ಇವೆ. ಇವೇಕೆ ಏರ್ಪಟ್ಟವು? ಇವು ಹಿಂದು ಧರ್ಮಕ್ಕಾಗಲಿ ಅಥವಾ ಸಮಾಜಕ್ಕಾಗಲಿ ಅಗತ್ಯವೇ? ಅಗತ್ಯವಾಗಿದ್ದರೆ ಇವುಗಳಿಂದಾಗಬೇಕಾದ ಕಾರ್ಯಕಲಾಪಗಳಾವುವ?

ಅರಮನೆಯೇಕೆ? ರಾಜನಿರಲಿಕ್ಕೆ. ಕೋರ್ಟು ಕಚೇರಿಗಳೇಕೆ? ನ್ಯಾಯಾಧೀಶರು ನ್ಯಾಯ ವಿಚಾರಣೆ ಮಾಡಲಿಕ್ಕೆ. ಚಾವಡಿಯೇಕೆ? ಗೌಡರು ಊರ ಕಾರಭಾರ ನಡೆಸಲಿಕ್ಕೆ. ಪಟ್ಟಣದಿಂದ ಹಳ್ಳಿಯ ವರೆಗೂ ಪ್ರಭುತ್ವದ ಕಾರ್ಯಗಳನ್ನು ನಡೆಯಿಸಲು ಈ ಸಂಸ್ಥೆಗಳೆಲ್ಲಾ ಬೇಕೇ ಬೇಕಲ್ಲವೆ? ಈ ಸ್ವಾತಂತ್ರ್ಯ ಕಾಲದಲ್ಲಿ ಕೂಡಾ ಪಾರ್ಲಮೆಂಟ ಬೇಕಲ್ಲವೆ? ರಾಷ್ಟ್ರವನ್ನು ಸಂರಕ್ಷಿಸಿ ಸುಖ ಶಾಂತಿಗಳಲ್ಲಿಡಬೇಕಾದರೆ ರಾಷ್ಟ್ರ ಪ್ರಮುಖರು ಕಾರಭಾರ ನಡೆಯಿಸಲು ಒಂದು ಸ್ಥಳ ಬೇಡವೆ?

ಜನಾಂಗದ ಸುಖಶಾಂತಿಗಳಿಗೆ ಈ ರಾಜಕೀಯ ಸಂಸ್ಥೆಯೊಂದೇ ಸಾಲದು. ಧಾರ್ಮಿಕ ಸಂಸ್ಥೆಯೂ ಅಗತ್ಯವೆಂದು ಮನುಷ್ಯ ಜಾತಿಗೆ ಎಷ್ಟೋ ಕಾಲದ ನಂತರ ಗೊತ್ತಾಯಿತು. ಆಗ ಧರ್ಮ ರಕ್ಷಣೆಗಾಗಿ ಮಠಗಳು ಏರ್ಪಟ್ಟವು. ಯಾರು ತಮ್ಮ ಪರಾಕ್ರಮ ಶಕ್ತಿ ಸಾಹಸಗಳಿಂದ ಜನರನ್ನು ಸಂರಕ್ಷಿಸಲು ಸಮರ್ಥರೋ ಅವರೇ ರಾಜರು. ಅವರಿರುವ ಮನೆಯೇ ಅರಮನೆ. ಅದೇ ಪ್ರಕಾರ ಯಾರು ಧರ್ಮವನ್ನು ತಮ್ಮ ಸದ್ಗುಣ ಸದಾಚಾರಗಳಿಂದಲೂ ಸದುಪದೇಶಗಳಿಂದಲೂ ರಕ್ಷಿಸಲು ಸಮರ್ಥರೋ ಅವರೇ ಗುರುಗಳು. ಅವರಿರುವ ಸ್ಥಳವೇ ಮಠ. ಅಂತೆಯೇ ಅರಮನೆ ಗುರುಮನೆಗಳೆರಡೂ ಜನಾಂಗದ ಸುಖಶಾಂತಿಗಳಿಗೆ ಅವಶ್ಯಕವಾದವುಗಳೆಂದು ಅನೇಕ ಕಾಲಗಳ ಅನುಭವದಿಂದ ಗೊತ್ತಾದ ಸಂಗತಿ.

ರಾಜನು ಪ್ರಜೆಗಳ ರಕ್ಷಣೆಗಲ್ಲವೆ? ಪ್ರಜೆಗಳ ಹಿತಾರ್ಥವಾಗಿಯೇ ಆತನಿರುತ್ತಾನಷ್ಟೆ. ಆತನ ಅರಮನೆಯು ಪ್ರಜೆಗಳ ಸುಖಶಾಂತಿಗಳ ಹೆಗ್ಗುರುತಲ್ಲವೆ? ಅರಮನೆಯಿದೆಯೆಂದರೆ ಅರಸನಿದ್ದಾನೆಂದೇ ತಿಳಿಯಬೇಕು. ಅರಸನಿದ್ದ ಮೇಲೆ ಪ್ರಜೆಗಳು ಸುಖಶಾಂತಿಗಳಿಂದಿರಲೇ ಬೇಕು. ಹಾಗಿಲ್ಲದಿದ್ದರೆ ಅದೆಂತಹ ಅರಮನೆ? ಅಲ್ಲಿರುವವನೆಂತಹ ಅರಸ?

ಇದೇ ಪ್ರಕಾರ ಒಂದು ಮತದ ಮಠವಿದೆಯೆಂದರೆ ಆ ಮತದ ತತ್ವಗಳನ್ನು ಆಚರಿಸುವವರೂ ಅನ್ಯರಿಗೆ ಆಚರಿಸಲು ಬೋಧಿಸುವವರೂ ಅಲ್ಲಿರಲೇ ಬೇಕು. ಅವರೇ ಗುರುಗಳು. ಹಾಗಿಲ್ಲದಿದ್ದರೆ ಅದೆಂತಹ ಮಠ? ಅಲ್ಲಿರುವವರೆಂತಹ ಗುರುಗಳು?

ರಾಜನು ಪ್ರಜೆಗಳನ್ನು ರಕ್ಷಿಸದೆ ಭಕ್ಷಿಸಹತ್ತಿದರೆ, ಪ್ರಜೆಗಳನ್ನು ನಾನಾ ರೀತಿಯಿಂದ ಹಿಂಸೆಗೊಳಿಸಿದರೆ, ಇಲ್ಲವೇ ಹೇಡಿಯಾಗಿದ್ದರೆ, ಅಥವಾ ವಿಷಯೋಪಭೋಗಿಯಾಗಿ ಪ್ರಜೆಗಳ ಕಷ್ಟ ನಷ್ಟಗಳನ್ನು ನೋಡದಿದ್ದರೆ ಆತನನ್ನು ತೆಗೆದುಹಾಕುವುದಿಲ್ಲವೆ? ಆ ಅರಮನೆಯು ಹೇಡಿಯ ಗೂಡಾಗಬಹುದೆ? ಅಥವಾ ಕ್ರೂರ ಪ್ರಾಣಿಯ ಗುಹೆಯಾಗಬಹುದೆ? ಇಲ್ಲವೇ ಇಲ್ಲ. ಅಯೋಗ್ಯನಾದವನು ಅರಸೊತ್ತಿಗೆಯ ಮೇಲೆ ಕುಳಿತು ಮೆರೆಯುವ ಕಾಲ ಅಂದೇ ಹೋಯಿತು.

ಇದೇ ಪ್ರಕಾರ ಮಠಗಳಲ್ಲಿರುವವರು ಧರ್ಮಜ್ಞಾನ ಹೀನರಾಗಿದ್ದರೆ, ದುರ್ಗುಣ ದುರಾಚಾರಗಳುಳ್ಳವರಾಗಿ, ತಮ್ಮ ನಡೆ ನುಡಿಗಳಿಂದ ಜನರಲ್ಲಿ ಅಧರ್ಮವನ್ನು ಪ್ರಸಾರಗೊಳಿಸುತ್ತ ಹಿಂಸಕರಾಗಿದ್ದರೆ ಅವರನ್ನು ಗುರುಸ್ಥಳದಿಂದ ತಳ್ಳಬೇಕಲ್ಲವೆ? ಅವರಿಂದ ಆ ಮಠವು ಅಪವಿತ್ರವಾಗದಂತೆ ಆ ಮತದ ವಿವೇಕಿಗಳು ಪ್ರಯತ್ನಿಸಬೇಕಲ್ಲವೆ? ತಮ್ಮ ತಮ್ಮ ವಿಹಿತವಾದ ಕರ್ತವ್ಯವನ್ನು ಮಾಡದಿದ್ದ ಮೇಲೆ ಅವರಿಗೆ ಆ ಸಂಬಂಧವಾದ ಮಾನ ಮನ್ನಣೆ ಸೌಕರ್ಯಗಳು ಹೇಗೆ ತಾನೆ ದೊರೆಯುವವು?

ಇದೇನೋ ಸಕಲ ಮತಗಳ ಮಠಗಳಿಗೂ ಸಂಬಂಧಿಸಿದ ವಿಷಯ. ಇನ್ನು ವೀರಶೈವರ ಮಠಗಳ ಸಂಬಂಧವಾಗಿಯೇ ಸ್ವಲ್ಪ ಯೋಚಿಸೋಣ. ಏಕೆಂದರೆ, ಈ ಮತದವರಲ್ಲಿದ್ದಷ್ಟು ಮಠಗಳು ಜಗತ್ತಿನ ಯಾವ ಧರ್ಮದವರಲ್ಲಿಯೂ ಇದ್ದಂತೆ ಕಾಣುವುದಿಲ್ಲ. ಹಿಂದು ಧರ್ಮದ ಬೇರೆ ಮತಗಳಲ್ಲಂತೂ ಇಲ್ಲವೇ ಇಲ್ಲ.

ವೀರಶೈವರಲ್ಲಿ ಮಠಗಳು ಅತ್ಯಧಿಕ. ವೀರಶೈವರ ಹತ್ತೆಂಟು ಮನೆಗಳಿದ್ದಲ್ಲಿ ಕೂಡಾ ಒಂದು ಮಠ. ಒಂದೇ ಊರಲ್ಲಿ ೪೦-೫೦ ಮಠಗಳು ಕೂಡಾ ಇದ್ದುದುಂಟು. ಈ ಪ್ರಕಾರ ಮಠಗಳು ಹೆಚ್ಚಾಗಿದ್ದ ಮೇಲೆ ಮತ ತತ್ವಗಳೂ ಹೆಚ್ಚು ಪ್ರಸಾರವಾಗಿರಬೇಕಲ್ಲವೆ? ಈ ಮತದ ತತ್ವಗಳಂತೆ ನಡೆಯುವವರ ಸಂಖ್ಯೆಯೂ ಅಧಿಕವಾಗಿಯೇ ಇರಬೇಕಲ್ಲವೆ? ಈಗ ಹಾಗಿದೆಯೇ? ಮಠಗಳಲ್ಲಿರುವ ಗುರು ಜಂಗಮರೆಲ್ಲರೂ ತಮ್ಮ ತಮ್ಮ ಅಧಿಕಾರ ಆಚರಣೆಗಳಿಗನುಸರಿಸಿಯೇ ನಡೆಯುತ್ತಿದ್ದಾರೆಯೆ? ಆ ಗುರು ಜಂಗಮರೂ, ಮಠಾಭಿಮಾನಿಗಳೂ, ಮತಾನುಯಾಯಿಗಳೂ ತಮ್ಮಲ್ಲಿಯೇ ತಾವು ಸ್ವಲ್ಪ ಯೋಚಿಸಿ ನೋಡಲಿ.

ಹೆಚ್ಚು ಸುಧಾರಿಸುವುದಕ್ಕೆ ಪ್ರತಿಯಾಗಿ ಬಹು ದುರವಸ್ಥೆಗೀಡಾಗಿಲ್ಲವೆ? ಬಹು ಮಠಗಳಿದ್ದ ಮಾತ್ರದಲ್ಲಿ ಮತವು ಸುಧಾರಿಸುವುದೇ? ಆ ಮಠಗಳಲ್ಲಿರುವವರೆಲ್ಲರೂ ನಿಜವಾದ ಗುರು ಜಂಗಮರೇ ಆಗಿರಬೇಕಲ್ಲವೇ? ಹಾಗಿದ್ದರೇನೇ ಪ್ರಾಪಂಚಿಕರ ಮಾನಸಿಕ ಮತ್ತು ಬೌದ್ಧಿಕ ತಾಪ ಸಂಶಯಗಳು ನಿವಾರಣೆಯಾಗಿ ಸುಖಶಾಂತಿಗಳು ದೊರೆಯುವವು. ಮಠಗಳು ಸಂಸಾರಿಗಳ ಮನೆಗಿಂತಲೂ ಕೀಳಾಗಿದ್ದರೆ, ಗುರು ಜಂಗಮರೆಂದು ಹೇಳಿಕೊಳ್ಳುವವರು ಗೃಹಸ್ಥರಿಗಿಂತಲೂ ಹೀನಾಚಾರಿಗಳಾಗಿದ್ದರೆ ಮತದಲ್ಲಿ ದುರ್ಗುಣ ದುರಾಚಾರಗಳೇ ಹೆಚ್ಚಲಿಕ್ಕಿಲ್ಲವೆ? ಕಾಯುವವರೇ ಕೊಲ್ಲುವವರಾದ ಮೇಲೆ ಕೊಲೆಯಿಂದ ಪಾರಾಗುವುದೆಂತು?

ಈಗ ವೀರಶೈವ ಮತಕ್ಕೆ ಇದೇ ಸ್ಥಿತಿ ಬಂದಿದೆ. ಬಸವಾದಿ ಪ್ರಮಥರು ಮಠಗಳನ್ನು ಸ್ಥಾಪಿಸಿದ ಉದ್ದೇಶ ಬಹು ಶ್ರೇಷ್ಠವಾದುದು. ಈ ಇಪ್ಪತ್ತನೆಯ ಶತಮಾನದಲ್ಲಿ ಕೂಡಾ ಮತ ಪ್ರಸಾರಕ್ಕೆ ಯಾವ ಸೌಕರ್ಯಗಳು ಕಲ್ಪಿಸಲ್ಪಟ್ಟಿಲ್ಲವೋ ಅವುಗಳನ್ನು ಆ ಪ್ರಮಥರು ಕಲ್ಪಿಸಿಕೊಟ್ಟಿದ್ದಾರೆ.

ವೀರಶೈವರ ಮಠಗಳು ಜ್ಞಾನ ಮಂದಿರಗಳು. ಅದಕ್ಕಾಗಿ ಅಲ್ಲಿ ಜ್ಞಾನ ಮೂರ್ತಿಗಳೇ ಇರಬೇಕು. ಈ ಮಠಗಳು ಸದ್ಗುಣ ಸದಾಚಾರಗಳ ಪ್ರದರ್ಶನಾಲಯಗಳು. ಆದುದರಿಂದ ಅಲ್ಲಿರತಕ್ಕ ಮೂರ್ತಿಗಳು ಆದರ್ಶಪ್ರಾಯವಾದ ಆಚಾರ ವಿಚಾರಗಳುಳ್ಳವರಾಗಿರಬೇಕು. ಶಿವಭಕ್ತರ ಮಠಗಳು ಶಿವಾನುಭವ ಮಂಟಪಗಳು.

ಅದಕ್ಕೋಸ್ಕರ ಪ್ರತಿನಿತ್ಯ ಅಲ್ಲಿ ಧಾರ್ಮಿಕ, ನೈತಿಕ ಮತ್ತು ಸಾಮಾಜಿಕ ಮತ ತತ್ವಗಳನ್ನು ಮಠಾಧಿಪತಿಗಳು ಬೋಧಿಸುತ್ತಿರಬೇಕು.

ಮಠಗಳು ಧಾರ್ಮಿಕ ಶಿಕ್ಷಣಾಲಯಗಳು. ಆದುದರಿಂದ ಅಲ್ಲಿರತಕ್ಕ ಗುರುಗಳು ಧಾರ್ಮಿಕ ಸಂಶಯಗಳನ್ನು ನಿವಾರಣೆ ಮಾಡಿ ಯೋಗ್ಯ ಶಿಕ್ಷಣ ಕೊಡುವವರಾಗಿರಬೇಕು. ಬಸವಾದಿ ಪ್ರಮಥರು ಮಠಗಳನ್ನು ಈ ಮಹತ್ತರವಾದ ಉದ್ದೇಶದಿಂದಲೇ ಏರ್ಪಡಿಸಿದರು. ಮಠಗಳು ವಿದ್ಯುಚ್ಛಕ್ತಿಯ ಕೇಂದ್ರ (ಇಲೆಕ್ಟ್ರಿಕ್ ಪಾವರ್ ಹೌಸ್) ಗಳಂತಿವೆ. ಅಲ್ಲಿಂದಲೇ ಊರಲ್ಲಿ ಜ್ಞಾನ ಜ್ಯೋತಿಯು ಪ್ರಸಾರವಾಗಬೇಕು. ಮಠಗಳು ಜಲಸಂಚಯ ನಿಲಯ (ನೀರಿನ ಟಾಕಿ) ಗಳಂತಿವೆ. ಅಲ್ಲಿಂದಲೇ ಜ್ಞಾನ ಜಲವು ಊರಿಗೆ ದೊರೆಯುತ್ತಿರಬೇಕು. ಮಠಗಳು ಶಾಸನ ಸಭೆ (ಪಾರ್ಲಮೆಂಟ) ಗಳಂತಿವೆ. ಅಲ್ಲಿಯೇ ಮತದ ನಿಯಮಗಳು ಚರ್ಚೆಯಾಗಿ ಕಾಲಮಾನಕ್ಕೆ ತಕ್ಕಂತೆ ಸುಧಾರಣೆ ಹೊಂದಿ ಹೊರಬೀಳಬೇಕು.

ಈ ಪ್ರಕಾರ ಮಠಗಳು ಮತವನ್ನು ಸಕಲ ಸಂಗತಿಗಳಲ್ಲಿಯೂ ಅಭಿವೃದ್ಧಿಗೊಳಿಸಲಿಕ್ಕಾಗಿಯೇ ಏರ್ಪಟ್ಟವು. ಅಲ್ಲಿರತಕ್ಕ ಮೂರ್ತಿಗಳಿಗೆ ಸಮಾಜ ಸೇವೆಯ ಕೆಲಸದ ವಿನಾ ಬೇರೆ ವ್ಯವಹಾರಗಳಿಲ್ಲವೇ ಇಲ್ಲ. ಅವರ ಪೂಜೆ ಪ್ರಸಾದಗಳಿಗೋಸ್ಕರ ತಪ್ಪದೇ ಆದಾಯ ಬರುವಂತೆ ಜನರು ಭೂಮಿಗಳನ್ನು ಕೂಡಾ ಮಠಗಳಿಗೆ ಕೊಟ್ಟರು. ಈಗಿನ ಕಾಲದಲ್ಲಿ ಮತ ಪ್ರಚಾರಕರಿಗೆ ವೇತನ ದೊರೆಯಲು ದೊಡ್ಡ ದೊಡ್ಡ ಫಂಡುಗಳು ಪಾಶ್ಚಾತ್ಯ ದೇಶಗಳಲ್ಲಿ ಏರ್ಪಟ್ಟಿವೆಯಷ್ಟೆ. ಮಠಗಳಿಗೆ ವಾರ್ಷಿಕಾದಾಯ ಬರುವಂತೆ ಮೊದಲಿನವರು ಮಾಡಿದ ಏರ್ಪಾಟು ಇದಕ್ಕಿಂತ ಕಡಿಮೆಯಾದುದೆ? ಈಗ ವೀರಶೈವರ ಎಲ್ಲ ಮಠಗಳಿಗೂ ಬರತಕ್ಕ ವಾರ್ಷಿಕಾದಾಯವನ್ನು ಬಡ್ಡಿಯಾಗಿ ಭಾವಿಸಿದರೆ ಎಷ್ಟು ಕೋಟಿ ರೂಪಾಯಿಗಳು ಈ ಕಾರ್ಯಕ್ಕೆ ಸಮಾಜದಿಂದ ಚಿರಸ್ಥಾಯಿ ಫಂಡ ರೂಪದಲ್ಲಿವೆಯೆಂದು ಹೇಳಬಹುದು?

ಈ ಮಠಗಳು ಏರ್ಪಟ್ಟ ನಿಜವಾದ ಕಾರಣವು ಜನಸಾಮಾನ್ಯರಿಗು ಕೂಡಾ ತಿಳಿದು ಅವರು ಮೂಢ ನಂಬಿಕೆಯನ್ನು ತೆಗೆದು ಹಾಕಿ ಮಠಗಳ ಪುನರ್ಘಟನೆ ಮಾಡಿದ್ದಾದರೆ ಸಮಾಜಕ್ಕೆ ಅದೆಂತಹ ಘನವಾದ ಸಹಾಯವಾಗಬಹುದು? ಮಠಗಳಲ್ಲಿರುವ ಮೂರ್ತಿಗಳು ತಮಗೆ ಪರಮ ಪೂಜ್ಯರಾದ ಆ ಬಸವಾದಿ ಪ್ರಮಥರು ಮಠಗಳನ್ನುಂಟುಮಾಡಿದ ಪರಮ ಪವಿತ್ರವಾದ ಉದ್ದೇಶವನ್ನು ತಿಳಿದುಕೊಂಡು ಮತ ಸೇವೆಗಾಗಿ ಮಠದ ಆದಾಯವನ್ನು ವಿನಿಯೋಗಿಸಬಾರದೆ?

ಭಕ್ತರು ಮಠದ ಮೂರ್ತಿಗಳಿಗೆ ಯಾವ ಪ್ರಾಪಂಚಿಕ ತೊಡಕುಗಳನ್ನೂ ಇಟ್ಟಿಲ್ಲ. ತಾವು ಆಗಾಗ್ಗೆ ಸರಿಪಡಿಸಿಕೊಳ್ಳುವ ಸಾಧಾರಣ ಮನೆಗಳಲ್ಲಿ ವಾಸವಾದರೆ ತಮ್ಮ ಗುರುಗಳಿಗೆ ಅಚ್ಚಳಿಯದ ಬಹು ಭದ್ರವಾದ ಕಲ್ಲಿನ ಮಠಗಳನ್ನು ಕಟ್ಟಿಸಿ ಕೊಟ್ಟಿದ್ದಾರೆ. ತಮ್ಮ ಮನೆ ಭೂಮಿಗಳಿಗಿಂತ ಮಠದ ಯೋಗಕ್ಷೇಮ ನೋಡುವುದೇ ಹೆಚ್ಚು. ಅದಕ್ಕಾಗಿ ದೈವದವರೆಂಬ ಒಂದು ಸಂಸ್ಥೆ. ಅವರು ಮಠದ ಮತ್ತು ಮಠದ ಮೂರ್ತಿಗಳ ವ್ಯವಸ್ಥಾಪಕರು. ಇಷ್ಟೆಲ್ಲಾ ಸೌಕರ್ಯಗಳನ್ನು ಭಕ್ತರು ಉಂಟುಮಾಡಿ ಕೊಟ್ಟಿದ್ದರೂ ಅವರಿಗಾಗಿ ತಾವು ಪ್ರತಿನಿತ್ಯ ಯಾವ ಕಾರ್ಯ ಮಾಡುತ್ತಿದ್ದೇವೆಂಬುದನ್ನು ಮಠಗಳಲ್ಲಿರುವವರು ಯೋಚಿಸದಿದ್ದಷ್ಟು ಕೃತಘ್ನರಾಗಬಹುದೆ?

ತಾವು ಊರು ಊರಿಗೆ, ಇಷ್ಟೇ ಅಲ್ಲ; ಕೆಲವು ಕಡೆ ಓಣಿ ಓಣಿಗೆ, ಮಠಗಳನ್ನು ಏಕೆ ಏರ್ಪಡಿಸಿದೆವು? ಅವುಗಳಿಗಾಗಿ ಎಷ್ಟು ಭೂಮಿ ಕಾಣಿಕೆಗಳನ್ನು ಕೊಟ್ಟಿದ್ದೇವೆ? ಆ ಮಠಗಳ ಮೂರ್ತಿಗಳು ತಮ್ಮ ಕಾರ್ಯವನ್ನು ಮಾಡುತ್ತಿದ್ದಾರೆಯೆ? ಅವರಿಂದ ತಮ್ಮ ನಡೆನುಡಿಗಳು ಸುಧಾರಿಸುತ್ತಿವೆಯೆ? ಅವರಿಂದ ತಮ್ಮ ಮತಕ್ಕೆ ಘನತೆ ಬಂದಿದೆಯೆ? ಅನ್ಯಮತೀಯರ ಮುಂದೆ ಇವರು ನಮ್ಮ ಗುರುಗಳೆಂದು ಮುಖವೆತ್ತಿ ಹೇಳಿಕೊಳ್ಳುವಷ್ಟಾದರೂ ಅವರು ಯೋಗ್ಯರಾಗಿದ್ದಾರೆಯೆ? ಎಂಬ ಸಂಗತಿಗಳನ್ನು ಭಕ್ತರು ಯೋಚಿಸದಿದ್ದಷ್ಟು ಮೂಢರಾಗಬಹುದೇ?

ವೀರಶೈವ ಮತತತ್ವದಲ್ಲಿಯೇ ಗುರು ಜಂಗಮರ ನಿಕಟ ಸಂಬಂಧವಿರುವುದರಿಂದ ಇಷ್ಟು ಮಠಗಳು ಹೆಚ್ಚಲು ಕಾರಣವಾಯಿತು. ಇವುಗಳಲ್ಲಿರುವವರು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡಿದ್ದಾದರೆ ಪ್ರಯೋಜನವು ಅತ್ಯಧಿಕವಾಗುತ್ತಿದೆ. ಇಲ್ಲದಿದ್ದರೆ ಅನರ್ಥವೂ ಅತ್ಯಧಿಕವೆಂಬುದನ್ನು ಹೇಳಬೇಕೆ? ಈಗ ಎಲ್ಲರಿಗೂ ಇದು ಅನುಭವದ ಸಂಗತಿ. ತಮ್ಮ ಅನುಕೂಲಕ್ಕಾಗಿ ಓಣಿ ಓಣಿಗೂ ಮಠವನ್ನು ಮಾಡಿಕೊಂಡವರು ಅವುಗಳಿಂದ ಸುಖಶಾಂತಿಗಳನ್ನು ಹೊಂದುತ್ತಾ ಇಲ್ಲ. ಅವುಗಳನ್ನು ಜಗಳದ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡರು. ಆದುದರಿಂದಲೇ ಸಮಾಜವು ಕಲಹಾಗ್ನಿಯಿಂದ ಬೇಯುತ್ತಿದೆ. ಅನೇಕ ದುರ್ಗುಣ ದುರಾಚಾರಗಳು ಧರ್ಮದ ಹೆಸರಿನಿಂದ ಸಮಾಜದಲ್ಲಿ ಪ್ರಸಾರವಾಗುತ್ತಿವೆ. ಹಿತಕ್ಕಾಗಿ ಏರ್ಪಟ್ಟ ಮಠಗಳು ಅಹಿತವನ್ನುಂಟುಮಾಡುವ ಪ್ರಚಂಡ ಸಾಧನಗಳಾದವು. ರಕ್ಷಕರಾಗುವವರು ಭಕ್ಷಕರಾದರು.

ಭಗವಾನ್ ಬುದ್ಧದೇವನು ಭಿಕ್ಷುಕರಮೂ. ಅವರ ವಿಹಾರಗಳನ್ನೂ (ಮಠ) ಹೆಚ್ಚಿಸಿದ್ದುದು ವಿಹಿತವೆ
ಆತನ ದಿವ್ಯ ಮತವನ್ನು ಪ್ರಸಾರಗೊಳಿಸಿದರು. ಕೊನೆಗೆ ಬೌದ್ಧ ಮತಕ್ಕೆ ಅಳಿಗಾಲವನ್ನು ತಂದವರಾರು? ಅದೇ ಭಿಕ್ಷುಕರಲ್ಲವೇ? ಅವರ ಅಜ್ಞಾನ ಅವರ ಮಠಗಳಲ್ಲಿ ನಡೆಯುತ್ತಿದ್ದ ಅನಾಚಾರಗಳೇ ಪುನಃ ವೈದಿಕಮತ ತಲೆ ಎತ್ತಲು ಕಾರಣವಾಗಲಿಲ್ಲವೆ?

ಅದೇ ಪ್ರಕಾರ ಬಸವ ಮಹಾನುಭಾವನು ಗುರು ಜಂಗಮರನ್ನು ಹೆಚ್ಚಿಸಿ ಮಠಗಳನ್ನು ಪ್ರಸಾರಗೊಳಿಸಿದುದೇನೋ ಶ್ರೇಷ್ಠತರವಾದುದೇ ಸರಿ. ಪೂರ್ವದ ಪರಮಪೂಜ್ಯ ಗುರು ಜಂಗಮರೇ ಆತನ ಮತವನ್ನು ಪ್ರಸಾರಗೊಳಿಸಿದರು. ಆದರೆ ಈಗ ಆತನ ಮತವನ್ನು ಹಾಳುಮಾಡುವರಾರು? ಗುರು ಜಂಗಮರೇ ಅಲ್ಲವೆ? ಇದರಿಂದ ಈಗ ಮಠೋದ್ಧಾರಮಾಡುವ ಗುರು ಜಂಗಮರಾರೂ ಇಲ್ಲವೇ ಇಲ್ಲವೆಂದು ನಮ್ಮ ಅಭಿಪ್ರಾಯವಲ್ಲ. ಅಂತಹ ಪರಮ ಪೂಜ್ಯರಿದ್ದಾರೆ. ಅವರ ಸಂಖ್ಯೆ ಅತ್ಯಲ್ಪ. ಬಹು ಸಂಖ್ಯಾಕರಾದ ಮಠಾಧಿಪತಿಗಳು ಅನುಚಿತವಾದ ರೀತಿಯಲ್ಲಿ ನಡೆಯುತ್ತಿರುವುದರಿಂದಲೇ ಮಠಗಳ ಉದ್ದೇಶವನ್ನು ಸಕಲರೂ ಲಕ್ಷಿಸಿ ಅವುಗಳ ಪುನರ್ಘಟನೆ ಮಾಡಬೇಕಾದುದು ಅತ್ಯಗತ್ಯವಲ್ಲವೆ?

ಬ್ರಾಹ್ಮಣ-ಕ್ರಿಶ್ಚನ್ನರ ವಿವಾಹ.

ಮುಂಬೈ ಉಪನಗರ ವಾಂದ್ರಾದಲ್ಲಿರತಕ್ಕ ಕು. ಕುಸುಮ ಗೋಖಲೆ ಎಂಬ ೨೨ ವರುಷ ವಯಸ್ಸಿನ ಬ್ರಾಹ್ಮಣ ಕನ್ಯೆಗೂ ಜೆ. ಎಫ್. ಕೇಗ್ಯು ಹಿಂದಿ ಕ್ರಿಶ್ಚಿಯನ್ ವಯಸ್ಸು ೩೦ ಇವರಿಗೂ ಲಗ್ನವಾದುದರ ನೋಟೀಸನ್ನು ಜನವರಿ ೧೦ ನೆಯ ತಾರೀಖಿನ ದಿನ ರಜಿಸ್ಟ್ರಾರರಿಗೆ ತಿಳಿಸಿದ್ದಾರೆ. ಕನ್ಯೆಯು ಇಂಟರ್ ತರಗತಿಯಲ್ಲಿ ಓದುತ್ತಿದ್ದಾಳೆ.

ವೀರಶೈವ ತರುಣರ ಸಂಘ ತುಮಕೂರು.

ಈ ಸಂಘದ ವಾರ್ಷಿಕೋತ್ಸವವು ಇದೇ ಜನವರಿ ೨೭ ನೇ ಭಾನುವಾರ ದಿವ್ಯವಾಗಿ ಅಲಂಕೃತವಾಗಿದ್ದ ಕೃಷ್ಣಾ ಸಿನೇಮಾ ಮಂದಿರದಲ್ಲಿ ಬೆಂಗಳೂರು ಶ್ರೀ ಸರ್ಪಭೂಷಣ ಶಿವಯೋಗೀಶ್ವರ ಮಠಾಧ್ಯಕ್ಷರಾದ ಶ್ರೀಮನ್ನಿರಂಜನ ಪ್ರ|| ಶ್ರೀ ಮಹಾದೇವ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಭವ್ಯವೂ ವಿಶಾಲವೂ ಆದ ಆ ಮಂದಿರವು ಸ್ತ್ರೀ ಪುರುಷರಿಂದ ತುಂಬಿ ಕಿಕ್ಕಿರಿದು ಹೋಗಿತ್ತು. ೫ ಗಂಟೆಗೆ ಸರಿಯಾಗಿ ಶ್ರೀಗಳವರನ್ನು ಜಗದ್ಗುರು ಜಯದೇವ ವಿದ್ಯಾರ್ಥಿನಿಲಯದಿಂದ ಪುರಪ್ರಮುಖರು ಹೋಗಿ ಬಿಜಯಮಾಡಿಸಿಕೊಂಡು ಬಂದರು. ಸಭಿಕರ ಜಯ ಜಯ ನಿನಾದದಿಂದ ಅಧ್ಯಕ್ಷಸ್ಥಾನಾರೋಹಣವಾಗಿ ವಾರ್ಷಿಕೋತ್ಸವದ ಕಾರ್ಯಕಲಾಪಗಳು ಉಪಕ್ರಮವಾದವು. ದೇವತಾ ಪ್ರಾರ್ಥನೆಯಾದ ನಂತರ ಸಂಘದ ಅಧ್ಯಕ್ಷರಾದ ಶ್ರೀ. ಗುರುನಂಜಯ್ಯ ಬಿ. ಎ., ಬಿ. ಎಲ್. ರವರು ರಚಿಸಿದ ಸ್ವಾಗತ ಪದ್ಯಗಳನ್ನು ಮ|| ರಾ|| ರಾ|| ಬಾಳಪ್ಪಯ್ಯನವರು ಸುಶ್ರಾವ್ಯವಾಗಿ ಹಾಡಿದರು. ಆ ಮೇಲೆ ಶಿವಯೋಗಮಂದಿರದಲ್ಲಿ ಶಿಕ್ಷಣ ಪಡೆದ ಶ್ರೀಮಾನ್ ಸಿ. ಎಂ. ಈಶ್ವರೀರವರು ಅನೇಕ ಯೋಗಾಸನಗಳನ್ನು ಪ್ರದರ್ಶಿಸಿದರಲ್ಲದೆ ಅವುಗಳ ರೋಗನಿವಾರಕ ಮಹತ್ವವನ್ನೂ ವಿವರಿಸಿದರು. ನಂತರ ಬೆಂಗಳೂರು ಕಲಾ ಮಂದಿರದ ಶ್ರೀಮತಿ ಚನ್ನಮ್ಮನವರ ಮಧುರವಾದ ಸಂಗೀತ ನಡೆಯಿತು. ಸಂಘದ ಕಾರ್ಯದರ್ಶಿಗಳಾದ ಶ್ರೀಮಾನ್ ಜಿ. ಆರ್. ಸಿದ್ಧಬಸವಯ್ಯ ಬಿ. ಎ. ಇವರು ತಮ್ಮ ವಾರ್ಷಿಕ ವರದಿಯನ್ನು ಓದಿದರು.

ಆ ನಂತರ ತುಮಕೂರಿನ ಪ್ರಸಿದ್ಧ ವಕೀಲರಾದ ಶ್ರೀಮಾನ್ ಟಿ. ಸುಬ್ರಹ್ಮಣ್ಯಂ ಬಿ. ಎ., ಬಿ. ಎಲ್. ರವರು ಇಂದಿನ ಭಾರತದ ಬಿಕ್ಕಟ್ಟಿನ ದುಸ್ಥಿತಿಯನ್ನೂ ಅದನ್ನು ನೀಗಿ ದೇಶದಲ್ಲಿ ಸುಖಶಾಂತಿಗಳನ್ನು ನೆಲೆಗೊಳಿಸಲು ತರುಣರ ಮೇಲೆ ಬಿದ್ದಿರುವ ದೊಡ್ಡ ಹೊಣೆಗಾರಿಕೆಯನ್ನೂ ತರುಣರ ದೃಷ್ಟಿವೈಶಾಲ್ಯದ ಆವಶ್ಯಕತೆಯನ್ನೂ ಕುರಿತು ಬಹಳ ಪರಿಣಾಮಕಾರಿಯಾದ ಭಾಷಣವನ್ನು ಮಾಡಿದರು. ನಂತರ ಶ್ರೀಗಳವರ ಅಧ್ಯಕ್ಷಭಾಷಣವಾಯಿತು. ಶ್ರೀಗಳವರು ಶ್ರೀಮಾನ್ ಸುಬ್ರಹ್ಮಣ್ಯಂರವರ ಭಾಷಣವನ್ನು ಟೀಕಿಸಿ, ಪೋಷಿಸಿ ಅನೇಕ ನೂತನ ವಿಷಯಗಳನ್ನೊಳಗೊಂಡ ಬಹಳ ಸ್ವಾರಸ್ಯವಾದ ವ್ಯಾಖ್ಯಾನವನ್ನು ಮಾಡಿದರು. ತರುಣರಲ್ಲಿರಬೇಕಾದ ಆವಶ್ಯಕವಾದ ಗುಣಗಳು, ಅವರ ಧ್ಯೇಯಗಳು ಮತ್ತು ಅವರಲ್ಲಿ ಅತ್ಯವಶ್ಯಕವಾಗಿರಬೇಕಾಗಿರುವ ವಿಚಾರಸ್ವಾತಂತ್ರ್ಯ ಇವುಗಳನ್ನು ಕುರಿತು ಬಹಳ ಓಜಸ್ವಿಯಾದ ಭಾಷಣ ಮಾಡಿದರು. ಅಲ್ಲದೆ ಈ ಸಂಘವು ಬಹಳ ವಿಶಾಲ ದೃಷ್ಟಿಯಿಂದ ಕೆಲಸಮಾಡುತ್ತಾ, ತನ್ನ ಕಾರ್ಯಕಲಾಪಗಳನ್ನು ಕೇವಲ ವೀರಶೈವರ ಏಳಿಗೆಗೆ ಮಾತ್ರವೇ ಹ್ರಸ್ವಮಾಡದೆ ಸಕಲ ಭಾರತೀಯ ತರುಣರ ಏಳಿಗೆಗಾಗಿ ಹೆಣಗುತ್ತಿರುವುದು ಬಹಳ ಪ್ರಶಂಸನೀಯವಾದುದೆಂದು ಅಭಿನಂದಿಸಿದರು. ಮತ್ತು ತಮ್ಮ ಜೀವಮಾನದಲ್ಲೇ ನಡೆದ ಕೆಲವು ಮಹತ್ವದ ವಾರ್ಷಿಕೋತ್ಸವಗಳಲ್ಲಿ ಇದೊಂದಾಗಿದೆಯೆಂದು ಬಹಳ ಸಂತೋಷದಿಂದ ಅಪ್ಪಣೆ ಕೊಡಿಸಿದರು. ಸಭಿಕರೆಲ್ಲರೂ ಬಹಳ ನಿಶ್ಶಬ್ದರಾಗಿ ಶಾಂತಚಿತ್ತದಿಂದ ಕೇಳುತ್ತಿದ್ದರು. ಆ ಮೇಲೆ ಆಧುನಿಕ ಕವಿಶ್ರೇಷ್ಠರಾದ ಶ್ರೀಮಾನ್ ಪುಟ್ಟಪ್ಪ ಎಂ. ಎ. ಇವರಿಂದ ರಚಿತವಾಗಿರುವ "ಮಹಾರಾತ್ರಿ" ಮತ್ತು "ಜಲಗಾರ" ನಾಟಕಗಳ ಕೆಲವು ರಮಣೀಯವಾದ ಮತ್ತು ಹೃದಯಂಗಮವಾದ ದೃಶ್ಯಗಳನ್ನು ಬಸವರಾಜ ಬಾಲಚಮೂಗಳು ಬಹಳ ಸ್ವಾರಸ್ಯವಾಗಿ ಅಭಿನಯಿಸಿದರು. ಕಲಾಭಿಮಾನಿಗಳೂ ಕಲಾಕೋವಿದರೂ ಆದ ಅನೇಕ ಶ್ರೇಷ್ಠರು ಅಭಿನಯ ಕೌಶಲ್ಯವನ್ನು ಕೊಂಡಾಡಿ ನಟವರ್ಗವನ್ನು ಅಭಿನಂದಿಸಿದರು. ಅದರಲ್ಲೂ ಸಿದ್ಧಾರ್ಥ ಮತ್ತು ಜಲಗಾರ ಪಾತ್ರವಹಿಸಿದ್ದ ಶ್ರೀಮಾನ್ ಎಂ. ಮುರುಡಯ್ಯನವರು, ಒಕ್ಕಲಿಗ ಪಾತ್ರವನ್ನು ವಹಿಸಿದ್ದ ಶ್ರೀಮಾನ್ ಎ. ಗುಬ್ಬಿ ಸೆಟ್ಟಿಪ್ಪನವರು, ಮಾಮತ್ತು ತರುಣನ ಪಾತ್ರವನ್ನು ವಹಿಸಿದ್ದ ಶ್ರೀಮಾನ್ ಹೆಚ್. ಡಿ. ಗಿರಿಯಪ್ಪನವರು ಮತ್ತು ಹಳ್ಳಿಯ ಹುಡುಗಿಯ ಪಾತ್ರವನ್ನು ವಹಿಸಿದ್ದ ಶ್ರೀಮಾನ್ ಈಶ್ವರಪ್ಪನವರು ಇವರ ಅಭಿನಯಗಳು ಹೆಮ್ಮೆಪಡುವಂತಿದ್ದವು. ನಾಟಕಾಭಿನಯವಾದ ನಂತರ ಸಂಘದ ಅಧ್ಯಕ್ಷರಾದ ಶ್ರೀಮಾನ್ ಗುರುನಂಜಯ್ಯನವರು ಆ ದಿನದ ಅಧ್ಯಕ್ಷರಾದ ಶ್ರೀಗಳವರಿಗೂ, ವಾರ್ಷಿಕೋತ್ಸವವನ್ನು ಜಯಪ್ರದವಾಗಿ ಜರುಗಿಸಲು ನೆರವಾದ ಮಹನೀಯರೆಲ್ಲರಿಗೂ ಮತ್ತು ಆ ದಿನದ ಕಾರ್ಯಕಲಾಪಗಳನ್ನು ನೆರವೇರಿಸಲು ಬಹಳ ಔದಾರ್ಯದಿಂದ ತಮ್ಮ ಭವ್ಯವಾದ ಸಿನೇಮಾ ಮಂದಿರವನ್ನು ಬಿಟ್ಟುಕೊಟ್ಟ ಶ್ರೀಮಾನ್ ಪದ್ಮನಾಭಯ್ಯನವರಿಗೂ ಅಭಿವಂದನೆಗಳನ್ನು ಸಮರ್ಪಿಸಿದರು. ಮಂಗಳವಾದ ನಂತರ ಗಂಧ ಪುಷ್ಪಗಳ ವಿನಿಯೋಗವಾಗಿ ಸಭೆಯು ರಾತ್ರಿ ೯|| ಗಂಟೆಗೆ ಜಯಘೋಷದಿಂದ ಮುಕ್ತಾಯಹೊಂದಿತು. ಕೊನೆಯವರೆಗೂ ಪ್ರೇಕ್ಷಕರೆಲ್ಲರೂ ಆಸಕ್ತರಾಗಿ ಕೂತಿದ್ದರು. ಆ ದಿನದ ಕಾರ್ಯವ್ಯವಸ್ಥೆಯನ್ನು ಬಾಲಚಮೂ ನೇತೃಗಳಾದ ಟಿ. ಸಿ. ಗುಬ್ಬಿ ಹುಚ್ಚನವರೂ ಮತ್ತು ಅವರ ಚಮೂಗಳೂ ಸಹ ದೇಹಾಯಾಸವನ್ನೆಳ್ಳಷ್ಟೂ ಲೆಕ್ಕಿಸದೆ ಬಹು ಶ್ರದ್ಧೆಯಿಂದ ಮಾಡಿದುದು ಬಹಳ ಅಭಿನಂದನೀಯವಾಗಿದೆ.

ಓರ್ವ ಪ್ರೇಕ್ಷಕ.

ಗಾಂಧೀಜಿಯವರ ಅಭಿಪ್ರಾಯ.

ಶ್ರೀಮತಿ ಸತಿಕುಟ್ಟಿನ್ ನಾಯರ ಎಂಬುವವರು ಕರಾಚಿಯ ಅಖಿಲ ಭಾರತ ಮಹಿಳಾ ಪರಿಷತ್ತಿನ ಕಾರ್ಯನೆರವೇರಿಸಿಕೊಂಡು ದಿಲ್ಲಿಯಲ್ಲಿ ಗಾಂಧೀಜಿಯವರನ್ನು ಸಂದರ್ಶಿಸಿ ಸ್ತ್ರೀಯರ ಏಳಿಗೆಗಾಗಿ ಕೆಲವು ಪ್ರಶ್ನೆಗಳನ್ನು ಕೇಳಿಕೊಂಡರು.

ಪ್ರಶ್ನೆ—ಬಾಲಬಾಲಿಕೆಯರು ಕೂಡಿ ವಿದ್ಯಾಭ್ಯಾಸಮಾಡುವುದು ಫಲಕಾರಿಯೇ?

ಉತ್ತರ—ಪಶ್ಚಿಮ ದೇಶಗಳಲ್ಲಿಯೂ ಇದು ಫಲಕಾರಿಯಾದಂತೆ ಕಾಣುವುದಿಲ್ಲ. ನಾನು ಈ ವಿಚಾರದಲ್ಲಿ ಅನುಭವ ಪಡೆಯಬೇಕೆಂದು ಬಾಲ ಬಾಲಿಕೆಯರು ಆಟ, ವಿನೋದ, ಊಟ, ಮೊದಲಾದವುಗಳಲ್ಲಿ ಕೂಡಿಯೇ ಇರುವಂತೆ ಮಾಡಿದ್ದೆ. ಇಷ್ಟೇ ಅಲ್ಲ; ಒಂದೇ ಕಡೆ ಮಲಗುವಂತೆಯೂ ಏರ್ಪಡಿಸಿ ಮೇಲ್ವಿಚಾರಣೆಯನ್ನು ನಾನೂ ಕಸ್ತೂರಿಬಾಯಿಯೂ ನೋಡಿಕೊಳ್ಳುತ್ತಿದ್ದೆವು. ಅದರ ಪರಿಣಾಮವು ಕೇಡಾದಂತೆಯೇ ನನಗೆ ಕಂಡಿತು.

ಪ್ರಶ್ನೆ—ಬಾಲಬಾಲಿಕೆಯರ ಗುಹ್ಯಾಂಗಗಳ ಸಂಬಂಧವಾದ ತಿಳುವಳಿಕೆ ಮತ್ತು ಅವುಗಳ ದುರುಪಯೋಗದಿಂದಾಗುವ ಕೇಡು ಮೊದಲಾದ ಸಂಗತಿಗಳನ್ನು ಮೊದಲೇ ತಿಳಿಸುವುದು ಅನುಕೂಲವೆ?

ಉತ್ತರ—ಒಳ್ಳೆಯದು. ಸ್ತ್ರೀ ಪುರುಷರಿಬ್ಬರೂ ಈ ಸಂಬಂಧವಾಗಿ ಯಾವ ಸಂಕೋಚವೂ ಇಲ್ಲದೆ ಚರ್ಚಿಸಬೇಕು. ಗುಹ್ಯಾಂಗಗಳ ಹೆಸರನ್ನು ಇತರ ಅಂಗಗಳ ಹೆಸರು ಹೇಳುವಂತೆಯೇ ಉಭಯರೂ ಹೇಳಿ ಮಾತಾಡಲು ಸಂಕೋಚಪಡುವುದೇಕೆ?

ಪ್ರಶ್ನೆ—ಶಸ್ತ್ರಕ್ರಿಯೆ ಮೊದಲಾದವುಗಳಿಂದ ಸಂತಾನವನ್ನು ನಿರೋಧಿಸಬಹುದೆ?

ಉತ್ತರ—ಅದು ಅನರ್ಥಕಾರಿ. ಮನೋನಿಗ್ರಹದಿಂದಲೇ ಸಂತಾನ ನಿರೋಧಮಾಡಬೇಕು.

ಪ ತ್ರ ಗ ಳ ಸಾ ರಾ ೦ ಶ .

ನಿಜಾಂ ಕರ್ನಾಟಕಕ್ಕೆ ಆದರ್ಶ ಪ್ರಾಯವಾದ ಹಳ್ಳಿ.

ಶರಣ ಸಂದೇಶದ ೪ ನೆಯ ಸಂಪುಟ, ೨೨ ನೆಯ ಸಂಚಿಕೆಯಲ್ಲಿ, ನಿಜಾಂ ಕರ್ನಾಟಕದ ಯಾದಗಿರಿ ತಾಲೂಕಿನಲ್ಲಿರುವ ಭೀಮನಹಳ್ಳಿಯ ಜನರು ಆದಿಜನರ ಸುಧಾರಣೆಯ ಕಾರ್ಯಗಳನ್ನು ಭರದಿಂದ ನಡೆಸಿರುವರೆಂದು, ಮತ್ತು ಅಲ್ಲಿಯ ಜನರ ಪ್ರಯತ್ನದಿಂದ ಆದಿಜನರಿಗಾಗಿ ಒಂದು ಪ್ರಾಥಮಿಕ ಶಾಲೆಯು ಕೂಡಾ ತೆರೆಯಲ್ಪಟ್ಟಿದೆ ಎಂದು, ಹಾಗು ಆ ಶಾಲೆಗೆ ಹೈದ್ರಾಬಾದದ ಆದಿಜನ ಸೇವಾಸಂಘದವರು ತಿಂಗಳೊಂದಕ್ಕೆ ೫ ರೂ. ಯಂತೆ ಸಹಾಯಮಾಡುತ್ತಿರುವರೆಂದು ಪ್ರಕಟವಾಗಿದೆ. ಈ ಪ್ರಯತ್ನಕ್ಕಾಗಿ ಅಲ್ಲಿಯ ಜನರಿಗೂ ಅದಕ್ಕೆ ದ್ರವ್ಯ ಸಹಾಯಮಾಡುತ್ತಿರುವ ಆದಿಜನ ಸೇವಾಸಂಘದವರಿಗೂ, ಎಲ್ಲಾ ಆದಿಜನರ ಹಿತಚಿಂತಕರ ಪರವಾಗಿ ನಾನು ಅವರಿಗೆ ಪ್ರೇಮಪೂರ್ವಕವಾದ ಅಭಿವಂದನೆಗಳನ್ನು ಅರ್ಪಿಸುತ್ತೇನೆ. ಪರಮಾತ್ಮನು ಈ ಶಾಲೆಯು ಬಹುದಿವಸ ಬಾಳುವಂತೆ ಮಾಡಲಿ.

ಅದೇ ತಾಲೂಕದಲ್ಲಿರುವ ಯರಗೋಳ ಎಂಬ ಗ್ರಾಮವು ಭೀಮನಹಳ್ಳಿಗಿಂತಲೂ ಸಾಧಾರಣ ದೊಡ್ಡದಿದ್ದು, ಅಲ್ಲಿ ಆದಿಜನರ ಸಂಖ್ಯೆಯಾದರೂ ವಿಶೇಷವಿದೆ. ಆದರೆ ಅವರ ಸ್ಥಿತಿಯು ಮಾತ್ರ ಬಹಳ ಕೆಟ್ಟದಿದೆ. ಅಲ್ಲಿ ಸರಕಾರದಿಂದ ಒಂದು ಕನ್ನಡ ಪ್ರಾಥಮಿಕ ಶಾಲೆಯು ಇದ್ದರೂ ಅಲ್ಲಿ ಅವರಿಗೆ ಪ್ರವೇಶವಿಲ್ಲ. ಈಗ ಕೆಲವು ದಿವಸಗಳ ಮುಂಚೆ ಅಲ್ಲಿಯ ಕೆಲ ಉತ್ಸಾಹಿ ತರುಣರು ಆದಿಜನರ ಈ ಶೋಚನೀಯ ಸ್ಥಿತಿಯನ್ನು ನೋಡಿ, ಮನನೊಂದು ಅಲ್ಲಿಯ ಮುಖ್ಯಾಧ್ಯಾಪಕರನ್ನು ಕುರಿತು ಅದೇ ಶಾಲೆಯಲ್ಲಿಯೇ ಆದಿಜನ ಹುಡುಗರಿಗಾಗಿ ಬೇರೆ ಸ್ಥಳದ ವ್ಯವಸ್ಥೆಮಾಡುವದಕ್ಕೆ ಕೇಳಿಕೊಂಡು, ಆದಿಜನರ ಕೇರಿಗಳಲ್ಲಿ ಹೋಗಿ ಅವರಿಗೆ ತಮ್ಮ ತಮ್ಮ ಹುಡುಗರನ್ನು ಶಾಲೆಗೆ ಕಳಿಸುವಂತೆಯೂ, ಮತ್ತು ಸ್ವಚ್ಛವಾಗಿ ಇರುವಂತೆಯೂ, ಉಪದೇಶಮಾಡಿದರು. ಅದಕ್ಕೆ ಅವರು ಒಪ್ಪಿದರು. ಆದರೆ ಇದೆಲ್ಲ ಬಾಯಿಮಾತೇ ಆಯಿತು, ಕೆಲಸ ಯಾವುದೂ ಆಗಲಿಲ್ಲ. ಇದಕ್ಕೆ ಆದಿಜನರ ಅಜ್ಞಾನತನವೂ, ಮತ್ತು ಸ್ಪೃಶ್ಯಜನರ ಅಲಕ್ಷ್ಯತನವೂ, ಕಾರಣವಾಗಿವೆ. ಇದಲ್ಲದೆ ಅಲ್ಲಿಯೇ ಸಮೀಪವಿರುವ ಅಲ್ಲೀಪೂರವೆಂಬ ಗ್ರಾಮವನ್ನು ಕೇಂದ್ರಸ್ಥಾನವಾಗಿ ಮಾಡಿಕೊಂಡಿರುವ ಪಾದ್ರಿಗಳು ಮೇಲಿಂದ ಮೇಲೆ ಬಂದು ಅವರಿಗೆ ಉಪದೇಶ ಮಾಡುತ್ತಿರುತ್ತಾರೆ. ಇಂತಹ ಉಪದೇಶಗಳಿಂದ ಅವರು ತಮ್ಮ ಪವಿತ್ರವಾದ ಹಿಂದುಧರ್ಮವನ್ನು ಬಿಟ್ಟು ಹೋಗುವ ಸಂಭವವಿದೆ. ಯಾಕೆಂದರೆ ಅವರಿಗೆ ತಮ್ಮ ಧರ್ಮಜ್ಞಾನವಿರುವದಿಲ್ಲ. ತಾವು ಯಾವ ಸಮಾಜದವರೆಂಬ ತಿಳುವಳಿಕೆ ಇರುವದಿಲ್ಲ. ಮತ್ತು ಸ್ಪೃಶ್ಯಹಿಂದುಗಳು ಕೊಡುತ್ತಿರುವ ಕಷ್ಟಗಳಿಂದ ತೊಂದರೆಯಾಗಿರುತ್ತದೆ ಆದುದರಿಂದ ಪರಧರ್ಮದವರು ಹೇಳುವ ಮಾತುಗಳೆಲ್ಲ ಸತ್ಯವೆಂದು ನಂಬುತ್ತಾರೆ. ಆದಕಾರಣ ಯರಗೋಳದ ಜನರು ಇನ್ನಾದರೂ ಎಚ್ಚತ್ತು, ತಮ್ಮ ನೆರೆಯಲ್ಲಿರುವ ಭೀಮನಹಳ್ಳಿಯ ಜನರನ್ನು ನೋಡಿ, ನಾಚಿ, ಆದಿಜನರ ಸುಧಾರಣೆಯ ಕೆಲಸಗಳನ್ನು ಕೈಕೊಂಡು ನಮ್ಮ ಧರ್ಮಬಾಂಧವರಾದ ಅವರನ್ನು ಮುಂದಕ್ಕೆ ತರುವರೆಂದು ನಂಬಿದ್ದೇನೆ. ಇದರಂತೆ ನಿಜಾಂ ಇಲಾಖೆಯ ಎಲ್ಲಾ ಜನರು ಭೀಮನಹಳ್ಳಿಯನ್ನು ಆದರ್ಶವಾಗಿಟ್ಟುಕೊಂಡು, ಇನ್ನಾದರೂ ತೀವ್ರವೇ ಆದಿಜನರ ಸುಧಾರಣೆಯ ಕೆಲಸಗಳನ್ನು ಕೈಕೊಂಡು, ಇವತ್ತಿನವರೆಗೂ ಅವರನ್ನು ಹೀನಸ್ಥಿತಿಯಲ್ಲಿಟ್ಟ ಪಾಪದಿಂದ ಮುಕ್ತರಾಗಿ, ಪರಧರ್ಮದವರ ಮುಂದೆ ಮುಖವೆತ್ತಿಕೊಂಡು ತಿರುಗುವಂತಹ ಸುಸಮಯವನ್ನು ಬೇಗನೆ ತಂದುಕೊಳ್ಳುವರೆಂದು ನಂಬಿದ್ದೇನೆ. ಮತ್ತು ಇಂತಹ ಸುಬುದ್ಧಿಯನ್ನು ನಮ್ಮೆಲ್ಲರಿಗೂ ಕೊಡಲೆಂದು ಆ ಪತಿತಪಾವನನಾದ ಪರಮೇಶ್ವರನನ್ನು ನಾವೆಲ್ಲರೂ ಬೇಡಿಕೊಳ್ಳೋಣ. ಹಿಂದುಧರ್ಮಕ್ಕೆ ಜಯವಾಗಲಿ.

ಹಿಂದುಸಮಾಜಾಭಿಮಾನಿ.

ವೀರಶೈವ ದೀಕ್ಷೆಯ ಸ್ತುತ್ಯ ಪ್ರಯತ್ನ.

ವಿಜಾಪುರದ ಶ್ರೀ. ಸಿದ್ಧೇಶ್ವರ ಸಂಸ್ಥೆಯವರು ವೀರಶೈವ ಮತಕ್ಕೆ ಬರಲಿಚ್ಛಿಸುವ ಅನ್ಯ ಮತೀಯರಿಗೆ ವೀರಶೈವ ದೀಕ್ಷೆ ಕೊಡಿಸುವ ಸ್ತುತ್ಯ ಕಾರ್ಯವನ್ನು ಅನೇಕ ದಿವಸಗಳಿಂದ ಮಾಡುತ್ತ ಬಂದಿದ್ದಾರೆ.

ಶ್ರೀ. ಸಿದ್ಧರಾಮೇಶನ ಜಾತ್ರೆಯ ಮಹಾ ಗಣಾರಾಧನೆಯ ದಿವಸ ಎಂದರೆ ತಾ|| ೧೭-೧-೩೩ ನೆಯ ದಿವಸ ಅತ್ಯಂತ ಸ್ತುತ್ಯವಾದ ಶಿವದೀಕ್ಷೆಯನ್ನು ಈ ಸಂಸ್ಥೆಯವರು ಮಾಡಿಸಿದರು. ಗುಲಬರ್ಗಾ ಜಿಲ್ಲಾ ಯಾದಗಿರಿ ತಾಲೂಕು ಹೊರುಣಚಿ ಗ್ರಾಮದಲ್ಲಿ ಜೀವಣ್ಣರಾವ ಎಂಬ ಒಬ್ಬ ವೈಷ್ಣವ ಬ್ರಾಹ್ಮಣ ಗೃಹಸ್ಥರಿದ್ದರು. ಅವರ ಪತ್ನಿ ಯಮುನಾಬಾಯಿಯವರು. ಇವರಿಗೆ ಈಗ ೨೩ ವರ್ಷ ಪ್ರಾಯ. ಇವರ ಪತಿಯು ಮೃತನಾದ ನಂತರ ಅವರ ಧರ್ಮದಲ್ಲಿಯೇ ಇದ್ದು ಮುಂದಣ ಜೀವನ ಯಾತ್ರೆ ನಡೆಯಿಸುವುದು ಇವರಿಗೆ ಅಸಹ್ಯ ತೋರಿ ಪರಧರ್ಮವನ್ನು ಸೇರಬಯಸಿದರು. ಇವರಿಗೆ ಚೆನ್ನಾಗಿ ಓದು ಬರಹ ಬರುತ್ತದೆ.

ಕೊನೆಗೆ ವೀರಶೈವ ಮತದಲ್ಲಿ ಸೇರುವುದೇ ಶ್ರೇಯಸ್ಕರವೆಂದು ಯೋಚಿಸಿ ಈ ಮತದ ಆಚಾರ ವಿಚಾರಗಳನ್ನನುಸರಿಸಲು ಸಿದ್ಧರಾಗಿ ವಿಜಾಪುರದ ಶ್ರೀ. ಸಿದ್ಧೇಶ್ವರ ಸಂಸ್ಥೆಯವರನ್ನು ತನಗೆ ವಿಧಿವತ್ತಾದ ವೀರಶೈವ ದೀಕ್ಷೆ ಕೊಡಿಸಬೇಕೆಂದು ವಿಜ್ಞಾಪಿಸಿಕೊಂಡರು.

ಶ್ರೀಮತಿ ಯಮುನಾಬಾಯಿಯವರ ಇಷ್ಟದ ಮೇರೆಗೆ ಶ್ರೀ ಸಿದ್ಧೇಶ್ವರ ಸಂಸ್ಥೆಯವರು ಶ್ರೀಗುರು ರುದ್ರಮುನಿಶಿವಾಚಾರ್ಯರು ಗುರು ಗುರುಪಾದ ದೇವರು ಗಚ್ಚಿನ ಹಿರೇಮಠ ವಿಜಾಪುರ ಇವರ ಅಧಿಪತ್ಯದಲ್ಲಿ ಶ್ರೀಮಾನ್ ಬಸವರಾಜ ಶಾಸ್ತ್ರಿಗಳಿಂದ ವಿಧಿವತ್ತಾಗಿ ಯಮುನಾಬಾಯಿಯವರಿಗೆ ಲಿಂಗಧಾರಣ ದೀಕ್ಷೆಯನ್ನು ಮಾಡಿಸಿ ಸರ್ವಮಂಗಲೆ ಎಂಬ ಹೆಸರನ್ನಿಟ್ಟದ್ದಾಯಿತು. ಸ್ತುತ್ಯ ಪ್ರಯತ್ನ.

ಪ್ರತ್ಯಕ್ಷದರ್ಶಿ.

ಲಿಂಗಾಯತ ಸ್ತ್ರೀಯಳನ್ನು ಬಿಡಿಸಿದರು.

ಪಂಢರಪುರದ ಶ್ರೀ. ಪಾಂಡುರಂಗ ದೇವಾಲಯದ ಹತ್ತಿರ ಕಳೆದ ೮ ನೆಯ ತಾರೀಖಿನ ದಿನ ಒಬ್ಬ ಮುಸಲ್ಮಾನ ಸ್ತ್ರೀಯಳೂ ಕೆಲವು ಮುಸಲ್ಮಾನ್ ತುಂಟರೂ ಒಬ್ಬ ಹಿಂದು ಸ್ತ್ರೀಯಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಅಷ್ಟರಲ್ಲಿ ಹಿಂದು ಮಹಾಸಭೆಯ ಪ್ರಚಾರಕರು ಕೆಲವು ಹಿಂದು ತರುಣರು ಬಂದು ಆ ಹೆಣ್ಣುಮಗಳನ್ನು ಬಿಡಿಸಿಕೊಂಡು ಪಾಂಡುರಂಗನ ದೇವಾಲಯದಲ್ಲಿಟ್ಟರು. ವಿಚಾರಿಸಲು ಆ ಹೆಣ್ಣುಮಗಳು ಲಿಂಗಾಯತ ಮತದವಳೆಂದು ಗೊತ್ತಾಯಿತು. ಸೊಲ್ಲಾಪುರಕ್ಕೆ ಆ ಹೆಣ್ಣುಮಗಳನ್ನು ಕಳಿಸಿಕೊಟ್ಟರು. ಎಲ್ಲೆಲ್ಲಿಯು ಹಿಂದು ಸ್ತ್ರೀಯರನ್ನು ಅಪಹರಿಸುವ ಹಂಚಿಕೆ ನಡೆದೇ ಇದೆ

ಓಂ

ವಿಚಾರ ಕ್ರಾಂತಿಯನ್ನುಂಟು ಮಾಡುವ

ಹೊಸ ಪುಸ್ತಕ.

ವೀರಶೈವ ಮತಾಚಾರ್ಯರ

ಕಾಲ ನಿರ್ಣಯ.

ಲೇಖಕರು—

ಕರ್ಲಮಂಗಲಂ ಶ್ರೀಕಂಠಯ್ಯನವರು.

ಪ್ರತಿಯೊಬ್ಬ ವೀರಶೈವನೂ ಅತ್ಯವಶ್ಯಕವಾಗಿ ಓದತಕ್ಕ ಪುಸ್ತಕ.

ಜಾಗ್ರತೆ ತರಿಸಿರಿ. ಬೆಲೆ ೧೨ ಆಣೆ.

ಮ್ಯಾನೇಜರ— ಶರಣ ಸಂದೇಶ

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸವೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದವಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B. ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

ಜಿ. ಎಸ್. ಗಂಗಾಧರಯ್ಯ,

ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೀಪೇಟೆ, ತುಮಕೂರು (ಮೈಸೂರು ಸ್ಟೇಟ್)

ಒಂದೇ ವರ್ಷದಲ್ಲಿ

೮,೪೭,೦೦೦ ರೂ-ಗಳ ವಿಮೆ,

ಡಿಶೆಂಬರ ಒಂದೇ ತಿಂಗಳಲ್ಲಿ

ರೂ. ೧,೮೩,೦೦೦ ವಿಮೆಯ ಪಾಲಿಸಿಗಳು

ಕೊಡಲ್ಪಟ್ಟಿವೆ!

ಜನನ, ವಿವಾಹ, ಜೀವ ವಿಮೆಗಳು ಬಹು ಲಾಭದಾಯಕವಾಗಿವೆ.

ಪ್ರವೇಶ ಧನ ರೂ. ೫, ತಿಂಗಳ ಕಂತ ೧.

ವಾರ್ಷಿಕ ಚಂದಾ ರೂ. ೧.

ಈ ಕಂಪನಿಯಲ್ಲಿ ಕೆಲಸಮಾಡಲಿಕ್ಕೆ ಯಾವತ್ತು ಭಾಗಗಳಲ್ಲಿ ಸಮರ್ಥರಾದ ಏಜಂಟರುಗಳು ಆರ್ಗನಾಯಜರರು, ಪಗಾರ ಅಥವಾ ಕಮಿಶನ್ ತೆಗೆದುಕೊಂಡು ಕೆಲಸ ಮಾಡಲುಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಯನ್ನು ಕಂಪನಿಗೆ ಬರೆದು ತಿಳಿದುಕೊಳ್ಳಿರಿ.

ಎಮ್. ಎಸ್. ಕೇಸರಿ ಬಿ. ಎ. ಎಲ್ ಎಲ್. ಬಿ.

ಮ್ಯಾನೇಜಿಂಗ್ ಏಜಂಟ್ಸ್,

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರನ್ಸ್ ಕಂ. ಲಿ. ಧಾರವಾಡ.

ಮುದ್ದಾದ ಅಕ್ಷರ! ಸುಲಭ ದರ!

ಶ್ರೀ ರಂಗನಾಥ ಟೈಪ್ ಫೌಂಡರಿ

ಬೆಂಗಳೂರು.

ಕನ್ನಡ ಮತ್ತು ಇಂಗ್ಲಿಷ, ಎಲ್ಲಾ ತರದ ಟೈಪುಗಳೂ ಒಳ್ಳೊಳ್ಳೇ ಬಾರ್ಡರಗಳೂ ನಮ್ಮ ಫೌಂಡರಿಯಲ್ಲಿ ತಯಾರಾಗುತ್ತವೆ.

ಒಳ್ಳೇ ಮೆಟಲ್, ಬಹು ಅಂದವಾದ ಅಕ್ಷರಗಳು. ಬಲು ಸುಲಭ ದರ. ಕ್ಯಾಟಲಾಗ ತರಿಸಿಕೊಳ್ಳಿರಿ. ಒಮ್ಮೆ ಟೈಪುಗಳನ್ನು ತರಿಸಿಕೊಂಡು ಅನುಭವ ಹೊಂದಿರಿ. ಹಳೆ ಟೈಪುಗಳಿದ್ದರೆ ಸುಲಭ ಚಾರ್ಜಿಗೆ ಹೊಸದಾಗಿ ಹೊಯಿದು ಕೊಡುತ್ತೇವೆ.

ಪ್ರೊಪ್ರೈಟರ,
ಶ್ರೀ ರಂಗನಾಥ ಟೈಪ್ ಫೌಂಡರಿ
೬೭ ಕುಬೇರ ಸಾಹುಜಿ ಲೈನ್
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪತ್ರಿಫಲದ

ದಿವ್ಯಾಭರಣ!

ಲಿಂಗಪೂಜಕರಿಗೆ ಪತ್ರಿಯು ಅತ್ಯಾಗತ್ಯವಲ್ಲವೆ? ಪತ್ರಿಯ ಫಲದಿಂದ ಮಾಡುವ **ಈ ದಿವ್ಯಾಭರಣ,** ಗಳಲ್ಲಿ ನಿಮಗೆ ಬೇಕಾದುದನ್ನು ತರಿಸಿಕೊಳ್ಳಿರಿ.

ಕರಕಮಲ, ನಾಗಾಭರಣ, ಕಂಠಮಾಲೆ ಮೊದಲಾದವು. ಮಂತ್ರವಿಶಿಷ್ಟ, ಲಿಂಗಪೂಜೆಗೆ ಅಗತ್ಯವಾಗಿರತಕ್ಕವು.

ನಿಮ್ಮ ಇಷ್ಟದಂತೆ ಮಂತ್ರಾಕ್ಷರಗಳನ್ನು ಸ್ಫುಟಗೊಳಿಸಿ ಪತ್ರಿಯ ಕಾಯಿಯ ಚಿಪ್ಪಿನಿಂದ ಬಹು ಅಂದವಾದ ಆಭರಣಗಳನ್ನು ತಯಾರುಮಾಡಿಕೊಡುತ್ತೇವೆ.

ಕ್ರಯ ೧ ರೂಪಾಯಿಯಿಂದ ಮೇಲ್ಪಟ್ಟು ನಿಮ್ಮ ಇಷ್ಟವಿದ್ದಷ್ಟು ರೂ. ೧೪ ವರೆಗೆ.

ವಿಳಾಸ:— ಸಂಗಮೇಶ- ಶ್ರೀ ಸರ್ಪಭೂಷಣ ಶಿವಯೋಗಿ ಮಠ ಬಳೇಪೇಟೆ ಬೆಂಗಳೂರು ಸಿಟಿ.

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಕಾಯಕವೆ ಕೈಲಾಸ	೦-೩-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ವಿಜಯವಾಣಿ	೦-೨-೦
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ,**

ಪ್ಲೇಗ ಸಂಜೀವಿನಿ.

ಅತ್ಯಾಶ್ಚರ್ಯಕರವಾದ ಗುಣ! ಕೇವಲ ೬ ತಾಸುಗಳಲ್ಲಿಯೇ ಗುಣ!

ಇದನ್ನು ಸೇವನೆ ಮಾಡುವದರಿಂದ ಪ್ಲೇಗಿನ ಭಯವೇ ಇಲ್ಲ!

೧೦೦ ಕ್ಕೆ ೧೦೦ ರಂತೆ ಗುಣ!!

ಶ್ರೀ ಮನ್ನಿರಂಜನ ಶಾಂತವೀರ ಸ್ವಾಮಿಗಳು ಗುರುಮಠಕಲ್ ಇವರು ಲೋಕ ಕಲ್ಯಾಣಾರ್ಥವಾಗಿ **ಪ್ಲೇಗ ಸಂಜೀವಿನಿ** ಎಂಬ ದಿವ್ಯ ಔಷಧಿಯನ್ನು ಶೋಧಮಾಡಿರುವರು ಪ್ಲೇಗ ರೋಗವು ಎಷ್ಟು ಘಾತುಕವದೆಯೆಂಬುದನ್ನು ಹೇಳುವ ಅವಶ್ಯವಿಲ್ಲ. ಈ ಪ್ಲೇಗಿನಿಂದ ಸಾವಿರಾರು ಜನರು ಸಾಯುತ್ತಿರುತ್ತಾರೆ. ಇದನ್ನು ತಡೆಯುವದಕ್ಕಾಗಿ ಎಷ್ಟೋ ಔಷಧಗಳನ್ನು ತಯಾರ ಮಾಡಿರುವರು. ಅವುಗಳಿಂದೇನೂ ಗುಣವಾದದ್ದು ಕಂಡು ಬರುವದಿಲ್ಲ. ಈ ಪ್ಲೇಗ **ಸಂಜೀವಿನಿಯಿಂದ ಆರೇ ತಾಸುಗಳಲ್ಲಿಯೇ** ಗುಣವಾಗುತ್ತದೆ. ಇದರ ಒಂದು ಬಾಟ್ಲಿಯ ಕಿಮ್ಮತ್ತು ೧ ರೂ. ೫ ಆಣೆ.

ವಿಶೇಷ ಮಾಹಿತಿಯನ್ನು ಅನುಪಾನ ಪತ್ರಿಕೆಯಲ್ಲಿ ನೋಡಿರಿ.

ವಿಶೇಷ ಸೂಚನೆ— ಅನುಪಾನ ಪತ್ರಿಕೆಯ ಸೂಚನೆಯ ಮೇರೆಗೆ ಔಷಧವನ್ನು ತೆಗೆದುಕೊಂಡಲ್ಲಿ ಖಾತ್ರಿಯಿಂದ ಗುಣವಾಗುವದು. ಎಲ್ಲ ಕಡೆಗೂ ಏಜಂಟರು ಬೇಕು. ವಿಳಾಸ—

ಏಜಂಟ್
ಬಸೆಟ್ಟೆಪ್ಪ ಬಸಪ್ಪ ಹಲಕುರ್ಕಿ,
ಬಾಗಲಕೋಟೆ.

ಪ್ಲೇಗ ಸಂಜೀವಿನಿ ಆಫೀಸ್
ಗುಲಬರ್ಗಾ.

ಮಹಾರೋಗ ಸಂಜೀವಿನಿ.

ಶ್ರೀಮನ್ನಿರಂಜನ ಗುರುಮಠಕಲ್ಲ ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ

ಮಹಾರೋಗ ಸಂಜೀವಿನಿ,

ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.

ಇತ್ತಿತ್ತಲಾಗಿ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ಮಿತಿಮೀರಿ ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. ಈ ಕೆಟ್ಟಬೇನೆಯು (ಪ್ಲೇಗ ಮಾರಿಕಾ,) ಖಜ್ಜಿಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ ತಗಲತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ಮೃತ್ಯುವಿನ ತುತ್ತಾಗುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಖಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ನಾರಸಂಹಾರಿ. ಕೂಸುಗಳ ಹೊಟ್ಟೆಯೊಳಗಿನ ಬೇನೆ** ವಗೈರೆ ರೋಗಗಳ ಮೇಲೆ ಆಶ್ಚರ್ಯಕಾರಕ **ಔಷಧಿಗಳನ್ನು** ಕಂಡು ಹಿಡಿದ ಸದರಿ ಪೂಜ್ಯಪಾದರೇ ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ ಔಷಧಿಯನ್ನು ಶೋಧಮಾಡಿ ಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೆಯುಳ್ಳವರು ಮುದ್ದಾಂ ಬಂದು ತಮ್ಮ ರೋಗ ಲಕ್ಷಣಗಳನ್ನೆಲ್ಲ ತೋರಿಸಿದರೆ ಅದಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ. ಮೊದಲು ಔಷಧದ ಅರ್ಧ ಕಿಮ್ಮತ್ತು ಕೊಟ್ಟು ಔಷಧ ತಕ್ಕೊಳ್ಳಲು ಪ್ರಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಆಗ್ಗೆ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳತಕ್ಕದ್ದು. ವಿಶೇಷ ಸಂಗತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು.

ಮ್ಯಾನೇಜರ ಆರೋಗ್ಯ ಮಂದಿರ, ಕಿರೀಟಮಠ ಕಸಬಾ ಕ್ಯಾಂಪ **ಸೊಲ್ಲಾಪುರ ಸಿಟಿ.**

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ. ಉತ್ತಮ ಸೌಕರ್ಯ. ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಕಡೆ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೇಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುಸಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆಯ** ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ,** ಎಂ. ಎಸ್‌ಸಿ., ಪಿಎಚ್. ಡಿ ಇವರು ತಯಾರಿಸಿದ

" [illegible] "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ
ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್ ಮುಲಾಮಿನಲ್ಲಿ ಮಿಶ್ರವಾಗಿಲ್ಲ.**

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ. ಇವರಿಂದ ತಯಾರಿಸಲ್ಪಟ್ಟ

" ಕಚೂರ್ಣ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಸೂಚನೆ—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರೆಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ದಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು

ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್

ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತ ಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟಿ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.
(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯ ಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಪ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ಕಂಪಾಜಿಟರು ಬೇಕು.

ಮರಾಠಿ ಮತ್ತು ಕನ್ನಡ ಚೆನ್ನಾಗಿ ಕಂಪೋಜ್ ಮಾಡತಕ್ಕ ಕಂಪಾಜಿಟರು ಬೇಕು. ಯೋಗ್ಯ ಸಂಬಳ ದೊರೆಯುವದು. ಇಷ್ಟವುಳ್ಳವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ವಿಳಾಸ:— ಮ್ಯಾನೇಜರ,

ಕಲ್ಯಾಣ ಕರ್ನಾಟಕಪ್ರೆಸ್ ಗುಲಬರ್ಗಾ

ಪೋ. ಗುಲಬರ್ಗಾ (ನೈಜಾಮ ಸ್ಟೇಟ)

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

REGISTERED No. B. 2891.

ಶರಣ ಸಂದೇಶ

The
Sharana Sandesh.

ನ್ಯಾಯನಿಷ್ಠುರಿ, ದಾಕ್ಷಿಣ್ಯಪರನಲ್ಲ! ಲೋಕವಿರೋಧಿ, ಶರಣನಾರಿಗೂ ಅಂಜುವವನಲ್ಲ!
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ವ ೨೨೮ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೪. | ಆಲಮಟ್ಟಿ- ಸೋಮವಾರ ತಾರೀಖು ೨೫ ನೆಯ ಫೆಬ್ರುವರಿ ೧೯೪೫. | ಸಂಚಿಕೆ ೨೬

ಜನಸೇವೆಯೇ ದೇವರ ಸೇವೆ

ಹಿಂದುಸ್ಥಾನದ ರಾಜಕೀಯ ಸುಧಾರಣೆ.

ಹಿಂದುಸ್ಥಾನದ ರಾಜಕೀಯ ಸುಧಾರಣೆಯ ಸಂಬಂಧವಾಗಿ ಪಾರ್ಲಮೆಂಟಿನಲ್ಲಿ ಇಡಲ್ಪಟ್ಟ ಗೊತ್ತುವಳಿಯ ತಿದ್ದುಪಾಟಿಗಾಗಿ ೫೦೦ರ ವರೆಗೆ ಸೂಚನೆ ಉಪಸೂಚನೆಗಳು ಬಂದಿವೆ.
ಇವುಗಳಲ್ಲಿ ಈಗಾಗಲೇ ಕೆಲವು ತಳ್ಳಲ್ಪಟ್ಟವು.
ಉಳಿದವುಗಳಿಗೂ ಅದೇ ಗತಿ.

ಅಸೆಂಬ್ಲಿಯಲ್ಲಿ ಇಡಲ್ಪಟ್ಟ ರೇಲ್ವೆ ಬೋರ್ಡಿನ ಆಯವ್ಯಯ ಪತ್ರಿಕೆಯನ್ನು ತಳ್ಳುವ ಯೋಚನೆ ನಡೆದಿದೆ. ಕಾಂಗ್ರೆಸ್ ಪಕ್ಷದ ೧೧ ಸಭಾಸದರು ತಾ. ೨೨ ನೆಯ ದಿನದ ಅಸೆಂಬ್ಲಿಗೆ ಬಂದಿರಲಿಲ್ಲ. ಇನ್ನು ಮೇಲೆ ಹೀಗೆ ಯಾರೂ ಮಾಡಕೂಡದೆಂದು ಶ್ರೀ. ಗಾಡಗೀಳರು ತಮ್ಮ ಪಕ್ಷಕ್ಕೆ ಅಪ್ಪಣೆ ಮಾಡಿದ್ದಾರೆ.

ಮುಂಬೈ ಕೌನ್ಸಿಲ್ಲಿನಲ್ಲಿ 'ಫೈನಾನ್ಸಬಿಲ್' ಒಪ್ಪಿಗೆ ಹೊಂದಿತು.

ದೇಶಸೇವೆ ದೇವಾಲಯ.

SANGAM CLOTH STORES
Prop: M. S. Hundekar & Sons,
P.O: TERDAL - 587 315
Dt. Bijapur, (Karnataka)

REGISTERED No. B. 2891.

ಶರಣ ಸಂದೇಶ

The
Sharana Sandesh.

ನ್ಯಾಯನಿಷ್ಠುರಿ| ದಾಕ್ಷಿಣ್ಯಪರನಾನಲ್ಲ| ಲೋಕವಿರೋಧಿ| ಶರಣನಾರಾರಿಂಗೂ ಅಂಜುವವನಲ್ಲ|
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ || ವ. ೨೨೪ || ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ ರೂ

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ೪.	ಆಲಮಟ್ಟಿ- ಸೋಮವಾರ ತಾರೀಖು ೨೫ ನೆಯ ಫೆಬ್ರುವರಿ ೧೯೩೫.	ಸಂಚಿಕೆ ೨

ಜನಸೇವೆಯೇ — ದೇವರ ಸೇವೆ

ಹಿಂದುಸ್ಥಾನದ ರಾಜಕೀಯ

ಸಂಕ್ಷಿಪ್ತ ವಾರ್ತೆ.

ಹಿಂದುಸ್ಥಾನದ ರಾಜಕೀಯ ಸುಧಾರಣೆಯ ಸಂಬಂಧವಾಗಿ ಪಾರ್ಲಮೆಂಟಿನಲ್ಲಿ ಇಡಲ್ಪಟ್ಟ ಗೊತ್ತುವಳಿಯ ತಿದ್ದುಪಾಟಿಗಾಗಿ ೫೦೦ರ ವರೆಗೆ ಸೂಚನೆ ಉಪಸೂಚನೆಗಳು ಬಂದಿವೆ.
ಇವುಗಳಲ್ಲಿ ಈಗಾಗಲೇ ಕೆಲವು ತಳ್ಳಲ್ಪಟ್ಟಿವು.
ಉಳಿದವುಗಳಿಗೂ ಅದೇ ಗತಿ.

ಅಸೆಂಬ್ಲಿಯಲ್ಲಿ ಇಡಲ್ಪಟ್ಟ
ರೇಲ್ವೆ ಬೋರ್ಡಿನ ಆಯವ್ಯಯ ಪತ್ರಿಕೆಯನ್ನು
ತಳ್ಳುವ ಯೋಚನೆ ನಡೆದಿದೆ. ಕಾಂಗ್ರೆಸ್ ಪಕ್ಷದ ೧೧
ಸಭಾಸದರು ತಾ. ೨೨ ನೆಯ ದಿನದ ಅಸೆಂಬ್ಲಿಗೆ ಬಂದಿರಲಿಲ್ಲ. ಇನ್ನು
ಮೇಲೆ ಹೀಗೆ ಯಾರೂ ಮಾಡಕೂಡದೆಂದು ಶ್ರೀ. ಗಾಡ
ಗೀಳರು ತಮ್ಮ ಪಕ್ಷಕ್ಕೆ ಅಪ್ಪಣೆ ಮಾಡಿದ್ದಾರೆ.

ಮುಂಬೈ ಕೌನ್ಸಿಲ್ಲಿನಲ್ಲಿ
'ಫೈನಾನ್ಸಬಿಲ್'
ಒಪ್ಪಿಗೆ ಹೊಂದಿತು.

ದೇಶಸೇವೆ — ದೇವಾಲಯ

SANGAM CLOTH STORES
Prop: M. S. Hundekar & Sons,
P.O: TERDAL - 587 315
Dt. Bijapur, (Karnataka)

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಒಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನ?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ, ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ [illegible] ತಿಜೋರಿ ಕೊಂಡಾರು ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮೇಲೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜೋತಿಷಾಲಂಕಾರ ವೇ| ಬ್ರ| ಶ್ರೀ| ಸಿದ್ಧಾಂತಿ ಶಿವಬಸವ ಶಾಸ್ತ್ರಿಗಳು ಹೂಲಿ,
ಇವರಿಂದ ತಯಾರಿಸಲ್ಪಟ್ಟ ಶಕೆ ೧೮೫೮ ನೆಯ ಯುವ ಸಂವತ್ಸರದ

ಶ್ರೀ ಹೂಲಿ (ಪೂವಲಿ) ಪಂಚಾಂಗಗಳು

ಸದ್ಯಕ್ಕೆ ಮಾರಾಟಕ್ಕೆ ತಯಾರಾಗಿರುವವು.

ಇವು ಎಲ್ಲ ಪಂಚಾಂಗಗಳಿಗಿಂತಲೂ ಹೆಚ್ಚು ಮತ್ತು ಆವಶ್ಯಕ ವಿಷಯಗಳಿಂದ ಕೂಡಿರುತ್ತವೆಂದು ಬಹು ಜನರಿಂದ ಶ್ಲಾಘಿಸಲ್ಪಟ್ಟಿರುತ್ತವೆ. ಈ ಪಂಚಾಂಗವು ೭೦ ಪುಟಗಳುಳ್ಳದ್ದಾಗಿ ಮೇಲ್ಭಾಗದಲ್ಲಿ ಶ್ರೀ ಗಜಾನನ ಮತ್ತು ೧೨ ರಾಶಿಗಳ ಭಾವಚಿತ್ರಗಳಿಂದ ಅಂದವಾಗಿ ಮುದ್ರಿತವಾಗಿರುತ್ತದೆ. ಮಾರಾಟದ ದರವನ್ನು ಬಹು ಕಡಿಮೆ ಅಂದರೆ— ಪಂಚಾಂಗ ೧ಕ್ಕೆ ೪ ಆಣೆ, ೫ ಕ್ಕೆ ೧ ರೂಪಾಯಿ, ವ್ಯಾಪಾರಸ್ಥರಿಗೆ— ೧೦೦ ಪಂಚಾಂಗಕ್ಕೆ ೧೦ ರೂಪಾಯಿ, ೫೦೦ ಪಂಚಾಂಗಗಳಿಗಿಂತ ಹೆಚ್ಚು ತರಿಸಿದವರಿಗೆ ಹೆಚ್ಚಾಗಿ ಸವಲತ್ತು ಕೊಡುವೆವು.

ಇದಲ್ಲದೆ ಮಹಾಗಾಂವ, ಸವಣೂರ ಕನ್ನಡ ಮತ್ತು ಮರಾಠಿ, ಶ್ರೀ ಬಸವೇಶ್ವರ, ಜೋಗೂರ, ರಿತ್ತಿ, ಸೊಲ್ಲಾಪುರ, ಹರಪನಹಳ್ಳಿ, ಟಿಳಕ ಮೊದಲಾದ ಪಂಚಾಂಗಗಳು ಠೋಕ ವ ಚಿಲ್ಲರ ಧಾರಣೆಯಿಂದ ದೊರೆಯುವವು.

ಶ್ರೀ ಹೂಲಿ (ಪೂವಲಿ) ಪಂಚಾಂಗ ಪ್ರಕಾಶಕರು,
ಸಿ. ಕೆ. ಲಿಂಗಯ್ಯ ಸ್ವಾಮಿ
ಶ್ರೀ ಲಕ್ಷ್ಮೀ ವಿಲಾಸ ಪುಸ್ತಕಾಲಯ ಗದಗ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಫೆಬ್ರುವರಿ ತಾರೀಖು ೨೫ ನೆಯ ಸೋಮವಾರ | ಸಂಚಿಕೆ ೨೬.

ಕೇಳಿ ಜಿನ್ನಾರವರ ಬುದ್ಧಿವಾದ!

.ಹಿಂದು ಮುಸಲ್ಮಾನರ ಐಕಮತ್ಯದ ವಿಷಯವಾಗಿ ದಿಲ್ಲಿಯ ಒಂದು ಭಾಷಣದಲ್ಲಿ ಬ್ಯಾ. ಜಿನ್ನಾರವರು ಹೀಗೆ ಹೇಳಿದರು—

"ಹಿಂದು ಮುಸಲ್ಮಾನರ ಐಕಮತ್ಯವನ್ನು ನಾನು ಸಿದ್ಧಮಾಡಿ ಕೊಟ್ಟರೆ ಸ್ವರಾಜ್ಯದ ಹೋರಾಟದಲ್ಲಿ ಮೊದಲನೆಯ ವಿಜಯ ದೊರೆಯಿತೆಂದೇ ತಿಳಿಯಿರಿ. ಹಿಂದು ಮುಸಲ್ಮಾನರಲ್ಲಿ ಐಕ್ಯವಾಗುತ ವರೆಗೂ ನಾವು ಪರ ಸರಕಾರದ ಗುಲಾಮರಾಗಿಯೇ ಇರುವೆವು."

ಈ ಸಿದ್ಧಾಂತವೇನೋ ನಿಜ. ಇದಕ್ಕಾಗಿ ಜಿನ್ನಾರವರಾಗಲಿ ಇವರ ಮುಸಲ್ಮಾನ್ ಪಕ್ಷವಾಗಲಿ ಈ ವರೆಗೆ ಮಾಡಿರುವ ಸ್ವಾರ್ಥ ತ್ಯಾಗ ಯಾವುದು? ಹಿಂದು ಮುಸಲ್ಮಾನರ ಐಕ್ಯದ ರಾಷ್ಟ್ರೀಯ ಕಾರ್ಯವಾವುದು? ಇನ್ನು ಮುಂದೆ ಮಾಡತಕ್ಕವುಗಳಾವುವು? ಅವುಗಳನ್ನಷ್ಟು ಹೇಳಿದ್ದರೆ ಚೆನ್ನಾಗಿರುತ್ತಿದ್ದಿತಲ್ಲವೆ?

ಇತ್ತ ಕಾಂಗ್ರೆಸ್ಸಿನಿಂದಲೂ ಅತ್ತ ಸರಕಾರದಿಂದಲೂ ದೊರೆಯುವಷ್ಟು ಸೌಲಭ್ಯ ಹೊಂದುತ್ತಾ ಬಂದುದೇ ಸ್ವಾರ್ಥತ್ಯಾಗ. ಇದೇ ಐಕ್ಯಕ್ಕೋಸ್ಕರ ಮಾಡಿದ ಮಹತ್ಕಾರ್ಯ.

ಮತ್ತೊಂದು ಹೋತಿನ ಯಜ್ಞ!

ಕಳೆದ ವಾರ ಸಾಂಗಲಿಯಲ್ಲಿಯೂ ಒಂದು ಯಜ್ಞವಾಯಿತು. ಇದಕ್ಕಾಗಿ ಮೂರು ಹೋತುಗಳನ್ನು ಗುದ್ದಿ ಕೊಂದರಂತೆ. ಆದರೆ ಕುರುಂದವಾಡದವರಿಗಿಂತ ಇಲ್ಲಿ ಗುದ್ದಿದವರು ಬಹು ಚತುರರಂತೆ. ಬಂದಮೇಲೆ ಅವಕ್ಕೇನು ನೋವು? ಅವು ಸೀದಾ ಸ್ವರ್ಗಕ್ಕೇನೇ ಹೋದವು!

ಅಸ್ಪೃಶ್ಯತಾ ನಿವಾರಣೆಯ ಗಲಾಟೆಯಲ್ಲಿ ಬ್ರಾಹ್ಮಣಕ್ಕೆ ಮೈಲಿಗೆಯಾಯಿತೆಂದು ಅದನ್ನು ಮಡಿ ಮಾಡಲು ಇತ್ತೀಚೆಗೆ ಇಂಥ ಯಜ್ಞಗಳು ಹೆಚ್ಚಾಗಿವೆಯೇನು?

ಲಿಂಗಾಯತರಲ್ಲಿ ಇತ್ತೀಚೆಗೆ ಕೆಲವರು ಬ್ರಾಹ್ಮಣ್ಯದ ಬೆನ್ನು ಹತ್ತಿದ್ದಾರಷ್ಟೆ. ಜುಟ್ಟಾ ಬಿಡಿಸುತ್ತಾರೆ. ಹೆಣ್ಣುಮಕ್ಕಳು ಸೀರೆ ಉಡುವುದನ್ನು ತಿದ್ದುಪಡೆ ಮಾಡುತ್ತಾರೆ. ಪತಿಯ ಸಂಗಡ ಸತಿ ಮೃತಪಡುವ ಕಲ್ಪನೆಯ ಬೆಳೆಯಿಸಿ ಕೊಂಡಾಡುತ್ತಾರೆ. ಇವರು ಬ್ರಾಹ್ಮಣ್ಯ ಪಡೆಯುವ ಈ ಗಡಿಬಿಡಿಯಲ್ಲಿ ನಮ್ಮ ಬೆನ್ನು ಹತ್ತುವರೇ ಎಂಬ ಚಿಂತೆ ಹೋತುಗಳಿಗೆ ಬಂದಿದ್ದರೂ ಬಂದಿರಬಹುದಲ್ಲವೇ?

ಮೆರವಣಿಗೆ ಬೇಡ

ಜಾತಿ ನಿರ್ಣಯ ನಿಷೇಧ ಪರಿಷತ್ತಿನ ಅಧ್ಯಕ್ಷರಾದ ಶ್ರೀಮಾನ ಚಿಂತಾಮಣಿಯವರು ಸ್ವಾಗತ ಸಂಘಕ್ಕೆ ಅಧ್ಯಕ್ಷರ ಮೆರವಣಿಗೆ ಬೇಡವೆಂದು ತಿಳಿಸಿದ್ದಾರೆ. ಇದು ಮೆರೆಯುವ ಸಂತೋಷದ ಕಾಲವೆ?

ಜಾತಿ ಪ್ರಾತಿನಿಧ್ಯ ಮತ್ತು ಸ್ವರಾಜ್ಯ ಇವೆರಡಕ್ಕೂ ಪೂರ್ವ ಪಶ್ಚಿಮವೆಂದು ಧರ್ಮಾತ್ಮಾ ಮಾಲವೀಜಿಯವರು ಹೇಳಿದರು. ಹಿಂದು ಮುಸಲ್ಮಾನರ ಐಕ್ಯ ಮಾಡುವ ಜಿನ್ನಾರವರ ಮಾತು ಡಂಭಾಚಾರದ ಮಾತೆಂದು ಸರದಾರ ಸಂತಸಿಂಗರು ಹೇಳಿದರು.

ಮತ್ತೊಂದು ಅಪಜಯ.

ರೇಲ್ವೆ ಬೋರ್ಡಿಗೆ ೪|| ಲಕ್ಷ ರೂ. ಗಳು ಬೇಕೆಂಬ ಒಂದು ಗೊತ್ತುವಳಿಯನ್ನು ಅಸೆಂಬ್ಲಿಯಲ್ಲಿ ಸ. ಜೋಸೆಫ್ ಭೋರ ಇವರು ತಂದಿದ್ದರು. ಶ್ರೀ. ಭುಲಾಭಾಯಿಯವರು ಇದಕ್ಕೆ ವಿರೋಧವಾಗಿ ಒಂದು ರೂಪಾಯಿ ಕೊಡಬೇಕೆಂದು ಉಪ ಸೂಚನೆ ತಂದರು. ಇದರಿಗೆ ೭೫ ಅನುಕೂಲ ೪೭ ಪ್ರತಿಕೂಲ ಮತಗಳು ದೊರೆತು ಕಾಂಗ್ರೆಸ್ ಪಕ್ಷವು ಗೆದ್ದಿತು.

ಲಗ್ನ ಹೀಗೆ ಮಾಡಿರಿ.

ಮೋಟೆಬೆನ್ನೂರಲ್ಲಿ ನಿನ್ನೆ ದಿನ ಕರ್ನಾಟಕ ಹರಿಜನ ಸೇವಾ ಸಂಘದ ಗೌರವ ಕಾರ್ಯದರ್ಶಿಗಳಾದ ಶ್ರೀಯುತ ಪಾಟೀಲ ಕಲ್ಲನಗೌಡರ ಲಗ್ನವಾಯಿತು. ಮೊದಲು ವಧೂವಿನಿಂದ ರಾಟೆಯ ಪೂಜೆ, ಅನಂತರ ರಾಷ್ಟ್ರೀಯ ಧ್ವಜಾರೋಹಣ. ಮಾಂಗಲ್ಯಧಾರಣದ ನಂತರ ಆದಿಜನ ಬಾಲಿಕೆಯರ ಮಂಗಲಸ್ತವನ. ಅನಂತರ ಶ್ರೀ. ಮುದವೀಡು ಕೃಷ್ಣರಾಯರ ಭಾಷಣ. ತಮ್ಮ ತಮ್ಮ ಧರ್ಮ ಪದ್ಧತಿಯಂತೆ ಮಾಂಗಲ್ಯಧಾರಣಮಾಡಿ ಈ ಮಹೋತ್ಸವದಲ್ಲಿ ರಾಷ್ಟ್ರೀಯ ಕಲ್ಪನೆಗಳನ್ನು ಬೆಳೆಯಿಸಬೇಕು. ವೃಥಾ ಆಡಂಬರ, ಧನವ್ಯಯ, ತನುಶ್ರಮಗಳೇಕೆ? ಈ ಮಾದರಿಯ ಲಗ್ನ ಪದ್ಧತಿಯು ಪ್ರಸಾರವಾಗಲಿ. ಈ ವಧೂವರರ ಕೌಟುಂಬಿಕ ಜೀವನವೂ ಮಾದರಿಯದಾಗಲಿ. ಇವರಿಂದ ರಾಷ್ಟ್ರ ಕಾರ್ಯವೂ ಹೆಚ್ಚು

ಹಿಂದು ಧರ್ಮ ಹಾಳಾಗಿ ಹೋಗಲಿ; ಯಾರಿಗೆ ಬೇಕು?

ರಾಷ್ಟ್ರವೀರ:— ಇದೇನು ನಿಮ್ಮ ಧರ್ಮದ ಹುಚ್ಚು? ಸಾಕು ಸಾಕಾಯಿತು. ಈ ಧರ್ಮದಿಂದಲೇ ನಮ್ಮ ರಾಷ್ಟ್ರ ಇಂಥ ಪರತಂತ್ರದಲ್ಲಿ ಬಳಲುತ್ತಿದೆ. ಹಿಂದುಗಳ ಈ ಧರ್ಮದ ದುರಭಿಮಾನದಿಂದಲೇ ರಾಷ್ಟ್ರದಲ್ಲಿ ಐಕಮತ್ಯವಾಗುತ್ತಾ ಇಲ್ಲ. ಮುಸಲ್ಮಾನರೇನು ಪರದೇಶದವರೇ? ಜಾತಿಯ ನಿರ್ಣಯಕ್ಕೆ ಹಿಂದುಗಳೇಕೆ ಇಷ್ಟು ವಿರೋಧಮಾಡಬೇಕು? ಮುಸಲ್ಮಾನರಿಗೆ ಹೆಚ್ಚಿಗೆ ಅಧಿಕಾರ ದೊರೆತರೇನಾಯಿತು? ಅವರೂ ನಮ್ಮ ದೇಶಬಾಂಧವರಲ್ಲವೆ?

ನಾವು ಹಾಳಾದ ಈ ಧರ್ಮದ ದುರಭಿಮಾನ ಬಿಟ್ಟು ಮುಸಲ್ಮಾನರನ್ನು ಕೂಡಿಕೊಂಡು ಮೊದಲು ಇಂಗ್ಲಿಷರ ಕೈಯಲ್ಲಿರುವ ರಾಜ್ಯಸೂತ್ರವನ್ನು ಕಿತ್ತಿಕೊಳ್ಳಬಾರದೇ? ನಮಗೆ ಸ್ವರಾಜ್ಯ ಮೊದಲು ಬೇಕು. ಅದು ಮುಸಲ್ಮಾನರಿಗೆ ದೊರೆಯಲಿ, ಕ್ರೈಸ್ತರಿಗೆ ದೊರೆಯಲಿ, ಯಾರಿಗೆ ದೊರೆತರೇನು? ಧರ್ಮದ ದುರಭಿಮಾನವೇಕೆ? ಹಿಂದುಧರ್ಮ ಹಾಳಾಗಿ ಹೋಗಲಿ. ಯಾರಿಗೆ ಬೇಕ? ನಮಗೆ ನಮ್ಮ ರಾಷ್ಟ್ರಧರ್ಮವೊಂದಿದ್ದರೆ ಸಾಕು.

ಧರ್ಮವೀರ:— ದೇಶಭಕ್ತರೇ, ಹಿಂದು ಧರ್ಮದ ಮೇಲೆ ನಿಮಗೆ ಇಷ್ಟೇಕೆ ಕೋಪ? ಸ್ವರಾಜ್ಯ ಬೇಡವೆಂದು ಹಿಂದುಧರ್ಮ ಹೇಳುತ್ತಿದೆಯೇ? ಪರತಂತ್ರವೇ ಮೋಕ್ಷವೆಂದು ಸಾರುತ್ತದೆಯೆ? ಸ್ವರಾಜ್ಯ ಬೇಡವೆಂದು ಹೇಳುವವರು ಹಿಂದುಗಳೆಂದ ಹೇಳಿಸಿಕೊಳ್ಳಬಹುದೆ? ಇಂಗ್ಲಿಷರ ಗುಲಾಮರಾಗಿಯೇ ಇರಬೇಕೆಂದು ಹಿಂದುಧರ್ಮ ಶಾಸ್ತ್ರವೇನಾದರೂ ಕಲಿಸುತ್ತದೆಯೇ?

ಮುಸಲ್ಮಾನರು ನಮ್ಮ ದೇಶಬಾಂಧವರೆಂದು ನಾವು ತಿಳಿಯಬೇಕಾದುದು ಯುಕ್ತವೇ ಸರಿ. ಆದರೆ ಅವರೂ ಹಿಂದುಗಳು ತನ್ನ ದೇಶಬಾಂಧವರೆಂದು ತಿಳಿಯಬಾರದೆ? ಹಿಂದುಸ್ಥಾನವೇ ಜನ್ಮಭೂಮಿಯೆಂದು ಹಿಂದುಗಳು ತಿಳಿಯುವಂತೆ ಇಲ್ಲಿ ಹುಟ್ಟಿ, ಇಲ್ಲಿಯೇ ಬೆಳೆದು, ಇಲ್ಲಿಯೇ ಎಲ್ಲ ಸುಖಸೌಲಭ್ಯಗಳನ್ನು ಹೊಂದುತ್ತಿರುವ ಮುಸಲ್ಮಾನರು ಈ ದೇಶವೇ ತಮ್ಮ ಜನ್ಮಭೂಮಿಯೆಂದು ತಿಳಿಯಬಾರದೆ? ಅವರು ಅರಬಸ್ಥಾನದ ಕಡೆ ನೋಡುವುದೇಕೆ? ಈ ದೇಶವು ತಮ್ಮ ಪೂರ್ವಜರು ಗಳಿಸಿದ ಆಸ್ತಿಯೆಂದು ಅವರು ತಿಳಿಯುವುದೇಕೆ? ಅವರು ತಮ್ಮ ಸಂಸ್ಕೃತಿಯನ್ನೇ ಬೆರೆಯಾಗಿ ಬೆಳೆಸುವುದೇಕೆ?

ಹಿಂದು ಧರ್ಮವು ಹಾಳಾಗಿ ಹೋಗುವಷ್ಟು ನಿಮಗೆ ಬೇಸರವಾಗಿದ್ದರೆ ಮುಸಲ್ಮಾನ್ ಧರ್ಮವು ನಿಮಗೆ ಬೇಕಾಗಿದೆಯೇ ರಾಷ್ಟ್ರ ಧರ್ಮವು ಹಿಂದುಗಳಿಗೆ ಮಾತ್ರವೇ ಬೇಕಾದುದೆ? ಅದು ಮುಸಲ್ಮಾನರಿಗೆ ಬೇಡವೆ? ಅವರು ಮಾತ್ರ ಧರ್ಮವನ್ನೇ ಮೂಲವಾಗಿಟ್ಟುಕೊಂಡು ಅದರ ಪೋಷಣೆಗೆ ರಾಷ್ಟ್ರ ಧರ್ಮವನ್ನು ಬಯೋಗಿಸಿಕೊಳ್ಳಬಹುದೆ?

ರಾಷ್ಟ್ರವೀರ:— ಇಕೋ ನೋಡಿ ಇದೇ ನಿಮ್ಮ ದುರಭಿಮಾನ. ಮುಸಲ್ಮಾನರು ಹೇಗಿದ್ದರೇನು? ನೀವು ರಾಷ್ಟ್ರಭಕ್ತರಾದರೆ ತೀರಿತು. ಅವರು ತಪ್ಪು ದಾರಿಯಲ್ಲಿ ಹೋಗುತ್ತಿದ್ದಾರೆಂದು ನೀವೂ ಹಾಗೆಯೇ ಮಾಡಬೇಕೇ? ಅವರಲ್ಲಿಯೂ ಈಗೀಗ ರಾಷ್ಟ್ರಭಾವನೆ ಬರುತ್ತಾ ಇದೆ. ಮುಂದೆ ಬಂದೀತು. ನಾವು ಅವರ ಇಷ್ಟದಂತೆ ನಡೆದು ಅವರನ್ನು ಒಳಗೆ ಮಾಡಿಕೊಂಡು ಇಂಗ್ಲಿಷರ ಕೈಯಿಂದ ಹೇಗಾದರೂ ಮಾಡಿ ರಾಜ್ಯಸೂತ್ರ ಕಿತ್ತುಕೊಳ್ಳಬೇಕು. ನಾವಿಬ್ಬರೂ ಹೊಡೆದಾಡಿದರೆ ಮೂರನೆಯವನಿಗೆ ಅನುಕೂಲವಲ್ಲವೆ? ಇದೇಕೆ ನಿಮಗೆ ತಿಳಿಯುವುದಿಲ್ಲ?

ನಮ್ಮಲ್ಲಿ ಮೊದಲಿನಿಂದಲೂ ಹಾಳಾದ ಈ ಧರ್ಮಾಭಿಮಾನವೆ ಮನೆಮಾಡಿಕೊಂಡಿದೆ. ಇದು ಹೋಗಬೇಕು. ದೇಶಾಭಿಮಾನವಿಲ್ಲದ್ದರಿಂದಲೇ ನಾವು ಪರತಂತ್ರದಲ್ಲಿ ಸಿಕ್ಕಿಕೊಂಡೆವು. ಹಿಂದುಗಳ ಈ ಧರ್ಮ ಹಾಳಾಗಿ ಹೋದ ವಿನಾ ನಮಗೆ ಸ್ವಾತಂತ್ರ್ಯವಿಲ್ಲ. ನಾನಾ ಜಾತಿ, ಕುಲ, ಮತ, ಪಂಥಗಳೆಲ್ಲಾ ಹಿಂದುಗಳಲ್ಲಿಯೇ ತುಂಬಿಕೊಂಡಿವೆ. ಮೇಲುಕೀಳುಗಳು ಮನೆಮಾಡಿವೆ. ಪರಸ್ಪರ ಊಟೋಪಚಾರ ಶರೀರ ಸಂಬಂಧಗಳಿಲ್ಲ. ಇಂಥ ಅತ್ಯಂತ ತ್ಯಾಜ್ಯವಾದ ಹಿಂದು ಧರ್ಮದ ವಿಚಾರವಾಗಿ ದುರಭಿಮಾನ.

ಈ ಧರ್ಮಾಭಿಮಾನವೇ ಹಿಂದಕ್ಕೆ ನಾನಾ ಹಿಂಸೆ, ಅಶಾಂತತೆ ಅನರ್ಥಗಳನ್ನುಂಟು ಮಾಡಿತ್ತು. ಇನ್ನೂ ಇದು ಈ ದೇಶದಲ್ಲಿ ರಾಷ್ಟ್ರಪ್ರೇಮ ದೇಶಾಭಿಮಾನಗಳನ್ನು ಬೆಳೆಯಿಸಲು ಪ್ರತಿಬಂಧಕವಾಗಿದೆ. ನಿಮ್ಮ ಧರ್ಮದ ಹುಚ್ಚು ಇಳಿಯದೆ ದೇಶಕ್ಕೆ ಸ್ವಾತಂತ್ರ್ಯವಿಲ್ಲ.

ಧರ್ಮವೀರ:— ಒಬ್ಬೊಬ್ಬರಿಗೆ ಒಂದೊಂದು ಹುಚ್ಚು. ನಮಗೆ ಧರ್ಮದ ಹುಚ್ಚು. ನಿಮಗೆ ದೇಶದ ಹುಚ್ಚು. ಇವುಗಳಲ್ಲಿ ಯಾವ ಹುಚ್ಚಿದ್ದರೂ ಅದು ಇನ್ನೊಬ್ಬರಿಗೆ ಅನರ್ಥಕವೇ ಸರಿ. ಧರ್ಮದ ಹುಚ್ಚಿನಿಂದ ಆಗ ದೇಶವನ್ನು ಮೊದಲಿನವರು ಕಳೆದುಕೊಂಡಿದ್ದರೆ ಈಗ ದೇಶದ ಹುಚ್ಚಿನಿಂದ ಧರ್ಮವನ್ನು ಹಾಳುಮಾಡಬೇಕೆಂದು ನೀವು ಹೇಳುತ್ತಿರುವಿರಿ.

ಆಗ ಧರ್ಮದ ಹುಚ್ಚಿನಿಂದ ಜನಾಂಗದಲ್ಲಿ ಅಹಿಂಸೆ ಅಶಾಂತತೆಗಳಿದ್ದವೆಂದು ಹೇಳಿದಿರಿ. ಈಗ ನಿಮ್ಮ ರಾಷ್ಟ್ರದ ಹುಚ್ಚು ಜಗತ್ತಿನಲ್ಲಿ ಎಷ್ಟು ಸುಖಶಾಂತಿಗಳನ್ನು ನೆಲೆಸಿದೆ ನೋಡಿ! ಪಾಶ್ಚಾತ್ಯರಾಷ್ಟ್ರಗಳು ರಾಷ್ಟ್ರದ ಹುಚ್ಚಿನಿಂದ ರಕ್ತದ ಕುಣಿಯಲ್ಲಿ ಕುಣಿದಾಡಲು ಸಿದ್ಧವಾಗಿವೆ. ನೀವು ಹೇಳುವ ರಾಷ್ಟ್ರಾಭಿಮಾನವೆಂಬ ವಿಷಜ್ವಾಲೆಯಿಂದಲೇ ಈಗ ಪ್ರಪಂಚವು ಬೇಯುತ್ತಿದೆ.

ಆದಕಾರಣ ಆ ಹುಚ್ಚಿನ ಮಾತುಗಳು ಹಾಗಿರಲಿ. ಯಾವುದರಿಂದಲೂ ಮನುಷ್ಯನು ಹುಚ್ಚನಾಗಬಾರದು. ತಾರತಮ್ಯಜ್ಞಾನವಿರಬೇಕು. ಇಂಗ್ಲಿಷರ ಗುಲಾಮರಾಗಲು ಸಿದ್ಧರಿಲ್ಲದ ನೀವು ಮುಸಲ್ಮಾನರ ಗುಲಾಮರಾಗಲು ಒಪ್ಪುವಿರೋ? ಯಾರ ಗುಲಾಮರೂ ಆಗಬಾರದು. ಯಾರನ್ನೂ ಗುಲಾಮರನ್ನಾಗಿ ಮಾಡಿಕೊಳ್ಳಬಾರದು. ಇದೇ ನಾನು ತಿಳಿದಿರುವ ಹಿಂದು ಧರ್ಮ. ಇದನ್ನು ಹಾಳುಮಾಡುವುದೆಂದರೆ ತನ್ನನ್ನೇ ತಾನು ಹಾಳುಮಾಡಿಕೊಂಡಂತೆ.

ನಿಮಗೆ ರಾಷ್ಟ್ರಾಭಿಮಾನದ ಹುಚ್ಚಿನಿಂದ ಮುಂದಾಗುವ ಅನರ್ಥ ತೋರದಿದ್ದರೆ ಅನ್ಯರಿಗೆ ಧರ್ಮದ ಹುಚ್ಚು ಹಿಡಿದಿದೆಯೆಂದು ಹೇಳಬಹುದೆ? ನಿಮಗೆ ಹಿಂದು ಧರ್ಮವೇ ಬೇಡಾಗಿದ್ದರೆ ಹಿಂದುಗಳೆಲ್ಲರೂ ಮುಸಲ್ಮಾನರಾಗುವಂತೆ ಪ್ರಯತ್ನಿಸಿರಿ. ಹಿಂದುಗಳೆಲ್ಲ ಮುಸಲ್ಮಾನರಾದ ದಿನವೇ ಸ್ವರಾಜ್ಯ ನಿಮ್ಮ ಕೈಯಲ್ಲಿಯೇ ಬರುತ್ತದೆ.

ಹಿಂದುಗಳಲ್ಲಿರುವ ಈಗಿನ ನಾನಾ ಜಾತಿ ಮತ ಪಂಥಗಳ ತಪ್ಪು ತಿಳುವಳಿಕೆಗಳೂ ಅನೇಕ ಕೀಳುಮೇಲಿನ ದುಷ್ಟ ಪದ್ಧತಿಗಳೂ

ಹಾರಣೆಯಾಗಬೇಕು. ಅಹಿತಕರವಾದ ಅನೇಕ ರೂಢಿಗಳಿವೆ ಎಂದು ಹಿಂದು ಧರ್ಮವೇ ಹಾಳಾಗಲೆಂದು ಹೇಳಬಹುದೆ? ಮನೆ ಯಲ್ಲಿ ತಗಣಿ ಕಚ್ಚುತ್ತೆಂದು ಆ ಮನೆಗೇನೇ ಬೆಂಕಿ ಹಚ್ಚಬಹುದೆ? ಹಿಂದು ಧರ್ಮದ ನಾನಾ ದೋಷಗಳನ್ನು ತೆಗೆದು ಹಾಕಿ ಹಿಂದು ಸಂಘಟನೆ ಮಾಡಿರಿ.

ಮುಸಲ್ಮಾನರು ತಮ್ಮ ಧರ್ಮವನ್ನು ರಕ್ಷಿಸಿಕೊಂಡು ದೇಶ ಕಾರ್ಯಕ್ಕೂ ಸೇರುವಾಗುತ್ತಿದ್ದಾರಲ್ಲವೆ? ರಾಷ್ಟ್ರ ಕಲ್ಪನೆಯೇ ಮುಖ್ಯವಾಗಿದ್ದಿದ್ದರೆ ಜಾತಿನಿರ್ಣಯವನ್ನೇಕೆ ಇಷ್ಟು ತಲೆಯ ಮೇಲೆ ಹೊತ್ತುಕೊಂಡು ಕುಣಿದಾಡುತ್ತಿದ್ದರು? ನಿಮ್ಮಂತೆ ಅವರಿಗೆ ರಾಷ್ಟ್ರ ಹುಚ್ಚು ಹಿಡಿದಿಲ್ಲ. ಅವರು ತಾರತಮ್ಯ ಜ್ಞಾನದಿಂದಲೇ ನಡೆ ಯುತ್ತಿದ್ದಾರೆ.

ಅದೊಂದು ಪ್ರಬಲ ಜನಾಂಗ. ಅದು ಧರ್ಮಾಭಿಮಾನವನ್ನೇ ಮೂಲವಾಗಿಟ್ಟುಕೊಂಡಿದೆ. ಅದಕ್ಕೆ ಸರಿಯು ಅನೇಕ ಸ್ವಧರ್ಮದ ಸ್ವತಂತ್ರ ರಾಷ್ಟ್ರಗಳ ಬೆಂಬಲ ಬರುವ ಆಸೆಯಿದೆ. ಈ ದೇಶದಲ್ಲಿ ಪುನಃ ಮುಸಲ್ಮಾನ್ ರಾಜ್ಯ ಸ್ಥಾಪನೆಯಾಗುವ ಶಕ್ಯತೆಯಿದೆಯೆಂದು ಅವರಲ್ಲಿ ಅನೇಕ ರಾಜಕಾರಣ ಪಟುಗಳು ತಿಳಿದಿದ್ದಾರೆ. ಅದೇ ದೃಷ್ಟಿಯಿಂದ ಪ್ರಬಲವಾದ ಪ್ರಯತ್ನಗಳನ್ನೂ ನಡಿಸುತ್ತಿದ್ದಾರೆ.

ಹೀಗಿರುವಾಗ ಹಿಂದುತ್ವವನ್ನೇ ಬಿಟ್ಟು ರಾಷ್ಟ್ರಭಕ್ತರಾಗಿರೆಂದು ಹೇಳಲು ಬಂದಿರುವಿರಲ್ಲಾ! ಗದ್ದಲು ಮನೆಮಾಡಿ ನರ್ಸಂಗಿಂಡಾ ಯತ್ತಂತೆ. ಹಿಂದುಸ್ಥಾನವನ್ನೇ ಕಳೆದುಕೊಂಡು ಗಳಿಸಬೇಕೆಂಬ ನಮ್ಮ ಸ್ವರಾಜ್ಯವು ಮುಸಲ್ಮಾನ್ ಪ್ರಭುತ್ವದ ಆಶ್ರಯ ಸ್ಥಾನವಾ ಗುವುದು. ಆಗಲೂ ನಾವು ಇದಕ್ಕಿಂತ ಹೆಚ್ಚಿನ ಗುಲಾಮರಾಗುವು ದಿಲ್ಲವೆ? ಅದಕ್ಕಾಗಿ ಮುಂದಾಲೋಚನೆ ಮಾಡಿ ಮಾತನಾಡಿರಿ. ಹೀಗೆ ಮಾತನಾಡಿದರೆ ರಾಷ್ಟ್ರಭಕ್ತರಾಗುವರೆ?

ಶಾಂತಿದೂತ:— ಬಿಡಿ. ಬಿಡಿ. ಯಾಕೆ ಜಗಳ? ಇಷ್ಟೇಕೆ ವಾದ ವಿವಾದ? ನೀವಿಬ್ಬರೂ ತಪ್ಪು ದಾರಿಯಲ್ಲಿದ್ದೀರಿ. ಧರ್ಮಾ ಭಿಮಾನವೂ ಹೋಗಬೇಕು. ರಾಷ್ಟ್ರಾಭಿಮಾನವಂತೂ ನಿರ್ಮೂಲ ವಾಗಬೇಕು. ಧರ್ಮಾಭಿಮಾನ ರಾಷ್ಟ್ರಾಭಿಮಾನಗಳೇ ಅಶಾಂತತೆ, ಹಿಂಸೆ, ಕಷ್ಟನಷ್ಟಗಳ ಕಾರಣ. ಇವನ್ನೆಲ್ಲಾ ತೆಗೆದು ಹಾಕಿ ವಿಶ್ವ ಬಂಧುತ್ವವನ್ನು ಕಲಿಯಿರಿ. ಆಗಲೇ ಪ್ರಪಂಚಕ್ಕೆ ಸುಖಶಾಂತಿ.

ಸ್ವತಂತ್ರ ಹಿಂದು ನರೇಂದ್ರ.

ಜಗತ್ತಿನ ಹಿಂದುಗಳಲ್ಲೆಲ್ಲಾ ಸ್ವತಂತ್ರರಾಗಿರುವ ಹಿಂದು ಮಹಾರಾಜರು ನೇಪಾಳದವರೊಬ್ಬರೆ. ಹಿಂದುಗಳಿಗೆ ಜಗತ್ತಿನಲ್ಲಿ ಸ್ವತಂತ್ರ ಭೂಮಿಯೊಂದಿದ್ದರೆ ಅದೇ ನೇಪಾಳ ದೇಶ. ಅಲ್ಲಿಯ ಮಹಾರಾಜರಾದ **ಮಹಾರಾಜಾ ಯುದ್ಧಸಮಶೇರಜಂಗ್ ಬಹದ್ದೂರ್** ಇವರು ಕಳೆದ ತಿಂಗಳು ದಿಲ್ಲಿಗೆ ಆಗಮಿಸಿದ್ದರು. ಆ ಕಾಲಕ್ಕೆ ಹಿಂದುಸ್ಥಾನ ಸರಕಾರದವರು ಇವರನ್ನು ಬಹು ಗೌರವ ದಿಂದ ಬರಮಾಡಿಕೊಂಡು ಅನೇಕ ಮಾನ ಮನ್ನಣೆಗಳನ್ನು ಮಾಡಿ ದರು. ಇದು ಯಾವ ಹಿಂದುವಿಗೆ ತಾನೆ ಅಭಿಮಾನವನ್ನುಂಟು ಮಾಡಲಾರದು?

ಧರ್ಮಾತ್ಮಾ ಮಾಲವೀಜಿಯವರ ಅಧ್ಯಕ್ಷತೆಯಲ್ಲಿ ಈ ಹಿಂದು ನರೇಂದ್ರರಿಗೆ ಹಿಂದುಸ್ಥಾನದ ಅನೇಕ ಪ್ರಮುಖ ಹಿಂದು ಮುಂದಾ ಳುಗಳು ಸೇರಿ ದಿಲ್ಲಿಯಲ್ಲಿ ವಿಜ್ಞಾಪನಾ ಪತ್ರಿಕೆಯನ್ನರ್ಪಿಸಿದರು. ಇದು ಅತ್ಯಂತ ಭೂಷಣಪ್ರದವಾದುದೆಂದು ಯಾವ ಹಿಂದು ತಾನೆ ತಿಳಿಯಲಿಕ್ಕಿಲ್ಲ?

ಇಂಗ್ಲಿಷ ಅಧಿಕಾರಿಗಳ ಅಭಿಪ್ರಾಯ.

ನೇಪಾಳದ ಮಹಾರಾಜರ ವಿಷಯದಲ್ಲಿ ಹಿಂದುಸ್ಥಾನ ಸರ ಕಾರವು ಇಷ್ಟು ಗೌರವವನ್ನು ತೋರಿಸಿದುದು ಕೇವಲ ಔಪಚಾರಿಕ ವಾದುದಲ್ಲ. ನೇಪಾಳ ಭೂಪಾಲರಿಂದ ಇಂಗ್ಲಿಷ ಸರಕಾರಕ್ಕೆ ಅಪಾರವಾದ ಪ್ರಯೋಜನವುಂಟಾಗಿದೆ. ಬ್ರಿಟಿಶ್ ಜನರಲ್ ಆ ರ್ಚಿಬಲ್ ಬ್ರೂಸ್ ಎಂಬುವವರು ತಮ್ಮ ಗ್ರಂಥದಲ್ಲಿ ನೇಪಾಳ ನರೇಂದ್ರರ ವಿಚಾರವಾಗಿ ಹೀಗೆ ಬರೆದಿದ್ದಾರೆ—

"ಮಹಾಯುದ್ಧದ ಕಾಲಕ್ಕೆ ಹಿಂದುಸ್ಥಾನ ಸರಕಾರಕ್ಕೆ ಎಂತಹ ವಿಪತ್ತು ಬಂದಿತ್ತೆಂಬುದು ಯಾರಿಗೆ ಗೊತ್ತಿದೆಯೋ ಅವ ರಿಗೇನೇ ನೇಪಾಳ ಸರಕಾರವು ಮಾಡಿದ ಅಪ್ರತಿಮ ಸಹಾಯದ ಮಹತ್ವ ಗೊತ್ತಾಗುವುದು. ನೇಪಾಳ ರಾಜ್ಯದಲ್ಲಿ ಜಗತ್ತಿನ ಯಾ ರಾಷ್ಟ್ರದವರ ಯಾವ ತಂತ್ರವೂ ಸೇರುವಂತಿಲ್ಲ. ಅದು ಅತ ಧನ್ಯವಾಗಿಯೇ ತನ್ನ ಸನಾತನ ಪದ್ಧತಿಯಿಂದ ಕೂಡಿಕೊಂಡಿ

ನೇಪಾಳದ ಜನರಲ್ಲಿ ಯುದ್ಧ ಕೌಶಲ್ಯವೇ ಹೆಚ್ಚು. ಆ ಸಿಂಪ ಅರಸಿನ ವರೆಗೆ ಎಲ್ಲರಿಗೂ ಯುದ್ಧ ಕಲಾಪ್ರೇಮ. ಯಾ ವಾದರೊಂದು ಯುದ್ಧ ಕಲೆಯ ಪ್ರಾವೀಣ್ಯತೆಯನ್ನು ಹೊಂದುವು ಅವರ ಮುಖ್ಯ ಗುರಿ. ಆದಕಾರಣ ನೇಪಾಳ ದೇಶಕ್ಕೆ 'ಲಷ್ಕ ವಿಲಾಯತಿ' ಎಂದು ಹೇಳಬಹುದು. ಆ ದೇಶದ ಆದಾಯದ ಹೆಚ್ಚಿನ ಭಾಗವನ್ನು ಯುದ್ಧಕಲೆಗೇನೇ ವಿನಿಯೋಗಿಸಲು ಅಲ್ಲಿ ಪ್ರಜೆಗಳಿಗೆಲ್ಲಾ ತುಂಬಾ ಇಷ್ಟ.

ಮಹಾಯುದ್ಧ ಪ್ರಾರಂಭವಾದಾಗ ೨೦ ಗುರಖಾ ಪಲಟ ೮ ಸಾವಿರದ ವರೆಗೆ ಗುರಖಾ ಸೈನ್ಯ ಮಾತ್ರ ನಮ್ಮ ಹತ್ತಿರವಿದ್ದಿ ಅನಂತರ ೩೩ ಪಲಟನ್ ೫೬ ಸಾವಿರ ಸೈನ್ಯದ ವರೆಗೆ ಹೆಚ್ಚಿದುದು ಸಾಮಾನ್ಯವೇ? ಈ ಮಹಾ ಸೈನ್ಯದ ಆಗಿನ ಸಹಾಯವೆಂದ ಮರಣಹೊಂದುವವರಿಗೆ ಅಮೃತವನ್ನು ಪಾನಮಾಡಿಸಿದಂತೆಯೆ ಸರಿ. ನೇಪಾಳ ಸರಕಾರದ ಈ ಮಹದುಪಕಾರವನ್ನು ನಾವೆಂದಿಗ ತೀರಿಸಲಾರೆವು

ನೇಪಾಳ ರಾಜ್ಯವು ಸಂಪೂರ್ಣ ಸ್ವತಂತ್ರವಾದುದು. ರಾಜ್ಯದ ಮೇಲೆ ಎಳ್ಳಷ್ಟಾದರೂ ನಮ್ಮ ಅಧಿಕಾರವಿಲ್ಲ. ಕಷ್ಟಕಾ ಲದಲ್ಲಿ ಸಹಾಯಮಾಡಬೇಕೆಂಬ ಒಪ್ಪಂದವಾದರೂ ನಮ್ಮ ಸಂಗಡ ಹೀಗಿರುವಾಗ ನಮಗೆ ಇಷ್ಟು ಸಹಾಯ ಮಾಡಿದುದು ಸಾಮಾನ್ಯವೆ

ಆ. ಬ್ರೂಸ್‌ರವರ ಮೇಲಿನ ಅಭಿಪ್ರಾಯದಿಂದ ನೇಪಾ ಭೂಪಾಲರ ಘನತೆ, ಶಕ್ತಿ, ಸಾಹಸಗಳು ಚೆನ್ನಾಗಿ ಗೊತ್ತಾಗುತ್ತ ಹಿಂದುಸ್ಥಾನ ಸರಕಾರವು ಮಾಡಿದ ಗೌರವದ ಕಾರಣವೂ ಸ್ಪ ವಾಗುತ್ತದೆ.

ನೇಪಾಳದ ರಾಜ್ಯಭಾರ.

ನೇಪಾಳದ ಈಗಿನ ಭೂಪಾಲರಾದ ಯುದ್ಧಸಮಶೇರಜಂ ಬಹದ್ದೂರರವರು ಸ್ವತಃ ಸೇನಾಧಿಪತಿಗಳಿದ್ದಾರೆ. ಇವರು ರಾಜಕಾರ ಪಟುಗಳೂ ಅಹುದು. ಇಂಗ್ಲೆಂಡಿನಲ್ಲಿ ತಮ್ಮ ಸ್ವಂತ ರಾಯಭಾ ಯನ್ನಿಟ್ಟಿದ್ದಾರೆ. ಫ್ರೆಂಚ್, ಇಟಲಿ, ಬೆಲ್ಜಿಯಂ ಸರಕಾರಗಳು ಇ ರನ್ನು ಬಹು ಗೌರವಿಸಿವೆ.

ಪ್ರಜೆಗಳ ವಿಷಯದಲ್ಲಿ ಬಹು ದಯಾಳುಗಳು. ಕಳೆ ಭೂಕಂಪನದ ಕಾಲದಲ್ಲಾದ ಪ್ರಜೆಗಳ ಅನರ್ಥವನ್ನು ನೋ ೧೨ ಲಕ್ಷ ರೂ. ದಾನಮಾಡಿದ್ದಲ್ಲದೆ ೫೦ ಲಕ್ಷ ರೂ. ಬಡ್ಡಿಯಿಲ್ಲ ನಾಲ್ಕು ವರುಷಗಳ ವರೆಗೆ ಉಪಭೋಗಿಸಲು ಕೊಟ್ಟರು.

ಇವರು ಹಿಂದು ಸಂಸ್ಕೃತಿಯ ಜಾಜ್ವಲ್ಯ ಅಭಿಮಾನಿಗಳ ತಮ್ಮ ರಾಜ್ಯದಲ್ಲಿ ಉಚಿತವಾದ ಶಿಕ್ಷಣವನ್ನು ಪ್ರಸಾರಗೊಳಿಸಿದ್ದಾ ತಾಯಿ ನುಡಿಯಲ್ಲಿ ಗ್ರಂಥಗಳನ್ನು ಬರೆಸುತ್ತಿದ್ದಾರೆ. ಪರದೇ ಗಳಿಗೆ ಕುಶಲ ವಿದ್ಯಾರ್ಥಿಗಳನ್ನು ಕಳಿಸುತ್ತಿದ್ದಾರೆ. ಸಂಸ್ಕೃ ಮಹಾ ವಿದ್ಯಾಲಯ, ಔದ್ಯೋಗಿಕ ಶಾಲೆ, ಗೋ ಸಂರಕ್ಷಣ ಸಂ ಮೊದಲಾದವುಗಳನ್ನು ಏರ್ಪಡಿಸಿದ್ದಾರೆ. ಈ ಮಹಾ ಪ್ರಭುಗಳ ದೀರ್ಘಾಯುರಾರೋಗ್ಯ ದೊರೆಯಲೆಂದು ಪ್ರಾರ್ಥಿಸೋಣ.

ಜನ್ಮವಿಶಿಷ್ಟ ಜಾತಿ ಭೇದವನ್ನು ಹೇಗೆ ಕಳೆಯಬೇಕು?

ಹಿಂದು ಧರ್ಮಾಭಿಮಾನಿಗಳಲ್ಲಿ ಪ್ರಮುಖರಾದ ಬ್ಯಾರಿಸ್ಟರ್ ಸಾವರಕರ್ ಇವರು ಈ ತಿಂಗಳ 'ಕಿರ್ಲೋಸ್ಕರ್' ಮಾಸಿಕ ಪತ್ರಿಕೆಯಲ್ಲಿ ಜನ್ಮವಿಶಿಷ್ಟ ಜಾತಿಭೇದವನ್ನು ಕಳೆಯಲು ಕೆಲವು ಉಪಾಯಗಳನ್ನು ಸೂಚಿಸಿದ್ದಾರೆ. ಅವುಗಳ ಮುಖ್ಯಾಂಶವನ್ನು ಇಲ್ಲಿ ಕೊಟ್ಟಿದೆ.

ಸಮಭಾವನೆ.

"ಹಿಂದುಗಳಲ್ಲಿರುವ ನಾನಾ ಜಾತಿ ಮತ ಪಂಥದವರು ತಮ್ಮ ತಮ್ಮ ಜಾತಿಯ ಸಮ್ಮೇಲನಗಳಲ್ಲಿ ಈ ಪ್ರಕಾರ ನಿರ್ಣಯಿಸಬೇಕು— (೧) ಹಿಂದುಗಳಲ್ಲಿ ಯಾವ ಜಾತಿಯವರೂ ನಮಗಿಂತ ಕೀಳಲ್ಲ, ಅಥವಾ ಮೇಲಲ್ಲ. (೨) ನಮ್ಮ ಜಾತಿಯಲ್ಲಿ ಯಾರು ಬೇಕಾದರೂ ತಮ್ಮ ತಮ್ಮ ಗುಣಕರ್ಮಗಳಿಂದ ಶ್ರೇಷ್ಠ ಸ್ಥಾನವನ್ನು ಹೊಂದಲು ಪ್ರತಿಬಂಧವಿಲ್ಲ. ಜನ್ಮದಿಂದಲೇ ನಮ್ಮಲ್ಲಿ ಯಾರೂ ಶ್ರೇಷ್ಠರಲ್ಲ.

ಈ ಪ್ರಕಾರ ಹಿಂದುಗಳಲ್ಲಿರುವ ಬೇರೆ ಬೇರೆ ಜಾತಿ ಮತ ಪಂಥದವರು ಗೊತ್ತುಮಾಡಿ ಆ ಪ್ರಕಾರ ನಡೆದುಕೊಂಡದ್ದಾದರೆ ಅದು ಹಿಂದುಸಂಘಟನೆಗೆ ಅನುಕೂಲವಾಗುವುದೇ ವಿನಾ ಪ್ರತಿಕೂಲವಾಗುವುದಿಲ್ಲ. ಈ ಅಭಿಪ್ರಾಯದಿಂದ ರತ್ನಾಗಿರಿಯಲ್ಲಿ ಚಿತ್ಪಾವನ ಬ್ರಾಹ್ಮಣರ ಒಂದು ಸಂಘ ಏರ್ಪಟ್ಟಿದೆ.

ಉದ್ಯೋಗ ಸ್ವಾತಂತ್ರ್ಯ.

ಉದ್ಯೋಗಗಳಲ್ಲಿ ಮೇಲು ಕೀಳುಗಳಾದವುಗಳಿವೆಯೆಂದೇ ಹಿಂದುಗಳ ಕಲ್ಪನೆ. ಇದರಿಂದಲೇ ಜಾತಿಗಳಾದವು. ಜನ್ಮ ವಿಶಿಷ್ಟ ಜಾತಿತತ್ವಕ್ಕೆ ಇದೂ ಒಂದು ಮುಖ್ಯಕಾರಣ ಈಗ ಉದ್ಯೋಗ ಸ್ವಾತಂತ್ರ್ಯ ಒಂದಿದೆ. ಬ್ರಾಹ್ಮಣರು ಈಗ ಹೊಲಿಯುವುದು, ನೇಯುವುದು, ವ್ಯಾಪಾರಮಾಡುವುದು ಮೊದಲಾದ ಎಲ್ಲ ಕಸಬುಗಳನ್ನು ಮಾಡುತ್ತಿದ್ದಾರೆ. ಮತ್ತು ಬ್ರಾಹ್ಮಣರೆಂದೇ ಹೇಳಿಕೊಳ್ಳುತ್ತಿದ್ದಾರೆ. ಇದರಿಂದ ಬ್ರಾಹ್ಮಣ್ಯಕ್ಕೆ ಉದ್ಯೋಗ ಪ್ರತಿಬಂಧವಿಲ್ಲವೆಂದು ಈಗ ಆಚರಣೆಯಲ್ಲಿಯೇ ಬಾದಂತಾಯಿತು.

ಈ ಪ್ರಕಾರ ಯಾವ ಉದ್ಯೋಗವನ್ನು ಯಾರು ಮಾಡಿದರೂ ಅವರು ಕೀಳಲ್ಲ. ಹೀಗೆ ಉದ್ಯೋಗ ಸ್ವಾತಂತ್ರ್ಯ ಹೆಚ್ಚುವುದು ಜನ್ಮವಿಶಿಷ್ಟ ಜಾತಿಯ ಅಳಿಗಾಲಕ್ಕೆ ಗುರುತು.

ಅಸ್ಪೃಶ್ಯತಾ ನಿವಾರಣೆ.

ಒಂದು ಜಾತಿಯಲ್ಲಿ ಹುಟ್ಟಿದ ಮಾತ್ರದಿಂದ ಆತನು ಅಸ್ಪೃಶ್ಯನೆಂದು ತಿಳಿಯುವದು ಅನ್ಯಾಯ. ಮತ್ತು ಅಧರ್ಮ. ಆದಕಾರಣ ಹಿಂದುಗಳಲ್ಲಿರತಕ್ಕ ಈ ಅಸ್ಪೃಶ್ಯತೆಯನ್ನು ನಿವಾರಣೆ ಮಾಡಲು ಎಲ್ಲರೂ ಪ್ರಯತ್ನಿಸಬೇಕು ಜನ್ಮವಿಶಿಷ್ಟ ಜಾತಿಭೇದವನ್ನು ಕಳೆಯಲು ಇದೂ ಒಂದು ಮುಖ್ಯ ಸಾಧನ.

ಸಹಭೋಜನ.

ಹಿಂದುಗಳಲ್ಲಿ ಪರಸ್ಪರ ಊಟೋಪಚಾರಗಳಿಲ್ಲದಿರುವುದೊಂದು ಮಹಾದೋಷ. ಇದರಿಂದ ಜನ್ಮವಿಶಿಷ್ಟ ಜಾತಿಭೇದವು ದೃಢವಾಗಿದೆ. ಇದನ್ನು ಕಳೆಯಲು ಸಹಭೋಜನವೇ ಮೇಲಾದ ಉಪಾಯ. ಹಿಂದು ಮುಸಲ್ಮಾನ್ ಮೊದಲಾದ ಯಾವ ಧರ್ಮ ಮತ ಪಂಥದವರ ಸಂಗಡವಾದರೂ ಊಟೋಪಚಾರಮಾಡಬೇಕು. ಅಶ್ಯಮುತಜ ಒಟ್ಟಿಗನ್ನಾದರೂ ಕೂಡಿಕೊಂಡು ಸಹಭೋಜನ ಪದ್ಧತಿಯನ್ನು ಹೆಚ್ಚು ಪ್ರಚಾರದಲ್ಲಿ ತರಬೇಕು. ಇದರಿಂದ ಜನ್ಮ ವಿಶಿಷ್ಟ ಜಾತಿಭೇದವು ನಿವಾರಣೆಯಾಗುತ್ತದೆ.

ಶರೀರ ಸಂಬಂಧ

ಇದೇ ಪ್ರಕಾರ ಬ್ರಾಹ್ಮಣಾದಿ ಶೂದ್ರಾಂತ್ಯದ ವರೆಗಿನ ಹಿಂದುಗಳಾದ ಯಾರಲ್ಲಾದರೂ ಪರಸ್ಪರ ಶರೀರ ಸಂಬಂಧ ನಡೆಯಬೇಕು ಲಗ್ನವು ಅವರವರ ಗುಣ ಶೀಲ ಅಂತಸ್ತುಗಳನ್ನೇ ಅವಲಂಬಿಸಿರುತ್ತದಷ್ಟೆ. ಇಂತಹ ಕುಲದವನೆಂಬ ಕಾರಣದಿಂದ ಶರೀರ ಸಂಬಂಧವಾಗಬಾರದೆಂಬ ನಿಯಮವಿರಬಾರದು. ಆದರೆ ಆತನು ಹಿಂದುಧರ್ಮದವರಲ್ಲಿಯೇ ಶರೀರ ಸಂಬಂಧವನ್ನುಂಟುಮಾಡಿಕೊಳ್ಳಬೇಕೆ ವಿನಾ ಮುಸಲ್ಮಾನಾದಿ ಬೇರೆ ಧರ್ಮದವರಲ್ಲಿ ಶರೀರ ಸಂಬಂಧವನ್ನು ಮಾಡಿಕೊಳ್ಳಬಾರದು. ಇದರಿಂದಲೂ ಜನ್ಮ ವಿಶಿಷ್ಟ ಜಾತಿಭೇದ ನಿವಾರಣೆಯಾಗುತ್ತದೆ."

ಒಂದೇ ಮತದವರಲ್ಲಿ ಪರಸ್ಪರ ಊಟೋಪಚಾರ ಶರೀರ ಸಂಬಂಧಗಳು ನಡೆಯಲೆಂದು ನಡೆದಿರುವ ನ್ಯಾಯವಾದ ಚಟುವಟಿಕೆಯನ್ನು ವಿರೋಧಿಸುವವರು ಈ ವಿಚಾರಗಳನ್ನು ಕೇಳಿ ಎಚ್ಚರಿಯುವರೇ?

ಮಹಾತ್ಮರ ಮುತ್ತಿನಂಥ ಮಾತು.

ಕಳೆದ ವಾರ ವರ್ಧಾಗಂಜ ಎಂಬಲ್ಲಿ ಶ್ರೀ.ಲಕ್ಷ್ಮೀನಾರಾಯಣ ದೇವಾಲಯದ ವಾರ್ಷಿಕೋತ್ಸವವು ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಆಗ ಮಹಾತ್ಮರು ಹೇಳಿದ ಮುತ್ತಿನಂಥ ಮಾತು.

(೧) ಈ ದೇವಾಲಯದಲ್ಲಿ ದೇವರ ಪ್ರಾಣ ಪ್ರತಿಷ್ಠೆ ೧೯೦೭ನೆಯ ಇಸವಿಯಲ್ಲಿಯೇ ಮಾಡಲ್ಪಟ್ಟಿದ್ದರೂ 'ಹರಿಜನ'ರು ಎಂದು ಇಲ್ಲಿ ಬರಲಾರಂಭಿಸಿದರೋ ಅಂದೇ ಇಲ್ಲಿಗೆ ದೇವರು ಬಂದನೆಂದು ನಾನು ತಿಳಿದಿದ್ದೇನೆ.

(೨) ಅಂದಿನ ಲಕ್ಷ್ಮೀನಾರಾಯಣನು ಇಂದು ದರಿದ್ರನಾರಾಯಣನಾಗಿದ್ದಾನೆ. ಅಸ್ಪೃಶ್ಯರೂ ಹಳ್ಳಿಯವರೂ ದರಿದ್ರರು. ಇವರ ಒಡೆಯನೇ ಈ ದರಿದ್ರನಾರಾಯಣನು.

(೩) ಹಳ್ಳಿಯವರು ಬಹು ಕನಿಕರ ಸ್ಥಿತಿಯಲ್ಲಿದ್ದಾರೆ. ಇವರ ಸೇವೆಯನ್ನು ಮಾಡುವುದೇ ದೇವರ ಸೇವೆಯು.

(೪) ಕೈಯಿಂದ ಬೀಸಿದ ಹಿಟ್ಟನ್ನೂ ಕೈಯಿಂದ ಕುಟ್ಟಿದ ಅಕ್ಕಿಯನ್ನೂ ಎತ್ತಿನ ಗಾಣದಲ್ಲಾದ ಎಣ್ಣೆಯನ್ನೂ ಉಪಯೋಗಿಸಿರಿ. ಇವುಗಳಿಂದ ಶಕ್ತಿ ಹೆಚ್ಚಿ, ದುಡ್ಡನ್ನೂ ಉಳಿಸಿದಂತಾಗುತ್ತದೆ.

(೫) ವರ್ಧಾದ ಹತ್ತಿರ ಸಿಂಧಿ ಎಂಬ ಹಳ್ಳಿಯ ಜನರು ಬೀದಿಗಳ ಮಗ್ಗುಲಲ್ಲಿಯೇ ಮಲ ಮೂತ್ರಗಳನ್ನು ವಿಸರ್ಜಿಸಿ ಬಹು ಕೊಳೆ ಮಾಡಿಕೊಂಡಿದ್ದರು. ಇದು ಬಹು ಅಸಹ್ಯ. ಇದರಿಂದ ಮಹಾ ಕೇಡು. ಈ ಮಲ ಮೂತ್ರಗಳಿಂದ ಮಿಗಿಲಾದ ಗೊಬ್ಬರವಾಗುತ್ತದೆ.

(೬) ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಕಾರ್ಯಗಳನ್ನು ಮನಸಿಟ್ಟು ಮಾಡಿರಿ. ಗ್ರಾಮಗಳ ಸುಧಿಯು ಅತ್ಯವಶ್ಯಕವಾಗಿದೆ.

—'ಸರಸ್ವತಿ' ಪತ್ರಿಕಾ ಸಂಪಾದಕಿಯರಾದ ಶ್ರೀಮತಿ ಆರ್. ಕಲ್ಯಾಣಮ್ಮನವರನ್ನು ಮೈಸೂರು ಶ್ರೀಮನ್ಮಹಾರಾಜಾ ಸರಕಾರದವರು ಮ್ಯಾಜಿಸ್ಟ್ರೇಟರನ್ನಾಗಿ ನಿಯಮಿಸಿದ್ದಾರೆ. ಅತ್ಯಂತ ಸ್ತುತ್ಯ

ಮತ್ತೆ ಮೊದಲಿನ ಕಡೆಗೇ?

ಕನ್ನಡ ನಾಡಿಗೆ ಭೂಷಣಪ್ರದರಾಗಿಯೂ ಹಿಂದುಸ್ಥಾನದ ಮಹಿಳಾ ಪ್ರಪಂಚದ ರಾಜಕಾರಣದಲ್ಲಿ ಪ್ರಸಿದ್ಧಿಯನ್ನು ಹೊಂದಿದವರಾಗಿಯೂ ಇರುವ ಶ್ರೀಮತಿ ಕಮಲಾದೇವಿಯವರು ಅಭಿನಯ ಕಲೆಯಲ್ಲಿ ಮೊದಲಿನಿಂದಲೂ ಸುಪ್ರಸಿದ್ಧರು. 'ವಸಂತ ಸೇನಾ' ಚಲನ ಚಿತ್ರದಲ್ಲಿ ಚಾರುದತ್ತನ ಪತ್ನಿ ಧೂತಾದೇವಿಯ ಪಾತ್ರವನ್ನು ಬಹು ಮನೋಹರವಾಗಿ ನಟಿಸಿದ್ದಾರಷ್ಟೆ.

ಶ್ರೀಮತಿ ಕಮಲಾದೇವಿ.

ಈಗ ಇವರು ರಾಜಕಾರಣದಲ್ಲಿ ಸಮತಾವಾದಿಗಳು. 'ಭಿಕಾರಿ ಮೋತಿ' ಎಂಬ ನೂತನ ಚಲನ ಚಿತ್ರದಲ್ಲಿ ಮುಖ್ಯ ಪಾತ್ರವನ್ನು ಇವರು ಅಭಿನಯಿಸುವವರಿದ್ದಾರಂತೆ.

ಹೊಸ ಶೋಧವಂತೆ!

ಡಾಕ್ಟರ್. ಶ್ರೀ. ವೆಂ. ಕೇತಕರ ಎಂಬ ಘನ ವಿದ್ವಾಂಸರು ಕಳೆದ ತಿಂಗಳು ೨೬ ನೆಯ ತಾರೀಖಿನ ದಿನ ಮುಂಬೈಯಲ್ಲಿ ಒಂದು ಮಹತ್ವದ ವ್ಯಾಖ್ಯಾನಮಾಡಿದರು. ಅದರಲ್ಲಿ ಹೀಗೆ ಕೆಲವು ಹೊಸ ವಿಚಾರಗಳನ್ನು ತಿಳಿಸಿದರು—

ಮಹಾರಾಷ್ಟ್ರವೆಂದರೆ ಮಹಾರ (ಹೊಲೆಯ) ಮತ್ತು ರಟ್ಟಿ ಈ ಎರಡೂ ಜನಾಂಗ ಸೇರಿದ್ದ ಪ್ರಾಂತ. ಕ್ರಿಸ್ತನ ಮುಂಚೆಯೇ ಈ ಮಹಾರಾಷ್ಟ್ರ ಪ್ರಾಂತ ಉಂಟಾಗಿತ್ತು. ಇಲ್ಲಿಯ ಜನರು ಅಸುರ ಮತ್ತು ಇರಾಣಿ ಜನರ ರಕ್ತ ಸಂಬಂಧಿಗಳೂ ಇದ್ದರು.

ಇನ್ನೊಂದು ಹೊಸ ಸಂಗತಿ—ಜೈನ ಧರ್ಮ ಪರದೇಶಗಳಿಂದ ಬಂದದ್ದು. ಅರಬಿ ಜನರಲ್ಲಿ ದೇವರಿಗೆ 'ಜಿನ' ಎಂದು ಹೇಳುತ್ತಾರೆ. ಆ ದೇವರ ಉಪಾಸಕರೇ ಜೈನರು. ಮಹಾವೀರನ ಕಾಲಕ್ಕೆ ಅರಬಸ್ಥಾನದ ಮೂಲ ಧರ್ಮವನ್ನು ಅನುಕರಣಮಾಡಿ ಜೈನ ಧರ್ಮವಾಯಿತು!

ಮತ್ತೊಂದು ಹೊಸ ಶೋಧ!—ರಾಮನಂತೂ ಪರದೇಶದವನು. ಕೃಷ್ಣನಿಗೆ ಕ್ಷತ್ರಿಯತ್ವವೇ ಇರಲಿಲ್ಲ. ರುಕ್ಮಿಣಿಯ ಲಗ್ನದ ಕಾಲಕ್ಕೆ ಕೃಷ್ಣನ ಕ್ಷತ್ರಿಯತ್ವದ ಸಂಶಯವುಂಟಾಗಿತ್ತು. ಕುದುರೆ ಮೈತೊಳೆಯುವುದು, ಎಂಜಲು ತೆಗೆಯುವದು, ಇವೆಲ್ಲಾ ಆತನ ಕೆಲಸಗಳಾಗಿದ್ದವು.

ಅಸೀರಿಯನ್ ಜನರು ದೇವರಿಗೆ, ರಮ್ಮನ್, ಎಂದು ಹೇಳುತ್ತಾರೆ. ಮಹಾಭಾರತ ಯುದ್ಧದ ನಂತರ ಅಸೀರಿಯನ್ ಜನರ ರಮನ್, ದೇವರನ್ನೇ 'ರಾಮ' ಎಂದು ಈ ದೇಶದವರು ತೆಗೆದುಕೊಂಡರು! ನೋಡಬೇಕು ಇನ್ನೇನೇನು ಶೋಧಗಳಾಗುತ್ತವೋ?

ಉಪದೇಶಿಗಳ ಉಡುಪಿಗೆ ದಾಳಿ!

ತುರ್ಕಸ್ಥಾನವು ಸುಧಾರಣೆಯಲ್ಲಿ ಬಹು ಮುಂದೆ. ಅಲ್ಲಿಯ ಧಾರ್ಮಿಕ ಸಾಮಾಜಿಕ ಕೋಳಿಗಳನ್ನು ತೊಳೆದು ಝಳಝಳ ಮಾಡುತ್ತಿದೆ. ಇದರಿಂದ ಅದರ ಶಕ್ತಿ ಅನ್ಯರ ಕಣ್ಣು ಕುಕ್ಕುವಷ್ಟು ಪ್ರಕಾಶಿಸುತ್ತಿದೆ.

ಅನೇಕ ಧಾರ್ಮಿಕ ಸಾಮಾಜಿಕ ಕೋಳಿಗಳು ಹೋದವು. ಈಗ ಅಲ್ಲಿರುವ ಧಾರ್ಮಿಕ ಉಪದೇಶಕರ ಉಡುಪಿಗೆ ದಾಳಿಬಂದಿದೆ. ಕ್ರೈಸ್ತ, ಮುಸಲ್ಮಾನ್ ಮೊದಲಾದ ಧರ್ಮಗಳ ಉಪದೇಶಕರು ತಮ್ಮ ತಮ್ಮ ಧರ್ಮಾಧಿಕಾರದ ಉಡುಪನ್ನು ಹೊರಗೆ ಹಾಕಿಕೊಂಡು ಹೋಗಬಾರದು. ಹಾಗೆ ಹೋದದ್ದಾದರೆ ಅದು ರಾಜ್ಯ ಶಾಸನಕ್ಕೆ ವಿರೋಧ.

ಪಾದ್ರಿ ಮುಲ್ಲಾ ಮೊದಲಾದ ಧರ್ಮಾಧಿಕಾರಿಗಳು ತಮ್ಮ ತಮ್ಮ ಚರ್ಚ, ಮಸೀದಿಗಳಲ್ಲಿ ಮಾತ್ರ ತಮ್ಮ ಧರ್ಮ ಪ್ರಕಾರದ ಉಡುಪನ್ನುಪಯೋಗಿಸಬೇಕು. ಹೊರಗೆ ಬಂದನಂತರ ಇತರ ನಾಗರಿಕರಂತೆಯೇ ಇರಬೇಕು. ಧರ್ಮದ ಸೋಗನ್ನು ಜನರಿಗೆ ತೋರಿಸಿದರೆ ಅವರ ಕಣ್ಣಿಗೆ ಮಣ್ಣು ತೂರಿದಂತಾಗುತ್ತದೆಂದೇ ಈ ಶಾಸನವಮಾಡಿರಬೇಕು. ಇದರಿಂದ ಆ ದೇಶದಲ್ಲಿ ಧರ್ಮದ ಸೋಗು ಎಷ್ಟು ಬೇಸರವಾಗಿದೆಯೆಂಬುದು ಗೊತ್ತಾಗುತ್ತದೆ.

ಹಿಂದುಸ್ಥಾನದಲ್ಲಿಯೂ ಧರ್ಮದ ಸೋಗಿನಿಂದ ಜನರ ಕಣ್ಣಿನಲ್ಲಿ ಮಣ್ಣು ತೂರಿ ಅಸಂಖ್ಯ ಜನರು ನಾನಾ ವಿಷಯೋಪಭೋಗಗಳಲ್ಲಿರುವುದು ದೂರಾಗಬೇಕಾದರೆ ಕೆಮಾಲ ಪಾಶಾರಂತಹ 'ವಸ್ತಾದ್' ಬೇಕು.

ಕವಿವರ್ಯ ಟಾಗೋರರ ಬೋಧೆ.

ಕವಿಕುಲತಿಲಕರಾದ ರವೀಂದ್ರನಾಥ ಟಾಗೋರವರು ಕಳೆದ ವಾರ ಕಾಶಿಯ ಹಿಂದು ವಿಶ್ವವಿದ್ಯಾಲಯದ ಪದವಿ ದಾನ ಸಮಾರಂಭದ ಕಾಲಕ್ಕೆ ಅತ್ಯಂತ ಮಹತ್ವವಾದ ಒಂದು ಭಾಷಣವನ್ನು ಮಾಡಿದರು.

ಈ ವಿಶ್ವವಿದ್ಯಾಲಯದ ಕುಲಪತಿಗಳಾದ ಧರ್ಮಾತ್ಮಾ ಮಾಲವೀಜಿಯವರು ಕವಿಸಾರ್ವಭೌಮರನ್ನು ಕುರಿತು ಮೊದಲು ಹೀಗೆ ಹೇಳಿದರು— "ಜಗತ್ಪ್ರಸಿದ್ಧರಾದ ಕವಿಸಾರ್ವಭೌಮರಿಗೆ ಈ ವಿಶ್ವವಿದ್ಯಾಲಯದಿಂದ "ಡಾಕ್ಟರ ಅಫ ಲೆಟರ್ಸ" ಎಂಬ ಪದವಿಯನ್ನು ಸಮರ್ಪಿಸುವ ಸುಪ್ರಸಂಗ ನನಗೆ ಬಂದುದು ಅತ್ಯಂತ ಸಂತೋಷಕರವಾದುದು. ಭಾರತ ಮಾತೆಯ ಮತ್ತು ಮಾನವ ಜಾತಿಯ ಅಪೂರ್ವ ಸೇವೆಯನ್ನು ನೀವು ಮಾಡಿರುವಿರಿ. ನಿಮ್ಮ ಶಾಂತಿನಿಕೇತನವು ಜಗತ್ತಿಗೆ ಆದರ್ಶಪ್ರಾಯವಾಗಿದೆ."

ಅನಂತರ ಕವಿವರ್ಯರು ಧರ್ಮಾತ್ಮರಿಗೆ ಅಭಿವಂದಿಸಿ "ಸತ್ಯೇನ ಬ್ರಹ್ಮಚರ್ಯೇಣ ವ್ಯಾಯಾಮೇನ ಚ ವಿದ್ಯಯಾ| ದೇಶಭಕ್ತ್ಯಾತ್ಮತ್ಯಾಗೇನ ಸನ್ಮಾನಾರ್ಹಃ ಸದಾ ಭವ||" ಎಂಬ ಶ್ಲೋಕವನ್ನು ಹೇಳಿ ಸತ್ಯ ಬ್ರಹ್ಮಚರ್ಯ, ವ್ಯಾಯಾಮ, ವಿದ್ಯಾರ್ಜನೆ ದೇಶಭಕ್ತಿಗಳಿಂದ ಕೂಡಿದವರಾಗಿ ಲೋಕ ಸೇವೆಗೆ ಆತ್ಮಾರ್ಪಣವನ್ನು ಮಾಡಿ ಸತ್ಕೀರ್ತಿಯನ್ನು ಹೊಂದಿರೆಂದು ವಿದ್ಯಾರ್ಥಿಗಳಿಗೆ ಮೊದಲು ಸೂಚಿಸಿ ತಮ್ಮ ಘನತರವಾದ ಭಾಷಣವನ್ನು ಪ್ರಾರಂಭಿಸಿದರು.

ಅದರ ಮುಖ್ಯಾಂಶ ಹೀಗಿದ್ದಿತು—"ಈ ವಿಶ್ವವೇ ನನ್ನ ಮನೆಯೆಂದು ತಿಳಿಯಿರಿ. ಹಾಗೆ ತಿಳಿಯಬೇಕಾದರೆ ಮೊದಲು ತಾನಾರೆಂಬ ಆತ್ಮಜ್ಞಾನವನ್ನು ಹೊಂದಬೇಕು. ಈಗಿನ ರಾಷ್ಟ್ರೀಯ ಭಾವನೆಯು ನೆರೆಯವರನ್ನೇ ಮರೆತು ಬಿಡುತ್ತದೆ. ಸತ್ಯ, ಪ್ರೇಮ ಮತ್ತು ವಿಶ್ವಬಂಧುತ್ವಗಳನ್ನು ಅಳವಡಿಸಿಕೊಳ್ಳುವುದೇ ಮನುಷ್ಯ ಪ್ರಾಣಿಯ ಮುಖ್ಯ ಧ್ಯೇಯವಾಗಿರಬೇಕು.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನಡೆದಿರುವ ಅನೇಕ ಭೌತಿಕ ಶೋಧಗಳು ವಿಶ್ವ ಚಾಲಕನಿಗೂ ಮನುಷ್ಯನಿಗೂ ತಾದಾತ್ಮ್ಯವನ್ನುಂಟು ಮಾಡತಕ್ಕವುಗಳೇ ಆಗಿವೆ. ಅವರು ಜಡವಾದಿಗಳೆಂದು ಅಲ್ಲಗಳೆಯಲಾಗದು. ಸೃಷ್ಟಿಯ ಅನೇಕ ಘೋರತರ ಕಾರ್ಯಗಳಿಗೆ ನಾವು ಮೊದಲು ದೇವರ ಕ್ಷೋಭೆ, ಎಂದು ಹೇಳುತ್ತಿದ್ದೆವು. ಈಗ ಅವುಗಳ ಸತ್ಯ ಸ್ವರೂಪ ತಿಳಿದು ಅನೇಕ ಪ್ರಯೋಜನಗಳೇ ಆಗಿವೆ. ವಿಶ್ವಕಲ್ಯಾಣವೇ ಶಿಕ್ಷಣದ ಫಲವಾಗಿದೆಯೆಂದರಿದು ಆದಕ್ಕೋಸ್ಕರ ಪ್ರಯತ್ನಿಸಿರಿ."

ಧರ್ಮಾಂಧ ಮುಹಮ್ಮದಿಯನಿಗೆ ಮರಣದಂಡನೆ.

ಪಲ್ಲಾಮಲ ಎಂಬುವವರು ಮುಹಮ್ಮದ ಪೈಗಂಬರರ ವಿಚಾರವಾಗಿ ಅನುಚಿತ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರೆಂದು ಮೋಹದ ಸದೀಕ ಎಂಬ ಧರ್ಮಾಂಧನಾದ ಮುಹಮ್ಮದೀಯನು ಕೇಳಿ ಫಿರೋಜಪುರದಿಂದ ಕೋಟು ಕಸೂರ ಎಂಬಲ್ಲಿಗೆ ಹೋಗಿ ಕಳೆದ ಸೆಪ್ಟೆಂಬರ್ ೧೬ ನೆಯ ತಾರೀಖಿನ ದಿನ ಪಲ್ಲಾಮಲ ಎಂಬುವವರನ್ನು ಕೊಲೆಮಾಡಿ ತಾನೇ ಪೊಲಿಸರ ಸ್ವಾಧೀನವಾದನು.

ಈ ಅಪರಾಧಿಯ ವಿಚಾರಣೆಯು ಸೆಶನ್ಸಿನಲ್ಲಿಯೇ ನಡೆದು ಈತನಿಗೆ ಮರಣದಂಡನೆಯ ಶಿಕ್ಷೆಯನ್ನು ವಿಧಿಸಿದರು. ಅನಂತರ ಲಾಹೋರು ಚೀಫ್ ಕೋರ್ಟಿಗೆ ಅಪೀಲು ಆಗಿದ್ದಿತು. ಚೀಫ್ ಜಜ್ಜರಾದ ಮಿ. ಅಬದುಲ ರಸೀದ ಇವರು ಅಪರಾಧಿಗೆ ವಿಧಿಸಿದ್ದ ಮರಣ ದಂಡನೆಯ ಶಿಕ್ಷೆಯನ್ನು ಸ್ಥಿರಗೊಳಿಸಿದರು.

ಅಪರಾಧಿಯು ತನ್ನ ಕೃತಿಯನ್ನು ಸಮರ್ಥನಗೊಳಿಸುವಾಗ ನ್ಯಾಯಸ್ಥಾನಕ್ಕೆ ಹೀಗೆ ತಿಳಿಸಿದನು— ಮುಹಮ್ಮದ ಪೈಗಂಬರರ ಅಪಮಾನವನ್ನು ಸಹಿಸುವುದು ಅಶಕ್ಯ. ಆದುದರಿಂದ ಇಂಥ ಕೃತ್ಯವನ್ನು ಮಾಡಲು ಯಾವ ಮುಹಮ್ಮದಿಯನಾದರೂ ಪ್ರವೃತ್ತನಾಗದೆ ಇರಲಾರನು

ಅಪರಾಧಿಯ ಈ ಹೇಳಿಕೆಯನ್ನು ಕೇಳಿ ನ್ಯಾಯಾಧೀಶರು ಅಪೀಲನ್ನು ತೆಗೆದುಹಾಕುವಾಗ ಹೀಗೆ ಅಭಿಪ್ರಾಯ ಪಟ್ಟರು— "ತನ್ನಂತಹ ಒಂದು ಮನುಷ್ಯ ಪ್ರಾಣಿಯನ್ನು ಕೊಲೆ ಮಾಡಿ ದೇವರನ್ನು ಸಂತೋಷಗೊಳಿಸುತ್ತೇನೆಂದು ತಿಳಿಯುವುದು ಖುರಾನಿನ ಆಜ್ಞೆಗೆ ವಿರೋಧವಾದುದೆಂದು ನಾನು ತಿಳಿಯುತ್ತೇನೆ."

ರಾಜಕಾರಣದಲ್ಲಿ ಮುಂದಾಳುಗಳಾದ ಮುಸಲ್ಮಾನ್ ಪ್ರಮುಖರಾದರೂ ಈ ಮುಸಲ್ಮಾನ್ ನ್ಯಾಯಾಧೀಶರ ಅಭಿಪ್ರಾಯದಂತೆ ಪ್ರಕಟಿಸಿ ಧರ್ಮಾಂಧರಾದ ಇಂಥ ಮುಹಮ್ಮದೀಯರ ಕಣ್ಣಿಗೆ ಅಂಜನವನ್ನು ಈಗಲಾದರೂ ಹಾಕಬಾರದೇ?

ನಾವೂ ಅವರಂತೆ!

ಪಾರ್ಲಮೆಂಟಿನಲ್ಲಿ ಹಿಂದುಸ್ಥಾನದ ರಾಜಕೀಯ ಸುಧಾರಣೆಯ ಗೊತ್ತುವಳಿ ಬಂದು ಅದರ ಎರಡನೆಯ ವಾಚನವು ಪೂರ್ತಿಯಾಗುವಾಗ ಅನೇಕರ ಭಾಷಣಗಳಾದವು. ಮಿ. ಚರ್ಚಿಲ್ ಸಾಹೇಬರೂ ೧| ತಾಸಿನವರೆಗೆ ಭಾಷಣ ಮಾಡಿದರು. ಹಿಂದುಸ್ಥಾನಕ್ಕೆ ಈ ಸುಧಾರಣೆಯನ್ನು ಕೊಡಬೇಡಿರೆಂಬುದೇ ಇವರ ಹೇಳಿಕೆಯ ಮುಖ್ಯಾಂಶ.

ಆಗ ಹೀಗೆ ಹೇಳಿದರು—"ಹಿಂದುಸ್ಥಾನ ಯಾರದು? ಅದು ಹಿಂದುಗಳಿಗು ಮತ್ತು ಮುಸಲ್ಮಾನರಿಗು ಹೇಗೆ ಪರದೇಶವಲ್ಲವೋ ಹಾಗೆಯೇ ಇಂಗ್ಲಿಷರಾದ ನಮಗೂ ಅದು ಪರದೇಶವಲ್ಲ. ಅಲ್ಲಿ ಆಳಿಸಲು ನಾವೂ ಅವರಂತೆಯೇ ಅಧಿಕಾರವುಳ್ಳವರು ಹಿಂದುಸ್ಥಾನ ಅಸ್ಪೃಶ್ಯ ಜನರದಾಗಿದೆ. ಅವರಿಗೆ ಮಾತ್ರ ಅಲ್ಲಿರಲು ಸಂಪೂರ್ಣ ಅಧಿಕಾರ. ಹಿಂದು, ಮತ್ತು ಮುಸಲ್ಮಾನರು ಪರಕೀಯರು. ಅವರಂತೆಯೇ ನಾವು. ನಾವು ಸೈನ್ಯವನ್ನಿಟ್ಟು ಕಷ್ಟಪಡುತ್ತಿರುವುದರಿಂದ ಅವರಿಗೆ ಸುಖ ಶಾಂತಿ. ನಾವು ತಿರುಗಿ ಬಂದರೆ ಇನ್ನೂರು ವರುಷಗಳ ಹಿಂದೆ ಹೊಡೆದಾಡಿ ಹಾಳಾಗುವುದರಂತೆ ಮತ್ತೆ ಕೆಡಿಗೊಳಗಾಗುತ್ತಾರೆ ಅದಕ್ಕಾಗಿ ನಾವೂ ಅಲ್ಲಿಯೇ ಇದ್ದು ಅವರ ಕಲ್ಯಾಣ ಮಾಡಬೇಕಾಗಿದೆ."

ರೇಲ್ವೆ ಶಾಖೆಗೆಷ್ಟು ಹಣ?

ಹಿಂದುಸ್ಥಾನದ ರೇಲ್ವೆಗಳು ಹೆಚ್ಚಾಗಿ ಸರಕಾರಕ್ಕೇನೇ ಸಂಬಂಧ ಪಟ್ಟಿವೆ. ಬಿ. ಬಿ. ಎಂಡ್ ಸಿ. ಐ. ಮತ್ತು ಮದ್ರಾಸ್ ಸದರ್ನ್ ಮರಾಠಾ ಮುಂತಾದ ಕೆಲವು ರೇಲ್ವೆಗಳು ಕಂಪನಿಯ ಮೂಲಕ ನಡೆಯುತ್ತಿದ್ದರೂ ಅವುಗಳ ಲಾಭಾಂಶವು ಸರಕಾರದ ಒಪ್ಪಂದದಂತೆ ಸರಕಾರಕ್ಕೆ ಸೇರತಕ್ಕವುಗಳೇ ಆಗಿವೆ.

ಹಿಂದುಸ್ಥಾನದ ರೇಲ್ವೆಗಳಿಗಾಗಿ ಒಟ್ಟು ೮೦೦ ಕೋಟಿ ರೂ. ಬಂಡವಾಳ ಹಿಡಿದಿದೆ. ಈಗಿನ ವ್ಯಾಪಾರ ಮಂದಿಯ ಮುಂಚೆ ಸರಕಾರಕ್ಕೆ ರೇಲ್ವೆಯ ಆದಾಯವು ಚೆನ್ನಾಗಿಯೇ ಬರುತ್ತಿದ್ದಿತು ಪ್ರತಿ ವರುಷ ೬-೭ ಕೋಟಿ ರೂ. ಗಳ ಆದಾಯವಿದ್ದಿತು. ಆದರೆ ಕಳೆದ ೩-೪ ವರುಷಗಳಿಂದ ನಷ್ಟವೇ ಹೆಚ್ಚಾಗುತ್ತಲಿದೆ.

ಇದರಿಂದ ಈಗ ಸರಕಾರಕ್ಕೆ ರೇಲ್ವೆಯಿಂದ ಎಷ್ಟು ಲಾಭವಾಗುತ್ತದೆಂಬ ಪ್ರಶ್ನೆಯಿಲ್ಲ ಎಷ್ಟು ಕಡಿಮೆ ನಷ್ಟವಾಗಬಹುದೆಂಬ ಪ್ರಶ್ನೆಯೇ ಇದೆ. ಈ ರೇಲ್ವೆ ಉದ್ಯೋಗಕ್ಕೆ ಕೂಡಿರುವ ಬಂಡವಾಳವನ್ನು ನೋಡಿದರೆ ಇದು ಎಷ್ಟು ಪ್ರಚಂಡವಾದ ಉದ್ಯೋಗವೆಂಬುದು ಗೊತ್ತಾಗ ಹುದಿಲ್ಲವೆ?

ಕಳೆದ ವರುಷ ೯೯|| ಕೋಟಿ ರೂ. ಎಲ್ಲಾ ರೇಲ್ವೆಗಳ ಆದಾಯ. ಇದರಲ್ಲಿ ೬೧|| ಕೋಟಿ ರೂ. ಗೂಡ್ಸಗಾಡಿಯಿಂದ ಬಂದುದು. ೩೦ ಕೋಟಿ ರೂ. ಪ್ರವಾಸಿಕರಿಂದ. ೭||| ಕೋಟಿ ರೂ. ಲಗೇಜ್, ಪಾರ್ಸಲ್‌ಗಳಿಂದ. ವಾರ್ಷಿಕ ಚಲಾವಣೆ ವೆಚ್ಚ ೬೬ ಕೋಟಿ ರೂಪಾಯಿ. ೩೦ ಕೋಟಿ ಮೂಲಹಣದ ಬಡ್ಡಿ. ಇನ್ನಿತರ ವೆಚ್ಚ ಬೇರೆ.

ಹೀಗಿರಬೇಕು ಧೈರ್ಯ!

ತಾ. ೭ ನೆಯ ಪ್ರಾತಃಕಾಲ ೮ ಗಂಟೆ ವರೆಗೂ ಬ್ಯಾ. ಜಿನ್ನಾರವರು ತರುವ ಜಾತಿನಿರ್ಣಯದ ಸೂಚನೆಗೆ ಕಾಂಗ್ರೆಸ್ ಪಕ್ಷ ವಿರೋಧಿಸಬೇಕೆಂದೇ ನಿರ್ಧಾರವಾಗಿತ್ತಂತೆ. ಅಷ್ಟರಲ್ಲಿ ಶ್ರೀ. ಭುಲಾಭಾಯಿಯವರಿಗೆ ಕಾಂಗ್ರೆಸ್ ಅಪ್ಪಣೆಯಾಯಿತು. ವಿರೋಧಿಸಬೇಡಿರಿ; ಕೈಕಟ್ಟಿಕೊಂಡು ಕುಳಿತುಕೊಳ್ಳಿರಿ. ಅಪ್ಪಣೆ ಎಂದರು ಆ ಭಾಯಿಯವರು.

ಆದರೆ ಮುಂಬೈ ಹುಲಿ ಸುಮ್ಮನಿದ್ದೀತೆ? ಡಾ. ದೇಶಮುಖರು ಆ ಭಾಯಿಯವರ ಸಂಗಡ ಹೋರಾಡಿದರಂತೆ. ಕಡೆಗೆ ತಾವು ಜಾತಿನಿರ್ಣಯಕ್ಕೆ ವಿರೋಧ ಮತಕೊಟ್ಟರು. ಇವರೂ ಕಾಂಗ್ರೆಸ್ ಪಕ್ಷದವರು. ನೋಡಿ ಇವರ ಧೈರ್ಯ.

ಇದೊಳ್ಳೇ ಯುಕ್ತಿ!

ಹಿಂದು ಸಮಾಜದಲ್ಲಿ ವಿಧವಾ ಸ್ತ್ರೀಯರು ಅಮಂಗಲೆಯರೆಂದು ತಿಳಿಯುತ್ತಾರಷ್ಟೆ. ಆದೇಕೆ ಅವರು ಸುಮಂಗಲೆಯರಾಗಬಾರದು? ಅವರು ಇನ್ನು ಮೇಲೆ ಹೀಗೆ ನಡೆಯಬೇಕೆಂದು ಶ್ರೀ. ಜೋಶಿ ಎಂಬುವವರು 'ಸಂಜೀವನಿ' ಪತ್ರಿಕೆಯಲ್ಲಿ ತಿಳಿಸಿದ್ದಾರೆ.

"ವಿಧವಾ ಸ್ತ್ರೀಯರು ಕುಂಕುಮ ಹಚ್ಚಿಕೊಳ್ಳಬೇಕು. ಲಗ್ನಾದಿ ಶುಭ ಕಾರ್ಯಗಳಲ್ಲಿ ಮೆರವಣಿಗೆಯ ಮುಂದೆ ಹಿಂದೆ ಇವರೇ ಇರಬೇಕು."

ಹೀಗೆ ಪ್ರತಿಯೊಂದು ಊರಲ್ಲಿ ವಿಧವಾ ಸ್ತ್ರೀ ಮಂಡಲ ಏರ್ಪಟ್ಟು ಆ ಸೈನ್ಯವು ಎಲ್ಲ ಶುಭ ಕಾರ್ಯಗಳಲ್ಲಿ ನುಗ್ಗಿದರೆ ಅಶುಭದ ಕಲ್ಪನೆ ಕೆಲವು ದಿನಗಳಲ್ಲಿ ಹೋಗುತ್ತದೆ. ಇದೊಂದು ವಿಧವಾ ಶಾಸನ ಭಂಗದ ಆಂದೋಲನ!

ಶಿವಯೋಗಿ ಸಿದ್ಧರಾಮೇಶನು ಬೋಧಿಸುವುದೇನು?

(ಲೇಖಕರು— ಶ್ರೀ. ಪಾಟೀಲ ಲಿಂಗನಗೌಡರು.)

೧ ಕುಲವೆಂದು ಹೋರಾಡುವ ಅಣ್ಣಗಳಿರಾ ಕೇಳಿರೊ. ಕುಲವೇ ದೋಹರನ? ಕುಲವೇ ಮಾದಾರನ? ಕುಲವೇ ದೂರ್ವಾಸನ? ಕುಲವೇ ವ್ಯಾಸನ? ಕುಲವೇ ವಾಲ್ಮೀಕನ? ಕುಲವೇ ಕೌಂಡಿಲ್ಯನ? ಕುಲವನೋಳ್ಪರೆ ಹುರುಳಿಲ್ಲ. ಅವರ ನಡೆ ನೋಳ್ಪರೆ ನಡೆಯುವರು ತ್ರಿಲೋಕದಲ್ಲಿಲ್ಲ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

ಅರ್ಥ— ಹಿಂದು ಧರ್ಮದಲ್ಲಿ ಕಸಬು ಮೊದಲಾದವುಗಳ ಮೇಲಿಂದ ಅನೇಕ ಕುಲಗಳು ಉಂಟಾಗಿವೆಯಷ್ಟೆ. ಈ ಕುಲಗಳು ಯಾವಾಗಲು ನಾನು ಹೆಚ್ಚು, ನೀನು ಕಡಿಮೆ; ನನ್ನ ಧರ್ಮ ಹೆಚ್ಚು, ನಿನ್ನ ಧರ್ಮ ಕಡಿಮೆ, ಎಂದು ನಿರಂತರವೂ ಹೊಡೆದಾಡುತ್ತವೆ. ಇಂಥ ಹೋರಾಡುವ ಅಣ್ಣಗಳನ್ನು ಕುರಿತು ಈ ವಚನವನ್ನು ಹೇಳಿದ್ದಾರೆ— ಅಯ್ಯಾ, ಅವನು ಮಾದಾರ, ಇವನು ದೋಹರ; ಎಂದೆನ್ನುವಿರಿ. ವ್ಯಾಸ, ದುರ್ವಾಸ, ವಾಲ್ಮೀಕಿ, ಕೌಂಡಿಲ್ಯ ಮೊದಲಾದವರು ನಿಮಗೆ ಪೂಜ್ಯ ಋಷಿ ಮುನಿಗಳಲ್ಲವೇ? ನೀವು ಪೂಜ್ಯವೆಂದು ತಿಳಿಯುತ್ತಿರುವ ಶಾಸ್ತ್ರ ಪುರಾಣಗಳನ್ನು ಅವರೇ ಬರೆಯಲಿಲ್ಲವೇ? ಅವರು ಯಾವ ಕುಲದವರಿದ್ದರು? ವ್ಯಾಸನು ಬೋಯಿತಿಯ ಮಗನಲ್ಲವೇ? ದೂರ್ವಾಸನು ಮಚ್ಚಿಗನಲ್ಲವೇ? ವಾಲ್ಮೀಕಿಯು ಬೇಡನಲ್ಲವೇ? ಅವರ ಕುಲಗಳನ್ನೇನಾದರೂ ಎಣಿಸುತ್ತಿರುವಿರಾ? ಇಲ್ಲ, ಇಲ್ಲ; ಅಂದಮೇಲೆ ಈಗ ಕುಲದ ಶ್ರೇಷ್ಠತೆಗಾಗಿ ಹೊಡೆದಾಡುವುದೇಕೆ? ಶ್ರೀ. ಬಸವೇಶ್ವರನು ಈ ಕಸಬಿನ ಕುಲಗಳನ್ನು ನಿರಾಕರಿಸಿ ಶಿವಸಂಸ್ಕಾರವುಳ್ಳದ್ದು ಶಿವಕುಲ, ಅನ್ಯವು ಭವಿಕುಲ ಎಂದು ಮಾಡಿದನು. ಅದಕ್ಕಾಗಿ ಕುಲವನೆಣಿಸಬೇಡಿರಿ. ಅದರಲ್ಲೇನೂ ಹುರುಳಿಲ್ಲ. ಅದಕ್ಕೋಸ್ಕರ ಕುಲಕ್ಕಾಗಿ ಹೋರಾಡದೆ ಸದ್ಗುಣ ಸದಾಚಾರಶೀಲರಾಗಿರೆಂದು ಹೇಳಿದ್ದಾರೆ.

೨ ಚತುರ್ವರ್ಣವಾದರೇನು? ಚತುರ್ವರ್ಣಾತೀತನೆ ವೀರಶೈವ ನೋಡಾ. ಚತುರ್ವೇದಿಯಾದರೇನು? ಚರ್ಮದೇಹವಳಿಯದವನೆ ಚಾಂಡಾಲ ನೋಡಾ. ಚತುರಂಗಬಲ ಯುಕ್ತನಾದರೇನು? ಚತುರ ಗುಣವಿಲ್ಲದಿದ್ದರೆ ದೇಶವನಾಳ್ವ ಪರಿಯು ನೋಡಾ. ಚರ್ಮದೇಹಿಯಾದರೇನು? ಗಜಚರ್ಮಧರ ಕಪಿಲಸಿದ್ಧ ಮಲ್ಲಿಕಾರ್ಜುನ ಪ್ರಸನ್ನವಾಗದನ್ನಕ್ಕ ಚಾಳು ನೆ ನೋಡಾ.

ಅರ್ಥ:— ಬ್ರಹ್ಮನ ಶಿರದಿಂದ ಬ್ರಾಹ್ಮಣರು, ಭುಜಗಳಿಂದ ಕ್ಷತ್ರಿಯರು, ತೊಡೆಗಳಿಂದ ವೈಶ್ಯರು ಮತ್ತು ಪಾದಗಳಿಂದ ಶೂದ್ರರು ಹುಟ್ಟಿ ನಾಲ್ಕು ವರ್ಣಗಳಾದವಂತೆ. ಆದರೆ ವೀರಶೈವನು ಈ ರೀತಿ ವರ್ಣಗಳ ಕೊಳೆಯಲ್ಲಿ ಸಿಕ್ಕಿ ಬೀಳುವವನಲ್ಲ. ವೀರಶೈವನು ಈ ಚತುರ್ವರ್ಣಗಳನ್ನು ಮೀರಿ ನಿಂದವನಾಗಿರುತ್ತಾನೆ. ವೇದವನ್ನು ಓದಿದವನಿಗೆ ವೇದಿ ಎನ್ನುತ್ತಾರೆ. ನಾಲ್ಕು ವೇದಗಳನ್ನು ಓದಿದವನು ಚತುರ್ವೇದಿಯು. ಈ ಪ್ರಕಾರ ನಾಲ್ಕು ವೇದಗಳನ್ನು ಓದಿದರೂ ಯಾವಾತನ ಅಂಗದ ಗುಣಗಳು ಹಿಂಗುವದಿಲ್ಲವೊ ಆತನು ಚಾಂಡಾಲನೆಂದೇ ತಿಳಿಯಬೇಕು. ಸೇನಾಪತಿಯಲ್ಲಿ ಚತುರಂಗ ಬಲವಿದ್ದರೂ ಚತುರ ಗುಣವೊಂದಿಲ್ಲದಿದ್ದರೆ ಏನು ಫಲ? ಅವನಿಗೆ ಗೆಲುವಾಗಬಹುದೇ? ಹಾಗೆಯೇ ಚಿಗರೆ ಹುಲಿಗಳ ಚರ್ಮಗಳನ್ನು ಧರಿಸಿ, ತಪಸ್ವಿಯಾಗಿ ತಿರುಗುತ್ತಿದ್ದರೂ ಗಜಚರ್ಮಧರನಾದ ಆ ಪರಮಾತ್ಮನು ಒಲಿಯದಿದ್ದರೆ ಏನು ಫಲ? ಆದುದರಿಂದ ವೇದಾಂತವನೋದದೆ ಮೇಲೆ ಜೀವನ ಗುಣವಳಿಯಬೇಕು.

೩ ಎಮ್ಮ ವಚನದೊಂದು ಪಾರಾಯಣಕ್ಕೆ ವ್ಯಾಸನದೊಂದು ಪುರಾಣ ಸಮ ಬಾರದಯ್ಯ. ನಮ್ಮ ವಚನದ ನೂರೆಂಟರಧ್ಯಯನಕ್ಕೆ ಶತರುದ್ರಿಯಾದಿ ಸಮ ಬಾರದಯ್ಯ. ಎಮ್ಮ ವಚನದ ಸಾಸಿರ ಪಾರಾಯಣಕ್ಕೆ ಗಾಯತ್ರಿ ಲಕ್ಷ ಜಪ ಸಮ ಬಾರದಯ್ಯ, ಕಪಿಲಸಿದ್ಧ ಮಲ್ಲಿಕಾರ್ಜುನಾ.

ಅರ್ಥ:— ನಮ್ಮ ಪ್ರಮಥರು ಲಿಂಗಾನುಭವಿಗಳು. ಅವರು ಬರೆದಿರುವ ವಚನಗಳು ಕೇವಲ ಅನುಭವದ ಕಿಡಿಯಾಗಿವೆ. ಮುಮುಕ್ಷುವಿಗೆ ಇವೇ ಸರಿಯಾದ ಮಾರ್ಗವನ್ನು ತೋರಿಸಬಲ್ಲವು. ಎಂದೂ ಯುದ್ಧಕ್ಕೆ ಹೋಗದವನ ಬಾಯಿಯಿಂದ ಎಷ್ಟೋ ಹೊತ್ತಿನ ವರೆಗೆ ಯುದ್ಧ ವಿಷಯಕ ಭಾಷಣ ಕೇಳಿದರೆ ಯುದ್ಧದ ಶೌರ್ಯವು ಬಂದಂತಾಯಿತೇ? ಹೀಗಿದೆ ಪುರಾಣಶ್ರವಣ. ಪ್ರತ್ಯಕ್ಷ ಕಾಳಗದಲ್ಲಿ, ಅಸಂಖ್ಯ ವೈರಿಗಳ ಮಧ್ಯದಲ್ಲಿ, ಸ್ವಂತ ಶೌರ್ಯದಿಂದ ಹೋರಾಡಿ ವಿಜಯಿಯಾದ ವೀರನ ಅನುಭವ ವಚನವು ಅದೆಷ್ಟು ಮಹತ್ವದ್ದಾಗಿದೆ? ಆದುದರಿಂದ ನಮ್ಮ ಶರಣರ ಒಂದೇ ಒಂದು ಅನುಭವದ ವಚನಕ್ಕೆ ವ್ಯಾಸನ ಒಂದು ಪುರಾಣವೂ ಸರಿಯಾಗಲಾರದು. ಇದರಂತೆ ಪ್ರಾಕೃತ ಧರ್ಮದ ಅನೇಕ ಗ್ರಂಥಗಳು ಅಪ್ರಾಕೃತ ಧರ್ಮದ ಈ ವಚನಗಳಿಗೆ ಎಂದೂ ಸರಿಯಾಗಲಾರವು. ಅವು ಸ್ವರ್ಗ ಮೃತ್ಯುಗಳಲ್ಲಿ ಹೆಚ್ಚಳವನ್ನು ಹೇಗೆ ಹೊಂದಬಹುದೆಂಬುದನ್ನು ಮಾತ್ರ ಹೇಳುತ್ತವೆ



ಶಾ. ಶ. ೧೮೫೯ ನೆಯ ಮಾಘ ಬ|| ೭ ಸೋಮವಾರ.

ಸ್ವರಾಜ್ಯ ಯಾರಿಗೆ?

ಮುಸಲ್ಮಾನರು ತಮಗೆ ಪ್ರತ್ಯೇಕ ಪ್ರಾತಿನಿಧ್ಯವಿರಬೇಕೆಂದು ಕೇಳುವುದು ಅನ್ಯಾಯ. ಈ ದೇಶದಲ್ಲಿ ಪ್ರಜಾಪ್ರಭುತ್ವವೇ ಸ್ಥಾಪನೆಯಾಗಬೇಕಾದುದರಿಂದ ಹಿಂದುಸ್ಥಾನದವರೆಲ್ಲರೂ ಜಾತಿ ಮತ ಪಂಥಗಳನ್ನನುಸರಿಸಿ ರಾಜಕಾರಣದಲ್ಲಿ ಸೇರದೆ ತಾವೆಲ್ಲರೂ ಹಿಂದುಸ್ಥಾನದವರೆಂಬ ರಾಷ್ಟ್ರಭಾವನೆಯಿಂದ ಪರಸ್ಪರ ಕೂಡಿ ರಾಜ್ಯಭಾರ ವಹಿಸಲು ಸಿದ್ಧರಾಗುವುದೇ ವಿಹಿತ. ಆದುದರಿಂದ ಸಂಯುಕ್ತ ಪ್ರಾತಿನಿಧ್ಯವೇ ಸ್ವರಾಜ್ಯದ ಮೂಲ ಮಂತ್ರ.

ಹೀಗಿರುವಾಗ ಮುಸಲ್ಮಾನರು ತಮಗಾಗಿಯೇ ರಾಜಕಾರಣದಲ್ಲಿ ಎಲ್ಲಾ ರೀತಿ ನೀತಿಗಳು ಪ್ರತ್ಯೇಕವಾಗಿರಬೇಕೆಂಬುದು ಯಾವ ನ್ಯಾಯ? ಈ ಅನ್ಯಾಯದ ಕೇಳಿಕೆಯನ್ನು ಮಾನ್ಯ ಮಾಡುವುದು ಅದಕ್ಕಿಂತಲೂ ಹೆಚ್ಚಿನ ಅನ್ಯಾಯವಲ್ಲವೆ? ಮುಸಲ್ಮಾನರು ರಾಷ್ಟ್ರಾಭಿಮಾನ ಹೊಂದದೆ ಸ್ವಾರ್ಥದಿಂದಲೇ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೇಳುತ್ತಿದ್ದಾರೆ. ಅದನ್ನು ಸರಕಾರವು ಒಪ್ಪಿ ಅವರಿಗೆ ಅದೇ ರೀತಿಯಿಂದ ವಿಶೇಷ ಸೌಲಭ್ಯವನ್ನುಂಟು ಮಾಡಿ ಕೊಟ್ಟಿದ್ದು ಅನ್ಯಾಯ. ಈ ಅನ್ಯಾಯದ ಜಾತಿ ನಿರ್ಣಯಕ್ಕೆ ಕಾಂಗ್ರೆಸ್ ಪಕ್ಷವು ವಿರೋಧಿಸದಿದ್ದುದು ಇನ್ನೆಂತಹ ಅನ್ಯಾಯವೆಂದು ಹೇಳಬೇಕು? ಮುಂಬೈ ರಾಷ್ಟ್ರೀಯ ಸಭೆಯಲ್ಲಿ ಜಾತಿ ನಿರ್ಣಯವು ತನಗೆ ಮಾನ್ಯವೂ ಇಲ್ಲ; ಅಮಾನ್ಯವೂ ಇಲ್ಲ; ಎಂದು ಗೊತ್ತುಮಾಡಿದ್ದೇ ಮಹಾ ಅಪರಾಧ.

ಅನ್ಯಾಯವಾದುದನ್ನು ಅನ್ಯಾಯವೆಂದು ಹೇಳುವುದಿಲ್ಲವೆಂಬುದೂ ಅನ್ಯಾಯವೇ ಅಲ್ಲವೆ? ಅನ್ಯಾಯಕ್ಕೆ ಇದೊಂದು ರೀತಿಯ ಪ್ರೋತ್ಸಾಹವಲ್ಲವೆ? ಇದರಿಂದ ರಾಷ್ಟ್ರೀಯ ಸಭೆಯೇ ಮುಸಲ್ಮಾನರ ಜಾತೀಯ ಭಾವನೆಯನ್ನು ಬೆಳೆಯಿಸಲು ಕಾರಣವಾಗುತ್ತಿದೆಯೆಂದು ಸ್ಪಷ್ಟವಾಗುವುದಿಲ್ಲವೆ? ಕಾಂಗ್ರೆಸ್ ಹಿಂದುಸ್ಥಾನದಲ್ಲಿ ಮುಸಲ್ಮಾನರ ಜಾತೀಯ ಭಾವನೆಯನ್ನು ಬೆಳೆಸುತ್ತಾ ಬಂದಿದೆಯೆಂದೂ ಇದರಿಂದ ರಾಷ್ಟ್ರಕ್ಕೆ ಮುಖ್ಯವಾಗಿ ಹಿಂದು ಜನಾಂಗಕ್ಕೆ ಮುಂದೆ ಮಹದನರ್ಥವೇ ಸಂಭವಿಸುತ್ತದೆಂದೂ ಈ ದೇಶದ ಅನೇಕ ಪ್ರಮುಖರು ಹೇಳುತ್ತಿರುವುದು ಯುಕ್ತವಾಗಿಲ್ಲವೆ?

ಜಾತೀಯ ಪ್ರಾತಿನಿಧ್ಯವು ರಾಷ್ಟ್ರಕ್ಕೆ ವಿಘಾತಕವಾದುದೆಂಬುದು ಮುಸಲ್ಮಾನ್ ಜಾತೀಯ ಪಕ್ಷದ ರಾಜಕಾರಣ ಪಟುಗಳಿಗೆ ತಿಳಿದಿಲ್ಲವೆಂದು ಯೋಚಿಸಬಹುದೇ? ಅವರೇನು ಅಷ್ಟು ರಾಜಕಾರಣ ತಿಳಿಯದವರೆ? ಅವರು ದಕ್ಷರೆಂದು ತಿಳಿಯುವ ನಮ್ಮಗಿಂತ ದಕ್ಷರಿನ್ನಾರಿರುವರು?

ಜಾತೀಯ ಭೇದವನ್ನು ಬಿತ್ತಿ ಬೆಳೆಸುವುದೇ ಅವರ ಮುಖ್ಯೋದ್ದೇಶವೆಂಬುದು ಯಾರಿಗೆ ತಾನೆ ತಿಳಿಯಲಿಕ್ಕಿಲ್ಲ? ಕಳೆದ ಎರಡು ಸುಧಾರಣೆಗಳ ಕಾಲದಲ್ಲಿಯೂ ಬಂದ ಅನುಭವವೇನು? ಅವರ ಸ್ವಾರ್ಥವು ದಿನೇ ದಿನೇ ಹೆಚ್ಚುತ್ತಾ ಇಲ್ಲವೆ? ಎಳೆಯದಾಗಿದ್ದಾಗ ಬಾಗದದು ಬಲಿತಾಗ ಬಾಗುವುದೆ? ರಾಷ್ಟ್ರಕ್ಕೆ ವಿಘಾತಕವಾದ ಮತ್ತು ಹಿಂದು ಜನಾಂಗಕ್ಕೆ ಅನರ್ಥಕರವಾದ ಅವರ ಸ್ವಾರ್ಥಕ್ಕೆ ದಿನೇ ದಿನೇ ಕಾಂಗ್ರೆಸ್ಸಿನಂತಹ ರಾಷ್ಟ್ರೀಯ ಸಂಸ್ಥೆಯು ಆಹುತಿಯಾಗುತ್ತ ಹೋಗುತ್ತಿರುವುದು ರಾಷ್ಟ್ರದ ದುರ್ದೈವವಲ್ಲವೆ?

ಮುಂಬೈ ಕಾಂಗ್ರೆಸ್ ಮತ್ತು ಅಸೆಂಬ್ಲಿಯ ಕಾಂಗ್ರೆಸ್ ಪಕ್ಷ ಇವು ಇದೇ ಪ್ರಕಾರ ಮುಸಲ್ಮಾನ್ ಪಕ್ಷದ ಸ್ವಾರ್ಥಕ್ಕೆ ಆಹುತಿಕೊಡುತ್ತಾ ಬಂದಿರುವವಲ್ಲವೆ? ಆದುದರಿಂದ ರಾಷ್ಟ್ರಾಧಿಪತಿಗಳಾದ ಬಾಬು ರಾಜೇಂದ್ರ ಪ್ರಸಾದರು ಮತ್ತು ಬ್ಯಾ. ಜಿನ್ನಾರವರು ಪ್ರಾರಂಭಿಸಿರುವ ಹಿಂದು ಮುಸಲ್ಮಾನ್ ಸಂಧಾನದ ವಿಚಾರದಲ್ಲಿ ಅನೇಕರಿಗೆ ತುಂಬಾ ಸಂದೇಹ. ಕಾಂಗ್ರೆಸ್ ಮುಸಲ್ಮಾನರ ವಿಚಾರವಾಗಿ ಇತ್ತೀಚೆಗೆ ಮಾಡುತ್ತಾ ಬಂದಿರುವ ಕಾರ್ಯಕಲಾಪಗಳು ಅನೇಕರಿಗೆ ಅಸಹ್ಯ ವೇದನೆಯನ್ನುಂಟುಮಾಡಿವೆ.

ಧರ್ಮವೀರ ಭಾಯಿ ಪರಮಾನಂದರು ರಾಷ್ಟ್ರಾಧಿಪತಿಗಳ ಕೋರಿಕೆಯಂತೆ ಅವರ ಸಂಗಡ ಈ ವಿಚಾರವಾಗಿ ಸಂಭಾಷಿಸಲು ಕೂಡಾ ಇಷ್ಟಪಡಲಿಲ್ಲ. ಅಲಹಾಬಾದಿನ 'ಲೀಡರ್' ಪತ್ರಿಕೆಯು ಹಿಂದುಗಳಿಗೆ ಕಾಂಗ್ರೆಸ್ಸಿನ ವಿಚಾರದಲ್ಲಿ ಬಹು ಎಚ್ಚರಿಕೆಯಿರಲೆಂದು ಸೂಚಿಸಿದೆ. ಹಿಂದು ಜನಾಂಗದ ಕೆನ್ನೆಗೆ ಕಾಂಗ್ರೆಸ್ ಮತ್ತೊಮ್ಮೆ ಚೆನ್ನಾಗಿ ಏಟು ಹಾಕಿತೆಂತಲೂ ಆ ಪತ್ರಿಕೆಯು ಸ್ಪಷ್ಟ ತಿಳಿಸಿದೆ.

ಈಜಿಪ್ತಿನ ಹಿಂದಣ ಮುಖ್ಯ ಮಂತ್ರಿಗಳಾಗಿದ್ದ ಮುಸ್ತಾಫಾ ನಹಾಸ ಪಾಶಾ ಎಂಬುವವರು ಶ್ರೀ. ಸುಭಾಷಚಂದ್ರ ಬೋಸರವರ ಹತ್ತಿರ ಈ ಜಾತಿ ನಿರ್ಣಯದ ವಿಚಾರವಾಗಿ ಹೀಗೆ ಸ್ಪಷ್ಟ ತಿಳಿಸಿದ್ದಾರೆ.

"ಜಾತೀಯ ಸ್ವರಾಜ್ಯಕ್ಕೋಸ್ಕರ ಮುಸಲ್ಮಾನರು ಈ ಪ್ರಕಾರ ಹೋರಾಡುತ್ತಿರುವುದು ಅರಾಷ್ಟ್ರೀಯ ಮತ್ತು ಸಂಕುಚಿತ ವೃತ್ತಿಯುಳ್ಳದ್ದಾಗಿದೆ. ಈಜಿಪ್ತ ದೇಶದಲ್ಲಿ ಕುಲಗೆಟ್ಟ ಕ್ರೈಸ್ತರೇ ಮೊದಲಾದ ಜಾತಿಯವರು ಅಲ್ಪ ಸಂಖ್ಯಾಕರಿದ್ದರೂ ಅವರು ಹೀಗೆ ಪ್ರತ್ಯೇಕವಾದ ಸೌಲಭ್ಯವನ್ನು ಕೇಳದೆ ರಾಜಕಾರಣದಲ್ಲಿ ಕೂಡಿಯೇ ಕೆಲಸ ಮಾಡುತ್ತಿದ್ದಾರೆ"

ತಮ್ಮ ಜಾತಿಯ ಇಂಥ ಪ್ರಮುಖರು ಕೂಡಾ ಹೇಳುವುದನ್ನು ಲಕ್ಷಿಸದೆ ಜಾತಿನಿರ್ಣಯವನ್ನೇ ಬೆನ್ನು ಹತ್ತಿರುವವರ ಉದ್ದೇಶವೇನಿರಬಹುದು? ಸ್ವಾರ್ಥಿಗಳ ಸ್ವಾರ್ಥಕ್ಕೆ ಆಹುತಿಯಾಗುವುದು ಸ್ವಾರ್ಥವನ್ನು ತಪ್ಪಿಸುವ ಉಪಾಯವಲ್ಲ; ಹೆಚ್ಚಿಸುವ ರೀತಿಯು. ನ್ಯಾಯವಾದ ವಿರೋಧವೇ ಅದಕ್ಕೆ ಮದ್ದು. ಇಷ್ಟೂ ಆಗದ ಜನಾಂಗಕ್ಕೆ ಸ್ವರಾಜ್ಯ ದೊರೆಯುವುದೆಂತು? ದೊರೆತರೂ ಅದು ಮುಸಲ್ಮಾನರ ಪಾಲಾಗದೆ ಉಳಿಯುವುದೆಂತು? ಆದಕ್ಕಾಗಿ ಸ್ವರಾಜ್ಯ ಯಾರಿಗೆ? ಹಿಂದುಸ್ಥಾನದವರಿಗಾಗಿದ್ದರೆ ಸಂಯುಕ್ತ ಪ್ರಾತಿನಿಧ್ಯವನ್ನೇ ಮುಸಲ್ಮಾನ್ ಪಕ್ಷವೂ ಒಪ್ಪುವಂತೆ ಕಾಂಗ್ರೆಸ್ ತನ್ನ ನಡತೆಯನ್ನು ತಿದ್ದಿಕೊಂಡು ನ್ಯಾಯವಾದ ರೀತಿಯಲ್ಲಿ ನಡೆಯಬೇಕು. ಮುಸಲ್ಮಾನರಿಗೆ ಸ್ವರಾಜ್ಯವಾಗುವುದಾಗಿದ್ದರೆ ಈಗಿನಂತೆಯೇ ಆ ಪಕ್ಷದ ಸ್ವಾರ್ಥಕ್ಕೆ ಆಹುತಿಯಾಗುತ್ತಾ ಹೋಗಬೇಕು. ಇವುಗಳಲ್ಲಿ ಕಾಂಗ್ರೆಸ್ ಇನ್ನಾದರೂ ಯಾವ ಮಾರ್ಗವನ್ನನುಸರಿಸುತ್ತದೋ ನೋಡಬೇಕು.

ಧರ್ಮಾತ್ಮಾ ಮತ್ತು ಸರದಾರ.

ಪಂ. ಮಾಲವೀಜಯವರು

ಜಾತಿನಿರ್ಣಯದ ವಾದ.

ಧರ್ಮಾತ್ಮರ ದಿವ್ಯ ಭಾಷಣ.

ಸರದಾರ ಪಟೇಲರು

"ಧರ್ಮಾತ್ಮಾ ಮಾಲವೀಜಿಯವರು ತಾ. ೧೩ ನೆಯ ದಿವಸ ಜಾತಿನಿರ್ಣಯವನ್ನು ಕುರಿತು ಕಾಶಿಯಲ್ಲಿ ಅತ್ಯಂತ ಮಹತ್ವವಾದ ಭಾಷಣವನ್ನು ಮಾಡಿದರು. ಅದರ ಮುಖ್ಯಾಂಶ ಹೀಗಿದ್ದಿತು—

ರಾಷ್ಟ್ರೀಯ ಸಭೆಯು ಜಾತಿನಿರ್ಣಯವು ತನಗೆ ಮಾನ್ಯವೂ ಇಲ್ಲ; ಅಮಾನ್ಯವೂ ಇಲ್ಲ; ಎಂದು ತೀರ್ಮಾನಿಸಿದನಂತರ ನಾನು ರಾಷ್ಟ್ರೀಯ ಸಭೆಯ ಅನೇಕ ಹಿಂದು ಮತ್ತು ಮುಸಲ್ಮಾನ್ ಮುಂದಾಳುಗಳನ್ನು ಕಂಡೆನು. ಅಸೆಂಬ್ಲಿಯಲ್ಲಿ ಜಾತಿನಿರ್ಣಯ ಮಾನ್ಯಮಾಡುವ ಅಥವಾ ಅಮಾನ್ಯಮಾಡುವ ಸೂಚನೆ ಬಂದರೆ ನಾವು ವಿರೋಧಿಸುವೆವೆಂದೇ ಅವರು ನನ್ನ ಹತ್ತಿರ ಹೇಳಿದ್ದರು.

ನಾನು ತಾ. ೬ ನೆಯ ದಿನ ದಿಲ್ಲಿಯಿಂದ ಬರುವಾಗ ಸರದಾರ ವಲ್ಲಭಭಾಯಿಯವರನ್ನು ಕಂಡಿದ್ದೆನು. ಅವರು ಕೂಡಾ ಜಿನ್ನಾರವರ ಜಾತಿನಿರ್ಣಯದ ಉಪಸೂಚನೆಗೆ ಕಾಂಗ್ರೆಸ್ ಪಕ್ಷವು ವಿರೋಧಿಸುವದೆಂದೇ ನನಗೆ ಅಭಿವಚನ ಕೊಟ್ಟಿದ್ದರು. ಆದರೆ ಪಕ್ಷವು ಅದರಂತೆ ನಡೆಯದಿದ್ದುದು ವಿಷಾದದ ಸಂಗತಿಯು.

ಕಾಂಗ್ರೆಸ್ ಪಕ್ಷದ ಈ ನಡತೆಯಿಂದ ರಾಷ್ಟ್ರಕ್ಕೆ ಅಹಿತವಾಗುವದು. ಜಾಯಿಂಟ ಪಾರ್ಲಮೆಂಟರಿ ಕಮಿಟಿಯ ವರದಿಯಲ್ಲಿ ಹಿಂದುಸ್ಥಾನದ ಎಲ್ಲ ಜಾತಿಗಳೂ ಪ್ರಾಯಶಃ ಜಾತಿನಿರ್ಣಯಕ್ಕೆ ಒಪ್ಪಿಗೆಯನ್ನೇ ಕೊಟ್ಟಿವೆಯೆಂದು ಬರೆದುದನ್ನು ಕಾಂಗ್ರೆಸ್ ಪಕ್ಷದ ನಡತೆಯು ಬಲಪಡಿಸಿತು. ಇದರಿಂದ ರಾಷ್ಟ್ರಕ್ಕೆ ಅನರ್ಥವಾದುದಲ್ಲದೆ ಹಿಂದು ಮತ್ತು ಶೀಖ ಸಮಾಜಗಳಿಗಂತೂ ವಿಶೇಷ ಹಾನಿಯಾಯಿತು.

ಬಂಗಾಲ ಪಂಜಾಬ ಪ್ರಾಂತಗಳ ಹಿಂದು ಸಭಾಸದರಲ್ಲಿ ಸ್ವಲ್ಪರ ವಿನಾ ಎಲ್ಲರೂ ಜಾತಿನಿರ್ಣಯವನ್ನು ವಿರೋಧಿಸಿದ್ದಾರೆ. ಇದರಿಂದ ಕಾಂಗ್ರೆಸ್ ಪಕ್ಷವು ಮಾಡಿದ ಅಹಿತವೇನೂ ನಿವಾರಣೆಯಾಗುವುದಿಲ್ಲ. ಮುಂದಣ ನಮ್ಮ ಕಾರ್ಯಕ್ಕೆ ಇದರಿಂದ ತೊಡಕೇ ಹುಟ್ಟಿತು. ಸ್ವರಾಜ್ಯ ಮತ್ತು ಜಾತೀಯ ಪ್ರಾತಿನಿಧ್ಯ ಇವು ೩೬ ರರ ಸಂಖ್ಯೆಯಂತೆ ವಿರುದ್ಧ ಮುಖಗಳುಳ್ಳವುಗಳಾಗಿವೆಯೆಂಬುದು ನಮ್ಮ ಮುಸಲ್ಮಾನ್ ಬಂಧುಗಳಿಗೆ ತಿಳಿಯದಿರುವುದಕ್ಕೆ ಮಾಡಬೇಕಾದುದೇನು?

ಬಹು ಸಂಖ್ಯಾಕರಿಗೆ ಸ್ಥಳಗಳನ್ನು ಕಾದಿಟ್ಟದ್ದಾದರೆ ಆ ಪ್ರಾಂತದ ಅಲ್ಪ ಸಂಖ್ಯಾಕರು ಪರಾವಲಂಬಿಗಳಾಗಬೇಕಾಗುತ್ತದೆಂಬುದು ಮುಸಲ್ಮಾನ್ ಬಂಧುಗಳಿಗೆ ಗೊತ್ತಾಗುವುದಿಲ್ಲವೆ? ಬಂಗಾಲ ಮತ್ತು ಪಂಜಾಬ ಪ್ರಾಂತಗಳ ಹಿಂದು ಮತ್ತು ಶೀಖ ಜನರು ಮುಸಲ್ಮಾನರ ಅಧೀನರಾಗಬೇಕಾಗುತ್ತದೆ. ಇದು ಅನ್ಯಾಯವಲ್ಲವೆ? ಈ ಸ್ಥಿತಿಯು ಜಗತ್ತಿನ ಯಾವ ಪ್ರಜಾ ಪ್ರಭುತ್ವದಲ್ಲಿಯೂ ಇಲ್ಲ."

ಸರದಾರರ ಹೇಳಿಕೆ.

ಸರದಾರ ವಲ್ಲಭಭಾಯಿ ಪಟೇಲರವರು ಧರ್ಮಾತ್ಮಾ ಮಾಲವೀಜಿಯವರ ಆಕ್ಷೇಪಣೆಗೆ ಉತ್ತರವಾಗಿ ಈ ಪ್ರಕಾರ ಪ್ರಕಟಿಸಿದ್ದಾರೆ.

"ಪಂಡಿತ ಮಾಲವೀಜಿಯವರ ಹತ್ತಿರ ನಾನು ಹಾಗೆ ಹೇಳಿದುದು ನಿಜ. ಮಿ. ಜಿನ್ನಾರವರ ಜಾತಿನಿರ್ಣಯದ ಉಪಸೂಚನೆಗೆ ಕಾಂಗ್ರೆಸ್ ಪಕ್ಷ ವಿರೋಧಿಸಬೇಕೆಂದೇ ತಾ. ೬ ನೆಯ ದಿನ ನಿರ್ಧರವಾಗಿತ್ತು. ಆದರೆ ಆ ಮೇಲೆ ಆ ಅಭಿಪ್ರಾಯವನ್ನು ವ್ಯತ್ಯಾಸಮಾಡಬೇಕಾಯಿತು. ಏಕೆಂದರೆ ಸರಕಾರಿ ಸಭಾಸದರು ಈ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ಕೊಡುವರೆಂದು ಗೊತ್ತಾಯಿತು. ಮುಂಚೆ ಅವರು ತಟಸ್ಥರಾಗಿರುತ್ತಾರೆಂದು ತಿಳಿದಿದ್ದರಿಂದ ಹಾಗೆ ಯೋಚಿಸಿತ್ತು."

ಶ್ರೀ ಅಣೆಯವರ ಅಭಿಪ್ರಾಯ.

ಇವರು ಪ್ರಕಟಿಸಿದ್ದರಲ್ಲಿ ಈ ಕೆಳಗಿನ ಸಂಗತಿಗಳಿವೆ—

"ಸರಕಾರ ಪಕ್ಷವು ಜಾತಿನಿರ್ಣಯದ ವಿಚಾರದಲ್ಲಿ ತಟಸ್ಥವಾಗಿರುವುದೆಂದು ಸರದಾರ ವಲ್ಲಭಭಾಯಿ ಪಟೇಲರು ಮತ್ತು ಕಾಂಗ್ರೆಸ್ ಪಕ್ಷದ ಪ್ರಮುಖರು ತಿಳಿದುಕೊಂಡದ್ದು ನಿಜ. ತಾ. ೭ ನೆಯ ದಿನ ಸರಕಾರ ಪಕ್ಷ ತಟಸ್ಥವಾಗುವುದಿಲ್ಲವೆಂಬುದು ಅವರಿಗೆ ತಿಳಿಯಿತು. ಆ ದಿನ ಪ್ರಾತಃಕಾಲ ೧೦ ಗಂಟೆಗೆ ನನ್ನ ಕಡೆ ಸರದಾರ ವಲ್ಲಭಭಾಯಿ ಪಟೇಲ ಮತ್ತು ಶ್ರೀ. ರಾಜಗೋಪಾಲಾಚಾರ್ಯರು ಬಂದು ಹೀಗೆ ಹೇಳಿದರು.

"ಕಾಂಗ್ರೆಸ್ ಪಕ್ಷ ಮತ್ತು ರಾಷ್ಟ್ರೀಯ ಪಕ್ಷ ಜಿನ್ನಾರವರ ಜಾತಿನಿರ್ಣಯದ ಉಪಸೂಚನೆಗೆ ವಿರೋಧಿಸಿದರೂ ಅದು ಸರಕಾರಿ ಪಕ್ಷದ ಬಹುಮತದಿಂದ ತೀರ್ಮಾನವಾಗುತ್ತದೆ. ಎಂದಮೇಲೆ ಕಾಂಗ್ರೆಸ್ ಪಕ್ಷ ವಿರೋಧಿಸಿ ಫಲವೇನು?"

ಇದಕ್ಕೆ ನಾನು ವಿರೋಧಿಸಿದೆನು ಇದು ಜಯಾಪಜಯಗಳ ಪ್ರಶ್ನೆಯಲ್ಲ. ತತ್ವದ ಪ್ರಶ್ನೆ. ಅದಕ್ಕಾಗಿ ಕಾಂಗ್ರೆಸ್ ಪಕ್ಷ ವಿರೋಧಿಸಲೇ ಬೇಕು. ಶ್ರೀ. ಭುಲಾಭಾಯಿಯವರು ಜಾತಿ ನಿರ್ಣಯವು ಮಾನ್ಯವೂ ಇಲ್ಲ, ಅಮಾನ್ಯವೂ ಇಲ್ಲ, ಎಂಬ ಉಪಸೂಚನೆಯನ್ನು ಕಾಂಗ್ರೆಸ್ ಪಕ್ಷದ ಪರವಾಗಿ ತರುವುದರಿಂದ ಕಾಂಗ್ರೆಸ್ಸಿನ ವಿಷಯದಲ್ಲಿ ತಪ್ಪುತಿಳುವಳಿಕೆಯುಂಟಾಗಲು ಅವಕಾಶವೇ ಇಲ್ಲ. ಆದಕಾರಣ ಕಾಂಗ್ರೆಸ್ ಪಕ್ಷವು ಜಿನ್ನಾರವರ ಈ ಉಪಸೂಚನೆಯನ್ನು ವಿರೋಧಿಸುವುದು ಅದರ ಕರ್ತವ್ಯವೆಂದು ನಾನು ಸ್ಪಷ್ಟ ತಿಳಿಸಿದೆನು."

ಕನ್ನಡದಲ್ಲಿ ಹೊಸದಾಗಿ ಪ್ರಕಟವಾಗುವ ಗ್ರಂಥಗಳ ವಿವರ.

ಎಲ್ಲ ಗ್ರಂಥಕರ್ತರಿಗೂ ಪ್ರಕಾಶಕರಿಗೂ ವಿಜ್ಞಾಪನೆ—

ಕನ್ನಡದಲ್ಲಿ ನಡೆಯುತ್ತಿರುವ ಬಗೆ ಬಗೆಯ ಗ್ರಂಥಾಭಿವೃದ್ಧಿಯ ವಿವರಗಳನ್ನು ಕ್ರಮವಾಗಿ ಸಂಗ್ರಹಮಾಡಿ ಲಿಖಿತ ರೂಪದಲ್ಲಿರಿಸುವುದು ಪರಿಷತ್ತಿನ ಒಂದು ಕರ್ತವ್ಯವಾಗಿದೆ. ಇದೇ ಉದ್ದೇಶದಿಂದ ಕಳೆದ ವರ್ಷ ಗ್ರಂಥಪ್ರದರ್ಶನವನ್ನು ನಡೆಸಿ ಆ ಸಂದರ್ಭದಲ್ಲಿ ಗ್ರಂಥ ಪ್ರಕಟನ ಕಾರ್ಯದ ಮುಖ್ಯಾಂಗಗಳ ವಿವರವನ್ನು ಸಾಧ್ಯವಿರುವ ಮಟ್ಟಿಗೂ ಸಂಗ್ರಹಿಸಿದ್ದಾಗಿದೆ. ಆ ಪ್ರದರ್ಶನವಾದಂದಿನಿಂದೀಚೆಗೆ ಎಂದರೆ

೧೯೩೪ ನೆಯ ಇಸವಿ ಜಾನವರಿಯಿಂದೀಚೆಗೆ ನಡೆದಿರುವ ಗ್ರಂಥಾಭಿವೃದ್ಧಿಯ ವಿವರಗಳನ್ನು ಆದಷ್ಟು ನಿಷ್ಕರ್ಷೆಯಾಗಿ ಸಂಗ್ರಹಿಸಬೇಕಾದ ಕಾರ್ಯ ಉಳಿದಿದೆ. ಆದಕಾರಣ ಕನ್ನಡದಲ್ಲಿ ಗ್ರಂಥ ಬರೆಯುವ ಮತ್ತು ಪ್ರಕಾಶಪಡಿಸುವ ಎಲ್ಲ ವ್ಯಾಪಾರ ಸಂಸ್ಥೆಗಳೂ, ಸಾಹಿತ್ಯ ಸಂಘಗಳೂ, ವ್ಯಕ್ತಿ ಮಹಾಶಯರೂ ತಮ್ಮ ತಮ್ಮ ಪ್ರಕಟನೆಗಳನ್ನು ಕುರಿತು ಸುದ್ದಿಯನ್ನು ಬರೆದು ಪರಿಷತ್ಪತ್ರಿಕೆಯ ಕಾರ್ಯಾಲಯಕ್ಕೆ ಕಳುಹಿಸಬೇಕೆಂದು ಕೋರುತ್ತೇವೆ. ಪರಿಷತ್ಪತ್ರಿಕೆಯಲ್ಲಿ ವಿಮರ್ಶೆಗಾಗಿ ಅನೇಕ ಗ್ರಂಥಗಳು ಬರುತ್ತವೆಯಾದರೂ, ಎಲ್ಲ ಗ್ರಂಥಗಳೂ ನಮ್ಮ ಕೈಸೇರುತ್ತವೆಯೆಂದು ನಾವು ಭಾವಿಸುವ ಹಾಗಿಲ್ಲ. ಎಷ್ಟು ಗ್ರಂಥಗಳು ಪ್ರಕಟವಾಗಿರುವ ಸಂಗತಿಯೇ ನಮಗೆ ಈಗ ತಿಳಿದುಬರುವ ಅವಕಾಶವಿಲ್ಲ. ಪರಿಷತ್ಪತ್ರಿಕೆಯ ಮುಂದಿನ ಸಂಚಿಕೆಯಿಂದ ಪ್ರತಿ ಸಂಚಿಕೆಯಲ್ಲಿಯೂ ಆಯಾ ಸಂಚಿಕೆಗೆ ಸಂಬಂಧ ಪಟ್ಟ ಮಾಸ ತ್ರಯದಲ್ಲಿಯೂ ಪ್ರಕಟವಾಗಿರುವ ಗ್ರಂಥಗಳ ಹೆಸರುಗಳನ್ನೂ, ಅವುಗಳ ಗ್ರಂಥಕರ್ತರು, ಪ್ರಕಾಶಕರು, ಗಾತ್ರ, ಆಕಾರ ಮೊದಲಾದ ವಿವರಗಳೊಡನೆ ಪಟ್ಟಿಮಾಡಿ ಪ್ರಕಟಗೊಳಿಸಬೇಕೆಂದು ಆಶೆಯಿದೆ. ಇದಕ್ಕೆ ಎಲ್ಲ ಗ್ರಂಥಕರ್ತರೂ ಮತ್ತು ಪ್ರಕಾಶಕರೂ ನೆರವಾದ ಹೊರತು ಈ ಉದ್ದೇಶ ನೆರವೇರಲಾರದು. ಗ್ರಂಥ ಪ್ರಕಾಶನದಲ್ಲಿ ಉದ್ಯುಕ್ತರಾಗಿರುವ ಸಮಸ್ತರೂ ಗ್ರಂಥಪ್ರಕಟವಾಗುವ ಸಮಯದಲ್ಲಿಯೇ ಈ ಕೆಳಗಿನ ವಿವರಗಳನ್ನು ಒಂದು ಕಾರ್ಡಿನಲ್ಲಿ ಬರೆದು ಪರಿಷತ್ಕಾರ್ಯಾಲಯಕ್ಕೆ ಕಳುಹಬೇಕೆಂದು ಕೋರುತ್ತೇವೆ:—

೧. ಪುಸ್ತಕದ ಹೆಸರು, ೨. ಪುಸ್ತಕದ ಅಡ್ಡ ಹೆಸರೇನಾದರೂ ಇದ್ದರೆ ಅದು. ೩. ಪುಸ್ತಕದ ವಿಷಯ, ೪. ಪುಸ್ತಕದ ಜಾತಿ, ೫. ಪುಸ್ತಕದ ಲೇಖಕರ ಹೆಸರು, ವಿಳಾಸ. ೬. ಪುಸ್ತಕದ ಪ್ರಕಟನ ಕರ್ತರ ಹೆಸರು, ವಿಳಾಸ. ೭. ಪುಸ್ತಕದ ಮೊದಲನೆಯ ಪ್ರಕಟನೆಯ ತಾರೀಖು. ೮. ಪುಸ್ತಕದ ಎಷ್ಟನೆಯ ಆವೃತ್ತಿಯದು. ೯. ಪುಸ್ತಕದ ಬೆಲೆ; ಉತ್ತಮ ಪ್ರತಿ, ಸಾಮಾನ್ಯ ಪ್ರತಿ. ೧೦. ಈ ಪುಸ್ತಕ ಇದುವರೆಗೆ ಒಟ್ಟು ಎಷ್ಟು ಪ್ರತಿ ಮುದ್ರಿತವಾಗಿವೆ. ೧೧. ವಿಶೇಷಾಂಶಗಳು (ದೊರೆಯುತ್ತಿರುವ ಬಹುಮಾನ ಇದ್ದರೆ ಅವು.)

ಪರಿಷತ್ತಿನ ಕಾರ್ಯ ವಿವರಗಳ ವರದಿ.

(೧-೪-೧೯೩೩ ರಿಂದ ೩೧-೧೨-೧೯೩೪ ವರೆಗೆ)

ಕರ್ನಾಟಕ ಸಾಹಿತ್ಯ ಪರಿಷತ್ತಿನ ತಾ. ೧-೪-೧೯೩೩ ರಿಂದ ೩೧-೧೨-೧೯೩೪ ವರೆಗಿನ ಕಾರ್ಯ ವಿವರಗಳ ವರದಿ ಕಳೆದ ಡಿಸೆಂಬರ್ ೨೮ ರಲ್ಲಿ ರಾಯಚೂರಿನಲ್ಲಿ ನಡೆದ ವಾರ್ಷಿಕಾಧಿವೇಶನದಲ್ಲಿ ಸದಸ್ಯರಿಂದ ಅಂಗೀಕೃತವಾಯಿತು. ಆ ವರದಿಯ ಪ್ರತಿಗಳನ್ನು ಅಲ್ಲಿಯ ಅಧಿವೇಶನಕ್ಕೆ ಬಂದಿದ್ದ ಸುಮಾರು ೬೩ ಮಂದಿ ಸದಸ್ಯರಿಗೆ ಕೊಡಲಾಯಿತು! ಅಲ್ಲಿಗೆ ಬಾರದಿದ್ದ ಸುಮಾರು ೨೦೦ ಮಂದಿ ಸದಸ್ಯರಿಗೆ ವರದಿಗಳ ಪ್ರತಿಯನ್ನು ಅಂಚೆಯ ಮೂಲಕವೂ ಆಳಿನ ಮೂಲಕವೂ ಕಳುಹಿಸಲಾಗಿದೆ. ಈಗ ವರದಿಯ ಪ್ರತಿಗಳು ಪರಿಷತ್ತಿನಲ್ಲಿ ಸ್ವಲ್ಪ ಮಾತ್ರವೇ ಮಿಕ್ಕಿವೆ. ಯಾರಾದರೂ ಬಯಸಿದಲ್ಲಿ ಕಾರ್ಯದರ್ಶಿಯವರು, ಪ್ರತಿಗಳು ಉಳಿದಿದ್ದರೆ, ಸಂತೋಷದಿಂದ ಕಳುಹಿಸುವರು. **ಗೌ. ಕಾರ್ಯದರ್ಶಿ**

ರಾಷ್ಟ್ರೀಯ ಸಭೆಯವರಿಗೊಂದು ಪ್ರಶ್ನೆ.

ಧರ್ಮವೀರ ಭಾಯಿ ಪರಮಾನಂದರು "ಹಿಂದು" ಎಂಬ ಹಿಂದಿ ಪತ್ರಿಕೆಯಲ್ಲಿ "ಯುದ್ಧವೇನೋ ನಿಂತಿತು; ಮುಂದೇನು?" ಎಂಬ ಲೇಖನವನ್ನು ಬರೆದು ರಾಷ್ಟ್ರೀಯ ಸಭೆಯವರಿಗೆ ಹೀಗೆ ಪ್ರಶ್ನೆ ಮಾಡಿದ್ದಾರೆ—

"ಇಲ್ಲಿಯ ವರೆಗೂ ಮುಸಲ್ಮಾನರ ಬೆನ್ನುಹತ್ತಿ ಹೋದಿರಿ. ಅವರು ತಮ್ಮ ಜಾತಿಯ ಹಿತದ ಕಡೆಗೇನೇ ನೋಡುತ್ತಾರೆಂಬುದು ಮೊನ್ನೆ ಅಸೆಂಬ್ಲಿಯಲ್ಲಿ ನಿಮ್ಮ ಎರಡೂ ಉಪಸೂಚನೆಗಳಿಗೆ ಅವರು ವಿರೋಧಿಸಿದ್ದರಿಂದಲಾದರೂ ತಿಳಿಯಲಿಲ್ಲವೆ? ಮುಸಲ್ಮಾನರ ಬೆನ್ನು ಹತ್ತಿದರೆ ರಾಷ್ಟ್ರದ ತೃಷ್ಣೆ ನಿವಾರಣೆಯಾಗುವುದೇ? ನಿಮಗೆ ತೋರುವ ಆ ಮೃಗಜಲ ನಿಜವಾದ ಜಲಾಶಯವಲ್ಲವೆಂಬುದು ಈಗಲಾದರೂ ತಿಳಿಯಿತೆ?

ಇನ್ನು ಮೇಲಾದರೂ ರಾಷ್ಟ್ರೀಯ ತತ್ವಗಳನ್ನೇ ನಂಬಿ ಅವುಗಳಿಗಾಗಿಯೇ ಹೋರಾಡಿ ದೇಶದಲ್ಲಿ ನಿಜವಾದ ರಾಷ್ಟ್ರಭಾವನೆಯನ್ನು ಬೆಳೆಸುವಿರೋ ಮುಸಲ್ಮಾನರ ಬೆನ್ನುಹತ್ತಿ ಹೋಗುವಿರೊ?" ನೋಡಬೇಕು ಮುಂದಿನ ಕಾರ್ಯಕಲಾಪ.

ನಾಳಿನ ಗುಜರಾಥ!

ಶ್ರೀ ಕನ್ಹಯ್ಯಾಲಾಲ ಮುನಸಿಯವರು ಗುಜರಾಥದ ಬಗ್ಗೆ ಹೀಗೆ ಹೇಳಿದ್ದಾರೆ—ನಾಳಿನ ಗುಜರಾಥವು ದೃಷ್ಟಿಗೋಚರವಾಗಹತ್ತಿದೆ. ಐಕ್ಯ, ಸ್ವಾತಂತ್ರ್ಯ, ಸಾಮರ್ಥ್ಯ ಮತ್ತು ಸಮೃದ್ಧಿಗಳು ನಾಲ್ಕು ದಿಕ್ಕಿನಿಂದಲೂ ವೃಷ್ಟಿಗರೆಯುತ್ತಲಿವೆ. ಅದರ ಭೂಮಿಯು ವಿಪುಲ ಬೆಳೆಯನ್ನು ಕೊಡತ್ತಲಿದೆ. ಅದರ ವ್ಯಾಪಾರವು ಬಲಿಷ್ಠವಾಗುತ್ತಲಿದೆ. ಅದರ ನೌಕಾ ವ್ಯವಸಾಯವು ಪುನರುಜ್ಜೀವನ ಹೊಂದಿದೆ. ನವೀನ ಸಂಸ್ಕೃತಿ ನವೀನ ಪರಂಪರೆಗಳಿಂದ ಸುಸಜ್ಜಿತರಾಗಿ ಸ್ತ್ರೀ ಪುರುಷರು ಉಚ್ಚ ವಾಙ್ಮಯ ರೂಪದಲ್ಲಿ ತಮ್ಮ ಆಕಾಂಕ್ಷೆಗಳನ್ನು ಪ್ರಕಟಗೊಳಿಸುತ್ತಿರುವರು. ಇಂಥ ಮುಂದಿನ ಗುಜರಾಥವು ನನ್ನ ಕಣ್ಮುಂದೆ ನಾಟ್ಯವಾಡುತ್ತಲಿದೆ. ಆದರೆ ಹಿಂದುಸ್ಥಾನವನ್ನು ಬಿಟ್ಟು ಗುಜರಾಥದ ವಿಚಾರವೇ ಇಲ್ಲ. ಗುಜರಾಥದ ಸಂಬಂಧವು ಮಹಾರಾಷ್ಟ್ರದೊಡನೆ ಇದೆ, ಕರ್ನಾಟಕದ ಸಂಗಡವಿದೆ; ಸಿಂಧ ಮಾರವಾಡ ರಜಪುತಸ್ಥಾನಗಳ ಸಂಗಡವಿದೆ. ರಾಷ್ಟ್ರೀಯ ಬುದ್ಧಿಯು ಪ್ರಾಂತಾಭಿಮಾನದ ಶಿರದ ಮೇಲೆ ಕೂಡ್ರಬಲ್ಲದು!

ಸಿಲೆಂಡರ್ ಮಶಿನ್
ಬೇಕಾಗಿದೆಯೆ?

ಹಾಗಾದರೆ ನಮ್ಮಲ್ಲಿದೆ ಡಾವಸನ್ ಎಂಡ್ ಸನ್ಸ್ ಕಂಪನಿಯದು ಉತ್ತಮ ಸ್ಥಿತಿಯಲ್ಲಿ ಕೆಲಸಮಾಡುತ್ತಿದೆ. ಇನ್ನರ್ ಸೈಡ್ ಛೇಸ್ 29¼ + 35¼ ಸೈಜಿನದು. ಪಂಖಾ ಸಹಿತ ಇದ್ದದ್ದು. ಫೋಲ್ಡಿಂಗ್ ರೋಲ್ಸುಗಳು ಸಹಿತ ಕೊಡಲ್ಪಡುವುದು.

ಹೆಚ್ಚಿನ ಸಂಗತಿಗಳನ್ನು ಪತ್ರಮುಖೇನ ಅಥವಾ ಸಮಕ್ಷಮ ತಿಳಿದುಕೊಳ್ಳಬಹುದು. **ಮ್ಯಾನೇಜರ್**

ಶ್ರೀ ಲಿಂಗರಾಜ ಆರ್ಟ ಪ್ರೆಸ್, ಧಾರವಾಡ.

ವಿ ವಿ ಧ ವಿ ಷ ಯ .

ಅಮೇರಿಕೆಯಲ್ಲಿ ಬಾಲ ಬೃಹಸ್ಪತಿ!

ಸದ್ಯಕ್ಕೆ ಅಮೇರಿಕೆಯ ವರ್ತಮಾನ ಪತ್ರಗಳಲ್ಲೆಲ್ಲ ಒಬ್ಬ ಬಾಲಕನ ಅಗಾಧ ಬುದ್ಧಿ ಶಕ್ತಿಯ ಬಗ್ಗೆ ವಿಸ್ತಾರವಾದ ಲೇಖನೆಗಳು ಪ್ರಕಟವಾಗುತ್ತಿವೆ. ಆ ಬಾಲಕನ ಹೆಸರು ಆರ್ಥರಗ್ರೀನ ವುಡ್ ಎಂದು. ಅವನು ಜನ್ಮಿಸಿ ೨೦ ತಿಂಗಳವರೆಗೆ ಒಂದು ಶಬ್ದವನ್ನು ಸಹ ಮಾತಾಡುತ್ತಿರಲಿಲ್ಲ. ಆ ಮೇಲೆ ಅವನು ಒಂದು ದಿನ ಮಾತಾಡಲು ಪ್ರಾರಂಭಿಸಿದನು. ಅವನು ಮಾತಾಡಿದ ಮೊದಲನೆಯ ವಾಕ್ಯವು ವ್ಯಾಕರಣ ಶುದ್ಧವಾಗಿಯೇ ಇದ್ದಿತು. ಕೂಡಲೆ ಅವನು ಓದಲಿಕ್ಕೆ ಕಲಿತನು. ಅವನ ಬುದ್ಧಿ ಶಕ್ತಿಯು ಒಳ್ಳೇ ಪ್ರಬಲವಾದುದು. ಮೂರನೆಯ ವರ್ಷದಲ್ಲಿಯೇ ಅವನು ತನ್ನದೊಂದು ಸಂಕ್ಷಿಪ್ತ ಲಿಪಿಯನ್ನು ಸಿದ್ಧಮಾಡಿದನು. ರೇಡಿಯೋದಲ್ಲಿ ಯಾವದಾದರೂ ಪದಗಳು ಒಳ್ಳೇ ಸರಸ ಕಂಡರೆ ತನ್ನ ಲಿಪಿಯಲ್ಲಿ ಬರೆದುಕೊಂಡು ಕೂಡಲೆ ಪಾಠಮಾಡುವನು. ಇದೇ ವರ್ಷದಲ್ಲಿಯೇ ಅವನು ಫ್ರೆಂಚಭಾಷೆ ಕಲಿತನು. ಈ ಭಾಷೆಯಲ್ಲಿಯೇ ಅವನು ಟಾಯಿಪ ರಾಯಿಟರಿನಿಂದ ೩-೪ ಗಷ್ಟು ಹಾಳಗಳನ್ನು ಟಾಯಿಪು ಹೊಡೆದನು. ಟಾಯಿಪರಾಯಿಟರಿನಲ್ಲ ಇವನ ಹಸ್ತ ಚಾಪಲ್ಯವನ್ನು ಕಂಡು ಪ್ರಸಿದ್ಧ ಟಾಯಿಪ ರಾಯಿಟರರೂ ಚಕಿತರಾದರು. ಗಣಿತದಲ್ಲಿಯೂ ಅವನ ಕೈಹಿಡಿಯುವವರು ಯಾರೂ ಇಲ್ಲ. ಈಗ ಅವನಿಗೆ ೭॥ ವರ್ಷ ವಯಸ್ಸು. ವರ್ತಮಾನಪತ್ರದ ಸುದ್ದಿಗಾರರು ಅವನ ಸುತ್ತಲೂ ನೆರೆದಿರುತ್ತಾರೆ. ಅವರನ್ನು ಕುರಿತು ಅವನು—'ಅಪ್ಪಗಳಿರಾ, ವರ್ತಮಾನ ಪತ್ರದಲ್ಲಿಯ ಪ್ರಸಿದ್ಧಿಗೆ ಬೆಲೆಕೊಡುವವನು ನಾನಲ್ಲ' ಎಂದು ಬಿಟ್ಟನು.

ಪೂರ್ವಜನ್ಮ ಸಂಸ್ಕಾರ ವಶದಿಂದ ಇಂಥ ಅನೇಕ ಬುದ್ಧಿಶಾಲಿಗಳು ಉಂಟಾದ ಉಲ್ಲೇಖವಿದೆ. ಈಗಲೂ ಅನೇಕ ಕಡೆಗಳಲ್ಲ ಇಂಥ ಅಲೌಕಿಕ ಬುದ್ಧಿಶಾಲಿಗಳಿರುವರು. ಸಂಸ್ಕಾರದ ಪ್ರಭಾವವು ಎಷ್ಟೆಂಬುದು ಇದರಿಂದ ತಾನೇ ವಿದಿತವಾಗುವದು.

ಪಂಜಾಬದ ನಾವಿಕಪಟು.

ಹಿಂದೀ ವಿದ್ಯಾರ್ಥಿಗಳಿಗೆ ನೌಕಾ ಶಿಕ್ಷಣವನ್ನು ಕೊಡುವದಕ್ಕಾಗಿ ಸರಕಾರದವರು ಮುಂಬಯಿಯಲ್ಲಿ 'ಡಫರಿನ್' ಎಂಬ ಉಗಿ ಹಡಗವನ್ನಿಟ್ಟದ್ದಾರೆ. ಈ ಶಿಕ್ಷಣ ಕ್ರಮದಲ್ಲಿ ಒಬ್ಬ ಪಂಜಾಬಿ ವಿದ್ಯಾರ್ಥಿಯು ಎಲ್ಲ ಅಂಶಗಳಲ್ಲೂ ಅದ್ವಿತೀಯ ಪ್ರಾವೀಣ್ಯವನ್ನು ಪಡೆದಿರುವನು. ಅವನ ಹೆಸರು ರಘುವೀರಸಿಂಗ ಬಾಬಾ. ಅವನು ವಿದ್ಯೆಕಲಿಯುವಾಗ್ಗೆ ಕೆಳಗಿನ ತರಗತಿಗಳಿಂದ ಹಿಡಿದು ಎಲ್ಲಾ ಪರೀಕ್ಷೆಗಳಲ್ಲೂ ಪಾರಿತೋಷಕಗಳನ್ನು ದೊರಕಿಸಿದ್ದಾನೆ. ಬಾಂಬೆ ಪೋರ್ಟಟ್ರಸ್ಟ ಎಂಬ ಸಂಸ್ಥೆಯವರು ಪ್ರತಿತಿಂಗಳ ನೂರು ರೂಪಾಯಿಗಳಂತೆ ಮೂರು ವರ್ಷಗಳವರೆಗೆ ಕೊಡಲಿರುವ ವಿದ್ಯಾರ್ಥಿ ವೇತನವನ್ನು ಈತನು ಪಡೆದಿರುವನು. ಆಕ್ಸಫೋರ್ಡ ವಿಶ್ವವಿದ್ಯಾಲಯದವರು ನಾವಿಕ ವಿದ್ಯೆಯ ಬಗ್ಗೆ ಬರೆದ ಸರ್ವೋತ್ಕೃಷ್ಟ ನಿಬಂಧಗಳಿಗೆ ಬಹುಮಾನ ಕೊಡಲು ನಿರ್ಣಯಿಸಿದ್ದರು. ಅವುಗಳಲ್ಲಿ ಈತನು ಬರೆದ ನಿಬಂಧಿಗೇನೇ ಅಗ್ರ ಬಹುಮಾನವು ದೊರೆಯಿತು.

ಇದರಲ್ಲಿ ಆಶ್ಚರ್ಯಕರವಾದ ಸಂಗತಿಯೆಂದರೆ ಈ ಅಸಾಮಾನ್ಯ ನಾವಿಕ ಪಟುವು ವಾಸಿಸುವ ಪಂಜಾಬ ಪ್ರಾಂತವು ಸಮುದ್ರದಿಂದ ಬಹು ದೂರವಾಗಿದ್ದು, ಯಾವ ಪ್ರಾಂತವೂ ಇದರಷ್ಟು ಸಮುದ್ರದಿಂದ ಅಲಿಪ್ತವಾಗಿರಲಿಕ್ಕಿಲ್ಲ. ಹೀಗಿದ್ದು ಇಂಥ ಪ್ರಾಂತದಲ್ಲಿಯ ಒಬ್ಬ ವಿದ್ಯಾರ್ಥಿಯು ಇಂಥ ಅಸಾಧಾರಣ ಜ್ಞಾನವನ್ನು ಸಂಪಾದಿಸಿರುವದು ಭಾರತಭೂಮಿಗೆ ಗೌರವದ ಮಾತಾಗಿದೆ.

ಜ್ಞಾನವು ಈಶ್ವರನು ದಯಪಾಲಿಸಿದ ಪವಿತ್ರ ದಾನವಾಗಿದೆ. ಆ ಪರಮಾತ್ಮನು ಇಂಥವರಿಗೇ ಅದನ್ನು ದಯಪಾಲಿಸುವನೆಂದು ಯಾರು ನಿಶ್ಚಯಿಸ ಬಲ್ಲರು?

ವಿಚಿತ್ರ ನಡತೆ!

ಪಂಜಾಬದ ಗವ್ಹರ್ನರರಾದ ಸರ ಹರ್ಬರ್ಟ ಇಮರ್ಸನ್‌ರವರು ಒಮ್ಮೆ ಒಂದು ಗುಡ್ಡಗಾಡು ಪ್ರದೇಶದಲ್ಲಿಯ ಒಂದು ಹಳ್ಳಿಗೆ ಹೋಗಿದ್ದರಂತೆ. ಆ ವರುಷ ಅಲ್ಲಿ ಮಳೆಯೇ ಆಗಿದ್ದಿಲ್ಲ. ಜನರೆಲ್ಲರೂ ಮಳೆಯ ಕಡೆಗೇನೇ ಮೋರೆಮಾಡಿ ಕುಳಿತಿದ್ದರು. ಆಗ ಅವರಲ್ಲಿ ಕೆಲವರು ಗವ್ಹರ್ನರರ ಕಡೆಗೆ ಬಂದು—' ಮಳೆ ಬೀಳುವಂತೆ ಮಾಡಿರಿ ' ಎಂದು ಕೇಳಿಕೊಂಡರು. 'ಅದಕ್ಕೆ ನಾನು ಮಾಡಬೇಕಾದುದೇನು? ' ಎಂದು ಗವ್ಹರ್ನರರು ಅನ್ನಲು ಆ ಜನರು— " ಉಪಾಧ್ಯಾಯರನ್ನೆಲ್ಲ ಕೂಡಿಸಿ ಅವರನ್ನೆಲ್ಲ ಮಳೆ ಬೀಳುವವರೆಗೆ ಬರೀ ಮೈಯಿಂದ ಬಿಸಲಿನಲ್ಲಿ ಎದ್ದು ನಿಲ್ಲಿಸಿರಿ" ಎಂದು ವಿಜ್ಞಾಪಿಸಿಕೊಂಡರು. ಗವ್ಹರ್ನರರಿಗೆ ಈ ವಿಚಿತ್ರ ನಡತೆಯಿಂದ ಒಳ್ಳೇ ಆಶ್ಚರ್ಯವಾಯಿತು. ಅವರು ಕುತೂಹಲದಿಂದ— " ಹಾಗಾದರೆ ಒಮ್ಮೊಮ್ಮೆ ಅತಿವೃಷ್ಟಿಯಾದರೆ ಏನು ಮಾಡುವಿರಿ? " ಎಂದು ಕೇಳಲು " ಅದಕ್ಕೂ ಅದೇ ಉಪಾಯ; ಮಳೆ ನಿಲ್ಲುವವರೆಗೆ ಉಪಾಧ್ಯಾಯರನ್ನು ಬರೀಮೈಯಿಂದ ಮಳೆಯಲ್ಲಿ ನಿಲ್ಲಿಸಿಬಿಡುವೆವು" ಎಂದು ಆ ಮುಗ್ಧ ಹಳ್ಳಿಗರು ಹೇಳಿದರು!

ಹೀಗಿರಬೇಕು ಗುರುಭಕ್ತಿ!!

ಜಾಹೀರಾತ.

ಸರ್ವಜನರಲ್ಲಿ ವಿಜ್ಞಾಪಿಸುವದೇನಂದರೆ—

ಈ ಜಾಹೀರಾತಿನಿಂದ ತಿಳಿಸುವದೇನಂದರೆ ನನ್ನ ಸಹೋದರ ನಾದ ಬಸಣ್ಣ ಈತನು ಮನೆ ಬಿಟ್ಟು ಒಂದು ವರುಷವಾಯಿತು. ಈತನ ಸ್ವಭಾವ ಹುಚ್ಚು, ವಯಸ್ಸು ೪೦, ಬಣ್ಣ ಸಾಧಾರಣ ಕೆಂಪು, ಸಾಧಾರಣ ನಿಲುವು, ದುಂಡು ಮುಖ, ಬಲ ಗಲ್ಲದ ಮೇಲೆ ಒಂದು ಹಸರು ಬಣ್ಣದ ಹೆಬ್ಬೆರಳಿನಷ್ಟು ಕಲೆ ಇದ್ದು ಅದರ ಮೇಲೆ ಕೂದಲು ಇವೆ. ಒಮ್ಮೊಮ್ಮೆ ಗೋಣು ಹೊರಳಿಸುವನು. ಮತ್ತು ಶೌಚಕ್ಕೆ ಕೂತರೆ ೨-೩ ತಾಸಾದರು ಕೂಡುವನು. ಮತ್ತು ಕ್ಷೌರಮಾಡಿಸುವದಕ್ಕೆ ಬಹಳ ಪ್ರೀತಿ. ಮೀಸೆಸಹ ತೆಗೆಸುವನು. ಬಾಲ, ವೃದ್ಧರಿಗೆ ಸಹ ತಂತ್ಯಾ, ತಾತಾ ಅನ್ನುವನು. ತನ್ನಷ್ಟಕ್ಕೆ ತಾನೆ ಮರಿಯಪ್ಪ ಪಂಪಣ್ಣ, ಟಾಕಣ್ಣ ಎಂದು ಅನ್ನುತ್ತಾನೆ. ಹೆಸರು ಕೇಳಿದರೆ ಬಸಣ್ಣನೆಂದು ಹೇಳುವನು. ಹುಡುಗರು ತಡವಿದರೆ ಚೀರುವನು. ಮತ್ತು ಹಸ್ತ ತಿರಿವಿ ಹಿಡಿದು ಶಂಖಹಚ್ಚುವನು. ಇಷ್ಟು ಚಿಹ್ನಗಳನ್ನು ಕಂಡರೆ ದಯವಿಟ್ಟು ತಮ್ಮಲ್ಲಿ ಇರಿಸಿಕೊಂಡು ನಮಗೆ ತಿಳಿಸಿದರೆ ನಿಮಗೆ ೧೦ ರೂ. ಇನಾಮು ಕೊಡುತ್ತೇವೆ ತಿಳಿದಿರಬೇಕು.

ನಮ್ಮ ವಿಳಾಸ:— ಪಂಪಣ್ಣ ಗಡ್ಡದ ದೇವಾಂಗ

ಮುಕ್ಕಾಂ, ಪೋಸ್ಟ ಮಸ್ಕಿ, ತಾಲೂಕಾ

ಲಿಂಗಸೂಗೂರ ಜಿಲ್ಲಾ ರಾಯಚೂರ,

ಪ ತ್ರ ಗ ಳ ಸಾ ರಾ ಂ ಶ.

ವಿದ್ಯಾವರ್ಧಕ ಗುರುಕುಲ ಕುಕನೂರ, ಜಿ. ಕೊಪ್ಪಳ.

ಆಲೀಜನಾಬ ನವಾಬ ಸಾಲಾರಜಂಗ ದೊರೆಗಳವರು ಕುಕನೂರ ಪಾಠಶಾಲೆಯು ಮಾಡುತ್ತಿರುವ ಜನತಾಸೇವೆಯಿಂದ ಸಂತುಷ್ಟರಾಗಿ ತಾವು ಮೊದಲು ಈ ಸಂಸ್ಥೆಗೆ ಕೊಡುತ್ತಿದ್ದ ೨೫ ರೂ. ಮಾಸಾಶನವನ್ನು ಹೆಚ್ಚಿಸಿ ತಿಂಗಳೊಂದಕ್ಕೆ ೧೦೦ ರೂ. ಕೊಡುವಂತೆ ಅಪ್ಪಣೆ ಕೊಡಿಸಿದ್ದಾರೆ. ಈ ರೀತಿಯಾಗಿ ಅವರು ವಿದ್ಯಾದಾನ ಸಂಸ್ಥೆಗಳಿಗೆ ಮುಕ್ತಹಸ್ತದಿಂದ ಸಹಾಯಮಾಡಿ ಶಿಕ್ಷಣ ಪ್ರಸಾರ ಕಾರ್ಯಕ್ಕೆ ಕೈನೀಡುತ್ತಿರುವದು ಪ್ರಶಂಸನೀಯವಾಗಿದೆ. ಕಳೆದ ಹನ್ನೆರಡು ವರುಷಗಳಿಂದ ಈ ಜಿಲ್ಲೆಯ ಹಳ್ಳಿಯ ಪ್ರಾಂತಗಳಲ್ಲಿ ಶಿಕ್ಷಣ ಸೇವೆಯನ್ನು ಮಾಡುತ್ತಿರುವ ಈ ಸಂಸ್ಥೆಗೆ ನವಾಬ ಸಾಹೇಬರು ಮಾಡಿದ ಅಭಿನಂದನೀಯ ಸಹಾಯಕ್ಕಾಗಿ ಸಂಸ್ಥೆಯ ಕಾರ್ಯಕಾರೀ ಮಂಡಲದವರು ಮತ್ತು ಎಲ್ಲ ಶಿಕ್ಷಣ ಪ್ರೇಮಿಗಳು ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುವರು. ಕೊಪ್ಪಳದಲ್ಲಿ ಒಂದು ಸರಕಾರೀ ಮಿಡ್ಲಸ್ಕೂಲ ಇದೆ. ಮತ್ತು ನಮ್ಮ ಈ ಕುಕನೂರ ಪಾಠಶಾಲೆಯೂ ಗ್ರ್ಯಾಂಟ ಪಡೆದಿರುವ ೨ ನೇ ಮಿಡ್ಲಸ್ಕೂಲ. ೧೩೩೭ ನೇ ಫಸಲಿಯಲ್ಲಿಯೇ ನಿಜಾಮ ಸರಕಾರದ ವಿದ್ಯಾಖಾತೆಯವರಿಂದ ಮಿಡ್ಲ ತರಗತಿಯಲ್ಲಿ ಅಧಿಕೃತವಾಗಿ ನಡೆದು ಇದೇ ಜಿಲ್ಲೆಯ ಎರಡನೆಯ ತಾಲೂಕಿನಲ್ಲಿ ಶಿಕ್ಷಣ ಸೇವೆಗೈಯುತ್ತಲಿದೆ. ಹೀಗೆ ಈ ಜಿಲ್ಲೆಯಲ್ಲಿ ಎರಡು ಮಿಡ್ಲ ಸ್ಕೂಲಗಳು ಕೆಲಸಮಾಡುತ್ತಿರುವದು ಸಂಸ್ಥಾನದ ಪ್ರಜೆಗಳಿಗೆ ಅಭಿಮಾನಾಸ್ಪದವೂ ಆ ನವಾಬಸಾಹೇಬರವರಿಗೆ ಭೂಷಣಾಸ್ಪದವೂ ಆಗಿರುವದರಲ್ಲಿ ಸಂದೇಹವಿಲ್ಲ.

ಸಂಸ್ಥೆಯು ತನ್ನ ಹನ್ನೆರಡನೆಯ ವರ್ಷವನ್ನು ಮುಗಿಸುವಷ್ಟರಲ್ಲಿಯೇ ನೂರರಷ್ಟು ಸುಶಿಕ್ಷಿತ ವಿದ್ಯಾರ್ಥಿಗಳು ಸಂಸ್ಥೆಯಿಂದ ಹೊರಬಿದ್ದು ಹೈದ್ರಾಬಾದ, ರಾಯಚೂರು, ಗುಲಬರ್ಗಾ, ಧಾರವಾಡ ಮುಂತಾದ ಸ್ಥಳಗಳಲ್ಲಿ ಉಚ್ಚ ಶಿಕ್ಷಣವನ್ನು ಪಡೆಯುತ್ತಲಿದ್ದಾರೆ. ಹೊರಗಿನಿಂದ ವಿದ್ಯಾರ್ಥಿಗಳು ಬರುತ್ತಿರುವದರಿಂದಲೂ ದೂರ ದೂರದ ಮಹನೀಯರು ಸಂಸ್ಥೆಯನ್ನು ಸಂದರ್ಶಿಸುತ್ತಿರುವದರಿಂದಲೂ ಕುಕನೂರ ಹೆಸರೂ ಸರ್ವತೋಮುಖವಾಗುವದಲ್ಲದೆ ಆ ನವಾಬ ಸಾಹೇಬರೂ ಸರ್ವ ಗೌರವಾರ್ಹರಾಗುವದರಲ್ಲಿ ಆಶ್ಚರ್ಯವೇನಿದೆ?

ಹೊಸ ಆಯ್ಕೆಗನುಸಾರವಾಗಿ ಸಂಸ್ಥೆಯ ಕಾರ್ಯಕಾರೀ ಮಂಡಳವು ಕೆಳಗಿನಂತಿದೆ:—

ಅಧ್ಯಕ್ಷರು:—ಶ್ರೀಮಾನ್ ಗುರುರಾವ ದೇಸಾಯಿ ವಕೀಲ ಹೈಕೋರ್ಟ ಕೊಪ್ಪಳ.

ಉಪಾಧ್ಯಕ್ಷರು:—(೧) ಬಿಂದೂರಾವ ಟಂಕಸಾಲಿ ಡಾಕ್ಟರ ಕೊಪ್ಪಳ. (೨) ಭವಾನಸಿಂಗರಾವ ವಕೀಲ ಹೈಕೋರ್ಟ ಕೊಪ್ಪಳ.

ಕಾರ್ಯದರ್ಶಿ:— ಶ್ರೀನಿವಾಸರಾವ ದೇಸಾಯಿ ನಿಟ್ಟಾಲಿ.

ಸಂಸ್ಥಾಪಕ, ಸಂಚಾಲಕ, ಕೋಶಾಧ್ಯಕ್ಷ:—ರಾ. ಬಿ. ದೇಸಾಯಿ ಬೆಣಕಲ್ಲ.

ನಾನಾ ವೃತ್ತಿ, ಸತ್ಕ್ರಿಯ ಉಚ್ಚವಿಚಾರ ಮತ್ತು ಸಹಿಷ್ಣುತೆಯ ವ್ಯಾಪಕ ದೃಷ್ಟಿ ಇವೇ ಸಂಸ್ಥೆಯ ಧ್ಯೇಯ ಮತ್ತು ಆದರ್ಶಗಳಾಗಿವೆ. ಈ ಪವಿತ್ರ ಧ್ಯೇಯಗಳಿಂದೊಡಗೂಡಿ ಈ ಸಂಸ್ಥೆಯು ಆ ನವಾಬ ಸಾಲಾರಜಂಗ ದೊರೆಗಳವರ ಉದಾರಾಶ್ರಯದ ಕೆಳಗೆ ಉತ್ತರೋತ್ತರವಾಗಿ ಬೆಳೆದು ಸಂಸ್ಥೆಯ ಮತ್ತು ದೊರೆಗಳ ಕೀರ್ತಿಯು ಮುಂದಾದರೂ ಸರ್ವತ್ರ ಪಸರಿಸಲೆಂದು ಬಯಸಿ ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ. ಕಾರ್ಯದರ್ಶಿ.

ಹುನಗುಂದ.

ತಾ. ೮-೩-೩೫ ನೇ ಶನಿ ದಿವಸ ಶ್ರೀಯುತ ಹುಚ್ಚಪ್ಪಾ ಕೆಂದೂರ ಇವರ ಅಧ್ಯಕ್ಷತೆಯ ಕೆಳಗೆ ಕರ್ನಾಟಕ ಏಕೀಕರಣದ ಬಗ್ಗೆ ಸಭೆಗೂಡಿ ನಾ|| ವ್ಹಾಯಿಸ್‌ರಾಯರಿಗೂ, ಅಸೆಂಬ್ಲಿಯ ಅಧ್ಯಕ್ಷರಿಗೂ ಶ್ರೀಯುತ ಭೂಲಾಭಾಯಿ ದೇಸಾಯರಿಗೂ ಮತ್ತು ದೇ|| ಹೊಸಮನಿ ಸಿದ್ದಪ್ಪನವರಿಗೂ ತಾರಿನಿಂದ ಠರಾವುಗಳು ಕಳಿಸಲ್ಪಟ್ಟವು. ಅದರಂತೆ ಕಿ. ಕ. ಸ. ಅಧ್ಯಕ್ಷರಾದ ಶ್ರೀಯುತ ಬಸಪ್ಪ ನಾಗರಾಳ ಇವರಿಂದ ವ್ಹಾಯಿಸ್‌ರಾಯರಿಗೂ ದೇ|| ಹೊಸಮನಿಯವರಿಗೂ ಠರಾವುಗಳು ಕಳಿಸಲ್ಪಟ್ಟವು. ಇದಲ್ಲದೆ ಹುನಗುಂದ ತಾಲೂಕ ಕೆಳಗಿನ ಮುಖ್ಯ ಮುಖ್ಯ ಗ್ರಾಮಗಳಾದ ಇಳಕಲ್ಲ, ಸೂಳಭಾವಿ, ಅಮೀನಗಡ, ಕಮತಗಿ, ಬೇವಿನಮಟ್ಟಿ, ಬನ್ನಿಹಟ್ಟಿ ಅಮರಾವದಿಗಿ ವಗೈರೆ ಗ್ರಾಮಗಳ ಮುನ್ಸಿಪಾಲ್ಟಿ, ಸಹಕಾರಿ ಸಂಘ, ವ್ಯಾಪಾರಿ ಸಂಘ, ಮತ್ತು ರೈತ ಸಂಘಗಳ ವತಿಯಿಂದ ಬೇರೆ ಬೇರೆ ತಾರುಗಳು ವ್ಹಾಯಿಸ್‌ರಾಯರಿಗೂ ಮತ್ತು ದೇ|| ಹೊಸಮನಿಯವರ ಕಡೆಗೂ ಕಳಿಸಲ್ಪಟ್ಟವೆ. ಇದೇ ತಿಂಗಳ ೧೪ ನೇ ತಾರೀಖಿಗೆ ಅಸೆಂಬ್ಲಿಯಲ್ಲಿ ವಿಚಾರಣೆಗೆ ತೆಗೆದುಕೊಳ್ಳತಕ್ಕದ್ದು ಕೆಲವೊಂದು ಕಾರಣಗಳ ಮೂಲಕ ಮುಂದಿನ ಅಧಿವೇಶನ ಕಾಲಕ್ಕೆ ವಿಚಾರವಾಗುವದದೆ. ಕಾರಣ ಕರ್ನಾಟಕದ ಎಲ್ಲ ಭಾಗದ ಜನರು ಕರ್ನಾಟಕ ವ್ಯಾಪಾರಿಸಂಘದ ಗೌರವ ಕಾರ್ಯದರ್ಶಿಗಳ ಕಡಿಯಿಂದ ತಮ್ಮ ಕಡೆಗೆ ಬರುವ ನಮೂನೆಯಲ್ಲಿ ಠರಾವಮಾಡಿ ನಾ|| ವ್ಹಾಯಿಸ್‌ರಾಯರ ಕಡೆಗೂ ಕರ್ನಾಟಕದ ಅಸೆಂಬ್ಲಿಯ ಸಭಾಸದರಾದ ದೇ|| ಹೊಸಮನಿಯವರ ಕಡೆಗೂ ಮತ್ತು ಉ ಪ್ರಮುಖ ಸಭಾಸದರ ಕಡೆಗೂ ತೀವ್ರ ಕಳಿಸಿಕೊಡಬೇಕಾಗಿ ವಿನಂತಿ. ಈ ಕಾರ್ಯವನ್ನು ನಾವೆಲ್ಲರು ಒಂದೇ ಕಾಲಕ್ಕೆ ಮತ್ತು ಒಮ್ಮನಸ್ಸಿಂದ ಪ್ರಯತ್ನಮಾಡಿದರೆ ಶೀಘ್ರವೇ ಯಶಸ್ವಿಯಾಗುವದೆಂದು ನನ್ನ ನಂಬಿಗೆ ಅದೆ.

ಹುನಗುಂದ ತಾ. ೨೦-೩-೩೫	ಕರ್ನಾಟಕ ಅಭಿಮಾನಿ ಬಸವಶೆಟ್ಟೆಪ್ಪ ಬಳೂಟಗಿ

ಬಂಥನಾಳ.

ಶ್ರೀಮದ್ವೀರಶೈವ ಆದ್ಯ ಜಗದ್ಗುರು ಪ್ರಭುದೇವ ಪರಂಪರಾಗತ ಸುಕ್ಷೇತ್ರ ಬಂಥನಾಳ ವೃಷಭಲಿಂಗೇಶ್ವರ ಮಹೋತ್ಸವವು ಪ್ರತಿವರ್ಷದ ಪದ್ಧತಿಯಂತೆ ಇದೇ ಭಾವನಾಮ ಸಂವತ್ಸರದ ಮಾಘ ವದ್ಯ ೩೦ ತಾ. ೫-೩-೩೫ ಮಂಗಳವಾರ ದಿವಸ ಅಗ್ನಿ ಸಮಾರಂಭವು. ಫಾಲ್ಗುಣ ಶುದ್ಧ ೧ ತಾ. ೬-೩-೩೫ ಬುಧವಾರ ದಿವಸ ಅಗ್ನಿ ಶಮನವು ಮತ್ತು ಅನ್ನ ಸಂತರ್ಪಣವು. ಇದೇ ತಾ. ೬ ನೆ ದಿವಸ ಶ್ರೀಮಂತ ಅಣ್ಣಾಸಾಹೇಬ ಜಗದೇವರಾವ ಸರ್ ದೇಶಮುಖ ಕಸ್ತೂರ ಇವರ ಅಧ್ಯಕ್ಷತೆಯಲ್ಲಿ ದನಗಳ ಪ್ರದರ್ಶನವು ಜರುಗಿ ಯೋಗ್ಯ ದನಗಳಿಗೆ ಭಕ್ಷೀಸು ಕೊಡಲ್ಪಡುವದು. ಇದಲ್ಲದೆ ಪ್ರಸಿದ್ಧ ಕೀರ್ತನಕಾರರ ಕೀರ್ತನಗಳೂ ವಿದ್ವಾಂಸರ ವ್ಯಾಖ್ಯಾನಗಳೂ ಹಾಡು ಬಾರಿಸುವ ಕೆಲಸಗಳೂ ಸಹ ನಡೆಯುವವು. ಪ್ರಯುಕ್ತ ಆಸ್ತಿಕ ಮಹಾಶಯರೆಲ್ಲರೂ ಆಗಮಿಸಿ ಈ ಮಂಗಳ ಕಾರ್ಯದ ಭಾಗಿಗಳಾಗಬೇಕೆಂದು ಹಾರೈಕೆ.

ವ್ಯವಸ್ಥಾಪಕ ಮಂಡಳ

ಶ್ರೀ ಶಿವಯೋಗಮಂದಿರ ಯಾತ್ರಾ ಮಹೋತ್ಸವವು.

ಸಾರಸಜ್ಜನರ ಸಂಗ ಲೇಸು ಕಂಡಯ್ಯಾ|
ದುರುಳ ದುರ್ಜನರ ಸಂಗವದು ಭಂಗವಯ್ಯಾ|
ಸಂಗವೆರಡುಂಟು ಒಂದು ಬಿಡುವದು
ಹಿಡಿ ಮಂಗಲ ಮೂರ್ತಿ ನಮ್ಮ ಕೂಡಲ ಸಂಗನ ಶರಣರ||
ಶ್ರೀ. ಬಸವೇಶ್ವರ.

ಸಮಸ್ತ ವೀರಶೈವ ಬಾಂಧವರಿಗೆ ಸವಿನಯಪೂರ್ವಕವಾಗಿ ತಿಳಿಸುವದೇನಂದರೆ—

(೧) ಮಹಾ ಶಿವರಾತ್ರಿಯ ನಿಮಿತ್ತವಾಗಿ ಶ್ರೀಶೈಲಾದಿ ಪುಣ್ಯ ಕ್ಷೇತ್ರಗಳಿಗೆ ಭಾವಿಕ ಜನರು ಭಕ್ತಿಯಿಂದ ಹೋಗುತ್ತಿರುವರಷ್ಟೇ? ಅದೇ ಪ್ರಕಾರವಾಗಿ ಶ್ರೀ ಶಿವಯೋಗಮಂದಿರದ ಪುಣ್ಯ ಕ್ಷೇತ್ರಕ್ಕಾದರೂ ಬಹು ಜನರು ಬರುತ್ತಾರೆ. ಈ ಸಂಸ್ಥೆಯು ವೀರಶೈವ ಧರ್ಮ ತತ್ವಕ್ಕನುಸರಿಸಿ ನಿಜ ಮೋಕ್ಷವನ್ನೀಯುವ ಅನೇಕ ಸಾಧನೆಗಳುಳ್ಳದ್ದಾಗಿಯೂ, ಅಖಿಲ ವೀರಶೈವ ಸಮಾಜಕ್ಕೆ ಆದರ್ಶಭೂತವಾಗಿಯೂ, ಇರುವದು.

(೨) ಈ ಮಹೋತ್ಸವದ ಸಲುವಾಗಿ ಅನೇಕ ಸ್ಥಲಗಳಿಂದ ಕೀರ್ತನಕಾರರು, ಮತ್ತು ಪ್ರಸಿದ್ಧ ವ್ಯಾಖ್ಯಾತೃಗಳು, ಉಭಯ ಗಾನವಿಶಾರದ. ಪಂ|| ಪಂಚಾಕ್ಷರ ಗವಾಯಿಗಳು ಬರುತ್ತಾರೆ. ...ಾಯನ, ಕೀರ್ತನ, ಪುರಾಣ, ಯೋಗಾಸನಾದಿಗಳ ಪ್ರಯೋಗ, ...ಾರ್ಮಿಕ ಸಭೆ, ಮಹಿಳಾ ಪರಿಷತ್ತು, ಇವೆಲ್ಲಾ ಜರುಗುವ ವ್ಯವಸ್ಥೆಯು ಮಾಡಲ್ಪಡುತ್ತದೆ.

(೩) ಯಾತ್ರೆಯ ಕಾಲಕ್ಕೆ ಇಲ್ಲಿ ಒಕ್ಕಲತನ, ಮತ್ತು ವನ...ಳ ಪ್ರದರ್ಶನಕ್ಕೆ ಸಮ್ಮಂಧಪಟ್ಟ ಕಾರ್ಯಗಳೂ, ಲಾವಣಿ ಹಾಡು...ವರ ಮೇಲಾಟವೂ, ಹಲಗೆಯ ಮೋಜಲೂ, ಮತ್ತು ರಥೋ...ವ ಸಮಾರಂಭಗಳೂ, ಜರುಗುವವು. ಈ ಯಾವತ್ತು ಸುಸಂ...ಯ ಲಾಭವನ್ನು ಸರ್ವರೂ ತಮ್ಮ ಬಂಧುಬಾಂಧವರೊಡಗೂಡಿ ...ಂದು ಹೊಂದಬೇಕು.

ಕಾರ್ಯಕ್ರಮಗಳು.

ಮಾಘ-ಬ|| ೧೪ ರವಿವಾರ ತಾ. ೩-೩-೧೯೩೫. ಮಹಾ ...ವರಾತ್ರಿಯ ಸಾಯಂಕಾಲದಲ್ಲಿ ಸಮಸ್ತ ಭಕ್ತ ಮಾಹೇಶ್ವರರ ...ಷ್ಟಲಿಂಗ ಪೂಜಾದಿ ಕಾರ್ಯವು ಯಥಾರೀತಿಯಾಗಿ ಜರಗುವದು. ...ಳಿಕ ಶಿವಭಜನಾ, ಶಿವಕೀರ್ತನಾದಿಗಳು ನಡೆಯುವವು.

ಮಾಘ-ಬ|| ೩೦ ತಾ. ೪-೩-೧೯೩೫. ಸೋಮವಾರ ಪ್ರಾತಃ...ಕಾಲ ೮ ಗಂಟೆಗೆ ಶಿವಯೋಗಸಾಧಕರಿಂದ, ಯೋಗಾಸನ, ಷಟ್ಕ...ರ್ಮಾದಿಗಳ ತೋರಿಸುವಿಕೆ ಮಧ್ಯಾಹ್ನ ೩ ಗಂಟೆಗೆ ವಕ್ತೃತ್ವ...ಲೆಯುಳ್ಳ ಶಿವಯೋಗಸಾಧಕರ ಇತರ ವಿದ್ಯಾವಂತರ ವ್ಯಾಖ್ಯಾನ...ಳಾಗಿ ರಥೋತ್ಸವ ಸಮಾರಂಭವೂ ಜರಗುವದು.

ಫಾಲ್ಗುಣ-ಶು|| ೧ ತಾ. ೫-೩-೩೫. ಮಂಗಳವಾರ ದಿವಸ ...ುಂಜಾನೆ ಎಂಟು ಗಂಟೆಯಿಂದ ಹತ್ತು ಗಂಟೆಯ ವರೆಗೆ **ಶಿವಾನುಭವ** "ಪ್ರಸಂಗವು ನಡೆದು ಮಧ್ಯಾಹ್ನ ಮೂರು ...ಂಟೆಗೆ ಪ್ರಸಿದ್ಧ ವ್ಯಾಖ್ಯಾತೃಗಳ ಭಾಷಣಗಳೂ, ಮಹಿಳಾ ಪರಿಷತ್ತೂ, ಪಶುಗಳ ಪ್ರದರ್ಶನವೂ, ಇತ್ಯಾದಿ ಕಾರ್ಯಗಳು ನಡೆಯುವವು.

ವಿಶೇಷ-ಸೂಚನೆ.

(೧) ಇಲ್ಲಿಗೆ ಅನೇಕ ಕಡೆಯಿಂದ ಶ್ರೀಮನ್ನಿರಂಜನ ಜಂಗಮಪುಂಗವರೂ, ಗುರುಸ್ಥಲದ ಶ್ರೀ ಪಟ್ಟ ಚರಮೂರ್ತಿಗಳೂ, ಶಿವಾನುಭವಿಗಳೂ, ಆಗಮಿಸುವರು.

(೨) ವೀರಶೈವ ಸಮಾಜೋತ್ಕರ್ಷದ ಪ್ರಾಣ ಪ್ರತಿಷ್ಠಾಪನಾಚಾರ್ಯರಾದ, ಪರಮ ಪೂಜ್ಯ "**ಶ್ರೀ ಹಾನಗಲ್ಲ ಕುಮಾರ ಸ್ವಾಮಿಗಳವರ**" ೫ ನೇ ವರ್ಷದ ಪುಣ್ಯತಿಥಿಯ ಸಮಾರಂಭವು ಇಲ್ಲಿ ಮಾಘ-ಬ-೬- ತಾ ೨೫-೨-೩೫ ನೇ ಸೋಮವಾರದಿಂದ ಮುಂದೆ ೬ ದಿವಸಗಳವರೆಗೆ ನಡೆಯುವಂತೆ ಏರ್ಪಡಿಸಲ್ಪಟ್ಟಿದೆ. ಮಹಾ" "ಗಳವರ ಗದ್ದಿಗೆಯ ಸನ್ನಿಧಿಯಲ್ಲಿ ಪ್ರತಿದಿವಸ ಬೆಳಿಗ್ಗೆ ಶಿವಾನುಭವಿಗಳಿಂದ ವಚನ ಪ್ರವಚನಗಳು ನಡೆದು ಮಧ್ಯಾಹ್ನಕ್ಕೆ ರುದ್ರಾಭಿಷೇಕ ಆರಾಧನೆಗಳು ಜರುಗಿ ನಾಲ್ಕು ಗಂಟೆಯಿಂದ ಪರಿಸ್ಥಿತಿಗನುಸರಿಸಿದ ಬೇರೆ ಬೇರೆ ವಿಷಯಗಳಲ್ಲಿ, ವಿದ್ವಾಂಸರ ವ್ಯಾಖ್ಯಾನಗಳು ಮತ್ತು ಕೀರ್ತನಗಳು ನಡೆಯುವವು. ಈ ಕಾಲ ವಲ್ಲಯಾದರೂ ಭಕ್ತಿ ಬಲವಂತರು ಇಲ್ಲಿಗೆ ಬರಲು ಅವಕಾಶವಿದೆ.

(೩) ಶ್ರೀ ಶಿವಯೋಗಮಂದಿರವು ವಿಜಾಪುರ ಜಿಲ್ಲಾ ಬಾದಾಮಿ ಸ್ಟೇಷನ್ (ಸದರ್ನ್ ಮರಾಠಾ ರೈಲ್ವೆ ಸೊಲ್ಲಾಪುರ-ಹುಬ್ಬಳ್ಳಿ ಲೈನ್) ದಿಂದ ಒಂಭತ್ತು ಮೈಲು ದೂರವಿರುವದು. ಈ ಸ್ಟೇಷನ್ನದಲ್ಲಿ ಮೋಟಾರ ಬಸ್ಸು, ಟಾಂಗಾ ವಗೈರೆ ಬಾಡಿಗೆಯಿಂದ ಸಿಗುತ್ತವೆ.

(೪) ಜಾತ್ರೆಗೆ ಬರತಕ್ಕ ಭಕ್ತಮಾಹೇಶ್ವರರು ತಮಗೆ ಪ್ರತ್ಯೇಕ ಸ್ಥಳವು ಬೇಕಾಗಿದ್ದರೆ ನಾಲ್ಕು ದಿವಸಗಳ ಮುಂಚಿತವಾಗಿ ತಿಳಿಸಬೇಕು. ಅಂದರೆ ಅವರಿಗಾಗಿ ಬೇರೆ ಸ್ಥಾನದ ಏರ್ಪಾಟು ಮಾಡಲಿಕ್ಕಾಗುವದು. ವಿಶೇಷ ಸಂಗತಿಗಳ ಬಗ್ಗೆ ಪತ್ರವ್ಯವಹಾರ ಮಾಡಬೇಕು. ಸುತ್ತಮುತ್ತಲಿನ ಗ್ರಾಮಗಳಲ್ಲಿ ಯಾವ ತರದ ರೋಗಾದಿಗಳಿಲ್ಲದೆ, ಯಾವತ್ತೂ ದೃಷ್ಟಿಯಿಂದ ಇಲ್ಲಿ ಅನುಕೂಲವಿದೆ.

ತಾ. ೧೯-೨-೧೯೩೫. ಮ್ಯಾನೇಜರ.
ಶ್ರೀ ಶಿವಯೋಗಮಂದಿರ.

ನಮ್ಮಲ್ಲಿ
ಫೋಟೋ, ಲೈನ್
ಬ್ಲಾಕುಗಳು, ಹಾಪ್ಟಾ
ಫೆ ಮತ್ತು ಸೀಸದ ಬ್ಲಾ
ಕುಗಳು, ಅರಗಿನ ಸೀಲು ಜ
ವಾನರ ಬಿಲ್ಲೆಗಳು, ರಬ್ಬರ್
ಮೊಹರುಗಳು, ದೇವರ
ತಿಬಣ್ಣದ ಪಟಗಳು, ಕ್ಯಾ
ಲೆಂಡರುಗಳು ನಿಮ್ಮ
ಮನ ಒಪ್ಪುವಂತೆ
ತಯಾರಾಗು
ತ್ತವೆ.

ಮುದ್ದಾದ ಅಕ್ಷರ! ಸುಲಭ ದರ!

ಶ್ರೀ ರಂಗನಾಥ ಟೈಪ್ ಫೌಂಡರಿ

ಬೆಂಗಳೂರು.

ಕನ್ನಡ ಮತ್ತು ಇಂಗ್ಲಿಷ್, ಎಲ್ಲಾ ತರದ ಟೈಪುಗಳೂ ಒಳ್ಳೊಳ್ಳೇ ಬಾರ್ಡರಗಳೂ ನಮ್ಮ ಫೌಂಡರಿಯಲ್ಲಿ ತಯಾರಾಗುತ್ತವೆ.

ಒಳ್ಳೇ ಮೆಟಲ್. ಬಹು ಅಂದವಾದ ಅಕ್ಷರಗಳು. ಬಲು ಸುಲಭ ದರ. ಕ್ಯಾಟಲಾಗ ತರಿಸಿಕೊಳ್ಳಿರಿ ಒಮ್ಮೆ ಟೈಪುಗಳನ್ನು ತರಿಸಿಕೊಂಡು ಅನುಭವ ಹೊಂದಿರಿ. ಹಳೆ ಟೈಪುಗಳಿದ್ದರೆ ಸುಲಭ ಚಾರ್ಜಿಗೆ ಹೊಸದಾಗಿ ಹೊಯಿದು ಕೊಡುತ್ತೇವೆ

ಪ್ರೊಪ್ರೈಟರ,

ಶ್ರೀ ರಂಗನಾಥ ಟೈಪ್ ಫೌಂಡರಿ

೬೭ ಕುಬೇರ ಸಾಹುಜಿ ಲೈನ್

ಚಿಕ್ಕಪೇಟೆ, ಬೆಂಗಳೂರು ಸಿಟಿ

ಪತ್ರಿಫಲದ ದಿವ್ಯಾಭರಣ!

ಲಿಂಗಪೂಜಕರಿಗೆ ಪತ್ರಿಯು ಅತ್ಯಾಗತ್ಯವಲ್ಲವೆ? ಪತ್ರಿಯ ಫಲದಿಂದ ಮಾಡುವ **ಈ ದಿವ್ಯಾಭರಣ**ಗಳಲ್ಲಿ ನಿಮಗೆ ಬೇಕಾದುವನ್ನು ತರಿಸಿಕೊಳ್ಳಿರಿ.

ಕರಕಮಲ, ನಾಗಾಭರಣ, ಕಂಠಮಾಲೆ ಮೊದಲಾದವು. ಮಂತ್ರವಿಶಿಷ್ಟ, ಲಿಂಗಪೂಜೆಗೆ ಅಗತ್ಯವಾಗಿರತಕ್ಕವು.

ನಿಮ್ಮ ಇಷ್ಟದಂತೆ ಮಂತ್ರಾಕ್ಷರಗಳನ್ನು ಸ್ಫುಟಗೊಳಿಸಿ ಪತ್ರಿಯ ಕಾಯಿಯ ಚಿಪ್ಪಿನಿಂದ ಬಹು ಅಂದವಾದ ಆಭರಣಗಳನ್ನು ತಯಾರುಮಾಡಿಕೊಡುತ್ತೇವೆ.

ಕ್ರಯ ೧ ರೂಪಾಯಿಯಿಂದ ಮೇಲ್ಪಟ್ಟು ನಿಮ್ಮ ಇಷ್ಟವಿದ್ದಷ್ಟು ರೂ. ಗಳ ವರೆಗೆ.

ವಿಳಾಸ:— ಸಂಗಮೇಶ- ಶ್ರೀ ಸರ್ಪಭೂಷಣ ಶಿವಯೋಗಿ ಮಠ ಬಳೇಪೇಟೆ ಬೆಂಗಳೂರು ಸಿಟಿ.

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೧-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆಯ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಕಾಯಕವೆ ಕೈಲಾಸ	೦-೩-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ವಿಜಯವಾಣಿ	೦-೨-೦
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅದಿಕ್ಷಣ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ ಪೋ. ಆಲಮಟ್ಟಿ ಜಿ. ವಿಜಾಪುರ.

ಓಂ

ವಿಚಾರ ಕ್ರಾಂತಿಯನ್ನುಂಟು ಮಾಡುವ

ಹೊಸ ಪುಸ್ತಕ.

ವೀರಶೈವ ಮತಾಚಾರ್ಯರ

ಕಾಲ ನಿರ್ಣಯ.

ಲೇಖಕರು—

ಕರ್ಣಮಂಗಲಂ ಶ್ರೀಕಂಠಯ್ಯನವರು.

ಪ್ರತಿಯೊಬ್ಬ ವೀರಶೈವನೂ

ಅತ್ಯವಶ್ಯಕವಾಗಿ ಓದತಕ್ಕ ಪುಸ್ತಕ.

ಜಾಗ್ರತೆ ತರಿಸಿರಿ. ಬೆಲೆ ೧೨ ಆಣೆ.

ಮ್ಯಾನೇಜರ— ಶರಣ ಸಂದೇಶ

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸವಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಚಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

ಜಿ. ಎಸ್. ಗಂಗಾಧರಯ್ಯ,

ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ, ತುಮಕೂರು

(ಮೈಸೂರು ಸ್ಟೇಟ್)

೯,೩೧,೦೦೦ ರೂಪಾಯಿ

ಬೆಲೆಬಾಳುವ ಪಾಲಿಸಿಗಳನ್ನು ಸ್ವರಾಜ್ಯ ಕಂಪನಿಯವರು

ಬರೇ ಹದಿಮೂರು ತಿಂಗಳಲ್ಲಿ ಕೊಟ್ಟಿರುತ್ತಾರೆ.

ಕೂಸು ಹುಟ್ಟಿದರೆ, ಮಕ್ಕಳ ಮದಿವೆ ಮಾಡಿದರೆ, ಮರಣ ಹೊಂದಿದರೆ,

ವಿಮೆಯದಾರರಿಗೆ ೫೦೦ ರೂಪಾಯಿಗಳ ವರೆಗೆ

ವಿಮೆಯ ಹಣವು ಕೊಡಲ್ಪಡುವದು.

ವಿಮೆಯ ಕಂತಗಳು ತೀರ ಕಡಿಮೆ

ತಿಂಗಳೊಂದಕ್ಕೆ ೧ ರೂಪಾಯಿ

ಪ್ರವೇಶ ಫೀ ೫ ರೂಪಾಯಿ

ವಾರ್ಷಿಕ ಫೀ ೧ ರೂಪಾಯಿ ಮಾತ್ರ

ಏಜಂಟರಾಗಿ ಕೆಲಸ ಮಾಡುವವರಿಗೂ ಅಗ್ರನಾಯಕರುಗಳಿಗೂ ಒಳ್ಳೇಲಾಭ

ಹೆಚ್ಚಿನ ಮಾಹಿತಿ ಬೇಕಾದವರು ಕಂಪನಿಯ ಕೂಡ ಪತ್ರವ್ಯವಹಾರ ಮಾಡಬೇಕು.

ಎಮ್. ಎಸ್. ಕೇಸರಿ ಬಿ. ಎ. ಎಲ್ ಎಲ್. ಬಿ.

ಮ್ಯಾನೇಜಿಂಗ್ ಏಜಂಟ್ಸ್,

ದಿ. ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ ಕಂ. ಲಿ. ಧಾರವಾಡ.

ಪ್ಲೇಗ ಸಂಜೀವಿನಿ.

ಅತ್ಯಾಶ್ಚರ್ಯಕರವಾದ ಗುಣ! **ಕೇವಲ ೩ ತಾಸುಗಳಲ್ಲಿಯೇ ಗುಣ!**

ಇದನ್ನು ಸೇವನೆ ಮಾಡುವದರಿಂದ ಪ್ಲೇಗಿನ ಭಯವೇ ಇಲ್ಲ!

೧೦೦ ಕ್ಕೆ ೧೦೦ ರಂತೆ ಗುಣ!!

ಶ್ರೀ ಮನ್ನಿರಂಜನ ಶಾಂತವೀರ ಸ್ವಾಮಿಗಳು ಗುರುಮಠಕಲ್ ಇವರು ಲೋಕ ಕಲ್ಯಾಣಾರ್ಥವಾಗಿ ಪ್ಲೇಗ ಸಂಜೀವಿನಿ ಎಂಬ ದಿವ್ಯ ಔಷಧಿಯನ್ನು ಶೋಧಮಾಡಿರುವರು. ಪ್ಲೇಗ ರೋಗವು ಎಷ್ಟು ಘಾತುಕವದೆಯೆಂಬುವನ್ನು ಹೇಳುವ ಅವಶ್ಯವಿಲ್ಲ. ಈ ಪ್ಲೇಗಿನಿಂದ ಸಾವಿರಾರು ಜನರು ಸಾಯುತ್ತಿರುತ್ತಾರೆ. ಇದನ್ನು ತಡೆಯುವದಕ್ಕಾಗಿ ಎಷ್ಟೋ ಔಷಧಗಳನ್ನು ತಯಾರ ಮಾಡಿರುವರು. ಅವುಗಳಿಂದೇನೂ ಗುಣವಾದದ್ದು ಕಂಡು ಬರುವದಿಲ್ಲ. **ಈ ಪ್ಲೇಗ** ಸಂಜೀವಿನಿಯಿಂದ **ಆರೇ ತಾಸುಗಳಲ್ಲಿಯೇ** ಗುಣವಾಗುತ್ತದೆ. **ಇದರ ಒಂದು ಬಾಟ್ಲಿಯ ಕಿಮ್ಮತ್ತು ೧ ರೂ. ೫ ಆಣೆ.**

ವಿಶೇಷ ಮಾಹಿತಿಯನ್ನು ಅನುಪಾನ ಪತ್ರಿಕೆಯಲ್ಲಿ ನೋಡಿರಿ.

ವಿಶೇಷ ಸೂಚನೆ— ಅನುಪಾನ ಪತ್ರಿಕೆಯ ಸೂಚನೆಯ ಮೇರೆಗೆ ಔಷಧವನ್ನು ತೆಗೆದುಕೊಂಡಲ್ಲಿ ಖಾತ್ರಿಯಿಂದ ಗುಣವಾಗುವದು. ಎಲ್ಲ ಕಡೆಗೂ ಏಜಂಟರು ಬೇಕು.

ಏಜಂಟ್ **ಬಸೆಟ್ಟೆಪ್ಪ ಬಸಪ್ಪ ಹಲಕುರ್ಕಿ, ಬಾಗಲಕೋಟಿ**

ವಿಳಾಸ— **ಪ್ಲೇಗ ಸಂಜೀವಿನಿ ಆಫೀಸ್ ಗುಲಬರ್ಗಾ.**

ಮಹಾರೋಗ ಸಂಜೀವಿನಿ.

ಶ್ರೀಮನ್ನಿರಂಜನ ಗುರುಮಠಕಲ್ಲ ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ

ಮಹಾರೋಗ ಸಂಜೀವಿನಿ,

ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.

ಇತ್ತಿತ್ತಲಾಗಿ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ಮಿತಿಮೀರಿ ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. **ಈ ಕೆಟ್ಟಬೇನೆಯು (ಪ್ಲೇಗ ಮಾರಿಕಾ,)** ಖಜ್ಜಿಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ ತಗಲತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ಮೃತ್ಯುವಿನ ತುತ್ತಾಗುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಖಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ನಾರಸಂಹಾರಿ, ಕೂಸುಗಳ ಹೊಟ್ಟೆಯೊಳಗಿನ ಬೇನೆ** ಇತ್ಯಾದಿ ರೋಗಗಳ ಮೇಲೆ ಆಶ್ಚರ್ಯಕಾರಕ ಔಷಧಿಗಳನ್ನು ಕಂಡು ಹಿಡಿದ ಸದರಿ ಪೂಜ್ಯರು ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ ಔಷಧಿಯನ್ನು ಶೋಧಮಾಡಿ ಪ್ರಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೆಯುಳ್ಳವರು ಮುದ್ದಾಂ ಬಂದು ತಮ್ಮ ರೋಗ ಲಕ್ಷಣಗಳನ್ನೆಲ್ಲ ತೋರಿಸಿದರೆ ಅದಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ. ಮೊದಲು ಔಷಧದ ಅರ್ಧ ಕಿಮ್ಮತ್ತು ಕೊಟ್ಟು ಔಷಧ ತಕ್ಕೊಳ್ಳಲು, ಪ್ರಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಅಗ್ಗಿ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ ವ್ಯವಸ್ಥೆಯನ್ನು **ತಾವೇ ಮಾಡಿಕೊಳ್ಳತಕ್ಕದ್ದು.** ವಿಶೇಷ ಸಂಗತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು..

ಮ್ಯಾನೇಜರ ಆರೋಗ್ಯ ಮಂದಿರ, ಕಿರೀಟಮಠ ಕಸಬಾ ಕ್ಯಾಂಪ **ಸೊಲ್ಲಾಪುರ ಸಿಟಿ.**

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ. ಉತ್ತಮ ಸೌಕರ್ಯ. ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಢಕ್ಕ್ಯ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೇಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪ ವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ....

ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುಕ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ

ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೦೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦

೬೦ ,, ,, ,, ೧೯-೮-೦

೩೦ ,, ,, ,, ೯-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**

ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ನೀವು ... ಕಜ್ಜಿ, ಕೌರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ** ಎಣ್ಣೆಯ ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ **ಸಂಶೋಧನದಿಂದ**

ಡಾ ಎಂ. ಸಿ. **ಕುಮ್ಮಿನಕಟ್ಟಿ**, ಎಂ. ಎಸ್‌ಸಿ, ಪಿಎಚ್. ಡಿ ಇವರು **ತಯಾರಿಸಿದ**

" ಹೊಂಗೋಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ

ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೋಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡುಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡುಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ.** ಎಂ. ಸಿ. **ಕುಮ್ಮಿನಕಟ್ಟಿ** ಎಂ. ಎಸ್‌ಸಿ., ಪಿಎಚ್. ಡಿ. ಇವರಿಂದ ತಯಾರಿಸಲ್ಪಟ್ಟ

" ಕಚ್ಯೂರ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲಿ ಉಚಿತ ವಾಗಿ ನಮೂನೆಗಳನ್ನು ದೊರಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ಹೋಲ್ಸೇಲ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಚ್ಛೆಯಿದ್ದವರು ಹೆಚ್ಚಿನ ಮಾಹಿತಿ ಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,

ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್

ಇಚಲಕರಂಜಿ.

ಇನ್ನರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳವು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟೆ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.
(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗೆಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ಕಂಪಾಜಿಟರು ಬೇಕು.

ಮರಾಠಿ ಮತ್ತು ಕನ್ನಡ ಚೆನ್ನಾಗಿ ಕಂಪೋಜ್ ಮಾಡತಕ್ಕ ಕಂಪಾಜಿಟರು ಬೇಕು. ಯೋಗ್ಯ ಸಂಬಳ ದೊರೆಯುವದು. ಇಷ್ಟವುಳ್ಳವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ವಿಳಾಸ:— **ಮ್ಯಾನೇಜರ,**

ಕಲ್ಯಾಣ ಕರ್ನಾಟಕಪ್ರೆಸ್ ಗುಲಬರ್ಗಾ
ಪೋ. ಗುಲಬರ್ಗಾ (ನೈಜಾಮ ಸ್ಟೇಟ)

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶ್ರೀ ಹರ್ದೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ದೇಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 2891.

ಶರಣ ಸಂದೇಶ

The
Sharana Sandesh.

ನ್ಯಾಯನಿಷ್ಠುರಿ ದಾಕ್ಷಿಣ್ಯಪರನಾನಲ್ಲ! ಲೋಕವಿರೋಧಿ! ಶರಣಾಗತರಿಗೂ ಅಂಜುವವನಲ್ಲ!
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ವ. ೨೨೪ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಪರ್ದೇಶಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೪. | ಆಲಮಟ್ಟಿ- ಸೋಮವಾರ ತಾರೀಖು ೧೧ ನೆಯ ಮಾರ್ಚ ೧೯೩೫. | ಸಂಚಿಕೆ ೮

ಜನಸೇವೆಯೇ | ದೇವರ ಸೇವೆ

ಸುಭಾಷಚಂದ್ರರು ಪರದೇಶದಲ್ಲಿ.

ನೆಹರುರವರೂ ಪರದೇಶದಲ್ಲಿಯೆ?

ಹಿಂದುಸ್ಥಾನದ ತರುಣ ಮುಂದಾಳುಗಳಲ್ಲಿ ಮುಂದಾಳುಗಳಾದ ಸುಭಾಷಚಂದ್ರ ಬೋಸರವರು ಈ ದೇಶದಲ್ಲಿರದೆ ಪರದೇಶಗಳಿಗೇ ಹೋಗಬೇಕಾಗಿದೆಯಷ್ಟೆ.

ಇವರು ಮೊನ್ನೆ ವ್ಹಿಯನ್ನಾಕ್ಕೆ ಹೋಗುವಾಗ ರೋಮ ಪಟ್ಟಣದಲ್ಲಿ ಇಳಿದಿದ್ದರು. ಅಲ್ಲಿ ಅಫಗಾನಿಸ್ಥಾನದ ಹಿಂದಣ ಅಮೀರ ಅಮಾನುಲ್ಲಾರವರನ್ನು ಕಂಡಿದ್ದರು.

ಪಂಡಿತ ಜವಾಹರಲಾಲ ನೆಹರುರವರು ತಮ್ಮ ಶ್ರೀಮತಿ ಕಮಲಾದೇವಿ ನೆಹರುರವರ ಆರೋಗ್ಯಕ್ಕೋಸ್ಕರ ಪರದೇಶಕ್ಕೆ ಅವರನ್ನು ಕರೆದು ಕೊಂಡು ಹೋಗುವುದಾದರೆ ಸರಕಾರವು ನೆಹರು ರವರನ್ನು ಬಿಡುಗಡೆ ಮಾಡುವದೆಂದು ಸುದ್ದಿ.

ಜೀವವೇ | ದೇವಾಲಯ.

SANGAM CLOTH STO
Prop: M. S. Hunde... & Sons
P.O: TERDAL-587 315
Dt. Bijapur. (Karnataka)

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಆಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜ್ಯೋತಿಷಾಲಂಕಾರ ವೇ। ಬ್ರ। ಶ್ರೀ। ಸಿದ್ಧಾಂತಿ ಶಿವಬಸವ ಶಾಸ್ತ್ರಿಗಳು ಹೂಲಿ,
ಇವರಿಂದ ತಯಾರಿಸಲ್ಪಟ್ಟ ಶಕೆ ೧೮೫೭ ನೆಯ ಯುವ ಸಂವತ್ಸರದ

ಶ್ರೀ ಹೂಲಿ (ಪೂವಲಿ) ಪಂಚಾಂಗಗಳು

ನಾಲ್ಕ ಆಣೆಯ ಬಲ್ಲಿಯ ಟಿಕೀಟು ಕಳಿಸಿದಲ್ಲಿ ೧ ಪಂಚಾಂಗವನ್ನು ನಿಮ್ಮ ವಿಳಾಸಕ್ಕೆ ಕಳಿಸುವೆವು. ಇಂದೇ ಪತ್ರಬರೆಯಿರಿ.

ಸದ್ಯಕ್ಕೆ ಮಾರಾಟಕ್ಕೆ ತಯಾರಾಗಿರುವವು.

ಇವು ಎಲ್ಲ ಪಂಚಾಂಗಗಳಿಗಿಂತಲೂ ಹೆಚ್ಚು ಮತ್ತು ಆವಶ್ಯಕ ವಿಷಯಗಳಿಂದ ಕೂಡಿರುತ್ತವೆಂದು ಬಹು ಜನರಿಂದ ಶ್ಲಾಘಿಸಲ್ಪಟ್ಟಿರುತ್ತವೆ. ಈ ಪಂಚಾಂಗವು ೭೦ ಪುಟಗಳುಳ್ಳದ್ದಾಗಿ ಮೇಲ್ಭಾಗದಲ್ಲಿ ಶ್ರೀ ಗಜಾನನ ಮತ್ತು ೧೨ ರಾಶಿಗಳ ಭಾವಚಿತ್ರಗಳಿಂದ ಅಂದವಾಗಿ ಮುದ್ರಿತವಾಗಿರುತ್ತದೆ. ಮಾರಾಟದ ದರವನ್ನು ಬಹು ಕಡಿಮೆ ಅಂದರೆ— ಪಂಚಾಂಗ ೧ ಕ್ಕೆ ೪ ಆಣೆ, ೫ ಕ್ಕೆ ೧ ರೂಪಾಯಿ, ವ್ಯಾಪಾರಸ್ಥರಿಗೆ— ೧೦೦ ಪಂಚಾಂಗಕ್ಕೆ ೧೦ ರೂಪಾಯಿ, ೫೦೦ ಪಂಚಾಂಗಗಳಿಗಿಂತ ಹೆಚ್ಚು ತರಿಸಿದವರಿಗೆ ಹೆಚ್ಚಾಗಿ ಸವಲತ್ತು ಕೊಡುವೆವು.

ಇದಲ್ಲದೆ ಮಹಾಗಾಂವ, ಸವಣೂರ ಕನ್ನಡ ಮತ್ತು ಮರಾಠಿ, ಶ್ರೀ ಬಸವೇಶ್ವರ, ಜೋಗೂರ, ರಿತ್ತಿ, ಸೊಲ್ಲಾಪುರ, ಹರಪನಹಳ್ಳಿ, ಟಿಳಕ ಮೊದಲಾದ ಪಂಚಾಂಗಗಳು ಠೋಕ ವ ಚಿಲ್ಲರ ಧಾರಣೆಯಿಂದ ದೊರೆಯುವವು.

ಶ್ರೀ ಹೂಲಿ (ಪೂವಲಿ) ಪಂಚಾಂಗ ಪ್ರಕಾಶಕರು,
ಸಿ. ಕೆ. ಲಿಂಗಯ್ಯ ಸ್ವಾಮಿ ಶ್ರೀ ಲಕ್ಷ್ಮೀ ವಿಲಾಸ ಪುಸ್ತಕಾಲಯ ಗದಗ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಮಾರ್ಚ ತಾರೀಖು ೧೧ ನೆಯ ಸೋಮವಾರ | ಸಂಚಿಕೆ ೨೮.

ಮುಸಲ್ಮಾನರ ದೊಂಬಿ.

ಬೆಂಗಳೂರು ಸಿಲೆಕ್ಟ್ ಟಾಕಿ ಸಿನೆಮಾ ಮಂದಿರದ ಹತ್ತಿರ ಕಳೆದ ೧ ನೆಯ ತಾರೀಖಿನ ಸಾಯಂಕಾಲ ೩-೪ ಸಾವಿರ ಮುಸಲ್ಮಾನರು ದೊಂಬಿಮಾಡಿದರಷ್ಟೆ. ಆ ದೊಂಬಿಯ ಅಪರಾಧಕ್ಕಾಗಿ ೨ ಮುಸಲ್ಮಾನರಿಗೆ ಮೂರು ಮೂರು ರೂಪಾಯಿ ಇನ್ನಿಬ್ಬರಿಗೆ ಐದೈದು ರೂಪಾಯಿ ದಂಡದ ಶಿಕ್ಷೆಯೂ ಆಯಿತು. ಸಿನೆಮಾ ಕಂಪನಿಯವರು ಅಡಿ ತೋರಿಸಿದ ಕಥೆಯಲ್ಲಿ ಮುಸಲೀಮ್‌ರ ಅಗೌರವವಿರದೆ ಗೌರವವೇ ಹೇಗಿದ್ದಿತು.

"ಸಿಲೆಕ್ಟ್ ಸಿನೇಮಾದವರು " ಟೈರೆಂಟ್ " ಎಂಬ ಚಿತ್ರವನ್ನು ತೋರಿಸುತ್ತಿದ್ದರು. ಈ ಚಿತ್ರದಲ್ಲಿ ಒಬ್ಬ ದೊರೆಯು, ಮುಸ್ಲಿಂ ದೊರೆಯು, ಪ್ರಾಫೆಟ್ ಮಹಮ್ಮದ್‌ನ ತತ್ವಗಳನ್ನುಲ್ಲಂಘಿಸಿ, ಅವನಗಿಂತ ತಾನೇ ದೊಡ್ಡವನೆಂದು ಅಹಂಕಾರದಿಂದ ಮತನಿಷ್ಠರಾದ ಮುಸ್ಲಿಂ ಸಮುದಾಯದಲ್ಲಿ ಗಂಡಸರನ್ನೂ ಮಕ್ಕಳನ್ನೂ ಹಿಂಸಿಸುತ್ತಿದ್ದನು. ಅನೇಕ ಅತ್ಯಾಚಾರಗಳನ್ನು ನಡೆಸಿದನು. ಇಷ್ಟು ಕಷ್ಟವಾದಾಗ್ಯೂ ಮತನಿಷ್ಠರಾದ ಮುಸ್ಲಿಂರೇ ಅವರಿಗೇ ಜಯಶೀಲರಾಗುವರು. ಇದರ ನೀತಿಯು ಮುಸ್ಲಿಂ ಮತದ ಶ್ರೇಷ್ಠತೆ. ಇಂಗ್ಲೀಷಿನಲ್ಲಿ "ಸೈನ್ ಆಫ್ ದಿ ಕ್ರಾಸ್" ಎಂಬ ಚಿತ್ರವು ಕ್ರಿಸ್ತರಿಗೆ ಆದ ಹಿಂಸೆಯನ್ನು ಬಣ್ಣಿಸಿ, ಕ್ರಿಸ್ತಮತದ ಶ್ರೇಷ್ಠತೆಯನ್ನು ಹೇಗೆ ಸಾರುತ್ತದೆಯೋ ಹಾಗೆಯೇ " ಟೈರೆಂಟ್ " ಚಿತ್ರವು ಮುಸ್ಲಿಂ ಭಕ್ತರ ಶ್ರೇಷ್ಠತೆಯನ್ನು ಸಾರುತ್ತದೆ." ತಾಯಿನಾಡು.

೬೫ ಕೋಟಿ ರೂ. ಗಳ ರತ್ನ!

ಪಂಚಮ ಜಾರ್ಜ ಪ್ರಭುಗಳ ರೌಪ್ಯ ಮಹೋತ್ಸವಕ್ಕೋಸ್ಕರ ಹಿಂದುಸ್ತಾನದಿಂದ ಸಾಧಾರಣ ಒಂದು ನೂರು ಸಂಸ್ಥಾನಾಧಿಪತಿಗಳು ಲಂಡನ್ನಿಗೆ ಹೋಗುವವರಿದ್ದಾರೆ. ಇವರು ತಮ್ಮ ಸಂಗಡ ೬೫ ಕೋಟಿ ರೂಪಾಯಿ ಬೆಲೆಯ ರತ್ನಗಳನ್ನು ತೆಗೆದುಕೊಂಡು ಹೋಗುವುದರಿಂದ ಅಲ್ಲಿ ಇವುಗಳ ಸುರಕ್ಷಿತೆಗಾಗಿ ಹಿಂದುಸ್ತಾನದ ಒಳ್ಳೆಯ ಸಮರ್ಥರಾದ ಗೂಢಚರರನ್ನು ಸರಕಾರದವರು ನಿಯಮಿಸುವವರಿದ್ದಾರೆ.

ಗಾಯಕವಾಡದ ಮಹಾರಾಜರಲ್ಲಿರುವ 'ದಕ್ಷಿಣ ನಕ್ಷತ್ರ' ಎಂಬ ಸುಪ್ರಸಿದ್ಧ ವಜ್ರವು ಬಕಿಂಗ್ ಹಾಮ್ ರಾಜಭವನದಲ್ಲಿ ತನ್ನ ದಿವ್ಯ ತೇಜವನ್ನು ತೋರಿಸಿ ಮಹಾರಾಣಿಯವರ ಮಸ್ತಕದ ಮೇಲಿರುವ ಕೊಹಿನೂರಕ್ಕೆ ವಂದಿಸುವದೆಂದು ಲಂಡನ್ನಿನ ಡೇಲಿ ಎಕ್ಸ್‌ಪ್ರೆಸ್ ಪತ್ರಿಕೆಯು ಹೇಳಿದೆ.

ಇದು ಸನ್ಯಾಸಾಶ್ರಮದ ಬೆಳಕು!

ಈ ದೇಶದಲ್ಲಿ ೪೦-೫೦ ಲಕ್ಷ ಜನರು ಕೇವಲ ಭಿಕ್ಷೆಬೇಡಿ ಜೀವಿಸುತ್ತಿದ್ದಾರಷ್ಟೆ. ದೇಹದಿಂದ ಬಲಿಷ್ಠರಾಗಿ ಬೇಡುವುದರಲ್ಲಿಯೂ ಬಲಿಷ್ಠರೇ ಆಗಿರುವ ಈ ತಿರುಪೆಯವರಿಂದ ರಾಷ್ಟ್ರಕ್ಕೆ ತುಂಬಾ ನಷ್ಟ. ಸುಧಾರಿಸಿದ ಯಾವ ಧನಿಕ ರಾಷ್ಟ್ರದಲ್ಲಿಯೂ ಇಂಥ ಪುಷ್ಟರನ್ನು ಪೋಷಣಮಾಡಿ ರಾಷ್ಟ್ರದಲ್ಲಿ ನಿರುದ್ಯೋಗದ ಬೆಳೆಯನ್ನು ಬೆಳೆಯುತ್ತಾ ಇಲ್ಲ. ಈ ವಿಚಾರದಲ್ಲಿ ಒಂದು ಶಾಸನವನ್ನು ಮಾಡಬೇಕೆಂದು ಪಂಜಾಬ ಕೌನ್ಸಿಲ್ಲಿನಲ್ಲಿ ಶ್ರೀಮತಿ ಲೇಖಾವತಿ ಜೈನ ಎಂಬ ಸಭಾಸದಳು ಒಂದು ಗೊತ್ತುವಳಿಯನ್ನು ತಂದಿದ್ದಳು. ಆ ಮಹಾಶಯಳು ಹೇಳಿದುದೇನಂದರೆ—

" ಪಂಜಾಬ ಪ್ರಾಂತದಲ್ಲಿ ೬-೭ ಲಕ್ಷ ತಿರುಪೆಯವರಿದ್ದಾರೆ. ಇವರು ಪ್ರತಿನಿತ್ಯ ೨-೩ ರೂ. ಗಳನ್ನು ಗಳಿಸುತ್ತಾರೆ. ಈ ಕಾಲದಲ್ಲಿ ಪದವೀಧರರಿಗೆ ಇಷ್ಟು ಆದಾಯವಿಲ್ಲ. ಇವರು ಹಗಲು ಬೇಡುವರು. ರಾತ್ರಿ ಕಳವು ಮಾಡುತ್ತಾರೆ. ಇವರ ಈ ತಿರುಪೆಯನ್ನು ನಿಲ್ಲಿಸುವುದು ಅತ್ಯಾವಶ್ಯಕ."

ಈ ಗೊತ್ತುವಳಿಗೆ ಶ್ರೀ. ಛೋಟಾರಾಮ ಮತ್ತು ಶ್ರೀ. ಲಾಲಚಂದ ಎಂಬ ಇಬ್ಬರು ರಾ| ಬ| ಸಭಾಸದರು ವಿರೋಧಿಸುವಾಗ ಹೀಗೆ ಹೇಳಿದರು. " ಹಿಂದುಗಳಲ್ಲಿ ಮುಪ್ಪಿನ ಕಾಲಕ್ಕೆ ಸನ್ಯಾಸಾಶ್ರಮವನ್ನು ತೆಗೆದುಕೊಳ್ಳುತ್ತಾರೆ. ಆಗ ಅವರು ಭಿಕ್ಷೆಬೇಡಲೇಬೇಕಾಗುತ್ತದೆ." ನೋಡಿ ಸನ್ಯಾಸಾಶ್ರಮದ ಬೆಳಕನ್ನು! ಈ ಗೊತ್ತುವಳಿ ಕಡೆಗೆ ಬಿದ್ದು ಹೋಯಿತು.

ಜಗಳದ ಪರಿಣಾಮ.

ಔರಂಗಾಬಾದದಲ್ಲಿ ಬಾಬಯ್ಯ ಎಂಬ ಗೃಹಸ್ಥನ ಹೆಂಡತಿಯು ಆಕಳನ್ನು ಮೇಯಿಸುವದಕ್ಕೆ ದೇವರಾವನ ತಮ್ಮನಾದ ಕೃಷ್ಣ ಎಂಬವನ ಹೊಲಕ್ಕೆ ಹೋಗಿದ್ದಳು. ಆವಾಗ್ಗೆ ಕೃಷ್ಣನು ಆವಳಿಗೆ ಮೇಯಿಸುವದಕ್ಕೆ ಅಡ್ಡಿ ಮಾಡಿದ್ದರಿಂದ ಅವಳು ತಿರುಗಿ ಗಂಡನನ್ನು ಕರೆದುಕೊಂಡು ಬಂದಳು. ಬಾಬಯ್ಯನಿಗೂ ದೇವರಾವನಿಗೂ ಮಾತಿಗೆ ಮಾತು ಬೆಳೆದು ಬಾಬಯ್ಯನು ದೇವರಾವನಿಗೆ ಗುಂಡಿಟ್ಟು ಕೊಂದನು.

ಔರಂಗಾಬಾದ ಸೆಶನ್ಸ ಕೋರ್ಟಿನಲ್ಲಿ ಬಾಬಯ್ಯನಿಗೆ ೩ ವರ್ಷದ ಶಿಕ್ಷೆಯಾಗಿದ್ದಿತು. ಆದರೆ ಪೋಲೀಸರು ಆ ವ್ಯಾಜ್ಯವನ್ನು ಹಾಯಕೋರ್ಟಿಗೆ ಹಾಕಲು ಅಲ್ಲಿ ಬಾಬಯ್ಯನಿಗೆ ಕಂಠೀಠ ಶಿಕ್ಷೆ ಆಯಿತು. ಆತನು ಸ್ವಸಂರಕ್ಷಣೆಗಾಗಿ ಈ ಕಾರ್ಯವನ್ನು ಮಾಡಿರುವದಿಲ್ಲ; ಆದರೆ ಪ್ರತ್ಯಕ್ಷ ಕೊಲೆಯನ್ನೇ ಮಾಡಿದ್ದಾನೆಂದು ನ್ಯಾಯ ಮೂರ್ತಿಗಳು ಅಭಿಪ್ರಾಯಪಟ್ಟರು.

ಚಲನ ಚಿತ್ರಪಟ ಪ್ರದರ್ಶನ ಸಮಾರಂಭ.

[ಸರ್. ಎಂ. ವಿಶ್ವೇಶ್ವರಯ್ಯನವರ ಭಾಷಣ.]

ಮುಂಬೈಯಲ್ಲಿ "ಮೋಶನ್ ಪಿಕ್ಚರ ಸೊಸೈಟಿ ಆಫ್ ಇಂಡಿಯಾ" ಎಂಬ ಸಂಸ್ಥೆಯು ಸ್ಥಾಪನೆಯಾಗಿದೆ. ಈ ವಿಧವಾದ ಚಲನ ಚಿತ್ರಪಟ ಸಂಸ್ಥೆಯು ಈ ದೇಶದಲ್ಲಿ ಬೇರೊಂದಿಲ್ಲ. ಈ ಸಂಸ್ಥೆಯವರು "ಫೋಟೊ-ಸಿನೆ-ರೆಡಿಯೊ" ಪ್ರದರ್ಶನವನ್ನು ಏರ್ಪಡಿಸಿದ್ದರು. ಇದರ ಉಪಕ್ರಮ ಸಮಾರಂಭವು ಸರ್. ಎಂ. ವಿಶ್ವೇಶ್ವರಯ್ಯನವರ ಹಸ್ತದಿಂದ ಜರುಗಿಸಲ್ಪಟ್ಟಿತು.

ಸರ್. ಎಂ. ವಿಶ್ವೇಶ್ವರಯ್ಯನವರು ಅಚ್ಚ ಕನ್ನಡಿಗರು. ಹಿಂದುಸ್ಥಾನದ ಉದ್ಯೋಗಾಭಿವೃದ್ಧಿಯ ವಿಚಾರದಲ್ಲಿ ಅವಿಶ್ರಾಂತ ಶ್ರಮ ವಹಿಸುತ್ತ ಹಿಂದುಸ್ಥಾನಕ್ಕೆ ಮಾರ್ಗದರ್ಶಿಗಳಾಗಿದ್ದಾರೆ. ಅಖಿಲ ಭಾರತೀಯ ಇಂತಹ ಸುಪ್ರಸಿದ್ಧ ಮುಂದಾಳುಗಳು ಕನ್ನಡಿಗರಾಗಿರುವುದು ನಮಗೆ ಹೆಮ್ಮೆಯ ಸಂಗತಿಯಲ್ಲವೆ? ಈ ಮಹನೀಯರು ಆ ಕಾಲಕ್ಕೆ ಮಾಡಿದ ಭಾಷಣವು ಇವರ ಎಲ್ಲ ಭಾಷಣಗಳಂತೆಯೇ ಹಿಂದುಸ್ಥಾನದ ಉದ್ಯೋಗಶೀಲರಿಗೆ ಒಂದು ಹೊಸ ಬೆಳಕನ್ನು ಕೊಡತಕ್ಕದ್ದಾಗಿದೆ. ಅದರ ಮುಖ್ಯಾಂಶ ಹೀಗಿದ್ದಿತು.

ಹಿಂದುಸ್ಥಾನದ ಚಿತ್ರಪಟ.

ಹಿಂದುಸ್ಥಾನದಲ್ಲಿ ಸಿನೆಮಾ ಎಂದರೆ ಚಲನ ಚಿತ್ರಪಟದ ಉದ್ಯೋಗವು ಯಾವ ಪ್ರಕಾರ ನಡೆದಿದೆಯೆಂಬ ವಿಷಯದಲ್ಲಿ ಸರಕಾರದ ಹತ್ತಿರ ಸಮಗ್ರವಾದ ಸಂಗತಿಗಳು ತಿಳಿಯುವಂತಿಲ್ಲ. ಜನರು ಸಂಗ್ರಹಿಸಿದ ಸಂಗತಿಗಳಿಂದ ತಿಳಿಯುವುದೇನಂದರೆ ಈ ವರೆಗೆ ೩ ಕೋಟಿ ರೂಪಾಯಿಗಳು ಈ ಉದ್ಯೋಗಕ್ಕೆ ವಿನಿಯೋಗಿಸಲ್ಪಟ್ಟಿವೆ. ೫೭೫ ಸಿನೆಮಾ ಗೃಹಗಳಿವೆ. ೧೦೭ ಕಂಪನಿಗಳು ಈ ಚಲನ ಚಿತ್ರಪಟವನ್ನು ಈ ದೇಶದಲ್ಲಿ ಸಿದ್ಧಗೊಳಿಸುತ್ತಿವೆ.

ಈ ಉದ್ಯೋಗದಲ್ಲಿ ೨೦ ಸಾವಿರ ಜನರು ತೊಡಗಿದ್ದಾರೆ. ಕಚ್ಚಾ ಚಿತ್ರಪಟ, ಯಂತ್ರ, ರಸಾಯನ ಪದಾರ್ಥ ಮೊದಲಾದವುಗಳಿಗಾಗಿ ಪ್ರತಿ ವರುಷ ೫೭ ಲಕ್ಷ ರೂ. ಗಳನ್ನು ಪರದೇಶಗಳಿಗೆ ಕಳಿಸಬೇಕಾಗುತ್ತದೆ. ಕಚ್ಚಾಪಟ (Raw Films) ಅಮೇರಿಕಾ, ಇಂಗ್ಲಂಡ, ಜರ್ಮನಿ, ದೇಶಗಳಿಂದ ಬರುತ್ತವೆ. ಚಲನ ಚಿತ್ರಪಟಕ್ಕೆ ಬೇಕಾಗುವ ಯಂತ್ರ ಸಾಮಗ್ರಿಗಳಲ್ಲಿ ೧೦೦ಕ್ಕೆ ೭೫ ರ ಮಟ್ಟಿಗೆ ಅಮೇರಿಕೆಯಿಂದ ಬರುವವೇ ಹೆಚ್ಚು.

ಮುಂಬೈ ಮತ್ತು ಕಲಕತ್ತಾ ಪಟ್ಟಣಗಳಲ್ಲಿಯೇ ಈ ಚಿತ್ರಪಟಗಳ ಉದ್ಯೋಗ ಹೆಚ್ಚಾಗಿ ನಡೆದಿದೆ. ಪುಣೆ, ಕೊಲ್ಹಾಪುರ, ಮದ್ರಾಸ್ ಮತ್ತು ಲಾಹೋರ ಪಟ್ಟಣಗಳಲ್ಲಿಯೂ ಈಗೀಗ ಈ ಉದ್ಯೋಗ ನಡೆದಿದೆ.

ಪರದೇಶಗಳ ಸ್ಥಿತಿ.

೧೯೩೩ ನೆಯ ಇಸವಿಯಲ್ಲಿ ಅಮೇರಿಕೆಯು ಈ ಉದ್ಯೋಗಕ್ಕಾಗಿ ೫೦೦ ಕೋಟಿ ರೂ. ಗಳ ಬಂಡವಾಳವನ್ನು ಹಾಕಿತ್ತು. ಆ ದೇಶದಲ್ಲಿ ೧೪,೫೦೦ ಸಿನೆಮಾ ಭವನಗಳಿವೆ. ಅವುಗಳಲ್ಲಿಯ ಪ್ರತಿಯೊಂದರಲ್ಲಿಯೂ ೧೨ ಸಾವಿರ ಪ್ರೇಕ್ಷಕರಿಗೆ ಅನುಕೂಲವಿರುತ್ತದೆ. ಒಂದು ವಾರದಲ್ಲಿ ೯-೧೦ ಕೋಟಿ ಜನರು ಸಿನೆಮಾ ನೋಡುತ್ತಾರೆ. ಅಮೇರಿಕೆಯ ಮುಖ್ಯ ಉದ್ಯೋಗಗಳಲ್ಲಿ ಇದು ನಾಲ್ಕನೆಯ ತರಗತಿಯನ್ನು ಹೊಂದಿದೆ. ಈ ಉದ್ಯೋಗದಲ್ಲಿ ೨ ಲಕ್ಷ ಜನರು ತೊಡಗಿದ್ದಾರೆ.

ಚಿತ್ರಪಟಗಳ ಉಪಯೋಗ.

ಚಲನ ಚಿತ್ರಪಟಗಳು ಮನೋರಂಜನೆಗಾಗಿ ಏರ್ಪಟ್ಟಿದ್ದರೂ ಲೋಕ ಶಿಕ್ಷಣವು ಇದರ ಮುಖ್ಯಾಂಗವಾಗಿದೆ. ಹಿಂದುಸ್ಥಾನದಂತಹ ನಿರಕ್ಷರಿಗಳ ದೇಶಕ್ಕಂತೂ ಶಿಕ್ಷಣಕ್ಕೆ ಇದು ಬಹು ಸಹಾಯ ಮಾಡುವುದಾಗಿದೆ. ದೇಶಿ ಚಿತ್ರಪಟಗಳಿಗೆ ಮಧ್ಯಮ ತರಗತಿಯ ಜನರು ನೋಡಲು ಹೋಗುವುದು ಹೆಚ್ಚು. ಸುಶಿಕ್ಷಿತ ವರ್ಗವನ್ನು ಆಕರ್ಷಿಸಿಕೊಳ್ಳುವಷ್ಟು ಇನ್ನೂ ಅವುಗಳಲ್ಲಿ ಸುಧಾರಣೆಯಾಗಿಲ್ಲ.

ಸರಕಾರದ ಕರ್ತವ್ಯ.

ಹಿಂದುಸ್ಥಾನ ಸರಕಾರವು ಈ ಉದ್ಯೋಗಕ್ಕೆ ಪ್ರೋತ್ಸಾಹಿಸುತ್ತಾ ಇಲ್ಲ. ಪರದೇಶಗಳಲ್ಲಿ ಅಲ್ಲಿಯ ಸರಕಾರದವರು ಅನೇಕ ರೀತಿಗಳಿಂದ ಈ ಉದ್ಯೋಗಕ್ಕೆ ಸಹಾಯ ಮಾಡಿ ಬಹು ಅಭಿವೃದ್ಧಿಗೊಳಿಸುತ್ತಿದ್ದಾರೆ. ಕಚ್ಚಾ ಫಿಲಿಮ್ಸ ಇಲ್ಲಿ ಉಂಟಾಗುವುದಿಲ್ಲ. ಅವು ಇಲ್ಲಿಯೇ ಆಗುವುದು ಶಕ್ಯವಿದೆ. ಆ ವಿಧವಾದ ಶಿಕ್ಷಣವನ್ನು ಸರಕಾರವೇ ಕೊಡುವ ವ್ಯವಸ್ಥೆ ಮಾಡಬೇಕು.

ಪರದೇಶಗಳಿಂದ ಬರುವ ಕಚ್ಚಾ ಫಿಲಿಮ್ಸಗಳಿಗೆ ೧೯೧೪ರಲ್ಲಿ ೧೦೦ಕ್ಕೆ ೫ ರಂತೆ ಸುಂಕವಿತ್ತು. ಅದು ದಿನೇ ದಿನೇ ಹೆಚ್ಚುತ್ತಾ ಈಗ ನೂರಕ್ಕೆ ೨೫ ರಂತೆ ಸುಂಕ ಕೊಡಬೇಕಾಗಿದೆ. ಈ ಪ್ರತಿಬಂಧ ದೂರಾಗಬೇಕು. ಈ ಪ್ರಕಾರ ಸರಕಾರವು ನಾನಾ ರೀತಿಗಳಿಂದ ಈ ಉದ್ಯೋಗಕ್ಕೆ ಸಹಾಯ ಮಾಡಿದರೆ ಇದು ಈ ದೇಶದಲ್ಲಿ ಬಹು ಪ್ರಯೋಜನಕಾರಿಯಾದ ಉದ್ಯೋಗವಾಗುವುದು. ಈಗ ಪ್ರತಿ ವರುಷ ಒಂದು ಕೋಟಿ ರೂ. ವರೆಗೆ ಪರದೇಶಗಳಿಗೆ ಹೋಗುತ್ತಿರುವುದೂ ನಿಲ್ಲುವುದು.

ಪತ್ರಿಕೆಗಳ ಕಾರ್ಯ.

ಜನರು ಈ ಉದ್ಯೋಗದ ಕಡೆಗೆ ಹೆಚ್ಚು ಲಕ್ಷಿಸಬೇಕು. ಸುಸಂಘಟಿತವಾದ ರೀತಿಯಲ್ಲಿ ಮಾಡಬೇಕು. ಹಾಗೆ ಮಾಡಲು ಅವರು ಲಕ್ಷಿಸುವಂತೆ ವರ್ತಮಾನ ಪತ್ರಗಳು ಈ ಉದ್ಯೋಗವನ್ನು ಪುರಸ್ಕರಿಸಬೇಕು. ಇದರಿಂದಾಗುವ ಶೈಕ್ಷಣಿಕ ಮತ್ತು ಸಾಂಪತ್ತಿಕ ಪ್ರಯೋಜನಗಳನ್ನು ಜನರಿಗೆ ತೋರಿಸಿಕೊಡಬೇಕು. ಶಾಂತತೆಯ ಕಾಲದಲ್ಲಾಗಲಿ ಅಥವಾ ಯುದ್ಧಕಾಲದಲ್ಲಾಗಲಿ ಇದು ಜನಾಂಗಕ್ಕೆ ಅತ್ಯವಶ್ಯಕವಾದುದಾಗಿದೆ. ಆದುದರಿಂದಲೇ ಪರದೇಶಗಳಲ್ಲಿ ಈ ಉದ್ಯೋಗಕ್ಕೆ ಬಹಳ ಮಹತ್ವವಿದೆ. ಈ ದೇಶದವರೂ ಲಕ್ಷಿಸಿ ಈ ಉದ್ಯೋಗವನ್ನು ಅಭಿವೃದ್ಧಿಗೊಳಿಸಬೇಕು.

ಜೀವಂತ ಮನುಷ್ಯನಾರು?

ಸ್ವತಃ ವಿಚಾರ ಮಾಡಬಲ್ಲವನು.

◆ ◆ ◆ ◆

ಮೊದಲು ಸತ್ಯವನ್ನರಿಯಿರಿ!

ಕರ್ತವ್ಯದ ಮಾರ್ಗ ತಾನೇ ತೋರುವದು.

◆ ◆ ◆ ◆

ಶಿರದಲ್ಲಿ ಸಹಸ್ರ ವಿಚಾರಗಳಿದ್ದರೇನು?

ಕರದಿಂದ ಕೊನೆಗೊಡದಷ್ಟು!

ಅವರೆಲ್ಲಿ? ನಾವೆಲ್ಲಿ? ಸ್ವಲ್ಪ ಕೇಳಿ.

ಪುಣೆಯಲ್ಲಿ ಪ್ರಕಟವಾಗುತ್ತಿರುವ 'ದೀನ ಬಂಧು' ಪತ್ರಿಕೆಯ ಸಂಪಾದಕರಾದ ಡಾಕ್ಟರ್ ವ್ಹಿ. ಎಂ. ನವಲೆ ಎಂಬುವವರು ಪ್ರಪಂಚವನ್ನೆಲ್ಲಾ ಸುತ್ತಿಕೊಂಡು ಬಂದಿದ್ದಾರೆ. ಇವರು ನಾಲ್ಕು ಖಂಡಗಳಲ್ಲಿ ೨೫-೩೦ ದೇಶಗಳನ್ನು, ೨೫ ರಾಜಧಾನಿಗಳನ್ನು, ೫೦ ಪ್ರಸಿದ್ಧ ಪಟ್ಟಣಗಳನ್ನು, ೩-೪ ನೂರು ಗ್ರಾಮಗಳನ್ನು ಪ್ರತ್ಯಕ್ಷ ನೋಡಿ ಅಲ್ಲಿಯ ರಾಜಕೀಯ, ಧಾರ್ಮಿಕ, ಸಾಮಾಜಿಕ, ಔದ್ಯೋಗಿಕ ಮೊದಲಾದ ಅನೇಕ ಸಂಗತಿಗಳನ್ನು ತಿಳಿದುಕೊಂಡು ಬಂದಿದ್ದಾರೆ.

ಕಳೆದ ವರುಷ ಅಮೇರಿಕೆಯ ಶಿಕಾಗೊ ಪಟ್ಟಣದಲ್ಲಿ "ಸೆಂಚರಿ ಪ್ರೊಗ್ರೆಸ್" ಎಂಬ ಒಂದು ನೂರು ವರುಷಗಳಲ್ಲಾದ ಸುಧಾರಣೆಯ ಅಪ್ರತಿಮ ಪ್ರದರ್ಶನವು ಏರ್ಪಟ್ಟಿದ್ದಿತಷ್ಟೆ. ಶ್ರೀ. ನವಲೆಯವರು ಆಗ ಅಲ್ಲಿದ್ದರು. ಇವರು ಆ ಪ್ರದರ್ಶನವನ್ನು ಕಣ್ಣಾರೆ ನೋಡಿದವರು. ಅಲ್ಲಿ ತಾವು ಕಂಡುದನ್ನು ಕೇಸರೀ ಪತ್ರಿಕೆಯ ಕಳೆದ ೨೬ ನೆಯ ತಾರೀಖಿನ ಸಂಚಿಕೆಯಲ್ಲಿ ಒಂದು ಲೇಖನ ಬರೆದು ಈ ಪ್ರಕಾರ ತಿಳಿಸಿದ್ದಾರೆ.

ಪ್ರದರ್ಶನದ ಸ್ಥಿತಿ.

ಕಳೆದ ವರುಷ ಶಿಕಾಗೊ ಪಟ್ಟಣದಲ್ಲಿ ಕೂಡಿದ್ದ ಶತ ಸಾಂವತ್ಸರಿಕ ಸುಧಾರಣಾ ಪ್ರದರ್ಶನಕ್ಕೆ ಬರಲು ನನಗೆ ಆಮಂತ್ರಣವಿದ್ದುದರಿಂದ ಅಲ್ಲಿಯ ಒಳಹೊರಗಿನ ಎಲ್ಲ ಸಂಗತಿಗಳನ್ನೂ ಚೆನ್ನಾಗಿ ತಿಳಿದುಕೊಳ್ಳಲು ನನಗೆ ಅನುಕೂಲವಾಯಿತು. ೧೯೩೪ ನೆಯ ಇಸವಿ ಅಗಸ್ಟ ತಿಂಗಳ ವರೆಗೆ ಯಾವ ಯಾವ ಹೊಸ ಶೋಧಗಳು ಜಗತ್ತಿನಲ್ಲಿ ಮಾಡಲ್ಪಟ್ಟಿದ್ದವೋ ಅವೆಲ್ಲವುಗಳನ್ನೂ ಅಲ್ಲಿ ಸುವ್ಯವಸ್ಥೆಯಿಂದ ಇಟ್ಟಿದ್ದರು.

ಈ ಪ್ರದರ್ಶನವು ೮-೧೦ ಚದುರು ಮೈಲು ವಿಸ್ತಾರವುಳ್ಳದ್ದಾಗಿದ್ದಿತು. ಆರು ತಿಂಗಳುಗಳಲ್ಲಿ ಸಾಧಾರಣ ೨|| ಕೋಟಿ ಜನರು ಈ ಪ್ರದರ್ಶನವನ್ನು ನೋಡಿದರು. ಪ್ರದರ್ಶನದಲ್ಲಿ ತಿರುಗಾಡಲು ವಿಸ್ತಾರವಾದ ಮಾರ್ಗಗಳು. ಮೋಟಾರ್ ಬಸ್ಸುಗಳ ೫೦ ಸ್ಟೇಶನಗಳು. ಜಲಮಾರ್ಗದಿಂದಲೂ ಒಳಗಡೆ ತಿರುಗಾಡಲು ಬೇರೆ ಬೇರೆ ಅನುಕೂಲಗಳು.

ಪ್ರದರ್ಶನದಲ್ಲಿ ಸಾಮಾನುಗಳನ್ನು ಮಾರುವವರು ಮತ್ತು ಬೇರೆ ಬೇರೆ ಕೆಲಸ ಮಾಡುವವರು ಸೇರಿ ೪೦ ಸಾವಿರ ಜನರು. ಒಟ್ಟು ಅಲ್ಲಿ ೫ ಕೋಟಿ ವಿದ್ಯುತ್ ದೀಪಗಳು. ಕಣ್ಣಿಗೆ ಅಪಾಯವಾಗಬಾರದೆಂದು ವಿಶೇಷವಾದ ಸೌಲಭ್ಯ. ೩೦೦ ಅಡಿ ಅಗಲ ೭೦೦ ಅಡಿ ಉದ್ದ ೨೦೦ ಅಡಿ ಎತ್ತರ ಇರತಕ್ಕ ಒಂದು ದಿವ್ಯತರವಾದ ನೀರಿನ ಕಾರಂಜಿ. ಅದರಿಂದ ಪ್ರತಿ ನಿಮಿಷಕ್ಕೆ ೭೦ ಸಾವಿರ ಗ್ಯಾಲನ್ ನೀರು ಆಕಾಶಕ್ಕೆ ಹಾರುತ್ತಿತ್ತು. ಆ ತುಷಾರಗಳ ಮಧ್ಯದಲ್ಲಿ ಬೇರೆ ಬೇರೆ ಬಣ್ಣಗಳ ೫೦೦೦ ವಿದ್ಯುತ್ ದೀಪಗಳಿದ್ದುದರಿಂದ ಪ್ರತಿ ಕ್ಷಣಕ್ಕೂ ಬೇರೆ ಬೇರೆ ದಿವ್ಯ ದೃಶ್ಯಗಳು ಜನರನ್ನು ಆಶ್ಚರ್ಯಗೊಳಿಸಿ ಮೈಮರೆಸುತ್ತಿದ್ದವು.

ಆಕಾಶ ಮಾರ್ಗ.

ಪ್ರದರ್ಶನದಲ್ಲಿ ಜನರ ಸಂಚಾರಕ್ಕೆ ಅನಾನುಕೂಲವಾಗಬಾರದೆಂದು ಆಕಾಶ ಮಾರ್ಗಗಳನ್ನು ಗೊತ್ತುಮಾಡಿದ್ದರು. ಭೂಮಿಯಿಂದ ೫೦೦ ಅಡಿಗಳ ಎತ್ತರದ ಮೇಲೆ ತಂತಿಗಳ ಮೇಲೆ ಓಡಾಡುವ ಗಾಡಿಗಳಿದ್ದವು. ಒಂದೊಂದರಲ್ಲಿ ೫೦-೭೦ ಜನರು ಕುಳಿತಿರುತ್ತಿದ್ದರು. ಕೆಳಗೆ ಓಡಾಡುತ್ತಿದ್ದ ಜನರು ಸಣ್ಣ ಗೊಂಬೆಗಳಂತೆ, ಮೋಟಾರು ಬಂಡಿಗಳು ದೀಪದ ಪೆಟ್ಟಿಗೆಗಳಂತೆ ಕಾಣುತ್ತಿದ್ದವು.

ಇವುಗಳ ಮೇಲೆ ೨೦೦೦ ಅಡಿಗಳ ಆಚೆ ನೂರಾರು ಆಕಾಶಯಾನಗಳು ಸಂಚರಿಸುತ್ತ ಜನರನ್ನು ಅತ್ತಿತ್ತ ತೆಗೆದುಕೊಂಡು ಹೋಗುತ್ತಿದ್ದವು. ಅವುಗಳ ಮೇಲೆ ೪-೫ ಸಾವಿರ ಅಡಿಗಳ ಆಚೆ ಝೆಪ್‌ಲಿನ್ಸ (ವಾತನೌಕಾ) ಸಂಚರಿಸುತ್ತಿದ್ದವು. ಈ ಪ್ರಕಾರ ಆಕಾಶದಲ್ಲಿ ಮೂರು ಮಾರ್ಗಗಳಾಗಿದ್ದವು.

ಪ್ರದರ್ಶನದಲ್ಲಿಯ ನೀಲವರ್ಣದ ಆಕಾಶದಲ್ಲಿ ವಿಮಾನಿನ ಮೂಲಕ ರಸಾಯನ ದ್ರವ್ಯಗಳನ್ನು ಎಸೆದು ೫೦೦ ಅಡಿ ಎತ್ತರವಾದ ಅಕ್ಷರಗಳ ಮೂಲಕ ಪ್ರೇಕ್ಷಕರಿಗೆ ಅಲ್ಲಿನ 'ಬೆಸ್‌ಬಾಲ್' ದ ತೀರ್ಮಾನವನ್ನು ತಿಳಿಸುತ್ತಿದ್ದರು. ಈ ಅಕ್ಷರಗಳು ಹವೆಯಲ್ಲಿ ೨೫-೩೦ ನಿಮಿಷಗಳ ವರೆಗಿರುತ್ತಿದ್ದವು.

ಪ್ರತ್ಯಕ್ಷ ಪ್ರಯೋಗ.

ಪ್ರಾಣಿಶಾಸ್ತ್ರ, ಖಗೋಲಶಾಸ್ತ್ರ, ವಾಯುಶಾಸ್ತ್ರ ಮೊದಲಾದ ಈಗ ಮನುಷ್ಯ ಜಾತಿಗೆ ಗೊತ್ತಿರುವ ಎಲ್ಲ ಪದಾರ್ಥ ವಿಜ್ಞಾನಶಾಸ್ತ್ರಗಳ ಪ್ರಯೋಗಗಳನ್ನೂ ಇಲ್ಲಿ ಪ್ರತ್ಯಕ್ಷ ಮಾಡಿ ತೋರಿಸುತ್ತಿದ್ದರು. ೨೫-೩೦ ಅಡಿ ಎತ್ತರವಾದ ಫೋಟೊ ತೆಗೆದುಕೊಡುತ್ತಿದ್ದರು. ತಂತಿಯ ಸಹಾಯ ಕೂಡಾ ಇಲ್ಲದೆ ದೂರದಲ್ಲಿಯೇ ಹಡಗಗಳನ್ನೂ ವಿಮಾನುಗಳನ್ನೂ ನಿಲ್ಲಿಸುತ್ತಿದ್ದರು. ಒಬ್ಬಾತನ ಭಾಷಣವು ಯಾವ ಯಂತ್ರದ ಸಹಾಯವಿಲ್ಲದೆ ದೂರ ಕೇಳುವಂತೆ ಮಾಡುತ್ತಿದ್ದರು. ಆ ವ್ಯಾಖ್ಯಾತನೇ ಅನೇಕರಿಗೆ ಒಂದೇ ಕಾಲಕ್ಕೆ ಅನೇಕ ಕಡೆ ಕಾಣುವ ಹಾಗೆ ಮಾಡುತ್ತಿದ್ದರು.

ಪ್ರಾಣಿಶಾಸ್ತ್ರ ಶಾಖೆಯ ಗಾಜಿನ ಒಂದು ಮನೆಯಲ್ಲಿ ಒಂದು ಸರೋವರವನ್ನು ನಿರ್ಮಿಸಿದ್ದರು. ಅದರಲ್ಲಿ ಅರ್ಧ ಅಂಗುಲದಿಂದ ಬಹು ದೊಡ್ಡ ಆಕಾರದ ವರೆಗಿನ ಮೀನಗಳೂ ಇದ್ದವು. ಅವು ನೀರಿನಲ್ಲಿ ಹೇಗೆ ನಿದ್ದೆ ಮಾಡುತ್ತವೆ ಮತ್ತು ವಿಶ್ರಾಂತಿ ಹೊಂದುತ್ತವೆ ಎಂಬುದನ್ನು ತೋರಿಸುತ್ತಿದ್ದರು. ಮೀನವು ನೀರಿನಲ್ಲಿ ನಿದ್ದೆಮಾಡುವುದು ಮೀನವಾಗಿ ಹುಟ್ಟಿದಾಗಲೇ ಗೊತ್ತಾಗುವುದೆಂದು ತುಳಸೀ ರಾಮ ಸಾಧುಗಳು ಹೇಳಿರುವುದನ್ನು ಇವರು ಸುಳ್ಳುಮಾಡಿ ತೋರಿಸಿದರು.

ಖಗೋಲಶಾಸ್ತ್ರ ಶಾಖೆಯ ಒಂದು ಸ್ಥಳದಲ್ಲಿ ಹೋಗಿ ಆಕಾಶವನ್ನು ನೋಡಿದರೆ ಮಧ್ಯಾಹ್ನದಲ್ಲಿ ಎಲ್ಲ ನಕ್ಷತ್ರಗಳೂ ರಾತ್ರಿಯಂತೆ ಕಾಣುತ್ತಿದ್ದವು.

ಕೃಷಿ ಶಾಸ್ತ್ರ.

ಈ ಒಕ್ಕಲತನದ ಶಾಸ್ತ್ರದಲ್ಲಂತೂ ಆಶ್ಚರ್ಯಕಾರಕವಾದ ಶೋಧಗಳಾಗಿವೆ. ನಾಲ್ವತ್ತು ಎಕರೆ ಭೂಮಿಯೊಳಗಿನ ಗೋದಿಯ ಬೆಳೆಯನ್ನು ಜನರ ಸಹಾಯವಿಲ್ಲದೆ ಕೊಯಿದು, ಒಕ್ಕಿ, ಚೀಲ ತುಂಬಿ ಒಂದು ಕಡೆ ಹಚ್ಚುತ್ತಿದ್ದ ಯಂತ್ರವೂ ಒಂದಿತ್ತು. ಹತ್ತಿಪ್ಪತ್ತು ಆಕಳುಗಳ ಹಾಲನ್ನು ಹಿಂಡಿ ಬೇರೆ ಬೇರೆ ಪಾತ್ರೆಗಳಿಗೆ ಹಾಕಿ ಅವುಗಳನ್ನು ಭದ್ರಗೊಳಿಸಿ ಅವುಗಳಿಗೆ ಚೀಟಿ ಹಚ್ಚುವ ಕಾರ್ಯ ಒಂದೇ ಯಂತ್ರ ಮಾಡುತ್ತಿದ್ದಿತು. ಲಕ್ಷಾಂತರ ವರುಷಗಳ ಹಿಂದಿನ ಮೃತ ಪ್ರಾಣಿಗಳಿಗೆ ವಿದ್ಯುತ್ ಶಕ್ತಿಯನ್ನು ಕೊಟ್ಟು ಅವು ಸಂಚರಿಸುವಂತೆ ಮಾಡಿದ್ದರು. ಅನೇಕ ಹೂವುಗಳಲ್ಲಿ ಅದ್ಭುತವಾದ ವ್ಯತ್ಯಾಸಗಳನ್ನು ಮಾಡಿದ್ದರು. ಇಂಥ ಸಾವಿರಾರು ಹೊಸ ಶೋಧಗಳು

ಯೋಗ ಶಾಸ್ತ್ರ

ಭಗವಾನ್ ಶ್ರೀಕೃಷ್ಣನು ಗೀತೆಯಲ್ಲಿ ಹೇಳಿದ ಯೋಗ ಶಾಸ್ತ್ರವು ಕಾಲ್ಪನಿಕವಾದುದಲ್ಲ. ಅದನ್ನು ಸಪ್ರಯೋಗವಾಗಿ ಇಲ್ಲಿ ಸಿದ್ಧಮಾಡಿ ತೋರಿಸುತ್ತಿದ್ದರು. ಯೋಗ ಶಕ್ತಿಯಿಂದ ಎರಡು ಸಾವಿರ ಕುದುರೆ ಶಕ್ತಿಯ ವಿದ್ಯುತ್ ಶಕ್ತಿಯನ್ನು ಕೈಯಲ್ಲಿ ಹಿಡಿಯುವುದು, ನಾನಾ ರೋಗಗಳನ್ನು ಕಡಿಮೆ ಮಾಡುವುದು, ಒಬ್ಬರ ವಿಚಾರವು ಇನ್ನೊಬ್ಬರಿಗೆ ಅವರು ಹೇಳದೆ ತಿಳಿಯುವಂತೆ ಮಾಡುವುದು ಇವುಗಳ ಪ್ರತ್ಯಕ್ಷ ಶಿಕ್ಷಣವು ಕೂಡಾ ಅಲ್ಲಿ ದೊರೆಯುತ್ತಿತ್ತು.

ಗರ್ಭದಲ್ಲಿ ೧ ತಿಂಗಳಿಂದ ೯ ತಿಂಗಳುಗಳ ವರೆಗೆ ಮಗು ಬೆಳೆಯುತ್ತಿರುವ ರೀತಿಯನ್ನು ಕಂಡು ಹಿಡಿಯುವುದು; ವಿದ್ಯುತ್ ಶಕ್ತಿಯಿಂದ ಹಾಗೆ ಬೆಳೆಯಿಸಲು ಬರುತ್ತದೆಯೆ? ಎಂಬುದನ್ನು ಪ್ರಯೋಗಗಳಿಂದ ನೋಡುವುದು; ಇವೆಲ್ಲಾ ವೈದ್ಯ ಶಾಸ್ತ್ರಕ್ಕೆ ಸಂಬಂಧಪಟ್ಟವುಗಳಾಗಿದ್ದವು.

ಮಾತನಾಡುವ ಮೋಟಾರ್.

ಟೆಲಿವ್ಹಿಜನ್ ಮತ್ತು ಎಲೆಕ್ಟ್ರಿಕ್ ಲಾಯಿಟ್ ಇವುಗಳ ಸಹಾಯದಿಂದ ಫೋರ್ಡ್ ಸಾಹೇಬರು ಮಾತನಾಡುವ ಮೋಟಾರ ಮಾಡಿ ಪ್ರದರ್ಶನದಲ್ಲಿಟ್ಟಿದ್ದರು. ಇದು ೫-೬ ನೂರು ಜನರು ಕುಳಿತುಕೊಳ್ಳಬಹುದಾದ ಒಂದು ಪ್ರತ್ಯೇಕವಾದ ಕಟ್ಟಡದಲ್ಲಿದ್ದಿತು. ಇದಕ್ಕೆ ಯಾರು ಯಾವ ಪ್ರಶ್ನೆಗಳನ್ನು ಕೇಳಿದರೂ ಉತ್ತರ ಕೊಡುತ್ತಿತ್ತು. ನಾನು ಇದರಿಂದ ೫೦ ಅಡಿ ದೂರದಲ್ಲಿದ್ದೆನು. ನನ್ನ ವಿಳಾಸದ ಕಾರ್ಡನ್ನು ತೋರಿಸಲು ಅದು ನನ್ನ ಹೆಸರನ್ನು ಹೇಳಿತು.

ಒಬ್ಬರು ನಿನ್ನ ಹೆಸರೇನು ಎಂದು ಕೇಳಲು ಅದು, ನಾನು ವಿ. ಫೋರ್ಡ್. ನಾನು ಹುಟ್ಟಿ ೬ ತಿಂಗಳಾಯಿತು. ನನ್ನ ಬೆಲೆ ೨ ಲಕ್ಷ ಡಾಲರ ಎಂಬುವಾಗಿ ಹೇಳಿತು.

ಫೋರ್ಡರ ಕಾರ್ಯಾಲಯ

ನಾನು ೩ ದಿವಸ ಫೋರ್ಡ್ ಸಾಹೇಬರ ಆತಿಥ್ಯದಲ್ಲಿದ್ದೆನು. ಅವರು ತಮ್ಮ ಕಾರ್ಯಾಲಯವನ್ನೆಲ್ಲಾ ತೋರಿಸಿದರು. ಇವರ ಕಾರ್ಯಾಲಯದಲ್ಲಿ ೬೦ ಸಾವಿರ ಜನರು ಹಗಲಿರುಳೂ ಕೆಲಸ ಮಾಡುತ್ತಿದ್ದಾರೆ. ಒಂದು ಮೋಟಾರ ಬಂಡಿಯಲ್ಲಿ ೧೫ ಸಾವಿರ ಸಾಮಾನುಗಳಿರುತ್ತವೆ. ಈ ಎಲ್ಲಾ ಭಾಗಗಳನ್ನು ಕೂಡಿಸಿ ೨೦ ಸೆಕೆಂಡಿಗೆ ಒಂದು ಮೋಟಾರಿನಂತೆ ತಾಸಿಗೆ ೧೮೦ ಮೋಟಾರುಗಳು ತಯಾರಾಗುತ್ತವೆ. ಇವು ೧೯೩೫ನೆ ಇಸವಿಯ ೮ ಸಿಲೆಂಡರ್‌ಗಳ ಗಾಡಿಗಳು. ಇಷ್ಟು ದೊಡ್ಡ ಕಾರ್ಯಾಲಯ ಜಗತ್ತಿನಲ್ಲಿಲ್ಲವೇ ಇಲ್ಲ.

ಇದು ೨೫ ಮೈಲು ಚದುರು ವಿಸ್ತಾರವುಳ್ಳದ್ದು. ಇಲ್ಲಿ ಕೆಲಸ ಮಾಡುವ ೬೦ ಸಾವಿರ ಜನರಲ್ಲಿ ೪೦ ಸಾವಿರ ಜನರು ಮೋಟಾರುಗಳಲ್ಲಿ ಓಡಾಡುವವರು. ಫೋರ್ಡ್ ಸಾಹೇಬರು ತಮಗೆ ಬೇಕಾಗುವ ಕಬ್ಬಿಣ, ಪೆಟ್ರೋಲ್ ಮೊದಲಾದ ಎಲ್ಲ ಸಾಮಾನುಗಳ ಪ್ರತ್ಯೇಕವಾದ ಖಣಿಗಳನ್ನೇ ಇಟ್ಟುಕೊಂಡಿದ್ದಾರೆ.

ಪ್ರದರ್ಶನದ ೧೧ ಎಕರೆ ಸ್ಥಳದಲ್ಲಿ ಇವರು ತಮ್ಮ ನಾನಾ ತರದ ಮೋಟಾರುಗಳನ್ನು ಇಟ್ಟಿದ್ದರು. ಅಲ್ಲಿ ಆ ಎಲ್ಲಾ ಭಾಗಗಳನ್ನು ಮಾಡುವ ಕೃತಿಯನ್ನು ತೋರಿಸಲು ೨ ಸಾವಿರ ಜನರಿದ್ದರು. ಜಗತ್ತಿನ ನಾನಾ ದೇಶಗಳಲ್ಲಿಯ ಭವ್ಯವಾದ ಮೋಟಾರ ಮಾರ್ಗಗಳನ್ನು ಕೂಡಾ ಇಲ್ಲಿ ನೋಡಬಹುದು. ಕಲಕತ್ತಾದಿಂದ ಕಾಬೂಲ ಪಟ್ಟಣದ ವರೆಗಿದ್ದ ೧೮೪೦ ನೆಯ ಇಸವಿಯ ಮಾರ್ಗವು ಇಲ್ಲಿ ಚಿತ್ರಿಸಲ್ಪಟ್ಟಿದ್ದಿತು.

೧ ಅಡಿ ದೊಡ್ಡದಾದ ಮೋಟಾರು ಎಲ್ಲಕ್ಕೂ ಸಣ್ಣದು. ೮೦ ಅಡಿ ಉದ್ದ ೩೯ ಅಡಿ ಎತ್ತರವಾದ ಮೋಟಾರು ಎಲ್ಲಕ್ಕೂ ದೊಡ್ಡದು.

ಔಷಧಾಲಯ

ಪಾರ್ಕ ಡೆವ್ಹಿಚ್ ಕಂಪನಿಯು ಔಷಧಿಗಳನ್ನು ಸಿದ್ಧಗೊಳಿಸುವ ಜಗತ್ತಿನ ಎಲ್ಲಾ ಕಂಪನಿಗಳಿಗಿಂತ ದೊಡ್ಡದು. ಜಗತ್ತಿನ ನಾನಾ ದೇಶಗಳಿಂದ ಒಟ್ಟು ೪೦ ಲಕ್ಷ ಜನ ಡಾಕ್ಟರರು ಇಲ್ಲಿಂದ ಔಷಧಿಯನ್ನು ತರಿಸಿಕೊಳ್ಳುತ್ತಾರೆ. ಇವರಲ್ಲಿ ಹಿಂದುಸ್ಥಾನದ ೩೦ ಸಾವಿರ ಡಾಕ್ಟರರ ಪತ್ರಗಳಿವೆ.

ಪ್ಲೇಗ. ಮಾರಿಕಾ, ವಿಷಮಜ್ವರ ಮೊದಲಾದ ಅನೇಕ ಭಯಂಕರ ರೋಗಗಳನ್ನುಂಟು ಮಾಡುವ ಬೇರೆ ಬೇರೆ ಕ್ರಿಮಿಗಳು ಹೇಗಿರುತ್ತವೆ? ಅವುಗಳ ಬೆಳವಣಿಗೆ ಹೇಗಾಗುತ್ತದೆ? ಎಂಬೆಲ್ಲ ಸಂಗತಿಗಳನ್ನೂ ಇಲ್ಲಿ ಪ್ರತ್ಯಕ್ಷ ನೋಡಬಹುದು. ಎಲ್ಲ ರೋಗಗಳ ಉತ್ಪತ್ತಿ, ಪರಿಹಾರಕ್ಕಾಗಿ ಮಾಡುವ ಉಪಚಾರ ಮೊದಲಾದವುಗಳ ಶಿಕ್ಷಣವು ಇಲ್ಲಿ ದೊರೆಯುತ್ತದೆ.

ಉಗಿಯ ಬಂಡಿ

ಉಗಿಯ ಬಂಡಿ ಮೊದಲು ಪ್ರಾರಂಭವಾದ ರೀತಿಯಿಂದ ಈ ವರೆಗಾದ ಸುಧಾರಣೆಗಳನ್ನೆಲ್ಲಾ ಅಲ್ಲಿ ತೋರಿಸುತ್ತಿದ್ದರು. ಮೊದಲು ಕಟ್ಟಿಗೆಯ ಪಟ್ಟಿಗಳ ಮೇಲೆ ಸಣ್ಣ ಗಾಡಿಗಳು ಓಡಾಡುತ್ತಿದ್ದವು. ಈಗ ೫| ಲಕ್ಷ ಪೌಂಡು ತೂಕದ ಇಂಜನ್‌ಗಳು ಓಡಾಡುತ್ತವೆ. ತಾಸಿಗೆ ೧೫೦ ಮೈಲು ವೇಗದ ಗಾಡಿಗಳು ಈಗ ಪ್ರಚಾರದಲ್ಲಿ ಬಂದಿವೆ.

ವಿಮಾನುಗಳು ತಾಸಿಗೆ ೫೦ ಮೈಲು ವೇಗವಾಗಿದ್ದಾಗಿನ ಸ್ಥಿತಿಗೂ ಈಗ ೨೫೦ ಮೈಲು ವೇಗವಾಗಿರುವ ಸ್ಥಿತಿಗೂ ಉಂಟಾದ ವ್ಯತ್ಯಾಸಗಳನ್ನು ಅಲ್ಲಿ ತೋರಿಸುತ್ತಿದ್ದರು. ವಿಮಾನಿನಲ್ಲಿಯೇ ಭೋಜನ ಗೃಹ, ವಿಶ್ರಾಂತಿ ಗೃಹ ಮೊದಲಾದವುಗಳ ಏರ್ಪಾಟು ಕೂಡಾ ಮಾಡಲ್ಪಟ್ಟಿವೆ.

ಇದೇ ಪ್ರಕಾರ ಗಡಿಯಾರಗಳಲ್ಲಿಯೂ ಸುಧಾರಣೆ. ಕೈಬೆರಳಿನ ಉಂಗರದಲ್ಲಿಡುವ ಗಡಿಯಾರದಿಂದ ೧೦೦ ಅಡಿ ಎತ್ತರದ ವರೆಗಿನ ಗಡಿಯಾರಗಳು ಅಲ್ಲಿದ್ದವು. ಪೋಸ್ಟ ಟಿಕಿಟಿನಷ್ಟು ಚಿಕ್ಕದಾದ ಸ್ಥಳದಲ್ಲಿ ಹತ್ತು ಸಾವಿರ ಸ್ಕ್ರೂಗಳನ್ನು ಹಿಡಿಯುವಷ್ಟು ಚಿಕ್ಕದಾದ ಸ್ಕ್ರೂ ಮಾಡುವ ಸಿದ್ಧತೆಯೂ ಅಲ್ಲಿ ನಡೆದಿದ್ದಿತು.

ಹಿಂದುಸ್ಥಾನವೆಲ್ಲಿ?

ಈ ಪ್ರದರ್ಶನದಲ್ಲಿ ೨೦೦ ನಾಟಕ, ಸಿನೆಮಾ, ವ್ಯಾಖ್ಯಾನಗಳ ಮಂದಿರಗಳು, ೨೫೦ ಘನತರವಾದ ಉಪಾಹಾರ ಗೃಹಗಳು ಇದ್ದವು. ಜಗತ್ತಿನ ಎಲ್ಲಾ ರಾಷ್ಟ್ರಗಳೂ ತಮ್ಮ ತಮ್ಮ ರಾಷ್ಟ್ರದ ಹಳ್ಳಿಗಳನ್ನು ಮಾದರಿಗಾಗಿ ಈ ಪ್ರದರ್ಶನದಲ್ಲಿ ನಿರ್ಮಿಸಿದ್ದರು. ಇಂತಹ ೬೦ ಹಳ್ಳಿಗಳಿದ್ದವು. ಅಫಗಾಣಿಸ್ಥಾನದ ಹಳ್ಳಿ ಕೂಡಾ ಇದ್ದಿತು. ಆದರೆ ಹಿಂದುಸ್ಥಾನದ ಹೆಸರೇ ಇಲ್ಲ. ಅಲ್ಲಿದ್ದ ೪೦೦೦೦ ಕೆಲಸಗಾರರಲ್ಲಿ ಹಿಂದುಸ್ಥಾನದವರು ೨-೩ ಜನರು ಮಾತ್ರ!"

ಅವರೆಲ್ಲಿ? ಸ್ವಾತಂತ್ರ್ಯದಲ್ಲಿ. ನಾವೆಲ್ಲಿ? ಪಾರತಂತ್ರ್ಯದಲ್ಲಿ. ಅವರೆಲ್ಲಿ? ಜ್ಞಾನ ಜ್ಯೋತಿಯಲ್ಲಿ. ನಾವೆಲ್ಲಿ? ಅಜ್ಞಾನಾಂಧಕಾರದಲ್ಲಿ. ಅವರೆಲ್ಲಿ? ಸ್ವರ್ಗಸುಖದಲ್ಲಿ. ನಾವೆಲ್ಲಿ? ನರಕ ದುಃಖದಲ್ಲಿ.

—ಸ್ಪೇನದ ಪೂರ್ವದ ಅರಸನಾಗಿದ್ದ ಅಲ್ಫಾನ್ಸೊ ಇವರ ಚಿರಂಜೀವನಾದ ಡಾನ್‌ಜೇಮ ಈತನಿಗೆ ಸಿಂಹಾಸನದ ಅಧಿಕಾರ ದೊರೆಯುವದಿದ್ದಿತು. ಆದರೆ ಇವನು ರಾಜ ಕನ್ನಿಕೆಯನ್ನು ಮಾಡಿಕೊಳ್ಳದೆ ಒಬ್ಬ ಸಾಮಾನ್ಯ ಕನ್ನಿಕೆಯನ್ನು ಲಗ್ನ ಮಾಡಿಕೊಂಡದ್ದರಿಂದ ಅವನ ರಾಜ್ಯಪದದ ಹಕ್ಕು ಮುಳುಗಿತು. ಪ್ರೇಮಕ್ಕಾಗಿ ಅವನು ರಾಜ್ಯದ ಆಸೆಯನ್ನು ಬಿಟ್ಟನು.

ಆದಿಜನರ ಸಮಸ್ಯೆ ಇಂದಿನದಲ್ಲ; ಬೌದ್ಧಮತಕಾಲದ್ದು.

[ಕವಿಸಾರ್ವಭೌಮ ರವೀಂದ್ರನಾಥ ಟಾಗೋರರವರ ಲೇಖನದ ಅನುವಾದ.]

ಕೊಪ್ಪದ ಶ್ರೀ. ರಾಮಸ್ವಾಮಯ್ಯಂಗಾರ್ಯರು.

ಅಸ್ಪೃಶ್ಯತಾ ಸಮಸ್ಯೆಯು ನಮ್ಮ ಭರತಖಂಡಕ್ಕೆ ನವೀನವಾದುದಲ್ಲ. ಹಿಂದಿನ ಪುರಾಣಗಳಲ್ಲೂ ಈ ವಿಷಯವಾಗಿ ತಂಡೋಪತಂಡವಾಗಿ ವಾಗ್ವಾದಗಳು ಕಂಡುಬಂದಿವೆ. ಡಾ. ರಾಜೇಂದ್ರಲಾಲ ಮಿತ್ರರವರು, 'ನೇಪಾಳ ದೇಶದ ಬೌದ್ಧ ಸಂಸ್ಕೃತಿಯ ಪ್ರಭಾವ' ವೆಂಬದಾಗಿ ಬರೆದಿರುವ ಗ್ರಂಥದಲ್ಲಿ ಅಸ್ಪೃಶ್ಯತೆಯೂ ವರ್ಣ ವಿಭಾಗವೂ ವಿಶೇಷವಾಗಿ ತಿಳಿಸಲ್ಪಟ್ಟಿದೆ. ಬ್ರಾಹ್ಮಣ ಚಂಡಾಲ ಶಬ್ದಗಳ ನಿರೂಪಣೆಯು ಈ ಗ್ರಂಥದಲ್ಲಿ ಸ್ಪಷ್ಟಪಡಿಸಲ್ಪಟ್ಟಿದೆ. ಆ ಗ್ರಂಥದಲ್ಲಿರುವ ಕಥೆಯನ್ನು ವಾಚಕರಿಗೆ ತಿಳಿಯಪಡಿಸುವುದಕ್ಕಿಂತ ನಾನು ಹೆಚ್ಚು ವರ್ಣಿಸುವುದು ಅನಾವಶ್ಯಕ.

ಗಂಗಾ ನದಿಯ ತೀರದಲ್ಲಿರುವ ಕಾಡಿನಲ್ಲಿ ತ್ರಿಶಂಕು ಎಂಬ ಒಬ್ಬ ಚಂಡಾಲನು ವಾಸವಾಗಿದ್ದನು. ತನ್ನ ಜಾತಿಗೆ ಸೇರಿದ ೧೦೦೦೦ ಮಂದಿಗೆ ಈತನೇ ನಾಯಕನು. ಈತನು ಹಿಂದಿನ ಜನ್ಮದಲ್ಲಿ ವೇದ, ಇತಿಹಾಸ, ಧರ್ಮಶಾಸ್ತ್ರಗಳನ್ನೂ ಇತರ ಗ್ರಂಥಗಳನ್ನೂ ಓದಿದ್ದನು. ಈ ಜನ್ಮದಲ್ಲಿ ಅವುಗಳೆಲ್ಲವೂ ಆತನಿಗೆ ಜ್ಞಾಪಕದಲ್ಲಿದ್ದಿತು. ತನಗೆ ಜ್ಞಾಪಕದಲ್ಲಿರುವಷ್ಟು ಮಟ್ಟಿಗೆ ಆತನು ತನ್ನ ಮಗನಾದ ಶಾರ್ದೂಲ ಕರ್ಣನಿಗೆ ಕಲಿಸಿದನು. ಆದರಿಂದ ಶಾರ್ದೂಲ ಕರ್ಣನು ಪಂಡಿತನಾದನು. ಪುಷ್ಕರಸಾರಿ ಎಂಬ ಬ್ರಾಹ್ಮಣನಿಗೆ ಪರಿಪೂರ್ಣ ಪಾಂಡಿತ್ಯವುಳ್ಳ ಮಗಳೊಬ್ಬಳು ಇದ್ದಳು. ಆ ಕನ್ಯೆಯನ್ನು ತನ್ನ ಸೊಸೆಯಾಗಿ ಮಾಡಿಕೊಳ್ಳಬೇಕೆಂಬ ಆಶೆಯು ತ್ರಿಶಂಕುವಿಗೆ ಉಂಟಾಯಿತು. ತರುವಾಯ ಮಾರನೆಯ ದಿನ ತನ್ನ ಪರಿವಾರದೊಡನೆ ಹೊರಟು ಪುಷ್ಕರಸಾರಿಯ ಮನೆಗೆ ಬಂದನು. ಆ ಬ್ರಾಹ್ಮಣನಿಂದ ತಕ್ಕ ಸನ್ಮಾನವನ್ನು ಪಡೆದನು. ತನ್ನ ಅಭಿಪ್ರಾಯವನ್ನು ತಿಳಿಸುತ್ತಲೇ ಆ ಬ್ರಾಹ್ಮಣನು ಚಂಡಾಲನ ಆಶೆಗೆ ಅಸಮ್ಮತಿಯನ್ನು ತೋರ್ಪಡಿಸಿದನು. ವರ್ಣವಿಚಕ್ಷಣೆಯ ವಿಷಯವಾಗಿ ಉಭಯತರಿಗೂ ದೀರ್ಘವಾದೋಪವಾದವು ನಡೆಯಿತು. ತ್ರಿಶಂಕುವಿನ ವಾದದ ಸಾರವನ್ನು ಮುಂದೆ ಕೊಟ್ಟಿದೆ.

"ಚಿನ್ನಕ್ಕೂ ಬೂದಿಗೂ ಸಾಕಾದಷ್ಟು ವ್ಯತ್ಯಾಸವಿರುವುದು; ಆದರೆ ಬ್ರಾಹ್ಮಣನಿಗೂ ಇತರ ವರ್ಣಸ್ಥರಿಗೂ ಈ ಭೇದವು ಇಲ್ಲ. ಉರಿಯುತ್ತಿರುವ ಕೊಳ್ಳಿಯಿಂದ ಹುಟ್ಟಿದ ಬೆಂಕಿಯಂತೆ ಬ್ರಾಹ್ಮಣನು ಹುಟ್ಟಲಿಲ್ಲ; ಆಕಾಶದಿಂದ ಹುಟ್ಟಿ ಜಾರಿ ಬೀಳಲಿಲ್ಲ; ವಾಯುಮಾರ್ಗದಿಂದ ಎದ್ದು ಬಂದವನಲ್ಲ. ಭೂಮಾರ್ಗದಿಂದ ಹೊರಟವನಲ್ಲ. ಚಂಡಾಲನಂತೆ ಬ್ರಾಹ್ಮಣನೂ ಕೂಡ ಸ್ತ್ರೀಯೋನಿಯಿಂದಲೇ ಹುಟ್ಟಿದವನು. ಇತರ ಜಾತಿಗಳವರಂತೆಯೇ ದುರ್ವಾಸನೆಯಿಂದ ಕೂಡಿರುವವನು. ಭೇದವು ಎಳ್ಳಷ್ಟಾದರೂ ಇಲ್ಲ. ಬ್ರಾಹ್ಮಣರು ಮಾಂಸಾಹಾರಮುಕ್ತರಾಗಿ, ಅಮಾನುಷಿಕವಾಗಿ ಜೀವಹಿಂಸೆ ಮಾಡುತ್ತಿರುವರು. ಮಂತ್ರಗಳಿಂದ ಸಾಯಿಸುವುದರಿಂದ ಮೇಕೆಗಳೇ ಮೊದಲಾದ ಪ್ರಾಣಿಗಳು ಸ್ವರ್ಗಕ್ಕೆ ಸೇರುವವೆಂದು ಹೇಳುವರು. ಇದು ನಿಜವಾದಲ್ಲಿ ತಮ್ಮ ತಂದೆ, ಹೆಂಡತಿ ಮಕ್ಕಳೊಂದಿಗೆ ಇದೇ ರೀತಿ ಸುಲಭವಾಗಿ ಇವರುಗಳನ್ನು ಸ್ವರ್ಗಕ್ಕೆ ಏಕೆ ಕಳುಹಿಸಬಾರದು? ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಶಬ್ದಗಳು ಹೆಸರು ಮಾತ್ರಕ್ಕೆ ಇರುವ ಸಂಕೇತಗಳು. ಹೆಸರು ಇಟ್ಟ ಮಾತ್ರಕ್ಕೆ ಪಂಡಿತನಾಗನು. ಎಲ್ಲರೂ ಮನುಷ್ಯ ಮಾತ್ರದವರೇ. ಕಾಲುಗಳು, ಕೈಗಳು, ತೊಡೆ, ಉಗುರು, ಮಾಂಸ ಇವುಗಳೆಲ್ಲವೂ ಎಲ್ಲರಿಗೂ ಸರಿಸಮಾನವಾದವುಗಳು. ಬ್ರಾಹ್ಮಣನನ್ನು ಕೊಯ್ದರೆ ಹಾಲೂ, ಶೂದ್ರನನ್ನು ಗಾಯಪಡಿಸಿದಲ್ಲಿ ಮಾತ್ರ ರಕ್ತವೂ ಬಾರದು. ಬಾಲಕರು ಆಟಗಳಲ್ಲಿ ಮಣ್ಣನ್ನು ಹಂಚಿಕೊಂಡು, ಅದರಲ್ಲಿಯೇ ಸ್ವಲ್ಪ ನೀರು, ಸ್ವಲ್ಪ ಹಾಲು, ಸ್ವಲ್ಪ ಮೊಸರು, ಕೊಂಚ ಮಾಂಸ, ಸ್ವಲ್ಪ ತುಪ್ಪ, ಇನ್ನೂ ಬಗೆಬಗೆಯ ವಸ್ತುಗಳಾಗಿ ಹೇಳಿಕೊಂಡು ವಿಹಾರ ನಡೆಸುವರು. ಅಷ್ಟು ಮಾತ್ರಕ್ಕೆ ಮಣ್ಣು ಧೂಳಿಯಾಗಿರದೆ ಧಾನ್ಯವಾಗುವುದೆ?

ಅದೇ ರೀತಿಯಾಗಿ ಚತುರ್ವರ್ಣಗಳು ಹೆಸರುಮಾತ್ರಗಳಾಗಿವೆ. ಪ್ರಾಣಿಕೋಟಿಯಲ್ಲಿ ಸ್ವಲ್ಪ ಭೇದವಾವುದು? ಕುದುರೆಗೂ, ಹಸುವಿಗೂ, ವ್ಯತ್ಯಾಸವಿರುವಂತೆ 'ಮಾವಿನ ಹಣ್ಣು ನೇರಳೇ ಹಣ್ಣಿಗೆ ವ್ಯತ್ಯಾಸವಿರುವುದು.' ಆದರೆ ಮನುಷ್ಯರಲ್ಲಿ ಹಾಗಲ್ಲ. ಬ್ರಾಹ್ಮಣರಿಂದ ಬ್ರಾಹ್ಮಣರೇ ಹುಟ್ಟುತ್ತಿರುವರೆಂದೂ ಶೂದ್ರರಿಂದ ಶೂದ್ರರೇ ಸೃಷ್ಟಿಸಲ್ಪಡುವರೆಂದೂ ಶಾಸ್ತ್ರವಿದ್ದಲ್ಲಿ, ಅದಕ್ಕನುಗುಣವಾಗಿ ಆಕಾರಭೇದವು ಇದ್ದೇ ಇರಬೇಕಲ್ಲವೆ? ನಾಲ್ಕು ವರ್ಣಗಳವರು ತಮ್ಮ ಕೃಷಿಗೆ ತಕ್ಕಂತೆ ಫಲವನ್ನು ಅವರೇ ಹೊಂದುವರು. ಎಲ್ಲರಿಗೂ ಮೋಕ್ಷವು ಲಭಿಸುವುದು. ವ್ಯವಹಾರ ರೀತಿಯಲ್ಲಿ ನಾಲ್ಕು ವರ್ಣಗಳು. ತನ್ನ ಜಮೀನನ್ನು ಉತ್ತು ಆರಂಭಮಾಡುವವರು ಶೂದ್ರರು. ಕ್ಷತ್ರಿಯರು ರಾಜ್ಯವಾಳಿ ಸಂರಕ್ಷಿಸುವರು. ಎಲ್ಲಾ ಭೋಗಗಳನ್ನು ಬಿಟ್ಟು ಕಾಡುಗಳಲ್ಲಿ ಸೊಪ್ಪು ಸೊದೆ ತಿಂದು ಯಾವಾಗಲೂ ದೇವರನ್ನು ಧ್ಯಾನಿಸುವವರು ಬ್ರಾಹ್ಮಣರು. ಬ್ರಾಹ್ಮಣರಲ್ಲಿ, ಗ್ರಾಮಗಳಿಗೆ ಬಂದು ಜನರಿಗೆ ಮಂತ್ರೋಪದೇಶಮಾಡುವವರು ಅಧ್ಯಾಪಕರು. ನಿತ್ಯ ಜೀವನೋಪಾಧಿಗಾಗಿ ಸೇವೆಮಾಡುತ್ತಾ ಕಾಲಹರಣ ಮಾಡುವವರು ಶೂದ್ರರು. ವರ್ತಕವ್ಯಾಪಾರ ಮಾಡುವವರು ವೈಶ್ಯರು, ಪ್ರಜೆಗಳನ್ನು ರಕ್ಷಿಸಿ ರಾಜ್ಯಪಾಲನೆ ಮಾಡುವವರು ಕ್ಷತ್ರಿಯರು. ಅಷ್ಟೇ ಹೊರತು ರಾಜ್ಯಾಂಗ ಪರಿಪಾಲನೆಯ ಅರ್ಹತೆಯಾಗಲಿ, ಇತರ ಅರ್ಹತೆಗಳಾಗಲಿ ಒಬ್ಬರಿಗೇನೆ ವಂಶಪಾರಂಪರ್ಯವಾಗಿ ಸಂದಿರಲಾರದು." 'ವಿಶ್ವಕರ್ಣಾಟಕ.'

ಈ ಮೇಲಣ ಕಥೆಯು ಈಗಿನ ಅಸ್ಪೃಶ್ಯತಾ ನಿವಾರಣೆಗಿಂತ ಮಿಶ್ರ ವಿವಾಹಕ್ಕೆ ಹೆಚ್ಚು ಸಂಬಂಧಪಟ್ಟದ್ದಾಗಿದೆ. ಮಿಶ್ರ ವಿವಾಹದ ವಿಚಾರವಾಗಿ ಈಗ ಅಗಿನಂತೆಯೇ ವಿಚಾರವುಳ್ಳವರೂ ಇದ್ದಾರೆ. ಭಿನ್ನ ವಿಚಾರಿಗಳೂ ಇದ್ದಾರೆ. ಕಾಶಿ ಹಿಂದು ವಿಶ್ವವಿದ್ಯಾಲಯದ ಪ್ರೊ. ಅನಂತ ಸದಾಶಿವ ಅಳತೇಕರ ಇವರು ಬ್ರಾಹ್ಮಣ ಶೂದ್ರ ವಿವಾಹದ ವಿಚಾರವಾಗಿ ಹೀಗೆ ಬರೆದಿದ್ದಾರೆ.

"ಬ್ರಾಹ್ಮಣಾದಿ ದ್ವಿಜರಾದ ಮೂರು ವರ್ಣದವರಲ್ಲಿ ಪರಸ್ಪರ ಲೋಮ ವಿಲೋಮ ಲಗ್ನಗಳಾಗುತ್ತಿದ್ದವು. ಸ್ಮೃತಿಗಳಲ್ಲಿಯೂ ಐತಿಹಾಸಿಕ ಸಂಗತಿಗಳಲ್ಲಿಯೂ ಇದಕ್ಕೆ ಆಧಾರಗಳಿವೆ. ಶೂದ್ರರಿಗೂ ಬ್ರಾಹ್ಮಣರಿಗೂ ಲಗ್ನವಾಗುತ್ತಿದ್ದುದು ಬಹು ಕಡಿಮೆ. ಕ್ರಿ. ಶ. ೫ನೆಯ ಶತಮಾನದಲ್ಲಿ ಬಂಗಾಲದಲ್ಲಿ ಲೋಕನಾಥನೆಂಬ ಒಬ್ಬ ಬ್ರಾಹ್ಮಣನಿದ್ದನು. ಆತನ ತಾಯಿಯ ತಂದೆಯು ಒಬ್ಬ ಶೂದ್ರ ಸ್ತ್ರೀಯಳನ್ನು ಲಗ್ನವಾಗಿದ್ದನು. ಆ ಮಿಶ್ರ ವಿವಾಹದಿಂದಾದ ಸಂತತಿಯ ಸಂಗಡ ಶುದ್ಧ ಬ್ರಾಹ್ಮಣರ ಶರೀರ ಸಂಬಂಧವಾಗುತ್ತಿದ್ದಿತು.

ಹರ್ಷ ಚರಿತ್ರಕಾರನಾದ ಸುಪ್ರಸಿದ್ಧ ಬಾಣನ ತಾಯಿಯು ಶೂದ್ರಳು. ರಾಜ ಕನ್ಯಾ ಅನಂಗರತಿಯ ಸ್ವಯಂವರದ ಕಾಲಕ್ಕೆ ಅಕೆಯ ತಂದೆಯು ಈ ನಾಲ್ಕು ವರ್ಣಗಳ ತರುಣರಲ್ಲಿ ಯಾರನ್ನು ನೀನು ವರಿಸುವೆ? ಎಂದು ಕೇಳಿದ್ದನ್ನು ನೋಡಿದರೆ ಕ್ಷತ್ರಿಯ ಸ್ತ್ರೀಯರು ಕೂಡಾ ಶೂದ್ರರನ್ನು ಲಗ್ನವಾಗುತ್ತಿದ್ದರೆಂದು ತೋರುತ್ತದೆ."

[ಸಂಪಾದಕ]

ಹಿಂದು ಸಂಸ್ಕೃತಿ.

ಹಿಂದು ಶಬ್ದವನ್ನು ದೇಶ ಮತ್ತು ಧರ್ಮಗಳ ಮೇಲಿಂದ ವಿವೇಚಿಸಿ ಅದರ ವ್ಯಾಖ್ಯೆಯ ಅರ್ಥ ಮಾಡುವದಕ್ಕಿಂತಲೂ ಸಂಸ್ಕೃತಿ ಪರವಾಗಿ ಮಾಡುವ ವ್ಯಾಖ್ಯೆಯು ಹೆಚ್ಚು ಫಲಕಾರಿಯಾಗಿದೆ. ಜರ್ಮನರು ವಾಸಿಸುವ ಜರ್ಮನಿಯಲ್ಲಿ ಜರ್ಮನ್ ಎಂಬ ಧರ್ಮವೇನೂ ಇಲ್ಲ. ಆದರೆ ಜರ್ಮನ್ ಸಂಸ್ಕೃತಿ ಇದೆ ಆಯಾ ಸಂಸ್ಕೃತಿಯ ಹೆಸರಿನಿಂದಲೇ ಆಯಾ ದೇಶಕ್ಕೆ ಅಥವಾ ಆಯಾ ನಿವಾಸಿಗಳಿಗೆ ಆಯಾ ಹೆಸರು ಬರುವದು. ಹಿಂದು ದೇಶ, ಹಿಂದು ಜನ ಈ ಹೆಸರುಗಳು ಹಿಂದು ಸಂಸ್ಕೃತಿಯಿಂದಲೇ ಬರುವದು ಯೋಗ್ಯ. ಹಿಂದುಗಳೆಂಬವರಲ್ಲಿ ಸಂಘಟನೆಯುಂಟಾಗಿ ಐಕ್ಯವು ಸ್ಥಾಪಿತವಾಗಬೇಕಾದರೆ, ಹಿಂದುಗಳ ಚಟುವಟಿಕೆಯುಂಟಾಗಿ ಹಿಂದು ದೇಶದಲ್ಲಿ ಶಾಂತಿ ಸಮಾಧಾನಗಳು ತಲೆದೋರಬೇಕಾದರೆ ಮತ್ತು ಪರದೇಶದವರು ಹಿಂದುವನ್ನು ಗುರುತಿಸಬೇಕಾದರೆ ಹಿಂದು ಸಂಸ್ಕೃತಿಯಿಂದಲೇ ಶಕ್ಯ. ಉಳಿದ ರೀತಿಗಳು ಇದರಷ್ಟು ವ್ಯಾಪಕ ಅರ್ಥವನ್ನು ತಂದು ಕೊಡಲಾರವು.

ಹಾಗಾದರೆ ಹಿಂದು ಸಂಸ್ಕೃತಿಯು ಇಂಥದೇ ಎಂದು ನಿಶ್ಚಯಿಸಲು ಶಕ್ಯವಿದೆಯೋ? ಇದೆ. ಹಿಂದುಸ್ಥಾನದಲ್ಲಿರುವ ವಿವಿಧ ಮತ, ಪಂಥ, ಕಲ್ಪನೆಗಳುಳ್ಳ ಜನರಲ್ಲಿ ಒಂದು ವಿಧವಾದ ಸಾಮ್ಯತೆಯು ಕಂಡುಬರುತ್ತದೆ. ಈ ಸಾಮ್ಯತೆಯು ಸಾರವೇ ಸಂಸ್ಕೃತಿಯಾಗಿದೆ. ಈ ಸಂಸ್ಕೃತಿಯ ಬಗ್ಗೆ ಆದರಾಭಿಮಾನಗಳು ಹೇಗೆ ವೃದ್ಧಿಯಾಗುತ್ತ ಹೋಗುವವೋ ಹಾಗೆ ಹಾಗೆ ಅವರಲ್ಲಿ ಪ್ರೇಮ, ಸಂಘಟನೆ, ಐಕ್ಯಗಳು ಬೆಳೆಯುತ್ತ ಹೋಗುತ್ತವೆ.

ಹಿಂದುಗಳೆಲ್ಲರಲ್ಲಿ ಒಂದು ಒಡೆದು ತೋರುವ ಸಮಾನ ಗುಣವೆಂದರೆ ಧರ್ಮ ಸಹಿಷ್ಣುತೆ. ಧರ್ಮದ ಹೆಸರಿನಲ್ಲಿ ಪರಚಕ್ರಗಳ ಮೇಲೆ ಏರಿ ಹೋಗುವ ಪ್ರವೃತ್ತಿಯು ಇವರಲ್ಲಿ ಇಲ್ಲವೇ ಇಲ್ಲ. ತಮ್ಮ ಧರ್ಮವು ಶ್ರೇಷ್ಠವೆಂದು ಭಾವಿಸಬಹುದು. ಆದರೆ ಅನ್ಯರ ಧರ್ಮವು ಸುಳ್ಳೆಂದು ಸಾಧಿಸಲಾರರು. ಎಲ್ಲ ಧರ್ಮಗಳೂ ಆ ಪರಮಾತ್ಮನ ಕಡೆಗೇನೇ ಹೋಗುತ್ತವೆಂದು ಇವರ ನಂಬಿಗೆ. ಹಾಗೆಯೇ ಪರಂಪರಾಪ್ರಿಯತೆ, ಉಪಕಾರಿಗಳ ಬಗ್ಗೆ ಪೂಜ್ಯತೆ, ಸಾದಾಜೀವನ ಮೊದಲಾದವು ಇವರ ವೈಶಿಷ್ಟ್ಯಗಳಾಗಿವೆ. ಇಂಥ ಮನೋವೃತ್ತಿಗಳ ಆಧಾರದ ಮೇಲಿಂದಲೇ ಹಿಂದುತ್ವದ ಚಟುವಟಿಕೆಯನ್ನು ಪ್ರಾರಂಭಿಸಿದರೆ ಅದು ಸರ್ವತ್ರ ಪ್ರಸಾರಣೆಯನ್ನು ಹೊಂದಿ ಜಾಗೃತಿಯನ್ನುಂಟುಮಾಡುವದೆಂಬುದರಲ್ಲಿ ಸಂದೇಹವಿಲ್ಲ.

ಅಖಿಲ ಹಿಂದುಗಳ ಮನೋವೃತ್ತಿಯ ನಿರೀಕ್ಷಣೆಯಿಂದ ಈ ಕೆಳಗಿನ ಅಂಶಗಳು ವ್ಯಕ್ತವಾಗುತ್ತಿದ್ದು ಅವೇ ಪ್ರತಿಯೊಬ್ಬ ಹಿಂದುವಿನ ಜೀವನ-ಸರ್ವಸ್ವವಾಗಿರುವವು.

(೧) **ಪುಣ್ಯ ಭೂಮಿ.** ಅತಿ ಪ್ರಾಚೀನ ಕಾಲದಿಂದಲೂ ಈ ಹಿಂದು ದೇಶವು ವಿಶ್ವವ್ಯಾಪಕ ಧರ್ಮದ ಮೂಲ ಕ್ಷೇತ್ರವಾಗಿದ್ದು ಅಂದಿನಿಂದಲೂ ಜಗತ್ತಿಗೆಲ್ಲ ಧರ್ಮ ಫಲಗಳನ್ನು ಕೊಟ್ಟು ತೃಪ್ತಪಡಿಸಿದೆ. ಇದನ್ನು ಹಿಂದುವು ಯಾವಾಗಲೂ ಪುಣ್ಯ ಭೂಮಿಯೆಂದು ಭಾವಿಸುವನು. ತಾನು ಅನುಸರಿಸುತ್ತಿರುವ ಧರ್ಮವು ಇಂಥ ದೇಶದಲ್ಲಿ ಉತ್ಪನ್ನವಾಗಿರುವುದರಿಂದ ಆ ದೇಶವು ತನಗೆ ಪರಮ ಪೂಜ್ಯವೆಂದೂ ಉಳಿದೆಲ್ಲ ದೇಶಗಳಗಿಂತ ಹೆಚ್ಚು ಪ್ರಿಯವೆಂದೂ ಆಚರಿಸುವನು.

(೨) **ಪುಣ್ಯ ಪುರುಷರ ಭೂಮಿ.** ಈ ದೇಶದಲ್ಲಿ ಜನ್ಮವೆತ್ತಿ ಬಹು ಪ್ರಾಚೀನ ಕಾಲದಿಂದಲೂ ಬಂದ ಪುಣ್ಯ ಪುರುಷರು ತಮ್ಮ ಪವಿತ್ರ ಮತ್ತು ಉಜ್ವಲ ಜೀವನಗಳಿಂದ ಹಿಂದು ಸಂಸ್ಕೃತಿಯ ಸಸಿಯನ್ನು ಪೋಷಿಸಿ ನಮ್ಮೆಲ್ಲರ ಜೀವನಕ್ಕೆ ಆಧಾರವಾಗುವಂತೆ ಮಾಡಿಕೊಟ್ಟಿರುವರೆಂದು ತಿಳಿದು ಹಿಂದುವು ಅವರ ಬಗ್ಗೆ ಅತ್ಯಾದರವನ್ನೂ ಘನ ಕೃತಜ್ಞತೆಯನ್ನೂ ವಹಿಸುವನು. ಅವರನ್ನು ದೂಷಿಸುವದು ಅಥವಾ ನಿರಾಕರಿಸುವದು ಅಧರ್ಮವೆಂದೂ, ಅಹಿಂದುತ್ವವೆಂದೂ ತಿಳಿಯುವನು.

(೩) ಸನಾತನತ್ವ ಹಿಂದುವಿನ ಲಕ್ಷಣವು.

(೪) ಹಿಂದುವು ಒಕ್ಕಲುತನ ಮತ್ತು ಒಕ್ಕಲಿಗನ ಬಗ್ಗೆ ವಿಶೇಷ ಅಭಿಮಾನಪಡುವನು. ಅವನ ಜೀವನಕ್ಕೆ ಆವಶ್ಯಕವಿರುವ ಉಳಿದ ಕಸಬುಗಳನ್ನೂ, ಪಶುಗಳನ್ನೂ ವಿಶೇಷವಾಗಿ ಪ್ರೀತಿಸುವನು. ತಾನು ಒಕ್ಕಲಪ್ರೇಮಿ ಎಂದು ಅನ್ನಿಸಿಕೊಳ್ಳಲು ಅಭಿಮಾನ ಪಡುವನು.

(೫) **ಸ್ತ್ರೀ.** ಹಿಂದು ರಕ್ಷಣೆಗೆ ಆಧಾರ ಭೂತರು ಹಿಂದು ಸ್ತ್ರೀಯರೇ ಆಗಿರುವುದರಿಂದ ಅವರನ್ನು ಪವಿತ್ರವೆಂದು ಹಿಂದುವು ತಿಳಿಯುವನು. ಅವರ ಅಧೋಗತಿಗೆ ಕಾರಣವಾಗಿರುವಂಥ ಯಾವ ಮಾರ್ಗವನ್ನೂ ಹಿಂದುವು ಅವಲಂಬಿಸಲಾರನು.

(೬) ಮೂರ್ತಿ ಪೂಜೆಯು ಹಿಂದು ದೇಶದ ವೈಶಿಷ್ಟ್ಯವಾಗಿದೆ. ಮೂರ್ತಿ ಪೂಜಕನಲ್ಲದ ಹಿಂದುವಾದರೂ ಮೂರ್ತಿ ಪೂಜಕರ ಬಗ್ಗೆ ಸಹಿಷ್ಣುತೆ ವಹಿಸುವನಲ್ಲದೆ ಅವರ ಮೂರ್ತಿ ಪೂಜೆಗೆ ವಿಘ್ನವುಂಟಾದರೆ ಅದನ್ನು ಪರಿಹರಿಸಲು ಅವರಿಗೆ ಸಹಾಯಮಾಡುವನು.

(೭) ಗೋವು ಮತ್ತು ಗೋವುತ್ರನು ಬಹು ಪುರಾತನ ಕಾಲದಿಂದಲೂ ಹಿಂದುಗಳಿಗೆ ಪೂಜ್ಯವಾಗಿವೆ. ಅವುಗಳನ್ನು ಪ್ರೀತಿಸುವದು ಮತ್ತು ಪೋಷಿಸುವದು ಹಿಂದುವಿನ ಪರಮ ಕರ್ತವ್ಯವಾಗಿರುವದು.

(೮) ಹಿಂದು ದೇಶದ ಪ್ರಾಚೀನ ಪುಣ್ಯ ಪುರುಷರ ಸ್ಮೃತಿಯ ವಸ್ತುಗಳನ್ನೂ, ಸಂಸ್ಕೃತಿಯ ಕುರುಹುಗಳನ್ನೂ ಹಿಂದುವು ರಕ್ಷಿಸುವವನಾಗಿರುವನು

(೯) ಆರ್ಥಿಕ, ಸಾಮಾಜಿಕ, ರಾಜಕೀಯ ಮೊದಲಾದವೆಲ್ಲ ಸಮಸ್ಯೆಗಳನ್ನೂ ಧಾರ್ಮಿಕ ದೃಷ್ಟಿಯಿಂದಲೇ ಹಿಂದುವು ನಿರೀಕ್ಷಿಸುವನು. ಈ ಎಲ್ಲ ವಿಭಾಗಗಳಲ್ಲಿ ಚಟುವಟಿಕೆಯುಂಟಾಗಬೇಕಾದರೆ ಧಾರ್ಮಿಕ ರೂಪದಲ್ಲಿಯೇ ಆಗಬೇಕು.

(೧೦) ಅಖಿಲ ಹಿಂದುಗಳು ಅತ್ಯುತ್ಸಾಹದಿಂದ ಆಚರಿಸುತ್ತಿರುವ ಈಗಿನ ಹಬ್ಬ ಹುಣ್ಣಿವೆಗಳಲ್ಲಿ ರಾಷ್ಟ್ರ ಪೋಷಕವಾದ ಚಟುವಟಿಕೆಗಳನ್ನು— ಅಂದರೆ ಹೋಳೀ ಹುಣ್ಣಿವೆಯಲ್ಲಿ ಅಸ್ಪೃಶ್ಯತಾ ನಿವಾರಣೆ, ನೂಲು ಹುಣ್ಣಿವೆಯಲ್ಲಿ ಖಾದಿ, ದಸರೆಯಲ್ಲಿ ಸ್ವರಾಜ್ಯ ದಿನ, ದೀಪಾವಳಿಯಲ್ಲಿ ಆರ್ಥಿಕ ವಿಮರ್ಶೆ, ಗೋಸಪ್ತಾಹ, ಶ್ರಾವಣದಲ್ಲಿ ಲಲಿತ ಕಲೆ ಇತ್ಯಾದಿ ರೂಪವಾಗಿ ಸೇರಿಸಬೇಕು. ಈ ಪದ್ಧತಿಯು ಹಿಂದುಗಳಲ್ಲಿ ಏಕಕಾಲಕ್ಕೆ ಏಕತ್ವವನ್ನೂ ಮತ್ತು ಜಾಗೃತಿಯನ್ನೂ ಉಂಟುಮಾಡುವದು.

(೧೧) ಹಿಂದುವು ಅನೇಕ ವಿಷಯಗಳಲ್ಲಿ ಪರ ಸಂಸ್ಕೃತಿಗೆ ಶರಣು ಹೋಗುತ್ತಿರುವನು ಇದಕ್ಕೆ ನಮ್ಮ ಸಂಸ್ಕೃತಿಯು ನಿರ್ಬಲವಾಗಿರುವದೇ ಕಾರಣ. ಆದ್ದರಿಂದ ಪರ ಸಂಸ್ಕೃತಿಯ ಉತ್ಕೃಷ್ಟವಾದ ಅಂಶವನ್ನು ಹಿಂದು ಸಂಸ್ಕೃತಿಗೆ ತಕ್ಕದ್ದಾಗುವ ರೀತಿಯಲ್ಲಿ ಸೇರಿಸಿಕೊಂಡು ಇದನ್ನು ವೃದ್ಧಿಪಡಿಸಬೇಕು.

ಈ ರೀತಿಯಾಗಿ ಇನ್ನೂ ಅನೇಕ ಸ್ವಭಾವ ಚಿತ್ರಗಳನ್ನೂ ಅದಕ್ಕೆ ಬೇಕಾಗುವ ಚಟುವಟಿಕೆಗಳನ್ನೂ ಹಿಂದು ಮುಂದಾಳುಗಳು ಪರ್ಯಾಲೋಚಿಸಿ ಹಿಂದುಗಳಲ್ಲಿ ಜಾಗೃತಿಯನ್ನುಂಟುಮಾಡಬೇಕು.

ಓರ್ವ ಹಿಂದು.

ಶ್ರೀ. ಹಡಪದ ಅಪ್ಪಣ್ಣನವರ ಬೋಧೆ.

[ಶ್ರೀ ಅಪ್ಪಣ್ಣನವರು ಬಸವಾದಿ ಪ್ರಮಥರ ಕಾಲದಲ್ಲಿಯ ಮಹಾ ಶಿವಶರಣರು. ಇವರ ವಚನಗಳುಳ್ಳ ಒಂದು ಗ್ರಂಥವಿದೆ. ಅವುಗಳಲ್ಲಿಯ ಕೆಲವನ್ನು ಇಲ್ಲಿ ಕೊಡಲಾಗಿದೆ. —ಪಾಟೀಲ ಲಿಂಗನಗೌಡರು.]

೧ ಗುರುವಿನ ಮುಟ್ಟಿ ಗುರುವಿನಂತಾಗಬೇಡವೆ? ಲಿಂಗವ ಮುಟ್ಟಿ ಪೂಜಿಸಿ ಲಿಂಗದಂತಾಗಬೇಡವೆ? ಜಂಗಮವ ಮುಟ್ಟಿ ಪಾದೋದಕ ಪ್ರಸಾದವ ಕೊಂಡು ಜಂಗಮದಂತಾಗಬೇಡವೆ? ಈ ತ್ರಿವಿಧವಿಡಿದು. ತ್ರಿವಿಧವ ಬಿಟ್ಟು, ತ್ರಿವಿಧವ ಮುಟ್ಟಿ, ತ್ರಿವಿಧವನೇಕವ ಮಾಡಿ ಈ ಭವವ ದಾಂಟಿ ಹೋದವರ ಭಕ್ತರೆಂಬೆ. ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಐಕ್ಯರೆಂಬೆ. ಇದನರಿಯದೆ ಮದ ಮತ್ಸರವ ಬಿಡದೆ ಕುದಿದು ಕೋಟಲೆಗೊಂಬ ಬಿಸುಗರ ನೊಲ್ಲ ನಮ್ಮ ಬಸವ ಪ್ರಿಯ ಕೂಡಲ ಚನ್ನಬಸವಣ್ಣ.

ಅರ್ಥ:— ವೀರಶೈವನು ಗುರುವನ್ನು ಪೂಜಿಸಿ ಗುರುವೇ ಆಗಬಲ್ಲನು. ಏಕೆಂದರೆ ಗುರುವಿನಲ್ಲಿ ಹಾಗೆ ಮಾಡುವಷ್ಟು ಸಾಮರ್ಥ್ಯವಿದೆ. ಹಾಗೆಯೇ ಲಿಂಗವೂ ಜಂಗಮನೂ ತಮ್ಮ ಆರಾಧಕರನ್ನು ತಮ್ಮಂತೆ ಮಾಡಿಕೊಳ್ಳಬಲ್ಲರು. ಹೀಗಾಗಲಿಕ್ಕೆ ಯಾವ ಬಂಧನವೂ ಅಡ್ಡಿಮಾಡುವದಿಲ್ಲ. ಜಾತಿಯಿಂದಲೇ ಗುರುತ್ವ. ಜಂಗಮತ್ವ ಎಂದು ಎಂದೂ ತಿಳಿಯಲಾಗದು.

ತನು ಮನ ಧನವೆಂಬುವು ನಮ್ಮ ಸೊತ್ತು ಎಂದು ನಾವು ತಿಳಿದಿದ್ದೇವೆ. ಆದುದರಿಂದಲೇ ಅವು ನಮಗೆ ಅನೇಕ ಚಿಂತೆಗಳನ್ನುಂಟುಮಾಡುತ್ತವೆ. ಈ ತ್ರಿವಿಧ ಚಿಂತೆಯಿಂದ ಪಾರಾಗುವದು ಹೇಗೆ? ಇವುಗಳನ್ನು ತ್ರಿವಿಧಕ್ಕೆ ಅಂದರೆ ಗುರು ಲಿಂಗ ಜಂಗಮಕ್ಕೆ ಕ್ರಮವಾಗಿ ಅರ್ಪಿಸಬೇಕು. ಈ ಆಚರಣೆಯು ಸರ್ವ ವೀರಶೈವರಿಗೂ ಸಹಜವಾದುದು. ಈ ಪ್ರಕಾರವಾಗಿ ಅರ್ಪಿಸದೆ ಕೇವಲ ನಾವು ಭಕ್ತಸ್ಥಲದಲ್ಲಿಯವರು, ನಾವು ಮಹೇಶ ಸ್ಥಲದವರು. ನಾವು ಶರಣಸ್ಥಲದವರು ಎಂದುಕೊಂಡರೆ ಆ ಸ್ಥಲಗಳೆಂದೂ ಆಳವಡಲಾರವು. ಭವದ ದುಃಖದಿಂದ ಮುಕ್ತರಾಗಬೇಕಾದರೆ ತ್ರಿವಿಧ ದಾಸೋಹ ಮಾಡಲೇಬೇಕೆಂದೂ ಅದನ್ನು ಪ್ರತಿಯೊಂದು ಸ್ಥಲದವರು ಆಚರಿಸಲೇಬೇಕೆಂದೂ ಮುಖ್ಯವಾಗಿ ಹೇಳಿರುವರು.

೨ ಪುರಾತರು ಪುರಾತರು ಎಂದು ಪುರಾಣದೊಳಗಣ ಕಥೆಯನೆ ಕಲಿತುಕೊಂಡು ಪುರದ ಬೀದಿಯೊಳಗೆ ಹರದರಂತೆ ಮಾತಿನ ಹಸಾರವನ್ನಿಕ್ಕಿ ಮಾರುವ ಅಣ್ಣಗಳಿರಾ, ನೀವು ಕೇಳಿರೋ. ಅಂದು ಹೋದವರ ಸುದ್ದಿಯು ಸುಡಿದರೆ, ಇಂದು ಬಂದರೂ ನಿಮಗೆ; ಇಂದು ಬಂದವರನರಿಯದನ್ನಕ್ಕ? ಅಂದು ಹೋದವರು ಇಂದು ಬಂದವರು ಒಂದೇ ಎಂದರಿದ ಭಕ್ತರ ಆಚರಣೆಯು ತೋರಿ ಬದುಕಿಸಯ್ಯ ಬಸವ ಪ್ರಿಯ ಕೂಡಲ ಚನ್ನಬಸವಣ್ಣ.

ಅರ್ಥ:— ಹಳೆಯದೆಲ್ಲ ಹೊನ್ನು; ಹೊಸದೆಲ್ಲ ಕಸ ಎಂಬ ತಿಳುವಳಿಕೆಯುಳ್ಳವರು ಶರಣರಿದ್ದಿದ್ದಿಲ್ಲ. ಯಾವ ಕಾಲವಾದರೇನು? ಭಕ್ತಿ ಸದಾಚಾರಗಳು ಎಲ್ಲಿ ಕಾಣುತ್ತವೊ ಅವಕ್ಕೆಲ್ಲ ಅವರು ಮನ್ನಿಸುತ್ತಿದ್ದರು. ಹಿಂದಿನವರು ಅಂಥ ಪವಾಡ ಮಾಡಿದರು! ಇಂಥ ಪವಾಡ ಮಾಡಿದರು! ಈಗಿನವರಿಗೆ ಅವರಂತೆ ಮಾಡಲು ಶಕ್ಯವೇ ಎಂದು ಉಬ್ಬುಬ್ಬಿ ಹೇಳುತ್ತಿದ್ದ ಜನರಿಗೆ, ಅಯ್ಯಾ ಹಿಂದಿನವರ ಪುರಾಣದ ಗಂಟು ತೆಗೆದುಕೊಂಡೇನು ಮಾಡುವಿರಿ? ಇಂದಿನವರೂ ಅದೇ ಸದ್ಭಕ್ತಿ ಸದಾಚಾರಗಳುಳ್ಳವರಾಗಿದ್ದರೆ ಏಕೆ ಮನ್ನಿಸಬಾರದು? ಹೀಗೆ ಮಾಡದೆ ಹೋದರೆ ನಿಮ್ಮ ದೃಷ್ಟಿಯು ಪುರಾಣದ ಕಥೆಗಳ ಮಟ್ಟಿಗೆ ಉಳಿದು ಆಚರಣೆಯು ಮಾತ್ರ ತೊಲಗಿ ಹೋಗುವದು. ನಾವು ಮಹತ್ವ ಕೊಡಬೇಕಾದುದು ಅದ್ಭುತ ಪವಾಡಗಳಿಗಲ್ಲ; ಆದರೆ ಅಗಾಧವಾದ ಭಕ್ತಿ, ನಿರ್ಮಲವಾದ ಆಚರಣೆಗಳಿಗೆ ಎಂದು ಚನ್ನಾಗಿ ಬೋಧಿಸಿರುವರು.

೩ ಆಯತಲಿಂಗದಲ್ಲಿ ನೀವೆನಗೆ ಆಚಾರವ ತೋರಿದಿರಾಗಿ, ಸ್ವಾಯತ ಲಿಂಗದಲ್ಲಿ ನೀವೆನಗೆ ಅರುಹ ತೋರಿದಿರಾಗಿ, ಸನ್ನಿಹಿತ ಲಿಂಗದಲ್ಲಿ ನೀವೆನಗೆ ಪರಿಣಾಮವ ತೋರಿದಿರಾಗಿ, ಈ ತ್ರಿವಿಧದ ವರನೆಲೆಯ ತೋರಿ, ತ್ರಿವಿಧದ ಸಂಬಂಧವನು ಹರಿದು, ಎನ್ನ ಭವವದಾಂಟಿಸಿದ ಕಾರಣ, ಭವವಿರಹಿತನೆಂದು, ಚನ್ನ ಮಲ್ಲೇಶ್ವರನ ಸಂಬಿ ಕೆಟ್ಟು ಬಟ್ಟಬಯಲಾದೆನಯ್ಯ ಬಸವ ಪ್ರಿಯ ಕೂಡಲ ಚನ್ನಬಸವಣ್ಣ.

ಅರ್ಥ:— ಧರ್ಮನ್ನ ಮೂರು ತೆರನಾಗಿರುವದು. ಕ್ರಿಯಾ ಧರ್ಮ, ನೈತಿಕ ಧರ್ಮ ಮತ್ತು ತಾತ್ವಿಕ ಧರ್ಮ ಎಂದು. ಇವಕ್ಕೆ ವೀರಶೈವರು ಆಚಾರ, ಅರುಹು, ಪರಿಣಾಮ (ಅನುಭವ) ಎಂದು ಪರ್ಯಾಯವಾಗಿ ಹೇಳುತ್ತಾರೆ. ಇವು ಮೂರನ್ನೂ ವೀರಶೈವನು ಹೊಂದಿರುವದವಶ್ಯವಿದ್ದರೂ ಮೊದಲು ಸಾಧಿಸಿಕೊಳ್ಳುವದು ಆಚಾರವನ್ನು. ಅದಕ್ಕಾಗಿ ಇಷ್ಟಲಿಂಗವನ್ನು ಆಯತ ಮಾಡಿಕೊಳ್ಳುವದು. ಆಚಾರವು ಆಳವಟ್ಟಲ್ಲಿ ಅರುವು ಪ್ರಾಪ್ತವಾಗುತ್ತದೆ. ಆದುದರಿಂದಲೇ ಇಷ್ಟಲಿಂಗದಿಂದ ಪ್ರಾಣಲಿಂಗವನ್ನರಿಯಬೇಕೆಂದು ಹೇಳಿರುವರು. ಅರಿವುಂಟಾದರೇನೇ ಅನುಭವವು ದೊರೆಯುವದು. ಹೀಗೆ ಮೂರು ಲಿಂಗಗಳಿಂದ ಮೂರು ಧರ್ಮಗಳು ಆಳವಟ್ಟು ಭವವು ಬಯಲಾಗುತ್ತದೆಂದು ತಿಳಿಸಿರುವರು.





ಶ. ಶ. ೧೮೫೩ ನೆಯ ಫಾಲ್ಗುಣ ಶು|| ೭ ಸೋಮವಾರ.

ಈಗಲೇ ಈ ಹೆದರಿಕೆಯಾದರೆ?

ಹಿಂದು ಮತ್ತು ಮುಸಲ್ಮಾನರ ಐಕಮತ್ಯದ ವಿಚಾರವಾಗಿ ಈ ವರೆಗೂ ಅನೇಕ ಪ್ರಯತ್ನಗಳು ನಡೆದಿವೆಯಷ್ಟೆ. ಮಹಾತ್ಮಾ ಗಾಂಧಿಯವರು ೨೧ ದಿನಗಳ ಭೀಷಣ ಉಪೋಷಣೆಯನ್ನಾಚರಿಸಿದರು. ಇಷ್ಟೇ ಅಲ್ಲ; ಬರಿಯ ಕಾಗದದ ಮೇಲೆ ರುಜು ಮಾಡಿಕೊಡುತ್ತೇನೆ; ಬೇಕಾದುದನ್ನು ಬರೆದುಕೊಂಡು ಐಕಮತ್ಯಕ್ಕೆ ಸಿದ್ಧರಾಗಿರೆಂದೂ ಹೇಳಿದರು. ಇದಕ್ಕಿಂತ ತಗ್ಗಿ ಸಂಧಿಗೆ ಹೋಗುವುದು ಬೇರುಂಟೆ?

ಸೌಜನ್ಯವನ್ನು ದೀನತ್ವವನ್ನಾಗಿ ತಿಳಿಯುವವರೇ ಬಹು ಜನರು. ಅನೇಕ ಮುಸಲ್ಮಾನ್ ಪ್ರಮುಖರು, ಹಿಂದುಗಳು ಹೀಗೆ ತಗ್ಗಿ ಬರುವುದನ್ನು ಇವರ ದೀನತ್ವವೆಂದೇ ತಿಳಿದು ಮತ್ತಾಗೆ ಕಂಡರೆ ಮೊಣಕೈಯಿಂದಲೂ ಅಗಿಯ ಹೋದವರಂತೆ ಮಾಡಲಾರಂಭಿಸಿದರು. ಆಗಲೇ ರಾಷ್ಟ್ರ ಹಿತಚಿಂತಕರು ಜಾಗ್ರತರಾಗಿ ಇವರ ಸ್ವಾರ್ಥಕ್ಕೆ ಪ್ರತೀಕಾರ ಮಾಡಿದ್ದರೆ ಮತ್ತಾಗಿಲ್ಲವೆಂದು ಗೊತ್ತಾಗುತ್ತಿದ್ದಿತು. ಹಾಗೆ ಮಾಡದೆ ರಾಷ್ಟ್ರೀಯ ಸಭೆಯು ತನ್ನ ನಡೆನುಡಿಗಳಿಂದ ಈ ವಿಚಾರದಲ್ಲಿ ಅನ್ಯಾಯ ಮಾಡಿ ತನ್ನ ದೌರ್ಬಲ್ಯವನ್ನು ತೋರಿಸಿದ್ದರಿಂದ ಜಾತೀಯ ತತ್ವಪ್ರಿಯ ಮಹಮ್ಮದೀಯರಿಗೆ ಈಗ ಹೆಚ್ಚು ಬಲ ಬಂದಿತು.

ಹಿಂದು ಮುಸಲ್ಮಾನರ ಐಕಮತ್ಯದ ವಿಚಾರವಾಗಿ ರಾಜೇಂದ್ರ ಪ್ರಸಾದ ಮತ್ತು ಜಿನ್ನಾರವರ ಸಂಭಾಷಣೆಗಳು ಜರುಗಿ ಕೊನೆಗೆ ಆ ಪ್ರಯತ್ನವು ವಿಫಲವಾಯಿತಷ್ಟೆ. ಹೀಗೆ ವಿಫಲವಾದುದನ್ನು ಕುರಿತು ಅಸೆಂಬ್ಲಿಯ ಸಭಾಸದರಾದ ಮೌಲಾನಾ ಸರ್ ಯಾಕೂಬರವರು ಒಂದು ಪ್ರಕಟನೆಯನ್ನು ಹೊರಡಿಸಿದ್ದಾರೆ. ಅದರಲ್ಲಿ ಈ ಕೆಳಗಿನ ಸಂಗತಿಯಿದೆ.

"ಹಿಂದು ಮುಸಲ್ಮಾನರ ಐಕಮತ್ಯಕ್ಕೆ ವಿಘ್ನವನ್ನುಂಟು ಮಾಡುವವರು ಪಂಡಿತ ಮದನ ಮೋಹನ ಮಾಲವೀಯವರು ಮತ್ತು ಅವರ ಪಕ್ಷದವರು [illegible] ರಾಷ್ಟ್ರೀಯ ಭಾವನೆಯ ಐಕ್ಯಾಪೇಕ್ಷಿಗಳು ಬೇರೊಬ್ಬರಿಲ್ಲ. ಈಗಿನ ಜಾತೀಯ ಪ್ರಾತಿನಿಧ್ಯದಿಂದ ಹಿಂದುಗಳಿಗೆ ಯಾವ ಪ್ರತಿಬಂಧವೂ ಇಲ್ಲ. ಈ ಜಾತಿ ನಿರ್ಣಯವನ್ನು ತೆಗೆದು ಹಾಕಲು ಪ್ರಯತ್ನಿಸಿದ್ದಾದರೆ ಹಿಂದು ಮತ್ತು ಮುಸಲ್ಮಾನರಲ್ಲಿ ನಿರಂತರ ಅನೈಕಮತ್ಯವೇ ಉಳಿಯುವುದು. ಈ ಪಾಪಕ್ಕೆ ಪಂಡಿತ ಮಾಲವೀಜಯವರೇ ಕಾರಣರಾಗುವರು. ಎಂಟು ಕೋಟಿ ಮುಸಲ್ಮಾನರಾದ ನಾವು ಅಸಂತುಷ್ಟರಾದರೆ ಹಿಂದುಸ್ಥಾನದಲ್ಲಿ ಯಾವ ರಾಜ್ಯ ಪದ್ಧತಿಯೂ ನಡೆಯದಂತೆ ಮಾಡುವೆವು. ಹಿಂದು ಮುಸಲ್ಮಾನರ ಐಕ್ಯಕ್ಕೋಸ್ಕರ ಈ ವರೆಗೆ ನಾವೇನು ಸ್ವಲ್ಪ ಪ್ರಯತ್ನಿಸಿದ್ದೇವೆಯೆ?"

ಜಾತಿ ನಿರ್ಣಯವು ರಾಷ್ಟ್ರಕ್ಕೆ ಎಷ್ಟು ಅನರ್ಥಕಾರಿಯಾಗಿದೆಯೆಂಬುದನ್ನೂ ಇದಕ್ಕೆ ಕೆಲವು ಮುಸಲ್ಮಾನರ ಸ್ವಾರ್ಥವೇ ಕಾರಣವೆಂಬುದನ್ನೂ ಬ್ಯಾರಿಸ್ಟರ್ ಜಿನ್ನಾರವರು ಎಷ್ಟರ ಮಟ್ಟಿಗೆ ರಾಷ್ಟ್ರೀಯ ಭಾವನೆಯುಳ್ಳವರಾಗಿದ್ದಾರೆಂಬುದನ್ನು ಮೌಲಾನಾ ಸಾಹೇಬರ ಜಾತಿಬಾಂಧವರಲ್ಲಿಯೇ ಅನೇಕರು ಹೇಳಿರುವ ಸಂಗತಿಗಳನ್ನು ಇದರ ಸಂಚಿಕೆಯು ಬೇರೆ ಕಡೆ ಕೊಟ್ಟಿರುವುದರಿಂದ ನಾವು ಆ ವಿಷಯಗಳಲ್ಲಿ ಪ್ರಸ್ತಾಪಿಸಬೇಕಾದುದೇ ಇಲ್ಲ.

ಜಾತಿ ನಿರ್ಣಯವನ್ನು ತೆಗೆಯಿಸಲು ಪ್ರಯತ್ನಿಸಬೇಡಿರೆಂತಲೂ ಹಾಗೆ ಮಾಡಿದರೆ ಹಿಂದು ಮುಸಲ್ಮಾನರಲ್ಲಿ ನಿರಂತರ ಅನೈಕಮತ್ಯವೇ ಉಳಿವುದೆಂತಲೂ ಹಿಂದುಗಳಿಗೆ ಸರ್ ಸಾಹೇಬರು ಎಚ್ಚರಿಸಿದ್ದಲ್ಲದೆ ನಾವು ಎಂಟು ಕೋಟಿ ಜನರು ಅಸಂತುಷ್ಟರಾದರೆ ಇಲ್ಲಿ ಯಾವ ರಾಜ್ಯ ಪದ್ಧತಿಯನ್ನೂ ನಡೆಗೊಡಿಸಲಾರೆವೆಂದು ಹಿಂದುಗಳಿಗೂ ಸರಕಾರಕ್ಕೂ ಹೆದರಿಕೆ ಹಾಕಿದ್ದನ್ನು ನೋಡಿದರೆ ಅವರ ಮನೋಗತವು ವ್ಯಕ್ತವಾಗುವುದಿಲ್ಲವೆ?

ಕೀಲಿಯು ಕೈಯಿಗೆ ಬರುವ ಮುಂಚೆಯೇ ಈ ಹೆದರಿಕೆ. ಅದು ಕೈಗೆ ಬಂದು ಅಧಿಕಾರ ನಡೆಯಲಾರಂಭವಾದಮೇಲೆ ಹೇಗಾಗಬಹುದು? ಈಗ ಬಾಯಿಂದ ಹೆದರಿಸಿದ್ದನ್ನು ಆಗ ಕೈಯಿಂದ ಮಾಡಿ ತೋರಿಸಲು ಅನುಕೂಲವಾಗಲಿಕ್ಕಿಲ್ಲವೆ? ಮುಂದಿನ ಅನರ್ಥಕ್ಕೆ ಅವಕಾಶವಾಗದಂತೆ ಈಗಲಾದರೂ ರಾಷ್ಟ್ರಾಭಿಮಾನದ ಎಲ್ಲ ಧರ್ಮ ಮತ ಪಂಥಗಳ ರಾಜಕೀಯ ಪ್ರಮುಖರು ಎಚ್ಚತ್ತು ಐಕಮತ್ಯದಿಂದ ಈ ಜಾತೀಯ ನಿರ್ಣಯವೆಂಬ ವಿಷವನ್ನು ತೆಗೆದು ಹಾಕಲು ಪ್ರಯತ್ನಿಸುವುದು ಯುಕ್ತವಲ್ಲವೆ? ಸರಕಾರವು ಜಾತೀಯ ಭಾವನೆಯ ಈ ಜಾಲಿಯ ಬೀಜವನ್ನು ಬಿತ್ತಿ ಮುಂದೆ ತನ್ನ ಕಾಲಿಗೂ ಮುಳುವಾಗುವಂತೆ ಮಾಡಿಕೊಳ್ಳುವುದೆ?

ಮುಸಲ್ಮಾನರಲ್ಲಿ ರಾಷ್ಟ್ರೀಯ ಭಾವನೆ.

ಹಿಂದುಸ್ಥಾನದಲ್ಲಿ ಮುಸಲ್ಮಾನರೂ ಒಂದು ಪ್ರಮುಖ ಸಮಾಜದವರಾಗಿಯೇ ಇದ್ದಾರೆ. ಒಂದು ಸಾವಿರ ವರುಷದಿಂದಲೂ ಈ ಜನರ ಸಂಖ್ಯೆಯು ಹೆಚ್ಚುತ್ತಲೇ ಬಂದು ಈಗ ೮ ಕೋಟಿಯ ವರೆಗಾಗಿದೆ. ಇವರೆಲ್ಲರೂ ಹಿಂದುಸ್ಥಾನದಲ್ಲಿಯೇ ಹುಟ್ಟಿ ಬೆಳೆದವರಾಗಿದ್ದಾರೆ. ಇವರ ಪೂರ್ವಜರಲ್ಲಿ ಕೂಡಾ ಬಹು ಸಂಖ್ಯಾಕರು ಹಿಂದುಗಳೇ ಸರಿ. ಎಂದಮೇಲೆ ಇವರು ಹಿಂದುಸ್ಥಾನವೇ ತಮ್ಮ ಮಾತೃಭೂಮಿಯೆಂದು ತಿಳಿಯುವುದೇ ನ್ಯಾಯವಾಗಿದೆ. ಅದರಿಂದಲೇ ಇದರಲ್ಲೂ ಕ್ಷೇಮ.

ಹಿಂದುಗಳಲ್ಲಿಯೇ ಬೇರೆ ಬೇರೆ ಮತ ಪಂಗಡದವರಿದ್ದರೂ ಅವರೆಲ್ಲರೂ ಹಿಂದುಸ್ಥಾನವನ್ನೇ ತಮ್ಮ ಜನ್ಮಭೂಮಿಯಾಗಿ ತಿಳಿಯುವಂತೆ ಧಾರ್ಮಿಕ ವಿಚಾರದಲ್ಲಿ ಮುಸಲ್ಮಾನರು ಹಿಂದುಗಳಿಗಿಂತ ಬೇರೆಯಾದ ರೀತಿ ನೀತಿಗಳುಳ್ಳವರಾಗಿದ್ದರೂ ಹಿಂದುಸ್ಥಾನವೆ

ತಮ್ಮ ಜನ್ಮಭೂಮಿಯೆಂದು ತಿಳಿದು ಇದಕ್ಕೆ ಋಣಿಗಳಾಗಿರಬೇಕಾದುದೇ ಯುಕ್ತ. ಇದು ಉಪಭೋಗ ಭೂಮಿಯೆಂದು ಭಾವಿಸಿ ತಮ್ಮ ಧರ್ಮ ಸ್ಥಾಪಕರ ಜನ್ಮಭೂಮಿಯ ಕಡೆಗೆ ತಿರುಗುವುದು ನ್ಯಾಯವಲ್ಲ.

ಇಂಗ್ಲೆಂಡ್, ಜರ್ಮನ್, ಫ್ರಾನ್ಸ ರಾಷ್ಟ್ರಗಳು ಒಂದೇ ಧರ್ಮವನ್ನನುಸರಿಸಿದ್ದರೂ ತಮ್ಮ ತಮ್ಮ ಮಾತೃಭೂಮಿಯ ವಿಷಯವಾಗಿ ರಾಷ್ಟ್ರಾಭಿಮಾನದಿಂದ ಅದರ ಗೌರವ ಪ್ರತಿಷ್ಠೆಗಳಿಗೆ ಪ್ರಯತ್ನಿಸುವುದಿಲ್ಲವೆ? ಹಾಗೆಯೇ ಅರಬಸ್ಥಾನದವರು ಇವರ ಧರ್ಮಬಾಂಧವರಾದರೂ ಹಿಂದುಗಳು ಇವರ ದೇಶಬಾಂಧವರೆಂಬುದನ್ನು ಮರೆಯಬಹುದೆ? ತಾವು ಯಾರ ನೆರೆಯಲ್ಲಿ ಜೀವಿಸಬೇಕಾಗಿದೆಯೆಂಬುದನ್ನೂ ಯಾವ ಭೂಮಿಯ ಋಣದಲ್ಲಿ ತಾವಿದ್ದೇವೆಂಬುದನ್ನೂ ಯೋಚಿಸಬಾರದೆ? ಈ ವಿಧವಾದ ಜ್ಞಾನೋದಯವು ಮುಸಲ್ಮಾನ್ ಸಮಾಜದಲ್ಲುಂಟಾಗದಿದ್ದುದು ದುಃಖದ ಸಂಗತಿಯು. ಜಾತಿ ನಿರ್ಣಯವನ್ನು ಒಪ್ಪುತ್ತಿರುವುದು ಮತ್ತು ಅದನ್ನು ಖಂಡಿಸಲು ಮುಂದಾಳುಗಳಾಗದಿದ್ದುದು ಇವರಲ್ಲಿ ರಾಷ್ಟ್ರಾಭಿಮಾನವಿಲ್ಲದಿದ್ದುದರ ಹೆಗ್ಗುರುತುಗಳಾಗಿವೆ. ಮುಸಲ್ಮಾನ್ ಸಮಾಜದ ಬಹುಸಂಖ್ಯಾಕರ ಸ್ಥಿತಿಯು ಹೀಗಿದ್ದರೂ ಮುಂದಾಲೋಚನೆಯುಳ್ಳ ರಾಷ್ಟ್ರಾಭಿಮಾನದ ಒಬ್ಬಿಬ್ಬ ಮುಸಲ್ಮಾನ್ ಪ್ರಮುಖರಾದರೂ ಅಲ್ಲಲ್ಲಿ ತೋರುತ್ತಿರುವುದು ಮತ್ತು ಜಾತಿ ನಿರ್ಣಯವನ್ನು ನಿಷೇಧಿಸಲು ಮುಂದಾಳುಗಳಾಗುತ್ತಿರುವುದು ಎಷ್ಟೋ ಸಂತೋಷದ ಸಂಗತಿಯು.

ಮೊನ್ನೆ ದಿಲ್ಲಿಯಲ್ಲಿ ಕೂಡಿದ ಜಾತಿ ನಿರ್ಣಯ ನಿಷೇಧದ ಸಭೆಯಲ್ಲಿ ಮೌಲವಿ ಅಬದುಲ ಸಮದ ಎಂಬುವವರು ಹೀಗೆ ಹೇಳಿದರು. "ಮುಸಲ್ಮಾನ್ ಸಮಾಜವು ಹಿಂದು ಸಮಾಜಕ್ಕಿಂತ ಶಿಕ್ಷಣದಲ್ಲಿ ಹಿಂದುಳಿದಿದೆ. ಈ ಹಿಂದುಳಿದ ಸಮಾಜಕ್ಕೂ ಮುಂದರಿದ ಹಿಂದು ಸಮಾಜಕ್ಕೂ ಇರಬೇಕಾಗಿರುವ ಸಂಬಂಧವನ್ನು ಜಾತಿ ನಿರ್ಣಯವು ತಪ್ಪಿಸಿದ್ದರಿಂದ ಮುಸಲ್ಮಾನ್ ಸಮಾಜಕ್ಕೇನೇ ಅಹಿತವಾಗುವದು. ಇಂಗ್ಲಿಷ ಸರಕಾರಕ್ಕೆ ತನ್ನ ಪ್ರಭುತ್ವವನ್ನು ಸ್ಥಿರಗೊಳಿಸಬೇಕಾಗಿರುವುದರಿಂದಲೇ ಹೀಗೆ ಜಾತಿ ಜಾತಿಗಳಲ್ಲಿ ಒಡಕನ್ನುಂಟು ಮಾಡಿದೆ. ಜಾತಿ ನಿರ್ಣಯದ ವಿಷವನ್ನು ಹಿಂದಿ ರಾಷ್ಟ್ರಪುರುಷನ ದೇಹದಿಂದ ತೆಗೆದು ಹಾಕಲು ಎಲ್ಲ ಹಿಂದು, ಮುಸಲ್ಮಾನ್, ಶೀಖರು ಪ್ರಯತ್ನಿಸಬೇಕು."

ಪ್ರೊಫೆಸರ್ ಅಬದುಲ ಮಜೀದರವರು ಅದೇ ಸಭೆಯಲ್ಲಿ ಹೀಗೆ ಹೇಳಿದರು. "ನಾನು ಹಿಂದುಸ್ಥಾನದ ಮುಸಲ್ಮಾನನೆಂದೇ ಜಾತಿ ನಿರ್ಣಯವನ್ನು ನಿಷೇಧಿಸುತ್ತೇನೆ. ಮತ್ತು ಹಿಂದುಸ್ಥಾನದ ಮುಸಲ್ಮಾನರು ಸ್ವಾರ್ಥಿಗಳಾದ ಮುಂದಾಳುಗಳ ಬೆನ್ನು ಹತ್ತಿ ತೋರಿಕೆಯ ಹಿತಕ್ಕೆ ಮರುಳಾಗಿ ಜಾತಿ ನಿರ್ಣಯದ ಪಾಶವನ್ನು ತಮ್ಮ ಕೊರಳಿಗೆ ಕಟ್ಟಿಕೊಳ್ಳಬಾರದೆಂದು ಅವರಿಗೆ ಎಚ್ಚರಿಕೆಯನ್ನು ಕೊಡುವುದು ನನ್ನ ಕರ್ತವ್ಯವಾಗಿದೆಯೆಂದೇ ನಾನು ತಿಳಿಯುತ್ತೇನೆ."

ಇಂತಹ ರಾಷ್ಟ್ರೀಯ ಭಾವನೆಯ ಮುಸಲ್ಮಾನ್ ಮುಂದಾಳುಗಳ ಮಾತನ್ನು ಇನ್ನಾದರೂ ಜಾತಿ ನಿರ್ಣಯವನ್ನು ಒಪ್ಪುವ ಜಿನ್ನಾ ಪಂಗಡವು ಮತ್ತು ಒಪ್ಪುವುದಿಲ್ಲ-ನಿಷೇಧಿಸುವುದಿಲ್ಲವೆಂದು ಹೇಳುವ ಅನ್ಸಾರಿಯವರ ಪಂಗಡವು ಕೇಳುವವೆ?

—ಕಲಕತ್ತಾ ಸಂಸ್ಕೃತ ಕಾಲೇಜದ ಪ್ರಿನ್ಸಿಪಾಲ ಡಾ. ಎಸ್. ಎನ್. ದಾಸಗುಪ್ತ ಇವರನ್ನು ವ್ಯಾಖ್ಯಾನ ಕೊಡಲು ರೋಮದ ವಿಶ್ವವಿದ್ಯಾಲಯದವರು ಆಮಂತ್ರಿಸಿದ್ದಾರೆ. ಹಾಗೆಯೇ ಅವರಿಗೆ ವಿಯೆನ್ನಾ, ಕೋಪನ್‌ಹೆಗನ್, ಮಾಡ್ರಿಡ್ ಮೊದಲಾದ ವಿಶ್ವವಿದ್ಯಾಲಯಗಳಿಂದ ಆಮಂತ್ರಣಗಳು ಬಂದಿವೆ.

ಜಿನ್ನಾರವರಿಗೆ ಹೊಸ ಉಡುಗೊರೆ!

ಬ್ಯಾರಿಸ್ಟರ್ ಜಿನ್ನಾರವರು ಜಾತಿಯ ನಿರ್ಣಯವನ್ನು ಸಮರ್ಥಿಸುವ ಮುಸಲ್ಮಾನ್ ಮುಂದಾಳುಗಳು. ಇವರಿಗೆ ಇವರ ಪಕ್ಷದವರಿಂದಲೂ ಕಾಂಗ್ರೆಸ್ ಪಕ್ಷದವರಿಂದೂ ಮನ್ನಣೆ ದೊರೆಯುತ್ತಿರುವುದು ಸ್ವಾಭಾವಿಕ. ಆದರೆ ಇವರ ಮುಸಲ್ಮಾನ್ ಬಂಧುಗಳಲ್ಲಿಯೇ ಹಿಂದೀ ರಾಷ್ಟ್ರಾಭಿಮಾನದ ಅನೇಕ ಪ್ರಮುಖರು ಇವರ ಅಭಿಪ್ರಾಯವನ್ನು ಖಂಡಿಸುವ ಉಡುಗೊರೆಯನ್ನು ಇವರಿಗೆ ಕೊಡಲಾರಂಭಿಸಿರುವುದು ವಿಶೇಷ. ದಿಲ್ಲಿಯ ಆರ್ಬಿ ಕಾಲೇಜಿನ ಮುಸಲ್ಮಾನ್ ವಿದ್ಯಾರ್ಥಿಗಳು ಜಿನ್ನಾರವರನ್ನು ಬರಮಾಡಿಕೊಂಡು ಹೀಗೆ ಅವರಿಗೆ ಉಡುಗೊರೆಮಾಡಿದರು.

ಮಿ. ಕಾದರ ದಿನ್‌ರವರು ಹೀಗೆ ಹೇಳಿದರು—ಮಿ. ಜಿನ್ನಾರವರು ಬುದ್ಧಿಶಾಲಿಗಳಿರಬಹುದು. ಆದರೆ ಮೌಲಾನಾ ಮಹಮ್ಮದ ಅಲ್ಲಿಯವರು ಗೋರಿಗೆ ಹೋದ ನಂತರ ಮುಸಲ್ಮಾನರ ರಾಷ್ಟ್ರೀಯ ವೃತ್ತಿಯು ಗೋರಿಗೆ ಹೋಯಿತು. ಮುಸಲ್ಮಾನ್ ಸಮಾಜಕ್ಕೆ ಈಗ ಬೇಕಾಗಿರುವುದರ ಜ್ಞಾನವುಳ್ಳ ಒಬ್ಬ ಮುಸಲ್ಮಾನ್ ಮುಂದಾಳುಗಳು ಕೂಡಾ ಇಲ್ಲ. ಅಂಥ ಒಂದಾದರೂ ಸಂಸ್ಥೆಯಿಲ್ಲ. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರಕಿಸಲು ಒಂದೇ ಒಂದು ಸಂಸ್ಥೆಯಿದೆ. ಆದರೆ ಅದಕ್ಕೆ ಮುಸಲ್ಮಾನರು ಸೇರಿಲ್ಲ. ಸ್ವಾತಂತ್ರ್ಯ ಸಾಧನೆಗಾಗಿ ಮುಸಲ್ಮಾನರು ಏನನ್ನೂ ತ್ಯಾಗಮಾಡಿಲ್ಲ. ಮುಸಲ್ಮಾನರು ನೌಕರಿ ಮತ್ತು ಪದವಿಗಳ ಬೆನ್ನು ಹತ್ತಿದ್ದಾರೆ. ಜಾತಿ ನಿರ್ಣಯವು ಘಾತಕವಾದುದು. ಮುಸಲ್ಮಾನರಿಗೆ ಅದು ಮಾನ್ಯವಿಲ್ಲ. ಸ್ವರಾಜ್ಯವು ಹಿಂದು ಅಥವಾ ಮುಸಲ್ಮಾನ್ ಧರ್ಮದವರಿಗೆ ದೊರೆಯದೆ ಹಿಂದುಸ್ಥಾನದ ನಿವಾಸಿಗಳಿಗೆ ದೊರೆಯುವುದು."

ಮಿ. ಇಶಾಕಾಕ ಅಹಮ್ಮದ ಕುರೇಶಿ ಇವರು ಹೀಗೆ ಹೇಳಿದರು—ಮುಸಲ್ಮಾನರ ರಾಜನೀತಿಯು ಸರ್ವನಾಶಮಾಡುವದಾಗಿದೆ. ಸರಕಾರವು ಮುಸಲ್ಮಾನರ ಬೆಂಬಲವಾಗಿರದಿದ್ದರೆ ಮುಸಲ್ಮಾನರಲ್ಲಿ ಎಷ್ಟು ಬಿಕಮತ್ಯವಿದೆಯೆಂಬುದು ಲಂಡನ್ನಿನಲ್ಲಿಯೇ ಗೊತ್ತಾಗುತ್ತಿದ್ದಿತು. ಹಿಂದುಸ್ಥಾನದ ಜಾತಿ ಜಾತಿಗಳಲ್ಲಿ ಭೇದಮಾಡುವ ಈಗಿನ ಜಾತಿನಿರ್ಣಯವು ಮುಸಲ್ಮಾನರಿಗೆ ಮಾನ್ಯವಿಲ್ಲ. ಸ್ವಾತಂತ್ರ್ಯದ ಯುದ್ಧದಲ್ಲಿ ಹಿಂದುಗಳ ಭುಜಕ್ಕೆ ಭುಜ ಹಚ್ಚಿ ಮುಸಲ್ಮಾನರೂ ಪ್ರಯತ್ನಿಸಬೇಕು."

ಪ್ರೊಫೆಸರ್ ಸರವರ್ ಹುಸೇನ ಇವರು ಇನ್ನೊಂದು ಉಡುಗೊರೆಯನ್ನು ಕೊಟ್ಟರು. ಮಿ. ಜಿನ್ನಾರವರೇ ೧೯೧೬ ರಲ್ಲಿ ಹೀಗೆ ಹೇಳಿದ್ದರು. "ಹಿಂದುಸ್ಥಾನದಲ್ಲಿರುವ ಮುಸಲ್ಮಾನರು ಹೊರಗಿನ ವಿಚಾರಗಳನ್ನು ಬಿಡಬೇಕು. ಹಿಂದುಸ್ಥಾನವೇ ತಮ್ಮ ಮಾತೃಭೂಮಿಯೆಂದು ತಿಳಿಯಬೇಕು. ಹಿಂದು ಮುಸಲ್ಮಾನರಿಗೆ ಸರಿಯಿಲ್ಲವೆಂದು ವೃಥಾ ಗುಲ್ಲನ್ನೆಬ್ಬಿಸುತ್ತಿದ್ದಾರೆ. ಮುಸಲ್ಮಾನರ ನಿಜವಾದ ಒಂದೂ ಸಂಸ್ಥೆಯಿಲ್ಲ. ಮುಸ್ಲೀಮ್ ಕಾನ್‌ಫರನ್ಸ ಒಂದು ಡಂಭದ ಸಂಸ್ಥೆ."

ಹೀಗೆ ಅನೇಕ ತರುಣ ಮಹಮ್ಮದೀಯರು ಹೊಸ ಹೊಸ ಉಡುಗೊರೆಯನ್ನು ಜಿನ್ನಾರವರಿಗೆ ಅರ್ಪಿಸಿದರು. ಇಂಥವರ ಸಂಖ್ಯೆ ಹೆಚ್ಚಾದಾಗಲೇ ಮುಸಲ್ಮಾನರಿಗೂ ನಿಜವಾದ ಕಲ್ಯಾಣ. ಹಿಂದುಸ್ಥಾನಕ್ಕೂ ಕ್ಷೇಮಕರವಾದ ಸ್ವರಾಜ್ಯ. ಜಿನ್ನಾರವರಿಗೆ ಇಂಥ ಉಡುಗೊರೆಮಾಡುವರೇ ಅವರಲ್ಲಿ ಹೆಚ್ಚಾಗಲೆಂದು ಹಾರೈಸುತ್ತೇನೆ.

ವಿ ವಿ ಧ ವಿ ಷ ಯ.

೧೯ ಜನರಿಗೆ ಕರಿನೀರಿನ ಶಿಕ್ಷೆ.

ನೈಝಾಮ ರಾಜ್ಯದ ಬೀದರ ಜಿಲ್ಹೆಯ ನೀಲಂಗಾ ತಾಲೂಕಿನ ಹಳಸಿ ಎಂಬ ಗ್ರಾಮದಲ್ಲಿ ಮಹಮ್ಮದಕಾಶೀಮ ಎಂಬ ಹೆಸರಿನ ಮುಸಲ್ಮಾನನ ಕೊಲೆ ಮಾಡಿದಬಗ್ಗೆ ಆ ಗ್ರಾಮದ ೨೧ ಜನರ ಮೇಲೆ ವ್ಯಾಜ್ಯ ಹಾಕಲ್ಪಟ್ಟಿದ್ದಿತು. ಕಲಬುರ್ಗಿಯ ಶೆಶನ್ಸ ಕೋರ್ಟನಲ್ಲಿ ಅವರೆಲ್ಲ ದೋಷ ಮುಕ್ತರಾಗಿ ಬಿಡಲ್ಪಟ್ಟಿದ್ದರು. ಆದರೆ ಪೋಲೀಸರು ಹಾಯಕೋರ್ಟಿಗೆ ಆ ವ್ಯಾಜ್ಯವನ್ನು ಮುಂದರಿಸಲು ಅಲ್ಲಿ ಅವರ ಅಪರಾಧವು ನಿರ್ಣಯಿಸಲ್ಪಟ್ಟು ಅವರಲ್ಲಿ ೧೯ ಜನರಿಗೆ ಕರಿನೀರಿನ ಶಿಕ್ಷೆಯಾಯಿತು. ಇವರಲ್ಲಿ ೬೦ ವರ್ಷ ಮೇಲ್ಪಟ್ಟವರೂ ಕೆಲವರಿರುವುದರಿಂದ ಅವರಿಗೆ ಮಾತ್ರ ಸಾದಾ ಕರಿನೀರಿನ ಶಿಕ್ಷೆಯಾಗಿದೆ.

ವ್ಯಾಜ್ಯದ ಪ್ರಸಂಗವು ಹೀಗಿದೆ. ಹಳಸಿ ಗ್ರಾಮದ ಮಾಲಿಪಾಟೀಲ ವಿಠೋಬಾ ಎಂಬವನು ತನ್ನ ಮಗನಾದ ನಾರಾಯಣ ಎಂಬವನಿಗೆ ಕಲಿಸುವದಕ್ಕಾಗಿ ಮಹಮ್ಮದ ಕಾಶೀಮ ಎಂಬ ಮುಸಲ್ಮಾನ ಗೃಹಸ್ಥನನ್ನು ಮಾಸ್ತರನನ್ನಾಗಿ ನಿಯಮಿಸಿಟ್ಟುಕೊಂಡನು. ಆ ವಿಠೋಬನ ರಾಧಾಬಾಯಿ ಎಂಬ ವಿಧವೆಯಾದ ಮಗಳು ಮನೆಯಲ್ಲಿಯೇ ಇದ್ದಳು. ಅಷ್ಟರಲ್ಲಿ ತಂದೆಯು ತೀರಿಕೊಳ್ಳಲು ಅವಳು ಮುಸಲ್ಮಾನ ಧರ್ಮವನ್ನು ಸ್ವೀಕರಿಸಿ ಮೇಲೆ ಹೇಳಿದ ಮಾಸ್ತರನೊಡನೆ ನಿಕಾ ಮಾಡಿಕೊಂಡಳು. ಮುಂದೆ ಕೆಲವು ದಿವಸಗಳಲ್ಲಿಯೇ ನಾರಾಯಣನೂ ಅವನ ಪತ್ನಿಯೂ ಮುಸಲ್ಮಾನ ಧರ್ಮಕ್ಕೆ ಸೇರಿದರು. ಕೇವಲ ಈ ಅಕ್ಕ ತಮ್ಮನ ತಾಯಿಯಾದ ಸಮುದ್ರಬಾಯಿ ಎಂಬುವವಳು ಹಿಂದು ಧರ್ಮದಲ್ಲಿ ಉಳಿದಳು.

ನಾರಾಯಣನೂ ಅವನ ಹೆಂಡತಿಯೂ ಮುಂದೆ ಒಬ್ಬನೇ ಒಬ್ಬ ಅಜ್ಞಾನ ಮಗನನ್ನು ಬಿಟ್ಟು ತೀರಿ ಹೋದರು. ಸಮುದ್ರಬಾಯಿಯು ಆ ಹುಡುಗನನ್ನು ತಕರಾರುಪಡಿಸಿಕೊಂಡು ಅವನನ್ನು ಪುನಃ ಹಿಂದೂ ಧರ್ಮದಲ್ಲಿ ತೆಗೆದುಕೊಂಡಳು. ಇದನ್ನು ಕಂಡು ರಾಧಾಬಾಯಿಯು(ಅವಳ ಮುಸಲ್ಮಾನೀ ಹೆಸರು ರಬಿಯಾಬಾಯಿ) ರೆವಿನ್ಯು ಖಾತೆಗೆ ಈ ರೀತಿ ಅರ್ಜಿ ಮಾಡಿಕೊಂಡಳು—ನಾರಾಯಣನ ಹೆಸರಿನಿಂದ ಗೌಡಿಕೆಯೂ ಮತ್ತು ಬೇರೆ ಆಸ್ತಿಯೂ ಇದೆ. ಅವನ ಮಗನು ಹಿಂದುವಾದುದರಿಂದ ಅವನ ಆಸ್ತಿಯ ಮೇಲಿನ ಹಕ್ಕು ಮುಳುಗಿತು. ಅದನ್ನು ನನ್ನ ಹೆಸರಿನಿಂದ ಹಚ್ಚಬೇಕು ಎಂದು ಕೇಳಿಕೊಂಡಳು. ರೆವಿನ್ಯು ಖಾತೆಯವರು ಅವಳ ಅರ್ಜಿಯಂತೆ ಆ ಆಸ್ತಿಯನ್ನೆಲ್ಲ ಅವಳ ಹೆಸರಿನಿಂದ ಹಚ್ಚಿಸಿದರು. ನಾರಾಯಣನ ಮಗನು ಹಿಂದು ಧರ್ಮ ಸ್ವೀಕರಿಸಿದ್ದರಿಂದ ಅವನ ಹಕ್ಕು ಮುಳುಗಿ ಹೋಯಿತು.

ಈ ನಿರ್ಣಯದಿಂದ ಅಸಂತುಷ್ಟರಾಗಿದ್ದ ವಿಠೋಬನ ಹೆಂಡತಿಯಾದ ಸಮುದ್ರಬಾಯಿಯೂ ಅವಳ ಆಪ್ತ ಬಂಧುಗಳೂ ಕೂಡಿ ಒಳಸಂಚು ನಡೆಯಿಸಿ ರಾಧಾಬಾಯಿ ಊರ್ಫ ರಬಿಯಾಬಾಯಿ ಇವಳ ಗಂಡನಾದ ಮಹಮ್ಮದಕಾಶೀಮನ ಕೊಲೆ ಮಾಡಿದರೆಂದೂ ಒಟ್ಟಿಗೆ ೨೧ ಜನರೆಲ್ಲ ಇದರಲ್ಲಿ ಸೇರಿದ್ದರೆಂದೂ ನಿರ್ಣಯವಾಗಿ ೧೯ ಜನರಿಗೆ ಮೇಲಿನ ಶಿಕ್ಷೆಯಾಯಿತು.

ನಾಗಪುರದಲ್ಲಿ 'ವಂದೇ ಮಾತರಮ್'

ನಾಗಪುರದ ನ್ಯೂ ಇಂಗ್ಲಿಷ ಶಾಲೆಯಲ್ಲಿ ಜ್ಯುಬಲಿ ಸಮಾರಂಭದ ಕಾಲಕ್ಕೆ ಮಧ್ಯಪ್ರಾಂತದ ಗವ್ಹರ್ನರರಾದ ಸರ ಹಾಯಿಡ ಗೋವನ್ ಮತ್ತು ಅವರ ಪತ್ನಿ ಲೇಡಿ ಗೋವನ್ ಇವರು ಆಗಮಿಸಿದ್ದರು. ಸಮಾರಂಭದ ಕೊನೆಗೆ ಮೂರು [illegible] ರಾಷ್ಟ್ರ ಗೀತೆಯಾದ 'ವಂದೇ ಮಾತರಮ್' ಗೀತೆಯು ಹಾಡಲ್ಪಟ್ಟಿತು. ಆ ಕಾಲಕ್ಕೆ ಗವ್ಹರ್ನರರೂ ಅವರ ಪತ್ನಿಯವರೂ ಸಹ ಎದ್ದು ನಿಂತಿದ್ದರು. ಸಮಾರಂಭದ ಕೊನೆಗೆ ವಂದೇ ಮಾತರಮ್ ಗೀತೆಯು ಹಾಡಲ್ಪಡುವದೆಂದು ಗವ್ಹರ್ನರರಿಗೆ ಮೊದಲೇ ತಿಳಿಸಲಾಗಿದ್ದಿತಂತೆ. ಅದಕ್ಕೆ ಅವರೇನೂ ಸಂಕೋಚಪಡಲಿಲ್ಲ.

[illegible]

ವ ರ್ತ ಮಾ ನ ಸಾ ರ.

—ಹೊಸದಿಲ್ಲಿಯಲ್ಲಿ ಜಾಮಿಯಾ ಮಿಲ್ಲಿಯ ಇಸ್ಲಾಮಿಯಾ ಎಂಬ ಸಂಸ್ಥೆಯ ಶಂಕು ಸ್ಥಾಪನೆಯು ಸಂಸ್ಥೆಯ ಎಲ್ಲಕ್ಕೂ ಚಿಕ್ಕ ಬಾಲಕನ ಹಸ್ತದಿಂದಾಯಿತು. ಇದಕ್ಕೆ ಶ್ರೀ ಜಮನಾಲಾಲ ಬಜಾಜರು ೧೬ ಸಾವಿರ ರೂ. ದಾನ ಕೊಟ್ಟಿದ್ದಾರೆ. ಗಾಂಧೀಜಿಯವರು ಈ ಸಂಸ್ಥೆಗೆ ಶುಭ ಸಂದೇಶ ಕಳಿಸಿದ್ದರು.

—ತಾವು ಬೇಡಿದಂಥ ರಾಟಿಯನ್ನು ಮಾಡಿ ಕೊಟ್ಟುದಕ್ಕಾಗಿ ಮಹಾತ್ಮರು ಕಿರ್ಲೋಸ್ಕರ ಕಂಪನಿಯ ಶ್ರೀ ಕಾಳೆ ಎಂಬುವವರಿಗೆ ಒಂದು ಲಕ್ಷ ರೂ. ಬಹುಮಾನ ಕೊಟ್ಟರೆಂದು ಪ್ರಸಿದ್ಧವಾದ ಸುದ್ದಿಯು ನಿರಾಧಾರವಾದುದೆಂದು ಮಹಾತ್ಮರು ವ್ಯಕ್ತಪಡಿಸಿದರು.

—ದಕ್ಷಿಣ ಹೈದರಾಬಾದದ ಪ್ರಸಿದ್ಧ ಶ್ರೀಮಂತ ವ್ಯಾಪಾರಿಗಳಾದ ರಾಜಾಬಹಾದ್ದೂರ ಬನ್ಸೀಲಾಲ ಮೋತೀಲಾಲ ಇವರು ನಾಲ್ಕನೆಯ ತಾರೀಖಿನ ದಿವಸ ಮೃತಪಟ್ಟರು.

—ಬೆಂಗಳೂರಿನ ಸಿಲೆಕ್ಟ ಟಾಕೀಜ ಎಂಬ ಸಿನೇಮಾ ಗೃಹದಲ್ಲಿ 'ಟಾರಂಟ' ಎಂಬ ಸಿನೇಮಾ ಚಿತ್ರಪಟವು ತೋರಿಸಲ್ಪಡುತ್ತಿರುವಾಗ ಮುಸಲ್ಮಾನರು ಅದು ಆಕ್ಷೇಪಾರ್ಹವೆಂದು ಕಲ್ಲು ಸೋಡಾ ಬಾಟ್ಲಿಗಳನ್ನೆಸೆಯಹತ್ತಿದರು. ಸೂಜ್ಞ ಮುಸಲ್ಮಾನರು ಆಕ್ಷೇಪಾರ್ಹವಲ್ಲವೆಂದು ಅಭಿಪ್ರಾಯಪಟ್ಟರು. ಕಡೆಗೆ ಪೋಲೀಸರು ಬೆತ್ತದ ಸಹಾಯದಿಂದ ಶಾಂತಿಯನ್ನುಂಟು ಮಾಡಿದರು.

—ಲಾಹೋರದಲ್ಲಿ ಒಬ್ಬ ವ್ಯಾಪಾರಸ್ಥನ ಮನೆಯಲ್ಲಿ ಒಬ್ಬ ಪಠಾಣ ಸೇವಕನಿದ್ದನು. ಆ ಪಠಾಣನ ಹೆಂಡತಿಯು ಶೀಖ ಧರ್ಮವನ್ನು ಸ್ವೀಕರಿಸಿ ಒಬ್ಬ ಶೀಖನನ್ನು ಲಗ್ನಮಾಡಿಕೊಳ್ಳಲು ಆ ವ್ಯಾಪಾರಿಯೇ ಕಾರಣವೆಂಬ ಸಂಶಯದಿಂದ ಆ ಪಠಾಣನು ಅವನನ್ನು ಗುಂಡಿಟ್ಟು ಕೊಂದನು.

—ಠಾಣೆಯಲ್ಲಿ ಹುಚ್ಚರ ಆಸ್ಪತ್ರೆಯಲ್ಲಿ ಒಬ್ಬ ಹುಚ್ಚನಿಗೆ ಒಬ್ಬ ಪಠಾಣನು ಹೊಟ್ಟೆಯ ಮೇಲೆ ಒದೆಯಲು ಅವನು ಮರಣ ಹೊಂದಿದನು. ಪಠಾಣನಿಗೆ ೫೦ ರೂ. ದಂಡವಾಯಿತು.

—ಇಂಗ್ಲಂಡದಲ್ಲಿ ಪ್ರಬಲವಾಗಿ ಚಟುವಟಿಕೆಯನ್ನು ಪ್ರಾರಂಭಿಸದರೆ ಸಿಂಧವನ್ನು ಬೇರೆ ಪ್ರಾಂತಮಾಡುವದು ನಿಂತು ಹೋಗುವದೆಂದು ಲಂಡನ್ನಿನ ಸಿಂಧ ಹಿಂದು ಸಭೆಯ ಶಾಖೆಯವರು ತಿಳಿಸಿದ್ದರಿಂದ ಸಿಂಧದ ಹಿಂದುಗಳು ಧನವನ್ನು ಕೂಡಿಸಹತ್ತಿದ್ದಾರೆ.

—ಪೋಸ್ಟ ಮತ್ತು ತಾರ ಖಾತೆಯ ಡಾಯರೆಕ್ಟರ ಜನರಲ್ ಮಿ. ಜಿ ವ್ಹಿ. ಬೇವೂರ ಇವರನ್ನು ಬಜೆಟ್ಟಿನ ಬಗ್ಗೆ ಚರ್ಚೆಯಾಗುವಾಗ್ಗೆ ಉತ್ತರ ಕೊಡಲಿಕ್ಕೆಂದು ೫ ನೆಯ ತಾರೀಖಿನ ದಿವಸ ಅಸೆಂಬ್ಲಿಯ ಸದಸ್ಯರೆಂದು ನಿಯಮಿಸಲಾಯಿತು.

—ಪ್ರಯಾಗದಲ್ಲಿ ಎಪ್ರಿಲ್ ತಿಂಗಳಲ್ಲಿ ಕೂಡಲಿರುವ ಸಂಯುಕ್ತ ಪ್ರಾಂತದ ಮೊದಲನೆಯ ಒಕ್ಕಲಿಗರ ಪರಿಷತ್ತಿಗೆ ಶ್ರೀ ವಲ್ಲಭಭಾಯಿಯವರು ಅಧ್ಯಕ್ಷರಾಗುವರು.

ಜಯಕರ್ನಾಟಕ

ಕರ್ನಾಟಕದ ಪ್ರಮುಖ ಮಾಸಪತ್ರಿಕೆ.

ವಾರ್ಷಿಕ ಚಂದಾ ೫-೮-೦

ನಾಟ್ಯಾಂಕ

ವಿವಿಧಚಿತ್ರ! ಸರಸನಾಟಕ ಕಥೆ! ವಿದ್ವತ್ಪ್ರಚುರ ಲೇಖಗಳಿವೆ!
ಫೆಬ್ರುವಾರಿ — ಬೆಲೆ ೧ ರೂ. — ಸಿಗುತ್ತಿವೆ.

ಜಯಕರ್ನಾಟಕ ಗ್ರಂಥಮಾಲೆ

ವರ್ಷಕ್ಕೆ ೬ ಪುಸ್ತಕ] ವಾ. ಚಂ. ೩-೪-೦ [ಮೇಲೊಂದು ಉಚಿತಪುಸ್ತಕ

ಜ. ಕ. ಚಂದಾದಾರರಿಗೆ ೩ ರೂ.

ಮೂರನೆಯ ವರ್ಷದ ನಾಲ್ಕನೆಯ ಪುಸ್ತಕವಾದ
ಶ್ರೀ. ಶ. ಪಿ. ಜೋಶಿಯವರ

ಇದೀಗ ಹೊರಟಿದೆ] **ರಾಜವಲ್ಲಭ** [ಬೆಲೆ ಹತ್ತು ಆಣೆ.

ಕೀಚಕ ವಧೆ ಕಥೆಯನ್ನು ಆಧರಿಸಿ ಬರೆದ ಹೊಸ ಸಂಗೀತ ನಾಟಕ. ಉಚಿತ ಸಂಭಾಷಣೆ, ಮಿತವಿನೋದ, ಸುರಮ್ಯ ಪದ್ಯಮಾಲಿಕೆ.

**ಜಯಕರ್ನಾಟಕ ಕಾರ್ಯಾಲಯ
ಧಾರವಾಡ.**

ಸ್ವದೇಶಾಭಿಮಾನಿ

ಮಂಗಳೂರು.

೧೯೦೬ ರಲ್ಲಿ ಸ್ಥಾಪಿತವಾಗಿ, ರೋಚಕಸಮಾಚಾರ, ವಿನೋದ, ರಾಜಕೀಯ ಟೀಕೆ ಟಿಪ್ಪಣಿ, ಕಥೆ, ಕವನ, ವ್ಯಂಗಚಿತ್ರ ಮೊದಲಾದುವುಗಳನ್ನು ಪ್ರಕಟಿಸುತ್ತ ಕನ್ನಡ ನಾಡಿನಲ್ಲಿ ಸಾವಿರಗಟ್ಟಲೆ ಚಂದಾದಾರರನ್ನು ಸಂಪಾದಿಸಿ ಕೀರ್ತಿ ಹೊಂದಿದ ಸಚಿತ್ರ ವಾರ ಪತ್ರಿಕೆ. ವಾರಕ್ಕೆ ಹತ್ತಿಪ್ಪತ್ತು ಚಿತ್ರಗಳು. ನಿಮ್ಮ ಜಾಹಿರಾತನ್ನು ಇದರಲ್ಲಿ ಕೊಡಿರಿ.

ವಾರ್ಷಿಕ ಚಂದಾ ರೂ. ೨-೧೪-೦ ಮಾತ್ರ.

ಸಿಲೆಂಡರ್ ಮಶಿನ್ ಬೇಕಾಗಿದೆಯೆ?

ಹಾಗಾದರೆ ನಮ್ಮಲ್ಲಿದೆ. ಡಾವಸನ್ ಎಂಡ್ ಸನ್ಸ್ ಕಂಪನಿಯದು. ಉತ್ತಮ ಸ್ಥಿತಿಯಲ್ಲಿ ಕೆಲಸಮಾಡುತ್ತದೆ. ಇನ್ನರ್ ಸೈಜ್ ಛೇಸ್ 29½ + 35½ ಸೈಜಿನದು. ಪಂಪಾ ಸಹಿತ ಇದ್ದದ್ದು ಪೋಲ್ಡಿಡ್ ಮೋಲ್ಡುಗಳು ಸಹಿತ ಕೊಡಲ್ಪಡುವವು.

ಹೆಚ್ಚಿನ ಸಂಗತಿಗಳನ್ನು ಪತ್ರಮುಖೇನ ಅಥವಾ ಸಮಕ್ಷಮ ತಿಳಿದುಕೊಳ್ಳಬಹುದು. **ಮ್ಯಾನೇಜರ್**

ಶ್ರೀ ಲಿಂಗರಾಜ ಆರ್ಟ ಪ್ರೆಸ್, ಧಾರವಾಡ

ಜಾಹೀರಾತ.

ಸರ್ವಜನರಲ್ಲಿ ವಿಜ್ಞಾಪಿಸುವದೇನಂದರೆ—

ಈ ಜಾಹೀರಾತಿನಿಂದ ತಿಳಿಸುವದೇನಂದರೆ ನನ್ನ ಸಹೋದರನಾದ ಬಸಣ್ಣ ಈತನು ಮನೆ ಬಿಟ್ಟು ಒಂದು ವರುಷವಾಯಿತು. ಈತನ ಸ್ವಭಾವ ಹುಚ್ಚು, ವಯಸ್ಸು ೪೦, ಬಣ್ಣ ಸಾಧಾರಣ ಕೆಂಪು, ಸಾಧಾರಣ ನಿಲುವು, ದುಂಡು ಮುಖ, ಬಲ ಗದ್ದದ ಮೇಲೆ ಒಂದು ಹಸರು ಬಣ್ಣದ ಹೆಬ್ಬೆರಳಿನಷ್ಟು ಕಲೆ ಇದ್ದು ಅದರ ಮೇಲೆ ಕೂದಲು ಇವೆ. ಒಮ್ಮೊಮ್ಮೆ ಗೋಣು ಹೊರಳಿಸುವನು. ಮತ್ತು ಶೌಚಕ್ಕೆ ಕೂತರೆ ೨-೩ ತಾಸಾದರು ಕೂಡ್ರುವನು. ಮತ್ತು ಕ್ಷೌರಮಾಡಿಸುವದಕ್ಕೆ ಬಹಳ ಪ್ರೀತಿ. ಮೀಸೀಸಹ ತೆಗೆಸುವನು. ಬಾಲ, ವೃದ್ಧರಿಗೆ ಸಹ ಕಾಕಾ, ಕಾಕಾ ಅನ್ನುವನು. ತನ್ನಷ್ಟಕ್ಕೆ ತಾನೆ ಮರಿಯಪ್ಪ ಪಂಪಣ್ಣ, ಟಾಕಣ್ಣ ಎಂದು ಅನ್ನುತ್ತಾನೆ. ಹೆಸರು ಕೇಳಿದರೆ ಬಸಣ್ಣನೆಂದು ಹೇಳುವನು. ಹುಡುಗರು ಕಾಡಿದರೆ ಚೀರುವನು. ಮುಷ್ಟಿ ಹಸ್ತ ತಿರುವಿ ಹಿಡಿದು ಶಂಖಹಚ್ಚುವನು. ಇಷ್ಟು ಚಿನ್ಹಗಳನ್ನು ಕಂಡರೆ ದಯವಿಟ್ಟು ತಮ್ಮಲ್ಲಿ ಇರಿಸಿಕೊಂಡು ನಮಗೆ ತಿಳಿಸಿದರೆ ನಿಮಗೆ ೧೦ ರೂ. ಇನಾಮು ಕೊಡುತ್ತೇವೆ ತಿಳಿದಿರಬೇಕು.

ನಮ್ಮ ವಿಳಾಸ:— **ಪಂಪಣ್ಣ ಗಡ್ಡದ ದೇವಾಂಗ**

ಮುಕ್ಕಾಂ, ಪೋಸ್ಟ ಮಸ್ಕಿ, ತಾಲೂಕಾ
ಲಿಂಗಸೂಗೂರ ಜಿಲ್ಲಾ ರಾಯಚೂರ.

ನಿರಂಜನ ಹಾಲ್.

ಮಹಾಶಯರೇ ನಮ್ಮಲ್ಲಿ ಸಕಲರಿಗು ಪೂಜಾರ್ಹವಾದ ಸಾಮಾನುಗಳು ದೊರೆಯುತ್ತೆ.

ಮಹದೇಶ್ವರ ಸ್ವಾಮಿಯವರು ಎಂಬ ಮಹಾ ವಿರಕ್ತರು ತಮ್ಮ ಬಾಲ್ಯದಲ್ಲಿಯೇ ಹುಲಿಯ ಮೇಲೆ ಕುಳಿತು ಸಂಚಾರ ಮಾಡುತ್ತಿದ್ದ ಫೋಟೋ ೧೦×೧೪ ಸೈಜು ಡಜ಼ ೧ ಕ್ಕೆ ೧-೮-೦

ನಂಜುಂಡೇಶ್ವರ ಸ್ವಾಮಿ ಫೋಟೋ ೧೦ + ೧೩ ಸೈಜು ಡಜ಼ ೧ ಕ್ಕೆ (೧-೮-೦) ಡಿಟೊ ೭ + ೯ ಸೈಜು ಡ. ೧ ಕ್ಕೆ ೦-೧೩-೦ ಮತ್ತು ೦-೬-೦. ಅವಲ್ ದಶಾಂಗ ಧೂಪದ ಭಟ್ಟಿ ಸೇರು ೧ ಕ್ಕೆ (೩-೦-೦) ದುಯಂ ಸೇರು ೧ ಕ್ಕೆ, ೧-೮-೦ ೧-೦-೦ ಒಂದಾವರ್ತಿ ತರಿಸಿ ಪರೀಕ್ಷಿಸಿರಿ.

**ಹೆಚ್, ಎಂ. ಮಲ್ಲಪ್ಪ
ಅಂಡ್, ಬ್ರದರ್ಸ್ ಫೋಟೋಗ್ರಾಫರ್,
ನಂಜನಗೂಡು.**

—ಮೈಸೂರು ಹರಿಜನ ಸೇವಾ ಸಂಘದವರು ಶ್ರೀ ಅಮೃತಲಾಲ ಠಕ್ಕರ ಇವರಿಗೆ ಸಂಸ್ಕೃತ ಭಾಷೆಯಲ್ಲಿ ಮಾನಪತ್ರವನ್ನರ್ಪಿಸಿದರು.

—ತೊಗಲು ಹದಗೊಳಿಸುವ ಉದ್ಯೋಗವನ್ನು ಆದಿಜನರಿಗೆ ಕಲಿಸುವದಕ್ಕಾಗಿ ಕಲಕತ್ತಾ, ವರ್ಧಾಗಳಲ್ಲಿ ಶಾಲೆಗಳು ಪ್ರಾರಂಭಿಸಲ್ಪಟ್ಟಿವೆ. ಶೀಘ್ರವೇ ದಿಲ್ಲಿಯಲ್ಲಿ ಒಂದು ಶಾಲೆಯು ಪ್ರಾರಂಭವಾಗುವದು.

ಪತ್ರಗಳ ಸಾರಾಂಶ.

ಶ್ರೀ ಕುಮಾರ ಶಿವಯೋಗಿಗಳವರ ಪುಣ್ಯತಿಥಿ.

ಶ್ರೀ ಜಗದ್ಗುರು ಜಯದೇವ ಗುರುಕುಲದಲ್ಲಿ ಈ ದಿವಸ ಶ್ರೀ ಕುಮಾರ ಶಿವಯೋಗಿಗಳ ಪುಣ್ಯತಿಥಿಯ ನಿಮಿತ್ತವಾಗಿ ಕಾಶಿಯಲ್ಲಿ ನಿವಾಸಿಸುವ ವೀರಶೈವ ಮಂಡಲಿಯೊಡನೆ ಭಜನ-ಪೂಜನ-ಗಣಾರಾಧನೆಯು ಜರುಗಿದುದಲ್ಲದೆ ಮಧ್ಯಾಹ್ನ ೩ ರಿಂದ ೫ರ ವರೆಗೆ ಸಭೆಯು ಬಾನಾಪುರ ಕಾಶೀನಾಥ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸಾಂಗವಾಗಿ ನೆರೆಯಿತು. ಈ ಸಭೆಯಲ್ಲಿ ಶ್ರೀ ಮೃತ್ಯುಂಜಯ ದೇವರು, ಶ್ರೀ ಚಿದ್ಘನ ದೇಶಿಕರು, ಶ್ರೀ ಕಡಪೂರ ದೇವರು, ಶ್ರೀ ಸಿದ್ಧೇಶ್ವರ ದೇವರು, ಶ್ರೀ ಶಿವಲಿಂಗ ಶಾಸ್ತ್ರಿಗಳು ಅಮ್ಮಣಗಿ ಇವರೇ ಮೊದಲಾದ ಪಂಡಿತ ವರ್ಗವು ಶ್ರೀ ಶಿವಯೋಗಿಗಳ ಧ್ಯೇಯ, ಕಾರ್ಯ, ಗುಣ ಕಥನ, ಚರಿತ್ರೆಗಳನ್ನು ಅತ್ಯಂತ ಸಮರ್ಪಕವಾಗಿ ವಿವರಿಸಿ ಹೇಳಿ ಸಭೆಯಲ್ಲಿ ಆನಂದದ ಮಳೆಯನ್ನು ಸುರಿಸಿದರು. ಶ್ರೀ ಕೊಟಬಾಗಿ ದೇವರು ಈ ದಿನದ ಕಾರ್ಯವನ್ನು ಅತ್ಯಂತ ತತ್ಪರೆಯಾಗಿ ನೆರವೇರಿಸುತ್ತಿದ್ದರು.

ವ್ಯಾಖ್ಯಾನದ ಕಣೆಯು

ಸಮುದ್ರದಲ್ಲಿಯ ಮಾರ್ಗದರ್ಶಕ ದೀಪಗಳಂತೆ ಸತ್ಪುರುಷರು ಭವಸಾಗರದಲ್ಲಿ ಜ್ಞಾನಜ್ಯೋತಿಗಳಾಗಿ ಬೆಳಗುತ್ತಲಿರುವರು. ಅವರು ತಮ್ಮ ಸಮಸ್ತ ನಡೆನುಡಿಗಳಿಂದ ಪ್ರಾಣಿಗಳ ಹಿತಚಿಂತನೆಯನ್ನೇ ಬೋಧಿಸುವರು. ಸಾಮಾನ್ಯರು ಜನನ-ಮರಣ ಚಕ್ರಕ್ಕೆ ಒಳಪಟ್ಟು ಬಳಲುವರು. ಆದರೆ ಸತ್ಪುರುಷರು "ಕಾರ್ಯಂ ಸಾಧಯಾಮಿ ಶರೀರಂ ಪಾತಯಾಮಿ" ಎಂದು ಪರೋಪಕಾರಕ್ಕಾಗಿಯೇ ತಮ್ಮ ಪಂಚಭೂತಾತ್ಮಕ ಕಲೇವರವನ್ನು ಸವೆಯಿಸುವದಲ್ಲದೆ ಶುದ್ಧವಾದ ಮಾರ್ಗವನ್ನು ತೋರಿಸಿ ಎಲ್ಲರನ್ನು ಉದ್ಧರಿಸುವರು. ಜೀವಿಯು ತನ್ನ ಜೀವನವನ್ನು ಪವಿತ್ರಗೊಳಿಸಬೇಕಾದರೆ ಸತ್ಪುರುಷರ ನಡೆನುಡಿಗಳಿಗೆ ಹೋಲಿಸುತ್ತಿರಬೇಕೆಂಬ ವಚನವು ಆ ಸಾಧುವರೇಣ್ಯರಾದ ಕುಮಾರ ಸ್ವಾಮಿಗಳನ್ನು ಎಡಬಿಡದೆ ಅನುಸರಿಸುವದು.

ಶ್ರೀಗಳು ವೃದ್ಧರೊಡನೆಯೂ, ಪಂಡಿತರೊಡನೆಯೂ ಯಾವಾಗಲೂ ವಿಚಾರ ವಿನಿಮಯವನ್ನು ಮಾಡುತ್ತಿದ್ದರು. ಸಮಾಜದ ಏಳಿಗೆಗಾಗಿ ೧೯೦೪ ರಲ್ಲಿ ವೀರಶೈವ ಮಹಾಸಭೆಯನ್ನು ಸ್ಥಾಪಿಸಿದರು. ಅಲ್ಲಲ್ಲಿ ಸಂಸ್ಕೃತ ಶಾಲೆಗಳನ್ನು ಸ್ಥಾಪಿಸಿದರು. ಶಿವಯೋಗ ಮಂದಿರವೆಂಬ ಸಂಸ್ಥೆಯನ್ನು ಸಮಾಜದ ಏಳಿಗೆಗೆ ಸಮಾಜಕರಾಗಿಯೂ ನೈತಿಕರಾಗಿಯೂ, ಜಿತೇಂದ್ರಿಯರಾಗಿಯೂ, ಲೋಕೋಪಕಾರಕ್ಕಾಗಿ ವಸ್ತ್ರಜೀವನ ಮಾತ್ರಕ್ಕಾಗಿ ಆಹಾರವುಳ್ಳವರಾಗಿಯೂ, ಇರುವ ಸಮಾಜ ಸೇವಕರನ್ನು ತಯಾರುಮಾಡುವದಕ್ಕೆ ಸ್ಥಾಪಿಸಿದರು. ಈ ಮಧ್ಯದಲ್ಲಿ ಕೆಲ ದಿನಗಳಿಂದ ಹುಟ್ಟಿರುವ "ನಾ ಹೆಚ್ಚು" ಎಂಬ ವಾದವನ್ನು ಶಾಂತಗೊಳಿಸಲಿಕ್ಕೆ ಆರಿಸಲ್ಪಟ್ಟಿದ ಮುಖಂಡರೊಡನೆ ನಿರ್ಣಯಮಾಡಲಿಕ್ಕೆ ಕೇಳಿದಾಗ 'ಆ ಸನ್ಯಾಸಿಗಳು ಕೆಳಗೆ ಕೂತರೆ ನಿರ್ಣಯವು ನಡೆಯಲೆಂದು' ಹೇಳಿಕಳಿಸಿದರು. ಆಗ ಶ್ರೀಗಳು ತಗ್ಗಿನಲ್ಲಿ ಕೂಡ್ರಿಸಿದರೂ ನನಗೇನೂ ಕುಂದಕವಿಲ್ಲ. ಆದರೆ ಸಮಾಜದಲ್ಲಿ ಶಾಂತಿಯಾದರೆ ಸಾಕು. ಬಸವಾದಿ ಪ್ರಮಥರು ಸಮಾಜದ ಹಿತಕ್ಕಾಗಿ ನಡೆನುಡಿದ ಆ ಪರಿಶ್ರಮವು ನಿಷ್ಕಲಂಕವಾಗಿ ಬೆಳಗಲೆಂಬುದೇ ನನ್ನ ಉದ್ದೇಶವು. ಎಂದು ಉತ್ತರವನ್ನು ಕಳಿಸಲು ಆ ಮುಖಂಡರು ಹೇಳಹೆಸರಿಲ್ಲದೆ ತಪ್ಪಿಸಿಕೊಂಡರು. ಸ್ವಾಮಿಗಳು ಸಮಾಜದ ಸ್ಥಿತಿಯನ್ನೂ, ಶಿ. ಮಂದಿರದಲ್ಲಿ ತಮ್ಮದುರಿಗೇ ಯೋಗ್ಯ ಸಮಾಜಿಕರು ಬಹು ಸಂಖ್ಯಾಕರಾಗಿ ತಯ್ಯಾರಾಗಲಿಲ್ಲವೆಂದೂ, ತಿಳಿದು ಬಹಳ ವ್ಯಸನ ಪಡುತ್ತಿದ್ದರು. ಈ ಭಾರವು ಎಲ್ಲಾ ಸಮಾಜಿಕರ ಪಕ್ಷದ ಲ್ಲಿರುವದರಿಂದ ಪ್ರಮುಖ ಜನರು ಒಟ್ಟುಗೂಡಿ ಎಲ್ಲ ಬಗೆಯ ನಿರ್ಣಯವನ್ನು ತೀವ್ರವೇ ಮಾಡಿದರೆ ಜಯಂತಿಯನ್ನಾಗಲಿ ಪುಣ್ಯತಿಥಿಯನ್ನಾಗಲಿ ಮಾಡುವಲ್ಲಿ ಉದ್ದೇಶವು ಸಿದ್ಧವಾಗುವದೆಂದು ಬಿತ್ತರಿಸಿದರು.

ಅಂತ್ಯದಲ್ಲಿ ಆ ಶಿವೈಕ್ಯನಾದ ಕುಮಾರ ಯೋಗಿಯು ಎಲ್ಲರಿಗೂ ಸನ್ಮಾರ್ಗವನ್ನು ತೋರಿಸಲೆಂದೂ ಸುಖಶಾಂತಿಯನ್ನೀಯಲೆಂದೂ ಪ್ರಾರ್ಥಿಸಿ ಮಂಗಲವನ್ನು ಮಾಡಿದರು. **ಪ್ರೇಕ್ಷಕ.**

ಬಿನ್ನಹ ಪತ್ರಿಕೆ.

ಶ್ರೀ ಎಸ್. ಕೆ. ಹೊಸಮನಿ, ಪ್ರೆಸಿಡೆಂಟ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ ಇವರು ಈ ಕೆಳಗಿನ ವಿಜ್ಞಾಪನೆಯನ್ನು ಪ್ರಕಟಪಡಿಸಿದ್ದಾರೆ:—

ರಾಯರ ಸೀಮೆಯಲ್ಲಿ (ಬಳ್ಳಾರಿ, ಅನಂತಪುರ, ಕಡಪಾ, ಕರ್ನೂಲ ಜಿಲ್ಲೆಗಳಲ್ಲಿ) ಭಯಂಕರ ಬರ ಬಿದ್ದಕಾರಣ ಅಸಹ್ಯ ಸಂಕಟವುಂಟಾಗಿದೆಯೆಂಬುದು ಸರ್ವರಿಗೂ ವಿದಿತವಾದ ವಿಷಯವಷ್ಟೆ. ಈ ನಾಲ್ಕು ಜಿಲ್ಲೆಗಳಲ್ಲಿ ರಿಲೀಫ ಕಾರ್ಯವನ್ನು ಪ್ರಾರಂಭಿಸುವದಕ್ಕಾಗಿ ಶ್ರೀ ಕೋಟರೆಡ್ಡಿ ಎಮ್. ಎಲ್. ಸಿ ಇವರ ಅಧ್ಯಕ್ಷತೆಯಲ್ಲಿ ಬರಗಾಲ ನಿವಾರಕ ಮಧ್ಯವರ್ತಿ ಸಂಸ್ಥೆಯು ಸ್ಥಾಪಿತವಾಗಿದೆ. ಈ ಜಿಲ್ಲೆಗಳಲ್ಲೆಲ್ಲ ಸರಕಾರದವರು ರಿಲೀಫ ಕೇಂದ್ರಗಳನ್ನು ಪ್ರಾರಂಭಿಸಿರುವರು.

ಸದ್ಯದ ಸಂಖ್ಯಾಗಣನೆಯಿಂದ ಅನಂತಪುರ ಜಿಲ್ಲೆಯ ರಿಲೀಫ ಕೇಂದ್ರದಲ್ಲಿ ೧೨೦೦೦ ಕಾರ್ಯಕರ್ತರಿರುವರೆಂದೂ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ೪೦೦೦ ಕೆಲಸಗಾರರು ಕೆಲಸಮಾಡುತ್ತಿರುವರೆಂದೂ ಕಂಡುಬಂದಿದೆ. ಇದರ ಮೇಲಿಂದ ಅಲ್ಲಿಯ ಬರಗಾಲವು ಎಷ್ಟು ಭೀಕರವೂ ಮತ್ತು ವ್ಯಾಪಕವೂ ಆಗಿದೆಯೆಂಬುದು ಕಂಡುಬರುತ್ತದೆ. ಸರಕಾರದವರು ಕೈಕೊಂಡಿರುವ ಬರಗಾಲ ನಿವಾರಣೋಪಾಯಗಳು ಬರಗಾಲದ ಕಟ್ಟಳೆಯ (Famine code) ಮೇರೆಗೆ ಸಹಜವಾಗಿ ಪ್ರಸಂಗಕ್ಕೆ ಪೂರೈಸುವಂಥವಿರುವದಿಲ್ಲ. ಆದುದರಿಂದ ಸರಕಾರದವರೊಡನೆ ಸಹಾಯಕವಾಗಿರುವ ಈ ಮಧ್ಯವರ್ತಿ ಸಂಸ್ಥೆಗೆ ಮಹಾಜನರು ಉದಾರಾಶ್ರಯವನ್ನು ದಯಪಾಲಿಸಿದಲ್ಲಿ ಆ ಭಯಂಕರ ಯಾತನೆಗೆ ಗುರಿಯಾದವರ ದುಃಖಗಳು ಸ್ವಲ್ಪಾದರೂ ಕಡಿಮೆಯಾಗುವವು. ಈಗಾಗಲೆ ಕೃಷ್ಣಾ ಜಿಲ್ಲಾ ಬೋರ್ಡಿನವರು ಈ ರಿಲೀಫ ಕಾರ್ಯಕ್ಕಾಗಿ ೨೦೦೦ ರೂ. ಗಳನ್ನು ಕೊಡಲು ತೀರ್ಮಾನಿಸಿದ್ದಾರೆ. ಮಛಲೀಪಟ್ಟಣ ಮತ್ತು ಗುಂಟೂರು ಪೌರಸಭೆಯವರೂ ತಕ್ಕಷ್ಟು ಕೊಟ್ಟಿದ್ದಾರೆ. ಆದುದರಿಂದ ಕರ್ನಾಟಕದಲ್ಲಿಯ ಸಂಸ್ಥೆಗಳೂ ಇದೇಪ್ರಕಾರ ಉದಾರಾಶ್ರಯವನ್ನೀಯುವವೆಂದು ನಾನು ಆಶಿಸುತ್ತೇನೆ. ಹಾಗೂ ಕರ್ನಾಟಕದ ಉದಾರ ಹೃದಯರಾದ ಮಹಾಜನರ ಆ ಕಂಗಾಲರಾದ ಜನರಿಗೆ ಆಶ್ರಯವನ್ನು ದಯಪಾಲಿಸಲು ಮುಂದೆ ಬರಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ವರ್ಗಣಿ ಕೊಡುವವರು ದಯಮಾಡಿ ಮಧ್ಯವರ್ತಿ ಬರಗಾಲ ನಿವಾರಕ ಸಂಸ್ಥೆಯ ಕೋಶಾಧ್ಯಕ್ಷರಾದ ಶ್ರೀ ಕೆ. ಎಸ್. ರಾಘವಾಚಾರ ಬಿ. ಎ. ಎಲ್. ಎಲ್. ಬಿ ಅನಂತಪೂರ ಇವರ ಕಡೆಗೆ ಕಳಿಸಬೇಕು.

ಆರ್. ಎಸ್. ಹುಕ್ಕೇರಿಕರ

ನೈಜಾಮ ವೀರಶೈವರ ಕರ್ತವ್ಯ.

ಹಿಂದುಸ್ಥಾನದಲ್ಲಿ ಇಂಗ್ಲೀಷ ರಾಜ್ಯಕ್ಕೆ ಒಳಪಟ್ಟಿರುವ ವಿಸ್ತಾರವಾದ ಭಾಗದಲ್ಲಿ ಕರ್ನಾಟಕವು ಒಳ್ಳೇ ಹೆಸರು ವಾಸಿಯಾಗಿರುವದು. ಕರ್ನಾಟಕದಲ್ಲಿ ಬೊಂಬಯಿ, ಮದ್ರಾಸ್, ಹೈದರಾಬಾದ, ಮೈಸೂರ್, ಈ ಪ್ರಾಂತಗಳ ಭಾಗಗಳಿದ್ದರೂ, ನಿಜಾಮ ಕರ್ನಾಟಕವೆಂತಲೂ, ಕರ್ನಾಟಕವೆಂತಲೂ, ಚರಿತ್ರಕಾರರು ಎರಡು ಭಾಗಗಳಾಗಿ ಮಾಡಿರುವರಷ್ಟೇ? ಇಡೀ ಕರ್ನಾಟಕದ ಸುಮಾರು ೩೫ ಲಕ್ಷ ವೀರಶೈವರಲ್ಲಿ ೯ ಲಕ್ಷ ಜನರು ನಮ್ಮ ನೈಜಾಮ ದೇಶದಲ್ಲಿರುವರು. ಆದರೆ ಕರ್ನಾಟಕದ ವೀರಶೈವ ಸುಧಾರಕರು ೨೦-೩೦ ವರ್ಷಗಳಿಂದ ಧಾರ್ಮಿಕ ರಾಜಕೀಯ ವಿದ್ಯೆಯಕಡೆ ಹೆಚ್ಚು ಗಮನ ಕೊಟ್ಟು ಮುಖ್ಯ ಮುಖ್ಯ ಸ್ಥಳಗಳಲ್ಲಿ ಅಂದರೆ ಬೆಳಗಾಂವ, ಹುಬ್ಬಳ್ಳಿ, ಧಾರವಾಡ, ಬಳ್ಳಾರಿ, ವಿಜಾಪುರ, ಸೊಲ್ಲಾಪುರ, ಹಾವೇರಿ ಮೊದಲಾದ ಪಟ್ಟಣಗಳಲ್ಲಿ ಸಂಸ್ಕೃತ, ಮತ್ತು ಇಂಗ್ಲೀಷ ಶಾಲೆಗಳೂ 'ಫ್ರಿ' ಬೋರ್ಡಿಂಗಗಳೂ, ಧನನಿಧಿ (ಫಂಡುಗಳೂ,) ಹಾಗೂ ಗ್ರಾಂಟ್ ಕೊಡುವದನ್ನು ಏರ್ಪಡಿಸಿದರು. ಇಂಥ ಸಹಾಯಗಳು ಇಂಗ್ಲೀಷ ಇಲಾಖೆಯಲ್ಲಿ ವಿಶೇಷವಾಗಿರುವದರಿಂದ ಆ ಆ ಇಲಾಖೆಯ ಬಡ ವಿದ್ಯಾರ್ಥಿಗಳಿಗೆ ಅಭ್ಯಾಸಮಾಡಲಿಕ್ಕೆ ತಕ್ಕ ಅನುಕೂಲತೆಗಳು ಉಂಟಾಗಿ ಅನೇಕ ವಿದ್ಯಾರ್ಥಿಗಳು, ಸಂಸ್ಕೃತದಲ್ಲಿ ಪಾರಂಗತರಾಗಿರುವರು. ಅನೇಕರು ಸರಕಾರಿ ಕೆಲಸಗಳಲ್ಲಿ ಪದವೀಧರರಾಗಿ ಸಮಾಜ ಸೇವೆಗೆ ಬೆಂಬಲರಾಗಿ ನಿಂತಿರುವರು. ಕೆಲವರು ಭೂಗರ್ಭ ಶೋಧಕರಾಗಿರುವರು ಹಲವರು ಶಾಸ್ತ್ರ ಸಂಶೋಧಕರಾಗಿರುವರು. ಕೆಲವರು ತಮ್ಮ ಮೇಧಾ ಶಕ್ತಿಯಿಂದ ಪರಮತೀಯರನ್ನು ದಂಗು ಬಡಿಸುತ್ತಿರುವರು. ಹಲವರು ಸಮಾಜಕ್ಕೆ ತಟ್ಟುತ್ತಿರುವ ಕುಂದು ಕೊರತೆಗಳನ್ನು ಹೋಗಲಾಡಿಸುತ್ತಿರುವರು. ಇದು ಸುಧಾರಿಸಿದ ಲಕ್ಷಣವಲ್ಲವೇ?

ಮಹಾಶಯರೆ, ನಮ್ಮ ನಿಜಾಮ ಕರ್ನಾಟಕದ ವೀರಶೈವರು ಧಾರ್ಮಿಕ ಮತ್ತು ರಾಜಕೀಯ ವಿದ್ಯೆಯಲ್ಲಿ ಎಲ್ಲಾ ಪ್ರಾಂತದವರಕ್ಕಿಂತ ಹಿಂದುಳಿದವರೆಂದು ವೀರಶೈವ ಮಹಾ ಸಭೆಗಳ ರಿಪೋರ್ಟಿನ ಮೇಲಿಂದ ಗೊತ್ತಾಗುವದಿಲ್ಲವೇ? ವಿದ್ಯಾಮಾನದಿಂದ ವೀರಶೈವರು ಹಿಂದುಳಿದಿರುವದಕ್ಕೆ ಎಷ್ಟೋ ಕಾರಣಗಳುಂಟು, ಎಷ್ಟೋ ಕೊರತೆಗಳುಂಟು, ಸರಕಾರಿ ಮಿಡ್ಲಸ್ಕೂಲ, ಹೈಸ್ಕೂಲ, ಗಳಿದ್ದಲ್ಲಿ ವೀರಶೈವರ 'ಫ್ರಿ' ಬೋರ್ಡಿಂಗಗಳಿಲ್ಲ, ಧನನಿಧಿಗಳಿಲ್ಲ. ಗ್ರಾಂಟ ಕೊಡುವ ಪುಣ್ಯಾತ್ಮರಂತೂ ಇಲ್ಲೇ ಇಲ್ಲ. ಅಂದಮೇಲೆ ವೀರಶೈವರು ವಿದ್ಯಾವಂತರಾಗುವ ಬಗೆ ಹ್ಯಾಗೆ? ಸರಕಾರದವರ ಅನುಕೂಲತೆಗಳು ಎಷ್ಟೇ ಇದ್ದಾಗ್ಯೂ ಸಮಾಜದ ಸಹಾಯವು ಬೇಡವೇ?

ಮಹಾಶಯರೆ! ನಮ್ಮ ನಿಜಾಮ ಇಲಾಖೆಯಲ್ಲಿ ಗುಲ್ಲಬರ್ಗಾ ಪಟ್ಟಣದಲ್ಲಿ ಕೆಲವು ವಿದ್ಯಾರ್ಥಿಗಳು ಬಹು ಕಷ್ಟ ಪಟ್ಟು ನಾರದ ಮನೆಗಳನ್ನು ಮಾಡಿಕೊಂಡು ವಿದ್ಯಾಭ್ಯಾಸಮಾಡುತ್ತಿರುವರು. ೪-೮ ವಿದ್ಯಾರ್ಥಿಗಳು ಭಿಕ್ಷೆ ಬೇಡಿ ಗುಡಿಗುಂಡಾರಗಳಲ್ಲಿದ್ದು ಬಾಜಾರದಲ್ಲಿರುವ ಎಲೆಕ್ಟ್ರಿ ದೀಪಗಳ ಬೆಳಕಿನಲ್ಲಿ ಓದಿಕೊಂಡು ಹೋಗುತ್ತಿದ್ದುದನ್ನು ೧೩೪೧ ನೇ ಫಸಲಿಯಲ್ಲಿ ನಾನು ಕನ್ನಡ ಟ್ರೇನಿಂಗ್ ಕಾಲೇಜ ಗುಲಬರ್ಗದಲ್ಲಿ ಅಭ್ಯಾಸಮಾಡುತ್ತಿದ್ದಾಗ ನೋಡಿದ ಸ್ಥಿತಿಯು. ಇಂಥ ಕಷ್ಟವನ್ನು ಅಲ್ಲಿಯ ಸಹೃದಯ ಸಮಾಜ ಸೇವಕರು ಕಂಡು ೧೩೪೨ ನೇ ಫಸಲಿಯಲ್ಲಿ ಒಂದು 'ಫ್ರೀ' ಬೋರ್ಡಿಂಗನ್ನು ಅಪ್ಪನವರ ಸಹಾಯದಿಂದ ಏರ್ಪಡಿಸಿದರು. ಇದರಂತೆ ಗದಿಗಿ ಮಠದಲಿಯೂ ತಗಿನ ಮಠದಲಿಯೂ ಸಂಸ್ಕೃತ ಶಾಲೆಗಳುಂಟು. ಮತ್ತು ರಾಜಕೀಯ ವಿದ್ಯಾರ್ಥಿಗಳಿಗೆ ಮಠದ ಸ್ವಾಮಿಗಳು ವಿಶೇಷ ಸಹಾಯಮಾಡುತ್ತಿರುವರು. ಇದು ಸ್ತುತ್ಯವಲ್ಲವೇ?

ಯಾದಗಿರಿಯಲ್ಲಿ ಮೊದಲು ಶ್ರೀಮಂತ ಕಡ್ಲೆಪ್ಪನವರು ಸಂಸ್ಕೃತ ಶಾಲೆಯನ್ನು ತಮ್ಮ ಗೃಹದಲ್ಲಿಯೇ ಸ್ಥಾಪಿಸಿದರು. ಆದರೆ ಕಾಲ ಗತಿಯಿಂದ ಕೆಲ ವರ್ಷಗಳಲ್ಲಿ ಜೀರ್ಣಾವಸ್ಥೆ ಹೊಂದುತ್ತಿರಲು "ಧರ್ಮಕ್ಕೆ ನೆರೆಯಂತೆ" ಧರ್ಮ ವೀರ ಶಂಕ್ರಣ್ಣನವರು ವೀರಶೈವ ಸಮಾಜಕ್ಕೆ ದೀಢಲಕ್ಷ ರೂಪಾಯಿ ದಾನಮಾಡಿ ಜಗತ್ತಿಗೆ ಧರ್ಮ ಪ್ರಭಾವವು ಬೀರುವಂತೆ ಮಾಡಿದರು. ಇದು ಸಾಮಾನ್ಯ ಧರ್ಮವೇ?

ಇವರ ಕಾಲೇಜು ಈಗ ಒಳ್ಳೇ ಸ್ಥಿತಿಯಲ್ಲಿರುವದು. ಅಂತ ಇಂತು' ಗುಲ್ಲಬರ್ಗಾ ಇಲಾಖೆಯಲ್ಲಿ ವಿದ್ಯಾರ್ಥಿಗಳಿಗೆ ತಕ್ಕ ಮಟ್ಟಿಗೆ ಅನುಕೂಲತೆಗಳು, ಸಹಾಯಮಾಡುವ ಪುಣ್ಯಾತ್ಮರುಂಟು ಆದರೆ ನಮ್ಮ ರಾಯಚೂರ್ ಜಿಲ್ಲೆಯಲ್ಲಿ ಬಡ ವಿದ್ಯಾರ್ಥಿಗಳಿಗೆ ಅಂಥ ಸಹಾಯ ಅನುಕೂಲತೆಗಳು ಯಾವದೂ ಇಲ್ಲದ್ದರಿಂದ ಹಳ್ಳಿ ಗಾಡಿನ ಚುರುಕು ಬುದ್ಧಿಯುಳ್ಳ ವಿದ್ಯಾರ್ಥಿಗಳು, ತಮ್ಮ ಪ್ರಾಥಮಿಕ ಶಿಕ್ಷಣವನ್ನು ಹೊಂದಿ ಮುಂದಕ್ಕೆ ಅಭ್ಯಾಸಮಾಡಲಿಕ್ಕೆ ಹೋಗಲು ಮಾರ್ಗವಿಲ್ಲದೆ ಗತಿಗೆಟ್ಟು ಪುನಃ ಕೈಜೋಳಿಯನ್ನು ಹಾಕಿಕೊಂಡಿರುವರು. ಇದು ಸಮಾಜಕ್ಕೆ ಮಾನ್ಯವೇ?

ಸಮಾಜ ಬಾಂಧವರೆ! ವಿದ್ಯಾರ್ಥಿಗಳ ಸುದೈವದಿಂದ ಶ್ರೀಯುತ ರಸ್ತಾಪುರ್ ಮುನಿಯಪ್ಪನವರು ವೀರಶೈವ ಬೋರ್ಡಿಂಗನ್ನು ಸ್ಥಾಪಿಸಿರುವರು ಅದಕ್ಕೆ ತಕ್ಕ ಸೌಕರ್ಯಗಳನ್ನು ರಾಯಚೂರು ಶ್ರೀಮಂತರು, ವಕೀಲರು, ಯಾಕೆ ಒದಗಿಸಿ ಕೊಡಬರದು?

ಇಂತಹ ದುಸ್ಥಿತಿಗೆ ಸಮಾಜಸುಧಾರಕರ ಅಲಕ್ಷವೇ ಕಾರಣವಾಗಿರುವದೆಂದು ಒಡೆದು ಹೇಳುವಂತಿಲ್ಲ. ಯಾಕೆಂದರೆ ನಮ್ಮ ಇಲಾಖೆಯ ವೀರಶೈವ ಪ್ರಮುಖರು ಧಾರ್ಮಿಕ ಮತ್ತು ರಾಜಕೀಯ ವಿದ್ಯೆಯಲ್ಲಿ ಅಷ್ಟು ಮನಹಾಕದೆ ಸಾಮಾಜಿಕ ವಿಷಯದಲ್ಲಿ ಯಾದವೀ ಕಲಹವನ್ನುಂಟುಮಾಡಿಕೊಂಡು ಅಂಧ ಶ್ರದ್ಧೆಯಿಂದ ಅನ್ಯ ಸಂಸ್ಥೆಗಳನ್ನು ಅನ್ಯ ಜನತೆಯನ್ನು ಹಿಂಬಾಲಿಸುತ್ತ ತಮ್ಮ ಇರುವಿಕೆಯನ್ನೇ ಮರೆತು ನಿದ್ರಾವಸ್ಥೆಯಲ್ಲಿದ್ದುದರ ಫಲವಿದು. ಆದುದರಿಂದಲೇ ವೀರಶೈವರೆಂದರೆ ಸರಕಾರಕ್ಕೂ ಇತರ ಜನತೆಗೂ ಅಷ್ಟು ನಿರ್ಲಕ್ಷ, ಅಷ್ಟು ಉದಾಸೀನತೆ, ಅಷ್ಟು ತಾತ್ಸಾರ. ಈಗಿನ ಸುಧಾರಣೆಯ ಕಾಲದಲ್ಲಿ ವೀರಶೈವರು ಇನ್ನೂ ಹೀನಾವಸ್ಥೆಯಲ್ಲಿರುವದೆಂದರೆ ಎಷ್ಟು ಅಸಹ್ಯ? ಎಷ್ಟು ಲಾಂಛನ? ಎಷ್ಟು ಅಪಹಾಸ್ಯದ ಮಾತು? ಸಮಾಜ ಬಾಂಧವರು, ಸಮಾಜ ಸುಧಾರಕರು, ಸಕಲ ವೀರಶೈವರ ಅಭಿವೃದ್ಧಿಯನ್ನು ಲಕ್ಷದಲ್ಲಿಟ್ಟುಕೊಂಡು ನೋಡಿದರೂ ಕರ್ನಾಟಕದ ಎರಡು ವಿಭಾಗಗಳಲ್ಲಿಯೂ ಧಾರ್ಮಿಕ, ರಾಜಕೀಯ ಶಾಲೆಗಳಿಗೆ ಇನ್ನೂ ಅವಶ್ಯಕವಾದ "ಫ್ರೀ" ಬೋರ್ಡಿಂಗಗಳೂ, ಧನನಿಧಿಗಳೂ, ಗ್ರಾಂಟ್‌ಗಳೂ ಅತಿ ಅವಶ್ಯಕವೆಂದು ತೋರಿಬರುತ್ತದೆ. ಕರ್ನಾಟಕವೇ ಬೇರೆ, ಎಂಬದು ಒಂದು ಸಂಕೋಚ ದೃಷ್ಟಿಯು. ಈ ದೃಷ್ಟಿ ಬಹು ಸಣ್ಣದು. ಕರ್ನಾಟಕದ ಎಲ್ಲಾ ಪ್ರಾಂತದ ವೀರಶೈವ ನಿವಾಸಿಗಳು ಒಂದೇ ಸಮಾಜದವರೆಂಬುದು ದೊಡ್ಡ ದೃಷ್ಟಿ, ಇದು ವಿಶಾಲವಾದದ್ದು.

ಮಾಸ್ತರ ರೇವಣಸಿದ್ಧಪ್ಪ ಕಲ್ಲೂರು
ಮೊಕ್ಕಾಮ ಮಟಮರಿ,
ಜಿಲ್ಲಾ ರಾಯಚೂರ್.

ಓಂ

ವಿಚಾರ ಕ್ರಾಂತಿಯನ್ನುಂಟು ಮಾಡುವ

ಹೊಸ ಪುಸ್ತಕ.

ವೀರಶೈವ ಮತಾಚಾರ್ಯರ

ಕಾಲ ನಿರ್ಣಯ.

ಲೇಖಕರು—

ಕರ್ಲಮಂಗಲಂ [illegible]ೀಕಂಠಯ್ಯನವರು.

ಪ್ರತಿಯೊಬ್ಬ ವೀರಶೈವನೂ

ಅತ್ಯವಶ್ಯಕವಾಗಿ ಓದತಕ್ಕ ಪುಸ್ತಕ.

ಜಾಗ್ರತೆ ತರಿಸಿರಿ. ಬೆಲೆ ೧೨ ಆಣೆ.

ಮ್ಯಾನೇಜರ— ಶರಣ ಸಂದೇಶ

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸವೆಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ: —

ಜಿ. ಎಸ್. ಗಂಗಾಧರಯ್ಯ,

ಸುಗಂಧರಾಜ ದಶಾಂಗ ಕಾರ್ಖಾನೆ, ಆರಳೀ ಪೇಟೆ, ತುಮಕೂರು

(ಮೈಸೂರು ಸ್ಟೇಟ್)

೯,೩೧,೦೦೦ ರೂಪಾಯಿ

ಬೆಲೆಬಾಳುವ ಪಾಲಿಸಿಗಳನ್ನು ಸ್ವರಾಜ್ಯ ಕಂಪನಿಯವರು

ಬರೇ ಹದಿಮೂರು ತಿಂಗಳಲ್ಲಿ ಕೊಟ್ಟಿರುತ್ತಾರೆ.

ಕೂಸು ಹುಟ್ಟಿದರೆ, ಮಕ್ಕಳ ಮದಿವೆ ಮಾಡಿದರೆ, ಮರಣ ಹೊಂದಿದರೆ,

ವಿಮೆಯದಾರರಿಗೆ ೫೦೦ ರೂಪಾಯಿಗಳ ವರೆಗೆ

ವಿಮೆಯ ಹಣವು ಕೊಡಲ್ಪಡುವದು.

ವಿಮೆಯ ಕಂತಗಳು ತೀರ ಕಡಿಮೆ

ತಿಂಗಳೊಂದಕ್ಕೆ ೧ ರೂಪಾಯಿ

ಪ್ರವೇಶ ಫೀ ೫ ರೂಪಾಯಿ

ವಾರ್ಷಿಕ ಫೀ ೧ ರೂಪಾಯಿ ಮಾತ್ರ

ಏಜಂಟರಾಗಿ ಕೆಲಸ ಮಾಡುವವರಿಗೂ ಆರ್ಗಾನಾಯಝರರಿಗೂ ಒಳ್ಳೇಲಾಭ

ಹೆಚ್ಚಿನ ಮಾಹಿತಿ ಬೇಕಾದವರು ಕಂಪನಿಯ ಕೂಡ ಪತ್ರವ್ಯವಹಾರ ಮಾಡಬೇಕು.

ಎಮ್. ಎಸ್. ಕೇಸರಿ ಬಿ. ಎ. ಎಲ್ ಎಲ್. ಬಿ.

ಮ್ಯಾನೇಜಿಂಗ್ ಏಜಂಟ್ಸ್,

ದಿ. ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ ಕಂ. ಲಿ. ಧಾರವಾಡ.

ಮುದ್ದಾದ ಅಕ್ಷರ! ಸುಲಭ ದರ!

ಶ್ರೀ ರಂಗನಾಥ ಟೈಪ್ ಫೌಂಡರಿ

ಬೆಂಗಳೂರು.

ಕನ್ನಡ ಮತ್ತು ಇಂಗ್ಲಿಷ್, ಎಲ್ಲಾ ತರದ ಟೈಪುಗಳೂ ಒಳ್ಳೊಳ್ಳೆ ಬಾರ್ಡರಗಳೂ ನಮ್ಮ ಫೌಂಡರಿಯಲ್ಲಿ ತಯಾರಾಗುತ್ತವೆ.

ಒಳ್ಳೇ ಮೆಟಲ್. ಬಹು ಅಂದವಾದ ಅಕ್ಷರಗಳು. ಬಲು ಸುಲಭ ದರ. ಕ್ಯಾಟಲಾಗ ತರಿಸಿಕೊಳ್ಳಿರಿ ಒಮ್ಮೆ ಟೈಪುಗಳನ್ನು ತರಿಸಿಕೊಂಡು ಅನುಭವ ಹೊಂದಿರಿ. ಹಳೆ ಟೈಪುಗಳಿದ್ದರೆ ಸುಲಭ ಚಾರ್ಜಿಗೆ ಹೊಸದಾಗಿ ಹೊಯಿದು ಕೊಡುತ್ತೇವೆ.

ಪ್ರೊಪ್ರೈಟರ,
ಶ್ರೀ ರಂಗನಾಥ ಟೈಪ್ ಫೌಂಡರಿ
೬೭ ಕುಬೇರ ಸಾಹುಜಿ ಲೈನ್
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪತ್ರಿಫಲದ ದಿವ್ಯಾಭರಣ!

ಲಿಂಗಪೂಜಕರಿಗೆ ಪತ್ರಿಯು ಅತ್ಯಾಗತ್ಯವಲ್ಲವೆ? ಪತ್ರಿಯ ಫಲದಿಂದ ಮಾಡುವ ಈ ದಿವ್ಯಾಭರಣ, ಗಳಲ್ಲಿ ನಿಮಗೆ ಬೇಕಾದುದನ್ನು ತರಿಸಿಕೊಳ್ಳಿರಿ.

ಕರಕಮಲ, ನಾಗಾಭರಣ, ಕಂಠಮಾಲೆ ಮೊದಲಾದವು. ಮಂತ್ರವಿಶಿಷ್ಟ, ಲಿಂಗಪೂಜೆಗೆ ಆಗತ್ಯವಾಗಿರತಕ್ಕವು.

ನಿಮ್ಮ ಇಷ್ಟದಂತೆ ಮಂತ್ರಾಕ್ಷರಗಳನ್ನು ಸ್ಫುಟಗೊಳಿಸಿ ಪತ್ರಿಯ ಕಾಯಿಯ ಚಿಪ್ಪಿನಿಂದ ಬಹು ಅಂದವಾದ ಆಭರಣಗಳನ್ನು ತಯಾರುಮಾಡಿಕೊಡುತ್ತೇವೆ.

ಕ್ರಯ ೧ ರೂಪಾಯಿಯಿಂದ ಮೇಲ್ಪಟ್ಟು ನಿಮ್ಮ ಇಷ್ಟವಿದ್ದಷ್ಟು ರೂ. ಗಳ ವರೆಗೆ.

ವಿಳಾಸ:— ಸಂಗಮೇಶ- ಶ್ರೀ ಶಶಿಭೂಷಣ ಶಿವಯೋಗಿ ಮಠ ಬಳೇಪೇಟೆ ಬೆಂಗಳೂರು ಸಿಟಿ.

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಕಾಯಕವೆ ಕೈಲಾಸ	೦-೩-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ವಿಜಯವಾಣಿ	೦-೨-೦
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಅಲಮಟ್ಟಿ. ಪೋ. ಅಲಮಟ್ಟಿ ಜಿ. ವಿಜಾಪುರ.

ಪ್ಲೇಗ ಸಂಜೀವಿನಿ.

ಅತ್ಯಾಶ್ಚರ್ಯಕರವಾದ ಗುಣ! **ಕೇವಲ ೬ ತಾಸುಗಳಲ್ಲಿಯೇ ಗುಣ!**

ಇದನ್ನುಸೇವನೆ ಮಾಡುವದರಿಂದ ಪ್ಲೇಗಿನ ಭಯವೇ ಇಲ್ಲ!

೧೦೦ ಕ್ಕೆ ೧೦೦ ರಂತೆ ಗುಣ!!

ಶ್ರೀ ಮನ್ನಿರಂಜನ ಶಾಂತವೀರ ಸ್ವಾಮಿಗಳು ಗುರುಮಠಕಲ್ ಇವರು ಲೋಕ ಕಲ್ಯಾಣಾರ್ಥವಾಗಿ **ಪ್ಲೇಗ ಸಂಜೀವಿನಿ** ಎಂಬ ದಿವ್ಯ ಔಷಧಿಯನ್ನು ಶೋಧಮಾಡಿರುವರು ಪ್ಲೇಗ ರೋಗವು ಎಷ್ಟು ಘಾತುಕವದೆಯೆಂಬುದನ್ನು ಹೇಳುವ ಅವಶ್ಯವಿಲ್ಲ. ಈ ಪ್ಲೇಗಿನಿಂದ ಸಾವಿರಾರು ಜನರು ಸಾಯುತ್ತಿರುತ್ತಾರೆ. ಇದನ್ನು ತಡೆಯುವದಕ್ಕಾಗಿ ಎಷ್ಟೋ ಔಷಧಗಳನ್ನು ತಯಾರ ಮಾಡಿರುವರು. ಅವುಗಳಿಂದೇನೂ ಗುಣವಾದದ್ದು ಕಂಡು ಬರುವದಿಲ್ಲ ಈ ಪ್ಲೇಗ ಸಂಜೀವಿನಿಯಿಂದ ಆರೇ ತಾಸುಗಳಲ್ಲಿಯೇ ಗುಣವಾಗುತ್ತದೆ. ಇದರ ಒಂದು ಬಾಟ್ಲಿಯ ಕಿಮ್ಮತ್ತು ೧ ರೂ. ೫ ಆಣೆ.

ವಿಶೇಷ ಮಾಹಿತಿಯನ್ನು ಅನುಪಾನ ಪತ್ರಿಕೆಯಲ್ಲಿ ನೋಡಿರಿ.

ವಿಶೇಷ ಸೂಚನೆ— ಅನುಪಾನ ಪತ್ರಿಕೆಯ ಸೂಚನೆಯ ಮೇರೆಗೆ ಔಷಧವನ್ನು ತೆಗೆದುಕೊಂಡಲ್ಲಿ ಖಾತ್ರಿಯಿಂದ ಗುಣವಾಗುವದು. ಎಲ್ಲ ಕಡೆಗೂ ಏಜಂಟರು ಬೇಕು.

ಏಜಂಟ್
**ಬಸಪ್ಪ ಬಸಪ್ಪ ಹಲಕುರ್ಕಿ,
ಬಾಗಲಕೋಟೆ.**

ವಿಳಾಸ—
**ಪ್ಲೇಗ ಸಂಜೀವಿನಿ ಆಫೀಸ್
ಗುಲಬರ್ಗಾ.**

ಮಹಾರೋಗ ಸಂಜೀವಿನಿ.

ಶ್ರೀಮನ್ನಿರಂಜನ ಗುರುಮಠಕಲ್ಲ ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ

ಮಹಾರೋಗ ಸಂಜೀವಿನಿ,

ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.

ಇತ್ತಿತ್ತಲಾಗಿ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ಮಿತಿಮೀರಿ ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. ಈ ಕೆಟ್ಟಬೇನೆಯು (ಪ್ಲೇಗ ಮಾರಿಕಾ,) ಖಜ್ಜಿಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ ತಗಲತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ಮೃತ್ಯುವಿನ ತುತ್ತಾಗುವರು ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಖಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ಸಾರಸಂಹಾರಿ, ಕೂಸುಗಳ ಹೊಟ್ಟೆಯೊಳಗಿನ** ಬೇನೆ ವಗೈರೆ ರೋಗಗಳ ಮೇಲೆ ಆಶ್ಚರ್ಯಕಾರಕ ಔಷಧಿಗಳನ್ನು ಕಂಡು ಹಿಡಿದ ಸದರಿ ಪೂಜ್ಯಪಾದರೇ ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ ಔಷಧಿಯನ್ನು ಶೋಧಮಾಡಿ ಪ್ರಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೆಯುಳ್ಳವರು ಮುದ್ದಾಂ ಬಂದು ತಮ್ಮ ರೋಗ ಲಕ್ಷಣಗಳನ್ನೆಲ್ಲ ತೋರಿಸಿದರೆ ಅದಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ. ಮೊದಲು ಔಷಧದ ಅರ್ಧ ಕಿಮ್ಮತ್ತು ಕೊಟ್ಟು ಔಷಧ ತಕ್ಕೊಳ್ಳಲು ಪ್ರಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಆಗ್ಗೆ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳತಕ್ಕದ್ದು. ವಿಶೇಷ ಸಂಗತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು.

ಮ್ಯಾನೇಜರ ಆರೋಗ್ಯ ಮಂದಿರ, ಕೀಟಮಠ ಕಸಬಾ ಕ್ಯಾಂಪ **ಸೊಲ್ಲಾಪುರ ಸಿಟಿ.**

ಗೌರೀಶಂಕರ ನಿವಾಸ.

ಮುಂಬಯಿ.

ಸೋಯಿದರ. ಉತ್ತಮ ಸೌಕರ್ಯ. **ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಧಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ವಂಧೆಗಳಿಗೆ ಕೇಂದ್ರಸ್ಥಾನ .... ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ನಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೩-೦-೦ ತಿಂಗಳೊಂದಕ್ಕೆ

ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦

೬೦ ,, ,, ,, ೧೬-೮-೦

೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ರೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟಲ್**

ದಪಣಾಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ **ಮತ್ತು ಹಳೇ ಹುಣ್ಣುಗಳಿಂದ**

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆಯ** ಸತ್ವವು ಅಡಕವಾಗಿರುವ ಮತ್ತು ಎಷ್ಟೋ **ವರ್ಷಗಳ ಜ್ಞಾನ ಸಂಶೋಧನದಿಂದ ಡಾ. ಎಂ. ಸಿ. ತುಮ್ಮಿನಕಟ್ಟಿ,** ಎಂ. ಎಸ್‌ಸಿ., ಪಿಎಚ್. ಡಿ. **ಇವರು ತಯಾರಿಸಿದ**

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ

ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ ಎಣ್ಣೆಯೂ **ಹೊಂಗೊಲ್ ಮುಲಾಮಿನಲ್ಲಿ ಮಿಶ್ರವಾಗಿಲ್ಲ.**

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡುಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ ಎಂ. ಎಸ್‌ಸಿ., ಪಿಎಚ್. ಡಿ,** ಇವರಿಂದ ತಯಾರಿಸಲ್ಪಟ್ಟ

" ಕಚ್ಯೂರ್ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ **ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು** ದೊರೆಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ **ಮಾಲುಗಳನ್ನು ದಲ್ಲಾಲಿ ದರದಿಂದ** ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. **ಇಷ್ಟವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ** ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,

ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯು ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇನ್ನು ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು. ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತ ಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟೆ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.
(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ, ಇಲ್ಲವೆ ಮರಾಠಿಯಲ್ಲಿ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತವೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಳಿಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—
ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ಕಂಪಾಜಿಟರು ಬೇಕು.

ಮರಾಠಿ ಮತ್ತು ಕನ್ನಡ ಚೆನ್ನಾಗಿ ಕಂಪೋಜ್ ಮಾಡತಕ್ಕ ಕಂಪಾಜಿಟರು ಬೇಕು. ಯೋಗ್ಯ ಸಂಬಳ ದೊರೆಯುವದು. ಇಷ್ಟವುಳ್ಳವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ವಿಳಾಸ:— **ಮ್ಯಾನೇಜರ,**
ಕಲ್ಯಾಣ ಕರ್ನಾಟಕಪ್ರೆಸ್ ಗುಲಬರ್ಗಾ
ಪೋ. ಗುಲಬರ್ಗಾ (ನೈಜಾಮ ಸ್ಟೇಟ)

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 2891.

ಶರಣ ಸಂದೇಶ

The Sharana Sandesh.

ನ್ಯಾಯನಿಷ್ಠುರಿ| ದಾಕ್ಷಿಣ್ಯಪರನಾನಲ್ಲ| ಲೋಕವಿರೋಧಿ| ಶರಣನಾರಿಗಂಜುವವನಲ್ಲ|
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ || ವ. ೨೨೪ | ಮಹಾನುಭಾವ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು,

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ವಂತಾ:- ಅಂಚೆಯ ವೆಚ್ಚ ಸೇರಿ ೩ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ೪. | ಆಲಮಟ್ಟಿ- ಸೋಮವಾರ ತಾರೀಖು ೨೫ ನೆಯ ಮಾರ್ಚ ೧೯೩೫. | ಸಂಚಿಕೆ ೩೦

ಜನಸೇವೆಯೇ ದೇವರ ಸೇವೆ.

ಮುಸಲ್ಮಾನರ ದೊಂಬೆ!

ಕರಾಚಿಯಲ್ಲಿ ಪೋಲಿಸರು ಗುಂಡು ಹಾರಿಸಿದರು.

೪೦ ಜನರ ಮರಣ ೧೦೦ ಜನರಿಗೆ ಗಾಯ.

ಪಂಡಿತ ನಥುರಾಮರನ್ನು ನ್ಯಾಯಾಸನದ ಮುಂದೆ ಕೊಲೆಮಾಡಿದ ಅಬ್ದುಲ್ ಕಾಯುಮನಿಗೆ ತಾ. ೧೯ ನೆಯ ದಿನ ಕರಾಚಿಯಲ್ಲಿ ಶೂಲಕ್ಕೇರಿಸಿದರು.

ಮುಸಲ್ಮಾನರು ಆ ಕೊಲೆಗಾರನ ಶವವನ್ನು ಸರಕಾರದ ಅಪ್ಪಣೆಗೆ ವಿರೋಧವಾಗಿ ಪಟ್ಟಣದಲ್ಲಿ ಮೆರವಣಿಗೆ ಮಾಡಹೋದರು.

ವಿಶೇಷ ದೊಂಬಿಯಾಯಿತು.

ಪಾರ್ಲಿಮೆಂಟಿನಲ್ಲಿ ಮತ್ತು ಅಸೆಂಬ್ಲಿಯಲ್ಲಿ ಚರ್ಚೆ ನಡೆಯಿತು.

ದೇಶಸೇವೆ ದೇವಾಲಯ.

SANGAM CLOTH STORES
Prop: M. S. Hundekar & Sons,
P.O: TERDAL - 587 315
Dt. Bijapur

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.



ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ !

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರು, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಯಾಗ ಒಟ್ಟು ನಮ್ಮ ನಾಟಕದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಜೋತಿಷಾಲಂಕಾರ ವೇ| ಬ್ರ| ಶ್ರೀ| ಸಿದ್ಧಾಂತಿ ಶಿವಬಸವ ಶಾಸ್ತ್ರಿಗಳು ಹೂಲಿ,
ಇವರಿಂದ ತಯಾರಿಸಲ್ಪಟ್ಟ ಶಕೆ ೧೮೫೭ ನೆಯ ಯುವ ಸಂವತ್ಸರದ

ಶ್ರೀ ಹೂಲಿ (ಪೂವಲಿ) ಪಂಚಾಂಗಗಳು

ನಾಲ್ಕು ಆಣೆಯ ಬಿಲ್ಲಿಯ ಟಿಕೀಟು ಕಳಿಸಿದಲ್ಲಿ ೧ ಪಂಚಾಂಗವನ್ನು ನಿಮ್ಮ ವಿಳಾಸಕ್ಕೆ ಕಳಿಸುವೆವು. ಇಂದೇ ಪತ್ರಬರೆಯಿರಿ.

ಸದ್ಯಕ್ಕೆ ಮಾರಾಟಕ್ಕೆ ತಯಾರಾಗಿರುವವು.

ಇವು ಎಲ್ಲ ಪಂಚಾಂಗಗಳಿಗಿಂತಲೂ ಹೆಚ್ಚು ಮತ್ತು ಅವಶ್ಯಕ ವಿಷಯಗಳಿಂದ ಕೂಡಿರುತ್ತವೆಂದು ಬಹು ಜನರಿಂದ ಶ್ಲಾಘಿಸಲ್ಪಟ್ಟಿರುತ್ತವೆ. ಈ ಪಂಚಾಂಗವು ೭೦ ಪುಟಗಳುಳ್ಳದ್ದಾಗಿ ಮೇಲ್ಭಾಗದಲ್ಲ ಶ್ರೀ ಗಜಾನನ ಮತ್ತು ೧೨ ರಾಶಿಗಳ ಭಾವಚಿತ್ರಗಳಿಂದ ಅಂದವಾಗಿ ಮುದ್ರಿತವಾಗಿರುತ್ತದೆ. ಮಾರಾಟದ ದರವನ್ನು ಬಹು ಕಡಿಮೆ ಅಂದರೆ— ಪಂಚಾಂಗ ೧ ಕ್ಕೆ ೪ ಆಣೆ, ೫ ಕ್ಕೆ ೧ ರೂಪಾಯಿ, ವ್ಯಾಪಾರಸ್ಥರಿಗೆ— ೧೦೦ ಪಂಚಾಂಗಕ್ಕೆ ೧೦ ರೂಪಾಯಿ, ೫೦೦ ಪಂಚಾಂಗಗಳಿಗಿಂತ ಹೆಚ್ಚು ತರಿಸಿದವರಿಗೆ ಹೆಚ್ಚಾಗಿ ಸವಲತ್ತು ಕೊಡುವೆವು.

ಇದಲ್ಲದೆ -ಮಹಾಗಾಂವ, ಸವಣೂರ ಕನ್ನಡ ಮತ್ತು ಮರಾಠಿ, ಶ್ರೀ ಬಸವೇಶ್ವರ, ಜೋಗೂರ, ರತ್ತಿ, ಸೊಲ್ಲಾಪುರ, ಹರಪನಹಳ್ಳಿ, ಟಿಳಕ ಮೊದಲಾದ ಪಂಚಾಂಗಗಳು ಠೋಕ ವ ಚಿಲ್ಲರ ಧಾರಣಿಯಿಂದ ದೊರೆಯುವವು.

ಶ್ರೀ ಹೂಲಿ (ಪೂವಲಿ) ಪಂಚಾಂಗ ಪ್ರಕಾಶಕರು,
ಸಿ. ಕೆ. ಲಿಂಗಯ್ಯ ಸ್ವಾಮಿ ಶ್ರೀ ಲಕ್ಷ್ಮೀ ವಿಲಾಸ ಪುಸ್ತಕಾಲಯ ಗದಗ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಮಾರ್ಚ ತಾರೀಖು ೨೫ ನೆಯ ಸೋಮವಾರ | ಸಂಚಿಕೆ ೩೦.

ಕರಾಚಿಯಲ್ಲಿ ಮುಸಲ್ಮಾನರ ದೊಂಬಿ!

ಅಸೆಂಬ್ಲಿಯಲ್ಲಿಯ ಚರ್ಚೆ.

ಪಂಡಿತ ನಥುರಾಮರನ್ನು ನ್ಯಾಯಾಸನದ ಮುಂದೆ ಕೊಲೆ ಮಾಡಿದ ಅಬ್ದುಲ್ ಕಾಯುಮನಿಗೆ ತಾ. ೧೯ ನೆಯ ದಿನ ಬೆಳಗ್ಗೆ ಕರಾಚಿ ಡಿಸ್ಟ್ರಿಕ್ಟ ಜೈಲಿನಲ್ಲಿ ಶೂಲಕ್ಕೇರಿಸಿದರು. ಆತನ ಶವವನ್ನು ಗುಪ್ತವಾಗಿಯೇ ತೆಗೆದುಕೊಂಡು ಹೋಗಿ ನಬಾಬ ಶಹಾ ಸ್ಮಶಾನ ಭೂಮಿಯಲ್ಲಿ ಹೂಳಿದರು. ಈ ಸಂಗತಿ ತಿಳಿದು ದೊಂಬಿಯಾಗಬಾರದೆಂದು ಮುಂಚಿತವಾಗಿಯೇ ಪೋಲಿಸರು ಅಲ್ಲಲ್ಲಿ ಕಾವಲಿದ್ದರು.

ಒಂದು ಲಕ್ಷ ಮುಸಲ್ಮಾನರು.

ಕೊಲೆಗಾರನನ್ನು ಹೂಳಿದ ಸಂಗತಿ ತಿಳಿದ ಕೂಡಲೆ ದೊಂಬಿಗಾರರು ಸ್ಮಶಾನ ಭೂಮಿಯಲ್ಲಿ ಹೂಳಿದ್ದ ಶವವನ್ನು ಕಿತ್ತುಕೊಂಡು ಬಂದು ಆ ಶವದ ಮೆರವಣಿಗೆಯನ್ನು ಮಾಡಹೋದರು. ಈ ಮೆರವಣಿಗೆಗೆ ಪೋಲಿಸರು ಅಪ್ಪಣೆ ಕೊಡಲಿಲ್ಲ. ಆಗ ದೊಂಬಿಗಾರರು ಸಿಟ್ಟಿನಿಂದ ಪೋಲಿಸರ ಮೇಲೆ ಕಲ್ಲುಗಳನ್ನು ಎಸೆದರು. ಕ್ಷಣೇ ಕ್ಷಣೇ ಸ್ಥಿತಿಯು ಬಹು ಭೀಕರವಾಗಹತ್ತಿತು.

ಆಗ ಸೈನ್ಯವನ್ನು ತರಿಸಿದ್ದಾಯಿತು. ಅಷ್ಟರಲ್ಲಿ ಪಟ್ಟಣದಲ್ಲೆಲ್ಲಾ ವಿಶೇಷ ಗಲಾಟೆ. ಒಂದು ಲಕ್ಷದ ವರೆಗೆ ಮುಸಲ್ಮಾನರು ಸೇರಿದ್ದರು. ೩-೪ ಸಾವಿರ ಮುಸಲ್ಮಾನ ಸ್ತ್ರೀಯರೂ ಹುಡುಗರೂ ಇದ್ದರು.

ಗುಂಡು ಹಾರಿದುದು.

ದೊಂಬಿಗಾರರು ಬಲಾತ್ಕಾರವಾಗಿಯೇ ಮೆರವಣಿಗೆಯನ್ನು ಪ್ರಾರಂಭಿಸಿದ್ದರು. ಸೈನ್ಯವು ಬಂದೊಡನೆ ಶವವನ್ನು ಪೋಲಿಸರು ದೊಂಬಿಗಾರರಿಂದ ಸ್ವಾಧೀನಪಡಿಸಿಕೊಂಡು ಜನರಿಗೆ ತಿರುಗಿ ಹೋಗಲು ಹೇಳಿದರು. ಆಗ ದೊಂಬಿಗಾರರು ಮತ್ತೂ ಸಿಟ್ಟಿನಿಂದ ಸೈನ್ಯದ ಮೇಲೆ ಕಲ್ಲು ಕಾಜುಗಳನ್ನು ಎಸೆದರು.

ಒಬ್ಬ ಯುರೋಪಿಯನ್ ಲಷ್ಕರಿ ಅಧಿಕಾರಿಗಳು ಮೋಟಾರಿನಲ್ಲಿ ಹೋಗುತ್ತಿರುವಾಗ ದೊಂಬಿಗಾರರು ಅವರ ಮೋಟಾರನ್ನು ತಡೆದರೆಂತಲೂ ಆಗ ಅವರು ಗುಂಡುಹಾಕಲು ಕಲ್ಲು ಕಾಜುಗಳನ್ನು ದೊಂಬಿಗಾರರು ಹೆಚ್ಚಾಗಿ ಎಸೆದರೆಂತಲೂ ಮೆರವಣಿಗೆ ಮಾಡುತ್ತಾ ಪಟ್ಟಣದಲ್ಲಿ ಹೋಗುವಾಗ ಒಬ್ಬ ಮುಸಲ್ಮಾನ ಪ್ರಮುಖರು ಹೀಗೆ ಮಾಡಬೇಡಿರೆಂದು ದೊಂಬಿಗಾರರಿಗೆ ಹೇಳಲು ಅವರು ಆ ಪ್ರಮುಖರಿಗೇನೇ ಹೊಡೆದರೆಂತಲೂ ಹೇಳುತ್ತಾರೆ.

ದೊಂಬಿಯು ಭಯಂಕರ ಸ್ಥಿತಿಗೆ ಬರಲು ಅನಿವಾರ್ಯದಿಂದ ೩೦ ಸೈನಿಕರು ಸಾಯಂಕಾಲ ೭ ಗಂಟೆಗೆ ಗುಂಡುಹಾರಿಸಿದರು. ೪೦ ನಿಮಿಷಗಳಲ್ಲಿ ಸತ್ತವರ ಮತ್ತು ಗಾಯ ಹೊಂದಿದವರ ಸಂಖ್ಯೆ ಇನ್ನೂರರ ಮೇಲ್ಪಟ್ಟಿತ್ತು. ಇವರನ್ನು ಮೋಟಾರುಗಳಲ್ಲಿ ವೈದ್ಯಾಲಯಕ್ಕೆ ತೆಗೆದುಕೊಂಡು ಹೋದರು. ರಾತ್ರಿಯಲ್ಲಾ ವೈದ್ಯಾಲಯದಲ್ಲಿ ದುಃಖವೇ ದುಃಖ.

ಅಸೆಂಬ್ಲಿಯಲ್ಲಿ ಚರ್ಚೆ

ತಾ. ೨೦ ನೆಯ ದಿನ ಕಾಮನ್ಸ ಸಭೆಯಲ್ಲಿ ಭಾರತ ಮಂತ್ರಿಗಳು ಈ ದೊಂಬಿಯ ವಿಷಯವಾಗಿ ಹೇಳುವಾಗ ಗುಂಡು ಹಾಕುವುದು ಅಗತ್ಯವಾಗಿಯೇ ಪರಿಣಮಿಸಿತೆಂದು ತಿಳಿಸಿದರು. ತಾ. ೨೧ ನೆಯ ದಿನ ಅಸೆಂಬ್ಲಿಯಲ್ಲಿ ಮಿ. ಕನ್ಯಾಲಾಲ ಗೌಬಾ ಎಂಬುವವರು ಕರಾಚಿ ದೊಂಬಿಯ ಸಂಬಂಧವಾಗಿ ಅಸೆಂಬ್ಲಿಯ ಕಾರ್ಯ ನಿಲ್ಲಿಸಬೇಕಾದ ಒಂದು ಗೊತ್ತುವಳಿಯನ್ನು ತಂದರು. ಜಾತಿ ವಿಷಯಕವಾಗಲಿ ಅಥವಾ ಅಬ್ದುಲ್ ಕಾಯೂಮನ ನಡತೆಯನ್ನು ಸಮರ್ಥಿಸುವುದಕ್ಕಾಗಲಿ ಇದನ್ನು ನಾನು ತಂದಿಲ್ಲವೆಂತಲೂ ಇಂತಹ ಶೋಚನೀಯ ಪ್ರಸಂಗ ಬಾರದಂತೆ ಶೂಲಕ್ಕೇರಿಸುವ ಕಾರ್ಯ ಸರಕಾರದಿಂದ ನಡೆಸಲ್ಪಡುವುದು ಶಕ್ಯವಿದ್ದಿತೇ ಇಲ್ಲವೇ ಎಂಬುದೇ ಮುಖ್ಯಪ್ರಶ್ನೆ.

ಸರದಾರ ಸಂತಸಿಂಗರು ಇದಕ್ಕೆ ವಿರೋಧಿಸಿದರು. ಶ್ರೀ. ಭುಲಾಭಾಯಿಯವರು ಮಿ. ಗೌಬಾರವರ ಅಭಿಪ್ರಾಯವನ್ನು ಅನುಮೋದಿಸಿದರು. ಶ್ರೀ. ಲಾಲಚಂದ, ಶ್ರೀ. ಭಾಯಿ ಪರಮಾನಂದ, ಮಿ, ಬಜೋರಿಯಾ, ಇವರು ವಿರೋಧಿಸಿದರು. ಕೊನೆಗೆ ೬೭ ಅನುಕೂಲ ೪೨ ಪ್ರತಿಕೂಲ ಮತಗಳಿಂದ ಮಿ. ಗೌಬಾರವರ ಸೂಚನೆ ಮಾನ್ಯವಾಯಿತು.

ಮುಂಬೈ ಕೌನ್ಸಿಲ್ಲಿನಲ್ಲಿಯೂ ಮಿ. ಗಝ್ದರ ಎಂಬುವರು ಕರಾಚಿ ದೊಂಬಿಯ ವಿಚಾರಣೆ ಸಂಘವನ್ನು ಏರ್ಪಡಿಸಬೇಕಾಗಿ ಸೂಚಿಸಿದರು.

ವಿರಕ್ತರಲ್ಲಿಯ ಸಮಯಭೇದದ ಜೊಳ್ಳುತನ.

(ಲೇಖಕ:— ನಿಷ್ಪಕ್ಷಪಾತಿ.)

೧ ಜಗತ್ಪೂಜ್ಯರಾದ ಶ್ರೀ ಬಸವಾದಿ ಮಹಾ ಪ್ರಮಥರನ್ನು ಅಕಾರಣವಾಗಿ ನಿಂದಿಸುವ ಕುಹಕರ ಕೂಗಾಟಗಳು ಬರಬರುತ್ತ ಪ್ರಕಟವಾಗುತ್ತಲಿವೆ. ಸೂರ್ಯನ ಮೇಲೆ ಮಣ್ಣು ತೂರುವವರಂತೆ ಈ ನಿಂದಕರ ಹಾಡಾಗಿದೆ. ಯಾಕಂದರೆ ಚಿನ್ನವನ್ನು ಪುಟಕ್ಕಿಕ್ಕಿದಂತೆ ಇವರ ನಿಂದೆ ಕುಂದುಗಳಿಂದ ಆ ಮಹಾ ಮಹಿಮನಾದ ಶ್ರೀ ಬಸವ ಮಹಾತ್ಮನ ಅಮೋಘವಾದ ಮತ್ತು ತ್ರಿಕಾಲಾಬಾಧಿತವಾದ ತತ್ವಗಳು ತೀವ್ರ ವೇಗದಿಂದ ಬೆಳಕಿಗೆ ಬರಹತ್ತಿವೆ. ಆದರೆ ಈ ನಿಂದಕರ ಅಪಹಾಸ್ಯ ಮಾತ್ರ ಆಗುತ್ತಲಿದೆ ಇರಲಿ.

೨ ಈ ನಿಂದಕರ ಪ್ರತಿಕಾರದ ಸಲುವಾಗಿ ದೇಶ ಮಧ್ಯದಲ್ಲಿ ಪ್ರಮಥ ಭಕ್ತರು ಹಲವು ರೀತಿಯಿಂದ ತಮ್ಮ ಶಕ್ತಿ ಮೀರಿ ಹಗಲಿರುಳು ಪ್ರಯತ್ನಿಸುತ್ತಿರುವರು, ಆದರೆ ಅವರ ಯತ್ನಗಳು ತೀವ್ರವಾಗಿ ಫಲಕಾರಿಯಾಗಲೊಲ್ಲವು. ಯಾಕಂದರೆ ಈ ವಿರೋಧದಲ್ಲಿ ಎರಡು ಬಗೆಯ ಜನರುಂಟು. ಶ್ರೀ ಬಸವಾದಿ ಪ್ರಮಥರೇ ತಮ್ಮ ಜೀವಪ್ರಾಣವೆಂದು ಭಾವಿಸಿಕೊಂಡು ನಿಸ್ವಾರ್ಥ ಬುದ್ಧಿಯಿಂದ ಪ್ರತಿಭಟಿಸುವಂಥಾ ಕೆಲವು ಸದ್ಭಕ್ತ ಶಿರೋಮಣಿಗಳು ೧ ನೆಯ ವರ್ಗಕ್ಕೆ ಸೇರಿದವರು. ಸ್ವಾರ್ಥಿಗಳೂ, ದುರಭಿಮಾನಿಗಳೂ ಹಾಗೂ ಸಮಾಜಕ್ಕೆ ತಾವೇ ದೊಡ್ಡವರೆಂದು ಭಾವಿಸಿಕೊಂಡು ನಡೆಯುವವರು ೨ ನೆಯ ವರ್ಗಕ್ಕೆ ಸೇರಿದವರು. ಈ ಉಭಯರ ಯತ್ನದಿಂದ "ಹಿಟ್ಟಿನಲ್ಲಿ ಬೂದಿ ಬೆರೆದಂತಾಗಿ" ನಿಜವಾದ ಪ್ರಮಥ ಭಕ್ತರಾರೆಂಬದು ತಿಳಿಯದಂತಾಗಿದೆ. ಆದುದರಿಂದ ಈ ೨ ನೆಯ ವರ್ಗಕ್ಕೆ ಸೇರಿದ ಕುಟಿಲರ ಸ್ವಾರ್ಥತೆಗಾಗಿ ಈ ಅಹಸ್ಯಕರವಾದ ಪ್ರಮಥರ ನಿಂದೆಯನ್ನು ಉಳಿದವರಿಗೆ ಸಹಿಸಬೇಕಾಗಿದೆ.

೩ ಈ ಪರಿಸ್ಥಿತಿಯು ಬರಲಿಕ್ಕೆ ಎರಡು ಪ್ರಬಲವಾದ ಕಾರಣಗಳಿರುವವು. ಅವಾವವೆಂದರೆ:— (೧) ವೀರಶೈವ ಧರ್ಮ ಹಾಗೂ ಇತಿಹಾಸದ ಅಜ್ಞಾನ. (೨) ಶ್ರೀ ಪ್ರಭು ಸಾಂಪ್ರದಾಯಕವಾದ ವಿರಕ್ತ ವರ್ಗದಲ್ಲಿಯ ಅನೈಕ್ಯ. ಅದು ಹೇಗಂದರೆ— ಐತಿಹಾಸಿಕ ದೃಷ್ಟಿಯಿಂದಲೂ, ಇತರ ಧರ್ಮಗಳ ತುಲನಾತ್ಮಕ ದೃಷ್ಟಿಯಿಂದಲೂ ವೀರಶೈವ ಮತವು ಪುರಾತನವಾದದ್ದು ಹಾಗೂ ಹೆಚ್ಚಿನದು ಎಂದು ಜನರಿಗೆ ಪೂರ್ಣ ಜ್ಞಾನ ಮಾಡಿಕೊಡುವಂಥ ಒಂದಾದರೂ ಉದ್ಗ್ರಂಥವು ಸಂಸ್ಕೃತದಲ್ಲಾಗಲೀ ಕನ್ನಡದಲ್ಲಾಗಲೀ ಈ ವರೆಗೂ ದೊರೆಯದೆ ಇರೋಣ. ಶ್ರೀ ಪ್ರಭು ಸಾಂಪ್ರದಾಯಕರಾದ ಅಖಿಲ ವಿರಕ್ತ ವರ್ಗದವರಲ್ಲಿ ೧೬ ನೆಯ ಶತಮಾನದ ಕಡೆಯ ಭಾಗದಲ್ಲಿ ಕಟ್ಟಿಗೆಹಳ್ಳಿದೇವನ ತರುವಾಯ ಅಜ್ಞಾನದ ಮೂಲಕ ಅಶಾಸ್ತ್ರೀಯವಾದ ಸಮಯ ಭೇದವು ಉತ್ಪನ್ನವಾಗಿ ಮಾಡಿದಂಥಾ ಕೋಲಾಹಲ.

೪ ಮೊದಲು ಶ್ರೀ ಪ್ರಭುವಿನ ಕಾಲವಾದ ೧೨ ನೆಯ ಶತಮಾನದಿಂದ ೧೫ ನೆಯ ಶತಮಾನದ ಮಧ್ಯದ ವರೆಗೆ ವಿರಕ್ತರು ಸ್ವಯ, ಚರ ಹಾಗು ಪರ ರೂಪಗಳನ್ನು ತಾಳಿ ಅವಸಾನದವರೆಗೆ ಲೋಕೋಪಕಾರದ ಕಾರ್ಯಗಳನ್ನು ಮಾಡಿ ಕಡೆಗೆ ತಮ್ಮ ಶಿಷ್ಯರೊಳಗೆ ಯೋಗ್ಯರಾದವರಿಗೆ ತಮ್ಮ ಕಾರ್ಯಭಾರವನ್ನು ವಹಿಸಿ ಅವರನ್ನು ದಿಗ್ವಿಜಯಕ್ಕಾಗಿ ಮುಂದಕ್ಕೆ ಕಳುಹಿ ತಾವು ಒಂದು ಸ್ಥಳದಲ್ಲಿ ಮಠವನ್ನು ಕಟ್ಟಿಸಿಕೊಂಡು ಅದರಲ್ಲಿಯೇ ತಮ್ಮ ಅವತಾರ ಕಾರ್ಯವನ್ನು ಸಮಾಪ್ತಗೊಳಿಸುತ್ತಿದ್ದರು. ಇವರೆಲ್ಲ ಸ್ಥೂಲಮಾನದಿಂದ ನಾವು ವೀರಶೈವರ ಏಳಿಗೆಯ ಪ್ರಥಮ ಕಾಲವೆನ್ನಬಹುದು.

೫ ಮುಂದೆ ೧೫ ನೆಯ ಶತಮಾನದ ಕಡೆಯ ಭಾಗದಲ್ಲಿ (ಸು. ೧೪೭೦) ತೋಂಟದ ಸಿದ್ಧಲಿಂಗ ಯತಿವರ್ಯರು ಅವರ ಶಿಷ್ಯ, ಘನಲಿಂಗದೇವ, ಚಾಮರಸ, ಕರಸ್ಥಲದ ನಾಗಿದೇವ, ವೀರಣ್ಣೊಡೆಯ, ಹಾಗೂ ಕಲ್ಲುಮಠದ ಪ್ರಭುದೇವ ಮುಂತಾದ ನೂರೊಂದು ವಿರಕ್ತರ ಸಹಾಯದಿಂದ ಘನವಾದ ಕಾರ್ಯಗಳನ್ನು ಮಾಡಿ ಕೀರ್ತಿ ಭಾಜನರಾದರು. ಇವರ ಶಿಷ್ಯರೊಳಗಿನ ಅನೇಕ ಜನರು ವಾಙ್ಮಯ ಸೇವೆಯನ್ನು ಮಾಡಿದರು. ಅವರೊಳಗೆ ಒಬ್ಬನಾದ ಗುಮ್ಮಳಾಪುರದ ಸಿದ್ಧಲಿಂಗದೇವನೆಂಬವನು ಶಿವಗುಣಪ್ರಸಾದಿ ಮಹಾದೇವಯ್ಯಗಳ ಪೂರ್ವದಲ್ಲಿ ರಚಿಸಿರುವ ಶೂನ್ಯಸಂಪಾದನೆಯಲ್ಲಿ ಸಿದ್ಧರಾಮೇಶ್ವರ ಸಂಪಾದನೆ ಇದ್ದಿಲ್ಲವಾದ್ದರಿಂದ, ಅದರಲ್ಲಿ ೧೪೪ ವಚನಗಳನ್ನು ಸೇರಿಸಿ ಅದನ್ನು ಪೂರ್ತಿಗೊಳಿಸಿದನು. ಹೀಗೆ ಈ ಕಾರ್ಯವನ್ನೇ ನಡಿಸಿರುವದಲ್ಲದೆ ಅನೇಕಾನೇಕ ಸ್ಥಳಗಳಲ್ಲಿ ಮಠಗಳನ್ನು ಕಟ್ಟಿಸಿ ಅವುಗಳ ವ್ಯವಸ್ಥೆಗಾಗಿ ಚರಮೂರ್ತಿಗಳನ್ನು ನೇಮಿಸಿ, ಅವರಲ್ಲಿ ಹಲವು ಬುಡಕಟ್ಟುಗಳನ್ನು ಮಾಡಿ. ಒಂದೊಂದು ಬುಡಕಟ್ಟಿಗೆ ಇಂತಿಷ್ಟು ಮಠಗಳಿರಬೇಕು, ಮತ್ತು ಅವರು ತಮ್ಮ ತಮ್ಮ ಬುಡಕಟ್ಟಿನ ಮುಖ್ಯ ಮಠಾಧೀಶರ ಕಡೆಯಿಂದ ಅನುಗ್ರಹ ಚರಂತಿಕೆ ಮುಂತಾದವುಗಳನ್ನು ಪಡೆಯಬೇಕೆಂದು ಗೊತ್ತುಮಾಡಿ ಈ ವಿರಕ್ತ ವರ್ಗದವರಲ್ಲಿ ಒಂದು ಬಗೆಯ ಐಕ್ಯವನ್ನುಂಟುಮಾಡಿ ವ್ಯವಸ್ಥೆಗೊಳಿಸಿದನು. ಮುಂದೆ ಇವರಲ್ಲಿಯ ಗೂಳೂರು ಸಿದ್ಧವೀರದೇವನೆಂಬವನು ರಾವಸಾಹೇಬ ಹಳಕಟ್ಟಿಯವರು ಅಚ್ಚುಹಾಕಿರುವ ಶೂನ್ಯಸಂಪಾದನೆಯನ್ನು ತಿದ್ದಿ ಅದರಲ್ಲಿ ಕೆಲವು ಹೆಚ್ಚು ವಚನಗಳನ್ನು ಸೇರಿಸಿ ಅದನ್ನು ವೃದ್ಧಿಗೊಳಿಸಿದನು. ಈ ರೀತಿ ೧೬ ನೆಯ ಶತಮಾನದ ಕಡೆಯ ಭಾಗದವರೆಗೆ ಅಂದರೆ ಕಟ್ಟಿಗೆಹಳ್ಳಿದೇವನ ವರೆಗೆ ನಡೆಯಿತು. ಇದಕ್ಕೆ ವೀರಶೈವರ ಏಳಿಗೆಯ ಮಧ್ಯಕಾಲವೆನ್ನಬಹುದು.

೬ ಕಟ್ಟಿಗೆ ಹಳ್ಳಿದೇವನ ತರುವಾಯ ಆತನ ಉಭಯ ಶಿಷ್ಯರುಗಳಲ್ಲಿ ವೈಮನಸ್ಸು ಉಂಟಾಗಿ ಎರಡು ಪಂಗಡಗಳಾದವು. ಅವರೊಳಗಿನ ಒಂದರಲ್ಲಿ ಮೇಲಿಂದ ಮೇಲೆ ಕಲಹಗಳಿದ್ದು ಕೆಲವು ಕಾಲದ ಮೇಲೆ ಒಟ್ಟಿಗೆ ವಿರಕ್ತರಲ್ಲಿ ಮುರಗಿ, ಕುಮಾರ, ಚೀಲಾಳ ಕೆಂಪಿನ ಮತ್ತು ಸಂಪಾದನೆ ಎಂದು ಐದು ಪ್ರಬಲ ಪಂಗಡಗಳಾದವು. ಇದಕ್ಕೇನೇ ಸಮಯ ಭೇದವೆನ್ನುವರು. ಆ ಕಾಲಕ್ಕೆ ಅಸ್ತಿತ್ವದಲ್ಲಿದ್ದ ಯಾವತ್ತು ವಿರಕ್ತ ಮಠಗಳು ಮನಬಲ್ಲಂತೆ ಒಂದೊಂದು ಪಂಗಡಕ್ಕೆ ಸೇರಿದವು. ಇದರಿಂದ ಅವರಲ್ಲಿಯ ವೈಮನಸ್ಸು ದ್ವಿಗುಣಿತವಾಗಿ ಅವರಲ್ಲಿ ಊಟ ಉಪಚಾರಗಳು ಕೂಡ ಬಂದಾದವು.

೭ ಮುಂದೆ ಇವರು ಹಾಗಲವಾಡಿ, ಕೆಳದಿ. ಬೀಳಗಿ (ಕಾವಾರ), ಸೋಂದೆ, ಮೆದಿಕೇರಿ. ಹರಪನಹಳ್ಳಿ ಮೊದಲಾದ ವೀರಶೈವ ರಾಜರನ್ನು ಆಶ್ರಯಿಸಿ, ಅವರ ಮೆಚ್ಚುಗೆಯನ್ನು ಪಡೆದು ಅವರ ಸಹಾಯದಿಂದ ಅವರವರ ರಾಜ್ಯಗಳಲ್ಲಿ ತಮ್ಮ ತಮ್ಮ ಪಂಗಡದ ಅನೇಕ ಮಠಗಳನ್ನು ಕಟ್ಟಿಸಿ. ಅವರ ಬೆಂಬಲದಿಂದ

ಸದ್ಯದ ಕಾಯಿದೆ ಕಾವುನಸಿಲದ ಉಮೇದ್ವಾರರು ಮತದಾರರ ಸಹಾಯದಿಂದ ಮಂತ್ರಿ ಮೊದಲಾದ ಘನವಾದ ಸ್ಥಳಗಳಿಗೆ ಏರುವಂತೆ ಇವರಾದರೂ ಘನತೆಗೇರಿ ಆ ಕಾಲದ ಜನರಿಂದ ಮನ್ನಣೆಯನ್ನು ಪಡೆಯಹತ್ತಿದರು. ಇವರ ಮುಂದಿನವರು ಈ ವರ್ಚಸ್ಸಿನಲ್ಲಿ ಪ್ರತಿಯೊಬ್ಬರು ತಮ್ಮದೊಂದು ಶೂನ್ಯಪೀಠವನ್ನು ಕಲ್ಪಿಸಿಕೊಂಡು ಜಗದ್ಗುರುಗಳೆಂದು ಹೊಗಳಿಸಿಕೊಳ್ಳಹತ್ತಿದರು. ಈ ಸ್ಥಿತಿಯು ೧೭ ನೆಯ ಶತಮಾನದ ಕಡೆಯವರೆಗೆ ಅಂದರೆ ಸುಮಾರು ಒಂದು ನೂರು ವರುಷಗಳ ವರೆಗೆ ನಡೆಯಿತು. ಈ ಅವಧಿಯಲ್ಲಿ ಅನೇಕ ಕವಿಗಳೂ ಗ್ರಂಥಕರ್ತೃಗಳೂ ಆಗಿಹೋದರು. ಇದು ಒಬ್ಬರಕಿಂತ ಒಬ್ಬರು ಮೇಲಾಗಬೇಕೆಂಬ ಏರ್ಪಟದ ಪರಿಣಾಮವು. ಇದಕ್ಕೆ ವೀರಶೈವರ ಏಳಿಗೆಯ ಅಂತ್ಯಕಾಲವು ಮತ್ತು ಕೆಡಗಾಲದ ಪ್ರಾರಂಭವು ಎನ್ನಬೇಕು.

೮ ಯಾಕಂದರೆ ನಾ ಮೇಲು ಅವರು ಕೀಳು ಎಂಬ ಇವರ ಹವ್ಯಾಸದಲ್ಲಿ ವಿರಕ್ತರ ನಿಜವಾದ ಇತಿಹಾಸವು ಮತ್ತು ಶ್ರೀ ಪ್ರಭುವಿನ ನಿಜವಾದ ಶೂನ್ಯಪೀಠವು ಮರೆಮಾಜಹತ್ತಿತು. ಶ್ರೀ ಪ್ರಭುವಿನ ಐಕ್ಯಸ್ಥಾನವು ಕೂಡ ಶ್ರೀಶೈಲದಲ್ಲಿರುವದೆಂದು ನಿರಾಧಾರ ಸಂಗತಿಯನ್ನು ತಮ್ಮ ಕಾಲದ ವಾಙ್ಮಯದಲ್ಲಿ ಸೇರಿಸಿದರು. ಮತ್ತು ನಿರಂಜನ ವಂಶರತ್ನಾಕರವೆಂಬದೊಂದು ತಮಗೆ ಅನುಕೂಲವಾದ ಕಲ್ಪಿತ ಕತೆಯನ್ನು ಬರೆದಿಟ್ಟರು. ಅದನ್ನೇ ರಾವಸಾಹೇಬ ಹಳಕಟ್ಟಿಯವರು ತಮ್ಮ ಶಿವಾನುಭವದಲ್ಲಿ ಮುದ್ರಿಸಿರುವರು. ಈ ವಿರಕ್ತರ ದುರವಸ್ಥೆಯನ್ನು ಕಂಡು ಆಧುನಿಕ ಕೆಲವು ಭಕ್ತರ ದಾಸೋಹದ ಸ್ಥಳಗಳಲ್ಲಿ ಕೆಲವು ಭಕ್ತರ ಸಹಾಯದಿಂದ ಜಂಗಮರು ಸೇರಿ ಪ್ರಬಲರಾಗಿ ಮನ್ನಣೆದೆಸೆಯಿಂದ ಸುಮಾರು ೫೦ ವರ್ಷಗಳ ಕೆಳಗೆ ವಿರಕ್ತರಾಗಿ ವಿರಕ್ತರೊಳಗಿನ ಒಂದು ಸಮಯ ಭೇದಕ್ಕೆ ಸೇರಿಕೊಂಡು ಸಂಧಿ ಸಾಧಿಸಿ ತಾವೂ ಜಗದ್ಗುರುಗಳೆಂದು ಹೊಗಳಿಸಿಕೊಳ್ಳಹತ್ತಿದರು. ಇಂಥ ವಿಷದ ಬಳ್ಳಿಯನ್ನು ಕಿತ್ತೊಗೆಯುವದು ಸಹಜವಾದ ಕೆಲಸವಲ್ಲವು.

೯ ಅಹಂ ಮನ್ಯರೂ, ಸ್ವಾರ್ಥಿಗಳೂ ಆದ ಕೆಲವು ವಿರಕ್ತರು ಮಾಡುವ ಸದ್ಯದ ಶರಣನಿಂದಕರ ಪ್ರತಿಕಾರದ ಕಾರ್ಯಗಳು "ಹೆಗ್ಗಣವನ್ನು ಒಳಗಿಟ್ಟು ಮೇಲೆ ಗುದ್ದು ಬಡೆಯುವವರಂತೆ" ಆಗಿವೆ. ಆದುದರಿಂದ "ಬೆಕ್ಕುಗಳಿಲ್ಲದಲ್ಲಿ ಇಲಿಗಳ ಚಲ್ಲಾಟ" ವೆಂಬಂತೆ ಈ ಪ್ರಮಥ ನಿಂದಕರಿಗೆ ಈ ವಿರಕ್ತರ ಒಳಗಿನ ಮನೆ ಮುರಿಯುವ ಇಂಗಿತವು ಗೊತ್ತಾದ್ದರಿಂದ ಮತ್ತಿಷ್ಟು ಪ್ರೋತ್ಸಾಹದೊರೆತಂತೆ ಆಗಿದೆ. ಇನ್ನು ಮುಂದೆ ವಿರಕ್ತರು ಇಂದಿನಂತೆ ನಡೆದದ್ದಾದರೆ ತಾವೂ ರಸಾತಳಕ್ಕೆ ಹೋಗುವರಲ್ಲದೆ, ಪ್ರಮಥರ ನಿಂದೆಯಿಂದ ಒದಗುವ ಪಾಪಗಳ ಪಾಲಗಾರರೂ ಆಗುವರು. ಇದನ್ನರಿತು ಯಾವತ್ತು ಪ್ರಭು ಸಾಂಪ್ರದಾಯಕರಾದ ವಿರಕ್ತರು ತಮ್ಮ ದುರಭಿಮಾನವನ್ನು ಒದಿಗಿಟ್ಟು ಒಂದಾಗಬೇಕು. ಯಾವತ್ತು ವಿರಕ್ತರು ಒಂದಾಗಬೇಕಾದರೆ ಕೆಳಗೆ ಸೂಚಿಸಿದಂತೆ ನಡೆಯಬೇಕು.

೧೦ (ಅ) ಐದೂ ಸಮಯದವರು ತಮ್ಮ ತಮ್ಮ ಸಮಯ ಭೇದವನ್ನು ಬಿಟ್ಟು ಅದನ್ನು ಪುನಃ ಕನಸು ಮನಸಿನಲ್ಲಿಯೂ ಕೂಡ ತಾರದೆ ಯಾವತ್ತು ವಿರಕ್ತರು ಸರಿಸಮಾನವೆಂದು ಭಾವಿಸಿ ನಡೆಯಬೇಕು.

(ಆ) ಕಟ್ಟಿಗೆ ಹಳ್ಳಿದೇವನಕಿಂತಲೂ ಪೂರ್ವದಲ್ಲಿ ಆಚರಣೆಯಲ್ಲಿದ್ದಂತೆ ಯಾವತ್ತು ವಿರಕ್ತರು ತಮ್ಮ ತಮ್ಮೊಳಗೆ ಊಟ ಉಪಚಾರಗಳನ್ನು ಸಂಶಯವಿಲ್ಲದೆ ಮಾಡಬೇಕು.

(ಇ) ಪ್ರತಿಯೊಂದು ಸಮಯದವರು ತಮ್ಮದೊಂದು ಬೇರೆ ಶೂನ್ಯಪೀಠವೆಂದು ಇತ್ತೀಚೆಗೆ ಭಾವಿಸಿಕೊಂಡು ಅದಕ್ಕೆ ತಾವೂ ಹಾಗೂ ತಮ್ಮ ಪಂಗಡಕ್ಕೆ ಸೇರಿದ ಯಾವತ್ತು ವಿರಕ್ತರೂ ಮಾನ್ಯ ಮಾಡುತ್ತ ಬಂದದ್ದನ್ನು ಏಕದಂ ಬಿಟ್ಟುಬಿಡಬೇಕು.

(ಈ) ಯಾವತ್ತು ಸಮಯದವರು ಒಮ್ಮನಸಿನಿಂದ ಒಪ್ಪುವಂಥ ಒಂದು ಪುರಾತನ ಹಾಗು ಇತಿಹಾಸ ಪ್ರಸಿದ್ಧವಾದಂಥ ಶೂನ್ಯಪೀಠವನ್ನು ನಿಷ್ಪಕ್ಷಪಾತ ಬುದ್ಧಿಯಿಂದ ಸಂಶೋಧಿಸಿ ಅದಕ್ಕೆ ತಾವು ಎಲ್ಲರೂ ಸಮ್ಮತಿಸಿ ಅದರಂತೆ ನಡೆಯತಕ್ಕದ್ದು.

(ಉ) ಶ್ರೀ ಪ್ರಭುದೇವನು ಶ್ರೀಶೈಲದಲ್ಲಿ ಬೈಲಾಗದೆ ಬೇರೆ ಕಡೆಯಲ್ಲಿ ಬೈಲಾಗಿರುವನು. ಅದನ್ನೇ ಐತಿಹಾಸಿಕ ದೃಷ್ಟಿಯಿಂದ ಶೋಧಿಸಿ ಯಾವತ್ತು ವಿರಕ್ತರು ತಮ್ಮೆಲ್ಲರಿಗೆ ಅದೇ ಗುರುಪೀಠವೆಂದು ಭಾವಿಸಿ ನಡೆಯತಕ್ಕದ್ದು.

(ಊ) ಶ್ರೀ ಪ್ರಭುವಿನ ಸಾಕ್ಷಿಯಾಗಿ ಯಾವತ್ತು ವಿರಕ್ತರು ದೊಡ್ಡವರು ಸಣ್ಣವರು ಎನ್ನದೆ ಸದ್ಯಕ್ಕೆ ತಮ್ಮ ಹತ್ತಿರುವ ಹಣವನ್ನು ಪ್ರಮಥ ನಿಂದಕರ ಪ್ರತಿಕಾರಾರ್ಥವಾಗಿ ಕೊಟ್ಟು ವಿರಕ್ತರೆಂಬ ತಮ್ಮ ಬಿರುದನ್ನು ಕಾಪಾಡಿಕೊಳ್ಳಬೇಕು. ಆ ಹಣದ ವ್ಯವಸ್ಥೆಗಾಗಿ ಒಂದು ಕಮೀಟಿಯನ್ನು ನೇಮಿಸಬೇಕು

(ಎ) ನಾವು ಮೇಲೆ ಸೂಚಿಸಿದಂತೆ ಯಾವತ್ತು ವಿರಕ್ತರು ತಮ್ಮ ತಮ್ಮೊಳಗೆ ತೀವ್ರವಾಗಿ ವ್ಯವಸ್ಥೆ ಮಾಡಿಕೊಳ್ಳದಿದ್ದರೆ ನಿಜವಾದ ಪ್ರಮಥ ಭಕ್ತರು ಈ ವಿರಕ್ತರನ್ನಾದರೂ ಪ್ರಮಥ ನಿಂದಕರಂತೆಯೇ ಸದಾ ಉಪೇಕ್ಷಿಸಬೇಕಾಗುವದು.

(ಏ) ವೀರಶೈವ ಸುಶಿಕ್ಷಿತರೂ, ತರುಣರೂ ಆದ ಪ್ರಮಥಾಭಿಮಾನಿಗಳು ಇದರ ಕಡೆಗೆ ತಮ್ಮ ಲಕ್ಷವನ್ನು ಪೂರೈಸಿ ನಿಷ್ಪಕ್ಷಪಾತತೆಯಿಂದ ಈ ವಿಷಯವಾಗಿ ಲೇಖಗಳನ್ನು ಪ್ರಕಟಿಸಿ ವಿರಕ್ತರೊಳಗಿನ ಆಗಂತುಕವಾದ ಹುಳುಕುಗಳನ್ನು ಬೈಲಿಗೆ ತಂದು ಅವರನ್ನು ಹಾದಿಗೆ ಹಚ್ಚಬೇಕು. "ಕಂಡದ್ದಾಡಿದರೆ ಕೆಂಡದಂಥ ಸಿಟ್ಟು" ಎಂಬ ನಾಣ್ನುಡಿಯಂತೆ ಈ ಬರಹವು ಕೆಲವರಿಗೆ ಸೇರಲಿಕ್ಕಿಲ್ಲ ಆದರೆ ಅದಕ್ಕೆ ಉಪಾಯವಿಲ್ಲವು. ಇದು ಇತಿಹಾಸವು. ನಮ್ಮೊಳಗಿನ ಹುಳುಕುಗಳನ್ನು ಪರರು ಎತ್ತಿ ಆಡಿ ನಗುವದಕ್ಕಿಂತಲೂ ಪೂರ್ವದಲ್ಲಿಯೇ ಅವುಗಳನ್ನು ಸರಿಪಡಿಸಿಕೊಳ್ಳುವದು ಒಳ್ಳೆಯದು. ನಿಷ್ಠುರತೆಗಾಗಿ ನಿರಂಜನ ಮೂರ್ತಿಗಳೂ ಹಾಗು ಅವರ ಅಭಿಮಾನಿಗಳೂ ಕ್ಷಮಿಸಬೇಕು.

ಸ್ವದೇಶಾಭಿಮಾನಿ

ಮಂಗಳೂರು.

೧೯೦೭ ರಲ್ಲಿ ಸ್ಥಾಪಿತವಾಗಿ, ಲೋಕಸಮಾಚಾರ, ವಿನೋದ, ರಾಜಕೀಯ ಟೀಕೆ ಟಿಪ್ಪಣಿ, ಕಥೆ, ಕವನ, ವ್ಯಂಗಚಿತ್ರ ಮೊದಲಾದುವುಗಳನ್ನು ಪ್ರಕಟಿಸುತ್ತ ಕನ್ನಡ ನಾಡಿನಲ್ಲಿ ಸಾವಿರಗಟ್ಟಲೆ ಚಂದಾದಾರರನ್ನು ಸಂಪಾದಿಸಿ ಕೀರ್ತಿ ಹೊಂದಿದ ಸಚಿತ್ರ ವಾರ ಪತ್ರಿಕೆ. ವಾರಕ್ಕೆ ಹತ್ತಿಪ್ಪತ್ತು ಚಿತ್ರಗಳು. ನಿಮ್ಮ ಜಾಹಿರಾತನ್ನು ಇದರಲ್ಲಿ ಕೊಡಿರಿ.

ವಾರ್ಷಿಕ ಚಂದಾ ರೂ. ೩-೧೪-೦ ಮಾತ್ರ.

ವಿರಕ್ತ ಸ್ವಾಮಿಗಳಿಗೆ ಗಾಂಭೀರ್ಯದ ಸೂಚನೆ.

"ನಿಷ್ಪಕ್ಷಪಾತಿ" ಎಂಬ ಒಬ್ಬ ವಿದ್ವಾನ್ ಲೇಖಕರು "ವಿರಕ್ತರಲ್ಲಿಯ ಸಮಯಭೇದದ ಜೊಳ್ಳುತನ" ಎಂಬ ಒಂದು ಲೇಖನವನ್ನು ಪ್ರಕಟಿಸಿದ್ದಾರೆ. ಅದನ್ನು ಇದೇ ಸಂಚಿಕೆಯ ಬೇರೊಂದು ಕಡೆ ಕೊಟ್ಟಿದೆ. ಲೇಖಕರು ವೀರಶೈವ ಸಮಾಜಕ್ಕೆ ಸಂಬಂಧಪಟ್ಟ ಅತ್ಯಂತ ಮಹತ್ವದ ವಿಷಯಗಳನ್ನು ಆ ಲೇಖನದಲ್ಲಿ ಚರ್ಚಿಸಿದ್ದಾರೆ.

ಸಮಯಭೇದ ನಿರಾಕರಣೆ.

ವಿರಕ್ತ ಸ್ವಾಮಿಗಳಲ್ಲಿರತಕ್ಕ ಈಗಿನ ಸಮಯ ಭೇದವು ನಿವಾರಣೆಯಾಗಬೇಕೆಂದು ಲೇಖಕರು ಸೂಚಿಸಿದ್ದಾರೆ. ಇದು ಯುಕ್ತವೇ ಸರಿ. ಏಕೆಂದರೆ ವೀರಶೈವ ಮತತತ್ವ ಪ್ರಕಾರ ನೋಡಿದರೆ ವಿರಕ್ತರಲ್ಲಿ ಎಂದರೆ ಜಂಗಮರಲ್ಲಿ ಒಬ್ಬರು ಹೆಚ್ಚು, ಇನ್ನೊಬ್ಬರು ಕಡಿಮೆಯೆಂದು ತಿಳಿಯಲು ಎಳ್ಳಷ್ಟಾದರೂ ಅವಕಾಶವಿಲ್ಲ.

ಅವರವರ ಶೀಲಾಚಾರ, ಭಕ್ತಿಭಾವ, ಮತೋದ್ಧಾರಕ್ಕೋಸ್ಕರ ಮಾಡುವ ಮಹತ್ಕಾರ್ಯ, ಮುಂತಾದವುಗಳ ಮೇಲಿಂದ ಶ್ರೇಷ್ಠತ್ವದಲ್ಲಿ ತರ ತಮ ಭಾವಗಳು ಸ್ವಾಭಾವಿಕವಾಗಿಯೇ ಉಂಟಾಗತಕ್ಕವುಗಳೇ ವಿನಾ ಇಂತಹ ಮಠದ ಸ್ವಾಮಿಗಳೇ ಶ್ರೇಷ್ಠರೆಂದು ಇನ್ನಿತರ ಮಠದ ಸ್ವಾಮಿಗಳೆಲ್ಲಾ ತಿಳಿಯಬೇಕೆಂಬುದೇನೂ ವೀರಶೈವ ಮತತತ್ವವಲ್ಲ.

ಎಂದಮೇಲೆ ಪ್ರಭುದೇವರು ಬಯಲಾದ ಸ್ಥಾನವನ್ನು ಸಂಶೋಧಿಸಿ ಅಲ್ಲಿಯ ಮಠವನ್ನೇ ಎಲ್ಲಾ ವಿರಕ್ತ ಸ್ವಾಮಿಗಳೂ ತಮ್ಮ ಗುರುಪೀಠವೆಂದು ತಿಳಿಯಬೇಕಾದುದೇಕೆ? ಇದೇನು ಮತತತ್ವವೇ? ಅಥವಾ ಪ್ರಮಥರು ಸಮಾಜ ರಚನೆಯನ್ನು ಮಾಡಿದ ನಂತರ ಗೊತ್ತುಮಾಡಿದ ಒಂದು ಏರ್ಪಾಟೇ? ಲೇಖಕರು ತಮ್ಮ ಲೇಖನದಲ್ಲಿ ೧೫ ನೆಯ ಶತಮಾನದ ವರೆಗೆ ಯಾವ ಸ್ಥಿತಿಯಿದ್ದಿತೆಂದು ಹೇಳಿದ್ದಾರೆಯೋ ಅದೇ ಸ್ಥಿತಿಯು ಇನ್ನು ಮೇಲಾದರೂ ಏಕೆ ಉಂಟಾಗಬಾರದು? ಈಗ ಲೇಖಕರು ಅಪೇಕ್ಷಿಸುವಂತೆ ಯಾವುದಾದರೊಂದು ಮಠವನ್ನೇ ಎಲ್ಲ ವಿರಕ್ತ ಸ್ವಾಮಿಗಳೂ ಆಗ ತಮ್ಮ ಗುರುಪೀಠವೆಂದು ಗ್ರಹಿಸಿ ಆಚರಿಸುತ್ತಿದ್ದರೆ? ಇಲ್ಲವೇ ಇಲ್ಲ.

ಎಲ್ಲ ವಿರಕ್ತ ಸ್ವಾಮಿಗಳೂ ಬೇರೆ ಬೇರೆಯಾಗಿರುವುದು ಸಮಾಜ ಕಾರ್ಯಕ್ಕೆ ಅನುಕೂಲವಲ್ಲವೆಂತಲೂ ಅವರೆಲ್ಲರೂ ಕೆಲವು ಕೇಂದ್ರಗಳಲ್ಲಿ ವಿಭಾಗಿಸಲ್ಪಡುವುದು ಐಕಮತ್ಯಕ್ಕೂ ವ್ಯವಸ್ಥೆಗೂ ಅನುಕೂಲವೆಂತಲೂ ಲೇಖಕರ ಅಭಿಪ್ರಾಯವೇ? ಅದಕ್ಕಾಗಿಯೇ ಬೇರೆ ಬೇರೆ ಬುಡಕಟ್ಟುಗಳುಂಟಾದುದನ್ನು ಲೇಖಕರು ಗೌರವಿಸಿ ಈ ವಿಧವಾದ ಏರ್ಪಾಟಾದುದು ವೀರಶೈವರ ಏಳಿಗೆಯ ಮಧ್ಯಕಾಲವೆಂದು ಹೇಳಿರುವರೇ?

ಇದೇನೂ ಮತತತ್ವವಲ್ಲವಷ್ಟೆ. ಸಮಾಜ ವ್ಯವಸ್ಥೆಗಾಗಿ ವಿರಕ್ತ ಸ್ವಾಮಿಗಳಲ್ಲುಂಟಾದ ಒಂದು ರೀತಿಯ ಸಂಘಟನೆ. ಇದು ಲೇಖಕರಿಗೆ ವಿಹಿತವಾಗಿದ್ದರೆ ಆ ಬುಡಕಟ್ಟುಗಳ ಪ್ರತಿಯಾಗಿ ಐದು ಸಮಯಗಳಿದ್ದರೆ ಬಾಧಕವೇನು? ಎಲ್ಲ ವಿರಕ್ತ ಸ್ವಾಮಿಗಳೂ ಐದು ಕೇಂದ್ರಗಳಲ್ಲಿ ವಿಭಾಗಿಸಲ್ಪಟ್ಟಂತಾಯಿತು. ಅವರಲ್ಲಿ ಕಾರ್ಯವು ವ್ಯವಸ್ಥೆಯಿಂದಲೂ ಸಂಘಟನೆಯಿಂದಲೂ ನಡೆಯಲು ಅನುಕೂಲವೇ ಆಯಿತು.

ಆದರೆ ಇವರಲ್ಲಿ ಒಂದು ಸಮಯದವರು ಹೆಚ್ಚಿನವರು ಇನ್ನೊಂದು ಸಮಯದವರು ಕಡಿಮೆಯವರೆಂದು ತಿಳಿಯಬಾರದು. ಎಲ್ಲರೂ ಪರಸ್ಪರ ಭಕ್ತಿ ಭಾವದಿಂದ ಸಾಮರಸ್ಯವನ್ನು ಮಾಡಲೇಬೇಕು. ತಮ್ಮ ತಮ್ಮ ಸಮಯಗಳ ಪ್ರಮುಖರ ನೇತೃತ್ವದಲ್ಲಿ ಸಮಾಜ ಕಾರ್ಯ ಮತ್ತು ಧರ್ಮ ಕಾರ್ಯಗಳನ್ನು ಮಾಡಬೇಕು. ಆ ಐದು ಕೇಂದ್ರಗಳ ಪ್ರಮುಖರೂ ಪರಸ್ಪರ ಸಮಾನರು. ಸಮಾಜದಿಂದ ಸಮಾನವಾದ ಮಾನ ಮನ್ನಣೆ ಹೊಂದಲು ಅರ್ಹರು. ಹೀಗಾಗುವುದೇ ಸಮಯಭೇದ ನಿವಾರಣೆಯ ಒಂದು ರೀತಿ.

ಇದು ಸ್ವಾತಂತ್ರ್ಯ ಯುಗ. ಇಷ್ಟಕ್ಕೂ ಒಳಪಡದೆ ಸಕಲ ವಿರಕ್ತ ಸ್ವಾಮಿಗಳೂ ತಮ್ಮಷ್ಟಕ್ಕೆ ತಾವೇ ಸ್ವತಂತ್ರರೆಂದು ಕೂಡಾ ಹೇಳಬಹುದು. ಆಗ ಲೇಖಕರು ತಿಳಿಸಿದಂತೆ ೧೫ ನೆಯ ಶತಮಾನದ ಹಿಂದಿನ ಸ್ಥಿತಿ ಪ್ರಾಪ್ತವಾಗಬೇಕು. ಅದೇ ಸಮಯಭೇದ ನಿರಾಕರಣೆಯ ನಿಜ ಸ್ಥಿತಿ. ಮಠಗಳ ಸ್ಥಿರ ಚರಾದಿ ಸೊತ್ತುಗಳೆಲ್ಲಾ ಸಮಾಜದ ಪಂಚರ ಅಧೀನವಾಗಬೇಕು. ಸ್ವಾಮಿಗಳಿಗೆ ಮಠದಲ್ಲಿ ಪೂಜೆ, ಅನುಷ್ಠಾನ, ಶಿವಾನುಭವಗಳಿಗೆ ಮಾತ್ರ ಅಧಿಕಾರ. ಮಠದ ಎಲ್ಲಾ ವ್ಯವಸ್ಥೆಗಳನ್ನು ಪಂಚರೇ ವಹಿಸಬೇಕು. ಮಠದ ಸೊತ್ತು ದೊರೆಯುತ್ತದೆಂದು, ನಮ್ಮಷ್ಟಕ್ಕೆ ನಾವೇ ಸ್ವತಂತ್ರರು, ಯಾವ ಕೇಂದ್ರವಲ್ಲಿಯೂ ಕೂಡಿರಲು ಇಷ್ಟವಿಲ್ಲವೆಂದು ಹೇಳಬಹುದು. ಇದಕ್ಕೆ ಅವಕಾಶವಾಗದಂತೆ ಪ್ರಮಥರ ಮೊದಲಿನ ಪದ್ಧತಿಯನ್ನಾದರೂ ಅನುಸರಿಸಬೇಕು. ಅಥವಾ ಕೇಂದ್ರಗಳಿಗಾದರೂ ಸೇರಿಕೊಂಡಿರಬೇಕು. ಮಠದ ಸ್ವಾಮಿತ್ವವೂ ಈ ಸಮಯಗಳ ಪ್ರಾಬಲ್ಯಕ್ಕೆ ಅಥವಾ ಮೇಲು ಕೀಳುಗಳಿಗೆ ಒಂದು ಮುಖ್ಯ ಕಾರಣವಾಗಿದೆಯೆಂಬುದನ್ನು ನಾವು ಮರೆಯಕೂಡದು.

ಈ ಎರಡು ರೀತಿಗಳಲ್ಲಿ ಯಾವುದು ಆಚರಣೆಗೆ ಬಂದರೂ ಸಮಾಜಕ್ಕೆ ಕ್ಷೇಮವೇ ಸರಿ. ಆದರೆ ಈಗಿನ ಸ್ಥಿತಿಯು ಮಾತ್ರ ಇರಲೇ ಕೂಡದು. ಸಮಯ ಭೇದದ ಮೊದಲಿನ ಉಗ್ರ ಸ್ವರೂಪವು ಈಗ ಉಳಿದಿಲ್ಲ. ಈಗಿರುವಷ್ಟಾದರೂ ಘಾತಕವಾದುದೇ ಸರಿ. ಆದುದರಿಂದ ಆಯಾಯ ಸಮಯಗಳ ಪ್ರಮುಖ ಸ್ವಾಮಿಗಳು ಈ ವಿಷಯವನ್ನು ಅತ್ಯವಶ್ಯಕವಾಗಿ ಜಾಗ್ರತೆ ಆಲೋಚಿಸಿ ಈ ಸಮಯ ಭೇದದ ವಿಷವನ್ನು ಸಂಪೂರ್ಣ ತೆಗೆದುಹಾಕಲೇಬೇಕಾದುದು ವಿಹಿತ.

ಪ್ರಮಥ ನಿಂದನೆಯ ಪ್ರತೀಕಾರ.

ಲೇಖಕರು ಇದೊಂದು ಮಹತ್ವದ ವಿಷಯವನ್ನು ಈ ಲೇಖನದಲ್ಲಿ ಸೇರಿಸಿದ್ದಾರೆ. ಸಮಯಭೇದಕ್ಕೂ ಈ ವಿಷಯಕ್ಕೂ ಸಂಬಂಧವಿಲ್ಲ. ಒಂದೊಂದು ಸಮಯದ ವಿರಕ್ತ ಸ್ವಾಮಿಗಳಾದರೂ ತಮ್ಮ ತಮ್ಮಲ್ಲಿಯೇ ಐಕಮತ್ಯದಿಂದ ಎಲ್ಲರೂ ಈಗೆಲ್ಲಿ ಪ್ರತೀಕಾರ ಮಾಡುತ್ತಿದ್ದಾರೆ?

ಹಾಗೆ ಮಾಡುತ್ತಿದ್ದರೆ ಸಮಯಭೇದವು ಎಲ್ಲರ ಏಕಮುಖವಾದ ಪ್ರತೀಕಾರಕ್ಕೆ ಆತಂಕ ಮಾಡಿದೆಯೆಂದು ಹೇಳಬಹುದಾಗಿತ್ತು. ಪ್ರಮಥನಿಂದನೆಯ ಪ್ರತೀಕಾರಕ್ಕೆ ವಿರಕ್ತ ಸ್ವಾಮಿಗಳು ಐಕಮತ್ಯದಿಂದ ಪ್ರಯತ್ನಿಸದಿದ್ದುದಕ್ಕೆ ಅನೇಕ ಕಾರಣಗಳಿವೆ. ಇದೊಂದು ಸ್ವತಂತ್ರ ವಿಷಯವೇ ಆಗಿರುವುದರಿಂದ ಬೇರೆ ಲೇಖನದಲ್ಲಿ ನಾವು ನಮ್ಮ ಅಭಿಪ್ರಾಯವನ್ನು ಸಮಾಜದ ಮುಂದಿಡುವೆವು.

ಸಂತತಿ ನಿಯಮನದ ಸುದ್ದಿಯೋ ಸುದ್ದಿ.

ಸಂತತಿ ಹೆಚ್ಚಬಾರದೆಂಬುದಕ್ಕೆ ಈಗ ಹಿಂದುಸ್ಥಾನದ ಅನೇಕ ಭಾಗಗಳಲ್ಲಿ ಪ್ರಯತ್ನಗಳು ನಡೆದಿವೆ. ಈ ವಿಚಾರವಾಗಿ ಅನೇಕರು ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಕೆಲವರು ವ್ಯಾಖ್ಯಾನ ಕೊಡುತ್ತ ಸಂಚರಿಸುತ್ತಿದ್ದಾರೆ. ಮುಂಬೈ ಪ್ರಾಂತದಲ್ಲಿಯೂ ಈ ಚಟುವಟಿಕೆ ಹೆಚ್ಚಾಗಬೇಕೆಂದು ಕೆಲವು ವ್ಯಾಖ್ಯಾನಕಾರರು ಸಂಚಾರ ಹೊರಡುವವರಿದ್ದಾರೆ.

ಕೌನ್ಸಿಲ್ಲಿನಲ್ಲಿ.

ಕೌನ್ಸಿಲ್ ಆಫ್ ಸ್ಟೇಟ್ ಮಂಡಲದಲ್ಲಿ ಕಳೆದ ವಾರ ಮಿ. ಹುಸೇನ್ ಇಮಾಮ್ ಎಂಬುವವರು ಜನಸಂಖ್ಯೆಯನ್ನು ಕ್ರಮಗೊಳಿಸಲು ಸರಕಾರವು ಒಂದು ಶಾಸನವನ್ನು ಏರ್ಪಡಿಸಬೇಕೆಂದು ಸೂಚಿಸಿದರು. ಸರ್ ಫಿರೋಝ್ ಸೇಟನಾ ಎಂಬುವವರು ಈ ಗೊತ್ತುವಳಿಯನ್ನು ಅನುಮೋದಿಸುವಾಗ ಹೀಗೆ ಹೇಳಿದರು.

“ಕಳೆದ ೧೦ ವರುಷಗಳಲ್ಲಿ ನೂರಕ್ಕೆ ೧೦॥ ಪ್ರಮಾಣದಂತೆ ಜನಸಂಖ್ಯೆ ಹೆಚ್ಚಿದೆ. ಕಳೆದ ೩೦ ವರುಷಗಳಲ್ಲಿ ೬ ಕೋಟಿ ೨೩ ಲಕ್ಷ ಜನಸಂಖ್ಯೆ ಹೆಚ್ಚಾಗಿದೆ. ದಕ್ಷಿಣ ಹಿಂದುಸ್ಥಾನದಲ್ಲಿ ಸಂತತಿ ನಿಯಮನಕ್ಕೋಸ್ಕರ ಕೃತ್ರಿಮ ಉಪಾಯಗಳನ್ನು ವಿಪರೀತವಾಗಿ ಅನುಸರಿಸುತ್ತಿದ್ದಾರೆ.”

ಹೀಗೆಂದರೇನು?

ಸಂತತಿ ನಿಯಮನವೆಂಬ ಚಟುವಟಿಕೆಯ ಅರ್ಥವು ಬಹು ಜನರಿಗೆ ತಿಳಿದಿರಲಿಕ್ಕಿಲ್ಲ. ಮದ್ರಾಸಿನಲ್ಲಿ ಈ ಚಟುವಟಿಕೆ ವಿಶೇಷ. ಸ್ತ್ರೀ ಪುರುಷರ ಗುಹ್ಯೇಂದ್ರಿಯಗಳ ವಿಚಾರವಾಗಿ ಅನೇಕ ಚಿಕ್ಕ ಚಿಕ್ಕ ಪ್ರಕಟನೆಗಳು ಪ್ರಕಟವಾಗುತ್ತಲಿವೆ. ಈ ಚಟುವಟಿಕೆಯ ಅರ್ಥವನ್ನು ಒಂದೇ ವಾಕ್ಯದಲ್ಲಿ ಹೇಳಬೇಕೆಂದರೆ ಸಂಭೋಗ ಮಾತ್ರ ಬೇಕು, ಸಂತತಿ ಮಾತ್ರ ಬೇಡ. ನಾಲಿಗೆ ತೀಟೆ ತೀರಬೇಕು. ಹೊಟ್ಟೆ ಕಡಿತ ಬರಬಾರದು. ಇದಕ್ಕೇನು ಉಪಾಯ? ವಾಂತಿಗೆ ಔಷಧಿಯನ್ನು ತೆಗೆದುಕೊಳ್ಳುತ್ತಾ ನಿರೋನಂತೆ ಬೇಕಷ್ಟು ಸಾರೆ ಬೇಕಾದುದನ್ನು ಉಣ್ಣುವುದು.

ಸಂಭೋಗ ಬೇಕು, ಆದರೆ ಸಂತತಿ ಮಾತ್ರ ಬೇಡವೆನ್ನುವವರು ಕೃತ್ರಿಮ ಉಪಾಯಗಳನ್ನು ಮಾಡಿಕೊಳ್ಳುವುದು ಸಹಜವಲ್ಲವೆ? ಸಂತತಿಯುಂಟಾಗುವ ತತ್ವವನ್ನೇ ಸ್ತ್ರೀ ಪುರುಷರ ಗುಹ್ಯೇಂದ್ರಿಯಗಳಿಂದ ತೆಗೆದುಹಾಕಿ ಬಿಟ್ಟರೆ ಸಂಭೋಗವು ಅನಿರ್ಬಂಧವಾಗಿ ಸಾಗುವುದಿಲ್ಲವೆ? ಇಂಥ ನಾನಾ ಕೃತ್ರಿಮೋಪಾಯಗಳು ಈಗ ಧಾರಾಳವಾಗಿ ನಡೆಯುತ್ತಲಿವೆ

ಎರಡು ಲಕ್ಷ ತಾಯಿಯರ ಬಲಿ!

ಮಿಸೆಸ್ ಹೌಸಾರ್ಟನ್ ಎಂಬ ಹೆಣ್ಣುಮಗಳು ಈ ವಿಚಾರವಾಗಿ ಕಳೆದ ವಾರ ಮುಂಬೈಯಲ್ಲಿ ವ್ಯಾಖ್ಯಾನ ಮಾಡಿದ್ದರ ಮುಖ್ಯಾಂಶ ಹೀಗಿದ್ದಿತು.—ಕ್ರಿ. ಶ. ೧೮೭೬ ರಲ್ಲಿ ಇಂಗ್ಲಂಡಿನಲ್ಲಿ ಯಾವ ಸ್ಥಿತಿಯಿದ್ದಿತೋ ಅದು ಈಗ ಹಿಂದುಸ್ಥಾನದಲ್ಲಿದೆ ಆ ಕಾಲದಲ್ಲಿ ೧೦೦೦ ಕ್ಕೆ ೩೬ ರಂತೆ ಸಂತತಿಯುಂಟಾಗುತ್ತಿದ್ದಿತು. ಸಂತತಿ ನಿಯಮನದ ಚಟುವಟಿಕೆ ಪ್ರಾರಂಭವಾದಮೇಲೆ ಈಗ ಸಾವಿರಕ್ಕೆ ೧೫ ರಂತೆ ಸಂತತಿಯುಂಟಾಗಹತ್ತಿದೆ. ಈಗ ಹಿಂದುಸ್ಥಾನದಲ್ಲಿ ಪ್ರತಿ ವರುಷ ೨ ಲಕ್ಷ ಬಾಳಂತಿಯರು ಸಾಯುತ್ತಿದ್ದಾರೆ. ಸಂತತಿ ನಿಯಮನದ ಚಟುವಟಿಕೆ ನಡೆದು ಆಚರಣೆಯಲ್ಲಿ ಬಂದರೆ ೫೦ ಸಾವಿರ ಬಾಳಂತಿಯರು ಮಾತ್ರ ಸಾಯಬಹುದು.

ಮುನಸಿಪಾಲ್ಟಿ ಲೋಕಲ್‌ಬೋರ್ಡ ಮೊದಲಾದ ಸ್ಥಾನಿಕ ಸಂಸ್ಥೆಯವರು ಈ ಚಟುವಟಿಕೆಯನ್ನು ನಡೆಯಿಸಿ ಇಂಥ ವೈದ್ಯಾಲಯಗಳನ್ನು ಅಲ್ಲಲ್ಲಿ ಏರ್ಪಡಿಸಬೇಕಾಗಿ ಆ ದಿನದ ಸಭೆಯ ಅಧ್ಯಕ್ಷರು ಸೂಚಿಸಿದರು. ಈ ವಿಧವಾದ ಏರ್ಪಾಟುಗಳು ಜಾಗ್ರತೆಯಾಗುವುದರಲ್ಲಿ ಸಂದೇಹವಿಲ್ಲ. ಏಕೆಂದರೆ ಬಹು ಜನರಿಗೆ ಈಗ ಇದೇ ಬೇಕಾಗಿದೆ.

ಬೇವಿನ ಗಿಡದಲ್ಲಿ ಮಾವಿನ ಕಾಯಿಯೆ?

ಮಹಾತ್ಮಾ ಗಾಂಧಿಯವರು ಈ ಕೃತ್ರಿಮ ರೀತಿಯನ್ನು ತುಂಬಾ ವಿರೋಧಿಸಿದ್ದಾರೆ. ಮನೋನಿಗ್ರಹದಿಂದಲೇ ಸಂತತಿ ನಿಯಮನವಾಗಬೇಕು. ಇದೇ ವಿಹಿತ ಮತ್ತು ಕ್ಷೇಮಕರ. ಹೀಗೆ ಬ್ರಹ್ಮಚರ್ಯವ್ರತದಿಂದ ಸಂತತಿ ನಿಯಮನ ಮಾಡಿರೆಂದರೆ ಜನರಿಗೆ ಅದು ರುಚಿಸುವದೇ? ಗಾಂಧೀಜಿಯವರು ದೇವಲೋಕದವರು. ನಾವು ಮರ್ತ್ಯಲೋಕದವರು. ನಮಗೆ ಮನುಷ್ಯರು ಆಚರಿಸಬೇಕಾದ ರೀತಿ ನೀತಿಗಳು ಬೇಕು. ಅವರು ಹೇಳುವುದು ದೇವತೆಗಳ ಮಾರ್ಗ. ಎಂದು ಕೆಲವರು ಹೇಳುತ್ತಾರೆ.

ಈಗಿನ ವೈಜ್ಞಾನಿಕ ಯುಗದಲ್ಲಿ ಕಾಮವಿಕಾರಗಳ ಪೋಷಣಗೆ ಮತ್ತು ಉದ್ರೇಕಕ್ಕೆ ಬೇಕಷ್ಟು ಸೌಕರ್ಯಗಳಿವೆ. ಅವು ದಿನೇ ದಿನೇ ಹೆಚ್ಚುತ್ತಲಿವೆ. ಬಾಲಕರಲ್ಲಿಯೂ ಇಂಥ ನಾನಾ ಭಾವನೆಗಳುಂಟಾಗಿರುವ ಸಲಕರಣೆಗಳೂ ಚಟಗಳೂ ವಿಪರೀತವಾಗಿವೆ. ಇವೆಲ್ಲವುಗಳಿಂದ ಪೋಷಣೆಯಾಗುತ್ತಿರುವ ಮನಸ್ಸಿಗೆ ಬ್ರಹ್ಮಚರ್ಯದಿಂದ ಸಂತತಿ ನಿಯಮನ ಮಾಡುವ ಶಕ್ತಿಸಾಹಸಗಳುಂಟಾಗುವವೇ?

ಈಗಿನ ಇಂತಹ ವಾತಾವರಣದಲ್ಲಿ ಬ್ರಹ್ಮಚರ್ಯದಿಂದ ಸಂತತಿ ನಿಯಮನವಾಗಬೇಕೆಂದಪೇಕ್ಷಿಸಿದರೆ ಬೇವಿನ ಗಿಡದಲ್ಲಿ ಮಾವಿನ ಕಾಯನ್ನು ಹುಡುಕುವಂತೆಯೇ ಸರಿ. ಈಗಿನ ಕೃತ್ರಿಮ ಜೀವನವು ಮಾರ್ಪಡಬೇಕು. ಹಾಗಾದರೆ ಬ್ರಹ್ಮಚರ್ಯದಿಂದ ಸಂತತಿ ನಿಯಮನ ಈಗಿನ ಪಾಶ್ಚಾತ್ಯ ನವನಾಗರಿಕತೆಯ ಶಳಿಗೆ ಸಿಕ್ಕಿದ್ದರೆ ಕೃತ್ರಿಮ ರೀತಿಯಿಂದಲೇ ಸಂತತಿ ನಿಯಮನ.

ಇದು ಅನ್ಯಾಯ, ಅಸ್ವಾಭಾವಿಕ, ಅಹಿತಕರವೆಂಬುದಾಗಿದ್ದರೆ ಪ್ರಾಚೀನ ಗುರುಕುಲ ವಾತಾವರಣದ ಕಡೆ ತಿರುಗಬೇಕು. ಈಗಿನ ಥಳಕೇ ಇದ್ದರೆ ಬ್ರಚರ್ಯದಿಂದ ಸಂತತಿ ನಿಯಮನವಾಗುವುದಸಾಧ್ಯ. ಒಬ್ಬೊಬ್ಬ ವ್ಯಕ್ತಿಗಳ ಮನೋಧೈರ್ಯಕ್ಕೆನೋ ಸಾಧ್ಯ. ಆದರೆ ನಾವು ಈಗ ಪ್ರಸ್ತಾಪಿಸಿತಕ್ಕ ಸಂಗತಿ ಜನಸಾಮಾನ್ಯರನ್ನು ಕುರಿತಲ್ಲವೆ?

ಯೋಗಶಾಸ್ತ್ರದಲ್ಲಿ ವಜ್ರೋಲಿ ವಿಧಿ ಮೊದಲಾದ ಕೆಲವು ಕೈಕರಣಗಳಿವೆ. ಅವುಗಳಿಂದ ಕೂಡಾ “ಸಂಭೋಗ ಬೇಕು, ಸಂತತಿ ಬೇಡ” ವೆಂಬ ಸಮಸ್ಯ ದೂರಾಗುವಂತಿದೆ. ಬಾಲಕರಿಗೆ ೧೨ ರಿಂದ ೨೪ ವರುಷಗಳವರೆಗೆ ಕೊಡುವ ಗುಹ್ಯೇಂದ್ರಿಯ ಕೈಕರಣವು ಅವರನ್ನು ಇಚ್ಛಾಭೋಗಿಗಳನ್ನಾಗಿ ಮಾಡಿ ಸಂತತಿ ನಿಯಮನಗೊಳಿಸುವುದು. ಆದರೆ ಆ ಪ್ರಯೋಗಗಳೆಲ್ಲಾ ಕಷ್ಟಸಾಧ್ಯ. ಅಂತಹ ಶಿಕ್ಷಣವೂ ಅಡಗಿಹೋಗಿದೆ.

ಈಗುಳಿದುದು ಪಾಶ್ಚಾತ್ಯ ದೇಶದಿಂದ ಬಂದ ಕೃತ್ರಿಮೋಪಾಯ. ಅದನ್ನಾದರೂ ಸರಿಯಾಗಿ ತಿಳಿದುಕೊಂಡು ಆಚರಿಸಬೇಕು ಒಣಗೌರವಕ್ಕಾಗಿ ಮುಚ್ಚುಮರೆಗಳಿಂದ ಅನರ್ಥಕ್ಕೀಡಾಗಬಾರದು. ಅಂತು ಜನಸಂಖ್ಯೆಯೇನೋ ಕಡಿಮೆಯಾಗಬೇಕು. ಬ್ರಹ್ಮಚರ್ಯವು ಶ್ರೇಷ್ಠವಾದ ಪ್ರಥಮೋಪಾಯ. ಶಕ್ಯವಿಲ್ಲದವರಿಗೆ ಶಾಸ್ತ್ರೀಯ ಕೃತ್ರಿಮೋಪಾಯ.

ದೇವರ ದಾಸಿಮಯ್ಯನವರ ವಚನಬೋಧೆ.

(ದೇವರ ದಾಸಿಮಯ್ಯನವರು ಮಹಾಶಿವಶರಣರು. ಇವರ ವಚನಗಳು ಸೂತ್ರ ರೂಪವಾಗಿದ್ದರೂ ಸುಲಭವಾಗಿವೆ, ಬೆಟ್ಟಡಿಕೆಯಷ್ಟರಲ್ಲಿ ಬೆಟ್ಟದಷ್ಟು ಅರ್ಥ. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಟ್ಟಿವೆ.)

ಕೀಳು ದೋಹರ ಕಕ್ಕ, ಕೀಳು ಮಾದರ ಚೆನ್ನ, ಕೀಳು ಮಹಿಲ ದೇವ, ಕೀಳು ಉದ್ಭಟಯ್ಯ. ಕೀಳಿಂಗಲ್ಲದೆ ಹಯನು ಕರೆಯದು ಕಾಣಾ ರಾಮನಾಥಾ.

ಅರ್ಥ:—ಆಕಳು ಹಿಂಡ ಬೇಕಾದರೆ ಕೀಳು ಅಂದರೆ ಹುಲ್ಲು ಬೇಕೇ ಬೇಕು. ಅದು ಕೀಳು ಅಂದರೆ ಕಡಿಮೆ ಎಂದು ತಿಳಿದು ಅದರ ಉಪಯುಕ್ತತೆಯನ್ನೇನೂ ಲಕ್ಷಿಸದಿದ್ದರೆ ಹಯನು ಕೊಡುವ ಆಕಳು ಹೊಟ್ಟೆಗೆ ಇಲ್ಲದೆ ಸತ್ತು ಹೋಗುವದು. ಹಾಗೆಯೇ ಕೀಳು ಕುಲದವರೆಂದು ಯೋಗ್ಯ ಪುರುಷರನ್ನು ನಿರಾಕರಿಸಿ ಬಿಟ್ಟರೆ ಸಮಾಜ ಗೋವು ಶೀವ್ರವೇ ನಾಶವಾಗುವದು. ಕೀಳು ಎಂದರೆ ಹೀನ ಮನುಷ್ಯರು ಎಂದಲ್ಲ; ಆದರೆ ಸಮಾಜವೆಂಬ ಗೋವನ್ನು ರಕ್ಷಿಸುವ (ಕೀಳು = ಹುಲ್ಲು) ಗುಣವುಳ್ಳವರೆಂದು ತಿಳಿಯಬೇಕು. ಸಮಾಜಕ್ಕೆ ಇಂತಹ ಜನರು ಬೇಡವೆನ್ನುವದು ಹಿಂಡುವ ಆಕಳಿಗೆ ಹುಲ್ಲು ಬೇಡವೇ ಬೇಡ ಎಂದಂತಾಗುವದು. ಆದುದರಿಂದ ಇಂತಹ ಮಹನೀಯರಿಗೆ ಕೀಳೆನ್ನಲಾಗದು.

ವೇಷವ ಹೊತ್ತು ದೋಷದಲ್ಲಿ ನಡೆದಡೆ ದೋಷಕ್ಕೆ ವೇಷಭಾಂಡ. ಮೊದಲೇ ವೇಷವ ಕಂಡು ಲೇಸೆಂದು ಕೊಂಡಾಡುವ ದೋಷಿಗಳ ನರಕದಲ್ಲಿಕ್ಕುವ ಕಾಣಾ ರಾಮನಾಥ.

ಅರ್ಥ:— ವೇಷವನ್ನು ಕಂಡ ಕೂಡಲೇ ಆಚರಣೆಯೂ ಹಾಗೆಯೇ ಇದೆಯೆಂದು ತಿಳಿಯಲಾಗದು. ಲಾಂಛನವು ಆಚರಣೆಯ ಬಾಹ್ಯ ಚಿಹ್ನವೆಂಬುದೇನೋ ನಿಜ. ಆದರೆ ಆ ವೇಷದ ಮರೆಯಲ್ಲಿ ಅನೇಕ ಮೋಸಗಾರಿಕೆಯು ದೋಷಗಳೂ ಉಂಟಾಗಲು ಆಸ್ಪದವಿದೆ. ಆದುದರಿಂದ ಲಾಂಛನ ಕಂಡ ಕೂಡಲೆ 'ಬುದ್ಧೀ, ದೊಡ್ಡವರು,' ಇತ್ಯಾದಿಯಾಗಿ ಹೊಗಳಿದರೆ ಆ ಹೊಗಳುವ ಜನರೂ ದೋಷಿಗಳೇ ಆಗುತ್ತಾರೆ. ಅವರು ಸಹ ನರಕಕ್ಕೆ ಈಡಾಗುತ್ತಾರೆ. ಆದುದರಿಂದ ಲಾಂಛನಧಾರಿಗಳ ಕಂಡರೆ ಜಾಗರೂಕತೆಯಿಂದಿರಬೇಕು. ಲಾಂಛನವು ಮಾನನೀಯವೆಂಬ ಸಂಗತಿಯೇ ಬೇರೆ. ಆ ಲಾಂಛನ ಧರಿಸಿದ ವೇಷಗಾರರೆಲ್ಲರೂ ಮಾನನೀಯರೆಂಬ ಸಂಗತಿಯೇ ಬೇರೆ. ಪೂಜ್ಯ ವಸ್ತ್ರಾಭರಣ ಧರಿಸಿರುವರೆಂದು ಪೂಜ್ಯತೆ ಕೊಡಲಾಗದು. ಹಾಗೆ ಕೊಟ್ಟದ್ದಾದರೆ ಸಮಾಜದಲ್ಲಿ ಮೂಢ ಕಲ್ಪನೆಯು ಹೆಚ್ಚಾಗಿ ವೇಷ ಹಾಕುವವರೂ ಮತ್ತು ಅದನ್ನು ಮಾನಿಸುವವರೂ ಕೂಡಿಯೇ ಅಧೋಗತಿಯನ್ನು ಹೊಂದುವರು.

ಮಡದಿಯ ಪ್ರಾಣಕ್ಕೆ ಮೊಲೆಮುಡಿ ಇದ್ದಿತ್ತೆ? ಒಡೆಯರ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ? ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೆ ಪ್ರಾಣದಲ್ಲಿ ಹಿಡಿಗೋಲ? ನೀ ಮೊಪಚಿಕ್ಕಿದ ಕೊಡಕ ಈ ಲೋಕದ ಜಡರೆತ್ತ ಬಲ್ಲರೈ ರಾಮನಾಥ.

ಅರ್ಥ:— ಪ್ರಾಣಕ್ಕೆ ಸ್ತ್ರೀ ಪುರುಷವೆಂಬ ಭೇದವಿಲ್ಲ. ಹೊರಗೆ ಮಾತ್ರ ಅಂಗವಿಶಿಷ್ಟತೆಯಿಂದ ಸ್ತ್ರೀ ಅಥವಾ ಪುರುಷನೆಂಬ ಸಂಜ್ಞೆಯುಂಟು ಆ ಕಾರಣದಿಂದಲೇ ಅವರಲ್ಲಿ ಕೀಳು ಮೇಲುಗಳನ್ನು ಕಲ್ಪಿಸಲಿಕ್ಕೆ ಬಾರದು. ಯಜ್ಞೋಪವೀತವನ್ನು ಧರಿಸಿದವನಿಗೆ ದ್ವಿಜನೆಂದೂ ಹಿಡಿಗೋಲ ಹಿಡಿದವನಿಗೆ ಅಂತ್ಯಜನೆಂದೂ ಎನ್ನುವದುಂಟಷ್ಟೆ. ಆದರೆ ಇಬ್ಬರ ಪ್ರಾಣಗಳೂ ಒಂದೇ ತೆರವಾಗಿರುತ್ತವಲ್ಲವೆ? ದ್ವಿಜನ ಪ್ರಾಣಕ್ಕೇನು ಯಜ್ಞೋಪವೀತವಿಲ್ಲ; ಅಂತ್ಯಜನ ಪ್ರಾಣದಲ್ಲೇನು ಹಿಡಿಗೋಲಿಲ್ಲ. ಯಾರ ಪ್ರಾಣವು ಹೆಚ್ಚು ಶುದ್ಧವಿರುವದೋ ಅವರು ಹೆಚ್ಚು. ಆದುದರಿಂದ ಧಾರ್ಮಿಕ ವಿಷಯದಲ್ಲಿ ಲಿಂಗಭೇದವನ್ನಾಗಲಿ, ವರ್ಣಭೇದವನ್ನಾಗಲಿ ಮಾಡಕೂಡದು. ಎಲ್ಲರೂ ಸರಿಸಮಾನರೆಂದು ದಾಸಿಮಯ್ಯನವರು ಹೇಳಿದ್ದಾರೆ.

ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ. ಇರುಳೆಲ್ಲಾ ನಡೆದನಾ ಸುಂಕಕ್ಕಂಜಿ. ಕಳವೆ ಎಲ್ಲ ಹೋಗಿ ಬರಿಯ ಗೋಣಿ ಉಳಿಯಿತ್ತು. ಅಳಿಮನದವನ ಭಕ್ತಿ ಇಂತಾಯಿತು ರಾಮನಾಥ.

ಅರ್ಥ:— ಕ್ಷುದ್ರ ಮನದಿಂದ ಭಕ್ತಿಯ ಮಾಡುವಂಥವರ ಬಾಳ್ವೆ ಹೇಗಾಗುವದೆಂಬುದನ್ನು ಒಂದು ಉದಾಹರಣೆ ಕೊಟ್ಟು ತಿಳಿಸಿದ್ದಾರೆ.. ಒಬ್ಬಾನೊಬ್ಬ ಮನುಷ್ಯನು ಒಂದು ಗೋಣಿ ತುಂಬ ಕಳವೆ ಎಂದರೆ ಬತ್ತವನ್ನು ಹೊತ್ತುಕೊಂಡು ಸುಂಕ ಕೊಡಬಾರದೆಂದೆಣಿಸಿ ರಾತ್ರಿಯಲ್ಲಿಯೇ ಹೊರಟನು. ರಾತ್ರಿಯೆಲ್ಲಾ ನಡೆದ. ಸುಂಕ ತಪ್ಪಿಸಿದೆನೆಂದೇ ಅವನಿಗೆ ತನ್ನಲ್ಲಿಯೇ ಹಿಗ್ಗು. ಬೆಳಗು ಹರಿಯುವಷ್ಟರಲ್ಲಿ ಗೋಣಿ ಎಲ್ಲಾ ಬರಿದಾಗಿದೆ. ಗೋಣಿಯಲ್ಲೊಂದು ದೊಡ್ಡ ತೂತು ಬಿದ್ದು ದಾರಿಯುದ್ದಕ್ಕೂ ಬತ್ತವು ಸೋರಿ ಹೋಗಿರುವದು ಅವನ ಲಕ್ಷಕ್ಕೆ ಬಂತು. ಮಾಡುತ್ತಾನೇನು? ಮೊದಲೇ ಕತ್ತಲೆ. ಬತ್ತ ಸೋರುವದು ಅವನಿಗೆ ಹೇಗೆ ಕಾಣಬೇಕು? ಹಾಗೆಯೇ ಅಜ್ಞಾನವೆಂಬ ಕತ್ತಲೆಯಲ್ಲಿ ತನು ಮನ ಧನವೆಂಬ ತ್ರಿವಿಧವನ್ನು ಯಾರಿಗೂ ಕೊಡಬಾರದೆಂದು ಕಳ್ಳತನದಿಂದ ವ್ಯವಹರಿಸುವವನು ಕಡೆಗೆ ಅವನ್ನು ನಿಶ್ಚಯವಾಗಿ ಕಳೆದುಕೊಂಡು ಉಭಯ ದುಃಖಕ್ಕೀಡಾಗುವನು. ಭಕ್ತಿಯನ್ನು ಮಾಡಬೇಕಾದರೆ ವಂಚನೆಯಿಲ್ಲದೆ ಮಾಡಬೇಕೆಂದು ತಿಳಿಸಿರುವರು.

—ಪಾಟೀಲ ಲಿಂಗನಗೌಡರು.

—ಬಂಗಾಲಿ ತರುಣರ ಮನಸ್ಸು ಅತ್ಯಾಚಾರದ ಕಡೆಗೆ ಸೆಳೆಯುವಂತೆ ಮಾಡುವದಕ್ಕಾಗಿ ರಾಷ್ಟ್ರೀಯ ಸಭೆಯ ಮುಂದಾಳುವಾದ ಡಾ. ಬಿ. ಸಿ. ರಾಯ ಇವರು ಒಂದು ಮಂಡಲವನ್ನೇರ್ಪಡಿಸಿರುವರು. ಅದಕ್ಕಾಗಿ ೩ ಲಕ್ಷ ರೂಪಾಯಿಗಳನ್ನು ಕೂಡಿಸಿದ್ದಾರೆ.

ಕಿವುಡರು ಹಲ್ಲಿನಿಂದ ಕೇಳಬಹುದು,

ಕಿವುಡರು ಕೇಳುವಂತೆ ಮಾಡಲು ಯಂತ್ರದ ಅನೇಕ ರೀತಿಗಳು ಉಂಟಾಗಿವೆ. ಅವುಗಳಲ್ಲಿ ಹಲ್ಲಿನ ಮುಖಾಂತರ ಅವರಿಗೆ ಕೇಳಿಸುವಂಥ ಒಂದು ಯಂತ್ರವು ಕೂಡಾ ಆಗಿದೆ. ಅದು ಚಿಕ್ಕದೇ ಇರುತ್ತದೆ. ಸಣ್ಣ ಚೀಲದಲ್ಲಿಯೂ ಅದನ್ನು ಒಯ್ಯಬಹುದು. ಅದೂ ಈಗುಂಟಾಗಿರುವ ಗ್ರಾಮೋಫೋನ, ಮಾಯಕ್ರೋಫೋನಗಳಂತೆಯೇ ಮಾಡಲ್ಪಟ್ಟಿದೆ.

ಈ ಯಂತ್ರದ ಕಾರ್ಯವನ್ನು ಲಂಡನ್ ವೈದ್ಯ ಮಹಾವಿದ್ಯಾಲಯದಲ್ಲಿ ತೋರಿಸಲಾಯಿತು. ಧ್ವನಿಯ ತರಂಗಗಳು ಈ ಯಂತ್ರಕ್ಕೆ ಅಪ್ಪಳಿಸಿ ಅದರಲ್ಲಿಯೂ ಅವೇ ತರಂಗಗಳನ್ನುಂಟು ಮಾಡುತ್ತವೆ. ಅವಾಗ್ಗೆ ಆ ಯಂತ್ರದ ತಗಡನ್ನು ಹಲ್ಲಿನಲ್ಲಿ ಹಿಡಿದರೆ ಕಿವುಡರಿಗೂ ಸಹ ಸ್ಪಷ್ಟ ಕೇಳಿಸುತ್ತ

ವೇದಕಾಲದ ವಿವಾಹ ರೀತಿ.

ವೇದಗಳು ಬಹು ಪುರಾತನ ಗ್ರಂಥಗಳು. ಮನುಷ್ಯ ಜಾತಿ ಬಹು ಹಿಂದಿನ ರೀತಿ ನೀತಿಗಳನ್ನು ಇವುಗಳಲ್ಲಿ ಕಾಣಬಹುದು. ರ್ಯರೆಂಬ ಒಂದು ಗುಂಪಿನವರ ಆಚಾರ ವಿಚಾರಗಳು ಇವುಗ ವೆ.

ವೇದಗಳೆಂದರೆ ದೇವರಿಂದ ಬಂದವು. ಅವುಗಳನ್ನು ಮನು ರು ಹೇಳಿಲ್ಲ. ಬ್ರಹ್ಮನ ನಾಲ್ಕು ಮುಖದಿಂದ ಹುಟ್ಟಿದವು. ನ ಐದು ಮುಖಗಳಿಂದ ಬಂದವು. ಅವುಗಳಲ್ಲಿರುವ ಸಂಗತಿ ಪರಮ ಪವಿತ್ರವಾದವುಗಳು. ಅವುಗಳಲ್ಲಿ ಹೇಳಿರುವಂತೆಯೇ ಾವಾಗಲೂ ಎಲ್ಲರೂ ನಡೆದುಕೊಳ್ಳಬೇಕು. ಅದರಲ್ಲಿರುವ ಒಂದ ರವನ್ನು ಕೂಡಾ ಮೀರಿ ನಡೆದದ್ದಾರೆ ಪಾಪ. ಎಂದು ತಿಳಿಯ ಕ್ಕಿದ್ದು ಮೂಢತನವೆಂಬುದನ್ನೇನು ಬಿಚ್ಚಿ ಹೇಳಬೇಕಾಗಿಲ್ಲ. ಹೀಗೆ ದವರು ಬಹು ಕತ್ತಲೆಯಲ್ಲಿದ್ದಾರೆಂದರೆ ಸಾಕು.

ಯಾವ ಧರ್ಮದವರಾದರೂ ತಮ್ಮ ಧರ್ಮ ಗ್ರಂಥಗಳು ದೇವ ದ ಬಂದವುಗಳೆಂದು ಹೇಳಿದರೆ ಅವರು ಇನ್ನೂ ಜ್ಞಾನದ ಬೆಳ ಬಂದಿಲ್ಲವೆಂದೇ ತಿಳಿಯಬೇಕು. ದೇವರು ಪುಸ್ತಕಗಳನ್ನು ದಿಲ್ಲ. ಬರೆಯುವುದೂ ಇಲ್ಲ. ಬರೆಯುವವರೆಲ್ಲಾ ಮನುಷ್ಯರೆ. ನರೆ ಅವರು ಜ್ಞಾನಿಗಳಿರಬಹುದು.

ಆದುದರಿಂದ ವೇದಗಳಲ್ಲಿಯ ಸಂಗತಿಗಳೂ ಆ ಕಾಲದ ಬುದ್ಧಿ ತರು ಹೇಳಿದವು. ಅವರು ಅನುಭವಿಸಿದವು. ಆ ಕಾಲದ ಜನ ದ್ದ ಆಚಾರ ವಿಚಾರಗಳು. ಅವುಗಳಲ್ಲಿ ಎಷ್ಟೋ ಒಳ್ಳೆಯವು ವೆ. ಎಷ್ಟೋ ಬಹು ಹೀನವಾದವುಗಳೂ ಇವೆ. ನಾವು ಒಳ್ಳೆಯ ಗಳನ್ನು ತೆಗೆದುಕೊಂಡು ಕೀಳಾಗಿರುವವುಗಳನ್ನು ಬಿಟ್ಟುಬಿಡ ಕು. ಆಗಿನ ಕಾಲಕ್ಕೆ ಅವರ ಬುದ್ಧಿಗೆ ಅವು ಸರಿತೋರಿರ ಹುದು. ಈಗ ಅವು ಅಹಿತಕರವಾಗಿದ್ದರೆ ನಾವೇಕೆ ಅನುಸರಿಸ ಕು ?

ಆ ಕಾಲದ ವಿವಾಹ ರೀತಿಯು ವೇದಗಳಲ್ಲಿ ಉಕ್ತವಾಗಿದೆ. ಶಿ ವಿಶ್ವವಿದ್ಯಾಲಯದ ಶ್ರೀಮಾನ್ ಠಾಕುರ ಲಕ್ಷ್ಮೀನಾರಾಯಣ ಹ ಎಂಬ ವೇದಜ್ಞರು ವೇದಕಾಲದ ವಿವಾಹ ರೀತಿಯನ್ನು ರಿತು ಒಂದು ಲೇಖನವನ್ನು ಬರೆದಿದ್ದಾರೆ. ಅದರಲ್ಲಿ ಅವರು ಪ್ರಕಾರ ತಿಳಿಸಿದ್ದಾರೆ.

“ ಋಗ್ವೇದವನ್ನು ರಚಿಸಿದ ಮಹಾ ಮಹಾ ಋಷಿಗಳು ಮ್ಮಂತೆಯೇ ಪ್ರಾಪಂಚಿಕರು. ಜನಸಮೂಹದಲ್ಲಿಯೇ ವಾಸಿಸಿ ವರು. ಲಗ್ನವಾಗಿ ಮಕ್ಕಳನ್ನು ಹೆತ್ತವರು. ಹಣವಿನ ಆದಾಯ ಟ್ಟಗಳ ಅನೇಕ ಕಾರ್ಯಗಳನ್ನು ಮಾಡಿದವರು. ವಿವಾಹ ದ್ಧತಿಯು ದಿನೇ ದಿನೇ ಸುಧಾರಿಸುತ್ತಾ ಬಂದುದಾಗಿದೆ. ಅತಿ ್ರಾಚೀನ ಕಾಲದಲ್ಲಿ ವಿವಾಹವೇ ಇರಲಿಲ್ಲ. ಜನರು ತಮ್ಮ ಇಷ್ಟಾ ಸಾರ ಸಂಭೋಗ ಕ್ರಿಯೆಯನ್ನಾಚರಿಸುತ್ತಿದ್ದರು. ಅದರ ದುಷ್ಫ ವನ್ನು ನೋಡಿ ಶ್ವೇತಕೇತು ಎಂಬಾತನೇ ವಿವಾಹ ಪದ್ಧತಿ ಯುನ್ನು ಪ್ರಾರಂಭಿಸಿದನು.

ಆರ್ಯ ಜನರ ವಿವಾಹ ಪದ್ಧತಿಗೆ ಶ್ವೇತಕೇತು ಮೂಲ ಪುರುಷ. ಮಿಶ್ರ ದೇಶದ ಜನರಲ್ಲಿ ಮೆನಸ್ ಎಂಬಾತನು ಚೀನ ಜನರಲ್ಲಿ ಫೋಹಿ ಎಂಬಾತನು ಗ್ರೀಕರಲ್ಲಿ ಕೆಕ್ರೋಪ್ಸ್ ಎಂಬಾ ತನು ವಿವಾಹ ಪದ್ಧತಿಯನ್ನುಂಟುಮಾಡಿದವರಾಗಿದ್ದಾರೆ.

ವೇದಕಾಲದಲ್ಲಿ ಈಗಿನಂತೆ ಜಾತಿಗಳು ಏರ್ಪಟ್ಟಿದ್ದಿಲ್ಲ. ಋಗ್ವೇದದ (೧೦-೯೦-೧೨) ನೆಯ ಮಂತ್ರದಿಂದ ವರ್ಣಗಳ ವ್ಯವಸ್ಥೆಯಿದ್ದಿತೆಂದು ಗೊತ್ತಾಗುತ್ತದೆ. ಆದರೆ ಈ ಮಂತ್ರವು ವೇದ ಕಾಲದ ಕೊನೆಯ ಭಾಗದಲ್ಲಿಯ ಸ್ಥಿತಿಯನ್ನು ತೋರಿಸ ತಕ್ಕದ್ದಾಗಿದೆಯೆಂದು ಪಂಡಿತರು ಹೇಳುತ್ತಿದ್ದಾರೆ. ಆದಿಭಾಗದಲ್ಲಿ ವರ್ಣಗಳೂ ಇರಲಿಲ್ಲ.

ಆರ್ಯ ಮತ್ತು ಅನಾರ್ಯರಲ್ಲಿ ಆಗ ವಿವಾಹವಾಗುತ್ತಿದ್ದಿತು. ಅನಾರ್ಯ ದಾಸಿಯು ಆರ್ಯ ಪುರುಷನಲ್ಲಿ ವಿವಾಹಿತ ಸ್ತ್ರೀಯಳಂತೆಯೇ ಇರುತ್ತಿದ್ದಳು. ಯಜುರ್ವೇದ ಸಂಹಿತೆಯ ಅಶ್ವಮೇಧ ಖಂಡದಲ್ಲಿ ಆರ್ಯರ ಮತ್ತು ಶೂದ್ರರ ವಿವಾಹದ ಅನೇಕ ದೃಷ್ಟಾಂತಗಳಿವೆ. ಅನಾರ್ಯ ದಾಸಿಯು ಆರ್ಯ ಪುರುಷನನ್ನು ವರಿಸಲು ಬಹು ಪ್ರಯತ್ನಿಸುತ್ತಿದ್ದಳು.

ಮಕ್ಕಳ ಪ್ರಾಪ್ತಿಗಾಗಿ ಬೇಕಾದ ಪುರುಷನ ಕೂಡಲು ವೇದ ಕಾಲದಲ್ಲಿ ಆರ್ಯ ವಿಧವಾ ಸ್ತ್ರೀಯಳಿಗೆ ಅವಕಾಶವಿದ್ದಿತು. ವಿಧವಾ ವಿವಾಹವು ಈಗಿನಂತೆ ಪ್ರಚಲಿತವಿರಲಿಲ್ಲ. ಆದರೂ ವಿರಳವಾಗಿ ಆಗುತ್ತಿದ್ದಿತು. ವಿಶೇಷ ಪ್ರಸಂಗದಲ್ಲಿ ಗುರು ಪತ್ನಿಯ ಇಚ್ಛಾನುಸಾರ ಶಿಷ್ಯನು ಸಂಭೋಗಕ್ಕೆ ಅನುಕೂಲವಾಗುತ್ತಿದ್ದನು. ಶ್ವೇತಕೇತು ಹೀಗೆಯೇ ಹುಟ್ಟಿದವನೆಂದು ಹೇಳುವುದುಂಟು.

ಪುತ್ರ ಪ್ರಾಪ್ತಿಯ ನಂತರ ವಿಧವಾ ವಿವಾಹವಾಗಲಿ ಅಥವಾ ಇಚ್ಛಾ ಪುರುಷನನ್ನು ಕೂಡುವ ನಿಯೋಗವಾಗಲಿ ಸಂಭವಿಸುತ್ತಿರಲಿಲ್ಲ. ವಿವಾಹವು ಪ್ರೌಢತನದಲ್ಲಿಯೇ ನಡೆಯುತ್ತಿದ್ದುದರಿಂದ ವೈಧವ್ಯದ ದುಃಖವು ಬಹು ಕಡಿಮೆಯಾಗಿದ್ದಿತು. ಲಗ್ನಕ್ಕೆ ವರನನ್ನು ಗೊತ್ತುಪಡಿಸುವುದು ಹೆಚ್ಚಾಗಿ ಕನ್ಯೆಯನ್ನೇ ಅವಲಂಬಿಸಿತ್ತು. ಅವಳು ತನಗೆ ಬೇಕಾದ ರೂಪ, ಧನ, ಕುಲ, ಯೌವನಗಳ ವರನನ್ನು ಆರಿಸುತ್ತಿದ್ದಳು. ಋಗ್ವೇದ (೧-೧೧೭-೧೯) ನೆಯ ಮಂತ್ರದಿಂದ ಕನ್ಯೆಯ ಇಚ್ಛೆಗೆ ವಿರೋಧವಾಗಿಯೂ ರಾಕ್ಷಸಿ ರೀತಿಯ ವಿವಾಹವಾದ ದೃಷ್ಟಾಂತ ಗೊತ್ತಾಗುತ್ತದೆ. ಆದರೆ ಹೀಗಾಗುತ್ತಿದ್ದುದು ಬಹು ವಿರಳ.

ತಂದೆಯ ಮತ್ತು ಹಿರಿಯ ಅಣ್ಣನ ಅನುಮತಿಯನ್ನು ವಿವಾಹವಾಗುವವಳು ಆವಶ್ಯಕವಾಗಿ ಹೊಂದಬೇಕಾಗುತ್ತಿತ್ತು. ಅನೇಕ ಸ್ತ್ರೀಯರು ತಮಗೆ ಯುಕ್ತವಾದ ಪುರುಷನು ದೊರೆಯದಿದ್ದುದರಿಂದ ಅವಿವಾಹಿತವಾಗಿ ತಂದೆಯ ಮನೆಯಲ್ಲಿಯೇ ಇರುತ್ತಿದ್ದರು. ಕೆಲವರು ಬಹು ಹೆಚ್ಚಿನ ಪ್ರಾಯದಲ್ಲಿ ಲಗ್ನವಾದುದೂ ಉಂಟು. ಪತಿ ಪತ್ನಿಯರ ಪ್ರಥಮ ಸಂಬಂಧ ದಿನೋತ್ಸವವು ಬಹು ಆಡಂಬರದ್ದಿರುತ್ತಿದ್ದಿತು.

ಯೌವನದ ಮದದಲ್ಲಿ ತಪ್ಪುದಾರಿಯಿಂದ ನಡೆದ ಒಬ್ಬ ಸ್ತ್ರೀಯಳು ವೇಶ್ಯಾ ವೃತ್ತಿಯನ್ನು ಅನುಸರಿಸಿದ ದೃಷ್ಟಾಂತ ಋಗ್ವೇದದ (೧-೧೩೪-೭) ನೆಯ ಮಂತ್ರದಿಂದ ಗೊತ್ತಾಗುತ್ತದೆ. ಕತ್ತಲೆ ಬೆಳಕು ಮತ್ತು ಸೂರ್ಯ ಕಿರಣ ಚಂದ್ರ ಕಿರಣಗಳ ಸಮ್ಮೇಳನಗಳನ್ನು ಕುರಿತು ಕೆಲವು ವರ್ಣನೆಗಳಿವೆ. ಅವು ನಿಜವಾದ ವಿವಾಹಗಳಲ್ಲ. ಆ ಅಲಂಕಾರದ ಭಾಷೆಯಿಂದ ತಂದೆ-ಮಗಳ ಅಣ್ಣಾ ತಂಗಿಗಳ ಸಂಬಂಧವಿತ್ತೆಂದು ಹೇಳುವುದು ತಪ್ಪು.”

ಈ ಎಲ್ಲ ಸಂಗತಿಗಳನ್ನು ನೋಡಿದರೆ ವೇದಕಾಲದ ವಿವಾಹ ಪದ್ಧತಿಯು ಈಗಿನಂತೆಯೇ ಸ್ವಲ್ಪ ಹೆಚ್ಚು ಕಡಿಮೆಯಾಗಿ ಇದ್ದಿತೆಂದು ಹೇಳಬಹುದು. ಕೆಲವು ಸಂಗತಿಗಳಲ್ಲಿ ಈಗಿನದಕಿಂತ ಹೀನವಾಗಿದ್ದಿತು. ಅದು ಆಗಿನ ಕಾಲಕ್ಕೆ ಯುಕ್ತ ತೋರಿರಬಹುದು.

— ಜಬಲಪುರದಲ್ಲಿ ನಾ. ಶಾಸ್ತ್ರಿಗಳ ಭಾಷಣವಾಯಿತು. ಪ್ರಾಮಾಣಿಕತನದಿಂದಲೂ ಸಾದಾತನದಿಂದಲೂ ಲೋಕಹಿತ ಕಾರ್ಯವನ್ನು ಕೈಕೊಳ್ಳಿರೆಂದು ಅವರು ವಿದ್ಯಾರ್ಥಿಗಳಿಗೆ ಉಪದೇಶಿಸಿದರು.



ಶಾ. ಶ. ೧೮೫೬ ನೆಯ ಫಾಲ್ಗುಣ ಬ|| ೫ ಸೋಮವಾರ.

ಮತ್ತೆ ಘನ ಘೋರ ಯುದ್ಧ!

ಯುರೋಪದ ಮಹಾಯುದ್ಧ ಸಂಪೂರ್ಣ ಮುಗಿದು ೧೬ ವರ್ಷಗಳಾದವು. ಆಗಿನ ಘೋರ ಯುದ್ಧದ ಅನೇಕ ದುರವಸ್ಥೆಗಳು ಇನ್ನೂ ದೂರಾಗಿಲ್ಲ. ಈಗ ಮತ್ತೆ ಇಷ್ಟರಲ್ಲೇ ಘನ ಘೋರ ಯುದ್ಧ ಪ್ರಾರಂಭವಾಗುವ ಸ್ಪಷ್ಟ ಲಕ್ಷಣಗಳು ತೋರುತ್ತಿವೆ ಜಗತ್ತಿನ ಪ್ರಸಿದ್ಧ ರಾಷ್ಟ್ರಗಳೆಲ್ಲಾ ಯುದ್ಧದ ಸಿದ್ಧತೆಯನ್ನು ಬಹು ಪ್ರಬಲತರವಾಗಿಯೇ ನಡೆಸಿವೆ.

ಮಹಾಯುದ್ಧವು ಮುಗಿದ ನಂತರ ಜರ್ಮನಿಯು ತಲೆ ಎತ್ತದಂತೆ ಮಿತ್ರ ಮಂಡಲಿಯವರು ಅದರ ಮೇಲೆ ಪ್ರತಿಬಂಧಗಳನ್ನು ಹೇರಿದ್ದರು. ಅಗಣಿತವಾದ ಯುದ್ಧದ ವೆಚ್ಚವನ್ನು ಜರ್ಮನಿಯು ಕೊಡಬೇಕಾಗಿತ್ತು. ಅದರಿಂದ ಅಷ್ಟು ಹಣ ಬರುವುದು ಶಕ್ಯವಾಗಲಿಲ್ಲ. ಸಾಲದ ದ್ರವ್ಯವೂ ವಿಶೇಷವಾಗಿ ಬರಬೇಕಾಗಿತ್ತು. ಅದೂ ಬರಲಿಲ್ಲ. ಈ ಆರ್ಥಿಕ ನಿರ್ಬಂಧಗಳು ಕೊನೆಗೆ ಮಿತ್ರ ರಾಷ್ಟ್ರದವರಿಗೂ ಬಾಧಕವಾಗಿ ಪರಿಣಮಿಸಿದವು. ಜಗತ್ತಿನ ಭಯಂಕರವಾದ ಈಗಿನ ಆರ್ಥಿಕ ಮುಗ್ಗಟ್ಟು ಆಗಿನ ಮಿತ್ರ ಮಂಡಲಿಯವರ ನಿರ್ಬಂಧದ ಫಲವಾಗಿಯೇ ಪರಿಣಮಿಸಿತು.

ಜರ್ಮನಿಯು ಆರ್ಥಿಕ ಭಾರವನ್ನು ತಪ್ಪಿಸಿಕೊಂಡು ತಲೆ ಎತ್ತಿದ ಮೇಲೆ ಶಸ್ತ್ರ ಸನ್ಯಾಸದ ನಿರ್ಬಂಧವನ್ನು ಅದಕ್ಕೆ ಹಾಕಿದ್ದಾಯಿತು. ಅದು ಆಗ ರಾಷ್ಟ್ರಸಂಘವಿಂದಲೇ ಹೊರ ಬಂದಿತು. ಜರ್ಮನಿಯು ಮತ್ತೆ ಬಲಿತಿತೆಂದು ಫ್ರಾನ್ಸ ದೇಶಕ್ಕೆ ಚಿಂತೆ. ಅಷ್ಟರಲ್ಲಿ ಸಾರ ಪ್ರಾಂತದ ಕಲಹ ಮುಂದೆ ಬಂದಿತು. ಅದು ಜರ್ಮನಿಯ ಪಾಲಾದುದರಿಂದ ಫ್ರಾನ್ಸ ದೇಶಕ್ಕೆ ಮತ್ತಷ್ಟು ಕ್ರೋಧ ಭಯಗಳು ಹೆಚ್ಚಿದವು.

ಆಗ ಫ್ರಾನ್ಸ ದೇಶವು ವ್ಹರ್ಸಯಾ ಎಂಬಲ್ಲಿ ಗೊತ್ತಾದ ಸಂಧಿಯನ್ನು ಅತಿಕ್ರಮಿಸಿ ಸೈನ್ಯ ಸಿದ್ಧತೆಯನ್ನು ಮಾಡಲುಪಕ್ರಮಿಸಿತು. ಗ್ರೇಟ್‌ಬ್ರಿಟನ್ ರಾಷ್ಟ್ರವೂ ಸೈನ್ಯ ಶಾಖೆಯ ವೆಚ್ಚವನ್ನು ಹೆಚ್ಚಿಸಲಾರಂಭಿಸಿತು. ಇಟಲಿ ದೇಶವಂತೂ ಯುದ್ಧವು ನಾಳೆಯೇ ಪ್ರಾರಂಭವಾಗುತ್ತದೆಂದು ಹೇಳಿ ಪ್ರಚಂಡ ಸಿದ್ಧತೆಯಲ್ಲಿ ಈ ಮುಂಚೆಯೇ ಇದೆ.

ಎಂದಮೇಲೆ ಜರ್ಮನಿಯು ಸುಮ್ಮನೆ ಕುಳಿತುಕೊಳ್ಳುವುದೆ? ಹೇರ್ ಹಿಟ್ಲರ್‌ರವರೇನು ಕೈಯಲ್ಲಿ ಜಪಮಾಲೆಯನ್ನು ಹಿಡಿದವರೇ? ಮೊದಲೇ ಅವರಿಗೆ ಶಸ್ತ್ರ ಧರಿಸಲು ಕೈಗಳು ಕಡಿಮೆ! ಹೀಗೆ ಘೋರ ರಣ ಭೇರಿಯ ಧ್ವನಿಯನ್ನು ಕೇಳಿದ ಮೇಲೆ ಅವರಿಗೆ ನಿದ್ದೆ ಬರುವುದೇ? ಜಗತ್ತಿನಲ್ಲಿ ಪ್ರಚಂಡವಾದ ಯುದ್ಧವು ಇಷ್ಟರಲ್ಲೇ ಪ್ರಾರಂಭವಾಗುವುದಂತಲೂ ಅದಕ್ಕೋಸ್ಕರ ಜರ್ಮನಿಯು ಸೈನ್ಯವನ್ನು ಹೆಚ್ಚಿಸಲು ಸಾರ್ವತ್ರಿಕ ಯುದ್ಧ ಶಿಕ್ಷಣವನ್ನು ಪ್ರಾರಂಭಿಸುತ್ತದೆಂತಲೂ ಕಳೆದ ವಾರ ಪ್ರಕಟಿಸಿದರು.

ಇದೇ ಎಪ್ರಿಲ್ ೧ ನೆಯ ತಾರೀಖಿನಿಂದ ಜರ್ಮನಿಯಲ್ಲಿ ಸಾರ್ವತ್ರಿಕ ಯುದ್ಧ ಶಿಕ್ಷಣವು ಪ್ರಾರಂಭವಾಗುವುದು. ೨೧ ರಿಂದ ೨೫ ವರುಷಗಳೊಳಗಿನ ಪ್ರತಿಯೊಬ್ಬ ಪುರುಷನೂ ಯುದ್ಧ ಕಲೆಯನ್ನು ಕಲಿಯಲೇ ಬೇಕು. ೨೫ ರಿಂದ ೩೦ ವರುಷಗಳೊಳಗಿನವರೆಲ್ಲಾ ಕಾದಿಟ್ಟ ಸೈನ್ಯಕ್ಕೆ ಸಂಬಂಧಿಸಿದ ಶಿಕ್ಷಣ ಹೊಂದಲೇಬೇಕು. ಈ ವರುಷ ೫-೬ ಲಕ್ಷ ತರುಣರು ಯುದ್ಧ ಶಿಕ್ಷಣ ಹೊಂದುವರು.

ಜರ್ಮನಿಯ ಈ ಪ್ರಯತ್ನದಿಂದ ಯುರೋಪ ಖಂಡವೆಲ್ಲಾ ಈಗ ಬೆದರಿದೆ. ಸೊವ್ಹಿಎಟ್ ರಶಿಯಾ ಸರಕಾರವು ಈಗ ೯|| ಲಕ್ಷ ಸೈನ್ಯವನ್ನು ಸಿದ್ಧಗೊಳಿಸಿದೆ. ಜಪಾನ ದೇಶವಂತೂ ಚೀನ ದೇಶವನ್ನು ನುಂಗುತ್ತಾ ಇದೆ. ಇದರ ಅತಿಕ್ರಮಣದ ಸಾಹಸವನ್ನು ನೋಡಿ ಅಮೇರಿಕೆಯೂ ಸೈನ್ಯವೃದ್ಧಿಗೆ ಪ್ರಯತ್ನಿಸಿತು. ಈ ಪ್ರಕಾರ ಜಗತ್ತಿನ ಪ್ರಮುಖ ರಾಷ್ಟ್ರಗಳೆಲ್ಲಾ ಯುದ್ಧೋಪಕರಣಗಳನ್ನು ಸಿದ್ಧಗೊಳಿಸುತ್ತಿರುವುದು ಮತ್ತೆ ಘನ ಘೋರ ಯುದ್ಧವು ಇಷ್ಟರಲ್ಲೇ ಪ್ರಾರಂಭವಾಗುವ ಸ್ಪಷ್ಟ ಲಕ್ಷಣವಲ್ಲವೇ?

ಶಸ್ತ್ರಸನ್ಯಾಸ ಪರಿಷತ್ತು, ಶಾಂತಿ ಸ್ಥಾಪನೆಯ ಸಂಘ, ಇವೆಲ್ಲವೂ ಎಲ್ಲಿಯೋ ಹೋಗಿಬಿಟ್ಟವು. ಇವುಗಳ ತೀರ್ಪುಗಳು ಪ್ರಸವ ವೇದನೆಯಲ್ಲಿಯ ಪ್ರತಿಜ್ಞೆಯಂತಾದವು. ಶಾಂತಿ ಸಂಘದಲ್ಲಿಯ ಭಾಷಣಗಳು ಸ್ಮಶಾನದಲ್ಲಿಯ ವೈರಾಗ್ಯದ ನುಡಿಗಳಂತಾದವು.

ಕರಾಚಿ ದೊಂಬಿಯಿಂದ

ಕಲಿಯಬೇಕಾದುದೇನು?

ಕಳೆದ ೧೯ ನೆಯ ತಾರೀಖಿನ ದಿವಸ ಕರಾಚಿಯಲ್ಲಿ ಸಂಭವಿಸಿದ ಅತ್ಯಂತ ಶೋಚನೀಯವಾದ ದೊಂಬಿಯ ಸಮಾಚಾರವನ್ನು ಬೇರೆ ಕಡೆಗೆ ಕೊಟ್ಟಿದೆ. ಅದರಿಂದ ಕಲಿಯಬೇಕಾದ ಸಂಗತಿಗಳನ್ನು ಸ್ವಲ್ಪ ಯೋಚಿಸೋಣ.

ಪಂಡಿತ ನಥುರಾಮರನ್ನು ನ್ಯಾಯಶಾಸನದ ಮುಂದೆ ಕೊಲೆ ಮಾಡಿದ ಅಬ್ದುಲ್ ಕಯುಮನ ನಡತೆಯು ಅತ್ಯಂತ ನಿಂದ್ಯವಾದುದು. ವಿವೇಕವುಳ್ಳ ಯಾವ ಮನುಷ್ಯನೂ ಆ ಕೊಲೆಗಾರನ ಘೋರ ಕೃತ್ಯವನ್ನಾಗಲಿ ಅಥವಾ ಆ ಕೊಲೆಗಾರನನ್ನಾಲಿ ಎಳ್ಳಷ್ಟು ಗೌರವಿಸಲಾರನು. ಏಕೆಂದರೆ ಕೊಲೆಯು ಅತಿನಿಂದ್ಯವಾದುದು. ಕೊಲೆಗಾರರು ಮನುಷ್ಯ ಜಾತಿಯ ಶತ್ರುಗಳು. ಕ್ರಾಂತಿಕಾರಕರು ರಾಜಕೀಯ ಉದ್ದೇಶದಿಂದ ಅಧಿಕಾರಿಗಳನ್ನು ಕೊಲೆಮಾಡಲಿ ಅಥವಾ ಪುಂಡರು ಧರ್ಮಾಂಧತೆಯಿಂದ ಅನ್ಯ ಧರ್ಮದವರನ್ನು ಕೊಲೆಮಾಡಲಿ ಇವೆರಡೂ ಅತ್ಯಂತ ನಿಂದ್ಯವಾದವುಗಳೇ ಸರಿ. ಆದಕಾರಣ ಇಂಥ ಕೊಲೆಗಾರರಿಗೆ ಯೋಗ್ಯ ಶಿಕ್ಷೆಯಾಗಿ ಅವರ ದುಷ್ಟ ಪ್ರಯತ್ನಗಳಿಗೆ ಬಲವೂ ಪ್ರೋತ್ಸಾಹವೂ ದೊರೆಯದಂತೆ ಮಾಡುವುದು ಶಾಂತತಾ ಪ್ರಿಯವಾದ ಪ್ರತಿಯೊಂದು ಜನಾಂಗದ ಮತ್ತು ಸರಕಾರದ ಮುಖ್ಯ ಕರ್ತವ್ಯ.

ಆದಕಾರಣ ಕೊಲೆಗಾರನಾದ ಅಬ್ದುಲ್ ಕಾಯುಮನಿಗೆ ನ್ಯಾಯಾಧೀಶರು ಮರಣದಂಡನೆಯನ್ನು ವಿಧಿಸಿದರು. ಆತನನ್ನು ಶೂಲಕ್ಕೇರಿಸುವ ದಿನವೂ ನಿರ್ಧರವಾಯಿತು. ಆಗ ಕರಾಚಿಯ ಕೆಲವು ಮುಸಲ್ಮಾನರು ಈ ವಿಚಾರದಲ್ಲಿ ತಮ್ಮ ಅಸಂತೋಷವನ್ನು ವ್ಯಕ್ತಗೊಳಿಸಿದರು. ದೊಂಬಿಯ ಲಕ್ಷಣಗಳೂ ತೋರಿದವು. ಆ ಕೊಲೆಗಾರನನ್ನು ಗೌರವಿಸುವಂತೆಯೂ ಸ್ಪಷ್ಟ ತೋರಿತು.

ಕೊಲೆಗಾರನಿಗೆ ಸಹಾನುಭೂತಿಯೆ ?

ಕರಾಚಿ ಮುಸಲ್ಮಾನ್ ಸಮಾಜದಲ್ಲಿ ಈ ಪ್ರಕಾರ ಕೊಲೆಗಾರನಿಗೆ ಸಹಾನುಭೂತಿ ತೋರಿಸುವ ಚಟುವಟಿಕೆ ನಡೆದದ್ದು ತುಂಬಾ ಅನ್ಯಾಯವಾದುದು. ಇಷ್ಟೇ ಅಲ್ಲ, ಬಹು ಘಾತಕವಾದುದು. ಆ ಕೊಲೆಗಾರನ ಪ್ರಾಣದಾನದ ವಿಚಾರದಲ್ಲಿ ಅನೇಕರು ಪ್ರಾರ್ಥಿಸಿಕೊಂಡಿದ್ದರು. ಅದೇ ಕೊನೆಯ ಪ್ರಯತ್ನ. ಅನಂತರ ಶೂಲಕ್ಕೇರಿಸುವುದೇ ನಿರ್ಧರವಾದ ಮೇಲೆ ಮುಸಲ್ಮಾನರು ಆ ಕೊಲೆಗಾರನ ಶವದ ಮೆರವಣಿಗೆ ಮೊದಲಾದ ವಿಚಾರಗಳಲ್ಲಿ ಪ್ರವೇಶಿಸಿದುದು ಅತ್ಯಂತ ಅಯೋಗ್ಯವಾದುದು. ಇಂತಹ ತಪ್ಪು ದಾರಿಯಲ್ಲಿ ಅವರು ಹೋಗದೆ ಇದ್ದಿದ್ದರೆ ಈ ಶೋಚನಿಯ ಸ್ಥಿತಿಯು ಪ್ರಾಪ್ತವಾಗುತ್ತಿರಲಿಲ್ಲ. ಆದಕಾರಣ ಕರಾಚಿದೊಂಬಿಯು ಇದೊಂದು ಪಾಠವನ್ನು ಕಲಿಸುತ್ತದೆ.

ಮುಸಲ್ಮಾನ್ ಪ್ರಮುಖರೆಲ್ಲಿದ್ದರು ?

ಕರಾಚಿಯ ಅನೇಕ ಮುಸಲ್ಮಾನರು ಕೊಲೆಗಾರನ ವಿಚಾರದಲ್ಲಿ ಸಹಾನುಭೂತಿಯುಳ್ಳವರಾಗಿದ್ದಾರೆಂದು ಅವರ ಚಟುವಟಿಕೆಗಳಿಂದ ಸ್ಪಷ್ಟ ತೋರಿದ ಮೇಲಾದರೂ ಮುಸಲ್ಮಾನ್ ಪ್ರಮುಖರು ಒಂದು ಪ್ರಕಟನೆಯನ್ನು ಹೊರಡಿಸಿ ಮತ್ತು ಸ್ವಂತಾಗಿ ಕರಾಚಿಗೆ ಹೋಗಿ ಆ ತಲೆತಿರುಗಿದ ಜನರಿಗೆ ಬುದ್ಧಿವಾದವನ್ನು ಹೇಳಬೇಕಾಗಿತ್ತು. ಮುಂದಾಗುವ ಅನರ್ಥದ ಅರುವನ್ನುಂಟುಮಾಡಿಕೊಡಬೇಕಾಗಿತ್ತು.

ತಮ್ಮ ಮೇಲಿದ್ದ ಈ ಮಹತ್ವದ ಹೊಣೆಗಾರಿಕೆಗೆ ತಕ್ಕಂತೆ ಸಮುಚಿತವಾಗಿ ಸಮಾಧಾನದ ಯಾವ ಪ್ರಯತ್ನಗಳನ್ನು ಮಾಡಿದರು ? ಪಂಡಿತ ನಥುರಾಮರನ್ನು ಕೊಲೆಮಾಡಿದ ಆ ಕೊಲೆಗಾರನ ಕೃತ್ಯ ಅತ್ಯಂತ ನಿಂದ್ಯವಾದುದೆಂದಾದರೂ ಮುಸಲ್ಮಾನ ಪ್ರಮುಖರು ಮೊದಲು ಪ್ರಸಿದ್ಧಿಸಿದ್ದರೇ ? ಮಹಾತ್ಮಾ ಗಾಂಧೀಜಿಯವರು ಕೂಡಾ ಮುಸಲ್ಮಾನ್ ಸಮಾಜದ ಪ್ರಮುಖರು ಆ ಕೊಲೆಗಾರನ ಕೃತ್ಯವನ್ನು ನಿಷೇಧಿಸುವುದು ಯುಕ್ತವೆಂದು ಸೂಚಿಸಲಿಲ್ಲವೆ? ಆಗಲಾದರೂ ಮುಸಲ್ಮಾನ್ ಪ್ರಮುಖರು ತಮ್ಮ ಕರ್ತವ್ಯವನ್ನು ಮಾಡಿದರೇ ?

ಮುಸಲ್ಮಾನ್ ಪ್ರಮುಖರಿಂದ ಈ ತರದ ಯಾವ ನಿಷೇಧವೂ ಪ್ರದರ್ಶನವಾಗದಿದ್ದುದರಿಂದ ಮತ್ತು ಕರಾಚಿಯಲ್ಲಿಯ ತಲೆತಿರುಕರಿಗೆ ಬುದ್ಧಿವಾದವು ಇವರಿಂದ ದೊರೆಯದಿದ್ದುದರಿಂದ ಅಶಿಕ್ಷಿತರೂ, ಧರ್ಮಾಂಧರೂ ಆದ ಆ ಜನಸಾಮಾನ್ಯರು ತಮ್ಮ ಕೃತ್ಯಗಳಿಗೆ ಪ್ರಮುಖರ ಒಪ್ಪಿಗೆಯೂ ಇದ್ದಂತೆ ಕಾಣುತ್ತದೆಂದೇ ಗ್ರಹಿಸಲು ಅವಕಾಶವಾಗಿರಲಿಕ್ಕಿಲ್ಲವೆ ? ಆದುದರಿಂದ ಮುಸಲ್ಮಾನ ಪ್ರಮುಖರು ಈ ವಿಷಯವನ್ನು ಗುಂಡುಹಾರಿಸುವವರೆಗೂ ನಿರ್ಲಕ್ಷಿಸಿದ್ದು ತಪ್ಪಾಯಿತೆಂದೇ ಕರಾಚಿಯ ದೊಂಬಿಯು ಮತ್ತೊಂದು ಪಾಠವನ್ನು ಕಲಿಸುತ್ತದೆ.

ಸರಕಾರವು ಮಾಡಿದ ಸೌಲಭ್ಯ.

ರಾಜಕೀಯ ಕೊಲೆಗಾರರಾದ ಕ್ರಾಂತಿಕಾರರ ಶವವನ್ನು ಅವರ ಸಂಬಂಧಿಕರ ಸ್ವಾಧೀನ ಪಡಿಸುವುದು ಹೇಗೆ ಸರಕಾರಕ್ಕೆ ಅನುಚಿತವಾಗಿ ತೋರುತ್ತದೆಯೋ ಹಾಗೆಯೇ ಈ ಧಾರ್ಮಿಕ ಭಾವನೆಯ ಕೊಲೆಗಾರನ ಶವವನ್ನು ಸಾರ್ವಜನಿಕ ಸ್ಮಶಾನದ ಸ್ವಾಧೀನ ಪಡಿಸಬಾರದಾಗಿ ಸರಕಾರಕ್ಕೆ ಅದೇಕೆ ತೋರಲಿಲ್ಲ? ಈ ಕೊಲೆಗಾರನ ವಿಷಯವಾಗಿ ಅನೇಕ ಮುಸಲ್ಮಾನರಿಗೆ ಸಹಾನುಭೂತಿಯಿದೆಯೆಂದೂ ಆತನ ಶವವನ್ನು ಮೆರವಣಿಗೆ ಮಾಡುವರೆಂದೂ ಸರಕಾರಕ್ಕೆ ಈ ಮುಂಚೆಯೇ ತಿಳಿದಿರಲಿಲ್ಲವೆ?

ಶವವನ್ನೇ ಆ ಸ್ಮಶಾನದ ಸ್ವಾಧೀನ ಪಡಿಸದಿದ್ದರೆ ಈ ದೊಂಬಿಯ ಪ್ರಸಂಗಕ್ಕೆ ಅವಕಾಶವೆಲ್ಲಿದ್ದಿತು ? ಸರಕಾರವು ಕೊಟ್ಟ ಈ ಸೌಲಭ್ಯವು ಅನುಕೂಲವಲ್ಲವೆಂದೇ ಈ ದೊಂಬಿಯಿಂದ ಕಲಿಯುವ ಮೂರನೆಯ ಪಾಠವು.

ಒಬ್ಬನ ಪಾಪ ಹಲವರ ತಾಪ.

ಒಬ್ಬ ಅಬ್ದುಲ್ ಕಾಯುಮನ ಘೋರ ಪಾಪ ಕಾರ್ಯವು ಈಗ ಎಷ್ಟು ಜನಗಳಿಗೆ ತಾಪವನ್ನುಂಟುಮಾಡಿತಲ್ಲಾ! ೪೦ ಜನರು ಮೃತಪಟ್ಟರು. ನೂರು ಜನರು ಗಾಯಹೊಂದಿದರು. ಸಾವಿರಾರು ಜನರಿಗೆ ವಿಶೇಷವಾದ ತಾಪವುಂಟಾಗಿದೆ. ಇಂಥ ನಿಂದ್ಯ ಕಾರ್ಯವನ್ನು ಯಾರೂ ಯಾವ ಉದ್ದೇಶದಿಂದಲೂ ಎಂದೂ ಮಾಡಕೂಡದೆಂದು ಕರಾಚಿ ದೊಂಬಿಯಿಂದ ಕಲಿಯಬೇಕಾದ ನಾಲ್ಕನೆಯ ಪಾಠ.

ವಿಚಾರಣೆಯ ಮಂಡಲ.

ಕರಾಚಿಯಲ್ಲಿಯ ಈ ಶೋಚನಿಯ ಸ್ಥಿತಿಗೆ ಕಾರಣರಾರು ? ಗುಂಡುಹಾರಿಸದೆ ದೊಂಬಿಯನ್ನು ತಡೆಯ ಬಹುದಾಗಿರಲಿಲ್ಲವೇ ? ದೊಂಬಿಯೇ ಆಗದಂತೆ ಮಾಡಲು ಅಧಿಕಾರಿಗಳಿಗೆ ಶಕ್ಯವಿರಲಿಲ್ಲವೇ ? ಈ ಎಲ್ಲಾ ಸಂಗತಿಗಳನ್ನು ಪರಿಷ್ಕಾರವಾಗಿ ನಿರ್ಣಯಿಸಲು ಒಂದು ವಿಚಾರಣೆಯ ಸಂಘವು ಏರ್ಪಡಬೇಕಾದುದು ಅಗತ್ಯವಾಗಿದೆ. ಹಾಗಾದರೆ ಈಗ ಆಗಿರುವ ತಪ್ಪುಗಳೆಲ್ಲ ತಿಳಿದು ಮುಂದೆ ಇಂತಹ ಪ್ರಸಂಗ ಬಾರದಂತೆ ಎಚ್ಚರಿಕೆಯುಳ್ಳವರಾಗಲಿಕ್ಕೂ ಅನುಕೂಲವಾಗುತ್ತದೆ.

ಕಳೆದ ೧೦-೧೫ ವರುಷಗಳಿಂದ ಹಿಂದು ಮುಸಲ್ಮಾನ್ ದ್ವೇಷಾಗ್ನಿಯು ಹೆಚ್ಚುತ್ತಲೇ ನಡೆದಿದೆ. ಅದಕ್ಕೆ ಪುಟಕೊಡುವ ಇಂಥ ನಿಂದ್ಯ ಕಾರ್ಯಗಳು ಆಗಾಗ್ಗೆ ಆಗುತ್ತಲೇ ಇವೆ. ದೇಶದಲ್ಲಿ ಎಲ್ಲ ಸಮಾಜದವರೂ ಸುಖಶಾಂತಿಗಳಿಂದ ವಾಸಿಸಬೇಕೆಂದಪೇಕ್ಷಿಸುವವರೆಲ್ಲರೂ ಈ ಕರಾಚಿ ದೊಂಬಿಯಿಂದ ಅನೇಕ ಸಂಗತಿಗಳನ್ನು ಕಲಿತುಕೊಂಡು ಪುನಃ ಇಂತಹ ಶೋಚನೀಯ ಸ್ಥಿತಿ ಸಂಭವಿಸದಂತೆ ಯೋಗ್ಯ ಪ್ರಯತ್ನಗಳನ್ನು ಮುಂಚೆಯೇ ಮಾಡುವರೆಂದು ನಾವು ನಂಬಿದ್ದೇವೆ.

ಬ್ಯಾ. ಶೇರವಾಣಿಯವರ

ಶೋಚನೀಯ ನಿಧನ

ಲೆಜಿಸ್ಲೇಟಿವ್ ಅಸೆಂಬ್ಲಿಯ ಕಾಂಗ್ರೆಸ್ ಪಕ್ಷದ ಮುಸಲ್ಮಾನ ಸಭಾಸದರಾದ ಬ್ಯಾರಿಸ್ಟರ್ ಟಿ. ಎ. ಕೆ. ಶೇರವಾಣಿಯವರ ತಾ. ೨೨ ನೆಯ ಬೆಳಿಗ್ಗೆ ೬ ಗಂಟೆಗೆ ದಿಲ್ಲಿಯಲ್ಲಿ ಮೆನಿಂಜಾಯಟಿಸ್ ವಿಕಾರದಿಂದ ಮೃತಪಟ್ಟರೆಂದು ತಿಳಿಸಲು ಅತ್ಯಂತ ದುಃಖವಾಗುತ್ತದೆ. ಮರಣ ಸಮಯದಲ್ಲಿ ಇವರಿಗೆ ೪೭ ವರುಷಗಳಾಗಿದ್ದವು. ಇವರ ಅಂತ್ಯ ವಿಧಿಯು ಅಲಿಗಡದಲ್ಲಿ ಜರುಗಿತು.

ಮುಸಲ್ಮಾನ್ ಮುಂದಾಳುಗಳ ಅಂತರಂಗ.

ಡಾ. ಕಾಜಿ ಅಬ್ದುಲ್ ಹಮಿದ ಎಂ. ಎ. ಪಿ. ಎಚ್. ಡಿ. ಇವರು ಕಳೆದ ೧೩ ನೆಯ ತಾರೀಖಿನ ಕ್ರಾನಿಕಲ್, ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದಿದ್ದಾರೆ. ಅದರಿಂದ ಕೌನ್ಸಿಲ್ಲಿಗೆ ಹೋಗಿರತಕ್ಕ ಮುಸಲ್ಮಾನ್ ಸಭಾಸದರು ಹೇಗೆ ನಡೆಯಬೇಕೆಂಬುದನ್ನು ಆ ಸಮಾಜದ ಪ್ರಮುಖರು ಅಪೇಕ್ಷಿಸುತ್ತಾರೆಂಬುದು ಗೊತ್ತಾಗುವುದು. ಲೇಖಕರು ಮುಂಬೈ ಕೌನ್ಸಿಲ್ಲಿಗೆ ಹೋಗಿ ಅಲ್ಲಿಯ ಸ್ಥಿತಿಯನ್ನು ಕುರಿತು ಹೀಗೆ ಬರೆದಿದ್ದಾರೆ.

“ನಾನು ಮುಂಬೈ ಕೌನಸಿಲ್ ಅಧಿವೇಶನಕ್ಕೆ ಪ್ರೇಕ್ಷಕನಾಗಿ ಉದ್ದೇಶಪೂರ್ವಕ ಹೋಗಿದ್ದೆನು. ಅಲ್ಲಿರತಕ್ಕ ಮುಸಲ್ಮಾನ್ ಸಭಾಸದರ ನಡತೆಯನ್ನು ನೋಡಿ ನನಗೆ ಬಹು ಖೇದವಾಯಿತು. ಅಸೆಂಬ್ಲಿಯಲ್ಲಿ ಬ್ಯಾ. ಜಿನ್ನಾರವರ ನೇತೃತ್ವದಲ್ಲಿ ಎಲ್ಲರೂ ಕೂಡಿ ಸ್ವಜಾತಿಯರ ಹಿತಕ್ಕಾಗಿ ಹೇಗೆ ಪ್ರಯತ್ನಿಸುತ್ತಿದ್ದಾರೆಯೋ ಹಾಗೆ ಪ್ರಯತ್ನಿಸುವವರು ಈ ಕೌನ್ಸಿಲ್ಲಿನಲ್ಲಿ ಒಬ್ಬರೂ ಇಲ್ಲ. ಎಲ್ಲರೂ ಖುರ್ಚಿಗೆ ಭೂಷಣರಾಗಿರುವರು.

ಇವರಲ್ಲಿ ಸಂಘಟನೆಯಿಲ್ಲ. ಸ್ವಜಾತಿಯವರ ಹಿತಕ್ಕೋಸ್ಕರ ಹೇಗೆ ಪ್ರಯತ್ನಿಸಬೇಕೆಂಬ ಕ್ರಮ ಪದ್ಧತಿಗಳಿಲ್ಲ. ಕೆಲವು ಮುಸಲ್ಮಾನ್ ಸಭಾಸದರು ಮದ್ಯಪಾನ ವಿರೋಧದ ಗೊತ್ತುವಳಿಗೆ ತಮ್ಮ ಒಪ್ಪಿಗೆ ಕೊಟ್ಟಿದ್ದು ದುಃಖದ ಸಂಗತಿ. ಕೌನ್ಸಿಲ್ಲಿನ ಮೂರನೆಯ ಒಂದು ಭಾಗದಷ್ಟು ಸಭಾಸದರು ಮುಸಲ್ಮಾನರೇ ಇದ್ದುದರಿಂದ ಇವರು ತಮ್ಮ ಮನಸ್ಸಿನಲ್ಲಿ ತಂದರೆ ತಮ್ಮ ಜಾತಿಯ ಹಿತವನ್ನು ಬೇಕಷ್ಟು ಮಾಡಬಹುದು.”

ಮುಂಬೈಯಲ್ಲಿ ಕರ್ನಾಟಕ ಸಾಹಿತ್ಯ ಸಮ್ಮೇಲನ.

ಮುಂಬೈದಲ್ಲಿಯ ಕನ್ನಡಿಗರ ಎಲ್ಲ ಸಂಸ್ಥೆಗಳ ವತಿಯಿಂದಾ ತಾ|| ೧೭-೩-೩೫ ರವಿವಾರ ಸಂಜೆಯ ೫|| ಘಂಟೆಗೆ ಗಿರಗಾಂವ ಬ್ಯಾಕರೋಡಿನಲ್ಲಿರುವ ಗುಜರಾಥಿ ಹಾಲಿನಲ್ಲಿ ಮುಂಬಯಿ ಸರಕಾರದ ಶಿಕ್ಷಣ ಮಂತ್ರಿಗಳಾದ ದಿವಾಣ ಬಹಾದ್ದುರ, ಎಸ್. ಟಿ. ಕಂಬಳಿಯವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ ಬರುವ ಡಿಸೆಂಬರ ತಿಂಗಳದಲ್ಲಿ ‘ಕರ್ನಾಟಕ ಸಾಹಿತ್ಯ’ ಸಮ್ಮೇಲನದ ಅಧಿವೇಶನ ಮುಂಬೈದಲ್ಲಿ ಕೂಡಿಸಬೇಕೆಂಬ ಠರಾವ ಪಾಸ ಮಾಡಿದರು.

ಮೊದಲು ಬೆಳವಿ ವಕೀಲರ ಸೂಚನೆಯ ಮೇರೆಗೆ ಈ ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀ ದಿವಾಣ ಬಹಾದ್ದೂರ ಕಂಬಳಿಯವರು ಸ್ವೀಕರಿಸಿದರು.

ಶ್ರೀ ಆರ್. ಎ. ಜಹಗೀರದಾರ ವಕೀಲರು ಬರುವ ಡಿಸೆಂಬರ ತಿಂಗಳದಲ್ಲಿ ಕನ್ನಡ ಸಾಹಿತ್ಯ ಸಮ್ಮೇಲನ ಮುಂಬೈದಲ್ಲಿ ಕೂಡುವದಕ್ಕೆ ಮತ್ತು ತಾತ್ಪೂರ್ತಿಕ ಸ್ವಾಗತಮಂಡಳವನ್ನು ಸ್ಥಾಪನಮಾಡುವ ಬಗ್ಗೆ ಹೀಗೆ ಎರಡು ಠರಾವುಗಳನ್ನು ತಂದರು. ಅದಕ್ಕೆ ರಾವಬಹಾದ್ದೂರ ರಾಮಸ್ವಾಮಿಯವರು, ಶ್ರೀಯುತ ಹಂದಿಗುಂದ ಮಲ್ಲಿಕಾರ್ಜುನಪ್ಪನವರು ಮತ್ತು ಅನೇಕ ಜನರ ಅನುಮೋದನಪರ ಭಾಷಣ ಮಾಡಿದ ಬಳಿಕ ಅಧ್ಯಕ್ಷರು ಮೇಲಿನ ಎರಡು ಠರಾವುಗಳು ಪಾಸಾದವೆಂದು ಜಾಹೀರ ಮಾಡಿ ಮುಂಬೈದಲ್ಲಿ ೩೦ ವರ್ಷಗಳ ಹಿಂದೆ ನಾನು ಕಲಿಯುವಾಗ್ಗೆ ಮುಂಬೈದಲ್ಲಿ ಯಾರಾದರು ಕನ್ನಡ ಮಾತಾಡುವವರು ಅಪರೂಪದಿಂದಾ ಸಿಗುತ್ತಿದ್ದರು. ಈಗ್ಗೆ ಆಗಿನ ಪರಿಸ್ಥಿತಿ ಬದಲಾಗಿ ಕರ್ನಾಟಕದ ಜನರು ಮುಂಬೈದಲ್ಲಿ ಸದ್ಯಕ್ಕೆ ೫೦ ಸಾವಿರದ ವರೆಗೆ ಜನರಿರುತ್ತಾರೆ. ಇಷ್ಟು ವಸ್ತಿಯಾಗಿದ್ದ ನಮ್ಮ ಕರ್ನಾಟಕಸ್ಥರ ಸುಖ, ದುಃಖದ ವಿಷಯವಾಗಿ ಮುಂಬೈಯಂಥ ರಾಜಧಾನಿ ಠಿಕಾಣದಲ್ಲಿ ಎಷ್ಟು ಅವಶ್ಯಕತೆ ಅದೆ ಎಂಬದರ ವಿಷಯಕ್ಕೆ ಬಹಳ ಪರಿಣಾಮಕಾರಕವಾದ ಭಾಷಣ ಮಾಡಿದರು.

ಪ್ರತ್ಯಕ್ಷದರ್ಶಿ.

ತಂಬಾಕ ಸೇದುವುದರಿಂದಾಗುವ ಕುರುಡುತನವು.

ಹೊಗೆ ಸೊಪ್ಪನ್ನು ವಿಶೇಷವಾಗಿ ಸೇವಿಸುವುದರಿಂದ ಕಣ್ಣು ವ್ಯಾಧಿಯುಂಟಾಗುವುದು. ಇದು ಕ್ರಮೇಣ ದೃಷ್ಟಿಯನ್ನು ಮಂಕಾಗಿಸುವುದು, ಮತ್ತು ಇದರಿಂದ ಕೊನೆಗೆ ಬಹಳ ಅಪಾಯವೂ ಉಂಟಾಗಬಹುದು. ಇವುಗಳಲ್ಲಿ ಸಿಗಾರೇಟುಗಳು ಹೆಚ್ಚು ಅಪಾಯಕರಗಳಾಗಿರುವವು. ಆದರೆ ಚುಟ್ಟಾ, ಹುಕ್ಕಾ ಮುಂತಾದವುಗಳಿಂದಲೂ ಅದೇ ತರದ ಅಪಾಯವುಂಟಾಗುವುದು.

ಜಯಕರ್ನಾಟಕ

ಕರ್ನಾಟಕದ ಪ್ರಮುಖ ಮಾಸಪತ್ರಿಕೆ.

ವಾರ್ಷಿಕ ಚಂದಾ ೫-೮-೦

ನಾಟ್ಯಾಂಕ

ವಿವಿಧಚಿತ್ರ! ಸರಸನಾಟಕ ಕಥೆ! ವಿದ್ವತ್‌ಪ್ರಚುರ ಲೇಖಗಳಿವೆ!

ತ್ವರೆಮಾಡಿರಿ — ಬೆಲೆ ೧ ರೂ. — ತೀರುತ್ತಿವೆ.

ಜಯಕರ್ನಾಟಕ ಗ್ರಂಥಮಾಲೆ

ವರ್ಷಕ್ಕೆ ೬ ಪುಷ್ಪ] ವಾ. ಚಂ. ೩-೮-೦ [ಮೇಲೊಂದು ಉಚಿತಪುಸ್ತಕ

ಜ. ಕ. ಚಂದಾದಾರರಿಗೆ ೩ ರೂ.

ಮೂರನೆಯ ವರ್ಷದ ನಾಲ್ಕನೆಯ ಪುಷ್ಪವಾದ

ಶ್ರೀ. ಹ. ಪಿ. ಜೋಶಿಯವರ

ಇದೀಗ ಹೊರಟಿದೆ] **ರಾಜವಲ್ಲಭೆ** [ಬೆಲೆ ಹತ್ತು ಆಣೆ

ಕೀಚಕ ವಧೆ ಕಥೆಯನ್ನು ಆಧರಿಸಿ ಬರೆದ ಹೊಸ ಸಂಗೀತ ನಾಟಕೆ. ಉಚಿತ ಸಂಭಾಷಣೆ, ಮಿತವಿನೋದ, ಸುರಮ್ಯ ಪದ್ಯ ಮಾಲಿಕೆ.

ಜಯಕರ್ನಾಟಕ ಕಾರ್ಯಾಲಯ
ಧಾರವಾಡ.



ವಿ ವಿ ಧ ವಿ ಷ ಯ .

ವನಸ್ಪತಿಯಲ್ಲಿ ಮಾನವ ರಕ್ತ.

ಅಮೇರಿಕೆಯ ಸಂಶೋಧನ ಶಾಲೆಯಲ್ಲಿ ಒಂದು ತರದ ವನಸ್ಪತಿಯನ್ನಿಟ್ಟಿದ್ದಾರೆ. ಅದಕ್ಕೆ (Bhana shrub) ಎಂಬ ಹೆಸರು. ಅದು ಅತ್ಯುಷ್ಣ ಪ್ರದೇಶದಲ್ಲಿ ಬೆಳೆಯುತ್ತದಂತೆ. ಅದನ್ನು ಹಿಂಡಿದರೆ ರಕ್ತದಂಥ ರಸವು ಹೊರಡುತ್ತದೆ. ಮಾನವ ರಕ್ತದಲ್ಲಿರುವ ದ್ರವ್ಯಗಳೇ ಅದರಲ್ಲಿಯೂ ಕಂಡುಬರುತ್ತವೆ. ಮನುಷ್ಯನ ರಕ್ತವು ಬಸಿದು ಹೋದರೆ, ಅಥವಾ ಗಾಯವಾಗಿ ಚೆಲ್ಲಿಹೋದರೆ ಕೂಡಲೆ ಈ ವನಸ್ಪತಿ ರಕ್ತವನ್ನು ಹಾಕಿ ಸುಧಾರಿಸಲು ಬರುತ್ತದೆ.

ನೋಡಬೇಕು ಈ ವನಸ್ಪತಿಯೊಂದನ್ನು ಸೇವಿಸಿದರೆ ಊಟದ ಆಹಾರ ಸೇವನೆಯ ಆವಶ್ಯಕತೆ ಇಲ್ಲವೋ ಹೇಗೆ?

ಮಿಂಚುಹುಳ (ಹೊನ್ನೀಹುಳ)ದಲ್ಲಿ ಮಿಂಚು ಹೇಗೆ ಹುಟ್ಟುತ್ತದೆ?

ಹೊನ್ನೀಹುಳಗಳಲ್ಲಿ ಕಂಡುಬರುವ ಮಿಂಚು ಅದರ ಶರೀರ ಳಗಿರುವ ಫಾಸ್ಫರಸ್ ಎಂಬ ದ್ರವ್ಯದಿಂದಲೇ ಉಂಟಾಗುತ್ತ ಂದು ಇಲ್ಲಿಯ ವರೆಗೆ ಅನೇಕರು ತಿಳಿಯುತ್ತಿದ್ದರಷ್ಟೆ. ಆದರೆ ಅದು ಪ್ಪೆಂದು ಈಗ ಪ್ರಮಾಣಪೂರ್ವಕವಾಗಿ ಸಿದ್ಧಮಾಡಿದ್ದಾರೆ. ಆ ಳದ ಶರೀರದಿಂದ ಒಂದು ತರದ ದ್ರವ್ಯವು ಉತ್ಪನ್ನವಾಗಿ ಅದು ವೆಯಲ್ಲಿರುವ ಪ್ರಾಣವಾಯುವನ್ನು ಎಳೆಯುತ್ತದೆ. ಅವೆರಡರ ರ್ಷಣದಿಂದ ಆ ಮಂದ ಪ್ರಕಾಶವು ಉತ್ಪನ್ನವಾಗುತ್ತದೆ. ಇದಕ್ಕೆ ಂಶೋಧಕರು ತಂಪುಜ್ಯೋತಿ ಎಂದು ಹೆಸರಿಟ್ಟಿರುವರು.

ಪ್ರಾಣರಕ್ಷಕ ವಾಯು.

ಪ್ಯಾರಿಸದಲ್ಲಿಯ ಒಬ್ಬ ಸಂಶೋಧಕನು ಒಂದು ತರದ ಸುಂದ ಕೊಡೆಯನ್ನು ಸಿದ್ಧಗೊಳಿಸಿದ್ದಾನೆ. ಅದನ್ನು ಸ್ತ್ರೀಯರು ಮತ್ತು ರುಷರು ಉಪಯೋಗಿಸಲು ಬರುವಂತಿದೆ. ಅದರಲ್ಲಿಯ ವಿಶೇಷ ನಂದರೆ ಕೊಡೆಯನ್ನು ಏರಿಸಿ ಅದರಲ್ಲಿಯ ಗುಂಡಿಯನ್ನು ತ್ತಿದಕೂಡಲೆ ಒಂದು ಭಯಂಕರವಾದ ವಾಯುವು ಹೊರ ಚಿಮ್ಮುತ್ತುತ್ತದೆ. ಯಾರಾದರೂ ದುಷ್ಟರು ಮೈಮೇಲೆ ಬೀಳುವ ಪ್ರಸಂಗ ಂಟಾದಲ್ಲಿ ಸ್ತ್ರೀ ಪುರುಷರು ಇದರ ಸಹಾಯದಿಂದ ಓಡಿಸಿಬಿಡ ಲ್ಲರು. ಈ ವಾಯುವಿನ ಆಘಾತ ಮತ್ತು ನಾತಕ್ಕೆ ೨೦-೩೦ ನರು ನಾಲ್ಕು ಕಡೆಯಿಂದ ಮುತ್ತಿದರೂ ನಿಲ್ಲಲಾರದೆ ಅಳುತ್ತ ಳದೆ ಓಡಿ ಹೋಗುತ್ತಾರೆ.
ರಾಣಕಥಿತ ವಾಯುವು ಇಂದು ಪ್ರತ್ಯಕ್ಷವಾದಂತಾಗಲಿಲ್ಲವೇ?

ವಿಚಿತ್ರ ಮನ್ವಂತರ.

ಂಗ್ಲಂಡದಲ್ಲಿ ತಂಬಾಕದ ವ್ಯಾಪಾರವು ಈಗ ಒಳ್ಳೇ ರಭಸದಿಂದ ಾಗಿದೆ. ಮೊದಲಿನಕಿಂತಲೂ ತಂಬಾಕವು ಈಗ ಹೆಚ್ಚು ತುಟ್ಟಿ ಾಗಿ ಮಾರಲ್ಪಡುತ್ತದೆ. ಇದಕ್ಕೆ ಕಾರಣವೆಂದರೆ ಇಂಗ್ಲಂಡದಲ್ಲಿ ್ರೀಯರೂ ಈಗ ಸಿಗರೇಟ ಸೇದುವದು ಹೆಚ್ಚಾಗ ಹತ್ತಿದೆಯಂತೆ. ಲ್ಲಿಯ ಪ್ರತಿಯೊಂದು ಕಡೆಯಲ್ಲಿ ಸ್ತ್ರೀಯರು ಬಹಿರಂಗವಾಗಿ ಸಿಗ ಟ ಸೇದುತ್ತಿರುವುದು ಕಂಡುಬರುತ್ತದೆ.

ರಾಜಪುತ್ರರಾದ ಜಾರ್ಜರವರ ವಿವಾಹ ಕಾಲದಲ್ಲಿ ಸಿಗರೇಟಿನ ್ರಯವು ವಿಪುಲವಾಗಿ ಆಯಿತು. ಆ ಕಾಲಕ್ಕೆ ಒಂದು ವಾರದಲ್ಲಿ ಎಷ್ಟು ಸಿಗರೇಟುಗಳು ಸೇದಲ್ಪಟ್ಟವೋ ಅಷ್ಟು ೧೯೩೧ ನೆಯ ಇಸ್ವಿಯಲ್ಲಿ ೬ ತಿಂಗಳುಗಳಲ್ಲಿ ವೆಚ್ಚವಾಗಿದ್ದವಂತೆ. ಇದಕ್ಕೇ ಅನ್ನಬೇಕು ವಿಚಿತ್ರ ಮನ್ವಂತರವೆಂದು.

ಇದೆಂಥ ಗಿಡಮೂಲಿಕೆ?

ಹಿಮಾಲಯ ಪರ್ವತಾವಳಿಯ ಸಿಮ್ಲಾ ಪಟ್ಟಣದ ಪ್ರದೇಶದಲ್ಲಿ ಒಂದು ವಿಷಮೂಲಿಕೆಯು ಬೆಳೆಯುತ್ತಿದೆ. ಅದನ್ನು ಮುಟ್ಟಿದ ಕೂಡಲೆ ಸರ್ಪವು ಕಚ್ಚಿದಂತೆ ಶರೀರದಲ್ಲಿ ವಿಷವು ವ್ಯಾಪಿಸ ಹತ್ತುತ್ತದೆ. ಆದರೆ ಪರಮಾತ್ಮನು ಆ ಮೂಲಿಕೆಯಲ್ಲಿ ವಿಷವನ್ನಿರಿಸಿದಂತೆಯೇ ಅದಕ್ಕೆ ತಕ್ಕ ಗುಣಪಡಿಸುವ ಔಷಧವನ್ನೂ ಇಟ್ಟಿದ್ದಾನೆ. ಆ ಮೂಲಿಕೆಯು ವಿಷವ್ಯಾಪಿಸಿದ ಮನುಷ್ಯನಿಗೆ ಅದರ ಬೇರನ್ನೇ ತೆಯಿದು ಹಚ್ಚಿದಲ್ಲಿ ತಕ್ಷಣವೇ ವಿಷವೆಲ್ಲ ಇಳಿದು ಗುಣವಾಗುತ್ತದೆ.

ಯಾವ ದ್ವಾರದಿಂದ ಆ ವಿಷಮೂಲಿಕೆಯು ಪೃಥ್ವಿಯ ಸಾರವನ್ನೇ ಹೀರಿಕೊಂಡು ವೃದ್ಧಿ ಹೊಂದುತ್ತದೆಯೋ ಅದೇ ಬೇರು ವಿಷವನ್ನಿಳಿಸಲೂ ಔಷಧಿಯಾಗಿರುವುದೆಂಬುದು ಆಶ್ಚರ್ಯಕರವಲ್ಲವೇ?

ಬಸವ ಜಯಂತಿ ಮಹೋತ್ಸವ ಗದಗ.

ಉತ್ತಮ ಲಾವಣಿ ಪದಗಳನ್ನು ಹೇಳುವವರಿಗೆ ಸುಸಂಧಿ!

೧ ನೇ ಬಹುಮಾನ ಬಂಗಾರದ ಪದಕವು.

೨, ೩ ನೇ ಬಹುಮಾನಗಳು ಯೋಗ್ಯತಾನುಸಾರ ಹಂಚಲ್ಪಡುವವು.

ಈ ವರುಷ ಇಲ್ಲಿ ಜರಗುವ ಶ್ರೀ ಬಸವ ಜಯಂತಿ ಮಹೋತ್ಸವದಲ್ಲಿ ಸುಪ್ರಸಿದ್ಧ ಲಾವಣಿ ಪದಗಳನ್ನು ಹೇಳುವವರಿಗೆ ಒಂದು ದಿವಸದ ಕಾರ್ಯಕ್ರಮವನ್ನು ನಿಶ್ಚಯಗೊಳಿಸಿದೆ. ಕಾರಣ ಕನ್ನಡದಲ್ಲಿ ಲಾವಣಿಗಳನ್ನು ಹೇಳತಕ್ಕವರು ಈ ಮಹೋತ್ಸವದಲ್ಲಿ ಭಾಗಿಗಳಾಗಿ ಬಹುಮಾನಗಳನ್ನು ಪಡೆಯಬಹುದು.

—(ನಿಯಮಗಳು)—

೧. ಲಾವಣಿ ಪದಗಳು ಶ್ರೀ ಬಸವಾದಿ ಶಿವಶರಣರ, ಮುಖ್ಯವಾಗಿ ಬಸವೇಶ್ವರ, ಪ್ರಭುದೇವ ಮತ್ತು ಅಕ್ಕಮಹಾದೇವಿ ಇವರ ಚರಿತ್ರ ಮತ್ತು ಅವರವರ ಆಗಿನ ಧಾರ್ಮಿಕ, ಸಾಮಾಜಿಕ, ನೈತಿಕ, ರಾಜಕೀಯ ತತ್ವಗಳನ್ನೊಳಗೊಂಡಿರಬೇಕು.

೨. ಲಾವಣಿಗಳನ್ನು ಹೇಳುವಾಗ ಪುಸ್ತಕವನ್ನು ನೋಡಿಕೊಂಡು ಹೇಳಬಾರದು.

೩. ಬಹುಮಾನಗಳನ್ನು ಹಂಚುವದು ಗೊತ್ತುಪಡಿಸಿದ ಕಮಿಟಿಯ ನಿರ್ಣಯವೇ ಕಡೆಯದು.

ಸೂಚನೆ:— ಈ ಸ್ಪರ್ಧೆಯಲ್ಲಿ ಭಾಗ ವಹಿಸತಕ್ಕವರು ತಾರೀಖು ೨೧-೪-೩೫ ರೊಳಗಾಗಿ ತಮ್ಮ ಸಂಪೂರ್ಣ ವಿಳಾಸ (ಪತ್ತೆ) ವನ್ನು ತಿಳಿಸತಕ್ಕದ್ದು. ಲಾವಣಿ ಪದಗಳ ಬಗ್ಗೆ ಗೊತ್ತುಪಡಿಸಿದ ತಾರೀಖನ್ನು ಹಿಂದಿನಿಂದ ತಿಳಿಸಲಾಗುವದು.

ವಿಶೇಷ ಸಂಗತಿಯ ಬಗ್ಗೆ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರಮಾಡಿ ತಿಳಕೊಳ್ಳತಕ್ಕದ್ದು.

ವಿಳಾಸ:—

ವಿರೂಪಾಕ್ಷಪ್ಪ ಕರವೀರಪ್ಪ ಪಟ್ಟಣಶೆಟ್ಟಿ,
ಕಾರ್ಯದರ್ಶಿ ಉತ್ಸವ ಕಮಿಟಿ,
ವೀರಶೈವ ತರುಣ ಸಂಘ, ಗದಗ.

ಪತ್ರಗಳ ಸಾರಾಂಶ.

ಬಂಥನಾಳ ಜಾತ್ರೆಯ ಸಮಾಚಾರವು.

ಮೊದಲಾಗಿಯೇ ಪ್ರಸಿದ್ಧ ಪಡಿಸಿದಂತೆ ಇಲ್ಲಿಯ ಉತ್ಸವದ ಕಾರ್ಯಕ್ರಮಗಳು ಒಳ್ಳೇ ಸಂಭ್ರಮದಿಂದ ಜರುಗಿದವು. ಆದರೆ ವಿಶೇಷವೇನಂದರೆ ಇಲ್ಲಿಯವರೆಗೂ ಇಲ್ಲಿ ಕೀರ್ತನಮಾಡಿದ ಪದವೀಧರ ಕೀರ್ತನಕಾರರಕ್ಕಿಂತ ವಧ್ಯಾಚಾರಿ ಹುಬ್ಬಿನಹಿಪ್ಪರಿಗಿ ಇವರ ಕೀರ್ತನವು ಜನರಿಗೆ ವಿಶೇಷ ಪರಿಣಾಮ ಕಾರಕವಾಗಿ ಜರುಗಿತು. ಮತ್ತು ಮೆ|| ಅ—ಕಲೇಕ್ಟರಸಾಹೇಬ ಕವಾಡೆ ಇವರು ದನಗಳ ಪ್ರದರ್ಶನಕ್ಕೆ ಆಗಮಿಸಿದವರಾಗಿದ್ದರು. ಪ್ರದರ್ಶನಕಾಲಕ್ಕೆ ಶ್ರೀ ಸ್ವಾಮಿಗಳವರು ಒಳ್ಳೇ ಪರಿಣಾಮಕಾರಕ ಭಾಷಣ ಮಾಡಿದರು. ಸಾಹೇಬರು ಸಹ ಸಂತೋಷಚಿತ್ತರಾದರು. ಆನಂತರ ಸಾಹೇಬರು ಮಠಕ್ಕೆ ಬಂದು ಕರ್ತೃಗದ್ದುಗೆಯ ದರ್ಶನ ತಕ್ಕೊಂಡು ಸ್ವಾಮಿಗಳಿಗೆ ಕಾಣಿಕೆಯನ್ನು ಅರ್ಪಿಸಿ ತಾಂಬೆಗೆ ಹೋದರು. ಒಟ್ಟಿನಮೇಲೆ ಈ ವರ್ಷದ ಉತ್ಸವವು ಒಳ್ಳೇ ಉತ್ತಮರೀತಿಯಾಗಿ ಜರುಗಿತೆಂದು ಹೇಳಲು ಸಂತೋಷವೆನಿಸುತ್ತದೆ.

ಪ್ರತ್ಯಕ್ಷದರ್ಶಿ

ಮಹಾಜನಗಳಲ್ಲಿ ವಿಜ್ಞಾಪನೆ.

ಶ್ರೀ ಮ. ನಿ. ಬಸವರಾಜ ಫ್ರೀ ಬೋರ್ಡಿಂಗ್ ಗುಲಬರ್ಗಾ.

ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಂಗೆ ಕೊಟ್ಟು ತಾ|
ಕೆಟ್ಟೆನೆನಬೇಡ ಅದು ಮುಂದೆ ಕಟ್ಟಿಹುದು ಬುತ್ತಿ ಸರ್ವಜ್ಞ||

ಇದು ಸುಧಾರಣೆಯ ಕಾಲ. ಪ್ರತಿಯೊಂದು ರಾಷ್ಟ್ರವು ಉನ್ನತ ಶಿಖರವನ್ನು ಮುಟ್ಟಲು ಹವಣಿಸುವ ಕಾಲ. ಜಗತ್ತಿನ ಎಲ್ಲ ರಾಷ್ಟ್ರಗಳೂ ಭರತಖಂಡಕ್ಕಿಂತ ಎಷ್ಟೋ ಪಾಲು ಸುಧಾರಣೆಯಲ್ಲಿ ಮುಂದುವರೆದು ಸಕಲ ಸೌಖ್ಯಾಭಿವೃದ್ಧಿಯನ್ನು ಹೊಂದುತ್ತಿರುವದಕ್ಕೆ ಆ ದೇಶಗಳಲ್ಲಿ ಪ್ರಚಾರವಾದ ವಿದ್ಯೆಯೇ ಕಾರಣವಾಗಿದೆ.

ನಮ್ಮೀ ಭರತಖಂಡದಲ್ಲಿ ೧೦೦ ಕ್ಕೆ ಸಾಧಾರಣ ೮ ಅಕ್ಷರಜ್ಞರಿದ್ದಾರೆ. ನಮ್ಮ ನಿಜಾಮ ರಾಜ್ಯದಲ್ಲಂತೂ ೧೦೦ ಕ್ಕೆ ೪ ರಂತೆ ಮಾತ್ರ ಇದ್ದಾರೆ. ೧೦-೧೨ ಲಕ್ಷ ವೀರಶೈವರು ನಮ್ಮ ನಿಜಾಮ ರಾಜ್ಯದಲ್ಲಿದ್ದರೂ ೩-೪ ಜನ ಪದವೀಧರರ ಕೂಡಾ ದೊರೆಯುವದು ದುರ್ಲಭ. ಇದಕ್ಕೆಲ್ಲ ನಮ್ಮ ಜನಗಳ— ಸಮಾಜದ—ವಿದ್ಯಾನಿರ್ಲಕ್ಷ್ಯವೇ ಕಾರಣವೆಂದು ಧಾರಾಳವಾಗಿ ಹೇಳಬಹುದು. ನಮ್ಮ ನಿಜಾಮ ಪ್ರಭುಗಳು ಎಲ್ಲ ಬಗೆಯ ವಿದ್ಯಾ ಸೌಕರ್ಯಗಳನ್ನು ಒದಗಿಸಿಕೊಟ್ಟದ್ದರೂ ನಮ್ಮ ಸಮಾಜವು ಹೀಗೆ ಹಿಂದುಳಿದಿರುವದು ನಮ್ಮಗಳಿಗೆ ತುಂಬಾ ಲಾಂಛನಾಸ್ಪದವಾದುದಾಗಿದೆ.

ಪಟ್ಟಣಗಳಲ್ಲಿಯ ವಿದ್ಯಾರ್ಥಿಗಳ ಗೋಳಂತೂ ಹೇಳತೀರದು. ವಿದ್ಯಾರ್ಜನೆ ಮುಂದುವರಿಸಬೇಕೆಂಬ ಇಚ್ಛೆ ಅವರಲ್ಲಿದ್ದರೂ ಅದಕ್ಕೆ ತಕ್ಕ ಪ್ರೋತ್ಸಾಹ ಸಹಾಯ ಅವರಿಗಿಲ್ಲ. ಬಡತನದ ಬಾಳು ಅವರ ಬೆನ್ನಟ್ಟಿರುವದರಿಂದ ಸಕಾಲಕ್ಕೆ ಊಟ ಕೂಡಾ ಅವರಿಗೆ ದೊರೆಯುವದಿಲ್ಲ. ಹಳ್ಳಿಯ ಬಡ ವಿದ್ಯಾರ್ಥಿಗಳು ವಿದ್ಯಾತುರರಾಗಿ ಪಟ್ಟಣಗಳಿಗೆ ಹೋಗಬೇಕೆಂದರೆ ಅಲ್ಲಿ ಅನ್ನ ವಸ್ತ್ರಗಳಿಗೆ ಅಭಾವ. ಇಂಥ ಬಡತನದ ಸ್ಥಿತಿಯಲ್ಲಿ ನೊಂದು, ಬೆಂದು, ಬಳಲುತ್ತಿರುವ ಬಡವಿದ್ಯಾರ್ಥಿಗಳಿಗೆ ಹೊಟ್ಟೆಗಾಗಿ ಒಂದು ತುತ್ತು ರೊಟ್ಟೆಯ ಅನುಕೂಲವನ್ನಾದರೂ ಮಾಡಿಕೊಡುವದು ಸಮಾಜದ ಕರ್ತವ್ಯವಲ್ಲವೇ ?

ಇಂಥ ಬಡ ವಿದ್ಯಾರ್ಥಿಗಳ ಬಾಳಿನ ಗೋಳನ್ನು ಕಣ್ಣಾರೆ ಕಂಡು, ಮನದಲ್ಲಿ ಮರುಗಿ ಬಡ ವಿದ್ಯಾರ್ಥಿಗಳಿಗೆ ಅನ್ನದ ಅನುಕೂಲವನ್ನಾದರೂ ಮಾಡಿಕೊಡಬೇಕೆಂಬ ಸದುದ್ದೇಶದಿಂದ ಗುಲಬರ್ಗಾ ಗದ್ದುಗೆಯ ಮಠದ ಶ್ರೀ ಮ. ನಿ. ಪ್ರ. ಸ್ವ ಶ್ರೀ ಶಿವಮೂರ್ತಿ ಮಹಾಸ್ವಾಮಿಗಳವರು ಕಳೆದೊಂದು ವರ್ಷದಿಂದಲೂ ತಮ್ಮ ಮಠದಲ್ಲಿ ಉಚಿತ ಭೋಜನಾಲಯವನ್ನು ನಡೆಯಿಸುತ್ತಾ ಬಂದಿದ್ದಾರೆ.

ಉದಾರ ಹೃದಯಿಗಳು— ದೀನ ಬಂಧುಗಳು ಈ ಬಡ ವಿದ್ಯಾರ್ಥಿ ಉಚಿತ ಭೋಜನಾಲಯಕ್ಕೆ ತಮಗೆ ಯುಕ್ತ ಕಂಡ ರೀತಿಯಲ್ಲಿ ಮುಕ್ತಹಸ್ತದಿಂದ ಸಹಾಯಮಾಡಿ ಅನ್ನದಾನದ ಆ ಪುಣ್ಯದಿಂದ ವಿದ್ಯಾದಾನ ಮಾಡಿದ ಶ್ರೇಯಸ್ಸಿಗೆ ಪಾತ್ರರಾಗಬೇಕಾಗಿ ಪ್ರಾರ್ಥಿಸುವ ತಮ್ಮ ವಿಧೇಯ

ಸರ್ವಾಧಿಕಾರಿ,
ಫ್ರೀ ಬೋರ್ಡಿಂಗ್ ಗದ್ದುಗೆಯಮಠ, ಗುಲಬರ್ಗಾ.

ನಿರಂಜನ ಹಾಲ್.

ಮಹಾಶಯರೇ ನಮ್ಮಲ್ಲಿ ಸಕಲರಿಗು ಪೂಜಾರ್ಹವಾದ ಸಾಮಾನುಗಳು ದೊರೆಯುತ್ತೆ.

ಮಹದೇಶ್ವರ ಸ್ವಾಮಿಯವರು ಎಂಬ ಮಹಾ ವಿರಕ್ತರು ತಮ್ಮ ಬಾಲ್ಯದಲ್ಲಿಯೇ ಹುಲಿಯ ಮೇಲೆ ಕುಳಿತು ಸಂಚಾರ ಮಾಡುತ್ತಿದ್ದ ಫೋಟೋ ೧೦×೧೪ ಸೈಜು ಡರ್ಜ ೧ ಕ್ಕೆ ೧-೮-೦

ನಂಜುಂಡೇಶ್ವರ ಸ್ವಾಮಿ ಫೋಟೋ ೧೦ + ೧೩ ಸೈಜು ಡರ್ಜ ೧ ಕ್ಕೆ (೧-೮-೦) ಡಿಟೊ ೭ + ೯ ಸೈಜು ಡ. ೧ ಕ್ಕೆ ೦-೧೩-೦ ಮತ್ತು ೦-೬-೦. ಅವಲ್ ದಶಾಂಗ ಧೂಪದ ಘಟ್ಟಿ ಸೇರು ೧ ಕ್ಕೆ (೩-೦-೦) ದುಯಂ ಸೇರು ೧ ಕ್ಕೆ, ೧-೮-೦ ೧-೦-೦ ಒಂದಾವರ್ತಿ ತರಿಸಿ ಪರೀಕ್ಷಿಸಿರಿ.

ಹೆಚ್, ಎಂ. ಮಲ್ಲಪ್ಪ
ಆಂಡ್, ಬ್ರದರ್ಸ್ ಫೋಟೋಗ್ರಾಫರ್,
ನಂಜನಗೂಡು.

ಸಿಲೆಂಡರ್ ಮಶಿನ್ ಬೇಕಾಗಿದೆಯೆ?

ಹಾಗಾದರೆ ನಮ್ಮಲ್ಲಿದೆ. ಡಾವಸನ್ ಎಂಡ್ ಸನ್ಸ್ ಕಂಪನಿಯದು. ಉತ್ತಮ ಸ್ಥಿತಿಯಲ್ಲಿ ಕೆಲಸಮಾಡುತ್ತದೆ. ಇನ್ನರ್ ಸೈಡ್ ಛೆಸ್ 29¼ + 35¼ ಸೈಜನದು. ಪಂಖಾ ಸಹಿತ ಇದ್ದದ್ದು ಫೋಲ್ಡಿಡ್ ಮೋಲ್ಡುಗಳು ಸಹಿತ ಕೊಡಲ್ಪಡುವುದು.

ಹೆಚ್ಚಿನ ಸಂಗತಿಗಳನ್ನು ಪತ್ರಮುಖೇನ ಅಥವಾ ಸಮಕ್ಷಮ ತಿಳಿದುಕೊಳ್ಳಬಹುದು. **ಮ್ಯಾನೇಜರ್**

ಶ್ರೀ ಲಿಂಗರಾಜ ಆರ್ಟ ಪ್ರೆಸ್, ಧಾರವಾಡ.

ಕರ್ನಾಟಕ ಸಾಹಿತ್ಯ ಪರಿಷತ್ತು.

ಶ್ರೀ ಕೃಷ್ಣರಾಜೇಂದ್ರ ಪರಿಷನ್ಮಂದಿರ, ಚಾಮರಾಜ ಪೇಟೆ, ಬೆಂಗಳೂರು ಸಿಟಿ.

ಅಧ್ಯಕ್ಷರು

ಮೈಸೂರು ಸಂಸ್ಥಾನದ ಶ್ರೀಮದ್ಯುವರಾಜರಾದ

ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್. ಜಿ. ಸಿ. ಐ. ಇ., ಮಹಾಸ್ವಾಮಿಯವರು.

ವಿ ಶೇ ಷ ಸಾ ಹಿ ತ್ಯೋ ತ್ಸ ವ

ಬರುವ ಮೇ ತಿಂಗಳಲ್ಲಿ.

ಮಹಾಶಯರೆ,

ಪರಿಷತ್ತು ಕೆಲವಂದಿ ವಿದ್ಯಾಭಿಮಾನಿಗಳಾದ ಮಹಾರಾಜರ ಮತ್ತು ಸಂಸ್ಥೆಗಳ ಉದಾರ ಸಹಾಯವನ್ನು ಪಡೆದು ಕಳೆದ ವರ್ಷ ಮೇ ತಿಂಗಳಲ್ಲಿ ಒಂದು ವಾರ (೬-೫-೧೯೩೪ ರಿಂದ ೧೨-೫-೧೯೩೪) ವಿಶೇಷ ಸಾಹಿತ್ಯೋತ್ಸವವನ್ನು ನಡೆಸಿದ್ದು ತಮಗೆ ಜ್ಞಾಪಕದಲ್ಲಿರ ಬಹುದು. ಆ ಉತ್ಸವವನ್ನು ಮೈಸೂರು ಸಂಸ್ಥಾನದ ದಿವಾನರಾದ **ಸರ್ ಮಿರ್ಜಾ ಎಂ. ಇಸ್ಮಾಯಿಲ್ ಸಾಹೇಬರವರು** ಪ್ರಾರಂಭಿಸಿದರು. ಆ ಉತ್ಸವದಲ್ಲಿ ಕನ್ನಡ ಉಪನ್ಯಾಸಗಳು, ಕನ್ನಡ ಗ್ರಂಥ ಪ್ರದರ್ಶನ, ವಿಜ್ಞಾನಶಾಲೆ ಯಂತ್ರಕರ್ಮಶಾಲೆಗಳ ಸಮೀಕ್ಷಣ, ಕಾವ್ಯವಾಚನ— ಮೊದಲಾದ ಅನೇಕ ಬಗೆಯ ವಿದ್ಯೆ ಸಾಹಿತ್ಯಗಳ ಕಾರ್ಯಗಳು ನಡೆದುವು. ಉಪನ್ಯಾಸ ವಿಷಯಗಳಲ್ಲಿ ವಿವಿಧ ವಿಜ್ಞಾನಶಾಸ್ತ್ರಗಳೂ, ರಾಜಶಾಸ್ತ್ರ ಅರ್ಥಶಾಸ್ತ್ರಗಳೂ, ಇತಿಹಾಸ ಭಾಗಗಳೂ, ಕಾವ್ಯವಿಮರ್ಶೆಯೂ, ಸಮಾಜ ತತ್ತ್ವಶೋಧನೆಯೂ ಸೇರಿದ್ದುವು. ಪ್ರಸಿದ್ಧ ವಿದ್ವಾಂಸರೂ ಪರಿಶೋಧಕರೂ ಆ ಉಪನ್ಯಾಸಗಳನ್ನು ಕೊಟ್ಟು ಉಪಕರಿಸಿದರು. ಪ್ರತಿಯೊಂದು ಉಪನ್ಯಾಸವೂ ಮುಗಿದ ಬಳಿಕ ಪ್ರಶ್ನೋತ್ತರಗಳು ನಡೆದು, ವಿಷಯವು ಮತ್ತಷ್ಟು ಮನದಟ್ಟುವಂತೆ ಆಯಿತು. ಈ ಬಗೆ ಬಗೆಯ ಜ್ಞಾನ ಸಮಾರಾಧನೆಯಿಂದ ಪ್ರಯೋಜನ ಪಡೆಯಲು ಕರ್ನಾಟಕ ದೇಶದ ಎಲ್ಲ ಭಾಗಗಳಿಂದಲೂ ಬಹುಮಂದಿ ದಯಮಾಡಿಸಿದ್ದರು. ಪ್ರತಿ ದಿವಸವೂ ಪ್ರತಿಯೊಂದು ಉತ್ಸವ ಕಾರ್ಯಕ್ಕೂ ೬೦೦-೭೦೦ ಮಂದಿ ಇರುತ್ತಿದ್ದರು. ಅವರಲ್ಲಿ ಸುಮಾರು ೩೦೦ ಮಂದಿ ಉಪಾಧ್ಯಾಯರು ಮತ್ತು ವಿದ್ಯಾಪ್ರಚಾರದಲ್ಲಿ ಆಸಕ್ತರಾದ ಇತರ ಮಹಾಶಯರು. ಪರಸ್ಥಳಗಳಿಂದ ದಯಮಾಡಿಸಿದ್ದ ಅನೇಕ ಮಂದಿಗೆ ಭೋಜನವಸತಿಗಳ ಅನುಕೂಲವನ್ನು ಬಹುಮಟ್ಟಿಗೆ ಉಚಿತಾರ್ಥವಾಗಿ ಏರ್ಪಡಿಸಿತ್ತು. ಈ ಸಾಹಿತ್ಯೋತ್ಸವವನ್ನು ಮಹಾರಾಜರು ನೋಡಿ ಸಂತೋಷಿಸಿದರು.

ಪಾಠಶಾಲೆಯಲ್ಲಿ ಬೋಧನ ಕಾರ್ಯವು ಸಮರ್ಪಕವಾಗಿ ನಡೆಯುವದಕ್ಕೂ, ಕನ್ನಡಭಾಷೆ ಬೆಳೆದು ಬಲಪಡುವುದಕ್ಕೂ ಇಂಥ ಪ್ರಕೃತಲೋಕ ವಿಚಾರಗಳನ್ನು ಕುರಿತ ಉಪನ್ಯಾಸಗಳು ಬಹು ಪ್ರಯೋಜನಕರವೆಂದು ಆ ಅನುಭವದಿಂದ ತೋರಿ ಬಂದಿದೆ. ಅಂಥ ವಿಶೇಷ ಸಾಹಿತ್ಯೋತ್ಸವವನ್ನು ಈ ವರ್ಷವೂ ನಡೆಸಬೇಕೆಂದು ಪರಿಷತ್ತಿಗೆ ನೂರಾರು ಕೋರಿಕೆಗಳು ಬಂದಿವೆ. ಹೀಗೆ ಬಹು ಕಡೆಗಳಿಂದ ಬರುತ್ತಿರುವ ಸೂಚನೆಗಳನ್ನು ಅಂಗೀಕರಿಸಿ, ಈ ಸಾರಿಯೂ — ಎಂದರೆ ೧೯೩೫ ನೆಯ ಇಸವಿ ಮೇ ತಿಂಗಳ ಬೇಸಿಗೆಯ ರಜಾ ದಿನಗಳಲ್ಲಿ — ಅಂಥ ಸಾಹಿತ್ಯೋತ್ಸವವನ್ನು ಏರ್ಪಡಿಸಬೇಕೆಂದು ಪರಿಷತ್ತು ಸಂಕಲ್ಪಮಾಡಿದೆ. ಸಾಧ್ಯವಾದರೆ ಈ ಸಲದ ಉತ್ಸವವು ಇನ್ನೂ ಹೆಚ್ಚಿನ ರೀತಿಯಲ್ಲಿ ನಡೆಯಬೇಕಾಗಿದೆ. ಉಪಾಧ್ಯಾಯರುಗಳ ಭೋಜನ ಸೌಕರ್ಯ, ಉಪನ್ಯಾಸಕರ ಪ್ರಯಾಣ, ವಿಜ್ಞಾನ ಪ್ರದರ್ಶನಗಳಿಗೆ ಬೇಕಾಗುವ ಸಲಕರಣೆಗಳು, ಮುದ್ರಣಕಾರ್ಯ— ಈ ಅನೇಕ ಬಾಬುಗಳಿಗಾಗಿ ಹೋದವರ್ಷ ಸುಮಾರು ೧೬೦೦ ರೂಪಾಯಿ ವೆಚ್ಚ ತಗಲಿತು. ಈ ಸಲದ ವೆಚ್ಚ ಸ್ವಲ್ಪ ಹೆಚ್ಚಾದೀತು. ಆದರೆ ಪರಿಷತ್ತಿನ ಹಣದ ಸ್ಥಿತಿಯು ಇನ್ನೂ ಬಹು ಕಷ್ಟಕರವಾಗಿದೆ. ಮಹಾಜನರು ದೊಡ್ಡ ಮನಸ್ಸು ಮಾಡಿದಲ್ಲದೆ ಈ ಸಮಾರಂಭವನ್ನು ಪರಿಷತ್ತು ನೇರವೇರಿಸುವುದು ಸಾಧ್ಯ ತೋರುವುದಿಲ್ಲ.

ದೇಶದ ವಿದ್ಯಾಭಿವೃದ್ಧಿಗೆ ಇಷ್ಟು ಪ್ರಯೋಜನಕರವಾದ ಕಾರ್ಯವನ್ನು ಅಸಾಧ್ಯವೆಂದು ಬಿಡಲು ಪರಿಷತ್ತಿಗೆ ಮನಸ್ಸು ಬಾರದು. ಪರಿಷತ್ತು ತಮ್ಮಂಥವರ ಔದಾರ್ಯವನ್ನು ನಂಬಿಕೊಂಡು ನಿಂತಿದೆ. ಕಾಲಸ್ಥಿತಿ ಈಗ ಸಂಕೋಚಕರವಾಗಿದ್ದರೂ ತಮ್ಮ ದೇಶಭಾಷಾಭಿಮಾನಗಳು ದೊಡ್ಡವಾದ ಕಾರಣ ಈ ಪ್ರಾರ್ಥನೆಯನ್ನು ತಾವು ವಿಶ್ವಾಸದಿಂದ ಲಾಲಿಸುವಿರೆಂದು ನಿರೀಕ್ಷಿಸಿಕೊಂಡಿದ್ದೇವೆ. ತಮ್ಮ ಉಪಕಾರಕ್ಕಾಗಿ ಪರಿಷತ್ತು ಅತ್ಯಂತ ಕೃತಜ್ಞತೆಯುಳ್ಳದ್ದಾಗಿರುವುದೆಂಬುದನ್ನು ನಾವು ಮಾತಿನಿಂದ ಹೇಳಬೇಕಾಗಿಲ್ಲ. ದ್ರವ್ಯ ಸಹಾಯ ಎಷ್ಟು ಬೇಗ ದೊರೆತರೆ ಮುಂದಿನ ಏರ್ಪಾಟುಗಳನ್ನು ನಡೆಯಿಸಲು ಅಷ್ಟು ಅನುಕೂಲವಾಗುವುದು. ಆದಕಾರಣ ನಾವು ಕುತೂಹಲದಿಂದ ತಮ್ಮ ಅನುಗ್ರಹವನ್ನು ಎದುರು ನೋಡುತ್ತಿರುತ್ತೇವೆ. ಇಂತು ತಮ್ಮ ವಿಧೇಯರು,

ಎಂ. ಆರ್. ಶ್ರೀನಿವಾಸ ಮೂರ್ತಿ, ಬಿ. ಎ.
(ಹೆಡ್ ಮಾಸ್ಟರ್, ನಾರ್ಮಲ್ ಸ್ಕೂಲು)
ವ್ಯವಸ್ಥಾಪಕ,
ಪರಿಷತ್ತಿನ ವಿಶೇಷ ಸಾಹಿತ್ಯೋತ್ಸವದ ಉಪಸಮಿತಿ.

ಡಿ. ವಿ. ಗುಂಡಪ್ಪ,
(ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲಿನ ಮತ್ತು ಯೂನಿವರ್ಸಿಟಿ ಕೌನ್ಸಿಲ್ ಸೆನೆಟ್ಟುಗಳ ಮೆಂಬರು)
ಉಪಾಧ್ಯಕ್ಷ.

ಸಿ. ಕೆ. ವೆಂಕಟರಾಮಯ್ಯ, ಎಂ. ಎ., ಎಲ್ ಎಲ್. ಬಿ.
(ಸರಕಾರದ ಟ್ರಾನ್ಸಲೇಟರು)
ಗೌರವ ಕಾರ್ಯದರ್ಶಿ.

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಸ್ಯೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ: —

ಜಿ. ಎಸ್. ಗಂಗಾಧರಯ್ಯ,

ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ, ತುಮಕೂರು

(ಮೈಸೂರು ಸ್ಟೇಟ್)

ಜಾಹೀರಾತ.

ಸರ್ವಜನರಲ್ಲಿ ವಿಜ್ಞಾಪಿಸುವದೇನಂದರೆ—

ಈ ಜಾಹೀರಾತಿನಿಂದ ತಿಳಿಸುವದೇನಂದರೆ ನನ್ನ ಸಹೋದರನಾದ ಬಸಣ್ಣ ಈತನು ಮನೆ ಬಿಟ್ಟು ಒಂದು ವರುಷವಾಯಿತು ಈತನ ಸ್ವಭಾವ ಹುಚ್ಚು, ವಯಸ್ಸು ೪೦, ಬಣ್ಣ ಸಾಧಾರಣ ಕೆಂಪು ಸಾಧಾರಣ ನಿಲುವು, ದುಂಡು ಮುಖ, ಬಲ ಗದ್ದದ ಮೇಲೆ ಒಂದ ಹಸರು ಬಣ್ಣದ ಹೆಬ್ಬೆರಳಿನಷ್ಟು ಕಲೆ ಇದ್ದು ಅದರ ಮೇಲೆ ಕೂದಲ ಇವೆ. ಒಮ್ಮೊಮ್ಮೆ ಗೋಣು ಹೊರಳಿಸುವನು. ಮತ್ತು ಶೌಚಕ್ಕೆ ಕೂತರೆ ೨-೩ ತಾಸಾದರು ಕೂಡ್ರುವನು. ಮತ್ತು ಕ್ಷೌರಮಾಡಿಸುವದಕ್ಕೆ ಬಹಳ ಪ್ರೀತಿ. ಮೀಸೀಸಹ ತೆಗೆಸುವನು. ಬಾಲ, ವೃದ್ಧರಿಗೆ ಸಹ ತಾತಾ, ತಾತಾ ಅನ್ನುವನು. ತನ್ನಷ್ಟಕ್ಕೆ ತಾನೆ ಮರಿಯಪ್ಪ ಪಂಪಣ್ಣಾ, ಟಾಕಣ್ಣಾ ಎಂದು ಅನ್ನುತ್ತಾನೆ. ಹೆಸರು ಕೇಳಿದ ಬಸಣ್ಣನೆಂದು ಹೇಳುವನು. ಹುಡುಗರು ತಡವಿದರೆ ಚೀರುವನು ಮತ್ತು ಹಸ್ತ ತಿರುವಿ ಹಿಡಿದು ಶಂಖಹಚ್ಚುವನು. ಇಷ್ಟು ಚಿಹ್ನಗಳನ್ನು ಕಂಡರೆ ದಯವಿಟ್ಟು ತಮ್ಮಲ್ಲಿ ಇರಿಸಿಕೊಂಡು ನಮಗೆ ತಿಳಿಸಿದ ನಿಮಗೆ ೧೦ ರೂ. ಇನಾಮು ಕೊಡುತ್ತೇವೆ ತಿಳಿದಿರಬೇಕು.

ನಮ್ಮ ವಿಳಾಸ:— **ಪಂಪಣ್ಣ ಗಡ್ಡದ ದೇವಾಂಗ**

ಮುಕ್ಕಾಂ, ಪೋಸ್ಟ ಮಸ್ಕಿ, ತಾಲೂಕ

ಲಿಂಗಸೂಗೂರ ಜಿಲ್ಲಾ ರಾಯಚೂರ

ಮುದ್ದಾದ ಅಕ್ಷರ! ಸುಲಭ ದರ!

ಶ್ರೀ ರಂಗನಾಥ ಟೈಪ್ ಫೌಂಡರಿ

ಬೆಂಗಳೂರು.

ಕನ್ನಡ ಮತ್ತು ಇಂಗ್ಲಿಷ, ಎಲ್ಲಾ ತರದ ಟೈಪುಗಳೂ ಒಳ್ಳೊಳ್ಳೇ ಬಾರ್ಡರಗಳೂ ನಮ್ಮ ಫೌಂಡರಿಯಲ್ಲಿ ತಯಾರಾಗುತ್ತವೆ.

ಒಳ್ಳೇ ಮೆಟಲ್. ಬಹು ಅಂದವಾದ ಅಕ್ಷರಗಳು. ಬಲು ಸುಲಭ ದರ. ಕ್ಯಾಟಲಾಗ ತರಿಸಿಕೊಳ್ಳಿರಿ. ಒಮ್ಮೆ ಟೈಪುಗಳನ್ನು ತರಿಸಿಕೊಂಡು ಅನುಭವ ಹೊಂದಿರಿ. ಹಳೆ ಟೈಪುಗಳಿದ್ದರೆ ಸುಲಭ ಚಾರ್ಜಿಗೆ ಹೊಸದಾಗಿ ಹೊಯಿದು ಕೊಡುತ್ತೇವೆ.

ಪ್ರೊಪ್ರೈಟರ,

ಶ್ರೀ ರಂಗನಾಥ ಟೈಪ್ ಫೌಂಡರಿ

೬೭ ಕುಬೇರ ಸಾಹುಜಿ ಲೈನ್

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪತ್ರಿಫಲದ ದಿವ್ಯಾಭರಣ!

ಲಿಂಗಪೂಜಕರಿಗೆ ಪತ್ರಿಯು ಅತ್ಯಾಗತ್ಯವಲ್ಲವೆ? ಪತ್ರಿಯ ಫಲದಿಂದ ಮಾಡುವ ಈ ದಿವ್ಯಾಭರಣ, ಗಳಲ್ಲಿ ನಿಮಗೆ ಬೇಕಾದುದನ್ನು ತರಿಸಿಕೊಳ್ಳಿರಿ.

ಕರಕಮಲ, ನಾಗಾಭರಣ, ಕಂಠಮಾಲೆ ಮೊದಲಾದವು. ಮಂತ್ರವಿಶಿಷ್ಟ, ಲಿಂಗಪೂಜೆಗೆ ಅಗತ್ಯವಾಗಿರತಕ್ಕವು.

ನಿಮ್ಮ ಇಷ್ಟದಂತೆ ಮಂತ್ರಾಕ್ಷರಗಳನ್ನು ಸ್ಫುಟಗೊಳಿಸಿ ಪತ್ರಿಯ ಕಾಯಿಯ ಚಿಪ್ಪಿನಿಂದ ಬಹು ಅಂದವಾದ ಆಭರಣಗಳನ್ನು ತಯಾರುಮಾಡಿಕೊಡುತ್ತೇವೆ.

ಕ್ರಯ ೧ ರೂಪಾಯಿಯಿಂದ ಮೇಲ್ಪಟ್ಟು ನಿಮ್ಮ ಇಷ್ಟವಿದ್ದಷ್ಟು ರೂ. ಗಳ ವರೆಗೆ.

ವಿಳಾಸ:— ಸಂಗಮೇಶ- ಶ್ರೀ ಸರ್ಪಭೂಷಣ ಶಿವಯೋಗಿ ಮಠ ಬಳೇಪೇಟೆ ಬೆಂಗಳೂರು ಸಿಟಿ.

ಪ್ಲೇಗ ಸಂಜೀವಿನಿ.

ಅತ್ಯಾಶ್ಚರ್ಯಕರವಾದ ಗುಣ! **ಕೇವಲ ೬ ತಾಸುಗಳಲ್ಲಿಯೇ ಗುಣ!**

ಇದನ್ನು ಸೇವನೆ ಮಾಡುವದರಿಂದ ಪ್ಲೇಗಿನ ಭಯವೇ ಇಲ್ಲ!

೧೦೦ ಕ್ಕೆ ೧೦೦ ರಂತೆ ಗುಣ!!

ಶ್ರೀ ಮನ್ನಿರಂಜನ ಶಾಂತವೀರ ಸ್ವಾಮಿಗಳು ಗುರುಮಠಕಲ್ ಇವರು ಲೋಕ ಕಲ್ಯಾಣಾರ್ಥವಾಗಿ **ಪ್ಲೇಗ ಸಂಜೀವಿನಿ** ಎಂಬ ದಿವ್ಯ ಔಷಧಿಯನ್ನು ಶೋಧಮಾಡಿರುವರು. ಪ್ಲೇಗ ರೋಗವು ಎಷ್ಟು ಘಾತುಕವದೆಯೆಂಬುದನ್ನು ಹೇಳುವ ಅವಶ್ಯವಿಲ್ಲ. ಈ ಪ್ಲೇಗಿನಿಂದ ಸಾವಿರಾರು ಜನರು ಸಾಯುತ್ತಿರುತ್ತಾರೆ. ಇದನ್ನು ತಡೆಯುವದಕ್ಕಾಗಿ ಎಷ್ಟೋ ಔಷಧಗಳನ್ನು ತಯಾರ ಮಾಡಿರುವರು. ಅವುಗಳಿಂದೇನೂ ಗುಣವಾದದ್ದು ಕಂಡು ಬರುವದಿಲ್ಲ. ಈ ಪ್ಲೇಗ ಸಂಜೀವಿನಿಯಿಂದ **ಆರೇ ತಾಸುಗಳಲ್ಲಿಯೇ** ಗುಣವಾಗುತ್ತದೆ. ಇದರ ಒಂದು ಬಾಟ್ಲಿಯ ಕಿಮ್ಮತ್ತು ೧ ರೂ. ೫ ಆಣೆ.

ವಿಶೇಷ ಮಾಹಿತಿಯನ್ನು ಅನುಪಾನ ಪತ್ರಿಕೆಯಲ್ಲಿ ನೋಡಿರಿ.

ವಿಶೇಷ ಸೂಚನೆ— ಅನುಪಾನ ಪತ್ರಿಕೆಯ ಸೂಚನೆಯ ಮೇರೆಗೆ ಔಷಧವನ್ನು ತೆಗೆದುಕೊಂಡಲ್ಲಿ ಖಾತ್ರಿಯಿಂದ ಗುಣವಾಗುವದು. ಎಲ್ಲ ಕಡೆಗೂ ಏಜಂಟರು ಬೇಕು. ವಿಳಾಸ—

ಏಜಂಟ್
ಬಶೆಟ್ಟೆಪ್ಪ ಬಸಪ್ಪ ಹಲಕುರ್ಕಿ,
ಬಾಗಲಕೋಟೆ.

ಪ್ಲೇಗ ಸಂಜೀವಿನಿ ಆಫೀಸ್
ಗುಲಬರ್ಗಾ.

ಮಹಾರೋಗ ಸಂಜೀವಿನಿ.

ಶ್ರೀಮನ್ನಿರಂಜನ ಗುರುಮಠಕಲ್ಲ ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ

ಮಹಾರೋಗ ಸಂಜೀವಿನಿ,

ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.

ಇತ್ತಿತ್ತಲಾಗಿ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ಮಿತಿಮೀರಿ ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. ಈ ಕೆಟ್ಟಬೇನೆಯು (ಪ್ಲೇಗ ಮಾರಿಕಾ,) ಖಜ್ಜಿಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ ತಗಲತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ಮೃತ್ಯುವಿನ ತುತ್ತಾಗುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಖಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ನಾರಸಂಹಾರಿ, ಕೂಸುಗಳ ಹೊಟ್ಟೆಯೊಳಗಿನ ಬೇನೆ** ವಗೈರೆ ರೋಗಗಳ ಮೇಲೆ ಆಶ್ಚರ್ಯಕಾರಕ ಔಷಧಿಗಳನ್ನು ಕಂಡು ಹಿಡಿದ ಸದರಿ ಪೂಜ್ಯಪಾದರೇ ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ ಔಷಧಿಯನ್ನು ಶೋಧಮಾಡಿ ಪ್ರಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೆಯುಳ್ಳವರು ಮುದ್ದಾಂ ಬಂದು ತಮ್ಮ ರೋಗ ಲಕ್ಷಣಗಳನ್ನೆಲ್ಲ ತೋರಿಸಿದರೆ ಅದಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ. ಮೊದಲು ಔಷಧದ ಅರ್ಧ ಕಿಮ್ಮತ್ತು ಕೊಟ್ಟು ಔಷಧ ತಕ್ಕೊಳ್ಳಲು ಪ್ರಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಅಗ್ಗೆ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳತಕ್ಕದ್ದು. ವಿಶೇಷ ಸಂಗತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು.

ಮ್ಯಾನೇಜರ ಆರೋಗ್ಯ ಮಂದಿರ, ಕಿಂಟಮಠ ಕಸಬಾ ಕ್ಯಾಂಪ **ಸೊಲ್ಲಾಪುರ ಸಿಟಿ.**

೧೦,೩೧,೦೦೦ ರೂಪಾಯಿ

ಬೆಲೆ ಬಾಳುವ ಪಾಲಿಸಿಗಳನ್ನು ಸ್ವರಾಜ್ಯ ಕಂಪನಿಯವರು ಬರೀ ಹದಿನಾಲ್ಕು ತಿಂಗಳಲ್ಲಿ ಕೊಟ್ಟಿರುತ್ತಾರೆ. ಕೂಸು ಹುಟ್ಟಿದರೆ, ಮಕ್ಕಳ ಮದಿವೆ ಮಾಡಿದರೆ, ಮರಣ ಹೊಂದಿದರೆ, ವಿಮೆಯುದಾರರಿಗೆ ೫೦೦ ರೂಪಾಯಿಗಳ ವರೆಗೆ, ವಿಮೆಯ ಹಣವು ಕೊಡಲ್ಪಡುವದು. ವಿಮೆಯ ಕಂತಗಳು ತೀರ ಕಡಿಮೆ. ತಿಂಗಳೊಂದಕ್ಕೆ ಒಂದು ರೂಪಾಯಿ ಪ್ರವೇಶ ಫೀ ೫ ರೂ. ವಾರ್ಷಿಕ ಫೀ ಒಂದು ರೂಪಾಯಿ ಮಾತ್ರ. ಏಜಂಟರಾಗಿ ಕೆಲಸ ಮಾಡುವವರಿಗೂ ಆರ್ಗನಾಯಝರರಿಗೂ ಒಳ್ಳೇ ಲಾಭ.

ಹೆಚ್ಚಿನ ಮಾಹಿತಿ ಬೇಕಾದವರು ಕಂಪನಿಯ ಕೂಡ ಪತ್ರವ್ಯವಹಾರ ಮಾಡಬೇಕು.

ಎಂ. ಎಸ್. ಕೇಸರಿ ಬಿ. ಎ., ಎಲ್ ಎಲ್. ಬಿ.
ಮ್ಯಾನೇಜಿಂಗ ಏಜಂಟ್ಸ,
ದಿ ಸ್ವರಾಜ್ಯ ಬ್ಯಾಂಕಿಂಗ ಆ್ಯಂಡ ಇನ್ಸುರನ್ಸ ಕಂಪನಿ ಲಿಮಿಟೆಡ್, ಧಾರವಾಡ.

ದಿ ಸ್ವರಾಜ್ಯ ಬ್ಯಾಕಿಂಗ

ಮತ್ತು ಇನ್ಶುಅರನ್ಸ ಕಂಪನಿ, ಲಿಮಿಟೆಡ್

ಧಾರವಾಡ

ಇದರ ಮ್ಯಾನೇಜಿಂಗ ಏಜಂಟ್ಸರವರಿಗೆ—

ನೀಲಪ್ಪಾ ಮಲ್ಲಪ್ಪಾ ಮೆಣಸಿನಕಾಯಿ ಸಾ|| ಅಕ್ಕೂರ

ಜಿಲ್ಹಾ ಧಾರವಾಡ ಈತನು ಮಾಡುವ ಶರಣಾರ್ಥಿಗಳು

ತಮ್ಮ ಕಂಪನಿಯಲ್ಲಿ ನಾನು ೧೯೩೪ನೇ ಇಸ್ವಿಯ ಜಾನೇವರಿ ತಿಂಗಳ ಇಪ್ಪತ್ತನೆಯ ತಾರೀಖಿನ ದಿವಸ ಜನನ ವಿಮೆಯನ್ನು ಇಳಿಸಿದ್ದೆನು. ನನ್ನ ಜನನ ವಿಮೆಯ ಪಾಲಿಸಿ ನಂಬರು (೨) ಎರಡು ಇರುತ್ತದೆ. ಪಾಲಿಸಿಯನ್ನು ತೆಗೆದು ಕೊಂಡ ಒಂದು ವರ್ಷದ ಮೇಲೆ ನನಗೆ ಒಂದು ಕೂಸು ಜನನವಾಯಿತು. ಕಂಪನಿಗೆ ನಾನು ಒಟ್ಟು (೧೮) ರೂಪಾಯಿಗಳನ್ನು ಕೊಟ್ಟಿರುತ್ತೇನೆ. ಕೂಸು ಹುಟ್ಟಿದ್ದನ್ನು ಸಿದ್ಧಮಾಡಿಕೊಟ್ಟ ಕೂಡಲೆ ನೀವು ನನಗೆ ಕಳುಹಿಸಿಕೊಟ್ಟ (೪೪೭) ನಾಲ್ಕು ನೂರಾನಾಲ್ವತ್ತೇಳು ರೂಪಾಯಿಗಳು ಮುಟ್ಟಿದುವು. ಈ ಬಗ್ಗೆ ಕಂಪನಿಗೆ ನಾನು ತುಂಬಾ ಋಣಿಯಾಗಿದ್ದೇನೆ.

ಅಕ್ಕೂರ
ತಾ|| ೧೩-೩-೩೫. } (ಸಹಿ) **ನೀಲಪ್ಪಾ ಮಲ್ಲಪ್ಪಾ ಮೆಣಸಿನಕಾಯಿ.**

ಹರ್ಡೇಕರ ಮಂಜಪ್ಪನವರು ಬರೆದ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಕಾಯಕವೆ ಕೈಲಾಸ	೦-೩-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ವಿಜಯವಾಣಿ	೦-೨-೦
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.**

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ. ಉತ್ತಮ ಸೌಕರ್ಯ. ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್ ಕಾಜ್ ಕೋರ್ಟಿಗೂ ಸಮುದ್ರದಥಕ್ಕು ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ ಬೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಇಸಬು, ಕಜ್ಜಿ, ಹುರುಕು, ಗಜಕರ್ಣ, ಆಯುಧಗಳಿಂದಾದ ಹೊಸಗಾಯ ಮತ್ತು ಹಳೇ ಹುಣ್ಣುಗಳಿಂದ

ಕಷ್ಟಪಡುತ್ತಿರುವಿರೋ?

ಹಾಗಾದರೆ ಈ ತರದ ರೋಗಗಳಿಗೆ ಮಿಗಿಲಾದ ಔಷಧವೆಂದೂ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹುಲಗಿಲ ಎಣ್ಣೆಯ** ಸತ್ವವು ಅಡಕವಾಗಿರುವ ಮತ್ತು ಎಷ್ಟೋ ವರ್ಷಗಳ ಜ್ಞಾನ ಸಂಶೋಧನದಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ,** ಎಂ. ಎಸ್‌ಸಿ., ಪಿಎಚ್. ಡಿ. ಇವರು ತಯಾರಿಸಿದ

" ಹೊಂಗೊಲ್ "

ಜಂತುನಾಶಕ ಮುಲಾಮು ಉಪಯೋಗಿಸಿ ಗುಣಹೊಂದಿರಿ

ಕೊಬ್ಬು (ಚರಬಿ) ಅಥವಾ ಆಕ್ಷೇಪಾರ್ಹ ಇತರ ಯಾವ ತರದ **ಎಣ್ಣೆಯೂ ಹೊಂಗೊಲ್** ಮುಲಾಮಿನಲ್ಲಿ ಮಿಶ್ರವಾಗಿಲ್ಲ.

ಶುಭ್ರವಾದ ಹಲ್ಲು, ಸುವಾಸನೆಯುಳ್ಳ ಶ್ವಾಸ ಮತ್ತು ಗಟ್ಟಿಯಾದ ಒಸಡಿಗಳು

ಯಾರಿಗೆ ಬೇಕಾಗಿಲ್ಲ?

ಹಾಗಾದರೆ ಒಸಡಿಗಳಿಂದಾಗುವ ರಕ್ತಸ್ರಾವವನ್ನು ನಿಲ್ಲಿಸುವವಕ್ಕೆ ಆಯುರ್ವೇದದಲ್ಲಿ ಪ್ರಸಿದ್ಧವಾದ **ಹೆಮ್ಮುಗುಳಿನ** ಹೂವುಗಳ ಸತ್ವವು ಅಡಕವಾಗಿರುವ ಮತ್ತು ಶಾಸ್ತ್ರೀಯ ರೀತಿಯಿಂದ **ಡಾ. ಎಂ. ಸಿ. ತುಮ್ಮಿನಕಟ್ಟಿ** ಎಂ. ಎಸ್‌ಸಿ., **ಪಿಎಚ್. ಡಿ. ಇವರಿಂದ ತಯಾರಿಸಲ್ಪಟ್ಟ**

" ಕಚ್ಚುರ್ಣ "

ಕ್ರಿಮಿನಾಶಕ ದಂತಮಂಜನವನ್ನೇ ಉಪಯೋಗಿಸಿರಿ.

ಟೀಪು—ಔಷಧಿಗಳನ್ನು ಮಾರುವ ದೊಡ್ಡ ಅಂಗಡಿಕಾರರಿಂದಾಗಲಿ ಅಥವಾ ತಯಾರಿಸುವವರಿಂದಾಗಲೀ ಉಚಿತವಾಗಿ ನಮೂನೆಗಳನ್ನು ದೊರಕಿಸಿ ಖಾತ್ರಿಯನ್ನು ಮಾಡಿಕೊಳ್ಳಿರಿ. ನಮ್ಮಲ್ಲಿ ತಯಾರಾಗುವ ಮಾಲುಗಳನ್ನು ಪಲ್ಲಾಲಿ ದರದಿಂದ ಮಾರುವದಕ್ಕೆ ಕರ್ನಾಟಕದಲ್ಲಿ ಎಲ್ಲ ಕಡೆಗೆ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಹೆಚ್ಚಿನ ಮಾಹಿತಿಗೋಸ್ಕರ ಬರೆದು ತಿಳಿದುಕೊಳ್ಳಬಹುದು.

ತಯಾರಿಸುವವರು,
ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯು ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇತರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತ ಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟಿ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.
(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತವೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗೆಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—
ಬ್ರ. ಶ್ರೀ. ಸಿದ್ದಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬಗಾ೯.

ಕಂಪಾಜಿಟರು ಬೇಕು.

ಮರಾಠಿ ಮತ್ತು ಕನ್ನಡ ಚೆನ್ನಾಗಿ ಕಂಪೋಜ್ ಮಾಡತಕ್ಕ ಕಂಪಾಜಿಟರು ಬೇಕು. ಯೋಗ್ಯ ಸಂಬಳ ದೊರೆಯುವದು. ಇಷ್ಟವುಳ್ಳವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ವಿಳಾಸ:— **ಮ್ಯಾನೇಜರ,**

ಕಲ್ಯಾಣ ಕರ್ನಾಟಕಪ್ರೆಸ್ ಗುಲಬಗಾ೯
ಪೋ. ಗುಲಬಗಾ೯ (ನೈಜಾಮ ಸ್ಟೇಟ)

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಪ್ರಕಟಸಲ್ಪಟ್ಟಿತು.

REGISTERED No. B. 2891.

ಶರಣ ಸಂದೇಶ

The Sharana Sandesh.

ನ್ಯಾಯನಿಷ್ಠುರಿ। ದಾಕ್ಷಿಣ್ಯಪರನಲ್ಲ। ಲೋಕವಿರೋಧಿ। ಶರಣನಾರಿಗೂ ಅಂಜುವವನಲ್ಲ।
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ವ. ೨೨೮ । ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ವಂತಿ:- ಅಂಚೆಯ ವೆಚ್ಚ ಸೇರಿ ೩ರು

ಪ್ರತಿ ಸೋಮವಾರವೂ ಪ್ರಕಟವಾಗುವ

ಸಂಪುಟ೪. | ಆಲಮಟ್ಟಿ- ಸೋಮವಾರ ತಾರೀಖು ೨೨ ನೆಯ ಎಪ್ರಿಲ್ | ಸಂಚಿಕೆ ೩

ಜನಸೇವೆಯೇ ದೇವರ ಸೇವೆ.

ಶ್ರೀ ಶರಚ್ಚಂದ್ರಬೋಸರು ಅಸೆಂಬ್ಲಿ

ಸದಸ್ಯತ್ವವನ್ನು ಬಿಟ್ಟುಕೊಟ್ಟರು.

ವ್ಹಾಯಿಸರಾಯರಿಗೆ ಪತ್ರ.

ಬಾಬು ಶರಚ್ಚಂದ್ರ ಬೋಸ ಇವರು ವ್ಹಾಯಿಸರಾಯರಿಗೊಂದು ಪತ್ರ ಬರೆದು ಅಸೆಂಬ್ಲಿಯ ತಮ್ಮ ಸದಸ್ಯತ್ವದ ತ್ಯಾಗಪತ್ರವನ್ನು ಸ್ವೀಕರಿಸಬೇಕೆಂದು ಬಿನ್ನವಿಸಿಕೊಂಡಿರುವರು.

ಅವರು ತಮ್ಮ ಈ ವಿಚಾರವನ್ನು ತಮ್ಮ ಸ್ವರಾಜ್ಯಪಕ್ಷದ ಮುಂದಾಳುಗಳಾದ ಪಂ. ಮಾಲವೀಜಿಯವರಿಗೆ ನಿವೇದಿಸಿರುವರು. ವ್ಹಾಯಿಸರಾಯರಿಗೆ ಬರೆದ ಪತ್ರದಲ್ಲಿ ಅವರು ಈ ಪ್ರಕಾರ ತಿಳಿಸಿರುವರು—

"ಸರಕಾರವು ನನ್ನನ್ನು ಬಿಡುಗಡೆ ಮಾಡಿ ನನ್ನ ಸದಸ್ಯತ್ವದ ಕಾರ್ಯ ಮಾಡಲು ಆಸ್ಪದ ಕೊಡಲಿಲ್ಲ. ಕಾರಣ ತ್ಯಾಗಪತ್ರ ಕೊಡದ ಹೊರತು ನನಗೆ ಗತ್ಯಂತರವಿಲ್ಲ. ನಾನು ಈ ಪ್ರಕಾರ ಸಭಾಸದನಾಗಿ ಉಳಿದರೆ ವಿರೋಧಿ ಪಕ್ಷದ ಒಂದು ಮತವನ್ನು ಕಡಿಮೆ ಮಾಡಿದಂತಾಗುವದು."

ದೇಹವೇ ದೇವಾಲಯ

SANGAM CLOTH STORES
Prop: M S Hundekar & Sons,
P.O: TERDAL - 587 315

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿದ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕ)

ಗಂಡಾಂತರಕ್ಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು, ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಂಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರೆಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ** ಒಟ್ಟು ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ **ಸಿದ್ಧೇಶ್ವರ ಕಂಪನಿಯ** ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಹೊಟ್ಟೆಯಲ್ಲಿ ತೆಗೆದುಕೊಳ್ಳಲಿಕ್ಕೂ ಮತ್ತು ಮೇಲೋಪಚಾರಕ್ಕೂ ಅತ್ಯಂತ ಅನುಕೂಲವುಳ್ಳದ್ದು. ತಲೆನೋವು, ನೆಗಡಿ, ಕೆಮ್ಮು, ವಾತ, ಇನ್‌ಫ್ಲುಯಂಜಾ ಮುಂತಾದವುಗಳಿಗೆ ಒಳ್ಳೇ ಗುಣಕಾರಿ.

ನೀಲ್ಗಿರೋಲ್

ಸಶಾಸ್ತ್ರವಾಗಿ ಪರಿಶುದ್ಧಗೊಳಿಸಿದ
—ನೀಲಗಿರಿ ಎಣ್ಣೆ—

ಸ್ವಾಭಾವಿಕ ನೀಲಗಿರಿ ಎಣ್ಣೆಯಲ್ಲಿರುವ ಕಹಿ ಮತ್ತು ದುರ್ವಾಸನೆಗೆ ಕಾರಣವಾದ ಅಂಶಗಳು ನಮ್ಮ ರಸಾಯನ ಶಾಲೆಯಲ್ಲಿ ತಜ್ಞರ ಮೇಲ್ವಿಚಾರಣೆಯಲ್ಲಿ ಪ್ರತ್ಯೇಕ ಸಾಧನದಿಂದ ಬೇರ್ಪಡಿಸಲಾಗಿದೆ. ಆದ್ದರಿಂದ ಆನಂದದಾಯಕ ಸುವಾಸನೆಯನ್ನು ಕೊಡುವದು.

ಈಗ ಪೇಟೆಯಲ್ಲಿ ದೊರೆಯುವ ನೀಲಗಿರಿ ಎಣ್ಣೆಯು ಚಿಮಣಿ ಎಣ್ಣೆ, ಸ್ಪಿರಿಟ್, ಪೆಟ್ರೋಲ್, ಟರ್ಪೆಂಟೈನ್ ಮುಂತಾದ ಅಪಾಯಕಾರಕ ದ್ರಾವಗಳಿಂದ ಮಿಶ್ರಿತವಾದದ್ದಿರುತ್ತದೆಯೇ ಹೊರತು ಶುದ್ಧ ಎಣ್ಣೆಯು ಸಿಗುವದೇ ದುರ್ಲಭವಾಗಿದೆ. ಈ ತರದ ಎಣ್ಣೆಯ ಉಪಯೋಗದಿಂದ ರೋಗವನ್ನು ಕೊಂಡಂತಾಗುವದೆಂದು ಬೇರೆ ಹೇಳಬೇಕಾಗಿಲ್ಲ. ಇಂಥ ಕೊರತೆಯನ್ನು ಜನರಿಗೆ ದೂರ ಮಾಡುವ ಒಂದೇ ಒಂದು ಉದ್ದೇಶದಿಂದ 'ನೀಲ್ಗಿರೋಲ್'ನ್ನು ತಯಾರಿಸಿರುತ್ತೇವೆ. ಒಂದು ಸಾರೆ ಉಪಯೋಗಿಸಿ ಇದರ ಗುಣವನ್ನು ಮನಗಾಣಬಹುದು.

ತಯಾರಿಸುವವರು:— ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಯಾವತ್ತು ಔಷಧದ ಅಂಗಡಿಗಳಲ್ಲಿ ದೊರೆಯುತ್ತದೆ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಎಪ್ರಿಲ್ ತಾರೀಖು ೨೨ ನೆಯ ಸೋಮವಾರ | ಸಂಚಿಕೆ ೩೪.

ಇಂದೂರಿನಲ್ಲಿ ಗಾಂಧೀಜಿಯವರು.

ಹಿಂದೀ ಸಾಹಿತ್ಯ ಪರಿಷತ್ತಿನಲ್ಲಿ ಅಧ್ಯಕ್ಷೀಯ ಭಾಷಣ.

೨೦ ನೆಯ ತಾರೀಖಿನ ದಿವಸ ಮಹಾತ್ಮಾ ಗಾಂಧಿಯವರು ಶ್ರೀಮತಿ ಕಸ್ತೂರಿಬಾಯಿ, ಶ್ರೀ. ಮೀರಾಬೆನ್. ಶ್ರೀ. ಕಾಕಾ ಕಾಲೇಲಕರ, ಶ್ರೀ. ಮಹಾದೇವಭಾಯಿ ದೇಸಾಯಿ ಇವರೊಡನೆ ಹಿಂದೀ ಸಾಹಿತ್ಯ ಪರಿಷತ್ತಿಗೆ ಉಪಸ್ಥಿತರಾಗಲು ಇಂದೂರಿಗೆ ಆಗಮಿಸಿದರು. ಅಲ್ಲಿ ಅವರ ಮೆರವಣಿಗೆಯನ್ನು ವಿಜೃಂಭಣೆಯಿಂದ ಮಾಡಲಾಯಿತು.

ಪರಿಷತ್ತಿಗೆ ೯೦೦ ರ ಮೇಲೆ ಪ್ರತಿನಿಧಿಗಳು ಆಗಮಿಸಿದ್ದರು. ಇಂದೂರಾಧಿಪತಿ ಶ್ರೀಮಂತ ಯಶವಂತರಾವ ಹೋಳಕರ ಇವರು ಉದ್ಘಾಟನ ಸಮಾರಂಭವನ್ನು ನೆರವೇರಿಸಿದರು. ಆ ಕಾಲಕ್ಕೆ ಅವರು— "ಇಂಥ ವಿದ್ವಾನರ ಸಮೂಹವು ರಾಜಧಾನಿಯಲ್ಲಿ ನೆರೆದದ್ದಕ್ಕಾಗಿ ನನಗೆ ಆನಂದವೆನಿಸುತ್ತದೆ. ಹಿಂದೀ ವಿದ್ಯಾಪೀಠವನ್ನು ಸ್ಥಾಪನ ಮಾಡುವದು ನಮ್ಮೆಲ್ಲರಿಗೆ ಪೂರ್ಣ ಒಪ್ಪಿಗೆ ಇದೆ" ಎಂದರು.

ಗಾಂಧೀಜಿಯವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ— "ಕಳೆದ ೧೮ ವರ್ಷಗಳಿಂದ ಹಿಂದೀ ಭಾಷೆಯ ಪ್ರಚಾರ ಕಾರ್ಯವನ್ನು ನಾನು ಮಾಡುತ್ತಿದ್ದುದಕ್ಕೆ ಇಂದು ಸಾಫಲ್ಯತೆ ಲಭಿಸಿತು. ಹಿಂದೀ ಭಾಷೆಯನ್ನು ಪ್ರಚುರಗೊಳಿಸಲು ಈಗ ೩೨೦೦ ಕೇಂದ್ರಗಳಿವೆ. ಈ ಕಾಲಕ್ಕೆ ಶಿಕ್ಷಕರನ್ನು ಸಿದ್ಧಗೊಳಿಸುವ ಒಂದು ಮಧ್ಯವರ್ತಿ ಸಂಸ್ಥೆಯನ್ನು ಸ್ಥಾಪಿಸಿ ಹಿಂದೀ ಭಾಷೆಯ ಪ್ರಚಾರ ಮಾಡಬೇಕು." ಎಂದು ಸೂಚಿಸಿದರು.

ದೊಡ್ಡಣ್ಣನವರ ಸಿಟ್ಟು

ಇವರ ವಯಸ್ಸು ೬೦ ರ ಮೇಲೆ. ಆದರೂ ಸಹಿಸಲಾರದ ಸಿಟ್ಟು ಇವರಲ್ಲಿ. ಅಲೀಗಢ ನಿಲ್ದಾಣದ ಮೇಲೆ ಮಾತು ಕಥೆ ನಡೆದಾಗ ಒಬ್ಬನು ಸಿಟ್ಟಿಗೆಬ್ಬಿಸಿದ್ದರಿಂದ ಮೌಲಾನರು ಆವನ ಮೇಲೆ ಏರಿ ಹೋದರು. ಇವರ ಸಿಟ್ಟಿನ ಆಘಾತದಿಂದ ವಿಶ್ವವಿದ್ಯಾಲಯದ ಶಿಪಾಯಿಗೆ ಭಯಂಕರ ಅಪಾಯವಾಗಿದೆ. ಇನ್ನೊಬ್ಬನಿಗೆ ಸಾಧಾರಣ ಗಾಯವಾಗಿದೆ. ಇದರಿಂದ ಅಲೀಗಢ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಒಳ್ಳೇ ರೇಗಿದ್ದರು. ಸರ ಮಹಮ್ಮದ ಯೂಸೂಫರವರು ಪ್ರಸಂಗವನ್ನು ತಾಯ್ದರು.

ಮೌ. ಶೌಕತಅಲ್ಲಿ.

ಇದಕ್ಕೆ ಕಾರಣವೇನೆಂದರೆ ಅಲೀಗಢ ವಿಶ್ವವಿದ್ಯಾಲಯದ ವ್ಹಾಯಿಸ ಚಾನ್ಸಲರ ಪ್ರಚಾರ ಕಾರ್ಯದ ಬಗ್ಗೆ ಮಾತಾಡುತ್ತ ಮೌಲಾನರು ಮುಸಲ್ಮಾನೀ ಧರ್ಮದ ಮಾತೆತ್ತಿದರಂತೆ. ಆವಾಗ್ಗೆ ಒಬ್ಬನು ಇದರಲ್ಲಿ ಧರ್ಮದ ಪ್ರಸಂಗವೇನೆಂದು ಕೇಳಲು ರೇಗಿದರಂತೆ.

ಸಿಟ್ಟಿಗೆ ಮೌನವೇ ಉಪಾಯ

ಮಹಾತ್ಮರ ಒಂದು ತಿಂಗಳ ಮೌನವ್ರತವು ೧೯ ನೆಯ ತಾ. ಗೆ ಬೇಗ್ಗೆ ಪೂರೈಸಿತು. ಆಗ್ಗೆ ಅವರು ನೆರೆದ ಜನರಿಗೆ ಹೀಗೆ ಹೇಳಿದರು. "ಸತ್ಯಶೋಧಕನಾದ ನನಗೆ ಮೌನವು ಒಳ್ಳೇ ಸಹಾಯಕವಾಗಿದೆ. ನನ್ನ ಅನುಭವವು ಒಳ್ಳೇ ವಿಚಿತ್ರವಾಗಿದೆ. ಸಿಟ್ಟನ್ನು ಬಿಗಿಹಿಡಿಯಬೇಕಾದರೆ ಮೌನವ್ರತವೆ ಒಳ್ಳೇ ಉಪಾಯ. ಇಂಥ ಮೌನವ್ರತವನ್ನು ಆಗಾಗ್ಗೆ ಸ್ವೀಕರಿಸಬೇಕೆಂದು ನನಗನಿಸುತ್ತದೆ."

ಈ ನಾಲ್ಕು ವಾರಗಳ ಮೌನವ್ರತದ ಕಾಲದಲ್ಲಿ ಅವರು ಉತ್ತರ ಬರೆಯದೆ ಉಳಿದಿದ್ದ ಪತ್ರವ್ಯವಹಾರದ ಮಹತ್ವದ ಕಾರ್ಯವನ್ನು ಪೂರೈಸಿಬಿಟ್ಟಿರುವರು. ಮರುದಿವಸವೇ ಅವರು ಹಿಂದೀ ಸಾಹಿತ್ಯ ಪರಿಷತ್ತಿನ ಅಧಿವೇಶನಕ್ಕಾಗಿ ಇಂದೂರಿಗೆ ಹೊರಟರು.

ಮಹಾತ್ಮಾಜಿಯವರು.

ಭಾಯಿ ಪರಮಾನಂದರ ಕೆಲ ವಿಚಾರಗಳು.

[ಹಿಂದುತ್ವದ ಬಗ್ಗೆ ಅಹರ್ನಿಶ ಪ್ರಯತ್ನಮಾಡುತ್ತಿರುವ ಶ್ರೀ ಭಾಯಿಪರಮಾನಂದರು ಉರ್ದು ಮತ್ತು ಹಿಂದಿ "ಹಿಂದು" ಪತ್ರಿಕೆಗಳಲ್ಲಿ ಆಗಾಗ್ಗೆ ತಮ್ಮ ವಿಚಾರಗಳನ್ನು ಪ್ರಕಟಿಸುತ್ತಿರುವರು. ಅವು ಮನನೀಯವಾಗಿರುವುದರಿಂದ ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ.]

ಆರ್ಯ ಸಮಾಜದ ಸ್ಥಿತಿ.

ಹಿಂದುಧರ್ಮದಲ್ಲಿರುವ ಯಾವ ತತ್ವಗಳು ಪೋಷಕವಾಗುವದರ ಬದಲು ದೋಷಯುಕ್ತವಾಗಿ ಪರಿಣಮಿಸಿ ಹಿಂದುಗಳ ಅಧೋಗತಿಗೆ ಕಾರಣವಾಗಿರುವವೋ ಅವುಗಳನ್ನು ನಿವಾರಿಸಿ ಹಿಂದುಸಮಾಜವನ್ನು ಪುನಃ ಅಭಿವೃದ್ಧಿ ಸ್ಥಿತಿಗೆ ತರುವಂತೆ ಮಾಡುವದಕ್ಕಾಗಿಯೇ ಆರ್ಯಸಮಾಜವು ಸ್ಥಾಪಿತವಾಯಿತಷ್ಟೆ. ಈ ಕಾರ್ಯವೇನೋ ಒಂದೆರಡು ವರ್ಷಗಳಲ್ಲಿ ಕೈಗೂಡುವಂಥದಲ್ಲ. ಆದರೆ ಆರ್ಯಸಮಾಜಕ್ಕೆ ಇಷ್ಟು ವಿಲಂಬವಾಗಿ ಸುಧಾರಿಸುವದು ಬೇಕಾಗಿರಲಿಲ್ಲ. ತರುಣ ತರುಣಿಯರನ್ನು ಅಂಕಿತದಲ್ಲಿಟ್ಟುಕೊಳ್ಳುವದಕ್ಕಾಗಿ ಸಂಸ್ಥೆಗಳನ್ನೂ ಪ್ರಚಾರ ಕಾರ್ಯಕ್ಕಾಗಿ ಉತ್ಸವಗಳನ್ನೂ ಅದು ಏರ್ಪಡಿಸಿತು. ಆದರೆ ಅವೆಲ್ಲ ಈಗ ದಣಿದು ಹೋಗಿವೆ. ಸಂಸ್ಥೆಯ ಮೆಂಬರರಲ್ಲಿಯೇ ಮೊದಲಿನ ಶ್ರದ್ಧಾ ಮತ್ತು ಉತ್ಸಾಹಗಳು ಉಳಿದಿಲ್ಲವೆಂದ ಮೇಲೆ ಸಂಸ್ಥೆಗಳಾದರೂ ಏನು ತಾನೇ ಮಾಡಬಲ್ಲವು ?

ರಾಷ್ಟ್ರೀಯ ಭಾವನೆಯೂ ಶರೀರ ಬಲವೂ.

ರಾಷ್ಟ್ರೀಯ ಭಾವನೆಯು ಬೆಳೆಯುತ್ತ ಹೋದಂತೆ ತರುಣರಲ್ಲಿ ಶಾರೀರಕ ಬಲವೂ ಬೆಳೆಯುತ್ತ ಹೋಗಬೇಕು. ಕೇವಲ ಭಾವನೆಯೊಂದಿದ್ದರೆ ಉಪಯೋಗವೇನು ? ರಾಷ್ಟ್ರೀಯ ಸಭೆಯು ಅಸಹಕಾರ ಯುದ್ಧವನ್ನು ಪ್ರಾರಂಭಿಸುವ ಪೂರ್ವದಲ್ಲಿ ೧೦-೧೨ ಲಕ್ಷ ಸ್ವಯಂಸೇವಕರನ್ನು ಸಿದ್ಧಗೊಳಿಸಿ ಅವರಿಗೆ ಶಿಸ್ತು ಕಲಿಸಿ ಸೇನಾದಲದ ರೂಪದಲ್ಲಿ ಸಿದ್ಧಪಡಿ ಮಾಡಿದ್ದರೆ ಚನ್ನಾಗಿರುತ್ತಿದ್ದಿತು. ವರ್ಸಯಾ ಒಪ್ಪಂದದ ಮೇರೆಗೆ ಜರ್ಮನಿಯು ಒಂದು ನಿಶ್ಚಿತ ಪ್ರಮಾಣಕ್ಕಿಂತ ಹೆಚ್ಚಿಗೆ ಸೈನ್ಯವನ್ನು ಎಂದೂ ಇಡಬಾರದಾಗಿದ್ದಿತು. ಆದರೂ ಅದರ ಸರ್ವಾಧಿಕಾರಿಯಾದ ಹೇರ ಹಿಟ್ಲರ ಇವರು ಸೇವಾಸಮಿತಿಯ ರೂಪದಿಂದ ಜರ್ಮನಿಯ ತರುಣರಿಗೆಲ್ಲ ಕವಾಯಿತು, ಶಿಸ್ತು ಕಲಿಸಿ ಜರ್ಮನಿಯ ಬಲವನ್ನು ಹೆಚ್ಚಿಸಿರುವರು. ಇವರಿಗೆ ನಿಜವಾಗಿ ದಂಡಾಳುಗಳೇ ಎಂದೆನ್ನಲು ಬಾರದಿದ್ದರೂ ಅವರು ಸೈನ್ಯದ ಶಿಸ್ತು ಮತ್ತು ಬಲವನ್ನು ಚನ್ನಾಗಿ ಪಡೆದಿರುವರು. ಹಾಗೆಯೇ ಇಟಲಿಯ ಸರ್ವಾಧಿಕಾರಿಗಳಾದ ಸಿ ಮುಸೋಲಿನಿಯವರು ತಮ್ಮ ರಾಜ್ಯದಲ್ಲಿಯ ೮-೧೦ ವರ್ಷ ವಯಸ್ಸಿನ ಬಾಲಕರು ಸಹ ಸೈನ್ಯದ ಶಿಸ್ತನ್ನು ಪಡೆಯಲೇ ಬೇಕೆಂದು ನಿರ್ಧರಿಸಿರುವರು.

ಚೀನಿ ಮತ್ತು ಹಿಂದೀಜನರು.

ಚೀನೀಜನರು ಪ್ರಾಚೀನತಾ ಪ್ರಿಯರೆಂಬುದು ನಿಜ. ಸದ್ಯದ ಓಘದಂತೆ ಅವರು ತಮ್ಮ ಉನ್ನತಿಯನ್ನು ಮಾಡಿಕೊಳ್ಳಲಾರರು. ಆದರೆ ಚೀನೀಜನರಲ್ಲಿ ಒಂದು ಅಸಾಧಾರಣ ಗುಣವಿದೆ. ಅದರ ಗಂಧವು ಕೂಡ ನಮ್ಮ ಜನರಲ್ಲಿ ಕಂಡುಬರುವದಿಲ್ಲ. ಕೆಲಿಫೋರ್ನಿಯಾ (ಪಶ್ಚಿಮ ಅಮೇರಿಕಾ) ದಲ್ಲಿ ನಾನು ಒಂದೂವರೆ ಎರಡು ವರ್ಷಗಳ ವರೆಗೆ ಇದ್ದೆನು. ಅಲ್ಲಿ ಸಾಧಾರಣ ೩೦ ಸಾವಿರ ಚೀನೀಜನರು ವಾಸಿಸುತ್ತಾರೆ. ಆದರೆ ಚೀನೀಜನರ ಒಂದಾದರೂ ವ್ಯಾಜ್ಯವು ಅಲ್ಲಿಯ ಅಮೇರಿಕನ್ ನ್ಯಾಯಸ್ಥಾನಕ್ಕೆ ಬಂದುದನ್ನು ನಾನು ಕೇಳಲಿಲ್ಲ. ಚೀನೀಜನರು ಜಗಳಾಡುತ್ತಲೇ ಇದ್ದಿಲ್ಲವೆಂತಲ್ಲ. ಜಗಳದ ಅತಿರೇಕವಾಗಿ ಅವರಲ್ಲಿ ಕೊಲೆಗಳು ಸಹ ಆಗುತ್ತಿದ್ದವು. ಆದರೆ ಅಮೇರಿಕನ್ ನ್ಯಾಯಸ್ಥಾನಕ್ಕಾಗಲಿ, ಅಮೇರಿಕ ಪೋಲೀಸರ ಕಡೆಗಾಗಲಿ ಒಬ್ಬ ಚೀನೀಯೂ ವ್ಯಾಜ್ಯತೆಗೆದುಕೊಂಡು ಹೋಗುತ್ತಿದ್ದಿಲ್ಲ. ಆದರೆ ನೆರೆಯಲ್ಲಿಯೇ ವಾಸಿಸುತ್ತಿದ್ದ ಹಿಂದೀಜನರ ಗತಿಯೇನು ? ಅಮೇರಿಕೆಯ ಪಶ್ಚಿಮ ದಂಡೆಯಲ್ಲಿ ಹಿಂದು, ಶೀಖ, ಮುಸಲ್ಮಾನರು ವಾಸವಾಗಿರುವರು. ನ್ಯಾಯಸ್ಥಾನಕ್ಕೆ ಅವರು ತೆಗೆದುಕೊಂಡು ಹೋಗುತ್ತಿದ್ದ ವ್ಯಾಜ್ಯಗಳನ್ನು ಕಂಡು ಪ್ರತಿಯೊಬ್ಬ ಅಮೇರಿಕನ್ನನು ಅವರಿಗೆ ಜಗಳಗಂಟರೆಂದೂ ನ್ಯಾಯಸ್ಥಾನ ಪ್ರಿಯರೆಂದೂ ಹೀಯಾಳಿಸ ತ್ತಿದ್ದರು.

ಹಿಂದಿ-ಇಂಗ್ಲಿಷ.

ಹಿಂದುಸ್ಥಾನಕ್ಕೆ ಸ್ವರಾಜ್ಯ ದೊರೆಯಬೇಕೆಂದು ಹಾರೈಸುವವರು ಅತ್ಯಧಿಕ. ಆದರೆ ಹಿಂದೀ ಸ್ವರಾಜ್ಯವೆಂದರೇನು? ಎಷ್ಟೋ ಜನರಿಗೆ ಇಂಗ್ಲೀಷಿನಲ್ಲಿ ಸ್ವರಾಜ್ಯದ ಬಗ್ಗೆ ಭಾಷಣಮಾಡಲು ಒಳ್ಳೇ ಆತುರ. ಅನೇಕರಿಗೆ ಇಂಗ್ಲೀಷಿನ ಹೊರತು ಹಿಂದುದೇಶಕ್ಕೊಂದು ಮಾನ್ಯ ಭಾಷೆಯೇ ಇರುತ್ತದೆಂಬುದು ಗೊತ್ತಿಲ್ಲ. ಅಸೆಂಬ್ಲಿಯಲ್ಲಿ ಶ್ರೀ. ಭೂಲಾಭಾಯಿಯವರು ಭಾಷಣಮಾಡುಕಾಲಕ್ಕೆ ತಾವು ನಿಶ್ಚಯವಾಗಿ ಉಪಸ್ಥಿತರಾಗಬೇಕೆಂದು ಕೆಲ ಸದ್ಗೃಹಸ್ಥರು ನನಗೆ ಸೂಚಿಸಿದರು. ಅದು ಏಕೆ ? ಎಂದು ನಾನು ಕೇಳಲು ಅವರು— ಶ್ರೀ ಭೂಲಾಭಾಯಿಯವರು ಇಂಗ್ಲಿಷಿನಲ್ಲಿ ಅತ್ಯಂತ ಸರಸವಾಗಿ ಭಾಷಣಮಾಡುತ್ತಾರೆ ಎಂದು ಹೇಳಿದರು. ಎಲ್ಲಿಯವರೆಗೆ ನಾವು ಇಂಗ್ಲೀಷಿನ ವ್ಯಾಮೋಹವನ್ನು ಬಿಡುವದಿಲ್ಲವೋ ಅಲ್ಲಿಯವರೆಗೆ ಅಪ್ರತ್ಯಕ್ಷವಾಗಿ ಇಂಗ್ಲೀಶ್ ಜನಪದ್ಧತಿಯನ್ನೂ ತದನುಸಾರ ಅವರ ರಾಜ್ಯಪದ್ಧತಿಯನ್ನೂ ಸ್ವೀಕರಿಸುತ್ತಿರುವೆವೆಂದೇ ತಿಳಿಯ ತಕ್ಕದ್ದು.

ಅಂದವಾದ ಮುದ್ರಣ! ಅಚ್ಚುಕಟ್ಟಾದ ಬೈಂಡ.

ಸಂಕ್ಷಿಪ್ತ

ಮಹಾದೇವಿಯಕ್ಕನ ಜೀವನ ಚರಿತ್ರೆ.

ವಚನವಾಙ್ಮಯದಲ್ಲಿ ಉಚ್ಚಸ್ಥಾನವನ್ನು ಪಡೆದು ಪ್ರ
ಸಿದ್ಧಿ ಪಡೆದ ಉಡುತಡಿಯ ಮಹಾದೇವಿಯಕ್ಕನ ಜೀವನ ಚ
ವಚನಗಳಿಂದ ಕೂಡಿ ಭಾವಪೂರ್ಣವಾಗಿ ಬರೆಯಲ್ಪಟ್ಟಿದೆ.

ಬೆಲೆ ಎರಡಾಣೆ ಮಾತ್ರ,

ಲೇಖಕರು:— ಶ್ರೀಮಾನ್ ಬಿ. ಎಸ್. ಮಹಾದೇವಯ್ಯನವರ
ಪುಸ್ತಕ ದೊರೆಯುವ ವಿಳಾಸ— ಶ್ರೀ ಸರ್ಪಭೂಷಣ ಮಠ
ಬಳೇಪೇಟೆ.

ಬೆಂಗಳೂರು ಸಿ

ಹಿಂದು ಸಂಸ್ಕೃತಿಯೂ ಶ್ರೀ ಬಸವೇಶ್ವರನೂ.

(ಲೇಖಕ:— ಓರ್ವ ಹಿಂದು.)

ಪೀಠಿಕೆ.

ಅರಣ್ಯದಲ್ಲಿ ಸಣ್ಣ ದೊಡ್ಡ ಅನೇಕ ಕಲ್ಲುಗಳು ಬಿದ್ದಿರುತ್ತವೆ. ಭಯಂಕರ ಗಿಡಗಳು ಬೆಳೆದಿರುತ್ತವೆ. ವನಾಂತರದ ಇಕ್ಕಟ್ಟಾದ ಮಾರ್ಗಗಳಲ್ಲೆಲ್ಲ ಕಲ್ಲು ಮುಳ್ಳುಗಳು ತುಂಬಿರುತ್ತವೆ. ಈ ಗಿಡಗಳ ಅಡಿಗಳಲ್ಲಿ ಕಾಳಕತ್ತಲೆಯು ಕವಿದುಕೊಂಡಿರುತ್ತದೆ. ಕಳ್ಳಕಾಕರು, ಹಿಂಸ್ರ ಪಶುಗಳು ಹೊಂಚಹಾಕಿ ಧನ ಪ್ರಾಣಗಳನ್ನು ವಂಚಿಸುತ್ತಾರೆ.

ಇಂಥ ಅವಸ್ಥೆಯಲ್ಲಿ ಬುದ್ಧಿಶಾಲಿಯು ಅಲ್ಲಿಗೆ ಬಂದು ಅಲ್ಲಿಯ ವಸ್ತುಗಳಿಂದಲೇ ವಿಚಿತ್ರ ವ್ಯತ್ಯಾಗಳನ್ನುಂಟುಮಾಡುತ್ತಾನೆ. ಅಲ್ಲಿಯ ಹರಳು ಕಲ್ಲುಗಳನ್ನೇ ಗಚ್ಚು ಕಲ್ಲುಗಳನ್ನು ಮಾಡಿಕೊಂಡು ಭದ್ರವಾದ ಕೋಟೆಯನ್ನು ನಿರ್ಮಿಸುವನು. ವನದೊಳಗಿನ ಕಟ್ಟಿಗೆಗಳು ಸುಂದರವಾದ ಭವನಗಳನ್ನು ಹೊತ್ತುಕೊಂಡು ನಿಲ್ಲುವವು. ಕೊತ್ತಳದ ವರೆಗೆ ಭವ್ಯವಾದ ರಾಜಮಾರ್ಗವುಂಟಾಗುವದು. ಅನಂತರ ಕಳ್ಳಕಾಕರ, ಹಿಂಸ್ರ ಪಶುಗಳ, ಭೀಕರ ಕತ್ತಲೆಯ ಭಯವು ಇರುವುದೇ ಇಲ್ಲ.

ಈ ಪ್ರಕಾರ ಯಾರಾದರೂ ಉಂಟುಮಾಡಿಕೊಟ್ಟರೆ ಜನರು ಅವರನ್ನು ಎಷ್ಟು ಹಾಡಿಹರಿಸುವರು ? ಇದರ ಮೇಲಿಂದ ಆ ಬಸವ ಮಹಾತ್ಮನ ಅದ್ಭುತ ಕಾರ್ಯವು ಕಲ್ಪನೆಗೆ ಬಂದು ಆ ಪುಣ್ಯ ಪುರುಷನ ಜಯಂತಿಯನ್ನು ಏಕೆ ಆಚರಿಸಬೇಕೆಂಬ ವಿಷಯವು ನೆಟ್ಟನೇ ಹೊಳೆಯುವದು.

ಪೂರ್ವ ಪರಿಸ್ಥಿತಿ.

ಶ್ರೀ. ಬಸವೇಶ್ವರನ ಅವತಾರ ಪೂರ್ವದಲ್ಲಿದ್ದ ಹಿಂದುಗಳ ಜನಜೀವನವನ್ನು ನಿರೀಕ್ಷಿಸಿದಲ್ಲಿ ಅವರ ಸ್ಥಿತಿಯು ಕೋಟೆಕೊತ್ತಳಗಳಾಗದ ಪೂರ್ವದಲ್ಲಿದ್ದ ಅರಣ್ಯದ ಸ್ಥಿತಿಯಂತೆಯೇ ಕಂಡು ಬರುತ್ತಿದ್ದಿತು. ಯಾವುದಕ್ಕೆ ಇಂಗ್ಲೀಷಿನಲ್ಲಿ ಸಾಮಾಜಿಕ ಜೀವನ (Society life) ವೆನ್ನುವರೊ ಅದು, ಅಂದರೆ ದೇಶಬಾಂಧವರೆಲ್ಲ ಒಂದು ಸೂತ್ರದಲ್ಲಿ ಹೊಂದಿಕೆಯಾಗಿ ಸಾಮೂಹಿಕವಾಗಿ ಜೀವಿಸಿರುವದು, ಆಗಿನ ಜನರ ಕಲ್ಪನೆಯಲ್ಲಿ ಸಹ ಇದ್ದಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಉಚ್ಚ ವರ್ಗದವರಲ್ಲೆಲ್ಲ ತಮ್ಮ ಹೊತ್ತಿಗೆಗಳ ಶ್ರೇಷ್ಠತೆಯ ಕಲ್ಪನೆ, ಕನಿಷ್ಠ ವರ್ಗದವರಲ್ಲೆಲ್ಲ ಮೂಢ ಭಕ್ತಿಯ ಪರಿಣಾಮದಿಂದ ಅನಂತ ದೇವತೆಗಳು; ಅನಂತ ವಿಚಾರಗಳು! ಒಂದು ಪಂಗಡವು ಮತ್ತೊಂದು ಪಂಗಡಕ್ಕೆ ಸಂಬಂಧವೇ ಇರಲಿಲ್ಲ. ಆಚಾರ ತತ್ವಗಳು ಅತಿಸೂಕ್ಷ್ಮವಾಗುತ್ತ ಕೊನೆಗೆ ಜೀವನಕ್ಕೆ ನಿರುಪಯುಕ್ತವಾಗಿ ಪರಿಣಮಿಸಿದ್ದವು. ದ್ವಿಜರ ಯಜ್ಞಯಾಗಾದಿಗಳು ದ್ವಿಜರಿಗಾಗಿ; ಜೈನರ ಅಹಿಂಸಾ ತತ್ವವು ಜೈನರಿಗಾಗಿ; ಸಾಮೂಹಿಕ ವಿಪತ್ತುಂಟಾದರೆ ಎದುರಿಸುವವರೇ ಇಲ್ಲ.

ಬಸವೇಶ್ವರನ ಅವತಾರ.

ಇಂಥ ಕಾಲದಲ್ಲಿ ಶ್ರೀ. ಬಸವೇಶ್ವರನ ಅವತಾರವಾಯಿತು. ಹಿಂದುಗಳ ಆಚಾರವಿಚಾರಗಳಲ್ಲಿರುವ ವಿಪರೀತ ವ್ಯತ್ಯಾಸವನ್ನು ಕಂಡು ಈ ಚದುರಿಹೋದ ಪಂಗಡಗಳನ್ನೆಲ್ಲ ಒಂದೇ ಜೀವನದ ಸೂತ್ರದಲ್ಲಿ ಹೆಣೆಯದಿದ್ದರೆ, ಇವು ಶಾಶ್ವತವಾಗಿಯೇ ಚದುರಿಹೋಗುವವೆಂದು ಆ ಮಹಾತ್ಮನು ತಿಳಿದು ತನ್ನ ಮಹತ್ಕಾರ್ಯವನ್ನು ಪ್ರಾರಂಭಿಸಿದನು. **ಭಗವಾನ್ ಬುದ್ಧದೇವನ ತರುವಾಯ ಜನಜೀವನವನ್ನು ಸಾಮೂಹಿಕವಾಗಿ ಸುಲಭಗೊಳಿಸಲು ಯಾವ ಮಹಾತ್ಮನಾದರೂ ಪ್ರಯತ್ನ ಮಾಡಿದ್ದರೆ ಆತನು ಭಗವಾನ್ ಬಸವೇಶ್ವರನೆಂದೇ ಹೇಳಬಹುದು.**

ಭಗವಾನ್ ಬಸವೇಶ್ವರನು ಆ ಕಾಲದ ಜೀವನವನ್ನು ಸರಿಪಡಿಸಲು ತಕ್ಕವನೇ ಆಗಿದ್ದನು. ಇಂಥ ಅದ್ಭುತ ಕಾರ್ಯವನ್ನು ಸಾಧಿಸಬೇಕಾದರೆ ಅವನ ಅಮೃತತುಲ್ಯವಾದ ಭಕ್ತಿಯು ಒಳ್ಳೇ ಸಹಕಾರಿಯಾಯಿತು. ಹಿಂದುಸ್ಥಾನದ ಧಾರ್ಮಿಕ, ಸಾಮಾಜಿಕ, ಇಲ್ಲವೆ ರಾಜಕೀಯ ಕ್ಷೇತ್ರಗಳಲ್ಲಿ ಜನಸಾಮಾನ್ಯರಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ ಧೀರರು ಭಕ್ತಿಯ ಸಹಾಯದಿಂದಲೇ ಮಾಡಿದರು. ಶ್ರೀ. ಬಸವೇಶ್ವರನ ಕಾಲದಲ್ಲ ಜನರಲ್ಲಿ ಹುದುಗಿಕೊಂಡಿದ್ದ ಭಕ್ತಿಯು ಪ್ರಕಟವಾಯಿತು. ಅದು ಪ್ರಜ್ವಲಿಸಹತ್ತಿದಂತೆ ಜಾತಿ, ಪಂಗಡ, ಕುಲ, ಗೋತ್ರ, ಸೊತ್ತು, ಹೊತ್ತಿಗೆ ಮೊದಲಾದವುಗಳ ದುರಭಿಮಾನವೆಂಬ ಕೊಂಡಿಯು ಸುಟ್ಟುಹೋಯಿತು. ಸಮಾಜದ ಆಪಾದಮಸ್ತಕದ ವರೆಗೆ ಭಕ್ತಿ ಸಂಜೀವಿನಿಯು ಸಂಚರಿಸಿ ಮೃತಪ್ರಾಯವಾದ ಸಮಾಜವನ್ನು ಚೈತನ್ಯಗೊಳಿಸಿತು. ಬಸವಣ್ಣನು ಪರವಾದಿಗಳನ್ನು ಜೈಸಬಂದವನೆಂದು ಕೆಲವರು ಅನ್ನಬಹುದು. ಬಸವಣ್ಣನು ಹೊಸದೊಂದು ಮತವನ್ನು ಇಲ್ಲವೆ ಧರ್ಮವನ್ನು ಸ್ಥಾಪಿಸಲು ಬಂದವನೆಂದು ಕೆಲವರು ಅನ್ನಬಹುದು. **ಆದರೆ ಇವಕ್ಕಿಂತಲೂ ಗಲಿತಾಂಗನಾದ ಹಿಂದುಸಮಾಜ ಪುರುಷನಿಗೆ ಭಕ್ತಿ ಮರುಜೀವಣಿಯಿಂದ ನವ ಚೈತನ್ಯವನ್ನು ತಂದುಕೊಟ್ಟನೆಂದು ಹೇಳುವದು ಹೆಚ್ಚು ಸಯುಕ್ತಿಕವಾಗಿದೆ.**

ಹಿಂದುಗಳು ಕಲಿಯಬೇಕಾದುದೇನು ?

ಶ್ರೀ ಬಸವೇಶ್ವರನು ಇಂಥದೊಂದು ಮತಸ್ಥಾಪನೆ ಮಾಡಿದನೆಂದಿಷ್ಟೇ ಹಿಂದುಗಳು ಈಗ ತಿಳಿಯತಕ್ಕದಲ್ಲ. ಸದ್ಯಕ್ಕೆ ಹಿಂದು ಸಂಸ್ಕೃತಿಯು ಯಾವರೀತಿಯಿರಬೇಕೆಂದು ಹಿಂದು ಮುಂದಾಳುಗಳು ಅಪೇಕ್ಷಿಸುತ್ತಿದ್ದಾರೆಯೋ ಅಂಥ ಸಂಸ್ಕೃತಿಯ ತಿರುಳನ್ನು ತಿಳಿಸಿದವನು ಆ ಬಸವಣ್ಣನು. ಹಿಂದು ಸುಧಾರಣೆಯು ಯಾವ ಪ್ರಕಾರವಾಗಿ ಉಂಟಾಗಬೇಕೆಂದು ಸದ್ಯದ ಹಿಂದುಗಳು ಅಪೇಕ್ಷಿಸುತ್ತಾರೆಯೋ ಅಂಥ ಸುಧಾರಣೆಯನ್ನು ೮೦೦ ವರ್ಷಗಳ ಪೂರ್ವದಲ್ಲಿ ಪ್ರತ್ಯಕ್ಷ ಆಚರಿಸಿ ತೋರಿಸಿದವನು ಆ ಬಸವಣ್ಣನು.

ಹಿಂದುಗಳಿಗೆ ಈಗ ಹಿಂದುಸ್ಥಾನದಲ್ಲೆಲ್ಲ ಸಾದಾ ಜೀವನವು ಬೇಕಾಗಿದೆ. ಎಲ್ಲ ಪಂಗಡಗಳೂ ಪರಸ್ಪರಾವಲಂಬಿಗಳಾಗಿ ಸಮಾನತೆಯಿಂದ ಜೀವಿಸಬೇಕಾಗಿದೆ. ಜನತೆಯ ಕಾಯಕಗಳಲ್ಲಿರುವ ಉಚ್ಚ ನೀಚವೆಂಬ ಭೇದಹೋಗಿ ಸ್ವಜನರಿಂದ ಸಿದ್ಧವಾದ ಸರಕುಗಳನ್ನೇ ಕೊಂಡುಕೊಳ್ಳುವ ಅಭಿಮಾನವುಂಟಾಗಬೇಕಾಗಿದೆ. ಮದ್ಯ, ಮಾಂಸ, ಗಾಂಜಿ, ತಂಬಾಕುಗಳ ದುಷ್ಟ ಹಾವಳಿಯು ಅಡಗಿ ಹಿಂದುದೇಶದ ಹಳ್ಳಿಪಳ್ಳಿಗಳಲ್ಲೆಲ್ಲ ಪಶು ಹಿಂಸೆಯು ನಾಶವಾಗಿ ಸ್ವಚ್ಛತೆಯು ಕಂಗೊಳಿಸಬೇಕಾಗಿದೆ. ಸ್ತ್ರೀಯೆಂಬ ನಾಮಮಾತ್ರದಿಂದ ಸಮಾಜದ ಮುಖ್ಯವಾದ ಅರ್ಧಜನಾಂಗವನ್ನು

ಕರ್ನಾಟಕ ಚೇಂಬರ ಆಫ್ ಕಾಮರ್ಸದ ಬಳ್ಳಾರಿಯಲ್ಲಿ ಜರುಗಿದ ವಿಶೇಷ ಸಾಧಾರಣ ಸಭೆ.

ಈ ಮೊದಲೇ ನಿರ್ದಿಷ್ಟ ಪಡಿಸಿದಂತೆ ಚೇಂಬರದ ಘಟನೆಯಲ್ಲಿ ತಿದ್ದುಪಡೆ ಮಾಡುವದಕ್ಕೋಸ್ಕರ ಕರೆಯಲ್ಪಟ್ಟ ವಿಶೇಷ ಸಾಧಾರಣ ಸಭೆಯು ತಾ. ೧೩-೪-೧೯೩೫ ನೇ ದಿನ ಸಾಯಂಕಾಲ ೫ ಗಂಟೆಗೆ ಬಳ್ಳಾರಿ ನಗರದಲ್ಲಿ ಮ. ರಾ. ರಾ. ಶ್ರೀ. ವೈ. ಮಹಾಬಲೇಶ್ವರಪ್ಪನವರ ಅಂಗಡಿಯ ಅಟ್ಟದಲ್ಲಿ ಕೂಡಿತು. ಸಭೆಗೆ ಗದಗ. ಬಾಗಲಕೋಟೆ, ಕೊಪ್ಪಳ, ರಾಯಚೂರ, ಬಳ್ಳಾರಿ ಮೊದಲಾದ ನಗರಗಳಿಂದ ಕೆಳಗೆ ಕಾಣಿಸಿದ ಸದಸ್ಯರು ಆಗಮಿಸಿದ್ದರು—

ಶ್ರೀಯುತರುಗಳಾದ ವೈ. ಮಹಾಬಲೇಶ್ವರಪ್ಪನವರು, ಜಂಗಿನ ಮುರಿಗಯ್ಯನವರು, ಬಳ್ಳಾರಿ ವೀರಭದ್ರಪ್ಪನವರು ಡಾ ತುಮ್ಮಿನಕಟ್ಟೆಯವರು, ತೋಗರಿ ವೀರಪ್ಪನವರು, ಗುಡದೂರ ತಿಮ್ಮಪ್ಪನವರು. ಜೆ. ಪಾಪಯ್ಯ ಶೆಟ್ಟರು. ಗೋಗಿ ಕಾಳಪ್ಪನವರ ಪ್ರತಿನಿಧಿಗಳಾದ ಗುಣಪಾಲಪ್ಪನವರು, ಮೋಟೆ ದೊಡ್ಡಪ್ಪನವರು, ಶೆಟ್ಟಿ ಸಿದ್ದಣ್ಣನವರು, ಬೇಂದ್ರೆ ಲಕ್ಷ್ಮಣರಾಯರು, ಅಗಡಿ ವೀರಣ್ಣನವರು, ಮುದಗಲ್ಲ ಪಂಪಣ್ಣನವರು, ಮುಂಡರಗಿ ರಾಘವೇಂದ್ರರಾಯರು, ಓಜನಳ್ಳಿ ವಿರಪನಗೌಡರು. ಪಂಪಣ್ಣ ಕಾಶಪ್ಪ ಸೆಟ್ರ ಪ್ರ|| ವೀರಬಸಪ್ಪನವರು ಗಡಾದ ಶೆಟ್ಟರು, ರಾಘವೇಂದ್ರರಾವ ದೇಸಾಯಿ ಆಂಡ್ ಬ್ರದರ್ಸ ಪ್ರ|| ದ್ಯಾವಪ್ಪನವರು, ಕಾಶಪ್ಪ ದಮ್ಮಿಗಿ ಇವರ ಪ್ರ|| ವೀರಪ್ಪ ಶೆಟ್ಟರು, ವೀರಭದ್ರಪ್ಪ ಅಗಡಿ ಇವರ ಪ್ರ|| ಬಿಸರಳ್ಳಿ ವೆಂಕೋಬಾಚಾರ್ಯರು, ಹಿ ರಾ ಲಾ ಲ ಸಾಹೇಬ ಮುದಗಲ್ಲ ಇವರ ಪ್ರ|| ಕುಬೇರಪ್ಪನವರು ಮತ್ತು ಆಮಂತ್ರಿತರಾಗಿ ಬಂದ ಚೇಂಬರದ ಗೌರವ ಸದಸ್ಯರಾದ ಶ್ರೀ ದೇವಳೆ ರಾಮರಾವ ಬಿ. ಎ. ಎಲ್ ಎಲ್ ಬಿ., ಅವರು.

ಅಧ್ಯಕ್ಷರಾದ ಶ್ರೀಮಾನ್ ವೈ. ಮಹಾಬಲೇಶ್ವರಪ್ಪನವರು ಕರ್ನಾಟಕ ನಾನಾ ಭಾಗಗಳಿಂದ ಸಭೆಗೆ ಬಂದ ಸದಸ್ಯರಿಗೆಲ್ಲ ಸುಸ್ವಾಗತವನ್ನು ಬಯಸಿ ಸಭೆಯ ಉದ್ದೇಶವನ್ನು ವಿವರಿಸಿ ಚೇಂಬರದ ಸದ್ಯದ ಘಟನೆಯಲ್ಲಿ ಆಗಬೇಕೆಂದು ತಾವು ಸಿದ್ಧಪಡಿಸಿದ ತಿದ್ದುಪಡೆಗಳನ್ನೊಳಗೊಂಡ ಘಟನೆಯನ್ನು ಸಭೆಯ ಅಂಗೀಕಾರಕ್ಕಾಗಿ ಇಟ್ಟರು. ಅದನ್ನು ಗೌರವ ಕಾರ್ಯದರ್ಶಿಗಳಾದ ಶ್ರೀ ಬಳ್ಳಾರಿ ವೀರಭದ್ರಪ್ಪನವರು ಸದಸ್ಯರಿಗಾಗಿ ಕನ್ನಡದಲ್ಲಿ ತಿಳಿಸಿ ಹೇಳಿದರು. ಆಮೇಲೆ ಸದಸ್ಯರೆಲ್ಲರೂ ಚರ್ಚೆಯಲ್ಲಿ ಆಸ್ಥೆಯಿಂದ ಭಾಗವಹಿಸಿದರು.

ನಂತರ, ಡಾ. ಎಮ್. ಸಿ. ತುಮ್ಮಿನಕಟ್ಟೆ ಎಮ್. ಎಸ್. ಸಿ. ಪಿ. ಎಚ್. ಡಿ. ಅವರು " ರಜಿಸ್ಟ್ರೇಶನದ ಕಾರ್ಯೋದ್ದೇಶಕ್ಕೆ ಅನುರೂಪವಾಗಬೇಕೆಂತಲೂ ಮತ್ತು ಚೇಂಬರದ ಬೆಳೆಯುತ್ತಿರುವ ಅಗತ್ಯಗಳನ್ನು ಯೋಗ್ಯವಾಗಿ ಪೂರೈಸಬೇಕೆಂದೂ ತಿದ್ದುಪಡೆಮಾಡಿದ ಚೇಂಬರದ ಹೊಸ ಘಟನೆಯನ್ನು ಈ ಸಭೆಯು ಸ್ವೀಕರಿಸುತ್ತದೆ. ಎಂಬೀ ಗೊತ್ತುವಳಿಯನ್ನು ಸಭೆಯ ಮುಂದೆ ಅಂಗೀಕಾರಕ್ಕಾಗಿ ಮಂಡಿಸಿದರು; ಅದನ್ನು ಶ್ರೀಮಾನ್ ಮುಂಡರಗಿ ರಾಘವೇಂದ್ರರಾಯರು ಅನುಮೋದಿಸಿದ ಮೇಲೆ ಅದು ಸರ್ವಾನುಮತದಿಂದ ಸ್ವೀಕೃತವಾಯಿತು.

ಆ ಮೇಲೆ, ರಾಯಚೂರಿನ ಶ್ರೀಮಾನ್ ಸೆಟ್ಟಿ ಸಿದ್ದಣ್ಣನವರು " ಸ್ವೀಕೃತವಾದ ಘಟನೆಯಲ್ಲಿಯ ೬ (೨) ನೇ ನಿಬಂಧನೆಯಲ್ಲಿ ನಿರ್ದಿಷ್ಟ ಪಡಿಸಿದಂತೆ ಕಚೇರಿಯಿಂದ ಕಳಿಸಬೇಕಾದ ಸದಸ್ಯತ್ವದ ಪತ್ರದ ಜೊತೆಗೆ ಸದಸ್ಯರ ತಿಳುವಳಿಕೆಗಾಗಿ ೪ ರಿಂದ ೨೪ ನೇ ನಿಬಂಧನೆಗಳನ್ನು ಕನ್ನಡದಲ್ಲಿ ಪರಿವರ್ತನೆಮಾಡಿ ಕಳಿಸಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ." ಎಂಬ ೨ ನೇ ಗೊತ್ತುವಳಿಯನ್ನು ತರಲಾಗಿ, ಅದು ಶ್ರೀ ಅಗಡಿ ವೀರಣ್ಣನವರಿಂದ ಅನುಮೋದಿಸಲ್ಪಟ್ಟು ಸರ್ವಾನುಮತದಿಂದ ಸ್ವೀಕೃತವಾಯಿತು.

ಅನಂತರ, ಅಧ್ಯಕ್ಷರ ಅಪ್ಪಣೆಯಿಂದ ಸಭೆಯ ಮುಂದೆ ಬಂದ ಕೆಳಗಿನ ಎರಡು ಗೊತ್ತುವಳಿಗಳು ಸರ್ವಾನುಮತದಿಂದ ಪಾಸಾದವು:—

" ದಕ್ಷಿಣ ಕನ್ನಡ ಜಿಲ್ಲೆಗೆ ಚೇಂಬರದ ಪ್ರಸಾರ ಕಾರ್ಯಕ್ಕೋಸ್ಕರ ಶ್ರೀಯುತರುಗಳಾದ ವೈ. ಮಹಾಬಲೇಶ್ವರಪ್ಪನವರು, ಮುಂಡರಗಿ ರಾಘವೇಂದ್ರರಾಯರು, ಗುಡದೂರ ತಿಮ್ಮಪ್ಪನವರು ಮತ್ತು ಜಂಗಿನ ಮುರಿಗಯ್ಯನವರು ಹೋಗಬೇಕೆಂದು ಅವರನ್ನು ಈ ಸಭೆಯು ವಿಜ್ಞಾಪಿಸಿಕೊಳ್ಳುತ್ತದೆ."

" ದೋಷಮಯವಾದ ಕೇಳಕರ ಅವಾರ್ಡನ್ನೂ ಕೂಡಾ ಧಿಃಕರಿಸಿ ಸಂಪೂರ್ಣ ಕನ್ನಡವಾದ ಬಳ್ಳಾರಿ ಜಿಲ್ಲೆಯನ್ನೂ ಮತ್ತು ಕೋಲಾರ, ಬೆಂಗಳೂರ ಮೊದಲಾದ ಭಾಗಗಳನ್ನೂ ಆಂಧ್ರಕ್ಕೆ ಸೇರಿಸಿಕೊಳ್ಳಲು ಆಂಧ್ರರು ಇತ್ತೀಚೆ ನಡಿಸಿದ ಪ್ರಯತ್ನಗಳನ್ನು ಈ ಸಭೆಯು ಬಲವಾಗಿ ನಿಷೇಧಿಸಿರುತ್ತದೆ, ಮತ್ತು ಆಂಧ್ರರ ಈ ಅತಿಕ್ರಮಣವನ್ನು ತಡೆಗಟ್ಟಲು ಅಖಿಲ ಕರ್ನಾಟಕಕ್ಕೆ—ವಿಶೇಷವಾಗಿ ಬಳ್ಳಾರಿ ಜಿಲ್ಲೆಯ ಮತ್ತು ಕೋಲಾರ, ಬೆಂಗಳೂರ ಭಾಗಗಳ ಕನ್ನಡಿಗರಿಗೆ ಈ ಸಭೆಯು ವಿಜ್ಞಾಪಿಸಿಕೊಳ್ಳುತ್ತದೆ."

ಸೂಚಕರು:— ಶ್ರೀ ಜಂಗಿನ ಮುರಿಗಯ್ಯನವರು.
ಅನುಮೋದಕರು:—ಶ್ರೀ ಬಳ್ಳಾರಿ ವೀರಭದ್ರಪ್ಪನವರು.

ಆ ಬಳಿಕ ಸಭೆಗೆ ಬಂದ ಸದಸ್ಯರಿಗೆಲ್ಲರಿಗೂ ಅಧ್ಯಕ್ಷರು ಸಂತೋಷ ಕೂಟವನ್ನು ಏರ್ಪಡಿಸಿದರು.

ಕೊನೆಯಲ್ಲಿ, ಪ್ರವಾಸದ ಆಯಾಸವನ್ನು ಲೆಕ್ಕಿಸದೆ ಸಭೆಗೆ ಬಂದು ಅದನ್ನು ಯಶಸ್ವಿಯಾಗಿ ಮಾಡಿದ್ದಕ್ಕೆ ಸದಸ್ಯರೆಲ್ಲರ ಆಭಾರವನ್ನು ಅಧ್ಯಕ್ಷರು ಮನ್ನಿಸಿದರು; ಮತ್ತು ಸಭೆಯ ಕಾರ್ಯವನ್ನು ಅತ್ಯಂತ ದಕ್ಷತೆಯಿಂದ ನಡಿಸಿದ್ದಕ್ಕಾಗಿಯೂ ಹಾಗು ಸದಸ್ಯರಿಗೆಲ್ಲರಿಗೂ ಆದರಾತಿಥ್ಯ ಮಾಡಿದ್ದಕ್ಕಾಗಿಯೂ ಶ್ರೀ ಮುಂಡರಗಿ ರಾಘವೇಂದ್ರರಾಯರು ಅಧ್ಯಕ್ಷರ ಆಭಾರವನ್ನು ಸದಸ್ಯರ ಪರವಾಗಿ ಮನ್ನಿಸಿದ ನಂತರ ಸಭೆಯು ವಿಸರ್ಜನೆಯಾಯಿತು.

ಗದಗ
ತಾ. ೧೩-೪-೧೯೩೫.

ಮುರಿಗಯ್ಯ ಸೋಮಯ್ಯ ಜಂಗಿನ
ವೀರಭದ್ರಪ್ಪ ಬಸವಪ್ಪ ಬಳ್ಳಾರಿ.
ಗೌರವ ಕಾರ್ಯದರ್ಶಿಗಳು.

ಶಾಶ್ವತವಾದ ಶೂದ್ರ ಸೇವೆಯಲ್ಲಿರಿಸಿಕೊಳ್ಳುವಂಥ ಮಹಾಪಾಪವು ಹಿಂದುಸಮಾಜಕ್ಕೆ ಈಗ ಬೇಡವಾಗಿದೆ. ಅಸ್ಪೃಶ್ಯತೆಯ ಕಲಂಕವಂತೂ ಪೂರ್ಣವಾಗಿ ನಿವಾರಣೆಯಾಗಬೇಕಾಗಿದೆ. ಸ್ವಸಂಸ್ಕೃತಿಯಲ್ಲಿ ಸ್ವಾಭಿಮಾನವು ಜಾಗೃತವಾಗಬೇಕಾಗಿದೆ.

ಹಿಂದುಗಳೇ, ಇದಕ್ಕಾಗಿ ವಿದೇಶೀಯರನ್ನು, ವಿಧರ್ಮೀಯರನ್ನು ಆದರ್ಶವಾಗಿ, ಉದಾಹರಣೆಗಾಗಿ, ತೋರಿಸುವುದು ಅನಾವಶ್ಯಕ. ತೋರಿಸಿರಿ! ೮೦೦ ವರ್ಷಗಳ ಪೂರ್ವದಲ್ಲಿ ಇಂಥ ಕೊಳೆಯನ್ನು ಕಳೆಯಲಿಕ್ಕಾಗಿಯೇ ಇಳಿದು ಬಂದ ಬಸವ ಮಹಾತ್ಮನು ಸರ್ವವಿಧದಲ್ಲೂ ಹಿಂದುಗಳಿಗೆ ಮಾರ್ಗದರ್ಶಿಯಾಗಿರುವನೆಂಬುದನ್ನು ಬೊಟ್ಟಿಟ್ಟು ತೋರಿಸಿರಿ! ಆ ಮಹಾತ್ಮನು ಯಾವ ರೀತಿಯಾಗಿ ಆಚರಿಸಿದನೋ ಅದೇ ಪ್ರಕಾರವಾಗಿ ಆಚರಿಸುವದೇ ಹಿಂದುಸಮಾಜದ ತಾರಕ ಮಾರ್ಗ. ಜನರು ಸುಗಮವಾಗಿ ಜೀವಿಸಬೇಕೆಂದು ಇಚ್ಛಿಸುವದಾದರೆ ಆ ಮಹಾತ್ಮನು ತೋರಿಸಿದ ದಿವ್ಯ [illegible] ಆದರ್ಶವಾಗಬೇಕು.

ಮ ಹಿ ಳಾ ಪ್ರ ಪಂ ಚ.

ಮಹಿಳಾ ವಿದ್ಯಾಪೀಠದ ಭಾಗ್ಯೋದಯ.

ಮಹಾರಾಷ್ಟ್ರದಲ್ಲಿ ಗುರುವರ್ಯ ಧೋಂಡೊ ಕೇಶವ ಕರ್ವೆ ಇವರು ಸ್ತ್ರೀ ಶಿಕ್ಷಣಕ್ಕಾಗಿ ತಮ್ಮ ಜೀವನವನ್ನೇ ಅರ್ಪಿಸಿದ್ದಾರೆ. ಇವರು ಪುಣೆಯ ಹತ್ತಿರ ಸ್ಥಾಪಿಸಿರುವ ಭಾರತ ವರ್ಷೀಯ ಮಹಿಳಾ ವಿದ್ಯಾಪೀಠಕ್ಕೆ ಶ್ರೀ ಠಾಕರಸಿಯವರು ೧೫ ಲಕ್ಷ ರೂ. ಸಹಾಯ ಮಾಡಿದ್ದರು. ಆದರೆ ವಿದ್ಯಾಪೀಠದವರಿಗೂ, ಠಾಕರಸಿ ಟ್ರಸ್ಟೀಗಳಲ್ಲಿಯೂ ವ್ಯಾಜ್ಯವುಂಟಾಗಿ ಅದು ಮುಂಬಯಿ ಹಾಯಕೋರ್ಟಿನಲ್ಲಿ ಈ ರೀತಿ ತೀರ್ಪಾಯಿತು.

(೧) ಠಾಕರಸಿ ಟ್ರಸ್ಟಿನೊಳಗಿಂದ ಭಾರತ ವರ್ಷೀಯ ಮಹಿಳಾ ವಿದ್ಯಾಪೀಠಕ್ಕೆ ಪೂರ್ವದ ಪ್ರಕಾರ ೧೫ ಲಕ್ಷ ರೂ. ಬಡ್ಡಿಯು ಅಂದರೆ ೫೨೫೦೦ ರೂ. ಗಳು ಪ್ರತಿವರ್ಷ ದೊರೆಯಬೇಕು.

(೨) ೧೯೩೨ ನೆಯ ಇಸ್ವಿಯಿಂದ ಬಡ್ಡಿ ಹಣ ಕೊಡುವದನ್ನು ನಿಲ್ಲಿಸಿದ್ದರಿಂದ ಇಲ್ಲಿಯವರೆಗೆ ಬರತಕ್ಕ ಹಣವೆಂದು ೧೬೦೦೦೦ ರೂ. ಗಳನ್ನು ಕೊಡಬೇಕು. ಆದರಿಂದ ಮುಂಬಯಿಯಲ್ಲಿ ವಿದ್ಯಾಪೀಠದ ಒಂದು ಕಾಲೇಜು ಮತ್ತು ಆಫೀಸ ಕಟ್ಟಿಸಲಾಗುವದು.

(೩) ಪ್ರತಿವಾದಿಯು ವಾದಿಯ ಸರ್ವ ವೆಚ್ಚವನ್ನು ಕೊಡತಕ್ಕದ್ದು.

(೪) ಪ್ರತಿವಾದಿಯ ವತಿಯಿಂದ ಲೇಡಿ ಪ್ರೇಮಲೀಲಾಬಾಯಿ ಠಾಕರಸಿ ಇವರನ್ನು ವಿದ್ಯಾಪೀಠದ ಸಿಂಡಿಕೇಟದ ಆಜನ್ಮ ಸಭಾಸದರೆಂದು ನಿಯಮಿಸಬೇಕು.

ಈ ಪ್ರಕಾರ ತೀರ್ಪಾಗಲು ಉಭಯ ಪಕ್ಷದವರೂ ಸಂತೋಷಬಟ್ಟು ತೆರಳಿದರು.

ಮಹಿಳಾ ವಿದ್ಯಾಪೀಠವು ಹಣದ ಅಭಾವದಿಂದ ತೀರ ಮುರಕಳೆಯು ಸ್ಥಿತಿಗೆ ಬಂದಿದ್ದಿತು. ಆದರೆ ಈ ಧನಸಹಾಯದಿಂದ ಅದು ಪುನಃ ಊರ್ಜಿತಸ್ಥಿತಿಯನ್ನು ಹೊಂದುವದೆಂಬುವದರಲ್ಲಿ ಸಂಶಯವಿಲ್ಲ. ಶ್ರೀ ಕರ್ವೆಯವರ ಶ್ರಮವು ಸಾರ್ಥಕವಾಯಿತು.

ದೆವ್ವ ಬಿಡಿಸುವವರೇ ಕೇಳಿರಿ.

ನಿಜಾಮ ರಾಜ್ಯದಲ್ಲಿ ಹುಮನಾಬಾದ ಎಂಬುದು ಪ್ರಸಿದ್ಧ ವ್ಯಾಪಾರಿ ಸ್ಥಳ. ಅದರ ಸಮೀಪದಲ್ಲಿ ಹಳಿಖೇಡ ಎಂಬುದೊಂದು ಗ್ರಾಮವಿದೆ. ಅಲ್ಲಿಯ ಒಬ್ಬ ಹೆಣ್ಣುಮಗಳು ಹರೆಯ ವಯಸ್ಸಿನ ಗರ್ಭವತಿಯಾದ ತನ್ನ ಮಗಳಿಗೆ ದೆವ್ವ ಬಡಿದಿದೆಯೆಂದು ಅದನ್ನು ಬಿಡಿಸುವದಕ್ಕಾಗಿ ಕಲಬುರ್ಗಿಯ ಪ್ರಸಿದ್ಧ ಬಂದಾ ನವಾಜ ದರ್ಗಾಕ್ಕೆ ಕರೆದುಕೊಂಡು ಬಂದಳು. ದರ್ಗೆಯಲ್ಲಿದ್ದ ಕಾಸಮ ಅಲೀ ಖಾನ ಎಂಬ ಫಕೀರನು ಆ ತಾಯಿ ಮಗಳನ್ನು ಕಂಡು ಸರ್ವ ವೃತ್ತಾಂತವನ್ನು ಕೇಳಿಕೊಂಡನು. ಮತ್ತು ತನ್ನ ಮೈಯಲ್ಲಿ ಪೀರನು ಬರುತ್ತಿರುವುದರಿಂದ ಅವಳ ದೆವ್ವವನ್ನು ಓಡಿಸಿ ಬಿಡುವೆನೆಂದು ಹೇಳಿ ಆ ಹೆಣ್ಣುಮಗಳಿಂದ ೫೦ ರೂಪಾಯಿಗಳನ್ನೂ ಕೆಲವು ಕೋಳಿಗಳನ್ನೂ ತೆಗೆದುಕೊಂಡನು.

ಆ ಮೇಲೆ ಆ ತರುಣಿಯನ್ನು ಅವನು ತನ್ನ ಕೋಣೆಯೊಳಗೆ ಒಯ್ದು ಅವಳ ತಲೆಯಮೇಲೆ ಬರೆಕೊಟ್ಟನು. ದೆವ್ವವು ಬಿಟ್ಟು ಹೋಗದೆ ಮತ್ತಷ್ಟು ಕುಣಿದಾಡಹತ್ತಿತು. ಇದನ್ನು ಕಂಡು ಫಕೀರಸಾಹೇಬನು ಮತ್ತೊಂದು ಯುಕ್ತಿಯನ್ನು ಕೈಕೊಂಡನು. ಒಂದೆರಡು ಮೊಳ ಉದ್ದವಾದ ಬೆತ್ತವನ್ನು ತೆಗೆದುಕೊಂಡು ಆ ಗರ್ಭವತಿ ಸ್ತ್ರೀಯನ್ನು ಮೂರ್ಛೆ ಹೋಗುವ ವರೆಗೆ ಹೊಡೆದನು. ಅವಳು ಬವಳಿಹತ್ತಿ ಬೀಳಲು ಹಾಗೇ ಅವಳನ್ನು ಎತ್ತಿಕೊಂಡು ಬಾವಿ ದಂಡೆಗೆ ಒಯ್ದು ಮೈಮೇಲೆ ತಣ್ಣೀರು ಹಾಕಿದನು. ಅವಳ ತಾಯಿಗೆ ಅವನು— ಇದು ದೆವ್ವ ಬಿಡುವ ಕೊನೆಯ ಗುಂಗು. ಇನ್ನು ಮೇಲೆ ಅವಳಿಗೆ ಎಂದೂ ದೆವ್ವ ಬಡಿಯುವದಿಲ್ಲವೆಂದು ಹೇಳಿದನು.

ನೀರು ಸುರುವಿದರೂ ಅವಳು ಎಚ್ಚರಾಗದಿದ್ದುದನ್ನು ಕಂಡು ಆ ಶಹಾಸಾಹೇಬನು ಅವಳನ್ನು ಎತ್ತಿ ಮನೆಗೆ ತಂದು ಮಂತ್ರ ತಂತ್ರಗಳನ್ನು ಪಠಿಸಹತ್ತಿದನು. ಕಡೆಗೆ ವೈದ್ಯನನ್ನು ಕರೆಯಿಸಲು ಆ ತರುಣಿಯ ಹರಣವು ಹೊಡೆತದಿಂದ ಯಾವಾಗ್ಯೋ ಹೋಗಿರುವದಾಗಿ ಅವನು ಹೇಳಿಬಿಟ್ಟನು.

ಪೋಲೀಸರಿಗೆ ಈ ಸಂಗತಿ ತಿಳಿಸಲಾಯಿತು. ಪೋಲೀಸರು ಹೆಣವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಿರುವಾಗ ಅವಳ ಗರ್ಭಸ್ರಾವವೂ ಆಗಿರುವದು ಕಂಡುಬಂತು. ಆ ಫಕೀರನನ್ನು ಬಂಧಿಸಿದ್ದು ಅವನ ಮುಂದಿನ ವಿಚಾರಣೆಯೂ ನಡೆಯುವದಿದೆ.

ದೆವ್ವ ಬಿಡಿಸಿಕೊಳ್ಳುವವರು ಮತ್ತು ಬಿಡಿಸುವವರು ಇದರಿಂದ ಚೆನ್ನಾಗಿ ಪಾಠ ಕಲಿಯಬಹುದಲ್ಲವೇ ?

ಆದರ್ಶ ಮಹಿಳೆ.

ಮುರಾದಾಬಾದ ಜಿಲ್ಹೆಯ ಸಂಬಲ್ ಎಂಬ ಹಳ್ಳಿಯಲ್ಲಿ ರಹಿಮನ್ ಎಂಬ ಹೆಣ್ಣುಮಗಳು ಇರುತ್ತಾಳೆ. ಅವಳ ಪತಿಯು ತೀರಿಕೊಂಡಾಗ್ಗೆ ಅವಳಿಗೆ ೨೨ ವರ್ಷ ವಯಸ್ಸಾಗಿದ್ದಿತು. ಈಗ ಅವಳು ೩೨ ವರ್ಷದವಳಿರುತ್ತಾಳೆ. ಪತಿಯು ತೀರಿಹೋದ ತೊಂದರೆಯಷ್ಟೇ ಅಲ್ಲದೆ ಅವಳ ಅತ್ತೆ ಮಾವಂದಿರಿಬ್ಬರೂ ಕುರುಡರಿರುವುದರಿಂದ ಅವರ ಸೇವೆಯೂ, ಸಂರಕ್ಷಣೆಯೂ ಅವಳ ಪಾಲಿಗೇ ಬಂದಿದೆ. ಮನೆಯಲ್ಲಿರುವವರು ಮೂವರೇ. ಆದರೆ ರಹಿಮನಳು ಅಸಾಧಾರಣ ಮಹಿಳೆಯು. ಅತ್ತೆ ಮಾವಂದಿರನ್ನು ಶೌಚಕ್ಕೆ ಕರೆದುಕೊಂಡು ಹೋಗುವದು, ಸ್ನಾನ ಮಾಡಿಸುವದು, ಊಟ ಮಾಡಿಸುವದು, ಹಾಸಿ ಕೊಡುವದು ಇವೆಲ್ಲ ಕಾರ್ಯಗಳನ್ನು ಮಾಡಿ ಉಳಿದ ವೇಳೆಯಲ್ಲಿ ಹೊಟ್ಟೆಗಾಗಿ ಅವಳು ದುಡಿಯಬೇಕಾಗುವದು. ಎಷ್ಟೋ ದಿನ ಒಪ್ಪೊತ್ತೇ ಉಂಡು ಅವಳು ಅತ್ತೆ ಮಾವಂದಿರ ಹೊಟ್ಟೆಗೆ ಹಾಕಿದುದುಂಟು. ಅವಳ ಈ ದೀನ ಸ್ಥಿತಿ ನೋಡಿ ಕನಿಕರಪಟ್ಟ ಜನರು ಅವಳಿಗೆ—ಬಹಳ ತೊಂದರೆ ಪಡುತ್ತಿರುವೆ; ಇನ್ನೊಬ್ಬ ಪತಿಯನ್ನು ಲಗ್ನವಾಗು ಎಂದು ಹೇಳಲು, ಅವಳು— ಯಾವಾತನು ನನ್ನ ಅತ್ತೆ ಮಾವಂದಿರ ಸಂರಕ್ಷಣೆ ಮಾಡುವೆನೆಂದು ಹೊಣೆಯನ್ನು ಹೊರುವನೋ ಆತನನ್ನೇ ಲಗ್ನವಾಗುವೆನು, ಎಂದು ಉತ್ತರ ಕೊಡುವಳು.

ಆದರೆ ಅಂಥ ಪವಿತ್ರ ಕಾರ್ಯವನ್ನು ವಹಿಸುವ ಪುಣ್ಯಾತ್ಮ ಪತಿಯು ಅವಳಿಗೆ ಇನ್ನೂವರೆವಿಗೂ ದೊರೆಯಲಿಲ್ಲ. ಆದಾಗ್ಯೂ

ಬಸವ ಜಯಂತಿಯು ಯಾರಿಗೆ ಸಂಬಂಧಿಸಿದ್ದು?

ಗುಣಕ್ಕೆ ಮತ್ಸರವೆ? ಎಂಬ ನಾಣ್ಣುಡಿಯಂತೆ ನೋಡುವು ದಾದರೆ ಮಹಾ ಪುರುಷರಿಗೆ ತಕ್ಕ ಯೋಗ್ಯತೆಯುಳ್ಳವರು ಯಾವ ಜಾತಿಯಲ್ಲಿ, ಯಾವ ಕಾಲದಲ್ಲಿ, ಜನ್ಮಿಸಿದ್ದರೂ ಅವರನ್ನು ಯಾವ ರೀತಿಯ ಭೇದಭಾವನೆಯನ್ನೆಣಿಸದೆ ಸರ್ವರೂ ಗೌರವಿಸಲೇ ಬೇಕಷ್ಟೆ?

ಹಾಗಾದರೆ ಕನ್ನಡ ಸಾಹಿತ್ಯಕ್ಕೆ ಜೀವ ಕಳೆಯನ್ನು ತುಂಬಿ ಸರ್ವ ಧರ್ಮಗಳ ಸಾರವನ್ನು ತಮ್ಮ ವಚನಶಾಸ್ತ್ರದಲ್ಲಿ ಭಟ್ಟಿ ಇಳಿಸಿ "ಸರ್ವ ಧರ್ಮ ಸಮನ್ವಯಾಚಾರ್ಯ"ರಾಗಿರುವ ಮಹಾನುಭಾವಿ ಶ್ರೀ. ಬಸವಣ್ಣನವರ ಜನ್ಮೋತ್ಸವ ಸಮಾರಂಭವನ್ನು ಕೇವಲ ಒಂದು ಜಾತಿಯವರು ಅಂದರೆ ವೀರಶೈವರು ಮಾತ್ರ ಆಚರಿಸುವುದರ ಕಾರಣವೇನು?

ಬಸವಾದಿಗಳ ಧರ್ಮೋದ್ಧರಣ ಕಾರ್ಯಕಲಾಪಗಳನ್ನೂ, ಸಮಾಜ ಸುಧಾರಣಾ ಚಳುವಳಿಯ ಸ್ವರೂಪವನ್ನೂ, ವೀರಶೈವರು (ಕೆಲ ಪತ್ರಿಕೆಗಳೂ ಸಹ) ಹೆಚ್ಚಾಗಿ ಪ್ರಚಾರಕ್ಕೆ ತರದೆ ಬಸವಾದಿ ಪ್ರಮುಖರ ವ್ಯಕ್ತಿಗಳನ್ನೂ, ಅವರ ದಿವ್ಯ ತತ್ವಗಳನ್ನೂ ತಮ್ಮ ಲಿಂಗ ಪೂಜೆಯ ಕೋಣೆಗಳಲ್ಲಿ ಬಂಧಿಸಿಟ್ಟುಕೊಂಡಿರುವುದೇ ಇದಕ್ಕೆ ಕಾರಣವೆಂದು ತೋರುತ್ತದೆ.

ಬಸವಾದಿ ಪ್ರಮುಖರ ದಿವ್ಯ ತತ್ವಗಳನ್ನು ಸರ್ವರೂ ಅನುಸರಿಸಬೇಕಾದರೆ ವೀರಶೈವರು ತಮ್ಮಲ್ಲಿರುವ "ಬಸವಾದಿಗಳು ನಮಗೆ ಮಾತ್ರ ಸಂಬಂಧಿಗಳು" ಎಂಬ ಸಂಕುಚಿತ ಭಾವನೆಯನ್ನು ಮೊದಲು ತೊಲಗಿಸಬೇಕು. ಮತ್ತು ವೀರಶೈವರಾದ ರಾಷ್ಟ್ರೀಯ ಕೆಲಸಗಾರರೂ, ಸಮಾಜ ಸುಧಾರಣಾ ಕಾಂಕ್ಷಿಗಳೂ, ತಮ್ಮ ಕಾರ್ಯಕಲಾಪಗಳ ಪ್ರಚಾರದ ಜೊತೆಯಲ್ಲಿಯೇ ಆಯಾ ವಿಷಯಗಳಲ್ಲಿ ಬಸವಾದಿಗಳು ಮಾಡಿರುವ ಮಹತ್ಕಾರ್ಯಗಳನ್ನೂ ತಮಗೆ ಉದಾಹರಣೆಯ ರೂಪದಲ್ಲಿಯಾದರೂ ಪ್ರಚಾರ ಮಾಡಬೇಕು. ಇವೆಲ್ಲಕ್ಕೂ ಮೊದಲು ನಮ್ಮವರಲ್ಲಿ ಸ್ವಾಭಿಮಾನವೂ, ವಿಶಾಲ ಭಾವನೆಯೂ ಬೆಳೆದು ಬಲಿಯಬೇಕು.

ಉದಾಹರಣೆಗಾಗಿ ಸುಮಾರು ಮೂವತ್ತು ವರ್ಷಗಳ ಮೇಲ್ಪಟ್ಟು ರಾಷ್ಟ್ರ ಸೇವೆಗಾಗಿ ರಾಜಕೀಯ ರಂಗದಲ್ಲಿ ದುಡಿದ ಮಹಾತ್ಮಾ ಗಾಂಧೀಜಿಯವರ ಆಪ್ತರಾದ ಶ್ರೀ. ಚಕ್ರವರ್ತಿ ರಾಜಗೋಪಾಲಾಚಾರಿಯವರನ್ನೇ ತೆಗೆದುಕೊಳ್ಳೋಣ. ಮಹಾತ್ಮಾಜಿಯವರು ಆದಿಜನೋದ್ಧಾರದ ಯಾತ್ರೆಯನ್ನು ಕೈಕೊಂಡಾಗ ಶ್ರೀ. ಆಚಾರ್ಯರು ತಮ್ಮ ಪಂಗಡದ ಗುರುಗಳಾದ ಶ್ರೀ. ರಾಮಾನುಜಾಚಾರ್ಯರು ಆದಿಜನರನ್ನು ಎಷ್ಟು ಪ್ರೀತಿಸುತ್ತಿದ್ದರೆಂಬ ವಿಷಯದಲ್ಲಿ ಆಂಗ್ಲ ಮತ್ತು ತಮಿಳು ಪತ್ರಿಕೆಗಳಲ್ಲಿ ಲೇಖನಗಳ ಮಳೆಯನ್ನೇ ಸುರಿಸಿಬಿಟ್ಟರು (ಮದರಾಸಿನ ಪ್ರಜಾಮತವು ಆ ಲೇಖನಗಳನ್ನು ಭಾಷಾಂತರಿಸಿ ಪ್ರಕಟಿಸಿದೆ)

ಆದರೆ ಅಸ್ಪೃಶ್ಯತೆಯ ನಿರ್ಮೂಲನಕ್ಕಾಗಿ ಎಲ್ಲರಿಗಿಂತಲೂ ಹೆಚ್ಚಾಗಿ ದುಡಿದಿರುವ ಬಸವಾದಿಗಳ ಕಾರ್ಯಕಲಾಪಗಳ ವಿಷಯವಾಗಿ ಆದಿಜನ ಸುಧಾರಣೆಗಾಗಿ ದುಡಿದ ವೀರಶೈವರಾರೂ ಶ್ರೀ. ರಾಜಗೋಪಾಲಾಚಾರ್ಯರ ಹಾಗೆ ಲೇಖನಗಳನ್ನು ಪ್ರಕಟಿಸಲಿಲ್ಲ.

ಲಿಂಗಾಂಗಿ ಧರ್ಮದ ಹೃದಯ ಸ್ವರೂಪರಾದ ಶ್ರೀ. ಬಸವಾದಿಗಳ ತತ್ವಗಳನ್ನು ಅವರ ಭಕ್ತರು ತಮ್ಮ ಸ್ವಂತ ಮಠ, ಮಂದಿರಗಳಲ್ಲಿಯೇ ಕಟ್ಟಿಹಾಕಿ ಅನ್ಯ ಮತೀಯರ ದೃಷ್ಟಿಗೆ ಬೀಳದಂತೆ ಮಾಡಿಬಿಟ್ಟಿರುವರು. ಆದರೆ ಕೆಲಕಾಲದಿಂದೀಚೆಗೆ ಅನ್ಯ ಮತೀಯ ಶ್ರೇಷ್ಠ ಸಾಹಿತಿಗಳು ಕೆಲವರು ಬಸವ ತತ್ವದ ಉದ್ಧಾರಕ್ಕಾಗಿ ಬದ್ಧಕಂಕಣರಾಗಿರುವರು. ಆ ಮಹಾಶಯರುಗಳಿಗೆ ವೀರಶೈವರೆಷ್ಟು ಕೃತಜ್ಞರಾದರೂ ಸಾಲದು. ವೀರಶೈವ ವಿದ್ವಾಂಸರು ಮುಂದೆಯಾದರೂ ಅವರ ಅನುಕರಣದಿಂದಲಾದರೂ ತಮ್ಮ ಮತ ತತ್ವಗಳ ಪ್ರಸಾರಣೆಗಾಗಿ ದುಡಿಯಲಿ.

ಇನ್ನು ಬಸವಜಯಂತಿಯನ್ನು ಭಾರತೀಯರೆಲ್ಲರೂ ಆಚರಿಸಬೇಕಾಗಿದ್ದಿತು. ಆದರೆ ದುರದೃಷ್ಟದಿಂದ ಬಸವನ ತತ್ವಗಳೆಲ್ಲವೂ ಕನ್ನಡದಲ್ಲಿಯೇ ಇದ್ದು ಅದರ ಚಳುವಳಿಯೆಲ್ಲವೂ ಕರ್ನಾಟಕದಲ್ಲಿಯೇ ನಡೆದಿರುವದರಿಂದಲೂ, ಆ ತತ್ವಗಳು ಅನ್ಯ ಭಾಷೆಗೆ ಪರಿವರ್ತನವಾಗದಿರುವುದರಿಂದಲೂ, ಅಖಿಲ ಕನ್ನಡಿಗರಾದರೂ ಭೇದ ಭಾವನೆಗಳನ್ನು ತೊರೆದು ತಪ್ಪದೆ ಬಸವ ಜಯಂತಿಯನ್ನಾಚರಿಸಬೇಕು.

ಬಸವೇಶನು ಎಲ್ಲ ಹಿಂದುಗಳನ್ನು ಒಂದೇವಿಧ ಸಮಾಜ ಸೂತ್ರದಲ್ಲಿ ತಂದು ಒಂದೇ ವಿಧ ಮನೋರಚನೆಯುಂಟಾಗುವಂತೆ ಮಾಡಿರುವುದರಿಂದ ನಮ್ಮ ನಾಡಿನಲ್ಲಿ ಸಮಾಜ ಸುಧಾರಣೆಗಾಗಿ ದುಡಿಯುತ್ತಿರುವ ಸಮಸ್ತ ಸಂಸ್ಥೆಗಳೂ, ತರುಣ ಸಂಘಗಳೂ ತಪ್ಪದೆ ಬಸವ ಜಯಂತಿಯನ್ನಾಚರಿಸಬೇಕು.

ಇನ್ನು ಬಸವೇಶನು ಇಂದಿನ ಖಾದಿ ಚಟುವಟಿಕೆಯನ್ನು ಅಂದೇ ಪ್ರಾರಂಭಿಸಿದ್ದನಲ್ಲದೆ ಪ್ರತಿಯೊಬ್ಬನೂ ತನ್ನ ಐಹಿಕ ಜೀವನಕ್ಕಾಗಿ ಸತ್ಯ-ಧರ್ಮಗಳಿಗೆ ಲೋಪ ಬರದಂತಹ ಯಾವ ಕಸಬನ್ನಾದರೂ ಅವಲಂಬಿಸಬಹುದೆಂತಲೂ, ಮಾನವನು ಕಾಯಕವಿಲ್ಲದೆ ನಿರುದ್ಯೋಗಿಯಾಗಿ ಜೀವಿಸಬಾರದೆಂತಲೂ, ಮಾನವನು ಅವಲಂಬಿಸುವ ಧರ್ಮಕ್ಕೂ ಅವನ ಜೀವನೋಪಾಯದ ಕಸಬಿಗೂ ಉಳ್ಳನೀಚ ಸಂಬಂಧವು ಇಲ್ಲವೆಂತಲೂ ಹೇಳಿರುವುದರಿಂದ ರಾಷ್ಟ್ರೀಯ ಕೆಲಸಗಾರರೆಲ್ಲರೂ ಜಾತಿ ಮತ ಭೇದಗಳನ್ನೆಣಿಸದೆ ಶ್ರೀ ಬಸವ ಜಯಂತಿಯನ್ನಾಚರಿಸಬೇಕು.

ಮೊ. ಸಂ. [illegible]

ಅವಳು ಹತಾಶಳಾಗಿರುವದಿಲ್ಲ. ಸಾಯುವವರೆಗೆ ಈ ಪೂಜ್ಯ ಭಕ್ತಿ ಮಾವಂದಿರ ಸೇವೆ ಮಾಡುತ್ತ ಮಾಡುತ್ತ ನಾನು ಮರಣ ಹೊಂದುವೆನು ಎಂದು ಅವಳು ಪ್ರತಿಜ್ಞೆಯನ್ನೇ ಮಾಡಿರುವಳು.

ಆ ದೇವಿಗೆ ನೇಯಲಿಕ್ಕೆ ಚನ್ನಾಗಿ ಬರುತ್ತದೆ. ಆದೇ ಗ್ರಾಮದಲ್ಲಿ ಶ್ರೀ ಪೊದ್ದಾರ ಎಂಬುವವರು ಒಂದು ಖಾದೀ ಕೇಂದ್ರವನ್ನು ತೆರೆದಿರುವರು ಅವಳು ಖಾದಿ ನೇಯ್ದು ತಿಂಗಳಿಗೆ ೨||-೩ ರೂಪಾಯಿಗಳಂತೆ ದೊರಕಿಸುವಳು. ಅಷ್ಟರಿಂದ ಅವಳ ಮತ್ತು ಅವಳ ಭಕ್ತಿ ಮಾವಂದಿರ ಉಪಜೀವನವಾಗಬೇಕು. ಜನರು ಅವಳಿಗೆ ಲಾಭವಾಗಲೆಂದು ಹೆಚ್ಚು ಹಣ ಕೊಟ್ಟು ಖಾದಿ ತೆಗೆದುಕೊಂಡರೆ ಅವಳೆಂದೂ ತೆಗೆದ ಕೊಳ್ಳುವದಿಲ್ಲ. ಯಾರಾದರೂ ದಾನ ಕೊಟ್ಟರೆ ತೆಗೆದುಕೊಳ್ಳುವದಿಲ್ಲ.

ಇತಿಹಾಸ ಪುರಾಣಗಳಲ್ಲಿ ಸ್ತ್ರೀಯರು ಪ್ರಾಣಕ್ಕಿಂತ ಹೆಚ್ಚಾಗಿ ಪತಿ ಸೇವೆಮಾಡಿದ ಮಾತುಂಟು, ಮಾತಾ ಪಿತೃಗಳ ಸೇವೆ ಮಾಡಿದುದುಂಟು; ಆದರೆ ಕುರುಡ ಭಕ್ತಿ ಮಾವಂದಿರ ಸೇವೆ ಮಾಡಿದ ಇಂಥ ಉದಾಹರಣೆಯು ಅತಿ ವಿರಲ.

"[illegible]"

ಭಗವಾನ್ ಬಸವ ಸ್ತವನ.

ವರು:— ಶ್ರೀ. ಕಲ್ಲಿನಾಥ ಶಾಸ್ತ್ರಿ ಹಿರೇಮಠ ದ್ಯಾಂಪುರ.

||ಝಂಪಾ||

ನೀನೆ ನಮ್ಮಯ ಸಕಲ ಸೌಭಾಗ್ಯವಯ್ಯ |
ಜ್ಞಾನನಿಧಿ ಮೂಜಗವ್ನುರುವೆ ಬಸವಯ್ಯ || ನೀನೆ ||ಪಲ್ಲ||

ಜಗದೊಳೆಮ್ಮಯ ಮತ ಸ್ಥಾಪಿಸಿದ ಗುರುವಾರು |
ಬಗೆ ಷಟಸ್ಥಲ ಮಾರ್ಗ ಬೋಧಿಸಿದರಾರು ||
ಗುಣ, ಅನುಭವ ಮಂಟಪವ ರಚಿಸಿದವರಾರು |
ಜಗದೀಶ ಚಂಬಸವ ನೀನಲ್ಲದಾರು || ನೀನೆ ||೧||

ಂಟು ಹೊದಿಕೆಯೊಳೆಮ್ಮ ಹುದಿಗಿಸಿಟ್ಟವರಾರು |
ಕಂಟಕಗಳೆರದ್ವದು ನಡೆಯ ಪಿಡಿಸಿದರಾರು ||
ಕೊಂಟಕಟ್ಟಿದರಾರು ಶಿವಮತೋದ್ಧರಣೆಗೆ |
ಎಂಟ ಶ್ರೀ ಶಿವಬಸವ ನೀನಲ್ಲದಾರು || ನೀನೆ ||೨||

ಟುಹೊದಿಕೆ — ಅಷ್ಟಾವರಣ. ಐದುನಡೆ — ಪಂಚಾಚಾರ.

ದಿಜನ, ಸ್ತ್ರೀ, ಶೂದ್ರ, ವಿಪ್ರರಿಂಗೆ ಧರ್ಮದೊಳು |
ಬೋಧದಿಂ ಸಮತೆಯನಿತ್ತವರದಾರು ||
ಭೇದನೀಗಿ ವಿವಾಹ ಗಳನೆಸಗಿದವರಾರು |
ಧಿಗಾದಿಯು ಬಸವ ನೀನಲ್ಲದಾರು || ನೀನೆ ||೩||

ಲಿಂಗಾಂಗಿಗಳು ಸಕಲರೊಂದೆಯೆಂದವರಾರು |
ಜಂಗಮವೆ ಜಗದೊಳುನ್ನತವೆಂದರಾರು ||
ಜಂಗುಳಿಯ ದೈವಗಳ ಧಿಕ್ಕರಿಸಿದವರಾರು |
ಮಂಗಲಾತ್ಮಕ ಬಸವ ನೀನಲ್ಲದಾರು || ನೀನೆ ||೪||

ಹುಟ್ಟ-ಜನಿವಾರ ಮೋಕ್ಷ ಯಜ್ಞ-ಯಾಗಾದಿಗಳ |
ಕಟ್ಟಳೆಯು ನಮಗಿಲ್ಲವೆಂದರಾರು ||
ಷ್ಟ ಶಿವಮತಕೆ ಸರಿಯಿಲ್ಲೆಂದವರದಾರು |
ಟ್ಟ ಶ್ರೀಗುರು ಬಸವ ನೀನಲ್ಲದಾರು || ನೀನೆ ||೫||

ಂದಿನಾ ವರ್ಣ ನಾಲ್ಕನು, ಪಂಚಸೂತಕವ |
ಕಂದದಿಂದತಿಗಳೆದ ಜಗವಂದ್ಯನಾರು ||
ಂದುಧರ ಮತ ಶಿದ್ಧಿ ಸರಿಪಡಿಸಿದವರಾರು |
ಂದೆ ಸಂಗನಬಸವ ನೀನಲ್ಲದಾರು || ನೀನೆ ||೬||

ದ — ಸಂಪೂರ್ಣ ನಾಶಮಾಡಿದ. ಇಂದುಧರಮತ — ಶೈವಮತ

ಗ್ರಂಥಂಗಳಿಗೆ ದಾಸನಾಗದವನಾರು |
ಸ್ವಂತ ಸುವಿಚಾರಗಳಿಗಿಂಬುಗೊಟ್ಟವರಾರು ||
ಂತ ಪಂಚಾಚಾರ್ಯರಿಂಗೆ ಸದ್ಗುರುವಾರು |
ಂತುರಿವು ನಮ ಬಸವ ನೀನಲ್ಲದಾರು || ನೀನೆ ||೭||

ಮ್ಮ ಕನ್ನಡ ನಾಡನುದ್ಧರಿಸಿದವರಾರು |
ಮ್ಮ ನುಡಿಯವ್ವನಿಗೆ ತಂದೆಯಾರು ||
ಮ್ಮ ಜನರಿಂಗೆ ದೇಶಿ ವ್ರತವ ಪೇಳಿದರಾರು |
ನ್ಯಾನ್ಯ ಶ್ರೀ ಬಸವ ನೀನಲ್ಲದಾರು || ನೀನೆ ||೮||

ನುಡಿಯವ್ವ — ಭಾಷಾಮಾತೆ.

ಲಿತ ವೈಶಾಖ ಶುಕ್ಲದ ರೋಹಿಣೀತಾರಿ |
ಯಲಿ ಜಯಂತ್ಯುತ್ಸವವ ಕೈಕೊಂಬರಾರು ||
ಕಲುಷ ರಹಿತಂ ಕಲ್ಲಿನಾಥ ಸ್ವರೂಪಂ |
ಕಾಲಕಾಲಂ ಬಸವ ನೀನಲ್ಲದಾರು || ನೀನೆ ||೯||

‘ಹಿಂದು ಆಶ್ರಮ’ ಉದ್ಘಾಟನ ಸಮಾರಂಭ.

ಹಿಂದು ಮಹಾಸಭೆಯು ದಿಲ್ಲಿಯಲ್ಲಿ ೪೦ ಸಾವಿರ ರೂ. ಗಳನ್ನು ವೆಚ್ಚಮಾಡಿ ‘ಹಿಂದು ಆಶ್ರಮ’ ಮತ್ತು ‘ಹಿಂದು ಸಭಾಗೃಹ’ ಎಂಬೆರಡು ಸಂಸ್ಥೆಗಳಿಗಾಗಿ ಭವ್ಯವಾದ ಕಟ್ಟಡಗಳನ್ನು ಕಟ್ಟಿಸಿರುವದು. ಅವುಗಳ ಉದ್ಘಾಟನ ಸಮಾರಂಭವು ಹಿಂದು ವಯೋವೃದ್ಧ ಮುಂದಾಳುಗಳಾದ ಶ್ರೀ. ವಿಜಯ ರಾಘವಾಚಾರಿಯರ ಇವರ ಹಸ್ತದಿಂದ ಜರುಗಿತು.

ಈ ಆಶ್ರಮದಲ್ಲಿ ಹಿಂದು ಮಹಾಸಭೆಯ ಕಾರ್ಯಕರ್ತರ ಭೋಜನ, ವಸತಿಗಳ ವ್ಯವಸ್ಥೆಗಾಗಿ ಶ್ರೀ. ಭಾಯಿ ಪರಮಾನಂದರು ತಮ್ಮ ಸ್ವಂತ ಆಸ್ತಿಯನ್ನೆಲ್ಲ ಅರ್ಪಿಸಿರುವರು. ಈ ಆಶ್ರಮದಿಂದ ಮಹಾಸಭೆಯ ಮುಂದಿನ ಕಾರ್ಯಗಳಿಗೆಲ್ಲ ಒಳ್ಳೇ ಸಹಾಯವಾಗುವದರಲ್ಲಿ ಸಂಶಯವಿಲ್ಲ. ಹಿಂದು ಮಹಾಸಭೆಯು ಕಳೆದ ೨೦ ವರ್ಷಗಳಿಂದಲೂ ಕೆಲಸ ಮಾಡಿ ಹಿಂದುಸ್ಥಾನದ ಮುಖ್ಯ ಸಂಸ್ಥೆಗಳಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ. ಅದಕ್ಕೆ ಈ ಘನವಾದ ಯೋಗ್ಯತೆಯುಂಟಾದುದು ಶ್ರೀ. ಭಾಯಿ ಪರಮಾನಂದರವರಂತಹರ ನಿಸ್ವಾರ್ಥ ಸೇವೆಯಿಂದಲೆ.

ಅನೇಕರು, ಹಿಂದು ಮಹಾಸಭೆಯು ಜಾತಿನಿಷ್ಠ ಸಂಸ್ಥೆಯಾಗಿರುವುದರಿಂದ ರಾಷ್ಟ್ರೀಯ ಹಿತಕ್ಕೆ ವಿಘಾತಕವಾಗಿರುವದೆಂದು ಆಕ್ಷೇಪಿಸುತ್ತಾರೆ. ಇಂಥವರು ಹಿಂದು ಮಹಾಸಭೆಯ ಕಾರ್ಯವನ್ನು ನಿರೀಕ್ಷಿಸಿದಂತೆ ತೋರುವದಿಲ್ಲ. ರಾಷ್ಟ್ರ ಹಿತವನ್ನೇ ಹಿಂದು ಮಹಾಸಭೆಯು ತನ್ನ ಧ್ಯೇಯವಾಗಿಟ್ಟುಕೊಂಡಿದೆ. ಶ್ರೀ ವಿಜಯ ರಾಘವಾಚಾರ್ಯರು ತಮ್ಮ ಭಾಷಣದಲ್ಲಿ ಇಂಥ ಆಕ್ಷೇಪಣೆಗಳಿಗೆ ಈ ರೀತಿ ಉತ್ತರ ಕೊಟ್ಟಿರುವರು—“ ನಮ್ಮ ದೇಶದ ಉದ್ಧಾರಕ್ಕಾಗಿ ಸ್ಥಾಪಿಸಲ್ಪಟ್ಟ ಅನೇಕ ಸಂಸ್ಥೆಗಳಲ್ಲಿ ಹಿಂದು ಮಹಾಸಭೆಯು ಶ್ರೇಷ್ಠ ಸಂಸ್ಥೆಯಾಗಿದೆ. ಅದರ ಉದ್ದೇಶಗಳು ಆಕ್ಷೇಪಾರ್ಹವಾಗಿಲ್ಲ. ಹಿಂದು ಎಂಬ ಶಬ್ದದಲ್ಲಿ ಹಿಂದು ದೇಶದ ಎಲ್ಲ ಜಾತಿಮತಗಳ ಸಮಾವೇಶವಾಗುತ್ತದೆ. ಮುಸಲ್ಮಾನರೂ ಕ್ರೈಸ್ತರೂ ಮಾತ್ರ ಅದರಿಂದ ಹೊರಗಾಗಿದ್ದಾರೆ. ಜಾತಿ ಮತ ವೈಷಮ್ಯಗಳನ್ನು ನಿವಾರಿಸುವದೇ ಅದರ ಉದ್ದೇಶ. ಶ್ರೀ ಭಾಯಿ ಪರಮಾನಂದರು ಇದರ ಪ್ರಾಣಸ್ವರೂಪರಾಗಿದ್ದಾರೆ.”

ಸಿಂಧ ಮತ್ತು ಓಡಿಸಾಗಳ ಪ್ರತ್ಯೇಕಪ್ರಾಂತ.

ಬರುವ ನವಂಬರ ತಿಂಗಳಿನಿಂದ ಸಿಂಧವು ಪ್ರತ್ಯೇಕ ಪ್ರಾಂತವಾಗುವದೆಂದೂ ಮತ್ತು ಅದಕ್ಕೆ ಸಿಂಧದ ಸದ್ಯದ ಕಮಿಶನರ ಮಿ. ಆರ್ ಇ. ಗಿಬ್ಸನ್ ಇವರು ಮೊದಲನೆಯ ಗವರ್ನರರಾಗುವರೆಂದೂ ವಿಶ್ವಸನೀಯವಾಗಿ ತಿಳಿದುಬರುತ್ತದೆ.

ಓಡಿಸಾ ಪ್ರತ್ಯೇಕ ಪ್ರಾಂತವನ್ನಾದರೂ ಮಾಡಿ ಅದಕ್ಕೆ ಮದ್ರಾಸ ಇಲಾಖೆಯ ಕೆಲ ಭಾಗವನ್ನು ಜೋಡಿಸಲಾಗುವದು. ಇದಕ್ಕಾಗಿ ರಿಫಾರ್ಮ್ಸ್ ಸೆಕ್ರೆಟರಿ ಮಿ. ವ್ಯಾನ್ಸಫೀಲ್ಡರವರು ಮದ್ರಾಸ ಇಲಾಖೆಯಲ್ಲಿ ಸಂಚಾರಮಾಡಿ ಈಗ ರಾಂಚಿಗೆ ಬಂದಿರುವರು. ಓಡಿಸಾ ಪ್ರಾಂತವನ್ನು ಪ್ರತ್ಯೇಕವಮಾಡುವ ಕುರಿತು ಬಿಹಾರ ಸರಕಾರದ ಆರ್ಥಿಕ ಶಾಖೆಯ ಸೇವಾ ನಿವೃತ್ತ ರಜಿಸ್ಟ್ರಾರ ರಾಯಬಹಾದ್ದೂರ ಉಪೇಂದ್ರ ಮೋಹನ ಸೇನ ಇವರನ್ನು ನಿಯಮಿಸಲಾಗಿದೆ.



ಶಾ. ಶ. ೧೮೫೭ ನೆಯ ಚೈತ್ರ ಬ|| ೪ ಸೋಮವಾರ.

ಕರ್ನಾಟಕದಲ್ಲಿ ಸಮತಾವಾದಿಗಳ ಸಂಸ್ಥೆಯು ಅಗತ್ಯವೇ?

ಬರುವ ಮೇ ತಿಂಗಳಲ್ಲಿ ಕರ್ನಾಟಕ ಪ್ರಾಂತಿಕ ರಾಜಕೀಯ ಪರಿಷತ್ತು ಮಂಗಳೂರಿನಲ್ಲಿ ಕೂಡುವದಷ್ಟೆ. ಆ ಕಾಲಕ್ಕೆ ಅಖಿಲ ಕರ್ನಾಟಕದ "ಕಾಂಗ್ರೆಸ್ ಸೋಸಿಯಾಲಿಸ್ಟ್" ಪಕ್ಷದ ಒಂದು ಸಂಸ್ಥೆಯನ್ನು ಸ್ಥಾಪಿಸುವ ಆವಶ್ಯಕತೆಯು ಸಂಬಂಧವಾಗಿ ಶ್ರೀಯುತ ಬಿ. ಅನಂತ ರೈ. ಎಂಬುವವರು ಪ್ರಕಟಿಸಿದ ಒಂದು ಪ್ರಕಟನೆಯು ಕಳೆದ ವಾರ ಈ ಪತ್ರಿಕೆಯಲ್ಲಿ ಪ್ರಸಿದ್ಧವಾಗಿದೆ. ಅದರಿಂದ ಈ 'ಸೋಸಿಯಾಲಿಸ್ಟ್' ಎಂದರೆ ಸಮತಾವಾದಿಗಳ ವಿಚಾರ ಸರಣಿಯು ಎಷ್ಟೋ ಮಟ್ಟಿಗೆ ವಾಚಕರಿಗೆ ಗೊತ್ತಾಗಿರಬಹುದು.

ಈಗ ಜಗತ್ತಿನಲ್ಲಿ ರಾಜಕಾರಣವೇ, ಜನಾಂಗದ ಮುಖ್ಯ ಆಂದೋಲನವಾಗಿ ಪರಿಣಮಿಸಿದೆ. ಎಂದಮೇಲೆ ಈ ಪಾರತಂತ್ರ್ಯದಲ್ಲಿರುವ ರಾಷ್ಟ್ರಕ್ಕೆ ರಾಜಕಾರಣವನ್ನುಪೇಕ್ಷಿಸುವುದು ಶಕ್ಯವೇ? ರಾಜಕೀಯ ಸ್ವಾತಂತ್ರ್ಯವನ್ನು ಸಂಪಾದಿಸಲು ನ್ಯಾಯವಾದ ಎಲ್ಲ ಪ್ರಯತ್ನಗಳನ್ನೂ ಮಾಡಬೇಕಾದುದು ಯುಕ್ತವೇ ಆಗಿದೆ. ಆದರೆ ಈ ದೇಶದ ಸ್ಥಿತಿ, ಇಲ್ಲಿರತಕ್ಕ ಭಿನ್ನ ಭಿನ್ನ ಜನಾಂಗಗಳ ಪ್ರವೃತ್ತಿ, ಮೊದಲಾದವುಗಳನ್ನೆಲ್ಲಾ ಯೋಚಿಸಿ ಪ್ರಯತ್ನಿಸಿದರೆ ಮಾತ್ರ ಅದರಿಂದ ಪ್ರಯೋಜನವಾಗುವುದು.

ಪಶ್ಚಿಮ ದೇಶಗಳಲ್ಲಿಯ ಎಲ್ಲಾ ಚಟುವಟಿಕೆಗಳನ್ನೂ ಈ ದೇಶದಲ್ಲಿ ಪ್ರಾರಂಭಿಸುವುದು ಹಿತಕರವಾಗಲಾರದು. ಆದರೂ ಈಗ ಈ ದೇಶದಲ್ಲಿ ಸಮತಾವಾದಿಗಳುಂಟಾಗಿದ್ದಾರೆ ಅಲ್ಲಲ್ಲಿ ಸಂಘಗಳೂ ಏರ್ಪಟ್ಟಿವೆ. ಎಂದ ಮೇಲೆ ಕರ್ನಾಟಕದಲ್ಲಿಯೂ ಅಂತಹ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಆ ಮತವಾದಿಗಳು ಅಪೇಕ್ಷಿಸುವುದು ಸ್ವಾಭಾವಿಕ.

ಈ ಸಮತಾವಾದಿಗಳ ಪ್ರಕಟನೆಯಲ್ಲಿ ಈ ಪ್ರಕಾರ ಒಂದು ವಾಕ್ಯವಿದೆ. "ಉಗ್ರವಿರೋಧದಿಂದ ಮಾತ್ರವೇ ಸ್ವಾತಂತ್ರ್ಯ ಸಾಧಿಸಬಹುದೇ ಹೊರತು ಕೇವಲ ಕಾಯಿದೆಶೀರ ಚಳವಳದಿಂದಲ್ಲವೆಂಬುದು ನಮ್ಮ ಅನುಭವವೇದ್ಯ ವಿಷಯ"

ಈ ಸಮತಾವಾದಿಗಳು 'ಉಗ್ರವಿರೋಧ' ಎಂಬುದರ ಅರ್ಥವೇನೆಂಬುದನ್ನು ವಿವರಿಸಿಲ್ಲ. ಮತ್ತು 'ಕೇವಲ ಕಾಯಿದೆಶೀರ' ಚಳವಳದಿಂದ ಸಾಧ್ಯವಲ್ಲವೆಂದ ಮೇಲೆ ಅದಾವ ಚಳವಳದಿಂದ ಸಾಧಿಸಬೇಕೆಂಬ ಸಂಗತಿಯನ್ನೂ ತಿಳಿಸಿಲ್ಲ. ಇವರ ಪ್ರಕಟನೆಯನ್ನು ಓದಿದರೆ ಈಗ ಕೌನ್ಸಿಲ್ಲಿನಲ್ಲಿ ಪ್ರಯತ್ನಿಸುವುದು ಇವರಿಗೆ ಇಷ್ಟವಿದ್ದಂತೆ ತೋರುವುದಿಲ್ಲ. ಮತ್ತು ಅಹಿಂಸಾತ್ಮಕ ಶಾಸನೋಲ್ಲಂಘನೆಯೂ ಇವರಿಗೆ ಪರಿಣಾಮಕಾರಿಯಾದ ಮಾರ್ಗವೆಂಬಂತೆ ಕಾಣುವುದಿಲ್ಲ.

ಎಂದಮೇಲೆ ಈ ಸಮತಾವಾದಿಗಳ ಮಾರ್ಗವಾವುದು? ಇವರ ಉಗ್ರವಿರೋಧವೆಂದರೇನು? ಇವರು ಜನಸಾಮಾನ್ಯರ ಮುಂದಿಡುವ ಕಾರ್ಯಕ್ರಮಗಳಾವವು? ಅವುಗಳನ್ನನುಸರಿಸಲು ಜನಾಂಗದಲ್ಲಿ ಯಾವ ಸಿದ್ಧತೆಗಳಿವೆ? ಎಂಬವುಗಳನ್ನೆಲ್ಲಾ ಚೆನ್ನಾಗಿಯೇ ಯೋಚಿಸಬೇಕು. ದೇಶದಲ್ಲುಂಟಾಗುವ ಚಟುವಟಿಕೆಗಳನ್ನೆಲ್ಲಾ ನಾವೂ ಅನುಸರಿಸಬೇಕೆಂಬ ಹಂಬಲವಿರಬಾರದು. ಈಗ ಅನುಸರಿಸಿರುವ ಮಾರ್ಗದಲ್ಲಿ ಕುಂದುಕೊರತೆಗಳಿದ್ದರೆ ಅವುಗಳನ್ನು ತಿದ್ದಿಕೊಳ್ಳಬೇಕು.

ಹಿಂದುಸ್ಥಾನದ ರಾಜಕಾರಣವು ಬಹು ತೊಡಕಿನದಾಗಿದೆ. ಈಗಿರುವ ನಾನಾ ಪಕ್ಷಗಳಲ್ಲಿಯೇ ಮತೈಕ್ಯವಿಲ್ಲ. ಮತ್ತು ಅವು ಪರಿಣಾಮಕಾರಿಯಾಗಿಯೇ ಪರಿಣಮಿಸುತ್ತವೆಂತಲೂ ಆಯಾಯ ಪಕ್ಷಗಳ ಪ್ರಮುಖರು ತಿಳಿದುಕೊಂಡು ಪ್ರಯತ್ನಿಸುತ್ತಿದ್ದಾರೆ. ಹೀಗಿರುವಾಗ ಇದೊಂದು ಪಕ್ಷ ಕಲೆದೋರಿದರೆ ಕಾರ್ಯಶಕ್ತಿಯು ವಿಭಾಗವಾಗಿ ಯಾವುದೂ ಪರಿಣಾಮಕಾರಿಯಾಗಲಾರದು. ಅನ್ಯಪಕ್ಷಗಳಿಗಿಂತ ಹೆಚ್ಚು ಪರಿಣಾಮಕಾರಿಯಾದ ಯಾವ ಕಾರ್ಯಕ್ರಮವನ್ನೂ ಈ ಸಮತಾವಾದಿಗಳು ಜನಾಂಗದ ಮುಂದಿಟ್ಟಿಲ್ಲ.

ಕರ್ನಾಟಕದ ಈಗಿನ ಸ್ಥಿತಿಗತಿಗಳನ್ನೆಲ್ಲಾ ಯೋಚಿಸಿದ್ದಾದರೆ ಇಂತಹ ಅನಿಶ್ಚಿತ ಸ್ಥಿತಿಯಲ್ಲಿರತಕ್ಕ ಸಮತಾವಾದಿಗಳ ಸಂಸ್ಥೆ ಸ್ಥಾಪನೆಯಾಗುವುದು ಅನಾವಶ್ಯಕವೆಂದೇ ನಮಗೆ ತೋರುತ್ತದೆ. ಈ ವ್ಯರ್ಥ ಸಾಹಸಕ್ಕೆ ಕನ್ನಡಿಗರು ಕೈಹಾಕದೆ ಕೌನ್ಸಿಲ್ಲಿನಲ್ಲಿ ಸೇರಿ ಪ್ರಯತ್ನಿಸುವಂತೆ ಖಾದಿ ಪ್ರಸಾರ, ಆದಿಜನ ಸುಧಾರಣೆ, ಗ್ರಾಮೋದ್ಧಾರ ಈ ವಿಧಾಯಕ ಕಾರ್ಯಗಳಲ್ಲಿಯೂ ತಮ್ಮ ಶಕ್ತಿ ಸಾಹಸಗಳನ್ನು ವಿನಿಯೋಗಿಸಿ ರಾಷ್ಟ್ರಕ್ಕೆ ನಿಜವಾದ ಹಿತವನ್ನುಂಟುಮಾಡುವರೆಂದೇ ನಾವು ನಂಬಿದ್ದೇವೆ.

ಹುಬ್ಬಳ್ಳಿಯ ಎರಡು ಮಹತ್ವದ ಸಂಸ್ಥೆಗಳು.

ಅನಾಥ ಬಾಲಕಾಶ್ರಮ ಎಂಬ ಸಂಸ್ಥೆಯು ಹುಬ್ಬಳ್ಳಿಯಲ್ಲಿ ಸ್ಥಾಪನೆಯಾಗಿ ನಾಲ್ಕೈದು ತಿಂಗಳುಗಳಾದವು ಇಷ್ಟರಲ್ಲೇ ಈ ಆಶ್ರಮದಲ್ಲಿ ಎಂಟು ಮಕ್ಕಳು ಕೂಡಿದ್ದಾರೆ. ಇವರೆಲ್ಲರೂ ಅನಾಥರು. ಇವರ ರಕ್ಷಣೆಯಾಗದಿದ್ದರೆ ಈ ಮಕ್ಕಳು ಪರಧರ್ಮದವರ ಬಲೆಯಲ್ಲಿ ಬೀಳುವ ಸಂಭವವಿತ್ತು. ಇಂತಹ ಅನರ್ಥಕ್ಕೆ ಅವಕಾಶ ಕೊಡದಂತೆ ಹಿಂದುಗಳಲ್ಲಿಯ ಯಾವ ಮತ ಪಂಥದ ಅನಾಥ ಮಕ್ಕಳನ್ನಾದರೂ ಈ ಸಂಸ್ಥೆಯವರು ತೆಗೆದುಕೊಂಡು ಅವರಿಗೆ ವೀರಶೈವ ಪದ್ಧತಿಯ ಪ್ರಕಾರ ದೀಕ್ಷಾದಿ ಸಂಸ್ಕಾರಗಳನ್ನು ಕೊಟ್ಟು ಅವರನ್ನು ಜೋಪಾನಮಾಡಿ ಯೋಗ್ಯ ಶಿಕ್ಷಣ ಕೊಡುತ್ತಿರುವುದು ಅತ್ಯಂತ ಸ್ತುತ್ಯವಾದುದಾಗಿದೆ.

ಈ ವಿಧವಾದ ಅನಾಥಾಲಯಗಳು ಪ್ರತಿಯೊಂದು ದೊಡ್ಡ ಪಟ್ಟಣದಲ್ಲಿಯೂ ಏರ್ಪಡಬೇಕಾದುದು ಅತ್ಯಾವಶ್ಯಕ. ಈಗ ಪರಧರ್ಮದವರ ಹಾವಳಿ ಹೆಚ್ಚು. ಜನರಲ್ಲಾದರೋ ದಾರಿದ್ರ್ಯವು

ಫ್ರಾನ್ಸ-ಜರ್ಮನಿಗಳ ಗಡಿಬಿಡಿ.

ಸ್ಟ್ರೇಸಾ ಒಪ್ಪಂದ

ಸ್ಟ್ರೇಸಾದಲ್ಲಿ ಕೂಡಿದ ಇಂಗ್ಲಂಡ, ಫ್ರಾನ್ಸ ಮತ್ತು ಇಟಲಿ ಈ ಮೂರು ರಾಷ್ಟ್ರಗಳ ಪರಿಷತ್ತು ಮುಗಿಯಿತು. ಮೂರು ರಾಷ್ಟ್ರಗಳು ಕೂಡಿ ಒಂದು ಸಂಯುಕ್ತಪತ್ರಕವನ್ನು ಈ ರೀತಿ ಹೊರಡಿಸಿವೆ—ಯಾವುದೊಂದು ದೇಶವು ಪೂರ್ವದ ಶರ್ತುಗಳನ್ನು ಬದಿಗೊತ್ತಿ ಯುರೋಪದ ಶಾಂತತೆಗೆ ಭಂಗವನ್ನುಂಟುಮಾಡಿದರೆ ಈ ಮೂರು ರಾಷ್ಟ್ರಗಳು ಒಕ್ಕಟ್ಟಿನಿಂದ ಅದನ್ನು ವಿರೋಧಿಸುವವು. ರಾಷ್ಟ್ರ ಸಂಘದಲ್ಲಿದ್ದುಕೊಂಡು ಸಾಮುದಾಯಿಕ ಶಾಂತತೆಯನ್ನು ರಕ್ಷಿಸುವದೇ ಇವುಗಳ ಧ್ಯೇಯವು

ಜರ್ಮನಿಯ ಉತ್ತರ.

ಫ್ರಾನ್ಸವು ಈ ಪ್ರಕಾರವಾಗಿ ರಾಷ್ಟ್ರ ಸಂಘಕ್ಕೆ ಜರ್ಮನಿಯ ಸೈನ್ಯಸಂವರ್ಧನೆಯ ದೂರನ್ನು ಹೇಳಿಕೊಂಡರೆ ಜರ್ಮನಿಯೂ ಸುಮ್ಮನೆ ಕುಳಿತಿರುವದಿಲ್ಲ. ಜರ್ಮನಿಯಲ್ಲಿ ಒತ್ತಾಯ ಸೇನಾ ಶಿಕ್ಷಣವನ್ನು ಯಾಕೆ ಪ್ರಾರಂಭಿಸಲಾಯಿತೆಂಬುದನ್ನು ಅದು ಹೀಗೆ ಸಮರ್ಥಿಸಿದೆ— ವ್ಹರ್ಸಯಾ ಒಪ್ಪಂದದ ಮೇರೆಗೆ ನಡೆದುಕೊಳ್ಳಲು ಎಲ್ಲ ರಾಷ್ಟ್ರಗಳಿಗೆ ಅಶಕ್ಯವೆಂದು ತೋರಿದ ಮೇಲೆಯೇ ಜರ್ಮನಿಯು ಒತ್ತಾಯ ಸೈನ್ಯ ಶಿಕ್ಷಣವನ್ನು ಪ್ರಾರಂಭಿಸಿದೆ. ರಾಷ್ಟ್ರ ಸಂಘವು ಶಸ್ತ್ರಾಸ್ತ್ರಗಳನ್ನುಪಯೋಗಿಸದಂತೆ ಮಾಡಲು ಅಸಮರ್ಥವಾಯಿತು. ಅನೇಕ ರಾಷ್ಟ್ರಗಳು ಗುಪ್ತರೀತಿಯಿಂದ ಶಸ್ತ್ರಾಸ್ತ್ರಗಳನ್ನು ಹೆಚ್ಚಿಸಲಾರಂಭಿಸಿದವು. ಜರ್ಮನಿಯು ರಾಷ್ಟ್ರ ಸಂಘವನ್ನು ಪ್ರವೇಶಿಸಿದಾಗಿನಿಂದ ಅನ್ಯ ರಾಷ್ಟ್ರಗಳು ತಮ್ಮ ಹೊಣೆಗಾರಿಕೆಯನ್ನು ಪಾಲಿಸುವವೆಂಬ ಆಶೆಯಿಂದ ಅದು ತನ್ನ ಹೊಣೆಗಾರಿಕೆಯನ್ನು ಪಾಲಿಸಿತು. ಆದರೆ ಎಂದಿನಿಂದ ಅನ್ಯ ರಾಷ್ಟ್ರಗಳು ತಮ್ಮ ಹೊಣೆಗಾರಿಕೆಯಿಂದ ನಡೆಯಲು ಅಶಕ್ಯತೆಯನ್ನು ತೋರಿಸಿದವೋ ಅಂದಿನಿಂದ ಜರ್ಮನಿಯೂ ಸ್ವತಂತ್ರ ಧೋರಣವನ್ನವಲಂಬಿಸಿತು.

ರಾಷ್ಟ್ರ ಸಂಘದಲ್ಲಿ ಜರ್ಮನಿಯ ನಿಷೇಧ.

೧೭ ನೆಯ ತಾರೀಖಿನ ದಿವಸ ಜಿನೇವಾದಲ್ಲಿ ಕೂಡಿದ ರಾಷ್ಟ್ರ ಸಂಘದ ಅಧಿವೇಶನದಲ್ಲಿ ಜರ್ಮನಿಯು ವ್ಹರ್ಸಯಾ ಒಪ್ಪಂದವನ್ನತಿಕ್ರಮಿಸಿ ಒತ್ತಾಯ ಮತ್ತು ಸಾಮೂಹಿಕ ಸೈನ್ಯ ಶಿಕ್ಷಣವನ್ನು ಪ್ರಾರಂಭಿಸಿದ್ದರಿಂದ ಅದರ ಈ ಕೃತಿಯನ್ನು ನಿಷೇಧಿಸಬೇಕೆಂದು ಫ್ರಾನ್ಸವು ತಂದ ಗೊತ್ತುವಳಿಯನ್ನು ವಿಚಾರಿಸಲಾಯಿತು. ಪ್ರಾರಂಭದಲ್ಲಿ ರಶಿಯಾದ ಪ್ರತಿನಿಧಿಯಾದ ಎಂ. ಲಿಟ್ವಿನಾಫ ಇವರು ಈ ಪ್ರಕಾರ ತಮ್ಮ ಭಾಷಣದಲ್ಲಿ ಹೇಳಿದರು— ಸ್ವಸಂರಕ್ಷಣೆಯ ಬದಲಾಗಿ ಎರಡನೆಯವರ ಬಾಧ್ಯತೆಗೆ ಗದಾಪ್ರಹಾರ ಮಾಡುವ ಕುರಿತು ಮತ್ತು ಜಗತ್ತಿನ ಶಾಂತತೆಗೆ ವಿಘ್ನವನ್ನುಂಟುಮಾಡುವ ಕುರಿತು ಯಾವದಾದರೂ ದೇಶವು ಶಸ್ತ್ರಾಸ್ತ್ರಗಳನ್ನು ಹೆಚ್ಚಿಸುತ್ತಿದ್ದರೆ ಅದರ ಬಗ್ಗೆ ರಾಷ್ಟ್ರ ಸಂಘವು ವಿಶೇಷ ಲಕ್ಷವನ್ನು ಪೂರೈಸಿ ಯೋಗ್ಯ ಉಪಾಯವನ್ನು ಕೈಕೊಳ್ಳಬೇಕು.

ನಂತರ ಆಸ್ಟ್ರಿಯಾದ ಪ್ರತಿನಿಧಿಯಾದ ಎಂ. ಬ್ರೂಸ ಇವರು ಗೊತ್ತುವಳಿಯನ್ನು ಸಮರ್ಥಿಸುತ್ತ—ಜಗತ್ತಿನ ಶಾಂತತೆಯನ್ನು ಕಾಯ್ದುಕೊಳ್ಳುವದಕ್ಕಾಗಿ ಯುರೋಪದ ಎಲ್ಲ ರಾಷ್ಟ್ರಗಳನ್ನು ಐಕ್ಯದಿಂದಿರಿಸುವಂತೆ ರಾಷ್ಟ್ರ ಸಂಘವು ಉಪಾಯ ಯೋಜನೆಯನ್ನು ಕೈಕೊಳ್ಳಬೇಕೆಂದು ಹೇಳಿದರು.

ಈ ಗೊತ್ತುವಳಿಯನ್ನು ಡೆನ್ಮಾರ್ಕದ ಪ್ರತಿನಿಧಿಯು ವಿರೋಧಿಸುತ್ತ— ಭೂತಕಾಲದ ಕೃತ್ಯವನ್ನು ನಿಷೇಧಿಸುತ್ತ ಕುಳಿತರೆ ರಾಷ್ಟ್ರಗಳ ಮೈತ್ರಿಗೆ ಬಾಧೆ ಬರುವದೆಂದು ಹೇಳಿದನು.

ಕಡೆಗೆ ಜರ್ಮನಿಯನ್ನು ನಿಷೇಧಿಸುವ ಗೊತ್ತುವಳಿಯು ಸ್ವೀಕೃತವಾಯಿತು. ಡೆನ್ಮಾರ್ಕದ ಪ್ರತಿನಿಧಿಯು ತಟಸ್ಥನಾಗಿದ್ದನು. ಯಾವುದೊಂದು ದೇಶವು ಅಂತರ ರಾಷ್ಟ್ರೀಯ ಶರ್ತುಗಳನ್ನು ಮುರಿದದ್ದಾದರೆ ಅದರ ಬಗ್ಗೆ ಆರ್ಥಿಕ ಉಪಾಯ ಯೋಜನೆ ಮಾಡುವ ಕುರಿತು ೧೩ ರಾಷ್ಟ್ರಗಳ ಒಂದು ಸಮಿತಿಯನ್ನುಂಟುಮಾಡಲಾಯಿತು.

ಜರ್ಮನಿಯಲ್ಲಿ ಕೋಲಾಹಲ

ರಾಷ್ಟ್ರ ಸಂಘವು ಜರ್ಮನಿಯನ್ನು ನಿಷೇಧಿಸಿತೆಂಬ ವರ್ತಮಾನವು ಜರ್ಮನಿಗೆ ಮುಟ್ಟಿದಕೂಡಲೆ ಒಳ್ಳೇ ಗದ್ದಲವುಂಟಾಗಿದೆ. ಇದರಿಂದ ಯುರೋಪದ ರಾಜಕಾರಣವು ಮತ್ತಷ್ಟು ಕಟುವಾಗುವದೆಂದು ಕೆಲವರು ಅನ್ನುತ್ತಾರೆ. ಕೆಲವು ದಿವಸಗಳ ಪೂರ್ವದಲ್ಲಿ ಸರದಾರ ಸಾಯಮನ್ನರ ಮುಂದೆ ಹೇರ ಹಿಟ್ಲರರು ಮನಬಿಚ್ಚಿ ಮಾತಾಡಿದ್ದರೂ ಅವರು ಹೀಗೆ ಮಾಡಿದುದನ್ನು ನೋಡಿ ಕೆಲವರು ಆಶ್ಚರ್ಯಚಕಿತರಾಗಿದ್ದಾರೆ. ಕೆಲವರು ಪೋಲಂಡದ ಧೋರಣವನ್ನು

ಹೆಚ್ಚಾಗಿದೆ. ಅನಾಥರಾದ ಮಕ್ಕಳು ಪರಧರ್ಮದವರ ಬಲೆಯಲ್ಲಿ ಬೀಳುವ ಪ್ರಸಂಗವು ವಿಶೇಷ. ಆದಕಾರಣ ಧರ್ಮ ರಕ್ಷಣೆಯ ಈ ಪವಿತ್ರ ಕಾರ್ಯವನ್ನು ಎಲ್ಲ ಪ್ರಸಿದ್ಧ ಸ್ಥಳಗಳಲ್ಲಿಯೂ ನಡೆಯಿಸುವ ಅವಶ್ಯಕತೆ ಹೆಚ್ಚಾಗಿದೆ. ಹುಬ್ಬಳ್ಳಿಯ ನಿವಾಸಿಗಳು ಈ ಮಹತ್ಕಾರ್ಯವನ್ನು ಪ್ರಾರಂಭಿಸಿದ್ದಕ್ಕೋಸ್ಕರ ನಾವು ಹೃದಯಪೂರ್ವಕ ಇವರನ್ನು ಅಭಿನಂದಿಸುತ್ತೇವೆ. ಈ ಕಾರ್ಯಕ್ಕೆ ಸಕಲ ಮಹಾಶಯರೂ ಉದಾರ ಸಹಾಯಮಾಡಿ ಆ ಭಾಗದ ಅನಾಥ ಬಾಲಬಾಲಿಕೆಯರನ್ನಾದರೂ ರಕ್ಷಿಸುವ ಪರಮ ಶ್ರೇಷ್ಠತರವಾದ ಪುಣ್ಯಕ್ಕೆ ಭಾಗಿಗಳಾಗುವರೆಂದು ನಂಬಿದ್ದೇವೆ.

ಆದಿಜನ ಬಾಲಿಕಾಶ್ರಮವು ಕೂಡಾ ಇಲ್ಲಿ ಸ್ಥಾಪನೆಯಾದುದು ಅತ್ಯಂತ ಸ್ತುತ್ಯವಾದುದು. ಇಲ್ಲಿರತಕ್ಕ ೨೦-೩೦ ಬಾಲಿಕೆಯರು ಬಹು ಒಳ್ಳೆಯ ಸ್ಥಿತಿಯಲ್ಲಿದ್ದಾರೆ. ಅಖಿಲ ಭಾರತ ಹರಿಜನ ಸೇವಾಸಂಘದಿಂದಲೂ ಇದಕ್ಕೆ ಸಹಾಯ ದೊರೆಯುತ್ತಲಿದೆ. ಹುಬ್ಬಳ್ಳಿಯ ಮಹಾಜನರೂ ಇದಕ್ಕೆ ತಂಬಾ ಸಹಾಯಮಾಡುತ್ತಿದ್ದಾರೆ ಶ್ರೀಮತಿ ಪಾಟೀಲ ನಾಗಮ್ಮನವರ ಅದ್ವಿತೀಯವಾದ ಪ್ರೇಮಾದರಗಳಿಂದಲೇ ಈ ಬಾಲಿಕಾಶ್ರಮವು ಇಷ್ಟು ಪರಿಣಾಮಕಾರಿಯಾಗಿ ಜರುಗಿದೆ. ಆದಿಜನರ ಹೆಣ್ಣುಮಕ್ಕಳನ್ನು ಇವರು ತಮ್ಮ ಹೊಟ್ಟೆಯ ಮಕ್ಕಳಂತೆ ಜೋಪಾನ ಮಾಡುತ್ತಿರುವುದು ಅತ್ಯಂತ ಅಭಿನಂದನೀಯವಾದುದು. ಈ ಸಂಸ್ಥೆಗೂ ಕೂಡಾ ಜನರು ಉದಾರವಾದ ಸಹಾಯವನ್ನು ಮಾಡುವುದು ಅತ್ಯಾವಶ್ಯಕ. ಈ ಪ್ರಕಾರ ಹುಬ್ಬಳ್ಳಿಯಲ್ಲಿರತಕ್ಕ ಈ ಎರಡೂ ಪವಿತ್ರ ಸಂಸ್ಥೆಗಳು ಹುಬ್ಬಳ್ಳಿಯ ಕೀರ್ತಿಯನ್ನು ಹೆಚ್ಚಿಸಿ ಕರ್ನಾಟಕಕ್ಕೆ ಭೂಷಣಪ್ರದವಾದವುಗಳಾಗುವಂತೆ ಅಲ್ಲಿಯ ಮಹಾಜನರು ಉದಾರ ಸಹಾಯದಿಂದ ಸಂರಕ್ಷಿಸುವರೆಂದು ನಾವು ನಂಬಿದ್ದೇವೆ.

ಪ ತ್ರ ಗ ಳ ಸಾ ರಾ ಂ ಶ .

ಕರ್ನಾಟಕ ವ್ಯಾಯಾಮ ವಿದ್ಯಾಪೀಠ ಧಾರವಾಡ.

ಮೋಫತ ಶಾರೀರಿಕ ಶಿಕ್ಷಣ ವರ್ಗವು.

ಮೇ ೧೯೩೫

ಈ ಸಂಸ್ಥೆಯವರು ತರುಣರಿಗೆ ಮೋಫತ ಶಿಕ್ಷಣಕೊಡುವ ಉದ್ದೇಶದಿಂದ ಬರುವ ಮೇ ತಿಂಗಳಲ್ಲಿ ಒಂದು ಶಾರೀರಿಕ ಶಿಕ್ಷಣ ವರ್ಗವನ್ನು ಪ್ರಾರಂಭಿಸಬೇಕೆಂದು ಗೊತ್ತುಪಡಿಸಿರುವರು. ಈ ವರ್ಗವು ಸಂಸ್ಥೆಯ ಭವ್ಯವಾದ ಪಟಾಂಗಣದಲ್ಲಿ ನೆರೆಯುವದು.

ವಿಷಯಗಳು.

ಶಾರೀರಿಕ ಶಿಕ್ಷಣದ ಎಲ್ಲ ಶಾಖೆಗಳಲ್ಲಿಯೂ ಶಿಕ್ಷಣ ಕೊಡಲ್ಪಡುವದು. ಮುಖ್ಯ ವಿಷಯಗಳೆಂದರೆ- (೧) ಲಾಠಿ (೨) ಲೇಝುಮ (೩) ಜೋಧಾಟ (೪) ಭಾಲಾ (೫) ಜಂಬಿಯಾ (೬) ಕುಸ್ತಿ (೭) ಮಲಖಾಂಬ (೮) ಲೋಡು ತಿರುವುವದು (೯) ದಾಂಡಪಟ್ಟಾ (೧೦) ಲಕಡಿ ಮುಂತಾದವುಗಳು.

ಐಚ್ಛಿಕ ವಿಷಯಗಳು

(೧) ಸಿಂಗಲ್‌ಬಾರ (೨) ಡಬಲ್‌ಬಾರ (೩) ಬಾಕ್ಸಿಂಗ (೪) ರೋಮನ್ ರಿಂಗ್ಸ (೫) ಜಿಮ್ನ್ಯಾಸ (೬) ಒಜ್ಜೆ ಎತ್ತುವದು (೭) ಆಸನ ಇವಲ್ಲದೆ ಶರೀರ ಶಾಸ್ತ್ರ, ಆರೋಗ್ಯ ಶಾಸ್ತ್ರ, ಹಾಗೂ ಪ್ರಾಥಮೋಪಚಾರ ವಿಷಯವಾಗಿ ವ್ಯಾಖ್ಯಾನ ಕೊಡಲ್ಪಡುವದು.

ಈ ವರ್ಗವು ಮೇ ೧ ನೇ ತಾರೀಖಿಗೆ ಪ್ರಾರಂಭವಾಗಿ ಮೇ ಅಖೈರವರೆಗೆ ನಡೆಯುವದು ಶಿಕ್ಷಣವು ಮೋಫತ ಕೊಡಲ್ಪಡುವದು. ಆದರೆ ವಸತಿಗೃಹ ಹಾಗೂ ಭೋಜನಗಳಿಗಾಗಿ ರೂಪಾಯಿ ೧೬ ಕೊಡಬೇಕಾಗುವದು. ವಿದ್ಯಾರ್ಥಿಗಳಿಗೆ ತಗಲುವ ಇತರ ವೆಚ್ಚಗಳನ್ನು ಅವರೇ ಸಹಿಸತಕ್ಕದ್ದು. ಇವೆಲ್ಲ ವಿಷಯಗಳಲ್ಲಿ ಪರೀಕ್ಷೆ ತೆಗೆದುಕೊಂಡು ತೇರ್ಗಡೆ ಹೊಂದಿದವರಿಗೆ ಪ್ರಶಸ್ತಿ ಪತ್ರಗಳು ಕೊಡಲ್ಪಡುವವು ಸಾಕಷ್ಟು ವಿದ್ಯಾರ್ಥಿಗಳು ಬಂದರೆ ಮಾತ್ರ ವರ್ಗವು ಪ್ರಾರಂಭಿಸಲ್ಪಡುವದು.

ವಿದ್ಯಾರ್ಥಿಗಳು ತರತಕ್ಕ ಸಾಮಾನುಗಳು.

(೧) ಒಂದು ಬಿಳಿ ಹಾಗೂ ಒಂದು ಖಾಕಿ ಹೀಗೆ ಎರಡು ಜತೆ ಉಡುಪುಗಳು (ಅರ್ಧ ಚಣ್ಣ, ಅರ್ಧ ಶರಟು ಮತ್ತು ಒಂದು ಟೊಪ್ಪಿಗೆ) (೨) ಕಂಬಿಗೆ (೩) ಹಾಸಿಗೆ ಹೊದಿಕೆ (೪) ಕಂದೀಲು (೫) ಮೂರು ಅಡಿ ಉದ್ದ ಮುಕ್ಕಾಲು ಇಂಚು ದಪ್ಪ ಇದ್ದ ಒಂದು ಲಾಠಿ (೬) ತಾಟು (೭) ೨ ಟಿಪ್ಪಣಿ ಪುಸ್ತಕಗಳು (೮) ಎರಡು ಲಂಗೋಟಿಗಳು, ಒಂದು ಚಡ್ಡಿ.

ನಿಯಮಗಳು

೧. ಶಿಬಿರಾಧ್ಯಾಪಕರ ಅಪ್ಪಣೆ ಇಲ್ಲದೆ ವಿದ್ಯಾರ್ಥಿಗಳು ಶಿಬಿರವನ್ನು ಬಿಡತಕ್ಕದ್ದಲ್ಲ.

೨. ಆಭರಣ ಅಥವಾ ಹಣವನ್ನು ಮೇಲಧಿಕಾರಿಗಳ ವಶಕ್ಕೆ ಕೊಟ್ಟು ಪಾವತಿ ಪಡೆಯತಕ್ಕದ್ದು. ಇಲ್ಲವಾದರೆ ಅವುಗಳ ಹೊಣೆಯು ಹೊರಲಾಗದು.

೩. ಶಿಕ್ಷಣದ ಅವಧಿ ಮುಗಿಯುವ ಮೊದಲು ಶಿಬಿರ ಬಿಟ್ಟು ಹೋದರೆ ಹಣವು ತಿರುಗಿ ದೊರೆಯಲಾರದು.

೪. ಅಸಭ್ಯರೀತಿಯಿಂದ ವರ್ತಿಸಿದರೆ ಶಿಕ್ಷೆಗೆ ಗುರಿಯಾಗಬೇಕಾಗುವದು.

೫. ಹೀಗೆ ಶಿಕ್ಷೆಗೆ ಪಾತ್ರನಾಗಿ ಹೊರಗೆ ಹಾಕಲ್ಪಟ್ಟ ವಿದ್ಯಾರ್ಥಿಯ ಹಣವು ತಿರುಗಿ ದೊರೆಯಲಾರದು.

೬. ಶಿಬಿರದಲ್ಲಿ ಜಾತಿ ಭೇದವಿಲ್ಲಾ.

೭. ಶಿಬಿರದ ಉಳಿದ ನಿಯಮಗಳನ್ನು ವಿದ್ಯಾರ್ಥಿಗಳು ಪಾಲಿಸತಕ್ಕದ್ದು.

೮. ಎಲ್ಲ ವಿದ್ಯಾರ್ಥಿಗಳು ಬಾಂಧವರಂತೆ ನಡೆದುಕೊಳ್ಳುವರೆಂದು ಸಂಸ್ಥೆಯವರ ಆಶೆ.

ಪ್ರವೇಶದ ಬಗ್ಗೆ ಅರ್ಜಿಯನ್ನು ಕೊಡತಕ್ಕವರು ೨೫ ನೇ ಎಪ್ರಿಲ ಒಳಗಾಗಿ ಕಳಿಸತಕ್ಕದ್ದು.

ಸಂಚಾಲಕ

ಮೋಫತ ಶಾರೀರಿಕ ಶಿಕ್ಷಣ ವರ್ಗವು

ನಿಷೇಧಿಸುತ್ತಿದ್ದಾರೆ. ಹೇರ ಹಿಟ್ಲರರು ದಕ್ಷಿಣ ಜರ್ಮನಿಗೆ ಹೋಗಿದ್ದರು. ಅವರಿಗೆ ಈ ಸಂಗತಿಯನ್ನು ತಂತೀ ಮೂಲಕ ತಿಳಿಸಲಾಯಿತು.

ರಾಷ್ಟ್ರ ಸಂಘದ ಈ ಧೋರಣದಿಂದ ಜರ್ಮನಿಯು ರಾಷ್ಟ್ರ ಸಂಘವನ್ನು ಪುನಃ ಸೇರುವದು ಕೇವಲ ಅಶಕ್ಯವೆಂದೂ ಫ್ರಾನ್ಸದ ಈ ಚಟುವಟಿಕೆಯಿಂದ ಯುರೋಪದ ಶಾಂತತೆಗೆ ಒಂದಿಲ್ಲೊಂದು ವಿಧದಿಂದ ನಿಶ್ಚಯವಾಗಿ ಭಂಗವುಂಟಾಗುವದೆಂದೂ ಅಲ್ಲಿ ಅಭಿಪ್ರಾಯಗಳು ವ್ಯಕ್ತವಾಗುತ್ತಲಿವೆ.

ಒಟ್ಟಿನಮೇಲೆ ರಾಷ್ಟ್ರ ಸಂಘದ ಈ ನಿಷೇಧವು ಎಷ್ಟು ಪರಿಣಾಮಕಾರಿಯಾಗಬಹುದೆಂಬುದು ಜರ್ಮನಿಗೆ ಗೊತ್ತಿದೆ. ಈ ಚರ್ಚೆಯಲ್ಲಿ ಅಮೇರಿಕೆಯ ಸಂಯುಕ್ತ ಸಂಸ್ಥಾನವು ಕೈಹಾಕಿರುವದಿಲ್ಲ. ಜಪಾನವಂತೂ ಎರಡು ವರ್ಷಗಳ ಪೂರ್ವದಲ್ಲಿಯೇ ರಾಷ್ಟ್ರ ಸಂಘಕ್ಕೆ ಶರಣು ಹೊಡೆದಿದೆ. ಈ ನಿಷೇಧದಿಂದ ಜರ್ಮನಿಯ ಕೋಪೋದ್ದೀಪನವಾಗಬಹುದೇ ಹೊರತು ಅದು ಭಯಪಟ್ಟು ಅಂಕಿತವಾಗುವ ಲಕ್ಷಣವಿಲ್ಲ.

ಗುಲಬುರ್ಗಾ ವೀ. ಬಸವರಾಜ ಫ್ರೀ ಬೋರ್ಡಿಂಗಿಗೆ

ಶೇಡಮ ತಾ॥ ವೀ. ಮಹಾಜನಗಳ ಸಹಾಯ

ನಮ್ಮ ಬೋರ್ಡಿಂಗಿಗೆ ಕಮಲಾಪೂರ ಮತ್ತು ಮಹಾಗಾಂವ ಪ್ರಾಂತದ ವೀರಶೈವ ಮುಂದಾಳುಗಳು ಸಹಾಯ ಮಾಡಿದಂತೆಯೇ ಶೇಡಮ ತಾ॥ ವೀರಶೈವರೂ ಕೂಡ ಯೋಗ್ಯ ಸಹಾಯ ಮಾಡಿ ಎರಡನೆ ತಾಲೂಕಿನವರಿಗೆ ಮಾರ್ಗದರ್ಶಕರಾಗಿರುವರೆಂದು ಹೇಳಲು ಯಾವ ಅಭ್ಯಂತರವೂ ಇರುವದಿಲ್ಲ ಸಹಾಯಮಾಡಿದ ಮಹನೀಯರ ಹೆಸರುಗಳನ್ನು ಬರೆದು ಅವರನ್ನು ಅಭಿನಂದಿಸದಿರಲಾರೆವು. ಈ ತಾಲೂಕಿನಲ್ಲಿ ಬೋರ್ಡಿಂಗಿನ ಸಹಾಯಾಧಿಪತಿಗಳಾದ ಆದಿನಾಥ ದೇಶಿಕರು ಮತ್ತು ಬಸವರಾಜಪ್ಪ ಪೊ. ಪಾ. ಬೆಂಡೆಗುಂಬಳ ಇವರು ಸಂಚರಿಸಿದರು. ಮೊದಲು ಬೆನಕನಹಳ್ಳಿಯಲ್ಲಿ ನಾಡಗೌಡ ಬಸಪ್ಪನವರೂ ಜಡೆಪ್ಪನವರೂ ತಮ್ಮಲ್ಲಿ ಹತ್ತು-ಚೀಲ ಜೋಳ ಮಾಡಿಸಿ ಕೊಟ್ಟರು. ಕಲಕಂಬದ ಶಿವಲಿಗಂಪ್ಪ ಗೌಡರು ೨ ಚೀಲ, ಕೊರಳಿಯಲ್ಲಿ ಪರ್ವತರಡ್ಡಿ ವಕೀಲಸಾಹೇಬರೂ ಮತ್ತು ಶ್ರೀಮಂತ ತಂಬಾಕ ಲಿಂಗಪ್ಪಣ್ಣನವರೂ ಕೂಡಿ ತಮ್ಮಲ್ಲಿ ೧೮ ಚೀಲ ಕಾಳು ಮಾಡಿಸಿದರು. ಭೀಮನಹಳ್ಳಿ ಸಜ್ಜನಶೆಟ್ಟಿ ನಾಗಪ್ಪನವರು ದರ ವರ್ಷ ಬೋರ್ಡಿಂಗಿಗೆ ೧ ಚೀಲ ಉಪ್ಪು ಕೊಡುತ್ತೇವೆಂದು ಹೇಳಿರುವರು. ಅಲ್ಲೂರಲ್ಲಿ ಮಾರದ ರಾಚಪ್ಪನವರೂ ಮತ್ತು ಪೊ. ಪಾ. ವೆಂಕಟರಾಯರೂ ಕೂಡಿ ೮ ಚೀಲ ಮಾಡಿಸಿರುವರು. ಶ್ರೀಮಂತ ತಿಮ್ಮಾ ರಡ್ಡೆಪ್ಪ ದೇಶಮುಖ ಹೊಸೂರ ಇವರು ೨೦ ರೂಪಾಯಿಗಳನ್ನು ಸಹಾಯ ಮಾಡಿರುವರು. ಇದ

ರಂತೆಯೇ ಇನ್ನುಳಿದ ಭಾಗದ ವೀರಶೈವರು ಉದಾರ ಮನಸ್ಸಿನಿಂದ ಸಹಾಯ ಮಾಡಬೇಕೆಂದು ಕೋರುತ್ತೇವೆ.

ಶಂಭುಲಿಂಗ ಶಾಸ್ತ್ರೀ ಕಾವ್ಯತೀರ್ಥ

ಸ್ತುತ್ಯ ದೇಣಿಗೆ.

ಗದಗ—ಶಹಪೂರಪೇಟಿಯ ನಿವಾಸಿಗಳಾದ ಶ್ರೀ ಚನ್ನಬಸಪ್ಪ (ವ) ಶ್ರೀ ಗುರುಶಿದ್ಧಪ್ಪ ಹುಣ್ಸಿಮರದ ಇವರು ತಮ್ಮ ಹಿರಿಯ ಯಜಮಾನರಾದ ಶ್ರೀ ಶಿದ್ಧಪ್ಪನವರು ಹುಣ್ಸೀಮರದ ಇವರು ಶಿವಾಧೀನರಾದಾಗ್ಗೆ ಅವರ ಸ್ಮರಣಾರ್ಥವಾಗಿ ಶ್ರೀ. ಬಸವರಾಜ ವಾಚನಾಲಯಕ್ಕೆ ಇಪ್ಪತ್ತೈದು ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಮತ್ತು ಶ್ರೀ. ಶಂಕರಲಿಂಗದೇವಸ್ಥಾನಕ್ಕೆ ೭|| ಎಕರೆ ಭೂದಾನವನ್ನು ಕೊಡುವದಾಗಿ ದೈವ ಸಭೆಯಲ್ಲಿ ಪಂಚರ ಸಮಕ್ಷಮ ವಾಗ್ದಾನ ಮಾಡಿದ್ದಾರೆ. ಶೀಘ್ರವಾಗಿ ನೋಂದಾಯಿಸಿಕೊಟ್ಟು ವಚನ ಬದ್ಧರಾಗಬೇಕು. ಈ ಉಭಯ ಬಂಧುಗಳು ಸಣ್ಣವರಿದ್ದರೂ ಸುಗುಣಿಗಳೂ, ವಿಚಾರವಂತರೂ ಇದ್ದಾರೆ. ಹಿರಿಯವರಾದ ಚನ್ನಬಸವಪ್ಪನವರು ನಮ್ಮ ವಾಚನಾಲಯದ ಮೇಂಬರರಿದ್ದು ತನು ಮನ ಧನದಿಂದ ಸೇವಾ ಮಾಡಿಯೂ ಮಾಡುತ್ತಲೂ ಇದ್ದಾರೆ. ಖಾದಿಯ ನಿಸ್ಸೀಮ ಭಕ್ತರಿರುವರಲ್ಲದೆ ದೇಶ ಸೇವಕರೂ ಶ್ರೀ. ಬಸವ ಭಕ್ತರೂ ಆಗಿದ್ದಾರೆ. ಈ ಉಭಯ ಬಂಧುಗಳಿಗೆ ಚಿರಾಯುರಾರೋಗ್ಯವನ್ನು ಕೊಡಲೆಂದು ಶ್ರೀ ಜಡೇಶಂಕರನನ್ನು ಬೇಡುವೆನು.

ಹಾಲಪ್ಪ ತಡಸದ
ಕಾರ್ಯದರ್ಶಿ
ಶ್ರೀ ಬಸವರಾಜ ವಾಚನಾಲಯ ಶಹಪುರಪೇಟಿ

ಉದಾರ ದೇಣಿಗೆ.

ಶ್ರೀಮತಿ ಗಂಗವ್ವಾ ಭೃತಾರ ಪರಪ್ಪಾ ಹಾಲಭಾವಿ ಸಾ|| ಸೋಳಭಾವಿ ಇವರು ತಮ್ಮ ಕೈಲಾಸವಾಸಿ ಚಿ|| ಬಾಳಪ್ಪನ ಸ್ಮಾರಕಕ್ಕಾಗಿ ಶಿವಪ್ಪಾ ಅಣ್ಣಾ ಕಿತ್ತೂರ ಇವರ ಮುಖಾಂತರ ೬೦೦ ರೂ. ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸಾಯಿಟಿಗೆ ದೇಣಿಗೆ ಕೊಟ್ಟಿರುತ್ತಾರೆ.

ವೀರಶೈವ ಕನ್ಯೆಯು ಬೇಕಾಗಿದೆ.

ವರ—ವಯಸ್ಸು ೨೨; ಸುಸ್ವರೂಪಿ; ಸರಕಾರಿ (ಡಾಕ್ಟರ) ನೌಕರಿ. ವಾರ್ಷಿಕ ಉತ್ಪನ್ನ ೧೨೦೦ ರೂಪಾಯಿ. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿಲಾಯತಿಗೆ ಹೋಗುವವರಿದ್ದಾರೆ. ಮೊದಲನೆಯ ಲಗ್ನ.

ಕನ್ಯೆ—ಸುಶಿಕ್ಷಿತ, ಸುಲಕ್ಷಣ ಮತ್ತು ಪ್ರೌಢ ಕನ್ಯೆಯು ಬೇಕು. ಫೋಟೊ ಕಳಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

C/o ಲೋಕಮತ ಕಾರ್ಯಾಲಯ,
ಹುಬ್ಬಳ್ಳಿ.

ವರ್ತಮಾನಸಾರ.

—ಧೋಲಪೂರ ಸಂಸ್ಥಾನದ ಸೀಯಾ ಮತ್ತು ಸುನ್ನಿ ಪಂಥಗಳ ಮುಸಲ್ಮಾನರಲ್ಲಿ ಡೋಲಿಯ ಮೆರವಣಿಗೆಯ ಬಗ್ಗೆ ಹೊಡೆದಾಟವಾಗಿ ಅನೇಕ ಜನರಿಗೆ ಗಾಯಗಳಾಗಿವೆ.

—ಮುಂಬಯಿಯಲ್ಲಿ ಇಬ್ಬರು ಮುಸಲ್ಮಾನ ತರುಣರನ್ನು ಪೋಲೀಸರು ಬಂಧಿಸಿದ್ದಾರೆ. ಅವರು ಇಲ್ಲಿಯವರೆಗೆ ೨೦ ಸಾರೆ ಕನ್ನಾ ಹಾಕಿ ಕಳವು ಮಾಡಿದ್ದಾರಂತೆ. ಅವರಲ್ಲಿ ಒಬ್ಬನ ಹೆಸರು ಗುಲಾಮಹುಸೇನ ಘಾಜಿ ಮಹಮ್ಮದ ಅಬ್ದುಲರಹಮಾನ ಎಂದಿರುವದಂತೆ.

—ನಿಝಾಮ ರಾಜ್ಯದ ಮಹಬೂಬನಗರ ಜಿಲ್ಹೆಯ ಮಾಲಕಪಲ್ಲಿ ಮತ್ತು ನಾರಾಯಣಪೇಟ ಎಂಬ ಗ್ರಾಮಗಳಲ್ಲಿ ಮೊಹರಮ್ಮಿನ ದಿವಸ ಹಿಂದು ಮುಸಲ್ಮಾನರ ಭಯಂಕರ ಹೊಡೆದಾಟವಾಗಿ ಒಬ್ಬ ಹಿಂದುವು ಅತ್ಯವಸ್ಥವಾಗಿದ್ದಾನಂತೆ.

—ಹೈದರಾಬಾದದ ಒಬ್ಬ ತರುಣ ಮುಸಲ್ಮಾನ ವಕೀಲನು ಒಬ್ಬ ಕನಿಷ್ಠ ಜಾತಿಯ ೯ ವರ್ಷದ ಬಾಲಿಕೆಯ ಮೇಲೆ ಅತ್ಯಾಚಾರ ಮಾಡಿದುದರಿಂದ ಅವಳು ಸತ್ತೇ ಹೋದಳಂತೆ. ಅವನದು ಇಂಥ ಅಪರಾಧವು ಎರಡನೆಯದಾದುದರಿಂದ ಮುಚ್ಚಳಿಕೆಯ ಮೇಲೆ ಬಿಡದೆ ಬಂಧನದಲ್ಲಿರಿಸಲಾಯಿತು.

—ಪಂ. ಮಾಲವೀಯವರ ಪ್ರಕೃತಿಯು ಈಗ ಸ್ವಲ್ಪ ಸುಧಾರಿಸಿದೆ ಆದರೂ ಅಶಕ್ತತೆಯು ಇನ್ನೂ ವಿಶೇಷವಾಗಿದೆ.

—ಕಾಂಗಡಿ ಗುರುಕುಲದ ವಿದ್ಯಾರ್ಥಿಯಾದ ಶ್ರೀ. ಸತ್ಯಪಾಲ ವಿದ್ಯಾಲಂಕಾರ ಎಂಬ ೨೬ ವರ್ಷ ವಯಸ್ಸಿನ ತರುಣನು ಕಾಲುಗಾಡಿಯ ಮೇಲಿಂದ ಭೂಪ್ರದಕ್ಷಿಣೆ ಮಾಡಲು ಹೊರಟಿರುವನು. ಈಗ ಅವನು ಪುಣೆಗೆ ಬಂದಿದ್ದು ಮಹಾಬಳೇಶ್ವರದ ಮೇಲಿಂದ ಮದ್ರಾಸಕ್ಕೆ ಹೊರಡುವನು.

—ದರಭಂಗಾ ಮಹಾರಾಜರ ಮೇಲೆ ಏರಿ ಹೋದ ಸೂರಜಪ್ರಸಾದ ಶುಕ್ಲ ಎಂಬ ಮನುಷ್ಯನನ್ನು ಪೋಲೀಸರು ಬಂಧಿಸಿ ನ್ಯಾಯಾಧೀಶರ ಕಡೆಗೆ ಒಯ್ದರು. ಅವರು ಅವನನ್ನು ಪರೀಕ್ಷಿಸುವದಕ್ಕಾಗಿ ಹುಚ್ಚರ ಆಸ್ಪತ್ರೆಗೆ ಕಳಿಸಿರುವರು.

—ಕಳೆದ ೮ ನೆಯ ತಾರೀಖಿನ ದಿವಸ ಸೊಲ್ಲಾಪುರದಲ್ಲಿ ಬ್ಯಾ. ಎಮ್. ಎಸ್. ಸರದಾರ ಇವರ ಅಧ್ಯಕ್ಷತೆಯಲ್ಲಿ ಅವರ ಮನೆಯಲ್ಲಿ ಕರ್ನಾಟಕ ಏಕೀಕರಣ ಸಂಘದ ವಾರ್ಷಿಕ ಸಭೆಯು ಕೂಡಿದ್ದಿತು. ಅದರಲ್ಲಿ ಹಿಂದಿನ ವರ್ಷದ ವರದಿಯನ್ನು ಓದಲಾಯಿತು. ಈ ಸಂಘದ ನೇತೃತ್ವದಲ್ಲಿ ಒಂದು ನಾಟ್ಯ ಮಂಡಲವನ್ನು ಸ್ಥಾಪಿಸಲು ನಿರ್ಧರವಾಯಿತು.

—ಮಲಬಾರಿನ ಪಟ್ಟಾಂಬಿ ಎಂಬಲ್ಲಿ ಒಬ್ಬ ನಂಬುದ್ರಿಯು ಒಂದು ಕೋತಿಯನ್ನು ಕೊಲ್ಲುವದಕ್ಕಾಗಿ ಮರವನ್ನು ಏರಲು ಕಾಲುಜಾರಿ ಕೆಳಕ್ಕೆ ಬಿದ್ದನು. ಅಷ್ಟರಲ್ಲಿ ಅವನ ಕೈಯಲ್ಲಿದ್ದ ಬಂದೂಕದ ಕುದುರೆಯು ಹಾರಿದ್ದರಿಂದ ಅವನ ಗುಂಡು ತಗುಲಿ ಪ್ರಾಣ ಬಿಟ್ಟನು.

—ಇಂದೂರಿನಲ್ಲಿ ಎಪ್ರಿಲ್ ೨೦ ರಿಂದ ೨೨ ರ ವರೆಗೆ ಮಹಿಳಾ ಸಮ್ಮೇಲನವು ನಡೆಯುವದು. ಅದರ ಅಧ್ಯಕ್ಷ ಸ್ಥಾನಕ್ಕೆ ಶ್ರೀ. ಮೀರಾ ಬೆನ್ನರವರನ್ನು ಆರಿಸಲಾಗಿದೆ.

—ಶ್ರೀ. ಅಮೃತಲಾಲ ಥಕ್ಕರ ಇವರು ದಕ್ಷಿಣ ಹಿಂದುಸ್ಥಾನದಲ್ಲಿ ಸಂಚರಿಸುತ್ತಿರುವಾಗ ಆದಿಜನ ಸ್ತ್ರೀಯರಿಗೆ ನಿಮ್ಮ ಗಂಡಂದಿರು ಸೆರೆ ಕುಡಿಯುತ್ತಿದ್ದರೆ ಅವರಿಗೆ ಊಟಕ್ಕೆ ಹಾಕಬೇಡಿರೆಂದು ಹೇಳಿದರು.

ವಿವಿಧ ವರ್ತಮಾನ.

ಅಬಲೆಯ ದುರವಸ್ಥೆ.

ಒಬ್ಬ ಹಿಂದು ತರುಣಿಯು ತನ್ನ ಅಜ್ಜಿಯು ವ್ಯಾಧಿಗ್ರಸ್ತಳಾದುದನ್ನು ಕೇಳಿ ಮುಂಬಯಿಯಿಂದ ಕಾಶ್ಮೀರಕ್ಕೆ ರೈಲಿನಲ್ಲಿ ಹೊರಟಳು. ಲಾಹೋರಿನಲ್ಲಿ ತಿಕೀಟ ಕಲೆಕ್ಟರನು ಅವಳ ವಸ್ತುಗಳು ವಿಶೇಷವಾಗಿರುವದನ್ನು ಕಂಡು ಹೆಚ್ಚು ಚಾರ್ಜ ಬೇಡಿದನು. ಕೊಡಲಿಕ್ಕೆ ಅವಳಲ್ಲಿ ಹಣವಿಲ್ಲದ್ದರಿಂದ ಇಳಿಸಿಬಿಟ್ಟನು. ಅಷ್ಟರಲ್ಲಿ ಫರ್ಮಾನಖಾನನೆಂಬ ಒಬ್ಬ ಮುಸಲ್ಮಾನನು ಅವಳನ್ನು ಮೋಸಗೊಳಿಸಿ ಎತ್ತಿಕೊಂಡು ಹೋಗಿ ಒಂದು ಅಜ್ಞಾತ ಸ್ಥಳದಲ್ಲಿಟ್ಟನು; ಮತ್ತು ಅವಳ ಸಾಮಾನುಗಳನ್ನೆಲ್ಲ ಅಪಹರಿಸಿದನು. ಈ ಸಂಗತಿಯು ಕಡೆಗೆ ಪೋಲೀಸರಿಗೆ ತಿಳಿಯಲು ಫರ್ಮಾನಖಾನನು ನ್ಯಾಯಸ್ಥಾನಕ್ಕೆ ಒಯ್ಯಲ್ಪಟ್ಟನು. ಅಲ್ಲಿ ಅವನಿಗೆ ೨ ವರುಷ ಕಠಿಣ ಶಿಕ್ಷೆ ಮತ್ತು ಅವನ ಸಹಾಯಕನಿಗೆ ೩ ತಿಂಗಳ ಶಿಕ್ಷೆ ಮಾಡಲಾಯಿತು.

ಉತ್ತರದಲ್ಲಿ ಹಿಂದುಗಳಿಗೆ ಎಷ್ಟು ತೊಂದರೆಯಾಗುತ್ತಿರುವದು ನೋಡಿರಿ!

ಜಮಖಂಡಿ ಸಂಸ್ಥಾನದಲ್ಲಿ ಹಿಂದು ಮುಸಲ್ಮಾನರ ದೊಂಬಿ.

ಜಮಖಂಡಿ ಸಂಸ್ಥಾನದಲ್ಲಿಯ ರಾಮಪೂರ ಎಂಬ ಗ್ರಾಮ. ಅಲ್ಲಿ ರಾಮನವಮಿಯ ದಿವಸ ಹಿಂದು ಮುಸಲ್ಮಾನರ ಭಯಂಕರ ದೊಂಬಿಯಾಯಿತು. ರಾಮನವಮಿಯ ದಿವಸ ಪಲ್ಲಕ್ಕಿಯ ಮೆರವಣಿಗೆಯು ಹೊರಟು ಅದು ಹೊಸದಾಗಿ ಕಟ್ಟಲ್ಪಟ್ಟ ಮಸೀದಿಯ ಸಮೀಪಕ್ಕೆ ಬರಲು ಮುಸಲ್ಮಾನರು ಉತ್ಸವವನ್ನು ಮುತ್ತಿದರು. ಕೂಡಲೇ ಕಲ್ಲುಗಳು ಒಗೆಯಲ್ಪಟ್ಟವು. ಎರಡೂ ಪಕ್ಷದವರು ಕೋಲುಗಳಿಂದ ಭಯಂಕರ ಹೊಡೆದಾಡಿದರು. ೭ ಜನರಿಗೆ ಗಾಯಗಳಾಗಿವೆ. ಒಬ್ಬನು ಅತ್ಯವಸ್ಥನಾಗಿದ್ದಾನೆ.

ರಾಮಪೂರ ಜಮಖಂಡಿಯಿಂದ ೧೨ ಮೈಲು ಅಂತರದ ಮೇಲಿದೆ. ಅದರಲ್ಲಿ ೭-೮ ನೂರು ಮನೆಗಳಿದ್ದು ಮುಸಲ್ಮಾನ ನೇಕಾರರ ವಸತಿಯು ವಿಶೇಷವಿದೆ.

ಕೊಡಲಿಯಿಂದ ಹುಲಿ ಕೊಂದನು!

ಸೊಲ್ಲಾಪುರದಿಂದ ೧೭—೧೮ ಮೈಲು ದೂರದಲ್ಲಿ ಅರಳಿ ಎಂಬುದೊಂದು ಗ್ರಾಮವಿದೆ. ಅಲ್ಲಿ ಸಂಜೆ ನೆರೆದ ಕಾಲಕ್ಕೆ ಒಬ್ಬ ಹೊಟ್ಟೆ ತುಂಬಿಕೊಳ್ಳುವವನು ದುರಗಮುರಗಿಯ ಆಟವನ್ನು ಆಡಿ ತೋರಿಸುತ್ತಿದ್ದನು. ಜನರೆಲ್ಲರೂ ಅದನ್ನು ನೋಡುತ್ತ ನಿಂತಾಗ್ಗೆ ಸಮೀಪದಲ್ಲಿರುವ ಅರಣ್ಯದಲ್ಲಿ ನಾಯಿಗಳ ಬೊಗಳುವ ಧ್ವನಿಯಿಂದ ಎಲ್ಲರ ಲಕ್ಷವೂ ಅತ್ತ ಹೋಯಿತು. ಜನರು ಅದೇನು ಗದ್ದಲವೆಂದು ನೋಡುತ್ತಿರಲು ಒಂದು ಹುಲಿಯು ವನದೊಳಗಿಂದ ಹೊರಬಿದ್ದು ಒಂದು ನಾಯಿಯ ಮೇಲೆ ಎರಬಿದ್ದು ಹರಿದುಬಿಟ್ಟಿತು. ಅಷ್ಟರಲ್ಲಿ ಆ ದುರಗಮುರಗಿಯವನು ಒಂದು ಕೊಡಲಿಯನ್ನು ತೆಗೆದುಕೊಂಡು ಓಡುತ್ತ ಬಂದು ಆ ಹುಲಿಯ ತಲೆಯ ಮೇಲೆ ಹೊಡತದ ಮೇಲೆ ಹೊಡತ ಹಾಕುತ್ತ ಕಡೆಗೆ ಕೊಂದುಬಿಟ್ಟನು. ಅವನ ಈ ಅದ್ಭುತ ಸಾಹಸವನ್ನು ಕಂಡು ಜನರೆಲ್ಲರೂ ಬೆರಗಾದರು.

ಕಿತ್ತೂರ ಈರಯ್ಯನಿಗೆ ಆಜನ್ಮ ಕರಿನೀರಿನ ಶಿಕ್ಷೆ.

ಬೆಳಗಾಂವ ಜಿಲ್ಹಾ ಕಿತ್ತೂರಿನ ಈರಯ್ಯ ಚನಬಸಯ್ಯ ಶಿವಪ್ಪಾಪೂರ ಎಂಬವನು ಕಿತ್ತೂರಿನ ಸರಪಂಚ ವಿರುಪಾಕ್ಷಪ್ಪ ಮಾರೀಹಾಳ ಎಂಬವನನ್ನು ಗುಂಡಿಟ್ಟು ಕೊಂದದ್ದಕ್ಕಾಗಿ ಅವನಿಗೆ ಕಳೆದ ೯ ನೆಯ ತಾರೀಖಿನ ದಿವಸ ಬೆಳಗಾವಿಯಲ್ಲಿ ಆಜನ್ಮ ಕರಿನೀರಿನ ಶಿಕ್ಷೆ ವಿಧಿಸಲಾಯಿತು.

ಅಪರಾಧಿಯಾದ ಈರಯ್ಯನಿಗೂ ಮತ್ತು ಕೊಲೆ ಮಾಡಲ್ಪಟ್ಟ ವಿರುಪಾಕ್ಷಪ್ಪನಿಗೂ ಮೊದಲಿಗೆ ವಾಜ್ಯವುಂಟಾಗಿ ವೈಮನಸ್ಸಿದ್ದಿತು. ಅದಕ್ಕಾಗಿ ಈರಯ್ಯನು, ವಿರುಪಾಕ್ಷಪ್ಪನು ಹಗಲಿನಲ್ಲಿ ಬೀದಿಯಲ್ಲಿ ಹೋಗುತ್ತಿರುವಾಗ ಹಿಂದಿನಿಂದ ಒಂದು ಗುಂಡು ಹಾರಿಸಿದನು. ಅದು ತಪ್ಪಿ ಒಂದು ಅಂಗಡಿಯ ಹಲಿಗೆಯಲ್ಲಿ ಸಿಕ್ಕಿತು. ಆಗ ವಿರುಪಾಕ್ಷಪ್ಪನು ಬಂದ ಆಪತ್ತನ್ನು ತಿಳಿದು ಒಂದು ಅಂಗಡಿಯೊಳಗೆ ಸೇರಬೇಕೆಂಬುವಷ್ಟರಲ್ಲಿ ಈರಯ್ಯನು ಮತ್ತೊಂದು ಗುಂಡು ಹಾರಿಸಿದನು. ಅದು ವಿರುಪಾಕ್ಷಪ್ಪನ ಬೆನ್ನೊಳಗಿಂದ ಎದೆಯಲ್ಲಿ ಪಾರಾಗಿ ಹತ್ತಿರವಿದ್ದ ಎರಡು ಚಿಮಣಿ ಎಣ್ಣೆ ಡಬ್ಬಿಗಳಲ್ಲಿ ಪೂರಾ ಹಾಯ್ದು ಗೋಡೆಯಲ್ಲಿ ಸೇರಿಕೊಂಡಿತು. ವಿರುಪಾಕ್ಷಪ್ಪನು ಸತ್ತು ಅಂಗಳದಲ್ಲಿ ಬಿದ್ದನು. ನಂತರ ಈರಯ್ಯನು ನೆರೆದ ಜನರಿಗೆಲ್ಲ ಗುಂಡಿನ ಹೆದರಿಕೆ ತೋರಿಸಿ ಪಾರಾದವನು ೩, ೩॥ ವರ್ಷ ಸಿಕ್ಕಲೇ ಇಲ್ಲ. ಅವನನ್ನು ಹಿಡಿಯುವದಕ್ಕಾಗಿಯೇ ಸರಕಾರದವರು ಮಿ. ಕೊಳೀಕರ ಎಂಬ ಫೌಜದಾರರನ್ನು ನಿಯಮಿಸಿದ್ದರು. ಈ ರೀತಿ ಸರಕಾರದವತಿಯಿಂದ ಹೇಳಲಾಯಿತು.

ಜಯಕರ್ನಾಟಕ

ಕರ್ನಾಟಕದ ಪ್ರಮುಖ ಮಾಸಪತ್ರಿಕೆ

ವಾರ್ಷಿಕ ಚಂದಾ ೫-೮-೦

ನಾಟ್ಯಾಂಕ

ವಿವಿಧಚಿತ್ರ! ಸರಸನಾಟಕ ಕಥೆ! ವಿದ್ವತ್ಪ್ರಚುರ ಲೇಖಗಳು!

ತ್ವರೆಮಾಡಿರಿ—ಬೆಲೆ ೧ ರೂ.—ತೀರುತ್ತಿವೆ.

ಜಯಕರ್ನಾಟಕ ಗ್ರಂಥಮಾಲೆ

ವರ್ಷಕ್ಕೆ ೬ ಪುಷ್ಪ] ವಾ. ಚಂ. ೩-೪-೦ [ಮೇಲೊಂದು ಉಚಿತಪುಷ್ಪ

ಜ. ಕ. ಚಂದಾದಾರರಿಗೆ ೩ ರೂ.

ಮೂರನೆಯ ವರ್ಷದ ನಾಲ್ಕನೆಯ ಪುಷ್ಪವಾದ

ಶ್ರೀ. ಹ. ಪಿ. ಜೋಶಿಯವರ

ಇದೀಗ ಹೊರಟಿದೆ] **ರಾಜವಲ್ಲಭ** [ಬೆಲೆ ಹತ್ತು ಆಣೆ.

ಶೀಲಕ ವಧೆ ಕಥೆಯನ್ನು ಆಧರಿಸಿ ಬರೆದ ಹೊಸ ಸಂಗೀತ ನಾಟಕ. ಉಚಿತ ಸಂಭಾಷಣೆ, ಮಿತವಿನೋದ, ಸುರಮ್ಯ ಪದ್ಯಮಾಲಿಕೆ.

ಜಯಕರ್ನಾಟಕ ಕಾರ್ಯಾಲಯ

ಧಾರವಾಡ.

ವರ್ತಮಾನಸಾರ.

—ಫಿರೋಜಾಬಾದದಲ್ಲಿ ರಾಮನವಮಿಯ ಕಾಲಕ್ಕೆ ಹಿಂದು ಮುಸಲ್ಮಾನ ದೊಂಬಿಯಾಯಿತು. ಮುಸಲ್ಮಾನರು ಒಬ್ಬ ಹಿಂದು ಡಾಕ್ಟರನ ಮನೆಗೆ ಬೆಂಕಿ ಹಚ್ಚಿದ್ದರಿಂದ ಒಳಗಿದ್ದ ೧೧ ಜನರು ಸುಟ್ಟುಕೊಂಡು ಸತ್ತರು, ಪೋಲೀಸರು ಶಾಂತತೆಗಾಗಿ ಗುಂಡು ಹಾರಿಸಿದರು.

—ಪಂಜಾಬದಲ್ಲಿ ಅ. ಭಾ. ಮಹಾಜನ ಪರಿಷತ್ತು ಕೂಡಿದ ಕಾಲಕ್ಕೆ ಸಾಲಕೊಟ್ಟ ಶ್ರೀಮಂತರೆಲ್ಲ ಒಕ್ಕಲಿಗರ ಋಣದ ಅರ್ಧವನ್ನು ಬಿಟ್ಟುಬಿಡಲಿಕ್ಕೆ ನಾವು ಸಿದ್ಧರಿದ್ದೇವೆ. ಉಳಿದ ಅರ್ಧ ಸಾಲವನ್ನು ನಮಗೆ ಕೊಡಿಸುವ ಹೊಣೆಯನ್ನು ಸರಕಾರದವರು ಹೊರುವರೇ”? ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

—ಪುಣೆಯಲ್ಲಿ ಸರದಾರ ನಾರಾಯಣಸಿಂಗ ಎಂಬವನಿಗೆ ಕೊಲೆ ಮಾಡಿದ ಅಪರಾಧಕ್ಕಾಗಿ ದೇಹಾಂತ ಶಿಕ್ಷೆ ವಿಧಿಸಲಾಯಿತು. ಆಗ ಅವನು ನ್ಯಾಯಾಧೀಶರಿಗೆ, ತನ್ನನ್ನು ಭಗತಸಿಂಗ, ದತ್ತ, ರಾಜಗುರು ಮೊದಲಾದವರನ್ನು ಗಲ್ಲಿಗೆ ಹಾಕಿದ ಸ್ಥಾನದಲ್ಲಿಯೇ ಗಲ್ಲಿಗೆ ಹಾಕಬೇಕೆಂದು ಬೇಡಿಕೊಂಡನು.

—ಕೋಮಿಲ್ಲಾ (ಬಂಗಾಲ)ದಲ್ಲಿ ಭಯಂಕರ ಬಿರುಗಾಳಿ ಬೀಸಿ ಸಾವಿರಾರು ಮನೆಗಳು ನೆಲಕ್ಕುರುಳಿದವು. ಗಿಡಗಳೆಲ್ಲ ಬೇರೊರಿಸಿ ಕಿತ್ತು ಬಿದ್ದಿವೆ.

—ಮುಂಬಯಿ ಕೋರ್ಟಿನಲ್ಲಿ ಒಬ್ಬ ಕ್ರಿಶ್ಚನ್ನನು ಇಬ್ಬರು ಹಿಂದುಗಳು ಜಗಳಾಡುತ್ತಿರುವಾಗ್ಗೆ ಸಮೀಪದ ಚಹಾದ ಅಂಗಡಿಯವನು ನ್ಯಾಯ ತೀರಿಸಲು ಬಂದನು. ಅವನನ್ನು ಆ ಕ್ರಿಸ್ತೀಯನು ಚೂರಿಯಿಂದ ಇರಿದು ಕೊಂದು ಹಾಕಿದನು. ಪೋಲೀಸರು ಆ ಮೂವರನ್ನು ನ್ಯಾಯಸ್ಥಾನಕ್ಕೆ ಒಯ್ದರು.

—ಅ. ಭಾ. ಚರಖಾಸಂಘದವರು ತಾವು ಪ್ರಸಿದ್ಧಪಡಿಸಿದ ಶರ್ತುಗಳಿಗೆ ಅನುರೂಪವಾಗಿರುವ ರಾಟಿಯನ್ನು ಶೋಧಿಸಿದವರಿಗೆ ೧ ಲಕ್ಷ ರೂ. ಕಾಣಿಕೆ ಕೊಡುವದಾಗಿ ತಿಳಿಸಿದ್ದರು. ಆದರೆ ಇಲ್ಲಿಯವರೆಗೆ ಅಂಥ ಒಂದಾದರೂ ರಾಟಿಯು ಬರಲಿಲ್ಲವೆಂದೂ, ಬಂದಂಥವು ಕಾಣಿಕೆ ಕೊಡಲು ಪಾತ್ರವಿಲ್ಲವೆಂದೂ ಪ್ರಸಿದ್ಧಿಸಿರುವರು.

—ಕಂಜೀವರಂ ದಲ್ಲಿಯ ಏಕಾಂಬರೇಶ್ವರ ದೇವರ ೨೦೦೦ ರೂ. ಆಭರಣಗಳನ್ನು ಅಲ್ಲಿಯ ಪೂಜಾರಿಯಾದ ಸೋಮೂ ಗುರಕ್ಕರ ಎಂಬವನು ಕದ್ದನೆಂದು ನ್ಯಾಯಸ್ಥಾನದಲ್ಲಿ ನಿರ್ಣಯವಾಗಿ ಅವನಿಗೆ ೬ ತಿಂಗಳು ಶಿಕ್ಷೆ ೧೦೦ ರೂ. ದಂಡವಾಯಿತು.

—ಲಿವೊಂಟ ಪೋಸ್ಟ ನಾಪ್ಸ ಎಂಬವನು ಜಗತ್ತಿನ ಮುದುಕರಲ್ಲೆಲ್ಲ ಅತಿ ಮುದುಕನಂತೆ. ಅವನು ೧೭೭೯ ಇಸ್ವಿಯಲ್ಲಿ ಹುಟ್ಟಿದನು. ಅಂದರೆ ಈಗ ೧೫೬ ವರ್ಷದವನು. ಆದರೂ ಹೊಲದಲ್ಲಿ ಇನ್ನೂ ಕೆಲಸ ಮಾಡುತ್ತಿರುವನಂತೆ.

—ಧಾನೂರ ಎಂಬಲ್ಲಿ ಮಸೂರು ಬ್ರಹ್ಮಚರ್ಯಾಶ್ರಮದವರು ಇಬ್ಬರು ವಿಧರ್ಮಿಯರಿಗೆ ಹಿಂದು ಧರ್ಮದ ದೀಕ್ಷೆ ಕೊಟ್ಟರು. ಶುದ್ಧೀಕೃತರು ೧೬೦೦೦ ರಾಮನಾಮ ಜಪ ಮಾಡಿದರು.

—ಮಂಚೂರಿಯಾ ಬಾದಶಹರು ಟೋಕಿಯೋಕ್ಕೆ ಆಗಮಿಸಿ ಜಪಾನದ ಬಾದಶಹನನ್ನು ಕಂಡರು. ಜಪಾನದ ಬಾದಶಹರು ಸರ್ವ ವೈಭವದೊಡನೆ ನಿಲ್ದಾಣದ ಮೇಲೆ ಅವರನ್ನು ಸ್ವಾಗತಿಸಿದರು.

—ಕೊಲ್ಹಾಪುರದ ಮಹಾರಾಜರು ಸಮ್ರಾಟರ ರಜತ ಮಹೋತ್ಸವಕ್ಕೆ ೫೦ ಸಾವಿರ ರೂ. ಗಳನ್ನು ಕೊಟ್ಟಿರುತ್ತಾರೆ.

—ಕಪೂರ್ಥಳಾದ ಮಹಾರಾಜರು ಇಂಗ್ಲಂಡ ಸಂಚಾರಕ್ಕೆ ಹೊರಟು ದಿಲ್ಲಿ ನಿಲ್ದಾಣಕ್ಕೆ ಆಗಮಿಸಿದರು. ಆಗ ಅವರ ಸಂಸ್ಥಾನದ ಒಕ್ಕಲಿಗ ಪ್ರಜೆಗಳು ಕರಿ ವಸ್ತ್ರಗಳನ್ನು ಧರಿಸಿ ಅವರ ಸ್ವಾಗತ ಮಾಡಿದರು. ತಮ್ಮಲ್ಲಿ ಹೊಲದ ತೆರಿಗೆಯನ್ನು ಕೊಡುವ ಶಕ್ತಿಯಿಲ್ಲವೆಂಬ ಗರ್ಜನೆಯಿಂದ ಅವರು ಸ್ಟೇಶನವನ್ನೆಲ್ಲ ನಡುಗಿಸಿಬಿಟ್ಟರು.

—ಪಂಚವಟಿ ಭಾಗದಲ್ಲಿರುವ ಬಾಭುಳಗಾಂವ ಎಂಬಲ್ಲಿ ಮಸೂರ ಬ್ರಹ್ಮಚರ್ಯಾಶ್ರಮದವರು ಕ್ರಿಸ್ತೀಯರಾಗಿದ್ದ ೫ ಜನರನ್ನು ಶುದ್ಧಗೊಳಿಸಿ ಪುನಃ ಹಿಂದು ಧರ್ಮದಲ್ಲಿ ತೆಗೆದುಕೊಂಡರು.

—ಶ್ರೀಮತಿ ಕಮಲಾ ನೆಹರು ಇವರು ಆರೋಗ್ಯಕ್ಕಾಗಿ ಯುರೋಪಕ್ಕೆ ಹೋಗುವದು ನಿಶ್ಚಿತವಾಗಿದೆ. ಅವರ ಪ್ರಯಾಣ ವ್ಯವಸ್ಥೆ ಮಾಡುವ ಕುರಿತು ಶ್ರೀ ಸ್ವರೂಪರಾಣಿಯವರೂ ಅವರ ಪುತ್ರಿಯೂ ಭೋವಾಲಿಗೆ ಬಂದಿದ್ದಾರೆ. ಶ್ರೀ ಜವಾಹರ ಲಾಲರು ಹೋಗುವ ಸಂಭವವಿಲ್ಲ.

ನಿರಂಜನ ಹಾಲ್.

ಮಹಾಶಯರೇ ನಮ್ಮಲ್ಲಿ ಸಕಲರಿಗು ಪೂಜಾರ್ಹವಾದ ಸಾಮಾನುಗಳು ದೊರೆಯುತ್ತೆ.

ಮಹದೇಶ್ವರ ಸ್ವಾಮಿಯವರು ಎಂಬ ಮಹಾ ವಿರಕ್ತರು ತಮ್ಮ ಬಾಲ್ಯದಲ್ಲಿಯೇ ಹುಲಿಯ ಮೇಲೆ ಕುಳಿತು ಸಂಚಾರ ಮಾಡುತ್ತಿದ್ದ ಫೋಟೋ ೧೦×೧೪ ಸೈಜು ದರ್ಜ ೧ ಕ್ಕೆ ೧-೮-೦

ನಂಜುಂಡೇಶ್ವರ ಸ್ವಾಮಿ ಫೋಟೋ ೧೦+೧೪ ಸೈಜು ದರ್ಜ ೧ ಕ್ಕೆ (೧-೮-೦) ಡಿಟೊ ೬+೯ ಸೈಜು ದ. ೧ ಕ್ಕೆ ೦-೧೨-೦ ಮತ್ತು ೦-೬-೦. ಅವಲ್ ದಶಾಂಗ ಧೂಪದ ಘಟ್ಟಿ ಸೇರು ೧ ಕ್ಕೆ (೨-೦-೦) ದುಯಂ ಸೇರು ೧ ಕ್ಕೆ, ೧-೮-೦ ೧-೦-೦ ಎಡೆಯೂರು **ಸಿದ್ಧಲಿಂಗೇಶ್ವರ ಸ್ವಾಮಿಯವರ ಫೋಟೋ** ೧೦೦ ಕ್ಕೆ ೪-೦-೦ ಒಂದಾವರ್ತಿ ತರಿಸಿ ಪರೀಕ್ಷಿಸಿರಿ.

ಹೆಚ್, ಎಂ. ಮಲ್ಲಪ್ಪ
ಅಂಡ್, ಬ್ರದರ್ಸ್ ಫೋಟೋಗ್ರಾಫರ್,
ನಂಜನಗೂಡು.

ಸಿಲೆಂಡರ್ ಮಶಿನ್ ಬೇಕಾಗಿದೆಯೆ?

ಹಾಗಾದರೆ ನಮ್ಮಲ್ಲಿದೆ. ಡಾವಸನ್ ಎಂಡ್ ಸನ್ಸ್ ಕಂಪನಿಯದು. ಉತ್ತಮ ಸ್ಥಿತಿಯಲ್ಲಿ ಕೆಲಸಮಾಡುತ್ತದೆ. ಇನ್ನರ್ ಸೈಡ್ ಛೆಸ್ $29\frac{1}{4} + 35\frac{1}{4}$ ಸೈಜಿನದು. ಪಂಪಾ ಸಹಿತ ಇದ್ದದ್ದು ಫೋಲ್ಡಿಡ್ ರೋಲ್ಸುಗಳು ಸಹಿತ ಕೊಡಲ್ಪಡುವುದು.

ಹೆಚ್ಚಿನ ಸಂಗತಿಗಳನ್ನು ಪತ್ರಮುಖೇನ ಅಥವಾ ಸಮಕ್ಷಮ ತಿಳಿದುಕೊಳ್ಳಬಹುದು. **ಮ್ಯಾನೇಜರ್**

ಶ್ರೀ ಲಿಂಗರಾಜ ಆರ್ಟ ಪ್ರೆಸ್, ಧಾರವಾಡ.

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಸ್ಸೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

ಜಿ. ಎಸ್. ಗಂಗಾಧರಯ್ಯ,

ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ, ತುಮಕೂರು

(ಮೈಸೂರು ಸ್ಟೇಟ್)

ಜಾಹೀರಾತ.

ಸರ್ವಜನರಲ್ಲಿ ವಿಜ್ಞಾಪಿಸುವದೇನಂದರೆ—

ಈ ಜಾಹೀರಾತಿನಿಂದ ತಿಳಿಸುವದೇನಂದರೆ ನನ್ನ ಸಹೋದರನಾದ ಬಸಣ್ಣ ಈತನು ಮನೆ ಬಿಟ್ಟು ಒಂದು ವರುಷವಾಯಿತು. ಈತನ ಸ್ವಭಾವ ಹುಚ್ಚು, ವಯಸ್ಸು ೪೦, ಬಣ್ಣ ಸಾಧಾರಣ ಕೆಂಪು, ಸಾಧಾರಣ ನಿಲುವು, ದುಂಡು ಮುಖ, ಬಲ ಗಡ್ಡದ ಮೇಲೆ ಒಂದು ಹಸರು ಬಣ್ಣದ ಹೆಬ್ಬೆರಳಿನಷ್ಟು ಕಲೆ ಇದ್ದು ಅದರ ಮೇಲೆ ಕೂದಲು ಇವೆ. ಒಮ್ಮೊಮ್ಮೆ ಗೋಣು ಹೊರಳಿಸುವನು. ಮತ್ತು ಶೌಚಕ್ಕೆ ಕೂತರೆ ೨-೩ ತಾಸಾದರು ಕೂಡ್ರುವನು. ಮತ್ತು ಕ್ಷೌರಮಾಡಿಸುವದಕ್ಕೆ ಬಹಳ ಪ್ರೀತಿ. ಮೀಸೀಸಹ ತೆಗೆಸುವನು. ಬಾಲ, ವೃದ್ಧರಿಗೆ ಸಹ ತಾತಾ, ತಾತಾ ಅನ್ನುವನು. ತನ್ನಷ್ಟಕ್ಕೆ ತಾನೆ ಮರಿಯಪ್ಪ ಪಂಪಣ್ಣ, ಟಾಕಣ್ಣ ಎಂದು ಅನ್ನುತ್ತಾನೆ. ಹೆಸರು ಕೇಳಿದರೆ ಬಸಣ್ಣನೆಂದು ಹೇಳುವನು. ಹುಡುಗರು ತಡವಿದರೆ ಚೀರುವನು. ಮತ್ತು ಹಸ್ತ ತಿರುವಿ ಹಿಡಿದು ಶಂಖಹೊಡೆಯುವನು. ಇಷ್ಟು ಚಿಹ್ನಗಳನ್ನು ಕಂಡರೆ ದಯವಿಟ್ಟು ತಮ್ಮಲ್ಲಿ ಇರಿಸಿಕೊಂಡು ನಮಗೆ ತಿಳಿಸಿದರೆ ನಿಮಗೆ ೧೦ ರೂ. ಇನಾಮು ಕೊಡುತ್ತೇವೆ ತಿಳಿದಿರಬೇಕು.

ನಮ್ಮ ವಿಳಾಸ:— **ಪಂಪಣ್ಣ ಗಡ್ಡದ ದೇವಾಂಗ**

ಮುಕ್ಕಾಂ, ಪೋಸ್ಟ ಮಸ್ಕಿ, ತಾಲೂಕಾ

ಲಿಂಗಸೂಗೂರ ಜಿಲ್ಲಾ ರಾಯಚೂರ.

ಮುದ್ದಾದ ಅಕ್ಷರ! ಸುಲಭ ದರ!

ಶ್ರೀ ರಂಗನಾಥ ಟೈಪ್ ಫೌಂಡರಿ

ಬೆಂಗಳೂರು.

ಕನ್ನಡ ಮತ್ತು ಇಂಗ್ಲಿಷ, ಎಲ್ಲಾ ತರದ ಟೈಪುಗಳೂ ಒಳ್ಳೊಳ್ಳೇ ಬಾರ್ಡರಗಳೂ ನಮ್ಮ ಫೌಂಡರಿಯಲ್ಲಿ ತಯಾರಾಗುತ್ತವೆ.

ಒಳ್ಳೇ ಮೆಟಲ್. ಬಹು ಅಂದವಾದ ಅಕ್ಷರಗಳು. ಬಲು ಸುಲಭ ದರ. ಕ್ಯಾಟಲಾಗ ತರಿಸಿಕೊಳ್ಳಿರಿ. ಒಮ್ಮೆ ಟೈಪುಗಳನ್ನು ತರಿಸಿಕೊಂಡು ಅನುಭವ ಹೊಂದಿರಿ. ಹಳೆ ಟೈಪುಗಳಿದ್ದರೆ ಸುಲಭ ಚಾರ್ಜಿಗೆ ಹೊಸದಾಗಿ ಹೊಯಿದು ಕೊಡುತ್ತೇವೆ.

ಪ್ರೊಪ್ರೈಟರ,

ಶ್ರೀ ರಂಗನಾಥ ಟೈಪ್ ಫೌಂಡರಿ

೬೭ ಕುಬೇರ ಸಾಹುಜಿ ಲೈನ್

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪತ್ರಿಫಲದ ದಿವ್ಯಾಭರಣ!

ಲಿಂಗಪೂಜಕರಿಗೆ ಪತ್ರಿಯು ಅತ್ಯಾಗತ್ಯವಲ್ಲವೆ? ಪತ್ರಿಯ ಫಲದಿಂದ ಮಾಡುವ ಈ ದಿವ್ಯಾಭರಣ, ಗಳಲ್ಲಿ ನಿಮಗೆ ಬೇಕಾದುದನ್ನು ತರಿಸಿಕೊಳ್ಳಿರಿ.

ಕರಕಮಲ, ನಾಗಾಭರಣ, ಕಂಠಮಾಲೆ ಮೊದಲಾದವು. ಮಂತ್ರವಿಶಿಷ್ಟ, ಲಿಂಗಪೂಜೆಗೆ ಅಗತ್ಯವಾಗಿರತಕ್ಕವು.

ನಿಮ್ಮ ಇಷ್ಟದಂತೆ ಮಂತ್ರಾಕ್ಷರಗಳನ್ನು ಸ್ಫುಟಗೊಳಿಸಿ ಪತ್ರಿಯ ಕಾಯಿಯ ಚಿಪ್ಪಿನಿಂದ ಬಹು ಅಂದವಾದ ಆಭರಣಗಳನ್ನು ತಯಾರುಮಾಡಿಕೊಡುತ್ತೇವೆ.

ಕ್ರಯ ೧ ರೂಪಾಯಿಯಿಂದ ಮೇಲ್ಪಟ್ಟು ನಿಮ್ಮ ಇಷ್ಟವಿದ್ದಷ್ಟು ರೂ. ಗಳ ವರೆಗೆ.

ವಿಳಾಸ:— ಸಂಗಮೇಶ- ಶ್ರೀ ಸರ್ಪಭೂಷಣ ಶಿವಯೋಗಿ ಮಠ ಬಳೇಪೇಟೆ ಬೆಂಗಳೂರು ಸಿಟಿ.

ಪ್ಲೇಗ ಸಂಜೀವಿನಿ.

ಅತ್ಯಾಶ್ಚರ್ಯಕರವಾದ ಗುಣ! ಕೇವಲ ೬ ತಾಸುಗಳಲ್ಲಿಯೇ ಗುಣ!

ಇದನ್ನು ಸೇವನೆ ಮಾಡುವದರಿಂದ ಪ್ಲೇಗಿನ ಭಯವೇ ಇಲ್ಲ!

೧೦೦ ಕ್ಕೆ ೧೦೦ ರಂತೆ ಗುಣ!!

ಶ್ರೀ ಮನ್ನಿರಂಜನ ಶಾಂತವೀರ ಸ್ವಾಮಿಗಳು ಗುರುಮಠಕಲ್ ಇವರು ಲೋಕ ಕಲ್ಯಾಣಾರ್ಥವಾಗಿ ಪ್ಲೇಗ ಸಂಜೀವಿನಿ ಎಂಬ ದಿವ್ಯ ಔಷಧಿಯನ್ನು ಶೋಧಮಾಡಿರುವರು ಪ್ಲೇಗ ರೋಗವು ಎಷ್ಟು ಘಾತುಕವದೆಯೆಂಬುದನ್ನು ಹೇಳುವ ಅವಶ್ಯವಿಲ್ಲ. ಈ ಪ್ಲೇಗಿನಿಂದ ಸಾವಿರಾರು ಜನರು ಸಾಯುತ್ತಿರುತ್ತಾರೆ. ಇದನ್ನು ತಡೆಯುವದಕ್ಕಾಗಿ ಎಷ್ಟೋ ಔಷಧಗಳನ್ನು ತಯಾರ ಮಾಡಿರುವರು. ಅವುಗಳಿಂದೇನೂ ಗುಣವಾದದ್ದು ಕಂಡು ಬರುವದಿಲ್ಲ ಈ ಪ್ಲೇಗ ಸಂಜೀವಿನಿಯಿಂದ ಆರೇ ತಾಸುಗಳಲ್ಲಿಯೇ ಗುಣವಾಗುತ್ತದೆ. ಇದರ ಒಂದು ಬಾಟ್ಲಿಯ ಕಿಮ್ಮತ್ತು ೧ ರೂ. ೫ ಆಣೆ.

ವಿಶೇಷ ಮಾಹಿತಿಯನ್ನು ಅನುಪಾನ ಪತ್ರಿಕೆಯಲ್ಲಿ ನೋಡಿರಿ.

ವಿಶೇಷ ಸೂಚನೆ— ಅನುಪಾನ ಪತ್ರಿಕೆಯ ಸೂಚನೆಯ ಮೇರೆಗೆ ಔಷಧವನ್ನು ತೆಗೆದುಕೊಂಡಲ್ಲಿ ಖಾತ್ರಿಯಿಂದ ಗುಣವಾಗುವದು ಎಲ್ಲ ಕಡೆಗೂ ಏಜಂಟರು ಬೇಕು.

ಏಜಂಟ್
ಬಶೆಟ್ಟೆಪ್ಪ ಬಸಪ್ಪ ಹಲಕುರ್ಕಿ,
ಬಾಗಲಕೋಟೆ.

ವಿಳಾಸ—
ಪ್ಲೇಗ ಸಂಜೀವಿನಿ ಆಫೀಸ್
ಗುಲಬರ್ಗಾ.

ಮಹಾರೋಗ ಸಂಜೀವಿನಿ.

ಶ್ರೀಮನ್ನಿರಂಜನ ಗುರುಮಠಕಲ್ಲ ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ

ಮಹಾರೋಗ ಸಂಜೀವಿನಿ,

ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.

ಇತ್ತಿತ್ತಲಾಗಿ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ವಿತಿಮೀರಿ ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. ಈ ಕೆಟ್ಟಬೇನೆಯು (ಪ್ಲೇಗ ಮಾರಿಕಾ,) ಖಜ್ಜಿಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ ತಗಲತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ಮೃತ್ಯುವಿನ ತುತ್ತಾಗುವರು ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಖಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ನಾರಸಂಹಾರಿ, ಕೂಸುಗಳ ಹೊಟ್ಟೆಯೊಳಗಿನ ಬೇನೆ** ವಗೈರೆ ರೋಗಗಳ ಮೇಲೆ ಆಶ್ಚರ್ಯಕಾರಕ ಔಷಧಿಗಳನ್ನು ಕಂಡು ಹಿಡಿದ ಸದರಿ ಪೂಜ್ಯಪಾದರೇ ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ ಔಷಧಿಯನ್ನು ಶೋಧಮಾಡಿ ಪ್ರಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೆಯುಳ್ಳವರು ಮುದ್ದಾಂ ಬಂದು ತಮ್ಮ ರೋಗ ಲಕ್ಷಣಗಳನ್ನೆಲ್ಲ ತೋರಿಸಿದರೆ ಅದಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ. ಮೊದಲು ಔಷಧದ ಅರ್ಧ ಕಿಮ್ಮತ್ತು ಕೊಟ್ಟು ಔಷಧ ತಕ್ಕೊಳ್ಳಲು ಪ್ರಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಅಗ್ಗ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳತಕ್ಕದ್ದು. ವಿಶೇಷ ಸಂಗತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು.

ಮ್ಯಾನೇಜರ ಆರೋಗ್ಯ ಮಂದಿರ, ಶಿರೀಟಮಠ ಕಸಬಾ ಕ್ಯಾಂಪ **ಸೊಲ್ಲಾಪುರ ಸಿಟಿ.**

೧೦,೩೧,೦೦೦ ರೂಪಾಯಿ

ಬೆಲೆ ಬಾಳುವ ಪಾಲಿಸಿಗಳನ್ನು ಸ್ವರಾಜ್ಯ ಕಂಪನಿಯವರು ಬರೀ ಹದಿನಾಲ್ಕು ತಿಂಗಳಲ್ಲಿ ಕೊಟ್ಟಿರುತ್ತಾರೆ. ಕೂಸು ಹುಟ್ಟಿದರೆ, ಮಕ್ಕಳ ಮದಿವೆ ಮಾಡಿದರೆ, ಮರಣ ಹೊಂದಿದರೆ, ವಿಮೆಯುದಾರರಿಗೆ ೫೦೦ ರೂಪಾಯಿಗಳ ವರೆಗೆ, ವಿಮೆಯ ಹಣವು ಕೊಡಲ್ಪಡುವದು. ವಿಮೆಯ ಕಂತಗಳು ತೀರ ಕಡಿಮೆ. ತಿಂಗಳೊಂದಕ್ಕೆ ಒಂದು ರೂಪಾಯಿ. ಪ್ರವೇಶ ಫೀ ೫ ರೂ. ವಾರ್ಷಿಕ ಫೀ ಒಂದು ರೂಪಾಯಿ ಮಾತ್ರ. ಏಜಂಟರಾಗಿ ಕೆಲಸ ಮಾಡುವವರಿಗೂ ಆರ್ಗನಾಯಿಝರರಿಗೂ ಒಳ್ಳೇ ಲಾಭ.

ಹೆಚ್ಚಿನ ಮಾಹಿತಿ ಬೇಕಾದವರು ಕಂಪನಿಯ ಕೂಡ ಪತ್ರವ್ಯವಹಾರ ಮಾಡಬೇಕು.

ಎಂ. ಎಸ್. ಕೇಸರಿ ಬಿ. ಎ., ಎಲ್ ಎಲ್. ಬಿ.
ಮ್ಯಾನೇಜಿಂಗ ಏಜಂಟ್ಸ,
ದಿ ಸ್ವರಾಜ್ಯ ಬ್ಯಾಂಕಿಂಗ ಆ್ಯಂಡ ಇನ್ಸ್ಯುರನ್ಸ ಕಂಪನಿ ಲಿಮಿಟೆಡ್, ಧಾರವಾಡ.

ದಿ ಸ್ವರಾಜ್ಯ ಬ್ಯಾಂಕಿಂಗ
ಮತ್ತು ಇನ್ಶ್ಯುರನ್ಸ ಕಂಪನಿ, ಲಿಮಿಟೆಡ್
ಧಾರವಾಡ

ಇದರ ಮ್ಯಾನೇಜಿಂಗ ಏಜಂಟ್ಸರವರಿಗೆ—
ನೀಲಪ್ಪಾ ಮಲ್ಲಪ್ಪಾ ಮೆಣಸಿನಕಾಯಿ ಸಾ|| ಅಕ್ಕೂರ
ಜಿಲ್ಹಾ ಧಾರವಾಡ ಈತನು ಮಾಡುವ ಶರಣಾರ್ಥಿಗಳು

ತಮ್ಮ ಕಂಪನಿಯಲ್ಲಿ ನಾನು ೧೯೩೪ನೇ ಇಸ್ವಿಯ ಜಾನೇವರಿ ತಿಂಗಳ ಇಪ್ಪತ್ತನೆಯ ತಾರೀಖಿನ ದಿವಸ ಜನನ ವಿಮೆಯನ್ನು ಇಳಿಸಿದ್ದೆನು. ನನ್ನ ಜನನ ವಿಮೆಯ ಪಾಲಿಸಿ ನಂಬರು (೨) ಎರಡು ಇರುತ್ತದೆ. ಪಾಲಿಸಿಯನ್ನು ತೆಗೆದುಕೊಂಡ ಒಂದು ವರ್ಷದ ಮೇಲೆ ನನಗೆ ಒಂದು ಕೂಸು ಜನನವಾಯಿತು. ಕಂಪನಿಗೆ ನಾನು ಒಟ್ಟು (೧೮) ರೂಪಾಯಿಗಳನ್ನು ಕೊಟ್ಟಿರುತ್ತೇನೆ. ಕೂಸು ಹುಟ್ಟಿದ್ದನ್ನು ಸಿದ್ಧಮಾಡಿಕೊಟ್ಟ ಕೂಡಲೆ ನೀವು ನನಗೆ ಕಳುಹಿಸಿಕೊಟ್ಟ (೪೪೭) ನಾಲ್ಕು ನೂರಾನಾಲ್ವತ್ತೇಳು ರೂಪಾಯಿಗಳು ಮುಟ್ಟಿದುವು. ಈ ಬಗ್ಗೆ ಕಂಪನಿಗೆ ನಾನು ತುಂಬಾ ಋಣಿಯಾಗಿದ್ದೇನೆ.

ಅಕ್ಕೂರ
ತಾ|| ೧೩-೩-೩೫. } (ಸಹಿ) **ನೀಲಪ್ಪಾ ಮಲ್ಲಪ್ಪಾ ಮೆಣಸಿನಕಾಯಿ.**

ಹರ್ಡೇಕರ ಮಂಜಪ್ಪನವರು ಬರೆದ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೧-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಕಾಯಕವೆ ಕೈಲಾಸ	೦-೩-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
…ಕಲಷ್ಮನ ಕಥೆ	೦-೧-೬	ವಿಜಯವಾಣಿ	೦-೨-೦
…ಜಪಸರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
…ದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ, ಪೋ. ಆಲಮಟ್ಟಿ ಜಿ. ವಿಜಾಪುರ.**

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿಂದರ.　　ಉತ್ತಮ ಸೌಕರ್ಯ.　　ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಡಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೇಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .... ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ ಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ　೩೦-೦-೦ ತಿಂಗಳೊಂದಕ್ಕೆ　ಎರಡೂಹೊತ್ತು ಭೋಜನ　೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ　೧-೮-೦ ದಿನ ಒಂದಕ್ಕೆ　ಊಟ ಒಂದಕ್ಕೆ　೦-೬-೦

ಕೂಪನ್ ಕ್ರಮ— ೧೦೦ ಕೂಪನ್ ಪುಸ್ತಕ ಒಂದಕ್ಕೆ ರೂ.　೩೨-೮-೦
೬೦　,,　,,　,,　೧೬-೮-೦
೩೦　,,　,,　,,　೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಶ್ರೀ ಬಸವೇಶ್ವರನ ಸುಂದರವಾದ ಭಾವಚಿತ್ರಗಳನ್ನು ಜಾಗ್ರತೆ ತರಿಸಿಕೊಳ್ಳಿರಿ.

ಬಸವ ಜಯಂತಿಯ ಒಳಗಾಗಿ ೪ ಆಣೆ ಪೋಸ್ಟ ಸ್ಟಾಂಪುಗಳನ್ನು ಕಳುಹಿಸಿ ಕೊಟ್ಟವರಿಗೆ ಅನೇಕ ಬಣ್ಣಗಳಿಂದ ಕೂಡಿದ ೧೦×೮ ಸೈಜಿನ ೬ ಕಾಪಿಗಳನ್ನು ಯಾವ ಖರ್ಚು ಇಲ್ಲದೆ ಕಳುಹಿಸಿ ಕೊಡುವೆವು ೧೦೦ ಪ್ರತಿಗಳಿಗೆ ರೂ. ೨-೪-೦

೧೨×೧೬ ರ ಸೈಜು ಬಣ್ಣಗಳ ಕಾಪಿ ೧ ಕ್ಕೆ　೦-೪-೦
,,　,,　,,　,,　೧೨ ಕ್ಕೆ　೨-೪-೦
,,　,,　,,　,,　೧೦೦ ಕ್ಕೆ　೧೦-೦-೦

ಇವುಗಳಿಗೆ ಪೋಸ್ಟು ಖರ್ಚು ಪ್ರತ್ಯೇಕ.

ಯಜಮಾನ್ ಅಂಡ್ ಸನ್ಸ್,
ರಬ್ಬರ್ ಸ್ಟಾಂಪ್, ದೇವರ ಪಟಗಳು. ಮತ್ತು ಬ್ಲಾಕುಗಳನ್ನು ತಯಾರು ಮಾಡುವವರು,
ಚಿಕ್ಕಪೇಟೆ, ಬೆಂಗಳೂರುಸಿಟಿ.

ಶ್ರೀ ಬಸವೇಶ್ವರ

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯ ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತ ಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
ಶಿವಸಂಗಪ್ಪಣ್ಣ ಕುಪಸ್ತ,
ಬಾಗಲಕೋಟೆ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.
(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಿಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ಕಂಪಾಜಿಟರು ಬೇಕು.

ಮರಾಠಿ ಮತ್ತು ಕನ್ನಡ ಚೆನ್ನಾಗಿ ಕಂಪೋಜ್ ಮಾಡತಕ್ಕ ಕಂಪಾಜಿಟರು ಬೇಕು. ಯೋಗ್ಯ ಸಂಬಳ ದೊರೆಯುವದು. ಇಷ್ಟವುಳ್ಳವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ವಿಳಾಸ:— **ಮ್ಯಾನೇಜರ,**

ಕಲ್ಯಾಣ ಕರ್ನಾಟಕಪ್ರೆಸ್ ಗುಲಬರ್ಗಾ
ಪೋ. ಗುಲಬರ್ಗಾ (ನೈಜಾಮ ಸ್ಟೇಟ)

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಪ್ರಕಟಸಲ್ಪಟ್ಟಿತು.

REGISTERED No. B. 2891.

ಶರಣ ಸಂದೇಶ

The
Sharana Sandesh.

(ಸ್ವಾಯತ್ತ್ಯರ) ದಾಕ್ಷ್ಯಕರಣಸಲ್ಲ! ಲೋಕವಿರೋಧಿ! ಶರಣನಾರಾರಿಗೂ ಅಂಜುವನಲ್ಲ
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ವ. ೨೨೪ ॥ ಮಹಾನುಭಾವಿ ।

ಸಂಪಾದಕರು:-
ಡಾ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ವಂದಾ:- ಅಂಚೆಯ ವೆಚ್ಚ ಸೇರಿ ೩

ಪ್ರತಿ ಸೋಮವಾರವೂ ಪ್ರಕಟವಾಗುವದು.

ಸಂಪುಟ೪.	ಆಲಮಟ್ಟಿ- ಸೋಮವಾರ ತಾರೀಖು ೨೭ ನೆಯ ಮೇ ೧೯೪೫.	ಸಂಚಿಕೆ

ನಾಗಪುರ

ಸೆಕ್ರೆಟರಿಯೇಟ ಸುಟ್ಟಿತು

ಸರಕಾರದ ಮಹತ್ವದ ಕಾಗದ ಪತ್ರಗಳ ನಾಶ!

೧೫ ಲಕ್ಷ ರೂಪಾಯಿಗಳ ಹಾನಿ!

ಕಳೆದ ೨೩ ನೆಯ ತಾರೀಖಿನ ಮಧ್ಯರಾತ್ರಿ ಮೀರಿ ೨|| ಗಂಟೆಗೆ ನಾಗಪುರ ಸರಕಾರಿ ಸೆಕ್ರೆಟರಿ ಕಚೇರಿಗೆ ಬೆಂಕಿ ಹತ್ತಿತು. ಪ್ರಾರಂಭಕ್ಕೆ ಬೆಂಕಿಯು ಸ್ವಲ್ಪೇ ಕಂಡರೂ ಪಶ್ಚಿಮ ದಿಕ್ಕಿನ ಗಾಳಿಯಿಂದ ಪ್ರಜ್ವಲಿತವಾಗಿ ಆ ಭವ್ಯ ಭವನವನ್ನು ಭಸ್ಮಮಾಡಿತು. ನಗರಸಭೆಯ ನೀರಿನ ಪಂಪನ್ನು ತೆಗೆದುಕೊಂಡು ಪೋಲೀಸರು ಎಷ್ಟು ಪ್ರಯತ್ನ ಮಾಡಿ ದರೂ ನೊಂದಿಸಲು ಶಕ್ಯವಾಗಲಿಲ್ಲ. ಸರಕಾರಿ ಮಹತ್ವದ ಕಾಗದಪತ್ರ ಲಾಯಬ್ರರಿ ಗಳು ನಾಶವಾಗಿವೆ. ಇದರಿಂದ ಸರಕಾರಕ್ಕೆ ೧೫ ಲಕ್ಷ ರೂಪಾಯಿ ಹಾನಿಯಾಗಿದೆ.

SANGAM CLOTH STORES
Prop: M. S. Hundekar & Sons,
P.O: TERDAL - 587 315
Dt. Bijapur (Karnataka)

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ತ್ರಿಲ್ಲೋಲಪ್ಪಾ ಗೋಟ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ
ತಿಜೋರಿ ಮೇಕರ್ಸ
ಒಮ್ಮಾಪೂರಗಲ್ಲಿ, **ಹುಬ್ಬಳ್ಳಿ.**
ಬ್ರ್ಯಾಂಚ್ ಆಫೀಸ್:-
ಆಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ !

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹಿಂಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರೆ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕನ್ನೂದೂ ನನಗೆ ... ತ್ತ ಹನ್ನೆರಡು ವರ್ಷದ್ದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ** ಒಟ್ಟು ನಮ್ಮ ... ಬ್ಯಾಂಕಿನವರ ಅನ್ನಿ, ಸರಾಫರ ... ಕ್ಕ ದುಡ್ಡಿನ ಮಾರಿ ನೋಡಿದ ನಮ್ಮ ...**ರ ಕಂಪನಿಯ** ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳಕೊಂಡು ಬುದ್ಧಿಗಲಿತೆನು ಸಾಕುಸಾಕು, ಇನ್ನು ಮುಂದೆ ನಿಜವಾದ **ಸಿದ್ಧೇಶ್ವರ** ತಿಜೋರಿಯನ್ನೇ ಕೊಳ್ಳುವೆನು ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಹೊಟ್ಟೆಯಲ್ಲಿ ತೆಗೆದುಕೊಳ್ಳಲಿಕ್ಕೂ ಮತ್ತು ಮೇಲೋಪಚಾರಕ್ಕೂ ಅತ್ಯಂತ ಅನುಕೂಲವುಳ್ಳದ್ದು. ತಲೆನೋವು, ನೆಗಡಿ, ಕೆಮ್ಮು, ವಾತ, ಇನ್‌ಫ್ಲುಯಂಜಾ ಮುಂತಾದವುಗಳಿಗೆ ಒಳ್ಳೇ ಗುಣಕಾರಿ.

ನೀಲ್ಗಿರೋಲ್

ಸಶಾಸ್ತ್ರವಾಗಿ ಪರಿಶುದ್ಧಗೊಳಿಸಿದ

—ನೀಲಗಿರಿ ಎಣ್ಣೆ—

ಸ್ವಾಭಾವಿಕ ನೀಲಗಿರಿ ಎಣ್ಣೆಯಲ್ಲಿರುವ ಕಹಿ ಮತ್ತು ದುರ್ವಾಸನೆಗೆ ಕಾರಣವಾದ ಅಂಶಗಳು ನಮ್ಮ ರಸಾಯನ ಶಾಲೆಯಲ್ಲಿ ತಜ್ಞರ ಮೇಲ್ವಿಚಾರಣೆಯಲ್ಲಿ ಪ್ರತ್ಯೇಕ ಸಾಧನದಿಂದ ಬೇರ್ಪಡಿಸಲಾಗಿದೆ. ಅದ್ದರಿಂದ ಆನಂದದಾಯಕ ಸುವಾಸನೆಯನ್ನು ಕೊಡುವದು.

ಈಗ ಪೇಟೆಯಲ್ಲಿ ದೊರೆಯುವ ನೀಲಗಿರಿ ಎಣ್ಣೆಯು ಚಿಮಣಿ ಎಣ್ಣೆ, ಸ್ಪಿರಿಟ್, ಪೆಟ್ರೋಲ್, ಟರ್ಪೆಂಟೈನ್ ಮುಂತಾದ ಅಪಾಯಕಾರಕ ದ್ರಾವಗಳಿಂದ ಮಿಶ್ರಿತವಾದದ್ದಿರುತ್ತದೆಯೇ ಹೊರತು ಶುದ್ಧ ಎಣ್ಣೆಯು ಸಿಗುವದೇ ದುರ್ಲಭವಾಗಿದೆ. ಈ ತರದ ಎಣ್ಣೆಯ ಉಪಯೋಗದಿಂದ ರೋಗವನ್ನು ಕೊಂಡಂತಾಗುವದೆಂದು ಬೇರೆ ಹೇಳಬೇಕಾಗಿಲ್ಲ. ಇಂಥ ಕೊರತೆಯನ್ನು ಜನರಿಗೆ ದೂರ ಮಾಡುವ ಒಂದೇ ಒಂದು ಉದ್ದೇಶದಿಂದ 'ನೀಲ್ಗಿರೋಲ್'ನ್ನು ತಯಾರಿಸಿರುತ್ತೇವೆ. ಒಂದು ಸಾರೆ ಉಪಯೋಗಿಸಿ ಇದರ ಗುಣವನ್ನು ಮನಗಾಣಬಹುದು.

ತಯಾರಿಸುವವರು:— ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಯಾವತ್ತು ಔಷಧದ ಅಂಗಡಿಗಳಲ್ಲಿ ದೊರೆಯುತ್ತದೆ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಮೇ ತಾರೀಖು ೨೭ ನೆಯ ಸೋಮವಾರ | ಸಂಚಿಕೆ ೩೮.

ಹಿಂದುಗಳ ಹತಭಾಗ್ಯ ಸ್ಥಿತಿ.

ಕಳೆದ ಮೊಹರ್ರಮ್ಮದ ಕಾಲಕ್ಕೆ ಭೋಪಾಳ ಸಂಸ್ಥಾನದ ಸೇವಾಸ (ಬೇಗಮಗಂಜ) ಎಂಬ ಗ್ರಾಮದಲ್ಲಿ ಮುಸಲ್ಮಾನರು ಹಿಂದು ಜನರ ಒಂದು ದೇವಾಲಯದ ಮೇಲೆ ಮುತ್ತಿಗೆ ಹಾಕಿ ದೇವರ ಮೂರ್ತಿಯನ್ನು ಒಡೆದು ಹಾಕಿ ಪೂಜಾರಿಗಳನ್ನು ಬಹುವಾಗಿ ಹೊಡೆದು ಹಿಂಸೆಪಡಿಸಿದರು. ಹಿಂದುಗಳು ಆತ್ತರು; ಕರೆದರು. ಆದರೆ ಅದು ಮುಸಲ್ಮಾನ ಸಂಸ್ಥಾನ! ಕೊನೆಗೆ ಅಲ್ಲಿಯ ಸಂಸ್ಥಾನಿಕರಿಂದ ಯಾವ ನ್ಯಾಯವೂ ಉಂಟಾಗದಿದ್ದುದನ್ನು ನೋಡಿ ಹಿಂದು ಸಭೆಯವರು ಅಲ್ಲಿ ನಿಜ ಸಂಗತಿಯನ್ನು ನೋಡಿ ವರದಿಯನ್ನು ಮಾಡಲು ಶ್ರೀ. ರಾಕುರಲಾಲಸಿಂಹಜಿ ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನೇರ್ಪಡಿಸಿದರು. ಈ ಸಮಿತಿಯವರು ಭೋಪಾಳದಿಂದ ಸೇವಾಸಕ್ಕೆ ಹೋಗಬೇಕೆಂದರೆ ಅಧಿಕಾರಿಗಳ ಚುಚ್ಚುವಿಕೆಯಿಂದ ಮೋಟಾರಿನವರು ಇವರನ್ನು ಒಯ್ಯಲು ಸಮ್ಮತಿಸಲಿಲ್ಲ. ಕೊನೆಗೆ ಉಗಿಬಂಡಿಯಲ್ಲಿ ಕುಳಿತು ಹೋದರೂ ಸೇವಾಸದ ಗಡಿಗೆ ಬಂದ ಕೂಡಲೆ ಫೌಜದಾರರು ಅವರಿಗೆ ಮುಂದೆ ಹೋಗಲು ಅಡ್ಡಿಮಾಡಿ ಜಿಲ್ಲಾ ನ್ಯಾಯಾಧೀಶರ ಆಜ್ಞೆಯನ್ನು ತೋರಿಸಿದರು. ಹಾಗೂ ಆ ಜನರ ಹಸ್ತಾಕ್ಷರಗಳನ್ನು ತೆಗೆದುಕೊಂಡರು. ಕಟ್ಟಳೆ ಭಂಗ ಮಾಡಲು ಹಿಂದು ಸಭೆಯು ಅಪ್ಪಣೆ ಕೊಟ್ಟಿದ್ದಿಲ್ಲವಾದುದರಿಂದ ಅವರು ಶಾಂತಿಪೂರ್ವಕ ಹಿಂದಿರುಗಿದರು.

ಹೆರಕಲ್ಲ ಗ್ರಾಮದ ಅತ್ಯಾಚಾರ.

ಹೆರಕಲ್ಲ ಗ್ರಾಮದಲ್ಲಿ ಕಳೆದ ಬುಧವಾರ ೨೨ ನೆಯ ತಾರೀಖಿನ ದಿವಸ ಗ್ರಾಮದೇವತೆಯ ಉಡಿಯ ತುಂಬುವ ಕಾರ್ಯದಲ್ಲಿ ಏಳೆಂಟು ಕುರಿಗಳನ್ನೂ ಐದಾರು ಕೋಣಗಳನ್ನೂ ಹಲವು ಬಗೆಯಿಂದ ಪೀಡಿಸಿ ದೇವತೆಯ ಮುಂದೆ ಹತ ಮಾಡಿದರು.

ಇದಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ಬಾಗಲಕೋಟ ತಾಲೂಕ ಪೈಕಿ ಗಿರಿಸಾಗರ ಗ್ರಾಮದಲ್ಲಿ ತಾ. ೧-೬-೩೫ ರ ಸುಮಾರಕ್ಕೆ ಗ್ರಾಮದೇವತೆಯ ಮುಂದೆ ಹಿಂಸಾ ಕೆಲಸವು ಒಳ್ಳೇ ವಿಜೃಂಭಣೆಯಿಂದ ಜರುಗತಕ್ಕದ್ದದೆ. ಕಾರಣ ಕರ್ನಾಟಕದಲ್ಲಿಯ ಜೀವದಯಾ ಸಂಘದವರು ಇತ್ತ ಕಡೆಗೆ ವಿಶೇಷ ಲಕ್ಷಕೊಡಬೇಕೆಂದು ವಿನಂತಿ. ಹಮಜಾಸಾ ಮನ್ಸೂರಸಾಹೇಬ ಹುಕೇನ್ನಾಯಿಕ.

ಮೌ. ಶೌಕತ ಅಲ್ಲಿಯವರ ಹೇಳಿಕೆ.

ಮೌ. ಶೌಕತ ಅಲ್ಲಿಯವರು ಅಸೋಸಿಯೇಟೆಡ್ ಪ್ರೆಸ್ಸದ ಸುದ್ದಿಗಾರನ ಮುಂದೆ ಈ ಪ್ರಕಾರ ತಿಳಿಸಿದ್ದಾರೆ.—ಮಧ್ಯವರ್ತಿ ಶಾಸನ ಸಮಿತಿಯ ಮುಸಲ್ಮಾನ್ ಸಂಘದವರು ಕರಾಚಿಯಲ್ಲಾದ ಗುಂಡಿನೇಟಿನ ವಿಚಾರವನ್ನು ಮಾಡುವ ಕುರಿತು ಸರಕಾರದಿಂದಲ್ಲದ ಒಂದು ಮಂಡಲವನ್ನು ಏರ್ಪಡಿಸಲು ನಿಶ್ಚಯಿಸಿದ್ದಾರೆ. ಇದ[illegible]ಕ್ಕಾಗಿ ರಾಜಾ ಗಜನಫರ [illegible] ದಲ್ಲಿ ತೆಗೆದುಕೊಂಡು ಆ [illegible] ವ್ಯವಸ್ಥೆಯನ್ನು ನಮ್ಮ ಕಡೆಗೆ ಒಪ್ಪಿಸಿದ್ದಾಗಿದೆ. ಸರ್ ತೇಜ ಬಹಾದ್ದೂರ ಸಪ್ರು ಇವರಿಗೂ ಈ ಮಂಡಲದಲ್ಲಿ ಸೇರಲು ವಿಜ್ಞಾಪಿಸಿಕೊಳ್ಳಲಾಗಿದ್ದಿತು. ಆದರೆ ಅವರ ಪುತ್ರನು ಅಸ್ವಸ್ಥವಿದ್ದ ಕಾರಣ ಅವರು ಒಪ್ಪಲಿಲ್ಲ. ನರೇಂದ್ರ ಮಂಡಲದ ಹಿಂದಿನ ಕಾರ್ಯದರ್ಶಿಗಳೂ ಮತ್ತು ರಾಮಪುರ ಸಂಸ್ಥಾನದ ಹಿಂದಿನ ಸರನ್ಯಾಯಾಧೀಶರೂ ಆದ ಮೀರ ಮಕಬುಲ ಮಹಮ್ಮದ ಇವರನ್ನು ಮಂಡಲದಲ್ಲಿ ತೆಗೆದುಕೊಂಡಿದೆ. ಇವರಲ್ಲದೆ ಒಬ್ಬ ಫಾರ್ಸಿ ಮತ್ತು ಒಬ್ಬ ಹಿಂದು ಗೃಹಸ್ಥರನ್ನು ಮಂಡಲದಲ್ಲಿ ತೆಗೆದುಕೊಳ್ಳುವ ಕುರಿತು ನಮ್ಮ ವಿಚಾರವಿದೆ. ಇದರಲ್ಲಿ ಸಿಂಧ ಪ್ರಾಂತದ ಜನರನ್ನು ತೆಗೆದುಕೊಳ್ಳುವುದಿಲ್ಲ. ಈ ಮಂಡಲದ ಮುಂದೆ ಸರಕಾರಿ ಸಾಕ್ಷೀದಾರರನ್ನೂ ಕಳಿಸಿ ಸಹಾಯ ಮಾಡಬೇಕಾಗಿ ನಾವು ಅಧಿಕಾರಿಗಳಿಗೆ ಕೇಳಿಕೊಂಡಿದ್ದೇವೆ. ಈ ವಿಷಯದಲ್ಲಿ ನಾನು ಮುಂಬಯಿ ಗವ್ಹರ್ನರರ ಸಂಗಡ ಪತ್ರವ್ಯವಹಾರ ನಡೆಯಿಸಿದ್ದೇನೆ ಕಮೀಟಿಯ ಕಾರ್ಯವು ಮೇ ತಿಂಗಳ ಕೊನೆಗೆ ಪ್ರಾರಂಭವಾಗಬಹುದು.

ಶೋಚನೀಯ ನಿಧನ.

ಕಲ್ಲಬುರ್ಗಿಯ ಶ್ರೀ. ಯಜಮಾನ್ ದೊಡ್ಡಪ್ಪನವರ ಸುಪುತ್ರಿ ಸೌ. ಮಹಾದೇವಿ ಮಹಾಲಿಂಗರಾವ ದೇಶಮುಖ ಇವರು ಕಳೆದ ಶುಕ್ರವಾರ ರಾತ್ರಿ ಮದನಪಲ್ಲಿಯಲ್ಲಿ ಕ್ಷಯರೋಗದಿಂದ ಶಿವಾಧೀನರಾದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ. ಇವರ ಆತ್ಮವು ಚಿರಶಾಂತಿಯನ್ನು ಹೊಂದಲಿ.

ಓರ್ವ ನಗರವಾಸಿ.

ವಿಶ್ವ ವಿಚಿತ್ರವೋ; ವಿಚಿತ್ರ ವಿಶ್ವವೋ?

ಲೇಖಕರು:— ಶ್ರೀ. ಆರ್. ಎಸ್. ಆರಾಧ್ಯ ತುಮಕೂರ

ಹೆಂಗಸು ಗಂಡಸಾಗಬಲ್ಲಳೇ?

ಪ್ರಪಂಚವೇ ವಿಚಿತ್ರವೋ ಅಥವಾ ಅದರಲ್ಲಿನ ಜನಗಳೇ ವಿಚಿತ್ರವೋ? ಅಂತೂ ಈ ನವಯುಗದಲ್ಲಿ ಒಂದಕ್ಕಿಂತಲೂ ಒಂದು ವಿಚಿತ್ರವೇ ನಡೆಯುತ್ತಿರುತ್ತವೆ.

ಭಾರತ ಪುರಾಣಗಳಲ್ಲಿ ಅನೇಕ ವಿಚಿತ್ರಗಳೂ, ಅದ್ಭುತಗಳೂ ಆದ ವಿಷಯಗಳನ್ನು ಕೇಳಿರುವೆವು. ನಾರದರು ಹೆಂಗಸಾಗಿ ಮಕ್ಕಳನ್ನು ಹೆತ್ತರೆಂದೂ ದ್ರುಪದರಾಜನ ಮಗನಾದ ದೃಷ್ಟದ್ಯುಮ್ನನು ಮೊದಲು ಶಿಖಂಡಿಯಾಗಿದ್ದು ಆಮೇಲೆ ಒಬ್ಬ ಗಂಧರ್ವನ ಅನುಗ್ರಹದಿಂದ ಪುರುಷನಾದನೆಂದೂ ಓದಿರುವೆವು. ಇವೆಲ್ಲವೂ ಶಾಪದಿಂದ ಇಲ್ಲವೆ ಮಂತ್ರ ಶಕ್ತಿಯಿಂದ ನಡೆಯುತಕ್ಕವೆಂದು ಮಾತ್ರ ತಿಳಿದಿರುವೆವು. ಇಂತಹ ವಿಚಿತ್ರಗಳು ಈ ಕಲಿಯುಗದಲ್ಲಿಯೂ ಕೂಡ ಯಾವುದೊಂದು ಮಂತ್ರಶಕ್ತಿ ಅಥವಾ ಶಾಪದಿಂದಲೂ ಆಗದೆ ಇದ್ದಕ್ಕಿದ್ದ ಹಾಗೆ ಹೆಂಗಸು ಗಂಡಸಾದ ಕಥೆಯನ್ನು ಹೇಳಿದರೆ ಆಶ್ಚರ್ಯವಲ್ಲವೆ?

ಮಾರ್ಕ ಡಿರ್ಕಲೆ ಎಂಬ ಯುವಕನು ತನ್ನ ಜೀವನಕ್ಕಾಗಿ ಕೆಲಸ ಹುಡುಕಲು ಹೊರಟ. ಕೆಲಸ ಸಿಕ್ಕುವುದು ಈಗಿನ ನಿರುದ್ಯೋಗ ಸಮಸ್ಯೆಯ ಕಾಲದಲ್ಲಿ ಕಷ್ಟವಾದರೂ ಇವನ ಅದೃಷ್ಟ [illegible]ತು. ಕೆಲಸ ಕೊಡುವದಕ್ಕಿಂತ ಮುಂಚೆ [illegible]ಲ್ಲಿ ಕೆಲಸ ಮಾಡುತ್ತಿದ್ದೆ?" ಎಂದು ಕೇಳುವ ಅಭ್ಯಾಸ ಉಂಟಲ್ಲಾ; ಆದರಂತೆ ಅವರೂ ಇವನನ್ನು ಕೇಳಿದರು. ಪಾಪ! ಮಾರ್ಕಡಿರ್ಕಲೆ ಹೇಗೆ ತಾನೆ ಹೇಳಿಕೊಂಡಿಯಾನು ತನ್ನ ಹಿಂದಿನ ಕಥೆಯನ್ನು? ಹೇಳದಿದ್ದರೆ ಯತ್ನವಿಲ್ಲ. ಅವನ ಕಥೆ ಇಷ್ಟೆ.

ಇಟಲಿ ದೇಶದ 'ನ್ಯೂಡಿಲೇ ಮೇರಿ' ಎಂಬ ಒಬ್ಬ ಯುವತಿ. ಇವಳ ತಂದೆ ಇಂಗ್ಲೀಷಿನವನು ತಾಯಿ ಇಟಲಿಯವಳು. ಆದರೆ ಮೇರಿಯು ತನ್ನ ತಂದೆಯನ್ನು ನೋಡಿರಲಿಲ್ಲ. ಇವಳ ಬಾಲ್ಯಾವಸ್ಥೆಯೆಲ್ಲವೂ ಇಟಲಿಯಲ್ಲೇ ಕಳೆಯಿತು. ಇಟಲಿಯು ಭೂಕಂಪಗಳಿಗೆ ಮಾತೃಸ್ಥಾನವಷ್ಟೆ. ಈಗಲೂ ಕೂಡ ಇಟಲಿಯ ಕೆಲವು ಭಾಗಗಳಲ್ಲಿ ಭೂಕಂಪವು ಆಗುತ್ತಿರುತ್ತದೆ. ಇಂತಹ ಭೂಕಂಪವೊಂದು ಮೇರಿಯನ್ನು ಬಹಳವಾಗಿ ಹೆದರಿಸಿತು. ಒಂದು ದಿನ ಮೇರಿಯು ತನ್ನ ತಾಯಿಯೊಡನೆ ಅಡಿಗೆಮನೆಯಲ್ಲಿರುವಾಗ್ಗೆ ಭೂಮಿಯು ನಡುಗಿತು. ಇದರ ಸೂಕ್ಷ್ಮವನ್ನು ತಿಳಿಸಿದ ಕೆಲವರೊಡನೆ ಮೇರಿಯೂ ಮತ್ತು ಅವಳ ತಾಯಿಯೂ ಆ ಊರನ್ನು ಬಿಟ್ಟು ಹೊರಟರು. ಅಲ್ಲಿಯೇ ನಿಂತ ಇವರ ಬಂಧುಗಳು ನಿರ್ಮೂಲವಾದರು.

ಮೇರಿಯು ಹೆಚ್ಚು ಸುಂದರಿಯಲ್ಲದಿದ್ದರೂ ಕುರೂಪಿಯಲ್ಲ. ಅವಳ ರೂಪಕ್ಕೆ ತಕ್ಕ ಮಧುರವಾಣಿ, ಕೋಮಲ ಶರೀರ; ಅಲ್ಲದೆ ಉದ್ದವಾದ ಕೇಶವೂ ಇದ್ದಿತು. ಸ್ಕೂಲಿನ ತನ್ನ ಎಲ್ಲಾ ಗೆಳತಿಯರಿಗಿಂತಲೂ ಇವಳೇ ಬುದ್ಧಿವಂತಳು. ಆದರೆ ಹುಡುಗಿಯರ ಕೂಡ ಆಡುವುದಕ್ಕಿಂತಲೂ ಹುಡುಗರೊಡನೆಯೇ ಇರಲು ಆಶೆ ಹೆಚ್ಚು. ಹುಡುಗರಂತೆ ಉಡುಪು ಧರಿಸಿ ಅವರಂತೆ ಫುಟ್‌ಬಾಲ್, ಕ್ರಿಕೆಟ್ ಆಟಗಳನ್ನಾಡಲು ಕುತೂಹಲ ಪಡುತ್ತಿದ್ದಳು. ಸಮಯ ಸಂದರ್ಭಗಳಲ್ಲಿ ಆ ಆಟಗಳನ್ನು ಆಡಿದ್ದರೂ ಆಡಿರಬಹುದು. ಯೌವನವು ಬಂದಂತೆಲ್ಲಾ ಸ್ವಾಭಾವಿಕವಾಗಿ ಹೆಂಗಸರಿಗೆ ಇರುವ ಎಲ್ಲಾ ವಿಷಯಗಳಲ್ಲಿಯೂ ಇವಳಿಗೆ ಆಸಕ್ತಿ ಕಡಿಮೆಯಾಗುತ್ತಾ ಬಂತು. ನರ್ತನ ಮಾಡುವುದು, ಸ್ತ್ರೀಯರೊಡನೆ ಮಾತನಾಡುವುದಂತೂ ಇವಳಿಗೆ ಬೇಕೇ ಇರಲಿಲ್ಲ. ಸುಮಾರು ೧೮ ವರುಷ ತುಂಬಿತೋ ಇಲ್ಲವೋ ಎನ್ನುವುದರೊಳಗಾಗಿ ತಾಯಿಯು ಗತಿಸಿದಳು. ಆಸ್ತಿಯಂತೂ ಇರಲೇ ಇಲ್ಲ. ತಂದೆಯನ್ನಂತೂ ಇವಳು ಕಾಣೇ ಕಾಣಳು. ಹಾಗಿದ್ದರೆ ಅವಳ ಜೀವನ? ತನ್ನ ಜೀವನಕ್ಕಾಗಿ ಪೇಚಾಟ ಬಂತು. ಆದ್ದರಿಂದ ಮೇರಿಯು ಒಂದು ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರಿಕೊಂಡಳು. ಆಸ್ಪತ್ರೆಯಲ್ಲಿದ್ದಂತೆಯೇ ತನ್ನ ಶರೀರ ಪ್ರಕೃತಿಯು ಬದಲಾಗುತ್ತಿರುವುದಕ್ಕೆ ಕಾರಣವನ್ನು ತಿಳಿಯದೆ ಹೋದಳು. ಇವಳೊಡನೆ ಕೆಲಸ ಮಾಡುತ್ತಿದ್ದವರು ಸಹ ಈ ವಿಷಯವಾಗಿ ಹೆಚ್ಚು ಮೂದಲಿಸುತ್ತಿರಲಿಲ್ಲ. ಆದರೆ ವಾರ್ಡಿನಲ್ಲಿದ್ದ ರೋಗಿಗಳು ಮಾತ್ರ ಇವಳನ್ನು ಹತ್ತಿರ ಬರಗೊಡುತ್ತಿರಲಿಲ್ಲ. ಇವಳಿಗೆ ಸ್ತ್ರೀಯರಿಗೆ ಸಹಜವಾಗಿ ಇರಬೇಕಾದ ಹಾವ ಭಾವಗಳಿಲ್ಲವೆಂಬುದೇ ಕಾರಣ ಇವರು ಮೇರಿಯನ್ನು ಇತರ ಸ್ತ್ರೀಯರೊಂದಿಗೆ ಮಾತನಾಡುವಷ್ಟು ಸಲಿಗೆಯಿಂದ ಮಾತನಾಡಿಸುವುದಂತೂ ಹೋಗಲಿ. ಹತ್ತಿರಕ್ಕೆ ಬರಕೂಡದೆಂದು ಬಯ್ಯುತ್ತಿದ್ದರು. ಇವಳು ಎಷ್ಟು ನಮ್ರತೆ, ವಿಧೇಯತೆಗಳಿಂದ ಅವರನ್ನು ರಮಿಸಲು ಎತ್ನಿಸುತ್ತಿದ್ದಳೋ, ಅಷ್ಟೂ ಅವರು ಇವಳನ್ನು ದೂರದಲ್ಲಿಯೇ ಇರಿಸುತ್ತಿದ್ದರು. ಮೇರಿಯು ಈ ರೀತಿ ತನಗಾಗುವ ಅವಮಾನವನ್ನೂ ಶರೀರ ಪ್ರಕೃತಿಯು ಬದಲಾಗುತ್ತಿರುವುದನ್ನೂ, ತನ್ನಂತೆಯೇ ಹೆಂಗಸರಾದ ವಾರ್ಡಿನ ರೋಗಿಗಳ ತಿರಸ್ಕಾರವನ್ನೂ ಕಂಡು ಬಹಳವಾಗಿ ಸಂಕಟಪಟ್ಟಳು. ಪಾಪ! ಸಂಕಟಪಡದೆ ಏನು ಮಾಡಿಯಾಳು? ಹೆಂಗಸರೆಲ್ಲರೂ ಹೆಂಗಸಾದ ತನ್ನನ್ನು ಈ ರೀತಿ ತಿರಸ್ಕರಿಸುತ್ತಿದ್ದುದನ್ನು ನೋಡಿ ಸಹಿಸಲಾರದಷ್ಟು ಸಂಕಟವಾಗಿ ಆಸ್ಪತ್ರೆಯನ್ನೇ ಬಿಟ್ಟುಬಿಟ್ಟಳು. ಪ್ರಪಂಚದಲ್ಲಿ ತಾನು ಬದುಕುವುದಕ್ಕಿಂತ ಸಾಯುವುದೇ ಲೇಸೆಂದು ಭಾವಿಸಿದಳು. ಆದರೆ ಪ್ರಪಂಚಕ್ಕೆ ತಾನೊಬ್ಬಳು ಮಾದರಿಯೆಂದು ತಿಳಿದೋ ಏನೋ ಆತ್ಮಹತ್ಯವನ್ನು ಮಾಡಿಕೊಳ್ಳದೆ ಹೋದಳು.

ಆಸ್ಪತ್ರೆಯನ್ನು ಬಿಟ್ಟನಂತರ ಜೀವನೋಪಾಯಕ್ಕಾಗಿ ಒಂದು ಕೆಲಸವನ್ನು ಹುಡುಕಬೇಕಾಯಿತು ಅಲ್ಲದೆ ಅವಳು ತನ್ನ ಮಾನವನ್ನೂ ಉಳಿಸಿಕೊಳ್ಳಬೇಕಾಗಿತ್ತು. ಆದರಂತೆ ಯೋಚಿಸಿ ಒಬ್ಬ ಮುದುಕಿಗೆ ದಾದಿಯಾದಳು. ಮುದುಕಿಯೊಡನಾಡಬೇಕಾಗಿದ್ದುದರಿಂದ ಇವಳಿಗೆ ಯಾವತರವಾದ ಅವಮಾನಕ್ಕೂ ಅವಕಾಶವಿರಲಿಲ್ಲ ಆದರೆ ಒಂದು ದಿವಸ ಮೇರಿಯು ತನ್ನ ಯಜಮಾನಿಯ ಸಂಗಡ ವಾಯು ಸಂಚಾರಕ್ಕೆ ಹೋಗುತ್ತಿದ್ದಾಗ್ಗೆ ಒಂದು ಮಗುವು "ಅಮ್ಮಾ ಅಮ್ಮಾ, ಇವಳು ಗಂಡಸೋ, ಹೆಂಗಸೋ?" ಎಂದು ಕೇಳಿತು. ಇದನ್ನು ಕೇಳಿದ ಮೇರಿಗೆ ಸಿಡಿಲು ಬಡಿದಂತಾಯಿತು. ಇದರಿಂದ ಬಹಳವಾಗಿ ಮರುಗಿ ಮಾರನೇ ಬೆಳಿಗ್ಗೆ ಹೊರಗೆ ಬರುವುದನ್ನೇ ಬಿಟ್ಟಳು. ಯತ್ನವಿಲ್ಲದೆ ಯಾವಾಗಲಾದರೂ ಹೊರಗೆ ಬರಬೇಕಾದರೆ ಮಾತ್ರ ಬರುತ್ತಿದ್ದಳು. ಇವಳು ಆ ಮುದುಕಿಯ ಮನೆಯಲ್ಲಿಯೇ ಸುಖವಾಗಿರಬೇಕೆಂದಿದ್ದರೂ ಇವಳ ವಿಧಿಯು ಅಲ್ಲಿಂದಲೂ ಹೊರಡಿಸಿತು. ಕೆಲವು ದಿನಗಳಲ್ಲಿ ಮೇರಿಯ ಯಜಮಾನಿಯು ಸತ್ತುದರಿಂದ ಕೆಲಸ ಬಿಡಬೇಕಾಯಿತು. ಮೇರಿಗೆ ಕೆಲಸ ಬಿಟ್ಟ ಮೇಲೆ ಬಹಳ ಕಷ್ಟಪರಂಪರೆಗಳು ಬಂದವು. ಕಾರಣ ಮುದುಕಿಯಷ್ಟು ಇವಳನ್ನು ಪ್ರೀತಿಯಿಂದ ನೋಡಿಕೊಳ್ಳುವ

ವರು ಯಾರೂ ಇರಲಿಲ್ಲ. ಕೈಯಲ್ಲಿ ಹಣವಿಲ್ಲ. ಹೊಟ್ಟೆಗೆ ಅನ್ನವಿಲ್ಲ. ಹೊರಗೆ ಹೋಗಲು ಸಾಧ್ಯವಿಲ್ಲ. ಹೀಗಾಗಿ ಮೇರಿಯು ತಿಂಡಿಗಾಗಿ ಅಲೆಯಬೇಕಾಯಿತು.

ಕೆಲವು ದಿವಸ ಹೀಗೆಯೇ ಕಷ್ಟವನ್ನನುಭವಿಸಿದ ಮೇಲೆ ಈಕೆಯ ಸ್ನೇಹಿತಳೊಬ್ಬಳು ಇವಳಿಗೆ "ನರ್ಸಿಂಗ್ ಹೋಮಿನಲ್ಲಿ" ಒಂದು ಕೆಲಸವನ್ನು ಕೊಡಿಸಿ ಕೊಟ್ಟಳು. ಇಲ್ಲಿ ಕೆಲಸ ಸಿಕ್ಕಿದುದರಿಂದ ಮೇರಿಗೆ ಬಹಳ ಸಂತೋಷವಾಯಿತು. ಕೊನೆಯವರೆಗೂ ಇಲ್ಲಿಯೇ ಕೆಲಸವನ್ನು ಮಾಡಿಕೊಂಡಿರೋಣವೆಂದು ಮನಸ್ಸು ಮಾಡಿ ಮೊದಲನೆ ದಿನ ಕೆಲಸಕ್ಕೆ ಹೋಗಿ ನಿಂತಳು. ಹಾಗೆಯೇ ರೋಗಿಗಳ ವಾರ್ಡಿಗೆ ಬಂದಳೋ ಇಲ್ಲವೋ ಒಬ್ಬ ರೋಗಿಯು ಮಲಗಿದ್ದವಳು ಥಟ್ಟನೇ ಎದ್ದು "ಅಲ್ಲಿ ನೋಡಿ, ಅವಳು ಗಂಡಸು; ಹೆಂಗಸಲ್ಲಾ ಗಂಡಸು" ಎಂದು ಕೂಗಹತ್ತಿದಳು. ಮತ್ತೆ ಕೆಲವರು, ಹೌದು ನಿಜ ಇವಳು ಖಂಡಿತ ಗಂಡಸು ಆಚೆಗೆ ಕಳಿಸಿ ಎಂದು ಗೊಂದಲ ಹಾಕಿದರು. ಅಲ್ಲಿಯ ಅಧಿಕಾರಿಗಳು ಇದನ್ನು ನೋಡಿ ಕೊಂಚ ಅವಕಾಶವನ್ನು ಕೂಡ ಕೊಡದೆ ಅವಳನ್ನು ಕೆಲಸದಿಂದ ತೆಗೆದು ಹಾಕಿದರು.

ಅಲ್ಲಿಂದಲೂ ಹೊರಡಿಸಲ್ಪಟ್ಟ ಮೇರಿಯು ಒಬ್ಬರಿಗೆ ಅಡಿಯಾಳಾಗುವುದು ತುಂಬಾ ಕಷ್ಟವೆಂದು ತಿಳಿದು, ವ್ಯಾಪಾರ ಮಾಡಲು ನಿಂತಳು. ವ್ಯಾಪಾರದಲ್ಲಿಯೂ ಇವಳಿಗೆ ಏಟು ಬಿತ್ತು. ಎಲ್ಲವೂ ನಷ್ಟವಾಗಿ ಸಾಲಾ ಕೊಟ್ಟವರ ಹಣವನ್ನು ತೀರಿಸಲು ಶಕ್ತಿಯಿಲ್ಲದೆ ಸೆರೆಮನೆಯನ್ನು ಸೇರಿದಳು. ಇದು ವರೆಗೂ ಮೇರಿಯು ತನ್ನ ಶರೀರದಲ್ಲಿ ಆಗುತ್ತಿರುವ ಮಾರ್ಪಾಟನ್ನು ಅರಿತಿರಲಿಲ್ಲ. ಸೆರೆಮನೆಗೆ ಬಂದ ಕೆಲವು ದಿನಗಳಲ್ಲಿ ಮೇರಿಗೆ ತನ್ನಲ್ಲಿ ಆಗುತ್ತಿದ್ದ ಮಾರ್ಪಾಟು ಗೋಚರಕ್ಕೆ ಬಂತು. ಇದನ್ನು ನೋಡಿ ಮೇರಿಗೆ ಹುಚ್ಚು ಹಿಡಿದಂತಾಯಿತು. ಒಂದು ದಿವಸ ಇದ್ದಕ್ಕಿದ್ದ ಹಾಗೆಯೇ ಸೆರೆಮನೆಯ ಡಾಕ್ಟರ್ ಬಂದು— 'ಮೇರಿ, ಇನ್ನು ಮೇಲೆ ನೀನು ಹೆಂಗಸೆಂದು ಹೇಳಿಕೊಂಡಿರಲು ಸಾಧ್ಯವಿಲ್ಲ' ಎಂದರು. ಮೇರಿಗೆ ಎದೆಯೊಡೆಯಿತು, ತನ್ನ ಕೈಯನ್ನು ತಾನೇ ಕಡಿದ ಕೊಂಡಳು. ಅವಳಿಗೆ ಏನು ಮಾಡಬೇಕೆಂಬುದೇ ತಿಳಿಯದೆ ಹೋಯಿತು. 'ಹೀಗಾಗುತ್ತಿರುವ ಬದಲಾವಣೆಯನ್ನು ನಿಲ್ಲಿಸಲು ಸಾಧ್ಯವಿಲ್ಲವೆ?' ಎಂದು ಮೇರಿಯು ಡಾಕ್ಟರರನ್ನು ಕೇಳಿದಳು. ಆದರೆ ಆ ಕೆಲಸವನ್ನು ಮಾಡಲು ಕಾಲವು ಮಿಂಚಿ ಹೋಗಿದೆ ಎಂಬ ಉತ್ತರವು ಬಂತು. ಮೇರಿಯು ತನ್ನ ಹಿಂದಿನ ಸ್ಥಿತಿಯನ್ನೂ ಇಂದಿನ ಸ್ಥಿತಿಯನ್ನೂ ಜ್ಞಾಪಿಸಿಕೊಂಡಳು. ಆಗಿನ ಸ್ಥಿತಿಗೂ ಈಗಿನ ಸ್ಥಿತಿಗೂ ಬಹಳ ಅಂತರವಾಗಿರುವುದೆಂಬುದನ್ನು ಅರಿತಳು. ಎಲ್ಲವೂ ಮಾರ್ಪಾಟಾಗುತ್ತಾ ಬಂದಿದ್ದಿತು. ಮುಖದಲ್ಲಿ ಕೂದಲೂ, ಮೀಸೆಯೂ ಕಪ್ಪಿಗೆ ಬೆಳೆಯುತ್ತಾ ಬಂದಿದ್ದವು. ಅಂದಿನ ಕೋಮಲ ಕಂಠವು ಇಂದು ಪುರುಷರ ಕಂಠದಂತೆ ಇತ್ತು. ಸೆರೆಮನೆಯಲ್ಲಿಯೇ ಸ್ತ್ರೀಯರಿಗಿರುವ ಅಂಗಗಳೆಲ್ಲವೂ ಮಾಯವಾಗತೊಡಗಿದವು. ಇಲ್ಲಿಯವರೆಗೂ ಮೇರಿಯು ಹೆಂಗಸಾಗಿದ್ದಳು. ಆದರೆ ಈಗ ಹೆಂಗಸೆಂದು ಹೇಳಿಕೊಳ್ಳಲು ಕೊಂಚವೂ ಆಧಾರವಿಲ್ಲ. ಸೆರೆಮನೆಯ ಡಾಕ್ಟರು 'ಇನ್ನು ಮೇಲೆ ನೀನು ಹೆಂಗಸೆಂದು ಹೇಳಿಕೊಳ್ಳಲು ಆಗುವುದಿಲ್ಲ.' ಎಂದು ಹೇಳಿದ ಕೆಲವು ದಿನಗಳಲ್ಲಿಯೇ ಮೇರಿಯು ಪೂರ್ತಿ ಗಂಡಸಾಗಿ ಬಿಟ್ಟಳು. ಸೆರೆಮನೆಯಲ್ಲಿ ಶಿಕ್ಷೆಯನ್ನನುಭವಿಸುತ್ತಿದ್ದಾಗ್ಗೆ ಹೆಂಗಸರಿಗಿರಬೇಕಾದ ಅಂಗಗಳೆಲ್ಲವೂ ಮಾಯವಾಗಿ ಗಂಡಸರಿಗೆ ಇರಬೇಕಾದ ಅಂಗಗಳು ಬರತೊಡಗಿದವು. ಮೇರಿಗೆ ಈ ಮಾರ್ಪಾಟಿನ ವಿಷಯವನ್ನು ಮುಚ್ಚಿಡಬೇಕೆಂಬ ಆಶೆ. ಆದರೆ ಇಂತಹ ವಿಷಯಗಳನ್ನು ಮುಚ್ಚಿಡಲು ಸಾಧ್ಯವೆ? ಇದನ್ನು ಸೆರೆಮನೆಯ ಡಾಕ್ಟರು ಬಹಿರಂಗಪಡಿಸಿಬಿಟ್ಟರು. ಎಲ್ಲರಿಗೂ ತಿಳಿಯಿತು. ಮೇರಿಯು ಇಷ್ಟು ದಿವಸವೂ ಹೆಂಗಸಾಗಿದ್ದವಳು ಈಗ ಗಂಡಸಾಗಿದ್ದಾಳೆ.

ಮೇರಿಯು ಈಗ ಮೊದಲಿನ ಹೆಂಗಸುಮೇರಿಯಲ್ಲ. ಇಪ್ಪತ್ತೊಂಭತ್ತು ವರ್ಷದ ಯುವಕ. ಅವನ ಹೆಸರು ಮಾರ್ಕ್ ಡಿರ್ಕಲೆ; ಸುಮಾರು ಇಪ್ಪತ್ತೇಳು ವರ್ಷಗಳಿಂದಲೂ ಹೆಂಗಸಾಗಿದ್ದ ವ್ಯಕ್ತಿಯು ಈಗ ನವಯುವಕನಾಗಿದ್ದಾನೆ.

ಹೀಗೆ ಸ್ತ್ರೀಯರು ಪುರುಷರಾದಲ್ಲಿ ಮನುಷ್ಯರು ಮೃಗಗಳೂ ಆಗಬಹುದಲ್ಲವೆ? ಇನ್ನೇನು ಮನುಷ್ಯರು ಮೃಗಗಳಾಗುವುದನ್ನೂ ಮೃಗಗಳು ಮನುಷ್ಯರಾಗುವುದನ್ನೂ ಮಾತ್ರ ನೋಡಬೇಕಾಗಿದೆ.

ಹಿಂದುಗಳ ಧರ್ಮಾಂತರ.

ತ್ರಾವಣಕೋರದಲ್ಲಿ ಪ್ರತಿವರ್ಷ ಹತ್ತು ಸಾವಿರ!

ಕಳೆದ ೧೯ನೇಯ ತಾರೀಖಿನ ದಿವಸ ತ್ರಾವಣಕೋರ ಸಂಸ್ಥಾನದಲ್ಲಿ ದಲಿತವರ್ಗದ ಕ್ರಿಸ್ತೀಯರ ಪರಿಷತ್ತು ಸೇರಿದ್ದಿತು. ಆ ಕಾಲಕ್ಕೆ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಪ್ರಕಾರ ಹೇಳಿದರು.

"ಕ್ರಿಸ್ತೀಯರು ತ್ರಾವಣಕೋರದಲ್ಲಿ ಮಾಡಿದಷ್ಟು ಚಟುವಟಿಕೆಯನ್ನು ಹಿಂದುಸ್ಥಾನದ ಯಾವ ಸಂಸ್ಥಾನದಲ್ಲಿಯೂ ಮಾಡಿರುವದಿಲ್ಲ. ಕಳೆದ ಶತಮಾನದಲ್ಲಿ ತ್ರಾವಣಕೋರದ ಜನಸಂಖ್ಯೆಯು ಐದೂವರೆ ಪಟ್ಟು ಬೆಳೆದಿದೆ. ಆದರೆ ಕ್ರಿಸ್ತೀಯರ ಸಂಖ್ಯೆಯು ೧೯ ಪಟ್ಟು ಹೆಚ್ಚಿದೆ. ಶತಮಾನದ ಪ್ರಾರಂಭದಲ್ಲಿ ೩೦೦ ಚರ್ಚು (ಕ್ರಿಸ್ತೀ ದೇವಾಲಯ)ಗಳಿದ್ದವು. ಈಗ ೨೬೨೭ ಚರ್ಚುಗಳಾಗಿವೆ. ಇದಕ್ಕೆ ಪ್ರತಿಯಾಗಿ ಮೊದಲು ೨೧೯೫ಲ ಹಿಂದು ದೇವಾಲಯಗಳಿದ್ದಂಥವು ಈಗ ೯೨೫೦ ದೇವಾಲಯಗಳು ಉಳಿದಿವೆ.

ಪ್ರತಿವರ್ಷವೂ ೧೦ ಸಾವಿರ ಹಿಂದುಗಳು [illegible] ಸದ ವರ್ಗತ್ತಿದ್ದಾರೆ. ಶಿಕ್ಷಣ ಮತ್ತು ಸಾಂಪತ್ತಿಕ ಸ್ಥಿತಿಗಳಲ್ಲಿ ಕ್ರಿಸ್ತೀಯರು ಚನ್ನಾಗಿದ್ದಾರೆ. ಆದರೆ ಶ್ರೇಷ್ಠ ತರಗತಿಯ ಕ್ರಿಸ್ತೀಯರು ಕನಿಷ್ಠ ತರಗತಿಯ ಕ್ರಿಸ್ತೀಯರನ್ನು ಅತ್ಯಂತ ಕ್ಷುದ್ರವಾಗಿ ಕಾಣುತ್ತಾರೆ. ಕೆಲವು ಚರ್ಚುಗಳಲ್ಲಿ ಉಭಯತರು ಒಂದೇ ಕಡೆಗೆ ಸೇರಿ ಪ್ರಾರ್ಥನೆ ಮಾಡಲು ಆಸ್ಪದವಿರುವದಿಲ್ಲ. ಹಾಗೂ ಶವಗಳನ್ನು ಹೂಳಲಿಕ್ಕೆ ಸಹ ಒಂದೇ ಸ್ಥಾನವಿರುವುದಿಲ್ಲ."

ಅಂದವಾದ ಮುದ್ರಣ! ಅಚ್ಚುಕಟ್ಟಾದ ಬೈಂಡು!

ಸಂಕ್ಷಿಪ್ತ

ಮಹಾದೇವಿಯಕ್ಕನ ಜೀವನ ಚರಿತ್ರೆ.

ವಚನವಾಙ್ಮಯದಲ್ಲಿ ಉಚ್ಚಸ್ಥಾನವನ್ನು ಪಡೆದು ಪ್ರಸಿದ್ಧಿ ಪಡೆದ ಉಡುತಡಿಯ ಮಹಾದೇವಿಯಕ್ಕನ ಜೀವನ ಕಥೆ. ವಚನಗಳಿಂದ ಕೂಡಿ ಭಾವ ಪೂರ್ಣವಾಗಿ ಬರೆಯಲ್ಪಟ್ಟಿದೆ.

ಬೆಲೆ ಎರಡಾಣೆ ಮಾತ್ರ,

ಲೇಖಕರು:— ಶ್ರೀಮಾನ್ ಟಿ. ಎಗ್. ಮಹಾದೇವಯ್ಯನವರು

ಪುಸ್ತಕ ದೊರೆಯುವ ವಿಳಾಸ— ಶ್ರೀ ಸರ್ಪಭೂಷಣ ಮಠ
ಬಳೇಪೇಟೆ,
ಬೆಂಗಳೂರು ಸಿಟಿ.

ಮಹಿಳಾ ಪ್ರಪಂಚ.

ಸ್ತ್ರೀ ಪೋಲೀಸರ ಆವಶ್ಯಕತೆ.

ಕ್ಲೇರಾ ವಿಸಘೋದೇಳ ಅನುಭವ.

"ಪೋಲೀಸರಾಗಿ ಕಾವಲು ಮಾಡುತ್ತ ನಿಲ್ಲುವದು ಪುರುಷರಿಗೇ ಬಹು ಬೇಸರಿಗವ ಕೆಲಸ. ಹೀಗಿರಲು ಸ್ತ್ರೀಯರು ಪೋಲೀಸರಾಗಿ ಮಾಡುವದೇನು? ಎಂದು ಕೆಲವರ ಆಕ್ಷೇಪ. ಆದರೆ ಕಾವಲಿಡುವದೆಂದರೆ ನಿರೀಕ್ಷಣವಲ್ಲವೆ? ನಿರೀಕ್ಷಣವೂ ಒಂದು ಮಹತ್ವದ ಕಲೆಯಾಗಿದೆ. ಯಾವ ಪೋಲೀಸರಿಗೆ ಈ ಕಲೆಯು ಅವಗತವಿಲ್ಲವೋ ಅವರಿಗೇನೇ ಬೇಸರುಂಟಾಗುವದು. ನಿರೀಕ್ಷಣ ಶಕ್ತಿಯುಳ್ಳವರಿಗೆ ಈ ವೃತ್ತಿಯು ಮನೋರಂಜಕವಾಗಿಯೇ ಇದೆ.

ನಿರೀಕ್ಷಣದಿಂದ ಮನುಷ್ಯ ಸ್ವಭಾವದ ಪರಿಚಯವಾಗುತ್ತದೆ. ಸ್ವಭಾವ ಪರಿಚಯದಿಂದ ಹೃದಯದ ಗುಟ್ಟು ತಿಳಿಯುತ್ತದೆ. ಇದಕ್ಕಾಗಿ ಕೆಲವು ವಿಷಯಗಳಲ್ಲಿ ಸ್ತ್ರೀ ಪೋಲೀಸರ ಅತ್ಯಂತಾವಶ್ಯಕತೆ ಇದೆ. ನಾನು ಪೋಲೀಸಳಾಗಿದ್ದಾಗ್ಗೆ ಅನೇಕ ಕಾರಣಗಳಿಂದ ಬಾಲಿಕೆಯರು ನನ್ನನ್ನು ಕಾಣುತ್ತಿದ್ದರು. ಅವರಿಗೆ ನಾನು ಶಾಂತ ರೀತಿಯಿಂದ ಸರಿಯಾದ ಮಾರ್ಗವನ್ನು ತೋರಿಸಿಕೊಡುತ್ತಿದ್ದೆ. ಇದಕ್ಕಾಗಿ ನನ್ನ ವಿಷಯಕ್ಕೆ ಒಳ್ಳೇ ಆದರ ಭಾವವನ್ನು [illegible]ರು ಈಗ ಮನೆ ಹೊರಗಿನ ಅನೇಕ [illegible]ರುವುದರಿಂದ ಅವರಿಗೆ ಸ್ತ್ರೀ ಪೋಲೀಸರ [illegible]ಶ್ಯಕ ಆಗತ್ಯವಿದೆ."

ಶೀಖ ಮಹಿಳೆಯರ ಉಪವಾಸ ವ್ರತ.

ಶ್ರೀ. ಅಮೃತ ಕುವರರ ಹೇಳಿಕೆ.

ಮುಂಬಯಿಯ ಸುಪ್ರಸಿದ್ಧ ಸಮಾಜ ಸೇವಿಕೆಯರಾದ ಶ್ರೀ ಅಮೃತ ಕುವರ ಇವರು ಶೀಖ ಮಹಿಳೆಯರ ಉಪವಾಸ ವ್ರತದ ಬಗ್ಗೆ ಹೀಗೆ ತಿಳಿಸಿರುವರು— ಶೀಖ ಜನರಲ್ಲಿ ನಾನು ಮುಂದೆ ನೀನು ಮುಂದೆ ಎಂದು ಅನೇಕ ಜನರು ಮುಂದಾಳುಗಳಾಗಲು ಅಪೇಕ್ಷಿಸಿದ್ದರಿಂದ ಸಮಾಜದಲ್ಲಿ ಅನೇಕ ಒಡಕುಗಳಾಗಿವೆ. ತಮ್ಮ ಸಮಾಜಕ್ಕೊದಗಿದ ಈ ವಿಪತ್ತನ್ನು ಹೋಗಲಾಡಿಸಲು ಶೀಖ ಮಹಿಳೆಯರು ಉಪವಾಸ ವ್ರತವನ್ನಾರಂಭಿಸುವವರಿದ್ದಾರೆ. ತಮ್ಮ ಸಮಾಜದ ಕಲ್ಯಾಣಕ್ಕಾಗಿ ಅವರು ತಮ್ಮ ಪವಿತ್ರ ದೇಹಗಳನ್ನು ಸವಿಸಲು ನಿರ್ಧರಿಸಿದ್ದಾರೆ.

ಸಮಾಜ ಸಂಘಟನೆಗಾಗಿ ಈ ಪ್ರಕಾರ ವೀರ ವ್ರತವನ್ನಾರಂಭಿಸುವ ಆ ಮಹಿಳೆಯರು ಧನ್ಯರಲ್ಲವೆ?

ಅಮೇರಿಕೆಯಲ್ಲಿ ಆಗ್ರಾ ತಾಜಮಹಾಲ.

ಸ್ತ್ರೀಯಳ ಮಹತ್ವಾಕಾಂಕ್ಷೆ.

ಜಗದೊಳಗಿನ ಏಳು ಸೋಜಿಗಗಳಲ್ಲಿ ಆಗ್ರಾದಲ್ಲಿರುವ ತಾಜಮಹಾಲ ಕಟ್ಟಡವು ಪ್ರಾಮುಖ್ಯವಾದುದಾಗಿದೆಯಷ್ಟೆ. ಇದರ ಸೌಂದರ್ಯವನ್ನು ಕಂಡು ಪಾಶ್ಚಾತ್ಯರು ಆಶ್ಚರ್ಯದಿಂದ ಮುಗ್ಧರಾಗಿ ಹೋಗುತ್ತಾರೆ. ಇದಕ್ಕೊಂದು ಹೊಸದಾದ ಉದಾಹರಣೆಯೆಂದರೆ ಈಗ ಸ್ವಲ್ಪ ದಿವಸಗಳ ಹಿಂದೆ ಅಮೇರಿಕೆಯ ಒಬ್ಬ ಕೋಟ್ಯಾಧೀಶ ಶ್ರೀಮಂತನು ತನ್ನ ಪತ್ನಿಯೊಡನೆ ಹಿಂದುಸ್ಥಾನದಲ್ಲಿ ಪ್ರವಾಸ ಮಾಡಲು ಬಂದಿದ್ದನು. ಅವರು ಆಗ್ರಾದಲ್ಲಿರುವ ತಾಜಮಹಾಲ ನೋಡಿದಾಗ ಅದರ ಅನುಪಮ ರಮಣೀಯತೆಯನ್ನು ಕಂಡು ಕೌತುಕಪಟ್ಟರು. ಆ ಗೌರ ವನಿತೆಯಂತೂ ಮನಸೋತವಳಾಗಿ ತಾನು ಇಂಥ ಅರಮನೆಯಲ್ಲಿಯೇ ವಾಸಿಸುವೆನೆಂದು ಸಂಕಲ್ಪ ಮಾಡಿದಳು. ಸಂಕಲ್ಪಕ್ಕೇನು ಸ್ತ್ರೀಯರಲ್ಲಿ ಕೊರತೆಯೆ? ದುಡ್ಡಿಲ್ಲದವಳಾಗಿದ್ದರೆ ಅವಳ ಆಕಾಂಕ್ಷೆಗಳು ಗಾಳಿಗೋಪುರಗಳೇ ಆಗುತ್ತಿದ್ದವು. ಆದರೆ ಅಪಾರ ದ್ರವ್ಯ ಬಲವಿದ್ದುದರಿಂದ ಅವಳು ದಿಲ್ಲಿಯ ಒಬ್ಬ ಪ್ರಸಿದ್ಧ ಕಲಾಕೋವಿದನನ್ನು ಕೆಲಸಕ್ಕೆ ನಿಯಮಿಸಿ ತಾಜಮಹಾಲದ ನಕಾಶವನ್ನು ಬರೆಯಿಸಿದಳು. ಫ್ಲಾರಿಂಡಾದಲ್ಲಿ ಅವಳು ತಾನು ವಾಸಿಸುತ್ತಿದ್ದ ಸುಂದರ ಅರಮನೆಯನ್ನು ಕೆಡವಿಸಿ ಅದರ ಸ್ಥಾನದಲ್ಲಿ ಪ್ರತಿ ತಾಜಮಹಾಲನ್ನು ನಿರ್ಮಿಸಲು ಸಿದ್ಧಳಾಗಿರುವಳು. ಈಗಾಗಲೆ ತಾಜಮಹಾಲಿನಲ್ಲಿರುವಂಥ ಸಂಗಮರವರಿ ಕಿಡಿಕಿ ಬಾಗಿಲುಗಳನ್ನು ಮಾಡಲು ಪ್ರಾರಂಭವಾಗಿದೆ.

ತಾಜಮಹಾಲ ಭವನವು ಶಹಾಜಹಾನ ಬಾದಶಹನ ಅಗಾಧವಾದ ಪವಿತ್ರ ಪತ್ನಿಪ್ರೇಮದ ಕುರುಹಾಗಿದೆ. ಆದದರಿಂದಲೇ ಅದಕ್ಕೊಂದು ದಿವ್ಯ ಸೌಂದರ್ಯವು ಪ್ರಾಪ್ತವಾಗಿದೆ. ಹಿಂದೀ ಜನರ ಇಂಥ ಕಲಾಕುಶಲತೆಯನ್ನು ಅಮೇರಿಕನ್ನರು ತಮ್ಮ ವಿಜ್ಞಾನ ಶಾಸ್ತ್ರ ಬಲದಿಂದ ಮಾಡಿ ತೋರಿಸುವರೋ ಹೇಗೆ ನೋಡಬೇಕು.

ಇಂಗ್ಲಂಡಿಗೆ ಹೋದ ಪ್ರಥಮ ಹಿಂದೀ ಸ್ತ್ರೀ.

ವೀರಶೈವಳೇ ಮೊದಲಿಗಳೆ?

ಈಗ ಕೆಲವು ದಿವಸಗಳ ಪೂರ್ವದಲ್ಲಿ 'ಟಾಯಿಮ್ಸ ಆಫ್ ಇಂಡಿಯಾ' ಪತ್ರಿಕೆಯಲ್ಲಿ ಹಿಂದುಸ್ಥಾನದಿಂದ ಎಲ್ಲಕ್ಕೂ ಮೊದಲು ಇಂಗ್ಲಂಡಕ್ಕೆ ಯಾವ ಸ್ತ್ರೀಯು ಹೋದಳೆಂದು ಚರ್ಚಿಸಲಾಯಿತು. ಅವಾಗ್ಗೆ ೧೮೫೨ನೆಯ ಇಸ್ವಿಯಲ್ಲಿ ಹೋದ ಕೊಡಗಿನ ರಾಣಿಯೇ ಪ್ರಥಮಳೆಂದು ಒಬ್ಬರ ಮತ. ಅದಕ್ಕೂ ಪೂರ್ವದಲ್ಲಿ ಅಂದರೆ ೧೮೪೨ ನೆಯ ಇಸ್ವಿಯಲ್ಲಿ ಒಬ್ಬ ಸ್ತ್ರೀಯು ಹಿಂದುಸ್ಥಾನದಿಂದ ಹೋಗಿದ್ದಳೆಂದು ಇನ್ನೊಬ್ಬರ ಮತವಾಯಿತು. ಕೊಡಗಿನ ರಾಣಿಯು ವೀರಶೈವಳು. ಅವಳ ಹೆಸರು ಗೌರಮ್ಮ. ಅವಳೂ ಅವಳ ಮನೆತನದವರೂ ಇಂಗ್ಲಂಡಿನಲ್ಲಿ ಕ್ರಿಸ್ತೀಯರಾದರಂತೆ. ಅದಕ್ಕಾಗಿ ಅವಳಿಗೆ ವ್ಹಿಕ್ಟೋರಿಯಾ ಗೌರಮ್ಮ ಎಂಬ ಹೆಸರು ಅಲ್ಲಿ ಕೊಡಲ್ಪಟ್ಟಿದೆ. ಅನಂತರ ಅಯೋಧ್ಯೆಯ ನವಾಬನ ತಾಯಿಯು ೧೮೫೬ ರಲ್ಲಿ ಹೋದಳು. ೧೮೬೩ ರಲ್ಲಿ ಇಬ್ಬರು ಪಾರ್ಸಿ ಸ್ತ್ರೀಯರು ಹೋದರು. ೧೮೭೧ ರಲ್ಲಿ ಶ್ರೀ. ಶಶಿಪಾದ ಬ್ಯಾನರ್ಜಿ ಎಂಬವರು ತಮ್ಮ ಪತ್ನಿಯೊಡನೆ ಹೋಗಿದ್ದರು. ಅಲ್ಲಿಯೇ ಅವರ ಪುತ್ರ ಅಲ್ಬಿಅನ್ ಬ್ಯಾನರ್ಜಿ ಎಂಬವನು ಹುಟ್ಟಿದನು. ಇಂಗ್ಲಂಡದಲ್ಲಿ ಜನ್ಮಿಸಿದ ಹಿಂದೀ ಸಂತತಿಯಲ್ಲಿ ಇವನೇ ಮೊದಲಿಗನಂತೆ.

—ಶ್ರೀಮತಿ ಕಮಲಾ ನೆಹರು ಇವರು ತಮ್ಮ ಪುತ್ರಿ ಇಂದಿರಾ ನೆಹರು ಇವರೊಡನೆ ೨೩ ನೆಯ ತಾರೀಖಿನ ದಿವಸ ಇಟಲಿಯ ಉಗಿ ಹಡಗದಲ್ಲಿ ಕುಳಿತು ಪರದೇಶಕ್ಕೆ ಪ್ರಯಾಣ ಬೆಳಸಿದರು. ಇವರಿಗೆ ನಿರೋಪಕೊಡಲು ಗಾಂಧೀಜಿಯವರೂ, ಶ್ರೀ ವಲ್ಲಭಭಾಯಿಯವರೂ ಮುಂಬಯಿಗೆ ಬಂದಿದ್ದರು.

ಬೀದರ ಭಾಗದ ವೀರಶೈವರ ಸ್ಥಿತಿ.

ನೈಜಾಮ ರಾಜ್ಯದಲ್ಲಿ ತೆಲಗು, ಕನ್ನಡ ಮತ್ತು ಮರಾಠಿ ಈ ಮೂರು ಭಾಷೆಗಳು ಮುಖ್ಯವಾಗಿವೆ. ಕನ್ನಡ ಮಾತನಾಡುವವರ ಸಂಖ್ಯೆ ೧೬ ಲಕ್ಷ ಇದೆ. ಇದರಲ್ಲಿ ಅರ್ಧದಷ್ಟು ಜನರು ವೀರಶೈವರು. ಆದಕಾರಣ ನೈಜಾಮ ಕರ್ನಾಟಕದ ಅಭಿವೃದ್ಧಿಯು ಹೆಚ್ಚಾಗಿ ಅಲ್ಲಿಯ ವೀರಶೈವರನ್ನೇ ಅವಲಂಬಿಸಿದೆಯೆಂದು ಧಾರಾಳವಾಗಿ ಹೇಳಬಹುದು.

ನೈಜಾಮ ರಾಜ್ಯದ ವೀರಶೈವರು ಬ್ರಿಟಿಶ್ ಮತ್ತು ಮೈಸೂರ ಪ್ರಾಂತಗಳ ವೀರಶೈವರಿಗಿಂತ ವಿದ್ಯೆ, ನಾಗರೀಕತೆ ಮೊದಲಾದವುಗಳಲ್ಲಿ ಬಹು ಹಿಂದುಳಿದಿದ್ದಾರೆ. ಅಲ್ಲಿಯ ಸರಕಾರದವರು ಕೊಟ್ಟಿರುವಷ್ಟು ವಿದ್ಯಾ ವಿಷಯಕವಾದ ಸೌಲಭ್ಯಗಳನ್ನು ಕೂಡಾ ಹೊಂದಿರುವುದಿಲ್ಲ. ವಿದ್ಯಾವಿಹೀನವಾದ ಈ ಜನಾಂಗವು ಹೊಂದುತ್ತಿರುವ ಮಾನಹಾನಿ ಮತ್ತು ಧನಹಾನಿಗಳನ್ನು ನೋಡಿದರೆ ತುಂಬಾ ವಿಷಾದವಾಗದಿರಲಾರದು.

"ಶಿವಭಕ್ತರ ನೋವೇ ಅದೇ ಲಿಂಗದ ನೋವು" ಎಂಬ ಬಸವ ಮಹಾತ್ಮನ ದಿವ್ಯ ವಾಣಿಯ ಕಡೆಗೆ ಲಕ್ಷಿಸುವ ವೀರಶೈವರಿಗೆ ಆ ಭಾಗದ ನಮ್ಮ ಸಮಾಜ ಬಂಧುಗಳ ದುಃಖ ನಿವಾರಣೆಗಾಗಿ ಪ್ರಯತ್ನಿಸುವುದು ಪ್ರಥಮ ಕರ್ತವ್ಯವೆಂದೇ ವ್ಯಕ್ತವಾಗದಿರಲಾರದು. ನೈಜಾಮ ರಾಜ್ಯದ ಬೀದರ ಭಾಗದಲ್ಲಿರುವ ವೀರಶೈವರಂತೂ ಆ ರಾಜ್ಯದ ಬೇರೆ ಭಾಗಗಳಲ್ಲಿರುವ ವೀರಶೈವರಿಗಿಂತ ಹಿಂದುಳಿದಿದ್ದಾರೆ. ಇವರ ಏಳಿಗೆಗಾಗಿ ಹೆಚ್ಚಾಗಿ ಪ್ರಯತ್ನಿಸಬೇಕಾದುದು ವೀರಶೈವ ಸಮಾಜಕ್ಕೆ ಮಾತ್ರವೇ ಹಿತಕರವಾದುದೆಂದಲ್ಲ; ಕನ್ನಡ ನಾಡು ಮತ್ತು ಸಂಸ್ಕೃತಿಗಳ ರಕ್ಷಣೆಗೂ ಅತ್ಯವಶ್ಯಕವಾಗಿದೆ.

ಭಾಷೆಯ ಸ್ಥಿತಿ.

ಈ ಭಾಗವು ಅಚ್ಚ ಕನ್ನಡ. ಆದರೆ ದಿನೇ ದಿನೇ ಕನ್ನಡ ಭಾಷೆಯು ಈ ಭಾಗದಲ್ಲಿ ಲೋಪವಾಗುತ್ತಾ ನಡೆದಿದೆ. ಮೊದಲು ಕನ್ನಡವನ್ನೇ ಬರೆಯುತ್ತಿದ್ದರು. ಈ ಭಾಗದಲ್ಲಿ ಶಿವಶರಣರ ವಚನ ಗ್ರಂಥಗಳು ಕೈಬರವಣಿಗೆಯಲ್ಲಿ ಬಹಳವಾಗಿವೆ ಈಗಿನ ವೀರಶೈವರಿಗೆ ಕನ್ನಡ ಓದು ಬರಹಗಳು ಬಹು ಮಟ್ಟಿಗೆ ಬಾರದಂತಾಗಿವೆ. ಮರಾಠಿ ಬರವಣಿಗೆಯೇ ಇಲ್ಲಿ ಪ್ರಚಾರ. ಇವರು ಮಾತನಾಡುವ ಕನ್ನಡವು ಕೂಡಾ ಮೂರು ಬಣ್ಣಗಳಿಂದ ಕೂಡಿದುದು.

'ಆ ಪೋರಗೆ ಧಡ ಇದೂ ಬಿ ಖೂನ ಇಲ್ಲ. ಧಡ ಅದೂ ಬಿ ಖೂನ ಇಲ್ಲ.' ಎಂದರೆ ಆ ಹುಡುಗನಿಗೆ ಅದೂ ಗೊತ್ತಿಲ್ಲ; ಇದೂ ಗೊತ್ತಿಲ್ಲ. ಎಂದು ಹೇಳಿದಂತಾಯಿತು. ಈ ವಾಕ್ಯದಲ್ಲಿ ಕನ್ನಡ, ಮರಾಠಿ, ಹಿಂದಿ ಈ ಮೂರೂ ಭಾಷೆಗಳು ಕೂಡಿವೆ. ಈ ರೀತಿಯಾದ ಕನ್ನಡ ಭಾಷೆ ಮಾತಿನಲ್ಲಿ ಮಾತ್ರ ಉಳಿದಿದೆ. ಇನ್ನು ಕೆಲವು ದಿನಗಳ ನಂತರ ಇಷ್ಟು ಕೂಡಾ ಉಳಿಯುವಂತೆ ತೋರುವುದಿಲ್ಲ.

ಹಿಂದಿ ಪ್ರಚಾರಕ ಸಂಘದವರು ಮದ್ರಾಸ ಪ್ರಾಂತದಂತಹ ಹಿಂದಿ ಭಾಷೆಯ ಸುಳುವು ಕೂಡಾ ಇಲ್ಲದ ಪ್ರದೇಶದಲ್ಲಿ ಹೋಗಿ ಹಿಂದಿ ಕಲಿಸಿ ತಮ್ಮ ಭಾಷೆಯನ್ನು ಪ್ರಚಾರಗೊಳಿಸುತ್ತಿದ್ದಾರೆ, ಆದರೆ ಕನ್ನಡಿಗರು ತಮ್ಮ ಭಾಷೆಯನ್ನು ಉಳಿಸಿಕೊಳ್ಳಲಿಕ್ಕಾದರೂ ಇಂತಹ ಗಡಿನಾಡುಗಳಲ್ಲಿ ಕನ್ನಡ ಪ್ರಚಾರಕರನ್ನು ನಿಯಮಿಸುವುದು ಅತ್ಯಗತ್ಯವಲ್ಲವೆ? ಈ ಭಾಗದ ವೀರಶೈವರಿಗೆ ಕನ್ನಡ ಓದು ಬರಹಗಳನ್ನು ಕಲಿಸುವುದು ಸುಲಭ ಸಾಧ್ಯ. ಈ ಕಾರ್ಯಕ್ಕೆ ವೀರಶೈವ ತರುಣ ಸುಶಿಕ್ಷಿತರು ಮುಂದಾಳುಗಳಾಗಬೇಕು. ನಿರುದ್ಯೋಗಿಗಳಾಗಿ ಅತ್ತಿತ್ತ ಅಲೆದಾಡುತ್ತಿರುವುದಕ್ಕಿಂತ ಮರಾಠಿ ಗಡಿನಾಡಿನ ಕನ್ನಡ ಪ್ರದೇಶಗಳಲ್ಲಿ ಹೋಗಿ ಹಿಂದಿ ಪ್ರಚಾರಕರಂತೆ ಕನ್ನಡವನ್ನು ಪ್ರಸಾರಗೊಳಿಸಬೇಕು. ಇದರಿಂದ ಇವರ ಜೀವನವೂ ಸಾಗುವುದಲ್ಲದೆ ನಾಡಿನ ಸೇವೆಯನ್ನೂ ಮಾಡಿದಂತಾಗುತ್ತದೆ. ಸಾಹಸಿಗಳಾದ ಕನ್ನಡ ನಾಡಿನ ಸುಶಿಕ್ಷಿತ ತರುಣರು ಇತ್ತ ಲಕ್ಷಿಸುವರೇ?

ಧಾರ್ಮಿಕ ಸ್ಥಿತಿ.

ಧಾರ್ಮಿಕ ಆಚಾರ ವಿಚಾರಗಳಂತೂ ಬಹು ಕಡಿಮೆ. ಧಾರ್ಮಿಕ ಮೃಳ್ಳತನ, ಘಾತಕ ರೂಢಿಗಳು ಅತ್ಯಧಿಕ. ಸಮಾಜದ ಒಳಪಂಗಡಗಳಲ್ಲಿ ಹೋರಾಟ ಹೆಚ್ಚು. ಇದರಿಂದ ಸಮಾಜದ ಶಕ್ತಿಯೆಂಬುದೊಂದು ಆ ಭಾಗದಲ್ಲಿ ಇಲ್ಲವೇ ಇಲ್ಲ. ಈ ಶೋಚನೀಯ ಸ್ಥಿತಿಯಿಂದ ವೀರಶೈವ ಮತವೊಂದೇ ನಷ್ಟವಾಗುತ್ತಾ ಇಲ್ಲ; ಹಿಂದು ಸಂಸ್ಕೃತಿಯೂ ಅಳಿಯುತ್ತಾ ಇದೆ.

ಬೀದರ ಜಿಲ್ಲಾ ಸ್ಥಳ ಬಹು ವಿಶಾಲವಾಗಿಯೂ ಸೊಗಸಾಗಿಯೂ ಇದೆ. ಇಲ್ಲಿ ವ್ಯಾಪಾರ ಹೆಚ್ಚು. ಸಾಧಾರಣ ೧೨ ಸಾವಿರದ ವರೆಗೆ ಜನಸಂಖ್ಯೆಯಿದೆ. ಅರ್ಧಕ್ಕಿಂತ[illegible]ರಿದ್ದಾರೆ. ವೀರಶೈವರ ಸಂಖ್ಯೆ ಸಾಧಾರಣ ೩ ಸಾವಿರದ ವರೆಗಿದೆ. ಪ್ರಮುಖ ವ್ಯಾಪಾರಿಗಳೂ ಇದ್ದಾರೆ. ಆದರೆ ಅನ್ಯ ಮತೀಯರಂತೆ ಇವರಲ್ಲಿ ಒಕ್ಕಟ್ಟಿಲ್ಲ.

ಇಲ್ಲಿ ಎರಡು ಮಠಗಳಿವೆ. ಒಂದು ವಿರಕ್ತ ಮಠವನ್ನು ಒಬ್ಬ ಮುಸಲ್ಮಾನ್ ಗೃಹಸ್ಥನಿಗೆ ಆ ಮಠದವರು ಮಾರಿಬಿಟ್ಟಿದ್ದಾರೆ! ಇನ್ನೊಂದು ಹೆಂಡಿ ಮಠ. ಇದು ಹೆಸರಿಗೆ ತಕ್ಕಂಥ ದುರವಸ್ಥೆಯಲ್ಲಿದೆ. ಇಲ್ಲಿಯ ವ್ಯಾಪಾರದಲ್ಲಿ ಹಿಂದುಗಳು ತೆಗೆಯುತ್ತಿದ್ದ ಧರ್ಮಾದಾಯ ಹಣದಲ್ಲಿ ಅರ್ಧ ಭಾಗವು ವೀರಶೈವರಿಗೂ ಇನ್ನುಳಿದ ಅರ್ಧ ಭಾಗ ವೈಶ್ಯರು, ಮತ್ತು ಮಾರವಾಡಿಗಳಿಗೂ ಸಲ್ಲಬೇಕೆಂದು ಗೊತ್ತುಮಾಡಿಕೊಂಡಿದ್ದಾರೆ. ಆ ಪ್ರಕಾರ ವೀರಶೈವರು ಮಾತ್ರ ಆ ಹಣವನ್ನು ಎತ್ತಿ ಯಾವ ಸಮಾಜ ಕಾರ್ಯವನ್ನೂ ಮಾಡಿಕೊಂಡಿಲ್ಲ. ಪಾಠಶಾಲೆಗಾಗಿ ತೆಗೆದುಕೊಂಡ ಕಟ್ಟಡ ಬಿದ್ದು ಹೋಗುತ್ತಿದ್ದರೂ ಅದನ್ನು ಕಟ್ಟಿಸಲು ೬ ವರುಷಗಳಿಂದಲೂ ಪರವಾನಗಿ ಹೊಂದಿಲ್ಲ! ಈ ದುರವಸ್ಥೆಯ ನಿವಾರಣೆಗಾಗಿ ಶ್ರೀಮಂತ ಷೇಣೆ ಶರಣಪ್ಪನವರು, ಶ್ರೀ. ಮಲಾಣಿ ವಿಠ್ಠಲದಾಸಜಿಯವರು, ಶ್ರೀ. ಗುರಪ್ಪ ತೂಗಾಯಿ, ಶ್ರೀ. ವೀರಶೆಟ್ಟಿ ಚಂದಾ, ಶ್ರೀ. ಗುರಪ್ಪ ವಕೀಲ ಸಾಹೇಬ, ಶ್ರೀ. ಶಿವರುದ್ರಪ್ಪ ವಕೀಲ ಸಾಹೇಬ, ಶ್ರೀ. ರೇವಪ್ಪ ರಾಗಾ ಇವರುಗಳಿಂದ ಕೂಡಿದ ಒಂದು ಕಮಿಟಿಯು ಮೊನ್ನೆ ತಾನೆ ಏರ್ಪಟ್ಟದ್ದಾಯಿತು. ಇವರು ಈ ಸಾರ್ವಜನಿಕ ಕಾರ್ಯವನ್ನು ಇಷ್ಟರಲ್ಲೇ ಮಾಡುವವರಿದ್ದಾರೆ.

ಆರ್ಯ ಸಮಾಜ.

ಈ ಭಾಗದಲ್ಲಿ ಆರ್ಯ ಸಮಾಜದ ವಿಚಾರ ಪ್ರಸಾರ ವಿಶೇಷ. ವೀರಶೈವರೇ ಈ ಕಾರ್ಯದಲ್ಲಿ ಮುಂದಾಳುಗಳು. ಉದ್ಗೀರಿಯು ತಾಲೂಕು ಸ್ಥಳ. ಇಲ್ಲಿ ೮ ಸಾವಿರದ ವರೆಗೆ ಜನಸಂಖ್ಯೆಯಿದೆ.

ಲಿಂಗಾಯತರೂ ಹೆಚ್ಚಾಗಿದ್ದಾರೆ. ಆರ್ಯ ಸಮಾಜಕ್ಕೆ ಇದೇ ಕೇಂದ್ರ ಸ್ಥಳ, ಕಳೆದ ೬-೭ ವರುಷಗಳಲ್ಲಿ ಇಲ್ಲಿಯ ಆರ್ಯ ಸಮಾಜವು ಅದ್ಭುತ ಕಾರ್ಯವನ್ನು ಮಾಡಿದೆ. ಹಿಂದುಗಳಲ್ಲಿ ಬಲವಾದ ಸಂಘಟನೆಯನ್ನೂ ಆತ್ಮ ವಿಶ್ವಾಸವನ್ನೂ ಉಂಟು ಮಾಡಿದೆ. ಈ ವರೆಗೆ ಸಾಧಾರಣ ೧೧೫ ಜನರನ್ನು ಶುದ್ಧಗೊಳಿಸಿ ಆರ್ಯ ಸಮಾಜದಲ್ಲಿ ಸೇರಿಸಿಕೊಂಡಿದೆ.

ಇಲ್ಲಿಯ ವೀರಶೈವ ಪ್ರಮುಖರೂ ಸುಶಿಕ್ಷಿತರೂ ಆದ ಶ್ರೀ ಸಂಗಪ್ಪನಪ್ಪ ವಕೀಲ ಸಾಹೇಬ, ಶ್ರೀ. ಪ್ರಭುರಾವ ವಕೀಲ ಸಾಹೇಬ, ಶ್ರೀ. ರಾಚಯ್ಯ ಸ್ವಾಮಿ ಹುಂಡೇಕಾರ ಮೊದಲಾದವರು ಹಿಂದು ಸಂಘಟನೆಯ ದೃಷ್ಟಿಯಿಂದ ಈ ವರೆಗೂ ಆರ್ಯ ಸಮಾಜದ ಕಾರ್ಯವನ್ನು ಮಾಡುತ್ತಾ ಬಂದಿದ್ದರು. ಇವರೇ ಇಲ್ಲಿಯ ಆರ್ಯ ಸಮಾಜದ ಕಾರ್ಯ ಚಾಲಕರು,

ಕಳೆದ ನಾಲ್ಕಾರು ವರುಷಗಳಿಂದಲೂ ಆರ್ಯ ಸಮಾಜದ ಅನೇಕ ಮಹಾ ಮಹಾ ಪಂಡಿತರ ವ್ಯಾಖ್ಯಾನಗಳನ್ನು ಕೇಳಿ ಕೇಳಿ ಇಲ್ಲಿಯ ಜನರು ನೈಜಾಮುದ ಯಾವ ಸ್ಥಳದವರಲ್ಲಿಯೂ ಇಲ್ಲದಂತಹ ಧಾರ್ಮಿಕ ಜಾಗೃತಿಯುಳ್ಳವರಾಗಿದ್ದಾರೆ. ಇವರು ಸಭೆ ಮಾಡುವ ರೀತಿ ನೀತಿಗಳೂ ಅನುಕರಣೀಯವಾದವು. ಮೇಲಣ ಸುಶಿಕ್ಷಿತ ಮಹಾಶಯರು ಧಾರ್ಮಿಕ ವಿಷಯದಲ್ಲಿ ಬಹುಶ್ರುತರಾಗಿರುವುದರಿಂದ ಉತ್ತಮ ವ್ಯಾಖ್ಯಾತರೂ ಆಗಿದ್ದಾರೆ. ಈ ಪ್ರಕಾರ ಸಕಲ ಸಂಗತಿಗಳಲ್ಲಿಯೂ ಇಲ್ಲಿಯ ವೀರಶೈವರು ಬಹು ಮುಂದರಿದುದರ ಸಂಪೂರ್ಣ ಶ್ರೇಯಸ್ಸು ಆರ್ಯ ಸಮಾಜಕ್ಕೇನೇ ಸೇರಿದ್ದಾಗಿದೆ. ಆದರೆ ಇಲ್ಲಿಯ ವೀರಶೈವರ ಶಕ್ತಿ ಸಾಹಸಗಳೆಲ್ಲಾ ಬಸವ ಮಹಾತ್ಮನ ಸಮಾಜ ಸುಧಾರಣೆಗಿಂತಲೂ ಕಡಿಮೆ ತರ [illegible] ದಯಾನಂದರ ಸಂಸ್ಕೃತಿಗಳ ಸುಧಾರಣೆಯನ್ನು ಮೆಚ್ಚುವಾಗುತ್ತಿತ್ತು.

ಕಳೆದ ಶಿವರಾತ್ರಿಯ ಕಾಲಕ್ಕೆ ಕೆಲವರು ಮುಂದಾಲೋಚನೆಯಿಲ್ಲದೆ ಧಾರ್ಮಿಕ ದುರಭಿಮಾನದಿಂದ ಒಬ್ಬ ಲಿಂಗಾಯತ ತರುಣನ ಲಿಂಗ ತೆಗೆಯಿಸಿ ಜನಿವಾರ ಹಾಕಿಸಿ ಆರ್ಯ ಸಮಾಜಕ್ಕೆ ಸೇರಿಸಿಕೊಳ್ಳಲು ಲಿಂಗಾಯತ ಪ್ರಮುಖರೆಲ್ಲಾ ಆ ಸಮಾಜ ಕಾರ್ಯವನ್ನು ಬಿಟ್ಟು ವೀರಶೈವ ಸಂಘವನ್ನೂ ವ್ಯಾಯಾಮ ಶಾಲೆಯನ್ನೂ ಪ್ರತ್ಯೇಕವಾಗಿ ಸ್ಥಾಪಿಸಿಕೊಂಡದ್ದರಿಂದ ಈಗ ಅಲ್ಲಿಯ ಆರ್ಯ ಸಮಾಜವು ಹೆಸರಿಗೆ ಮಾತ್ರ ಉಳಿಯುವಂತೆ ಕಾಣುತ್ತದೆ. ಕರ್ನಾಟಕದಲ್ಲಿ ಕೆಲಸ ಮಾಡುವ ಆರ್ಯ ಸಮಾಜದವರಿಗೆ ಇದೊಂದು ಕಲಿಯಬೇಕಾದ ಪಾಠವಾಗಿಯೇ ಪರಿಣಮಿಸಿತು.

ಉದ್ಗೀರ್, ಹಳಖೇಡ, ಭಾಲ್ಕಿ ಮೊದಲಾದ ಕೆಲವು ಸ್ಥಳಗಳಲ್ಲಿ ಆರ್ಯ ಸಮಾಜದ ವಿಚಾರ ಜಾಗೃತಿ ಬಹು ಹೆಚ್ಚು. ಲಿಂಗಾಯತರೇ ಈ ಕಾರ್ಯದಲ್ಲಿ ಮುಂದಾಳುಗಳು. ಮೇಲು ಕುಲದ ಲಿಂಗಾಯತನೆಂಬುವವನು ಆರ್ಯ ಸಮಾಜದಲ್ಲಿ ಸಹಭೋಜನಮಾಡಿದರೆ ಆಗಬಹುದು ಆದರೆ ಆತನು ಗಾಣಿಗರೇ ಮೊದಲಾದ ಕೆಲವರ ಮನೆಗೆ ಮಾತ್ರ ಊಟಕ್ಕೆ ಹೋಗಬಾರದು. ಆದೇಕೆಂದರೆ ಅವರು ಕಡಿಮೆ ಕುಲದವರಂತೆ! ಕೆಲವು ಸ್ಥಳಗಳಲ್ಲಿ ಸಜ್ಜನ ಪಂಗಡದವರಿಗೆ ಬಾವಿಯನ್ನು ಕೂಡಾ ಮುಟ್ಟಲು ಪ್ರತಿಬಂಧ. ಇದರಿಂದ ವೀರಶೈವರಲ್ಲಿ ಎಳ್ಳಷ್ಟಾದರೂ ಸಮಾಜಾಭಿಮಾನ ಸಂಘಟನೆಗಳುಂಟಾಗಲು ಅವಕಾಶವಿಲ್ಲ

ಇಂತಹ ಅನೇಕ ದುರವಸ್ಥೆಗಳು ನಿವಾರಣೆಯಾಗಬೇಕಾದರೆ ಆರ್ಯ ಸಮಾಜದವರಂತೆ ವೀರಶೈವ ಮಹಾ ಸಭೆಯವರು ಸಮರ್ಥರಾದ ವೀರಶೈವ ಬೋಧಕರನ್ನು ನಿಯಮಿಸಬೇಕು. ಈ ಕಾಲದ ಇಂತಹ ಸುಶಿಕ್ಷಿತರು ಈ ಭಾಗದಲ್ಲಿ ಪ್ರಯತ್ನಿಸಿದರೇನೇ ಕನ್ನಡ ಭಾಷೆ, ಕನ್ನಡ ಸಂಸ್ಕೃತಿ, ವೀರಶೈವ ಮತಗಳುಳಿಯುವುದು ಶಕ್ಯ. ಇಲ್ಲದಿದ್ದರೆ ಇವೆಲ್ಲಾ ದಿನೇ ದಿನೇ ಲೋಪವಾಗುತ್ತಾ ಹೋಗುವುದರಲ್ಲಿ ಸಂದೇಹವೇ ಇಲ್ಲ.

ಶ್ರೀ. ಉರಲಿಂಗ ಪೆದ್ದಿಗಳು.

ಮಹಾ ಶಿವಾನುಭಾವಿಗಳೂ ಘನ ವಿದ್ವಾಂಸರೂ ಆದ ಶ್ರೀ ಉರಲಿಂಗ ಪೆದ್ದಿಗಳೆಂಬ ಸುಪ್ರಸಿದ್ಧ ವಚನಕಾರರು ಇದೇ ಭಾಗದ ನಾಂದೇಡ ಜಿಲ್ಲಾ ತಾಲೂಕ ಕಂಧಾರದವರೆಂದು ಹೇಳುತ್ತಾರೆ. ಇವರ ಮಠ ಕಲ್ಯಾಣ, ಭಾಲ್ಕಿ, ಕಟಕ ಚಿಂಚೋಳಿ, ಕೊರಳಿ ಮೊದಲಾದ ಸ್ಥಳಗಳಲ್ಲಿವೆಯಂತೆ. ಇವು ಹೊಲಗೇರಿಯಲ್ಲಿರುತ್ತವೆ. ಭಾಲ್ಕಿಯ ಮಠದಲ್ಲಿ ಸ್ವಲ್ಪ ದಿನಗಳ ಹಿಂದೆ ಶಿವಮ್ಮ ಎಂಬ ಮಹಾ ಸುಶೀಲ ಶರಣಮ್ಮ ಇದ್ದಳೆಂದು ಹೇಳುತ್ತಾರೆ. ಈಗ ಅಸ್ಪೃಶ್ಯರೆಂದು ತಿಳಿಯಲ್ಪಡುವ ಹೊಲೆಯರ ಕುಲದಲ್ಲಿ ಈ ಮಠಸ್ಥರು ಹುಟ್ಟಿದ್ದರೂ ಲಿಂಗಧಾರಿಗಳಾಗಿ ಮದ್ಯ ಮಾಂಸಗಳನ್ನು ಬಿಟ್ಟು ಬಹು ಸುಶೀಲರಾಗಿ ನಡೆದುಕೊಳ್ಳುತ್ತಾ ತಮ್ಮ ಕುಲದವರ ಆಚಾರ ವಿಚಾರಗಳನ್ನು ಅವರ ಕೇರಿಯಲ್ಲಿಯೇ ಮಠ ಕಟ್ಟಿಸಿಕೊಂಡಿದ್ದು ಸುಧಾರಿಸುತ್ತಿದ್ದರೆಂದು ತೋರುತ್ತದೆ. ಆ ಮಹಾ ಶಿವ ಶರಣರಾದ ಶ್ರೀ ಉರಲಿಂಗ ಪೆದ್ದಿಗಳೂ ಇದೇ ಕುಲದಲ್ಲಿ ಹುಟ್ಟಿದ್ದರೆಂದು ಊಹಿಸಬಹುದಾಗಿದೆ. ಈ ಸಂಬಂಧವಾಗಿ ಈ ಭಾಗದಲ್ಲಿ ಹೆಚ್ಚು ಶೋಧಗಳಾದರೆ ನಿಜ ಸಂಗತಿಯು ಬೆಳಕಿಗೆ ಬಂದು ಆ ಬಸವಾದಿ ಪ್ರಮಥರ ಅದ್ಭುತ ಕಾರ್ಯಗಳ ಮಹತ್ವವು ಚೆನ್ನಾಗಿ ಗೊತ್ತಾಗಬಹುದು.

ಬಿದನೂರು ಕಾಮಣ್ಣಯ್ಯ ಸೋಮಲಾದೇವಿಯವರ ಮಕ್ಕಳಾದ ವೀರಸಂಗಯ್ಯನವರೆಂಬ ಮಹಾ ಶಿವ ಶರಣರ ಕಥೆಯ ಪ್ರಸಂಗ ಈ ಭಾಗದಲ್ಲಿ ಹೆಚ್ಚು. ಬೀದರ ಕೋಟೆಯ ವೀರಸಂಗಯ್ಯನವರ ಗುಡಿಯಲ್ಲಿ ಇವರ ಒಂದು ಭಾವಚಿತ್ರವೂ ಒರೆಯಲ್ಪಟ್ಟಿದೆ. ಓಂಕಾರ ಪುರದ (ಕೋಹಿರ) ಕ್ಷತ್ರಿಯ ರಾಜನಿಗೂ ಈ ಶರಣರಿಗೂ ನಡೆದ ಅನೇಕ ಪ್ರಸಂಗಗಳನ್ನು ಹೇಳುತ್ತಾರೆ. ಇವುಗಳಲ್ಲಿ ಐತಿಹಾಸಿಕ ಸತ್ಯ ಸಂಗತಿಗಳೂ ಇದ್ದಂತೆ ಕಾಣುತ್ತದೆ. ಇವೆಲ್ಲಾ ಪರಿಶೋಧಿಸತಕ್ಕ ಸಂಗತಿಗಳು

ವರನು ಬೇಕು.

ಹದಿನಾಲ್ಕು ವರ್ಷ ಪ್ರಾಯದ ಸುಂದರಿಯೂ ಗೃಹಕೃತ್ಯದಲ್ಲಿ ನುರಿತವಳೂ ಆದ ಗೌಡ ಸಾರಸ್ವತ ಬ್ರಾಹ್ಮಣ ಕನ್ಯಾ ವಧುವಿಗೆ. ಜೀವನವನ್ನು ಯಾವ ಅಡಚಣೆಯೂ ಇಲ್ಲದೆ ಸಾಗಿಸಬಲ್ಲ ಸ್ವಸಮಾಜದ ವಿದ್ಯಾವಂತ ವರನು ಬೇಕು.

ವರನು ಬೇಕು.

ಹದಿನಾರು ವರ್ಷ ಪ್ರಾಯದ ಸುರೂಪಿಯೂ, ಗೃಹಕೃತ್ಯದಲ್ಲಿ ನಿಪುಣೆಯೂ, ಕನ್ನಡ ಓದು ಬರಹ ಬಲ್ಲವಳೂ ಆದ ಗೌಡ ಸಾರಸ್ವತ ಬ್ರಾಹ್ಮಣ ಕನ್ಯಾ ವಧುವಿಗೆ ೨೨ ವರ್ಷಕ್ಕೆ ಮೀರದ ಸರಕಾರಿ ಉದ್ಯೋಗವಿರುವ ಸ್ವವೃಂದದ ವರನು ಬೇಕು.

ವಧುವು ಬೇಕು.

ಸರಕಾರಿ ಕೆಲಸದಲ್ಲಿ ತಿಂಗಳಿಗೆ ೩೦ ರೂ ಸಂಬಳವಿರುವ ೩೫ ವರ್ಷ ಪ್ರಾಯದ ಆರೋಗ್ಯವಂತರಾದ ಓರ್ವ ಗೌಡ ಸಾರಸ್ವತ ಬ್ರಾಹ್ಮಣ ಯುವಕರಿಗೆ ೨೮ ವರ್ಷಕ್ಕೆ ಮೀರದ ಸುಂದರಿಯೂ, ಗೃಹಕೃತ್ಯಗಳನ್ನು ನಿರ್ವಹಿಸಬಲ್ಲವಳೂ ಆದ ವಿದ್ಯಾವಂತ ವಿಧವೆಯು ಬೇಕು.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಕೆ. ಎಸ್. ಪೈ

ಶಿವಪೇಟೆ ಪುತ್ತೂರು. ದ. ಕ.

ಬಸವಣ್ಣನವರ ವಚನಗಳ ಅನುವಾದ.

SAYINGS OF BASAVANNA.

(ಅನುವಾದಕರು:— ಶ್ರೀ. ಎಂ. ವೆಂಕಟೇಶ ಅಯ್ಯಂಗಾರ್ಯರು ಎಮ್. ಎ.)

ಇದೊಂದು ಬಹು ಸೊಗಸಾದ ಪುಸ್ತಕ. ಮಹಾನುಭಾವರಾದ ಬಸವಣ್ಣನವರ ೧೦೧ ವಚನಗಳನ್ನು ಇಂಗ್ಲಿಷ ಭಾಷೆಗೆ ಅನುವಾದ ಮಾಡಿದ್ದಾಗಿದೆ. ಆರಂಭದಲ್ಲಿ ಬಸವ ಮಹಾನುಭಾವರ ಸಂಕ್ಷಿಪ್ತ ಚರಿತ್ರೆಯನ್ನೂ ಇಂಗ್ಲಿಷಿನಲ್ಲಿ ಕೊಟ್ಟಿದೆ. ಬಸವಣ್ಣನವರ ವಚನಗಳಲ್ಲಿ ಕೆಲವಾದರೂ ಈ ಪ್ರಕಾರ ಇಂಗ್ಲಿಷ ಭಾಷೆಗೆ ಭಾಷಾಂತರಿಸಲ್ಪಟ್ಟು ಪುಸ್ತಕ ರೂಪದಲ್ಲಿ ಪ್ರಕಟವಾದುದು ಇದೇ ಮೊದಲನೆಯದೆಂದು ಹೇಳಬಹುದು. ಈ ಮಹತ್ಕಾರ್ಯವನ್ನು ಮಾಡಿದುದಕ್ಕೋಸ್ಕರ ಶ್ರೀಮಾನ್ ಎಂ ವೆಂಕಟೇಶ ಅಯ್ಯಂಗಾರ್ಯರನ್ನು ನಾವು ಹೃದಯ ಪೂರ್ವಕ ಅಭಿನಂದಿಸುತ್ತೇವೆ.

ಗದಗಿನ ವೀರಶೈವ ತರುಣ ಸಂಘದವರು ಶ್ರೀಮಾನ್ ಎಂ. ವೆಂಕಟೇಶ ಅಯ್ಯಂಗಾರ್ಯರ ಈ ದಿವ್ಯ ಕೃತಿಯನ್ನು ಪುಸ್ತಕ ರೂಪದಲ್ಲಿ ಬೆಳಕಿಗೆ ತಂದುದು ತುಂಬಾ ಶ್ಲಾಘ್ಯವಾದುದು. ಈ ಪುಸ್ತಕವು ಸೊಗಸಾದ ದಪ್ಪನ ಕಾಗದದಲ್ಲಿ ಬಹು ಮುದ್ದಾಗಿ ಮುದ್ರಣವಾಗಿದೆ. ಕ್ರೌನ್ ಅಷ್ಟಮಾಂಶದ ೭೪ ಪುಟಗಳಿವೆ. ಸೆಕ್ಷನ್ ಹೊಲಿಗೆಯಿಂದ ಅಚ್ಚುಕಟ್ಟಾಗಿ ಬೈಂಡ್ ಮಾಡಿದ್ದಾರೆ. ಗದಗಿನ ಶ್ರೀ ಶಿವಾನಂದ ಮುದ್ರಣ ಮಂದಿರದ ಯಜಮಾನರಾದ ಶ್ರೀಯುತ ಮಡಿವಾಳಪ್ಪನವರು ಈ ಪ್ರಕಾರ ಪುಸ್ತಕವನ್ನು ಸರ್ವ ರೀತಿಗಳಿಂದಲೂ ಅಂದಗೊಳಿಸಿ ಮುದ್ರಿಸಿದುದು ಬಹು ಭೂಷಣಪ್ರದವಾದುದು. ವೀರಶೈವ ತರುಣ ಸಂಘದ ಗೌ। ಕಾರ್ಯದರ್ಶಿಗಳಾದ ಶ್ರೀ ಬಸವಣ್ಣೆಪ್ಪ ಬಿ. ಹುಬ್ಬಳ್ಳಿ ಎಂಬುವವರು ಪ್ರಕಾಶಕರು. ಕ್ರಯ ೪ ಆಣೆ. ಇಂಗ್ಲಿಷ ಬಲ್ಲವರೆಲ್ಲರೂ ಅಗತ್ಯವಾಗಿ ಸಂಗ್ರಹಿಸಿಡಬೇಕಾದುದು ಕಾಲೇಜ್ ವಿದ್ಯಾರ್ಥಿಗಳಂತೂ ಅಗತ್ಯವಾಗಿ ಓದಬೇಕಾದುದು.

ಮೊದಲು ಕನ್ನಡ ವಚನವೂ ಅದರ ಕೆಳಗೆ ಇಂಗ್ಲಿಷ ಅನುವಾದವೂ ಇದೆ ನಮ್ಮ ವಾಚಕರಿಗೂ ತಿಳಿಯಲೆಂದು ಅವುಗಳನ್ನು ಕ್ರಮವಾಗಿ ಪ್ರತಿವಾರವೂ ಪ್ರಕಟಿಸಲಾಗುವುದು.

೧ ಅಯ್ಯಾ! ಅಯ್ಯಾ! ಎಂದು ಕರೆವುತ್ತಲಿದ್ದೇನೆ. ಅಯ್ಯಾ! ಅಯ್ಯಾ! ಎಂದು ಒರಲುತ್ತಲಿದ್ದೇನೆ. ಓ ಎನ್ನಲಾಗದೆ ಅಯ್ಯಾ! ಆವಾಗಳೂ ನಿಮ್ಮುವ ಕರೆವುತ್ತಲಿದ್ದೇನೆ ಓ ಎನ್ನದೆ ಮೌನವೇ ಕೂಡಲ ಸಂಗಮದೇವಾ?

"'Lord, lord,' I am crying; 'Lord, lord,' I am wailing; O Lord, why not answer in reply? I am always calling to you; why are you silent? Why do you not answer? O God, My God Kudala Sangama."

೨ ನೀವು ಹುಟ್ಟಿಸಿದಲ್ಲಿ ಹುಟ್ಟಿ ನೀ ಕೊಂದಲ್ಲಿ ಸಾಯವೆ, ಎನ್ನವಶವೇ ಅಯ್ಯ! ನೀವಿರಿಸಿದಲ್ಲಿ ಇರದೆ, ಎನ್ನವಶವೇ ಅಯ್ಯಾ? ಅಕಟಕಟಾ, ಎನ್ನವನೆನ್ನವನೆನ್ನಯ್ಯ ಕೂಡಲ ಸಂಗಮದೇವಯ್ಯ.

"Was it in my power to be born where I, not you, wished? Or can I die but where you end me? Is it in my power to be but where you keep me? Alas! O God Kudala Sangama, say I am yours; call me yours."

೩ ಅಕಟಕಟ, ಶಿವ ನಿನಗಿನಿತು ಕರುಣವಿಲ್ಲ. ಅಕಟಕಟ, ಶಿವ ನಿನಗಿನಿತು ಕೃಪೆ ಇಲ್ಲ. ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ, ಪರಲೋಕ ದೂರನ? ಏಕೆ ಹುಟ್ಟಿಸಿದೆ ಕೂಡಲ ಸಂಗಮದೇವ ಕೇಳಯ್ಯಾ, ಎನಗಾಗಿ ಮತ್ತೊಂದು ತರುಮರಾದಿಗಳಿಲ್ಲವೇ?

"Alas! My master, you are without any pity. Alas! My God, you have no mercy. Why did you make me such a travailer on the earth? Why did you create me hopeless of heaven? Why did you give me birth? O God Kudala Sangama, listen and tell me. Could you not have made some plant or tree rather than me?"

೪ ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ, ಅಂಬಾ, ಅಂಬಾ ಎಂದು ಕರೆಯುತ್ತಲಿದ್ದೇನೆ. ಅಕ್ಕೆ ಒರಲುತ್ತಲಿದ್ದೇನೆ. ಕೂಡಲ ಸಂಗಮದೇವಾ. ... ನ್ನಕ್ಕರ

"Like the cow which has lost its way in the jungle I am crying Amba, Amba. I shall be calling, God Kudala Sangama, until you tell me 'Live thou and be immortal."

೫ ನೀನೊಲಿದರೆ, ಕೊರಡು ಕೊನರುವದಯ್ಯಾ! ನೀನೊಲಿದರೆ ಬರಡು ಹಯನಹುದಯ್ಯಾ! ನೀನೊಲಿದರೆ ವಿಷವೆಲ್ಲ ಅಮೃತವಹುದಯ್ಯಾ! ನೀನೊಲಿದರೆ ಸಕಲ ಪಡಿಪದಾರ್ಥ ಇದಿರಲ್ಲಿಪ್ಪವು, ಕೂಡಲ ಸಂಗಮದೇವಾ.

"If you are gracious, the dry stick will give forth shoots. If you are gracious, the dry cow will give milk. With your grace, poison would become ambrosia. With your grace, all good would be at hand. O God Kudala Sangama."

೬ ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತು. ಕೊಂದಿಹರೆಂಬುದನರಿಯದೆ, ಬೆಂದೊಡಲ ಹೊರೆಯುತ್ತಲಿದೆ.

"The lamb that is brought to slaughter eats the leaf tied for decoration; not knowing that it is brought to die, it feeds its pitiful carcass."

—(ಮುಂದುವರಿಯುವದು.)—



ಶಾ. ಶ. ೧೮೫೭ ನೆಯ ವೈಶಾಖ ಬ|| ೧೦ ಸೋಮವಾರ.

ನಮಗೆಂದು ಸ್ವಾತಂತ್ರ್ಯ?

[illegible] ಯ ಸ್ವಾತಂತ್ರ್ಯ ಬೇಕಾಗಿದೆಯಷ್ಟೆ. ಎಂದರೆ ಯಾರಿಗೆ? ಹಿಂದುಸ್ಥಾನದಲ್ಲಿರತಕ್ಕ ಎಲ್ಲಾ ಧರ್ಮ ಮತ ಪಂಥದವರಿಗಷ್ಟೆ. ಇದೇನೋ ಹೇಳತಕ್ಕ ಮಾತಾಯಿತು. ಇರತಕ್ಕ ಸ್ಥಿತಿ ಹೇಗೆ? ಹಿಂದುಸ್ಥಾನದಲ್ಲಿ ಪ್ರಬಲವಾದ ಮುಸಲ್ಮಾನ್ ಜನಾಂಗಕ್ಕೆ ಈಗಲೇ ಸ್ವಾತಂತ್ರ್ಯ ಬೇಕಾಗಿಲ್ಲ. ಅಂತೆಯೇ ಅದು ಸ್ವಾತಂತ್ರ್ಯದ ಶಾಂತಿ ಯುದ್ಧದಲ್ಲಾಗಲಿ ಅಥವಾ ಬೇರೆ ರಾಜಕೀಯ ಆಂದೋಲನದಲ್ಲಾಗಲಿ ಮುಂದೆ ಬಂದಿಲ್ಲ.

ಈಗಲೇ ಸ್ವಾತಂತ್ರ್ಯ ದೊರೆತರೆ ಹಿಂದುಗಳಿಂದ ತಾವು ತುಳಿಯಲ್ಪಡಬಹುದೆಂತಲೂ ಅದಕ್ಕಾಗಿ ಇಂಗ್ಲಿಷರ ಪ್ರಭುತ್ವದಲ್ಲಿಯೇ ತಾವು ಇನ್ನೂ ಹೆಚ್ಚಾದ ಸಂಘಟನೆ, ಶಕ್ತಿ, ಸೌಲಭ್ಯಗಳನ್ನು ಹೊಂದಿ ತುಂಬಾ ಬಲಶಾಲಿಗಳಾಗಬೇಕೆಂದೂ ಆ ಸಮಾಜವು ಬೇರೆಯಾಗಿ ನಿಂತು ಅತ್ತ ಸರಕಾರಕ್ಕೂ ಇತ್ತ ಹಿಂದು ಜನಾಂಗಕ್ಕೂ ತನ್ನ ಸಹಾಯದ ಆಸೆಯನ್ನು ತೋರಿಸುತ್ತಾ ಅನೇಕ ಸೌಲಭ್ಯಗಳನ್ನು ಎರಡೂ ಕಡೆಯಿಂದ ಹೊಂದಿ ಬಲಪಡುತ್ತಲಿದೆ.

ಆದಿ ಜನರೇ ಮೊದಲಾದ ಹಿಂದುಳಿದ ಅನೇಕ ಹಿಂದುಗಳಿಗು ಕೂಡಾ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರೆತರೆ ಸವರ್ಣೀಯರು ಮತ್ತೆ ನಮ್ಮನ್ನೆಲ್ಲ ತುಳಿಯುತ್ತಾರೆಯೋ ಎಂಬ ಭೀತಿಯು ಇದ್ದೇ ಇದೆ. ಆದುದರಿಂದ ಸರಕಾರದ ಬೆಂಬಲವನ್ನು ಬಿಟ್ಟು ಸ್ವಾತಂತ್ರ್ಯ ಸಂಗ್ರಾಮದ ಕ್ಷೇತ್ರಕ್ಕೆ ಬರಲು ಸಿದ್ಧರಾಗಿಲ್ಲ.

ಹಿಂದು ಮುಸಲ್ಮಾನರ ಐಕ್ಯ ಮತ್ತು ಅಸ್ಪೃಶ್ಯತಾ ನಿವಾರಣೆಗಳ ವಿನಾ ನಮಗೆ ಸ್ವಾತಂತ್ರ್ಯವಿಲ್ಲವೆಂದು ಮಹಾತ್ಮಾ ಗಾಂಧಿಯವರು ಮೊದಲಿನಿಂದಲೂ ಹೇಳುತ್ತ ಬಂದಿರುವುದರ ಗುಟ್ಟಾದರೂ ಇದೇ ಸರಿ. ಕಳೆದ ೧೫ ವರುಷಗಳಿಂದ ನಡೆದ ಪ್ರಯತ್ನಗಳ ಫಲಿತಾಂಶವೇನು? ಈ ಪರಿಣಾಮದಿಂದ ನಾವು ಕಲಿತುಕೊಳ್ಳತಕ್ಕ ಪಾಠವಾವುದು?

ಕಳೆದ ೧೫ ವರುಷಗಳ ಹಿಂದೆ ಹಿಂದು ಮುಸಲ್ಮಾನರಲ್ಲಿ ಐಕಮತ್ಯವು ಎಷ್ಟಿದ್ದಿತೋ ಅದಕ್ಕಿಂತ ಈಗ ಹೆಚ್ಚಾಗಿದೆಯೇ? ಕಡಿಮೆಯಾಗಿದೆಯೇ? ಆಗ ಮುಸಲ್ಮಾನರಲ್ಲಿ ಇಷ್ಟು ಜಾತೀಯ ಸಂಘಟನೆಯಿದ್ದಿತೆ? ಹಿಂದುಗಳ ಮೇಲೆ ಏರಿ ಬಂದು ನಾನಾ ಅತ್ಯಾಚಾರಗಳನ್ನು ಮಾಡುವವರು ಆಗ ಹೆಚ್ಚಿದ್ದರೇ? ಈಗ ಹೆಚ್ಚಾಗಿದ್ದಾರೆಯೇ? ಈ ಎಲ್ಲಾ ಸಂಗತಿಗಳನ್ನೂ ನಿಷ್ಪಕ್ಷಪಾತವಾಗಿ ದೂರಾಲೋಚನೆಯಿಂದ ನೋಡಿದ್ದಾದರೆ ಹಿಂದು ಮುಸಲ್ಮಾನರಲ್ಲಿ ದಿನೇ ದಿನೇ ಅನೈಕಮತ್ಯವೇ ಹೆಚ್ಚುತ್ತಾ ಬಂದಿದೆಯೆಂದು ಸ್ಪಷ್ಟ ತೋರುತ್ತದೆ. ಮತ್ತು ಅವರು ರಾಷ್ಟ್ರಭಾವನೆಗಿಂತ ಜಾತೀಯ ಅಭಿಮಾನದಿಂದಲೇ ಹೆಚ್ಚು ಸಂಘಟಿತ ಶಕ್ತಿಯುಳ್ಳವರಾಗುತ್ತಲೇ ಬಂದಿದ್ದಾರೆ.

ಆದಿ ಜನರ ವಿಚಾರದಲ್ಲಿ ಸವರ್ಣೀಯರ ಭಾವನೆಯೂ ದಿನೇ ದಿನೇ ಉದಾರತನದ್ದಾಗುತ್ತಾ ಬಂದಿದೆ, ಆದರಂತೆಯೇ ಅವರಲ್ಲಾದರೂ ರಾಷ್ಟ್ರಭಾವನೆಯು ಬೆಳೆಯುತ್ತಲಿದೆ. ಮುಸಲ್ಮಾನರಿಗೂ ಈ ಹಿಂದು ಬಾಂಧವರಿಗೂ ಒಂದು ಮಹದಂತರವಿದೆ. ಅದನ್ನು ನಾವು ಯಾವಾಗಲೂ ಕಣ್ಣು ಮುಂದಿಟ್ಟುಕೊಂಡಿರಬೇಕು. ಈ ಹಿಂದು ಬಾಂಧವರು ಇದೇ ತಮ್ಮ ಮಾತೃಭೂಮಿಯೆಂದು ತಿಳಿಯುತ್ತಾರೆ ಇದರ ಶ್ರೇಯಸ್ಸೇ ತಮ್ಮ ಉನ್ನತಿಯೆಂದು ಭಾವಿಸುತ್ತಾರೆ. ಮುಸಲ್ಮಾನರಾದರೋ ಈ ದೇಶವು ತಮ್ಮ ಮಾತೃಭೂಮಿಯೆಂದು ತಿಳಿಯುವುದಿಲ್ಲ. ತಾವು ಗೆಲಿಸಿದ ದೇಶವೆಂದು ತಿಳಿದಿದ್ದಾರೆ. ಆದುದರಿಂದ ಈ ದೇಶಕ್ಕೆ ತಾವು ಪರಕೀಯರೆಂಬ ಭಾವನೆ ಅವರಲ್ಲಿ ದಿನೇ ದಿನೇ ಹೆಚ್ಚುತ್ತಲಿದೆ. ಆದಕಾರಣ ಇದರ ಶ್ರೇಯಸ್ಸಿಗಾಗಿ ತಾವು ಸರ್ವಸ್ವವನ್ನೂ ಸೂರೆ ಮಾಡಲು ಅವರೆಂದಿಗೂ ಸಿದ್ಧರಾಗಲಾರರು. ಹಾಗಾದ ಮೇಲೆ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವೇ ಇಲ್ಲವೆ? ಹಾಗಲ್ಲ. ಸ್ವಾತಂತ್ರ್ಯವು ಅನ್ಯರಿಂದ ಕೊಡಲ್ಪಡತಕ್ಕದಲ್ಲ. ಅದು ನಮ್ಮಿಂದ ನಾವೇ ಸಂಪಾದಿಸಲ್ಪಡತಕ್ಕದು. ಆದಕಾರಣ ನಮ್ಮಲ್ಲಿ ಅಂತಹ ಶಕ್ತಿ ಸಾಹಸ ಸ್ವಾರ್ಥತ್ಯಾಗಗಳು ಎಂದು ಉಂಟಾಗುತ್ತವೆಯೋ ಅಂದೇ ಸ್ವಾತಂತ್ರ್ಯವು ನಮಗೆ ಲಭಿಸುತ್ತದೆ.

ಹಿಂದುಸ್ಥಾನವು ಹಿಂದುಗಳದ್ದಾಗಿದೆ. ಇಲ್ಲಿ ಹಿಂದುಗಳೇ ಬಹು ಸಂಖ್ಯಾತರು. ಹಿಂದು ಸಂಸ್ಕೃತಿಯು ರಕ್ಷಣೆಯಾಗಲೇ ಬೇಕು ಸ್ವಾತಂತ್ರ್ಯವು ಅದಕ್ಕಾಗಿಯೂ ಬೇಕು. ಹಿಂದು ಸಂಸ್ಕೃತಿಯೇ ಅಳಿದು ಹೋದರೂ ಅಡ್ಡಿಯಿಲ್ಲ; ಸ್ವಾತಂತ್ರ್ಯ ದೊರಕಿದರಾಯಿತೆಂದು ಹೇಳುವುದರಲ್ಲಿ ಅರ್ಥವೇ ಇಲ್ಲ ಅದು ಹಿಂದುಗಳ ನಾಶವೇ ಸರಿ.

ಹಿಂದು ಜನಾಂಗವು ತನ್ನ ಸಮಾಧಿಯನ್ನು ತಾನೇ ಸಿದ್ಧಮಾಡಿಕೊಳ್ಳುತ್ತಲಿದೆಯೆಂದು ಹಿಂದು ಮಹಾಸಭೆಯ ಅಧ್ಯಕ್ಷರಾದ ಭಿಕ್ಷು ಉತ್ತಮ ಇವರು ಹೇಳುತ್ತಿರುವುದನ್ನು ಕೇಳಿರಿ ನಮ್ಮ ಹೆಣ್ಣುಮಕ್ಕಳ ಮಾನವನ್ನು ಕಾಯುವ ಸಾಮರ್ಥ್ಯವು ನಮ್ಮಲ್ಲುಂಟಾಗುವ ವರೆಗೂ ಹಿಂದು ಸ್ತ್ರೀಯರಿಗೆ ಸ್ವಾತಂತ್ರ್ಯ ಕೊಡದೆ ಅವರನ್ನು ಪರದೆಯಲ್ಲಿಡಬೇಕೆಂದು ಧರ್ಮವೀರ ಭಾಯಿ ಪರಮಾನಂದರು ಹೇಳುವುದನ್ನು ಲಕ್ಷಿಸಿರಿ ದಕ್ಷಿಣ ದೇಶದಿಂದ ಕ್ರೈಸ್ತಮತವೂ ಉತ್ತರ ದೇಶದಿಂದ ಮುಸಲ್ಮಾನ ಧರ್ಮವೂ ಹಿಂದು ಸಮಾಜವನ್ನು ನುಂಗುತ್ತಾ ಬರುತ್ತಿರುವುದನ್ನು ನೋಡಿರಿ

ಇವೆಲ್ಲಾ ಭ್ರಮೆ. ಸ್ವಾತಂತ್ರ್ಯವೆಂಬುದೊಂದೇ ಸತ್ಯ. ಈ ಭ್ರಮೆಗೊಳಗಾಗದೆ ಸ್ವಾತಂತ್ರ್ಯಕ್ಕೆ ಆತ್ಮಾಹುತಿ ಮಾಡಿಕೊಳ್ಳಿರೆಂದು ಹೇಳುವ ರಾಜಕೀಯ ಅದ್ವೈತವಾದಿಗಳೂ ಇದ್ದಾರೆ. ಇವರ ಬೆನ್ನು ಹತ್ತಿದರೆ ಹಿಂದು ಅಬಲೆಯರು, ಹಿಂದು ಸಂಸ್ಕೃತಿ ಹಿಂದುಗಳ ಮಾನ, ಧನ, ಪ್ರಾಣಗಳೆಲ್ಲಾ ಮಿಥ್ಯವಾದವುಗಳಾಗಿ

ಅಖಿಲ ಭಾರತ ವೀರಶೈವ ಮಹಾಸಭೆಯ

ಮಧ್ಯವರ್ತಿ ಮಂಡಲಕ್ಕೆ ವಿಜ್ಞಾಪನೆ.

ಧಾರವಾಡದಲ್ಲಿ ೧೧ ನೆಯ ವೀರಶೈವ ಮಹಾಸಭೆ ಸೇರಿ ಎರಡು ವರುಷಗಳಾದವು. ಆ ಮುಂಚೆ ಮಹಾಸಭೆಗೆ ಕ್ರಮಬದ್ಧವಾದ ನಿಯಮ ನಿರ್ಬಂಧಗಳಿರಲಿಲ್ಲವೆಂಬ ಒಂದು ಆಕ್ಷೇಪವಿದ್ದಿತಷ್ಟೆ. ಅದು ಕೂಡಾ ಧಾರವಾಡದ ಸಭೆಯಲ್ಲಿ ನಿವಾರಣೆಯಾಗಿ ಮಹಾಸಭೆಯೆಂಬ ಗಾಡಿಯು ನಿಯಮ ನಿಬಂಧನೆಗಳ ಸರಳವಾದ ಕಂಬಿಗಳ ಮೇಲೆ ಬಂದು ನಿಂತಿತು. ಹೀಗಾದರೂ ಅದಕ್ಕೆ ಇನ್ನೂ ಗತಿಯೇ ಉಂಟಾಗದಿದ್ದುದು ಅತ್ಯಂತ ಸಖೇದಾಶ್ಚರ್ಯವಲ್ಲವೇ?

ಮಹಾಸಭೆಯ ನಿರ್ಣಯಗಳನ್ನು ಆಚರಣೆಯಲ್ಲಿ ತರಲು ಪ್ರಯತ್ನಿಸುವುದಕ್ಕೂ ಮಹಾಸಭೆಯನ್ನು ಅವಿಚ್ಛಿನ್ನವಾಗಿ ಸಾಗಿಸಲಿಕ್ಕೂ ಕರ್ನಾಟಕ ಮತ್ತು ಮಹಾರಾಷ್ಟ್ರ ಭಾಗಗಳಿಂದ ೪೦ ಸದಸ್ಯರ ಒಂದು ಮಧ್ಯವರ್ತಿ ಮಂಡಲವು ಧಾರವಾಡ ಮಹಾಸಭೆಯಲ್ಲಿಯೇ ಏರ್ಪಟ್ಟಿತು. ಮಹಾಸಭೆಯ ಕಾರ್ಯಕಲಾಪಗಳ ಹೊಣೆಗಾರಿಕೆಯು ಈ ಮಧ್ಯವರ್ತಿ ಮಂಡಲದ ಮೇಲೆಯೇ ಇದೆ. ಆದಕಾರಣ ಈ ಮಂಡಲವು ಕಳೆದೆರಡು ವರುಷಗಳಲ್ಲಿ ಯಾವ ಯಾವ ಕಾರ್ಯಗಳನ್ನು ಮಾಡಿತೆಂಬುದು ಬೆಳಕಿಗೆ ಬರಬೇಕಷ್ಟೆ. ಈ ವಿಷಯದಲ್ಲಿ ಮಂಡಲವನ್ನು ಹೊಣೆಯಾಗಿ ಹಿಡಿದು ಕೇಳಲು ಪ್ರತಿಯೊಬ್ಬ ವೀರಶೈವನೂ ಅಧಿಕಾರವುಳ್ಳವನಾಗಿದ್ದಾನಷ್ಟೆ.

ಅನ್ಯರು ನಮ್ಮನ್ನು ಕೇಳುವ ಮುಂಚೆ ನಾವೇ ನಮ್ಮಲ್ಲಿ ವಿಚಾರ ಮಾಡುವುದು ವಿಹಿತವಲ್ಲವೇ? ೧೧ ನೆಯ ಮಹಾಸಭೆ ಮುಗಿದ ನಂತರ ಧಾರವಾಡದಲ್ಲಿ ಒಮ್ಮೆ ಮಧ್ಯವರ್ತಿ ಮಂಡಲ ಕೂಡಿತು. ಕೆಲವು ಗೊತ್ತುವಳಿಗಳನ್ನೂ ಮಾಡಿತು. ಆದರೆ ಆ ಗೊತ್ತುವಳಿಗಳ ಪ್ರಕಾರ ಯಾವ ಕೆಲಸವೂ ಆಗಲಿಲ್ಲ. ಪುನಃ ಮಧ್ಯವರ್ತಿ ಮಂಡಲವನ್ನು ಕಳೆದ ಆಗಸ್ಟ ತಿಂಗಳಲ್ಲಿ ಬಾಗಲಕೋಟೆಯಲ್ಲಿ ಕೂಡಿಸಲು ಅಧ್ಯಕ್ಷರು ಪ್ರಯತ್ನಿಸಿದ್ದಾಯಿತು. ಆಗ ೪೦ ಸದಸ್ಯರಲ್ಲಿ ನಾಲ್ಕು ಜನ ಸದಸ್ಯರು ಮಾತ್ರ ಬಂದುದರಿಂದ 'ಕೋರಂ' ತುಂಬಲಿಲ್ಲವೆಂದು ಮಧ್ಯವರ್ತಿ ಮಂಡಲವೇ ಕೂಡಲಿಲ್ಲ. ಇದರಿಂದ ಮಂಡಲವು ಕೂಡುವ ವಿಷಯದಲ್ಲಿ ಅಧ್ಯಕ್ಷರು ಸಂದೇಹವುಳ್ಳವರಾಗಿರುವುದು ಸಹಜವಲ್ಲವೆ?

ಮಧ್ಯವರ್ತಿ ಮಂಡಲದ ಕಳೆದೆರಡು ವರುಷಗಳ ವರದಿ ಇಷ್ಟೇ ಮಾತ್ರ. ಒಮ್ಮೆ ಮಧ್ಯವರ್ತಿ ಮಂಡಲ ಕೂಡಿತು. ಆ ಮೇಲೆ ಯಾವ ಕೆಲಸವನ್ನೂ ಮಾಡಲಿಲ್ಲ. ಪುನಃ ಮಧ್ಯವರ್ತಿ ಮಂಡಲವೂ ಕೂಡಲಿಲ್ಲ. ಕೂಡುವ ನಂಬಿಗೆಯೂ ಇಲ್ಲ. ಇದೇ ನಮ್ಮ ಮಧ್ಯವರ್ತಿ ಮಂಡಲದ ವರದಿ. ವೀರಶೈವ ಮಹಾಸಭೆಯ ಮಧ್ಯವರ್ತಿ ಮಂಡಲದ ಎರಡು ವರುಷಗಳ ವರದಿಯು ಈ ಪ್ರಕಾರ

ತೋರುವವು. ಆಗ ಅವು ಅನ್ಯ ಧರ್ಮದವರ ಪಾಲಾಗುವವು. ಆ ಮೇಲೆ ನಮಗೆ ಬ್ರಹ್ಮಾನಂದದ ಸ್ವಾತಂತ್ರ್ಯ!

ನಮಗೆ ರಾಜಕೀಯ ಸ್ವಾತಂತ್ರ್ಯ ದೊರೆಯಬೇಕಾಗಿದ್ದರೆ ರಾಷ್ಟ್ರೀಯ ಸಭೆಯು ಪ್ರಯತ್ನಿಸುತ್ತಿರುವಂತೆಯೇ ಹಿಂದು ಮಹಾಸಭೆಯೂ ದೇಶದಲ್ಲೆಲ್ಲಾ ತನ್ನ ಶಾಖೋಪಶಾಖೆಗಳನ್ನು ಸ್ಥಾಪಿಸಿ ಹಿಂದು ಸಂಘಟನೆಗಾಗಿ ಪ್ರಯತ್ನಿಸಿ ಮೊದಲು ಹಿಂದುಗಳಲ್ಲಿ ತಮ್ಮ ಅಸ್ತಿತ್ವಕ್ಕೆ ನಿಜವಾದ ಶಕ್ತಿ ಸಾಹಸಗಳುಂಟಾಗುವಂತೆ ಮಾಡಬೇಕು. ಅಂದೇ ನಮಗೆ ಸ್ವಾತಂತ್ರ್ಯ.

ಪ್ರಕಟವಾಗುವುದು ಅತ್ಯಂತ ಲಾಂಛನಾಸ್ಪದವಾದುದೆಂದು ಯಾರು ತಾನೆ ಹೇಳಲಾರರು?

ಮಂಡಲದ ಮುಂದಣ ಕಾರ್ಯ:

ರಾಷ್ಟ್ರಕ್ಕೆ ಅಥವಾ ನಮ್ಮ ನಾಡಿಗೆ ಇಲ್ಲವೆ ಅನ್ಯ ಸಮಾಜಗಳಿಗೆ ಎಳ್ಳಷ್ಟಾದರೂ ಪ್ರತಿಕೂಲವಲ್ಲದ ಇಷ್ಟೇ ಅಲ್ಲ; ಅನುಕೂಲವಾದ ಕಾರ್ಯಗಳೇ ಅನೇಕ ಇವೆ. ವೀರಶೈವ ಸಮಾಜವು ತನ್ನ ಅಸ್ತಿತ್ವ ಮತ್ತು ಘನತೆಗಳನ್ನು ಇಟ್ಟುಕೊಳ್ಳಬೇಕಾದರೆ ಮಹಾಸಭೆಯ ಮಧ್ಯವರ್ತಿ ಮಂಡಲವೇ ಆ ಕಾರ್ಯಗಳನ್ನು ಮಾಡಬೇಕಾಗಿದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಟ್ಟಿದೆ.

(೧) ನಮ್ಮ ಸಮಾಜವು ಅತ್ಯಂತ ಹಿಂದುಳಿದ ನೈಜಾಮ, ಮಹಾರಾಷ್ಟ್ರ, ತೆಲುಗು ಮತ್ತು ತಮಿಳು ಭಾಗಗಳಲ್ಲಿ ವೀರಶೈವ ಮಹಾಸಭೆ ಅವಿಚ್ಛಿನ್ನವಾಗಿ ಜರುಗುವಂತೆ ಮಾಡುವುದು. ಹೀಗೆ ಮಹಾಸಭೆಯನ್ನು ಕೂಡಿಸಲು ಪ್ರಯತ್ನಿಸಬೇಕಾದುದು ಮಧ್ಯವರ್ತಿ ಮಂಡಲದ ಕರ್ತವ್ಯವೇ ಆಗಿದೆಯೆಂಬುದನ್ನು ಮಹಾಸಭೆಯ ೧೭ ನೆಯ ನಿಯಮದಲ್ಲಿ ಸ್ಪಷ್ಟವಾಗಿ ಹೇಳಿದೆ.

ನೈಜಾಮ ರಾಜ್ಯದ ರಾಯಚೂರಿನಲ್ಲಿ ಮಹಾಸಭೆ ಕೂಡಿಸಲು ಅಲ್ಲಿಯ ವೀರಶೈವ ಮಹಾಜನರು ಯೋಚಿಸಿದ್ದಾರೆ. ಅವರಿಗೆ ಯೋಗ್ಯ ಸಹಾಯ ಸಲಹೆಗಳನ್ನು ಕೊಟ್ಟು ಬರುವ ಡಿಸೆಂಬರ್ ತಿಂಗಳಲ್ಲಿ ಮಹಾಸಭೆ ಜರುಗುವಂತೆ ಮಾಡುವುದು.

(೨) ವೇತನದ ಒಬ್ಬ ಸಮರ್ಥರಾದ ಕಾರ್ಯನಿರ್ವಾಹಕರನ್ನು ನಿಯಮಿಸಿಕೊಂಡು ಅಧ್ಯಕ್ಷರು ಅವರಿಂದ ಸಮಾಜ ಕಾರ್ಯ ಅಲ್ಪ ಪ್ರಮಾಣದಲ್ಲಾದರೂ ಅವಿಚ್ಛಿನ್ನವಾಗಿ ಸಾಗಿಸಲು ಅವಕಾಶವನ್ನುಂಟುಮಾಡಿಕೊಡುವುದು. ಪತ್ರವ್ಯವಹಾರಗಳಿಂದಲೇ ಈ ಕೆಳಗಿನ ಎಷ್ಟೋ ಉಪಯುಕ್ತವಾದ ಕಾರ್ಯಗಳನ್ನು ಮಾಡಿಸಬಹುದು.

(೩) ಅನೇಕ ಕಡೆ ತರುಣ ಸಂಘಗಳು ಏರ್ಪಟ್ಟು ಅವುಗಳಿಂದಲೂ ಬೇರೆ ಸಂಸ್ಥೆಗಳಿಂದಲೂ ಬೋರ್ಡಿಂಗ ಮತ್ತು ವಾಚನಾಲಯಗಳ ಕಾರ್ಯಗಳು ನಡೆಯುತ್ತಲಿವೆ. ಅವುಗಳಲ್ಲಿ ಏಕರೂಪತೆ, ಕ್ರಮ, ಪರಸ್ಪರ ಸಹಾಯ ಸೌಲಭ್ಯಗಳನ್ನುಂಟುಮಾಡಿ ಕೊಡುವುದು

(೪) ತೆಲುಗು ಮತ್ತು ತಮಿಳು ನಾಡುಗಳಲ್ಲಿಯ ವೀರಶೈವರ ಸ್ಥಿತಿಗತಿಗಳು ಸ್ವಲ್ಪವಾದರೂ ಗೊತ್ತಿಲ್ಲ. ಆದಕಾರಣ ಆ ನಾಡುಗಳ ವೀರಶೈವರ ಇರುವಿಕೆ ಮೊದಲಾದವುಗಳನ್ನು ತಿಳಿದುಕೊಂಡು ಸಂಗ್ರಹಿಸುವುದು.

(೫) ಮಹಾರಾಷ್ಟ್ರ ಭಾಗದ ವೀರಶೈವರಲ್ಲಿ ಪರಸ್ಪರ ಪರಿಚಯವುಂಟಾಗಿ ಸಮಾಜ ಜಾಗೃತಿಗೆ ಅವಕಾಶವಾಗುವಂತೆ ಪುಣೆ, ನಾಗಪುರ, ಸಾತಾರಾ, ಕೊಲ್ಲಾಪುರ ಈ ಸ್ಥಳಗಳಲ್ಲಿ ಆಯಾಯ ಭಾಗಗಳ ವೀರಶೈವರ ಸಭೆಗಳು ಸೇರುವಂತೆ ಮಾಡಿ ವೀರಶೈವ ಮತತತ್ವಗಳು ಮರಾಠಿ ಭಾಷೆಯಲ್ಲಿ ಪ್ರಸಾರವಾಗುವಂತೆ ಪ್ರಯತ್ನಿಸುವುದು.

(೬) ನೈಜಾಮ ರಾಜ್ಯದ ವೀರಶೈವರು ಬಹು ಶೋಚನೀಯ ಸ್ಥಿತಿಯಲ್ಲಿದ್ದಾರೆ. ಅವರಲ್ಲಿ ಶಿಕ್ಷಣ ಪ್ರಸಾರವಾಗುವಂತೆ ಪ್ರಸಿದ್ಧ ಪತ್ರಿಕೆ ಮತ್ತು ವ್ಯಾಖ್ಯಾನಗಳಿಂದ ಜಾಗೃತಿಯನ್ನುಂಟುಮಾಡಿಸುವುದು.

(೭) ಕಲ್ಯಾಣ ಪ್ರಾಂತದಲ್ಲಿ ವಚನ ಗ್ರಂಥಗಳು ಹೇರಳವಾಗಿವೆ. ಅವು ಹುಳಗಳಿಗೆ ತುತ್ತಾಗಿ ನಷ್ಟ ಹೊಂದುತ್ತಿವೆ. ಅವುಗಳನ್ನು ಪರಿಶೋಧಿಸಿ ಸಂಗ್ರಹಿಸಿಡುವುದು.

(೮) ಮರಾಠಿ ಗಡಿನಾಡುಗಳಲ್ಲಿರುವ ವೀರಶೈವರು ಕನ್ನಡ ಮಾತನ್ನಾಡುತ್ತಿದ್ದರೂ ಅವರಿಗೆ ಕನ್ನಡ ಓದು ಬರಹಗಳು ಬರುವುದಿಲ್ಲ. ಹಿಂದಿ ಪ್ರಚಾರಕ ಸಂಘದವರಂತೆ ಕನ್ನಡ ಕಲಿಸುವವರನ್ನು ಆ ಭಾಗಗಳಲ್ಲಿ ನಿಯಮಿಸಿದರೆ ಅನೇಕ ಸುಶಿಕ್ಷಿತರಿಗೆ ಒಂದು ಉದ್ಯೋಗವನ್ನು ಕಲ್ಪಿಸಿಕೊಟ್ಟಂತಾಗುವುದಲ್ಲದೆ ಭಾಷೆ, ಸಂಸ್ಕೃತಿಗಳ ಬೆಳವಣಿಗೆಯನ್ನೂ ಮಾಡಿದಂತಾಗುವುದು.

ಸದಸ್ಯರಲ್ಲಿ ವಿಜ್ಞಾಪನೆ.

ಈ ಪ್ರಕಾರ ನಿರಾಕ್ಷೇಪಣೀಯವಾದ ಅನೇಕ ಉಪಯುಕ್ತ ಕಾರ್ಯಗಳನ್ನು ಮಹಾಸಭೆಯ ಮಧ್ಯವರ್ತಿ ಮಂ ಡ ಲ ವು ಮಾಡಬಹುದು. ಆಯಾಯ ಭಾಗಗಳಲ್ಲಿ ಧನ ಮತ್ತು ಜನ ಸಹಾಯಗಳೂ ದೊರೆಯುತ್ತವೆ. ಆದರೆ ಕಾರ್ಯ ಮಾಡುವ ಸಾಹಸಿಗಳು ಮಾತ್ರ ಬೇಕು.

ಆದಕಾರಣ ಇದೇ ಜೂನ ತಿಂಗಳ ಕೊನೆಯೊಳಗಾಗಿ ಮಧ್ಯವರ್ತಿ ಮಂಡಲವನ್ನು ಕೂಡಿಸಿರೆಂತಲೂ ಅದಕ್ಕೆ ನಾವೂ ಬರುತ್ತೇವೆಂತಲೂ ಈ ಮಂಡಲದ ಸದಸ್ಯರು ಅಧ್ಯಕ್ಷರಿಗೆ ವಿನಂತಿ ಮಾಡಿಕೊಳ್ಳಬೇಕಾಗಿ ಪ್ರಾರ್ಥನೆ. ಬರುವ ತಿಂಗಳ ಅಂತ್ಯದೊಳ [illegible] ಕೂಡ ಇದ್ದರೆ ಹೆಸರಿಗೆ ಮಾತ್ರ ಅಸ್ತಿತ್ವ ಮಂಡಲದಲ್ಲಿ ನೆಪಮಾತ್ರವಾಗಿ ಇನ್ನು ಮೇಲೆಯೂ ಜನರಲ್ ಸೆಕ್ರೆಟರಿಯಾಗಿರಲು ನಾನು ಇಷ್ಟಪಡದೆ ಆ ಸ್ಥಳದಿಂದ ನಿವೃತ್ತನಾಗಬೇಕಾದುದಕ್ಕೆ ಅತ್ಯಂತ ವಿಷಾದಿಸುವ ತಮ್ಮ ವಿಧೇಯ

ಹರ್ಡೇಕರ್ ಮಂಜಪ್ಪ

ವೀರಶೈವ ವಿದ್ಯಾಲಯ
ತಾ. ೨೨-೫-೩೫.

ಜನರಲ್ ಸೆಕ್ರೆಟರಿ,
ಅ. ಭಾ. ವೀ. ಮ. ಮಧ್ಯವರ್ತಿ ಮಂಡಲ.

ಪ ತ್ರ ಗ ಳ ಸಾ ರಾ ಂ ಶ .

ಉಮ್ರಜಕರ ವೀರಶೈವ ಧರ್ಮ ಪ್ರಸಾರಕ ನಿಧಿ (ಫಂಡು) ಯಿಂದ

ಒಂದು ನೂರು ಜನ ನೀಲವಾಣಿಯವರಿಗೆ

ವೀರಶೈವ ದೀಕ್ಷೆ.

ವಿಜಾಪುರ ಜಿಲ್ಲಾ ಇಂಡಿ ತಾಲೂಕದೊಳಗಿನ ಚಡಚಣ ಗ್ರಾಮದಲ್ಲಿ ೧೦—೧೨ ಮನೆತನದ ಸದಾಚಾರಸಂಪನ್ನರಾದ ನೀಲವಾಣಿಯ ಜನರು (ನಿವರಿಗಿ) ಸಂಗಮದ ಹತ್ತಿರ ವೀರಶೈವ ದೀಕ್ಷೆಯನ್ನು ಹೊಂದಿದರು. ಇವರು ಮೊದಲಿನಿಂದಲೂ ಲಿಂಗಾಂಗಿಗಳಿದ್ದು ಗುರು ಲಿಂಗ ಜಂಗಮ ಪ್ರೇಮಿಗಳಾಗಿ ವ್ಯವಹರಿಸುತಲಿದ್ದರೂ ೩೦—೪೦ ವರ್ಷಗಳಿಂದ ಯಾವದೋ ಒಂದು ಕಾರಣದ ಮೂಲಕ ಕೆಲವು ಕಡೆಯಲ್ಲಿ ಲಿಂಗಹೀನರಾಗಿರುವರು. ಈಗ ಅವರು ತಮ್ಮ ಪೂರ್ವದವರಂತೆ ಒಳ್ಳೇ ಭಕ್ತಿವಂತರಾಗಿ ವೀರಶೈವಾಚಾರಗಳನ್ನು ತ್ರಿಕರಣ ಪೂರ್ವಕವಾಗಿ ಪಾಲಿಸುತ್ತೇವೆಂದು ವಿನಯದಿಂದ ಅರಿಕೆ ಮಾಡಿಕೊಂಡ ಕಾರಣ ಇದೇ ೧೮-೫-೩೫ ನೇ ಯುವನಾಮ ಸಂವತ್ಸರ ವೈಶಾಖ ಬಹುಳ ೨ ಸೋಮವಾರ ಶುಭ ಮುಹೂರ್ತದಲ್ಲಿ ಇಂಡಿ ತಾಲೂಕಿನೊಳಗಿನ ಸಂಗಮ ದೇವಸ್ಥಾನದಲ್ಲಿ ವಿಜಾಪುರ ಗಚ್ಚಿನಮಠಾಧ್ಯಕ್ಷ ಶ್ರೀ ರುದ್ರಮುನಿ ಶಿವಾಚಾರ್ಯರು ತಮ್ಮ ನೇತೃತ್ವದ ಕೆಳಗೆ ವಿಜಾಪುರ ಪಂ. ಬಸವರಾಜ ಶಾಸ್ತ್ರಿಗಳ ಪೌರೋಹಿತ್ಯದೊಡನೆ ಬಹು ವಿಜೃಂಭಣೆಯಿಂದ ನೆರವೇರಿಸಿದರು. ಈ ಮಂಗಲ ಕಾರ್ಯಕ್ಕೆ ಮೇಲಿನ ಫಂಡಿನೊಳಗಿಂದಲೇ ಇದಕ್ಕೆ ಮೇಂಬರ ಟ್ರಸ್ಟಿ ಸೆಕ್ರೆಟರಿಗಳಾದ ಸೊಲ್ಲಾಪುರ ಗೋವಿಂದರಾವ ಉಮ್ರಜಕರ ಮೊದಲಾದ ಪ್ರಮುಖರು ಮೇಲಿನ ನಿಧಿಯೊಳಗಿನ ಹಣದಿಂದಲೇ ಇದರ ಯಾವತ್ತೂ ವೆಚ್ಚ ಮಾಡಿ ಬಹಳ ಕಳಕಳಿಯಿಂದ ಸುವ್ಯವಸ್ಥೆಯನ್ನು ಮಾಡಿದರು. ಇವರಂತೆ ಸಮಾಜದ ಮುಂದಾಳುಗಳು ಇಂತಹ ಮಂಗಲ ಕಾರ್ಯವನ್ನು ಕೈಕೊಳ್ಳಲೆಂದು ಅನನ್ಯ ಭಾವದಿಂದ ದೇವರಿಗೆ ಬೇಡಿಕೊಳ್ಳುತ್ತೇನೆ.

ಉಮ್ರಜಕರ ವೀರಶೈವ ಧರ್ಮ ಪ್ರಸಾರಕ
ನಿಧಿ (ಫಂಡ) ಸೊಲ್ಲಾಪುರ.
ಸೆಕ್ರೆಟರಿ.
ರೇವಣಸಿದ್ಧಪ್ಪ ಭೈರವ ಪಾಟೀಲ

ಶುದ್ಧಿ ಸಂಘಟನೆ.

'ಇಲಕಲ್ಲ ವೀರಶೈವ ಶುದ್ಧಿ ಸಂಘಟನೆ ಸಂಘ' ದವರು ಧರ್ಮಾಂತರ ಹೊಂದಿದ ಒಂದು ಕುಟುಂಬವನ್ನು ತಾರೀಖು ೧೯-೫-೧೯೩೫ ನೇ ದಿನ ವೀರಶೈವ ಧರ್ಮದಲ್ಲಿ ತೆಗೆದುಕೊಂಡರು. ಶುದ್ಧಿ ಕಾರ್ಯವನ್ನು ಶ್ರೀ ಗುಡುಗುಂಟೆ ಸಂಸ್ಥಾನ ತೋಪಿನ ಕಟ್ಟಿ ಮುತ್ತಿನ ಪೆಂಡಿ ಮಠದ ಪಟ್ಟಚರಾಧ್ಯಕ್ಷರು, ಶ್ರೀ ಹಿರೇಮ್ಯಾಗೇರಿ ಪಟ್ಟಾಧ್ಯಕ್ಷರು, ಶ್ರೀ ಕಲ್ಲೂರ ಪಟ್ಟಾಧ್ಯಕ್ಷರೇ ಮೊದಲಾದ ಮಹಾಸ್ವಾಮಿಗಳು ಜರುಗಿಸಿದರು. ಶುದ್ಧೀ ಸಮಾರಂಭದಲ್ಲಿ ಯಾವತ್ತೂ ಪಂಗಡದ ವೀರಶೈವರು ಉತ್ಸಾಹದಿಂದ ಭಾಗವಹಿಸಿದ್ದರು. ಶುದ್ಧೀ ಕಾರ್ಯಕ್ಕೆ ಈ ಭಾಗದಲ್ಲಿ ವಿಶೇಷ ಕಳೆ ಏರುತ್ತಲಿದೆ.

ಓರ್ವ ಪ್ರತ್ಯಕ್ಷದರ್ಶಿ.

ಬೇನಾಳದಲ್ಲಿ ಬಿಸಿನೀರಿನ ಬುಗ್ಗೆ

ಆಲಮಟ್ಟಿಗೆ ಸಮೀಪದಲ್ಲಿರುವ ಬೇನಾಳ ಗ್ರಾಮದಲ್ಲಿ ಮೊನ್ನೆ ಶನಿವಾರ ಒಬ್ಬ ಕುಂಬಾರನ ಮನೆಯ ಮುಂದೆ ಅಂಗಳದಲ್ಲಿ ಬಿಸಿ ನೀರಿನ ಒಂದು ಬುಗ್ಗೆಯು ಹರಿಯಿತು. ಭೂಮಿಯೊಳಗಿಂದ ಒಂದು ಕೊಡ ತುಂಬುವಷ್ಟು ಬಿಸಿ ನೀರು ೨ ನಿಮಿಷಗಳವರೆಗೆ ಮೇಲಕ್ಕೆ ಪುಟಿಯಿತು. ಇದನ್ನು ಕಂಡು ಎಲ್ಲರಿಗೂ ಆಶ್ಚರ್ಯವೆನಿಸಿತು. ಪ್ರತ್ಯಕ್ಷದರ್ಶಿ

ಲಿಂಗಮುದ್ರಾ ಸ್ಥಾಪನೆ.

ಚಾಮರಾಜ ತಾಲ್ಲೂಕ ಕೊತ್ತಲವಾಡಿ ಗ್ರಾಮದ ನೂತನ ದಾಸೋಹ ಮಠದ ಲಿಂಗಮುದ್ರಾ ಸ್ಥಾಪನೆಯು ಜರುಗಿತು. ಆ ಕಾಲಕ್ಕೆ ವಟುಗಳ ದೀಕ್ಷಾ ಸಂಸ್ಕಾರ ಮತ್ತು ಬಡಬಗ್ಗರಿಗೆ ಅನ್ನ ಸಂತರ್ಪಣೆ ನಡೆದವು. ಶ್ರೀ ತೋಂಟದಾರ್ಯ ಗುರುಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ರಾಮಸಮುದ್ರದ ವೈಯಾಜಪ್ಪನವರು ವೀರಶೈವ ಸಮಾಜದ ಬಗ್ಗೆ ಉಪನ್ಯಾಸ ಮಾಡಿದರು. ಕೆಲ್ಲೆರೆ ಗ್ರಾಮದ ನಾಗಮ್ಮನೆಂಬ ೧೦ ವರುಷದ ಬಾಲಿಕೆಯೂ ದಾಸೋಹ ಮಠಗಳ ಬಗ್ಗೆ ಉಪನ್ಯಾಸ ಮಾಡಿದಳು.

ಬಿ. ಕುಟ್ಟಿಮಲ್ಲಯ್ಯ, ಸ್ಕೂಲ್‌ಮಾಸ್ಟರು.

ವರ್ತಮಾನಸಾರ.

—ಮಹಾತ್ಮರು ಮುಂಬಯಿಯಲ್ಲಿ ಪ್ರಾರ್ಥನೆ ಮಾಡುವ ಕಾಲಕ್ಕೆ ೨೫ ಸಾವಿರ ಜನರು ಆಗಮಿಸಿದ್ದರು. ಅವರಿಗೆಲ್ಲ ಪ್ರಾರ್ಥನೆಯ ಮಹತ್ವವನ್ನು ತಿಳಿಸಿ ಹೇಳಿದರು.

—ಗಾಂಧಿಜಿಯವರು ಮುಂಬಯಿ ಬಿಡುವ ಪೂರ್ವದಲ್ಲಿ ಸ್ಟೇಶನ್ನಿನಲ್ಲಿ ದರಿದ್ರ ನಾರಾಯಣನ ಭಿಕ್ಷೆಗಾಗಿ ಕೈಯೊಡ್ಡಿದರು. ಕೂಡಲೆ ಜನರು ನಾಣ್ಯಗಳಿಂದ, "ಅವರ ಕೈ ತುಂಬಿಸಿದರು. ಒಬ್ಬನು ಮಾತ್ರ ಒಂದು ಪೈ ಕೊಟ್ಟನು. ಇಷ್ಟೇ ಏನು? ಎಂದು ಗಾಂಧಿಜಿಯವರು ನಕ್ಕರು. ಪ್ರೇಕ್ಷಕರೆಲ್ಲರಲ್ಲಿ ನಗುವಿನ ಗಾಳಿ ಸುಳಿಯಿತು.

—ತಳೆಗಾವ ಸ್ಟೇಶನ್ನಿನ ಮೇಲೆ ಒಬ್ಬ ಪಂಜಾಬಿ ಯುವಕನು ಜಿ. ಐ. ಪಿ. ಉಗಿಬಂಡಿಯನ್ನು ಹೊಕ್ಕು ೩-೪ ಹಣದ ಚೀಲಗಳನ್ನು ಸುಲಿಗೆ ಮಾಡಿದನು ಹಿಡಿಯಲು ಬಂದವರಿಗೆ ಬಂದೂಕಿನೇಟು ಕೊಟ್ಟು ಪಾರಾದನು.

—ಮೇ ೨೧ ನೆಯ ತಾರೀಖಿನ ವರೆಗೆ ಬಾದಶಹರ ರೌಪ್ಯ ಜ್ಯುಬಿಲಿ ಮಹೋತ್ಸವದ ಧನನಿಧಿಯು ೭೦ ಲಕ್ಷ ರೂ. ಆಗಿವೆ ಎಲ್ಲಕ್ಕೂ ಹೆಚ್ಚು ಮುಂಬಯಿ ಪ್ರಾಂತದಲ್ಲಿ ಕೂಡಿದ್ದು ಅಲ್ಲಿ ೧೨೭೭೩೬೭ ರೂ. ಸಂಗ್ರಹವಾಗಿವೆ.

—ಗುಂಟೂರಲ್ಲಿ ೧೨೦ ಅಂಶಗಳವರೆಗೆ ಉಷ್ಣತಾಮಾನವು ಏರಿದೆ. ತಾಪದಿಂದ ಅನೇಕ ಜನರು ಸತ್ತರು. ಎಷ್ಟೋ ಕಡೆಗಳಲ್ಲಿ ಬೆಂಕಿ ಹತ್ತಿತು.

—ಶ್ರೀಮತಿ ಕಮಲಾ ನೆಹರು ಇವರು ನಾಲ್ಕು ವರ್ಷಗಳವರೆಗೆ ಪರದೇಶದಲ್ಲಿರುವರೆಂದೂ ಅಷ್ಟರಲ್ಲಿ ಅವರ ಪುತ್ರಿ ಇಂದಿರಾ ನೆಹರು ಇವರು ತಮ್ಮ ಶಿಕ್ಷಣವನ್ನು ಮುಗಿಸುವರೆಂದೂ ತಿಳಿದು ಬಂದಿದೆ.

—ಚಿಕ್ಕಮಗಳೂರಲ್ಲಿ ಬಾಬು ರಾಜೇಂದ್ರ ಪ್ರಸಾದರವರು ತಮ್ಮ ಭಾಷಣದಲ್ಲಿ, ಈಗಿನ ಪರಿಸ್ಥಿತಿಯಲ್ಲಿ ನಾವು ಖಾದಿ, ಸ್ವದೇಶಿ, ಗ್ರಾಮ ಪುನರುಜ್ಜೀವನ, ಮದ್ಯಪಾನನಿರೋಧ ಅಸ್ಪೃಶ್ಯತಾ ನಿವಾರಣೆ ಮುಂತಾದವುಗಳನ್ನು ಕೈಕೊಳ್ಳಲೇಬೇಕೆಂದು ಹೇಳಿದರು.

—ಪೋಲಂಡ ದೇಶದ ಸರ್ವಾಧಿಕಾರಿಗಳಾಗಿದ್ದ ಮಾರ್ಶಲ ಪಿಲ್ಸುಡ್‌ಸ್ಕಿ ಇವರು ಕಾಲವಾದರು. ಇವರು ತಮ್ಮ ಬುದ್ಧಿಮತ್ತೆಯಿಂದ ಎಲ್ಲ ದೇಶಗಳೊಡನೆ ಶಾಂತಿಯ ಒಪ್ಪಂದ ಮಾಡಿಕೊಂಡು ತಮ್ಮ ದೇಶವನ್ನು ಒಳ್ಳೇ ಅಭಿವೃದ್ಧಿಗೆ ತಂದವರು.

—ಬೆಂಗಳೂರಿನ ಹಿಂದೀ ಪ್ರೇಮಿಗಳು ಶ್ರೀಪ್ರಕಾಶರಿಗೆ ಮಾನಪತ್ರವನ್ನರ್ಪಿಸಿದರು. ಆ ಕಾಲಕ್ಕೆ ಶ್ರೀ ಪ್ರಕಾಶರು, ಬ್ರಿಟಿಶರ ಆಳ್ವಿಕೆಯಲ್ಲಿ ಇಂಗ್ಲೀಷು ಎಷ್ಟು ಪ್ರಸಾರವಾಗಿದೆಯೊ ಅದಕ್ಕಿಂತಲೂ ಹೆಚ್ಚು ಹಿಂದೀ ಪ್ರಸಾರವು ೧೫ ವರ್ಷಗಳಲ್ಲಿಯೇ ಆಗಿದೆಯೆಂದು ಹೇಳಿದರು.

—ಸೊಲ್ಲಾಪುರ ನಗರ ಸಭಾಧ್ಯಕ್ಷರಾಗಿ ಶ್ರೀ ನಾಗಪ್ಪನವರು ಅಬ್ದುಲಪುರ ಇವರು ಆರಿಸಲ್ಪಟ್ಟರು. ಇಲ್ಲಿ ವೀರಶೈವರು ಅಧ್ಯಕ್ಷರಾದುದು ಇದೇ ಮೊದಲಂತೆ.

—ಹುಬ್ಬಳ್ಳಿಯಲ್ಲಿ ಶ್ರೀ ಪರ್ವತೇಶ್ವರ ದೇವಾಲಯದಲ್ಲಿ ೭ ಜನ ಕ್ರಿಸ್ತೀಯರನ್ನು ಆರ್ಯ ಸಮಾಜದವರು ಶುದ್ಧೀಕರಿಸಿ ಹಿಂದು ಧರ್ಮಕ್ಕೆ ತೆಗೆದುಕೊಂಡರು.

—ಬೆಳಗಾವಿ ಜನರಲ್ ಲಾಯಬ್ರರಿಯ ಉದ್ಘಾಟನ ಸಮಾರಂಭವು ಶ್ರೀಮಂತ ರಾಜಾ ಲಖಮನಗೌಡ ಸರದೇಸಾಯಿ ವಂಟಮುರಿ ಇವರ ಹಸ್ತದಿಂದ ನೆರವೇರಿಸಲ್ಪಟ್ಟಿತು.

—ಮೈಸೂರು ಜಿಲ್ಲೆಯ ನಂಜನಗೂಡದ ಹತ್ತಿರ ಒಂದು ಹೊಲದಲ್ಲಿ ಬಂಗಾರದ ಖಣಿ ಇರುವದಾಗಿ ಶೋಧವಾಗಿದೆ. ಇದಕ್ಕಾಗಿ ಮದ್ರಾಸದ ಶ್ರೀ ನಾರಾಯಣದಾಸ ಗಿರಿವರದಾಸ ಎಂಬವರು ಊಳಗೇರಿ ಇನಾಮದಾರರ ಕಡೆಯಿಂದ ೨೫೦ ಎಕರೆ ಭೂಮಿಯನ್ನು ೨೫ ವರ್ಷಗಳ ವರೆಗೆ ತೆಗೆದುಕೊಳ್ಳುವವರಿದ್ದಾರೆ.

—ಇಟಲಿ ಸರಕಾರದವರು ೧೯೧೦ ರಿಂದ ೧೯೧೨ರ ವರೆಗೆ ನೌಕರಿಯಿಂದ ಬಿಡುಗಡೆ ಹೊಂದಿದ ಸೇನಾತಜ್ಞರನ್ನು ಪುನಃ ನೌಕರಿಗಾಗಿ ಕರೆಸಿದ್ದಾರೆ.

—ಸ್ವರ್ಗೀಯ ಶ್ರೀ ವಿಠ್ಠಲಭಾಯಿ ಪಟೇಲರವರ ಮೃತ್ಯುಪತ್ರದಂತೆ ಪರರಾಷ್ಟ್ರದಲ್ಲಿ ಚಟುವಟಿಕೆಯನ್ನುಂಟು ಮಾಡುವದಕ್ಕಾಗಿ ಶ್ರೀ ಸುಭಾಸಚಂದ್ರ ಬೋಸರಿಗೆ ಒಂದು ಲಕ್ಷ ರೂಪಾಯಿಗಳು ದೊರೆಯಬೇಕಾಗಿದ್ದಿತು. ಆ ಹಣವನ್ನು ಶ್ರೀ ಬೋಸರ ಸ್ವಾಧೀನ ಪಡಿಸಬೇಕೆಂದು ಅವರ ವಕೀಲರು ಕೆಲಸ ನಡಿಸಿದ್ದಾರೆ.

—ನಿಝಾಮರಾಜ್ಯದಲ್ಲಿ ಪ್ರವೇಶಿಸಲು 'ಮರಾಠಾ' 'ಸರ್ವಂಟ ಆಫ ಇಂಡಿಯಾ' 'ಅಮೃತಬಝಾರ ಪತ್ರಿಕಾ' ಹಾಗೂ ಮದ್ರಾಸದ 'ಇಂಡಿಯನ್ ಎಕ್ಸಪ್ರೆಸ್' ಎಂಬ ಪತ್ರಿಕೆಗಳಿಗೆ ನಿರ್ಬಂಧವಿದ್ದುದು ಈಗ ದೂರಾಗಿದೆಯೆಂದು ತಿಳಿಯುತ್ತದೆ.

—ಅ. ಭಾ. ಹಿಂದು ಮಹಾಸಭೆಯ ಕಾರ್ಯದರ್ಶಿಗಳಾದ ಶ್ರೀ ಪದ್ಮರಾಜ ಜೈನ ಇವರು ಕಾಬೂಲದಲ್ಲಿಯ ಶೀಖರಿಗೆ ತೊಂದರೆಯಾಗುತ್ತಿದೆಯೆಂದು ಕೇಳಿ ಅಫಘಾನ ಸರಕಾರಕ್ಕೆ ಬರೆದುಕೊಂಡಿದ್ದರು. ಅಂಥ ಯಾವ ಪ್ರಸಂಗವೂ ಸಂಭವಿಸಿಲ್ಲವೆಂದು ಅವರಿಗೆ ಉತ್ತರ ದೊರೆಯಿತು.

—ಹವೆಯನ್ನು ಬದಲಿಸಿಕೊಳ್ಳುವದಕ್ಕಾಗಿ ಯುರೋಪಕ್ಕೆ ಬರಬೇಕೆಂದು ಡಿ. ವ್ಹಿಲರಾ ಇವರು ಬಾಬು ಸುಭಾಸ ಚಂದ್ರರಿಗೆ ಬರೆದಿದ್ದಾರೆ.

—ಅಲ್ವಾರ ಮಹಾರಾಜರಿಗೆ ೨ ವರ್ಷಗಳವರೆಗೆ ತಮ್ಮ ಸಂಸ್ಥಾನವನ್ನು ಬಿಟ್ಟು ಹೊರಗಿರಬೇಕೆಂದು ವರಿಷ್ಠ ಅಧಿಕಾರಿಗಳು ಗೊತ್ತುಪಡಿಸಿದ್ದರು. ಆ ಅವಧಿಯು ಮುಗಿದದ್ದರಿಂದ ಅವರನ್ನು ಪುನಃ ತಮ್ಮ ರಾಜ್ಯಕ್ಕೆ ಬರಗೊಡಬೇಕೆಂದು ಸಂಸ್ಥಾನದ ಭೂಮಿಯೊಡೆಯರು ಸರಕಾರಕ್ಕೆ ವಿಜ್ಞಾಪಿಸಿಕೊಂಡಿದ್ದಾರೆ.

—ಸಾತಪುಡಾ ಪರ್ವತಾವಳಿಯಲ್ಲಿಯ ಉತ್ರಾಣ ಎಂಬ ಗ್ರಾಮದ ಒಬ್ಬ ಮುಸಲ್ಮಾನನನ್ನು ಮಸೂರ ಬ್ರಹ್ಮಚರ್ಯಾಶ್ರಮದವರು ಹಿಂದು ಧರ್ಮದಲ್ಲಿ ತೆಗೆದುಕೊಂಡರು.

—ಅಬ್ದುಲ ಕಾಯೂಮನ ಬಗ್ಗೆ ಸ್ಥಳೀಯ ವೃತ್ತಪತ್ರಿಕೆಯವರು ೨ ತಿಂಗಳವರೆಗೆ ಏನೂ ಪ್ರಕಟಿಸಬಾರದೆಂದು ಕರಾಚಿ ಅಧಿಕಾರಿಗಳು ಆಜ್ಞಾಪಿಸಿದ್ದರು. ಆ ಆಜ್ಞೆಯನ್ನು ಪುನಃ ೨ ತಿಂಗಳ ಮುಂದರಿಸಿದ್ದಾರೆ.

—ಕಳೆದ ೨೦ ನೆಯ ತಾರೀಖಿನ ದಿವಸ ಕೋಪರಗಾವದಲ್ಲಿ ಉಪಾಸನಿ ಮಹಾರಾಜ ಎಂಬ ಸನ್ಯಾಸಿಗಳು ಇಬ್ಬರು ೧೩ ವರ್ಷದ ಬಾಲಿಕೆಯರನ್ನು ಶ್ರೀ ಕೃಷ್ಣನ ಪ್ರತಿಮೆಯೊಡನೆ ಲಗ್ನಮಾಡಿದರೆಂದು ಅವರ ಮೇಲೆ ನ್ಯಾಯಸ್ಥಾನದಲ್ಲಿ ವ್ಯಾಜ್ಯಮಾಡಲಾಗಿದೆ.

—ರಾಣೆ ಜಿಲ್ಲೆಯ ಉಂಬರಗಾವ ಎಂಬಲ್ಲಿ ೫೦ ವರುಷದ ಮಹಾದು ಭಿಕಾಜಿ ಎಂಬ ಮನುಷ್ಯನು ಹೊಟ್ಟೆಗೆ ಗತಿಯಿಲ್ಲದ್ದಕ್ಕಾಗಿ ತನ್ನ ಹೊಟ್ಟೆಯ ಮಗನನ್ನು ಜೀವಂತ ಹೂಳಿದನು.

—ಇಟಲಿ ಮತ್ತು ಅಬಸೀನಿಯಾ ಇವುಗಳ ಒಪ್ಪಂದವು ಕೈಗೂಡಲಿಲ್ಲ. ಸಿ. ಮುಸೋಲಿನಿಯವರು ಒಪ್ಪಂದದ ಎಲ ಶರ್ತಗಳನ್ನು ತೆಗೆದು ಹಾಕಿದರು.

ವಿವಿಧ ವರ್ತಮಾನ.

ಜಗತ್ತಿನ ಅತಿ ದೊಡ್ಡ ವಿಮಾನಕ್ಕೆ ಅಪಘಾತ!

ಜಗತ್ತಿನಲ್ಲಿಯ ವಿಮಾನಗಳಲ್ಲಿ ಎಲ್ಲಕ್ಕೂ ದೊಡ್ಡದೆಂದೆನಿಸಿದ ರಶಿಯಾದ ಮಕ್ಸಿಮ್ ಗಾರ್ಕಿ ಎಂಬ ಪ್ರಚಂಡ ವಿಮಾನವು ನೆಲಕ್ಕುರುಳಿ ಚೂರು ಚೂರಾಯಿತು. ಇದರಲ್ಲಿಯ ೧೧ ಜನ ವೈಮಾನಿಕರು ಮತ್ತು ೩೬ ಪ್ರಯಾಣಿಕರು ಮರಣಹೊಂದಿದರು.

೧೮ ನೆಯ ತಾರೀಖಿನ ದಿವಸ ಈ ವಿಮಾನವು ಹೊರಟಾಗ ವಿಮಾನ ಹಾರಿಸುವದನ್ನು ಕಲಿಸುವ ಒಂದು ಸಣ್ಣ ವಿಮಾನವು ಅದಕ್ಕೆ ಬಂದು ತಾಕಲಾಡಿತು. ಇದರಿಂದ ಅವೆರಡೂ ನೆಲಕ್ಕುರುಳಿ ಮುರಿದು ಹೋದವು. ಮರಣ ಹೊಂದಿದವರ ಬಗ್ಗೆ ರಶಿಯನ್ ಸರಕಾರವು ಹಾನಿಯನ್ನು ತುಂಬಿ ಕೊಡುವದು.

ಮಹಾತ್ಮಾಜಿಯವರೂ ನಿಸರ್ಗೋಪಚಾರವೂ.

ಪುಣೆಯ ನೈಸರ್ಗಿಕೋಪಚಾರದ ತಜ್ಞರಾದ ಡಾ. ಎಂ ಬಿ ಗೋಡಬೋಲೆ ಎನ್. ಡಿ. (ಶಿಕಾಗೊ) ಇವರನ್ನು ಮಹಾತ್ಮಾ ಗಾಂಧಿಯವರು ವರ್ಧಾಕ್ಕೆ ಕರೆಯಿಸಿಕೊಂಡಿದ್ದರು. ಅವರು ತಯಾರಿಸಿದ 'ಹಾಯಿಡ್ರೊ ಲಂಗ ಡೆವ್ಹಲಪರ' ಎಂಬ ಪುಪ್ಪುಸೋಪಚಾರದ ಯಂತ್ರವನ್ನು ತೆಗೆದುಕೊಂಡು ಮಹಾತ್ಮರು ತಮ್ಮ ಪುಪ್ಪುಸಗಳ ಸಾಮರ್ಥ್ಯವನ್ನು ಪರೀಕ್ಷಿಸಿಕೊಂಡರು. ಅನಂತರ ನೈಸರ್ಗಿಕ ಉಪಚಾರದ ಬಗ್ಗೆ ೩ ಗಂಟೆಗಳವರೆಗೆ ಅವರ ಸಂಗಡ ವಿಚಾರವಿನಿಮಯ ಮಾಡಿದರು. ಶ್ರೀ. ಗೋಡಬೋಲೆಯವರು [illegible] ಬಗ್ಗೆ ತಾವು ಬರೆದ ಒಂದು ಗ್ರಂಥದ ಕೆಲ ಭಾಗವನ್ನು ಮಹಾತ್ಮರ ಮುಂದೆ ಓದಿ ತೋರಿಸಿದರು. ಈ ವಿಷಯದಲ್ಲಿ ಗಾಂಧೀಜಿಯವರು ಅವರಿಗೆ ಅನೇಕ ಪ್ರಶ್ನೆಗಳನ್ನು ಕೇಳಿದರು. ಹಾಗೂ ಒಬ್ಬ ನಿಸರ್ಗೋಪಚಾರಕನ ಮಾತನ್ನು ನಂಬಿ ತಾವೂ ಮತ್ತು ತಮ್ಮ ೪೦ ಜನ ಆಶ್ರಮವಾಸಿಗಳೂ ಜಡ್ಡಿಗೆ ಬಿದ್ದ ಮನೋರಂಜಕ ಸಂಗತಿಯನ್ನು ಅವರಿಗೆ ತಿಳಿಸಿದರು. ಡಾ. ಗೋಡಬೋಲೆಯವರ ಗ್ರಂಥವನ್ನೂ ಮತ್ತು ಪುಪ್ಪುಸವರ್ಧಕ ಯಂತ್ರವನ್ನೂ ಮಹಾತ್ಮಾಜಿಯವರು ಸದ್ಯಕ್ಕೆ ತಮ್ಮ ಹತ್ತಿರವೇ ತೆಗೆದುಕೊಂಡಿದ್ದು ಅವರಿಗೆ ಇನ್ನೊಮ್ಮೆ ವರ್ಧಾಕ್ಕೆ ಬರಲು ತಿಳಿಸಿದರು.

ಕಾಂಗ್ರೆಸ್ ವರ್ಕಿಂಗ ಕಮಿಟಿ.

ಶ್ರೀ ಸಿ. ರಾಜಗೋಪಾಲಾಚಾರ್ಯ ಮತ್ತು ಡಾ. ಅನ್ಸಾರಿ ಇವರು ಬಿಟ್ಟು ಕೊಟ್ಟದ್ದರಿಂದ ಕಾಂಗ್ರೆಸ್ ವರ್ಕಿಂಗ ಕಮಿಟಿಯ ತೆರವಾದ ಸ್ಥಾನಗಳಿಗೆ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದ ಇವರು ಶ್ರೀ ಸುರೇಂದ್ರ ಮೋಹನ ಮತ್ತು ಬಾಬು ಪುರುಷೋತ್ತಮದಾಸ ಟಂಡನ ಇವರನ್ನು ನಿಯಮಿಸಿಕೊಂಡಿದ್ದಾರೆ.

ಕರ್ನಲ್ ಲಾರೆನ್ಸ ಇವರ ಮೃತ್ಯು.

ಕಳೆದ ಮಹಾ ಯುದ್ಧದ ಕಾಲದಲ್ಲಿ ಅದ್ವಿತೀಯ ಪ್ರಸಿದ್ಧಿಯನ್ನು ಪಡೆದ ಕರ್ನಲ್ ಲಾರೆನ್ಸ ಎಂಬ ಇಂಗ್ಲಿಶ್ ಗುಪ್ತ ಪೋಲೀಸರು ಕಳೆದ ೧೯ ನೆಯ ತಾರೀಖಿನ ದಿವಸ ಆಕಸ್ಮಿಕವಾಗಿ ಮರಣಹೊಂದಿದರು. ಇವರು ೧೩ ನೆಯ ತಾರೀಖಿನ ದಿವಸ ಮೋಟಾರ ಸಾಯಿಕಲ್ಲಿನಲ್ಲಿ ಕುಳಿತು ಹೋಗುತ್ತಿರುವಾಗ ಒಬ್ಬ ಸಣ್ಣ ಹುಡುಗನು ಕಾಲುಗಾಡಿಯ ಮೇಲೆ ಕುಳಿತುಕೊಂಡು ಇವರ ಎದುರಿಗೇ ಬಂದನು. ಅವನನ್ನು ತಪ್ಪಿಸುವದಕ್ಕಾಗಿ ಇವರು ಮಗ್ಗಲು ಹೊರಳಿಸಲು ಮೋಟಾರ ಸಾಯಕಲ್ಲಿನ ಮೇಲಿನಿಂದ ಬಲವಾಗಿ ಬಿದ್ದುಬಿಟ್ಟರು. ಇದರಿಂದ ಇವರ ತಲೆಯ ಪರಟಿಯೇ ಬಿಚ್ಚಿ ಬಿಟ್ಟಿತು. ಮುಂದೆ ೧೪೨ ಗಂಟೆಗಳವರೆಗೆ ಇವರಲ್ಲಿ ಪ್ರಾಣವಿದ್ದರೂ ಸ್ಮೃತಿಯೇ ಇರಲಿಲ್ಲ. ಅನಂತರ ಮರಣಹೊಂದಿದರು.

ಇವರು ಬಹು ಮೇಧಾವಿಗಳು. ಮಹಾ ಯುದ್ಧದ ಕಾಲದಲ್ಲಿ ಅರಬರಂತೆ ವೇಷ ಧರಿಸಿ ಅರಬಸ್ಥಾನದಲ್ಲಿದ್ದುಕೊಂಡು ತುರ್ಕಸ್ಥಾನಕ್ಕೆ ವಿರೋಧಿಸಲು ಅರಬರನ್ನು ಸಜ್ಜುಗೊಳಿಸಿದ್ದರು. ಸೇನಾಧಿಪತಿಗಳಾದ ಲಾರ್ಡ ಕಿಚನರರು ಇವರನ್ನು ಇಜಿಪ್ತದಲ್ಲಿ ಕಾರ್ಯ ಮಾಡಲು ಕಳಿಸಿದ್ದರು.

ನಿಷೇಧದ ಗೊತ್ತುವಳಿಗೆ ಹಿಟ್ಲರರ ಉತ್ತರ

"ಕಳೆದ ಎಪ್ರಿಲ್ ೧೭ ನೆಯ ತಾರೀಖಿನ ದಿವಸ ರಾಷ್ಟ್ರ ಸಂಘದವರು ಜರ್ಮನಿಯನ್ನು ನಿಷೇಧಿಸುವ ಗೊತ್ತುವಳಿಯನ್ನು ಮಾಡಿದುದು ನಮಗೆ ಅಮಾನ್ಯವದೆ. ವ್ಹರ್ಸಾಯಿ ಒಪ್ಪಂದವನ್ನು ಜರ್ಮನಿಯೊಂದೇ ಮುರಿದಿಲ್ಲ. ತದ್ವಿರುದ್ಧವಾಗಿ ಆ ಒಪ್ಪಂದದ ಮೇರೆಗೆ ಜರ್ಮನಿಯು ಶಸ್ತ್ರಗಳನ್ನು ಕಡಿಮೆ ಮಾಡಿತು. ಉಳಿದ ರಾಷ್ಟ್ರಗಳು ಮಾತ್ರ ಹಾಗೆ ಮಾಡಲಿಲ್ಲವಾದುದರಿಂದ ಅವರೇ ಆ ಒಪ್ಪಂದವನ್ನು ಮುರಿದರು. ಈ ನಿಷೇಧದ ಗೊತ್ತುವಳಿಯಿಂದ ಸರ್ವ ಸಭಾಸದರಿಗೂ ಸಮಾನವಾದ ಹಕ್ಕು ದೊರೆಯುವದು ಕಠಿಣವಾಗಿದೆ. ಅದ್ದರಿಂದ ಜರ್ಮನಿಯು ರಾಷ್ಟ್ರ ಸಂಘಕ್ಕೆ ಸೇರುವದು ಅಶಕ್ಯ. ನಮ್ಮಿಂದ ಪೂರ್ಣಗೊಳಿಸಲು ಶಕ್ಯವಿಲ್ಲದ ಒಪ್ಪಿಗೆಗೆ ನಾವೆಂದೂ ಸಮ್ಮತಿಸುವದಿಲ್ಲ."

ಈ ಪ್ರಕಾರ ಹೇರ ಹಿಟ್ಲರರು ರಾಯಿಸ್ಟ್ಯಾಗದಲ್ಲಿ ಭಾಷಣ ಮಾಡಿದರು. ಇವರ ಭಾಷಣವು ಎಲ್ಲಾ ಹಳ್ಳಿ ಪಟ್ಟಣಗಳಿಗೆ ಕೇಳಿಸುವಂತೆ ವ್ಯವಸ್ಥೆ ಮಾಡಿದ್ದರು.

'ಮೋಟಾರ ದಿನ' ಪಾಲಿಸಿರಿ.

ಈಗಿನ ಸುಧಾರಣೆಯ ಕಾಲದಲ್ಲಿ ಅನೇಕ 'ದಿನ' ಗಳು ಪಾಲಿಸಲ್ಪಡುತ್ತವೆ. 'ಮೇ ದಿನ' 'ಸ್ವರಾಜ್ಯ ದಿನ' 'ಕೂಲಿಕಾರ ದಿನ' ಎಂದು ಅನೇಕ ಹೆಸರುಗಳಿಂದ ವರ್ಷದಲ್ಲಿಯ ಯಾವುದೊಂದು ತಾರೀಖನ್ನು ನಿಯಮಿಸಿ ಅಂದು ಆಯಾ ದಿನದಲ್ಲಿ ಆಚರಿಸಬೇಕಾದ ಸಂಗತಿಯ ಬಗ್ಗೆ ಉತ್ಸವ ವ್ಯಾಖ್ಯಾನಾದಿಗಳು ಜರುಗುತ್ತವಷ್ಟೆ. ಹೀಗೆಯೇ ಇಂಗ್ಲಂಡದಲ್ಲಿ ಇಲಾಯದ ಬಿಷಪರು 'ಮೋಟಾರ ದಿನ' ವನ್ನು ಪಾಲಿಸಲು ಸೂಚಿಸಿದರು ಅವರ ಉದ್ದೇಶವಿಷ್ಟೆ. ಪ್ರಚಲಿತ ಪ್ರಪಂಚದಲ್ಲಿ ಮೋಟಾರಿನ ಓಡಾಟ ಬಹಳ. ಡ್ರಾಯವ್ಹರರು ಒಮ್ಮೊಮ್ಮೆ ಮೈಮೇಲೆ ಎಚ್ಚರವಿಲ್ಲದೆ ಮೋಟಾರು ಹೊಡೆದದ್ದರಿಂದ ಅನೇಕ ಅಪಘಾತಗಳಾಗುತ್ತವೆ. ಒಮ್ಮೊಮ್ಮೆ ಮೋಟಾರು ಚೂರು ಚೂರಾಗಿ ಒಳಗೆ ಕುಳಿತ ಪ್ರಯಾಣಿಕರು ಗಾಯಗೊಂಡಿರುವುದನ್ನು ನೋಡಿದರೆ ಮೈ ಕೂದಲು ನೆಟ್ಟಗಾಗುತ್ತವೆ. ಇಂಥ ಅನರ್ಥವನ್ನು ತಪ್ಪಿಸುವುದಕ್ಕಾಗಿ ವರ್ಷದಲ್ಲಿ ಒಂದು ದಿನವನ್ನು 'ಮೋಟಾರ ದಿನ' ವೆಂದು ನಿಯಮಿಸಬೇಕು. ಅಂದು ಯಾರಾದರೂ ಮೋಟಾರು ಇಲ್ಲವೆ ಕಾಲು ಗಾಡಿಯ ಅಪಘಾತ ಸ್ವಲ್ಪ ಮಾಡಿದರೂ ಶಿಕ್ಷೆ ಮಾಡಬೇಕು. ಅಂಥ ಡ್ರಾಯವ್ಹರರಿಗೆ ಮೋಟಾರ ಅಪಘಾತದಿಂದ ಛಿದ್ರ ವಿಚ್ಛಿದ್ರವಾಗಿ ಗಾಯಪಟ್ಟು ಬಿದ್ದ ಪ್ರೇತಗಳನ್ನು ತೋರಿಸಬೇಕು. ಈ ಕ್ರಮವು ಇಂಗ್ಲಂಡದಲ್ಲಿ ಪ್ರಾರಂಭವಾಗಿದೆ. ಹಿಂದುಸ್ಥಾನದಲ್ಲಿಯೂ ಇಂಥ ಉಪಕ್ರಮವು ಪ್ರಾರಂಭವಾಗುವದು ಕ್ಷೇಮಕರವಾಗಿಯೇ ಇದೆ.

ವಿವಿಧ ವಿಷಯ.

ಮಿಡಿಚಿಗಳನ್ನು ಎದುರಿಸಲು ಸೈನಿಕರು ಬಂದರು!

ಯುರೋಪ ಖಂಡದ ದಕ್ಷಿಣ ಭಾಗದಲ್ಲಿ ಮಿಡಿಚಿಯ ಹಾವಳಿಯು ವಿಪರೀತ. ಈ ಪ್ರಚಂಡ ತಂಡವು ಹೊರಟರೆ ದೇಶದಲ್ಲೆಲ್ಲ ಬೆಳೆಗಳ ಹಾಳು. ಗಿಡಗಳ ಮೇಲಿನ ಹಸರು ಎಲೆ ಸಹ ಉಳಿಯುವದಿಲ್ಲ. ಇವು ಗುಂಪು ಗುಂಪಾಗಿ ಹೊರಟರೆ ಮೋಡಗಳು ಸೂರ್ಯನಿಗೆ ಅಡ್ಡ ಬರಲು ನೆರಳು ಬೀಳುವಂತೆ ವಿಸ್ತೀರ್ಣವಾದ ನೆರಳು ಬೀಳುತ್ತದೆ. ಇವು ಹಿತ್ತಲುಗಳನ್ನು ಪ್ರವೇಶಿಸಿ ಫಲ ಪುಷ್ಪಗಳ ಗಿಡಗಳನ್ನು ತರಿದು ಬಿಡುವವು. ಮನೆಯನ್ನು ಹೊಕ್ಕು ಹಿಟ್ಟು ಧಾನ್ಯವನ್ನು ಭಕ್ಷಿಸುವವು. ಇವಗಳನ್ನು ಯಾರಾದರೂ ನಾಶಪಡಿಸಿದರೆ ಸತ್ತ ಮೇಲಂತೂ ವಿಪರೀತ ಕೆಡಕನ್ನುಂಟುಮಾಡುವವು. ಕೆರೆ ಬಾವಿಗಳಲ್ಲಿ ಬಿದ್ದು ನೀರನ್ನು ದೂಷಿತಗೊಳಿಸಿ ಜನರಿಗೆ ಭಯಂಕರ ರೋಗಗಳನ್ನುಂಟುಮಾಡುವವು. ಅಲ್ಲಲ್ಲಿ ಗುಂಪಾಗಿ ಬಿದ್ದು ಸತ್ತು ಹವೆಯನ್ನು ದೂಷಿತಗೊಳಿಸುವವು. ಆಹಾರವು ದೊರೆತಂತೆ ಇವುಗಳ ಸಂಖ್ಯೆಯು ಹೆಚ್ಚುತ್ತಲೇ ಹೋಗುವದು. ಇವುಗಳ ನಿವಾರಣೆಗೆ ಬೇರೆ ಉಪಾಯವೇ ಇಲ್ಲ.!

ಇಂಥ ಪಿಡುಗಿನ ತಂಡವು ಈ ವರ್ಷ ಸ್ಪೇನ ದೇಶವನ್ನು ಮುತ್ತಿದೆ. ೧೯೧೮ನೆಯ ಇಸ್ವಿಯಿಂದ ಇಲ್ಲಿಯವರೆಗೆ ಇಂಥ ಭಯಾನಕ ಸಮೂಹವು ಹೊರಟಿದ್ದಿಲ್ಲ.. ಜನರೆಲ್ಲ ಹೌಹಾರಿದ್ದಾರೆ. ಇವುಗಳನ್ನು ಸುಟ್ಟು ಬಿಡಲು ಅಲ್ಲಿಯ ಸರಕಾರವು ಸೈನ್ಯವನ್ನು ಕಳಿಸಿದೆ. ಅವರು ಬರಿ ಜ್ವಾಲೆಯನ್ನು ಕಾರುವ ಬಂದೂಕುಗಳಿಂದ ಇವುಗಳನ್ನು ನಾಶಪಡಿಸುತ್ತಿದ್ದಾರೆ. ಕಡ್ಡಿಗೊಂಚದಂಥ ಸಾವಿರಾರು ಪಕ್ಷಿಗಳನ್ನೂ ಸಹಾಯಕ್ಕೆ ತಂದಿದ್ದಾರೆ. ಅವು ಲಕ್ಷಾವಧಿ ಮಿಡಿಚಿಗಳನ್ನು ತಿಂದುಬಿಡುವವು. ಇದಲ್ಲದೆ ೧ ಪೌಂಡು ಮಿಡಿಚಿಗಳನ್ನು ಕೊಂದು ತಂದವರಿಗೆ ಅರ್ಧ ಆಣೆಯಂತೆ ಕೂಲಿಯು ಆಳುಗಳನ್ನೂ ನಿಯಮಿಸಿರುವರು. ಬೆಳೆಗಳು ನಾಶವಾದುದರಿಂದ ಒಕ್ಕಲಿಗರೆಲ್ಲ ಹಸಿವೆಯಿಂದ ಬಳಲುತ್ತಿದ್ದಾರೆ. ಅವರಿಗೆಲ್ಲ ಸರಕಾರವು ಅನ್ನ ಒದಗಿಸಿಕೊಡುತ್ತಲಿದೆ.

ಮನುಷ್ಯ ಜಾತಿಗೆ ಬರತಕ್ಕ ಬರ, ಪ್ಲೇಗು ಮೊದಲಾದ ಆಪತ್ತುಗಳಲ್ಲಿ ಈ ತರದ ವಿಪತ್ತು ಅತ್ಯಂತ ಭಯಂಕರವಾದುದು.

ನಿರುದ್ಯೋಗವನ್ನು ಹೋಗಲಾಡಿಸಲು ಯಾರು ಪ್ರಯತ್ನಿಸುತ್ತಿರುವರು?

ನಮ್ಮ ದೇಶದಲ್ಲಿ ಆಂಗ್ಲೊ ಇಂಡಿಯನ್, ಫಾರಸಿ ಮತ್ತು ಬ್ರಾಹ್ಮಣ ಈ ಮೂರು ಮುಖ್ಯ ಸಮಾಜಗಳು ಆಧುನಿಕ ಶಿಕ್ಷಣದಲ್ಲಿ ಒಳ್ಳೇ ಪ್ರಗತಿಯನ್ನು ಹೊಂದಿವೆ. ಇಲ್ಲಿಯ ವರೆಗೆ ಎಲ್ಲ ಕಡೆಯಲ್ಲಿಯೂ ನೌಕರಿ ದೊರೆಯುತ್ತಿದ್ದುದರಿಂದ ನಿರುದ್ಯೋಗದ ಪ್ರಶ್ನೆಯೇ ಅವರಿಗಿದ್ದಿಲ್ಲ. ಆದರೆ ಈಗ ಹಿಂದುಳಿದ ಸಮಾಜದವರೂ ಸುಶಿಕ್ಷಿತರಾಗಿ ನೌಕರಿಗಾಗಿ ಹಾತೊರೆಯುತ್ತಿರುವುದರಿಂದ ಸ್ವಾಭಾವಿಕವಾಗಿಯೇ ಈ ಮೂರು ಸುಶಿಕ್ಷಿತ ಸಮಾಜಗಳಲ್ಲಿ ನಿರುದ್ಯೋಗವುಂಟಾಗಿದೆ. ಹಾಗಾದರೆ ಹಿಂದುಳಿದ ಸಮಾಜದವರಲ್ಲಿ ನಿರುದ್ಯೋಗವೇ ಇಲ್ಲವೆಂತಲ್ಲ. ಆದರೆ ಇವರು ಹಿಂದುಳಿದವರಾದುದರಿಂದ ಈ ಸಮಸ್ಯೆಯನ್ನು ಬಿಡಿಸುವದಕ್ಕೂ ಹಿಂದುಳಿಯಲೇ ಬೇಡವೆ! ಈ ಸುಶಿಕ್ಷಿತ ಸಮಾಜಗಳು ನಡೆಸಿರುವ ಪ್ರಯತ್ನವನ್ನು ನೋಡಿಯಾದರೂ ಉಳಿದವರು ಈಗಾಗಲೇ ಎಚ್ಚರಗೊಳ್ಳುವದು ವಿಹಿತ.

ಆಂಗ್ಲೊ ಇಂಡಿಯನ್—ಆಂಗ್ಲೊ ಇಂಡಿಯನ್ ಸಂಸ್ಥೆಯ ಅಧ್ಯಕ್ಷರಾದ ರೆ. ಫಾದರ ಕ್ಲಿಮೆಂಟ ಎಂಬುವವರು ತಮ್ಮ ಸಮಾಜವನ್ನು ಮುಂದಕ್ಕೆ ತರಲು ಒಂದು ಯೋಜನೆಯನ್ನುಂಟುಮಾಡಿದ್ದಾರೆ. ಅವರು ೫ ಲಕ್ಷ ರೂಪಾಯಿಗಳ ನಿಧಿಯನ್ನು ಕೂಡಿಸಿ ಒಂದು ಸಹಕಾರ ಸಂಘವನ್ನು ಸ್ಥಾಪಿಸುವರು. ಮತ್ತು ಒಂದು ವಿಸ್ತೀರ್ಣವಾದ ಪ್ರದೇಶದಲ್ಲಿ ಒಂದು ವಸಾಹತನ್ನು ಸ್ಥಾಪಿಸಿ ಅದರಲ್ಲಿ ತಮ್ಮ ಜನರು ಮಾಡಬೇಕಾದ ಕಾರ್ಯಗಳನ್ನು ಕುರಿತು ಪ್ರಯೋಗ ನಡೆಯಿಸುವರು. ಹೆಚ್ಚು ವೆಚ್ಚವಿಲ್ಲದ ಕಲಾಕೌಶಲ್ಯಗಳನ್ನೂ, ಬಣ್ಣಗಾರಿಕೆ, ಉಪ್ಪಾರಿಕೆ, ಮುಂತಾದ ಉಪಯುಕ್ತ ಕೈಗಾರಿಕೆಗಳನ್ನೂ, ಒಕ್ಕಲತನವನ್ನು ಪರಿಣಾಮಕಾರಿಯಾಗಿ ಹೇಗೆ ಜರುಗಿಸಬೇಕೆಂಬುದನ್ನೂ ತೋರಿಸಿ ಕೊಡುವರು. ಇನ್ನು ಮುಂದೆ ಎಲ್ಲ ಜಾತಿಯವರಿಗೆ ಅವರ ಸಂಖ್ಯಾ ಪ್ರಮಾಣದ ಮೇಲಿಂದ ಸರಕಾರಿ ನೌಕರಿ ದೊರೆಯಬಹುದಾದುದರಿಂದ ತಮ್ಮ ಜನರು ಈ ಪ್ರಕಾರ ಬೇರೆ ಉದ್ಯೋಗ ಕಲಿಯದೆ ಗತ್ಯಂತರವಿಲ್ಲೆಂದು ಫಾದರ ಕ್ಲಿಮೆಂಟರ ಅಭಿಪ್ರಾಯ.

ಫಾರಸಿ—ಮುಂಬೈ ಫಾರಸಿ ಸಂಘದವರು ತಮ್ಮ ಸಮಾಜದಲ್ಲಿಯ ನಿರುದ್ಯೋಗಿಗಳ ಸಂಖ್ಯೆಯನ್ನು ಅರಿತುಕೊಂಡು ಅವರಲ್ಲಿ ವಿವಿಧ ಉದ್ಯೋಗಗಳ ಜ್ಞಾನವನ್ನುಂಟುಮಾಡಿಕೊಡುವದಕ್ಕಾಗಿ ಪ್ರಯತ್ನಿಸುತ್ತಿದ್ದಾರೆ. ಮತ್ತು ಅವರಿಗೆ ವಿದ್ಯಾರ್ಥಿ ವೇತನದ ಸಹಾಯ ಮಾಡುವ ಕುರಿತು ಹಾಗೂ ಸ್ವಾವಲಂಬನೆ ಮತ್ತು ಪರರಿಗೆ ಸಹಾಯ ಮಾಡುವ ಭಾವನೆಯನ್ನು ಹುಟ್ಟಿಸುವದಕ್ಕಾಗಿಯೂ ಯತ್ನ ನಡೆಯಿಸಬಲ್ಲರು.

ಬ್ರಾಹ್ಮಣ—ಪುಣೆಯ ಬ್ರಾಹ್ಮಣ ಸಮಾಜದವರು ತಮ್ಮ ಸಮಾಜದಲ್ಲಿಯ ನಿರುದ್ಯೋಗತನವನ್ನು ಹೋಗಲಾಡಿಸಲು ೧೫ ಲಕ್ಷ ರೂ. ಕೂಡಿಸಿದ್ದಾರೆ. ಆ ಧನವನ್ನು ಯಾವ ಪ್ರಕಾರವಾಗಿ ವಿನಿಯೋಗ ಮಾಡಬೇಕೆಂಬ ಯೋಜನೆಗಳನ್ನು ಸೂಚಿಸುವದಕ್ಕಾಗಿ ಪ್ರಕಟಿಸಿದ್ದರು. ಆ ಪ್ರಕಾರ ೪೦ ಭಿನ್ನ ಭಿನ್ನ ಯೋಜನೆಗಳು ಅವರ ಕಡೆಗೆ ಬಂದಿವೆ.

ಈ ಪ್ರಕಾರ ಸುಶಿಕ್ಷಿತ ಸಮಾಜದವರು ತಮ್ಮ ಹಿತಾಹಿತಗಳನ್ನು ಲಕ್ಷಿಸಿ ನಡೆಯುತ್ತಿರುವಾಗ ಇನ್ನುಳಿದ ಸಮಾಜದವರು ಮುಂದೆ ಭಯಂಕರ ಪರಿಣಾಮಕ್ಕೆ ಒಳಗಾಗದಂತೆ ಈಗಾಗಲೆ ನಿರುದ್ಯೋಗ ಸಮಸ್ಯೆಯನ್ನು ಬಿಡಿಸುವ ಕಾರ್ಯ ಕೈಕೊಳ್ಳುವದು ಯುಕ್ತವಲ್ಲವೆ?

ಸಿಲೆಂಡರ್ ಮಶಿನ್ ಬೇಕಾಗಿದೆಯೆ?

ಹಾಗಾದರೆ ನಮ್ಮಲ್ಲಿದೆ. ಡಾವಸನ್ ಎಂಡ್ ಸನ್ಸ್ ಕಂಪನಿಯದು. ಉತ್ತಮ ಸ್ಥಿತಿಯಲ್ಲಿ ಕೆಲಸಮಾಡುತ್ತದೆ. ಇನ್ನರ್ ಸೈಡ್ ಛೇಸ್ 29¼ + 35¼ ಸೈಜಿನದು. ಪಂಪಾ ಸಹಿತ ಇದ್ದಲ್ಲದೆ ಫೋಲ್ಡಿಡ್ ಮೋಲ್ಡುಗಳು ಸಹಿತ ಕೊಡಲ್ಪಡುವುದು.

ಹೆಚ್ಚಿನ ಸಂಗತಿಗಳನ್ನು ಪತ್ರಮುಖೇನ ಅಥವಾ ಸಮಕ್ಷಮ ತಿಳಿದುಕೊಳ್ಳಬಹುದು. ಮ್ಯಾನೇಜರ್

ಶ್ರೀ ಲಿಂಗರಾಜ ಆರ್ಟ ಪ್ರೆಸ್, ಧಾರವಾಡ

ವಿವಿಧ ವಿಷಯ.

ಮಿಡಿಚಿಗಳನ್ನು ಎದುರಿಸಲು ಸೈನಿಕರು ಬಂದರು!

ಯುರೋಪ ಖಂಡದ ದಕ್ಷಿಣ ಭಾಗದಲ್ಲಿ ಮಿಡಿಚಿಯ ಹಾವಳಿಯು ವಿಪರೀತ. ಈ ಪ್ರಚಂಡ ತಂಡವು ಹೊರಟರೆ ದೇಶದಲ್ಲೆಲ್ಲ ಬೆಳೆಗಳ ಹಾಳು. ಗಿಡಗಳ ಮೇಲಿನ ಹಸರು ಎಲೆ ಸಹ ಉಳಿಯುವದಿಲ್ಲ. ಇವು ಗುಂಪು ಗುಂಪಾಗಿ ಹೊರಟರೆ ಮೋಡಗಳು ಸೂರ್ಯನಿಗೆ ಅಡ್ಡ ಬರಲು ನೆರಳು ಬೀಳುವಂತೆ ವಿಸ್ತೀರ್ಣವಾದ ನೆರಳು ಬೀಳುತ್ತದೆ. ಇವು ಹಿತ್ತಲುಗಳನ್ನು ಪ್ರವೇಶಿಸಿ ಫಲ ಪುಷ್ಪಗಳ ಗಿಡಗಳನ್ನು ತರಿದು ಬಿಡುವವು. ಮನೆಯನ್ನು ಹೊಕ್ಕು ಹಿಟ್ಟು ಧಾನ್ಯವನ್ನು ಭಕ್ಷಿಸುವವು. ಇವಗಳನ್ನು ಯಾರಾದರೂ ನಾಶಪಡಿಸಿದರೆ ಸತ್ತ ಮೇಲಂತೂ ವಿಪರೀತ ಕೆಡಕನ್ನುಂಟುಮಾಡುವವು. ಕೆರೆ ಬಾವಿಗಳಲ್ಲಿ ಬಿದ್ದು ನೀರನ್ನು ದೂಷಿತಗೊಳಿಸಿ ಜನರಿಗೆ ಭಯಂಕರ ರೋಗಗಳನ್ನುಂಟುಮಾಡುವವು. ಅಲ್ಲಲ್ಲಿ ಗುಂಪಾಗಿ ಬಿದ್ದು ಸತ್ತು ಹವೆಯನ್ನು ದೂಷಿತಗೊಳಿಸುವವು. ಆಹಾರವು ದೊರೆತಂತೆ ಇವುಗಳ ಸಂಖ್ಯೆಯು ಹೆಚ್ಚುತ್ತಲೇ ಹೋಗುವದು. ಇವುಗಳ ನಿವಾರಣೆಗೆ ಬೇರೆ ಉಪಾಯವೇ ಇಲ್ಲ!

ಇಂಥ ಪಿಡುಗಿನ ತಂಡವು ಈ ವರ್ಷ ಸ್ಪೇನ ದೇಶವನ್ನು ಮುತ್ತಿದೆ. ೧೯೧೧ ನೆಯ ಇಸ್ವಿಯಿಂದ ಇಲ್ಲಿಯವರೆಗೆ ಇಂಥ ಭಯಾನಕ ಸಮೂಹವು ಹೊರಟಿದ್ದಿಲ್ಲ.. ಜನರೆಲ್ಲ ಹೌಹಾರಿದ್ದಾರೆ. ಇವುಗಳನ್ನು ಸುಟ್ಟು ಬಿಡಲು ಅಲ್ಲಿಯ ಸರಕಾರವು ಸೈನ್ಯವನ್ನು ಕಳಿಸಿದೆ. ಅವರು ಬರಿ ಜ್ವಾಲೆಯನ್ನು ಕಾರುವ ಬಂದೂಕುಗಳಿಂದ ಇವುಗಳನ್ನು ನಾಶಪಡಿಸುತ್ತಿದ್ದಾರೆ. ಕಡ್ಡಿಗೊಂಚದಂಥ ಸಾವಿರಾರು ಪಕ್ಷಿಗಳನ್ನೂ ಸಹಾಯಕ್ಕೆ ತಂದಿದ್ದಾರೆ. ಅವು ಲಕ್ಷಾವಧಿ ಮಿಡಿಚಿಗಳನ್ನು ತಿಂದುಬಿಡುವವು. ಇದಲ್ಲದೆ ೧ ಪೌಂಡು ಮಿಡಿಚಿಗಳನ್ನು ಕೊಂದು ತಂದವರಿಗೆ ಅರ್ಧ ಆಣೆಯಂತೆ ಕೂಲಿಯ ಆಳುಗಳನ್ನೂ ನಿಯಮಿಸಿರುವರು. ಬೆಳೆಗಳು ನಾಶವಾದುದರಿಂದ ಒಕ್ಕಲಿಗರೆಲ್ಲ ಹಸಿವೆಯಿಂದ 'ಬಳಲುತ್ತಿದ್ದಾರೆ. ಅವರಿಗೆಲ್ಲ ಸರಕಾರವು ಅನ್ನ ಒದಗಿಸಿಕೊಡುತ್ತಲಿದೆ.

ಮನುಷ್ಯ ಜಾತಿಗೆ ಬರತಕ್ಕ ಬರ, ಪ್ಲೇಗು ಮೊದಲಾದ ಆಪತ್ತುಗಳಲ್ಲಿ ಈ ತರದ ವಿಪತ್ತು ಅತ್ಯಂತ ಭಯಂಕರವಾದುದು.

ನಿರುದ್ಯೋಗವನ್ನು ಹೋಗಲಾಡಿಸಲು ಯಾರು ಪ್ರಯತ್ನಿಸುತ್ತಿರುವರು?

ನಮ್ಮ ದೇಶದಲ್ಲಿ ಆಂಗ್ಲೊ ಇಂಡಿಯನ್, ಫಾರಸಿ ಮತ್ತು ಬ್ರಾಹ್ಮಣ ಈ ಮೂರು ಮುಖ್ಯ ಸಮಾಜಗಳು ಆಧುನಿಕ ಶಿಕ್ಷಣದಲ್ಲಿ ಒಳ್ಳೇ ಪ್ರಗತಿಯನ್ನು ಹೊಂದಿವೆ. ಇಲ್ಲಿಯ ವರೆಗೆ ಎಲ್ಲ ಕಡೆಯಲ್ಲಿಯೂ ನೌಕರಿ ದೊರೆಯುತ್ತಿದ್ದುದರಿಂದ ನಿರುದ್ಯೋಗದ ಪ್ರಶ್ನೆಯೇ ಅವರಿಗಿದ್ದಿಲ್ಲ. ಆದರೆ ಈಗ ಹಿಂದುಳಿದ ಸಮಾಜದವರೂ ಸುಶಿಕ್ಷಿತರಾಗಿ ನೌಕರಿಗಾಗಿ ಹಾತೊರೆಯುತ್ತಿರುವುದರಿಂದ ಸ್ವಾಭಾವಿಕವಾಗಿಯೇ ಈ ಮೂರು ಸುಶಿಕ್ಷಿತ ಸಮಾಜಗಳಲ್ಲಿ ನಿರುದ್ಯೋಗವುಂಟಾಗಿದೆ. ಹಾಗಾದರೆ ಹಿಂದುಳಿದ ಸಮಾಜದವರಲ್ಲಿ ನಿರುದ್ಯೋಗವೇ ಇಲ್ಲವೆಂತಲ್ಲ. ಆದರೆ ಇವರು ಹಿಂದುಳಿದವರಾದುದರಿಂದ ಈ ಸಮಸ್ಯೆಯನ್ನು ಬಿಡಿಸುವದಕ್ಕೂ ಹಿಂದುಳಿಯಲೇ ಬೇಡವೆ! ಈ ಸುಶಿಕ್ಷಿತ ಸಮಾಜಗಳು ನಡೆಸಿರುವ ಪ್ರಯತ್ನವನ್ನು ನೋಡಿಯಾದರೂ ಉಳಿದವರು ಈಗಾಗಲೇ ಎಚ್ಚರಗೊಳ್ಳುವದು ವಿಹಿತ.

ಆಂಗ್ಲೊ ಇಂಡಿಯನ್—ಆಂಗ್ಲೊ ಇಂಡಿಯನ್ ಸಂಸ್ಥೆಯ ಅಧ್ಯಕ್ಷರಾದ ರೆ. ಫಾದರ ಕ್ಲಿಮೆಂಟ ಎಂಬುವವರು ತಮ್ಮ ಸಮಾಜವನ್ನು ಮುಂದಕ್ಕೆ ತರಲು ಒಂದು ಯೋಜನೆಯನ್ನುಂಟುಮಾಡಿದ್ದಾರೆ. ಅವರು ೫ ಲಕ್ಷ ರೂಪಾಯಿಗಳ ನಿಧಿಯನ್ನು ಕೂಡಿಸಿ ಒಂದು ಸಹಕಾರ ಸಂಘವನ್ನು ಸ್ಥಾಪಿಸುವರು. ಮತ್ತು ಒಂದು ವಿಸ್ತೀರ್ಣವಾದ ಪ್ರದೇಶದಲ್ಲಿ ಒಂದು ವಸಾಹತನ್ನು ಸ್ಥಾಪಿಸಿ ಅದರಲ್ಲಿ ತಮ್ಮ ಜನರು ಮಾಡಬೇಕಾದ ಕಾರ್ಯಗಳನ್ನು ಕುರಿತು ಪ್ರಯೋಗ ನಡೆಯಿಸುವರು. ಹೆಚ್ಚು ವೆಚ್ಚವಿಲ್ಲದ ಕಲಾಕೌಶಲ್ಯಗಳನ್ನೂ, ಬಣ್ಣಗಾರಿಕೆ, ಉಪ್ಪಾರಿಕೆ, ಮುಂತಾದ ಉಪಯುಕ್ತ ಕೈಗಾರಿಕೆಗಳನ್ನೂ, ಒಕ್ಕಲತನವನ್ನು ಪರಿಣಾಮಕಾರಿಯಾಗಿ ಹೇಗೆ ಜರುಗಿಸಬೇಕೆಂಬುದನ್ನೂ ತೋರಿಸಿ ಕೊಡುವರು. ಇನ್ನು ಮುಂದೆ ಎಲ್ಲ ಜಾತಿಯವರಿಗೆ ಅವರ ಸಂಖ್ಯಾ ಪ್ರಮಾಣದ ಮೇಲಿಂದ ಸರಕಾರಿ ನೌಕರಿ ದೊರೆಯಬಹುದಾದುದರಿಂದ ತಮ್ಮ ಜನರು ಈ ಪ್ರಕಾರ ಬೇರೆ ಉದ್ಯೋಗ ಕಲಿಯದೆ ಗತ್ಯಂತರವಿಲ್ಲೆಂದು ಫಾದರ ಕ್ಲಿಮೆಂಟರ ಅಭಿಪ್ರಾಯ.

ಫಾರಸಿ—ಮುಂಬೈ ಫಾರಸಿ ಸಂಘದವರು ತಮ್ಮ ಸಮಾಜದಲ್ಲಿಯ ನಿರುದ್ಯೋಗಿಗಳ ಸಂಖ್ಯೆಯನ್ನು ಅರಿತುಕೊಂಡು ಅವರಲ್ಲಿ ವಿವಿಧ ಉದ್ಯೋಗಗಳ ಜ್ಞಾನವನ್ನುಂಟುಮಾಡಿಕೊಡುವದಕ್ಕಾಗಿ ಪ್ರಯತ್ನಿಸುತ್ತಿದ್ದಾರೆ. ಮತ್ತು ಅವರಿಗೆ ವಿದ್ಯಾರ್ಥಿ ವೇತನದ ಸಹಾಯ ಮಾಡುವ ಕುರಿತು ಹಾಗೂ ಸ್ವಾವಲಂಬನೆ ಮತ್ತು ಪರರಿಗೆ ಸಹಾಯ ಮಾಡುವ ಭಾವನೆಯನ್ನು ಹುಟ್ಟಿಸುವದಕ್ಕಾಗಿಯೂ ಯತ್ನ ನಡೆಯಿಸಿದ್ದಾರೆ.

ಬ್ರಾಹ್ಮಣ—ಪುಣೆಯ ಬ್ರಾಹ್ಮಣ ಸಮಾಜದವರು ತಮ್ಮ ಸಮಾಜದಲ್ಲಿಯ ನಿರುದ್ಯೋಗತನವನ್ನು ಹೋಗಲಾಡಿಸಲು ೧॥ ಲಕ್ಷ ರೂ. ಕೂಡಿಸಿದ್ದಾರೆ. ಆ ಧನವನ್ನು ಯಾವ ಪ್ರಕಾರವಾಗಿ ವಿನಿಯೋಗ ಮಾಡಬೇಕೆಂಬ ಯೋಜನೆಗಳನ್ನು ಸೂಚಿಸುವದಕ್ಕಾಗಿ ಪ್ರಕಟಿಸಿದ್ದರು. ಆ ಪ್ರಕಾರ ೪೦ ಭಿನ್ನ ಭಿನ್ನ ಯೋಜನೆಗಳು ಅವರ ಕಡೆಗೆ ಬಂದಿವೆ.

ಈ ಪ್ರಕಾರ ಸುಶಿಕ್ಷಿತ ಸಮಾಜದವರು ತಮ್ಮ ಹಿತಾಹಿತಗಳನ್ನು ಲಕ್ಷಿಸಿ ನಡೆಯುತ್ತಿರುವಾಗ ಇನ್ನುಳಿದ ಸಮಾಜದವರು ಮುಂದೆ ಭಯಂಕರ ಪರಿಣಾಮಕ್ಕೆ ಒಳಗಾಗದಂತೆ ಈಗಾಗಲೆ ನಿರುದ್ಯೋಗ ಸಮಸ್ಯೆಯನ್ನು ಬಿಡಿಸುವ ಕಾರ್ಯ ಕೈಕೊಳ್ಳುವದು ಯುಕ್ತವಲ್ಲವೆ?

ಸಿಲೆಂಡರ್ ಮಶಿನ್ ಬೇಕಾಗಿದೆಯೆ?

ಹಾಗಾದರೆ ನಮ್ಮಲ್ಲಿದೆ. ಡಾವಸನ್ ಎಂಡ್ ಸನ್ಸ್ ಕಂಪನಿಯದು. ಉತ್ತಮ ಸ್ಥಿತಿಯಲ್ಲಿ ಕೆಲಸಮಾಡುತ್ತದೆ. ಇನ್ನರ್ ಸೈಡ್ ಛೇಸ್ $29\frac{1}{2} + 35\frac{1}{2}$ ಸೈಜಿನದು. ಪಂಪಾ ಸಹಿತ ಇದ್ದದ್ದು ಫೋಲ್ಡಿಂಗ್ ರೋಲ್ಲುಗಳು ಸಹಿತ ಕೊಡಲ್ಪಡುವುದು.

ಹೆಚ್ಚಿನ ಸಂಗತಿಗಳನ್ನು ಪತ್ರಮುಖೇನ ಅಥವಾ ಸಮಕ್ಷಮ ತಿಳಿದುಕೊಳ್ಳಬಹುದು. ಮ್ಯಾನೇಜರ್

ಶ್ರೀ ಲಿಂಗರಾಜ ಎಲೆಕ್ಟ್ರಿಕ್ ಪ್ರೆಸ್, ಧಾರವಾಡ

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಗೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ವನಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

ಜಿ. ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರಖಾನೆ, ಅರಳೇ ಪೇಟೆ, ತುಮಕೂರು
(ಮೈಸೂರು ಸ್ಟೇಟ್)

ಜಾಹೀರಾತ.

ಸರ್ವಜನರಲ್ಲಿ ವಿಜ್ಞಾಪಿಸುವದೇನಂದರೆ—

ಈ ಜಾಹೀರಾತಿನಿಂದ ತಿಳಿಸುವದೇನಂದರೆ ನನ್ನ ಸಹೋದರನಾದ ಬಸಣ್ಣ ಈತನು ಮನೆ ಬಿಟ್ಟು ಒಂದು ವರುಷವಾಯಿತು. ಈತನ ಸ್ವಭಾವ ಹುಚ್ಚು, ವಯಸ್ಸು ೪೦, ಬಣ್ಣ ಸಾಧಾರಣ ಕೆಂಪು, ಸಾಧಾರಣ ನಿಲುವು, ದುಂಡು ಮುಖ, ಬಲ ಗದ್ದದ ಮೇಲೆ ಒಂದು ಹಸರು ಬಣ್ಣದ ಹೆಬ್ಬೆರಳಿನಷ್ಟು ಕಲೆ ಇದ್ದು ಅದರ ಮೇಲೆ ಕೂದಲು ಇವೆ. ಒಮ್ಮೊಮ್ಮೆ ಗೋಣು ಹೊರಳಿಸುವನು. ಮತ್ತು ಶೌಚಕ್ಕೆ ಕೂತರೆ ೨-೩ ತಾಸಾದರು ಕೂಡ್ರುವನು. ಮತ್ತು ಕ್ಷೌರಮಾಡಿಸುವದಕ್ಕೆ ಬಹಳ ಪ್ರೀತಿ. ಮೀಸೀಸಹ ತೆಗೆಸುವನು. ಬಾಲ, ವೃದ್ಧರಿಗೆ ಸಹ ಕಾತ್ರಾ, ತಾತಾ ಅನ್ನುವನು. ತನ್ನಷ್ಟಕ್ಕೆ ತಾನೆ ಮರಿಯಪ್ಪ ಪಂಪಣ್ಣ, ಟಾಕಣ್ಣ ಎಂದು ಅನ್ನುತ್ತಾನೆ ಹೆಸರು ಕೇಳಿದರೆ ಬಸಣ್ಣನೆಂದು ಹೇಳುವನು. ಹುಡುಗರು ಕಾಡಿದರೆ ಚೀರುವನು. ಮತ್ತು ಹಸ್ತ ತಿರಿವಿ ಹಿಡಿದು ಶಂಖಹಚ್ಚುವನು. ಇಷ್ಟು ಚಿಹ್ನಗಳನ್ನು ಕಂಡರೆ ದಯವಿಟ್ಟು ತಮ್ಮಲ್ಲಿ ಇರಿಸಿಕೊಂಡು ನನಗೆ ತಿಳಿಸಿದರೆ ನಿಮಗೆ ೧೦ ರೂ. ಇನಾಮು ಕೊಡುತ್ತೇವೆ ತಿಳಿದಿರಬೇಕು.

ನನ್ನ ವಿಳಾಸ:— **ಪಂಪಣ್ಣ ಗಡ್ಡದ ದೇವಾಂಗ**
ಮುಕ್ಕಾಂ, ಪೋಸ್ಟ ಮುಸ್ಕಿ, ತಾಲೂಕಾ
ಲಿಂಗಸೂಗೂರ ಜಿಲ್ಲಾ ರಾಯಚೂರ.

ಮುದ್ದಾದ ಅಕ್ಷರ! ಸುಲಭ ದರ!

ಶ್ರೀ ರಂಗನಾಥ ಟೈಪ್ ಫೌಂಡರಿ

ಬೆಂಗಳೂರು.

ಕನ್ನಡ ಮತ್ತು ಇಂಗ್ಲಿಷ, ಎಲ್ಲಾ ತರದ ಟೈಪುಗಳೂ ಒಳ್ಳೊಳ್ಳೇ ಬಾರ್ಡರಗಳೂ ನಮ್ಮ ಫೌಂಡರಿಯಲ್ಲಿ ತಯಾರಾಗುತ್ತವೆ.

ಒಳ್ಳೇ ಮೆಟಲ್, ಬಹು ಅಂದವಾದ ಅಕ್ಷರಗಳು. ಬಲು ಸುಲಭ ದರ ಕ್ಯಾಟಲಾಗ ತರಿಸಿಕೊಳ್ಳಿರಿ ಒಮ್ಮೆ ಟೈಪುಗಳನ್ನು ತರಿಸಿಕೊಂಡು ಅನುಭವ ಹೊಂದಿರಿ. ಹಳೆ ಟೈಪುಗಳಿದ್ದರೆ ಸುಲಭ ಚಾರ್ಜಿಗೆ ಹೊಸದಾಗಿ ಹೊಯಿದು ಕೊಡುತ್ತೇವೆ.

ಪ್ರೊಪ್ರೈಟರ,
ಶ್ರೀ ರಂಗನಾಥ ಟೈಪ್ ಫೌಂಡರಿ
೬೭ ಕುಬೇರ ಸಾಹುಜಿ ಲೈನ್
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪತ್ರಿಫಲದ ದಿವ್ಯಾಭರಣ!

ಲಿಂಗಪೂಜಕರಿಗೆ ಪತ್ರಿಯು ಅತ್ಯಾಗತ್ಯವಲ್ಲವೆ? ಪತ್ರಿಯ ಫಲದಿಂದ ಮಾಡುವ ಈ ದಿವ್ಯಾಭರಣ, ಗಳಲ್ಲಿ ನಿಮಗೆ ಬೇಕಾದುದನ್ನು ತರಿಸಿಕೊಳ್ಳಿರಿ.

ಕರಕಮಲ, ನಾಗಾಭರಣ, ಕಂಠಮಾಲೆ ಮೊದಲಾದವು. ಮಂತ್ರವಿಶಿಷ್ಟ, ಲಿಂಗಪೂಜೆಗೆ ಅಗತ್ಯವಾಗಿರತಕ್ಕವು.

ನಿಮ್ಮ ಇಷ್ಟದಂತೆ ಮಂತ್ರಾಕ್ಷರಗಳನ್ನು ಸ್ಫುಟಗೊಳಿಸಿ ಪತ್ರಿಯ ಕಾಯಿಯ ಚಿಪ್ಪಿನಿಂದ ಬಹು ಅಂದವಾದ ಆಭರಣಗಳನ್ನು ತಯಾರುಮಾಡಿಕೊಡುತ್ತೇವೆ.

ಕ್ರಯ ೧ ರೂಪಾಯಿಯಿಂದ ಮೇಲ್ಪಟ್ಟು ನಿಮ್ಮ ಇಷ್ಟವಿದ್ದಷ್ಟು ರೂ. ಗಳ ವರೆಗೆ.

ವಿಳಾಸ:— ಸಂಗಮೇಶ- ಶ್ರೀ ಸರ್ಪಭೂಷಣ ಶಿವಯೋಗಿ ಮಠ ಬಳೇಪೇಟೆ ಬೆಂಗಳೂರು ಸಿಟಿ.

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! **ಉತ್ತಮ ಸೌಕರ್ಯ!** **ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ, ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಗೂ ಸಮುದ್ರದಢಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .... ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುಖ ಬೂ ಬೇಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ- ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ

ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೭೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦

೬೦ ,, ,, ,, ೧೬-೮-೦

೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ . -ಕೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**

ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಜಯಕರ್ನಾಟಕ

ಕರ್ನಾಟಕದ ಪ್ರಮುಖ ಮಾಸಪತ್ರಿಕೆ.

ವಾರ್ಷಿಕ ಚಂದಾ ೫-೮-೦

ನಾಟ್ಯಾಂಕ

ವಿವಿಧಚಿತ್ರ! ಸರಸನಾಟಕ ಕಥೆ! ವಿದ್ವತ್‌ಪ್ರಚುರ ಲೇಖಗಳಿವೆ!

ತ್ವರೆಮಾಡಿರಿ—ಬೆಲೆ ೧ ರೂ.—ತೀರುತ್ತಿವೆ.

ಜಯಕರ್ನಾಟಕ ಗ್ರಂಥಮಾಲೆ

ವರ್ಷಕ್ಕೆ ೬ ಪುಸ್ತ] ವಾ. ಚಂ ೩-೪-೦ [ಮೇಲೊಂದು ಉಚಿತಪುಸ್ತ

ಜ. ಕ. ಚಂದಾದಾರರಿಗೆ ೩ ರೂ.

ಮೂರನೆಯ ವರ್ಷದ ನಾಲ್ಕನೆಯ ಪುಸ್ತವಾದ

ಶ್ರೀ. ಹ. ಪಿ. ಜೋಶಿಯವರ

ಇದೀಗ ಹೊರಟಿದೆ] **ರಾಜವಲ್ಲಭ** [ಬೆಲೆ ಹತ್ತು ಆಣೆ.

ಕೀಚಕ ವಧೆ ಕಥೆಯನ್ನು ಆಧರಿಸಿ ಬರೆದ ಹೊಸ ಸಂಗೀತ ನಾಟಕ. ಉಚಿತ ಸಂಭಾಷಣೆ, ಮಿತವಿನೋದ, ಸುರಮ್ಯ ಪದ್ಯ ಮಾಲಿಕೆ.

ಜಯಕರ್ನಾಟಕ ಕಾರ್ಯಾಲಯ

ಧಾರವಾಡ.

ನಿರಂಜನ ಹಾಲ್.

ಮಹಾಶಯರೇ ನಮ್ಮಲ್ಲಿ ಸಕಲರಿಗು ಪೂಜಾರ್ಹವಾದ ಸಾಮಾನುಗಳು ದೊರೆಯುತ್ತೆ.

ಮಹದೇಶ್ವರ ಸ್ವಾಮಿಯವರು ಎಂಬ ಮಹಾ ವಿರಕ್ತರು ತಮ್ಮ ಬಾಲ್ಯದಲ್ಲಿಯೇ ಹುಲಿಯ ಮೇಲೆ ಕುಳಿತು ಸಂಚಾರ ಮಾಡುತ್ತಿದ್ದ ಫೋಟೋ ೧೦×೧೪ ಸೈಜು ಡಜನ ೧ ಕ್ಕೆ ೧-೮-೦

ನಂಜುಂಡೇಶ್ವರ ಸ್ವಾಮಿ ಫೋಟೋ ೧೦+೧೪ ಸೈಜು ಡಜನ ೧ ಕ್ಕೆ (೧-೮-೦) ಡಿಟೋ ೬+೯ ಸೈಜು ಡ. ೧ ಕ್ಕೆ ೦-೧೨-೦ ಮತ್ತು ೦-೬-೦. ಅವಲ್ ದಶಾಂಗ ಧೂಪದ ಛಟ್ಟ ಸೇರು ೧ ಕ್ಕೆ (೨-೦-೦) ದುಯಂ ಸೇರು ೧ ಕ್ಕೆ, ೧-೮-೦ ೧-೦-೦ ಎಡೆಯೂರು **ಸಿದ್ಧಲಿಂಗೇಶ್ವರ ಸ್ವಾಮಿಯವರ ಫೋಟೋ** ೧೦೦ ಕ್ಕೆ ೪-೦-೦ ಒಂದಾವರ್ತಿ ತರಿಸಿ ಪರೀಕ್ಷಿಸಿರಿ.

ಹೆಚ್, ಎಂ. ಮಲ್ಲಪ್ಪ ಅಂಡ್, ಬ್ರದರ್ಸ್

ಫೋಟೋಗ್ರಾಫರ್,

ನಂಜನಗೂಡು.

೧೦,೩೧,೦೦೦ ರೂಪಾಯಿ

ಬೆಲೆ ಬಾಳುವ ಪಾಲಿಸಿಗಳನ್ನು ಸ್ವರಾಜ್ಯ ಕಂಪನಿಯುವರು ಬರೀ ಹದಿನಾಲ್ಕು ತಿಂಗಳಲ್ಲಿ ಕೊಟ್ಟಿರುತ ಕೂಸು ಹುಟ್ಟಿದರೆ, ಮಕ್ಕಳ ಮದಿವೆ ಮಾಡಿದರೆ, ಮರಣ ಹೊಂದಿದರೆ, ವಿಮೆಯುದಾರರಿಗೆ ೫೦೦ ರೂಪಾಯಿಗಳ ವರೆಗೆ, ವಿಮೆಯ ಹಣವು ಕೊಡಲ್ಪಡುವದು. ವಿಮೆಯ ಕಂತಗಳು ತೀರ ಕಡಿಮೆ. ತಿಂಗಳೊಂದಕ್ಕೆ ಒಂದು ರೂಪಾಯಿ. ಪ್ರವೇಶ ಫೀ ೫ ರೂ. ವಾರ್ಷಿಕ ಫೀ ಒಂದು ರೂಪಾಯಿ ಮಾತ್ರ. ಏಜಂಟರಾಗಿ ಕೆಲಸ ಮಾಡುವವರಿಗೂ ಅರ್ಗನಾಯಝರರಿಗೂ ಒಳ್ಳೇ ಲಾಭ.

ಹೆಚ್ಚಿನ ಮಾಹಿತಿ ಬೇಕಾದವರು ಕಂಪನಿಯ ಕೂಡ ಪತ್ರವ್ಯವಹಾರ ಮಾಡಬೇಕು.

ಎಂ. ಎಸ್. ಕೇಸರಿ ಬಿ. ಎ., ಎಲ್ ಎಲ್. ಬಿ.
ಮ್ಯಾನೇಜಿಂಗ ಏಜಂಟ್ಸ್,
ದಿ ಸ್ವರಾಜ್ಯ ಬ್ಯಾಂಕಿಂಗ ಆ್ಯಂಡ ಇನ್ಶ್ಯುರನ್ಸ
ಕಂಪನಿ ಲಿಮಿಟೆಡ್, ಧಾರವಾಡ.

ದಿ ಸ್ವರಾಜ್ಯ ಬ್ಯಾಂಕಿಂಗ

ಮತ್ತು ಇನ್ಶ್ಯುರನ್ಸ ಕಂಪನಿ, ಲಿಮಿಟೆಡ್

ಧಾರವಾಡ

ಇದರ ಮ್ಯಾನೇಜಿಂಗ ಏಜಂಟ್ಸರವರಿಗೆ—

ನೀಲಪ್ಪಾ ಮಲ್ಲಪ್ಪಾ ಮೆಣಸಿನಕಾಯಿ ಸಾ|| ಅಕ್ಕೂರ ಜಿಲ್ಲಾ ಧಾರವಾಡ ಈತನು ಮಾಡುವ ಶರಣಾರ್ಥಿಗಳು

ತಮ್ಮ ಕಂಪನಿಯಲ್ಲಿ ನಾನು ೧೯೩೪ನೇ ಇಸ್ವಿಯ ಜಾನೇವರಿ ತಿಂಗಳ ಇಪ್ಪತ್ತನೆಯ ತಾರೀಖಿನ ದಿವಸ ಜನನ ವಿಮೆಯನ್ನು ಇಳಿಸಿದ್ದೆನು. ನನ್ನ ಜನನ ವಿಮೆಯ ಪಾಲಿಸಿ ನಂಬರು (೨) ಎರಡು ಇರುತ್ತದೆ. ಪಾಲಿಸಿಯನ್ನು ತೆಗೆದುಕೊಂಡ ಒಂದು ವರ್ಷದ ಮೇಲೆ ನನಗೆ ಒಂದು ಕೂಸು ಜನನವಾಯಿತು. ಕಂಪನಿಗೆ ನಾನು ಒಟ್ಟು (೧೮) ರೂಪಾಯಿಗಳನ್ನು ಕೊಟ್ಟಿರುತ್ತೇನೆ. ಕೂಸು ಹುಟ್ಟಿದ್ದನ್ನು ಸಿದ್ಧಮಾಡಿಕೊಟ್ಟ ಕೂಡಲೆ ನೀವು ನನಗೆ ಕಳುಹಿಸಿಕೊಟ್ಟ (೪೪೭) ನಾಲ್ಕುನೂರಾನಾಲ್ವತ್ತೇಳು ರೂಪಾಯಿಗಳು ಮುಟ್ಟಿದುವು. ಈ ಬಗ್ಗೆ ಕಂಪನಿಗೆ ನಾನು ತುಂಬಾ ಋಣಿಯಾಗಿದ್ದೇನೆ.

ಅಕ್ಕೂರ
ತಾ|| ೧೩-೩-೩೫. } (ಸಹಿ) ನೀಲಪ್ಪಾ ಮಲ್ಲಪ್ಪಾ ಮೆಣಸಿನಕಾಯಿ.

ಹರ್ಡೇಕರ ಮಂಜಪ್ಪನವರು ಬರೆದ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಕಾಯಕವೆ ಕೈಲಾಸ	೦-೩-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ವಿಜಯವಾಣಿ	೦-೨-೦
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತ	೦-೦-೬

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ, ಜಿ ವಿಜಾಪುರ.

ಪ್ಲೇಗ ಸಂಜೀವಿನಿ.

ಅತ್ಯಾಶ್ಚರ್ಯಕರವಾದ ಗುಣ! ಕೇವಲ ೬ ತಾಸುಗಳಲ್ಲಿಯೇ ಗುಣ!

ಇದನ್ನು ಸೇವನೆ ಮಾಡುವದರಿಂದ ಪ್ಲೇಗಿನ ಭಯವೇ ಇಲ್ಲ!

೧೦೦ ಕ್ಕೆ ೧೦೦ ರಂತೆ ಗುಣ!!

ಶ್ರೀ ಮನ್ನಿರಂಜನ ಶಾಂತವೀರ ಸ್ವಾಮಿಗಳು ಗುರುಮಠಕಲ್ ಇವರು ಲೋಕ ಕಲ್ಯಾಣಾರ್ಥವಾಗಿ **ಪ್ಲೇಗ ಸಂಜೀವಿನಿ** ಎಂಬ ದಿವ್ಯ ಔಷಧಿಯನ್ನು ಶೋಧಮಾಡಿರುವರು ಪ್ಲೇಗ ರೋಗವು ಎಷ್ಟು ಘಾತುಕವದೆಯೆಂಬುದನ್ನು ಹೇಳುವ ಅವಶ್ಯವಿಲ್ಲ. ಈ ಪ್ಲೇಗಿನಿಂದ ಸಾವಿರಾರು ಜನರು ಸಾಯುತ್ತಿರುತ್ತಾರೆ. ಇದನ್ನು ತಡೆಯುವದಕ್ಕಾಗಿ ಎಷ್ಟೋ ಔಷಧಗಳನ್ನು ತಯಾರ ಮಾಡಿರುವರು. ಅವುಗಳಿಂದೇನೂ ಗುಣವಾದದ್ದು ಕಂಡು ಬರುವದಿಲ್ಲ ಈ ಪ್ಲೇಗ ಸಂಜೀವಿನಿಯಿಂದ **ಆರೇ ತಾಸುಗಳಲ್ಲಿಯೇ** ಗುಣವಾಗುತ್ತದೆ. ಇದರ ಒಂದು ಬಾಟ್ಲಿಯ ಕಿಮ್ಮತ್ತು ೧ ರೂ. ೫ ಆಣೆ.

ವಿಶೇಷ ಮಾಹಿತಿಯನ್ನು ಅನುಪಾನ ಪತ್ರಿಕೆಯಲ್ಲಿ ನೋಡಿರಿ.

ವಿಶೇಷ ಸೂಚನೆ— ಅನುಪಾನ ಪತ್ರಿಕೆಯ ಸೂಚನೆಯ ಮೇರೆಗೆ ಔಷಧವನ್ನು ತೆಗೆದುಕೊಂಡಲ್ಲಿ ಖಾತ್ರಿಯಿಂದ ಗುಣವಾಗುವದು. ಎಲ್ಲ ಕಡೆಗೂ ಏಜಂಟರು ಬೇಕು.

ಏಜಂಟ್
ಬಶೆಟ್ಟೆಪ್ಪ ಬಸಪ್ಪ ಹಲಕುರ್ಕಿ,
ಬಾಗಲಕೋಟೆ

ವಿಳಾಸ—
ಪ್ಲೇಗ ಸಂಜೀವಿನಿ ಆಫೀಸ್
ಗುಲಬರ್ಗಾ.

ಮಹಾರೋಗ ಸಂಜೀವಿನಿ.

ಶ್ರೀಮನ್ನಿರಂಜನ ಗುರುಮಠಕಲ್ಲ ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ

ಮಹಾರೋಗ ಸಂಜೀವಿನಿ,

ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.

ಇತ್ತಿತ್ತಲಾಗಿ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ಮಿತಿಮೀರಿ ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. ಈ ಕೆಟ್ಟಬೇನೆಯು (ಪ್ಲೇಗ ಮಾರಿಕಾ,) ಖಜ್ಜಿಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ ತಗಲತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ಮೃತ್ಯುವಿನ ತುತ್ತಾಗುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಖಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ನಾರಸಂಹಾರಿ, ಕೂಸುಗಳ ಹೊಟ್ಟೆಯೊಳಗಿನ ಬೇನೆ** ವಗೈರೆ ರೋಗಗಳ ಮೇಲೆ ಆಶ್ಚರ್ಯಕಾರಕ ಔಷಧಿಗಳನ್ನು ಕಂಡು ಹಿಡಿದ ಸದರಿ ಪೂಜ್ಯಪಾದರೇ ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ ಔಷಧಿಯನ್ನು ಶೋಧಮಾಡಿ ಪ್ರಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೆಯುಳ್ಳವರು ಮುದ್ದಾಂ ಬಂದು ತಮ್ಮ ರೋಗ ಲಕ್ಷಣಗಳನ್ನೆಲ್ಲ ತೋರಿಸಿದರೆ ಅದಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ. ಮೊದಲು ಔಷಧದ ಅರ್ಧ ಕಿಮ್ಮತ್ತು ಕೊಟ್ಟು ಔಷಧ ತಕ್ಕೊಳ್ಳಲು ಪ್ರಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಅಗ್ಗಿ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳತಕ್ಕದ್ದು. ವಿಶೇಷ ಸಂಗತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು.

ಮ್ಯಾನೇಜರ ಆರೋಗ್ಯ ಮಂದಿರ, ಕಿರೀಟಮಠ ಕಸಬಾ ಕ್ಯಾಂಪ **ಸೊಲ್ಲಾಪುರ ಸಿಟಿ.**

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯು ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರೆಗಳನ್ನೇ ಉಪಯೋಗಿಸಿರಿ!

ಈ ಪತ್ತಲಗಳಲ್ಲಿ ವಿಶೇಷ ಗುಣನೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
ಶಿವಸಂಗಪ್ಪಣ್ಣಾ ಕುಪಸ್ತ,
ಬಾಗಲಕೋಟೆ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.
(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—
ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಮಹಾಗಾಂವ್, ಜಿ. ಗುಲಬರ್ಗಾ.

ನಾರಿನ ಮೇಲೆ ರಾಮ ಬಾಣ ಔಷಧ.

'ಗಿನೋನಾಲ್'

ನಾರಿನಿಂದ ಬಳಲುವವರು ಈ ನಮ್ಮ ದಿವ್ಯ ಔಷಧವನ್ನು ಎರಡಾವರ್ತಿ ಉಪಯೋಗಿಸಿದರೆ ಖಂಡಿತ ಗುಣಬರುತ್ತದೆ. ಒಮ್ಮೆ ಉಪಯೋಗಿಸಿ ಅನುಭವ ಪಡೆಯಿರಿ. ಒಂದು ಬಾಟ್ಲಿಯ ಕಿಂ. ೧ ರೂ ಟಪಾಲವೆಚ್ಚ ಬೇರೆ. ಅನುಪಾನ ಪತ್ರಿಕೆ ಔಷಧದ ಜೊತೆಗೆ.

ಮ್ಯಾನೇಜರ—'ಗಿನೋನಾಲ್' ಡಿಪೋ
ಗುಲಬರ್ಗಾ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಜೂನ್ ತಾರೀಖು ೩ ನೆಯ ಸೋಮವಾರ | ಸಂಚಿಕೆ ೪೯.

ಕ್ವೇಟಾದಲ್ಲಿ ೨೫೦೦ ಜನರ ಮೃತ್ಯು!

ದುರ್ದೈವಿ ಬಿಹಾರದ ಗಾಯವು ಮಾಯುವ ಮೊದಲೇ ಕ್ವೇಟಾದಲ್ಲಿ ಭೂದೇವಿಯ ರೌದ್ರಾವತಾರವು ಪುನಃ ಆವಿರ್ಭವಿಸಿದೆ. ಭೂಕಂಪದಿಂದ ಸರ್ವ ನಾಶ! ತಟತಟನೆ ತಂತಿಗಳು ಕಿತ್ತು ಕಂಬಗಳೆಲ್ಲ ಭೂದೇವಿಗೆರಗಿದವು! ಕ್ವೇಟಾ ಪಟ್ಟಣದಲ್ಲೆಲ್ಲ ಮೃತ್ಯುವಿನ ಕೋಲಾಹಲ! ೨೫೦೦ ಜನರು ಸತ್ತರೆಂದು ಒಂದು ಸುದ್ದಿ; ಕ್ವೇಟಾ ಪಟ್ಟಣವೇ ಸರ್ವ ನಾಶವಾಗಿದೆಯೆಂದೂ, ೨೮೦೦೦ ಜನ ಮೃತಪಟ್ಟರೆಂದೂ ಕರಾಚಿಯಿಂದ ಬಂದ ಸುದ್ದಿ! ೪೫. ಜನ ವೈಮಾನಿಕರು ಗತಪ್ರಾಣವಾದರು! ೩೦ ವೈಮಾನಿಕರ ಸುದ್ದಿಯೇ ಇಲ್ಲ. ಸರಕಾರಿ ಮಧ್ಯಮ ವರ್ಗದ ಅಧಿಕಾರಿಗಳೆಲ್ಲರು ಕೊಲ್ಲಲ್ಪಟ್ಟದ್ದು ಸಾಧಾರಣ ಪೋಲೀಸ ಸಿಪಾಯಿಗಳೆಲ್ಲರೂ ಸರಹಾರವಾಗಿದ್ದಾರೆ. ಮಸ್ತುಂಗವೆಂಬ ಹಳ್ಳಿಯು ಭೂಗತವಾಗಿ ಹಳ್ಳಿಗರೆಲ್ಲ ಭೂಮಿಯೊಳಗೇ! ಕಿಲಾತವೆಂಬ ಪಟ್ಟಣವೆಲ್ಲ ನೆಲಸಮವಾಗಿದೆ. ದಟ್ಟಾದ ವಸತಿಯುಳ್ಳ 'ಬಾಬು ಮೊಹಲ್ಲಾ' ಮತ್ತು 'ಮೋತಿ ಮೊಹಲ್ಲಾ' ಎಂಬ ಕ್ವೇಟಾದ ಓಣಿಗಳೆಲ್ಲ ನೆಲಸಮ!!

ಇಂಗ್ಲಂಡ ಮತ್ತು ಹಿಂದುಸ್ಥಾನಗಳ ನಡುವೆ ಈ ಅನಿಷ್ಟ ವಾರ್ತೆಯ ಬಗ್ಗೆ ತಂತಿಯ ಮೇಲೆ ತಂತಿ ಅಲೆಯಹತ್ತಿವೆ. ಲಾಹೋರ, ಕರಾಚಿಗಳಿಂದ ಡಾಕ್ಟರರು, ನರ್ಸಗಳು, ಆಹಾರದ ದ್ರವ್ಯಗಳೊಡನೆ ಸ್ಪೇಶಲ್ ಟ್ರೇನಿನಲ್ಲಿ ಸಾಗಿಸಲ್ಪಡಹತ್ತಿದ್ದಾರೆ.

ಪುನಃ ವಿಮರ್ಶೆ.

ಮೇ ೨೭ ನೆಯ ತಾರೀಖಿನ ಶರಣ ಸಂದೇಶದಲ್ಲಿ ಗದಗಿನ ವೀರಶೈವ ತರುಣ ಸಂಘದಿಂದ ಪ್ರಕಟವಾದ ಬಸವಣ್ಣನವರ ೧೬೧ ವಚನಗಳ ಇಂಗ್ಲಿಷ ಅನುವಾದನ್ನು ಕುರಿತು ವಿಮರ್ಶೆ ಮಾಡಿದ್ದಾಗಿದೆಯಷ್ಟೆ. ಆಮೇಲೆ ತಾ. ೨೮ ನೆಯ ದಿನ ಗದಗಿನ ತರುಣ ಸಂಘದ ಕಾರ್ಯದರ್ಶಿಗಳಾದ ಶ್ರೀ. ಬುಳ್ಳಾ ಬಸೆಟ್ಟೆಪ್ಪನವರು ಅದೇ ಪುಸ್ತಕದ ಒಂದು ಪ್ರತಿಯನ್ನು ವಿಮರ್ಶೆಗೆ ಕಳಿಸಿದ್ದಾರೆ. ಈ ಪುಸ್ತಕದ ಮೊದಲಿನ ಮತ್ತು ಈಗಿನ ಪ್ರತಿಗಳಲ್ಲಿ ಈ ಕೆಳಗಿನ ವ್ಯತ್ಯಾಸಗಳಿವೆ.

ಮೊದಲಿನ ಪ್ರತಿ ೧೯೩೪ ರಲ್ಲಿ ಅಚ್ಚಾಗಿ ಪ್ರಕಾಶಕರು ವೀರಶೈವ ತರುಣ ಸಂಘದ ಗೌರವ ಕಾರ್ಯದರ್ಶಿ ಶ್ರೀ ಬಸವಣ್ಣೆಪ್ಪ ಬಿ. ಹುಬ್ಬಳ್ಳಿ ಎಂಬುದಾಗಿದೆ. ಮತ್ತು ಅದು ನೆಕ್ಸ್ಟ್ ಹೊಲಿಗೆಯುಳ್ಳದ್ದು. ಕ್ರಯ ನಾಲ್ಕಾಣೆ ಮಾತ್ರ. ಈಗ ಕಳುಹಿಸಲ್ಪಟ್ಟ ಪುಸ್ತಕದಲ್ಲಿ ೧೯೩೫ ನೆಯ ಇಸವಿ ಮತ್ತು ತರುಣ ಸಂಘದಿಂದ ಪ್ರಕಟವಾದ ಸಂಗತಿಗಳಿವೆ. ಅದರ ಕ್ರಯ ೮ ಆಣೆ. ಹೊಲಿಗೆ ಸಾದಾ.

ದಾವಣಗೆರೆಯಲ್ಲಿ ಘೋರ ಕೊಲೆಯೆ?

ದಾವಣಗೆರಿ ಅಂದನೂರು ಮಲ್ಲಶೆಟ್ಟೆಪ್ಪನವರಿಗೆ ಇಬ್ಬರು ಮಕ್ಕಳು. ಅವರಲ್ಲಿ ಹಿರಿಯವನಿಗೆ ಎಷ್ಟೋ ದಿನ ಕನ್ಯೆ ದೊರೆತಿರಲಿಲ್ಲ. ಆಮೇಲೆ ರಾಮಗಿರಿ ಎಂಬಲ್ಲಿ ಒಬ್ಬರು ೧೫೦ ರೂ. ಗಳನ್ನು ತೆಗೆದುಕೊಂಡು ತಮ್ಮ ಮಗಳನ್ನು ಕೊಟ್ಟರಂತೆ. ಆ ಹುಡುಗಿಯು ಲೋವರ ಸೆಕೆಂಡರಿ ವರೆಗೆ ಕಲಿತಿದ್ದಾಳೆ. ಒಳ್ಳೆಯ ಗುಣಶೀಲಾಚಾರದವಳು. ಲಗ್ನವಾದ ಮೇಲೆ ಅವರು ಮನೆಗೆ ಕಳಿಸಲೇ ಇಲ್ಲವಂತೆ. ಗಂಡನ ಮನೆಯಲ್ಲಿ ಆಗಾಗ್ಗೆ ಈ ಹುಡುಗಿಗೆ ಹಿಂಸೆಪಡಿಸುತ್ತಿದ್ದರಂತೆ.

ಒಂದು ದಿನ [illegible] ಬಹಳವಾಗಿ ಹೊಡೆದನೆಂದು ಆಗ ನೆರೆಮನೆಯವರು ಬಿಡಿಸಿದರೆಂದೂ ಹೇಳುತ್ತಾರೆ. ರಾತ್ರಿಯ ವರೆಗೂ ಸುಮ್ಮನಿದ್ದು ಮಧ್ಯ ರಾತ್ರಿಯಲ್ಲಿ ಗಂಡನು ಹಾರೆಕೋಲು, ಗುದ್ದಲಿ ಹಿಡಿಗಳಿಂದ ಬಹಳವಾಗಿ ಹೊಡೆದನೆಂದೂ ಅದರಿಂದ ಆ ಹುಡುಗಿ ಮೃತಪಟ್ಟಳೆಂದೂ ತಾ. ೨೫ ನೆಯ ತಾಯಿನಾಡು ಪತ್ರಿಕೆಯಿಂದ ತಿಳಿಯುತ್ತದೆ. ಈ ಹುಡುಗಿ ೫ ತಿಂಗಳು ಗರ್ಭಿಣಿಯಿದ್ದಳಂತೆ. ಪೋಲೀಸ್ ವಿಚಾರಣೆ ನಡೆದಿದೆ.

ವರನು ಬೇಕು.

P. 18 ಹದಿನಾರು ವರ್ಷ ಪ್ರಾಯದ ಸುರೂಪಿಯೂ, ಗೃಹಕೃತ್ಯದಲ್ಲಿ ನಿಪುಣೆಯೂ, ಕನ್ನಡ ಓದುಬರಹ ಬಲ್ಲವಳೂ ಆದ ಗೌಡ ಸಾರಸ್ವತ ಬ್ರಾಹ್ಮಣ ಕನ್ಯಾ ವಧುವಿಗೆ ೨೩ ವರ್ಷಕ್ಕೆ ಮೀರದ ಸರಕಾರಿ ಉದ್ಯೋಗವಿರುವ ಸ್ವವೃಂದದ ವರನು ಬೇಕು.

ವಧುವು ಬೇಕು.

W. 17 ಸರಕಾರಿ ಕೆಲಸದಲ್ಲಿ ತಿಂಗಳಿಗೆ ೩೦ ರೂ. ಸಂಬಳವಿರುವ ೩೫ ವರ್ಷ ಪ್ರಾಯದ ಆರೋಗ್ಯವಂತರಾದ ಓರ್ವ ಗೌಡ ಸಾರಸ್ವತ ಬ್ರಾಹ್ಮಣ ಯುವಕರಿಗೆ ೨೪ ವರ್ಷಕ್ಕೆ ಮೀರದ ಸುಂದರಿಯೂ, ಗೃಹಕೃತ್ಯಗಳನ್ನು ನಿರ್ವಹಿಸಬಲ್ಲವಳೂ ಆದ ವಿದ್ಯಾವಂತ ವಿಧವೆಯು ಬೇಕು.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ. ಎಸ್. ಶೈ

ಶಿವಪೇಟೆ ಪುತ್ತೂರು.ದ. ಕ.

ಬಸವಣ್ಣನವರ ವಚನಗಳ ಅನುವಾದ.

SAYINGS OF BASAVANNA.

(ಅನುವಾದಕರು— ಶ್ರೀ. ಎಂ. ವೆಂಕಟೇಶ ಅಯ್ಯಂಗಾರ್ಯರು ಎಮ್. ಎ.)

—:ಕಳೆದ ಸಂಚಿಕೆಯಿಂದ ಬಂದುದು:—

೭ ಹಾವಿನಬಾಯ ಕಪ್ಪೆಹಸಿದು ಹಾರುವ ನೊಣಕ್ಕೆ ಆಸೆ ಮಾಡುವಂತೆ, ಶೂಲವನೇರುವ ಕಳ್ಳನು ಹಾಲು ತುಪ್ಪವ ಕುಡಿದು ಮೇಲೇನು ಕಾಲ ಬದುಕುವನೋ?

"The frog which is caught in the mouth of the snake itself desires the fly moving near its mouth. So is our life. The man condemned to die drinks milk and ghee. How much longer does he hope to live?"

೮ ನಂಬರು, ನೆಚ್ಚರು, ಬರಿದೆ ಕರೆವರು, ನಂಬಲರಿಯದೆ ಲೋಕದ ಮನುಜರು. ನಂಬಿ ಕರೆದಡೋ ಎನ್ನನೆ ಶಿವನು? ನಂಬದೆ ನೆಚ್ಚದೆ, ಬರಿದೆ ಕರೆವರಕೊಂಬೆ ಮೆಟ್ಟಿ ಕೂಗೆಂದ ಕೂಡಲ ಸಂಗಮದೇವಾ.

"They believe not, nor have faith. But they call. The men of this earth know not how [illegible]. If they believed and called, would [illegible] and trust not, [illegible] call, 'Lay [illegible] ground, tread on them and triumph,' said our God Kudala Sangama."

೯ ಶಾಸ್ತ್ರ ಘನವೆಂಬೆನೆ? ಕರ್ಮವ ಭಜಿಸುತ್ತಿದೆ. ವೇದ ಘನವೆಂಬೆನೆ? ಪ್ರಾಣ ವಧೆಯ ಹೇಳುತ್ತಿದೆ. ಸ್ಮೃತಿ ಘನವೆಂಬೆನೆ? ಮುಂದಿಟ್ಟು ಅರಸುತ್ತಿದೆ. ಅಲ್ಲೆಲ್ಲಿಯೂ ನೀವಿಲ್ಲದ ಕಾರಣ, ತ್ರಿವಿಧ ದಾಸೋಹದಲಲ್ಲದೆ ಕಾಣಬಾರದು, ಕೂಡಲ ಸಂಗಮದೇವಾ.

"Shall I say the Shastra is great? It praises ritual. Shall I say the Veda is great? It preaches the taking of life. Shall I say that the Law is great? It is still searching. You are not in any of these my God and are not to be seen except in the threefold service of your servants."

೧೦ ಗೀತವ ಬಲ್ಲಾತ ಜಾಣನಲ್ಲ. ಮಾತ ಬಲ್ಲಾತ ಜಾಣನಲ್ಲ. ಜಾಣನು ಜಾಣ, ಆತ ಜಾಣನು. ಲಿಂಗವ ನೆರೆನಂಬಿದಾತ ಜಾಣನು. ಜಂಗಮಕ್ಕೆ ಸವಿಸುವಾತ ಆತ ಜಾಣನು, ಜವನ ಬಾಯಲು ಬಾಲವ ಕೊಯ್ದು ಹೋದಾತ ಜಾಣನು. ನಮ್ಮ ಕೂಡಲಸಂಗನ ಶರಣನು.

"He who knows the Geetha is not wise; nor he who knows the sacred books. He only is wise who trusts in God. Aye! He only! and he who serves the servants of God. He is wise who relies on God Kudala Sangama and can defy the Lord of Death."

೧೧ ಹೊತ್ತಾರೆ ಎದ್ದು ಲಿಂಗದೇವನ ದೃಷ್ಟಿಯಾರೆ ನೋಡದವನ, ಸಂಸಾರವೇನವನ, ಬಾಳುವೇನವನ, ಬೀಳುವೇನವನ, ಸಂಸಾರವೇನವನ, ನಡೆಯೇನವನ, ನುಡಿಯೇನವನ, ಸಂಸಾರವೇನವನ, ಕರ್ತ ಕೂಡಲ ಸಂಗಮದೇವ, ನಿಮ್ಮ ತೊತ್ತುಗೆಲಸವ ಮಾಡದವನ ಸಂಸಾರವೇನವನ?

"What is the life of him, what his existence? —what is his progress, or what his movement? —what his word, what his being? —who does not act as your humblest servant, God Kudala Sangama?"

೧೨ ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ! ಇಲ್ಲಿ ಸಲ್ಲುವರು, ಅಲ್ಲಿಯೂ ಸಲ್ಲುವರಯ್ಯಾ! ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ, ಕೂಡಲ ಸಂಗಮದೇವಾ.

"This world is the testing-house of the creator. Whoever passes here passes there. He who does not pass here cannot pass there. O God Kudala Sangama!"

೧೩ ಹೊತ್ತಾರೆ ಎದ್ದು ಅಗ್ಗವಣಿ ಪತ್ರೆಯ ತಂದು, ಹೊತ್ತು ಹೋಗದ ಮುನ್ನ, ಪೂಜಿಸು ಲಿಂಗವ. ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು? ಹೊತ್ತು ಹೋಗದ ಮುನ್ನ, ಮೃತ್ಯು ಒಯ್ಯದ ಮುನ್ನ, ತೊತ್ತುಗೆಲಸವ ಮಾಡು ಕೂಡಲ ಸಂಗಮದೇವನ.

"Rise with the dawn, bring the holy water and the holy leaf and worship God betimes. A little later and who knows you? Serve God Kudala Sangama; ere time passes, ere death comes."

೧೪ ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುವುದು, ಮಾಡಿದ ಪೂಜೆಯ ನೋಡುವುದಯ್ಯ. ಶಿವತತ್ವಗೀತವ ಪಾಡುವುದು, ಶಿವನ ಮುಂದೆ ನಲಿದಾಡುವುದಯ್ಯ. ಭಕ್ತಿ ಸಂಭಾಷಣೆಯ ಮಾಡುವುದು ನಮ್ಮ ಸಂಗಯ್ಯನ ಕೂಡುವುದು.

"Worship God in the eight ways; serve Him in the sixteen; look through His worship you did; sing the song of His praise; rejoice in the presence of your God; speak speech concerning the Lord and be merged in God Kudala Sangama."

—(ಮುಂದುವರಿಯುವದು)—

ಕನ್ನಡಿಗರ ಸ್ಥಿತಿಗತಿ ಕೊಂಚ ನೋಡಿ!

ಪ್ರತಿಯೊಂದು ವ್ಯಕ್ತಿಯೂ ತಾನೇ ತನ್ನ ಸ್ಥಿತಿಗತಿಗಳನ್ನು ಆಗಾಗ್ಗೆ ನೋಡಿಕೊಂಡರೆ ತನ್ನ ಕುಂದು ಕೊರತೆಗಳು ಗೊತ್ತಾಗಿ ತನ್ನ ಉನ್ನತಿಯ ಮಾರ್ಗವು ಹೇಗೆ ತನಗೆ ತೋರಬಹುದೋ ಹಾಗೆಯೇ ಒಂದು ದೇಶವು ಕೂಡಾ ತನ್ನ ಸ್ಥಿತಿಗತಿಗಳನ್ನು ಆಗಾಗ್ಗೆ ತಾನೇ ಯೋಚಿಸಿ ಗುಣದೋಷಗಳನ್ನು ಅರಿತುಕೊಳ್ಳುವುದು ಅದರ ಶ್ರೇಯಸ್ಸಿಗೆ ಸಾಧನವಾಗಿದೆ.

ಆದಕಾರಣ ಈ ಸ್ಪರ್ಧೆಯ ಯುಗದಲ್ಲಿ ನಮ್ಮ ಕನ್ನಡ ನಾಡು ಹೇಗಿದೆ? ಇದರ ಸ್ಥಿತಿಗತಿಗಳಾವುವು? ಎಂಬುದನ್ನು ನಾವು ಯೋಚಿಸುವುದು ಯುಕ್ತವಲ್ಲವೆ? ದುರಭಿಮಾನದಿಂದ ನಾವೇ ನಮ್ಮ ನಾಡಿನ ಕುಂದುಕೊರತೆಗಳನ್ನು ಮುಚ್ಚಿಟ್ಟುಕೊಂಡರೆ ಅದರಿಂದ ಯಾರಿಗೆ ಕೇಡು? ನಿಷ್ಪಕ್ಷಪಾತವಾಗಿ ನಾವೇ ನಮ್ಮ ನಾಡಿನ ಸ್ಥಿತಿಗತಿಗಳನ್ನು ವಿಮರ್ಶಿಸಿ ನಮ್ಮ ಬಾಂಧವರ ಮುಂದಿಡುವುದು ವಿಹಿತವಲ್ಲವೇ? ಅದರಿಂದ ನಮ್ಮ ಕುಂದುಕೊರತೆಗಳನ್ನು ನಿವಾರಣೆ ಮಾಡಿಕೊಳ್ಳಲು ಅವಕಾಶವಾಗುವುದಿಲ್ಲವೆ?

ಕ್ರಿ. ಶ. ೧೯೦೫ ನೆಯ ಇಸವಿಯಿಂದ ಜಗತ್ತಿನ ಸ್ಥಿತಿಯು ದಿನೇ ದಿನೇ ಬಹು ವ್ಯತ್ಯಸ್ತವಾಗುತ್ತಾ ಬಂದಿದೆ. ಜಪಾನಿನ ವಿಜಯವು ಯುರೋಪದ ಮಹಾಯುದ್ಧವು ಪ್ರಪಂಚದಲ್ಲಿ ಮಹತ್ತರವಾದ ಕ್ರಾಂತಿಯನ್ನುಂಟುಮಾಡಿದವು. ಈ ಅವಧಿಯಲ್ಲಿ ಹಿಂದುಸ್ಥಾನವೂ ಎಷ್ಟೋ ಜಾಗೃತವಾಗಿದೆ. ಬಂಗಾಲ ವಿಭಜನೆಯಿಂದ ಕಳೆದ ೩೦ ವರುಷಗಳಲ್ಲಿ ಹಿಂದುಸ್ಥಾನವು ಕೂಡಾ ಅನೇಕ ಅದ್ವಿತೀಯ ಕ್ರಾಂತಿಗಳಿಗೊಳಗಾಗಿ ಎಷ್ಟೋ ಮಾರ್ಪಾಟವನ್ನು ಹೊಂದಿದೆ.

ಕಳೆದ ೩೦ ವರುಷಗಳಲ್ಲಿ ಕರ್ನಾಟಕವು ಎಷ್ಟರಮಟ್ಟಿಗೆ ಜಾಗೃತವಾಯಿತು? ಇದು ಮಾಡಿದ ಮಹತ್ಕಾರ್ಯಗಳಾವುವು? ರಾಜಕೀಯ, ಸಾಮಾಜಿಕ, ಸಾಂಪತ್ತಿಕ, ಶೈಕ್ಷಣಿಕ ಮೊದಲಾದ ಅತ್ಯಂತ ಮಹತ್ವದ ವಿಷಯಗಳಲ್ಲಿ ಕಳೆದ ೩೦ ವರುಷ ಅನೇಕ ಬದಲಾವಣೆಗಳಾಗಿವೆಯಷ್ಟೆ. ಈ ವಿಷಯಗಳಲ್ಲಿ ಕರ್ನಾಟಕವು ಎಷ್ಟರಮಟ್ಟಿಗೆ ಯಾವ ಯಾವ ವಿಷಯಗಳಲ್ಲಿ ಮುಂದೆ ಬಂದಿದೆ? ಯಾವ ಯಾವ ಕನ್ನಡ ಮಾತೆಯ ಪುತ್ರರು ತಮ್ಮ ತಾಯಿಯ ಕೀರ್ತಿಯನ್ನು ಹೇಗೆ ಹೇಗೆ ಪ್ರಕಾಶಗೊಳಿಸಿದರು?

ಈ ಎಲ್ಲಾ ಸಂಗತಿಗಳನ್ನು ಯೋಚಿಸುವುದು ಯುಕ್ತವಲ್ಲವೆ? ಇದರಿಂದ ನಮ್ಮ ಶಕ್ತಿ ಸಾಹಸಗಳು ಎಷ್ಟೋ ಗೊತ್ತಾಗುವುದಿಲ್ಲವೆ? ನಮ್ಮ ನೆರೆಯವರಾದ ಮರಾಠಿಗರ ಸ್ಥಿತಿಗತಿಗಳಿಗೆ ಹೋಲಿಸಿ ನೋಡಿಕೊಳ್ಳೋಣ. ಹಾಗೆ ಮಾಡಿದರೆ ನಾವು ಹಿಂದುಳಿದಿರುವೆವೋ? ಮುಂದರಿದಿರುವೆವೋ? ಎಂಬುದು ಗೊತ್ತಾಗುವುದು. ನಮ್ಮ ಮೂವತ್ತು ವರುಷಗಳ ಬೆಳವಣಿಗೆಗೂ ಮರಾಠಿಗರು ಅದೇ ಕಾಲದಲ್ಲಿ ಮುಂದರಿದುದಕ್ಕೂ ಸರಿ ಹಚ್ಚಿ ನೋಡಿದರೆ ನಾವು ತಲೆ ಬಾಗಿಸಬೇಕಾಗುವುದೆಂದೇ ನಿಷ್ಪಕ್ಷಪಾತಿಗಳಿಗೆ ಗೊತ್ತಾಗದಿರಲಾರದು.

ಇಲ್ಲ.

(೧) ಒಬ್ಬ ಕನ್ನಡಿಗನಾದರೂ ಗೋಖಲೆ, ಟಿಳಕರಂತೆ ಅಖಿಲ ಹಿಂದುಸ್ಥಾನದ ಮುಂದಾಳುಗಳಾದರೇ? (೨) ಒಬ್ಬರಾದರೂ ಗೋಖಲೆ, ರಾನಡೆ, ಮೊದಲಾದವರಂತೆ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದರೆ? (೩) ಒಬ್ಬರಾದರೂ ಜಯಕರ, ಜಿನ್ನಾ, ಮೊದಲಾದವರಂತೆ ಸುಪ್ರಸಿದ್ಧ ಬ್ಯಾರಿಷ್ಟರರಾದರೇ? (೪) ಒಬ್ಬರಾದರೂ ನ್ಯಾ. ರಾನಡೆಯವರಂತೆ ಹೈಕೋರ್ಟ ಜಜ್ಜರಾದರೇ? (೫) ಒಬ್ಬರಾದರೂ ಡಾ. ಭಾಂಡಾರಕರರಂತೆ ಧಾರ್ಮಿಕ ಪರಿಶೋಧಕರಾದರೇ? (೬) ಲೋ. ಟಿಳಕರಂತೆ ಒಬ್ಬರಾದರೂ ರಾಜಕಾರಣ ಮುತ್ಸದ್ದಿಗಳಾದರೇ? (೭) ಕೀರ್ತಿಶೇಷ ಆಗರಕರರಂತೆ ಒಬ್ಬರಾದರೂ ಸಾಮಾಜಿಕ ಸುಧಾರಕರಾದರೇ?

(೮) ಆಪಟೆ, ಗಡಕರಿ ಮೊದಲಾದವರಂತೆ ಕಾದಂಬರಿಕಾರರಾಗಿದ್ದಾರೆಯೇ? (೯) ಖಾಡಲಿಕರ, ಕೋಲ್ಹಟಕರ ಮೊದಲಾದವರಂತೆ ನಾಟಕಕಾರರಾಗಿದ್ದಾರೆಯೇ? (೧೦) ಶ್ರೀ. ಸರದೇಸಾಯಿ, ಶ್ರೀ. ಚಿಂತಾಮಣರಾವ ವೈದ್ಯ ಮೊದಲಾದವರಂತೆ ಇತಿಹಾಸ ಸಂಶೋಧಕರಾಗಿದ್ದಾರೆಯೇ? (೧೧) ಸಾಮಾಜಿಕ, ಧಾರ್ಮಿಕ, ರಾಜಕೀಯ ಮೊದಲಾದ ಈಗಿನ ಎಲ್ಲಾ ವಿಷಯಗಳಲ್ಲಿಯೂ ಅದ್ವಿತೀಯ ಪಾಂಡಿತ್ಯವನ್ನು ಹೊಂದಿ ಮಾತೃ ಭಾಷೆಯಲ್ಲಿ ದಿವ್ಯತರವಾದ ಸಾವಿರಾರು ಗ್ರಂಥಗಳನ್ನು ಬರೆದಿರುವ ನೂರಾರು ಮಹಾವಿದ್ವಾಂಸರಂತೆ ಕನ್ನಡಿಗರಲ್ಲಿ ಎಷ್ಟು ಜನರಿದ್ದಾರೆ?

(೧೨) ನವಾಕಾಳ, ಜ್ಞಾನಪ್ರಕಾಶ ಮೊದಲಾದ ಉತ್ತಮ ದೈನಿಕ ಪತ್ರಿಕೆಗಳಂತೆ ಅಖಿಲ ಕರ್ನಾಟಕವನ್ನು ವ್ಯಾಪಿಸಿರುವ ಒಂದಾದರೂ ಕನ್ನಡ ಪತ್ರಿಕೆಯಿದೆಯೇ? (೧೩) ಕೇಸರಿಯಂತಹ ಅದ್ವಿತೀಯ ರಾಜಕಾರಣ [illegible] (೧೪) ಚಿತ್ರಮಯ ಜಗತ್ [illegible] ಪತ್ರಿಕೆಯಿದೆಯೇ? (೧೫) ಭಾರತ ಗೌರವ ಗ್ರಂಥಮಾಲಾ ಮೊದಲಾದ ಅನೇಕ ಶ್ರೇಷ್ಠ ಗ್ರಂಥಮಾಲೆಗಳಂತೆ ಒಂದಾದರೂ ಗ್ರಂಥಮಾಲೆಯಿದೆಯೇ? (೧೬) ಸೇವಾ ಸದನದಂಥ ಸಂಸ್ಥೆಯಿದೆಯೇ? (೧೭) ಮಹಿಳಾ ಮಹಾ ವಿದ್ಯಾಲಯವಿದೆಯೇ? (೧೮) ಅನಾಥಾಲಯ. ವಿಧವಾಶ್ರಮಗಳಿವೆಯೇ? (೧೯) ಗುರುಕುಲಗಳಿವೆಯೇ?

ಈ ವಿದ್ಯಾ ವಿಷಯಕವಾದ ಸಂಗತಿಗಳು ಹಾಗಿರಲಿ. ಇನ್ನು ಸಾಂಪತ್ತಿಕ ಸುಧಾರಣೆಯ ಕಡೆಗೆ ನೋಡೋಣ. ಕಳೆದ ೩೦ ವರುಷಗಳಲ್ಲಿ ಸ್ವದೇಶಿ ಚಟುವಟಿಕೆಯು ಅನೇಕ ಸಾರೆ ಅನೇಕ ರೀತಿಗಳಿಂದ ಪ್ರಸಾರವಾಯಿತಷ್ಟೆ. ಕನ್ನಡಿಗರಾದ ನಾವು ಅದರ ಪ್ರಯೋಜನವನ್ನೆಷ್ಟು ಹೊಂದಿದ್ದೇವೆ? ನಮ್ಮಲ್ಲಿ ಬಟ್ಟೆಯ ಗಿರಣಿಗಳು ಎಷ್ಟು ಸ್ಥಾಪಿಸಲ್ಪಟ್ಟವು? ಕಾಗದದ ಕಾರ್ಯಾಲಯಗಳೇನಾದರೂ ಏರ್ಪಟ್ಟವೆ? ಕಾಜಿನ ಕಾರ್ಯಾಲಯಗಳು ಉಂಟಾದವೇ? ಸಕ್ಕರೆಯ ಗಿರಣಿಗಳು ಏರ್ಪಟ್ಟವೆ? ಕಬ್ಬಿಣ, ಅಲ್ಯುಮಿನಂ, ಹಿತ್ತಾಳಿ, ಮೊದಲಾದ ಲೋಹಗಳ ನಾನಾ ಪದಾರ್ಥಗಳನ್ನು ಮಾಡುವ ಕಾರ್ಯಾಲಯಗಳೇನಾದರೂ ಏರ್ಪಟ್ಟವೆ?

ಪರದೇಶಗಳಿಗೆ ಹೋಗಿ ಕೈಗಾರಿಕೆಯ ಕಲೆಯನ್ನು ಕಲಿತುಕೊಂಡು ಬಂದು ಎಷ್ಟು ಹೊಸ ಕಾರ್ಯಾಲಯಗಳನ್ನು ಸ್ಥಾಪಿಸಿದರು? ಚಲನ ಚಿತ್ರಗಳನ್ನುಂಟುಮಾಡುವ ಕಂಪನಿಗಳು ಎಷ್ಟು ಏರ್ಪಟ್ಟವೆ? ಈ ಪ್ರಕಾರ ಅನೇಕ ವಿಷಯಗಳ ಪ್ರಶ್ನೆಗಳಿಗೂ ಇಲ್ಲ ಎಂಬುದೊಂದೇ ನಮ್ಮ ಉತ್ತರವಲ್ಲವೆ? ಕರ್ನಾಟಕದ ವ್ಯಾಪಾರವಂತೂ ಪರ ಪ್ರಾಂತಗಳ ಕಾಠೇವಾಡಿ, ಮಾರವಾಡಿ, ಗುಜರಾಥಿ, ಸಾಹುಕಾರರ ಕೈ ಸೇರಿ ಕನ್ನಡ ನಾಡಿನ ವರ್ತಕರು ನೆಲ ಹಿಡಿದಿದ್ದಾರೆ.

ಇವೆ.

ಮರಾಠಿಗರನ್ನು ಸುಮ್ಮನೇ ಸ್ತುತಿಸಿ ನಮ್ಮನ್ನು ನಾವೇ ...ಥಾ ಹಳಿದುಕೊಳ್ಳಲು ಹೀಗೆ ಹೇಳಿಲ್ಲ. ನಮ್ಮಲ್ಲಿರುವುದೂ ಉಂಟು. ...ದರೆ ಇಲ್ಲವೆಂಬುದೇ ಅತ್ಯಧಿಕ

ಸರ್. ಎಂ. ವಿಶ್ವೇಶ್ವರಯ್ಯನವರಂತಹ ಅರ್ಥಶಾಸ್ತ್ರಜ್ಞ...ೂ ಇಂಜನಿಯರರೂ ಹಿಂದುಸ್ಥಾನಕ್ಕೇನೇ ಅಲ್ಲ, ಪರದೇಶಗಳಿ...ೂ ಮಾರ್ಗದರ್ಶಿಗಳಾಗಿರುವುದು ಕನ್ನಡಿಗರಿಗೆ ಅಭಿಮಾನದ ...ಂಗತಿ. ಶ್ರೀಮಾನ್ ಬೇವೂರ ಇವರು ಅಂಚೆಯ ಶಾಖೆಯಲ್ಲಿ ...ತ್ಯಧಿಕವಾದ ಅಧಿಕಾರದಲ್ಲಿರುವುದು ಕನ್ನಡಿಗರಿಗೆ ಸಂತೋಷದ ...ಂಗತಿ. ದಿವಾನ ಬಹದ್ದೂರ ಕಂಬಳಿಯವರು ಮಂತ್ರಿಗಳಾಗಿರು...ದೂ ಕನ್ನಡ ನಾಡಿಗೆ ಕೀರ್ತಿ.

ಹಿಂದಿ ಸೇವಾದಳದ ಉತ್ಪಾದಕರಾದ ಡಾ. ಹಾರ್ಡೀಕರರು, ಭಾರತೀಯ ಮಹಿಳಾ ಪ್ರಪಂಚದಲ್ಲಿ ಸುಪ್ರಸಿದ್ಧರಾದ ಶ್ರೀಮತಿ ಕಮಲಾದೇವಿಯವರು ಕನ್ನಡಿಗರಾಗಿರುವುದು ಕನ್ನಡ ನಾಡಿಗೆ ಹಿಗ್ಗು. ಶ್ರೀಮಾನ್ ದೇಶಪಾಂಡೆ ಗಂಗಾಧರರಾಯರ ಪ್ರಯತ್ನ ವಿಶೇಷದಿಂದ ಬೆಳಗಾವಿಯಲ್ಲಿ ರಾಷ್ಟ್ರೀಯ ಸಭೆಯು ಸೇರಿದುದು ಕನ್ನಡಿಗರಿಗೆ ಅಭಿಮಾನದ ಸಂಗತಿ

ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸಂಘದವರು ಲಿಂಗ...ರಾಜ ಕಾಲೇಜನ್ನು ಸ್ಥಾಪಿಸಿದುದು ಕರ್ನಾಟಕಕ್ಕೆ ಭೂಷಣಪ್ರ...ದವಾದುದು. ಬೆಂಗಳೂರಿನ ಅನೇಕ ವಿದ್ವಾಂಸರು ಕನ್ನಡ ನುಡಿ ...ಳವಣಿಗೆಗೆ ಸಾಹಿತ್ಯ ಪರಿಷತ್ತಿನ [illegible] ಅವ್ಯಾಹತ ಪ್ರಯ... ಶ್ರೇಯಸ್ಕರವಾದುದು.

ಶ್ರೀ. [illegible]ರು, [illegible] ದ್ವಾಜರು, ಶ್ರೀ. ಚಿದಂಬರಯ್ಯನವರು, ಶ್ರೀ. ದಿವಾಕರ ರಂಗನಾಥರಾಯರು ...ಮುಂತಾದ ನಾಲ್ಕಾರು ಪ್ರಸಿದ್ಧ ಗ್ರಂಥಕಾರರೂ ನಮ್ಮಲ್ಲಿ ...ದ್ದಾರೆ. ಶ್ರೀ. ಗಳಗನಾಥರು ಕಾದಂಬರಿಕಾರರಾಗಿಯೂ, ಶ್ರೀ. ...ದುಡರು ನಾಟಕಕಾರರಾಗಿಯೂ ಇದ್ದಾರೆ. ಶ್ರೀ. ರಾಜಪುರೋ...ತರು ಇತಿಹಾಸ ಸಂಶೋಧಕರು. ಶ್ರೀ. ಹಳಕಟ್ಟಿಯವರು ...ಪ್ರಾಚೀನ ಸಾಹಿತ್ಯ ಪ್ರಸಾರಕರು, ಆಗಿದ್ದಾರೆ. ಡಾ. ತುಮ್ಮಿನ...ಟ್ಟಿಯವರು ಕರ್ನಾಟಕ ಕೆಮಿಕಲ್ ವರ್ಕ್ಸ ಸ್ಥಾಪಿಸಿದ್ದಾರೆ. ...ೀ ಸಿದ್ಧೇಶ್ವರ ಕಂಪನಿಯವರು ಕಬ್ಬಿಣ ಪೆಟ್ಟಿಗೆಗಳ ಕಾರ್ಯಾ...ಯವನ್ನು ಸ್ಥಾಪಿಸಿದ್ದಾರೆ. ಮೈಸೂರ ಸರಕಾರದವರು ಸಬಕಾರ...ಂಥದ ಎಣ್ಣೆಯ ಕಾರ್ಯಾಲಯಗಳನ್ನು ನಿರ್ಮಿಸಿದ್ದಾರೆ. ...ರ್ನಾಟಕ ವಣಿಕ ಸಂಘವೂ ನಿರ್ಮಿಸಿದೆ. ಶಾಂತಿ ಯುದ್ಧದಲ್ಲಿ ...ಸ್ವಾರ್ಥತ್ಯಾಗವನ್ನು ಕನ್ನಡನಾಡು ಮಾಡಿತು.

ಆದ ಮತ್ತು ಆಗದಿದ್ದವುಗಳನ್ನು ನಾವೇ ನೋಡಿಕೊಳ್ಳೋಣ. ...ನಮ್ಮಲ್ಲಿ ಬುದ್ಧಿಶಕ್ತಿ, ಸಾಹಸ, ದೀರ್ಘ ಪ್ರಯತ್ನ, ಕೂಡಿ ಕೆಲಸ ಮಾಡುವಿಕೆ, ಇವು ಮರಾಠಿಗರಿಗಿಂತ ಕಡಿಮೆ. ನಾವು ಭಾವನಾ ಪ್ರಾಧಾನ್ಯರು. ವಕೀಲರೇ ಮೊದಲಾದ ಆಧುನಿಕ ಶಿಕ್ಷಣ ಹೊಂದಿ...ದವರಲ್ಲಿ ಬಹು ಜನರು ತಮ್ಮ ವೇಳೆಯನ್ನು ವ್ಯರ್ಥವಾಗಿ ಕಳೆಯುವುದೇ ಹೆಚ್ಚು. ಮರಾಠಿಗರಂತೆ ತಮ ತಮಗೆ ಅಭಿರುಚಿಯು...ಳ್ಳ ವಿಷಯಗಳನ್ನು ಅಧ್ಯಯನ ಮಾಡಿ ಪಾಂಡಿತ್ಯ ಹೊಂದುವ ಗುಣವು ಕನ್ನಡಿಗರಲ್ಲಿ ಇಲ್ಲವೇ ಇಲ್ಲ. ಈ ಶೋಚನೀಯ ಸ್ಥಿತಿಗೆ ಕಾರಣವಾಗಿರುವ ನಮ್ಮ ದೋಷಗಳನ್ನು ನಾವು ತಿದ್ದಿಕೊಳ್ಳದಿದ್ದರೆ ಈ ಸ್ಪರ್ಧೆಯ ಕಾಲದಲ್ಲಿ ನಾವು ಬಹು ಹಿಂದೆ ಬೀಳುವೆವು.

ಯುದ್ಧ ಸಿದ್ಧತೆ ಎತ್ತ? ಕ್ರಿಸ್ತನ ಬೋಧೆ ಎತ್ತ?

ಲಂಡನದ 'ಸ್ಪೆಕ್ಟೇಟರ' ಪತ್ರಿಕೆಯಲ್ಲಿ ರೆವ್ಹರೆಂಡ ಗೇಜ ಎಂಬ ಧರ್ಮೋಪದೇಶಕರು ಸದ್ಯದ ಯುದ್ಧ ಸಿದ್ಧತೆಯು ಕ್ರಿಸ್ತನ ಧರ್ಮೋಪದೇಶಕ್ಕೆ ತೀರಾ ವಿಸಂಗತವಾದುದೆಂದೂ ಒಂದು ವೇಳೆ ಏಸೂಕ್ರಿಸ್ತನೇ ಪುನಃ ಈ ಭೂತಲದಲ್ಲಿ ಮನುಷ್ಯ ರೂಪದಿಂದ ಅವತರಿಸಿದ್ದಾದರೆ ಇಂಥ ಘೋರ ಹಿಂಸೆಗೆ ಸಮ್ಮತಿಸುವನೇ ಎಂದೂ ಪ್ರಶ್ನೆಮಾಡಿರುವರು.

ಇದಕ್ಕೆ ಉತ್ತರವಾಗಿ ಮಿ. ಜಾನ ಕ್ಯಾಂಬೆಲ್ ಎಂಬವರು ಈ ಪ್ರಕಾರ ತಿಳಿಸಿದ್ದಾರೆ.— ಕ್ರಿಸ್ತನ ಉಪದೇಶದಂತೆ ಯಾರು ಆಚರಣೆಯುಳ್ಳವರಿರುವರೋ ಅವರಿಗೇನೇ ಇಂಥ ಪ್ರಶ್ನೆ ಕೇಳುವ ಅಧಿಕಾರವಿದೆ. ಸದ್ಯಕ್ಕೆ ನೂರಕ್ಕೆ ೯೯ ರಷ್ಟು ಕ್ರಿಸ್ತೀಯರು ತಮ್ಮ ವೈಯಕ್ತಿಕ ಅಧಿಕಾರದ ಬಗ್ಗೆ ಯಾವ ಆಚರಣೆ ಇರಬೇಕೆಂಬ ಅಭಿಪ್ರಾಯವುಳ್ಳವರಾಗಿರುವರೋ ಅದನ್ನೇ ಯುದ್ಧದ ವಿಷಯದಲ್ಲಿ ತಿಳಿದುಕೊಳ್ಳಬೇಕು.

ಪ್ರತೀಕಾರ ಮಾಡಬಾರದೆಂಬ ಕ್ರಿಸ್ತನ ವಾಕ್ಯವನ್ನು ವೈಯಕ್ತಿಕ ಜೀವನದಲ್ಲಿಯೇ ಬಹು ಜನರು ಪಾಲಿಸುವದಿಲ್ಲ. ಅದಕ್ಕಾಗಿಯೇ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾದ ಪೋಲೀಸರನ್ನು ಪ್ರತಿಯೊಂದು ನಗರಕ್ಕೆ ನಿಯಮಿಸಬೇಕಾಗಿದೆ. ವ್ಯಕ್ತಿಯಿಂದಲೇ ರಾಷ್ಟ್ರ. ಅಂದಮೇಲೆ ರಾಷ್ಟ್ರ ರಕ್ಷಣೆಗೆ ಸೈನ್ಯ ಕಾವಲಿಟ್ಟರೆ ತಪ್ಪೇನು? ಕ್ರಿಸ್ತನಲ್ಲಿ ನಿಜವಾದ ಭಕ್ತಿಯೇ ಇದ್ದದ್ದಾದರೆ ಕೇವಲ ಯುದ್ಧ ನಿಷೇಧ ಮಾಡಿದರೆ ತೀರದು. ಆದರೆ ಇಂದಿನ ವೈಯಕ್ತಿಕ ಮತ್ತು ಸಾಮಾಜಿಕ ಆಚರಣೆಯಲ್ಲಿಯ ಬಹು ಭಾಗವನ್ನೂ ನಿಷೇಧಿಸಬೇಕು.

ಧರ್ಮ ಸುಧಾರಣೆ.

'ಧರ್ಮ ಸುಧಾರಣೆ' ಈ ವಿಷಯದ ಬಗ್ಗೆ ಪುಣೆಯ ವಸಂತ ವ್ಯಾಖ್ಯಾನ ಮಾಲೆಯ ಕಾಲಕ್ಕೆ ಶ್ರೀ ಮಹಾದೇವ ಮಾಟೆ ಎಂಬುವವರು ಹೀಗೆ ತಮ್ಮ ಭಾಷಣ ಮಾಡಿದರು.— "ಇಂಥದೇ ಆಚಾರವನ್ನು ಏಕೆ ಮಾಡಬೇಕು? ಇದನ್ನು ಧರ್ಮ ಶಾಸ್ತ್ರದಲ್ಲಿ ಏಕೆ ಹೇಳಿದೆ? ಈ ಪ್ರಕಾರ ಜಿಜ್ಞಾಸ ಬುದ್ಧಿಯು ಪ್ರತಿಯೊಬ್ಬನಿಗೂ ಇರುತ್ತದೆ. ಇದು ದೇವರಿಂದ ಬರೆಯಲ್ಪಟ್ಟದ್ದು ಎಂದು ಯಾವುದನ್ನೂ ನಾವು ಮನ್ನಿಸಲಾಗದು. ಪ್ರತಿಯೊಂದು ಶಾಸ್ತ್ರಕ್ಕೆ ವೇದಾಂತವೇ ಮೂಲವೆಂಬ ಭಾವನೆಯು ಕೂಡಾ ಈಗ ಬದಲಾಗಲೇಬೇಕು. ಸುಧಾರಕರು ಶಾಸ್ತ್ರ ವಚನಗಳಿಗೆ ಐತಿಹಾಸಿಕ ಉಪಪತ್ತಿಯನ್ನು ಕೊಡಲು ಶಕ್ತರಾಗಿರಬೇಕು."

ನಂತರ ಅಧ್ಯಕ್ಷರು ಹೀಗೆ ಹೇಳಿದರು.— 'ಪ್ರಾಮಾಣ್ಯ ಬುದ್ಧಿರ್ವೇದೇಷು' ಎಂಬ ತತ್ವವನ್ನು ನಾವು ಬಿಟ್ಟು ಬಿಡಬೇಕು. ವೇದದ ಅಪೌರುಷೇಯತ್ವಕ್ಕೂ ಶಬ್ದ ಪ್ರಾಮಾಣ್ಯಕ್ಕೂ ನಾವು ಈಗ ತಿಲಾಂಜಲಿಯನ್ನಿತ್ತು ಶಾಸ್ತ್ರತತ್ವ, ಅನುಮಾನ ಮತ್ತು ಪ್ರತ್ಯಕ್ಷ ಇವುಗಳನ್ನು ಲಕ್ಷಕ್ಕೆ ತಂದು ಸುಧಾರಣೆ ಮಾಡಬೇಕು. ಹಾಗೆಯೇ ಅದೃಷ್ಟ ಫಲ ವಿಚಾರವನ್ನು ಗಣಿಸಲಾಗದು. ಧರ್ಮಶಾಸ್ತ್ರ ವಿಚಾರವನ್ನು ಪರಲೋಕದ ದೃಷ್ಟಿಯಿಂದ ಮಾಡದೆ ಇಹಲೋಕದ ದೃಷ್ಟಿಯಿಂದಲೇ ಮಾಡಬೇಕು. ಈ ಪ್ರಕಾರ ನಾವು ವಿಚಾರಿಸಹತ್ತಿದರೆ ಸರ್ವ ಭೂತ ಹಿತವೇ ಧರ್ಮವೆಂದು ಕಂಡು ಬರುತ್ತದೆ. ಆಧ್ಯಾತ್ಮಿಕ ಮತ್ತು ಆದಿಭೌತಿಕ ಸುಖವು ಯಾವುದರಿಂದ ನಮಗೆ ದೊರೆಯುತ್ತದೆಯೋ ಅದೇ ಧರ್ಮ. ಈ ಪ್ರಕಾರ ದೃಷ್ಟಿ ಇಟ್ಟರೇನೇ ಧರ್ಮ ಸುಧಾರಣೆಯಾಗುವದು ಶಕ್ಯವಿದೆ.

ವಧೂವರರನ್ನು ಹುಡುಕಲಿಕ್ಕೆ ಇಷ್ಟೇಕೆ ಪೇಚಾಟ?

ವೈಶಾಖ ಮಾಸ ಮುಗಿಯಿತು. ಲಗ್ನದ ಕಾಲವೂ ಕಳೆಯುತ್ತಾ ಬಂತು. ಈ ಸಾರೆ ಲಗ್ನ ಮಾಡಿದವರು ಸಾಕಪ್ಪಾ! ಅಂತೂ ಒಳ್ಳೆಯ ಬೀಗತನ ದೊರೆಯಿತು. ಎಂದು ಹೇಳುತ್ತಿರಬಹುದು. ಏನು ಮಾಡಬೇಕು? ಒಳ್ಳೆಯ ವರನು ಈ ಸಾರೆಯೂ ದೊರೆಯಲಿಲ್ಲವಲ್ಲಾ! ಕನ್ಯೆ ದೊಡ್ಡದಾಗಿದೆ; ಎಂದು ಕೆಲವು ತಾಯಿತಂದೆಗಳು ಚಿಂತಿಸುತ್ತಿರಬಹುದು. ಒಳ್ಳೇ ಕನ್ಯೆ ದೊರೆಯಲಿಲ್ಲ. ಹುಡುಗ ದೊಡ್ಡವನಾಗಿದ್ದಾನೆಂದು ಅನೇಕ ತಾಯಿತಂದೆಗಳೂ ಯೋಚಿಸುತ್ತಿರಬಹುದು. ಎಂತಹ ಗಂಡನು ದೊರೆಯತ್ತಾನೆಯೋ ಎಂದು ಅನೇಕ ಯುವತಿಯರು ಮತ್ತು ಎಂತಹ ಹೆಂಡತಿ ದೊರೆಯುತ್ತಾಳೆಯೋ, ಎಂದು ಅನೇಕ ಯುವಕರು ಚಿಂತಿಸುತ್ತಿರಬಹುದು.

ಇಂತಹ ಕಾಲದಲ್ಲಿಯೇ ಈ ಸಂಗತಿಗಳನ್ನು ಪ್ರಸ್ತಾಪಿಸುವುದು ಒಳ್ಳೆಯದಲ್ಲವೇ? ಈಗ ಯೋಚಿಸಿದರೇನೇ ಮನಸ್ಸಿನಲ್ಲಿ ಎಷ್ಟೋ ಮಟ್ಟಿಗೆ ನಾಟಲು ಅನುಕೂಲವಾಗುತ್ತದೆ. ಮುಂದಣ ವರುಷದ ದಾರಿಯಾದರೂ ಸ್ವಲ್ಪ ತೋರಬಹುದು. ವಧೂವರರನ್ನು ಹುಡುಕಲಿಕ್ಕೆ ಅನೇಕರು ಪೇಚಾಟ ಪಡುತ್ತಿರುವುದನ್ನು ನೋಡಿ ಮಕ್ಕಳಿಲ್ಲದವರು ಹಿಗ್ಗಿದರೂ ಹಿಗ್ಗಬಹುದು! ಮೊದಲು ಮಕ್ಕಳಿಲ್ಲವೆಂಬ ಚಿಂತೆ. ಅವರು ದೊಡ್ಡವರಾಗುತ್ತಾ ಬಂದಂತೆ ಯೋಗ್ಯ ವಧೂವರರು ದೊರೆಯುವರೋ, ಇಲ್ಲವೋ ಎಂಬ ಚಿಂತೆ.

ಹಿಂದು ಧರ್ಮದ ಎಲ್ಲಾ ಮತ ಪಂಥದವರಲ್ಲಿಯೂ ಈ ಲಗ್ನದ ಪೇಚಾಟವು ಹೆಚ್ಚು ಕಡಿಮೆಯಾಗಿ ಇದ್ದೇ ಇದೆ. ಜಾಣರು ಈ ಪೇಚಾಟದಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಅನೇಕ ದಡ್ಡರು ಪೇಚಾಟಕ್ಕೆ ಹೆಚ್ಚಾಗಿ ಸಿಕ್ಕಿಕೊಳ್ಳುತ್ತಿದ್ದಾರೆ. ವೀರಶೈವ ಸಮಾಜದ ಸ್ಥಿತಿಯೊಂದನ್ನೇ ಈ ಲೇಖನದಲ್ಲಿ ವಿವರಿಸಿದ್ದಾಗಿದೆ. ಇದೇ ಸ್ಥಿತಿಯು ಹಿಂದುಗಳ ಬೇರೆ ಮತ ಪಂಥಗಳಿಗೂ ಹೆಚ್ಚು ಕಡಿಮೆಯಾಗಿ ಅನ್ವಯಿಸುವುದರಲ್ಲಿ ಅಭ್ಯಂತರವಿಲ್ಲ.

ವೀರಶೈವರಲ್ಲಿ ನೂರಾರು ಒಳಪಂಗಡಗಳಿವೆ. ಆ ಒಂದೊಂದು ಪಂಗಡದಲ್ಲಿಯೂ ಅನೇಕ ಉಪಪಂಗಡಗಳಿವೆ. ಇವೆಲ್ಲಾ ಬೇರೆ ಬೇರೆ ಕುಲಗಳಂತೆ. ಆದುದರಿಂದ ತಮ್ಮ ತಮ್ಮ ಕುಲದಲ್ಲಿಯೇ ವಧೂವರರನ್ನು ಹುಡುಕುತ್ತಿದ್ದಾರೆ. ಅದಕ್ಕಾಗಿಯೇ ಇಷ್ಟು ಪೇಚಾಟ. ಅನೇಕ ಕಷ್ಟ ನಷ್ಟ. ಕೆಲವು ಹೆಸರಿಗೆ ಮಾತ್ರ ಲಗ್ನ. ಮುಂದೆ ಬಾಳುವೆಯಂತೂ ಮೂರಾಬಟ್ಟೆ. ಪ್ರೇಮಾನುರಾಗಗಳಿಲ್ಲದ ಅನೇಕ ಲಗ್ನಗಳು ಸಾಮಾಜಿಕ ನಾನಾ ಅನರ್ಥಗಳನ್ನುಂಟು ಮಾಡುತ್ತಲಿವೆ.

ಇವುಗಳನ್ನೆಲ್ಲಾ ಕಣ್ಣಾರೆ ನೋಡುತ್ತಿದ್ದರೂ ಇನ್ನೂ ಪೇಚಾಟ ಬಿಟ್ಟಿಲ್ಲ. ಧಾರ್ಮಿಕ ತಪ್ಪು ತಿಳುವಳಿಕೆ ಹೋಗಿಲ್ಲ. ಮೌಢ್ಯತನದಿಂದ ಅನರ್ಥ ಪರಂಪರೆಗಳಿಗೆ ಈಡಾಗುತ್ತಿರುವುದು ನಿಂತಿಲ್ಲ. ಸ್ವಲ್ಪಾದರೂ ಯೋಚಿಸಿರಿ. ಬೇರೆ ಜನಾಂಗಗಳ ಕಡೆ ನೋಡಿರಿ. ಧರ್ಮ ತತ್ವಗಳನ್ನಾದರೂ ಕಣ್ಣುಬಿಟ್ಟು ನೋಡಿರಿ. ಹೀಗೇಕೆ ಕುರುಡರಂತೆ ದುಃಖದಲ್ಲಿ ನೀವು ಬೀಳುವುದಲ್ಲದೆ ನಿಮ್ಮ ಮಕ್ಕಳನ್ನೂ ಮುಂದಣ ಸಂತಾನವನ್ನೂ ಕಷ್ಟಕ್ಕೀಡುಮಾಡುತ್ತಿದ್ದೀರಿ? ಎಂದು ಯಾರಾದರೂ ಕೇಳಿದರೆ ಅನೇಕರಿಗೆ ಬಹು ಕೋಪ. ದೇವರು ಮಾಡಿಸಿದ್ದಾದೀತು. ಅವರವರ ಹಣೇಬರಹದಲ್ಲಿದ್ದಂತಾಗುತ್ತದೆ. ಎಂದು ಹೇಳುತ್ತಿದ್ದಾರೆಯೇ ವಿನಾ ದೇವರು ಕೊಟ್ಟ ಬುದ್ಧಿಯನ್ನೇ ಉಪಯೋಗಿಸಿಕೊಳ್ಳುವುದಿಲ್ಲ.

ಊಟ ಉಡುಗೆಗೆ ಶಿವಾಚಾರ, ಕೊಡುಕೊಳ್ಳಲು 'ಕುಲಾಚಾರ' ಎಂಬ ಅನಾಚಾರಿಗಳ ಮಾತ ಕೇಳಲಾಗದೆಂದು ವೀರಶೈವರ ಪರಮ ಗುರುವಾದ ಆ ಚೆನ್ನಬಸವ ಸ್ವಾಮಿಯು ಹೇಳಿದುದನ್ನು ಈಗಲಾದರೂ ವೀರಶೈವರು ಜ್ಞಾಪಿಸಿಕೊಂಡು ಧರ್ಮಸಮ್ಮತವೂ ಶ್ರೇಯಸ್ಕರವೂ ಆದ ಮಾರ್ಗವನ್ನು ಅನುಸರಿಸಬಾರದೆ?

ಉಂಬಲ್ಲಿ ಉಡುವಲ್ಲಿ ಕುಲ ಅಳಿಯಿತ್ತೆಂಬರು. ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರು. ಎಂತಯ್ಯ ಅವರ ಭಕ್ತರೆಂತೆಂಬೆ? ಎಂತಯ್ಯ ಅವರ ಯುಕ್ತರೆಂತೆಂಬೆ? ಕೂಡಲ ಸಂಗಮದೇವಾ ಹೊಲತಿ ಶುದ್ಧ ನೀರ ಮಿಂದಂತಾಯಿತಯ್ಯಾ! ಎಂದು ವೀರಶೈವ ಮತದ ಮಹದಾಚಾರ್ಯನೂ ಸಂಸ್ಥಾಪಕನೂ ಆದ ಆ ಬಸವ ಮಹಾನುಭಾವನು ಹೇಳಿರುವುದನ್ನು ಈಗಲಾದರೂ ಕೇಳಿ ನಡೆದು ಸುಖಿಗಳಾಗಬಾರದೆ?

ಅಷ್ಟಾವರಣಯುಕ್ತರಾದ ಯಾವ ವೀರಶೈವರ ಮನೆತನವಾದರೇನು? ಸುಶೀಲರೂ ಸುವಿವೇಕಿಗಳೂ ಇದ್ದರಾಯಿತು. ವಧೂವಿಗೆ ತಕ್ಕ ವಿದ್ಯೆ, ಗುಣ, ಲಕ್ಷಣ, [illegible]
ಸ್ಥಿತಿಗಳು, [illegible]
"ಗುಣ, ಶೀಲಾಚಾರ, ಲಕ್ಷಣಗಳು [illegible]ದ್ದರೆ ಸಾಕು. ಆ ತಮ್ಮ ಅನುಕೂಲ ಸೌಲಭ್ಯಗಳನ್ನು ನೋಡಿಕೊಂಡು ಶರೀರ ಸಂಬಂಧವನ್ನು ಬೆಳೆಸಲು ಧರ್ಮದಿಂದಲೇ ಅಜ್ಞೆಯಿರುವಾಗ ಇದನ್ನು ಬಿಟ್ಟು ಕಷ್ಟ ಪಡುತ್ತಿರುವುದಕ್ಕೆ ಏನು ಹೇಳಬೇಕು?

ತಮ್ಮ ಕುಲದಲ್ಲಿಯೇ ವಧೂವರರು ಬೇಕಂತೆ. ವೀರಶೈವರಲ್ಲಿಯೇ ತಾವೊಂದು ಬೇರೆ ಕುಲದವರಂತೆ, ಇಷ್ಟೇ ಅಲ್ಲ, ತಮ್ಮ ಬೆಡಗು ಬೇರೆಯಂತೆ. ಅದೇ ಬೆಡಗಿನವರಲ್ಲಿಯೇ ವಧೂವರರು ಬೇಕಂತೆ. ಹೀಗಾದ ಮೇಲೆ ವಧೂವರರು ಸರಿಯಾಗಿ ದೊರೆಯುವುದೆಂತು? ಒಬ್ಬರಲ್ಲಿ ಕನ್ಯೆ ಹೆಚ್ಚು. ಅವರು ತಮ್ಮ ಕುಲದವರಿಗೇನೇ ಕೊಡಬೇಕೆಂದು ಮೂಢನಿಗೋ, ದರಿದ್ರನಿಗೋ, ಅಂಗಹೀನನಿಗೋ, ಪ್ರಾಯ ಮೀರಿದವನಿಗೋ ಅಂತೂ ಆ ತಮ್ಮ ಹೊಟ್ಟೆಯ ಮಗಳನ್ನು ಕೊಟ್ಟು ಬಿಡುತ್ತಾರೆ. ಆ ಹೆಣ್ಣು ಬಿಚ್ಚಾರದರೆ ಸಾಕು. ಎಷ್ಟಾದರೂ ವರದಕ್ಷಿಣೆ ಕೊಟ್ಟು ಸಾಲ ಶೂಲಗಳಿಗೆ ಸಿಕ್ಕಿಕೊಳ್ಳುತ್ತಿದ್ದಾರೆ.

ಕೆಲವರಲ್ಲಿ ಗಂಡು ಹೆಚ್ಚು. ಹೆಣ್ಣಿಗೆ ತೆರವು ಕೊಟ್ಟು ಮನೆ ಮಾರು ಹಾಳುಮಾಡಿಕೊಳ್ಳಬೇಕಾಗುತ್ತದೆ. ಅನೇಕರು ಲಗ್ನವಿಲ್ಲದೆ ಅಲೆದಾಡಬೇಕಾಗುತ್ತದೆ. ಎಷ್ಟೋ ಕಷ್ಟ ಪಟ್ಟು ಲಗ್ನವಾದರೆ ಕಡೆಗೆ ಆ ಹೆಂಡತಿ ತಾನು ಇಬ್ಬರೇ ಉಳಿಯಬೇಕಾಗುತ್ತದೆ. ಆಸ್ತಿಯೆಲ್ಲಾ ಲಗ್ನಕ್ಕೆ ಮುಕ್ತಾಯ. ಮುಂದೆ ಮಕ್ಕಳು ಮರಿಗಳಿಗೇನು?

ಧಾರ್ಮಿಕ ಈ ಅಜ್ಞಾನದಿಂದ ಸಮಾಜವು ನಾನಾ ರೀತಿಗಳಲ್ಲಿ ದುರವಸ್ಥೆಗೀಡಾಗುತ್ತಲಿದೆ. ಅನೀತಿಯು ಬೆಳೆಯುತ್ತಿದೆ. ನಿರ್ಬಲವಾದ ಮತ್ತು ಬುದ್ಧಿಹೀನವಾದ ಸಂತಾನ ಹೆಚ್ಚುತ್ತಿದೆ. ಸಾಂಪತ್ತಿಕ ಸ್ಥಿತಿಯು ಕ್ಷೀಣಿಸುತ್ತಿದೆ. ಈಗಿನ ಈ ಅಧರ್ಮದ

ಮಹಿಳಾ ಪ್ರಪಂಚ.

ಅನಾಥ ಹಿಂದು ಸ್ತ್ರೀಯರ ವ್ಯವಸ್ಥೆ.

ದಕ್ಷಿಣ ಭಾಗದ ಹಿಂದು ಸಭೆಯ ಕಾರ್ಯದರ್ಶಿಗಳಾದ ಶ್ರೀ. ಭಿಡೆ ಇವರು ಪುಣೆಯಲ್ಲಿ 'ಅನಾಥ ಹಿಂದು ಸ್ತ್ರೀಯರ ವ್ಯವಸ್ಥೆ' ಯ ಬಗ್ಗೆ ಭಾಷಣ ಮಾಡಿದರು. ಅದರ ಸಂಕ್ಷಿಪ್ತ ಸಾರಾಂಶವನ್ನು ಇಲ್ಲಿ ಕೊಟ್ಟಿದೆ.

"ಸಮಾಜದ ಒಳ್ಳೇ ಪವಿತ್ರ ಸಂಗ್ರಹವೆಂದರೆ ಸ್ತ್ರೀಯು. ಈ ಪವಿತ್ರ ಸಂಗ್ರಹವನ್ನು ಕಾಯ್ದುಕೊಳ್ಳುವದಕ್ಕಾಗಿ ಘೋರ ಯುದ್ಧಗಳಾಗಿವೆ. ಆದರೆ ನಾವು ಈಗ ಈ ಸಂಗತಿಯನ್ನು ಕಿವಿಯ ಮೇಲೆ ಸಹ ಹಾಕಿಕೊಳ್ಳುವದಿಲ್ಲ. ಸದ್ಯದ ಕಾಲದಲ್ಲಿ ಸಂಸಾರ ಪದ್ಧತಿಯು ವ್ಯಸ್ತವಾದುದರಿಂದ ಸ್ತ್ರೀಯರು ಬಹಳ ತೊಂದರೆಗಳಿಗೆ ಒಳಗಾಗಿದ್ದಾರೆ. ಮೊದಲಿನ ಏಕತ್ರ ಕುಟುಂಬ ಪದ್ಧತಿಯು ಸಿಡಿದು ಈಗ ಗಂಡ ಹೆಂಡಂದಿರಿಬ್ಬರೇ ಬೇರೆಯಾಗಿ ಇರುವುದುಂಟು. ಗಂಡನು ಸತ್ತನೆಂದರೆ ಸ್ತ್ರೀಯು ಅನಾಥಳಾಗುವಳು. ಅವಳಿಗೆ ಮುಂದೆ ಗತಿಯೇ ಇರುವದಿಲ್ಲ. ಇಂಥ ಅನಾಥೆಯರು ವಿಧರ್ಮಿಯರ ಮೋಹಜಾಲದಲ್ಲಿ ಬೀಳುವದು ಹೆಚ್ಚು. ವಿಧುರರು ಇನ್ನು ಮೇಲೆ ಕುಮಾರಿಯರನ್ನು ಲಗ್ನವಾಗದೆ ವಿಧವೆಯರನ್ನೇ ಲಗ್ನವಾಗಲು ಸಂಕಲ್ಪ ಮಾಡಬೇಕು. ಹಾಗೂ ವಿಧವಾ ಅನಾಥರಿಗೆ ಸ್ವಸಂರಕ್ಷಣೆ ಮಾಡಿಕೊಳ್ಳಲು ಮತ್ತು ಅವರಿಗೆ ಕ್ರಿಯವಾಗಲು [illegible] ಸಂಸ್ಥೆಗಳನ್ನು ಸ್ಥಾಪಿಸಬೇಕು. [illegible]ದಕ್ಕಿಂತ ಹೆಚ್ಚು ಪವಿತ್ರವಾದ ಕಾರ್ಯ[illegible] ಇನ್ನೊಂದಿಲ್ಲ"

ಸೇವಾ ಸದನ ಪುಣೆ.

೧೯೧೦ ನೆಯ ಇಸ್ವಿಯಲ್ಲಿ ಅನಾಥ ವಿಧವೆಯರ ಶೈಕ್ಷಣಿಕ [illegible]ತ್ತು ಆರ್ಥಿಕ ಉನ್ನತಿಗಾಗಿ ಈ ಸಂಸ್ಥೆಯು ಶ್ರೀ ರಮಾಬಾಯಿ [illegible]ನಡೆಯವರ ಪ್ರಯತ್ನದಿಂದ ಸ್ಥಾಪಿಸಲ್ಪಟ್ಟಿತು. ಪ್ರಾರಂಭದಲ್ಲಿ [illegible]ಂದೇ ಒಂದು ವರ್ಗವು. ಒಬ್ಬಳೇ ಒಬ್ಬ ಶಿಕ್ಷಕಳು. ಆದರೆ [illegible]ದಿಯ ಉಗಮವೆತ್ತ, ಮುಖವೆತ್ತ! ಈ ೨೫ ವರ್ಷಗಳ ಅವಧಿ[illegible]ಲ್ಲಿ ಅಲ್ಲಿಯ ಕಾರ್ಯಕರ್ತರ ಸುದೀರ್ಘ ಸಾಹಸದಿಂದ ಈಗ ಸಾಧಾರಣ ೨೦೦೦ ಜನ ಸ್ತ್ರೀಯರು ಮತ್ತು ಬಾಲಿಕೆಯರು ಶಿಕ್ಷಣ ಹೊಂದುತ್ತಿದ್ದಾರೆ. ಸಂಸ್ಥೆಯ ಶಾಖೆಗಳು ಮದ್ರಾಸ ಸಂಯುಕ್ತ ಪ್ರಾಂತ, ಮಧ್ಯ ಪ್ರಾಂತ ಮೊದಲಾದ ಪರ ಪ್ರಾಂತಗಳಲ್ಲಿಯೂ ಪಸರಿಸಿವೆ. ಈ ಬೌದ್ಧಿಕ ಶಿಕ್ಷಣವಲ್ಲದೆ ಹಸ್ತ ಕಲಾ ಶಿಕ್ಷಣವೂ ಕೊಡಲ್ಪಡುತ್ತದೆ. ವಿದ್ಯಾರ್ಥಿನಿಯರನ್ನು ಪಂಡಿತೆಯರನ್ನಾಗಿ ಮಾಡುವದಕ್ಕಿಂತ ಸ್ವಾವಲಂಬಿಗಳನ್ನಾಗಿ ಮಾಡುವದು ಹೆಚ್ಚು ಉಪಯುಕ್ತವೆಂದು ಆ ದಿಸೆಯಲ್ಲಿ ಪ್ರಯತ್ನವು ನಡೆದಿದೆ. ಈ ಸಂಸ್ಥೆಯ ಕಾರ್ಯಕರ್ತರು ಆಗಾಗ್ಗೆ ಬರಗಾಲ, ಭೂಕಂಪಗಳಿಂದ ಪೀಡಿತರಾದ ಜನಗಳಿಗೆ ಸಹಾಯ ಮಾಡುವ ಕಾರ್ಯವನ್ನೂ ಕೈಕೊಳ್ಳುತ್ತಿದ್ದಾರೆ. ಈ ಸಂಸ್ಥೆಯ ೨೫ ನೆಯ ವರ್ಷದ ರಜತೋತ್ಸವ ಸಮಾರಂಭವು ಮೊನ್ನೆ ಮೊನ್ನೆ ಜರುಗಿತು.

ಈ ತರದ ಮಹಿಳೆಯರ ಉದ್ಧಾರಕ್ಕಾಗಿ ಪ್ರಯತ್ನಿಸುವ ಸಂಸ್ಥೆಗಳು ಕರ್ನಾಟಕದಲ್ಲಿಯೂ ಆವಶ್ಯಕವಾಗಿಲ್ಲವೆ? ಮತ್ತು ಸದ್ಯದಲ್ಲಿದ್ದ ಮಹಿಲಾ ಸಂಸ್ಥೆಗಳನ್ನು ಊರ್ಜಿತ ಸ್ಥಿತಿಗೆ ತರುವದು ಕರ್ನಾಟಕಸ್ಥರಿಗೆ ಕರ್ತವ್ಯವಲ್ಲವೆ?

ಕ. ಪ್ರಾ. ಸ್ತ್ರೀ ಸಮ್ಮೇಲನದಲ್ಲಾದ ಗೊತ್ತುವಳಿಗಳು

ಕಳೆದ ತಿಂಗಳು ಮಂಗಳೂರಲ್ಲಿ ನೆರೆದ ಕರ್ನಾಟಕ ಪ್ರಾಂತಿಕ ಸ್ತ್ರೀ ಸಮ್ಮೇಲನದಲ್ಲಿ ಈ ಕೆಳಗಿನ ಗೊತ್ತುವಳಿಗಳು ಸ್ವೀಕೃತವಾದವು—

(೧) ಸತ್ಯಾಗ್ರಹದಲ್ಲಿ ಭಾಗವಹಿಸಿ ಕಷ್ಟಗಳಿಗೆ ಗುರಿಯಾದ ಕರ್ನಾಟಕದ ಮಹಿಳಾಮಣಿಯರ ಪ್ರಶಂಸೆ.

ಈ ಬಗ್ಗೆ ಅಧ್ಯಕ್ಷರಾದ ಶ್ರೀ. ಉಮಾಬಾಯಿ ಕುಂದಾಪುರ ಇವರು, ಕಾರವಾರದ ಸ್ತ್ರೀಯರು ಧೈರ್ಯದಲ್ಲಿಯೂ ಕಷ್ಟ ಸಹಿಷ್ಣುತೆಯಲ್ಲಿಯೂ ಅಖಿಲ ಭರತ ಖಂಡದ ಸ್ತ್ರೀಯರಿಗೆ ಆದರ್ಶಪ್ರಾಯರಾಗಿರುವರೆಂದು ಹೇಳಿದರು.

(೨) ಗ್ರಾಮಾಂತರಗಳಲ್ಲಿ ಸಿದ್ಧವಾಗ ವಸ್ತುಗಳನ್ನೇ ಪ್ರತಿಯೊಬ್ಬರು ಉಪಯೋಗಿಸಬೇಕು.

(೩) ಹಿಂದಿ ಭಾಷೆ ಕಲಿಯುವದು. ಈ ಬಗ್ಗೆ ಶ್ರೀಮತಿ ನೆಲ್ಲಿಕಾಯಿ ಸುಂದರಮ್ಮನವರು ಕನ್ನಡದ ಪ್ರಾಶಸ್ತ್ಯವನ್ನು ಕಡಿಮೆ ಮಾಡಿ ಹಿಂದಿಯನ್ನು ವೃದ್ಧಿಪಡಿಸುವದು ಸರಿಯಲ್ಲವೆಂದು ಸೂಚಿಸಿದರು.

(೪) ಭಗಿನೀ ಮಂಡಲ ಸ್ಥಾಪಿಸುವದು—

ಆ ಮೇಲೆ ಅಳಿಯಸಂತಾನದ ಗೊತ್ತುವಳಿಗೆ ಅನುಮೋದನ, ಸ್ತ್ರೀಯರಿಗೆ ಸಮಾನ ಹಕ್ಕು ಆಸ್ತಿಗಳು ಸಿಕ್ಕಬೇಕು. ಮತ ಕೊಡುವ ಹಕ್ಕಿನಲ್ಲಿ ಬದಲಾವಣೆಯಾಗಬೇಕು, ಕೂಲಿಯ ವಿಷಯದಲ್ಲಿ ಗಂಡಸಿಗೂ ಹೆಂಗಸಿಗೂ ತಾರತಮ್ಯವಿರಬೇಕು, ಪ್ರತಿಯೊಂದು ಗ್ರಾಮಕ್ಕೂ ಒಬ್ಬ ಸೂಲಗಿತ್ತಿಯ ಆವಶ್ಯಕತೆ, ಇವೇ ಮುಂತಾದ ಗೊತ್ತುವಳಿಗಳು ತೀರ್ಮಾನವಾದವು.

—ಮುಂಬಯಿಯಲ್ಲಿ ೨೮ ನೆಯ ತಾರೀಖಿನ ದಿವಸ ಶ್ರೀಮತಿ ಅಮೃತ ಕೌರರು ಸರದಾರ ಜಮಾಯತಸಿಂಗರ ಮನೆಯಲ್ಲಿ ತಮ್ಮ ಆಪ್ತೇಷ್ಟರ ಸಮ್ಮುಖದಲ್ಲಿ ಪ್ರತಿಜ್ಞೆ ಮಾಡಿ ಪ್ರಾಣಾಂತ್ಯ ಉಪೋಷಣೆಯನ್ನು ಪ್ರಾರಂಭಿಸಿದರು. ಸೀಖ ಮುಂದಾಳುಗಳು ಒಂದಾಗಬೇಕೆಂದು ಈ ಉಪವಾಸದ ಉದ್ದೇಶವಿದೆ.

ಭಿನ್ನ ಮತದವರಂತಿರುವ ಕೊಂಕಣಸ್ಥ, ಕರ್ಹಾಡೆ, ದೇಶಸ್ಥ [illegible] ಬ್ರಾಹ್ಮಣರು ತಮ್ಮ ತಮ್ಮಲ್ಲಿ ಶರೀರ ಸಂಬಂಧ ಮಾಡಲು [illegible]ಪ್ರರಂಭಿಸಿರುವುದನ್ನಾದರೂ ನೋಡಿ ಒಂದೇ ಮತದವರಾದ [illegible]ರಶೈವರು ಕಲಿತುಕೊಳ್ಳಬಾರದೆ? ಅವರು ಜಾಣರು. ಕಾಲ[illegible]ಮಾನಕ್ಕೆ ತಕ್ಕಂತೆ ಸುಧಾರಿಸಿಕೊಳ್ಳುತ್ತಿದ್ದಾರೆ. ನಮ್ಮವರು ದಡ್ಡರು. [illegible]ತದಲ್ಲಿ ಅನುಕೂಲತೆಯನ್ನಿಟ್ಟಿದ್ದರೂ ಅದನ್ನು ಬಿಟ್ಟು ದುಃಖದ [illegible]ರಿಯನ್ನೇ ಹಿಡಿದಿದ್ದಾರೆ. ಅದಕ್ಕಾಗಿಯೇ ಇಷ್ಟು ಲಗ್ನದ [illegible]ಚಾಟ.

ಕುಲದ ಭ್ರಮೆಯನ್ನು ಬಿಟ್ಟು ಅಷ್ಟಾವರಣ ಯುಕ್ತರಾದ [illegible]ರಶೈವರೆಲ್ಲರೂ ಒಂದೇ ಕುಲ, ಮತ, ಧರ್ಮದವರೆಂಬ ಸದಾ[illegible]ಗಾರದ ಸ್ವಾಭಿಮಾನವನ್ನು ಹೊಂದಿ ಆಚರಿಸಿದಾಗಲೇ ಈ ನಾನಾ [illegible]ಖಗಳು ದೂರಾಗುವವು. ಈ ಧರ್ಮ ಮಾರ್ಗವನ್ನನುಸರಿಸದ[illegible]ರು ದಿನೇ ದಿನೇ ಹೆಚ್ಚಾದ ಕಷ್ಟ ನಷ್ಟಗಳಿಗೇನೇ ಈಡಾಗಬೇಕಾ[illegible]ವುದು.

ಕರ್ನಲ್ ಲಾರೆನ್ಸನ ಅಗಾಧ ಕಾರಸ್ಥಾನ.

ಪ್ರಸಿದ್ಧ ಇಂಗ್ಲಿಷ ಗುಪ್ತಕಾರಸ್ಥಾನಿಯಾದ ಕರ್ನಲ್ ಲಾರೆನ್ಸ ಇವರು ಈಗ ಕೆಲವು ದಿವಸಗಳ ಪೂರ್ವದಲ್ಲಿ ಮೃತಪಟ್ಟಿದ್ದರಿಂದ ಇಂಗ್ಲಿಷ ಸಾಮ್ರಾಜ್ಯ ಸರಕಾರಕ್ಕೊಂದು ಅಲಭ್ಯ ರತ್ನವು ಕಳೆದಂತಾಯಿತು. ಆದರೆ ಸ್ವತಂತ್ರ ಮುಸಲ್ಮಾನ ರಾಷ್ಟ್ರಗಳಿಗೆ ಒಂದು ಭಯಂಕರ ಗಂಡಾಂತರವು ತಪ್ಪಿ ಹೋಯಿತೆಂದು ಅನಿಸಿರಬಹುದು. ಏಕೆಂದರೆ ಇಜಿಪ್ತದಿಂದ ಅಫಗಾನಿಸ್ಥಾನದ ವರೆಗಿನ ಸರ್ವ ಮುಸಲ್ಮಾನೀ ರಾಷ್ಟ್ರಗಳು ಕರ್ನಲ್ ಲಾರೆನ್ಸರವರ ಪಾತಾಳ ತಂತ್ರದ ದುಷ್ಪರಿಣಾಮವನ್ನು ಭೋಗಿಸಿವೆ. ಇಂಥ ಅದ್ವಿತೀಯ ಗುಪ್ತ ಕಾರಸ್ಥಾನಿಯು ಇಂಗ್ಲಂಡದಲ್ಲಿ ಇನ್ನು ಮುಂದೆ ಹುಟ್ಟುವದು ದುರ್ಲಭ.

ಹುಟ್ಟಾ ಕಾರಸ್ಥಾನಿಯು.

ಈ ರಾಜ್ಯತಂತ್ರ ಪ್ರವೀಣನು ೧೮೮೮ ನೆಯ ಇಸ್ವಿ ಅಗಸ್ಟ ೧೫ ನೆಯ ತಾರೀಖಿನ ದಿವಸ ಜನ್ಮಿಸಿದನು. ಬಾಲ್ಯದಿಂದಲೂ ಇವನು ಬಹು ಚಪಲನು. ತೀರ ಚಿಕ್ಕವನಿರುವಾಗ ಸಹ ತನ್ನ ಮನೆಯೊಳಕ್ಕೆ ಬಾಗಿಲಿನಿಂದ ಪ್ರವೇಶಿಸುತ್ತಿರಲಿಲ್ಲ. ಗೋಡೆಯನ್ನೇರಿ ಕಿಡಕಿಯೊಳಗಿಂದ ಮನೆಯೊಳಗೆ ಬರುವದು ಇವನಿಗೆ ತುಂಬಾ ಸೇರುತ್ತಿತ್ತು. ೧೫ ವರುಷದವನಿರುವಾಗ ಅವನು ಕಾಲಗಾಡಿಯ ಮೇಲೆ ಕುಳಿತು ಇಂಗ್ಲಂಡವನ್ನೆಲ್ಲ ಸುತ್ತಿ ಅದರ ನಕಾಶವನ್ನು ತೆಗೆದುಕೊಂಡನು. ಹಾಯಸ್ಕೂಲಿನಲ್ಲಿರುವಾಗ ಎಂಟು ಸಾರೆ ಫ್ರಾನ್ಸವನ್ನೆಲ್ಲ ಸಂಚರಿಸಿ ಸರ್ವ ಮಹತ್ವದ ಸ್ಥಾನಗಳ ನಕಾಶ ತೆಗೆದುಕೊಂಡನು. ಆಕ್ಸಫೋರ್ಡ ಕಾಲೇಜಿನಲ್ಲಿರುವಾಗ ಅರಬೀ ಭಾಷೆಯನ್ನು ಕಲಿತನು. ಬೆಲಿಯಲ್ ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ಕೇವಲ ಕಟ್ಟಡಗಳ ಮೇಲಿಂದಲೇ ಹೋಗಲು ಇವನು ಪ್ರಯತ್ನಮಾಡಿದನೆಂದು ಹೇಳುತ್ತಾರೆ

ಕಾಲೇಜಿನಲ್ಲಿರುವಾಗಲೇ ಈ ಅಸಾಧಾರಣ ತರುಣನಿಗೆ ಬ್ರಿಟಿಶ್ ವಸ್ತುಸಂಗ್ರಹಾಲಯದ ಡಾ. ಹೋಗಾರ್ಥರ ದರ್ಶನವಾಯಿತು. ಅವರು ಈತನ ಬುದ್ಧಿಶಕ್ತಿಯನ್ನು ಕಂಡು ಸರಕಾರಿ ಶಿಷ್ಯವೃತ್ತಿಯ ಸಹಾಯದಿಂದ ೧೯೧೦ ನೆಯ ಇಸ್ವಿಯಲ್ಲಿ ಅರಬಸ್ಥಾನಕ್ಕೆ ಕಳಿಸಿಕೊಟ್ಟರು.

ಲಾರೆನ್ಸನು ಅರಬಸ್ಥಾನಕ್ಕೆ ಹೋದಾಗ್ಗೆ ಅರಬಸ್ಥಾನ, ಪ್ಯಾಲೆಸ್ಟಾಯಿನ್, ಮೆಸೊಪೊಟೇಮಿಯಾ ಮೊದಲಾದ ಪ್ರದೇಶವೆಲ್ಲ ತುರ್ಕರ ವಶದಲ್ಲಿದ್ದಿತು. ಯಾವ ಪ್ರದೇಶದಲ್ಲಿ ಕ್ರಿಸ್ತನು ಜನ್ಮಿಸಿದನೋ, ಯಾವ ಪ್ರದೇಶದಲ್ಲಿ ಬಾಯಿಬಲ್ಲು ರಚಿಸಲ್ಪಟ್ಟಿತೋ ಮತ್ತು ಯಾವ ಪ್ರದೇಶದ ಸ್ವಾಧೀನತೆಯ ಬಗ್ಗೆ ತುರ್ಕರಿಗೂ ಯುರೋಪಿಯನ್ನರಿಗೂ ಅನೇಕ ಧರ್ಮಯುದ್ಧಗಳಾದವೋ ಅಂಥ ಆ ಪ್ಯಾಲೆಸ್ಟಾಯಿನ್ ಪ್ರದೇಶವನ್ನೆಲ್ಲ ತುರ್ಕರಿಂದ ಕಸಿದುಕೊಳ್ಳುವ ವಿಚಾರವು ಕರ್ನಲ್ ಲಾರೆನ್ಸನಲ್ಲಿ ಬಾಲ್ಯಕಾಲದಿಂದಲೂ ಇದ್ದಿತು. ಅದಕ್ಕಾಗಿ ಅವನು ಅರಬರನ್ನು ಎಬ್ಬಿಸಿ ತುರ್ಕರ ವಿರುದ್ಧವಾಗಿ ಅರಬಿ ಸ್ವಾತಂತ್ರ್ಯ ಸಂಘಗಳನ್ನು ಸ್ಥಾಪಿಸಿದನು. ಮಹಾಯುದ್ಧದ ಕಾಲದಲ್ಲಿ ಇದು ಇಂಗ್ಲಿಷರಿಗೆ ಒಳ್ಳೇ ಲಾಭವಾಯಿತು.

ಪುರಾಣ ವಸ್ತು ಸಂಶೋಧನ ನೆವದಿಂದ ಲಾರೆನ್ಸನು ತುರ್ಕಿ ಸಾಮ್ರಾಜ್ಯವನ್ನೆಲ್ಲ ಸುತ್ತಿಹಾಕಿ ಅಂತರಂಗವನ್ನೆಲ್ಲ ತಿಳಿದುಕೊಂಡನು. ಈ ಕಾಲಕ್ಕೆ ಈತನು ಮಾಡಿದ ಒಂದು ಮಹಾ ಕಾರಸ್ಥಾನವು ಈ ಪ್ರಕಾರವಾಗಿದೆ— ಸೇನಾಪತಿಯಾದ ಕಿಚನರರು ಇವನಿಗೆ ಪುರಾಣ ವಸ್ತು ಸಂಶೋಧನ ನಿಮಿತ್ತ ಮಾಡಿ ೧೯೧೩ ರಲ್ಲಿ, ಮಿಸ್ರ ದೇಶದಿಂದ ಜೆರೂಸಲೇಮ ಪಟ್ಟಣದ ವರೆಗೆ ಮೋಝೆಸನ ಯಹೂದಿ ಜನರನ್ನು ಯಾವ ಮಾರ್ಗದಿಂದ ಕರೆದುಕೊಂಡ ಹೋಗಿದ್ದನೆಂದು ಸಂಶೋಧಿಸಲು ಇವನನ್ನು ನಿಯಮಿಸಿದರು ಇವನ ಈ ಸಂಶೋಧನದಿಂದಲೇ ಮಹಾ ಯುದ್ಧದ ಕಾಲದಲ್ಲಿ ಇಂಗ್ಲಿಷರು ಮಿಸ್ರದೇಶದಿಂದ ಮುತ್ತಿಗೆ ಹಾಕಿ ಜೆರೂಸಲೇಮ ಪಟ್ಟಣವನ್ನು ಗೆಲ್ಲಲು ಶಕ್ತರಾದರು. ಲಾರೆನ್ಸನ ಚರಿತ್ರಕಾರನು ಹೀಗೆ ಬರೆದಿದ್ದಾನೆ.— 'The survey, it should be explained, was ordered by Kitchener for military purposes. But it was disguised as archaealogy.'

ವಚನ ಪಾಲಿಸಲಿಲ್ಲ.

ಮಹಾಯುದ್ಧದ ಕಾಲಕ್ಕೆ ತುರ್ಕರು ಜರ್ಮನರ ಕಡೆಗೆ ಹೋಗಲು ಕರ್ನಲ್ ಲಾರೆನ್ಸನು ಅನೇಕ ಯುಕ್ತಿ ಪ್ರಯುಕ್ತಿಗಳಿಂದ ಅರಬರನ್ನು ಎಬ್ಬಿಸಿ ಇಂಗ್ಲಿಷರು ತುರ್ಕರನ್ನು ಸೋಲಿಸುವಂತೆ ಮಾಡಿದನು. ಬಾದಶಹರು ಇದರಿಂದ ಸಂತುಷ್ಟರಾಗಿ ಲಾರೆನ್ಸನಿಗೆ ಅನೇಕ ಪದವಿ ಪ್ರಶಸ್ತಿಗಳನ್ನು ಮುಂದೆ ಮಾಡಿದರು. ಆದರೆ ಇಂಗ್ಲಿಷ ಸರಕಾರವು ಯುದ್ಧದ ಕಾಲಕ್ಕೆ ಅರಬರಿಗೆ ಕೊಟ್ಟ ಅಭಿವಚನವನ್ನು ಪಾಲಿಸಲಿಲ್ಲವಾದುದರಿಂದ ಅವನು ಆ ಪದವಿಗಳನ್ನೆಲ್ಲ ತೆಗೆದುಕೊಳ್ಳಲಿಲ್ಲ.

ಮುಸಲ್ಮಾನರನ್ನು ಮೋಸಗೊಳಿಸಲಿಕ್ಕಾಗಲಿ, ಅವರನ್ನು ಒಡಿಸಿಕೊಳ್ಳಲಿಕ್ಕಾಗಲಿ ಅವರ ಎಲ್ಲ ಕೀಲಗಳನ್ನು ಬಲ್ಲ ಲಾರೆನ್ಸನನ್ನೇ ನಿಯಮಿಸಲಾಗುತ್ತಿದ್ದಿತು. ತುರ್ಕ ಸೇನಾಪತಿಯ ಹಿಡಿತದಲ್ಲಿ ಒಮ್ಮೆ ಜನರಲ್ ಟೌನ್‌ಸೆಂಡನ ಸೈನ್ಯವು ಸಿಗಲು ಲಂಚಕೊಟ್ಟು ಅದನ್ನು ಬಿಡಿಸುವದಕ್ಕಾಗಿ ಕಿಚನರರು ಲಾರೆನ್ಸನನ್ನು ನಿಯಮಿಸಿದರು. ಆದರೆ ಆ ಸೇನಾಪತಿಯು ಲಂಚಕ್ಕೆ ಒಪ್ಪದೆ ಟೌನ್‌ಸೆಂಡನನ್ನು ಹಣ್ಣಿಗೆ ತಂದನು.

ದೂರದರ್ಶಿಯಾದ ಮುತ್ಸದ್ದಿ.

ಲಾರೆನ್ಸನು ಕೇವಲ ಮೋಸಗಾರ ಕಾರಸ್ಥಾನಿಯಾಗಿದ್ದಿಲ್ಲ ಆದರೆ ಚತುರ ಮುತ್ಸದ್ದಿಯೂ ಆಗಿದ್ದನು. ಮಹಾಯುದ್ಧವು ಶಾಂತವಾಗಿ ಮೆಸೋಪೋಟೇಮಿಯಾ ಪ್ರದೇಶವು ಇಂಗ್ಲಿಷರಿಗೆ ದೊರೆಯಲು ಲಾರೆನ್ಸನು, ಅದನ್ನು ಅರಬರ ವಶಕ್ಕೆ ಕೊಟ್ಟು ನೀವು ಬೇಕಾದ ವ್ಯಾಪಾರ ಸೌಲಭ್ಯ ಹೊಂದಬೇಕೆಂದು ಇಂಗ್ಲಿಷರಿಗೆ ಸೂಚಿಸಿದನು ಆದರೆ ಅವರು ಕೇಳದೆ ಆಳಹತ್ತಲು ಅರಬರು ದೊಂಬಿಯೆಬ್ಬಿಸಿದ್ದರಿಂದ ಇಂಗ್ಲಿಷರಿಗೆ ಲಕ್ಷಾವಧಿ ಸೈನ್ಯದ ವೆಚ್ಚವನ್ನು ತುಂಬಬೇಕಾಯಿತು. ಕಡೆಗೆ ಲಾರೆನ್ಸನ ಮತವೇ ಅನುಸರಿಸಲ್ಪಟ್ಟಿತು ಆಶ್ಚರ್ಯದ ಸಂಗತಿಯೆಂದರೆ ಯಾವ ಚರ್ಚಿಲರು ಈಗ ಹಿಂದುಸ್ಥಾನಕ್ಕೆ ಏನೂ ಕೊಡಬಾರದೆಂದು ಚೀರಾಡುತ್ತಿದ್ದಾರೆಯೋ ಅವರು ಆಗ್ಗೆ ಲಾರೆನ್ಸನ ಮತದ ಪಕ್ಷವನ್ನೇ ವಹಿಸಿದ್ದರು.

(೧೦ನೆಯ ಪುಟಕ್ಕೆ ಮುಂದುವರಿದಿದೆ)



ಶಾ. ಶ. ೧೮೫೭ ನೆಯ ಜ್ಯೇಷ್ಠ ಶು|| ೨ ಸೋಮವಾರ.

ಸ್ವಾತಂತ್ರ್ಯಕ್ಕೆ ಬೇಕಾದ ಸಾಮರ್ಥ್ಯ.

ಹಿಂದುಸ್ಥಾನಕ್ಕೆ [illegible] ಸ್ವಾತಂತ್ರ್ಯ ಬೇಕಾಗಿದೆ. [illegible] ಯುಗದಲ್ಲಿ [illegible] ದೂರವಸ್ಥೆಗೀಡಾಗುವುದರಲ್ಲಿ ಸಂದೇಹವೇ ಇಲ್ಲ. ಆದಕಾರಣ ಹಿಂದುಸ್ಥಾನದಲ್ಲಿ ನೆಲೆಸಿ ಇದೇ ತನ್ನ ಮಾತೃಭೂಮಿಯೆಂದು ತಿಳಿಯುವ ಪ್ರತಿಯೊಂದು ವ್ಯಕ್ತಿಯೂ ಆತನು ಯಾವ ಧರ್ಮ, ಮತ, ಪಂಥದವನಿದ್ದರೂ ಹಿಂದುಸ್ಥಾನದ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಮೊದಲು ಪ್ರಯತ್ನಿಸಬೇಕಾದುದು ಅತ್ಯಗತ್ಯ.

ಈ ಸ್ವಾತಂತ್ರ್ಯವಾದರೋ ತಾನಾಗಿಯೇ ಬರತಕ್ಕುದಲ್ಲ. ಮತ್ತು ಅನ್ಯರು ಕೃಪಾದೃಷ್ಟಿಯಿಂದ ಕೊಡತಕ್ಕುದೂ ಅಲ್ಲ. ಪರತಂತ್ರದಲ್ಲಿರುವ ನಾವೇ ಸ್ವಾತಂತ್ರ್ಯವನ್ನು ಸಂಪಾದಿಸಬೇಕಾಗಿದೆ. ಅದು ನಮ್ಮಲ್ಲಿ ಸಾಮರ್ಥ್ಯವಿಲ್ಲದೆ ದೊರೆಯುವುದೇ? ಸ್ವಾತಂತ್ರ್ಯ ಸಂಪಾದನೆಗೆ ಬೇಕಾದ ಸಾಮರ್ಥ್ಯವು ಹಿಂದುಸ್ಥಾನದವರಲ್ಲಿಲ್ಲವೆಂಬುದಕ್ಕೆ ಯಾವ ದೃಷ್ಟಾಂತವೂ ಬೇಡ. ನಾವು ಪರತಂತ್ರದಲ್ಲಿರುವುದೇ ಅದಕ್ಕೆ ಸಾಕ್ಷಿ.

ಬೆಳಕು ಬಂದೊಡನೆ ಕತ್ತಲೆಯು ಹೇಗೆ ನಿವಾರಣೆಯಾಗುತ್ತದೆಯೋ ಹಾಗೆಯೇ ಸ್ವಾತಂತ್ರ್ಯ ಸಂಪಾದನೆಯ ಸಾಮರ್ಥ್ಯವು ನಮ್ಮಲ್ಲಿ ಬಂದೊಡನೆಯೇ ಪಾರತಂತ್ರ್ಯ ಬೇಡಿಯು ಕಳಚಿ ಹೋಗುತ್ತದೆ. ಆದಕಾರಣ ನಾವು ಸ್ವಾತಂತ್ರ್ಯಕ್ಕೆ ಅಸಮರ್ಥರಾಗಿದ್ದೇವೆಂಬುದನ್ನು ನಾವು ಅನುಭವಿಸುತ್ತಿರುವ ಪಾರತಂತ್ರ್ಯವೇ ಸಾರಿ ಸಾರಿ ಹೇಳುತ್ತಿದೆ.

ಸ್ವಾತಂತ್ರ್ಯ ಸಂಪಾದನೆಗೆ ನಮ್ಮಲ್ಲಿ ಸಾಮರ್ಥ್ಯ ಬೇಕಾಗಿದೆಯೆಂಬ ವಿಷಯದಲ್ಲೇನೂ ಮತಭೇದವಿಲ್ಲ. ಆದರೆ ಆ ಸಾಮರ್ಥ್ಯ ಯಾವುದು? ಮತ್ತು ಅದನ್ನು ಹೇಗೆ ಸಂಪಾದಿಸಬೇಕು? ಎಂಬ ವಿಷಯಗಳಲ್ಲಿ ಮಾತ್ರ ತುಂಬಾ ಮತಭೇದಗಳಿವೆ. ಈ ಭಿನ್ನ ಭಿನ್ನ ಅಭಿಪ್ರಾಯದವರು ತಮ ತಮಗೆ ವಿಹಿತ ತೋರಿದ ಮಾರ್ಗಗಳಿಂದಲೇ ಸ್ವಾತಂತ್ರ್ಯ ಸಂಪಾದನೆಗೆ ಬೇಕಾಗುವ ಸಾಮರ್ಥ್ಯವನ್ನು ಹೊಂದಲು ಪ್ರಯತ್ನಿಸುತ್ತಿದ್ದಾರೆ.

ಈ ಪ್ರಯತ್ನಗಳಲ್ಲಿರತಕ್ಕ ಗುಣದೋಷಗಳು ನಮಗೆ ಸ್ಪಷ್ಟ ತಿಳಿಯಬೇಕಾದರೆ ಈಗಿನ ಪಾರತಂತ್ರ್ಯವು ಏಕೆ ಬಂದಿತೆಂಬುದರ ನಿಜವಾದ ಕಾರಣ ಗೊತ್ತಾಗಬೇಕು. ರೋಗದ ಕಾರಣ ತಿಳಿದರೆ ಅದರ ನಿವಾರಣೆಗೆ ಯೋಗ್ಯವಾದ ಔಷಧಿಯನ್ನು ಕೊಡಲು ಅನುಕೂಲವಾಗುವುದಿಲ್ಲವೇ?

ಹಿಂದುಸ್ಥಾನವು ಸಾಧಾರಣ ಒಂದು ಸಾವಿರ ವರುಷಗಳಿಂದ ಪರತಂತ್ರದಲ್ಲಿದೆ. ಇದರ ಈ ಪಾರತಂತ್ರ್ಯ ಪಾಶವು ದಿನೇ ದಿನೇ ಬಿಗಿಯಾಗುತ್ತಾ ಬಂದಿದೆಯೇ ವಿನಾ ಸಡಿಲವೇನೂ ಆಗಿಲ್ಲ. ಮೊದಲು ಮುಸಲ್ಮಾನರು ನಮ್ಮನ್ನು ಗೆದ್ದು ಪಾರತಂತ್ರ್ಯದ ಬೇಡಿಯನ್ನು ಹಾಕಿ ನಾವು ಅದನ್ನು ಕಳಚಿಕೊಳ್ಳದಂತೆ ನಮ್ಮನ್ನು ಕಾಯುತ್ತಾ ಈ ದೇಶದಲ್ಲಿಯೇ ನೆಲಸಿದರು. ಇಷ್ಟೇ ಅಲ್ಲ; ಯಾವಾಗಲೂ ಹಿಂದುಸ್ಥಾನವು ತಮ್ಮ ಸ್ವಾಧೀನದಲ್ಲಿಯೇ ಇರಬೇಕೆಂಬ ಉದ್ದೇಶದಿಂದ ಈ ದೇಶದಲ್ಲಿ ತಮ್ಮ ಧರ್ಮವನ್ನು ನಾನಾ ರೀತಿಗಳಿಂದ ಪ್ರಸಾರ ಮಾಡಿ ತಮ್ಮದೊಂದು ಪ್ರಬಲ ಜನಾಂಗವನ್ನೇ ಈ ದೇಶದಲ್ಲಿ ಉಂಟು ಮಾಡಿದರು.

ಆ ಮೇಲೆ ಇಂಗ್ಲಿಷರು ಬಂದು ಹಿಂದು ಮುಸಲ್ಮಾನ್ ಈ ಉಭಯ ಜನಾಂಗಗಳನ್ನೂ ಗೆದ್ದು ಬಲವಾದ ಪಾರತಂತ್ರ್ಯದ ಬೇಡಿಯನ್ನು ಉಭಯರಿಗೂ ಹಾಕಿದರು. ಹಿಂದು ಮುಸಲ್ಮಾನರ ಕಲಹವು ಇಂಗ್ಲಿಷರ ವಿಜಯಕ್ಕೆ ಕಾರಣವಾದಂತೆಯೇ ಹಿಂದು ಹಿಂದುಗಳಲ್ಲಿಯ ಕಲಹವು ಮುಸಲ್ಮಾನರ ಜಯಕ್ಕೆ ಕಾರಣವಾಯಿತೆಂದು ಇತಿಹಾಸವು ಘಂಟಾಘೋಷವಾಗಿ ಹೇಳುತ್ತಿದೆ.

ಎಂದಮೇಲೆ ಈಗಿನ ಪಾರತಂತ್ರ್ಯಕ್ಕೆ ಯಾರು ಕಾರಣರು? ಭಾರತಮಾತೆಯ ಕಾಲಿಗೆ ಪರತಂತ್ರದ ಬೇಡಿಯನ್ನು ಹಾಕಿಸಿದವರಾರು? ಹಿಂದುಗಳಲ್ಲವೇ? ಹಿಂದುಗಳಲ್ಲಿಯ ಅಂತಃಕಲಹವೇ ಭಾರತಮಾತೆಯ ಪಾರತಂತ್ರ್ಯಕ್ಕೆ ಮೂಲ ಕಾರಣವಾಗಿಲ್ಲವೇ? ಆದುದರಿಂದ ಹಿಂದುಗಳಲ್ಲಿಯ ಈ ದೋಷವು ನಿವಾರಣೆಯಾಗಿ ಹಿಂದುಗಳೆಲ್ಲಾ ಏಕಜೀವಿಗಳಾದ ವಿನಾ ಪಾರತಂತ್ರ್ಯ ಪಾಶವು ಹೇಗೆ ತಾನೆ ನಾಶವಾಗುವುದು?

ಹಿಂದುಗಳು ಸಂಖ್ಯಾ ಬಲದಲ್ಲಿ ಕಡಿಮೆಯಿಲ್ಲ. ಶೂರತ್ವದಲ್ಲಿಯೂ ಹಿಂದಿಲ್ಲ. ಆದರೆ ಇವರಲ್ಲಿ ಐಕಮತ್ಯವಿಲ್ಲ. ತಾವೆಲ್ಲ ಒಂದೆಂಬ ಅಭಿಮಾನವಿಲ್ಲ. ತಮ್ಮ ಜನರ ಮಾನ ಧನ ಪ್ರಾಣಗಳ ರಕ್ಷಣೆಗೆ ಒಟ್ಟುಗೂಡಿ ಪ್ರಯತ್ನಿಸುವ ತಿಳುವಳಿಕೆಯಿಲ್ಲ. ಮುಸಲ್ಮಾನರಂತೆ ಧಾರ್ಮಿಕ ಭಾವನೆಯಿಂದಾಗಲಿ ಅಥವಾ ಇಂಗ್ಲಿಷ ಜನಗಳಂತೆ ರಾಷ್ಟ್ರೀಯ ಭಾವನೆಯಿಂದಾಗಲಿ ಏಕಜೀವಿಗಳಾಗುವ ಗುಣವೇ ಇಲ್ಲ. ಇದೇ ಸ್ವಾತಂತ್ರ್ಯ ಸಂಪಾದನೆಗೆ ಬೇಕಾದ ಮಹಾ ಸದ್ಗುಣ. ಇದೇ ಪ್ರಚಂಡವಾದ ಸಾಮರ್ಥ್ಯ. ಈ ಮಹಾ ಬಲದಿಂದಲೇ ನಾವು ಸ್ವಾತಂತ್ರ್ಯವನ್ನು ಸಂಪಾದಿಸಲು ಸಮರ್ಥರಾಗುವೆವು. ಈ ದಿವ್ಯ ಸಾಮರ್ಥ್ಯವೊಂದಿಲ್ಲದಿದ್ದರೆ ನಮಗೆ ಸ್ವಾತಂತ್ರ್ಯವು ಕನಸಿನಲ್ಲಿಯೇ ಸರಿ. ಮುಸಲ್ಮಾನರಿಂದಲೂ ಇಂಗ್ಲಿಷರಿಂದಲೂ ನಾವು ಪರತಂತ್ರದ ಬೇಡಿಯನ್ನು ಹಾಕಿಸಿಕೊಂಡಿರುವುದಕ್ಕೆ ಆ ಉಭಯ ಜನಾಂಗಗಳಲ್ಲಿಯೂ ಇರುವ ಸ್ವಜನ ಪ್ರೇಮಾದರ ಸಂರಕ್ಷಣೆಗಳ ಅಭಿಮಾನವು ನಮ್ಮಲ್ಲಿಲ್ಲದಿದ್ದುದೇ ಮುಖ್ಯ ಕಾರಣ.

ಸ್ವಾತಂತ್ರ್ಯ ಸಂಪಾದನೆಗೆ ಹಿಂದುಗಳಿಗಿಂತಲೂ ಮುಸಲ್ಮಾನರು ಎಷ್ಟೋ ಅತ್ಯಧಿಕವಾದ ಈ ಸಾಮರ್ಥ್ಯವುಳ್ಳವರಾಗಿದ್ದಾರೆ. ಹಿಂದುಸ್ಥಾನದಲ್ಲಿ ಈಗ ಹಿಂದುಗಳಷ್ಟು ಮುಸಲ್ಮಾನ

ರಿದ್ದಿದ್ದರೆ ಅವರು ಖಂಡಿತವಾಗಿಯೂ ಸ್ವಾತಂತ್ರ್ಯವನ್ನು ಸಂಪಾದಿಸುತ್ತಿದ್ದರು. ಅವರಲ್ಲಿ ಸ್ವಜನರ ಮಾನ ಧನ ಪ್ರಾಣಗಳ ರಕ್ಷಣೆಗಾಗಿ ಐಕಮತ್ಯದಿಂದ ಪ್ರಯತ್ನಿಸುವ ದಿವ್ಯ ಗುಣ ಹೇಗಿದೆಯೆಂಬುದನ್ನು ಹಿಂದುಗಳು ಈಗಲಾದರೂ ತಿಳಿದುಕೊಳ್ಳಬಾರದೆ?

ಆ ಗುಣವು ಹಿಂದುಗಳಲ್ಲಿ ಬಂದಾಗಲೇ ಹಿಂದು ಮುಸಲ್ಮಾನರ ಐಕಮತ್ಯ. ಹಿಂದು ಮುಸಲ್ಮಾನರ ಐಕಮತ್ಯವೇ ಸ್ವಾತಂತ್ರ್ಯ ಪ್ರಾಪ್ತಿಯ ಸಾಮರ್ಥ್ಯ. ಆದಕಾರಣ ಹಿಂದುಗಳು ಮೊದಲು ಸ್ವಾಭಿಮಾನಶಾಲಿಗಳಾಗಬೇಕು. ತಮ್ಮಲ್ಲಿಯ ಸಾಮಾಜಿಕ ಮತ್ತು ಧಾರ್ಮಿಕ ದೋಷಗಳನ್ನು ತೆಗೆದುಹಾಕಬೇಕು. ಹಿಂದುಗಳೆಲ್ಲಾ ಒಂದೆಂಬ ಸಂಘಟನೆಯ ದಿವ್ಯ ಗುಣವನ್ನು ತಮ್ಮ ಕೃತಿಯಿಂದಲೂ ಉಂಟುಮಾಡಬೇಕು

ಹಿಂದು ಸಮಾಜದಲ್ಲಿ ಬಹು ಕಾಲದಿಂದಲೂ ಬೇರೂರಿ ಬೆಳೆದಿರುವ ಸಾಮಾಜಿಕ ಮತ್ತು ಧಾರ್ಮಿಕ ಮೇಲು ಕೀಳುಗಳ ಬಳ್ಳಿಯನ್ನು ಕಿತ್ತೊಗೆಯಬೇಕು. ಬ್ರಾಹ್ಮಣನಿರಲಿ, ಅಂತ್ಯಜನಿರಲಿ, ಪಂಜಾಬಿ ಇರಲಿ, ಮದ್ರಾಸಿ ಇರಲಿ, ಯಾವ ಹಿಂದುವಿನ ಮಾನ ಧನ ಪ್ರಾಣಗಳ ಹಾನಿಯು ಅನ್ಯಾಯವಾಗಿ ಅನ್ಯರಿಂದ ಸಂಭವಿಸುತ್ತಿದ್ದರೂ ಆ ಹಾನಿಯು ತಮ್ಮದೆಂಬ ತಿಳುವಳಿಕೆಯುಂಟಾಗುವಂತಹ ಸ್ವಜನ ಪ್ರೇಮವು ಹಿಂದುಗಳಲ್ಲುಂಟಾಗಬೇಕು ಇದೇ ದಿವ್ಯ ಸಾಮರ್ಥ್ಯ. ಸ್ವಾತಂತ್ರ್ಯ ಪ್ರಾಪ್ತಿಗೆ ಇದೇ ಒಂದು ಕೊರತೆಯಿದೆ. ಆದಕಾರಣ ಇದೇ ನಮಗೆ ಬೇಕಾದ ಸಾಮರ್ಥ್ಯ.

ಸ್ಫುಟ ವಿಚಾರ.

ಕರ್ನಾಟಕದಲ್ಲಿಯ ಶುದ್ಧಿ ಸಂಘಟನೆ.

ಕರ್ನಾಟಕದಲ್ಲಿ ವೀರಶೈವ ಸಮಾಜವು ಒಂದು ಮುಖ್ಯವಾದುದಾಗಿಯೇ ಇದೆಯಷ್ಟೆ. ಹಿಂದುಗಳಲ್ಲಿಯು ಈ ಸಮಾಜದವರೇ ಪರ ಧರ್ಮಗಳಿಗೆ ಹೋಗುತ್ತಿರುವುದು ಹೆಚ್ಚು. ಈ ಜನರಲ್ಲಿರುವ ಅಜ್ಞಾನವೇ ಅನ್ಯ ಧರ್ಮ ಪ್ರಸಾರ ಮಾಡುವವರಿಗೆ ತುಂಬಾ ಅನುಕೂಲವಾಗಿದೆ. ಮೊದಲು ಕ್ರೈಸ್ತ ಧರ್ಮಕ್ಕೆ ಕರ್ನಾಟಕದಲ್ಲಿ ಹೆಚ್ಚಾಗಿ ಸೇರಿದವರೂ ಲಿಂಗಾಯತರೆ. ಇತ್ತೀಚೆಗೆ ಮುಸಲ್ಮಾನ ಧರ್ಮದಲ್ಲಿ ಸೇರುತ್ತಿರುವವರೂ ಹೆಚ್ಚಾಗಿ ವೀರಶೈವರೆ. ಅಂತೆಯೇ ಸಿದ್ದೀಕ ಸಾಹೇಬರು ಚನ್ನಬಸವಣ್ಣನ ಅವತಾರವೆಂದು ಹೇಳಿಕೊಳ್ಳುತ್ತ ತಿರುಗಾಡುತ್ತಿದ್ದಾರೆ.

ಇಂತಹ ಕಠಿಣ ಕಾಲದಲ್ಲಿ ಧರ್ಮಾಧಿಕಾರಿಗಳು ಕಣ್ಣು ಮುಚ್ಚಿಕೊಂಡು ಕುಳಿತಿದ್ದರೂ ವೀರಶೈವ ಮತಾಭಿಮಾನಿಗಳಾದ ಅನೇಕ ಮಹಾ ಜನರೇ ಮುಂದೆ ಬಂದು ಸಂಘಗಳ ಮೂಲಕ ವೀರಶೈವ ಶುದ್ಧೀ ಕಾರ್ಯವನ್ನು ಪ್ರಾರಂಭಿಸಿರುವುದು ಅತ್ಯಂತ ಅಭಿನಂದನೀಯವಾದುದಾಗಿದೆ. ವಿಜಾಪುರದ ಶ್ರೀ ಸಿದ್ಧೇಶ್ವರ ಸಂಸ್ಥೆಯವರು, ಸೊಲ್ಲಾಪುರದ ವೀರಶೈವ ಏಕೀಕರಣ ಸಂಘದವರು, ಇಳಕಲ್ ಶುದ್ಧಿ ಸಂಘದವರು, ವೀರಶೈವರಲ್ಲಿ ಶುದ್ಧಿ ಮತ್ತು ಸಂಘಟನೆಯ ಕಾರ್ಯಗಳನ್ನು ಮಾಡುತ್ತಿರುವದು ಆಯಾಯ ಸಂಘಗಳಿಗೆ ತುಂಬಾ ಭೂಷಣಪ್ರದವಾಗಿದೆ. ವೀರಶೈವ ಮತವನ್ನೂ, ಹಿಂದು ಸಂಸ್ಕೃತಿಯನ್ನೂ, ಸಂರಕ್ಷಿಸುವ ಈ ಮಹತ್ಕಾರ್ಯವು ಇದೇ ಪ್ರಕಾರ ಇನ್ನೂ ಅನೇಕ ಕಡೆ ಜಾಗ್ರತೆ ಪ್ರಾರಂಭವಾಗಬೇಕು. ವೀರಶೈವ ತರುಣ ಸಂಘಗಳು ಈ ಕಾರ್ಯಕ್ಕೆ ಮುಂದಾಗಬೇಕು.

ಮಂಗಳೂರು, ಹುಬ್ಬಳ್ಳಿ, ಮೊದಲಾದ ಕೆಲವು ಸ್ಥಳಗಳಲ್ಲಿ ಆರ್ಯ ಸಮಾಜದವರೂ ಶುದ್ಧಿ ಕಾರ್ಯವನ್ನು ಪ್ರಾರಂಭಿಸಿರುವುದು ಅತ್ಯಂತ ಸ್ತುತ್ಯವಾದುದು. ಇವರು ಹಿಂದು ಧರ್ಮದಲ್ಲಿಯ ಬೇರೆ ಬೇರೆ ಮತದವರನ್ನು ತಮ್ಮ ಸಮಾಜಕ್ಕೆ ಎಳೆದುಕೊಳ್ಳುವ ಹವ್ಯಾಸಕ್ಕೆ ಹೋಗದೆ ಬೇರೆ ಧರ್ಮದಲ್ಲಿ ಹೋದವರ ಅಥವಾ ಬೇರೆ ಧರ್ಮದವರು ಹಿಂದು ಧರ್ಮದಲ್ಲಿ ಬರಲು ಇಷ್ಟಪಟ್ಟರೆ ಅವರನ್ನು ತಮ್ಮ ಸಮಾಜದಲ್ಲಿ ತೆಗೆದುಕೊಳ್ಳುವುದು ಶ್ರೇಯಸ್ಕರವಾದುದು. ಈ ಪ್ರಕಾರ ಶುದ್ಧಿ ಮತ್ತು ಸಂಘಟನೆಯ ಕಾರ್ಯಗಳು ಕರ್ನಾಟಕದಲ್ಲಿಯೂ ಹೆಚ್ಚುವುದು ಅತ್ಯವಶ್ಯಕವಾಗಿಲ್ಲವೇ?

ಸವರ್ಣೀಯರ ನಿಂದ್ಯ ನಡತೆ.

ಆದಿ ಜನರಿಗೆ ಅನೇಕ ಕಡೆ ಕೆಲವು ಸವರ್ಣೀಯ ಹಿಂದುಗಳು ಅನಿರ್ವಚನೀಯವಾದ ಹಿಂಸೆಗಳನ್ನುಂಟುಮಾಡುತ್ತಿದ್ದಾರಷ್ಟೆ. ಇವರ ಈ ರಾಕ್ಷಸಿ ವರ್ತನದಿಂದಲೇ ಹಿಂದು ಜನಾಂಗವು ಈಗ ನಾನಾ ಕಷ್ಟನಷ್ಟಗಳಿಗೊಳಗಾಗಿದೆ. ಇನ್ನೂ ಇವರಿಗೆ ಬುದ್ಧಿ ಬಾರದಿರುವುದು ಪರಮಾಶ್ಚರ್ಯ!

ಮೈಸೂರು ಪ್ರಾಂತದ ಚಿತ್ರದುರ್ಗ ತಾಲೂಕು ದೊಡ್ಡಸಿದ್ದಪ್ಪನ ಹಳ್ಳಿಯಲ್ಲಿ ಕಳೆದ ತಿಂಗಳು ಆದಿಕರ್ನಾಟಕರ ಸಭೆ ಸೇರಿದ್ದಿತು. ಆಗ ಶ್ರೀ. ಮುಹಡೆ ತಿಪ್ಪೆರುದ್ರಪ್ಪನವರು ಈ ಪ್ರಕಾರ ಭಾಷಣ ಮಾಡಿದರು—"ಎರಡು ವರುಷಗಳ ಹಿಂದೆ ಇಲ್ಲಿಯ ಆದಿ ಜನರು ಸವರ್ಣ ಹಿಂದುಗಳ ಇಷ್ಟದಂತೆ ಗೋವಧೆ, ಮದ್ಯ ಮಾಂಸ ಸೇವನೆಗಳನ್ನು ಬಿಟ್ಟು ಬಹು ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳುತ್ತಾ ಬಂದರು. ಗ್ರಾಮ ದೇವತೆಯ ಜಾತ್ರೆಯಲ್ಲಿ ಕೋಣವನ್ನು ಮೆರಿಸಿ ಕಡಿಯಲು ಈ ಜನರಿಗೆ ಸವರ್ಣ ಹಿಂದುಗಳು ಹೇಳಿದರು. ಈ ನಿಂದ್ಯ ಕಾರ್ಯ ಅದಕ್ಕೆ ಇವರೊಪ್ಪದೆ ದ್ವೇಷಿಸಿ ಒಂದು ನೆಪ ತೆಗೆದು ತಾ. ೮-೪-೩೫ನೆಯ ದಿನ ಆದಿ ಜನರ ಕೇರಿಯನ್ನು ನುಗ್ಗಿ ಅವರನ್ನು ಕೊಡಲಿ ದೊಣ್ಣೆ ಮೊದಲಾದವುಗಳಿಂದ ಹೊಡೆದು ತುಂಬಾ ಗಾಯಪಡಿಸಿದರು. ಗಾಯ ಹೊಂದಿದ್ದ ೮ ಜನರು ಚಿತ್ರದುರ್ಗದ ಸಿವಿಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದಿ ಬಂದಿದ್ದಾರೆ. ಈ ನಿರಪರಾಧಿಗಳಾದ ಜನರು ಒಬ್ಬರೇ ತಿರುಗಾಡಲು ಸಾಧ್ಯವಿಲ್ಲ."

ಈ ಸಭೆಯಲ್ಲಿ ಒಬ್ಬ ಆದಿಜನ ವಿದ್ಯಾರ್ಥಿಯು ಹೀಗೆ ಭಾಷಣ ಮಾಡಿದನು—"ನಾವು ಸವರ್ಣ ಹಿಂದುಗಳ ಬಟ್ಟೆಯನ್ನು ನೇಯುತ್ತೇವೆ. ಅವರ ಪಾದರಕ್ಷೆಗಳನ್ನು ಹೊಲಿಯುತ್ತೇವೆ. ಗ್ರಾಮವನ್ನು ಶುಚಿಗೊಳಿಸುತ್ತೇವೆ, ಹೀಗೆ ನಾವು ಅವರ ಸೇವೆ ಮಾಡುತ್ತಿದ್ದರೂ ಹಿಂದು ಧರ್ಮದ ಹೆಸರಿನಿಂದ ನಮ್ಮನ್ನು ಅಸ್ಪೃಶ್ಯರೆಂದು ತಿಳಿದಿದ್ದಾರೆ. ನಾನಾ ಹಿಂಸೆಗಳನ್ನು ಕೊಡುತ್ತಿದ್ದಾರೆ. ನಾವು ಇಸಾಯಿ ಮತವನ್ನಾಗಲಿ ಇಸ್ಲಾಮ್ ಮತವನ್ನಾಗಲಿ ಸೇರಿದ್ದರೆ ನಮಗೆ ಸಮಾಜದಲ್ಲಿ ಸಮಾನತ್ವ ಬರುತ್ತಿತ್ತು. ನಮಗೆ ಹೀಗೆ ಹೊಡೆದಿದ್ದರೆ ಆಗ ಇವರ ಗತಿಯೇನಾಗುತ್ತಿತ್ತೋ? ಹಿಂದು ಧರ್ಮಕ್ಕೆ ಸೇರಿದ ನಮ್ಮ ಗೋಳಾಟವನ್ನು ಕೇಳುವವರೇ ಇಲ್ಲ. ಮುಳವಳ್ಳಿ, ಕೊತ್ತನಹಳ್ಳಿ ಈ ದೊಡ್ಡಸಿದ್ದಪ್ಪನ ಹಳ್ಳಿಗಳಲ್ಲಿ ನಮ್ಮ ಜನರಿಗೆ ಸವರ್ಣ ಹಿಂದುಗಳಿಂದಾಗುತ್ತಿರುವ ಕಷ್ಟ ಪರಂಪರೆಗಳನ್ನು ನೋಡಿದರೆ ನಾವು ಪರ ಧರ್ಮವನ್ನು ಸೇರುವುದೇ ಕ್ಷೇಮಕರವೆಂದು ತೋರುತ್ತದೆ."

ಸವರ್ಣ ಹಿಂದುಗಳಲ್ಲಿ ಅಸಂಖ್ಯರು ಈಗಲಾದರೂ ಕಣ್ಣು ತೆರೆಯುವರೇ? ತಮ್ಮ ರಾಕ್ಷಸಿ ವೃತ್ತಿಯನ್ನು ಬಿಟ್ಟು ಹಿಂದು ಧರ್ಮಕ್ಕೆ ಕೀರ್ತಿಯನ್ನು ತರುವರೇ? ಅಥವಾ ಹಿಂದು ಸಮಾಜಕ್ಕೆ ಸಮಾಧಿಯನ್ನು ಸಿದ್ಧಗೊಳಿಸುವರೆ ?

ಪ ತ್ರ ಗ ಳ ಸಾ ರಾ ೦ ಶ .

ವಿದ್ಯಾರ್ಥಿಗಳಿಗೆ ಉತ್ತಮ ಸಂಧಿ.

ಹಳ್ಳಿಪಳ್ಳಿಗಳಲ್ಲಿಯ ಬಡಬಗ್ಗರಿಗೆ ವೈದ್ಯಕೀಯ ಸಹಾಯವೂ ಮತ್ತು ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ಉಪಜೀವಿಕೆಯ ಸಾಧನವೂ ದೊರಕುವದು ಕಠಿಣವಾಗಿರುವದು. ಈ ಅಡಚಣಿಗಳನ್ನು ದೂರ ಮಾಡುವ ಕುರಿತು ಶಕ್ಯವಿದ್ದಷ್ಟು ಪ್ರಯತ್ನ ಮಾಡಬೇಕೆಂಬ ಉದ್ದೇಶದಿಂದ ಮಾಹೆ ಜೂನ ೧೯೩೩ ರಿಂದ ಬೆಳಗಾವ ಲಿಂಗರಾಜ ಕಾಲೇಜದಲ್ಲಿ ಆಯುರ್ವೇದ ವಿದ್ಯಾಪೀಠವನ್ನು ಸ್ಥಾಪಿಸಿದ್ದು ಭಿಷಕ್‌ವರ ವರ್ಗದಲ್ಲಿ ಅಭ್ಯಾಸ ಮಾಡುತ್ತಿರುವವರಿಗೆ ಆಯುರ್ವೈದ್ಯಕಿ ಶಿಕ್ಷಣವನ್ನು ಕೊಡುವದಲ್ಲದೆ ಅವಶ್ಯ ಕಂಡಷ್ಟು ಆಂಗ್ಲ ವೈದ್ಯಕೀಯ ಶಿ ಕ್ಷ ಣ ವ ನ್ನೂ ಕೊಡುತ್ತಿರುತ್ತದೆ. ಇದು ಅಲ್ಲದೆ ಜೂನ ೧೯೩೫ ರಿಂದ ನಿಖಿಲ ಭಾರತ ಆಯುರ್ವೇದ ಮಹಾ ಮಂಡಳದ ನಿಯಮಕ್ಕನುಸರಿಸಿ "ಭಿಷಕ್" ವ ರ್ಗ ವ ನ್ನೂ ತೆಗೆಯುವದು ಗೊತ್ತಾಗಿದೆ.

ವಿದ್ಯಾರ್ಥಿಗಳಿಗೆ ಪುಸ್ತಕೀ ಶಿಕ್ಷಣ ಕೊಡುವದಲ್ಲದೆ ಪ್ರತ್ಯಕ್ಷ ಶಿಕ್ಷಣದ ಸಲುವಾಗಿ ವೈಜನಾಥ, ಕಣಬರಗಿಗುಡ್ಡ, ಬೆಳಗಾವ ಮುನಸಿಪಾಲ್ಟಿ ಆಯುರ್ವೈದ್ಯಕಿ ದವಾಖಾನೆ, ವಿದ್ಯಾಪೀಠದ ಪ್ರಯೋಗ ಶಾಲೆ ಮತ್ತು ವನಸ್ಪತಿಯ ತೋಟ ಇವುಗಳ ಉಪಯೋಗ ಮಾಡುವವರಲ್ಲಿ ಬರುತ್ತದೆ.

"ಭಿಷಕ್‌ವರ" ಮತ್ತು ಭಿಷಕ್ ವರ್ಗಗಳ ಕೋರ್ಸ ಮತ್ತು ಫೀ ಅನುಕ್ರಮವಾಗಿ ೨-೩ ವರ್ಷ; ಪ್ರವೇಶ ಫೀ ರೂ. ೫-೦-೦ ಮತ್ತು ಪ್ರತಿ ತಿಂಗಳಿಗೆ ಫೀ ರೂ. ೨-೧-೦ ಈ ಪ್ರಕಾರ ಇರುವದು. ಸಂಸ್ಕೃತ ಸಹಿತ "ಮ್ಯಾಟ್ರಿಕ್ಯುಲೇಟ್ಸ" ಮತ್ತೂ ಅಂಡರ ಗ್ರಾಜುಯೇಟರರಿಗೆ ಮೇಲಿನ ವರ್ಗದಲ್ಲಿ; ಮತ್ತು ಮ್ಯಾಟ್ರಿಕ ನಾಪಾಸಾದ ಹಾಗೂ ವ್ಹ. ಫಾ. ಪಾಸಾದ ವಿದ್ಯಾರ್ಥಿಗಳಿಗೆ ಕೆಳಗಿನ ವರ್ಗದಲ್ಲಿ ಪ್ರವೇಶ ಸಿಗುವದು.

ತಾ. ೧೫-೬-೩೫ ರಿಂದ ವರ್ಗಗಳು ಸುರು ಆಗಿ ಜೂನ ಅಖೈರದವರೆಗೆ ಪ್ರವೇಶ ದೊರೆಯುವದು. ಇಚ್ಛೆ ಇದ್ದವರು ತಾ. ೧೫-೬-೩೫ ರ ಒಳಗಾಗಿ ಪ್ರವೇಶಕ್ಕಾಗಿ ಕೆಳಗಿನ ಪತ್ತೆಕ್ಕೆ ಅರ್ಜ ಮಾಡಬಹುದು.

ವ್ಯವಸ್ಥಾಪಕ

ತಾ. ೨೩-೫-೧೯೩೫ ಆಯುರ್ವೇದ ವಿದ್ಯಾಪೀಠ ಬೆಳಗಾವ

ಕಲ್ಲಬುರ್ಗಿ

ನಾರಸಿಂಹನ ಮೂರ್ತಿಯನ್ನು ಕಟ್ಟಿಕೊಳ್ಳುವ ವಿಚಾರದಲ್ಲಿ ಇಲ್ಲಿ ವ್ಯಾಜ್ಯ ನಡೆದಿತ್ತು. ಲಿಂಗಾಯತರಂತೆ ತೀರ್ಮಾನವಾಗಿದೆ. ತಾ. ೩೧-೫-೩೫ ನೇ ದಿನ ಇಲ್ಲಿ ಪಲ್ಲಕ್ಕಿ ಮೆರವಣಿಗೆ ಸಂಭ್ರಮದಿಂದ ಸಾಗಿತು.

ಓರ್ವ ನಗರವಾಸಿ.

ಹಂಸಭಾವಿ

ಹಂಸಭಾವಿ ಶ್ರೀ ಶಿವಲಿಂಗೇಶ್ವರ ತಪಸ್ವಿಗಳ ಮಠದಲ್ಲಿ ಶ್ರೀಮನ್ನಿರಂಜನ ಪ್ರಣವ ಸ್ವರೂಪಿಗಳಾದ ಮೃತ್ಯುಂಜಯ ಸ್ವಾಮಿಗಳವರ ಸನ್ನಿಧಿಯಲ್ಲಿ ತಾ. ೧೯-೫-೩೫ನೇ ಆದಿತ್ಯವಾರದಿಂದ . ದಿವಸಗಳ ವರೆಗೆ ಶ್ರೀ ಮಹಾಂತ ದೇವರು ಮುರಘಾಮಠ ಧಾರವಾಡ ಇವರಿಂದ ಶಿವಾನುಭವ ಪ್ರವಚನವು ನಡೆದು ಕಡೆಯ ದಿವಸ ತಾ. ೨೪-೫-೩೫ನೇ ಶುಕ್ರವಾರ ಇಲ್ಲಿಯ ಸರ್ವ ಜನಗಳ ಅಭಿಪ್ರಾಯದ ಮೇರೆಗೆ ಶಿವಾನುಭವ ಜ್ಞಾನ ಸಂಪಾದನೆಗೋಸ್ಕರ "ಶಿವಾನುಭವ ಮಂಟಪ" ವು ಸ್ಥಾಪಿಸಲ್ಪಟ್ಟಿತು. ಇದೇ ರೀತಿಯಾಗಿ ಶ್ರೀ ( ) ಗಳವರು ಭೋಗಾವಿಯ ಭಕ್ತರ ಇಚ್ಛೆಯ ಮೇರೆಗೆ ಅಲ್ಲಿಗೆ ದಯಮಾಡಿಸಿದಾಗ್ಗೆ ಭೋಗಾವಿಯಲ್ಲಿಯೂ ಸಹ ತಾ. ೨೭-೫-೩೫ನೇ ಸೋಮವಾರ ಶ್ರೀ ಮಹಾಂತ ದೇವರಿಂದ ಪ್ರವಚನವು ನಡೆದು ಅಲ್ಲಿಯೂ ಶಿವಾನುಭವ ಮಂಟಪವು ಸ್ಥಾಪಿಸಲ್ಪಟ್ಟಿತು.

ಮುರಿಗೆಪ್ಪ ಎಲಿ ಮಾಸ್ತರ.

ಕರ್ನಲ್ ಲಾರೆನ್ಸನ ಕಾರಸ್ಥಾನ.

(೯ ನೆಯ ಪುಟದಿಂದ ಬಂದುದು.)

ಹಿಂದುಸ್ಥಾನದಲ್ಲಿ ಲಾರೆನ್ಸ.

ಸಿರಿಯಾದಲ್ಲಿ ಫ್ರೆಂಚರ ವಿರುದ್ಧವಾಗಿ ಅರಬರನ್ನು ಎಬ್ಬಿಸಿ ದೊಂಬಿ ಮಾಡಿಸಿದನೆಂದು ಫ್ರೆಂಚರು ಲಾರೆನ್ಸನ ಬಗ್ಗೆ ದೂರ ಹೇಳಹತ್ತಲು ಲಾ ರೆ ನ್ಸ ನು ಹಿಂದುಸ್ಥಾನಕ್ಕೆ ಕಳಿಸಲ್ಪಟ್ಟನು. ಅವನು ಏರ್ ಕ್ರಾಪ್ಟ್ಸಮನ್ ಶಾ ಆಗಿ ೧೯೨೬ ರಲ್ಲಿ ಹಿಂದುಸ್ಥಾನಕ್ಕೆ ಬಂದನು. ಅವನು ಹೀಗೆ ಬಂದ ಸುದ್ದಿಯು ಯಾರಿಗೂ ಗೊತ್ತಿರಲಿಲ್ಲ. ಒಂದೂವರೆ ವರ್ಷಗಳ ನಂತರ ಅಫಗಾಣಿಸ್ಥಾನದ ಆಗಿನ ಅಮೀರನಾಗಿದ್ದ ಅಮಾನುಲ್ಲಾ ಖಾನನಿಗೆ ಈ ಪ್ರಸಿದ್ಧ ವ್ಯಕ್ತಿಯ ಸಂಶಯ ಬರಹತ್ತಿತು. ಇವನೇ ತನ್ನ ವಿರುದ್ಧವಾಗಿ ಅಫಗಾನರನ್ನು ಎಬ್ಬಿಸುತ್ತಿರುವನೆಂದು ತಿಳಿದು ಇವನ ಶಿರವನ್ನು ತಂದು ಕೊಟ್ಟವರಿಗೆ ಬೇಕಾದ ಪಾರಿತೋಷಕ ಕೊಡುವದಾಗಿ ಅಮಾನುಲ್ಲಾ ಖಾನನು ವರ್ತಮಾನ ಪತ್ರದಲ್ಲಿ ಸಹ ಪ್ರಕಟಪಡಿಸಿದ್ದನು. ಈ ಪ್ರಕಟನೆ ಹೊರಟ ಕೂಡಲೆ ಲಾರೆನ್ಸನು ಇಂಗ್ಲಂಡದ ಹಾದೀ ಹಿಡಿದಿದ್ದನು. ೧೯೩೦ ನೆಯ ವರ್ಷದಲ್ಲಿ ಕುರ್ದ ಜನರು ತುರ್ಕರ ವಿರುದ್ಧ ದೊಂಬಿಯೆಬ್ಬಿಸಿದರು. ಆ ಕಾಲಕ್ಕೆ ಜರ್ಮನ್ ಪತ್ರಿಕೆಗಳೆಲ್ಲ ಕುರ್ದ ದೊಂಬಿಗೆ ಲಾರೆನ್ಸನೇ ಕಾರಣನೆಂದು ಕೂಗಿದವು. 'ಗರಮಾನಿಯಾ' ಎಂಬ ಜರ್ಮನ್ ಪತ್ರಿಕೆಯು, ಈ ದೊಂಬಿಯಲ್ಲಿ ಲಾರೆನ್ಸನ ಪ್ರತ್ಯಕ್ಷ ಅಂಗವಿದೆಯೆಂದೂ ಕುರ್ದ ಜನರ ಹತ್ತರ ಹೊಸ ತರದ ಇಂಗ್ಲಿಷ ಬಂದೂಕುಗಳು ಇವೆಯೆಂದೂ ಪ್ರಕಟಿಸಿತು. ಆದರೆ ಇಂಗ್ಲಂಡದ ಪರರಾಷ್ಟ್ರ ಶಾಖೆಯ ಅಧಿಕಾರಿಗಳು ಈ ಸುದ್ದಿಯು ನಿರಾಧಾರವೆಂದೂ ಲಾರೆನ್ಸನು ಅಲ್ಲಿಗೆ ಹೋಗಿಯೇ ಇಲ್ಲನೆಂದೂ ಹೇಳಿದರು. ಆದರೆ ಜನರಿಗೆಲ್ಲ ಲಾರೆನ್ಸನು ಅಲ್ಲಿಗೆ ಬಂದದ್ದು ನಿಶ್ಚಯವಾಗಿ ಗೊತ್ತಾಗಿದ್ದಿತು. ಅವನು ಬಂದ ಸುದ್ದಿಯನ್ನು ಒಂದು ಜರ್ಮನ್ ಪತ್ರಿಕೆಯಲ್ಲಿ ಆದರ ಸುದ್ದಿಗಾರನು ಇರಾಣದಿಂದ ಕಳಿಸಿದ್ದನು

ಆಗ್ಗೆ ಲಾರೆನ್ಸನು ಕೃತ್ರಿಮ ಮಾಡಿ ತನ್ನ ಹಸ್ತಕರ ಕಡೆಯಿಂದ ಆ ಸುದ್ದಿಗಾರನೇ ಲಾರೆನ್ಸನೆಂದು ಹೂಲಿಯೆಬ್ಬಿಸಹಚ್ಚಿ ಆ ಸುದ್ದಿಗಾರನನ್ನು ಇರಾಣ ಸರಕಾರದವರು ಬಂಧಿಸುವಂತೆ ಮಾಡಿದನು. ಕಡೆಗೆ ಅಲ್ಲಿಯ ಜರ್ಮನ್ ರಾಯಭಾರಿಯು ಆ ಬಡ ಸುದ್ದಿಗಾರನನ್ನು ಬಿಡಿಸಿದನು.

ಕಳೆದ ಒಂದೆರಡು ವರ್ಷಗಳಿಂದ ಲಾರೆನ್ಸನ ಬಗ್ಗೆ ಯಾವ ಸುದ್ದಿಯೂ ತಿಳಿದಿದ್ದಿಲ್ಲ. ಆದುದರಿಂದ ಅವನು ಮತ್ತೇನನ್ನು ನಡೆಸಿರುವನೆಂದು ಜನರು ತರ್ಕವಿತರ್ಕ ಮಾಡುತ್ತಿದ್ದರು. ಈಗ ಇಂಥ ಪ್ರಸಿದ್ಧ ಕಾರಸ್ಥಾನಿಯ ಮರಣದ ಸುದ್ದಿಯನ್ನೂ ಜನರು ಸಂಶಯದಿಂದಲೇ ನಂಬಬೇಕಾಗಿದೆಯೆಂದರೆ ಆಶ್ಚರ್ಯ ತೋರ...

ವರ್ತಮಾನಸಾರ.

—ಮುಧೋಳ ಸಂಸ್ಥಾನಿಕರು ಮುಂಬಯಿ ಮುಕ್ಕಾಮಿನಲ್ಲಿರುವಾಗ ಅವರ ಬಂದೂಕು ಮತ್ತು ಕೆಲ ಕಾಡತೂಸುಗಳು ಕಳವಾದವು. ಕೂಡಲೆ ಅವರು ಮುಂಬಯಿಯಿಂದ ಮುಧೋಳಕ್ಕೆ ಹೋಗುವ ಪ್ರವಾಸಿಗಳ ಶೋಧ ಮಾಡಲು ಗುಪ್ತ ಪೋಲಿಸರಿಗೆ ತಿಳಿಸಿ ತಮಗೆ ಸಂಶಯ ಕಂಡ ಒಬ್ಬ ನಾಯಿಕ ಮತ್ತು ಒಬ್ಬ ಸಿಪಾಯಿಗೆ ಮುಧೋಳಕ್ಕೆ ಹೋಗಲು ಅಪ್ಪಣೆ ಕೊಟ್ಟರು. ಮಾರ್ಗದಲ್ಲಿ ಪೋಲೀಸರು ಅವರ ಶೋಧ ಮಾಡಲು ಕಳವಿನ ಪದಾರ್ಥಗಳೆಲ್ಲ ದೊರೆತವು.

—ಶ್ರೀ ವಲ್ಲಭಭಾಯಿಯವರೊಡನೆ ಗಾಂಧಿಯವರು ಒಂದು ಪ್ಲೇಗ ಪೀಡಿತ ಭಾಗವನ್ನು ಸಂದರ್ಶಿಸಿದರು. ಅಲ್ಲಿ ಅವರು ಭಾಷಣ ಮಾಡುವಾಗ್ಗೆ, 'ಅನತ್ಯಾಚಾರಿಯುಮೂಷಕ ಸಂಹಾರ ಮಾಡುವದು ಅನ್ಯಾಯವಾದದ್ದು. ಪ್ರತಿಯೊಂದು ಪ್ರಾಣಿಗೂ ಜೀವಿಸಿರುವ ಹಕ್ಕು ಇರುತ್ತದೆ. ಆದ್ದರಿಂದ ಅದಷ್ಟು ನಾವು ಅವುಗಳ ಉತ್ಪಾದನವೇ ಕಡಿಮೆಯಾಗುವಂತೆ ನೋಡಿಕೊಳ್ಳಬೇಕು' ಎಂದರು.

—ಬಾದಶಹರ ರೌಪ್ಯ ಮಹೋತ್ಸವ ನಿಮಿತ್ತವಾಗಿ ಮುಂಬಯಿಯಲ್ಲಿ ೨೦ ಸಾವಿರ ಜನ ಬಡಬಗ್ಗರಿಗೆ ಅಕ್ಕಿ ಹಂಚಲಾಯಿತು.

—ಬರ್ಹಾಣಪುರದಲ್ಲಿ ಒಂದು ಹಳ್ಳಿಗೆ ಬೆಂಕಿ ಹತ್ತಿ ೬೦ ಮನೆಗಳು ಸುಟ್ಟವು. ಬೆಂಕಿಯಲ್ಲಿ ತನ್ನ ಆಭರಣಗಳನ್ನು ಉಳಿಸಿಕೊಳ್ಳುವದಕ್ಕಾಗಿ ಒಬ್ಬ ಹೆಣ್ಣುಮಗಳು ಹೋಗಲು ತಾನೇ ಸುಟ್ಟುಕೊಂಡು ಸತ್ತಳು.

—ಕಾಲಿಕತ್ತದಲ್ಲಿ ಕೇರ. ...... ಸತ್ಯಾವಾದಿಗಳ ಪರಿಷತ್ತು ಮುಂಬಯಿಯ ಶ್ರೀ ಮಣಿಬೆನ್ ಕಾರಾ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಗ್ಗೆ ಪ್ರಸಿದ್ಧ ಸಮತಾವಾದಿಗಳಾದ ಶ್ರೀ. ಎಮ್. ಎನ್. ರಾಯ ಇವರನ್ನು ಅನಿರ್ಬಂಧವಾಗಿ ಬಿಟ್ಟುಬಿಡಬೇಕೆಂದು ಕೇಳಿಕೊಳ್ಳುವ ಗೊತ್ತುವಳಿಯಾಯಿತು.

—ಪುಣೆಯ ವಸಂತ ವ್ಯಾಖ್ಯಾನ ಮಾಲೆಯ ಕಾಲದಲ್ಲಿ "ಕಾಲೇಜದ ಸ್ತ್ರೀ ಪುರುಷರು" ಎಂಬ ವಿಷಯದ ಬಗ್ಗೆ ಕಾಲೇಜದ ವಿದ್ಯಾರ್ಥಿಗಳ ಭಾಷಣಗಳಾದವು. ವಿದ್ಯಾರ್ಥಿನಿಯರು ಸಿನೇಮಾದಲ್ಲಿ ಸೇರಿದ ಬಗ್ಗೆ ಅಭಿನಂದಿಸಲಾಯಿತು; ಸನಾತನಿಗಳ ಟೀಕೆಯೂ ನಡೆಯಿತು. ಅಧ್ಯಕ್ಷರಾದ ಪ್ರ. ಕೆ. ಅತ್ರೆ ಇವರು ಸದ್ಯದ ತರುಣ ಪೀಳಿಗೆಯು ಹಿಂದಿನ ಪೀಳಿಗೆಗಿಂತ ಹೆಚ್ಚು ನೀತಿವಂತವಿರುವದೆಂದು ಹೇಳಿದರು.

—ಜಯಪುರದ ಮಹಾರಾಜರು ಜ್ಯುಬಿಲಿ ಉತ್ಸವಕ್ಕಾಗಿ ಲಂಡನ್ನಿಗೆ ಹೋಗಿದ್ದು ಅಲ್ಲಿ ತಮ್ಮ ನೂತನ ಸಂಗಮರವರಿ ರಾಜಭವನಕ್ಕಾಗಿ ಸರ್ವೋತ್ಕೃಷ್ಟ ವಸ್ತುಗಳನ್ನು ಕೊಂಡುಕೊಳ್ಳುತ್ತಿದ್ದಾರೆ. ತಾಜಮಹಾಲದೊಡನೆ ಸ್ಪರ್ಧೆ ಮಾಡುವಂಥ ಭವನವನ್ನು ನಿರ್ಮಿಸುವದು ಮಹಾರಾಜರ ವಿಚಾರವಿದೆಯೆಂದು ಡೇಲಿ ಎಕ್ಸ್‌ಪ್ರೆಸ್ ಸುದ್ದಿಗಾರನು ಅನ್ನುತ್ತಾನೆ.

—ಗುಂಟೂರಲ್ಲಿ ೧೨೨ ಅಂಶ ಉಷ್ಣತೆಯಿದೆ ಇಂಥ ಉಷ್ಣಮಾನವು ಕಳೆದ ೧೨ ವರ್ಷಗಳಿಂದಲೂ ಅಲ್ಲಿದ್ದಿಲ್ಲ. ಇದಕ್ಕಾಗಿ ಅನೇಕ ಜನರು ಅಲ್ಲಿ ಸತ್ತರು.

—ಬಿಝವಾಡದಲ್ಲಿ ಎಮ್. ಎಸ್. ಎಮ್. ರೇಲ್ವೆ ಕೆಲಸಗಾರರೊಬ್ಬರು ಅತೀವ ಉಷ್ಣತೆಯಿಂದ ಮೃತಪಟ್ಟರು. ಅಲ್ಲಿಯೇ ಪ್ಲಾಟ್‌ಫಾರ್ಮದ ಮೇಲೆ ನಿಂತಿದ್ದ ಮನುಷ್ಯನೊಬ್ಬನು ಉಷ್ಣತೆಯನ್ನು ಸಹಿಸದೆ ಮೃತಪಟ್ಟನು.

—ವಿಜಾಪುರದಲ್ಲಿ ಬಿಸಲಿನ ತಾಪವು ಭಯಂಕರವಾಗಿರುವುದರಿಂದ ರೇಲ್ವೆ ಆಡಿಟರರೊಬ್ಬರು ಬೀದಿಯಲ್ಲಿ ಹೋಗುತ್ತಿರುವಾಗ 'ಸನ್‌ಸ್ಟ್ರೋಕ'ಆಗಿ ಬಿದ್ದು ಕೂಡಲೆ ಮರಣಹೊಂದಿದರು.

—ಕಳೆದ ತಿಂಗಳ ೨೫ ನೆಯ ತಾರೀಖಿನ ದಿವಸ ಸಾಯಂಕಾಲ ಸಾಧಾರಣ ೮ ಘಂಟೆಗೆ ಬಿಹಾರದ ಭಾಗಲಪುರ ದರಭಂಗಾ ಭಾಗದಲ್ಲಿ ಒಂದರ ಹಿಂದೊಂದರಂತೆ ಎರಡು ಭೂಕಂಪದ ಆಘಾತಗಳಾದವು. ಸಾಧಾರಣ ಕಟ್ಟಡಗಳೆಲ್ಲ ನಡುಗಿದವು. ಈಗ ಕೆಲವು ದಿವಸಗಳ ಪೂರ್ವದಲ್ಲಿಯೂ ಇಲ್ಲಿ ಭೂಕಂಪದ ಆಘಾತಗಳಾಗಿದ್ದವು.

—ನಾಗಪುರದ ಸೆಕ್ರೆಟರಿಯೇಟ್ ನಾಶವಾದದ್ದರಿಂದ ಈಗ ಸೆಕ್ರೆಟರಿ ಕಚೇರಿಯನ್ನು ರೋಮನ್ ಕ್ಯಾಥೊಲಿಕ್ ಸೆಮಿನರಿಯಲ್ಲಿ ನಡೆಯಿಸಿದ್ದಾರೆ. ಸೆಕ್ರೆಟರಿಯೇಟ್ ಪುನಃ ಸ್ಥಾಪಿಸಲು ೬ ತಿಂಗಳ ಅವಧಿಯು ಬೇಕಾಗುವದಲ್ಲದೆ ೮-೧೦ ಲಕ್ಷ ರೂ. ವೆಚ್ಚವೂ ಹತ್ತುವದಂತೆ.

—ಚೀನದ ಜೋಹೊಲ ಭಾಗದಲ್ಲಿ ४೦೦ ಜನ ಚೀನಿಗಳು ದೊಂಬಿಯೆಬ್ಬಿಸಿದರು. ಅದು ಜಪಾನದ ವಶದಲ್ಲಿರುವುದರಿಂದ ಜಪಾನಿ ಸೈನಿಕರು ೩೦೦ ಚೀನಿ ದೊಂಬಿಗಾರರನ್ನು ಕೊಂದರು.

—ಆದಿಜನ ಮುಂದಾಳುಗಳಾದ ಡಾ. ಭೀಮರಾವ ಅಂಬೇಡಕರ ಇವರ ಪತ್ನಿಯು ಮುಂಬಯಿಯಲ್ಲಿ ಮರಣ ಹೊಂದಿದರು. ಸ್ಮಶಾನಯಾತ್ರೆಯ ಕಾಲಕ್ಕೆ ಅನೇಕ ಜನ ಹಿಂದುಗಳು ಕೂಡಿದ್ದರು.

—ರಿಝರ್ವ ಬ್ಯಾಂಕಿನ ಲಂಡನ್ನಿನ ಶಾಖೆಯ ಮೇಲೆ ಮೊದಲು ಪಂಜಾಬದ ಗವ್ಹರ್ನರರಾಗಿದ್ದ ಸರ ಸಿಕಂದರ ಹಯಾತ [illegible]

—ಎಂ. [illegible] ಎರಡು ಸಾರೆ ಸೆರೆಮನೆವಾಸಿಗಳಾದರು. ಈ ಎರಡರ ಮಧ್ಯದಲ್ಲಿ ೭ ದಿವಸಗಳವರೆಗೆ ಮಾತ್ರ ಮುಕ್ತರಾಗಿದ್ದರು. ಆ ಏಳು ದಿವಸಗಳಲ್ಲಿ ಅವರು ಮಾಡಿದ ಭಾಷಣ ಮತ್ತು ಕಾರ್ಯ ಇವುಗಳ 'Seven Days Interlude' ಎಂಬ ಒಂದು ಪುಸ್ತಕವನ್ನು ಮಾಡಿದ್ದರು. ಅದರ ೧೨ ನೂರು ಪ್ರತಿಗಳನ್ನು ಸರಕಾರದವರು ಜಪ್ತ ಮಾಡಿದರು.

—ಡೋಗ್ರಾ ಎಂಬಲ್ಲಿ ಒಂದು ಹಾಳು ಭಾವಿಯಲ್ಲಿ ೧೫೮ ಕಾಡತೂಸುಗಳೂ ಮತ್ತು ೨೫ ಮದ್ದಿನ ಗುಂಡುಗಳೂ ಒಂದು ಚೀಲದಲ್ಲಿ ಹಾಕಿ ಇಡಲ್ಪಟ್ಟುದು ದೊರೆತಿದೆ.

—ಭುಸಾವಳ ನಗರ ಸಭೆಯವರು ಶ್ರೀರಾಜೇಂದ್ರ ಪ್ರಸಾದರಿಗೆ ಮಾನಪತ್ರವನ್ನರ್ಪಿಸಬೇಕೆಂದು ಗೊತ್ತುವಳಿಯನ್ನು ತರಲು ಮುಸಲ್ಮಾನ ಸಭಾಸದರು ವಿರೋಧಿಸಿದ್ದರಿಂದ ಆ ಗೊತ್ತುವಳಿಯು ಬಿದ್ದು ಹೋಯಿತು.

—ಯಾವಲ (ಮಹಾರಾಷ್ಟ್ರ) ದಲ್ಲಿ ೫ ಜನ ಸ್ತ್ರೀಯರನ್ನೂ ಒಬ್ಬ ಬಾಲಕನನ್ನೂ ಹಿಂದು ಧರ್ಮದಲ್ಲಿ ತೆಗೆದುಕೊಳ್ಳಲಾಯಿತು.

—ನಾಸಿಕದಲ್ಲಿ ಒಂದು ಸೈನಿಕ ಶಾಲೆಯನ್ನು ಡಾ. ಮುಂಜೆಯವರು ಸ್ಥಾಪಿಸುವವರಿದ್ದಾರೆ. ಹಿಂದು ಸೈನಿಕ ಮಧ್ಯವರ್ತಿ ಸಂಸ್ಥೆಯ ಅಧ್ಯಕ್ಷರು ಶ್ರೀ ಗೋವಿಂದರಾವ ಪ್ರಧಾನ ಇವರು ಆಗುವರು.

—೧೯-೧೮ ವರ್ಷ ವಯಸ್ಸಿನ ಕುಮುದವ್ವಾಲ ಮತ್ತು ಅಂಗುಲಿಯಾ ಬಾಯಿ ಎಂಬ ಇಬ್ಬರು ಹಿಂದು ತರುಣಿಯರು ಮದ್ರಾಸದಲ್ಲಿ ವೈಮಾನಿಕ ಎ ಲಾಯಿಸನ್ಸ ಶಿಕ್ಷಣ ಹೊಂದಲು ಹೆಸರು ಹಚ್ಚಿಸಿರುವರು.

ಹಿಂದು-ಹಿಂದಿ-ಹಿಂದುಸ್ಥಾನ.

ಹಿಂದಿ ಮತ್ತು ಉರ್ದು.

ನಮ್ಮ ದೇಶದಲ್ಲಿ ಹಿಂದಿ ಮತ್ತು ಉರ್ದು ಹೀಗೆ ಎರಡು ಲಿಪಿಗಳು ರಾಷ್ಟ್ರಲಿಪಿಗಳಾಗಲು ಸೂಚಿಸಲ್ಪಟ್ಟಿವೆ. ಈ ಪ್ರಕಾರ ಎರಡು ರಾಷ್ಟ್ರಲಿಪಿಗಳು ಯಾವ ರಾಷ್ಟ್ರದಲ್ಲಿಯೂ ಇರುವುದಿಲ್ಲ ನಿಷ್ಪಕ್ಷಪಾತವಾಗಿ ವಿಚಾರ ಮಾಡುವಂಥ ಯಾವ ಮನುಷ್ಯನಾದರೂ ನಾಗರಿ ಲಿಪಿಯು ಮುಂದಿರಲು ಉರ್ದು ಲಿಪಿಯು ಹಿಂದುಸ್ಥಾನದ ರಾಷ್ಟ್ರಲಿಪಿಯಾಗಲು ತಕ್ಕದ್ದಾಗಿರುವದೆಂದು ಅನ್ನಲಾರನು. ಕೇವಲ ಮುಸಲ್ಮಾನ ರಾಷ್ಟ್ರವಾದ ತುರ್ಕಸ್ಥಾನವು ಸಹ ಅರಬಿ (ಉರ್ದು) ಲಿಪಿಯನ್ನು ತೆಗೆದು ಹಾಕಿ ರೋಮನ್ ಲಿಪಿಯನ್ನು ಅಂಗೀಕರಿಸಿತು. ಮುಸಲ್ಮಾನರ ಧರ್ಮಗ್ರಂಥವಾದ ಕುರಾನವು ಸಹ ತುರ್ಕಸ್ಥಾನದಲ್ಲಿ ರೋಮನ್ ಲಿಪಿಯಲ್ಲಿಯೇ ಬರೆಯಿಸಲ್ಪಟ್ಟಿತು. ಹೀಗಿದ್ದು ಮಹಾತ್ಮಾ ಗಾಂಧಿಯವರು ಈ ಉರ್ದು ಲಿಪಿಯನ್ನು ನಮ್ಮ ಮೇಲೆ ಏಕೆ ಹೇರುತ್ತಾರೆ? ಇದೂ ಒಂದು ಮುಸಲ್ಮಾನರನ್ನು ಪ್ರಸನ್ನಪಡಿಸುವ ನೀತಿಯಲ್ಲವೇ?

'ಹಿಂದು' (ಹಿಂದಿ)

ಭೋಪಾಳದ ನಿಜ ಸ್ಥಿತಿ.

ಭೋಪಾಳ ಸಂಸ್ಥಾನದ ಬೇಗಮಗಂಜ ಗ್ರಾಮದಲ್ಲಾದ ಮುಸಲ್ಮಾನರ ಅತ್ಯಾಚಾರವನ್ನು ಕುರಿತು ಅಲ್ಲಿಯ ನವಾಬ ಸರಕಾರದವರು ನಿಜಸ್ಥಿತಿಯನ್ನು ಈ ಪ್ರಕಾರ ಪ್ರಕಟಿಸಿದ್ದಾರೆ.—

ಗಂಜದಲ್ಲಿ ಮೊಹರ್ರಮ್ಮಿನ ೧೦ ನೆಯ ದಿವಸ ಡೋಲಿಯ ಮೆರವಣಿಗೆಯು ಹೊರಟಾಗ ಒಂದು ಪ್ರಾಚೀನ ಹಿಂದೂ ದೇವಾಲಯದಲ್ಲಿ ಗಂಟೆ ಶಂಖಗಳ ನಿನಾದವಾಗುತ್ತಿದ್ದಿತು. ಆ ಕಾಲಕ್ಕೆ ಡೋಲಿಯ ಮೇಲೆ ಕಲ್ಲು ಬಿದ್ದಿತೆಂಬ ಗುಲ್ಲು ಎದ್ದಿತು. ಹಾಗೂ ಆ ಕಲ್ಲನ್ನು ಒಬ್ಬ ಗುರುಚರಣಸಿಂಗನೆಂಬವನೇ ಒಗೆದನೆಂದು ಹೇಳಲಾಯಿತು. ವಿಚಾರಾಂತ್ಯದಲ್ಲಿ ಈ ಗುಲ್ಲು ನಿರಾಧಾರವೆಂದು ಕಂಡು ಬಂದರೂ ಮುಸಲ್ಮಾನರು ಕೂಡಲೆ ಗಂಟೆ ಶಂಖಗಳನ್ನು ಬಾರಿಸುತ್ತಿದ್ದ ಹಿಂದು ದೇವಾಲಯವನ್ನು ಆಕ್ರಮಿಸಿ ಹಿಂದುಗಳ ಮೇಲೆ ಪ್ರಹಾರ ಮಾಡಿದರು. ಇದಲ್ಲದೆ ೧೫ ಜನ ಮುಸಲ್ಮಾನರು ಗುರುಚರಣಸಿಂಗನ ಮನೆ ಮುತ್ತಿದರು. ಅವನು ಕೆಲಹೊತ್ತು ಮನೆಯಲ್ಲಿ ಹುದುಗಿಕೊಂಡಿದ್ದು ಅನಂತರ ತಲೆ ತಪ್ಪಿಸಿಕೊಂಡು ಪಾರಾಗಿ ಭೋಪಾಳದ ಸೀಮೆಯನ್ನು ದಾಟಿ ಹೋದನು. ಸಂಸ್ಥಾನಿಕರು ಹೆಚ್ಚಿಗೆ ಪೋಲೀಸರನ್ನು ಕಳಿಸಿ ದೊಂಬಿ ಮಾಡಿದ್ದಕ್ಕಾಗಿಯೂ ಎರಡನೆಯವರ ಧರ್ಮ ಭಾವನೆಯನ್ನು ನೋಯಿಸಿದುದಕ್ಕಾಗಿಯೂ ೧೪ ಜನ ಮುಸಲ್ಮಾನರ ಮೇಲೆ ವ್ಯಾಜ್ಯ ಹಾಕಿದ್ದಾರೆ. ಗುರುಚರಣಸಿಂಗನಿಗೆ ನಿರ್ಭಯವಾಗಿ ತಿರುಗಿ ಮನೆಗೆ ಬಂದಿರಲಿಕ್ಕೆ ನವಾಬ ಸರಕಾರದವರು ಬರೆದು ತಿಳಿಸಿದ್ದಾರೆ."

ಹಿಂದುಗಳಿಗೆ ಜಯ

ಸಿಂಧದ ಲಾರಖಾನಾ ಜಿಲ್ಹೆಯ ಪ್ರಸಿದ್ಧ "ರಾಹುಜಾ" ವ್ಯಾಜ್ಯವು ಈಗ ಕೆಲವು ತಿಂಗಳುಗಳಿಂದ ನಡೆದಿದ್ದಿತಷ್ಟೆ. ಅದರ ವಿಷಯವು ಹೀಗಿದೆ— ಪರಸುಮಲ್ಲನೆಂಬ ಹಿಂದುವು ಧರ್ಮದೇವಿ ಎಂಬ ಒಬ್ಬ ತರುಣಿಯನ್ನು ವಿವಾಹವಾದನು. ಅದಕ್ಕೆ ಮುಸಲ್ಮಾನರು ಅವಳು ಹಿಂದುವಲ್ಲವೆಂದೂ 'ರಾಹುಜಾ' ಎಂಬ ಹೆಸರಿನ ಮುಸಲ್ಮಾನ ಸ್ತ್ರೀ ಇರುವಳೆಂದೂ ಅವಳ ಇಚ್ಛೆಯ ವಿರುದ್ಧವಾಗಿ ಈ ವಿವಾಹವಾಗುತ್ತಿದೆಯೆಂದೂ ನ್ಯಾಯಸ್ಥಾನದಲ್ಲಿ ವ್ಯಾಜ್ಯ ಹೂಡಿದರು. ಇಷ್ಟಕ್ಕೇ ಅವರು ಬಿಡದೆ ಆ ಸ್ತ್ರೀಯನ್ನು ಎತ್ತಿಕೊಂಡು ಹೋಗುವದಕ್ಕಾಗಿ ಅನೇಕ ಪ್ರಯತ್ನ ಮಾಡಿದರು. ಇದಕ್ಕಾಗಿಯೇ ಪೋಲೀಸರು ಗುಂಡು ಸಹ ಹಾರಿಸಬೇಕಾಯಿತು. ಈ ಪ್ರಕರಣದ ಬಗ್ಗೆ ಮುಸಲ್ಮಾನರು ಬೇಕಾದಷ್ಟು ಗಲಭೆ ಮಾಡಿದರೂ ಅಲ್ಲಿಯ ಆರ್ಯ ಸಮಾಜದವರು ವ್ಯಾಜ್ಯವು ಪೂರೈಸುವ ವರೆಗೆ ಧೈರ್ಯದಿಂದ ಹೋರಾಡಿ ಜಯವನ್ನು ಸಂಪಾದಿಸಿದರು. ಧರ್ಮದೇವಿಯು ಪರಸುಮಲ್ಲನ ಸ್ವಾಧೀನಕ್ಕೆ ಕೊಡಲ್ಪಟ್ಟಳು. ವ್ಯಾಜ್ಯ ನಡೆದ ಆರು ಜನ ಮುಸಲ್ಮಾನರಲ್ಲಿ ಮೂವರಿಗೆ ಮೂರು ವರ್ಷ ಕಠಿಣ ಶ್ರಮ ಶಿಕ್ಷೆಯಾಯಿತು. ಉಳಿದ ಮೂವರನ್ನು ಬಿಟ್ಟುಕೊಟ್ಟರು.

ಹಿಂದುಗಳು ಧೈರ್ಯದಿಂದ ನಿಲ್ಲದ ಹೊರತು ಈ ಕಾಲದಲ್ಲಿ ಬಾಳುವದು ಅತಿ ಕಠಿಣವೆಂದು ಕಾಣುವದಿಲ್ಲವೆ?

ಹಿಂದುಗಳು ಲಕ್ಷ್ಯದಲ್ಲಿಡಲಿ!

ಶ್ರೀ ಅನಂತ ಹರಿ ಜೋಶಿ ಎಂಬವರು ಮರಾಠಿ 'ಕೇಸರಿ' ಪತ್ರಿಕೆಯಲ್ಲಿ ತಮ್ಮ ಅನುಭವವನ್ನು ಈ ರೀತಿ ಪ್ರಕಟಿಸಿರುವರು.—

'ಸಹ್ಯಾದ್ರಿಪರ್ವತದ ಗುಡ್ಡಗಾಡು ಪ್ರದೇಶದಲ್ಲಿ ಒಂದು ಹಳ್ಳಿ. ಅಲ್ಲಿ ಜಮಖಾನೆಗಳನ್ನು ಮಾಡುವ ಕಾರ್ಯವು ನಡೆಯುತ್ತದೆ. ಈ ಹಳ್ಳಿಗೆ ಒಮ್ಮೆ ನಾನು ಹೋದೆ. ಅಲ್ಲಿರುವವರೆಲ್ಲ ಕಾತಕರಿ (ಒಂದು ತರದ ಗುಡ್ಡಗಾಡು) ಜನರು. ೨೦೦ ಜನರು ಈ ಜಮಖಾನದ ಉದ್ಯೋಗವನ್ನು ಮಾಡುತ್ತಿರುವರು. ಅವರಲ್ಲಿ ಒಬ್ಬನ ಕೊರಳಲ್ಲಿದ್ದ ಉಕ್ಕಿನ ಶಿಲುಬೆಯ ಚಿಹ್ನವನ್ನು ಕಂಡು ಅದೇನೆಂದು ನಾನು ಕುತೂಹಲದಿಂದ ಕೇಳಲು ಆ ಮನುಷ್ಯನು— ನಮ್ಮ ಕೆಂಪು ಸಾಹೇಬರು ನಮ್ಮ ಪೈಕಿ ಪ್ರತಿಯೊಬ್ಬರಿಗೆ ಈ ಚಿಹ್ನವನ್ನು ಕೊಟ್ಟಿದ್ದಾರೆ. ಅವರೇ ನಮಗೆ ಜಮಖಾನ ನೇಯುವದನ್ನು ಕಲಿಸಿದರು. ನಾವೆಲ್ಲ ಕೆಲಸಗಾರರು ಸಾಹೇಬರೊಡನೆ ಆ ಕೆಂಪು ಗುಡಿಯಲ್ಲಿ ಪ್ರಾರ್ಥನೆ ಮಾಡುತ್ತೇವೆ. ಸಾಹೇಬರು ನಮಗೆ ಹೊಟ್ಟೆಗೆ ಹಾಕುತ್ತಾರೆ ನಮ್ಮ ಮಕ್ಕಳಿಗೆ ಸಾಲೆ ಕಲಿಸುತ್ತಾರೆ. ಈ ಚಿಹ್ನವನ್ನು ನಾವು ಹಾಕಿಕೊಳ್ಳದಿದ್ದರೆ ಅವರು ನಮಗೆ ಕೆಲಸ ಕೊಡುವದಿಲ್ಲ ಎಂದು ಹೇಳಿದನು. ನಾನು ಸಾಹೇಬರನ್ನು ಕಂಡೆನು. ಅವನೊಬ್ಬ ಜರ್ಮನ್ ಮುದುಕ. ಮಿಶನರಿಗಳಂತೆ ಅವನು ಶುಭ್ರ ಉಡುಪು ಧರಿಸಿದ್ದು ಶುಭ್ರ ಗಡ್ಡವನ್ನು ಬಿಟ್ಟಿದ್ದನು ತಾನು ಅಲ್ಲಿಗೆ ಬಂದು ೨೦ ವರ್ಷಗಳಾದವೆಂದೂ ಆ ಅವಧಿಯಲ್ಲಿ ಒಮ್ಮೆ ಮಾತ್ರ ತನ್ನ ಪಿತೃ ಭೂಮಿಗೆ ಹೋಗಿದ್ದನೆಂದೂ ಅವನು ಹೇಳಿದನು. ಅವನು ಆ ಹಳ್ಳಿಯಲ್ಲಿ ವಸಾಹತು ಮಾಡಿಕೊಂಡು ಆ ಅಜ್ಞ ಜನರನ್ನು ಸುಧಾರಿಸಿದುದಲ್ಲದೆ ಧರ್ಮಾಂತರವನ್ನೂ ಮಾಡಿರುವನು. ಹಿಂದು ಧರ್ಮವು ಉಳಿಯಬೇಕಾದರೆ ಈ ಮಿಶನರಿಗಳು ಕಾರ್ಯ ಮಾಡುವಂತೆ ಮಾಡಿದರೇನೇ ಶಕ್ಯ'

ಹಿಂದುತ್ವದ ಮೇಲೆ ಕ್ರಿಸ್ತೀ ಮಿಶನರಿಗಳ ಆಘಾತವು ಅದ್ಭುತವಾದುದಾಗಿದೆ. ಅವರ ಪ್ರಚಾರವು ಬಹು ಸೌಮ್ಯ; ಬಹಳ ದೂರದರ್ಶಿತ್ವದಿಂದ ಸಾಗುತ್ತದೆ. ಅವರಲ್ಲಿ ವಿಪುಲ ಧನವಿದೆ, ಸೇವಾ ಭಾವನೆಯಿದೆ; ಶಿಸ್ತಿನ ಕಾರ್ಯಕ್ರಮವಿದೆ. ಇಂಥವರ ಪ್ರಚಾರ ಕಾರ್ಯವನ್ನು ತಡೆಗಟ್ಟಬೇಕಾದರೆ ಹಿಂದುಗಳೂ ಅವರಂತೆಯೇ ಕಾರ್ಯ ಮಾಡುವದೊಂದರಿಂದಲೇ ಸಾಧ್ಯ. ಆದರೆ ಸದ್ಯಕ್ಕೆ ಹಿಂದುಗಳಲ್ಲಿ ಇವೆಲ್ಲವುಗಳ ಅಭಾವವಿದೆ. ಆದ್ದರಿಂದ ಕೀಳು, ಕಾಡು ಎಂದು ನಾವು ನಿರ್ಲಕ್ಷಿಸಿ ಬಿಟ್ಟ ಜನರಲ್ಲಿ ಮಿಶನರಿಗಳ ಪ್ರಚಾರ ಕಾರ್ಯವು ಬಲವಾಗಿ ಸಾಗಿದೆ. ಮಧ್ಯ ಹಿಂದುಸ್ಥಾನದ ಭಿಲ್ಲ ವಸತಿಯಲ್ಲಿ ಕ್ರಿಸ್ತೀಯರು ನೆಲಸಿ ಅವರನ್ನು ಧರ್ಮಾಂತರ ಮಾಡುತ್ತಿರುವದೇ ಇದಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದೆ.

ವಿವಿಧ ವರ್ತಮಾನ.

ಆಕಾಶದಲ್ಲಿ ಅದ್ಭುತ ಹಾರಿಕೆ.

ಇಲ್ಲಿಯ ವರೆಗೆ ವಿಮಾನಗಳು ೧೨ ಮೈಲಿನ ವರೆಗೆ ಆಕಾಶದಲ್ಲಿ ಹಾರುತ್ತಲಿವೆ. ಅಮೇರಿಕೆಯಲ್ಲಿ ಕೆಲವರು ೨೦ ಮೈಲು ಎತ್ತರದ ವರೆಗೂ ಹಾರಿಸಿದುದುಂಟು. ವಾಯುಯಾನದಿಂದ ೩೦ ಮೈಲಿನ ವರೆಗೂ ಹೋಗಲು ಸಾಧ್ಯವಿದೆಯೆಂದು ಕೆಲವರ ಅಭಿಪ್ರಾಯ. ಆದರೆ ರಶಿಯಾ ದೇಶವು ಜಗತ್ತನ್ನೆಲ್ಲ ಬೆರಗುಗೊಳಿಸುವಂಥ ಒಂದು ಅದ್ಭುತ ಸಾಹಸವನ್ನು ಕೈಕೊಂಡಿವೆ. ಅದೇನಂದರೆ ಆಕಾಶದಲ್ಲಿ ೨೦೦ ಮೈಲು ಎತ್ತರ ಹಾರಲು ಶಕ್ಯವಿದೆಯೆಂದು ಅವರ ಅಭಿಪ್ರಾಯ.

ಮಾಸ್ಕೊ ಪಟ್ಟಣದಲ್ಲಿ ೨೦೦ ಜನ ಶಾಸ್ತ್ರೀಯ ಸಂಶೋಧಕರು, ಯಂತ್ರ ವಿಶಾರದರು ಮತ್ತು ವೈಮಾನಿಕ ಪಟುಗಳು ಕೂಡಿ 'ರಾಕೆಟ್' ಎಂಬ ಒಂದು ತರದ ವಿಮಾನವನ್ನು ಸಿದ್ಧಪಡಿಸಲು ಪ್ರಯತ್ನಿಸಿದ್ದಾರೆ. ಅದು ಪ್ರವಾಹಿ ಪ್ರಾಣವಾಯುವಿನ ಸಹಾಯದಿಂದ ನೆಟ್ಟಗೆ ೨೦೦ ಮೈಲು ಎತ್ತರದ ವರೆಗೆ ಬಾಣದಂತೆ ಹೋಗುವದಂತೆ. ಅನಂತರ ವಾಯುಗೋಲದ ಮೂಲಕ ಇಳಿಯಹತ್ತುವದಂತೆ.

ಇದೇನು ಅವರ ಕನಸಿನ ನೆನಸಲ್ಲ. ಸ್ವಲ್ಪೇ ವರ್ಷಗಳಲ್ಲಿ ಮನಗಾಣುವ ಮಾತು. ಮೊದಲು ಒಬ್ಬನೇ ಕುಳಿತು ಹೋಗಬಹುದಾದ ವಿಮಾನುಗಳನ್ನು ಸಿದ್ಧಪಡಿಸುವರು. ಆದರೆ ಅಷ್ಟು ಎತ್ತರದಲ್ಲಿ ಎಷ್ಟೇ ಎಚ್ಚರ ತೆಗೆದುಕೊಂಡರೂ ಮನುಷ್ಯ ಪ್ರಾಣಿಯು ಬದುಕುವನೋ ಇಲ್ಲವೋ ಸಂಶಯ. ಇಂಥ ಭಯಂಕರ ವೇಗದಿಂದ ಹೋಗುವ ವಿಮಾನದಲ್ಲಿ ಮನುಷ್ಯನು ಉಳಿಯಲಿಕ್ಕಿಲ್ಲೆಂದು ಅವರಿಗೆ ಸಂದೇಹ. ಆದರೆ ಜಗತ್ತಿಗೆಲ್ಲ ತಮ್ಮ ಅದ್ಭುತ ಸಾಹಸವನ್ನು ತೋರಿಸಬೇಕೆಂದು ಕೆಚ್ಚೆದೆಯ ಅನೇಕ ರಶಿಯನ್ ತರುಣರು ರಾಕೆಟ್ಟಿನಲ್ಲಿ ಕುಳಿತು ಹೋಗಲು ನಾ ಮುಂದೆ ನೀ ಮುಂದೆ ಎಂದು ಸಿದ್ಧವಾಗಿರುವರು. ಇದಲ್ಲವೆ ರಾಷ್ಟ್ರದ ಜೀವಕಳೆಯ ಪ್ರದರ್ಶನ?

ಶಾಂತತೆಯ ಪ್ರದರ್ಶನ.

ಲಂಡನ್ನಿನಲ್ಲಿ 'ಗದ್ದಲ ವಿರೋಧಿ ಸಂಸ್ಥೆ' (Anti-Noise League) ಎಂಬ ಸಂಸ್ಥೆಯು ಸ್ಥಾಪಿತವಾಗಿದೆ. ಆ ಸಂಸ್ಥೆಯವರು ಇದೇ ಜೂನ ತಿಂಗಳಿನಲ್ಲಿ ಒಂದು ಶಾಂತತಾ ಪ್ರದರ್ಶನವನ್ನುಂಟುಮಾಡುವವರಿದ್ದಾರೆ. ಇದು ಅಲ್ಲಿಯ ವಿಜ್ಞಾನ ಶಾಸ್ತ್ರೀಯ ವಸ್ತು ಸಂಗ್ರಹಾಲಯದಲ್ಲಿ ನೆರವೇರುವದು.

ಈ ಪ್ರದರ್ಶನದಲ್ಲಿ ಒಂದು ಸದ್ದಿಲ್ಲದ ಭವ್ಯ ಭವನವನ್ನು ನಿರ್ಮಿಸಲಾಗುವದು. ಅದರೊಳಗೆ ಪ್ರವೇಶಿಸುವದು ತೊಟ್ಟಿಲದ ಸಹಾಯದಿಂದ. ಅದು ಎತ್ತಿ ಒಯ್ಯುವಾಗ್ಗೆ ಸ್ವಲ್ಪವೂ ಸಪ್ಪಳವನ್ನು ಮಾಡುವದಿಲ್ಲ. ಬಾಗಿಲುಗಳಿಗೆ ಹಾಕಿದ ಬೀಗಗಳನ್ನು ತೆರೆಯುವಾಗಲೂ ಸಪ್ಪಳವಾಗುವಂತಿಲ್ಲ. ಕಿಡಿಕಿ ಬಾಗಿಲುಗಳಿಂದಲೂ ಸಪ್ಪಳವು ಒಳಗೆ ಬಾರದಂತೆ ಅವುಗಳನ್ನು ಧ್ವನಿಶೂನ್ಯ (Sound proof) ವಾಗಿ ಮಾಡಿರುವರು. ಆ ಮನೆಯೊಳಗೆಲ್ಲಾ ಇರುವದು ಗಾಢವಾದ ನಿಸ್ತಬ್ಧ ಶಾಂತತೆ. ಒಂದು ಟಾಚಣಿ ಬಿದ್ದರೂ ಸದ್ದು ಕೇಳಿಸುವಷ್ಟು ಶಾಂತತೆ. ಅಲ್ಲಿ ಓಡಾಡುವ ಮೋಟಾರ, ಮೋಟಾರ ಸಾಯಕಲ್ಲುಗಳಿಂದ ಸಪ್ಪಳವೇ ಆಗುವದಿಲ್ಲ. ಅಲ್ಲಿ ಒಂದು ಕಾರ್ಯಾಲಯವೂ ಇದೆ. ಆದರೆ ಅದರ ಕಾರ್ಯಗಳೆಲ್ಲ ಸದ್ದಿಲ್ಲದೆ ಸಾಗುವವಂತೆ!

ಯೋಗ ವಿದ್ಯೆಯ ಹಂಬಲ.

ಪಾಶ್ಚಾತ್ಯರನ್ನು ಬೆರಗುಗೊಳಿಸುವಂಥ ಯಾವುದಾದರೊಂದು ವಿದ್ಯೆಯು ಹಿಂದುಸ್ಥಾನದಲ್ಲಿ ಉಳಿದಿದ್ದರೆ ಅದು ಯೋಗ ವಿದ್ಯೆಯೇ ಸರಿ. ಸದ್ಯಕ್ಕೆ ಹಿಂದುಸ್ಥಾನದಲ್ಲಿ ಮಿಸ್ಟರ ಕ್ಯಾಪಿಟೆ ಅಂಡಾರ ಎಂಬ ಹೆಸರಿನ ಒಬ್ಬ ಹಂಗರಿ ದೇಶದ ಗೃಹಸ್ಥನು ಬಂದಿದ್ದಾನೆ. ಅವನು ಹಿಂದು ಪದ್ಧತಿಯಂತೆ ಯೋಗಾಭ್ಯಾಸವನ್ನು ಮಾಡುತ್ತಿದ್ದು ಹಿಂದು ದೇಶವನ್ನು ಪೂಜ್ಯವೆಂದು ತಿಳಿಯುತ್ತಾನೆ. ಅವನು ತನ್ನನ್ನು 'ಸಚ್ಚಿದಾನಂದ' ನೆಂದು ಕರೆಯಿಸಿಕೊಳ್ಳುತ್ತಿದ್ದಾನೆ. ಅವನಿನ್ನೂ ೩೧ ವರ್ಷದವನೇ ಇದ್ದಾನೆ. ಆದರೂ ಸಮಾಧಿ ಏರಿಸುವದು, ಅನ್ಯರ ಮನೋಗತವನ್ನು ತಿಳಿಯುವದು ಮುಂತಾದವುಗಳನ್ನು ಸಾಧಿಸಿದ್ದಾನೆ. ಹಿಂದು ಯೋಗಿಗಳಂತೆ ಜಟಾಮುಕುಟನಾಗಿದ್ದಾನೆ. ತನಗೆ ಇಂಥ ಯೌಗಿಕ ವಿದ್ಯೆಯು ಪ್ರಾಪ್ತವಾದುದನ್ನು ಅವನು ಹೀಗೆ ಹೇಳುತ್ತಾನೆ—"ನಾನು ಹಿಂದುಸ್ಥಾನದ ಯೋಗಿಗಳ ಪುಸ್ತಕಗಳನ್ನು ಹಂಗರಿ ಭಾಷೆಯಲ್ಲಿ ಓದಿದೆನು. ಅದರಿಂದ ನನಗೊಂದು ಪ್ರೇರಣೆಯಾಗಿ ನಾನು ಗಿರಿಕಂದರಗಳಲ್ಲಿ ವಾಸಿಸುತ್ತ ಯೋಗ ವಿದ್ಯೆಯನ್ನಿಷ್ಟು ಸಂಪಾದಿಸಿರುವೆನು. ಆದರೆ ಯೋಗಾಭ್ಯಾಸಕ್ಕೆ ಮಾತೃ ಸ್ಥಾನವಾದ ಹಿಂದುಸ್ಥಾನಕ್ಕೆ ಹೋದರೇನೇ ಅದರ ಪೂರ್ಣತೆಯಾಗುವದೆಂದು ತಿಳಿದು ಇಲ್ಲಿಗೆ ಬಂದಿದ್ದೇನೆ."

ಪಾಶ್ಚಾತ್ಯರು ಈ ಪ್ರಕಾರ ಹಿಂದು ಸಂಸ್ಕೃತಿಯನ್ನು ಆದರಿಸುತ್ತಿರುವುದನ್ನು ನೋಡಿಯಾದರೂ ಹಿಂದುಗಳು ತಮ್ಮ ಸಂಸ್ಕೃತಿಯ ಬಗ್ಗೆ ಅಭಿಮಾನ ತಾಳಬಾ[illegible]

[illegible]

ಇಂಗ್ಲಂಡದ [illegible] ಕವಿಯಾದ [illegible]ಯರನ ಹಸ್ತಲಿಖಿತ ಗ್ರಂಥವೊಂದು ಸ್ವಲ್ಪ ಕಾಲದ ಹಿಂದೆ ದೊರೆಯಿತು. ಅದನ್ನು ಒಬ್ಬರು ನೀಲಾಡಿ ೩೧೦೦ ಪೌಂಡುಗಳಿಗೆ ಕೊಂಡುಕೊಂಡರು. ಇದಕ್ಕೂ ಮೊದಲು ಆ ಕವಿಯ ಮತ್ತೊಂದು ಹಸ್ತಲಿಖಿತ ಗ್ರಂಥವು ೧೨೦೦೦ ಪೌಂಡುಗಳಿಗೆ ಮಾರಲ್ಪಟ್ಟಿದೆ. ರಶಿಯಾದಲ್ಲಿ ಪಂಚ ವಾರ್ಷಿಕ ಯೋಜನೆಯನ್ನು ಅಲ್ಲಿಯ ಸರಕಾರವು ಕೈಕೊಂಡ ಕೂಡಲೆ ಶಿಕ್ಷಣವು ಬಹು ಸುಲಭವಾಗಿ ದೊರೆಯುತ್ತದೆ. ದೇಶದ ಜನರೆಲ್ಲರೂ ಪುಸ್ತಕಗಳನ್ನು ಬಹು ಪ್ರೀತಿಯಿಂದ ಓದುತ್ತಾರೆ. ಗಾರ್ಕಿ ಎಂಬ ಪ್ರಸಿದ್ಧ ಗ್ರಂಥಕಾರನ ಪುಸ್ತಕದ ೧ ಕೋಟಿ ೮೦ ಲಕ್ಷ ಪ್ರತಿಗಳು ಮಾರಾಟವಾದವು! ಅಲ್ಲಿ ಪುಸ್ತಕಗಳ ಬೆಲೆಯೂ ಬಹು ಕಡಿಮೆ. ಅಲ್ಲಿಯ ಜನರು ಯಾವುದೊಂದು ಪುಸ್ತಕವನ್ನು ಓದಿದ ಮೇಲೆ ಅವರ ಗ್ರಂಥಕರ್ತನಿಗೆ ಪತ್ರ ಬರೆದು ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾರೆ. ಸಮಯ ದೊರೆತರೆ ಅವನಿಗೆ ಭೆಟ್ಟಿಯಾಗುವದು ಅಥವಾ ಅವನಿಗೆ ತಮ್ಮ ಹೊಲ ಮತ್ತು ಕಾರ್ಯಾಲಯಗಳಿಗೆ ಆಮಂತ್ರಣ ಕೊಡುವರು ಗ್ರಂಥಕರ್ತರಿಗೆ ಅವರು ಸನ್ಮಾನಪೂರ್ವಕ ಪುರಸ್ಕಾರ ಮಾಡುವರು. ಹಿಂದುಸ್ಥಾನದಲ್ಲಿ ಗ್ರಂಥಕರ್ತರಿಗೆ ಮನ್ನಣೆಯು ಹೇಗಿದೆ?

ಧನಕ್ಕಾಗಿ ಪ್ರಾಣ ಕಳೆದುಕೊಂಡ.

ಮದ್ರಾಸ ಇಲಾಖೆಯ ಕಾಡಕುದ್ರು ಎಂಬ ಹಳ್ಳಿಯಲ್ಲಿ ಬೆಂಕಿ ಹತ್ತಿ ೩೦೦ ಮನೆಗಳು ಮತ್ತು ೩೦ ದನಗಳು ಸುಟ್ಟು ನಾಶವಾದವು. ಒಬ್ಬ ೭೦ ವರ್ಷದ ಮುದುಕನು ತನ್ನದೊಂದು ಹಣದ ಚೀಲವನ್ನು ಉಳಿಸಿಕೊಳ್ಳಬೇಕೆಂದು ಸುಡುವ ಮನೆಯಲ್ಲಿ ಪ್ರಯತ್ನಿಸುತ್ತಿರುವಾಗ ತಾನೂ ಸುಟ್ಟುಕೊಂಡು ಸತ್ತನು.

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಸ್ಸೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B. ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

ಜಿ. ಎಸ್. ಗಂಗಾಧರಯ್ಯ,

ಸುಗಂದರಾಜ ದಶಾಂಗ ಕಾರ್ಖಾನೆ, ಅರಳೀ ಪೇಟೆ, ತುಮಕೂರು

(ಮೈಸೂರು ಸ್ಟೇಟ್)

ಜಾಹೀರಾತ.

ಸರ್ವಜನರಲ್ಲಿ ವಿಜ್ಞಾಪಿಸುವದೇನಂದರೆ—

ಈ ಜಾಹೀರಾತಿನಿಂದ ತಿಳಿಸುವದೇನಂದರೆ ನನ್ನ ಸಹೋದರನಾದ ಬಸಣ್ಣ ಈತನು ಮನೆ ಬಿಟ್ಟು ಒಂದು ವರುಷವಾಯಿತು. ಈತನ ಸ್ವಭಾವ ಹುಚ್ಚು, ವಯಸ್ಸು ೪೦, ಬಣ್ಣ ಸಾಧಾರಣ ಕೆಂಪು, ಸಾಧಾರಣ ನಿಲುವು, ದುಂಡು ಮುಖ, ಬಲ ಗದ್ದದ ಮೇಲೆ ಒಂದು ಹಸರು ಬಣ್ಣದ ಹೆಬ್ಬೆರಳಿನಷ್ಟು ಕಲೆ ಇದ್ದು ಅದರ ಮೇಲೆ ಕೂದಲು ಇವೆ. ಒಮ್ಮೊಮ್ಮೆ ಗೋಣು ಹೊರಳಿಸುವನು. ಮತ್ತು ಶೌಚಕ್ಕೆ ಕೂತರೆ ೨-೩ ತಾಸಾದರು ಕೂಡ್ರುವನು. ಮತ್ತು ಕ್ಷೌರಮಾಡಿಸುವದಕ್ಕೆ ಬಹಳ ಪ್ರೀತಿ. ಮೀಸೆಸಹ ತೆಗೆಸುವನು. ಬಾಲ, ವೃದ್ಧರಿಗೆ ಸಹ ತಂತ್ರಾ, ತಾತಾ ಅನ್ನುವನು. ತನ್ನಷ್ಟಕ್ಕೆ ತಾನೆ ಮರಿಯಪ್ಪ ಪಂಪಣ್ಣ, ಟಾಕಣ್ಣ ಎಂದು ಅನ್ನುತ್ತಾನೆ. ಹೆಸರು ಕೇಳಿದರೆ ಬಸಣ್ಣನೆಂದು ಹೇಳುವನು. ಹುಡುಗರು ಕಾಡಿಸಿದರೆ ಚೀರುವನು. ಮತ್ತು ಹಸ್ತ ತಿರುವಿ ಹಿಡಿದು ಶಂಖಹಚ್ಚುವನು. ಇಷ್ಟು ಚಿಹ್ನಗಳನ್ನು ಕಂಡರೆ ದಯವಿಟ್ಟು ತಮ್ಮಲ್ಲಿ ಇರಿಸಿಕೊಂಡು ನಮಗೆ ತಿಳಿಸಿದರೆ ನಿಮಗೆ ೧೦ ರೂ. ಇನಾಮು ಕೊಡುತ್ತೇವೆ ತಿಳಿದಿರಬೇಕು.

ನನ್ನ ವಿಳಾಸ:— **ಪಂಪಣ್ಣ ಗಡ್ಡದ ದೇವಾಂಗ**

ಮುಕ್ಕಾಂ, ಪೋಸ್ಟ ಮುಸ್ಕಿ, ತಾಲೂಕಾ

ಲಿಂಗಸೂಗೂರ ಜಿಲ್ಲಾ ರಾಯಚೂರ.

ಮುದ್ದಾದ ಅಕ್ಷರ! ಸುಲಭ ದರ!

ಶ್ರೀ ರಂಗನಾಥ ಟೈಪ್ ಫೌಂಡರಿ

ಬೆಂಗಳೂರು.

ಕನ್ನಡ ಮತ್ತು ಇಂಗ್ಲಿಷ, ಎಲ್ಲಾ ತರದ ಟೈಪುಗಳೂ ಒಳ್ಳೊಳ್ಳೇ ಬಾರ್ಡರಗಳೂ ನಮ್ಮ ಫೌಂಡರಿಯಲ್ಲಿ ತಯಾರಾಗುತ್ತವೆ.

ಒಳ್ಳೇ ಮೆಟಲ್. ಬಹು ಅಂದವಾದ ಅಕ್ಷರಗಳು. ಬಲು ಸುಲಭ ದರ. ಕ್ಯಾಟಲಾಗ ತರಿಸಿಕೊಳ್ಳಿರಿ. ಒಮ್ಮೆ ಟೈಪುಗಳನ್ನು ತರಿಸಿಕೊಂಡು ಅನುಭವ ಹೊಂದಿರಿ. ಹಳೆ ಟೈಪುಗಳಿದ್ದರೆ ಸುಲಭ ಚಾರ್ಜಿಗೆ ಹೊಸದಾಗಿ ಹೊಯಿದು ಕೊಡುತ್ತೇವೆ.

ಪ್ರೊಪ್ರೈಟರ,

ಶ್ರೀ ರಂಗನಾಥ ಟೈಪ್ ಫೌಂಡರಿ

೬೭ ಕುಬೇರ ಸಾಹುಜಿ ಲೈನ್

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪತ್ರಿಫಲದ ದಿವ್ಯಾಭರಣ!

ಲಿಂಗಪೂಜಕರಿಗೆ ಪತ್ರಿಯು ಅತ್ಯಾಗತ್ಯವಲ್ಲವೆ? ಪತ್ರಿಯ ಫಲದಿಂದ ಮಾಡುವ ಈ ದಿವ್ಯಾಭರಣಗಳಲ್ಲಿ ನಿಮಗೆ ಬೇಕಾದುದನ್ನು ತರಿಸಿಕೊಳ್ಳಿರಿ.

ಕರಕಮಲ, ನಾಗಾಭರಣ, ಕಂಠಮಾಲೆ ಮೊದಲಾದವು. ಮಂತ್ರವಿಶಿಷ್ಟ, ಲಿಂಗಪೂಜೆಗೆ ಅಗತ್ಯವಾಗಿರತಕ್ಕವು.

ನಿಮ್ಮ ಇಷ್ಟದಂತೆ ಮಂತ್ರಾಕ್ಷರಗಳನ್ನು ಸ್ಫುಟಗೊಳಿಸಿ ಪತ್ರಿಯ ಕಾಯಿಯ ಚಿಪ್ಪಿನಿಂದ ಬಹು ಅಂದವಾದ ಆಭರಣಗಳನ್ನು ತಯಾರುಮಾಡಿಕೊಡುತ್ತೇವೆ.

ಕ್ರಯ ೧ ರೂಪಾಯಿಯಿಂದ ಮೇಲ್ಪಟ್ಟು ನಿಮ್ಮ ಇಷ್ಟವಿದ್ದಷ್ಟು ರೂ. ಗಳ ವರೆಗೆ.

ವಿಳಾಸ:— ಸಂಗಮೇಶ- ಶ್ರೀ ಸರ್ಪಭೂಷಣ ಶಿವಯೋಗಿ ಮಠ ಬಳೇಪೇಟೆ ಬೆಂಗಳೂರು ಸಿಟಿ.

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿಂದರೆ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಧಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .... ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುಖ ಬೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ	೩೦-೦-೦ ತಿಂಗಳೊಂದಕ್ಕೆ	ಎರಡೂಹೊತ್ತು ಭೋಜನ	೧೬-೦-೦	ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ	೧-೮-೦ ದಿನ ಒಂದಕ್ಕೆ	ಊಟ ಒಂದಕ್ಕೆ	೦-೬-೦	

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, ಗೌರೀಶಂಕರ ನಿವಾಸ ಹಿಂದೂ ಹೋಟೆಲ್
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, ಮುಂಬಯಿ

ಜಯಕರ್ನಾಟಕ

ಕರ್ನಾಟಕದ ಪ್ರಮುಖ ಮಾಸಪತ್ರಿಕೆ.

ವಾರ್ಷಿಕ ಚಂದಾ ೫-೮-೦

ನಾಟ್ಯಾಂಕ

ವಿವಿಧಚಿತ್ರ! ಸರಸನಾಟಕ ಕಥೆ! ವಿದ್ವತ್‌ಪ್ರಚುರ ಲೇಖಗಳಿವೆ!

ತ್ವರೆಮಾಡಿರಿ—ಬೆಲೆ ೧ ರೂ.—ತೀರುತ್ತಿವೆ.

ಜಯಕರ್ನಾಟಕ ಗ್ರಂಥಮಾಲೆ

ವರ್ಷಕ್ಕೆ ೬ ಪುಸ್ತ] ವಾ. ಚಂ. ೩-೪-೦ [ಮೇಲೊಂದು ಉಚಿತಪುಸ್ತ

ಜ. ಕ. ಚಂದಾದಾರರಿಗೆ ೩ ರೂ.

ಮೂರನೆಯ ವರ್ಷದ ನಾಲ್ಕನೆಯ ಪುಸ್ತವಾದ

ಶ್ರೀ. ಹ. ಪಿ. ಜೋಶಿಯವರ

ಇದೀಗ ಹೊರಟಿದೆ] **ರಾಜವಲ್ಲಭ** [ಬೆಲೆ ಹತ್ತು ಆಣೆ.

ಕೀಚಕ ವಧೆ ಕಥೆಯನ್ನು ಆಧರಿಸಿ ಬರೆದ ಹೊಸ ಸಂಗೀತ ನಾಟಕ. ಉಚಿತ ಸಂಭಾಷಣೆ, ಮಿತವಿನೋದ, ಸುರಮ್ಯ ಪದ್ಯ ಮಾಲಿಕೆ.

ಜಯಕರ್ನಾಟಕ ಕಾರ್ಯಾಲಯ
ಧಾರವಾಡ.

ನಿರಂಜನ ಹಾಲ್.

ಮಹಾಶಯರೇ ನಮ್ಮಲ್ಲಿ ಸಕಲರಿಗು ಪೂಜಾರ್ಹವಾದ ಸಾಮಾನುಗಳು ದೊರೆಯುತ್ತೆ.

ಮಹದೇಶ್ವರ ಸ್ವಾಮಿಯವರು ಎಂಬ ಮಹಾ ವಿರಕ್ತರು ತಮ್ಮ ಬಾಲ್ಯದಲ್ಲಿಯೇ ಹುಲಿಯ ಮೇಲೆ ಕುಳಿತು ಸಂಚಾರ ಮಾಡುತ್ತಿದ್ದ ಫೋಟೋ ೧೦×೧೪ ಸೈಜು ಡಜ ೧ ಕ್ಕೆ ೧-೮-೦

ನಂಜುಂಡೇಶ್ವರ ಸ್ವಾಮಿ ಫೋಟೋ ೧೦ + ೧೪ ಸೈಜು ಡಜ ೧ ಕ್ಕೆ (೧-೮-೦) ಡಿಟೊ ೭ + ೯ ಸೈಜು ಡ. ೧ ಕ್ಕೆ ೦-೧೨-೦ ಮತ್ತು ೦-೬-೦. ಅವಲ್ ದಶಾಂಗ ಧೂಪದ ಛಟ್ಟಿ ಸೇರು ೧ ಕ್ಕೆ (೨-೦-೦) ದುಯಂ ಸೇರು ೧ ಕ್ಕೆ, ೧-೮-೦ ೧-೦-೦ ಎಡೆಯೂರು **ಸಿದ್ಧಲಿಂಗೇಶ್ವರ ಸ್ವಾಮಿಯವರ ಫೋಟೋ** ೧೦೦ ಕ್ಕೆ ೪-೦-೦ ಒಂದಾವರ್ತಿ ತರಿಸಿ ಪರೀಕ್ಷಿಸಿರಿ.

ಹೆಚ್, ಎಂ. ಮಲ್ಲಪ್ಪ ಅಂಡ್, ಬ್ರದರ್ಸ್
ಫೋಟೋಗ್ರಾಫರ್,
ನಂಜನಗೂಡು.

೧೦,೩೧,೦೦೦ ರೂಪಾಯಿ

ಬೆಲೆ ಬಾಳುವ ಪಾಲಿಸಿಗಳನ್ನು ಸ್ವರಾಜ್ಯ ಕಂಪನಿಯವರು ಬರೀ ಹದಿನಾಲ್ಕು ತಿಂಗಳಲ್ಲಿ ಕೊಟ್ಟಿರುತ್ತಾರೆ. ಕೂಸು ಹುಟ್ಟಿದರೆ, ಮಕ್ಕಳ ಮದಿವೆ ಮಾಡಿದರೆ, ಮರಣ ಹೊಂದಿದರೆ, ವಿಮೆಯುದಾರರಿಗೆ ೫೦೦ ರೂಪಾಯಿಗಳ ವರೆಗೆ, ವಿಮೆಯ ಹಣವು ಕೊಡಲ್ಪಡುವದು. ವಿಮೆಯು ಕಂತಗಳು ತೀರ ಕಡಿಮೆ. ತಿಂಗಳೊಂದಕ್ಕೆ ಒಂದು ರೂಪಾಯಿ. ಪ್ರವೇಶ ಫೀ ೫ ರೂ. ವಾರ್ಷಿಕ ಫೀ ಒಂದು ರೂಪಾಯಿ ಮಾತ್ರ. ಏಜಂಟರಾಗಿ ಕೆಲಸ ಮಾಡುವವರಿಗೂ ಅರ್ಗನಾಯಿಝರರಿಗೂ ಒಳ್ಳೇ ಲಾಭ.

ಹೆಚ್ಚಿನ ಮಾಹಿತಿ ಬೇಕಾದವರು ಕಂಪನಿಯ ಕೂಡ ಪತ್ರವ್ಯವಹಾರ ಮಾಡಬೇಕು.

ಎಂ. ಎಸ್ ಕೇಸರಿ ಬಿ. ಎ., ಎಲ್ ಎಲ್. ಬಿ.
ಮ್ಯಾನೇಜಿಂಗ ಏಜಂಟ್ಸ,
ದಿ ಸ್ವರಾಜ್ಯ ಬ್ಯಾಂಕಿಂಗ ಆ್ಯಂಡ ಇನ್ಶುರನ್ಸ
ಕಂಪನಿ ಲಿಮಿಟೆಡ್, ಧಾರವಾಡ.

ದಿ ಸ್ವರಾಜ್ಯ ಬ್ಯಾಂಕಿಂಗ

ಮತ್ತು ಇನ್ಶುರನ್ಸ ಕಂಪನಿ, ಲಿಮಿಟೆಡ್

ಧಾರವಾಡ

ಇದರ ಮ್ಯಾನೇಜಿಂಗ ಏಜಂಟ್ಸರವರಿಗೆ—

ನೀಲಪ್ಪಾ ಮಲ್ಲಪ್ಪಾ ಮೆಣಸಿನಕಾಯಿ ಸಾ|| ಅಕ್ಕೂರ
ಜಿಲ್ಲಾ ಧಾರವಾಡ ಈತನು ಮಾಡುವ ಶರಣಾರ್ಥಿಗಳು

ತಮ್ಮ ಕಂಪನಿಯಲ್ಲಿ ನಾನು ೧೯೩೪ನೇ ಇಸ್ವಿಯ ಜಾನೇವರಿ ತಿಂಗಳ ೨೫ನೆಯ ತಾರೀಖಿನ ದಿವಸ ಜನನ ವಿಮೆಯನ್ನು ಇಳಿಸಿದ್ದೆನು. ನನ್ನ ಜನನ ವಿಮೆಯ ಪಾಲಿಸಿ ನಂಬರು (೨) ಎರಡು ಇರುತ್ತದೆ. ಪಾಲಿಸಿಯನ್ನು ತೆಗೆದುಕೊಂಡ ಒಂದು ವರ್ಷದ ಮೇಲೆ ನನಗೆ ಒಂದು ಕೂಸು ಜನನವಾಯಿತು. ಕಂಪನಿಗೆ ನಾನು ಒಟ್ಟು (೧೮) ರೂಪಾಯಿಗಳನ್ನು ಕೊಟ್ಟಿರುತ್ತೇನೆ. ಕೂಸು ಹುಟ್ಟಿದ್ದನ್ನು ಸಿದ್ಧ ಮಾಡಿಕೊಟ್ಟ ಕೂಡಲೆ ನೀವು ನನಗೆ ಕಳುಹಿಸಿಕೊಟ್ಟ (೪೪೭) ನಾಲ್ಕು ನೂರಾನಾಲ್ವತ್ತೇಳು ರೂಪಾಯಿಗಳು ಮುಟ್ಟಿದುವು. ಈ ಬಗ್ಗೆ ಕಂಪನಿಗೆ ನಾನು ತುಂಬಾ ಋಣಿಯಾಗಿದ್ದೇನೆ.

ಅಕ್ಕೂರ
ತಾ|| ೧೩-೩-೩೫.

(ಸಹಿ) **ನೀಲಪ್ಪಾ ಮಲ್ಲಪ್ಪಾ ಮೆಣಸಿನಕಾಯಿ.**

ಹರ್ಡೇಕರ ಮಂಜಪ್ಪನವರು ಬರೆದ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಕಾಯಕವೆ ಕೈಲಾಸ	೦-೩-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ವಿಜಯವಾಣಿ	೦-೨-೦
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.**

ಶರಣ ಸಂದೇಶ

The
Sharana Sandesh.

ನ್ಯಾಯನಿಷ್ಠುರಿ| ದಾಕ್ಷಿಣ್ಯಪರನಲ್ಲ| ಲೋಕವಿರೋಧಿ| ಶರಣನಾರಿಗೂ ಅಂಜುವವನಲ್ಲ|
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ || ವ. ೨೨೪ | ಮಹಾನುಭಾವ ಬಸವಣ್ಣನವರು.

ಸಂಪಾದಕರು:-
೯. ಹರ್ದೇಕರ ಮಂಜಪ್ಪನವರು,

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ವರ್ಗಣಿ:- ಅಂಚೆಯ ವೆಚ್ಚ ಸೇರಿ ೩ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಂಪುಟ ೪. | ಆಲಮಟ್ಟಿ- ಸೋಮವಾರ ತಾರೀಖು ೧೦ ನೆಯ ಜೂನ್ ೧೯೩೫. | ಸಂಚಿಕೆ ೪೦

ಜನಸೇವೆಯೇ ದೇವರ ಸೇವೆ

ಭೂಕಂಪ ಪೀಡಿತರ ವ್ಯವಸ್ಥೆ.

ಕ್ವೇಟ್ಟಾದ ಹತ್ತರ ಗುಡಾರಗಳ ಮನೆ.

ವ್ಹಾಯಿಸರಾಯ ಫಂಡು ೪ ಲಕ್ಷ.

ಇಲ್ಲಿಯ ವರೆಗೆ ಭೂಕಂಪದ ಆಘಾತಕ್ಕೆ ಸಿಕ್ಕ ೩೦೦೦ ಜನರನ್ನು ಬದುಕಿಸಲಾಗಿದೆ. ಹಾಗೂ ೧೦ ಸಾವಿರಕ್ಕಿಂತ ಹೆಚ್ಚಾಗಿ ಜನರನ್ನು ಸ್ಪೇಶಲ್ ಗಾಡಿಯಲ್ಲಿ ಪಂಜಾಬ ಮತ್ತು ಸಿಂಧಗಳಿಗೆ ಕಳಿಸಿಕೊಡಲಾಗಿದೆ.

ಕ್ವೇಟಾದ ಹತ್ತಿರವೆ ೫೦೦ ಎಕರೆ ವಿಸ್ತೀರ್ಣವಾದ ಪ್ರದೇಶದಲ್ಲೆಲ್ಲ ಬಿಳಿಯ ಬಣ್ಣದ ಗುಡಾರಗಳನ್ನು ಹೊಡೆದು ಏಳು ಸಾವಿರ ಜನರು ವಾಸಿಸಲು ವ್ಯವಸ್ಥೆ ಮಾಡಲಾಗಿದೆ.

ವ್ಹಾಯಿಸರಾಯ ರಿಲೀಫ ಫಂಡು ೪ ಲಕ್ಷದ ವರೆಗೆ ಬಂದಿದೆ.
ಬರ್ಮಾಶೆಲ್ ಕಂಪನಿಯವರು ೧ ಲಕ್ಷ ರೂ.
ಕೊಟ್ಟಿರುವರು.

SANGAM CLOTH STORES
Prop: M S. Hundekar & Sons,
P.O: TERDAL - 587 315
Dt. Bijapur (Karnataka)

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಸಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು, ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರೆ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾವರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ** ಒಟ್ಟ ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ **ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ** ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು ನಾಕುನಾಕು, ಇನ್ನು ಮುಂದೆ ನಿಜವಾದ **ಸಿದ್ಧೇಶ್ವರ** ತಿಜೋರಿಯನ್ನೇ **ಕೊಳ್ಳುವೆನು**. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ವರನು ಬೇಕು.

'. 18 ಹದಿನಾರು ವರ್ಷ ಪ್ರಾಯದ ಸುರೂಪಿಯೂ, ಗೃಹ ಕೃತ್ಯದಲ್ಲಿ ನಿಪುಣೆಯೂ, ಕನ್ನಡ ಓದುಬರಹ ಬಲ್ಲವಳೂ ಆದ ಗೌಡ ಸಾರಸ್ವತ ಬ್ರಾಹ್ಮಣ ಕನ್ಯಾ ವಧುವಿಗೆ ೨೨ ವರ್ಷಕ್ಕೆ ಮೀರದ ----) ಉದ್ಯೋಗವಿರುವ ಸ್ಥಿತಿವಂತನ ವರನು ಬೇಕು.

ವಧುವು ಬೇಕು.

W. 17 ಸರಕಾರಿ ಕೆಲಸದಲ್ಲಿ ತಿಂಗಳಿಗೆ ೩೦ ರೂ. ಸಂಬಳವಿರುವ ೩೫ ವರ್ಷ ಪ್ರಾಯದ ಆರೋಗ್ಯವಂತರಾದ ಓರ್ವ ಗೌಡ ಸಾರಸ್ವತ ಬ್ರಾಹ್ಮಣ ಯುವಕರಿಗೆ ೨೪ ವರ್ಷಕ್ಕೆ ಮೀರದ ಸುಂದರಿಯೂ, ಗೃಹಕೃತ್ಯಗಳನ್ನು ನಿರ್ವಹಿಸಬಲ್ಲವಳೂ ಆದ ವಿದ್ಯಾವಂತ ವಿಧವೆಯು ಬೇಕು.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ. ಎಸ್. ಶೈ
ಶಿವಪೇಟೆ ಪುತ್ತೂರು.ದ. ಕ.

ಅಂದವಾದ ಮುದ್ರಣ! ಅಚ್ಚುಕಟ್ಟಾದ ಬೈಂಡು!

ಸಂಕ್ಷಿಪ್ತ

ಮಹಾದೇವಿಯಕ್ಕನ ಜೀವನ ಚರಿತ್ರೆ.

ವಚನವಾಙ್ಮಯದಲ್ಲಿ ಉಚ್ಚಸ್ಥಾನವನ್ನು ಪಡೆದು ಪ್ರಸಿದ್ಧಿ ಪಡೆದ ಉಡುತಡಿಯ ಮಹಾದೇವಿಯಕ್ಕನ ಜೀವನ ಕಥೆ. ವಚನಗಳಿಂದ ಕೂಡಿ ಭಾವ ಪೂರ್ಣವಾಗಿ ಬರೆಯಲ್ಪಟ್ಟಿದೆ.

ಬೆಲೆ ಎರಡಾಣೆ ಮಾತ್ರ,

ಲೇಖಕರು:— ಶ್ರೀಮಾನ್ ಟಿ. ಎನ್. ಮಹಾದೇವಯ್ಯನವರು

ಪುಸ್ತಕ ದೊರೆಯುವ ವಿಳಾಸ— ಶ್ರೀ ಸರ್ಪಭೂಷಣ ಮಠ
ಬಳೇಪೇಟೆ.
ಬೆಂಗಳೂರು ಸಿಟಿ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಜೂನ್ ತಾರೀಖು ೧೦ ನೆಯ ಸೋಮವಾರ | ಸಂಚಿಕೆ ೪೦.

ಯುದ್ಧದ ಸಿದ್ಧತೆ.

ಪ್ರಪಂಚದಲ್ಲಿ ಮತ್ತೆ ಮಹಾ ಯುದ್ಧ ಪ್ರಾರಂಭವಾಗುವ ಅಶುಭ ಲಕ್ಷಣಗಳು ತೋರುತ್ತಲಿವೆ. ಜರ್ಮನಿ, ಇಟಲಿ, ಜಪಾನ ದೇಶಗಳು ರಣಭೇರಿಯನ್ನು ಬಾರಿಸಲು ಬಹು ಆತುರವುಳ್ಳವುಗಳಾಗಿವೆ. ಇಟಾಲಿಯ ಮುಸೋಲಿನಿಯವರು ಆಗಾಗ್ಗೆ ರಣಗರ್ಜನೆಯನ್ನು ಮಾಡುತ್ತಲೇ ಇದ್ದಾರೆ.

ಕುರಿಗಳಂತಾಗಿ ನೂರು ವರುಷ ಬಾಳುವುದಕ್ಕಿಂತ ಹುಲಿಯಂತಾಗಿ ಮೂರು ವರುಷ ಬಾಳುವುದೇ ತನಗೆ ಬೇಕಾಗಿದೆಯೆಂದು ಇಟಲಿಯು ಸಾರುತ್ತಿದೆ. ಜರ್ಮನಿಯ ಹಿಟ್ಲರರಂತೂ ರಣಭೂಮಿಯ ಚಿತ್ರವನ್ನೇ ಚಿತ್ರಿಸುತ್ತಿದ್ದಾರೆ. ಜರ್ಮನಿಯ ಯುದ್ಧ ಸಿದ್ಧತೆಯು ಅಪಾರವಾದುದೆಂದು ಅನೇಕರು ತರ್ಕಿಸಿದ್ದಾರೆ.

ಜರ್ಮನಿಯು ತನಗೆ ಬೇಕಷ್ಟು ಸೈನ್ಯವನ್ನು ಕೂಡಿಸಿಕೊಳ್ಳಲು ಅನುಕೂಲವಾಗುವಂತೆ ಹಿಟ್ಲರರು ಹೊಸ ಶಾಸನವನ್ನೇ ಏರ್ಪಡಿಸಿದ್ದಾರಷ್ಟೆ. ಈಗಿನ ಕಾಲದ ಯುದ್ಧಕ್ಕೆ ಸೈನ್ಯ ಬಲವೊಂದೇ ಸಾಲದು. ಜನ ಸಂಹಾರದ ನಾನಾ ಭಯಂಕರ ಯಂತ್ರಾದಿ ಉಪಕರಣಗಳು ಹೆಚ್ಚು ಬೇಕು. ಇವುಗಳ ಸಿದ್ಧತೆಯು ಜರ್ಮನಿಯಲ್ಲಿ ಹಗಲಿರುಳೂ ನಡೆದಿದೆ. ಯಾವ ಕಾರ್ಯಾಲಯದಲ್ಲಿ ಎಷ್ಟು ಯುದ್ಧೋಪಕರಣಗಳಾದವೆಂಬುದು ಗೊತ್ತಾಗುವಂತಿಲ್ಲ. ಈ ಗುಪ್ತ ಸಂಗತಿಯನ್ನು ಪ್ರಕಟ ಮಾಡಿದನೆಂಬ ಸಂಶಯ ಬಂದರು ಕೂಡಾ ದೇಹಾಂತ ಶಿಕ್ಷೆಯನ್ನು ಹಿಟ್ಲರರು ವಿಧಿಸುತ್ತಿದ್ದಾರೆ.

ಯುದ್ಧದಲ್ಲಿ ಎಸೆಯುವ ಬಾಂಬು ಗುಂಡುಗಳನ್ನು ಮಾಡುವ ಭಯಂಕರವಾದ ಕಾರ್ಯಾಲಯವಿದೆ. ವಿಮಾನುಗಳಿಗೆ ಬೇಕಾಗುವ ಎರಡು ಸಾವಿರ ಮೋಟಾರ್ ಯಂತ್ರಗಳನ್ನು ಮಾಡಿ ಕೊಡುವ ಕರಾರಿನಿಂದ ಒಂದು ಕಾರ್ಯಾಲಯವು ಹಗಲಿರುಳೂ ಕೆಲಸ ನಡೆಸಿದೆ. ಬಾಂಬುಗಳನ್ನು ಮಾಡುವ ಸಾಮಾನು ೧೦೦ ಕ್ಕೆ ೯೪ ಪಟ್ಟು, ಸ್ಫೋಟಕ ಪದಾರ್ಥಗಳು ೧೦೦ ಕ್ಕೆ ೩೩೦ ಪಟ್ಟು ಈ ಸಾರೆ ಜರ್ಮನಿಯಲ್ಲಿ ಹೆಚ್ಚಾಗಿ ಬಂದಿವೆ. ಮನುಷ್ಯನ ಪ್ರಾಣ ಹರಣಮಾಡುವ ವಿಷ ಜಂತುಗಳನ್ನು ಕಂಡುಹಿಡಿದು ಅವುಗಳನ್ನು ಬೆಳೆಸುತ್ತಿದ್ದಾರೆ! ಹೊಸ ಹೊಸ ತರದ ಪ್ರಾಣ ನಾಶಗೊಳಿಸುವ ಯಂತ್ರಗಳನ್ನು ಶೋಧಿಸಲು ಬರ್ಲಿನ ಪಟ್ಟಣದಲ್ಲಿ ೪೦ ಜನ ಸುಪ್ರಸಿದ್ಧ ಶಾಸ್ತ್ರಜ್ಞರು ಪ್ರಯತ್ನಿಸುತ್ತಿದ್ದಾರೆ. ಇವೆಲ್ಲಾ ಜನಿತವಾದ ಸಂಗತಿಗಳು. ಇನ್ನು ಗುಪ್ತ ಸಂಗತಿಗಳು ಎಷ್ಟಿವೆಯೋ ಯಾರಿಗೆ ಗೊತ್ತು?

ಈ ಪ್ರಕಾರ ನರಯಜ್ಞದ ಸಿದ್ಧತೆಗಾಗಿ ಮಹಾ ಮಹಾ ದೀಕ್ಷಿತರು ಪ್ರಚಂಡ ಪ್ರಯತ್ನಗಳನ್ನು ನಡೆಸಿದ್ದಾರೆ. ಶಾಂತಿ ಸಂಘದ ಮಂತ್ರೋಚ್ಚಾರಣೆಯಿಂದೇನೂ ಈ ದೀಕ್ಷಿತರು ಶಾಂತರಾಗುವಂತಿಲ್ಲ. ಇಂದಿಲ್ಲ, ನಾಳೆಯಾದರೂ ನರ ಯಜ್ಞದ ಜ್ವಾಲೆಯುಂಟಾಗುವಂತೆಯೇ ಸ್ಪಷ್ಟ ತೋರುತ್ತದೆ. ಈ ಯಜ್ಞ ಕುಂಡದಲ್ಲಿ ಯಾವ ಯಾವ ರಾಷ್ಟ್ರಗಳು ಆಹುತಿಯಾಗುತ್ತವೆಯೋ!

ಇಂಗ್ಲಂಡದಲ್ಲಿ ನೂತನ ಮಂತ್ರಿಮಂಡಲ.

ಕಳೆದ ೭ ನೆಯ ತಾರೀಖಿನ ದಿವಸ ಮಿ. ರಾಮ್ಸೆ ಮೆಕ್ಡೊನಾಲ್ಡರವರು ತಮ್ಮ ರಾಷ್ಟ್ರೀಯ ಮಂತ್ರಿ ಮಂಡಲವು ಅಧಿಕಾರವನ್ನು ಬಿಟ್ಟುಕೊಟ್ಟ ಬಗ್ಗೆ ಬಿಡುಗಡೆಯ ಪತ್ರವನ್ನು ಸ್ವತಃ ಹೋಗಿ ಬಾದಶಹರಿಗೆ ಕೊಟ್ಟರು. ಸ್ವಲ್ಪ ಕಾಲದಲ್ಲಿಯೇ ಬಾದಶಹರು ಮಿ. ಬಾಲ್ಡವಿನ್ನರಿಗೆ ಹೊಸ ಮಂತ್ರಿಮಂಡಲವನ್ನು ರಚಿಸಲು ನಿಮಂತ್ರಣ ಕೊಟ್ಟರು. ಮಿ. ಬಾಲ್ಡವಿನ್ನರು ಹೊಸ ಮಂತ್ರಿ ಮಂಡಲದ ಸಭಾಸದರ ಪಟ್ಟಿಯನ್ನು ಬಾದಶಹರ ಮುಂದೆ ಮಂಡಿಸಿದರು.

ನೂತನ ಮಂತ್ರಿ ಮಂಡಲದ ರಚನೆಯಲ್ಲಿ— ಮಿ. ಸ್ಟ್ಯಾನ್ಲೆ ಬಾಲ್ಡವಿನ್ ಇವರು ಮುಖ್ಯ ಪ್ರಧಾನರು; ಮಿ. ರಾಮ್ಸೆ ಮ್ಯಾಕ್ಡೊನಾಲ್ಡರು ಲಾರ್ಡ ಪ್ರೆಸಿಡೆಂಟ ಆಫ ಕೌನ್ಸಿಲ್; ಸರ ಸ್ಯಾಮುಅಲ್ ಹೋರರರು ಪರರಾಷ್ಟ್ರ ಮಂತ್ರಿಗಳು; ಲಾರ್ಡ ಝೆಟ್ಲಂಡರು ಭಾರತ ಮಂತ್ರಿಗಳು; ಸರ ಜಾನ ಸಾಯಿಮನ್ನ ಇವರು ಹೋಮ ಸೆಕ್ರೆಟರಿ ಮತ್ತು ಡೆಪ್ಯೂಟಿ ಲೀಡರ; ಲಾರ್ಡ ಹ್ಯಾಲಿಫ್ಯಾಕ್ಸ, ಯುದ್ಧಮಂತ್ರಿಗಳು—

ಇತ್ಯಾದಿ ಸಾಧಾರಣ ೨೨ ಜನ ಸಭಾಸದರಿರುವರು.

ಸ್ತುತ್ಯ ಸಹಾಯ.

ಕಲಬುರ್ಗಿಯ ವಕೀಲರಾದ ಶ್ರೀ ಸಿದ್ಧಪ್ಪನವರ ಜ್ಯೇಷ್ಠಪುತ್ರಿ ಕುಂ| ಸೌ| ಬಸಮ್ಮ ಇವರ, ಗುಡೂರಿನಲ್ಲಿ ನೆರವೇರಿದ ಲಗ್ನ ಸಮಾರಂಭದಲ್ಲಿ ಶರಣ ಸಂದೇಶದ ಉತ್ಕರ್ಷತೆಗಾಗಿ ೧೧ ರೂ. ಗಳನ್ನು ಕೊಟ್ಟುದುದು ಕಲಬುರ್ಗಿಯ ಶ್ರೀ. ಮಂಟಾಳ ಶಿವಶರಣಪ್ಪ ಇವರಿಂದ ತಲ್ಪಿವೆ.

ಮ್ಯಾನೇಜರ್ 'ಶರಣ ಸಂದೇಶ.'

ಬಸವಣ್ಣನವರ ವಚನಗಳ ಅನುವಾದ.

SAYINGS OF BASAVANNA.

(ಅನುವಾದಕರು— ಶ್ರೀ. ಎಂ. ವೆಂಕಟೇಶ ಅಯ್ಯಂಗಾರ್ಯರು ಎಮ್. ಎ.)

—:ಕಳೆದ ಸಂಚಿಕೆಯಿಂದ ಬಂದುದು:—

೧೫ ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು, ಬೇರೆ ಮತ್ತೊಬ್ಬರ ಕೈಯ್ಯಲು ಮಾಡಿಸಬಹುದೆ? ತನ್ನ ಲಿಂಗಕ್ಕೆ ಮಾಡುವ ನಿತ್ಯ ನೇಮವ ತಾ ಮಾಡಬೇಕಲ್ಲದೆ, ಬೇರೆ ಮತ್ತೊಬ್ಬರ ಕೈಯ್ಯಲು ಮಾಡಿಸಬಹುದೆ? ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ ನಿಮ್ಮನೆತ್ತ ಬಲ್ಲರು ಕೂಡಲ ಸಂಗಮದೇವಾ?

"Is it right to get done by another the duty to one's wife? Or the feeding of one's body? A man should perform the worship of his God himself. How can he get it done by another? They do it for show, they do not know you, my God Kudala Sangama."

೧೬ ಹಸಿವಾದಡುಂಬುದನು, ಸತಿಯ ಸಂಭೋಗವನು, ಆನಾಗಿ ನೀ ಮಾಡೆಂಬುವರುಂಟೇ? ಮಾಡುವದು, ಮಾಡುವದು ಮನಮುಟ್ಟಿ. ಮಾಡುವುದು, ಮಾಡುವುದು ತನುಮುಟ್ಟಿ. ತನು ಮುಟ್ಟಿ, ಮನಮುಟ್ಟದಿದ್ದರೆ, ಕೂಡಲ ಸಂಗಮದೇವನೇತರಲ್ಲಿಯೂ ಮೆಚ್ಚ.

"Breathes there a man who says to another, 'Be thou me, and do this eating for me—this husband's duty for me.' Worship God with your heart. Worship God with your body. If you worship but give not your body and your mind thereto, what in your worship will God Kudala Sangama accept?

೧೭ ಬಂಡಿ ತುಂಬಿದ ಪತ್ರಿಯ ತಂದು, ಕಂಡ ಕಂಡಲ್ಲಿ ಮಜ್ಜನಕ್ಕೆರೆವಿರಯ್ಯ. ತಾಪತ್ರಯವ ಕಳೆದು ಪೂಜಿಸಿ. ತಾಪತ್ರಯವ ಲಿಂಗನೊಲ್ಲ. ಕೂಡಲ ಸಂಗಮದೇವ ಬರಿಯುದಕದಲ್ಲಿ ನೆನೆವನೆ?

"You bring cart-loads of sacred leaf and anoint images anywhere and every where. Worship without fatigue. Our God likes not fatigue in worship. Will our God Kudala Sangama soften for mere water?"

೧೮ ಮಾಡಿ ನೀಡಿ ಲಿಂಗವ ಪೂಜಿಸಿಹೆವೆಂಬವರು ನೀವೆಲ್ಲಾ ಕೇಳಿರಣ್ಣಾ! ಹಾಗದ ಕೆರಹ ಹೊರಗೆ ಕಳೆದು ದೇಗುಲಕ್ಕೆ ಹೋಗಿ ನಮಸ್ಕಾರವ ಮಾಡುವನಂತೆ, ತನ್ನ ಕೆರಹಿನ ಧ್ಯಾನವಲ್ಲದೆ, ದೇವರ ಧ್ಯಾನವಿಲ್ಲಾ.

"They prepare dishes and place them before the Linga and say, 'we have worshipped.' Listen to me. Their worship is like the worship of him who leaves his cheap shoes at the door and goes into the temple, and stands before the Lord; but he is thinking not of God, but of his cheap shoes."

೧೯ ಅನವರತ ಮಾಡಿಹೆನೆಂದು, ಉಪ್ಪರ ಗುಡಿಯ ಕಟ್ಟಿ, ಮಾಡುವ ಭಕ್ತನ ಮನೆಯುದು ಅಂದಣಗಿತ್ತಿಯ ಮನೆ.

"Give unto the servants of God that which you possess. The house of the man who makes parade and worships and says he is worshipping continuously; it is like the house of the public woman."

೨೦ ಸೂಳೆಯ ಮಗ ಮಹಳವ ಮಾಡಿದರೆ, ತಾಯ ಹೆಸರಾಯಿತ್ತಲ್ಲದೆ ತಂದೆಯ ಹೆಸರಿಲ್ಲ. ಕೂಡಲ ಸಂಗಮದೇವಾ.

"When the strumpet's son performs ceremonies, he names his mother not his father. O God Kudala Sangama."

೨೧ ಓಡಲಾರದ ಮೃಗವು ಸೊಣಗಂಗೆ ಮಾಂಸವ ಕೊಡುವಂತೆ ಮಾಡಲಾಗದು ಭಕ್ತನು, ಕೊಳಲಾಗದು ಜಂಗಮ. ಹಿರಿಯರು ನರಮಾಂಸವ ಭುಂಜಿಸುವರೆ. ತನು ಉಕ್ಕಿ ಮನ ಉಕ್ಕಿ ಮಾಡಬೇಕು, ಭಕ್ತಿಯ ಮಾಡಿಸಿಕೊಳ್ಳಬೇಕು ಜಂಗಮ, ಕೂಡಲ ಸಂಗಮದೇವಾ.

"The devotee ought not to give, and God's servant ought not to receive as when the quarry that cannot run yields its flesh to the hound To take so is to fall low, to eat human flesh. The giver should give, his body and his mind assenting. The man of God should take only what is so given. O God Kudala Sangama."

೨೨ ಬಂದುದ ಕೈಕೊಳ್ಳಬಲ್ಲರೆ ನೇಮ. ಇದ್ದುದ ವಂಚನೆಯ ಮಾಡದಿದ್ದರೆ ಅದು ನೇಮ. ನಡೆದು ತಪ್ಪದಿದ್ದರೆ ಅದು ನೇಮ. ನುಡಿದು ಹುಸಿಯದಿದ್ದರೆ ಅದು ನೇಮ. ನಮ್ಮ ಕೂಡಲ ಸಂಗನ ಶರಣರು ಬಂದರೆ ಒಡೆಯರಿಗೊಡವೆಯನರ್ಪಿಸುವದೇ ನೇಮ.

"Endurance in whatever happens were discipline, not to conceal what one possesses were discipline; to do without erring were discipline; to speak without uttering falsehood were discipline; when the servants of God Kudala Sangama come, to give them what one hath as to the owners, that were the discipline of disciplines."

—(ಮುಂದುವರಿಯುವದು)—

ಅನುಭವ ಮಂಟಪ

ಅರ್ಥಾತ್

ಧಾರ್ಮಿಕ ಪಾರ್ಲಿಮೆಂಟ.

ಲೇಖಕರು:— ಶ್ರೀ. ಸಂಗನಬಸವಸ್ವಾಮಿಗಳು ಬಂಥನಾಳ.

ಜನಾಂಗದ ಧಾರಣೆ ಪೋಷಣೆಗೆ ಯೋಗ್ಯವಾದ ನಿಜವಾದ ಧರ್ಮವನ್ನು ಪಾರ್ಲಿಮೆಂಟ, ಅಸೆಂಬ್ಲಿ, ಕಾಯಿದೆ ಕೌನ್ಸಿಲ್‌ಗಳಂತೆ, ಶುದ್ಧಾಂತಃಕರಣವುಳ್ಳ ಬಹು ಜನರ ಅನುಭವದ ಮೇಲಿಂದಲೇ ನಿರ್ಣಯಿಸಬೇಕೆಂಬ ಅತ್ಯಂತ ಶ್ರೇಷ್ಠತರವಾದ ಸಿದ್ಧಾಂತವನ್ನು ಧಾರ್ಮಿಕ ರಾಜ್ಯದಲ್ಲಿ ಹೊಸದಾಗಿ ಶೋಧ ಮಾಡಿದ ಪ್ರಥಮಾಚಾರ್ಯನೆಂದರೆ ಶ್ರೀ ಭಗವಾನ್ ಬಸವಾಚಾರ್ಯನೇ ಸರಿ.

ಎಂಥ ಶ್ರೇಷ್ಠವಾದ ಜ್ಞಾನಿಯ ಅನುಭವವು ಕೂಡ ಒಮ್ಮೊಮ್ಮೆ ವಿಕಾರವಶವಾಗಿರುವದರಿಂದ ವ್ಯಕ್ತಿಗತವಾದ ಅನುಭವದಿಂದ ಸರ್ವ ಜನರ ಧರ್ಮಾಚರಣೆಯ ಕಟ್ಟಳೆಗಳನ್ನು ನಿಶ್ಚಯಿಸುವ ಪದ್ಧತಿಯು ಘಾತುಕವಾದುದೆಂದು ಅನುಭವದಿಂದ ಕಂಡು **ಅನುಭವ ಮಂಟಪ** ವೆಂಬ ಧಾರ್ಮಿಕ ಸಂಸ್ಥೆಯನ್ನು ಸ್ಥಾಪಿಸಿ ಅದರ ಮುಖಾಂತರವಾಗಿಯೇ ಮಹಾ ಮಹಾ ಜ್ಞಾನಿಗಳ ಅನುಭವವನ್ನು ವಾದರೂಪದಿಂದ ಚರ್ಚಿಸಿ ಕಡೆಗೆ ಎಲ್ಲರ ಅನುಭವಕ್ಕೆ ಹೊಂದಿಕೊಂಡ ವಿಷಯವನ್ನೇ ವೇದಾಗಮಾದಿಗಳ ಆಧಾರದೊಂದಿಗೆ ಜನಾಂಗವು ಅನುಸರಿಸತಕ್ಕ ಧರ್ಮಾಚರಣೆಯೆಂದು ಜಯ ಭೇರಿಯನ್ನು ಹೊಡೆದ ಮೊದಲಿನ ಮಹಾತ್ಮನೆಂದರೆ ಆ ಮಹಾನುಭಾವಿ ಬಸವಣ್ಣನೇ ಸೈ.

ಬಸವಾಚಾರ್ಯನು ಸ್ಥಾಪಿಸಿದ ಅನುಭವ ಮಂಟಪಕ್ಕೆ ಸತ್ಯನಿಷ್ಠರಾದ, ಅದ್ವೇಷರಾಗಿಗಳಾದ ಪ್ರಭುದೇವ, ಏಕೋರಾಮ, ಸಿದ್ಧರಾಮ, ಚನ್ನಬಸವಣ್ಣ, ಸಕಳೇಶ ಮಾದರಸ, ಮೋಳಿಗೆ ಮಾರಯ್ಯ, ಮಧುವರಸ, ಸಿಂಗಿರಾಜ, ಆದಯ್ಯ, ದೇವರ ದಾಸಿಮಯ್ಯ, ಶಂಕರ ದಾಸಿಮಯ್ಯ, ಮಡಿವಾಳ ಮಾಚಿದೇವ, ಅಂಬಿಗರ ಚೌಡಯ್ಯ, ಮಾದಾರ ಚೆನ್ನಯ್ಯ, ಮೋಚ್ಚಿಗಾರ ಹರಳಯ್ಯ, ಡೋಹರ ಕಕ್ಕಯ್ಯ, ಅಕ್ಕಮಹಾದೇವಿ, ಸತ್ಯಕ್ಕ, ಮುಕ್ತಾಯಕ್ಕ, ಮೊದಲಾದ ಸಹಸ್ರಾರು ಜನರು ಸದಸ್ಯರಾಗಿದ್ದರು. ಅವರೆಲ್ಲರು ಮಹಾತತ್ವಜ್ಞಾನಿಯಾದ ಹಾಗು ಸ್ವಾನುಭಾವಿಯಾದ ಪ್ರಭುದೇವರ ಅಧ್ಯಕ್ಷತೆಯಲ್ಲಿ ತಮ್ಮ ತಮ್ಮ ಸ್ವಾನುಭಾವವನ್ನು ಸರ್ವ ಸದಸ್ಯರ ಮುಂದಿಡುತ್ತಿದ್ದರು. ಅನಂತರ ಆ ವಿಷಯದ ಚರ್ಚೆಯಾಗಿ ಕಡೆಗೆ ಎಲ್ಲರ ಅನುಭವಕ್ಕೆ ಒಪ್ಪಿಗೆಯಾಗಿ ಧರ್ಮಗ್ರಂಥಗಳ ಆಧಾರದೊಂದಿಗೆ, ಸಮಾಜವು ಆಚರಿಸತಕ್ಕ ಧರ್ಮಾಚರಣೆಯೆಂದು ನಿರ್ಣಯಿಸಲ್ಪಡುತ್ತಿತ್ತು. ಈ ಪ್ರಕಾರವಾಗಿ ನಿರ್ಣಯವಾದ, ಸಮಾಜ ಧಾರಣೆ-ಪೋಷಣೆಗೆ ಯೋಗ್ಯವಾದ, ಅನಂತ ವಿಚಾರಗಳಲ್ಲಿಯ ಕಿಂಚಿತ್ ವಿಷಯಗಳನ್ನು ಇದರಡಿಯಲ್ಲಿ ಬರೆದುದಾಗಿದೆ—

(೧) ಈ ಸಂಸ್ಥೆಯು ಅನಂತ ದೇವತೆಗಳ ಕಲಕಲಾಟದಿಂದ ತುಂಬಿ ತುಳಕುತ್ತಿರುವ ಹಿಂದು ದೇಶದಲ್ಲಿ "ಏಕಂ ಸದ್ವಿಪ್ರಾ ಬಹುಧಾ ವದಂತಿ" ವಾಕ್ಯದಂತೆ "ಇಬ್ಬರು ಮೂವರು ದೇವರೆಂದು ಉಬ್ಬುಬ್ಬಿ ಮಾತಾಡಬೇಡ ಒಬ್ಬನೇ ದೇವ ಕಾಣಿರೊ" ಎಂಬ ಬಸವಾಚಾರ್ಯನ ಅನುಭವದ ದಿವ್ಯ ಸಂದೇಶದಂತೆ ಎಲ್ಲರ ಅನುಭವಕ್ಕೆ ಹೊಂದಿ ಏಕದೇವೋಪಾಸನೆಯನ್ನು ಸ್ಥಾಪಿಸಿತು. ವೇದನಿರ್ದಿಷ್ಟವಾದ ನಿರಾಕಾರ ಬ್ರಹ್ಮವನ್ನು ಇಷ್ಟಲಿಂಗಾಕಾರದಲ್ಲಿಯೇ ಅಂದರೆ ರೂಪರಹಿತವಾದ ರೂಪದಲ್ಲಿಯೇ ಪೂಜಿಸಬೇಕೆಂದು ನಿರ್ಣಯಿಸಿ ಸಾಕಾರ ನಿರಾಕಾರವೆರಡಕ್ಕೂ ಸಂಬಂಧವನ್ನುಂಟು ಮಾಡಿತು. ಪೂರ್ವದಿಂದ ಲಿಂಗಪೂಜಾಚರಣೆಯು ರೂಢಿ ಇದ್ದರೂ ಇಷ್ಟಲಿಂಗವು ಚಿಲ್ಲಿಂಗಕ್ಕೆ ಸಾಂಕೇತಿಕವಾಗಿರುವದೆಂದೂ ಮತ್ತು ಇಷ್ಟಲಿಂಗವು ಮೂರ್ತಿ ಪೂಜೆಯಲ್ಲವೆಂಬ ವೀರಶೈವ ಸಿದ್ಧಾಂತವನ್ನು ಸ್ಥಾಪಿಸಿತು. ಅಲ್ಲದೆ ಬೌದ್ಧಮತದನಂತರ ಹಿಂದು ಜನರ ರಕ್ತದಲ್ಲಿ ಬೆರತುಹೋದ ಮೂರ್ತಿ ಪೂಜೆಯ ವಿಷಯದಲ್ಲಿ ಸ್ಥಿತ್ಯಂತರವನ್ನುಂಟುಮಾಡಿತು.

(೨) ಈ ಆಧ್ಯಾತ್ಮಿಕ ವಿದ್ಯಾಪೀಠವು ನಿರ್ಜೀವವಾದ ಧರ್ಮಕ್ಕೆ ಜೀವಕಳೆಯನ್ನು ಕೊಟ್ಟದ್ದಲ್ಲದೆ ಅದನ್ನು ಎರಡು ದೊಡ್ಡ ಕುತ್ತುಗಳಿಂದ ಪಾರುಮಾಡಿತು. ಆಗಿನ ಕಾಲದಲ್ಲಿ ಕೆಲವರು ಕೇವಲ ಬಹಿರಾಚಾರದ ವಿಧಿ ನಿಷೇಧಗಳೊಳಗಾಗಿ ಪೂರ್ಣ ಕರ್ಮಠರಾಗಿ ಹೋಗಿದ್ದರು. ಮತ್ತೆ ಕೆಲವರು ಗುಡ್ಡದಂತಹ ದೊಡ್ಡ ದೊಡ್ಡ ತತ್ವದ ಮಾತಗಳನ್ನಾಡುತ್ತ ಕ್ರಿಯಾರಹಿತರಾಗಿ ಕೇವಲ ವಾಗಾದ್ವೈತಿಗಳಾಗಿದ್ದರು. ಧರ್ಮದ ಏಕಾಂಗಗಳಾದ ಈ ಉಭಯ ಮಾರ್ಗಗಳ ಬಂಧನದಿಂದ ಧರ್ಮವನ್ನು ಮುಕ್ತಮಾಡಿ ಕ್ರಿಯೆಯು ಜ್ಞಾನಕ್ಕೆ ಸಾಧನವೆಂಬ ಸಿದ್ಧಾಂತವನ್ನು ಖಂಡನೆಮಾಡಿ ಜ್ಞಾನ ಕ್ರಿಯೆಗಳೆರಡಕ್ಕೂ ಏಕಾರ್ಥವನ್ನುಂಟುಮಾಡಿತು.

"ಕ್ರಿಯೆಯೇ ಜ್ಞಾನವು ಜ್ಞಾನವೇ ಕ್ರಿಯೆಯು. ಜ್ಞಾನವೆಂದರೆ ತಿಳಿಯುವದು ಕ್ರಿಯೆಯೆಂದರೆ ತಿಳಿದಂತೆ ಮಾಡುವದು. ಪರ ಸ್ತ್ರೀ ಭೋಗಿಸಬಾರದೆಂಬುದೇ ಜ್ಞಾನವು. ಅದರಂತೆ ಆಚರಿಸುವದೇ ಕ್ರಿಯೆಯು. ಅಂತು ಆಚರಿಸದಿದ್ದರೆ ಅದೇ ಅಜ್ಞಾನ ನೋಡಾ ಕೂಡಲ ಚನ್ನಸಂಗಮದೇವಾ."

ಹೀಗೆ ಷಟ್‌ಸ್ಥಲ ಬ್ರಹ್ಮಿಯಾದ ಶ್ರೀ. ಚನ್ನಬಸವೇಶ್ವರನ ಸಂದೇಶವೇ ಸರ್ವರ ಅನುಭವಕ್ಕೆ ಹೊಂದಿ ಪ್ರಸ್ಥಾನತ್ರಯಿಗಳಾಧಾರದೊಂದಿಗೆ ಕ್ರಿಯಾಜ್ಞಾನಾತ್ಮಕವಾದ ವೀರಶೈವ ಸಿದ್ಧಾಂತವನ್ನು ಸ್ಥಾಪಿಸಿತು.

(೩) ಈ ಧಾರ್ಮಿಕ ಪಾರ್ಲಿಮೆಂಟವು ಸ್ತ್ರೀಯರು ಪುರುಷರಿಗಿಂತ ಧಾರ್ಮಿಕ ವಿಷಯದಲ್ಲಿ ಯಾವುದರಿಂದಲೂ ಕಡಿಮೆಯವರಲ್ಲವೆಂದು ತೋರಿಸಿಕೊಟ್ಟಿತು. ಇದರಿಂದ ಸ್ತ್ರೀಯರ ಉನ್ನತಿಯು ವಿಲಕ್ಷಣವಾಗ ಆಯಿತು. ಅನೇಕ ಸ್ತ್ರೀಯರು ಶಿವಾನುಭವದಲ್ಲಿ ಪುರುಷರನ್ನು ಹಿಮ್ಮೆಟ್ಟಿಸಿದರು. ಬ್ರಾಹ್ಮಣರಾಗಲಿ, ಜೈನರಾಗಲಿ ಸ್ತ್ರೀಯರಿಗೆ ಹೀಗೆ ಅಧಿಕಾರವನ್ನು ಕೊಟ್ಟಿರಲಿಲ್ಲ. ಜೈನರು ಸ್ತ್ರೀಯರಿಗೆ ಮೋಕ್ಷವೇ ಇಲ್ಲವೆಂದು ಹೇಳಿದ್ದರು. ಬ್ರಾಹ್ಮಣರು ಅವರಿಗೆ ಮೋಕ್ಷಾಧಿಕಾರವಿದೆಯೆಂದು ಹೇಳಿದರೂ ಕೃತಿಯಲ್ಲಿ ಆ ತರಹದ ಸಂಸ್ಕಾರಗಳು ಕೊಡಲ್ಪಡುತ್ತಿರಲಿಲ್ಲವಲ್ಲದೆ ವೇದಾಧಿಕಾರವು ಮೊದಲೇ ಇಲ್ಲವೆಂದು ಹೇಳಿದ್ದರು. ಆದರೆ ವೇದಗಳಲ್ಲಿಯು ಎಷ್ಟೋ ಋಕ್ಕುಗಳನ್ನು ಸ್ವತಃ ಸ್ತ್ರೀಯರೇ ರಚಿಸಿದ್ದು ಮತ್ತು

ಯಾಜ್ಞವಲ್ಕ್ಯರು ಮೈತ್ರೇಯಿಗೆ ಬ್ರಹ್ಮಜ್ಞಾನೋಪದೇಶವನ್ನು ಮಾಡಿದ್ದು ಮೊದಲಾದ ವೇದೋಪನಿಷತ್ತುಗಳ ನಿಜಾಭಿಪ್ರಾಯವನ್ನು ಕಂಡುಹಿಡಿದು ಸ್ತ್ರೀ ಪುರುಷರಿಬ್ಬರು ಮೋಕ್ಷಕ್ಕೆ ಸಮಾನಾಧಿಕಾರಿಗಳೆಂಬ ಸತ್ಯ ಸಿದ್ಧಾಂತವನ್ನು ಜನಾಂಗದಲ್ಲಿ ಅನುಭವಕ್ಕೆ ಬರುವಂತೆ ಪ್ರಸಾರ ಮಾಡಿದುದು ಶಿವಶರಣರ ಸಂಘವೆ.

(೪) ಈ ಸಂಘವು ಚರನಾಗಲಿ ಗುರುವಾಗಲಿ ಭಕ್ತನಾಗಲಿ ಸಮಾಜದಲ್ಲಿಯ ಪ್ರತಿಯೊಬ್ಬ ವ್ಯಕ್ತಿಯು ಯಾವುದಾದರೊಂದು ಕಾಯಕ (ಉದ್ಯೋಗ) ವನ್ನು ಮಾಡಿಯೇ ಜೀವಿಸಬೇಕೆಂಬ ಕಟ್ಟಳೆಯನ್ನು ಮಾಡಿದ್ದರಿಂದ ಸಮಾಜದಲ್ಲಿ ಉದ್ಯೋಗದ ಗೌರವವು ಬೆಳೆಯಿತು. ತೋರಲಿಕ್ಕೆ ಎಷ್ಟೇ ಕೀಳು ಕೆಲಸವಾದರೂ ಅದು, ಜನಾಂಗದ ಸೇವೆಯೇ ಜಗದೀಶನ ಸೇವೆಯೆಂಬ ದೃಷ್ಟಿಯಿಂದ ಮಾಡಲ್ಪಡಬೇಕಾದ್ದರಿಂದ ಉದ್ಯೋಗವೆಲ್ಲವು ಪವಿತ್ರವಾದುದೆಂಬ ಭಾವನೆಯನ್ನು ಹುಟ್ಟಿಸಿತು. ಈ ಮೊದಲು ಉತ್ತಮ ಕುಲದವರಿಗೆ ಉತ್ತಮ ಕಸಬುಗಳು ಹೀನ ಕುಲದವರಿಗೆ ಹೀನ ಕಸಬುಗಳು ನಿಯಮವಾಗಿದ್ದು ಉತ್ತಮರು ಹೀನ ಕಸಬಿನವರನ್ನು ಪಾಪಯೋನಿಜರೆಂದು ತಿಳಿಯುತ್ತಿದ್ದರು. ಈ ವಿಷಯದಲ್ಲಿ ಈ ಅನುಭವ ಮಂಟಪವು ದೊಡ್ಡ ಕ್ರಾಂತಿಯನ್ನುಂಟುಮಾಡಿತು. ವೀರಶೈವ ಸಮಾಜದಲ್ಲಿ ಎಲ್ಲ ಕಸಬಿನವರು ದೊರೆಯುವದರಿಂದ ಇದು ಹಿಂದು ಸಮಾಜಕ್ಕೆ ಸ್ವಾವಲಂಬನದ ಮೂಲಾಕ್ಷರಗಳನ್ನೇ ಕಲಿಸಿ ಕೊಟ್ಟಿದ್ದಲ್ಲದೆ ಭರತ ಖಂಡದ ಆರ್ಥಿಕ ಶಾಸ್ತ್ರವನ್ನೇ ಬೇರೊಂದು ತಳಹದಿಯ ಮೇಲೆ ರಚಿಸಿತು.

(೫) ಈ ಅನುಭವ ಮಂಟಪವು ಪ್ರತಿಯೊಂದು ವ್ಯಕ್ತಿಗೆ ವಿಚಾರ ಸ್ವಾತಂತ್ರ್ಯವನ್ನೂ ಆಚಾರ ಸ್ವಾತಂತ್ರ್ಯವನ್ನೂ ಕೊಟ್ಟಿತು. ಆದರಿಂದ ಉಚ್ಚ ನೀಚ ಸ್ತ್ರೀ ಪುರುಷರೆಂಬ ವ್ಯತ್ಯಾಸವಿಲ್ಲದೆ ಎಲ್ಲರು ಶಿವಾನುಭವವನ್ನು ಸಂಪಾದಿಸಿಕೊಳ್ಳಲಿಕ್ಕೆ ಪ್ರಯತ್ನಿಸಲಾರಂಭಿಸಿದರು. ಇದು ಕನ್ನಡ ವಾಙ್ಮಯಕ್ಕೆ ಹೊಸ ತೇಜವನ್ನು ತಂದುಕೊಟ್ಟಿತು. ಶಿವ ಶರಣ ಶರಣೆಯರ ಹೃದಯದಿಂದ ಹೊರದೋರಿದ ಮಿಂಚಿನಂತಹ ದಿವ್ಯೋದ್ಗಾರಗಳು ಕನ್ನಡ ವಾಙ್ಮಯದಲ್ಲಿ ನವೀನ ಬೆಳಕನ್ನು ಹುಟ್ಟಿಸಿದವು. ಈ ಅನುಭವ ಮಂಟಪದ ವಿದ್ಯುತ್ ಶಕ್ತಿಯು ಇಡೀ ಸಮಾಜದಲ್ಲಿ ನವ ಚೇತನ, ನವ ಪ್ರಕಾಶ, ನವ ತೇಜವುಂಟಾಗುವಂತೆ ಮಾಡಿತು. ಆದರಿಂದ ಪಾಪಿಗಳೂ ನೀಚರೂ ಎಂದೆನಿಸಿಕೊಳ್ಳುವವರು ಕೂಡಾ ಪಾವನರಾದರು. ಇವರು ತಮ್ಮ ನೀಚತನವನ್ನು ಬಿಟ್ಟು ಉತ್ತಮ ಮಾರ್ಗಾವಲಂಬಿಗಳಾದರು. ಒಟ್ಟಿನಮೇಲೆ ಹೇಳುವದೇನಂದರೆ ಬಸವಾವತಾರ ಕಾಲಕ್ಕೆ ಹಿಂದುಸ್ಥಾನದಲ್ಲಿ ಅದರಲ್ಲಿ ವಿಶೇಷವಾಗಿ ದಕ್ಷಿಣ ಹಿಂದುಸ್ಥಾನದಲ್ಲಿ ಕರ್ಮಠತನವು ಧೃಢವಾಗಿ ನೆಲೆಗೊಂಡಿತ್ತು. ಕೇವಲ ಶಬ್ದ ಪ್ರಾಮಾಣ್ಯವು ಅರ್ಥಾತ್ ಶ್ರುತಿ ಸ್ಮೃತ್ಯಾದಿಗಳ ವಚನಗಳಂತೆ ನಡೆಯುವದೇ ಧರ್ಮವೆಂಬ ಅಭಿಪ್ರಾಯವು ಬಹುಮತವಾಗಿತ್ತು. ಇದರಿಂದ ಜನಾಂಗದಲ್ಲಿ ಬೇಕಾದಷ್ಟು ಅನೀತಿಯಿಂದ ನಡೆದು ಕೂಡಾ ಧರ್ಮದ ಬಹಿರಾಚರಣೆಗಳನ್ನು ಮಾತ್ರ ಕವಾಯಿತದಂತೆ ಮಾಡಿದರೆ ಸದ್ಗತಿಯು ದೊರೆಯುವದೆಂಬ ಅಂಧ ಶ್ರದ್ಧೆಯು ಎಲ್ಲ ಕಡೆಗೂ ವ್ಯಾಪಿಸಿತ್ತು. ಇದನ್ನು ನೋಡಿ ತನ್ನ ಬಾಲ್ಯಾವಸ್ಥೆಯಲ್ಲಿಯೇ ಸತ್ಯನಿಷ್ಠ, ನ್ಯಾಯಪ್ರಿಯನಾದ ಬಸವಾಚಾರ್ಯನು ಶೃತಿ ಸ್ಮೃತ್ಯಾದಿಗಳ ಸತ್ಯಾರ್ಥವನ್ನು ಮನನ ಮಾಡಿಕೊಂಡು ಧರ್ಮಾಚರಣೆಯನ್ನು ನಿರ್ಣಯಿಸಲಿಕ್ಕೆ ಕೇವಲ ಧರ್ಮ ಶಾಸ್ತ್ರಗಳ ವಚನಗಳು ಅಪೂರ್ಣವಾದವುಗಳೆಂದೂ ಒಂದು ವೇಳೆ ಕರ್ಮಠರ ಅಭಿಪ್ರಾಯದ ಮೇರೆಗೆ ಶಾಸ್ತ್ರಗಳ ವಚನಗಳನ್ನೇ ಪ್ರಮಾಣವಾಗಿ ಗ್ರಹಿಸಬೇಕೆಂದರು ಕೂಡಾ ಧರ್ಮಾಚರಣೆಯನ್ನು ನಿಶ್ಚಯಿಸುವದಕ್ಕೆ ಹ್ಯಾಗೆ ತೊಂದರೆಯಾಗುತ್ತದೆಂಬುವ ವಿಷಯವನ್ನೂ ಸಪ್ರಮಾಣವಾಗಿ ಸಿದ್ಧಮಾಡಿ ತೋರಿಸಿದನು.

ಧರ್ಮಶಾಸ್ತ್ರವು ಒಂದು ಕಡೆ "ಅಗ್ನಿಷೋಮೀಯಂ ಪಶುಮಾಲಭೇತ." ಅಂದರೆ ಅಗ್ನಿ ದೇವನ ಸಲುವಾಗಿ ಪಶುವನ್ನು ಕೊಲ್ಲು ಎಂದು ಆಜ್ಞಾಪಿಸುತ್ತದೆ. ಮತ್ತೊಂದು ಕಡೆ "ಮಾ ಹಿಂಸ್ಯಾತ್ ಸರ್ವ ಭೂತಾನಿ." ಅಂದರೆ ಯಾವ ಪ್ರಾಣಿಯನ್ನು ಯಾವ ಕಾರಣದಿಂದಲೂ ಕೊಲ್ಲಬೇಡವೆಂದು ಆಜ್ಞಾಪಿಸುತ್ತದೆ. ಮತ್ತು ಮೃತನಾದ ಪತಿಯ ಕೂಡ ಸಹಗಮನ ಮಾಡುವದು ಧರ್ಮವೆಂದು ಒಂದು ಕಡೆ ಆಜ್ಞಾ ಮಾಡಿದರೆ ಮತ್ತೊಂದು ಕಡೆ ಮೃತ ಪತಿಯ ಕೂಡ ಸಹಗಮನ ಮಾಡಿದರೆ ಆತ್ಮ ಹತ್ಯ ದೋಷ ಬರದು ಮುಂದೆ ಭಿಕ್ಷುಣಿಯಾಗಿ ಹುಟ್ಟುವಳು, ಕಾರಣ ಸಹಗಮನ ಮಾಡಬಾರದೆಂದು ಆಜ್ಞಾಪಿಸುತ್ತದೆ. ಹೀಗೆ ಪರಸ್ಪರ ವಿರೋಧವಾದ ವಾಕ್ಯಗಳು ಧರ್ಮ ಶಾಸ್ತ್ರದಲ್ಲಿ ಹೇರಳವಾಗಿ ದೊರೆಯುವದರಿಂದ ಇವುಗಳಲ್ಲಿ ಯಾವದನ್ನು ಅನುಸರಿಸಬೇಕು? ಮತ್ತು ಯಾವುದನ್ನು ಬಿಡಬೇಕು? ಇಲ್ಲಿ ಧೂರ್ತವಾದಿಗಳು (ಕರ್ಮಠರು) ದಿಙ್ಮೂಢರಾಗಿ ಕುಳಿತುಬಿಡುತ್ತಾರೆ ಧರ್ಮ ನಿರ್ಣಯವನ್ನು ಮಾಡುವ ಮಾರ್ಗವನ್ನು ಮನುವು ಸ್ಪಷ್ಟವಾಗಿ ಹೇಳಿದ್ದಾನೆ. **"ಪ್ರತ್ಯಕ್ಷಂಚಾನುಮಾನಂಚ ಶಾಸ್ತ್ರಂಚ ವಿವಿಧಾಗಮಂ" "ತ್ರಯಂ ಸುವಿದಿತಂ ಕಾರ್ಯಂ ಧರ್ಮಶುದ್ಧಿಮಭೀಪ್ಸತಾ"** ||೧|| ಅಂದರೆ ಪ್ರತ್ಯಕ್ಷಾನುಭವ, ಅನುಮಾನ, ಮತ್ತು ಶಾಸ್ತ್ರ ವಚನ ಈ ಮೂರರಿಂದ ಧರ್ಮವನ್ನು ನಿರ್ಣಯಿಸಬೇಕು. **ಅದರಲ್ಲಿ ವಿಶೇಷವಾಗಿ ಅಗ್ರಸ್ಥಾನವನ್ನು ಅನುಭವಕ್ಕೇನೇ ಕೊಟ್ಟಿರುತ್ತಾನೆ. ಇದಕ್ಕನುಸರಿಸಿಯೇ ಹಿಂದು ಧರ್ಮ ಸುಧಾರಕರಲ್ಲಿ ಅಗ್ರಗಣ್ಯನಾದ ಬಸವಾಚಾರ್ಯನು, ಕರ್ಮಠರಂತೆ ಕೇವಲ ಶಬ್ದಗಳಿಗೆ ವಿಶೇಷ ಮಹತ್ವ ಕೊಡದೆ ಮೊದಲು ನಡೆಯುವದು ಆಮೇಲೆ ನುಡಿಯುವದು ಎಂದು ನಿಶ್ಚಯಿಸಿ ಪ್ರತ್ಯಕ್ಷಾನುಭವಕ್ಕೆ ಮಹತ್ವಕೊಟ್ಟು ಅನುಭವ ಮಂಟಪವೆಂಬ ಹೊಸ ಮಾದರಿ ಸಂಸ್ಥೆಯನ್ನು ಸ್ಥಾಪಿಸಿ ಸತ್ತು ಹೋಗುತ್ತಿದ್ದ ಧರ್ಮಕ್ಕೆ ನವಜೀವನವನ್ನು ತಂದು ಕೊಟ್ಟನು.**

ಪ್ರತಿಯೊಬ್ಬನು ಯಾವ ಪ್ರಾಣಿಯಿಂದಲೂ ಯಾವ ಕಾಲದಲ್ಲಿಯೂ ಯಾವ ರೀತಿಯಿಂದಲೂ ತನಗೆ ಅಪಾಯ ಸಂಭವಿಸಬಾರದೆಂದು ಹ್ಯಾಗೆ ಅಪೇಕ್ಷಿಸುತ್ತಿರುವನೋ ಹಾಗೆಯೇ ಸಕಲ ಪ್ರಾಣಿಗಳು ಕೂಡಾ ಅಪೇಕ್ಷಿಸುತ್ತವೆ. ಎಂಬುದನ್ನು ಅನುಭವದಿಂದ ಕಂಡುಹಿಡಿದು "ದಯವಿಲ್ಲದ ಧರ್ಮದಾವುದಯ್ಯಾ, ದಯವಿರಬೇಕು ಸರ್ವ ಪ್ರಾಣಿಗಳಲ್ಲಿ; ದಯೆಯೇ ಧರ್ಮದ ಮೂಲವಯ್ಯಾ; ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯಾ." ಎಂದು ಅನುಭವಕ್ಕೆ ಹೊಂದುವ ಧರ್ಮ ಸಿದ್ಧಾಂತವನ್ನು "ಮಾ ಹಿಂಸ್ಯಾತ್ ಸರ್ವ ಭೂತಾನಿ." ಎಂಬ ಶಾಸ್ತ್ರ ವಚನಪ್ರಕಾರ ಸಿದ್ಧಮಾಡಿದನು. "ಅಗ್ನಿಷೋಮೀಯಂ ಪಶುಮಾಲಭೇತ." ಎಂಬ ಶಾಸ್ತ್ರ ವಚನವು ಅನುಭವಕ್ಕೆ ವಿರೋಧವಾದುದರಿಂದ ಅದನ್ನ ಅದಕ್ಕೆ ಸಂಬಂಧಿಸಿದ ಯಜ್ಞಯಾಗಾದಿಗಳನ್ನು ಒಳ್ಳೇ ಕಠೋರತನದಿಂದ ಖಂಡಿಸಿದನು.

ಹೀಗೆ ಪ್ರತ್ಯಕ್ಷಾನುಭವಕ್ಕೆ ಹೊಂದಿಯೇ ಧರ್ಮ ನಿರ್ಣಯವನ್ನು ಮಾಡುವದು ನೈಜವಾದ ಮಾರ್ಗವು; ಕಲಂಕರಹಿತವಾದ ಕ್ರಮವು. ಈ ೨೦ ನೇ ಶತಮಾನದಲ್ಲಿ ಇಡೀ ಜಗತ್ತಿನ ತುಂಬೆಲ್ಲ ನಿಜವಾದ ಧರ್ಮ ಸ್ವರೂಪವನ್ನು ನಿರ್ಣಯಿಸುವದಕ್ಕೆ ಪುರುಷ ಬುದ್ಧಿಗೆ ಅರ್ಥಾತ್ ಪ್ರತ್ಯಕ್ಷಾನುಭವಕ್ಕೆ ಅಧಿಕ ಮಹತ್ವವನ್ನು ಕೊಟ್ಟು ಮಹಾ ಮಹೋಪಾಧ್ಯಾಯರೂ ಪಂಡಿತರೂ ಪದವೀ

ನಿಜವಾದ ಯಜ್ಞ ಯಾವುದು?

ಹಿಂದು ರಾಷ್ಟ್ರದ ಉದ್ಧಾರಕ್ಕೆ ಯಾವ ಪರಿಸ್ಥಿತಿಯಲ್ಲಿ ಯಾವ ಕೃತ್ಯವು ಪ್ರತ್ಯಕ್ಷವಾಗಿ ಆವಶ್ಯಕವಾದದ್ದೂ ಮತ್ತು ಲಾಭದಾಯಕವೂ ಆಗಿದೆಯೋ ಅದನ್ನು ಸಂಪಾದಿಸುವದೇ ಆ ಪರಿಸ್ಥಿತಿಯಲ್ಲಿಯ ಯಜ್ಞ.

(ಬ್ಯಾ. ಸಾವರಕರರ ಉತ್ತರಾರ್ಧ ಲೇಖನದ ಸಂಕ್ಷಿಪ್ತ ಅನುವಾದ.)

ಅಗ್ನಿ ಪೂಜೆ.

ಅತ್ಯಂತ ಪ್ರಾಚೀನ ಕಾಲದಲ್ಲಿ ಬೆಂಕಿಯನ್ನು ಹೊತ್ತಿಸುವದೆಂದರೆ ಒಳ್ಳೇ ದುರ್ಘಟವಾದ ಕಾರ್ಯವಾಗಿದ್ದಿತು. ಒಮ್ಮೆ ಬೆಂಕಿಯನ್ನು ಹೊತ್ತಿಸಿದರೆ ಅದು ನೊಂದಿಹೋಗದಂತೆ ಸತತವಾಗಿ ಕಾಯಬೇಕಾಗುತ್ತಿತ್ತು. ಅದೇ ಕ್ರಿಯೆಯು ಧಾರ್ಮಿಕ ರೀತಿಯಲ್ಲಿ ಮಾರ್ಪಾಟಾಗಿ ಅಗ್ನಿಹೋತ್ರವಾಯಿತು. ಬರಬರುತ್ತ ಇದೇ ಉದ್ದೇಶವೇ ಒಂದು ಮಹತ್ವದ ಆಚಾರವಾಗಿ ಪರಿಣಮಿಸಿ ವಿಕೋಪಕ್ಕೆ ಹೋಯಿತು. ಪ್ರಾಚೀನರ ಉದ್ದೇಶವು ಈಗ ಕಡ್ಡಿಪೆಟ್ಟಿಗೆ ಅಥವಾ ವಿದ್ಯುದ್ಯಂತ್ರಗಳ ಸಹಾಯದಿಂದ ಸುಲಭವಾಗಿ ಸಾಧ್ಯವಾಗಿರುತ್ತಿರಲು ಪೂರ್ವದಂತೆಯೇ ಕಟ್ಟಿಗೆಯನ್ನು ಕಟ್ಟಿಗೆಯಿಂದ ತಿಕ್ಕುತ್ತ ತಿಕ್ಕುತ್ತ ಬೆಂಕಿಯನ್ನು ಹೊತ್ತಿಸಿ, ಪ್ರಜ್ವಲಿತವಾದ ಅಗ್ನಿಯಲ್ಲಿ ತುಪ್ಪವನ್ನು ಸುರುವಿ ಮಂತ್ರ ಪಠನ ಮಾಡುತ್ತ ಕೂಡ್ರುವದು ಎಂಥ ವಿಚಾರ! ಎಂಥ ಆಚಾರ! ಇನ್ನು ಸತತವಾಗಿ ಅಗ್ನಿಯನ್ನು ಹೊತ್ತಿಡುವ ಪದ್ಧತಿಯಾದರೊ ಶೀತವಲಯದಲ್ಲಿ ಉಪಯುಕ್ತವಾದುದು. ನಮ್ಮ ಉಷ್ಣ ಪ್ರದೇಶದಲ್ಲಿ ಸತತವಾಗಿ ಹೊತ್ತಿಟ್ಟು ಪಂತಪಿಸುತ್ತ ಕೂಡ್ರುವದರಲ್ಲಿ ಅರ್ಥವೇನಿದೆ?

ಯಜ್ಞ ಕರ್ಮವು ವಿಕೋಪಕ್ಕೆ ಹೋದ ಪ್ರತಿಫಲವಾಗಿ ಪಶುಹನನ ಯಜ್ಞವು ರೂಢವಾಯಿತಷ್ಟೆ. ಧರ್ಮ ಪುಸ್ತಕದ ಆಜ್ಞೆಯೆಂದು ಪಶುಹನನ ಮಾಡುವ ಗರ್ಹಣೀಯ ಆಚಾರವನ್ನು ಈ ಮೊದಲೇ ವಿವರಿಸಿದೆ. ಆದರೆ ಪುಷ್ಟ ಪಶುವಿಗೆ ಬದಲಾಗಿ ಪಿಷ್ಟ ಪಶುಹನನ ಮಾಡುವದೂ ಕೆಲವರಲ್ಲಿದೆ. ಆದರೆ ಈ ಪದ್ಧತಿಯು ದೇವರಿಗೆ ವಂಚನೆ ಮಾಡಿದಂತೆಯೇ ಸರಿ. ಪಶುವಿನ ಕಾಲಿನ, ಬೆನ್ನಿನ, ಮಜ್ಜಾ ದ್ರವ್ಯದ, ವಿಶೇಷವೇನು ಹೃದಯದ ಮಾಂಸವನ್ನೂ ನುಣ್ಣಗೆ ಬಣ್ಣಿಸುವ ವಿವಿಧ ಮಂತ್ರಗಳನ್ನು ಸಾರ್ವಲೌಕಿಕವಾಗಿ ಉಚ್ಚರಿಸಿ ದೇವನಿಗೆ ಆಹ್ವಾನ ಮಾಡಿ ಅವನ ಮುಂದೆ 'ಪಶುವೆಂದು ತಿಳಿದು ಹಿಟ್ಟನ್ನು ತಿನ್ನು' ಎಂದರೆ ಆಮಂತ್ರಣ ಕೊಟ್ಟ ಅವನಿಗೆ ವಂಚಿಸಿದಂತಲ್ಲವೆ? ದೇವನು 'ಪಶು' ವೆಂಬ ಶಬ್ದವನ್ನು ಮಾತ್ರ ತಿನ್ನಲಿಕ್ಕೆ ಬಂದಿರುವನೆ? ಹಾಲೆಂದು ಹೇಳಿ ಹಿಟ್ಟಿನ ನೀರು ಕುಡಿಸಿದ ಮಾತ್ರಕ್ಕೆ ಹಾಲು ಕುಡಿದೆನೆಂದು ಹಿಗ್ಗಿ ಕುಣಿದಾಡಿದ ದ್ರೋಣ ಪುತ್ರನಂತೆ ದೇವನೇನು ವಿಚಾರವಿಲ್ಲದ ಬಾಲಕನೇ? ಪಾಪ! ಸಹಸ್ರಾರು ಸಂವತ್ಸರಗಳಿಂದ ಸ್ವಾದಿಷ್ಟವಾದ ಸುರುಚಿರ ಮಾಂಸವನ್ನಾಸ್ವಾದನ ಮಾಡಿದ ದೇವನಿಗೆ ಈಗ ಉಪ್ಪು ಕಾರ ಸಹ ಹಾಕದ 'ಪಿಷ್ಟ' ವನ್ನು ಅರ್ಪಿಸಿದರೆ ಮೋಸ ಹೋಗುವನೆ?

ಇನ್ನು ಅಪಶುಹನನವೂ ಒಂದ ವಿಧ ಯಜ್ಞದಲ್ಲಿದೆ. ದೇವರಿಗೆ ಕೇವಲ ಪಶುವನ್ನು ತೋರಿಸಿ ಬಿಟ್ಟುಬಿಟ್ಟರಾಯಿತು; ಎಂದು ಕೆಲವರ ಸಲಹೆ. ಇದು ಮೇಲಿನ ಪದ್ಧತಿಗಿಂತಲೂ ಹೆಚ್ಚು ಕರಿಣಾತರವಾದದ್ದು. ವೇದದ ಅನೇಕ ಮಂತ್ರಗಳಲ್ಲಿ ವರ್ಣಿಸಿದಂತೆ ದೇವನಿಗೆ ಪಶುವು ಕಣ್ಣಿನಿಂದ ನೋಡಲಿಕ್ಕೆ ಬೇಕಾಗಿಲ್ಲ; ತಿನ್ನಲಿಕ್ಕೆ ಬೇಕಾಗಿದೆ. ಪಶುವಿನ ಭಿನ್ನ ಭಿನ್ನ ಅಂಗಾಂಗಗಳ ಮಾಂಸವನ್ನು ಬಾಯಿಯಲ್ಲಿ ನೀರು ಬರುವಂತೆ ವರ್ಣಿಸಿ ಆಮೇಲೆ ಪಶುವನ್ನು ತೋರಿಸಿ ಮಾತ್ರ ಬಿಟ್ಟರೆ ದೇವನಿಗೆ ಆದೆಷ್ಟು ನಿರಾಸೆಯಾಗಲಿಕ್ಕಿಲ್ಲ! ಬುಂದೆ, ಜಲೇಬಿಯ ಊಟ ಮಾಡಿಸುತ್ತೇನೆಂದು ಆಮಂತ್ರಣ ಹೇಳಿ ಅವುಗಳನ್ನು ಕಣ್ಣು ಮುಂದೆ ಮಾತ್ರ ಇಟ್ಟು ಪುನಃ ಅಂಗಡಿಕಾರನಲ್ಲಿಗೆ ತಿರುಗಿ ಕಳಿಸಿ ಕೊಟ್ಟರೆ ಅಥವಾ ಅನ್ಯರಿಗೆ ಹಂಚಿದರೆ ಆಮಂತ್ರಿತನಿಗೆ ಎಷ್ಟು ಕೋಪ ತಾಪವಾಗಲಿಕ್ಕಿಲ್ಲ! "ಪಶುವಿನ ರುಚಿರ ಮಾಂಸವನ್ನು ಕೊಡುತ್ತೇನೆ ಬಾ ಬಾ; ಬಾ." ಎಂದು ಆಹ್ವಾನದ ಮೇಲೆ ಆಹ್ವಾನ ಕೊಟ್ಟು ಕೇವಲ ಪಶುವನ್ನು ಮಾತ್ರ ತೋರಿಸಿ 'ಹೋಗು ಈಗ' ಎಂದರೆ ದೇವನಿಗೆ ಇದು ಚೇಷ್ಟೆಯೆಂದು ಅನಿಸಲಿಕ್ಕಿಲ್ಲವೇ?

ಇನ್ನು ಕೆಲವರಿಗೆ ಇಹ ಲೋಕದ ಆಶೆಯಿಲ್ಲವಂತೆ. ಯಜ್ಞದಿಂದ ಪಾರಲೌಕಿಕ ಫಲವನ್ನೇ ಹೊಂದಬೇಕಂತೆ. ಪಶುವನ್ನು ಕೊಲ್ಲುವದೂ ಬೇಡ; ತೋರಿಸುವದೂ ಬೇಡ; ಎಂದು ಅವರ ಹೇಳಿಕೆ. ಅವರ ಮಾತಿನಂತೆ ನೋಡಿದರೂ ಈ ಪಾರಲೌಕಿಕ ಯಜ್ಞ ಲಾಭವು ದೊರೆಯಬೇಕಾದರೆ ಶಾಸ್ತ್ರ ವಚನಗಳನ್ನು ಸ್ವಲ್ಪವೂ ತಪ್ಪದಂತೆ ಆಚರಿಸಬೇಕಷ್ಟೆ. ಪಶುಹನನವನ್ನು ಹೀಗೆಯೇ ಮಾಡಬೇಕು. ವಪ, ನಸಾ, ಮಿದುಳು, ಮಜ್ಜೆ, ರಸ, ರಕ್ತ ಮೊದಲಾದವುಗಳನ್ನು ಕಡಿಯುವದು, ಸುಡುವದು, ತಿನ್ನುವದು ಮೊದಲಾದವನ್ನು ಈ ರೀತಿಯಿಂದಲೇ ಮಾಡಬೇಕೆಂದು ವೇದದಲ್ಲಿ ಸ್ಪಷ್ಟವಾಗಿ ಹೇಳಿದೆ. ವೇದದ ಆ ವಾಕ್ಯದ ಅರ್ಥವನ್ನು ಮ.ಹಾ ಮಹಾ ಆಚಾರ್ಯರು ಅನೇಕ ಪ್ರಕಾರವಾಗಿ ಮಾಡುತ್ತಾರೆ. ಇನ್ನು ಪಶುಹನನವನ್ನು ವಿರೋಧಿಸುವ ಕೆಲ ಮಂತ್ರಗಳೂ ಅಲ್ಲಲ್ಲಿ ಕಂಡು ಬರುತ್ತವೆ. ಕೆಲವರು ಪಶುವನ್ನು ಕೊಲ್ಲುವದೇ ಯುಕ್ತವೆಂದು ಹೇಳಿದರೆ ಇನ್ನು ಕೆಲವರು ಕೊಲ್ಲಬಾರದು, ತೋರಿಸಿ ಬಿಡಬೇಕು ಎಂದು ಹೇಳುತ್ತಾರೆ. ಉಭಯ ಪಕ್ಷದವರೂ ಮಹಾ ಮಹಾ ಪಂಡಿತರೇ ಇರುತ್ತಾರೆ. ಇಂಥಲ್ಲಿ ಸಮನ್ವಯ ಮಾಡುವದು ಹೇಗೆ?

ಧರರೂ ಮಹಾತ್ಮರೂ ದೇಶ ಭಕ್ತರೂ ಧರ್ಮ ಭಕ್ತರೂ ಅನೇಕ ಗ್ರಂಥಗಳನ್ನು ಬರೆದು ಅನೇಕ ಅನೇಕ ಸಂಸ್ಥೆಗಳನ್ನು ಸ್ಥಾಪಿಸಿ ತನ್ಮೂಲಕ ಲೋಕ ಜಾಗೃತಿಯನ್ನು ಮಾಡುತ್ತಿರುವದನ್ನು ನೋಡಿದರೆ ಧರ್ಮ ಸ್ವರೂಪ ನಿರ್ಣಯಕ್ಕೆ ಬಸವಾಚಾರ್ಯನು ಸ್ಥಾಪಿಸಿದ ಅನುಭವ ಮಂಟಪದ ಅರ್ಥಾತ್ ಧಾರ್ಮಿಕ ಪಾರ್ಲಿಮೆಂಟದ ಕೀರ್ತಿಯನ್ನೇ ಸರ್ವರೂ ತೀಡುತ್ತಿರುವರೆಂಬುದನ್ನು ವೀರಶೈವ ಸಿದ್ಧಾಂತವನ್ನು ಬಲ್ಲ ಪ್ರತಿಯೊಬ್ಬನು ಒಪ್ಪಬಹುದಾದ ಮಾತಾಗಿದೆ. ಇದಕ್ಕಾಗಿ ಭಗವಾನ್ ಬಸವಾಚಾರ್ಯನ ವಿಷಯದಲ್ಲಿ ಸಕಲ ವೀರಶೈವರು ಎಷ್ಟು ಧನ್ಯವಾದಗಳನ್ನರ್ಪಿಸಿದರೂ ಕಡಿಮೆಯಾದುದಲ್ಲವೆ?

ಈ ಎಲ್ಲ ತೊಂದರೆಗಳನ್ನು ತಪ್ಪಿಸಬೇಕಾದರೆ ಕೆಲ ಮಹಾ ಂಡಿತರು ಅಭಿಪ್ರಾಯಪಡುವಂತೆ; "ವೇದದಲ್ಲಿ ಪಶು ಹನನವನ್ನು ೃಷ್ಟ್ಯಾ ಹೇಳಿಲ್ಲ ಮಾಂಸವೆಂದರೆ ಮಾಷ. ಅದೊಂದು ತರದ ೇಳೆ. ಪಶು ಹನನ ಪ್ರಕರಣವೆಲ್ಲ ರೂಪಕವಾಗಿದೆ." ಎನ್ನುವದು ೀಯಸ್ಕರವಾದುದು. ಈ ಪ್ರಕಾರದ ಭಿನ್ನಾಭಿಪ್ರಾಯವು ನಿವಾ ಕೆಯಾಗಬೇಕಾದರೆ ಸ್ವಂತ ಅನುಭವದಿಂದಲೇ ಶಕ್ಯ.

ಅರ್ವಾಚೀನ ಕಾಲದಲ್ಲಿ ಕೆಲ ಸ.ಧಾರಕರು ಯಜ್ಞ ಪಕ್ಷ ಪಾತಿಗಳಾಗಿ ಹೀಗೆ ಹೇಳುತ್ತಾರೆ—"ಯಜ್ಞಾದ್ಭವತಿ ಪರ್ಜನ್ಯೋ"! ತ್ಯಾದಿ. ಯಜ್ಞಾಗ್ನಿಯ ವಿಪರೀತ ತಾಪದಿಂದ ಮೋಡಗಳುಂ ಾಗಿ ಮಳೆಯು ಬೀಳುತ್ತದೆ. ಇದು ವಿಜ್ಞಾನ ಶಾಸ್ತ್ರಕ್ಕೆ ಅನು ಾಲವಾದುದಾಗಿಯೇ ಇದೆ. ನಮ್ಮ ದೇಶಕ್ಕೆ ವಿಪುಲ ಮಳೆ ಬೇಕು. ಂದ ಮೇಲೆ ದೊಡ್ಡ ಯಜ್ಞಗಳನ್ನು ಮಾಡಿ ಉತ್ಪಾದನವಾಗು ಂತೆ ಏಕೆ ಮಾಡಬಾರದು?

ಉತ್ಪಾದನದಿಂದ ಮಳೆಯಾಗುವದೆಂಬ ಸೃಷ್ಟಿ ನಿಯಮದ ೇಲಿಂದ ಯಜ್ಞವನ್ನು ಮಾಡಬೇಕೆಂಬುವವರು ಈ ಕೆಳಗಿನ ಾತನ್ನು ಲಕ್ಷದಲ್ಲಿಡಬೇಕು— ಪ್ರಚಲಿತ ಕಾಲವೊತ್ತಟ್ಟಿಗಿರಲಿ. ್ರಾಚೀನ ಕಾಲದಲ್ಲಿಯೇ ಸಮುದ್ರಗುಪ್ತನಂಥ ಮಹಾ ಮಹಾ ಮ್ರಾಟರು ಯಜ್ಞ ಪುರಸ್ಕರ್ತರಾಗಿದ್ದಾಗ್ಯೂ ತಮ್ಮ ಪ್ರಜೆಗಳಿಗೆ ರಗಾಲದ ಭೀತಿಯಾಗಕೂಡದೆಂದು ದೊಡ್ಡ ದೊಡ್ಡ ಕೆರೆ ಕಾಲಿವೆ ಳನ್ನೇಕೆ ಕಡಿಸಿದರು? ದೊಡ್ಡ ದೊಡ್ಡ ಯಜ್ಞ ಮಾಡಿ ಮಳೆ ರುವದು ಅವರಿಗೆ ಸಾಧ್ಯವಿಲ್ಲದೆ ಹೋಯಿತೆ? ಎಂದೂ ಯಜ್ಞ ನ್ನೇ ಮಾಡದ ರಾಷ್ಟ್ರಗಳಲ್ಲಿ ಬರಗಾಲವು ಹಿಮ್ಮೆಟ್ಟುತ್ತಲಿದೆ. ದರೆ ದ್ವಾದಶ ವಾರ್ಷಿಕ ಯಜ್ಞದಿಂದ ಕಳೆದ ಕುರಂದವಾಡದ ಯಜ್ಞದವರೆಗೆ ಈ ಭಾರತ ಭೂಮಿಯಲ್ಲಿ ಬರಗಾಲದ ಉತ್ಪಾದ ವೇಕಾಗಿದೆ?

ಬರಗಾಲ ನಿವಾರಣೆಗೆ ವಿಜ್ಞಾನ ಶಾಸ್ತ್ರದ ಸಹಾಯವು ಅ ಶ್ಯಕವಾಗಿದೆ. ಈಗ ರಶಿಯಾ ಮೊದಲಾದ ದೇಶಗಳಲ್ಲಿ ಮಳೆಗರೆ ಯುವ ಯಂತ್ರಗಳನ್ನು ಶೋಧಿಸಿದ್ದು ಅವುಗಳ ಸಹಾಯದಿಂದ ಮಗೆ ಬೇಕಾದಾಗ ಕಾಲಕ್ಕೆ ಬೇಕಾದಷ್ಟು ಮಳೆಯನ್ನು ಬೀಳಿಸಿ ೂಳ್ಳುವಂತೆ ಈ ಯಜ್ಞದ ಉತ್ಪಾದನದಿಂದ ಶಕ್ಯವೆ? 'ಯಜ್ಞಾದ್ಭ ತಿ ಪರ್ಜನ್ಯೋ' ಈ ಸೂತ್ರದ ಬದಲು "ವಿಜ್ಞಾನಾದೇವ ಪರ್ಜನ್ಯೋ" ಂಬ ಸೂತ್ರವು ಈಗಿನ ಕಾಲಕ್ಕೆ ಹೆಚ್ಚು ಸಯುಕ್ತಿಕವಾಗಿಲ್ಲವೇ?

ಯಜ್ಞ ಮತ್ತು ಸಂಸ್ಕೃತಿ.

ಇನ್ನು ಕೆಲವು ಅಧುನಿಕರು ಯಜ್ಞವು ಆರ್ಯ ಸಂಸ್ಕೃ ಯ ದ್ಯೋತಕವೆಂದೂ ಸಂಸ್ಕೃತಿ ರಕ್ಷಣಾರ್ಥವಾಗಿಯಾದರೂ ಯಜ್ಞವನ್ನಾಚರಿಸಬೇಕೆಂದೂ ಪ್ರತಿಪಾದಿಸುತ್ತಾರೆ. ಪ್ರಾಚೀನ ಾಲದಲ್ಲಿ ಯಜ್ಞವು ಸಂಸ್ಕೃತಿಯ ಕೇಂದ್ರವಾಗಿರಬಹುದೆಂದು ಪ್ಪಿದರೂ ಸದ್ಯದ ಕಾಲದಲ್ಲಿ ಆ ಪ್ರಾಚೀನ ಆಚರಣೆಗಳೆಲ್ಲ ಸಂಸ್ಕೃತಿ" ವೇ ಎಂದೆನ್ನಲಿಕ್ಕಾಗದು. ಯಜ್ಞದಲ್ಲಿ ನೃಯಜ್ಞವೂ ಂದು ಪ್ರಕಾರವಿದ್ದಿತು. ಅದ್ದರಿಂದ ಆ ನಮ್ಮ ನೃಯಜ್ಞ 'ಸಂ ೃತಿ' ಯ ನೆನಪಿಗಾಗಿ ಆಗಾಗ್ಗೆ ೩-೪ ವರ್ಷಗಳಿಗೊಮ್ಮೆ ನರ ೀಧವನ್ನು ಮಾಡಬಹುದೆ? ಶಾಸ್ತ್ರದ ಪ್ರಕಾರ ಪೂರ್ವ ಕಾಲದಲ್ಲಿ ಾಹದ ಮಾಂಸವನ್ನು ಬ್ರಾಹ್ಮಣರಿಗೆ ತಿನ್ನಲಿಕ್ಕೆ ಹಾಕುತ್ತಿದ್ದರು. ೀನ್ನ, ಪಕ್ಷಿ ಮೊದಲಾದವುಗಳ ಅನೇಕ ಪ್ರಕಾರದ ಮಾಂಸಗಳ ಂದು ಪಟ್ಟಿಯನ್ನೇ "ಶ್ರಾದ್ಧೀಯ" ವೆಂದು ಮನುಸ್ಮೃತಿಯಲ್ಲಿ ೂಟ್ಟಿದೆ. "ನಿಯುಕ್ತಸ್ತು ಯಥಾ ಶಾಸ್ತ್ರಂ ಯೋ ಮಾಂಸಂ ನಾತ್ತಿ ಾನವಃ। ಸಪ್ರೇತ್ಯ ಪಶುತಾಂ ಯಾತಿ ಸಂಭವಾನ್ನೇಕ ವಿಂಶತಿ ಮ್" ಎಂದು ಆ ಮನುಮಹಾರಾಯನು, ಪಶು ಮಾಂಸ ತಿನ್ನ ದ್ದರೆ ೨೧ ಜನ್ಮ ಪಶುಯೋನಿಯಲ್ಲಿ ಜನ್ಮಿಸಬೇಕಾಗುವದೆಂದು ೇಳಿರುವನಲ್ಲವೆ? ಇದು ಈಗ 'ಸಂಸ್ಕೃತಿ ಯೆಂದು ಆಚರಿಸಲು ಶಕ್ಯವೆ? ಪ್ರಾಚೀನ ಕಾಲದಲ್ಲಿ ಪ್ರತ್ಯಕ್ಷ ಧರ್ಮರಾಜನು ದ್ಯೂತ ವನ್ನಾಡಿ ರಾಜ್ಯವನ್ನೂ ಧರ್ಮ ಪತ್ನಿಯನ್ನೂ ಪಣಕ್ಕೆ ಹಚ್ಚಿದನು. ಅದು ಈಗ ಧರ್ಮ ಸಂಸ್ಕೃತಿಯೆಂದೆನ್ನಬಹುದೆ?

ಸಂಸ್ಕೃತಿ ರಕ್ಷಣೆಯು ಹೇಗೆ?

ಪ್ರಾಚೀನ ಕಾಲದ ಜನರ ಜ್ಞಾನಾಜ್ಞಾನದಮೂಲಕ ಉಂಟಾದ ಸಂಸ್ಕೃತಿ ದುಷ್ಕೃತಿಗಳನ್ನೆಲ್ಲಾ 'ಸಂಸ್ಕೃತಿ' ಯೆಂದು ಆಚರಿಸಲೇಬೇಕೆಂದು ಹೇಳಿದರೆ ಸಂಸ್ಕೃತಿ ರಕ್ಷಣೆ ಮಾಡಿದಂತಲ್ಲ. ಪ್ರಾಚೀನ ಕಾಲದಲ್ಲಿ ಇದ್ದುದೆಲ್ಲಾ ಈಗ ನಿರುಪಯೋಗವೆಂತಲ್ಲ. ಪ್ರಾಚೀನ ಕಾಲದಲ್ಲಿಯೂ ಈಗಲೂ ಯಾವುದು ಉದಾತ್ತವೂ, ಅನುಕಾರ್ಯವೂ ಅಪೇಕ್ಷಣೀಯವೂ ಆಗಿದೆಯೋ ಅಂಥ ಆಚಾರ ಅಥವಾ ವಿಚಾರದ ರಕ್ಷಣೆಯಾಗಲೇ ಬೇಕು. ಸಂಸ್ಕೃತಿಯನ್ನು ಕೇವಲ ರಕ್ಷಣೆ ಮಾಡಿದ ಮಾತ್ರಕ್ಕೆ ತೀರಲಿಲ್ಲ. ಸಂಸ್ಕೃತಿಯ ವಿಕಸನವೂ ಕಾಲಕಾಲಕ್ಕೆ ಆಗುತ್ತ ಹೋಗಬೇಕು.

ಯಾವ ದರಿದ್ರ ದೇಶದಲ್ಲಿ ಲಕ್ಷಾವಧಿ ಜನರು ಹೊಟ್ಟೆಗೆ ಅಂಬಲಿ ಸಹ ದೊರೆಯದೆ ಪಟಪಟನೇ ಬಿದ್ದು ಸಾಯುತ್ತಿರುವರೋ ಅಂಥ ದೇಶದಲ್ಲಿ ಯಜ್ಞಾಡಂಬರವನ್ನು ಹೂಡಿ ಖಂಡಗಗಟ್ಟಲೆ ಅನ್ನ ತುಪ್ಪವನ್ನು ಸುಟ್ಟು ಧ್ವಂಸಮಾಡುವದಕ್ಕೆ 'ಸಂಸ್ಕೃತಿ' ರಕ್ಷಣೆಯೆನ್ನಬೇಕೆ? ಇನ್ನು ಈ ಪೂರ್ವ ಕಾಲದ ಕೃತಿಯು ವಿಸ್ಮೃತವಾಗಬಾರದೆಂದು ನಿಮ್ಮ ಆಪೇಕ್ಷೆ ಇದ್ದರೆ ಇಕೊಳ್ಳಿರಿ! ವಿಜ್ಞಾನ ಶಾಸ್ತ್ರವು ನಿಮಗಾಗಿ ಸಿದ್ಧಮಾಡಿ ತೋರಿಸಿದೆ. ಒಂದು ಯಜ್ಞದ ಚಲನ ಚಿತ್ರವನ್ನು ತೆಗೆದುಕೊಂಡು ಹಚ್ಚಿಬಿಟ್ಟು ನೋಡುತ್ತ ಕುಳಿತುಕೊಳ್ಳಿರಿ. ಧಗಧಗನೆ ಪ್ರಜ್ವಲಿಸುವ ಅಗ್ನಿಯನ್ನೂ, ಮಂತ್ರ ಘೋಷಮಾಡುವ ಋತ್ವಿಜರನ್ನೂ ಕೊಡಕ್ಕೆ ಕೊಡ ತುಪ್ಪ ಸುರುವುವದನ್ನೂ ಬೇಕಾದರೆ ನೋಡುತ್ತ ಕುಳಿತುಕೊಳ್ಳಿರಿ!

ನಿಜವಾದ ಯಜ್ಞವು ಯಾವುದು?

ಮೇಲೆ ವಿವರಿಸಿದಂತೆ ಯಜ್ಞದ ಅನೇಕಾನೇಕ ಆಚರಣೆಗಳಿಂದ ಇತ್ತ ಇಹವೂ ಸಾಧಿಸುವದಿಲ್ಲ; ಅತ್ತ ಪರವೂ ಸಾಧಿಸುವದಿಲ್ಲ. ನಾರಾಯಣನಿಗೆ ಪ್ರಿಯವಾದ ನಿಜವಾದ ಯಜ್ಞವೆಂದರೆ ನರಜಾತಿಯ ಉದ್ಧಾರಾರ್ಥವಾಗಿ ತನು ಮನ ಪ್ರಾಣಗಳನ್ನು ಸವೆಸುವ ಆತ್ಮಯಜ್ಞವೇ ಸರಿ. ಇದರ ಹೊರತು ಇನ್ನೊಂದು ಯಾವ ಯಜ್ಞವು ಇರಲು ಶಕ್ಯವಿದೆ?

ಸದ್ಯದ ಹಿಂದು ರಾಷ್ಟ್ರದ ಪರಿಸ್ಥಿತಿಯನ್ನವಲೋಕಿಸಿದಲ್ಲಿ ಒಂದೊಂದು ಅನಾಥಾಲಯವು ಒಂದೊಂದು ಅಶ್ವಮೇಧ ಯಜ್ಞ ಮಾಡಿದರೆಷ್ಟು ಪುಣ್ಯಪ್ರದವೆಂದು ತಿಳಿಯಲ್ಪಡುತ್ತದೋ ಅಷ್ಟು ಪುಣ್ಯಪ್ರದವಾಗಿದೆ. ಹಿಂದು ಮಹಾ ಸಭೆಯವರು ಅನಾಥಾಲಯಗಳನ್ನು ಏರ್ಪಡಿಸುತ್ತಾರೆ. ಆದರೆ ಅವುಗಳಿಗೆ ಸಾಕಷ್ಟು ದ್ರವ್ಯಸಹಾಯವಾಗದ್ದರಿಂದ ಅನೇಕ ಹಿಂದು ಅನಾಥರು ಮುಸಲ್ಮಾನ ಮಿಶನ್‌ಗಳ ವಶವಾಗಹತ್ತಿದ್ದಾರೆ. ಇತ್ತ ಯಜ್ಞದ ಹೆಸರಿನಲ್ಲಾದರೂ ವಿಪರೀತ ದ್ರವ್ಯದ ಹೋಮವಾಗುತ್ತಲೇ ಇದೆ. ನಮ್ಮ ದೇಶದ ಗುರುಗಳು, ಜಗದ್ಗುರುಗಳು, ಮಠಂತರು, ಮಹಾರಾಜರು ಅನ್ಯಥಾ ತಮ್ಮ ದ್ರವ್ಯವನ್ನು ಸೂರೆ ಮಾಡುವದಕ್ಕಿಂತ ಒಂದೊಂದು ಅನಾಥಾಲಯವನ್ನು ಏಕೆ ನಡೆಸಿಕೊಂಡು ಹೋಗಬಾರದು? ಆಹಾ! ಹಿಂದುಗಳ ಎಂಥಾ ದುರ್ದೈವ! **ಮಸೂರು ಬ್ರಹ್ಮಚರ್ಯಾಶ್ರಮದವರು ೩೦೦ ವರ್ಷಗಳಿಂದ ಮ್ಲೇಂಛರ ಪಾಲಾಗಿದ್ದ ೧೦ ಸಾವಿರ ಹಿಂದು ಕುಟುಂಬಗಳನ್ನು ಎಷ್ಟು ದ್ರವ್ಯ ವೆಚ್ಚಮಾಡಿ ಉದ್ಧಾರ ಮಾಡಿದರೊ ಅಷ್ಟೇ ದ್ರವ್ಯವನ್ನು ಕುರಂದವಾಡದಲ್ಲಿ ಕೇವಲ ಹತ್ತಾರು ಕುರಿಗಳನ್ನು ಕೊಂದು ತಿನ್ನುವದಕ್ಕೆ ಹಾಳುಮಾಡುವದೆಂದರೆ ಹಿಂದುಗಳ ಎಂಥ ಘೋರವಾದ ದುರ್ದೈವವೆನ್ನಬೇಕು!**

ಇನ್ನಾದರೂ ಇವರಿಗೆ ಯಜ್ಞದ ಹುಚ್ಚು ಹೋಗುವದೆ?

ಭೂಕಂಪದ ಭೀಕರ ದೃಶ್ಯ.

೫೦೦೦೦ ಜನರ ಆಹುತಿ!

ನಷ್ಟ.

ಭೂಕಂಪದಿಂದ ಭಯಂಕರ ಅನರ್ಥವುಂಟಾಗಿದೆ. ಆಪಗ್ರಸ್ತವಾದ ಪ್ರದೇಶವೆಲ್ಲವೂ ಸೈನ್ಯದ ಅಧಿಕಾರದಲ್ಲಿ ಕೊಡಲ್ಪಟ್ಟಿದೆ. ಪೇಟೆಯಲ್ಲಿ ಕಳ್ಳಕಾಕರು ಸೇರಬಾರದೆಂದು ಸೈನಿಕರು ಶಸ್ತ್ರಾಸ್ತ್ರ ಸಜ್ಜಿತರಾಗಿ ಬಿಗಿಯಾದ ಕಾವಲಿಟ್ಟಿದ್ದಾರೆ. ಯಾರಾದರು ಏನಾದರೂ ಪದಾರ್ಥವನ್ನು ಮುಟ್ಟಿದರೆ ಮತ್ತು ಕಾವಲುಗಾರನ ಎಚ್ಚರಿಕೆಗೆ ಉತ್ತರಕೊಡದಿದ್ದರೆ ಕೂಡಲೆ ಗುಂಡು ಹಾರಿಸಲಾಗುವದು. ಸಾಧಾರಣ ೬೦ ಕೋಟಿ ರೂಪಾಯಿಗಳ ನಷ್ಟವಾಗಿದೆಯೆಂದು ಲೆಕ್ಕ ಹಾಕಲಾಗಿದೆ.

ವ್ಯವಸ್ಥೆ.

ನಿಲ್ದಾಣದಿಂದ ಇಳಿದ ಕೂಡಲೆ ಸಾಲುಸಾಲಾಗಿ ಮನೆಗಳು ಕಡಕೊಂಡು ಬಿದ್ದುಬಿಟ್ಟಿರುವದು ಕಂಡುಬರುತ್ತದೆ. ಬೀದಿಯಲ್ಲೆಲ್ಲ ಪ್ರೇತಗಳ ದುರ್ಗಂಧ. ಸೈನಿಕರು ಹೆಣಗಳನ್ನು ಹಿರಿದು ಹಿರಿದು ರಾಶಿ ಹಾಕಿ ಪೆಟ್ರೊಲ ಮತ್ತು ಚಿಮಣಿ ಎಣ್ಣೆ ಉಗ್ಗಿ ಉರಿಹಚ್ಚುವರು. ಇನ್ನೂ ಅನೇಕರು ಜೀವಿಸಿರುವದು ಕಂಡುಬರುತ್ತದೆ. ಒಬ್ಬನು ೩೦ ಗಂಟೆ ಹೂಳಲ್ಪಟ್ಟವನು ಬದುಕಿದನು. ರೇಸಕೋರ್ಸದ ಸ್ಥಲದಲ್ಲಿ ೬ ಸಾವಿರ ಜನ ಪೀಡಿತರಿಗೆ ಔಷಧದ ವ್ಯವಸ್ಥೆ ಮಾಡಲಾಗಿದೆ. ಒಟ್ಟಿಗೆ ಅಲ್ಲಿ ೪೫ ಸಾವಿರ ಜನರಿಗೆ ಅನ್ನವನ್ನು ಹಾಕುವ ವ್ಯವಸ್ಥೆ ಮಾಡಲಾಗಿದೆ. ಉಳಿದವರನ್ನು ಕರಾಚಿ, ಹೈದರಾಬಾದ (ಸಿಂಧ), ಲಾಹೋರಗಳಿಗೆ ಕಳಿಸಿಕೊಡುತ್ತಿದ್ದಾರೆ.

ನಿರ್ಬಂಧ

ಕ್ವೇಟಾ ಪಟ್ಟಣದಲ್ಲಿ ಹೊರಗಿನಿಂದ ಯಾರೂ ಬರಕೂಡದೆಂದು ನಿರ್ಬಂಧ ಮಾಡಲಾಗಿದೆ. ಹಾಗೂ ಕ್ವೇಟಾದಿಂದ ಜಾಕೊಬಾಬಾದ ವರೆಗೆ ಉಗಿಬಂಡಿಯಲ್ಲಿ ಬೇಕಾದವರು ಬೇಕಾದಾಗ ಉಚಿತವಾಗಿ ಹೋಗಬಹುದು. ಅದಕ್ಕಿಂತ ಮುಂದೆ ಹೋಗಬೇಕೆನ್ನುವವರು ಸರಕಾರಿ ಕಾರ್ಯಕ್ಕಾಗಿ ಮೇಲಿನ ಅಪ್ಪಣೆಯ ಚೀಟಿಯನ್ನು ತೋರಿಸಿದರೆ ಮಾತ್ರ ಬಿಡಲಾಗುವದು. ಹೊರಗಿನವರಿಗೆ ಕ್ವೇಟಾದ ತಿಕೀಟು ಕೊಡಲಾಗುವದಿಲ್ಲ.

'ಉದ್ಯಾನ ನಗರಿ' ಕ್ವೇಟಾ.

ಯಾವ ಪಟ್ಟಣವು ತರತರದ ಫಲಪುಷ್ಪಗಳ ಉದ್ಯಾನಗಳಿಂದ 'ಉದ್ಯಾನ ನಗರಿ' ಎಂದು ಪ್ರಸಿದ್ಧವಾಗಿದ್ದಿತೊ ಅದು ಕ್ಷಣಮಾತ್ರದಲ್ಲಿ ರುದ್ರಭೂಮಿಯಾಗುವದೆಂದರೆ ಅಗಾಧ ದೈವೀ ಲೀಲೆಯೇ ಸರಿ. ಮನೆಯಲ್ಲಿ ಹೂಳಲ್ಪಟ್ಟ ಬೆಲೆಯುಳ್ಳ ವಸ್ತುಗಳನ್ನು ಅಗಿದು ತೆಗೆಯಲು ೬೦೦ ಜನ ಕೂಲಿಕಾರರು ನಿಯಮಿಸಲ್ಪಟ್ಟಿರುತ್ತಾರೆ. ಯಾವನೊಬ್ಬ ಕೂಲಿಕಾರನಿಗೆ ಕೆದರಲಿಕ್ಕೆ ಹಚ್ಚಿದರೆ ಒಂದು ಮನೆಗೆ ೫೦ ರೂ. ಬೇಡುತ್ತಾನೆ. ಟಾಂಗಾದವರು ಒಂದು ಮೈಲು ದೂರ ಪ್ರವಾಸಿಗಳನ್ನು ಒಯ್ಯಲಿಕ್ಕೆ ೩ ರೂ. ಬೇಡುತ್ತಾರೆ.

ಸಹಾಯ-ಸಂದೇಶ.

ಬಾದಶಹ ಪಂಚಮ ಜಾರ್ಜ, ಪ್ರೆ. ರೂಝುವೆಲ್ಟ ಮೊದಲಾದವರಿಂದ ಹಿಡಿದು ಅನೇಕ ಕಡೆಗಳಿಂದ ಸಹಾಯ ಮತ್ತು ಸಹಾನುಭೂತಿಪರ ಸಂದೇಶಗಳು ಬರುತ್ತಲಿವೆ. ವ್ಹಾಯಿಸರಾಯ ರಿಲೀಫ ಫಂಡು ಪ್ರಾರಂಭವಾಗಿದೆ. ಹಿಂದು ಮಹಾಸಭೆಯ ಶ್ರೀ ಭಾಯಿ ಪರಮಾನಂದರು ಸ್ವತಃ ಒಂದು ಪಥಕದೊಡನೆ ಸಹಾಯಾರ್ಥವಾಗಿ ಹೊರಡುವವರಿದ್ದಾರೆ. ರಾಷ್ಟ್ರೀಯ ಸಭಾಧ್ಯಕ್ಷರು ಪರಿಸ್ಥಿತಿಯನ್ನು ನೋಡಿ ಬರಲು ತಮ್ಮ ಕಾರ್ಯದರ್ಶಿಗಳನ್ನು ಅಟ್ಟಿಸಿರುವರು.

ದಿ ಗಾಯಿಡ ರೇಲ ರೋಡ ಫೀಡರ ಲಾಯನ್ನ

ಆಲಮಟ್ಟಿಯಿಂದ ತಾಳಿಕೋಟಿ.

ಆಲಮಟ್ಟಿಯಿಂದ ತಾಳಿಕೋಟಿಯವರೆಗೆ ಗಾಯಿಡ ರೇಲ ರೋಡ ಒಯ್ಯಲಿಕ್ಕೆ ಸರಕಾರದವರು ಈಗ ಅಪ್ಪಣೆ ಕೊಟ್ಟಿರುವರು. ಇದರ ಪ್ರಕಟನೆಯು ೩೦ನೇ ಮೇ ೧೯೩೫ ನೇ ಮುಂಬಯಿ ಗ್ಯಾಜಿಟನಲ್ಲಿ ಪ್ರಸಿದ್ಧವಾಗಿರುತ್ತದೆ. ಅದರಲ್ಲಿ ಈ ಬಗ್ಗೆ ಎಲ್ಲ ವಿವರಣೆಗಳು ಬಂದಿರುತ್ತವೆ. ಈ ಮೂರು ವರುಷಗಳ ವರೆಗೆ ಸರಕಾರದವರು ಈ ಲಾಯನವನ್ನು ಹಾಕಲು ಅಪ್ಪಣೆ ಕೊಡುವ ಬಗ್ಗೆ ವಿಚಾರ ಮಾಡುತ್ತಲೇ ಬಂದರು. ಆದರೆ ಈಗ ಇದು ದೊರೆತಿದ್ದು ಇದರ ಮುಂದಿನ ಕಾರ್ಯಗಳು ಕ್ರಮವಾಗಿ ಕೈಕೊಳ್ಳಲ್ಪಡುವವು. ಅನೇಕರು ಹಿಂದುಸ್ಥಾನದ ಬೇರೆ ಭಾಗಗಳನ್ನು ಬಿಟ್ಟುಕೊಟ್ಟು ಈ ಜಿಲ್ಹೆಯಲ್ಲಿಯೇ ಏಕೆ ಇದನ್ನು ಆರಂಭಿಸುವಿರೆಂದು ನನ್ನನ್ನು ಕೇಳುತ್ತಿರುವರು. ಇದಕ್ಕೆ ನನ್ನ ಉತ್ತರವು ಏನಂದರೆ:—

೧. ಈ ಬಗೆಯ ಒಂಟರೇಲಿನ ಬಂಡಿಗಳನ್ನು ಒಯ್ಯುವದೂ ಸಿದ್ಧಪಡಿಸುವದೂ ಬಹಳ ಖರ್ಚು ಹಿಡಿಯುವದಿಲ್ಲಾದ್ದರಿಂದ ಬಡ ಜಿಲ್ಹೆಗಳಿಗೆ ಇದರ ಉಪಯೋಗವು ಬಹಳ ಹೆಚ್ಚು ಇರುತ್ತದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಿಮಾನಗಳ ವ್ಯವಸ್ಥೆ ಇರುತ್ತದೆ. ಮತ್ತು ಹತ್ತಿಪ್ಪತ್ತು ಟ್ರೇನುಗಳು ದಿನಾಲು ಓಡಾಡುತ್ತವೆ. ಆದರೆ ಬಡ ಜಿಲ್ಹೆಗಳಲ್ಲಿ ಇ[illegible]ನ ವಾಹನಗಳನ್ನು ಏರ್ಪಡಿಸಿದರೆ ಅವು ಲಾಭಕರವಾಗ[illegible]ಳನ್ನು ಮಾಡಿದ ಕಂಪನಿಗಳಿಗೆ ಹಾನಿಯಾಗುವದು. ಆದ್ದರಿಂದ ಖರ್ಚು ಬಹಳ ಕಡಿಮೆ ಇರುವ ಈ ಒಂಟೆ ರೇಲಿನ ಗಾಡಿಯ ವ್ಯವಸ್ಥೆಯಿಂದ ವಿಜಾಪುರ ಜಿಲ್ಹೆಗೆ ಲಾಭವಾಗದೆ ಇರದು.

೨. ಆದರೆ ಈ ರೇಲು ಮಿಣಜಗಿ ಎಂಬ ಗ್ರಾಮದ ಸಮೀಪ ಹಾಯುತ್ತಿದ್ದು ಇಲ್ಲಿಯ ಕಲ್ಲು ಸಿಮೆಂಟು ಮಾಡಲು ಬಹು ಉಪಯೋಗವುಳ್ಳದ್ದಾಗಿದೆ. ರಸಾಯನ ಶಾಸ್ತ್ರಜ್ಞರಿಂದ ಇದನ್ನು ಶೋಧಿಸಲಾಗಿ, ಇದು ಸಿಮೆಂಟಕ್ಕೆ ಅತ್ಯುಪಯುಕ್ತವೆಂದು ಅವರ ಅಭಿಪ್ರಾಯವಿದೆ. ಈ ಕಲ್ಲು ಬಹಳ ವಿಪುಲವಾಗಿ ಇಲ್ಲಿ ದೊರೆಯುವದರಿಂದ ಪಶ್ಚಿಮಭಾಗಕ್ಕೆ ಅಂದರೆ ಸಾತಾರಾ, ಗೋವಾ, ರತ್ನಾಗಿರಿ, ಮಲಬಾರ, ಬೆಂಗಳೂರ ಈ ವರೆಗಿನ ಪ್ರದೇಶಕ್ಕೆ ಇಲ್ಲಿ ಮಾಡಿದ ಸಿಮೆಂಟನ್ನು ಬಹಳ ಅಗ್ಗವಾಗಿ ಪೂರೈಸಬಹುದು. ಇದರಿಂದ ಈ ರೇಲ್ವೆಯ ಉತ್ಪನ್ನವನ್ನು ಬಹಳ ಹೆಚ್ಚಿಸಿ ನೂರಕ್ಕೆ ೧೨ ವರೆಯಂತೆ ಡಿವಿಡೆಂಡ ಕೊಡಲಿಕ್ಕೆ ಆಗುವದೆಂದು ನನ್ನ ವಿಶ್ವಾಸವಿದೆ.

ಸರಕಾರದಿಂದ ಪರವಾನಿಗೆಯು ಬೇಗನೆ ಬಾರದ್ದರಿಂದ ಅನೇಕರು ಅನೇಕ ಬಗೆಯ ಕುತರ್ಕಗಳನ್ನು ಮಾಡುತ್ತಲಿದ್ದರು. ಆದರೆ ಕರ್ನಾಟಕಸ್ಥರು ಈ ಲೈನಿನ ನಿಜಸ್ಥಿತಿಯನ್ನು ತಿಳಿದು ಇದಕ್ಕೆ ಸಹಾಯ ಮಾಡಿದ್ದಾದರೆ ಈ ಹೊಸ ಉಪಕ್ರಮವು ಕರ್ನಾಟಕಸ್ಥರು ಅಭಿಮಾನಪಡತಕ್ಕಂಥಾದ್ದಾಗುವದೆಂದು ನನ್ನ ಖಾತ್ರಿ ಇದೆ.

C. Skelton.

—ಕರ್ನಲ್ ಲಾರೆನ್ಸರ ಮರಣದ ಬಗ್ಗೆ ವಿಷಾದ ಸೂಚಕವಾದ ಸಂದೇಶವನ್ನು ಬಾದಶಹರು ಲಾರೆನ್ಸರ ಸಹೋದರರ ಕಡೆಗೆ ಕಳಿಸಿರುವರು. ಅವರ ಹೆಸರು ಇತಿಹಾಸ ಪ್ರಸಿದ್ಧವಾಗುವದೆಂದೂ ಅವರು ಮಾಡಿದ ಸೇವೆಯನ್ನು ತಾವು ಎಂದೂ ಮರೆಯುವದಿಲ್ಲವೆಂದೂ ಅವರು ತಿಳಿಸಿರುವರು.



ಶಾ. ಶ. ೧೮೫೭ ನೆಯ ಜ್ಯೇಷ್ಠ ಶು|| ೯ ಸೋಮವಾರ.

ಹಿಂದು ಧರ್ಮದ ಮೇಲೆ

ಇದೂ ಒಂದು ಆಘಾತವೇ?

ಹಿಂದು ಧರ್ಮದ ಮೇಲೆ ಕಳೆದೊಂದು ಸಾವಿರ ವರುಷಗಳಿಂದ ನಾನಾ ತರದ ಆಘಾತಗಳಾಗುತ್ತಲೇ ಬಂದಿವೆಯಷ್ಟೆ. ಅವುಗಳಿಂದ ಈ ಧರ್ಮವು ದಿನೇ ದಿನೇ ಕ್ಷೀಣ ಹೊಂದುತ್ತ ಈಗ ಅತ್ಯಂತ ಶೋಚನೀಯ ಸ್ಥಿತಿಯಲ್ಲಿದೆ. ಹಿಂದು ಧರ್ಮಕ್ಕೆ ಅಂಟಿಕೊಂಡ ನಾನಾ ದೋಷಗಳೇ ಇದರ ಈಗಿನ ದುರವಸ್ಥೆಗೆ ಮುಖ್ಯ ಕಾರಣ. ಹಿಂದು ಜನಾಂಗಕ್ಕೆ ರಾಜಕೀಯ ಪಾರತಂತ್ರ್ಯ ಪ್ರಾಪ್ತವಾದುದು ಹಿಂದು ಧರ್ಮದ ಮೇಲೆ ಬಂದ ಆಘಾತಗಳಲ್ಲಿ ಅತ್ಯಂತ ಭಯಂಕರವಾದುದು.

ಮುಸಲ್ಮಾನರು ಹಿಂದುಗಳನ್ನು ಗೆದ್ದು ಪಾರತಂತ್ರ್ಯದಲ್ಲಿಟ್ಟ ನಂತರ ಹಿಂದು ಧರ್ಮಕ್ಕೆ ಅಧೋಗತಿಯೂ ಮುಸಲ್ಮಾನ ಧರ್ಮಕ್ಕೆ ಊರ್ಜಿತಾವಸ್ಥೆಯೂ ಬರಲಾರಂಭವಾದವು. ಕಳೆದ ಒಂದು ಸಾವಿರ ವರುಷಗಳಲ್ಲಿ ಕೋಟ್ಯಾಂತರ ಹಿಂದುಗಳೇ ಮುಸಲ್ಮಾನ ಧರ್ಮದವರಾದರಷ್ಟೆ. ಇವರೆಲ್ಲರೂ ಹಿಂದು ಧರ್ಮಕ್ಕಿಂತ ಮುಸಲ್ಮಾನ ಧರ್ಮವು ಶ್ರೇಷ್ಠವೆಂದು ತಿಳಿದು ಆ ಧರ್ಮವನ್ನು ಸ್ವೀಕರಿಸಿದರೆ? ಇಲ್ಲ. ಮುಸಲ್ಮಾನರ ಬಲಾತ್ಕಾರದಿಂದಲೇ ಅಸಂಖ್ಯ ಹಿಂದುಗಳು ಮುಸಲ್ಮಾನ ಧರ್ಮವನ್ನು ಸ್ವೀಕರಿಸುವ ಪ್ರಸಂಗ ಬಂದಿತೆಂದು ಇತಿಹಾಸವು ಘಂಟಾಘೋಷವಾಗಿ ಹೇಳುತ್ತದೆ. ಇಂಥ ಬಲಾತ್ಕಾರಮಾಡಲು ರಾಜಕೀಯ ಸೂತ್ರದಿಂದಲೇ ಅವರಿಗೆ ಸಾಮರ್ಥ್ಯ ಬಂದಿತಲ್ಲವೆ? ಎಂದಮೇಲೆ ರಾಜಕೀಯ ಸಾಮರ್ಥ್ಯವು ಧಾರ್ಮಿಕ ಶಕ್ತಿಯನ್ನು ಬೆಳಸಲು ಕೂಡಾ ಬಹುಮಟ್ಟಿಗೆ ಸಹಾಯವಾಗುತ್ತದೆಂದೇ ಸಿದ್ಧವಾಗುವುದಿಲ್ಲವೇ?

ಮುಸಲ್ಮಾನರು ಈ ದೇಶದ ಪ್ರಭುಗಳಾದುದರಿಂದ ಅಸಂಖ್ಯ ಹಿಂದುಗಳು ನಾನಾ ತರದ ಪ್ರತಿಷ್ಠೆ ಮತ್ತು ಸ್ವಾರ್ಥ ಸಾಧನೆಗಾಗಿಯೂ ಮುಸಲ್ಮಾನ ಧರ್ಮವನ್ನು ಸ್ವೀಕರಿಸಿದರು. ಜನಸಾಮಾನ್ಯರೆಲ್ಲಾ ಐಹಿಕ ಸುಖಾಪೇಕ್ಷಿಗಳೇ ಇರುತ್ತಾರೆ. ಅ… ಸ್ವಧರ್ಮ ಸ್ವಸಂಸ್ಕೃತಿಗಳ ರಕ್ಷಣೆಯು ಶ್ರೇಷ್ಠತರವಾದ ಉ…ವೇನೂ ಇರುವುದೇ ಇಲ್ಲ. ತಮಗೆ ಯಾರಿಂದ ಅಧಿಕಾರ, ಮ… ಸುಖ ಸೌಲಭ್ಯಗಳು ದೊರೆಯುತ್ತವೆಯೋ ಅವರ ಬೆನ್ನು ಹೋಗುವುದೇ ಜನ ಸಾಮಾನ್ಯರ ಪ್ರವೃತ್ತಿಯು.

ಆದುದರಿಂದ ಮುಸಲ್ಮಾನರ ಪ್ರಭುತ್ವವು ಅನೇಕ ಶತಮಾನಗಳ ವರೆಗೆ ಈ ದೇಶದಲ್ಲಿ ಅವಿಚ್ಛಿನ್ನವಾಗಿ ನಡೆಯುತ್ತಿರು… ಅಸಂಖ್ಯರು ಅಧಿಕಾರ, ಮಾನ ಮನ್ನಣೆ, ಮೊದಲಾದವುಗಳಿಗಾಗಿ ಮುಸಲ್ಮಾನ ಪ್ರಮುಖರ ಸಂಗಡ ಶರೀರ ಸಂಬಂಧ …ಡಲು ಕೂಡಾ ಸಿದ್ಧರಾದರು. ಅದೊಂದು ತಮಗೆ ಮಹಾ ಗೌ…ವೆಂದೇ ತಿಳಿದರು. ಈಗಲು ಕೂಡಾ ಇಂಥ ಪ್ರವೃತ್ತಿಯ ಜನ ಹಿಂದುಗಳಲ್ಲಿ ಬೇಕಾದಷ್ಟು ಇದ್ದಾರೆ. ಎಂದ ಮೇಲೆ ಪ್ರಭುತ್ವ… ಅನ್ಯ ಧರ್ಮದವರನ್ನು ತನ್ನ ಕಡೆಗೆ ಸ್ವಾಭಾವಿಕವಾಗಿಯೇ ಸೆಳೆ…ಕೊಳ್ಳುತ್ತಲಿದೆಯೆಂದು ಸ್ಪಷ್ಟವಾಗುವದಿಲ್ಲವೆ? ಮುಸಲ್ಮಾನರ …ತರ ಇಂಗ್ಲಿಷರ ಪ್ರಭುತ್ವವು ಈ ದೇಶದಲ್ಲಿ ಸ್ಥಾಪನೆಯಾ…ತಷ್ಟೆ. ಅನಂತರ ಹಿಂದುಧರ್ಮದ ಮೇಲೆ ಮತ್ತೊಂದು ಆಘಾ… ಬಂದಿತು. ಕ್ರೈಸ್ತ ಮತವು ಈ ದೇಶದಲ್ಲಿ ದಿನೇದಿನೇ ಪ್ರಸಾ…ವಾಗಲಾರಂಭಿಸಿತು. ಮುಸಲ್ಮಾನರ ಪ್ರಭುತ್ವದಲ್ಲಿ ನಡೆದಂತೆ …ಗೇನೂ ಬಲಾತ್ಕಾರ ನಡೆಯುವದಿಲ್ಲ. ಆದರೂ ಅವರ ಪ್ರಭುತ್ವ… ಕಡೆಗೆ ಲಕ್ಷಿಸಿ ಕ್ರೈಸ್ತ ಮತದ ಕಡೆಗೆ ಸೇರುವ ಜನ ಸಾಮಾನ್ಯ… ಪ್ರವೃತ್ತಿಯೇನೂ ನಷ್ಟವಾಗಿಲ್ಲ. ಹಾಗಾಗುವುದು ಶಕ್ಯವೂ ಅಲ್ಲ. …ದುದರಿಂದ ನಾನಾ ತರದ ಆಸೆಗಳ ಮೂಲಕ ಕ್ರೈಸ್ತ ಮತ… ಕಡೆಗೆ ಹಿಂದುಗಳು ಹೋಗುತ್ತಿರುವುದೂ ದಿನೇದಿನೇ ಹೆಚ್ಚುತ್ತ…ಲೇ ಇದೆ.

ಕಾಡು ಜನಗಳಿಗೆ ಶಿಕ್ಷಣಕೊಟ್ಟು ಕ್ರೈಸ್ತ ಮತವನ್ನು ಪ್ರಸಾರ ಮಾಡುವ ಪಾದ್ರಿಗಳು ಅನೇಕರಿದ್ದಾರೆ. ಶಿಕ್ಷಣಾಲಯ… ವೈದ್ಯಾಲಯ, ಅನಾಥಾಲಯ, ನಾನಾ ಕಲಾಕೌಶಲ್ಯಗಳ ಕಾರ್ಯಾಲಯಗಳನ್ನು ಕ್ರೈಸ್ತ ಜನರು ಈ ದೇಶದಲ್ಲಿ ಸ್ಥಾಪಿಸಿ ಇವುಗಳಿಗಾಗಿ ಕೋಟ್ಯಾಂತರ ರೂಪಾಯಿಗಳನ್ನು ಪ್ರತಿವರುಷ ವೆಚ್ಚಮಾಡಿ ತಮ್ಮ ಕ್ರೈಸ್ತ ಮತವನ್ನು ಪ್ರಸಾರಮಾಡುತ್ತಿದ್ದಾರೆ.

ಹಿಂದುಗಳಲ್ಲಾದರೋ ಇಂಥ ಜನಾಂಗದ ನಿಜವಾದ ಉನ್ನತಿಯ ಯಾವ ದಾನ ಧರ್ಮದ ಕಾರ್ಯಗಳೂ ವಿಶೇಷವಾಗಿಲ್ಲ. ದೇವಾಲಯ ಸ್ಥಾಪನೆ, ಕ್ಷೇತ್ರ ಯಾತ್ರೆಯ ಪ್ರಯಾಣ, ಮೊದಲಾದ ಈ ಕಾಲದಲ್ಲಿ ಅನಾವಶ್ಯಕವಾದ ಅನೇಕ ಕಾರ್ಯಗಳಿಗಾಗಿ ಕೋಟ್ಯಾಂತರ ರೂ. ಗಳನ್ನು ವ್ಯಯ ಮಾಡುತ್ತಿದ್ದಾರೆಯೇ ವಿನಾ ಹಿಂದು ಧರ್ಮ ಮತ್ತು ಹಿಂದು ಜನಾಂಗಗಳ ರಕ್ಷಣೆ, ಅಭಿವೃದ್ಧಿಗಳ ಕಾರ್ಯಗಳ ಕಡೆಗೆ ಇವರ ಲಕ್ಷ್ಯವೇ ಇಲ್ಲ. ವಿಧವಾ ವಿವಾಹ ಪ್ರತಿಬಂಧ, ಬಾಲ್ಯ ವಿವಾಹ, ಅಸ್ಪೃಶ್ಯತೆ, ಜಾತಿಯ ಮೇಲು ಕೀಳು ಮೊದಲಾದ ಹಿಂದು ಧರ್ಮ ಮತ್ತು ಜನಾಂಗ ನಾಶದ ನಾನಾ ದೋಷಗಳು ಮತ್ತೂ ಹೆಚ್ಚಾಗಿಯೇ ಇವೆ. ಎಂದಮೇಲೆ ಹಿಂದು ಧರ್ಮಕ್ಕೆ ಶೋಚನೀಯ ಸ್ಥಿತಿ ಬಂದುದೇನಾಶ್ಚರ್ಯ?

ಮುಸಲ್ಮಾನ ಜನಾಂಗದ ಅತ್ಯಂತ ಪ್ರಾಬಲ್ಯದಿಂದ ಅನೇಕ ತುಂಟ ಮುಸಲ್ಮಾನರು ಉತ್ತರ ಹಿಂದುಸ್ಥಾನದ ಅನೇಕ ಹಿಂದು ಅಬಲೆಯರ, ಅನಾಥರ, ಬಾಲಕರಮೇಲೆ ನಾನಾ ಬಲಾತ್ಕಾರಗಳನ್ನು ಮಾಡುತ್ತಿದ್ದಾರಷ್ಟೆ. ಹಿಂದುಗಳಲ್ಲಿಯ ಅಸ್ಪೃಶ್ಯತೆ ಮೊದಲಾದ ಭಯಂಕರ ದೋಷಗಳಿಂದ ದಕ್ಷಿಣ ಹಿಂದುಸ್ಥಾನದಲ್ಲಿಯ ಅನೇಕ ಹಿಂದು ಬಾಂಧವರು ಕ್ರೈಸ್ತ ಮತವನ್ನು ಸ್ವೀಕರಿಸಿ ಸವರ್ಣ ಹಿಂದುಗಳ ಹಿಂಸೆಯಿಂದ ಪಾರಾಗುತ್ತಿದ್ದಾರೆ. ಈ ಪ್ರಕಾರ ಹಿಂದು ಜನಾಂಗವು ಎರಡೂ ದಿಕ್ಕುಗಳಿಂದ ಕ್ಷೀಣಸ್ಥಿತಿಯನ್ನು ಹೊಂದುತ್ತದೆ

ಇಂತಹ ಅತ್ಯಂತ ವಿಷಾದಕರವಾದ ಸಮಯದಲ್ಲಿ ಜಾತಿನಿರ್ಣಯವು ಹೊಸ ರಾಜಕೀಯ ಸುಧಾರಣೆಯಲ್ಲಿ ಸೇರುತ್ತಿದೆ. ಈ ಜಾತಿನಿರ್ಣಯವು ಹಿಂದುಧರ್ಮದ ಮೇಲೆ ಮತ್ತೊಂದು ಆಘಾತವಾಗಿಯೇ ಪರಿಣಮಿಸಲಾರದೇ? ಜಾತಿನಿರ್ಣಯದಿಂದ ಕೆಲವು ಪ್ರಾಂತಗಳಲ್ಲಿ ಮುಸಲ್ಮಾನರ ಪ್ರಾಬಲ್ಯ ಹೆಚ್ಚಲಾರದೇ? ಅದರಿಂದ ಆಯಾಯಭಾಗದ ಹಿಂದು ಜನಸಾಮಾನ್ಯರಲ್ಲಿ ಅನೇಕರಿಗೆ ಮುಸಲ್ಮಾನ್ ಧರ್ಮದ ಕಡೆಗೆ ತಿರುಗುವ ಇಚ್ಛೆಯುಂಟಾಗಲಾರದೇ? ಸಿಂಧ, ಪಂಜಾಬ, ಬಂಗಾಲ ಮೊದಲಾದ ಪ್ರಾಂತಗಳ ಕೌನ್ಸಿಲ್ಲುಗಳಲ್ಲಿ ಮುಸಲ್ಮಾನ ಪ್ರಾತಿನಿಧ್ಯವೇ ಅತ್ಯಧಿಕವಾಗುವದು ಅದರಿಂದ ರಾಜಕೀಯ ಸೌಲಭ್ಯವು ಮುಸಲ್ಮಾನರಿಗೇನೇ ಹೆಚ್ಚು ದೊರೆಯುವದು ಸ್ವಾಭಾವಿಕ. ಎಂದ ಮೇಲೆ ಈಗಿನ ಜಾತಿನಿರ್ಣಯವು ಹಿಂದು ಧರ್ಮದ ಮೇಲೆ ಒಂದು ಆಘಾತವೇ ಆಗದಿರಲಾರದೆಂದು ಹಿಂದಣ ಚರಿತ್ರೆಯಿಂದ ಸ್ಪಷ್ಟವಾಗುವುದಿಲ್ಲವೇ?

'ನಾನು ಹಿಂದು ಏಕೆ ಆದೆನು?'

ಬಜರ ರಹಮಾನ ಎಂಬ ಹೆಸರಿನ ಒಬ್ಬ ಮುಸಲ್ಮಾನ ಗೃಹಸ್ಥನು ಕಲಕತ್ತೆಯ ಹಿಂದು ಮಿಶನ್ ಕಡೆಗೆ ಹೋಗಿ ಈಗ ಕೆಲವು ದಿವಸಗಳ ಪೂರ್ವದಲ್ಲಿ ಹಿಂದು ಧರ್ಮ ದೀಕ್ಷೆ ಹೊಂದಿದನು. ಅವರ ಬಗ್ಗೆ ಅವನೊಂದು ವಿಸ್ತಾರವಾದ ಪತ್ರಬರೆದು ಅದರಲ್ಲಿ ತನ್ನ ಧರ್ಮಾಂತರದ ಇತಿಹಾಸವನ್ನು ಕೊಟ್ಟಿದ್ದಾನೆ. ಅದು ಈ ಪ್ರಕಾರವಾಗಿದೆ—

ನಾನು ಡಾಕಾ ವಿಶ್ವವಿದ್ಯಾಲಯದ ಪದವೀಧರನಿದ್ದೇನೆ. ನಾನು ಜನ್ಮತಃ ಮುಸಲ್ಮಾನನಿದ್ದೆನು. ಹಿಂದಿನ ೭ ತಲೆಗಳಿಂದ ನಮ್ಮ ಪೂರ್ವಜರು ಮುಸಲ್ಮಾನರೇ ಆಗಿರುತ್ತಾರೆ. ಆದರೂ ನಮ್ಮ ಮನೆತನದವರು ಅದಕ್ಕೂ ಪೂರ್ವದಲ್ಲಿ ಹಿಂದುಗಳೇ ಆಗಿದ್ದರಷ್ಟೆ. ಒತ್ತಾಯ ಬೆದರಿಕೆಗಳಿಂದಾಗಲಿ ಅಥವಾ ಸ್ವತಃ ತಿಳಿದೇ ಆಗಲಿ ಅವರು ಧರ್ಮಾಂತರವಾದರು. ಈಗ ಮುಸಲ್ಮಾನ ದೇಶಗಳೆಂದು ಕರೆಯಲ್ಪಡುವ ಅರಬಸ್ಥಾನ ಮತ್ತು ತುರ್ಕಸ್ಥಾನ ದೇಶಗಳಲ್ಲಿ ಕೇವಲ ೫೦ ಲಕ್ಷ ಮತ್ತು ೩೦ ಲಕ್ಷ ಇಷ್ಟೇ ಜನಸಂಖ್ಯೆ ಇದೆ. ಹಿಂದುಸ್ಥಾನದಲ್ಲಿಯಾದರೊ ೮ ಕೋಟಿ ಮುಸಲ್ಮಾನರಿದ್ದಾರೆ. ಇವರೇನು ತುರ್ಕಸ್ಥಾನ ಅಥವಾ ಅರಬಸ್ಥಾನದಿಂದಲೇ ಬಂದವರೇ? ಛೆ! ಅದು ಅಶಕ್ಯವೇ ಸರಿ.

ಮುಸಲ್ಮಾನರು ವಂಶಪರಂಪರೆಯಾಗಿ ಹಿಂದು ದೇಶದಲ್ಲಿಯೇ ವಾಸಿಸುತ್ತಿದ್ದರೂ ತುರ್ಕಸ್ಥಾನವನ್ನೊ ಅಥವಾ ಅರಬಸ್ಥಾನವನ್ನೊ ಮಾತೃಭೂಮಿಯೆಂದು ತಿಳಿದಿರುವದು ನನಗೆ ಒಳ್ಳೇ ವೈಷಮ್ಯವೆನಿಸಿ ವ್ಯಸನವಾಗುತ್ತಿದ್ದಿತು. ಹಿಂದುಗಳಾಗಲಿ ಅಥವಾ ಹಿಂದು ಸಂಸ್ಕೃತಿಯಾಗಲಿ ಮುಸಲ್ಮಾನರನ್ನು ಅನ್ಯರೆಂದು ತಿಳಿದಿಲ್ಲ. ಮುಸಲ್ಮಾನರು ಮಾತ್ರ ಹಿಂದು ಸಂಸ್ಕೃತಿಯಿಂದ ಸಿಡಿದು ನಿಲ್ಲುತ್ತಾರೆ.

ಈಗ ನಾನು ಪುನಃ ಹಿಂದುವಾದುದರಿಂದ ನನ್ನ ಹೆತ್ತ ತಾಯಿಯನ್ನೇ ಅಪ್ಪಿಕೊಂಡಂತಾಯಿತು. ಹಿಂದುಗಳ ಪರಮತ ಸಹಿಷ್ಣುತೆಯ ಭಾವನೆಯನ್ನು ನೋಡಿಯೇ ನನಗೆ ಹಿಂದುವಾಗಬೇಕೆಂದೆನಿಸಿತು. ಹಿಂದು ಧರ್ಮವೆಂಬುದು ಶಾಶ್ವತ ಮುದ್ರೆಯಂತೆ ಇಂತಿಷ್ಟೇ ಎಂದು ನಿಶ್ಚಿತವಿರುವದಿಲ್ಲ. ಅದು ಪ್ರಗತಿಪರವಾಗಿದ್ದು ದೇಶ ಕಾಲಾನುಸಾರವಾಗಿ ವಿಕಾಸ ಹೊಂದುತ್ತದೆ. ಅದೊಂದು ವಿಶಿಷ್ಟ ಪಂಥವಲ್ಲ. ಅನೇಕ ಧರ್ಮ, ಪಂಥಗಳ ಉತ್ಕೃಷ್ಟ ಪರಿಪಾಕವಾಗಿದೆ. ವ್ಯಷ್ಟಿಯನ್ನು ತೆಗೆದುಹಾಕಿ ಸಮಷ್ಟಿಯನ್ನು ಸಾಧಿಸುವದು ಪಾಶ್ಚಾತ್ಯ ಪ್ರಯತ್ನವು. ಆದರೆ ಅನೇಕತ್ವದಲ್ಲಿ ಏಕತ್ವ ಕಾಣುವದು ಹಿಂದು ಪ್ರವೃತ್ತಿಯು. ಹಿಂದು ಜ ಮುಸಲ್ಮಾನ ಧರ್ಮವನ್ನು ಎಂದೂ ದ್ವೇಷಿಸುವದಿಲ್ಲ. ಹಿಂ ಧರ್ಮ ಗ್ರಂಥಗಳಿಗಿಂತ ಮುಸಲ್ಮಾನ ಪವಿತ್ರ ಗ್ರಂಥಗ ವಿಶೇಷವಿದೆಯೆಂಬುದೇನೂ ಇಲ್ಲ. ಏಕೇಶ್ವರ ಕಲ್ಪನೆಯು ದಗಳಲ್ಲಿ ಪೃಥ್ವಿಯಷ್ಟು ಸನಾತನವಾದದ್ದಾಗಿದೆ. ಮಹಮ್ಮದ ಅರಬಸ್ಥಾನದಲ್ಲಿ ವಿಶ್ವಬಂಧುತ್ವವನ್ನು ಪದೇಶಿಸಿದರೆ ಬುದ್ಧ, ಶಂ ರಾಚಾರ್ಯ, ನಾನಕ ಮೊದಲಾದ ಹಿಂದುಸ್ಥಾನದ ನೂರಾ ಮಹಾತ್ಮರು ಇಲ್ಲಿಯೇ ಅದನ್ನು ಉಪದೇಶಿಸಿದ್ದಾರೆ. ಸ್ವಾಮಿ ವಿ ಕಾನಂದರು ಒಮ್ಮೆ ಹೀಗೆ ಅಂದಿರುವರು—ಮುಸಲ್ಮಾನರ ಬಂ ಭಾವನೆಯೂ, ಹಿಂದುಗಳ ಸಹಿಷ್ಣುತೆಯೂ ಒಂದಾಗಿ ಸೇರದ ಹಿಂದುಸ್ಥಾನವು ಸ್ವತಂತ್ರವಾಗುವದು.

ರತ್ನಾಗಿರಿಯಲ್ಲಿ ಧಾರ್ಮಿಕ ಕ್ರಾಂತಿ.

ಮೊಚ್ಚೆಗಾರರ ಮನೆಯಲ್ಲಿ ಸಹಭೋಜನ!

ಹಿಂದುಗಳು ಒಂದಾದಲ್ಲಿ ಎಂಥ ವಿಲಕ್ಷಣ ಸುಧಾರಣೆಯಾಗುವದೆಂಬುದು ಈ ಕೆಳಗಿನ ರತ್ನಾಗಿರಿಯ ಸಂಗತಿಯಿಂದ ಕಂಡಬರುತ್ತಿದೆ— ಕಳೆದ ೭-೮ ವರುಷಗಳಿಂದಲೂ ರತ್ನಾಗಿರಿಯಲ್ಲಿ ಮಸೀದಿಯ ಮುಂದೆ ವಾದ್ಯ ಬಾರಿಸಬಾರದೆಂಬ ಬಗ್ಗೆ ಹಿಂದ ಮುಸಲ್ಮಾನರಲ್ಲಿ ಜಗಳವಿದ್ದಿತು. ಇಲ್ಲಿಯ ಹಿಂದುಗಳು ಮುಖ್ಯವಾ ಮೊಚ್ಚೆಗಾರರು ೮ ವರ್ಷಗಳ ವರೆಗೆ ಹಾಯಕೋರ್ಟಿನಲ್ಲಿ ವ್ಯಾಜ್ಯ ನಡೆಯಿಸಿ ರಾಜಮಾರ್ಗದಲ್ಲಿರುವ ಮಸೀದೆಯ ಮುಂದೆ ವಾದ್ಯ ಬಾರಿಸುವ ತಮ್ಮ ಅಧಿಕಾರವನ್ನು ಗೆದ್ದುಕೊಂಡರು. ಈ ವಿಜಯದಿಂದ ಹಿಂದುಗಳಿಗೆ ಅತ್ಯಾನಂದವಾಗಿ ಎಲ್ಲರೂ ಒಟ್ಟಿಗೆ ಸೇರಿ ಹಿಂದು ಸಹಭೋಜನವನ್ನಾಚರಿಸಬೇಕೆಂದು ನಿರ್ಧರಿಸಿಕೊಂಡರು.

ಮೊಚ್ಚೆಗಾರರ ಒಂದು ಸ್ವಚ್ಛವಾದ ಮೇಲ್ಮಾಳಿಗೆಯ ಮನೆಯಲ್ಲಿ ಜಿಲೇಬಿ ಊಟದ ವ್ಯವಸ್ಥೆಯಾಯಿತು. ೭ ವರ್ಷಗಳ ಪೂರ್ವದಲ್ಲಿ ಮೊಚ್ಚೆಗಾರರ ಮನೆಗೆ ಊಟಕ್ಕೆ ಬರಬೇಕೆಂದರೇನೇ ಒಂದು ಅಪಶಬ್ದವೆಂದು ಯಾವ ಬ್ರಾಹ್ಮಣರು ತಿಳಿಯುತ್ತಿದ್ದರೋ ಅವರು ಈಗ ಆಮಂತ್ರಣ ಬಂದೊಡನೆಯೇ ಅದೊಂದು ಧಾರ್ಮಿಕ ಕಾರ್ಯವೆಂದು ಹೊರಟರು. ಬ್ಯಾ. ಸಾವರಕರರೇ ಮೊದಲಾದ ಎಲ್ಲ ಬ್ರಾಹ್ಮಣರು ಭೋಜನಕ್ಕೆ ಬಂದಿದ್ದರು. ಹಿಂದುಗಳಲ್ಲಿ ಅತಿ ಕೀಳೆಂದು ತಿಳಿಯಲ್ಪಡುತ್ತಿದ್ದ ಮಾದರು ಸಹ ಅವರೊಡನೆ ಏಕಪಂಕ್ತಿಯಲ್ಲಿ ಕುಳಿತರು. ಯಾವ ಮಂತ್ರವು ಕೇವಲ ಬ್ರಾಹ್ಮಣ ಪಂಕ್ತಿಯಲ್ಲಿಯೇ ಘೋಷಿಸಲ್ಪಡಬೇಕೆಂದೂ, ಶೂದ್ರರು ಅದನ್ನು ಕೇಳುವದು ಸಹ ಪಾಪವೆಂದು ತಿಳಿಯಲ್ಪಡುತ್ತಿದ್ದಿತೋ ಆ ತ್ರಿಸುವರ್ಣ-ಮಂತ್ರವನ್ನು ಶ್ರೀ ಪಲುಕಾಕಾ ಜೋಶಿ ಇವರು ಉಳಿದ ಬ್ರಾಹ್ಮಣರೊಡನೆ ಆ ಮೊಚ್ಚೆಗಾರರ ಮ[illegible]ಲ್ಲಿ ಹೇಳಿದರು. ಈ ಸಹಭೋಜನದ ಸಂಕಲ್ಪವನ್ನು ಶ್ರೀ ಮ್ಹಸ್ಕರ ಇವರು—"ಜನ್ಮಜಾತ ಜಾತ್ಯುಚ್ಛೇದನಾರ್ಥಂ ಅಖಿಲ ಹಿಂದು ಸಹಭೋಜನಂ ಕಾರಿಷ್ಯೇ" ಎಂದುಬಿಟ್ಟರು.

ಉಳಿದ ಕಡೆಯಲ್ಲಿಯ ಹಿಂದುಗಳು ಹೀಗೆ ಐಕ್ಯವಾಗುತ್ತಿರುವದನ್ನು ನೋಡಿಯಾದರೂ ವೀರಶೈವರು ತಮ್ಮೊಳಗಿನ ಭಿನ್ನಭೇದಗಳನ್ನು ಬಿಟ್ಟುಬಿಡಬಾರದೆ? ಒಂದೇ [illegible]ಂಗದವರು, ಒಂದೇ ಸಂಸ್ಕೃತಿಯವರು, ಮೇಲಾಗಿ ಒಂದೇ ಮತ ದೀಕ್ಷೆಯುಳ್ಳವರಾದ ನಮ್ಮ ನಮ್ಮಲ್ಲಿ ಊಟ ಉಡಿಗೆ ನಡೆಯುವದಿಲ್ಲವೆಂದು ಹೇಳಿದರೆ ಅನ್ಯರು ಅಪಹಾಸ್ಯ ಮಾಡಲಿಕ್ಕಿಲ್ಲವೆ? ನಮ್ಮ ನಡತೆಯು ಸಮಾಜ ಮತ್ತು ಧರ್ಮದ ನಿಯಮಗ ವಿಪರೀತವಾಗಿದ್ದರೆ ಸಮಾಜ ಮತ್ತು ಧರ್ಮಗಳು ನಮ್ಮನ್ನು ಕೂಡಲೆ ಕೈಬಿಡುವವೆಂದು ಬೇರೆ ಹೇಳಬೇಕೆ?

ಪತ್ರಗಳ ಸಾರಾಂಶ.

ಖಾದಿ ಸ್ವಾವಲಂಬನ ಕೇಂದ್ರ ಕೊರಡೂರು.

ಎಪ್ರಿಲ್ ಮೆ ತಿಂಗಳ (ಸಂಕ್ಷಿಪ್ತ) ವರದಿ.

ಕೊರಡೂರಲ್ಲಿ ಹೊಸರಿತ್ತಿ ಗಾಂಧಿ ಆಶ್ರಮದ ಕಾರ್ಯಕರ್ತರು ಖಾದಿ ಸ್ವಾವಲಂಬನ ಕಾರ್ಯವನ್ನು ಕಳೆದ ಎಪ್ರಿಲ್ ತಿಂಗಳಿಂದ ಪ್ರಾರಂಭಿಸಿದ್ದಾರೆ. ಸದ್ಯಕ್ಕೆ ಅಲ್ಲಿ ಖಾದಿ ಸ್ವಾವಲಂಬಿಯಾಗುವ ೧೨ ಕುಟುಂಬಗಳಿವೆ. ವಸ್ತ್ರ ಸ್ವಾವಲಂಬಿಗಳಾಗಬೇಕೆನ್ನುವ ೭ ಕುಟುಂಬಗಳಿರುವವು.

ಕೊರಡೂರು ಹರಿಜನ ಕೇರಿಯಲ್ಲಿ ಖಾದಿ ಕ್ಲಾಸು ತೆರೆಯಲಾಗಿದೆ. ೧೩ ಜನ ಹೆಣ್ಣುಮಕ್ಕಳು ೮ ಜನ ಗಂಡುಮಕ್ಕಳು ನೂಲಲು ಹಂಜಿ ಮಾಡಲು ಕಲಿಯುತ್ತಿದ್ದಾರೆ. ಹೆಣ್ಣುಮಕ್ಕಳಿಗೆ ಶ್ರೀ ಸಿದ್ಧಮತಿ ವೈಲಾರ ಮತ್ತು ಗಂಡಸರಿಗೆ ಶ್ರೀ ಮಹಾದೇವ ವೈಲಾರ ಇವರು ಕಲಿಸುತ್ತಿದ್ದಾರೆ. ಶ್ರೀಮತಿ ರುದ್ರಮ್ಮ ಕೊಗಳಿ ಇವರು ೨೦ ಜನ ಬಾಲಕರಿಗೆ ಬಿರಕಿಯಿಂದ ನೂಲಲು ಕಲಿಸುತ್ತಿದ್ದಾರೆ.

ಎಪ್ರಿಲ್ ತಿಂಗಳಲ್ಲಿ ಸ್ವಾವಲಂಬನದ ಎಲ್ಲ ಕುಟುಂಬಗಳು ತಮ್ಮ ಹತ್ತಿಯನ್ನು ಅರಿದುಕೊಂಡಿದ್ದಾರೆ. ಮೆ ತಿಂಗಳಲ್ಲಿ ನೂಲುವದು ಪ್ರಾರಂಭವಾಗಿದೆ. ೪ ಜನರು ಅರಳಿ ಹೊಡೆದು ಹಂಜಿ ಮಾಡಿಕೊಳ್ಳುತ್ತಾರೆ. ಒಟ್ಟಿಗೆ ೮ 'ಪಿಂಜಣ' (ಪಿಂಜುವ ಯಂತ್ರ) ಗಳಿವೆ. ೧೨ 'ಪಿಂಜಣ' ಗಳನ್ನು ಹೆಚ್ಚಿಗೆ ಮಾಡಿಸಲಿಕ್ಕೆ ಹಾಕಿದೆ. ಮೆ ತಿಂಗಳ ಕಡೆಯ ವಾರದಲ್ಲಿ ೩೦ ರಾಟಿಗಳು ಪರೀಕ್ಷಿಸಲ್ಪಟ್ಟವು. ರಾಟಿಯ ಒಂದು ಸುತ್ತಿಗೆ ಕದರಿನ ೧೦೦ ಸುತ್ತುಗಳಾಗಬೇಕೆಂದು ಅ. ಭಾರತ ಚರಖಾ ಸಂಘದ ಕಾರ್ಯದರ್ಶಿಗಳ ಹೇಳಿಕೆ. ೩೦ ರಾಟಿಗಳಲ್ಲಿ ಮೂರು ರಾಟಿಗಳ ಕದರಿನ ಸುತ್ತುಗಳು ೮೦ ರಿಂದ ೯೨ರ ವರೆಗಿವೆ. ಉಳಿದವೆಲ್ಲ ಇನ್ನೂ ಕಡಿಮೆ. ಕದರಿನ ದಿಂಡುಗಳು ದಪ್ಪವಾಗಿದ್ದದ್ದೇ ಕಾರಣ. ರಾಟಿಗಳನ್ನು ಸರಿಯಾಗಿ ಮಾಡಿಕೊಳ್ಳುವ ಕಾರ್ಯ ನಡೆದಿದೆ.

ಗಂಡಸರ ಹಂಜಿ ಮಾಡುವ ವರ್ಗವು ಮುಂಜಾನೆ ೭|| ಯಿಂದ ೧೦|| ಗಂಟೆಯ ವರೆಗೆ ನಡೆಯುವದು. ಹೆಣ್ಣುಮಕ್ಕಳ ಮತ್ತು ಬಾಲಕರ, ಹಿಂಜುವ ನೂಲುವ ವರ್ಗಗಳು ಮಧ್ಯಾಹ್ನ ೧ ಗಂಟೆಯಿಂದ ೪ರ ವರೆಗೆ ನಡೆಯುವವು. ಪ್ರತಿ ದಿವಸ ರಾತ್ರಿ ೮ ಗಂಟೆಯಿಂದ ೧೦ ಗಂಟೆಯವರೆಗೆ ಹಿಂದಿ ಕಲಿಸುವ ವರ್ಗವು ನಡೆಯುವದು - ಶ್ರೀ. ರಘುನಾಥ ಕುರ್ತಕೋಟಿ ಇವರು ಶಿಕ್ಷಕರು. ೧೨ ಜನರು ಕಲಿಯುವವರಿರುವರು.

ಇಲ್ಲಿ ನೇಯ್ಗೆಯ ವರ್ಗವನ್ನೂ ಪ್ರಾರಂಭಿಸುವ ಪ್ರಯತ್ನ ನಡೆದಿದೆ.

ಬ್ರಾಂಚ ಶಿರ್ಮಾಪುರ.

ನೆರೆಯ ಹಳ್ಳಿಯಾದ ಶಿರ್ಮಾಪುರದಲ್ಲಿ ಕೊರಡೂರು ಖಾದಿ ಸ್ವಾವಲಂಬನ ಶಾಖೆಯು ಸ್ಥಾಪಿತವಾಗಿದೆ. ಇಲ್ಲಿ ಹಂಜಿ ಮಾಡಲು ಶ್ರೀ ಗುರುಬಸವಸ್ವಾಮಿ ಹೊಸಮಠ ಇವರು ಮತ್ತು ಶ್ರೀ ಪವಾರರು ಕಲಿಸುತ್ತಿದ್ದಾರೆ. ಹಾಗೂ ರಾಟಿ ಪರೀಕ್ಷೆ ಮಾಡುತ್ತಿದ್ದಾರೆ. ಒಟ್ಟಿಗೆ ೭ ಜನರು ಹಂಜೀ ಮಾಡುವದನ್ನು ಕಲಿಯುತ್ತಿರುವರು. ಇಲ್ಲಿಯ ಜನರು [illegible]ಕಷ್ಟು ನೂಲುತ್ತಿದ್ದರೂ ಅದನ್ನು ತಮಗೆ ಬಟ್ಟೆ ಮಾಡಿಸಿಕೊಳ್ಳದೆ ಹೊಸರಿತ್ತಿ ಸಂತೆಯಲ್ಲಿ ಮಾರಿಬಿಡುತ್ತಿರುವರು. ವಸ್ತ್ರ ಸ್ವಾವಲಂಬನ ಲಾಭವನ್ನು ಕೊರಡೂರ ಕಲಕೋಟಿ ಮನೆತನದವರೂ ಇನ್ನು ೩-೪ ಮನೆತನದವರೂ ೪-೫ ವರ್ಷಗಳಿಂದ ಪಡೆಯಹತ್ತಿದ್ದಾರೆ.

ಖಾದಿ ಸ್ವಾವಲಂಬನ ಕಾರ್ಯಕ್ಕಾಗಿ ಅ. ಭಾ. ಚರಖಾ ಸಂಘದವರು ಹೊಸರಿತ್ತಿ ಗಾಂಧಿ ಆಶ್ರಮಕ್ಕೆ ಪ್ರತಿ ತಿಂಗಳು ೭೦ ರೂ. ಕೊಡುತ್ತಾರೆ. ಆಶ್ರಮದ ವತಿಯಿಂದ ಕಾರ್ಯ ಕ್ಷೇತ್ರದಲ್ಲಿ ಶಕ್ಯವಿದ್ದ ಹಳ್ಳಿಗಳಲ್ಲಿ ಔಷಧೋಪಚಾರ, ಶಿಕ್ಷಣ, ಸ್ವಚ್ಛತೆ, ಹರಿಜನ ಸೇವೆ ಮುಂತಾದ ಕಾರ್ಯಗಳೂ ಕೈಕೊಳ್ಳಲ್ಪಡುವವು.

ಕಾರ್ಯದರ್ಶಿ

ಗಾಂಧಿ ಆಶ್ರಮ ಹೊಸರಿತ್ತಿ.

ಗೋಕಾಕದ ವಾರ್ತೆ

ಶುಕ್ರವಾರ ತಾ|| ೨೧-೫-೩೫ ಇಸ್ವಿ ದಿವಸ ಶ್ರೀ ಶಿವಲಿಂಗೇಶ್ವರ ಮಹಾಸ್ವಾಮಿ ಸಂಸ್ಥಾನಮಠ ಸಾವಳಗಿ ಇವರ ಸನ್ನಿಧಿಯಿಂದ—

ತಾ|| ೧೬-೬-೩೫ ಇಸ್ವಿ ದಿವಸ ಇಲ್ಲಿ ವೀರಶೈವ ಫ್ರೀ ಬೋರ್ಡಿಂಗ ಸ್ಥಾಪಿಸುವ ಕುರಿತು ಗೋಕಾಕದ ಯಾವತ್ತೂ ವೀರಶೈವ ನಾಗರೀಕರ ಸಭೆ ಕೂಡಿ ಸ್ಥಾನಿಕ ವ್ಯವಸ್ಥಾಪ[illegible]ಟಿಯೊಂದು ಏರ್ಪಟ್ಟಿತು. ಶ್ರೀ ಎಮ್. ಎಚ್. ಪಾಟೀ[illegible]ಲ ಚೇರಮನ್‌ರಾಗಿಯೂ, ಶ್ರೀ ಎಮ್. ಬಿ. ಕಲ್ಯಾಣಶೆಟ್ಟಿ ಶ್ರೀ ಪರಮಶೆಟ್ಟಿ ಪಾಟೀಲ ಶ್ರೀ ಸಿದ್ದಪ್ಪ ಸೊಗಲಿ ಶ್ರೀ ಸಾಂಬಶಿವಪ್ಪ ಬರಬರಿ ಶ್ರೀ ರಾಚಯ್ಯಸ್ವಾಮಿ ಕೊಳ್ಳೂರ ಶ್ರೀ ಸಿದ್ದಪ್ಪ ಹಾಲಬಾಂವಿ ಡಾಕ್ಟರ ಶ್ರೀ ಎಸ್. ಎನ್ ವಂಟಮುರಿಮಠ ಶ್ರೀ ಗುರುಲಿಂಗಪ್ಪ ಶಿಡ್ಲ್ಯಾಳ ಇವರು ಕಮೀಟಿಯ ಸದಸ್ಯರಾಗಿ, ಶ್ರೀ ಹಿರೇಮಠ ಮಾಸ್ತರ ಶ್ರೀ ಗಣಾಚಾರ್ಯ ಮಾಸ್ತರ ಇವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಮತ್ತು ಈ ಊರಲ್ಲಿ ಬೋರ್ಡಿಂಗದ ಅವಶ್ಯಕತೆ ಮತ್ತು ವಿದ್ಯಾದಾನದ ಮಹತ್ವ ಈ ವಿಷಯವಾಗಿ ವ್ಯಾಖ್ಯಾನ ಆಗಿ ಸಭೆಯ ಕಾರ್ಯವು ಮುಗಿಸಲ್ಪಟ್ಟಿತು.

ಶ್ರೀ ಶಿವಲಿಂಗೇಶ್ವರ ಫ್ರೀ ಬೋರ್ಡಿಂಗ ತಾ|| ೧೩-೬-೩೫ ಇಸ್ವಿ ದಿವಸ ಸ್ಥಾಪಿಸಲ್ಪಡುವದು ಸದರೀ ತಾರೀಖಿನೊಳಗಾಗಿ ಇಂಗ್ಲೀಷ ಕಲಿಯುವ ಬಡ ವಿದ್ಯಾರ್ಥಿಗಳು ಅಚ್ಚಿನ ಫಾರ್ಮುಗಳನ್ನು ತುಂಬಿ ಬೋರ್ಡಿಂಗದ ಕಾರ್ಯದರ್ಶಿಗಳವರ ಕಡೆಗೆ ಅರ್ಜಿ ಕಳಿಸತಕ್ಕದ್ದು.

ಕಾರ್ಯದರ್ಶಿ.

ಸ್ವೀಕಾರ.

ತುಮಕೂ[illegible] ೨೩-೫-೩೫ ರಲ್ಲಿ ನಡೆದ ಮ|| ರಾ|| ಅಂಬ್ಲಿ ಬಸಪ್ಪನವರ ಪುತ್ರಿ ಸೌ|| ಹ|| ಕುಂ|| ಶೋ|| ಶಿವಮ್ಮ, ಮ|| ರಾ|| ದಾನಿ ಮುರಡಪ್ಪನವರ ಪುತ್ರ ಚಿ|| ಸ|| ಬಸಪ್ಪ ಇವರ ವಿವಾಹ ಮಹೋತ್ಸವ ಕಾಲದಲ್ಲಿ ತುಮಕೂರು ಶ್ರೀ ಸಿದ್ಧರಾಮೇಶ್ವರ ಶರಣ ಸಂಘಕ್ಕೆ ಅರ್ಪಿಸಿದ ಎರಡು ರೂಪಾಯಿಗಳನ್ನು ಸ್ವೀಕರಿಸಿದೆ.

ಜೇರಿಗೆ ಕ. ಬಸವಪ್ಪ ಬಿ. ಎ.

ಆದರ್ಶ ನೋಟ.

ಬೆಂಡೇಗಂಬಳಿಯಲ್ಲಾದ ಈ ಸಲದ ಬಸವ ಜಯಂತಿಯು ಅಪೂರ್ವವಾಗಿದ್ದಿತು. ಅಸ್ಪೃಶ್ಯರೇ ಮೊದಲಾದ ಎಲ್ಲ ಹಿಂದುಗಳು ಉತ್ಸವದಲ್ಲಿ ಭಾಗವಹಿಸಿದ್ದರು. ಪಲ್ಲಕ್ಕಿಯ ಮುಂದೆ ಆದಿಜನ ಸುಮಂಗಲೆಯರು ಆರತಿಯನ್ನೆತ್ತಿ ಸಾಗಿದ್ದರು. ಉತ್ಸವದ ನಂತರ ಮಾ|| ಸಾ|| ಬಸವರಾಜಪ್ಪನವರ ಭಾಷಣವಾಯಿತು.

ಬಸವದಾಸ.

ವೀರಶೈವ ತರುಣ ಸಂಘ ತುಮಕೂರು.

ವಚನಶಾಸ್ತ್ರ ಪ್ರವಚನ ಸಪ್ತಾಹ.

ಬೆಂಗಳೂರು ಶ್ರೀ ಸರ್ವಭೂಷಣ ಶಿವಯೋಗೀಶ್ವರ ಮಠಾಧ್ಯಕ್ಷರಾದ ಶ್ರೀ. ಮಹಾದೇವ ಸ್ವಾಮಿಗಳವರು ತಾ. ೧೯-೫-೩೫ ರಿಂದ ತಾ. ೨೬-೫-೩೫ ರವರೆಗೆ ಅಷ್ಟಾವರಣ, ಪಂಚಾಚಾರ, ಷಟಸ್ಥಲಗಳ ವಿಚಾರವಾಗಿ ಬೋಧಪ್ರದವಾದ, ಹೃದಯಂಗಮವಾದ ಮತ್ತು ವಿಚಾರಪರವಾದ ವ್ಯಾಖ್ಯಾನಗಳನ್ನು ಅಪ್ಪಣೆಕೊಡಿಸಿದರು, ಗುರು, ಲಿಂಗ, ಜಂಗಮಗಳಲ್ಲಿ ಅಡಕವಾಗಿರುವ ಅತಿ ಗಹನವಾದ ಸಾರ್ವಜನಿಕ ತತ್ವಗಳನ್ನೂ ತೀರ್ಥ, ಪ್ರಸಾದಗಳ ಮಹತ್ವವನ್ನೂ ಪಂಚಾಚಾರಗಳಲ್ಲಡಕವಾಗಿರುವ ಸಮಾಜ ರಕ್ಷಣಾ ಮತ್ತು ಸಮಾಜ ಸಂಘಟನಾ ತತ್ವಗಳನ್ನೂ ಷಟಸ್ಥಲಗಳಲ್ಲಿರುವ ನಿರ್ಬಾಧಕ ಮತ್ತು ನಿರಾತಂಕವಾದ ಆತ್ಮೋದ್ಧಾರಪರವಾದ ವೈಶಾಲ್ಯವನ್ನೂ ಪಂಡಿತಪಾಮರರಂಜನೆಯಾಗುವ ರೀತಿಯಲ್ಲಿ ಮನಮುಟ್ಟುವಂತೆ ತಮ್ಮ ಅಮೃತವಾಣಿಯಿಂದ ಬೋಧಿಸಿದರು. ಸಭಾಂಗಣವು ಆಬಾಲವೃದ್ಧರಾದ ಸ್ತ್ರೀ ಪುರುಷರಿಂದಲೂ ಸರ್ವಧರ್ಮೀಯರಿಂದಲೂ ಕಿಕ್ಕಿರಿಯುತ್ತಿದ್ದಿತು.

ಅಲ್ಲದೆ ತಾ. ೨೭ ಮತ್ತು ೨೮ ರಲ್ಲಿ ಶ್ರೀಗಳವರು ತುಮಕೂರು ಶ್ರೀ ವೀರಭದ್ರಸ್ವಾಮಿ ದೇವಾಲಯದಲ್ಲಿ ಜೀವನ ರಹಸ್ಯ, ಸಮಾಜ ಸುಧಾರಣೆ ಮತ್ತು ಸ್ತ್ರೀಧರ್ಮನೀತಿ ಈ ವಿಷಯಗಳ ಮೇಲೆ ಬಹಳ ಪರಿಣಾಮಕಾರಿಗಳಾದ ಮತ್ತು ಕಣ್ದೆರೆಯಿಸುವಂಥ ಭಾಷಣಗಳನ್ನು ಅಪ್ಪಣೆಕೊಡಿಸಿದರು. ಗುರು, ಭಕ್ತ, ರಾಜ, ಪ್ರಜೆ ಇವುಗಳಿಗಿರುವ ನಿಕಟ ಸಂಬಂಧವನ್ನು ಪ್ರತಿಪಾದಿಸುತ್ತ ಶ್ರೀಗಳವರು ಇಂದಿನ ವೀರಶೈವ ಸಮಾಜದ ಶೋಚನೀಯ ಛಿದ್ರತೆಯನ್ನೂ ಸಮಾಜದ ಧಾರ್ಮಿಕ ಮತ್ತು ಸಾಮಾಜಿಕ ನೇತೃಗಳ ಕರ್ತವ್ಯಜ್ಞಾನದ ಅಭಾವವನ್ನೂ ತಮಗೆ ದೊರೆತಿರುವ ಜವಾಬುದಾರಿ ಸಂಸ್ಥೆಗಳ ದುರುಪಯೋಗವನ್ನೂ ಮತ್ತು ಅವರ ಸ್ವೇಚ್ಛಾ ಪ್ರವೃತ್ತಿಯಿಂದ ಸಮಾಜಕ್ಕಾಗುತ್ತಿರುವ ವಿಪರೀತವಾದ ಅಪಘಾತವನ್ನು ಕುರಿತು ಹೃದಯವಿದ್ರಾವಕವಾಗಿ ಭಾಷಣ ಮಾಡಿದರು.

ಸದರಿ ನೇತೃಗಳೆಲ್ಲಾ ಇಂದಿನ ಸಾಮಾಜಿಕ ರೋಗಗಳ ಕಾರಣಗಳನ್ನು ಗೊತ್ತುಹಚ್ಚಿ ಆ ರೋಗಗಳ ಉಲ್ಬಣತೆಯಿಂದ ಸಮಾಜವೆಂಬ ದೇಹವನ್ನು ರಕ್ಷಿಸಿಕೊಳ್ಳಬೇಕೆಂತಲೂ ಬೋಧಿಸಿದರು ಸಮಾಜದಲ್ಲಿ ಸ್ತ್ರೀಯರಿಗೆ ಕೊಡಬೇಕಾಗಿರುವ ಸ್ಥಾನ, ಅವರ ಹಕ್ಕು ಬಾಧ್ಯತೆಗಳು ಮತ್ತು ಅವರ ಕರ್ತವ್ಯನಿಷ್ಠೆ ಇವುಗಳ ವಿಚಾರವಾಗಿ ಹೇಳುತ್ತಾ ಇಂದಿನ ಸಮಾಜದಲ್ಲಿ ಪುರುಷರ ಸ್ವಾರ್ಥದಿಂದ ಸ್ತ್ರೀ ವರ್ಗಕ್ಕೆ ಉಂಟಾಗಿರುವ ಅಧೋಗತಿ, ಮತ್ತು ಅದರಿಂದ ಸಮಾಜಕ್ಕೆ ಇಂದೂ ಮುಂದೂ ಆಗಿರುವ ಮತ್ತು ಆಗುತ್ತಿರುವ ಆಘಾತವನ್ನೂ, ವಿಧವೆಯರ ಸ್ಥಿತಿಯನ್ನೂ ಉತ್ತಮಗೊಳಿಸಬೇಕಾಗಿರುವದರ ಅವಶ್ಯಕತೆಯನ್ನೂ ಮತ್ತು ಆ ರೀತಿ ಉದ್ದೇಶವನ್ನು ಪೂರ್ಣ ಮಾಡದಿದ್ದರೆ ಸಮಾಜಕ್ಕಾಗುವ ಅಪಾರವಾದ ಹಾನಿಯನ್ನೂ ಕುರಿತು ಅಮೋಘವಾದ ಭಾಷಣ ಮಾಡಿದರು.

ಓರ್ವಪ್ರೇಕ್ಷಕ

ಬನ್ನೀಕೊಪ್ಪದಲ್ಲಿ ತರುಣ ಸಂಘ ಸ್ಥಾಪನೆ.

ಕೊಪ್ಪಳ ಜಿಲ್ಲಾ ಬನ್ನೀಕೊಪ್ಪ ಗ್ರಾಮದಲ್ಲಿ ತರುಣ ಸಂಘವು ಸ್ಥಾಪಿತವಾಗಿದೆ. ಮ. ರಾ. ತಮ್ಮನಗೌಡ ಪಾಟೀಲ ವಕೀಲ ಸಾಹೇಬರು ಅಧ್ಯಕ್ಷರಾಗಿದ್ದರು ಸಭೆಯಲ್ಲಿ ಶ್ರೀ ಯಲ್ಲಪ್ಪಗೌಡ ಪಾಟೀಲ ವಕೀಲ ಸಾಹೇಬರು ತರುಣಸಂಘದ ಬಗ್ಗೆ ಹೇಳಿದರು. ಯಾವನು ತನ್ನ ದೇಶದ ಹಿತದ ಸಲುವಾಗಿ ಸ್ವಾರ್ಥತ್ಯಾಗದಿಂದ ಹೋರಾಡಲು ಯಾವಾಗಲೂ ಉಕ್ಕೇರುವ ಉತ್ಸಾಹವುಳ್ಳವನಾಗಿರುವನೋ ಅವನೇ ತರುಣನು, ಕೇವಲ ವಯಸ್ಸಿನ ಮಾತ್ರದಿಂದ ತರುಣನಲ್ಲ. ಅಂಥವರ ಸಂಘವೇ ತರುಣ ಸಂಘವು ಎಂದು ಹೇಳಿದರು. ವಿದ್ವನ್ಮಣಿಗಳಾದ ಶ್ರೀ ಅಮರನಾಥ ಶಾಸ್ತ್ರಿಗಳು ತರುಣ ಸಂಘಗಳು ವಿದ್ಯಾಪ್ರಸಾರ ಕಾರ್ಯ ಕೈಕೊಳ್ಳಬೇಕೆಂದು ಭಾಷಣ ಮಾಡಿದರು. ಈ ಸಂಘಕ್ಕೆ ಶ್ರೀ ಅಮರನಾಥ ಶಾಸ್ತ್ರಿಗಳು ಚೇರಮನ್ನರು. ಶ್ರೀ ಎಸ್. ಎಮ್. ಭೂಮರಡ್ಡಿಯವರು ಕಾರ್ಯದರ್ಶಿಗಳು.

ಸಭೆಯಲ್ಲಿ ತರುಣ ಸಂಘದ ವತಿಯಿಂದ ಒಂದು ವಾಚನಾಲಯವನ್ನು ಪ್ರಾರಂಭಿಸಬೇಕೆಂದು ನಿರ್ಣಯವಾಯಿತು.

ಶ್ರೀ ಅಮರನಾಥ ಶಾಸ್ತ್ರಿಗಳು
ಚೇರಮನ್.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಶ್ರೀ ಬೋರ್ಡಿನಿಂದ ಬನಾರಸ್ ಕ್ವೀನ್ಸ ಕಾಲೇಜ ಹಾಗೂ ಕಲಕತ್ತಾ ಸಂಸ್ಕೃತ ಕಾಲೇಜುಗಳಲ್ಲಿ ಕಳಿಸಿದವರು ಕೆಳಗೆ ಕಂಡಂತೆ ಉತ್ತೀರ್ಣರಾಗಿರುತ್ತಾರೆ—

ವೇದಾಂತ.

ಮೃತ್ಯುಂಜಯದೇವರು.	ಮುಧೋಳ.	ಶಾಸ್ತ್ರೀ	೩ ನೇ ಖಂಡ.

ನ್ಯಾಯ.

ಶಿವಕುಮಾರದೇವರು.	ಅಮ್ಮಣಗಿ.	ಶಾಸ್ತ್ರೀ	೧ ನೇ ಖಂಡ

ವ್ಯಾಕರಣ.

ಜಯವಿಭವದೇವರು.	ಮುಳಗುಂದ.	ಶಾಸ್ತ್ರೀ	೨ ನೇ ಖಂಡ
ಷಣ್ಮುಖ ಪಟ್ಟದದೇವರು.	ಕೊಟಬಾಗಿ.	ಶಾಸ್ತ್ರೀ	೧ ನೇ ಖಂಡ.
ಬಸವಾರ್ಯರು.	ಹಾವೇರಿ.	ಮಧ್ಯಮ	ಸಂಪೂರ್ಣ
ಮಲ್ಲಿಕಾರ್ಜುನದೇವರು.	ಅಥಣಿ ಗಚ್ಚಿನಮಠ.	,,	,,
ಶಿವಮೂರ್ತಿದೇವರು.	ಹೆಬ್ಬಾಳ.	,,	೩ ನೇ ಖಂಡ.
ಮೃತ್ಯುಂಜಯದೇವರು.	ಕುಂಭಕೋಣ.	,,	೩ ನೇ ಖಂಡ

ಕಲಕತ್ತಾ ಸಾಹಿತ್ಯತೀರ್ಥ.

ಸಿದ್ಧರಾಮದೇವರು ಕುಂಟೋಜಿಮಠ ಸೊಲ್ಲಾಪುರ ಸಾಹಿತ್ಯತೀರ್ಥ.

ವೇದಾಂತ ಮಧ್ಯಮ.

ಶಂಕರದೇವರು	ವಿರಕ್ತಮಠ ಆಲಂಪಲ್ಲಿ	ವೇದಾಂತ ಮಧ್ಯಮ.
ಚನ್ನವೀರದೇವರು.	ತಾಳೀಕೋಟಿ	ಆದ್ಯ-ಮಧ್ಯಮ ವೇದಾಂತ.

ನ್ಯಾಯ.

ಸಿದ್ಧೇಶ್ವರದೇವರು.	ನಾರಾಯಣಪೇಟೆ	ನ್ಯಾಯಾದ್ಯ

ಇದರಲ್ಲಿ ಮೃತ್ಯುಂಜಯದೇವರು ಮುಧೋಳ, ಜಯವಿಭವದೇವರು, ಸಿದ್ಧೇಶ್ವರದೇವರು ಇವರು ಪ್ರಥಮ ಶ್ರೇಣಿಯಲ್ಲಿ ಪಾಸಾಗಿರುವರು.

ಜ್ಯೂನಿಯರ್. ಬಿ. ಎ.

ಷಣ್ಮುಖಾರ್ಯ ಪುರಾಣಿಕ. ನಿಡಗುಂದಿ. ಜ್ಯೂನಿಯರ್. ಬಿ. ಎ.

—ಮಂಗಳೂರು ಆರ್ಯ ಸಮಾಜದವರು ಎ. ರೋಸ ಬಾಪ್ಟಿಸ್ಟ ಎಂಬ ಒಬ್ಬ ರೋಮನ್ ಕ್ಯಾಥೊಲಿಕ್ ಸ್ತ್ರೀಯನ್ನು ಶುದ್ಧೀಕರಿಸಿ ಭಾಗ್ಯವತಿದೇವಿಯೆಂದು ನಾಮಕರಣ ಮಾಡಿದರು. ಇವಳು ಒಂದು ಶ್ರೀಮಂತ ಕ್ರಿಸ್ತೀ ಕುಟುಂಬದವಳು. ಬೆಂಗಳೂರಿನಲ್ಲಿ ಸರಕಾರಿ ನೌಕರಿಯಲ್ಲಿದ್ದಳು. ಇವಳನ್ನು ಕೊಡಗಿನ ಭೂಮಿಯೊಡೆಯರಾದ ಶ್ರೀ ಟಿ. ಡಿ. ಮುರ್ಗೇಶಂ ಪಿಳ್ಳೇ ಇವರು ಲಗ್ನ ಮಾಡಿಕೊಂಡರು.

ವರ್ತಮಾನಸಾರ.

—ಸರ ಶಿಕನ ಪ್ರಸಾದರ ನಂತರ ಮಿ. ಅಕಬರ ಹೈದರಿಯವರು ಹೈದರಾಬಾದದ ಮುಂತ್ರಿಗಳಾಗುವರಂತೆ. ಮಿ. ಹೈದರಿಯವರು ಈಗ ಉಟಕಮಂಡಕ್ಕೆ ಹೋಗಿದ್ದು, ತಿರುಗಿ ಬಂದ ಕೂಡಲೆ ನಿಯಮಿಸುವರಂತೆ.

—ಅಲಾಹಾಬಾದದ ಎಲ್ಲಕ್ಕೂ ವೃದ್ಧ ನಾಗರಿಕರಾದ ಶ್ರೀ ದ್ವಾರಕಾ ಪ್ರಸಾದ, ಇವರು ೯೨ ನೆಯ ವಯಸ್ಸಿನಲ್ಲಿ ಮೊನ್ನೆ ಮೊನ್ನೆ ತೀರಿಕೊಂಡರು. ಇವರು ಪಂ. ಮಾಲವೀಜಿಯವರಿಗೆ ಸಾಲೆ ಕಲಿಸಿದ್ದರಂತೆ. ಮತ್ತು ೧೮೫೮ ರಲ್ಲಾದ ಸಿಪಾಯಿ ದೊಂಬಿಯನ್ನು ಚನ್ನಾಗಿ ಅರಿತಿದ್ದರಂತೆ.

—ಹುಬ್ಬಳ್ಳಿ ಅನಾಥಾಶ್ರಮಕ್ಕಾಗಿ ಸ್ವತಂತ್ರ ಕಟ್ಟಡ ಕಟ್ಟಿಸಿಕೊಡಲು ಒಬ್ಬ ಶ್ರೀಮಂತರು ೨೦೦೦ ರೂ. ಕೊಡಲು ಮಾತು ಕೊಟ್ಟಿರುವರಂತೆ.

—ಟೋಕಿಯೊನಗರದಲ್ಲಿ ಕಿಹಿಸೊಜಾಕ ಎಂಬ ೧೦೨ ವರ್ಷದ ವೃದ್ಧನಿರುವನು. ಅವನಿಗೆ ನಿನ್ನ ದೀರ್ಘಾಯುಷ್ಯದ ಗುಟ್ಟು ಏನೆಂದು ಕೇಳಲು ಆ ವೃದ್ಧನು, ನಾನು ದಿನಾಲು ನಿಯಮದಿಂದ ಬೆಳಗಿನ ೫ ಗಂಟೆಗೆ ಏಳುವೆನೆಂದು ಉತ್ತರ ಕೊಟ್ಟನು.

—ಮೈಸೂರ ಸರಕಾರದವರು ಶಿವಮೊಗ್ಗೆಯಿಂದ ಸಾಗರದ ವರೆಗೆ ರೈಲು ಮಾಡುವವರಿರುವರು. ಈಗ ಆನಂದಪುರಂ ವರೆಗೆ ಹಳಿ ಹಾಕಿದ್ದಾರೆ.

—ಮಹಾತ್ಮಾ ಗಾಂಧಿಯವರು ಸಾಬರಮತಿ ಕಾರಾಗೃಹದಲ್ಲಿ ಗಡಿನಾಡಿನ ಗಾಂಧಿ ಗಫೂರಖಾನರನ್ನು ಭೆಟ್ಟಿಯಾದರು. ವಿಶೇಷವಾಗಿ ಅವರ ಮನೆತನದ ವಿಚಾರಗಳೇ ಜರುಗಿದವು.

—ಕಾಶಿಯಿಂದ ಕೆಲ ಜನರು ಪಾದಚಾರಿಗಳಾಗಿಯೇ ಕೈಲಾಸ ಯಾತ್ರೆ ಮಾಡುವದಕ್ಕಾಗಿ ಜೂನ ೭ ನೆಯ ತಾರೀಖಿಗೆ ಹೊರಡುವರು.

—ಈ ವರ್ಷ ಮುಂಬಯಿ ವಿಶ್ವವಿದ್ಯಾಲಯದ ಮ್ಯಾಟ್ರಿಕ್ ಪರೀಕ್ಷೆಗೆ ೨೦೦೦೦ ಜನ ಉಮೇದುವಾರರು ಕುಳಿತಿದ್ದರು. ಅವರಲ್ಲಿ ೭ ಸಾವಿರ ಜನರು ಪಾಸಾಗಿರುವರು.

—ತ್ರಾವಣಕೋರದಲ್ಲಿ ನೀರಿನ ಅರಬು ಉಂಟಾದದ್ದರಿಂದ ನಂಜನಾಡಿನ ಜನರು ಒಂದು ಗುಡ್ಡಕ್ಕೆ ಹೋಗಿ ಕ್ಷೀರಾಭಿಷೇಕ ಮಾಡಿ ಮಳೆರಾಯನನ್ನು ಬೇಡಿಕೊಂಡರು. ಬ್ರಾಹ್ಮಣರು ವೇದಘೋಷ ಮಾಡಿದರು.

—ಮೆ ೩೦ ನೆಯ ತಾರೀಖಿನ ದಿನ ಧರ್ಮಾಂತರ ಹೊಂದಿದ ಒಬ್ಬ ಬ್ರಾಹ್ಮಣನನ್ನು ಆರ್ಯ ಸಮಾಜದ ಶ್ರೀ ಧರ್ಮದೇವ ವಿದ್ಯಾವಾಚಸ್ಪತಿಗಳು ಹಿಂದು ಧರ್ಮಕ್ಕೆ ತೆಗೆದುಕೊಂಡರು.

—ಮೈಸೂರಿನ ಭಗಿನೀ ಸೇವಾ ಸಮಾಜದ ಕಟ್ಟಡದ ಸಹಾಯಾರ್ಥವಾಗಿ ಶ್ರೀಮಾನ್ಮಹಾರಾಜರವರು ೮ ಸಾವಿರ ರೂಪಾಯಿಗಳನ್ನು ಕೊಟ್ಟಿರುವರು.

—ಜರ್ಮನಿಯು ಎಷ್ಟು ಹಡಗುಪಡೆಯನ್ನಿಡಬೇಕೆಂದು ಬ್ರಿಟನ್ನಿನೊಡನೆ ವಿಚಾರಣೆ ಮಾಡುವದಕ್ಕಾಗಿ ಲಂಡನ್ನಿಗೆ ಒಂದು ಜರ್ಮನ್ ನಾವಿಕ ಸಮಿತಿಯು ಬಂದಿದೆ.

—ಕಳೆದ ವರ್ಷ ಶಾಂತಿನಿಕೇತನದಲ್ಲಿ ಸ್ಥಾಪಿತವಾದ ಚೀನೀ ಹಿಂದೀ ಸಂಸ್ಕೃತಿ ಐಕ್ಯವರ್ಧನ ಸಂಸ್ಥೆಯ ಪುಸ್ತಕಾಲಯಕ್ಕೆ ೧೦ ಸಾವಿರ ಮೆಕ್ಸಿಕನ್ ಡಾಲರ್ಸ ಮತ್ತು ೫೦ ಸಾವಿರ ಚೀನೀ ಡಾಲರ್ಸ ಹೀಗೆ ಧನ ಸಹಾಯವಾಗಿದೆ.

—ನಿರ್ಝಾಮ ರಾಜ್ಯದ ಒಕ್ಕಲತನದ ಖಾತೆಯವರು ತಂಬಾಕದ ಬೆಳೆಗೆ ಹತ್ತುವ ಒಂದು ತರದ ಹುಳವನ್ನು ನಾಶಮಾಡುವದಕ್ಕಾಗಿ ಒಂದು ಉತ್ತಮ ಔಷಧವನ್ನು ಶೋಧಿಸಿರುವರು.

—ಸಾತಾರಾವಲ್ಲಿ ಮಸೂರ ಆಶ್ರಮದವರು ಒಬ್ಬ ಮುಸಲ್ಮಾನ ಹೆಣ್ಣುಮಗಳನ್ನು ವಿಧಿ ಪೂರ್ವಕವಾಗಿ ಹಿಂದು ಧರ್ಮದಲ್ಲಿ ತೆಗೆದುಕೊಂಡರು.

—ಕೊಲ್ಹಾಪುರ ಸಂಸ್ಥಾನದ ಉದಗಾಂವ ಗ್ರಾಮದ ೧೬೫ ಜನರು ಕ್ರಿಸ್ತೀಗಳಾಗುವವರಿದ್ದರು. ಆದರೆ ಮಸೂರ ಆಶ್ರಮದವರು ಅದನ್ನು ನಿಲ್ಲಿಸಿಬಿಟ್ಟರು.

—ಸುರತದ ಡಾ. ಮೋಹನಲಾಲ ದೀಕ್ಷಿತ ಎಂಬುವವರು ಒಬ್ಬ ಜರ್ಮನ್ ತರುಣಿಯನ್ನು ಲಗ್ನವಾದರು. ವಿವಾಹದ ಪೂರ್ವದಲ್ಲಿ ಅವಳಿಗೆ ಹಿಂದು ಧರ್ಮ ದೀಕ್ಷೆ ಕೊಡಲಾಯಿತು.

—ಕರ್ನಾಟಕದ ಸುಪ್ರಸಿದ್ಧ ಡಾಕ್ಟರರಾದ ಶ್ರೀ ಯಶವಂತರಾವ ನಾಡಗೀರ ಇವರು ಧಾರವಾಡದಲ್ಲಿ ಮೂತ್ರಪಿಂಡದ ಉಪಹತಿಯಿಂದ ನಿಧನ ಹೊಂದಿದರು. ಇವರು ಕೆಲ ಕಾಲ ಮುಂಬಯಿಯ ಗ್ರ್ಯಾಂಟ ಮೆಡಿಕಲ್ ಕಾಲೇಜದ ಡೀನ (ಮುಖ್ಯಾಧ್ಯಾಪಕ)ರಾಗಿದ್ದರು.

—ಅಂದಮಾನದ ಕಾರಾಗೃಹ ವಾಸಿಗಳ ಸ್ಥಿತಿಯನ್ನು ನೋಡಿಕೊಂಡು ಬರುವದಕ್ಕಾಗಿ ಶ್ರೀ ಮೋಹನಲಾಲ ಸಕ್ಸೇನಾ ಇವರು ತಮಗೆ ಅಪ್ಪಣೆ ದೊರೆಯಬೇಕೆಂದು ಸರಕಾರಕ್ಕೆ ಕೇಳಿಕೊಂಡಿದ್ದರು. ಅದಕ್ಕೆ ಸರಕಾರದವರು ಒಪ್ಪದೆ ತಾವೇ ಸರಕಾರೀ ಸಭಾಸದರಲ್ಲದ ಜನರ ಒಂದು ವಿಚಾರಣಾಮಂಡಲವನ್ನು ಕಳಿಸುತ್ತೇವೆಂದು ತಿಳಿಸಿದರು.

—ರಾಷ್ಟ್ರೀಯ ಸಭೆಯವರು ಸ್ಥಾನಿಕ ಸಂಸ್ಥೆಗಳಲ್ಲಿ ಸೇರಲಡ್ಡಿಯಿಲ್ಲವೆಂದು ರಾಷ್ಟ್ರಪತಿ ಬಾಬು ರಾಜೇಂದ್ರಪ್ರಸಾದರವರು ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ.

—ಮೈಸೂರು ಹಿಂದು ಮಹಾಸಭೆಯ ಗೌರವ ಕಾರ್ಯದರ್ಶಿಗಳಾದ ಶ್ರೀ ಎ. ಶೇಷಪ್ಪಯ್ಯನವರು ಚಿಕ್ಕಮಗಳೂರಿನಲ್ಲಿ ಅನ್ಯಮತಕ್ಕೆ ಸೇರಿರುವ ನೂರಾರು ಆದಿಕರ್ನಾಟಕರನ್ನು ಮತ್ತೆ ಹಿಂದು ಸಮಾಜಕ್ಕೆ ಸೇರಿಸಿಕೊಳ್ಳುವ ವಿಚಾರದಲ್ಲಿ ತುಂಬಾ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಹಿಂದುಮಹಾಸಭೆಯ ಶಾಖೆಯೊಂದನ್ನು ಸ್ಥಾಪಿಸಲು ಏರ್ಪಾಟಾಗಿದೆ.

—ಬೆಂಗಳೂರಲ್ಲಿ ಒಬ್ಬ ಪಾರಸಿ ತರುಣನು ಸ್ಥಳೀಯ ಆರ್ಯ ಸಮಾಜದವರಿಂದ ಹಿಂದು ದೀಕ್ಷೆ ಹೊಂದಿದನು. ಅವನಿಗೆ ಧರ್ಮದೇವ ಎಂದು ಹೆಸರಿಡಲಾಗಿದೆ. ಅವನು ಮೈಸೂರು ಫೋಟೊಗ್ರಾಫರ ಶ್ರೀ ವರದಾಚಾರ್ಯರ ೨೨ ವಯಸ್ಸಿನ ವಿಧವಾ ಪುತ್ರಿಯನ್ನು ಲಗ್ನವಾದನು.

—ಹಿಂಡಲಿಗಿಯ ಒಬ್ಬ ಹೆಣ್ಣುಮಗಳು ಬೆಳಗಾವಿಯಲ್ಲಿ ಹೋಗುತ್ತಿರುವಾಗ್ಗೆ ಅವಳ ಗಂಡನು ಅಕಸ್ಮಾತ್ ಸಿಕ್ಕ ಅವಳನ್ನು ಎಳೆದೊಯ್ಯಹತ್ತಿದನು. ಅಷ್ಟರಲ್ಲಿ ಇನ್ನೊಬ್ಬನು, ಅವಳು ನನ್ನ ಹೆಂಡತಿ ಎಂದು ಜಗಳ ತೆಗೆದನು. ಇಬ್ಬರ ಜಗಳವು ನ್ಯಾಯಸ್ಥಾನ ಕಾಣಲು ಆ ಸ್ತ್ರೀಯು ಎರಡನೆಯವಳನ್ನು ಆರಿಸಿಕೊಂಡಳು.

—ಕಾಶಿ ಹಿಂದು ವಿಶ್ವವಿದ್ಯಾಲಯದ ಕಾರಕೂನನು ಲೆಕ್ಕದಲ್ಲಿ ೫೦ ಸಾವಿರ ರೂಪಾಯಿ ಹೆಚ್ಚು ಕಡಿಮೆ ಮಾಡಿರುವನು. ಇಂಥ ಪ್ರಸಂಗವು ಇನ್ನೊಮ್ಮೆ ಸಂಭವಿಸದಂತೆ ಎಚ್ಚರಪಡಲಾಗುವದೆಂದು ಪಂ. ಮಾಲವೀಜಿಯವರು ಪ್ರಕಟಿಸಿರುವರು.

—ಬೇಸಿಗೆಯ ಭಯಂಕರ ಬಿಸಿಲಿನ ತಾಪದಿಂದ ಗುಡಿವಾಡದಲ್ಲಿ ಒಂದು ಕಡೆಗಿಟ್ಟ ಬೆಳ್ಳಿಯ ರೂಪಾಯಿಗಳು ಕರಗಿದವಂತೆ.

ಭೂಕಂಪದ ಅದ್ಭುತ ದೃಶ್ಯಗಳು!!

ಬಿಹಾರ ಭೂಕಂಪದ ಕಾಲಕ್ಕೆ ಹಿಮಗಿರಿಯು ನಡುಗಿದದು, ಗಂಗೆಯು ಗುಪ್ತವಾದುದು ಮೊದಲಾದ ಅನೇಕ ನೈಸರ್ಗಿಕ ಚಮತ್ಕಾರಗಳು ಪ್ರಕಟವಾದವಷ್ಟೆ. ಅದರಂತೆ ಕ್ವೇಟಾದಲ್ಲಿ ನೈಸರ್ಗಿಕ ಚಮತ್ಕಾರಗಳು ಅಷ್ಟು ಸಂಭವಿಸದಿದ್ದರೂ ಅನೇಕ ವಾಚನೀಯ ಪ್ರಸಂಗಗಳು ಸಂಭವಿಸಿದವು. ಅವುಗಳಲ್ಲಿ ಕೆಲವು ಈ ಪ್ರಕಾರವಾಗಿವೆ—

ಭವಿಷ್ಯ ಹೇಳಿದ್ದನೆ?

ಕ್ವೇಟಾದಲ್ಲಿ ಈ ಮೊದಲೆ ೧೯೩೧ ನೆಯ ಇಸ್ವಿಯಲ್ಲಿ ಭೂಕಂಪವುಂಟಾಗಿದ್ದಿತು. ಆ ಕಾಲಕ್ಕೆ ಒಬ್ಬ ಬಂಗಾಲಿ ಹವಾಮಾನ ತಜ್ಞನು, ಇನ್ನು ಐದು ವರ್ಷಗಳ ನಂತರ ಭಯಂಕರ ಭೂಕಂಪವಾಗುವದೆಂದೂ ಅದರಲ್ಲಿ ಕ್ವೇಟಾ ಪಟ್ಟಣವೆಲ್ಲ ನಾಶವಾಗುವದೆಂದೂ ಭವಿಷ್ಯವನ್ನುಸುರಿದ್ದನು. ಆದರೆ ಈ ಭವಿಷ್ಯವನ್ನು ಪ್ರಕಟಮಾಡಿದವರ ಮೇಲೆ ವ್ಯಾಜ್ಯ ಹಾಕಲಾಗುವದೆಂದು ಆ ಕಾಲಕ್ಕೆ ಹೆದರಿಕೆ ಹಾಕಲಾಗಿದ್ದಿತೆಂದು ಅನ್ನುತ್ತಾರೆ.

ಮೂರು ಗಂಟೆ ಭೂಮಿಯೊಳಗಿದ್ದನು!

ಕರಾಚಿ ಬಾರ ಅಸೋಸಿಯೇಶನ್ನದ ಕಾರ್ಯದರ್ಶಿ ಮಿ. ಹುಕುಮತರಾಯ ಇವರು ಸೂಟಿಯ ನಿಮಿತ್ತವಾಗಿ ಕ್ವೇಟಾ ಪಟ್ಟಣಕ್ಕೆ ಹೋಗಿದ್ದರು. ಅವರು ಹೀಗೆ ಹೇಳುತ್ತಾರೆ- ಭೂಕಂಪವಾದ ಕಾರಣ ನಾನು ಭೂಗರ್ಭದಲ್ಲಿ ೩ ಗಂಟೆಗಳ ವರೆಗಿದ್ದೆನು. ಆಗ್ಗೆ ನನ್ನ ಸೇವಕನು ಆ ಕಂದರದೊಳಗಿಂದ ನನ್ನನ್ನು ಹೊರಗೆ ತೆಗೆದನು. ನಾವು ಅನುಭವಿಸಿದ ಭಯಂಕರ ಕಷ್ಟವನ್ನು ವರ್ಣಿಸುವದು ಅಸಾಧ್ಯ. ನಾನು ಯಾವ ಕುಟುಂಬದವರಲ್ಲಿ ಇಳಿದುಕೊಂಡಿದ್ದೆನೊ ಆ ಖಾ. ಬ. ಅಬದುಲ ಸತಾರ ಅವರ ಪತ್ನಿ ಮತ್ತು ಮೂವರು ಮಕ್ಕಳು ಭೂಕಂಪದಲ್ಲಿ ಮರಣ ಹೊಂದಿದರು. ಕೇವಲ ಅವರ ಹಿರಿಯ ಮಗನು ಮಾತ್ರ ಬದುಕಿವ್ದಾನೆ.

ಹೂತು ಹೋದ ಕೂಸು ಬದುಕಿತು!

ಒಂದು ಆರು ವರ್ಷದ ಕೂಸು ಬದುಕಿದುದು ಅತ್ಯಾಶ್ಚರ್ಯವೆಂದು ಅಲ್ಲಿಂದ ಬಂದ ಪ್ರವಾಸಿಗಳು ಹೇಳುತ್ತಾರೆ- ಒಂದು ಬಿದ್ದ ಮನೆಯ ಕಲ್ಲುಮಣ್ಣಿನ ರಾಶಿಯಲ್ಲಿ ಕೇವಲ ಒಂದು ಚಿಕ್ಕ ಕೈಯು ಕಾಣಿಸಲು, ಕೂಡಲೆ ಅದನ್ನು ಕೆದರಿ ತೆಗೆಯಲು ಒಂದು ಕೂಸು ಹೊರಟಿತು. ಅದರ ಶ್ವಾಸೋಚ್ಛ್ವಾಸವು ಬಹು ಮಂದವಾಗಿ ಸಾಗಿದ್ದಿತು. ಆದರೆ ಆಸ್ಪತ್ರೆಯಲ್ಲಿ ಜೀವದಿಂದುಳಿಯಿತು!

ಓಡುವ ಗಾಡಿಯು ಹೊರಗೆ ಜಿಗಿದರು!

ಭೂಕಂಪದಿಂದ ಉಳಿದುಕೊಂಡ ಜನರನ್ನು ತುಂಬಿಕೊಂಡು ಒಂದು ಉಗಿಬಂಡಿಯು ಕಳೆದ ೨ ನೆಯ ತಾರೀಖಿನ ದಿವಸ ಸರಿಯಾಬದ ಹತ್ತರಬರುವಾಗ್ಗೆ ಭೂಕಂಪವಿಂದ ಉಗಿಬಂಡಿಯು ಹೊಯ್ದಾಡ ಹತ್ತಲು ಅನೇಕ ಜನರು ಕಿಡಿಕಿಗಳೊಳಗಿಂದ ಹೊರಗೆ ಹಾರಿಕೊಂಡರು!

ಮದುವೆಯು ಮಾಯ! ಮದುಮಗಳು ಸುರಕ್ಷಿತ!

ಒಂದು ಮದುವೆಯ ಕಾರ್ಯಕ್ಕಾಗಿ ೭೦ ಜನರು ಕ್ವೆಟಾ ಪಟ್ಟಣದಲ್ಲಿ ಒಂದು ಮದುವೆ ಮಾಡುತ್ತಿರಲು ಮದುಮಗನೂ ಉಳಿದೆಲ್ಲ ಜನರೂ ಭೂಕಂಪವಾಗಿ ಮನೆಯೊಳಗೇ ಹೂಳಲ್ಪಟ್ಟರು. ಮದುಮಗಳು ಮಾತ್ರ ಒಬ್ಬಳೇ ಒಬ್ಬಳು ಜೀವದಿಂದುಳಿದಳು!

ಸೃಷ್ಟಿ ಚಮತ್ಕಾರ!

ಕ್ವೇಟಾದಿಂದ ಸ್ವಲ್ಪ ಅಂತರದ ಮೇಲಿರುವ ೧೪೦೦೦ ಅಡಿ ಎತ್ತರವಾದ ಪರ್ವತವು ಭೂಕಂಪದ ಹೊಡೆತಕ್ಕೆ ಇಬ್ಭಾಗವಾಗಿದ್ದು ಸೀಳಿನೊಳಗಿಂದ ಭಯಂಕರ ಹುಡಿಯ ಮೋಡಗಳು ಹೊರಡುತ್ತಿವೆ!

ಕ್ವೇಟಾದ ಪೇಟೆಯಲ್ಲಿ ಭೂಮಿಯು ಬಿರಿತು ಬಿರುಕುಗಳೊಳಗಿಂದ ನೀರು ಪುಟಿ ಪುಟಿದು ಹರಿಯಹತ್ತಿ ಬಾಜಾರವೆಲ್ಲ ಜಲಮಯವಾಯಿತು!

ಸಂಕಟವು ಒಂದೇ ಎಂದೂ ಬರುವದಿಲ್ಲವೆಂಬ ಮಾತಿನಂತೆ ಭೂಕಂಪವಾದ ನಂತರ ಸಿಂಧೀ ಜನರ ವಸತಿಯುಳ್ಳ ಬ್ರೂಸ ರೋಡ ಓಣಿಯಲ್ಲಿ ಅಗ್ನಿ ಪ್ರಲಯವೂ ಆಯಿತಂತೆ.

ಭೂಕಂಪವಾದಾಗ್ಗೆ ವೇಳೆ ನೋಡಿದ!

ಕ್ವೇಟಾದ ಅಸಿಸ್ಟಂಟ ಸ್ಟೇಶನ ಮಾಸ್ತರರು ಎಷ್ಟು ಹೊತ್ತಿಗೆ ಭೂಕಂಪವು ಪ್ರಾರಂಭವಾಯಿತೆಂಬುದನ್ನು ಹೇಳುತ್ತಾರೆ. ಗುರುವಾರ ರಾತ್ರಿ ಅವರ ನಾಯಿಯು ಪ್ರತಿದಿವಸದಂತೆ ಮನೆಯೊಳಗೆ ಬಾರದೆ ಗಟ್ಟಿಯಾಗಿ ಹೊರಗೆ ಬೊಗಳುತ್ತ ನಿಂತಿತು. ಮುಂದೆ ರಾತ್ರಿ ೩ ಗಂಟೆಯ ವೇಳೆಗೆ ನಾಯಿಯು ಒಳ್ಳೇ ಬಲವಾಗಿ ಬೊಗಳಹತ್ತಲು ಮಾಸ್ತರರು ಹೊರಗೆ ಬಂದರು. ಕೂಡಲೆ ಭೂಕಂಪದ ಆಘಾತವಾದುದು ಅವರಿಗೆ ತಿಳಿದು ಬಂತು. ಅವಸರದಿಂದ ಒಳಗೆ ಹೋದವರೇ ತಮ್ಮ ಪತ್ನಿಯನ್ನು ಜಗ್ಗಿ ಹೊರಕ್ಕೆ ತಂದರು. ಆ ಮೇಲೆ ಮತ್ತೆ ಒಳಗೆ ಹೋಗಿ ಮಲಗಿದ ತಮ್ಮ ಮಗನನ್ನೂ ಹೊರಕ್ಕೆ ತಂದರು. ಆಗ್ಗೆ ಅವರಿಗೆ ರೇಲ್ವೆಯ ನಿವಾಸಿಗಳ ಮನೆಗಳು ಬೀಳುತ್ತಿರುವನು ಕಂಡು ಬಂತು. ೩ ಗಂಟೆಯಾಗಿ ೧೨ ನಿಮಿಷಕ್ಕೆ ಅವರ ಗಡಿಯಾಲವು ನಿಂತು ಹೋಯಿತು. ಜನರಲ್ ಪೋಷ್ಟ ಆಫೀಸಿನ ಗಡಿಯಾಲವೂ ೩-೧೨ಕ್ಕೇನೆ ನಿಂತಿತು.

ಪಕ್ಷಿಗಳಿಗೆ ಭೂಕಂಪ ತಿಳಿಯುತ್ತದೆ!

ಕ್ವೇಟಾದಲ್ಲಿ ಭೂಕಂಪದ ಅನರ್ಥವುಂಟಾಗುವದೆಂದು ಅಲ್ಲಿದ್ದ ಪಕ್ಷಿಗಳಿಗೆ ಮೊದಲೇ ತಿಳಿದಿದ್ದಿತೆಂದು ಕಂಡು ಬರುತ್ತದೆ. ಭೂಕಂಪವಾಗುವ ಮೊದಲೇ ಅವು ತಮ್ಮ ಗೂಡುಗಳನ್ನು ಬಿಟ್ಟು ಉತ್ತರ ಸಿಂಧದ ಕಡೆಗೆ ಹಾರಿ ಹೋದವು!



೧೦,೩೧,೦೦೦ ರೂಪಾಯಿ

ಬೆಲೆ ಬಾಳುವ ಪಾಲಿಸಿಗಳನ್ನು ಸ್ವರಾಜ್ಯ ಕಂಪನಿಯವರು ಬರೇ ಹದಿನಾಲ್ಕು ತಿಂಗಳಲ್ಲಿ ಕೊಟ್ಟಿರುತ್ತಾರೆ. ಕೂಸು ಹುಟ್ಟಿದರೆ, ಮಕ್ಕಳ ಮದಿವೆ ಮಾಡಿದರೆ, ಮರಣ ಹೊಂದಿದರೆ, ವಿಮೆಯುದಾರರಿಗೆ ೫೦೦ ರೂಪಾಯಿಗಳ ವರೆಗೆ, ವಿಮೆಯ ಹಣವು ಕೊಡಲ್ಪಡುವದು. ವಿಮೆಯ ಕಂತಗಳು ತೀರ ಕಡಿಮೆ. ತಿಂಗಳೊಂದಕ್ಕೆ ಒಂದು ರೂಪಾಯಿ. ಪ್ರವೇಶ ಫೀ ೫ ರೂ. ವಾರ್ಷಿಕ ಫೀ ಒಂದು ರೂಪಾಯಿ ಮಾತ್ರ. ಏಜಂಟರಾಗಿ ಕೆಲಸ ಮಾಡುವವರಿಗೂ ಆರ್ಗನಾಯಝರರಿಗೂ ಒಳ್ಳೇ ಲಾಭ.

ಹೆಚ್ಚಿನ ಮಾಹಿತಿ ಬೇಕಾದವರು ಕಂಪನಿಯ ಕೂಡ ಪತ್ರವ್ಯವಹಾರ ಮಾಡಬೇಕು.

ಎಂ. ಎಸ್. ಕೇಸರಿ ಬಿ. ಎ., ಎಲ್ ಎಲ್. ಬಿ.
ಮ್ಯಾನೇಜಿಂಗ ಏಜಂಟ್ಸ,
ದಿ ಸ್ವರಾಜ್ಯ ಬ್ಯಾಂಕಿಂಗ ಆ್ಯಂಡ ಇನ್ಶ್ಯುರನ್ಸ ಕಂಪನಿ ಲಿಮಿಟೆಡ್, ಧಾರವಾಡ.

ದಿ ಸ್ವರಾಜ್ಯ ಬ್ಯಾಂಕಿಂಗ

ಮತ್ತು ಇನ್ಶ್ಯುಅರನ್ಸ ಕಂಪನಿ, ಲಿಮಿಟೆಡ್

ಧಾರವಾಡ

ಇದರ ಮ್ಯಾನೇಜಿಂಗ ಏಜಂಟ್ಸರವರಿಗೆ—

ನೀಲಪ್ಪಾ ಮಲ್ಲಪ್ಪಾ ಮೆಣಸಿನಕಾಯಿ ಸಾ|| ಅಕ್ಕೂರ ಜಿಲ್ಹಾ ಧಾರವಾಡ ಈತನು ಮಾಡುವ ಶರಣಾರ್ಥಿಗಳು

ತಮ್ಮ ಕಂಪನಿಯಲ್ಲಿ ನಾನು ೧೯೩೪ನೇ ಇಸ್ವಿಯ ಜಾನೇವರಿ ತಿಂಗಳ ಇಪ್ಪತ್ತನೆಯ ತಾರೀಖಿನ ದಿವಸ ಜನನ ವಿಮೆಯನ್ನು ಇಳಿಸಿದ್ದೆನು. ನನ್ನ ಜನನ ವಿಮೆಯ ಪಾಲಿಸಿ ನಂಬರು (೨) ಎರಡು ಇರುತ್ತದೆ. ಪಾಲಿಸಿಯನ್ನು ತೆಗೆದುಕೊಂಡ ಒಂದು ವರ್ಷದ ಮೇಲೆ ನನಗೆ ಒಂದು ಕೂಸು ಜನನವಾಯಿತು. ಕಂಪನಿಗೆ ನಾನು ಒಟ್ಟು (೧೪) ರೂಪಾಯಿಗಳನ್ನು ಕೊಟ್ಟಿರುತ್ತೇನೆ. ಕೂಸು ಹುಟ್ಟಿದ್ದನ್ನು ಸಿದ್ಧಮಾಡಿಕೊಟ್ಟ ಕೂಡಲೆ ನೀವು ನನಗೆ ಕಳುಹಿಸಿಕೊಟ್ಟ (೪೪೭) ನಾಲ್ಕು ನೂರಾನಾಲ್ವತ್ತೇಳು ರೂಪಾಯಿಗಳು ಮುಟ್ಟಿದುವು. ಈ ಬಗ್ಗೆ ಕಂಪನಿಗೆ ನಾನು ತುಂಬಾ ಋಣಿಯಾಗಿದ್ದೇನೆ.

ಅಕ್ಕೂರ
ತಾ|| ೧೩-೩-೩೫. } (ಸಹಿ) **ನೀಲಪ್ಪಾ ಮಲ್ಲಪ್ಪಾ ಮೆಣಸಿನಕಾಯಿ.**

ಹರ್ಡೇಕರ ಮಂಜಪ್ಪನವರು ಬರೆದ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಕಾಯಕವೆ ಕೈಲಾಸ	೦-೩-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ವಿಜಯವಾಣಿ	೦-೨-೦
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ.** ಪೋ. ಆಲಮಟ್ಟಿ ಜಿ. ವಿಜಾಪುರ.

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸನ್ನೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N B ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ: —

ಜಿ. ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ, ತುಮಕೂರು
(ಮೈಸೂರು ಸ್ಟೇಟ್)

ಜಾಹೀರಾತ.

ಸರ್ವಜನರಲ್ಲಿ ವಿಜ್ಞಾಪಿಸುವದೇನಂದರೆ—

ಈ ಜಾಹೀರಾತಿನಿಂದ ತಿಳಿಸುವದೇನಂದರೆ ನನ್ನ ಸಹೋದರನಾದ ಬಸಣ್ಣಾ ಈತನು ಮನೆ ಬಿಟ್ಟು ಒಂದು ವರುಷವಾಯಿತು. ಈತನ ಸ್ವಭಾವ ಹುಚ್ಚು, ವಯಸ್ಸು ೪೦, ಬಣ್ಣ ಸಾಧಾರಣ ಕೆಂಪು, ಸಾಧಾರಣ ನಿಲುವು, ದುಂಡು ಮುಖ, ಬಲ ಗದ್ದದ ಮೇಲೆ ಒಂದು ಹಸರು ಬಣ್ಣದ ಹೆಬ್ಬೆರಳಿನಷ್ಟು ಕಲೆ ಇದ್ದು ಅದರ ಮೇಲೆ ಕೂದಲು ಇವೆ. ಒಮ್ಮೊಮ್ಮೆ ಗೋಣು ಹೊರಳಿಸುವನು. ಮತ್ತು ಶೌಚಕ್ಕೆ ಕೂತರೆ ೨-೩ ತಾಸಾದರು ಕೂಡ್ರುವನು ಮತ್ತು ಕ್ಷೌರಮಾಡಿಸುವದಕ್ಕೆ ಬಹಳ ಪ್ರೀತಿ. ಮೀಸೀಸಹ ತೆಗೆಸುವನು. ಬಾಲ, ವೃದ್ಧರಿಗೆ ಸಹ ತಾತಾ, ತಾತಾ ಅನ್ನುವನು. ತನ್ನಷ್ಟಕ್ಕೆ ತಾನೆ ಮರಿಯಪ್ಪ ಪಂಪಣ್ಣಾ, ಟಾಕಣ್ಣಾ ಎಂದು ಅನ್ನುತ್ತಾನೆ ಹೆಸರು ಕೇಳಿದರೆ ಬಸಣ್ಣನೆಂದು ಹೇಳುವನು. ಹುಡುಗರು ತಡವಿದರೆ ಚೀರುವನು. ಮತ್ತು ಹಸ್ತ ತಿರಿವಿ ಹಿಡಿದು ಶಂಖಹಚ್ಚುವನು. ಇಷ್ಟು ಚಿಹ್ನಗಳನ್ನು ಕಂಡರೆ ದಯವಿಟ್ಟು ತಮ್ಮಲ್ಲಿ ಇರಿಸಿಕೊಂಡು ನಮಗೆ ತಿಳಿಸಿದರೆ ನಿಮಗೆ ೧೦ ರೂ. ಇನಾಮು ಕೊಡುತ್ತೇವೆ ತಿಳಿದಿರಬೇಕು.

ನನ್ನ ವಿಳಾಸ:— **ಪಂಪಣ್ಣಾ ಗದ್ದದ ದೇವಾಂಗ**
ಮುಕ್ಕಾಂ, ಪೋಸ್ಟ ಮಸ್ಕಿ, ತಾಲೂಕಾ
ಲಿಂಗಸೂಗೂರ ಜಿಲ್ಲಾ ರಾಯಚೂರ.

ಮುದ್ದಾದ ಅಕ್ಷರ! ಸುಲಭ ದರ!

ಶ್ರೀ ರಂಗನಾಥ ಟೈಪ್ ಫೌಂಡರಿ

ಬೆಂಗಳೂರು.

ಕನ್ನಡ ಮತ್ತು ಇಂಗ್ಲಿಷ, ಎಲ್ಲಾ ತರದ ಟೈಪುಗಳೂ ಒಳ್ಳೊಳ್ಳೇ ಬಾರ್ಡರಗಳೂ ನಮ್ಮ ಫೌಂಡರಿಯಲ್ಲಿ ತಯಾರಾಗುತ್ತವೆ.

ಒಳ್ಳೆ ಮೆಟಲ್, ಬಹು ಅಂದವಾದ ಅಕ್ಷರಗಳು. ಬಲು ಸುಲಭ ದರ ಕ್ಯಾಟಲಾಗ ತರಿಸಿಕೊಳ್ಳಿರಿ. ಒಮ್ಮೆ ಟೈಪುಗಳನ್ನು ತರಿಸಿಕೊಂಡು ಅನುಭವ ಹೊಂದಿರಿ. ಹಳೆ ಟೈಪುಗಳಿದ್ದರೆ ಸುಲಭ ಚಾರ್ಜಿಗೆ ಹೊಸದಾಗಿ ಹೊಯಿದು ಕೊಡುತ್ತೇವೆ.

ಪ್ರೊಪ್ರೈಟರ,
ಶ್ರೀ ರಂಗನಾಥ ಟೈಪ್ ಫೌಂಡರಿ
೬೭ ಕುಬೇರ ಸಾಹುಜಿ ಲೈನ್
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪತ್ರಿಫಲದ ದಿವ್ಯಾಭರಣ!

ಲಿಂಗಪೂಜಕರಿಗೆ ಪತ್ರಿಯು ಅತ್ಯಾಗತ್ಯವಲ್ಲವೆ? ಪತ್ರಿಯ ಫಲದಿಂದ ಮಾಡುವ **ಈ ದಿವ್ಯಾಭರಣ**ಗಳಲ್ಲಿ ನಿಮಗೆ ಬೇಕಾದುದನ್ನು ತರಿಸಿಕೊಳ್ಳಿರಿ.

ಕರಕಮಲ, ನಾಗಾಭರಣ, ಕಂಠಮಾಲೆ ಮೊದಲಾದವು. ಮಂತ್ರವಿಶಿಷ್ಟ, ಲಿಂಗಪೂಜೆಗೆ ಅಗತ್ಯವಾಗಿರತಕ್ಕವು.

ನಿಮ್ಮ ಇಷ್ಟದಂತೆ ಮಂತ್ರಾಕ್ಷರಗಳನ್ನು ಸ್ಫುಟಗೊಳಿಸಿ ಪತ್ರಿಯ ಕಾಯಿಯ ಚಿಪ್ಪಿನಿಂದ ಬಹು ಅಂದವಾದ ಆಭರಣಗಳನ್ನು ತಯಾರುಮಾಡಿಕೊಡುತ್ತೇವೆ.

ಕ್ರಯ ೧ ರೂಪಾಯಿಯಿಂದ ಮೇಲ್ಪಟ್ಟು ನಿಮ್ಮ ಇಷ್ಟವಿದ್ದಷ್ಟು ರೂ. ಗಳ ವರೆಗೆ.

ವಿಳಾಸ:— ಸಂಗಮೇಶ- ಶ್ರೀ ಸರ್ಪಭೂಷಣ ಶಿವಯೋಗಿ ಮಠ ಬಳೇಪೇಟೆ ಬೆಂಗಳೂರು ಸಿಟಿ.

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! **ಉತ್ತಮ ಸೌಕರ್ಯ!** **ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಡಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುಖ ಬೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಜಯಕರ್ನಾಟಕ

ಕರ್ನಾಟಕದ ಪ್ರಮುಖ ಮಾಸಪತ್ರಿಕೆ.
ವಾರ್ಷಿಕ ಚಂದಾ ೫-೮-೦

ನಾಟ್ಯಾಂಕ

ವಿವಿಧಚಿತ್ರ! ಸರಸನಾಟಕ ಕಥೆ! ವಿದ್ವತ್‌ಪ್ರಚುರ ಲೇಖಗಳಿವೆ!
ತ್ವರೆಮಾಡಿರಿ—ಬೆಲೆ ೧ ರೂ.—ತೀರುತ್ತಿವೆ.

ಜಯಕರ್ನಾಟಕ ಗ್ರಂಥಮಾಲೆ

ವರ್ಷಕ್ಕೆ ೬ ಪುಸ್ತ] ವಾ. ಚಂ ೩-೪-೦ [ಮೇಲೊಂದು ಉಚಿತಪುಸ್ತ
ಜ. ಕ. ಚಂದಾದಾರರಿಗೆ ೩ ರೂ.
ಮೂರನೆಯ ವರ್ಷದ ನಾಲ್ಕನೆಯ ಪುಸ್ತವಾದ
[illegible]. ಹ. ಪಿ. ಜೋಶಿಯವರ
ಇದೀಗ ಹೊರಟದ] **ರಾಜವಲ್ಲಭ** [ಬೆಲೆ ಹತ್ತು ಆಣೆ.

ಕೀಚಕ ವಧೆ ಕಥೆಯನ್ನು ಆಧರಿಸಿ ಬರೆದ ಹೊಸ ಸಂಗೀತ ನಾಟಕ. ಉಚಿತ ಸಂಭಾಷಣೆ, ಮಿತವಿನೋದ, ಸುರಮ್ಯ ಪದ್ಯ ಮಾಲಿಕೆ.

ಜಯಕರ್ನಾಟಕ ಕಾರ್ಯಾಲಯ
ಧಾರವಾಡ.

ನಿರಂಜನ ಹಾಲ್.

ಮಹಾಶಯರೇ ನಮ್ಮಲ್ಲಿ ಸಕಲರಿಗು ಪೂಜಾರ್ಹವಾದ ಸಾಮಾನುಗಳು ದೊರೆಯುತ್ತೆ.

ಮಹದೇಶ್ವರ ಸ್ವಾಮಿಯವರು ಎಂಬ ಮಹಾ ವಿರಕ್ತರು ತಮ್ಮ ಬಾಲ್ಯದಲ್ಲಿಯೇ ಹುಲಿಯ ಮೇಲೆ ಕುಳಿತು ಸಂಚಾರ ಮಾಡುತ್ತಿದ್ದ ಫೋಟೋ ೧೦×೧೪ ಸೈಜು ಡಜ ೧ ಕ್ಕೆ ೧-೮-೦

ನಂಜುಂಡೇಶ್ವರ ಸ್ವಾಮಿ ಫೋಟೋ ೧೦+೧೪ ಸೈಜು ಡಜ ೧ ಕ್ಕೆ (೧-೮-೦) ಡಿಟೋ ೬+೯ ಸೈಜು ಡ. ೧ ಕ್ಕೆ ೦-೧೨-೦ ಮತ್ತು ೦-೬-೦. ಅವಲ್ ದಶಾಂಗ ಧೂಪದ ಪೆಟ್ಟಿ ಸೇರು ೧ ಕ್ಕೆ (೨-೦-೦) ದುಯಂ ಸೇರು ೧ ಕ್ಕೆ ೧-೮-೦ ೧-೦-೦ ಎಡೆಯೂರು **ಸಿದ್ಧಲಿಂಗೇಶ್ವರ ಸ್ವಾಮಿಯವರ** ಫೋಟೋ ೧೦೦ ಕ್ಕೆ ೪-೦-೦ ಒಂದಾವರ್ತಿ ತರಿಸಿ ಪರೀಕ್ಷಿಸಿರಿ.

ಹೆಚ್, ಎಂ. ಮಲ್ಲಪ್ಪ ಅಂಡ್, ಬ್ರದರ್ಸ್
ಫೋಟೋಗ್ರಾಫರ್,
ನಂಜನಗೂಡು.

ಪ್ಲೇಗ ಸಂಜೀವಿನಿ.

ಅತ್ಯಾಶ್ಚರ್ಯಕರವಾದ ಗುಣ! **ಕೇವಲ ೬ ತಾಸುಗಳಲ್ಲಿಯೇ ಗುಣ!**

ಇದನ್ನುಸೇವನೆ ಮಾಡುವದರಿಂದ ಪ್ಲೇಗಿನ ಭಯವೇ ಇಲ್ಲ!

೧೦೦ ಕ್ಕೆ ೧೦೦ ರಂತೆ ಗುಣ!!

ಶ್ರೀ ಮನ್ನಿರಂಜನ ಶಾಂತವೀರ ಸ್ವಾಮಿಗಳು ಗುರುಮಠಕಲ್ ಇವರು ಲೋಕ ಕಲ್ಯಾಣಾರ್ಥವಾಗಿ **ಪ್ಲೇಗ ಸಂಜೀವಿನಿ** ಎಂಬ ದಿವ್ಯ ಔಷಧಿಯನ್ನು ಶೋಧಮಾಡಿರುವರು. ಪ್ಲೇಗ ರೋಗವು ಎಷ್ಟು ಘಾತುಕವದೆಯೆಂಬುದನ್ನು ಹೇಳುವ ಅವಶ್ಯವಿಲ್ಲ. ಈ ಪ್ಲೇಗಿನಿಂದ ಸಾವಿರಾರು ಜನರು ಸಾಯುತ್ತಿರುತ್ತಾರೆ. ಇದನ್ನು ತಡೆಯುವದಕ್ಕಾಗಿ ಎಷ್ಟೋ ಔಷಧಗಳನ್ನು ತಯಾರ ಮಾಡಿರುವರು. ಅವುಗಳಿಂದೇನೂ ಗುಣವಾದದ್ದು ಕಂಡು ಬರುವದಿಲ್ಲ. ಈ ಪ್ಲೇಗ ಸಂಜೀವಿನಿಯಿಂದ **ಆರೇ ತಾಸುಗಳಲ್ಲಿಯೇ** ಗುಣವಾಗುತ್ತದೆ. ಇದರ ಒಂದು ಬಾಟ್ಲಿಯ ಕಿಮ್ಮತ್ತು ೧ ರೂ. ೫ ಆಣೆ.

ವಿಶೇಷ ಮಾಹಿತಿಯನ್ನು ಅನುಪಾನ ಪತ್ರಿಕೆಯಲ್ಲಿ ನೋಡಿರಿ.

ವಿಶೇಷ ಸೂಚನೆ— ಅನುಪಾನ ಪತ್ರಿಕೆಯ ಸೂಚನೆಯ ಮೇರೆಗೆ ಔಷಧವನ್ನು ತೆಗೆದುಕೊಂಡಲ್ಲಿ ಖಾತ್ರಿಯಿಂದ ಗುಣವಾಗುವದು. ಎಲ್ಲ ಕಡೆಗೂ ಏಜಂಟರು ಬೇಕು.

ಏಜಂಟ್
ಬಸೆಟ್ಟೆಪ್ಪ ಬಸಪ್ಪ ಹಲಕುರ್ಕಿ,
ಬಾಗಲಕೋಟೆ

ವಿಳಾಸ—
ಪ್ಲೇಗ ಸಂಜೀವಿನಿ ಆಫೀಸ್
ಗುಲಬರ್ಗಾ.

ಮಹಾರೋಗ ಸಂಜೀವಿನಿ.

ಶ್ರೀಮನ್ನಿರಂಜನ ಗುರುಮಠಕಲ್ಲ ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ

ಮಹಾರೋಗ ಸಂಜೀವಿನಿ,

ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.

ಇತ್ತೀತ್ತಲಾಗಿ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ಮಿತಿಮೀರಿ ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. ಈ ಕೆಟ್ಟಬೇನೆಯು (ಪ್ಲೇಗ ಮಾರಿಕಾ,) ಖಜ್ಜಿಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ ತಗಲತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ಮೃತ್ಯುವಿನ ತುತ್ತಾಗುವರು ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಖಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ನಾರಸಂಹಾರಿ, ಕೂಸುಗಳ ಹೊಟ್ಟೆಯೊಳಗಿನ ಬೇನೆ** ವಗೈರೆ ರೋಗಗಳ ಮೇಲೆ ಆಶ್ಚರ್ಯಕಾರಕ ಔಷಧಿಗಳನ್ನು ಕಂಡು ಹಿಡಿದ ಸದರಿ ಪೂಜ್ಯಪಾದರೇ ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ ಔಷಧಿಯನ್ನು ಶೋಧಮಾಡಿ ಪ್ರಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೆಯುಳ್ಳವರು ಮಾದ್ದಾಂ ಬಂದು ತಮ್ಮ ರೋಗ ಲಕ್ಷಣಗಳನ್ನೆಲ್ಲ ತೋರಿಸಿದರೆ ಅದಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ.. ಮೊದಲು ಔಷಧದ ಅರ್ಧ ಕಿಮ್ಮತ್ತು ಕೊಟ್ಟು ಔಷಧ ತಕ್ಕೊಳ್ಳಲು ಪ್ರಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಅಗ್ಗ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳತಕ್ಕದ್ದು. ವಿಶೇಷ ಸಂಗತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು.

ಮ್ಯಾನೇಜರ ಆರೋಗ್ಯ ಮಂದಿರ, ಕಿರೀಟಮಠ ಕಸಬಾ ಕ್ಯಾಂಪ **ಸೊಲ್ಲಾಪುರ ಸಿಟಿ.**

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯು ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ!

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತ ಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
ಶಿವಸಂಗಪ್ಪಣ್ಣಾ ಕುಪಸ್ತ,
ಬಾಗಲಕೋಟಿ.

ಶ್ರೀರಾಮ ವೀವ್ಹಿಂಗ್ ಮಿಲ್ಸ ಇಚಲಕರಂಜಿ.
(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ನಾರಿನ ಮೇಲೆ ರಾಮ ಬಾಣ ಔಷಧ.

'ಗಿನೋನಾಲ್'

ನಾರಿನಿಂದ ಬಳಲುವವರು ಈ ನಮ್ಮ ದಿವ್ಯ ಔಷಧವನ್ನು ಎರಡಾವರ್ತಿ ಉಪಯೋಗಿಸಿದರೆ ಖಂಡಿತ ಗುಣಬರುತ್ತದೆ. ಒಮ್ಮೆ ಉಪಯೋಗಿಸಿ ಅನುಭವ ಪಡೆಯಿರಿ. ಒಂದು ಬಾಟ್ಲಿಯ ಕಿಂ. ೧ ರೂ. ಟಪಾಲವೆಚ್ಚ ಬೇರೆ. ಅನುಪಾನ ಪತ್ರಿಕೆ ಔಷಧದ ಜೊತೆಗೆ.

ಮ್ಯಾನೇಜರ—'ಗಿನೋನಾಲ್' ಡಿಪೋ
ಗುಲಬರ್ಗಾ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 2891

ಶರಣ ಸಂದೇಶ

The Sharana Sandesh.

ನ್ಯಾಯನಿಷ್ಠುರಿ। ದಾಕ್ಷಿಣ್ಯಪರನಲ್ಲ। ಲೋಕವಿರೋಧಿ। ಶರಣನಾರಿಗಂಜುವನಲ್ಲ।
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ವ. ೨೨೪ । ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ವಂದಾ:- ಅಂಚೆಯ ವೆಚ್ಚ ಸೇರಿ ೩ ರು

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ೪.	ಆಲಮಟ್ಟಿ- ಸೋಮವಾರ ತಾರೀಖು ೧ ನೆಯ ಜುಲೈ ೧೯೩೫.	ಸಂಚಿಕೆ೪

ಜಲತರಣ ದಿಗ್ವಿಜಯ ಪ್ರಯತ್ನ!

ಬಂಗಾಲಿ ತರುಣನ ಅದ್ಭುತ ಸಾಹಸ!!

ಶ್ರೀ ರವೀಂದ್ರನಾಥ ಚತರ್ಜಿಯವರು ಪುಣೆಯಲ್ಲಿ ೮೭ ಗಂಟೆ ಮೀರಿ ಕೈಕಟ್ಟಿ
ಕೊಂಡು ಈಸುವ ಸಾಹಸ ಮಾಡಿದ್ದರು. ಆದರೆ ೩೦। ಗಂಟೆಯ ನಂತರ
ನೀರು ಬಹಳೇ ಶೀತವಿರುತ್ತದೆಂದು ಹೊರಗೆ ಬಂದರು.

ಈ ಮೊದಲೇ
ಶ್ರೀ. ಪ್ರಫುಲ್ಲ ಘೋಷ ಎಂಬುವವರು
೭೯ ಗಂಟೆಗಳ ವರೆಗೆ ಕೈಕಟ್ಟಿಕೊಂಡು ಈಸಿರುವರು.
ಹಾಗೂ ಪೆಡ್ರೊ ಕಾರ್ಡಟಿಯೊ ಎಂಬವರು ೮೭ ಗಂಟೆಗಳ ವರೆಗೆ
ಸತತವಾಗಿ ಈಸಿರುವರು.

ಇವೆರಡೂ ರಿಕಾರ್ಡುಗಳನ್ನು ಮೀರಿಸುವ ಬಗ್ಗೆ
ಶ್ರೀ. ಚತರ್ಜಿಯವರು
ಪ್ರಯತ್ನಿಸಿದ್ದರು.

SANGAM CLOTH STORES
Prop: M. S Hundekar & Sons,
P.O: TERDAL - 587 315
Dt Bijapur. (Karnataka)

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿದ್ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನ?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತ?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾಲಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರು, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ ಒಟ್ಟು ನಮ್ಮ ಕರ್ನಾಟಕದಾಗ, ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಆದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ವರನು ಬೇಕು.

P. 18 ಹದಿನಾರು ವರ್ಷ ಪ್ರಾಯದ ಸುರೂಪಿಯೂ, ಗೃಹಕೃತ್ಯದಲ್ಲಿ ನಿಪುಣೆಯೂ, ಕನ್ನಡ ಓದುಬರಹ ಬಲ್ಲವಳೂ ಆದ ಗೌಡ ಸಾರಸ್ವತ ಬ್ರಾಹ್ಮಣ ಕನ್ಯಾ ವಧುವಿಗೆ ೨೨ ವರ್ಷಕ್ಕೆ ಮೀರದ ಸರಕಾರಿ ಉದ್ಯೋಗವಿರುವ ಸ್ವಪ್ನಂದದ ವರನು ಬೇಕು.

ವಧುವು ಬೇಕು.

W. 17 ಸರಕಾರಿ ಕೆಲಸದಲ್ಲಿ ತಿಂಗಳಿಗೆ ೬೦ ರೂ ಸಂಬಳವಿರುವ ೩೫ ವರ್ಷ ಪ್ರಾಯದ ಆರೋಗ್ಯವಂತರಾದ ಓರ್ವ ಗೌಡ ಸಾರಸ್ವತ ಬ್ರಾಹ್ಮಣ ಯುವಕರಿಗೆ ೨೪ ವರ್ಷಕ್ಕೆ ಮೀರದ ಸುಂದರಿಯೂ, ಗೃಹಕೃತ್ಯಗಳನ್ನು ನಿರ್ವಹಿಸಬಲ್ಲವಳೂ ಆದ ವಿದ್ಯಾವಂತ ವಿಧವೆಯು ಬೇಕು.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ. ಎಸ್. ಪೈ
ಶಿವಪೇಟೆ ಪುತ್ತೂರು.ದ. ಕ.

ಅಂದವಾದ ಮುದ್ರಣ! ಅಚ್ಚುಕಟ್ಟಾದ ಬೈಂಡು!

ಸಂಕ್ಷಿಪ್ತ

ಮಹಾದೇವಿಯಕ್ಕನ ಜೀವನ ಚರಿತ್ರೆ.

ವಚನವಾಙ್ಮಯದಲ್ಲಿ ಉಚ್ಚಸ್ಥಾನವನ್ನು ಪಡೆದು ಪ್ರಸಿದ್ಧಿ ಪಡೆದ ಉಡುತಡಿಯ ಮಹಾದೇವಿಯಕ್ಕನ ಜೀವನ ಕಥೆ. ವಚನಗಳಿಂದ ಕೂಡಿ ಭಾವ ಪೂರ್ಣವಾಗಿ ಬರೆಯಲ್ಪಟ್ಟದೆ.

ಬೆಲೆ ಎರಡಾಣೆ ಮಾತ್ರ.

ಲೇಖಕರು:— ಶ್ರೀಮಾನ್ ಟಿ. ಎ. ಮಹಾದೇವಯ್ಯನವರು

ಪುಸ್ತಕ ದೊರೆಯುವ ವಿಳಾಸ— ಶ್ರೀ ಸರ್ಪಭೂಷಣ ಮಠ
ಬಳೇಪೇಟೆ.
ಬೆಂಗಳೂರು ಸಿಟಿ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಜುಲೈ ತಾರೀಖು ೧ ನೆಯ ಸೋಮವಾರ | ಸಂಚಿಕೆ ೪೩.

ಮೌ. ಶೌಕತ ಅಲ್ಲಿಯವರಿಗೆ ನಿರ್ಬಂಧ

ಮೌ. ಶೌಕತ ಅಲ್ಲಿ

ಕರಾಚಿಯಲ್ಲಾದ ದೊಂಬಿಯನ್ನು ಚದುರಿಸಲು ಪೋಲೀಸರು ಗುಂಡು ಹಾರಿಸಿ ಅನೇಕ ಜನರನ್ನು ಕೊಂದುದರ ವಿಚಾರಣೆ ನಡೆಯಿಸಲು ಮುಸ್ಲಿಂ ಲೆಜಿಸ್ಲೇಚರ್ಸ ಅಸೋಸಿಯೇಶನ್ನಿನವರು ಮೌ. ಶೌಕತ ಅಲ್ಲಿ, ರಾಜಾ ಗಜನಫರ ಅಲ್ಲಿಖಾನ, ನವಾಬ ಇಸ್ಮಾಯಿಲಖಾನ ಈ ಮೂವರ ಒಂದು ನಿರ್ಣಯ ಸಮಿತಿಯನ್ನು ನಿಯಮಿಸಿದ್ದರು. ಆದರ ಕಾರ್ಯಕ್ಕಾಗಿ ಮೌ. ಶೌಕತ ಅಲ್ಲಿಯವರು ಕರಾಚಿಗೆ ಹೋಗುವವರಿದ್ದರು. ಆದರೆ ಇವರು ಹೋದರೆ ಅಲ್ಲಿ ದೊಂಬಿಯಾಗಬಹುದೆಂಬ ಸಂಶಯದಿಂದ ಮುಂಬಯಿ ಪೋಲೀಸ ಕಮಿಶನರರು ಅವರಿಗೆ ಹೋಗಲಿಕ್ಕೆ ನಿರ್ಬಂಧ ಪಡಿಸಿದ್ದಾರೆ.

ಅಧ್ಯಕ್ಷರ ಬಾಯಿಗೆ ಬೀಗ.

ಸಿಂಧ ಪ್ರಾಂತದ ಮುಸಲ್ಮಾನರ ಪರಿಷತ್ತು ಶಿಕಾರಪುರದಲ್ಲಿ ಕೂಡುವದಿದ್ದಿತು. ಅದರ ಅಧ್ಯಕ್ಷ ಸ್ಥಾನಕ್ಕೆ ಲಾಹೋರದ ಮೌ. ಹಬೀಬದೂರ ರಹಮಾನ ಇವರನ್ನು ಆರಿಸಲಾಗಿದ್ದಿತು. ಆದರೆ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕರಾಚಿಯಲ್ಲಿ ಗುಂಡು ಹಾರಿದ ಬಗ್ಗೆ ಪ್ರಸ್ತಾಪಿಸಬಹುದೆಂದು ತಿಳಿದು ಶಿಕಾರಪುರದ ಸಭೆಗೆ ಅವರು ಬರಕೂಡದೆಂದು ನಿರ್ಬಂಧ ಪಡಿಸಲಾಯಿತು. ಪೋಲೀಸರ ಈ ಕೃತ್ಯವನ್ನು ನಿಷೇಧಿಸುವ ಕುರಿತು ಆ ಪರಿಷತ್ತನ್ನೇ ನಿಲ್ಲಿಸಿಬಿಡಲಾಯಿತು.

ಈ ನಿರ್ಬಂಧದ ನಿಷೇಧಾರ್ಥವಾಗಿ ಸಕ್ಕರದಲ್ಲಿ ಮುಸಲ್ಮಾನರ ಪರಿಷತ್ತು ನೆರೆಯಿತು. ಅಲ್ಲಿಯೂ ಮೌ. ಹಬೀಬದೂರ ರಹಮಾನ್ ಇವರನ್ನೇ ಅಧ್ಯಕ್ಷರನ್ನು ಮಾಡಿದ್ದಿತು. ಆದರೆ ಮೌಲಾನರಿಗೆ ಆ ಸಕ್ಕರ ಪಟ್ಟಣವನ್ನು ತೀವ್ರವೇ ಬಿಟ್ಟು ಹೋಗಬೇಕೆಂಬ ಅಪ್ಪಣೆಯಾಗಲು ಮೌಲಾನರು ನಿರುಪಾಯರಾಗಿ ಮರಳಿ ಲಾಹೋರಿಗೆ ತೆರಳಿದರು.

ಹಿಂದುಸ್ಥಾನದಲ್ಲಿ ಮೋಟಾರಿನ ವ್ಯವಸಾಯ.

೩ ಸಾವಿರ ರೂ. ಗಳಲ್ಲಿ ಒಂದು ಮೋಟಾರ!

ಹಿಂದುಸ್ಥಾನದಲ್ಲಿಯೇ ಮೋಟಾರುಗಳನ್ನು ಸಿದ್ಧಪಡಿಸುವ ಒಂದು ಕಾರ್ಯಾಲಯವನ್ನು ಬೆಂಗಳೂರಲ್ಲಿ ಸ್ಥಾಪಿಸುವ ಯೋಜನೆ ಸಂಪೂರ್ಣವಾಗಿದೆ. ಈ ಕಾರ್ಯಾಲಯಕ್ಕೆ ೧॥ ಕೋಟಿ ರೂ. ಮೊತ್ತವು ಬೇಕಾಗುವದು. ಇಲ್ಲಿಂದ ಸಿದ್ಧವಾದ ಮೋಟಾರ ಬಂಡಿಗಳು ೩ ಸಾವಿರ ರೂ. ಗಳಿಗೂ ಮತ್ತು ಸಾಮಾನು ಹೇರಲು ಉಪಯೋಗಿಸುವ ಟ್ರಕ್ ಬಂಡಿಗಳು ೧೫೦೦ ರೂ. ಗಳಿಗೂ ದೊರೆಯುವವು. ಮೋಟಾರ ಬಂಡಿಗೆ ಬೇಕಾಗುವ ಯಂತ್ರಗಳಲ್ಲಿ ಕೆಲವನ್ನು ಪರದೇಶಗಳಿಂದ ತರಿಸಬೇಕಾಗುವದು. ಆದರೆ ಉಳಿದೆಲ್ಲ ಭಾಗಗಳನ್ನು ಜಮಶೇಟಪುರದಲ್ಲಿಯಾಗಲಿ ಮುಂಬಯಿಯ ಕಬ್ಬಿಣ ಕಾರ್ಯಾಲಯಗಳಲ್ಲಿಯಾಗಲಿ ಸಿದ್ಧಮಾಡಿಕೊಳ್ಳಲು ಬರುವದು. ಮೋಟಾರಿನ ಟಾಯರುಗಳನ್ನು ಸಿದ್ಧಪಡಿಸಲಿಕ್ಕೂ ಮುಂಬಯಿಯ ಒಂದು ಕಾರ್ಯಾಲಯವು ಕೆಲಸ ನಡೆಯಿಸಿದೆ. ಈ ಕಾರ್ಯಕ್ಕಾಗಿ ಅಮೇರಿಕಾದಲ್ಲಿಯ ತಜ್ಞರ ಸಲಹೆಯನ್ನು ತೆಗೆದುಕೊಳ್ಳಲಾಗುವದು. ಜಕಾತಿಯ ಬಗ್ಗೆ ಮತ್ತು ಈ ಕಾರ್ಯಾಲಯದಲ್ಲಿ ಸಿದ್ಧವಾದ ಮೋಟಾರುಗಳನ್ನು ಕೊಂಡುಕೊಳ್ಳುವ ಬಗ್ಗೆ ಹಿಂದುಸ್ಥಾನ ಸರಕಾರದವರಿಗೆ ವಿನಂತಿ ಮಾಡಿಕೊಳ್ಳಲಾಗುವದು.

—ವ್ಹಾಯಿಸರಾಯರು ೪ ನೆಯ ತಾರೀಖಿನ ದಿವಸ ಕ್ವೇಟಾಕ್ಕೆ ಹೋಗುವರು. ಅಲ್ಲಿಯ ಭೂಕಂಪವಾದ ಸ್ಥಾನವನ್ನೂ, ಪೀಡಿತ ಜನರನ್ನೂ ಸಂದರ್ಶಿಸುವರು. ಕ್ವೇಟಾ ಪಟ್ಟಣದ ಭವಿತವ್ಯವು ಅನಂತರ ಚರ್ಚಿಸಲಾಗುವದು.

—ಫ್ರಾನ್ಸದಲ್ಲಿ ಸೈನ್ಯದ ವೆಚ್ಚವನ್ನು ಹೆಚ್ಚಿಸಲಾಗಿದೆ. ಈ ಸಾರೆ ೩ ಅಬ್ಜ ಫ್ರಾಂಕು (೪ ಕೋಟಿ ಪೌಂಡು) ಗಳನ್ನು ಸೈನ್ಯ ಖಾತೆಗೆ ವೆಚ್ಚ ಮಾಡಬೇಕೆಂದು ಗೊತ್ತುವಳಿಯು ಮಂಡಿಸಲ್ಪಡುವದು.

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಅಫೀಸ್:-
ಅಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕ)

ಗಂಡಾಂತರಕ್ಕೊಳಗಾಗಬೇಡಿರಿ!

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುಂದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತ.?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ** ಒಟ್ಟು ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ **ಸಿದ್ಧೇಶ್ವರ ಕಂಪನಿಯು** ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ಸೋಡೀ ಸೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ **ಸಿದ್ಧೇಶ್ವರ** ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ವರನು ಬೇಕು.

P. 18 ಹದಿನಾರು ವರ್ಷ ಪ್ರಾಯದ ಸುರೂಪಿಯೂ, ಗೃಹಕೃತ್ಯದಲ್ಲಿ ನಿಪುಣೆಯೂ, ಕನ್ನಡ ಓದುಬರಹ ಬಲ್ಲವಳೂ ಆದ ಗೌಡ ಸಾರಸ್ವತ ಬ್ರಾಹ್ಮಣ ಕನ್ಯಾ ವಧುವಿಗೆ ೨೫ ವರ್ಷಕ್ಕೆ ಮೀರದ ಸರಕಾರಿ ಉದ್ಯೋಗವಿರುವ ಸ್ವವೃಂದದ ವರನು ಬೇಕು.

ವಧುವು ಬೇಕು.

W. 17 ಸರಕಾರಿ ಕೆಲಸದಲ್ಲಿ ತಿಂಗಳಿಗೆ ೩೦ ರೂ. ಸಂಬಳವಿರುವ ೩೫ ವರ್ಷ ಪ್ರಾಯದ ಆರೋಗ್ಯವಂತರಾದ ಓರ್ವ ಗೌಡ ಸಾರಸ್ವತ ಬ್ರಾಹ್ಮಣ ಯುವಕರಿಗೆ ೨೮ ವರ್ಷಕ್ಕೆ ಮೀರದ ಸುಂದರಿಯೂ, ಗೃಹಕೃತ್ಯಗಳನ್ನು ನಿರ್ವಹಿಸಬಲ್ಲವಳೂ ಆದ ವಿದ್ಯಾವಂತ ವಿಧವೆಯು ಬೇಕು.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ. ಎಸ್. ಶೈ
ಶಿವಪೇಟೆ ಪುತ್ತೂರು.ದ. ಕ.

ಅಂದವಾದ ಮುದ್ರಣ! ಅಚ್ಚುಕಟ್ಟಾದ ಬೈಂಡು!

ಸಂಕ್ಷಿಪ್ತ

ಮಹಾದೇವಿಯಕ್ಕನ ಜೀವನ ಚರಿತ್ರೆ.

ವಚನವಾಙ್ಮಯದಲ್ಲಿ ಉಚ್ಚಸ್ಥಾನವನ್ನು ಪಡೆದು ಪ್ರಸಿದ್ಧಿ ಪಡೆದ ಉಡುತಡಿಯ ಮಹಾದೇವಿಯಕ್ಕನ ಜೀವನ ಕಥೆ. ವಚನಗಳಿಂದ ಕೂಡಿ ಭಾವ ಪೂರ್ಣವಾಗಿ ಬರೆಯಲ್ಪಟ್ಟದೆ.

ಬೆಲೆ ಎರಡಾಣೆ ಮಾತ್ರ.

ಲೇಖಕರು:— ಶ್ರೀಮಾನ್ ಟಿ. ಎಸ್. ಮಹಾದೇವಯ್ಯನವರು

ಪುಸ್ತಕ ದೊರೆಯುವ ವಿಳಾಸ— ಶ್ರೀ ಸರ್ಪಭೂಷಣ ಮಠ
ಬಳೇಪೇಟೆ.
ಬೆಂಗಳೂರು ಸಿಟಿ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಜುಲೈ ತಾರೀಖು ೧ ನೆಯ ಸೋಮವಾರ | ಸಂಚಿಕೆ ೪೩.

ಮೌ. ಶೌಕತ ಅಲ್ಲಿಯವರಿಗೆ ನಿರ್ಬಂಧ

ಮೌ. ಶೌಕತ ಅಲ್ಲಿ

ಕರಾಚಿಯಲ್ಲಾದ ದೊಂಬಿಯನ್ನು ಚದುರಿಸಲು ಪೋಲೀಸರು ಗುಂಡು ಹಾರಿಸಿ ಅನೇಕ ಜನರನ್ನು ಕೊಂದುದರ ವಿಚಾರಣೆ ನಡೆಯಿಸಲು ಮುಸ್ಲಿಂ ಲೆಜಿಸ್ಲೇಚರ್ಸ ಅಸೋಸಿಯೇಶನ್ನಿನವರು ಮೌ. ಶೌಕತ ಅಲ್ಲಿ, ರಾಜಾ ಗಜನಫರ ಅಲ್ಲಿಖಾನ, ನವಾಬ ಇಸ್ಮಾಯಿಲಖಾನ ಈ ಮೂವರ ಒಂದು ನಿರ್ಣಯ ಸಮಿತಿಯನ್ನು ನಿಯಮಿಸಿದ್ದರು. ಅದರ ಕಾರ್ಯಕ್ಕಾಗಿ ಮೌ. ಶೌಕತ ಅಲ್ಲಿಯವರು ಕರಾಚಿಗೆ ಹೋಗುವವರಿದ್ದರು. ಆದರೆ ಇವರು ಹೋದರೆ ಅಲ್ಲಿ ದೊಂಬಿಯಾಗಬಹುದೆಂಬ ಸಂಶಯದಿಂದ ಮುಂಬಯಿ ಪೋಲೀಸ ಕಮಿಶನರರು ಅವರಿಗೆ ಹೋಗಲಿಕ್ಕೆ ನಿರ್ಬಂಧ ಪಡಿಸಿದ್ದಾರೆ.

ಅಧ್ಯಕ್ಷರ ಬಾಯಿಗೆ ಬೀಗ.

ಸಿಂಧ ಪ್ರಾಂತದ ಮುಸಲ್ಮಾನರ ಪರಿಷತ್ತು ಶಿಕಾರಪುರದಲ್ಲಿ ಕೂಡುವದಿದ್ದಿತು. ಅದರ ಅಧ್ಯಕ್ಷ ಸ್ಥಾನಕ್ಕೆ ಲಾಹೋರದ ಮೌ. ಹಬೀಬದೂರ ರಹಮಾನ ಇವರನ್ನು ಆರಿಸಲಾಗಿದ್ದಿತು. ಆದರೆ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕರಾಚಿಯಲ್ಲಿ ಗುಂಡು ಹಾಕಿದ ಬಗ್ಗೆ ಪ್ರಸ್ತಾಪಿಸಬಹುದೆಂದು ತಿಳಿದು ಶಿಕಾರಪುರದ ಸಭೆಗೆ ಅವರು ಬರಕೂಡದೆಂದು ನಿರ್ಬಂಧ ಪಡಿಸಲಾಯಿತು. ಪೋಲೀಸರ ಈ ಕೃತ್ಯವನ್ನು ನಿಷೇಧಿಸುವ ಕುರಿತು ಆ ಪರಿಷತ್ತನ್ನೇ ನಿಲ್ಲಿಸಿಬಿಡಲಾಯಿತು.

ಈ ನಿರ್ಬಂಧದ ನಿಷೇಧಾರ್ಥವಾಗಿ ಸಕ್ಕರದಲ್ಲಿ ಮುಸಲ್ಮಾನರ ಪರಿಷತ್ತು ನೆರೆಯಿತು. ಅಲ್ಲಿಯೂ ಮೌ. ಹಬೀಬದೂರ ರಹಮಾನ್ ಇವರನ್ನೇ ಅಧ್ಯಕ್ಷರನ್ನು ಮಾಡಿದ್ದಿತು. ಆದರೆ ಮೌಲಾನರಿಗೆ ಆ ಸಕ್ಕರ ಪಟ್ಟಣವನ್ನು ತೀವ್ರವೇ ಬಿಟ್ಟು ಹೋಗಬೇಕೆಂಬ ಅಪ್ಪಣೆಯಾಗಲು ಮೌಲಾನರು ನಿರುಪಾಯರಾಗಿ ಮರಳಿ ಲಾಹೋರಿಗೆ ತೆರಳಿದರು.

ಹಿಂದುಸ್ಥಾನದಲ್ಲಿ ಮೋಟಾರಿನ ವ್ಯವಸಾಯ.

೨ ಸಾವಿರ ರೂ. ಗಳಲ್ಲಿ ಒಂದು ಮೋಟಾರ!

ಹಿಂದುಸ್ಥಾನದಲ್ಲಿಯೇ ಮೋಟಾರುಗಳನ್ನು ಸಿದ್ಧಪಡಿಸುವ ಒಂದು ಕಾರ್ಯಾಲಯವನ್ನು ಬೆಂಗಳೂರಲ್ಲಿ ಸ್ಥಾಪಿಸುವ ಯೋಜನೆ ಸಂಪೂರ್ಣವಾಗಿದೆ. ಈ ಕಾರ್ಯಾಲಯಕ್ಕೆ ೧॥ ಕೋಟಿ ರೂ. ಮೊತ್ತವು ಬೇಕಾಗುವದು. ಇಲ್ಲಿಂದ ಸಿದ್ಧವಾದ ಮೋಟಾರ ಬಂಡಿಗಳು ೨ ಸಾವಿರ ರೂ. ಗಳಿಗೂ ಮತ್ತು ಸಾಮಾನು ಹೇರಲು ಉಪಯೋಗಿಸುವ ಟ್ರಕ್ ಬಂಡಿಗಳು ೧೫೦೦ ರೂ. ಗಳಿಗೂ ದೊರೆಯುವವು. ಮೋಟಾರ ಬಂಡಿಗೆ ಬೇಕಾಗುವ ಯಂತ್ರಗಳಲ್ಲಿ ಕೆಲವನ್ನು ಪರದೇಶಗಳಿಂದ ತರಿಸಬೇಕಾಗುವದು ಆದರೆ ಉಳಿದೆಲ್ಲ ಭಾಗಗಳನ್ನು ಜಮಶೇಟಪುರದಲ್ಲಿಯಾಗಲಿ ಮುಂಬಯಿಯ ಕಬ್ಬಿಣ ಕಾರ್ಯಾಲಯಗಳಲ್ಲಿಯಾಗಲಿ ಸಿದ್ಧಮಾಡಿಕೊಳ್ಳಲು ಬರುವದು. ಮೋಟಾರಿನ ಟಾಯರುಗಳನ್ನು ಸಿದ್ಧಪಡಿಸಲಿಕ್ಕೂ ಮುಂಬಯಿಯ ಒಂದು ಕಾರ್ಯಾಲಯವು ಕೆಲಸ ನಡೆಯಿಸಿದೆ. ಈ ಕಾರ್ಯಕ್ಕಾಗಿ ಅಮೇರಿಕಾದಲ್ಲಿಯ ತಜ್ಞರ ಸಲಹೆಯನ್ನು ತೆಗೆದುಕೊಳ್ಳಲಾಗುವದು. ಜಕಾತಿಯ ಬಗ್ಗೆ ಮತ್ತು ಈ ಕಾರ್ಯಾಲಯದಲ್ಲಿ ಸಿದ್ಧವಾದ ಮೋಟಾರುಗಳನ್ನು ಕೊಂಡುಕೊಳ್ಳುವ ಬಗ್ಗೆ ಹಿಂದುಸ್ಥಾನ ಸರಕಾರದವರಿಗೆ ವಿನಂತಿ ಮಾಡಿಕೊಳ್ಳಲಾಗುವದು.

—ವ್ಹಾಯಿಸರಾಯರು ೪ ನೆಯ ತಾರೀಖಿನ ದಿವಸ ಕ್ವೇಟಾಕ್ಕೆ ಹೋಗುವರು ಅಲ್ಲಿಯ ಭೂಕಂಪವಾದ ಸ್ಥಾನವನ್ನೂ, ಪೀಡಿತ ಜನರನ್ನೂ ಸಂದರ್ಶಿಸುವರು. ಕ್ವೇಟಾ ಪಟ್ಟಣದ ಭವಿತವ್ಯವು ನಂತರ ಚರ್ಚಿಸಲಾಗುವದು.

—ಫ್ರಾನ್ಸದಲ್ಲಿ ಸೈನ್ಯದ ವೆಚ್ಚವನ್ನು ಹೆಚ್ಚಿಸಲಾಗಿದೆ. ಈ ಸಾರೆ ೩ ಅಬ್ಜ ಫ್ರಾಂಕು (೪ ಕೋಟಿ ಪೌಂಡು) ಗಳನ್ನು ಸೈನ್ಯ ಖಾತೆಗೆ ವೆಚ್ಚ ಮಾಡಬೇಕೆಂದು ಗೊತ್ತುವಳಿಯು ಮಂಡಿಸಲ್ಪಡುವದು.

ಬಸವಣ್ಣನವರ ವಚನಗಳ ಅನುವಾದ.

SAYINGS OF BASAVANNA.

(ಅನುವಾದಕರ.— ಶ್ರೀ. ಎಂ. ವೆಂಕಟೇಶ ಅಯ್ಯಂಗಾರ್ಯರು ಎಮ್. ಎ.)

—:ಕಳೆದ ಸಂಚಿಕೆಯಿಂದ ಬಂದುದು:—

೩೯ ನಾ ನಿಮ್ಮ ನೆನೆವೆನು. ನೀವೆನ್ನ ನೆನೆಯಿರಿ ನಾ ನಿಮ್ಮ ನೋಲೈಸುವೆನು. ನೀವೆನ್ನ ಕಾಣಿರಿ. ನಾನಂತು ಬದುಕುವೆನೆಂತು ಜೀವಿಸುವೆನಯ್ಯಾ? ಕೂಡಲ ಸಂಗಮದೇವಾ, ಎನಗೆ ನೀವೇ ಪ್ರಾಣಗತಿಮತಿ ನೋಡಯ್ಯಾ.

"I think of you. You do not know me. I serve you, but you are not aware of me. How shall I live? How shall I bear existence? O God Kudala Sangama, you alone are life and light and way for me. Remember."

೪೦ ಎನ್ನ ಆಪತ್ತು ಸುಖದುಃಖ ನೀವೇ ಕಂಡಯ್ಯಾ! ಮತ್ತಾರೂ ಇಲ್ಲ. ಹರ ಹರಾ ನೀನೇ ಕಂಡಯ್ಯಾ! ಎನ್ನ ಮಾತಾಪಿತನು ನೀನೇ ಕಂಡಯ್ಯಾ ಕೂಡಲ ಸಂಗಮದೇವಾ.

"Lord! You are all the sorrows and all the joys of life to me. I know none else, O God, you alone are mine. My father and my mother are you, O God Kudala Sangama."

೪೧ ಭವರೋಗ ವೈದ್ಯನೆಂದು, ನಾ ನಿಮ್ಮ ಮೊರೆಹೊಕ್ಕೆ. ಭಕ್ತಿದಾಯಕ ನೀನು. ಕರುಣಿಸು ಲಿಂಗ ತಂದೆ, ಜಯ ಜಯ ಶ್ರೀ ಮಹಾದೇವ, ಜಯ ಜಯ ಶ್ರೀ ಮಹಾದೇವ, ಜಯ ಜಯ ಶ್ರೀ ಮಹಾದೇವ ಎನುತ್ತಿದ್ದಿತೆನ್ನ ಮನವು. ಕೂಡಲ ಸಂಗಮದೇವಂಗೆ ಶರಣೆಂದಿತ್ತೆನ್ನ ಮನವು.

"As physician to the disease of life came I to you. You are the giver of faith. 'Take mercy on me, O Father, O God, O Victorious Lord of the world!' thus says my mind. 'You are my refuge,' says my mind to God Kudala Sangama."

೪೨ ಬೋಟನ ಮೌಳಿ, ಮೂಕೊರೆಯನ ಶೃಂಗಾರ, ಬೇಟ ಕುರುಡಂಗೆ ನಗೆಗೆಡೆಯಾಯಿತ್ತು. ನಮ್ಮ ಕೂಡಲ ಸಂಗನ ಶರಣರ ಮುಂದೆ, ಆನು ಭಕ್ತನೆಂಬ ನಾಚಿಕೆ ಸಾಲದೆ!

"Like a crown on the head of a dwarf, like the bedecking of a noseless face, or as a blind man's amour, my life has become laughable. Is the shame not enough of saying in the presence of your servants, O God Kudala Sangama, that I too am a devotee?"

೪೩ ಮಾವಿನಕಾಯೊಳಗೊಂದು ಎಕ್ಕೆಯಕಾಯಿ ನಾನೈಯ್ಯ! ನು ಭಕ್ತನೆಂತೆಂಬೆ, ನಿಮ್ಮ ಶರಣರ ಮುಂದೆ, ನಾಚಿಕೆಯಿಲ್ಲದೆ? ೂಡಲ ಸಂಗನ ಶರಣರ ಮುಂದೆ ನಾನೆಂತು ಭಕ್ತನಪ್ಪೆನಯ್ಯಾ?

"I am a jungle-berry by the side of the mango-fruit. How shall I say that I am a devotee? Knowing of your servants? Have I no shame? In what sense can I be your servant along with those others who serve you, O God Kudala Sangama."

೪೪ ಎನಗಿಂತ ಕಿರಿಯರಿಲ್ಲ; ಶಿವಭಕ್ತರಿಗಿಂತ ಹಿರಿಯರಿಲ್ಲ. ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ. ಕೂಡಲ ಸಂಗಮದೇವಾ ಎನಗಿದೇ ದಿಬ್ಯ.

"Smaller than I there is none. Greater than your servants there is none. Your feet are witness to these truths. My mind is witness. My God Kudala Sangama."

೪೫ ಮರದ ನೆಳಲಲ್ಲಿದ್ದು ತನ್ನ ನೆಳಲನರಸಬಹುದೇ? ನಿಮ್ಮ ಶರಣರ ಮುಂದೆ ನಾನೇತರ ಭಕ್ತನಯ್ಯಾ? ನಿಮ್ಮ ಶರಣರ ಮುಂದೆ, ನಾನೇತರ ಯುಕ್ತನಯ್ಯಾ? ಆನು ಭಕ್ತನೆಂಬ ನುಡಿ ಸುಡದೆ ಕೂಡಲ ಸಂಗಮದೇವಾ?

"Standing in the shade of a tree, who would try to destinguish his own shadow? In the presence of your devotees what devotion is mine? Would not the claim that I too am a servant destroy? O God Kudala Sangama!

೪೬ ಆನು ಭಕ್ತನಲ್ಲಯ್ಯ. ಆನು ವೇಷಧಾರಿಯಯ್ಯಾ. ಕಟುಗ ಕೆತ್ತುಗ, ಪೊಲ್ಲುಗನೆಂಬುದು ಎನ್ನ ಹೆಸರು ಕೂಡಲ ಸಂಗಮದೇವಾ, ನಿಮ್ಮ ಶರಣರ ಮನೆಯಮಗ ನಾನಯ್ಯಾ.

"No devotee am I. Only I wear the form of one. Graceless, sinful, is my name. O God Kudala Sangama, I am only a child of the household of your servants."

೪೭ ಡಂಬ ಡಳಹು ಎನ್ನದಯ್ಯಾ! ಡಂಬಕನೆಂಬವ ನಾನಯ್ಯಾ. ನಿಮ್ಮ ನಂಬಿದ ಶರಣರ ಡಿಂಗರಿಗ ನಾನು ಕೂಡಲ ಸಂಗಮದೇವಾ.

"Much show and emptiness are mine. I am a vaunter. No more am I in truth than servant of the saints who have faith in you, O God Kudala Sangama!"

೪೮ ಬ್ರಹ್ಮಪದವಿಯ ನೊಲ್ಲೆ, ವಿಷ್ಣುಪದವಿಯ ನೊಲ್ಲೆ, ರುದ್ರಪದವಿಯ ನೊಲ್ಲೆ, ನಾನು ಮತ್ತಾವ ಪದವಿಯ ನೊಲ್ಲೆನಯ್ಯಾ! ಕೂಡಲ ಸಂಗಮದೇವಾ, ನಿಮ್ಮ ಸದ್ಭಕ್ತರ ಪಾದವನರಿದಿಪ್ಪ ಮಹಾಪದವಿಯನೆ ಕರುಣಿಸಯ್ಯಾ.

"I desire not the height of Brahma. Nor do I desire the position of Vishnu, nor of Rudra. I desire no height but this. Grant that I may know the feet of your saints, O God Kudala Sangama."

—(ಮುಂದುವರಿಯುವದು.)—

ಮುಸ್ತಫಾ ಕೇಮಾಲ ಪಾಷ.

(ಲೇ.: — ಶ್ರೀ. ಆರ್. ಎಸ್. ಆರಾಧ್ಯ, ತುಮಕೂರು)

ಮುಸ್ತಫಾ ಕೇಮಾಲ್ ಪಾಷನು ೧೮೮೧ ರಲ್ಲಿ ತುರ್ಕಸ್ಥಾನದ ಸಲೋನಿಕಾ ಎಂಬ ಊರಿನಲ್ಲಿ ಜನಿಸಿದನು. ಇವನ ತಂದೆಯಾದ ಅಲಿರಾಜನು ತುರ್ಕಸ್ಥಾನದ ಹಳೆಯ ಪದ್ಧತಿಗಳನ್ನು ಹೋಗಲಾಡಿಸಿ ಯುರೋಪಿನ ಆಧುನಿಕ ಪದ್ಧತಿಗಳನ್ನು ತನ್ನ ದೇಶದಲ್ಲಿ ಆಚರಣೆಗೆ ತಂದು ತನ್ನ ದೇಶವನ್ನು, ತನ್ನ ಜನಗಳನ್ನು ಮುಂದುವರಿಸಬೇಕೆಂದು ಆಶೆಪಡುತ್ತಿದ್ದನು. ಆದರೆ ಏನು ತಾನೆ ಮಾಡಿಯಾನು? ಅವನೊಬ್ಬ ಕೇವಲ ಬಡ ಕೂಲಿಕಾರ. ಕೇಮಾಲ್‌ನ ತಾಯಿಯು ಮುಸ್ಲಿಂ ಮತದಲ್ಲಿ ತುಂಬಾ ಶ್ರದ್ಧೆಯುಳ್ಳವಳಾಗಿಯೂ ಪತಿಪಾರಾಯಣೆಯಾಗಿಯೂ ಇದ್ದಳು. ತಾಯಿಗೂ ಮಗನಿಗೂ ಬಹಳ ಪ್ರೀತಿ.

ಕೇಮಾಲ್‌ನು ಚಿಕ್ಕಂದಿನಿಂದಲೂ "ಫ್ರೆಂಚ ಪರಿವರ್ತನ" ಮೊದಲಾದ ಕ್ರಾಂತಿಕಾರರ ಪುಸ್ತಕಗಳನ್ನು ಓದುತ್ತಿದ್ದನು. ಇದು ಇವನ ತಾಯಿಗೆ ಕೊಂಚವೂ ಸರಿಬೀಳುತ್ತಿರಲಿಲ್ಲ. ಆದರೆ ಇವನ ತಂದೆಗೆ ಈ ವಿಷಯವನ್ನು ಕಂಡರೆ ಬಹಳ ಸಂತೋಷ. ಕೇಮಾಲನಿಗೆ ಈ ತರದ ಪುಸ್ತಕಗಳನ್ನು ಓದಿ ತುರ್ಕಿಯ ಸಾಮಾಜಿಕ ಭಾವನೆಗಳನ್ನು ಸಂಪೂರ್ಣವಾಗಿ ನಾಶಮಾಡಿ ರಾಜ್ಯದಲ್ಲಿ ದೊಡ್ಡ ಕ್ರಾಂತಿಯುಂಟಾಗುವಂತೆ ಮಾಡಿದರೆ ತನ್ನ ಆಶಯವು ನೆರವೇರುವುದೆಂಬ ಚಿಂತೆ. ಕೇಮಾಲನು ವಿದ್ಯಾಭ್ಯಾಸ ಮಾಡುತ್ತಿದ್ದ ಕಾಲದಲ್ಲಿಯೇ ತನ್ನ ರಾಷ್ಟ್ರದ ದುಸ್ಥಿತಿಯನ್ನು ನೋಡಿ ಮಾತೃದೇಶದ ಸ್ವಾತಂತ್ರ್ಯಕ್ಕಾಗಿ ಹೊಡೆದಾಡಲು ಅಂದೇ ದೃಢ ಪ್ರತಿಜ್ಞೆ ಮಾಡಿದನು. ತನ್ನ ದೇಶದ ಸುಸ್ಥಿತಿ, ಸುವ್ಯವಸ್ಥೆಗಳೇ ಅವನ ಆಶೆ. ಅನ್ಯ ದೇಶಗಳೊಡನೆ ತನ್ನ ದೇಶದ ಹಿತ ಸಂಬಂಧವೇ ಅವನ ಗಮ್ಯ.

ಮುಸ್ತಫಾ ಕೇಮಾಲ್ ಪಾಷನು ಟರ್ಕಿಯನ್ನು ಉತ್ತಮಗೊಳಿಸಬೇಕೆಂದು ಎಂದು ಸಂಕಲ್ಪ ಮಾಡಿದನೋ ಅಂದೇ ಆರ್ಥಿಕ ಕ್ಷೇತ್ರದಲ್ಲಿ ಹೊಸ ದಾರಿಯನ್ನು ಹುಡುಕಲು ಆರಂಭಿಸಿದನು. ಇವನು ಕೆಲವು ಜನ ಅನುಯಾಯಿಗಳೊಡನೆ ಒಂದು ಗುಪ್ತ ಸಂಘವನ್ನು ಏರ್ಪಡಿಸಿ ತನ್ಮೂಲಕ ಟರ್ಕಿಯ ಸುಲ್ತಾನರ ಪ್ರಭುತ್ವವನ್ನು ನಾಶಗೊಳಿಸಲು ಪ್ರಯತ್ನಪಡುತ್ತಿದ್ದನು. ಇವರು ಮಾಡುತ್ತಿದ್ದ ಸನ್ನಾಹಗಳು ಸುಲ್ತಾನರ ಕಿವಿಗೆ ಬಿದ್ದು ಕೇಮಾಲ್‌ನನ್ನು ಮತ್ತು ಅವನ ಅನುಯಾಯಿಗಳನ್ನು ದೇಶದಿಂದ ಬಿಟ್ಟೋಡಿಸಿದರು. ಅಲ್ಲಿಂದ ಕೇಮಾಲ್‌ನು ಮೆಸಡೋನಿಯಾವಿಗೆ ಬಂದು ಸೇರಿದನು. ಅಲ್ಲಿಯೂ ಇವನು ತನ್ನ ಗುಣ ಸಾಮರ್ಥ್ಯಗಳಿಂದ ಸ್ವಲ್ಪ ದಿವಸಗಳಲ್ಲಿಯೇ ಅಲ್ಲಿಯ ಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರನಾಗಿ ಪುನಃ ಗುಪ್ತವಾಗಿ ತನ್ನ ದೇಶಕ್ಕೆ ಹಿಂತಿರುಗಿದನು. ಕ್ರಿ. ಶ. ೧೯೦೮ ರ ಸುಮಾರಿನಲ್ಲಿ ಟರ್ಕಿಯಲ್ಲಿ ಒಂದು ದೊಡ್ಡ ಕ್ರಾಂತಿಯ ಗೊಂದಲವು ನಡೆಯಿತು. ಆ ಕ್ರಾಂತಿಗೆ ಕೇಮಾಲ್‌ನು ಗುಪ್ತವಾಗಿ ಬಂದು ಸೇರಿ ಚಳುವಳಿಗೆ ಆರಂಭಿಸಿದನು. ಸುಲ್ತಾನರ ಸೈನಿಕರು ಇವರ ಮೇಲೆ ಕೈಮಾಡಲು ಒಡಂಬಡದಿರಲು ಸುಲ್ತಾನನು ಇವರೊಡನೆ ಸ್ನೇಹಬೆಳಸಬೇಕಾಗಿಬಂತು. ಹಾಗಾದರೂ ಸುಲ್ತಾನನು ತನ್ನ ನಿರಂಕುಶ ಪ್ರಭುತ್ವವನ್ನು ಕೊನೆಗಾಣಿಸಲಿಲ್ಲ. ಆದುದರಿಂದ ಮಾರನೆ ವರ್ಷವೇ ಕೇಮಾಲ್‌ನ ನಾಯಕತ್ವದಲ್ಲಿ ಕ್ರಾಂತಿಯು ಪ್ರಾರಂಭವಾಯಿತು. ಈ ಸಲ ಕ್ರಾಂತಿಕಾರರು ಜಯಶೀಲರಾಗಿ ಸುಲ್ತಾನನನ್ನು ಸಿಂಹಾಸನದಿಂದಹೊರಗೆ ತಳ್ಳಿ ಆತನ ತಮ್ಮನನ್ನು ಪಟ್ಟಕ್ಕೇರಿಸಿದರು. ಆದರೆ ಇವನಿಗೆ ಮಾತ್ರ ನಿರಂಕುಶ ಪ್ರಭುತ್ವವನ್ನು ಕೊಡಲಿಲ್ಲ. ಪ್ರಜೆಗಳಿಗೆ ಎಲ್ಲ ವಿಧದಲ್ಲಿಯೂ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ಕೇಮಾಲನು ಕೆಲವು ವರ್ಷಗಳವರೆಗೆ ಯಾರಿಗೂ ಗೋಚರಿಸದಂತೆ ಇದ್ದನು. ಇವನು ಹೀಗೆ ಬಹಳ ದಿವಸ ಅಜ್ಞಾತವಾಸ ಮಾಡಲು ಇಷ್ಟಪಡಲಿಲ್ಲ. ತನ್ನ ದೇಶವನ್ನು ಅಭಿವೃದ್ಧಿಗೊಳಿಸಬೇಕೆಂಬ ಆಶೆಯು ಕೇಮಾಲ್‌ನನ್ನು ಪುನಃ ಹುರಿದುಂಬಿಸಿತು.

ಕೇಮಾಲ್ ಪಾಷನು ಅನೇಕ ವರ್ಷ ದುಡಿದು ಈಗ ಟರ್ಕಿಯನ್ನು ಯುರೋಪ್ ದೇಶದ ಉನ್ನತ ರಾಜ್ಯಗಳಲ್ಲೊಂದನ್ನಾಗಿ ಮಾಡಿರುವನು. ಕೇಮಾಲ್ ಪಾಷನಿಗೆ "ಕೇಮಲ್ ಅಟ್ ಟರ್ಕ" ಎಂಬ ಇನ್ನೊಂದು ಹೆಸರುಂಟು. ಆದರೆ ಆ ದೇಶದಲ್ಲಿ ಈ ಹೆಸರಿನಿಂದ ಕರೆಯುವ ಅಭ್ಯಾಸವಿಲ್ಲ. 'ಕೇಮಲ್ ಅಟ್ ಟರ್ಕ' ಎಂದರೆ ಟರ್ಕಿಯ ತಂದೆಯೆಂದಾಗುತ್ತದೆ. ಆದರೆ ಟರ್ಕಿಯ ದೇಶಸ್ಥರೆಲ್ಲರೂ ಇವನನ್ನು 'ಘಾಜಿ ಕೇಮಾಲ್' ಎಂದು ಕರೆಯುವ ವಾಡಿಕೆಯುಂಟು. ಇವನು ಈ ಹೆಸರನ್ನು ಪಡೆಯಲು ಟರ್ಕಿಯಲ್ಲಿ ಮಾಡಿರುವ ರಾಜಕೀಯ, ಸಾಮಾಜಿಕ, ಸುಧಾರಣೆಗಳೇ ಮುಖ್ಯ ಕಾರಣ. ಅತ್ಯಂತ ಹಿಂದೆ ಬಿದ್ದಿದ್ದ ಈ ರಾಜ್ಯವನ್ನು ಮುಂದೆ ತರಲು ಕೇಮಾಲ್ ಪಾಷನು ಎಷ್ಟು ಕಷ್ಟ ಪಟ್ಟಿದ್ದಾನೋ ಹೇಳತೀರದು.

ಕೇಮಾಲ್ ಪಾಷನಿಗೆ ಇಷ್ಟೊಂದು ಶಕ್ತಿ ಇದ್ದರೂ, ಪ್ರಭುತ್ವವಿದ್ದರೂ, ಅವನಿಗೆ ಅರಮನೆ ಇಲ್ಲ. ಅವನ ವಾಸ ಒಂದು ಚಿಕ್ಕ ಬಂಗಲೆ. ಹೋಟೇಲುಗಳು ಕ್ಲಬ್‌ಗಳು ಇವನಿಗೆ ತೌರುಮನೆ. ಕೇಮಾಲನನ್ನು ಅವನ ಸ್ನೇಹಿತರ ಜೊತೆಯಲ್ಲಿ ಹೋಟೇಲಿನಲ್ಲಿ ತಿನ್ನುತ್ತಾ ಕೂತಿರುವದನ್ನು ಈಗಲೂ ನೋಡಬಹುದು. ಯಾವಾಗಲೂ ಮಾತುಗಳನ್ನು ಆಡಿಕೊಂಡು ಹುಡುಗರೊಡನೆ ಹರಟೆಯನ್ನು ಹೊಡೆಯುವದೆಂದರೆ ಇವನಿಗೆ ತುಂಬಾ ಆಶೆ. ಸಾಯಂಕಾಲದ ಹೊತ್ತು ಅನೇಕರು ಕೇಮಾಲನ ಸಂಗಡ ಮಾತನಾಡಲು ಹೋಟೇಲಿನ ಬಳಿ ಕಾದಿರುತ್ತಾರೆ. ಅಲ್ಲಿಗೆ ತಪ್ಪದೆ ಕೇಮಾಲನು ಪ್ರತಿ ಸಾಯಂಕಾಲವು ಹಾಜರಾಗುತ್ತಾನೆ. ಯಾರು ಬೇಕಾದರೂ ಅವನನ್ನು ಸಮೀಪಿಸಿ ಏನು ಬೇಕಾದರೂ ಕೇಳಬಹುದು. ಇವನು ಮಾಡುತ್ತಿರುವ ಆಧುನಿಕ ಟರ್ಕಿಯ ನಿರ್ಮಾಣ, ರಾಜಕೀಯ ಮತ್ತು ಸಾಮಾಜಿಕ ಸುಧಾರಣೆಗಳ ಮೇಲೆ ಬೇಕಾದ ಪ್ರಶ್ನೆಗಳನ್ನು ಹಾಕಬಹುದು. ಸಂತೋಷಚಿತ್ತನಾಗಿ ವಿವರಿಸುತ್ತಾನೆ. ಅನೇಕ ವೇಳೆ ಹೊಲ ಗದ್ದೆ ಕೆಲಸ ಮಾಡುವ ರೈತರ ಸಂಗಡಲೂ, ಕೂಲಿ ಮಾಡಿಕೊಂಡು ಹೊಟ್ಟೆಹೊರೆಯುವ ಕೂಲಿಕಾರನ ಸಂಗಡಲೂ ಮಾತನಾಡುತ್ತ ಅವರ ಕಷ್ಟನಿಷ್ಠುರಗಳನ್ನು ವಿಚಾರಿಸುತ್ತಾನೆ. ಧಾರಾಳವಾಗಿ ಸಿಗರೇಟು ಸೇದಿಕೊಂಡು ತನ್ನ ಅಧಿಕಾರದರ್ಪವನ್ನು ಹೆಚ್ಚಿಗೆ ಇಟ್ಟುಕೊಳ್ಳದೆ ಸಂತೋಷಚಿತ್ತನಾಗಿ ತಿರುಗುತ್ತಿರುವುದನ್ನು ಯಾವಾಗಲೂ ಕಾಣಬಹುದು. ಪ್ರತಿಯೊಂದು ಭಾಗದಲ್ಲಿಯೂ ದೇಶವನ್ನು ಮುಂದಕ್ಕೆ ತರುವುದೇ ಅವನ ಆಶೆ. ತನ್ನ ಸ್ನೇಹಿತರು ಮತ್ತು ಮಿನಿಷ್ಟರುಗಳನ್ನು ಹೋಟಲಿನಲ್ಲಿ ಬಂದು ಕಾಣುವಂತೆ ಹೇಳಿ ಅಲ್ಲಿ ತನ್ನ ದೇಶದ ಏಳಿಗೆಗೆ ಬೇಕಾದ ವಿಚಾರಗಳನ್ನು ಚರ್ಚಿಸುತ್ತಾನೆ. ಎಲ್ಲಿ ನಿಂತರೂ ಎಲ್ಲಿ ಕುಳಿತರೂ ಎಲ್ಲಿ ಹೋದರೂ ನಗುಮುಖ!

ಕೇಮಾಲ್ ಪಾಷನ ಪದ್ಧತಿಗಳು ಮತ್ತು ಗುಣಗಳು ಕೊಂಚ ವಿಚಿತ್ರವೆಂದೇ ಹೇಳಬಹುದು. ಆದರೆ ಅವುಗಳೆಲ್ಲವೂ ನಿಯಮಿತವಾದವುಗಳು. ಪ್ರತಿ ದಿನವೂ ತಪ್ಪದೆ ರಾತ್ರಿಯ ಹೊತ್ತು ಕೆಲವು ತಾಜಾ ಅಂಜೂರದ ಹಣ್ಣುಗಳನ್ನು, ಒಂದು ಲೋಟಾ ಬಿಸಿ ಹಾಲನ್ನು ಸೇವಿಸುತ್ತಾನೆ. ಆತನು ನಿದ್ದೆ ಇಷ್ಟು ಹೊತ್ತು ಮಾಡುತ್ತಾನೆಂದು ಹೇಳಲಾಗುವದಿಲ್ಲ. ಕೆಲವು ವೇಳೆ ರಾತ್ರಿ ಎಂಟು ಗಂಟೆಗೆ ಮಲಗುತ್ತಾನೆ. ಮತ್ತೆ ಕೆಲವು ವೇಳೆ ರಾತ್ರಿ ಹನ್ನೊಂದು ಗಂಟೆಗೆ ಹಾಸಿಗೆಯನ್ನು ಹಿಡಿಯುತ್ತಾನೆ. ಒಂದೊಂದು ದಿವಸ ರಾತ್ರಿಯೆಲ್ಲಾ ನಿದ್ದೆಯನ್ನೇ ಮಾಡುವುದಿಲ್ಲ. ಸಾಮಾನ್ಯವಾಗಿ ಅವನು ದಿನ ಒಂದಕ್ಕೆ ಕೇವಲ ಐದು ಅಥವ ಆರು ಗಂಟೆಗಳ ಕಾಲ ಮಾತ್ರ ನಿದ್ದೆಯನ್ನು ಮಾಡುತ್ತಾನೆ. ರಾತ್ರಿ ಮಲಗಿರುವಾಗ ಕೊಂಚ ಶಬ್ದವಾದರೆ ಸಾಕು. ತಟ್ಟನೆ ಎಚ್ಚರಿಕೆಯಾಗುತ್ತದೆ. ಅವನ ಊಟ ಬಹಳ ಕೊಂಚ. ಕೇಮಾಲ ಪಾಷನ ಭೋಗವೆಂದರೆ ಲೆಕ್ಕವಿಲ್ಲದ ಹಾಗೆ ಸಿಗರೇಟು ಸೇದುವದು. ಪರಿಶುದ್ಧವಾಗಿ ಸ್ನಾನ ಮಾಡುವದು. ಈತನು ದಿನಕ್ಕೆ ಮೂರು ಸಲ ಸ್ನಾನ ಮಾಡುತ್ತಾನೆ ಹೆಚ್ಚು ಕಡಿಮೆ. ಯಾವಾಗ ಇವನನ್ನು ನೋಡಿದರೂ ಬಾಯಲ್ಲಿ ಸಿಗರೇಟು ಕಚ್ಚಿಕೊಂಡಿರುತ್ತಾನೆ. ಕೇಮಾಲ ಪಾಷನಿಗೆ ಉಡುಪಿನಲ್ಲಿ ಹೆಚ್ಚು ಶ್ರದ್ಧೆ. ನಾಜೂಕಾದ ಬಟ್ಟೆಗಳನ್ನು ಧರಿಸಬೇಕೆಂಬ ಹುಚ್ಚು ಇವನಿಗುಂಟು. ಆದ್ದರಿಂದಲೇ ಇವನ ಉಡುಪುಗಳು ಪ್ಯಾರಿಸ್‌ನಿಂದಲೂ ಬೂಟುಗಳು ಇಂಗ್ಲೆಂಡಿನಿಂದಲೂ ಬರುತ್ತವೆ. ಇವನಿಗೆ ಸಂಗೀತದಲ್ಲಿ ಅಭಿರುಚಿ ಹೆಚ್ಚು. ಸಮಯ ಬಂದ ವೇಳೆ ಸಿಟಿಲ್ ಬಾರಿಸಿಕೊಂಡು ಒಬ್ಬನೇ ಹಾಡುತ್ತಿರುತ್ತಾನೆ. ಕುದುರೆ ಸವಾರಿಯು ಚನ್ನಾಗಿ ಬರುತ್ತದೆ. ತಪ್ಪದೆ ಪ್ರತಿ ನಿತ್ಯವೂ ತೃಪ್ತಿಯಾಗುವ ವರಿವಿಗೂ ಕುದುರೆ ಸವಾರಿ ಮಾಡುವ ಅಭ್ಯಾಸವುಂಟು.

ಇಂದಿನ ಟರ್ಕಿಯ ಸರ್ವಾಧಿಕಾರಿ, ಟರ್ಕಿಯ ರಿಪಬ್ಲಿಕ್ಕಿನ ಅಧ್ಯಕ್ಷ ಕೇಮಾಲ್ ಪಾಷನು ತನ್ನ ದೇಶದಲ್ಲಿ ಮಾಡಿರುವ ಮಾರ್ಪಾಟುಗಳು ಪ್ರತಿಯೊಂದು ದೇಶದವರೂ ನೋಡಿ ಅನುಸರಿಸುವಂತಹವು. ಟರ್ಕಿಯಲ್ಲಿ ಪೂರ್ವದಿಂದಲೂ ಬಂದಿದ್ದ ಹೆಂಗಸರ ಗುಲಾಮಗಿರಿಯನ್ನು ಕಿತ್ತೊಗೆದು ಅವರಿಗೆ ಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದಾನೆ. ಈಗ ಒಂದೆರಡು ತಿಂಗಳ ಹಿಂದೆ ಕೂಡ ಅನೇಕ ಸುಧಾರಣೆಗಳನ್ನು ಜಾರಿಗೆ ತಂದಿದ್ದಾನೆ. ಹೊಸ ಅಸೆಂಬ್ಲಿಯಲ್ಲಿ ಹದಿನೇಳು ಜನ ಸ್ತ್ರೀಯರಿಗೆ ಪ್ರಾತಿನಿಧ್ಯವನ್ನು ಕೊಟ್ಟಿದ್ದಾನೆ. ಹೆಂಗಸರೆಲ್ಲರೂ ಪಾರ್ಲಿಮೆಂಟಿಗೆ ಓಟು ಮಾಡಬಹುದೆಂದು ಹುಕುಂ ಮಾಡಿದ್ದಾನೆ. ಕೇಮಾಲನು ಜಾತಿಯಲ್ಲಿ ತುರ್ಕಿಯಾಗಿದ್ದರೂ, ಗ್ರೀಕ್, ಅಮೇರಿಕನ್, ಜ್ಯೂ ಇವರೆಲ್ಲರೂ ಟರ್ಕಿಯಲ್ಲಿ ದೇಶಾಭಿಮಾನವುಳ್ಳವರಾಗಿದ್ದರೆ ಅವರನ್ನು ಟರ್ಕಿಯ ಪ್ರಜೆಗಳೆಂದು ಠರಾಯಿಸಿದ್ದಾನೆ. ಟರ್ಕಿ ದೇಶದ ಜನರು ಹಿಂದಿನಂತೆ ಈಗ ಮುಸಲ್ಮಾನ ಉಡಪನ್ನು ಧರಿಸದೆ ಯುರೋಪಿನ ಇತರ ದೇಶದವರಂತೆ ಉಡಪನ್ನು ಧರಿಸುತ್ತಾರೆ. ಎಲ್ಲಿ ನೋಡಿದರೂ ಮಕ್ಕಳ ಆರೋಗ್ಯಾಭಿವೃದ್ಧಿ ಸಂಘಗಳು, ವೈದ್ಯ ಸಹಾಯ ಸಂಘಗಳು, ಸ್ತ್ರೀಯರ ಸಂಘಗಳೇ ಕಂಡು ಬರುತ್ತವೆ. ವಿದ್ಯಾಭ್ಯಾಸಕ್ಕೆ ಬಹಳ ಉತ್ತೇಜನ ದೊರಕಿದೆ. ಸ್ತ್ರೀ ವಿದ್ಯಾಭ್ಯಾಸವೇನು ಹಿಂದುಳಿದಿಲ್ಲ. ಒಟ್ಟಿನಲ್ಲಿ ಟರ್ಕಿಯನ್ನು ಹಿಂದೆ ನೋಡಿದವರಿಗೆ ಈಗ ಗುರುತು ಹತ್ತುವುದೊ ಇಲ್ಲವೊ ಎಂಬಂತಿದೆ.

ಇಡಿ ಜಗತ್ತಿನ ಇತಿಹಾಸದಲ್ಲಿ ಟರ್ಕಿಗೆ ಹೊಸ ಜೀವಕಳೆಯನ್ನು ತುಂಬಿದ ಈ ಮಹಾಪುರುಷ ಮುಸ್ತಫಾ ಕೇಮಾಲ್ ಪಾಷರ ಹೆಸರನ್ನು ಕೇಳದವರೇ ಇಲ್ಲ. ಆರ್ಥಿಕ ಕ್ಷೇತ್ರದಲ್ಲಿ ಹೊಸ ದಾರಿಯನ್ನು ತೋರಿಸಿರುವ ಲೆನಿನ್ನನೂ ರಾಜಕೀಯ ಕ್ಷೇತ್ರದಲ್ಲಿ ಹೊಸ ದಾರಿಯನ್ನು ತೋರಿಸಿರುವ ಮುಸ್ಸೋಲಿನಿಯೂ ಪ್ರಪಂಚದ ಮಹಾಪುರುಷರೆಂದು ಜಗದ್ವಿಖ್ಯಾತರಾಗಿರುವಂತೆ ರಾಜಕೀಯ ಧಾರ್ಮಿಕ ಆರ್ಥಿಕ ಮತ್ತು ಸಾಮಾಜಿಕ ಸುಧಾರಕನಾದ ಈ ಮುಸ್ತಫಾ ಕೇಮಾಲ್ ಪಾಷನು ಜಗತ್ತಿನ ಮಹಾ ಪುರುಷರಲ್ಲೊಬ್ಬನೆಂದು ಪ್ರಖ್ಯಾತನಾಗಿರುವನು.

ಆದರ್ಶ ಸನ್ಯಾಸಿ.

ಸ್ವಾಮಿ ಪ್ರಣವಾನಂದ ಎಂಬ ಒಬ್ಬ ಸನ್ಯಾಸಿಗಳು ಕಲಕತ್ತೆಯಲ್ಲಿ 'ಭಾರತ ಸೇವಾಶ್ರಮ ಸಂಘ' ಎಂಬ ಒಂದು ಕೇಂದ್ರಸಂಸ್ಥೆಯನ್ನು ಸ್ಥಾಪಿಸಿರುವರು. ಈ ಸಂಸ್ಥೆಯ ಕೆಳಗೆ ಗಯಾ, ಕಾಶಿ, ಪುರಿ, ಬಿಜಿನಪುರ, ಮದರೀಪುರ, ಖುಲನಾ, ಆಸಸುನಿ, ನೌಗಾಂವ, ರಾಜಶಾಹಿ ಮೊದಲಾದ ಉತ್ತರ ಹಿಂದುಸ್ಥಾನದ ಮುಖ್ಯ ಪಟ್ಟಣಗಳಲ್ಲೆಲ್ಲ ಅನೇಕ ಶಾಖಾಸಂಸ್ಥೆಗಳಿವೆ. ಆಯಾ ಸಂಸ್ಥೆಗಳಲ್ಲಿ ನೂರಾರು ಜನ ಶಿಷ್ಯರು ಸ್ವಾರ್ಥತ್ಯಾಗದಿಂದ ಹಿಂದುಸ್ಥಾನದಲ್ಲಿ ಧಾರ್ಮಿಕ ಶೈಕ್ಷಣಿಕ ಜಾಗೃತಿಯನ್ನು ಮಾಡುತ್ತಿರುವರು. ಹಿಂದುಸ್ಥಾನದ ಯಾವ ಭಾಗದಲ್ಲಾದರೂ ಬರ, ಪ್ಲೇಗು, ಸಿಡುಗು, ಭೂಕಂಪ, ಜಲಪ್ರಲಯ ಮೊದಲಾದ ಅನಾಹುತಗಳು ಸಂಭವಿಸಿದಲ್ಲಿ ಈ ಸಂಸ್ಥೆಯಿಂದ ಅನೇಕ ಸಹಾಯಕರ್ತರನ್ನು ಕಳುಹಿಸಲಾಗುತ್ತದೆ. ಮತ್ತು ಈ ಬಗ್ಗೆ ಧನ ಸಹಾಯವು ಅಗತ್ಯವಿದ್ದಲ್ಲಿ ಅಲ್ಲಲ್ಲಿ ಸಂಚರಿಸಿ ಫಂಡು ಕೂಡಿಸಿ ಕಳಿಸಲಾಗುತ್ತದೆ. ಬಿಹಾರ ಭೂಕಂಪದ ಕಾಲಕ್ಕೆ ಗಾಯಪಟ್ಟವರ ಶುಶ್ರೂಷೆಗಾಗಿ ಈ ಸಂಸ್ಥೆಯವರು ೯೦ ಸಾವಿರ ರೂ. ಗಳ ಸಹಾಯ ಮಾಡಿರುವರು.

ವಿಶ್ವವಿದ್ಯಾಲಯದಲ್ಲಿ ದೊರೆಯುವ ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳಿಗೆ ಧಾರ್ಮಿಕ ಶಿಕ್ಷಣವನ್ನು ಕೊಡುವದಕ್ಕಾಗಿ ತಮ್ಮ ಕೆಲವು ಸಂಸ್ಥೆಗಳಲ್ಲಿ ಶ್ರೀ ಪ್ರಣವಾನಂದ ಸ್ವಾಮಿಗಳು ವ್ಯವಸ್ಥೆ ಮಾಡಿದ್ದಾರೆ. ವಿದ್ಯಾರ್ಥಿಗಳ ಉಪಯುಕ್ತತೆಗಾಗಿ ಅಲ್ಲಲ್ಲಿ ಬ್ರಹ್ಮಚರ್ಯಾಶ್ರಮಗಳನ್ನು ಏರ್ಪಡಿಸಿದ್ದಾರೆ.

ಹಳ್ಳಿಹಳ್ಳಿಗಳಲ್ಲಿಯ ಬಡಜನರಿಗೆ ಶಿಕ್ಷಣ ದೊರೆಯುವದಿಲ್ಲವೆಂದು ಅಲ್ಲಿಗೆ ಸ್ವತಃ ಕೆಲ ಪ್ರಚಾರಕರನ್ನು ಕಳಿಸಿ ಶಿಕ್ಷಣ ಕೊಡಲಾಗುತ್ತದೆ. ಈ ಕಾರ್ಯವು ಹಿಂದುಸ್ಥಾನದಲ್ಲಿಯೇ ಅಲ್ಲದೆ ಸಿಂಗಾಪುರ ಬ್ರಹ್ಮದೇಶಗಳಲ್ಲಿಯೂ ಸಾಗಿದೆ.

ಇದೇ ಪ್ರಕಾರ ಹಿಂದುಸ್ಥಾನದ ಪವಿತ್ರ ತೀರ್ಥ ಕ್ಷೇತ್ರಗಳಲ್ಲಿ ನಡೆಯುತ್ತಿರುವ ವಂಚನೆ ವ್ಯಭಿಚಾರಾದಿಗಳು ಸಂಭವಿಸದಂತೆ ಯಾತ್ರಿಕರಿಗೆ ಎಚ್ಚರಿಕೆಯನ್ನು ಕೊಡುವದಕ್ಕಾಗಿ ಸಂಸ್ಥೆಯ ಕಾರ್ಯಕರ್ತರನ್ನು ಜಾತ್ರೆಯ ಕಾಲಕ್ಕೆ ಕಳಿಸಲಾಗುತ್ತದೆ. ಗಯಾ, ಪುರಿ, ಕಾಶಿ ಮೊದಲಾದ ಯಾತ್ರಾ ಸ್ಥಲಗಳಲ್ಲಿ ಈ ಸಂಸ್ಥೆಯವರು ಔಷಧಾಲಯಗಳನ್ನೂ ಇಟ್ಟಿರುವರು. ಪಂಡಾಜನರ ಬಾಧೆಯಿಂದ ಯಾತ್ರಿಕರನ್ನು ಸಂರಕ್ಷಿಸುವ ಕಾರ್ಯವನ್ನು ಈ ಸಂಸ್ಥೆಯ ಸೇವಕರು ಮಾಡುತ್ತಿರುವರು.

ಈ ಪ್ರಕಾರ ಒಬ್ಬ ಸನ್ಯಾಸಿಯು ಲೋಕ ಕಲ್ಯಾಣಾರ್ಥವಾಗಿ ಅನೇಕ ಲೋಕೋಪಕಾರಕ ಕಾರ್ಯಗಳನ್ನು ಸ್ವತಃ ಮಾಡುತ್ತ ಮತ್ತು ನೂರಾರು ಜನ ಶಿಷ್ಯರುಗಳಿಂದ ವ್ಯವಸ್ಥಿತ ಸಂಘಗಳ ಮೂಲಕ ಮಾಡಿಸುತ್ತ ಸನ್ಯಾಸಜೀವನದ ಸಾರವನ್ನು ಕೃತಿಯಿಂದಲೇ ಬೋಧಿಸುವದು ಉಳಿದ ಸನ್ಯಾಸಿಗಳಿಗೆ ಆದರ್ಶವಾಗಿಲ್ಲವೆ?

ಮಾನವನ ಶ್ರೇಷ್ಠ ಧ್ಯೇಯವಾವುದು?

ವಾಯು ಗ್ರಾಮದಲ್ಲಿ 'ಧರ್ಮ' ಈ ವಿಷಯದ ಬಗ್ಗೆ ಆಧ್ಯಾತ್ಮಿಕ ಮತ್ತು ಭೌತಿಕ ಶಾಸ್ತ್ರಗಳ ತುಲನಾತ್ಮಕ ರೀತಿಯಿಂದ ಒಳ್ಳೇ ಸ್ವಾರಸ್ಯವಾಗಿ ಶ್ರೀ ಶಾಸ್ತ್ರಿ ಜಗದ್ಗುರುಗಳು ಭಾಷಣ ಮಾಡಿದರು. ಇದು ಈಗಿನ ಕಾಲದಲ್ಲಿಯು ಅದಿಭೌತಿಕ ಸುಧಾರಣೆಯಲ್ಲಿಯೇ ಪರಮ ವಿಶ್ವಾಸವನ್ನು ತಾಳಿರುವ ಮತ್ತು ಧರ್ಮವೆಂಬ ಮಾತೆತ್ತಿದ ಕೂಡಲೆ ಉಪಹಾಸ್ಯಮಾಡುವ ಸುಶಿಕ್ಷಿತ ತರುಣರಿಗೆ ಉತ್ತಮ ಮಾರ್ಗದರ್ಶಿಯಾಗದೆ ಇರದು.

'ಧರ್ಮವೆಂಬುದೊಂದು ಕಪಟ, ಕುಟಿಲ, ಸ್ವಾರ್ಥಲೋಲುಪ್ತರಾದ ಜನಗಳಿಂದ ನಿರ್ಮಾಣವಾದ ಜಾಲ; ಈ ಧರ್ಮವು ಮಾನವ ಜಾತಿಯನ್ನು ಅಧೋಗತಿಗೆಳೆಯುತ್ತದೆ; ಈ ಧರ್ಮವನ್ನು ಆದಷ್ಟು ತೀವ್ರವಾಗಿ ಶಕ್ಯವಿದ್ದ ಉಪಾಯಗಳಿಂದ ಸಮೂಲ ನಾಶಗೊಳಿಸಬೇಕು.' ಇಂಥ ಪರಪ್ರೇಷಿತ ವಿಚಾರಗಳು ಧರ್ಮವೇ ಧ್ಯೇಯವಾಗಿದ್ದ ಈ ಹಿಂದು ಭೂಮಿಯಲ್ಲಿ ಪಸರಿಸಹತ್ತಿವೆ. ಈ ಕಾಲದಲ್ಲಿ ಧರ್ಮವೇ ಪ್ರಾಣವೆನ್ನುವ ಧರ್ಮಮೂರ್ತಿಗಳು, ನಮ್ಮ ಪ್ರಾಚೀನ ಋಷಿ ಮುನಿಗಳು ಈ ತರದ ಸ್ವಾರ್ಥಪ್ರೇರಿತ ವಂಚಕರಲ್ಲವೆಂದೂ ಸತ್ಯ ಧರ್ಮವೆಂಬುದು ಮಾನವೋನ್ನತಿಯನ್ನು ಭಂಗಗೊಳಿಸದೆ ತದ್ವಿರುದ್ಧವಾಗಿ ಉನ್ನತಿಗೆ ಸಹಕಾರಿಯಾಗದೆಯೆಂದೂ ಆಧುನಿಕ ಪದ್ಧತಿಯ ಮೇರೆಗೆ ಜನ ಸಮೂಹಕ್ಕೆ ಮನಗಾಣಿಸಿ ಕೊಡಬೇಕು. ಇಲ್ಲದಿದ್ದರೆ, 'Our Neroes were fiddling while Rome was burning.' 'ಧರ್ಮವು ಕಾಲುಬುಡದಲ್ಲಿ ಸಿಕ್ಕು ಒದ್ದಾಡುತ್ತಿರುವಾಗ ಇವರು ಪಲ್ಲಕ್ಕಿಗಳಲ್ಲಿ ಮೆರೆಯುಹತ್ತಿದರು' ಎಂದು ಮುಂದಿನ ಪೀಳಿಗೆಯು ದೋಷ ಕೊಡದೆ ಬಿಡಲಿಕ್ಕಿಲ್ಲ.

ಧರ್ಮವೆಂದರೇನು ?

ಈ ವಿಶ್ವದಲ್ಲಿ ಒಂದಾನೊಂದು ನಿಯಾಮಕ ಶಕ್ತಿ ಇರುತ್ತದೆಯೇ ಇಲ್ಲವೆ? ಇದ್ದಿದ್ದರೆ ಅದು ಜ್ಞಾನರಹಿತವೂ, ಜಡವೂ ಆಗಿದೆಯೇ ಅಥವಾ ಚೇತನಾಯುಕ್ತವೂ, ಜ್ಞಾನಪೂರ್ಣವೂ, ನಿಯಮ ಬದ್ಧವೂ ಆದುದಾಗಿದೆಯೆ? ಇಂಥ ಶಕ್ತಿಯು ಸಾಗಿಸಿರುವ ವಿಕಾಸ ಕಾರ್ಯದ ದಿಶೆಯು ಯಾವದು? ಆ ದಿಶೆಯಲ್ಲಿಯೆ ಮನುಷ್ಯನು ತನ್ನ ಕೃತಿಗಳನ್ನು ಮಾಡಿದರೆ ಅವನ ಸರ್ವಾಂಗಗಳ ಉನ್ನತಿಯಾಗುತ್ತದೆಯೇ? ಮತ್ತು ಅದಕ್ಕೆ ವಿರೋಧವಾದ ದಿಶೆಯಲ್ಲಿ ಹೋದರೆ ಅವನ ಅವನತಿಯೂ ಆಗುತ್ತದೆಯೆ? ಇವೆಲ್ಲ ಪ್ರಶ್ನೆಗಳ ನಿರ್ಣಯ ಮಾಡಿಕೊಂಡು ಆ ನಿರ್ಣಯವನ್ನು ಮನುಷ್ಯನು ತನ್ನ ಅಂತಃಕರಣಗಳಲ್ಲಿ ಸರಿಯಾಗಿ ಬಿಂಬಿಸಿಕೊಂಡು ಅದರಂತೆ ತನ್ನ ಆಯುಷ್ಯದಲ್ಲೆಲ್ಲ ಕರ್ತವ್ಯಗಳನ್ನು ಮಾಡುತ್ತಿರುವದೇ ಧರ್ಮ.

ಧರ್ಮದ ಧ್ಯೇಯವು ಯಾವುದು ?

ಧರ್ಮದ ಧ್ಯೇಯವೆಂದರೆ ಮನುಷ್ಯಪ್ರಾಣಿಯ ಕಲ್ಯಾಣ ಮಾಡುವದೇ ಸರಿ. ಧರ್ಮವೆಂಬುದು ಮಾನವೀ ಜೀವಿತದ ಒಂದು ಶಾಸ್ತ್ರವಾಗಿದೆ. ಮನುಷ್ಯನು ತನ್ನ ಆಯುಷ್ಯವನ್ನು ಯುಕ್ತ ರೀತಿಯಲ್ಲಿ ಹೇಗೆ ನಿರ್ವಹಿಸಬೇಕೆಂಬುದನ್ನು ಕಲಿಸುವ ಕಲೆಯೇ ಧರ್ಮವಾಗಿದೆ. ಮನುಷ್ಯನ ನಿತ್ಯ ವ್ಯವಹಾರಕ್ಕೆ ಬೇಕಾಗುವ ಕೊರತೆಗಳನ್ನು ಹೋಗಲಾಡಿಸುವದು ಭೌತಿಕಶಾಸ್ತ್ರದ ಕಾರ್ಯವಾದರೆ ಅವನ ಆಧ್ಯಾತ್ಮಿಕ ತೊಂದರೆಗಳನ್ನು ಹೋಗಲಾಡಿಸುವದು ಧರ್ಮ ಶಾಸ್ತ್ರದ ಕಾರ್ಯವಾಗಿದೆ ಈ ಜಡ ಸೃಷ್ಟಿಯಲ್ಲಿ ಅಡಗಿರುವ ಗೂಢವನ್ನು ಕಂಡು ಹಿಡಿಯುವದು ಭೌತಿಕ ಶಾಸ್ತ್ರದ ಕಾರ್ಯವಾದರೆ ಆಧ್ಯಾತ್ಮಿಕ ವಿಷಯದಲ್ಲಿರುವ ಗೂಢವನ್ನರಿಯುವದೇ ಧರ್ಮದ ಕಾರ್ಯವು. ಆದುದರಿಂದ ಆದಿ ಭೌತಿಕ ಶಾಸ್ತ್ರವಾಗಲಿ ಆಧ್ಯಾತ್ಮಿಕ ಶಾಸ್ತ್ರವಾಗಲಿ ಒಂದಕ್ಕೊಂದು ವಿಪರೀತವಾದವುಗಳೆಂದು ತಿಳಿದುಕೊಳ್ಳುವದು ತಪ್ಪು. ಅವು ಒಂದಕ್ಕೊಂದು ಪೂರಕವೇ ಆಗಿವೆ.

ಭೌತಿಕ ಶಾಸ್ತ್ರ ಮತ್ತು ಆಧ್ಯಾತ್ಮ ಶಾಸ್ತ್ರ

ಜಡಸೃಷ್ಟಿಯು ಇಂದ್ರಿಯಗೋಚರವಾದುದು. ಆಧ್ಯಾತ್ಮ ಸೃಷ್ಟಿಯು ಹಾಗಲ್ಲ. ಅವುಗಳ ಕ್ಷೇತ್ರಗಳು ಈ ಪ್ರಕಾರ ಭಿನ್ನವಾಗಿರುವುದರಿಂದ ಅವುಗಳನ್ನು ಆಕಲನ ಮಾಡುವ ಸಾಧನಗಳೂ ಭಿನ್ನವಾಗಿಯೇ ಇರುವವು. ನಿಗಮ ತರ್ಕ ಪದ್ಧತಿಯು (Inductive method). ಭೌತಿಕ ಶಾಸ್ತ್ರದಲ್ಲಿ ಪರಿಣಾಮಕಾರಿಯಾಗಿದೆ. ಹಾಗೆಯೇ ಆಗಮ ತರ್ಕ ಪದ್ಧತಿಯು (Deductive method) ಧಾರ್ಮಿಕ ಶಾಸ್ತ್ರದಲ್ಲಿ ಪರಿಣಾಮಕಾರಿಯಾಗಿದೆ.

ಆತ್ಮನು ಅಥವಾ ಪರಮಾತ್ಮನು ಇಂದ್ರಿಯ ಗೋಚರವಾಗುವ ಸ್ಥೂಲ ಪದಾರ್ಥವಲ್ಲ. ತುಂಡು ತುಂಡು ಮಾಡಿ ಸೂಕ್ಷ್ಮ ದರ್ಶಕ ಯಂತ್ರದ ಕೆಳಗಿಟ್ಟು ನೋಡಲಿಕ್ಕೆ ಬರುವಂಥವನಲ್ಲ. ಆತ್ಮನು ಕಾಜಿನ ನಳಿಕೆಯಲ್ಲಿ ಹಾಕಿ ಬೇರೆ ಬೇರೆ ತೇಜಾಬು (Acids) ಗಳನ್ನು ಸುರುವಿ ಪರೀಕ್ಷೆ ಮಾಡಲು ಬರುವದಿಲ್ಲ. ಹೀಗಾದರೆ ಆತ್ಮನ ಅಸ್ತಿತ್ವವೇ ಇಲ್ಲವೆನ್ನಬಹುದೆ?

'Little learning is a dangerous thing' ಎಂಬ ಗಾದೆಯ ಮಾತಿನಂತೆ ಅರ್ಧಮರ್ಧ ಕಲಿತವರು, ಪರಮೇಶ್ವರನು ಎಲ್ಲಿರುವನು? ಎಂದು ಹಿರಣ್ಯಕಶ್ಯಪನಂತೆ ಕೇಳಹತ್ತುತ್ತಾರೆ. ಭೌತಿಕ ಶಾಸ್ತ್ರದಲ್ಲಿಯೇ ಆಗಲಿ, ಹೇಗೆ ಹೇಗೆ ನಾವು ಆಳವಾಗಿ ವಿಚಾರಿಸುತ್ತ ಹೋಗುವೆವೋ ಹಾಗೆ ಹಾಗೆ ಸೃಷ್ಟಿಯ ರಚನೆಯಲ್ಲಿ ಕಾಣುವ ವ್ಯವಸ್ಥೆ, ನಿಯಮಬದ್ಧತೆ, ಸೌಂದರ್ಯ, ರಚನಾ ಚಾತುರ್ಯ ಮೊದಲಾದವುಗಳು ಸ್ಪಷ್ಟವಾಗಹತ್ತಿ ಮನುಷ್ಯನ ಅಲ್ಪ ಶಕ್ತಿಯು ಮತ್ತು ವಿಶ್ವದಲ್ಲಿ ಗೂಢವಾಗಿರುವ ನಿಸ್ಸೀಮ ಈಶ್ವರೀ ಶಕ್ತಿಯು ಅರಿವುಂಟಾಗಿ ಆ ಪರಮಾತ್ಮನ ಮುಂದೆ ವಿನಮ್ರನಾಗ ಬೇಕಾಗುತ್ತದೆ. ಪದಾರ್ಥ ವಿಜ್ಞಾನ ಶಾಸ್ತ್ರಜ್ಞರು ಹೇಳುವ Inexhaustible Energy (ಅಖಂಡಚೈತನ್ಯ) ಮತ್ತು ಪ್ರಾಣಿಶಾಸ್ತ್ರಜ್ಞರು ಹೇಳುವ Vital Force (ಜೀವನ ಚೈತನ್ಯ) ಇವು ಆ ವಿಶ್ವವ್ಯಾಪಿ ಈಶತತ್ವದ ಭಿನ್ನ ಭಿನ್ನ ಮಗ್ಗಲುಗಳಲ್ಲದೆ ಮತ್ತೇನು?

ವಿಶ್ವವು ಒಂದು ಸೂಕ್ಷ್ಮ ಯಂತ್ರವಿರುವದೆಂದು ಕಾರ್ಲ ಮಾರ್ಕ್ಸನು ಅನ್ನುತ್ತಾನೆ. ಕಬ್ಬಿಣದ ಕೆಲವು ತುಂಡುಗಳನ್ನೂ, ಇಕ್ಕಳು ಸುತ್ತಿಗೆಗಳನ್ನೂ ಹರಿಯುವ ನೀರಿನಂಥ ಒಂದು ಅಂಧ ಶಕ್ತಿಯಲ್ಲಿ ಹಾಕಿಬಿಟ್ಟರೆ ಮೋಟಾರದಂಥ ಯಂತ್ರಗಳು ಸಿದ್ಧವಾಗುವವೆ? ಮಾನವ ನಿರ್ಮಿತ ಯಂತ್ರದ ಹಿಂದೆ ಮಾನವನ ಮನಸ್ಸೂ ಪ್ರೇರಕವಾಗಿರುವದಿಲ್ಲವೆ? ಅಂದಮೇಲೆ ಈ ವಿಶ್ವವೆಂಬ ಅತಿ ಸೂಕ್ಷ್ಮ ವಿಶಾಲವಾದ ಯಂತ್ರವನ್ನು ನಡೆಯಿಸಲು ಅದರ ಹಿಂದೆ ವಿಶ್ವ ವ್ಯಾಪಕ ಯೋಜನೆಯುಳ್ಳ ಮನಸ್ಸು ಇದ್ದೇ ಇರಬೇಕೆಂಬುದು ಸ್ಪಷ್ಟವಾಗುವದಿಲ್ಲವೆ?

ಆತ್ಮವಿಕಾಸವೇ ಉತ್ಕೃಷ್ಟ ಧ್ಯೇಯವು.

ಆತ್ಮ ವಿಕಾಸವೇ ಮನುಷ್ಯನ ಪರಮ ಧ್ಯೇಯವೆಂದು ಧರ್ಮವು ಸಾರುತ್ತಿದೆ. ಈ ವಿಶ್ವದಲ್ಲಿ ಕಂಡು ಬರುವ ವ್ಯಾಪಕ

ಸೃಜನ ಶಕ್ತಿಯು ಮನುಷ್ಯನಲ್ಲಿ ಅಲ್ಪ ಪ್ರಮಾಣದಲ್ಲಿಯಾದರೂ ಕಂಡುಬರುವದಲ್ಲವೆ? ಯಾವ ಯಾವ ಗುಣಗಳು ವಿಶ್ವದಲ್ಲಿ ಕಂಡು ಬರುವವೊ ಅವೇ ಗುಣಗಳು ಅಂಶ ಮಾತ್ರದಲ್ಲಿ ಮನುಷ್ಯನಲ್ಲಿ ಕಂಡುಬರುತ್ತವೆ. ಅಂದಮೇಲೆ ಅವೇ ಗುಣಗಳನ್ನು ವಿಕಾಸಪಡಿಸುತ್ತ ಹೋದರೆ ನರನೇ ನಾರಾಯಣನಾಗವನೆಂಬುದರಲ್ಲಿ ಸಂಶಯವೇನು? ಅಂದಮೇಲೆ ಧರ್ಮದ ಈ ಸಂದೇಶವು ಸ್ವೀಕಾರಾರ್ಹವಾಗಿಲ್ಲವೆ?

'ಆತ್ಮ ವಿಕಾಸವು ನಿನ್ನ ಧ್ಯೇಯವು' ಎಂದು ಹೇಳಿ ಧರ್ಮವು ಅಷ್ಟಕ್ಕೇ ಬಿಟ್ಟಿರುವದಿಲ್ಲ. ಆ ಧ್ಯೇಯವನ್ನು ಪ್ರಾಪ್ತ ಮಾಡಿಕೊಳ್ಳಲು ಸಾಧನಗಳನ್ನೂ ಅದು ತಿಳಿಸಿದೆ. ಭಕ್ತಿ, ಜ್ಞಾನ, ಕರ್ಮಯೋಗಗಳೇ ಆ ಸಾಧನಗಳು. ಭಕ್ತಿಯಲ್ಲಾಗಲಿ ಜ್ಞಾನದಲ್ಲಿಯಾಗಲಿ ಗುಂಗು ಹತ್ತಿದವರಂತೆ ಸುಮ್ಮನೆ ಕುಳಿತುಕೊಳ್ಳಲು ಧರ್ಮವು ಹೇಳುವದಿಲ್ಲ. ಆ ಭಕ್ತಿಯಾಗಲಿ, ಆ ಜ್ಞಾನವಾಗಲಿ ಕರ್ಮಯೋಗದಲ್ಲಿ ಕೊನೆಗಾಣಬೇಕು. ಮನುಷ್ಯನು ತನ್ನ ಜೀವಿತ ಸಾಫಲ್ಯವನ್ನು ಹೇಗೆ ಮಾಡಿಕೊಳ್ಳಬೇಕೆಂಬ ಬಗ್ಗೆ ಶ್ರೀ ಕೃಷ್ಣ ಪರಮಾತ್ಮನು ಗೀತೆಯಲ್ಲಿ ಹೀಗೆ ಹೇಳಿದ್ದಾನೆ—

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಂ ಇದಂ ತತಮ್| ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ||

ಅನೇಕ ಸ್ವಾರ್ಥಿಗಳು ಭಾವಿಕ ಜನರ ಅಜ್ಞಾನದ ಲಾಭವನ್ನು ಮಾಡಿಕೊಂಡು ಶಾಸನ ಸಂಸ್ಥೆಗಳಂತೆ ಧರ್ಮ ಸಂಸ್ಥೆಗಳ ದುರುಪಯೋಗವನ್ನಾದರೂ ಮಾಡಿರಬಹುದು. ಹಾಗೂ ಅದಕ್ಕೆ ವಿಕೃತಸ್ವರೂಪವನ್ನಾದರೂ ಕೊಟ್ಟಿರಬಹುದು. ಆದರೆ ಇದರಿಂದ ಸತ್ಯ ಧರ್ಮವು ಲೋಪವಾಗದು. ಮನುಷ್ಯನನ್ನು ಪ್ರಾಚೀನಕಾಲದಲ್ಲಿ ಕ್ರೂರ ವನಚರ ವೃತ್ತಿಯಿಂದ ಪರಾವೃತ್ತಗೊಳಿಸಿ ಸುಶೀಲ ಸುಸಂಸ್ಕೃತನನ್ನಾಗಿ ಮಾಡಿದುದು ಆ ಧರ್ಮವೆ.

ಧರ್ಮದ ವಿಷಯಕ್ಕೆ ಬೇಕಾದವರು ಬೇಕಾದಷ್ಟು ಆಕ್ಷೇಪ ತೆಗೆದರೂ ಪರಮಾತ್ಮನ ಬಗ್ಗೆ ಮತ್ತು ಮನುಷ್ಯ ಮನುಷ್ಯರಲ್ಲಿ ಬಂಧು ಭಾವವನ್ನು ಹುಟ್ಟಿಸಿದುದು ಧರ್ಮವೇ ಎಂಬ ಸತ್ಯವನ್ನು ಎಂದೂ ಬಚ್ಚಿಡಲು ಶಕ್ಯವಿಲ್ಲ. ಇಷ್ಟೇ ಅಲ್ಲ ಅರ್ವಾಚೀನ ಕಾಲದಲ್ಲಿ ರಾಷ್ಟ್ರಾಭಿಮಾನವೆಂಬ ಹೆಸರಿನ ಮರೆಯಲ್ಲಿ ಅಡಗಿರುವ ಸಂಕುಚಿತ ಸ್ವಾರ್ಥಪರತೆಯನ್ನು ದಾಟಿ ಅಖಿಲ ಮಾನವ ಜಾತಿಯ ಹಿತಾರ್ಥವಾಗಿ ಮತ್ತು ಉದ್ಧಾರಾರ್ಥವಾಗಿ ಪವಿತ್ರವಾದ ಪ್ರಯತ್ನವನ್ನು ಆ ಧರ್ಮವೇ ಮಾಡುತ್ತಿದೆ. ರಾಷ್ಟ್ರಗಳು ಪರಸ್ಪರ ಸ್ವಾರ್ಥ ಪರತ್ವದಿಂದ ಯುದ್ಧ ಮಾಡುತ್ತಿವೆ. ಶಾಂತ ಸೌಂದರ್ಯ ಸುಹಾಸಯುಕ್ತ ಭೂದೇವಿಯನ್ನು ರೌದ್ರಾಕಾರವಾಗಿ ಮಾಡಿವೆ. ಈ ಅನಿಷ್ಟ ಯುದ್ಧವನ್ನು ಹೋಗಲಾಡಿಸಲು ಶಸ್ತ್ರಾಸ್ತ್ರಗಳನ್ನು ಕಡಿಮೆ ಮಾಡಬೇಕೆಂದು ಅಲ್ಲಲ್ಲಿ ಸೂಚಿಸಲಾಗುತ್ತದೆ. ಆದರೆ ಇದು ಕೇವಲ ಹುಣ್ಣಿನ ಮೇಲೆ ಮುಲಾಮಿನ ಪಟ್ಟಿಯನ್ನು ಕಟ್ಟಿದಂತೆಯೇ ಸರಿ. ಒಳಗಿನ ರಕ್ತವು ಶುದ್ಧವಾಗದೆ ಹೇಗೆ ಆ ಹುಣ್ಣು ಸಂಪೂರ್ಣ ಗುಣವಾಗುವದು ಶಕ್ಯವಿಲ್ಲವೋ ಹಾಗೆಯೇ ಜಗತ್ತಿನಲ್ಲೆಲ್ಲ ದಯಾ, ಪ್ರೇಮ, ಸ್ವಾರ್ಥತ್ಯಾಗ, ಪರೋಪಕಾರ ಮೊದಲಾದ ಗುಣಗಳು ಉಂಟಾಗದೆ ಯುದ್ಧ ಅಥವಾ ಅಶಾಂತತೆಯು ಲೋಪವಾಗುವದು ಶಕ್ಯವೇ ಇಲ್ಲ. ಇಂಥ ದೈವೀ ಗುಣಗಳನ್ನುಂಟುಮಾಡಿ ಜಗತ್ತಿನಲ್ಲಿ ಶಾಂತತೆಯ ಸಾಮ್ರಾಜ್ಯವನ್ನು ಸ್ಥಾಪಿಸುವದು ಆ ಧರ್ಮವೇ ಹೊರತು ಬೇರೆಯಲ್ಲ. ಇಂಥ ಧರ್ಮ ಮಾರ್ಗಾವಲಂಬಿಗಳಾಗದೆ ಸುಮ್ಮನೆ ಮೋರೆ ತಿರುಪಿದರೆ ಬಂದ ಪರಿಣಾಮವನ್ನು ಅನುಭವಿಸಲೇ ಬೇಕಾಗುವದು.

ಜೂಜಾಟದ ಬಗ್ಗೆ ಮಹಾತ್ಮಾಜಿಯರ ಅಭಿಪ್ರಾಯ.

ಜೂನ ತಿಂಗಳ ೧೫ ನೆಯ ತಾರೀಖಿನ 'ಹರಿಜನ' ಪತ್ರಿಕೆಯಲ್ಲಿ ಮ. ಗಾಂಧಿಯವರು ಜೂಜಾಟದ ಬಗ್ಗೆ ಈ ಮುಂತಾಗಿ ಬರೆದಿದ್ದಾರೆ.

'ಮುಂಬಯಿಯ ಉಚ್ಚರೆಂದೆನ್ನಿಸುವ ಜನರಲ್ಲಿ ಜೂಜಾಟದ ಪ್ರಸಾರವಾಗಹತ್ತಿದೆ. ಆ ಬಗ್ಗೆ ನೀವು ಜನತೆಗೆ ಎಚ್ಚರಕೊಡಿರಿ" ಎಂದು ನನ್ನ ಮಿತ್ರರೊಬ್ಬರು ನನಗೆ ಪತ್ರ ಬರೆದಿದ್ದಾರೆ. ನನ್ನ ಆ ಸ್ನೇಹಿತನಂತೆಯೇ ನನಗೂ ಜೂಜಾಟದ ಬಗ್ಗೆ ವಿಶೇಷ ವ್ಯಸನವೆನಿಸುತ್ತದೆ. ಆದರೆ ಆ ಬಗ್ಗೆ ನಾನು ಏನು ಬರೆದರೂ ವ್ಯರ್ಥವೇ ಸರಿ. ಯಾಕೆಂದರೆ ಆ ದುಷ್ಕೃತ್ಯವನ್ನು ನಿರ್ಮೂಲ ಮಾಡಲು ನನ್ನ ಲೇಖನದ ಜೊತೆಗೆ ಸಂಘಟಿತ ಪ್ರಯತ್ನವನ್ನು ಸೇರಿಸುವ ಆಶೆಯು ನನ್ನಲ್ಲಿಲ್ಲ. ನಾನು ಈ ವಿಚಾರದಲ್ಲಿರುವಾಗಲೇ ಸರದಾರ ವಲ್ಲಭ ಭಾಯಿಯವರಿಂದ ಕರೆಯು ಬಂದಿತು. ನಾನು ಬೋರ್ಸದಕ್ಕೆ ಹೋದಾಗ್ಗೆ ಅಲ್ಲಿಯ ಹಳ್ಳಿ ಹಳ್ಳಿಗಳಲ್ಲೆಲ್ಲ ಒಕ್ಕಲಿಗರಲ್ಲಿ ಜೂಜಾಡುವ ಚಟವು ವಿಶೇಷವಾಗಿ ಹಬ್ಬುತ್ತಲಿದೆಯೆಂದು ಸರದಾರ ವಲ್ಲಭ ಭಾಯಿಯವರು ನನಗೆ ಹೇಳಿದರು. ಏನೂ ಶ್ರಮವಿಲ್ಲದೆ ಒಮ್ಮೆಲೆ ಶ್ರೀಮಂತರಾಗಬೇಕೆಂಬ ಹಂಬಲ ಬಹು ಜನರಿಗೆ ಇರುತ್ತದೆ. ಯಾವನೊಬ್ಬನಿಗೆ ಏನಾದರೂ ದೊರೆತಕೂಡಲೆ ನಮಗೂ ಏಕೆ ದೊರೆಯಬಾರದು ? ಎಂದು ಅವರು ತಿಳಿಯುತ್ತಾರೆ. ಹೀಗಾಗಿ ಅವರು ಜೂಜಾಡಿ ನಷ್ಟ ಹೊಂದುತ್ತಾರೆ.

ಈ ದುಷ್ಟ ರೂಢಿಯು ಒಂದಿಲ್ಲೊಂದು ಹೆಸರಿನಿಂದ ಸೃಷ್ಟಿಯ ಪ್ರಾರಂಭದಿಂದಲೇ ಇದೆ. ಇದನ್ನು ಹೋಗಲಾಡಿಸಲು ಸರಿಯಾದ ಕಟ್ಟಳೆಯಾಗುವ ಅವಶ್ಯಕತೆ ಇದ್ದಂತೆಯೇ ಲೋಕ ಜಾಗೃತಿಯೂ ಆಗಬೇಕು. ಲೋಕ ಜಾಗೃತಿಯಿಲ್ಲದೆ ಕಟ್ಟಳೆಯು ನಿರರ್ಥಕ. ಪ್ಲೇಗ, ಭೂಕಂಪಗಳನ್ನು ನಿವಾರಣೆ ಮಾಡಲು ಜನರು ಹೇಗೆ ಟೊಂಕಕಟ್ಟಿ ನಿಂತರೊ ಹಾಗೆಯೇ ಈ ಅನಿಷ್ಟ ರೂಢಿಯನ್ನು ನಾಶಮಾಡಲು ಸಿದ್ಧರಾಗಬೇಕು. ಒಂದು ದೃಷ್ಟಿಯಿಂದ ನೋಡಿದರೆ ಪ್ಲೇಗು ಭೂಕಂಪಗಳಿಗಿಂತ ಈ ಜೂಜಾಟವು ಬಹಳೇ ಭಯಂಕರವಾದದ್ದು. ಇದರಿಂದ ಮನುಷ್ಯನು ಆತ್ಮಚ್ಯುತನಾಗುತ್ತಾನೆ; ಆತ್ಮವಂಚಿತನಾದವನು ಭೂಭಾರಿಯಲ್ಲವೆ?

ಪ್ಲೇಗು ಭೂಕಂಪಗಳಿಗಿಂತಲೂ ಈ ನಿವಾರಣ ಕಾರ್ಯವು ಕಠಿಣತರವಾದದ್ದು. ಸಿಂದಿಗುಡುಕನ ಕೈಯಲ್ಲಿಯ ಬಾಟ್ಲಿಯನ್ನು ಕಸಿದುಕೊಳ್ಳುವಷ್ಟೇ ಇದು ಪ್ರಯಾಸಕರವಾದುದಾಗಿದೆ. ಆದರೂ ಜನರು ಇದನ್ನು ಹೋಗಲಾಡಿಸಲೇಬೇಕು. ಇಲ್ಲದಿದ್ದರೆ ಇದರ ಪರಿಣಾಮವು ಮುಂಬಯಿಯಲ್ಲಿಯೇ ಏಕೆ ಗ್ರಾಮಾಂತರಗಳಲ್ಲಿಯೂ ಪಸರಿಸುವದು.

ಪಾಶ್ಚಾತ್ಯ ವಿವಾಹಗಳ ದಿವಾಳಿ.

ಯುರೋಪ ಖಂಡದಲ್ಲಿ ಮಹಾಯುದ್ಧವು ಸಂಭವಿಸಿ ಒಂದು ಅದ್ಭುತ ವ್ಯತ್ಯಾಸವನ್ನೇ ಮಾಡಿತು. ಔದ್ಯೋಗಿಕ ಕ್ಷೇತ್ರದಲ್ಲಿ ಸ್ತ್ರೀಯರಿಗೆ ಆಸ್ಪದ ದೊರೆತು ಅವರು ಸ್ವತಂತ್ರಜೀವಿಗಳಾದಂತೆ ಗೃಹ ಜೀವನಕ್ಕೆ ಹುಳ ಹತ್ತಿದಂತಾಗಿದೆ. ಪಾಶ್ಚಾತ್ಯರ ಮೊದಲಿನ Home, Sweet Home— There is no place like Home— ಎಂಬ ಉದ್ಗಾರವು ಈಗ ಉಳಿದಿರುವದಿಲ್ಲ. ಈಗಿನ ಪಾಶ್ಚಾತ್ಯರ ಮನೆಯೆಂದರೆ ಭೋಜನ ಮತ್ತು ಮರಣಗಳ ಸ್ಥಾನವೆಂದು ತಿಳಿಯಲ್ಪಡುತ್ತದೆ.

ಮನೆಯೇ ಈ ವ್ಯವಸ್ಥೆಯನ್ನು ಹೊಂದಿದ ಮೇಲೆ ವಿವಾಹವನ್ನು ಕೇಳುವವರಾರು ? ಪ್ರೇಮವಿವಾಹವೆಂದು ಪ್ರಾರಂಭವಾದ ವೈವಾಹಿಕ ಜೀವನವು ಮರುಕ್ಷಣದಲ್ಲಿಯೇ ವಿಚ್ಛೇದ ವಿವಾಹದಲ್ಲಿ ರೂಪಾಂತರವಾಗುತ್ತಲಿದೆ. ವಿವಾಹ ವಿಚ್ಛೇದವಾದ ಕೂಡಲೆ ಪುನಃ ಪ್ರೇಮ ವಿವಾಹವು ಪ್ರಾರಂಭ. ಹೀಗಾಗಿ ವಿವಾಹದಲ್ಲೇನೂ ಸ್ವಾರಸ್ಯ ಉಳಿಯಲಿಲ್ಲ. ಇಷ್ಟರಲ್ಲಿ ಸಂತತಿ ಸಂಯಮನ ಆಂದೋಲನವು ಪ್ರಾರಂಭವಾಗಿ ಈ ವೈವಾಹಿಕ ಜೀವನಕ್ಕೆ ಗೋರಿಯನ್ನೇ ಕಟ್ಟಿ ಬಿಟ್ಟಿತು. ಸಂತತಿ ಸಂಯಮನದ ತತ್ವಗಳೇನೊ ಪ್ರಶಂಸನೀಯವಾಗಿವೆ. ಜಗತ್ತಿನ ಜನಸಂಖ್ಯೆಯು ಬೆಳೆಯುತ್ತಲಿದೆ. ಪ್ರಜೋತ್ಪಾದನವು ಇದೇ ರೀತಿಯಿಂದ ನಡೆದರೆ ಜಗತ್ತಿನ ಜನಸಂಖ್ಯೆಯು ಇನ್ನು ೫೦ ವರ್ಷಗಳಲ್ಲಿಯೇ ಈಗಿರುವದಕ್ಕಿಂತ ಎರಡಷ್ಟು ಹೆಚ್ಚಾಗಬಹುದು, ಆಗ್ಗೆ ಅನ್ನಕ್ಕೆ ಗತಿ? ಸ್ತ್ರೀಯರು ಆಗಾಗ್ಗೆ ಹೆರುವುದರಿಂದ ವಿಶೇಷ ತೊಂದರೆಯಾಗಿ ಆಯುಷ್ಯವು ಕ್ಷೀಣವಾಗುತ್ತದೆ. ಇತ್ಯಾದಿ ಅನೇಕ ಕಾರಣಗಳನ್ನು ಸಂತತಿ ಸಂಯಮನದ ವಿಷಯಕ್ಕೆ ಹೇಳಲಾಗುತ್ತದೆ. ಆದರೆ ಅದೇ ಕಾಲಕ್ಕೆ ಮನಸ್ಸಂಯಮನವು ಮಾತ್ರ ಲಕ್ಷಿಸಲ್ಪಡುವದಿಲ್ಲ.

ಇದರಿಂದ ಘೋರವಾದ ಅನರ್ಥವಾಗುತ್ತದೆ. ಸಂತತಿಯಿಂದ ನಿರ್ಮುಕ್ತರಾದ ಯುಗ್ಮಗಳಲ್ಲಿ ವಿವಾಹವು ಸಂತತಿ ನಿರ್ಮಾಣಕ್ಕಾಗಿ ಇರದೆ ಭೋಗಕ್ಕಾಗಿ ಇದೆ: (Marriage is not for procreation but recreation) ಎಂಬ ತತ್ವವು ನೆಲೆಯೂರುತ್ತಲಿದೆ. ಆದುದರಿಂದ ಮನಸ್ಸಿನ ಕಡಿವಾಣಗಳನ್ನೆಲ್ಲ ಯಥೇಚ್ಛವಾಗಿ ಸಡಿಲು ಬಿಟ್ಟು ಬೇಕಾದ ಹಾಗೆ ಭೋಗ ತೃಪ್ತಿಯನ್ನು ಮಾಡಿಕೊಳ್ಳಬೇಕೆಂಬ ಆಶೆಯು ಉಚ್ಚ ಸುಶಿಕ್ಷಿತ ವರ್ಗದಲ್ಲಿ ಹಬ್ಬುತ್ತಲಿದೆ.

ಸಂತತಿ ಸಂಯಮನವು ಬೇಕಾದುದು ಬಡವರಿಗಾಗಿ; ಯಾಕೆಂದರೆ ಅವರ ಬಡತನವೇ ಕಾರಣವೆಂದು. ಇಲ್ಲದಿದ್ದರೆ ಶ್ರೀಮಂತರಿಗಾಗಿ, ಯಾಕೆಂದರೆ ಅವರ ಅಶಕ್ತತೆಯೇ ಕಾರಣವೆಂದು. ಆದರೆ ಸದ್ಯದ ಸಂತತಿ ಸಂಯಮನದ ದಿಸೆಯೇ ಬೇರೆ. ಇತ್ತ ಅದು ಬಡ ಜನರಲ್ಲಿ ಪ್ರಸಾರವಾಗದಿದ್ದುದರಿಂದ ಅವರ ದಾರಿದ್ರ್ಯವೇನೂ ಕಡಿಮೆಯಾಗಿಲ್ಲ. ಹಾಗೂ ಸುಖವಸ್ತು ಜೀವಿಗಳಲ್ಲಿ ವಿಶೇಷ ಪ್ರಸಾರ ಹೊಂದಿರುವುದರಿಂದ ಅವರಿಗೆ ಮನೆ ಬೇಡ, ಮಕ್ಕಳು ಬೇಡ, ವಿವಾಹ ಮೊದಲಾದ ಉಪಾಧಿಗಳಂತೂ ಮೊದಲೇ ಬೇಡ. ಇಂದ್ರಿಯ ಭೋಗಕ್ಕೆ ಯಾವ ವಿಧಿ ನಿಷೇಧವೂ ಬೇಕಾಗಿಲ್ಲ. ಮಿಸ್ ಮೇಯೋ ದೇವಿಯ ದೇಶದಲ್ಲಿ ಈಗಿನ ಸಖ್ಯ ವಿವಾಹವು ಪ್ರಚಾರವಾಗುತ್ತಲಿದೆ. ಇದನ್ನು ಪ್ರತಿಪಾದಿಸುತ್ತಿರುವ ಬೆನ್ ಲಿಂಡಸೆ ಎಂಬ ವಿದ್ವಾನ್ ಗೃಹಸ್ಥರು ಹೇಳುವದೇನಂದರೆ ವಿವಾಹ ಪೂರ್ವದಲ್ಲಿ ತರುಣ ತರುಣಿಯರು ಇಂದ್ರಿಯ ಸಮಾಗವ ಹೊಂದಿ ತಮಗೆ ಯುಕ್ತ ಗಂಡವರನ್ನು ಆರಿಸಿಕೊಳ್ಳಬೇಕು. ಆದರೆ ಈ ವಿವಾಹ ಪೂರ್ವದಲ್ಲಿ ಸಂತತಿ ನಿರ್ಮಾಣವಾಗಬಾರದೆಂದು ವಿವಾಹೇಚ್ಛುಗಳಿಗೆ ಸಂತತಿ ಸಂಯಮನದ ಮಹತ್ವವನ್ನು ಮೊದಲೇ ತಿಳಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ಅಲ್ಲಿಯ ಸರಕಾರಕ್ಕೆ ಸೂಚಿಸಿದ್ದಾನೆ. ಯಾವ ಪ್ರಕಾರ ಯುದ್ಧವಾಗುವಾಗ್ಗೆ ಯುದ್ಧರಂಗವು ಯಾರ ಅಧಿಕಾರದ್ದೂ ಇರುವದಿಲ್ಲವೋ (No man's land) ಅದೇ ಪ್ರಕಾರ ಈ ಇಂದ್ರಿಯ ಯುದ್ಧದಲ್ಲಿ ಸಂತತಿಯೆಂಬುದು (No childs land) ಯಾರ ಅಧಿಕಾರದ್ದೂ ಉಂಟಾಗದಂತೆ ಅದಕ್ಕೆ ಶಾಸನ ಸೂಕ್ತ ಸ್ವರೂಪವನ್ನು ಕೊಡುವದೇ ಲಿಂಡಸೇ ಸಾಹೇಬನ ಯೋಜನೆಯಾಗಿದೆ.

ಪಾಶ್ಚಾತ್ಯ ದೇಶಗಳಲ್ಲಿ ವೈವಾಹಿಕ ಜೀವನವು ಅಲಕ್ಷಿಸಲ್ಪಟ್ಟದ್ದರಿಂದ ತಂದೆ ತಾಯಿಗಳ ಪತ್ತೇಇಲ್ಲದ ಅನೇಕ ಕೂಸುಗಳು ಅಲ್ಲಿ ಸಿಗುತ್ತವೆ. ಬೋಸ್ಟನ ಪಟ್ಟಣದ ೧೩ ಜನ ಕೂಸುಗಳಲ್ಲಿ ೧ ಕೂಸಿನಂತೆ ಜನ್ಮದಾತೃಗಳ ಪತ್ತೇ ಇಲ್ಲದೆ ಸಿಗುತ್ತದೆ. ಬಾಲ್ಟಿಮೋರ ಎಂಬ ಪಟ್ಟಣದಲ್ಲಿ ಇಂಥ ಬಿಟ್ಟುಕೊಟ್ಟ ಸಂತತಿಯನ್ನು ಕಾಪಾಡಲಿಕ್ಕೇ ೨೪ ಸಂಸ್ಥೆಗಳಿವೆ. ಶಿಕಾಗೊ ಪಟ್ಟಣದಲ್ಲಿ ಪ್ರತಿವರ್ಷ ೧೦೦೦ ಕೂಸುಗಳು ಜನ್ಮದಾತೃಗಳ ಪತ್ತೆ ಇಲ್ಲದೆ ಸತ್ತು ಹೋಗುತ್ತವೆ. ಈ ಪ್ರಕಾರ ಸಂತತಿಯನ್ನು ನಿರ್ಲಕ್ಷಿಸುವ ಮಾತಾಪಿತರಿಗೆ ಸಂತತಿ ಸಂಯಮನವು ಗೊತ್ತಿಲ್ಲವೆಂತಲ್ಲ. ಆದರೆ ಪ್ರಜೋತ್ಪಾದನ, ಗೃಹಜೀವನ, ಸುಗೃಹಿಣೀತ್ವ ಮೊದಲಾದ ಪವಿತ್ರ ಭಾವನೆಗಳ ಲೋಪವಾಗಿರುವದೇ ಕಾರಣವಾಗಿದೆ.

ಇದೊಂದು ಪಾಶ್ಚಾತ್ಯ ಸ್ವೇಚ್ಛಾಚರಣೆಯ ಮಾದರಿ. ರಾಜಕೀಯ ಗಾಳಿಯಂತೆಯೇ ಸಾಮಾಜಿಕ ಗಾಳಿಯೂ ಪಶ್ಚಿಮದಿಂದ ಪೂರ್ವಕ್ಕೆ ಈಗ ಬೀಸುತ್ತಲಿದೆ. ಅಲ್ಲಲ್ಲಿ ಸಂತತಿಯ ಕೃತ್ರಿಮ ಸಂಯಮನಗಳೂ ಪ್ರಚಾರವಾಗುತ್ತಲಿವೆ. ಹಾಗೆ ನಾವು ಸ್ವೇಚ್ಛಾಚಾರಿಗಳಾಗಿ ನಮ್ಮ ಗೃಹಜೀವನವನ್ನು ಮಾರ್ಪಡಿಸಿಕೊಂಡರೆ ಕಲ್ಪಾಂತರದ ವರೆಗೂ ನಾವು ತಲೆ ಎತ್ತುವ ಆಶೆಯೇ ಇಲ್ಲ. ಆದುದರಿಂದ ಗೃಹಮೇಧಿಗಳು ಗೃಹಜೀವನವು ತಮ್ಮ ಪವಿತ್ರ ಕರ್ತವ್ಯವೆಂದು ತಿಳಿದು ಆತ್ಮಸಂಯಮನದಿಂದ ವರ್ತಿಸುವದೇ ನಿಜವಾದ ಉದ್ಧಾರದ ಮಾರ್ಗವು

—ಔಂಧ ಸಂಸ್ಥಾನಿಕರು ಶ್ರೀ ಲಕ್ಷ್ಮಣರಾವ ಕಿರ್ಲೋಸ್ಕರ ಇವರನ್ನು ಮಂತ್ರಿ ಪದದಲ್ಲಿ ನಿಯಮಿಸಿಕೊಂಡಿದ್ದು ಶಿಕ್ಷಣ, ಗ್ರಾಮೋದ್ಧಾರ, ಉದ್ಯೋಗ ವ್ಯವಸಾಯ, ಆರೋಗ್ಯ ಮೊದಲಾದ ಶಾಖೆಗಳನ್ನು ಅವರಿಗೆ ಒಪ್ಪಿಸಿದ್ದಾರೆ. ಶ್ರೀ ಕಿರ್ಲೋಸ್ಕರರು ಪ್ರಜೆಗಳಿಂದ ಆರಿಸಲ್ಪಟ್ಟ ಪ್ರಜಾಪ್ರತಿನಿಧಿಸಭೆಯ ಸದಸ್ಯರಿರುತ್ತಾರೆ.

—ಮೈಸೂರ ಸರಕಾರದವರು ೧೪ ವರ್ಷದೊಳಗಿನ ಬಾಲಕರಿಗೆಲ್ಲ ತಂಬಾಕು ಸೇದದಂತೆ ತಡೆಯನ್ನು ಮಾಡಿದ್ದು ಯಾರಾದರೂ ಅಂಗಡಿಕಾರರು ಅಷ್ಟು ವಯಸ್ಸಿನೊಳಗಿನ ಹುಡುಗರಿಗೆ ಚುಟ್ಟಾ ಶಿಗರೇಟು ಮೊದಲಾದವುಗಳನ್ನು ಮಾರಿದರೆ ಶಿಕ್ಷೆಗೆ ಗುರಿಯಾಗುವರು.



ಶಾ. ಶ. ೧೮೫೭ ನೇಯ ಆಷಾಢ ಶು|| ೧ ಸೋಮವಾರ.

ಭಾರತೀಯರಿಗೆ ಈಗ ಬೇಕಾದುದೇನು?

ಭರತ ಖಂಡದವರಿಗೆ ಈಗ ಬಹು ಕಷ್ಟಗಳಿವೆ. ಅವುಗಳಲ್ಲಿ ರಾಜಕೀಯ ಪಾರತಂತ್ರ್ಯವೇ ಮುಖ್ಯವಾದುದು. ರಾಜಕೀಯ ಸೌಲಭ್ಯ ದೊರೆತರೆ ಎಷ್ಟೋ ಕಷ್ಟನಷ್ಟಗಳು ನಿವಾರಣೆಯಾಗುತ್ತವೆ. ನಾನಾ ವಿಪತ್ತುಗಳನ್ನು ದೂರು ಮಾಡುವ ಬಲವೂ ಭಾರತೀಯರಲ್ಲಿ ಬರುತ್ತದೆ. ಆದುದರಿಂದ ರಾಜಕೀಯ ಸೌಲಭ್ಯ ಸಂಪಾದನೆಗಾಗಿಯೇ ರಾಷ್ಟ್ರದ ಪ್ರಮುಖರೆಲ್ಲಾ ವಿಶೇಷವಾಗಿ ಪ್ರಯತ್ನಿಸುತ್ತಿದ್ದಾರೆ. ಆದರೆ ಆಪ್ರಯತ್ನಗಳು ಮಾತ್ರ ಅಷ್ಟು ಫಲಕಾರಿಯಾಗ-ತ್ತಾ ಇಲ್ಲವಷ್ಟೆ.

ಭಾರತೀಯ ಜನಾಂಗವು ಸಣ್ಣದಾಗಿಲ್ಲ. ಜಗತ್ತಿನ ಘನವಾದ ಜನಾಂಗಗಳಲ್ಲಿ ಒಂದು ಮುಖ್ಯವಾದುದು. ಮೂವತ್ತೈದು ಕೋಟಿ ಜನಸಂಖ್ಯೆಯುಳ್ಳದ್ದು. ಅತಿ ಪ್ರಾಚೀನ ಸಂಸ್ಕೃತಿಗಳಿಂದ ಕೂಡಿದ ನಾಗರಿಕ ಜನಾಂಗ. ಕಾಡು ಸ್ಥಿತಿಯಲ್ಲಿದ್ದುಕೊಂಡು ವೈಭವವನ್ನೇ ಅರಿಯದಿದ್ದ ಕೀಳು ಜನಾಂಗವಲ್ಲ. ಒಂದು ಕಾಲದಲ್ಲಿ ಪ್ರಪಂಚದಲ್ಲೆಲ್ಲಾ ತನ್ನ ಸಂಸ್ಕೃತಿಗಳನ್ನು ಪ್ರಸಾರ ಮಾಡಿದ ಭಾರತೀಯ ಜನಾಂಗಕ್ಕೆ ಈಗ ರಾಜಕೀಯ ಸೌಲಭ್ಯ ದೊರೆಯದಿದ್ದುದೇಕೆ? ಪಾರತಂತ್ರ್ಯದಲ್ಲಿ ಈ ಪ್ರಕಾರ ಬಳಲುತ್ತಿರುವುದೇಕೆ? ಜಗದ್ವಂದ್ಯರಾದ ಗಾಂಧೀಜಿಯವರಂತಹ ಮಹಾ ವಿಭೂತಿಗಳು ರಾಜಕಾರಣದಿಂದ ದೂರಾದುದೇಕೆ?

ನಮ್ಮಲ್ಲಿ ಐಕಮತ್ಯವಿಲ್ಲ. ರಾಷ್ಟ್ರೋನ್ನತಿಗಾಗಿ ಭಿನ್ನ ಭಿನ್ನ ರೀತಿಗಳಿಂದ ಪ್ರಯತ್ನಿಸುವುದೊಂದೇ ನಮಗೆ ಗೊತ್ತಿದೆಯೇ ವಿನಾ ರಾಷ್ಟ್ರೋದ್ಧಾರಕ್ಕಾಗಿ ಮತ್ತೈಕ್ಯ ಮಾಡಿಕೊಳ್ಳುವ ಹವಣು ಗೊತ್ತಿಲ್ಲ. ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿಯೂ ಭಿನ್ನ ಭಿನ್ನ ರಾಜಕೀಯ ಮತ ಪಂಗಡಗಳೂ ಹೋರಾಟಗಳೂ, ಇದ್ದೇ ಇವೆ. ಹಾಗಿರಲೇಬೇಕು. ಅದೇ ಆ ರಾಷ್ಟ್ರವು ಜೀವದಿಂದಿದ್ದ ಲಕ್ಷಣ. ಆದರೆ ಅವೆಲ್ಲವೂ ರಾಷ್ಟ್ರ ಹಿತಕ್ಕಾಗಿಯೇ ಜರುಗುತ್ತಿರುವುದರಿಂದ ರಾಷ್ಟ್ರೀಯ ವಿಪತ್ತು ಬಂದೊಡನೆ ಅವೆಲ್ಲ ಪಂಗಡಗಳೂ ಒಂದಾಗಿ ತಮ್ಮ ರಾಷ್ಟ್ರವನ್ನು ಕಾಯ್ದುಕೊಳ್ಳುತ್ತವೆ. ಆಗ ಪಕ್ಷಾಭಿಮಾನಕ್ಕೆ ಆಹುತಿಯಾಗಿ ರಾಷ್ಟ್ರವನ್ನು ದುರವಸ್ಥೆಗೀಡು ಮಾಡುವುದಿಲ್ಲ.

ಕಳೆದ ಮಹಾಯುದ್ಧದ ಪೂರ್ವದಲ್ಲಿ ಎಲ್ಲ ರಾಷ್ಟ್ರಗಳಲ್ಲಿಯೂ ಅಂತಃಕಲಹ, ನಾನಾ ಪಕ್ಷ ಪಂಗಡಗಳು ಇದ್ದೇ ಇದ್ದವು. ಆದರೆ ಯುದ್ಧ ಪ್ರಾರಂಭವಾದೊಡನೆ ಅವೆಲ್ಲವೂ ಒಂದಾದವು. ಹಿಂದಣ ಪಕ್ಷ ಭೇದಗಳೆಲ್ಲ ಮಾಯವಾದವು. ಆದುದರಿಂದಲೇ ಆ ರಾಷ್ಟ್ರಗಳು ಬದುಕಿದವು. ಇಂತಹ ಅದ್ವಿತೀಯ ಗುಣವು ಯಾವ ರಾಷ್ಟ್ರದಲ್ಲಿದೆಯೋ ಆ ರಾಷ್ಟ್ರವೇ ಈ ಕಾಲದಲ್ಲಿ ಸ್ವಾತಂತ್ರ್ಯವನ್ನನುಭವಿಸಲು ಯೋಗ್ಯವಾದುದು. ಮತಭೇದ ಮಾಡಲು ಮಾತ್ರ ಕಲಿತು ಮತ್ತೈಕ್ಯದ ರೀತಿಯನ್ನು ಅರಿಯದಿದ್ದ ಜನಾಂಗಕ್ಕೆ ಈ ಕಾಲದಲ್ಲಿ ಪರತಂತ್ರವೇ ಗತಿಯೆಂಬುದಕ್ಕೆ ಹಿಂದುಸ್ಥಾನವೇ ಸಾಕ್ಷಿ.

ನಮ್ಮ ರಾಜಕಾರಣದಲ್ಲಿ ಗೋಖಲೆಮತ, ಟಿಳಕಮತ, ಗಾಂಧಿಮತ, ಮಾಲವೀಯ ಮತ, ಜಿನ್ನಾ ಮತ ಮತ್ತು ಕಾಂಗ್ರೆಸ್ ಸಮತಾವಾದಿಗಳ ಮತ ಎಂಬ ಆರು ಮತಗಳು ಮುಖ್ಯವಾಗಿವೆ. ಇವು ಹಿಂದುಗಳ ಶೈವಾದಿ ಧಾರ್ಮಿಕ ಷಣ್ಮತಗಳಂತೆಯೇ ಇವೆ. ಅವು ಮೋಕ್ಷಕ್ಕೆ ಹೋರಾಡುವಂತೆ ಇವು ಸ್ವಾತಂತ್ರ್ಯಕ್ಕೆ ಹೋರಾಡುತ್ತವೆ. ಪರ ಧರ್ಮದ ದಾಳಿ ಬಂದಾಗ ಈ ಮತಗಳು ಒಂದಾಗಿ ತಮ್ಮ ಅಸ್ತಿತ್ವವನ್ನು ಕಾಯ್ದುಕೊಳ್ಳಬೇಕಲ್ಲವೆ? ಹಾಗೆ ಮಾಡದೆ ಪರ ಮತದವರನ್ನು ಪರ ಧರ್ಮದವರಿಗೆ ಆಹುತಿ ಮಾಡುವುದೇ ಸ್ವಮತಾಭಿಮಾನದ ಲಕ್ಷಣವೆಂದು ತಿಳಿದರೆ ಹೇಗಾಗಬಹುದು? ಕೊನೆಗೆ ತಾವೂ ಪರ ಧರ್ಮದವರ ಪಾಲಾಗುವ ಸ್ಥಿತಿ ಬರುವುದಿಲ್ಲವೆ? ಬೌದ್ಧ ಧರ್ಮವನ್ನು ನಾಶಮಾಡಬೇಕೆಂದು ಹಿಂದು ಧರ್ಮದವರು ಮುಸಲ್ಮಾನ ಧರ್ಮಕ್ಕೆ ಬೌದ್ಧರನ್ನು ಆಹುತಿ ಕೊಟ್ಟದ್ದರ ಫಲವೇನಾಯಿತು? ಹಿಂದು ಧರ್ಮದ ಅಳಿಗಾಲಕ್ಕೆ ಆ ಆತ್ಮದ್ರೋಹವೇ ಕಾರಣವಾಗಲಿಲ್ಲವೇ?

ಈಗ ರಾಜಕಾರಣದ ಮತಗಳ ಸ್ಥಿತಿಯಾದರೂ ಹೀಗೆಯೇ ಆಗುವಂತಾಗಿದೆ. ಸಾಯಮನ್ ಕಮಿಶನ್ನಿನ ಕಾಲದಿಂದಲೂ ಈವರೆಗೆ ಹೊಸ ರಾಜಕೀಯ ಸುಧಾರಣೆಯನ್ನು ಭಾರತೀಯರು ನಿಷೇಧಿಸುತ್ತಲೇ ಬಂದಿದ್ದಾರೆ. ಆದರೆ ಅದರ ಫಲವೇನು? ಸರಕಾರವು ತನಗೆ ಯುಕ್ತ ಕಂಡಂತೆ ಮಾಡುತ್ತಲೇ ಬಂದಿದೆ. ಹೊಸ ಸುಧಾರಣೆಯ ಗೊತ್ತುವಳಿಯು ಪಾರ್ಲಿಮೆಂಟನಲ್ಲಿಯೂ ತೀರ್ಮಾನವಾದಂತೆಯೇ ಸರಿ. ಇನ್ನುಮುಂದೆ ಆಚರಣೆಯಲ್ಲಿಯೂ ಬಂದೇ ಬರುತ್ತದೆ.

ಹೀಗಿದ್ದರೂ ಎಲ್ಲಾ ಮತದವರೂ ಶಾಬ್ದಿಕನಿಷೇಧವನ್ನೇನೋ ಮಾಡುತ್ತಲೇ ಇದ್ದಾರೆ. ಆದರೆ ಹೊಸ ರಾಜಕೀಯ ಪದ್ಧತಿ ಬರುವದೇನು ನಿಲ್ಲುತ್ತದೆಯೇ? ಆ ಪದ್ಧತಿಯಲ್ಲೇನು ಇಷ್ಟ ಸುಧಾರಣೆಯಾಗುತ್ತದೆಯೇ? ಇಲ್ಲವೇ ಇಲ್ಲ. ಎಂದಮೇಲೆ ಮುಂದೇನು? ಎಲ್ಲ ಪಂಗಡಗಳೂ ಈಗೇನು ಮಾಡಬೇಕಾಗಿದೆ? ಭಾರತೀಯರಿಗೆ ಈ ಕಷ್ಟ ಕಾಲದಲ್ಲಿ ಬೇಕಾದುದೇನು?

ಈ ಆರೂ ಮತದವರು ಈಗ ಒಂದಾಗಬೇಕು. ಗಾಂಧಿ ಮತ ಜಿನ್ನಾ ಮತ, ಮಾಲವೀ ಮತ, ಮತ್ತು ಗೋಖಲೆ ಮತಗಳ ಪ್ರಮುಖರೇ ಈಗ ರಾಜಕಾರಣದ ಯಂತ್ರದಲ್ಲಿ ಕಾರ್ಯ ಮಾಡುವವರಾಗಿದ್ದಾರೆ. ಮುಂದೆ ಹೋಗಿದ್ದವರು ಸ್ವಲ್ಪ ಹಿಂದೆ ಸರಿಯಬೇಕು. ಹಿಂದಿದ್ದವರು ಸ್ವಲ್ಪ ಮುಂದೆ ಬರಬೇಕು. ಅಂತೂ ನಾಲ್ಕು ಮತದವರು ಏಕಾಭಿಪ್ರಾಯದಿಂದ ಒಂದು ನಿರ್ಣಯವನ್ನು ಮಾಡಿ ಆದರಂತೆಯೇ ನಾಲ್ಕೂ ಮತದವರು ನಡೆಯಲು ಸಿದ್ಧರಾಗಬೇಕು. ಇಂತಹ ರಾಷ್ಟ್ರೀಯ ಭಾವನೆಯ ಐಕಮತ್ಯವೇ ಈಗ ಭಾರತೀಯರಿಗೆ ಬೇಕಾಗಿದೆ.

ಏಕೆಂದರೆ ಈಗ ಬರುವ ರಾಜಕೀಯ ಪದ್ಧತಿಯು ರಾಷ್ಟ್ರದ ಮೇಲೆ ಬೀಳುವ ಒಂದು ಆಘಾತ. ಇದನ್ನು ತಪ್ಪಿಸಿಕೊಳ್ಳಲು ಎಲ್ಲ ರಾಜಕೀಯ ಮತದವರೂ ಈಗ ಒಂದಾಗಬೇಕು. ಹೀಗಾಗದಿದ್ದರೆ ರಾಷ್ಟ್ರದ ಕಲ್ಯಾಣವಾಗುವುದು ಹೇಗೆ? ಪರ ರಾಷ್ಟ್ರದವರು ಹೇಗೆ ತಮ್ಮ ರಾಷ್ಟ್ರೀಯ ವಿಪತ್ತನ್ನು ಏಕಮತದಿಂದ ನಿವಾರಣೆ ಮಾಡಿಕೊಳ್ಳುತ್ತಾರೆಯೋ ಹಾಗೆಯೇ ನಮ್ಮ ರಾಷ್ಟ್ರದಲ್ಲಿಯೂ ಮತೈಕ್ಯದಿಂದ ಹೊಸ ರಾಜಕೀಯ ಪದ್ಧತಿಯನ್ನು ತಿದ್ದುಪಡೆ ಮಾಡಿಸಲು ಇದೇ ಯೋಗ್ಯ ಸಮಯವಲ್ಲವೇ? ರಾಜಕಾರಣದಲ್ಲಿ ಎಷ್ಟೇ ಮತಭೇದಗಳಿದ್ದರೂ ರಾಜಕೀಯ ಆಪತ್ತಿನ ಕಾಲಕ್ಕೆ ಅವೆಲ್ಲ ಒಂದಾಗುವಂತಹ ನಿಜವಾದ ರಾಷ್ಟ್ರಾಭಿಮಾನವು ಹಿಂದುಸ್ಥಾನದಲ್ಲಿಯೂ ಉಂಟಾಗಿದೆಯೆಂಬುದನ್ನು ಪ್ರಪಂಚಕ್ಕೆ ತೋರಿಸಲು ಇದೇ ಯೋಗ್ಯ ಕಾಲವಲ್ಲವೇ?

ಕಳೆದ ೨೬ ನೆಯ ತಾರೀಖಿನ ದಿವಸ ಗೋಖಲೆ ಮತದ ಎಂದರೆ ಪ್ರಾಗತಿಕ ಪಂಗಡದ ಪ್ರಮುಖರಾದ ಪಂಡಿತ ಹೃದಯನಾಥ ಕುಂಜರು ಇವರು ಮುಂಬೈಯಲ್ಲಿ ಒಂದು ಮಹತ್ವದ ಭಾಷಣವನ್ನು ಮಾಡಿದರು. ಈಗ ಬರಲಿರುವ ರಾಜಕೀಯ ಸುಧಾರಣೆಯು ಹಿಂದುಸ್ಥಾನಕ್ಕೆ ಅಹಿತಕರವಾದುದೇ ವಿನಾ ಇದರಿಂದ ರಾಷ್ಟ್ರಕ್ಕೆ ಹಿತವೇನೂ ಇಲ್ಲವೇ ಇಲ್ಲವೆಂದು ಸ್ಪಷ್ಟವಾಗಿ ತಿಳಿಸಿದರು.

ಈ ರಾಷ್ಟ್ರೀಯ ವಿಪತ್ತನ್ನು ನಿವಾರಣೆ ಮಾಡಲು ಎಲ್ಲ ರಾಜಕೀಯ ಪಕ್ಷಗಳೂ ಐಕಮತ್ಯದಿಂದ ಈಗ ಪ್ರಯತ್ನಿಸಲೇ ಬೇಕಾಗಿದೆಯೆಂತಲೂ, ದೇಶಭಕ್ತಿಯ ಗುತ್ತಿಗೆಯನ್ನು ಯಾವುದೊಂದೇ ಪಕ್ಷಕ್ಕೇನೂ ಕೊಟ್ಟಿಲ್ಲವೆಂತಲೂ ನಮ್ಮ ಪಕ್ಷವು ಇತರ ಪಕ್ಷಗಳೊಂದಿಗೆ ಸಹಕರಿಸಿ ಏಕಾಭಿಪ್ರಾಯದಿಂದ ನಡೆಯಲು ಸಿದ್ಧವಾಗಿಯೇ ಇದೆಯೆಂತಲೂ ಪಂಡಿತ ಕುಂಜರುಅವರು ತಮ್ಮ ಭಾಷಣದಲ್ಲಿ ಹೇಳಿರುವುದು ಬಹು ಯುಕ್ತವಾದುದಾಗಿದೆ. ಇತರ ಪಂಗಡಗಳೂ ಈ ಪ್ರಕಾರ ಐಕಮತ್ಯಕ್ಕೆ ಮುಂವರಿದು ಬರಬೇಕಾದುದು ಈಗ ಅತ್ಯವಶ್ಯವಾಗಿಲ್ಲವೇ?

ರಾಷ್ಟ್ರಕ್ಕೆ ಸ್ವತಂತ್ರತೆಯನ್ನು ಸಂಪಾದಿಸುವ ಮತ್ತು ಸಂಪಾದಿಸಿದ ಸ್ವಾತಂತ್ರ್ಯವನ್ನು ರಕ್ಷಿಸುವ ರಾಷ್ಟ್ರಾಭಿಮಾನದ ಈ ನಿಜ ಐಕಮತ್ಯವೇ- ಈ ದಿವ್ಯ ಶಕ್ತಿಯೇ-ಭಾರತೀಯರಿಗೆ ಈಗ ಬೇಕಾದುದು.

ಇಷ್ಟರಲ್ಲೇ ಯುದ್ಧ ಪ್ರಾರಂಭ!

ಇದೇ ಮಳೆಗಾಲದಲ್ಲಿ ಯುದ್ಧ ಪ್ರಾರಂಭವಾಗುವ ದುಶ್ಚಿನ್ಹಗಳು ತೋರುತ್ತಿವೆಯೆಂದು ಇಂಗ್ಲೆಂಡಿನ ಪತ್ರಿಕೆಗಳು ಊಹಿಸಿವೆ. ಏಕೆಂದರೆ, ಮುಸೋಲಿನಿಯವರು ಇಟಲಿ ಮತ್ತು ಅಬಿಸೀನಿಯಾ ಇವುಗಳಲ್ಲಿ ಪರಸ್ಪರ ಯುದ್ಧವಿರುವ ರೀತಿಯಲ್ಲಿಯೇ ಒಪ್ಪಂದದ ನಿಯಮಗಳನ್ನು ಸೂಚಿಸಿದ್ದಾರೆ.

ಪೂರ್ವ ಆಫ್ರಿಕೆಯಲ್ಲಿ ಸೈನ್ಯದ ಸಿದ್ಧತೆಯು ವಿಶೇಷವಾಗಿದೆ. ಕಳೆದೆರಡು ವಾರಗಳಿಂದಲೂ ಇಟಲಿಯಿಂದ ಸೈನ್ಯವೂ ಅಲ್ಲಿಗೆ ಹೋಗುತ್ತಲೇ ಇದೆಯೆಂದು ಮಾರ್ನಿಂಗ್ ಪೋಸ್ಟ್ ಪತ್ರಿಕೆಯ ರಾಜಕೀಯ ಸುದ್ದಿಗಾರರು ತಿಳಿಸುತ್ತಾರೆ.

ಇಟಲಿ ದೇಶವು ಯುದ್ಧವನ್ನೇ ಹಾರೈಸುತ್ತಿದೆ ಮುಸೋಲಿನಿಯವರಿಗೆ ರಣವಾದ್ಯದ ಧ್ವನಿಯನ್ನು ಕೇಳುವ ಕುತೂಹಲ ಹೆಚ್ಚಾಗಿದೆ. ಜಪಾನ ದೇಶವಾದರೋ ಚೀನ ದೇಶವನ್ನು ನುಂಗಲಾರಂಭಿಸಿದೆ. ಈ ಅನ್ಯಾಯದ ಆಕ್ರಮಣಕ್ಕೆ ತಡೆಯಾಗಬಾರದೆಂದು ಜಪಾನ ದೇಶವು ಹೇಗೆ ರಾಷ್ಟ್ರ ಸಂಘದಿಂದ ಹೊರಗೆ ಬಂದಿತೋ ಹಾಗೆಯೇ ಇಟಲಿ ದೇಶವೂ ರಾಷ್ಟ್ರ ಸಂಘವನ್ನು ಬಿಡುವಂತೆ ಕಾಣಿಸುತ್ತಿದೆ. ಆದಕಾರಣ ಇಷ್ಟರಲ್ಲೇ ಯುದ್ಧ ಪ್ರಾರಂಭವಾಗುವದೆಂದು ಅನೇಕರ ಊಹೆ. ಫ್ರಾನ್ಸ ದೇಶವು ರಾಷ್ಟ್ರ ಸಂರಕ್ಷಣೆಯ ನಿಮಿತ್ತವಾಗಿ ಈ ಸಾರೆ ೬೦ ಕೋಟಿ ರೂ. ಗಳನ್ನು ಸೈನ್ಯ ಶಾಖೆಗೆ ಹೆಚ್ಚು ವೆಚ್ಚ ಮಾಡುವ ಯೋಜನೆಯಲ್ಲಿದೆ. ಹೀಗೆ ಎಲ್ಲ ಕಡೆಗೂ ಯುದ್ಧದ ಲಕ್ಷಣಗಳೇ ತೋರುತ್ತಿವೆ. ಜನಾಂಗದಲ್ಲಿ ರಾಕ್ಷಸೀ ಮಹತ್ವಾಕಾಂಕ್ಷೆಯು ಹೆಚ್ಚುತ್ತಿರುವದೇ ಈ ಅನರ್ಥ ಕಲ್ಪನೆಗಳಿಗೆ ಕಾರಣವಲ್ಲವೆ?

ರಾಯಚೂರಲ್ಲಿ ಸ್ತುತ್ಯ ಪ್ರಯತ್ನ.

ನೈಜಾಮ ರಾಜ್ಯದ ವೀರಶೈವರು ಇತ್ತೀಚೆಗೆ ಶಿಕ್ಷಣ ಪ್ರಸಾರದಲ್ಲಿ ಜಾಗೃತರಾಗುತ್ತಿರುವುದು ಅತ್ಯಂತ ಸಂತೋಷದ ಸಂಗತಿಯು. ಗುಲಬರ್ಗಾದಲ್ಲಿ ವೀರಶೈವ ಬಡ ವಿದ್ಯಾರ್ಥಿಗಳಿಗೆ ಬೋರ್ಡಿಂಗುಗಳು ಏರ್ಪಟ್ಟಿವೆಯಷ್ಟೆ. ಆದರೆ ರಾಯಚೂರಲ್ಲಿ ಈ ವಿಧವಾದ ಅನುಕೂಲವಿರಲಿಲ್ಲ. ಈ ಮುಂಚೆ ಅಲ್ಲಿ ಏರ್ಪಟ್ಟಿದ್ದ ವೀರಶೈವ ಬೋರ್ಡಿಂಗ್ ಪರಿಣಾಮಕಾರಿಯಾಗಿ ನಡೆಯದೆ ಕಟ್ಟಡವು ಹಾಗೆಯೇ ಉಳಿದಿದ್ದಿತು.

ರಾಯಚೂರಿನ ಪ್ರಸಿದ್ಧ ವರ್ತಕರು ಮತ್ತು ಶ್ರೀಮಂತರು ಆದ ಶ್ರೀಮಾನ್ ಅತ್ತನೂರು ಮಾಲಿ ಪಾಟೀಲ ಸಕ್ರೆಪ್ಪ ಗೌಡರು ವೀರಶೈವ ಬಡ ವಿದ್ಯಾರ್ಥಿಗಳಿಗಾಗಿ ಈಗ ಅಲ್ಲಿ ಒಂದು ಬೋರ್ಡಿಂಗ ಸ್ಥಾಪಿಸಲು ತುಂಬಾ ಧನ ಸಹಾಯ ಮಾಡುವವರಿದ್ದಾರೆಂತಲೂ ಇವರ ಈ ಸ್ತುತ್ಯ ಕಾರ್ಯಕ್ಕೆ ರಾಯಚೂರು ವೀರಶೈವ ಮಹಾಜನರು ಮೊದಲಿನ ಬೋರ್ಡಿಂಗ್ ಕಟ್ಟಡವನ್ನು ಕೊಡುವರೆಂತಲೂ ಈ ಪರಮ ಪವಿತ್ರ ಕಾರ್ಯವು ಇದೇ ಬರುವ ಶ್ರಾವಣ ಮಾಸದಲ್ಲಿಯೇ ಪ್ರಾರಂಭವಾಗುವುದಿದೆಯೆಂತಲೂ ಕೇಳುತ್ತೇವೆ.

ನೈಜಾಮ ಭಾಗದ ವೀರಶೈವ ಧನಿಕರಿಗೆ ಮೇಲ್ಪಂಗ್ತಿಯಾಗಿರುವ ಶ್ರೀಮಾನ್ ಸಕ್ರೆಪ್ಪನವರ ಈ ಸ್ತುತ್ಯ ಕಾರ್ಯವನ್ನು ಸಕಲರೂ ಶ್ಲಾಘಿಸದಿರಲಾರರು. ಶ್ರೀ. ಸಕ್ರೆಪ್ಪನವರ ಈ ಪವಿತ್ರ ಉದ್ದೇಶವನ್ನು ನಾವು ಹೃದಯಪೂರ್ವಕ ಅಭಿನಂದಿಸುತ್ತೇವೆ. ಧನಿಕರಿಗೆ ಅತ್ಯಂತ ಭೂಷಣಪ್ರದವಾದ ಈ ಮಹತ್ಕಾರ್ಯವು ಜಾಗ್ರತೆ ಪ್ರಾರಂಭವಾಗಲೆಂದು ಹಾರೈಸುತ್ತೇವೆ.

'ಫ್ರೀ ಪ್ರೆಸ್ ಜರ್ನಲ್' ನಿಂತಿತು.

ಮುಂಬೈಯಲ್ಲಿ ಹೊರಡುತ್ತಿದ್ದ ಫ್ರೀ ಪ್ರೆಸ್ ಎಂಬ ಇಂಗ್ಲಿಷ್ ದೈನಿಕ ಪತ್ರಿಕೆಯ ೨೦ ಸಾವಿರ ರೂ. ಗಳ ಮುಂಗಡ ಹಣವನ್ನು ಸರಕಾರವು ತನ್ನ ಸ್ವಾಧೀನಪಡಿಸಿಕೊಂಡಿತು.

ಈ ಮುಂಚೆಯೂ ಈ ಪತ್ರಿಕೆಯು ಇದೇ ಪ್ರಕಾರ ಹಣವನ್ನು ಸರಕಾರಕ್ಕೆ ಸಲ್ಲಿಸಿದೆ. ಪುನಃ ಪತ್ರಿಕೆಯನ್ನು ಪ್ರಕಟಿಸುವುದಾದರೆ ಮತ್ತೆ ೨೦ ಸಾವಿರಕ್ಕೆ ಕಡಿಮೆಯಿಲ್ಲದಷ್ಟು ಹಣವನ್ನು ಸರಕಾರದಲ್ಲಿಡಬೇಕಾಗುತ್ತದೆ. ಅದಕ್ಕಾಗಿ ಫ್ರೀ ಪ್ರೆಸ್ ಆಫ್ ಇಂಡಿಯಾ ಕಂಪನಿಯ ಸಭಾಸದರು ಸಭೆ ಸೇರಿ ಇನ್ನುಮುಂದೆ ಪತ್ರಿಕಾ ಪ್ರಕಟನೆಯನ್ನೇ ನಿಲ್ಲಿಸಬೇಕೆಂದು ನಿರ್ಧರಿಸಿದರು. ಆದುದರಿಂದ ಫ್ರೀ ಪ್ರೆಸ್ ಪತ್ರಿಕೆಯು ನಿಲ್ಲುವ ಪ್ರಸಂಗ ಬಂದುದು ಅತ್ಯಂತ ವಿಷಾದಕರವು.

ಪಂಜಾಬದಲ್ಲೊಬ್ಬ ಪೈಗಂಬರನಂತೆ.

ಮುಸಲ್ಮಾನೀ ಧರ್ಮ ಸ್ಥಾಪಕರಾದ ಮುಹಮ್ಮದ ಪೈಗಂಬರರೇ ಕೊನೆಯ ಪೈಗಂಬರರೆಂದೂ ಅವರ ನಂತರ ಇನ್ನೊಬ್ಬ ಪೈಗಂಬರರು ಆಗುವದೇ ಇಲ್ಲವೆಂಬೂ ಮುಸಲ್ಮಾನರ ಗ್ರಹಿಕೆ. ಪೈಗಂಬರರ ಈ ಅಂತಿಮತ್ವವು ಮುಸಲ್ಮಾನರಲ್ಲಿ ಬಹಳೇ ಮಹತ್ವದ ತತ್ವವಾಗಿದೆ. ಇದರಿಂದ ಮುಸಲ್ಮಾನರಲ್ಲಿ ಹೊಸ ಹೊಸ ಪಂಥಗಳು ನಿರ್ಮಾಣವಾಗದಂತೆ ತಡೆಯಾಗಿದ್ದಿತು ಆದರೆ ಈಗ ೫೦ ವರ್ಷಗಳ ಪೂರ್ವದಲ್ಲಿ ಪಂಜಾಬದಲ್ಲಿ ಮತ್ತೊಂದು ಪಂಥವು ನಿರ್ಮಾಣವಾಗಿದೆ. ಅದರ ಸ್ಥಾಪಕನು, ಗುಲಾಮ ಮುಹಮ್ಮದ. ಇವನ ಗ್ರಾಮವು ಕ್ವಾದಿಯಾನ್ ಎಂಬುದು ಇವನು ತಾನು ದೇವರಿಂದ ಕಳಿಸಲ್ಪಟ್ಟವನೆಂದು ಬೋಧಿಸುತ್ತ ಕೆಲ ಜನರನ್ನು ಕೂಡಿಸಿಕೊಂಡು ಮುಸಲ್ಮಾನೀ ಧರ್ಮದಲ್ಲಿಯೇ ಮತ್ತೊಂದು ಪಂಥವನ್ನುಂಟುಮಾಡಿದ್ದಾನೆ. ಉಳಿದ ಮುಸಲ್ಮಾನರು ಈ ಪಂಥದವರಿಗೆ ಸ್ವಾಭಾವಿಕವಾಗಿ ಮುಸಲ್ಮಾನರೆನ್ನಲು ಸಿದ್ಧರಿರುವದಿಲ್ಲ. ಈ ಹೊಸ ಪಂಥಕ್ಕೆ ಕ್ವಾದಿಯಾನಿ, ಮಿರ್ಝಾಯಿ ಅಥವಾ ಅಹಮ್ಮದೀ ಎಂಬ ಹೆಸರುಗಳುಂಟು. ಮೆಲ್ಲ ಮೆಲ್ಲನೆ ಈ ಪಂಥವು ಬೆಳೆಯುತ್ತಲಿದ್ದು ಈಗ ಇವರಲ್ಲಿ ೩-೪ ಸಾವಿರ ಅನುಯಾಯಿಗಳಾಗಿದ್ದಾರೆ. ಈ ಹೊಸ ಪೈಗಂಬರನು ಪ್ರಾಚೀನ ಕಟ್ಟಾ ಮುಸಲ್ಮಾನರಿಗೇನೇ "ಕಾಫರ್" ಎಂದೆನ್ನಲು ಪ್ರಾರಂಭ ಮಾಡಿದನು. ಕೂಡಲೆ ಧರ್ಮ ಕಲಹಕ್ಕಾರಂಭವಾಯಿತು. ಕ್ವಾದಿಯನಾದಲ್ಲಿ ನೂತನ ಪಂಥದವರು ಒಂದು ಸ್ವಯಂ ಸೇವಕ ದಲವನ್ನು ಸ್ಥಾಪಿಸಿ ಒತ್ತಾಯ ಅನ್ಯಾಯ ಸಾಧನಗಳಿಂದ ತಮ್ಮ ಪಂಥವನ್ನು ಬೆಳೆಸಹತ್ತಿದರು. ಅವರು ಈಗ ತಮ್ಮ ಪಂಥದ ಒಂದು ನ್ಯಾಯಸ್ಥಾನವನ್ನು ನಿರ್ಮಿಸಿ ಅದರ ಆಜ್ಞೆಯ ಮೇರೆಗೆ ಕಾರ್ಯ ಮಾಡಹತ್ತಿದ್ದಾರೆ.

ಇದೆಲ್ಲವನ್ನು ತಡೆಯುವದಕ್ಕಾಗಿ ಅಹರರ್ ತಬ್‌ಲೀಗ ಪರಿಷತ್ತನ್ನು ಕ್ವಾದಿಯಾನಾದಲ್ಲಿಯೇ ನೆರೆಯಿಸಬೇಕೆಂದು ಮುಸಲ್ಮಾನರು ನಿಶ್ಚಯ ಮಾಡಿದರು. ಆದರೆ ಅಲ್ಲಿ ಅವರಿಗೆ ಸ್ಥಲವೇ ದೊರೆಯುವದು ಕಠಿಣವಾಯಿತು. ಕಡೆಗೆ ಒಬ್ಬ ಶೀಖ ಗೃಹಸ್ಥನ ಸ್ಥಲವನ್ನು ದೊರಕಿಸಿ ಸಭೆ ನೆರೆಯಿಸಬೇಕೆಂದರು. ಆದರೆ 'ಅಹಮ್ಮದೀ' ಯು ಪಂಥಿಗಳು ಆ ಸ್ಥಲವನ್ನು ಮೊದಲೇ ತೆಗೆದುಕೊಂಡು ಅದರ ಸುತ್ತಲೂ ಗೋಡೆ ಕಟ್ಟಿಸಿಬಿಟ್ಟರು. ಅಂತೂ ಇಂತೂ ಕ್ವಾದಿಯಾನಾದಿಂದ ಒಂದು ಮೈಲಿನ ಮೇಲೆ ಮುಸಲ್ಮಾನರ ಪರಿಷತ್ತು ನಡೆಯಿತು. ಸಭೆಯಲ್ಲಿ ಮೌಲಾನಾ ಅತಾವುಲ್ಲಾ ಶಹಾಬುಖಾರಿ ಇವರು ಕ್ಷೋಭಕಾರಕ ಭಾಷಣ ಮಾಡಿದರೆಂದು ಅಹಮ್ಮದೀಯ ಪಂಥಿಗಳು ಅವರ ಮೇಲೆ ವ್ಯಾಜ್ಯ ಹೂಡಿದರು. ಮೌಲಾನರ ಭಾಷಣವು ಕ್ಷೋಭಕಾರಕವೆಂದು ನ್ಯಾಯಾಧೀಶರು ನಿರ್ಣಯಿಸಿದರೂ ಅಹಮ್ಮದೀಯ ಪಂಥಿಗಳು ಮೊದಲೇ ಮುಸಲ್ಮಾನರನ್ನು ಸಂತಾಪಗೊಳಿಸಿದ್ದರೆಂಬುದನ್ನು ಲಕ್ಷಕ್ಕೆ ತಂದು ಕೋರ್ಟು ಏಳುವವರೆಗೆ ಭಾಷಣಕರ್ತರಿಗೆ ಶಿಕ್ಷೆ ಮಾಡಲಾಯಿತು.

ಪ್ರಸಿದ್ಧ ಈಸುಗಾರ.

ಸುಪ್ರಸಿದ್ಧ ಬಂಗಾಲಿ ಈಸುಗಾರನಾದ ರವೀಂದ್ರನಾಥ ಚಟರ್ಜಿ ಎಂಬವನು ಕಳೆದ ಶುಕ್ರವಾರ ಪುಣೆಯ ಟಿಳಕ ಕೆರೆಯಲ್ಲಿ ಎರಡೂ ಕೈ ಕಟ್ಟಿಕೊಂಡು ಈಸುವದನ್ನು ಪ್ರಾರಂಭಿಸಿದನು. ಇವನು ಅಲಾಹಾಬಾದ ವಿಶ್ವ ವಿದ್ಯಾಲಯದ ಬಿ. ಎ. ಪದವೀಧರನಾಗಿದ್ದು ಉತ್ತಮ ರೋವರ ಸ್ಕೌಟ ಎಂದು ಪ್ರಸಿದ್ಧನಾಗಿದ್ದಾನೆ. ಜಗತ್ತಿನ ಈಸುವ ಶಕ್ತಿಯ ೮೬ ಗಂಟೆಯ ಪ್ರಮಾಣವನ್ನು ಮೀರುವದಕ್ಕಾಗಿ ಇವನು ಈ ಸಾರೆ ಪ್ರಯತ್ನ ಮಾಡಿರುವನು. ಈಸುವ ಮುಂದೆ ಕೆರೆಯನ್ನು ಕಾಯಿ ಕರ್ಪೂರಗಳಿಂದ ಪೂಜೆ ಮಾಡಲಾಯಿತು. ರವೀಂದ್ರನಾಥನ ಮಾತೆಯೂ, ಸಹೋದರಿಯೂ ಅವನು ಪ್ರಾರಂಭ ಮಾಡುವ ಮುಂದೆ ಕೆರೆಗೆ ಬಂದಿದ್ದರು. ಅವನು ಶರೀರಕ್ಕೆ ನೀರಿನ ಬಾಧೆಯಾಗಬಾರದೆಂದು ವ್ಯಾಸಲೀನ ಮತ್ತು ಗ್ರೀಸಗಳನ್ನು ಲೇಪಿಸಿಕೊಂಡು ನೀರಿನಲ್ಲಿ ಬಿದ್ದನು. ಹರ್ಷಚಿತ್ತನಾಗಿ ಈಸುತ್ತಾನೆ. ಆಗಾಗ್ಗೆ ಧೂಮ್ರಪಾನ ಮಾಡುತ್ತಾನೆ. ಎರಡು ಗಂಟೆಗೊಮ್ಮೆ ವೈದ್ಯರು ಪ್ರಕೃತಿಯನ್ನು ಪರೀಕ್ಷಿಸುತ್ತಾರೆ. ಗಂಟೆಗೊಮ್ಮೆ ಅವನಿಗೆ ಮೋಸಂಬಿ ಹಣ್ಣಿನ ರಸವನ್ನು ಕೊಡಲಾಗುತ್ತದೆ. ಈತನ ಈಸುವ ಕಲಾ ನೈಪುಣ್ಯವನ್ನು ನೋಡಲು ಜನರು ಗುಂಪುಗಟ್ಟಿ ಬರುತ್ತಾರೆ. ನೋಡಲು ೨ ಆಣೆ ಪ್ರವೇಶ ಫಿ ಇಡಲಾಗಿದೆ.

ಗೋ ಪ್ರಮೋದ ನಜಮುದ್ದೀನಸಾಹೇಬ

ಅಹಮ್ಮದನಗರ ಜಿಲ್ಹೆಯಲ್ಲಿ ಶೇಖನಜಮುದ್ದೀನ ಕಮರುದ್ದೀನಸಾಹೇಬ ಎಂಬವರು ಅಲ್ಲಲ್ಲಿ ಸಂಚರಿಸಿ ಗೋವುಗಳ ರಕ್ಷಣೆಯ ಬಗ್ಗೆ ಜನರಲ್ಲಿ ಜಾಗೃತಿಯನ್ನುಂಟುಮಾಡುತ್ತಿರುತ್ತಾರೆ. ಆದುದರಿಂದ ಅಲ್ಲಿಯ ಜನರು ಈ ಮುಸಲ್ಮಾನ ಸಭ್ಯ ಗೃಹಸ್ಥರಿಗೆ ಗೋಪ್ರಮೋದ ಎಂಬ ಪ್ರಶಸ್ತಿಯನ್ನು ಕೊಟ್ಟಿದ್ದಾರೆ. ಆ ಜಿಲ್ಹೆಯ ಜಾಮಖೇಡ ಎಂಬಲ್ಲಿ ದೊಡ್ಡ ಜಾತ್ರೆ ಕೂಡುತ್ತದೆ. ಅಸಂಖ್ಯ ದನಗಳು ಮಾರಾಟಕ್ಕೆ ಬರುತ್ತವೆ. ಆ ಕಾಲಕ್ಕೆ ಕಟಕರು ತಾವು ಗೋಸಂರಕ್ಷಣೆ ಮಾಡುವವರೆಂದು ಒಕ್ಕಲಿಗರನ್ನು ಮೋಸಗೊಳಿಸಿ ಆಕಳುಗಳನ್ನು ಕೊಂಡುಕೊಳ್ಳುತ್ತಾರೆ. ಇದನ್ನು ತಪ್ಪಿಸಲು ನಜಮುದ್ದೀನಸಾಹೇಬರು ಸ್ವತಃ ಹೋಗಿ ಜನರಿಗೆ ಮೊದಲೇ ಎಚ್ಚರಿಕೆ ಕೊಟ್ಟದ್ದಲ್ಲದೆ ಕಟಕರು ತೆಗೆದುಕೊಂಡಿದ್ದ ಎರಡು ಆಕಳುಗಳನ್ನು ಬಿಡಿಸಿ ಪಾಂಜರಪೋಳಿಗೆ ಕಳಿಸಿಕೊಟ್ಟರು. ಬಹು ಸ್ತುತ್ಯ.

ಗ್ಯಾರಂಟಿಯಾದ

ಬೀಜಗಳು ಮತ್ತು ಸಸಿಗಳು.

	ರೂ.	ಆ.	ಪೈ.
೧೨ ಪೊಟ್ಟಣ ರಖಂವಾರಿ ಹೂವಿನ ಬೀಜಗಳು	೧	೮	೦
೧೨ ,, ,, ನಾಟಿ ತರಕಾರಿ ಬೀಜಗಳು	೧	೪	೦
೧೨ ,, — ,, ಇಂಗ್ಲೀಷು — ,,	೨	೦	೦
೧೨ ಜಾತಿ ಗುಲಾಬಿ ಸೊಸಿಗಳು—	೪	೦	೦
೧೨ ,,—ಕಲಮಿ ಮಾವಿನ ಸೊಸಿಗಳು— ೬ ರಿಂದ	೯	೦	೦
೧೨ ,,—ಕಿತ್ತಲೆ, ನಿಂಬೆ, ಪೇರಲ, ಸೇಬು, ಪನ್ನೇರಳ, ದಾಳಿಂಬೆ, ಚಕ್ಕೋತ, ಪೀಚಸ್, ಮರಸೇಬು ಮೊದಲಾದವು	೫	೦	೦
೧೨ ,, ದ್ರಾಕ್ಷಿ, ಲಕ್ಕೋಟ, ರಾಜಪುರಿ, ಪಪಾಯ, ಅಂಜೂರ, ಸೀತಾಫಲ	೩	೦	೦
೧೨ ,, ಇತರ ಪುಷ್ಪ ಗಿಡಗಳು—	೩	೦	೦

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ದೇವಪ್ಪ ಅಂಡ್ ಸನ್
ಲಾಲ್‌ಬಾಗ್ ರೋಡು, ಬೆಂಗಳೂರು ಸಿಟಿ.

ವಿವಿಧ ವರ್ತಮಾನ.

೧೯ ದಿವಸ ಮಣ್ಣೊಳಗಿದ್ದ!

ಶ್ರೀ. ಗಿಯಾನಿ ರಾಜನಶಿಂಗ ಎಂಬ ಒಬ್ಬ ಶೀಖ ಗೃಹಸ್ಥನು ಕ್ವೇಟಾದಲ್ಲಿ ಭೂಕಂಪದಿಂದ ಮನೆ ಬೀಳಲು ಮಣ್ಣಿನ ರಾಶಿಯಲ್ಲಿ ಹೂಳಲ್ಪಟ್ಟಿದ್ದನು. ಭೂಕಂಪವಾದ ೧೯ ದಿವಸಗಳ ಮೇಲೆ ಆ ಮನೆಯನ್ನು ಅಗಿದು ತೆಗೆಯಲು ಆ ಗೃಹಸ್ಥನು ಜೀವಂತವಾಗಿರುವದು ಕಂಡುಬಂದಿತು. ಇನ್ನೂ ಎಷ್ಟು ಜನರು ಮಣ್ಣಿನಲ್ಲಿ ಜೀವಂತವಿರುವರೋ ಯಾರು ಬಲ್ಲರು!

ಸಂಸ್ಥಾನಿಕರ ಕೈಸೆರೆ.

ಸಿಂಧ ಪ್ರಾಂತದ ತಾಜಪುರ ಎಂಬ ಒಂದು ಸಣ್ಣ ಸಂಸ್ಥಾನದ ನವಾಬನನ್ನೂ ಅವನ ಸಂಗಡಿಗರನ್ನೂ ಒಬ್ಬ ಒಕ್ಕಲಿಗನ ಕೊಲೆಮಾಡಿದರೆಂಬ ಅಪರಾಧಕ್ಕಾಗಿ ಬಂಧಿಸಲಾಗಿದೆ. ಬ್ರಿಟಿಶ ಹದ್ದಿಯಲ್ಲಿ ವಾಸವಾಗಿದ್ದ ಒಬ್ಬ ಒಕ್ಕಲಿಗನ ಸುಂದರ ಪತ್ನಿಯಮೇಲೆ ನವಾಬರ ಮನಸ್ಸಾಗಿ ಅವಳನ್ನು ತಮ್ಮ ಜನಾನಾದಲ್ಲಿ ಸೇರಿಸಿಕೊಳ್ಳಲು ಪ್ರಯತ್ನಿಸಿದರಂತೆ ಇದರಿಂದ ಆ ಒಕ್ಕಲಿಗನಿಗೆ ಸಿಟ್ಟು ಬಂದು ಪ್ರತಿಬಂಧಿಸಲು ನವಾಬಸಾಹೇಬರು ಅವನನ್ನು ಗುಂಡಿಟ್ಟು ಕೊಂದರಂತೆ. ಇವರನ್ನು ಪೋಲೀಸರು ಕೈಸೆರೆಮಾಡಿದ್ದಾರೆ.

ಸುಲಿಗೆಗಾರನು ಕಾಂಗ್ರೆಸ್ ಮನುಷ್ಯನಲ್ಲ!

ಸಂಯುಕ್ತ ಪ್ರಾಂತದ ಮೈರ ಎಂಬ ತಾಲೂಕಿನಲ್ಲಿ ರಾಧಾಚರಣ ಎಂಬ ಸುಲಿಗೆಗಾರನು ಬಹಳ ಪುಂಡಾಟಿಕೆಯನ್ನು ನಡೆಯಿಸಿದ್ದಾನೆ. ಇಲ್ಲಿಯ ವರೆಗೆ ಅವನು ೫-೬ ಕೊಲೆಗಳನ್ನು ಮಾಡಿರುವನು. ಪೋಲೀಸರ ಹಸ್ತಕನಾದ ಭೀಮಸಿಂಗ ಎಂಬವನನ್ನು ಮೊನ್ನೆ ಮೊನ್ನೆ ಕೊಂದುಹಾಕಿದನು. ಅವನನ್ನು ಹಿಡಿದು ಕೊಟ್ಟವರಿಗೆ ೧೦೦೦ ರೂ. ಪ್ರತಿಫಲ ಕೊಡುವುದಾಗಿ ಸರಕಾರದವರು ಪ್ರಕಟಿಸಿರುವರು. ಆ ಸುಲಿಗೆಗಾರನು ತನ್ನನ್ನು ಹಿಡಿಯಲು ಹೊಂಚು ಹಾಕಿರುವ ಫೌಜದಾರನಿಗೆ, 'ಸುಮ್ಮನೆ ತಿರುಗಿಹೋಗು ಇಲ್ಲದಿದ್ದರೆ ನಿನ್ನನ್ನು ಕೂಡಲೆ ಕೊಲೆ ಮಾಡುವೆನೆಂದು' ಹೆದರಿಕೆಯ ಪತ್ರವನ್ನು ಹಾಕಿದ್ದಾನೆ.

ಈ ಬಗ್ಗೆ ಅಲಹಾಬಾದದ ಡಿ. ಎಸ್. ಪಿ. ಯವರು ಒಂದು ಪ್ರಕಟನೆ ಹೊರಡಿಸಿದ್ದು ರಾಧಾಚರಣನು ಕಾಂಗ್ರೆಸ್ ಮನುಷ್ಯನೆಂದು ಕಲ್ಪಿಸಿ ಸಹಾಯ ಮಾಡಕೂಡದೆಂದೂ, ಕಾಂಗ್ರೆಸ್ ಹಿಂಸೆಯನ್ನು ಪುರಸ್ಕರಿಸುವದಿಲ್ಲವೆಂದೂ, ಆದುದರಿಂದ ಆ ಅತ್ಯಾಚಾರಿಯನ್ನು ಜನರು ಹಿಡಿದುಕೊಡಲು ಸಹಾಯ ಮಾಡಬೇಕೆಂದೂ ತಿಳಿಸಿರುವರು.

ಮುಸ್ಲೀಮ್ ಸ್ತ್ರೀಯರ ಗುಪ್ತಸಂಸ್ಥೆ.

ಲಂಡನ್ನಿನ 'ಪೀಪಲ್' ಪತ್ರಿಕೆಯ ಪ್ಯಾರೀಸದ ಸುದ್ದಿಗಾರನು ಈ ಪ್ರಕಾರ ಆ ಪತ್ರಿಕೆಯಲ್ಲಿ ಪ್ರಸಿದ್ಧಿಸಿದ್ದಾನೆ—

ಮುಸಲ್ಮಾನ್ ಯುವಕರು ಪಾಶ್ಚಾತ್ಯ ಸ್ತ್ರೀಯರನ್ನು ಲಗ್ನವಾಗಿ ತಮ್ಮ ಜನಾನಖಾನೆಯಲ್ಲಿ ಸೇರಿಸಿಕೊಂಡರೆ ಅಂಥ ಸ್ತ್ರೀಯರನ್ನು ಕೊಲ್ಲುವದಕ್ಕಾಗಿಯೇ ಮುಸಲ್ಮಾನ ಸ್ತ್ರೀಯರ ಒಂದು ಗುಪ್ತ ಸಂಸ್ಥೆಯಿದೆಯಂತೆ. ಇದಕ್ಕೆ ದೃಷ್ಟಾಂತ. ಈಗ ಒಂದು ವರ್ಷದ ಹಿಂದೆ ಅನವರ ಶಿರಾಝುಸಾಡಿ ಎಂಬ ಸರದಾರ ಮನೆತನದ ಮುಸಲ್ಮಾನ ತರುಣನು ಮಿಸ್ ನ್ಯೂಲಿ ಕಾರ್ಲಾಯಿಲ್ ಎಂಬ ಒಬ್ಬ ಯುರೋಪಿಯನ್ ತರುಣಿಯನ್ನು ಲಗ್ನವಾದನು. ಇದನ್ನು ಕಂಡು ಅವನ ಉಳಿದ ಪತ್ನಿಯರು ಅವಳನ್ನು ವಿಷಪ್ರಯೋಗ ಮಾಡಿ ಕೊಂದುಹಾಕಿದರಂತೆ. ಈ ಬಗ್ಗೆ ಸೂಕ್ಷ್ಮವಾಗಿ ಪರಿಶೋಧಿಸಲು ಮುಸ್ಲೀಂ ಸ್ತ್ರೀಯರ ಒಂದು ಗುಪ್ತ ಸಂಸ್ಥೆಯವರೇ ಈ ವಿಷಪ್ರಯೋಗಕ್ಕೆ ಕಾರಣರೆಂದೂ ಇವರ ಅಂಗಸಂಸ್ಥೆಗಳೆಲ್ಲ ಮುಸಲ್ಮಾನರು ವಾಸವಾಗಿರುವ ದೇಶಗಳಲ್ಲೆಲ್ಲ ಪಸರಿಸಿರುವವೆಂದೂ ಮುಸಲ್ಮಾನ ತರುಣರ ಪ್ರಣಯ ಜಾಲದಲ್ಲಿ ಸಿಲ್ಕಿದ ಪಾಶ್ಚಾತ್ಯ ರಮಣಿಯರನ್ನು ಕೊಲ್ಲುವದೇ ಅವರ ಧ್ಯೇಯವಾಗಿರುವದೆಂದೂ ಕಂಡುಬಂದಿದೆ. ಮುಸಲ್ಮಾನರನ್ನು ಲಗ್ನವಾದ ಅನೇಕ ಪಾಶ್ಚಾತ್ಯ ತರುಣಿಯರಿಗೆ ಈ ಬಗ್ಗೆ ಆ ಗುಪ್ತ ಸಂಸ್ಥೆಯಿಂದ ಹೆದರಿಕೆಯ ಪತ್ರಗಳೂ ಕಳಿಸಲ್ಪಡುತ್ತಿರುವವಂತೆ.

ಗಡಿನಾಡಿನಲ್ಲಿ ಗಲಭೆ

ಈಗ ಕೆಲವು ದಿವಸಗಳ ಹಿಂದೆ ಗಡಿನಾಡಿನಲ್ಲಿ ಪುಂಡಾಟಿಕೆಯನ್ನೆಬ್ಬಿಸಿದ ಅಲಿಂಜರದ ಫಕೀರನು ಈಗ ಜ್ವರಪೀಡಿತನಾಗಿ ಹಾಸಿಗೆ ಹಿಡಿದಿದ್ದಾನೆ. ಆದರೂ ಕಳೆದ ತಿಂಗಳ ೨೩ ನೆಯ ತಾರೀಖಿನಿಂದ ಮೂರು ದಿವಸಗಳ ವರೆಗೆ ಖಾರ ಮತ್ತು ನವಾಗಾಯಿ ಎಂಬ ಎರಡು ಬಣಗಳಲ್ಲಿ ಭಯಂಕರ ಯುದ್ಧವಾಯಿತು. ಅದರಲ್ಲಿ ಒಟ್ಟಿಗೆ ೧೫ ಜನರು ಮೃತಪಟ್ಟಿರುವರು. ೩೦ ಜನರು ಗಾಯ ಹೊಂದಿರುವರು. ಈ ಯುದ್ಧವಾಗುವ ಕಾಲಕ್ಕೆ ಹೆಸರಾದ ಪುಂಡರಾದ ಬಾದಶಹಾಗುಲ್ ಮತ್ತು ಶಿಪಾನಿ ಇವರು ಅಲ್ಲಿದ್ದರಂತೆ.

—ನೋಬೆಲ್ ಪಾರಿತೋಷಕದ ಸಾಹಿತ್ಯ ಮೇಲಾಟದಲ್ಲಿ ಇರಿಸುವದಕ್ಕಾಗಿ ಬಂಗಾಲಿ ಪ್ರಸಿದ್ಧ ಸಾಹಿತ್ಯ ಭಕ್ತರಾದ ಶ್ರೀ ಶರಚ್ಚಂದ್ರ ಚತರ್ಜಿಯವರು ತಮ್ಮ ಶ್ರೀಕಾಂತ ಪುಸ್ತಕವನ್ನು ಕಳಿಸಿದ್ದಾರೆ.

ನಮ್ಮಲ್ಲಿ ಫೋಟೋ, ಲೈನ್ ಬ್ಲಾಕುಗಳು, ಹಿತ್ತಾಳೆ ಮತ್ತು ಸೀಸದ ಬ್ಲಾಕುಗಳು, ಅರಗಿನ ಸೀಲು ಜವಾನರ ಬಿಲ್ಲೆಗಳು, ರಬ್ಬರ್ ಮೊಹರುಗಳು, ದೇವತೆ ತಿಬಣ್ಣದ ಪಟಗಳು, ಕ್ಯಾಲೆಂಡರುಗಳು ನಿಮ್ಮ ಮನ ಒಪ್ಪುವಂತೆ ತಯಾರಾಗುತ್ತವೆ.

ವರ್ತಮಾನಸಾರ.

—ಕೊಲ್ಹಾಪುರದಲ್ಲಿ ಒಬ್ಬ ಮರಾಠಾ ತರುಣನು ಒಂದು ಬಂಗಾರದ ತಾಯಿತವನ್ನು ಒಬ್ಬ ಚಿನಿವಾಲನ ಹತ್ತಿರ ಮಾರಲಿಕ್ಕೆ ತಂದನು. ಅಲ್ಲಿ ಅವನಿಗೆ ಯೋಗ್ಯ ಬೆಲೆಯು ಹೇಳಲಿಕ್ಕೆ ಬರಲಿಲ್ಲವಾದ್ದರಿಂದ ಆ ಚಿನಿವಾಲನು ಸಂಶಯಪಟ್ಟು ಅವನನ್ನೂ ಆ ತಾಯಿತವನ್ನೂ ಪೋಲೀಸರ ಸ್ವಾಧೀನ ಮಾಡಿದನು. ಪೋಲೀಸರು ವಿಚಾರ ನಡೆಯಿಸಲು ಅವನು ಅದನ್ನು ಒಬ್ಬ ಹುಡುಗನ ಕೊರಳೊಳಗಿಂದ ಕದ್ದು ತಂದಿರುವನೆಂದು ಕಂಡು ಬಂದಿತು.

—ಶ್ರೀ ಶರಚ್ಚಂದ್ರ ಬೋಸರವರು ತಮ್ಮ ಮಾತೋಶ್ರೀಯವರು ಅಸ್ವಸ್ಥರಾದುದರಿಂದ ಅವರನ್ನು ಕಾಣಲು ತಮಗೆ ರಜೆ ದೊರೆಯಬೇಕೆಂದು ಸರಕಾರಕ್ಕೆ ಕೇಳಿಕೊಂಡಿದ್ದರು. ಅವರಿಗೆ ಒಂದು ವಾರದ ರಜೆ ಕೊಡಲಾಗಿದೆ.

—ಪೇಶಾವರದಲ್ಲಿ ಬೆಂಕಿ ಹತ್ತಿ ಒಂದು ಸಾವಿರ ಮನೆಗಳು ಸುಟ್ಟು ಹೋದವು. ಮತ್ತು ೭೧ ಲಕ್ಷ ರೂ. ಗಳ ಹಾನಿಯಾಗಿದೆ.

—ಕಲಕತ್ತೆಯಿಂದ ೧೮ ಮೈಲಿನ ಮೇಲಿರುವ ಬೆಲಪುರಿಯಾ ಎಂಬಲ್ಲಿ ೧೮ ವರ್ಷದ ಒಬ್ಬ ಬಂಗಾಲಿ ತರುಣನು, ಹೊಲದಲ್ಲಿ ಕೆಲಸ ಮಾಡುತ್ತಿರುವಾಗ ಮೂರು ನಾಗರ ಹಾವುಗಳು ಒಮ್ಮೆಲೆ ಮೈಮೇಲೆ ಬರಲು ಆತನು ಭಯಪಡದೆ ಥಾಲಿಯಿಂದ ಮೂರೂ ಹಾವುಗಳನ್ನು ಇರಿದು ಕೊಂದನು.

—ಫಿರೋಜಪುರದಲ್ಲಿ ಇಬ್ಬರು ಲಕ್ಷಾಧೀಶ ವ್ಯಾಪಾರಿಗಳು ಸತಲಜ ವ್ಹ್ಯಾಲಿ ಪ್ರೊಜೆಕ್ಟ ಕಂಪನಿಯ ಉಗ್ರಾಣದಿಂದ ಕೆಲ ಕಬ್ಬಿಣ ಹಳಿಗಳನ್ನು ಕಳವು ಮಾಡಿದ ಅಪರಾಧಕ್ಕಾಗಿ ನ್ಯಾಯಾಧೀಶರು ಪ್ರತಿಯೊಬ್ಬರಿಗೆ ೫ ವರ್ಷ ಕಠಿಣ ಶಿಕ್ಷೆ ಮತ್ತು ೫೦೦೦ ರೂ. ದಂಡವನ್ನು ವಿಧಿಸಿದರು.

—ಕಳೆದ ೨೬ ನೇ ತಾರೀಖಿನ ದಿವಸ ಅಮೃತಬಝಾರ ಪತ್ರಿಕೆಯ ಸಂಪಾದಕರು ಬಿಡುಗಡೆ ಹೊಂದಿದರು. ಇವರ ಮೆರವಣಿಗೆ ಮುಂತಾದವುಂಟಾಗಬಾರದೆಂದೋ ಹೇಗೋ ಒಂದು ದಿನ ಮೊದಲೇ ಬಿಡುಗಡೆ ಮಾಡಿದರು.

—ಹಿಂದಕ್ಕೆ ಸ್ಪೇನ ದೇಶದಲ್ಲಿ ದೊಂಬಿ ಎಬ್ಬಿಸಿದ ಅಪರಾಧಕ್ಕಾಗಿ ೬೫ ಜನರ ವಿಚಾರಣೆಯು ಪೋಲೀಸ ನ್ಯಾಯಸ್ಥಾನದಲ್ಲಿ ಗುಪ್ತ ರೀತಿಯಿಂದಾಯಿತು. ಅವರಲ್ಲಿ ೪ ಜನರಿಗೆ ದೇಹಾಂತ ಶಾಸನ, ೩೬ ಜನರಿಗೆ ಆಜನ್ಮ ಕರಿನೀರಿನ ಶಿಕ್ಷೆ, ೭ ಜನರಿಗೆ ೧೨ ವರ್ಷ ಕಾರಾಗೃಹವಾಸ ವಿಧಿಸಲಾಗಿದೆ. ೧೮ ಜನರು ನಿರ್ದೋಷಿಗಳೆಂದು ಬಿಡುಗಡೆಯಾದರು.

—ದೇವತೆಯ ಮುಂದೆ ಪ್ರಾಣಿವಧೆ ಮಾಡಕೂಡದೆಂದು ೭ ದಿವಸ ಉಪವಾಸ ವ್ರತವನ್ನು ಹಿಡಿದಿದ್ದ ವೀರ ಸತ್ಯಾಗ್ರಹಿ ರಾಮಚಂದ್ರ ಶರ್ಮಾ ಇವರನ್ನು ಉಮರಾವತಿಯಲ್ಲಿ ಅಭಿನಂದಿಸಿ ಮಾನಪತ್ರ ಅರ್ಪಣ ಮಾಡಲಾಯಿತು.

—ಶ್ರೀ ಸರೋಜಿನಿ ನಾಯಿಡು ಇವರ ಪುತ್ರ ಶ್ರೀ ಜಯಸೂರ್ಯ ಎಂಬವರ ವಿವಾಹವು ಸಿಕಂದರಾಬಾದದಲ್ಲಿ ಒಬ್ಬ ಬರ್ಲಿನ್ ಶ್ವೇತ ತರುಣಿಯೊಡನೆ ಆಯಿತು. ಲಗ್ನ ಕಾಲದಲ್ಲಿ ವಧೂವರರು ಯುರೋಪಿಯನ್ ಉಡುಪನ್ನು ಧರಿಸಿದ್ದರು. ಈ ಕಾಲಕ್ಕೆ ಸ್ವತಃ ಸರೋಜಿನಿ ದೇವಿಯವರು ಅಲ್ಲಿದ್ದರು.

—ಮಹಾರಾಜಾ ಕಿಶನ್‌ಪ್ರಸಾದ ಇವರ ಪುತ್ರ ನವಾಬ ನಾಸರುಲ್ಲಾಖಾನ ಬಹದ್ದೂರ ಇವರ ವಿವಾಹವು ನವಾಬವೋಗಿ ಉದ್ದೌಲಾ ಬಹಾದ್ದೂರ ಪಾಯಗಾ ಇವರ ಪುತ್ರಿಯೊಡನೆ ಕಳೆದ ತಿಂಗಳ ೨೧ ನೆಯ ತಾರೀಖಿನ ದಿವಸ ಸಾಂಗವಾಯಿತು. ವಿವಾಹಕ್ಕೆ ನಿಝಾಮ ಸಾಹೇಬರು ಯುವರಾಜರು ಯುವರಾಜ್ಞಿಯರು ಹಾಗೂ ದೊಡ್ಡ ದೊಡ್ಡ ರಾಜ ನವಾಬರುಗಳೆಲ್ಲ ಆಗಮಿಸಿದ್ದರು. ಮಹಾರಾಜಾ ಕಿಶನ್‌ಪ್ರಸಾದರು ಪುನಃ ಈ ಕಾಲಕ್ಕೆ ೫೦೦ ರೂ. ಗಳನ್ನು ಕ್ವೇಟಾ ರಿಲೀಫ ಫಂಡಿಗೆ ಕೊಟ್ಟರು.

—ಧಾರವಾಡದಲ್ಲಿ ದಿವಂಗತ ಡಾ. ನಾಡಗೀರರ ಸ್ಮಾರಕ ಮಾಡುವ ಕುರಿತು ಒಂದು ಯೋಜನೆ ನಡೆದದೆ.

—ಸುರಪುರ ತಾಲೂಕಿನ ವನದುರ್ಗ ಎಂಬಲ್ಲಿ ಸಿಡಿಲಿನ ಹೊಡೆತದಿಂದ ೧೫ ಕುರಿಗಳು ಸತ್ತವು. ೨ ಬಣವೆಗಳು ಸುಟ್ಟವು. ಮತ್ತು ಒಬ್ಬನು ಮೂರ್ಛೆ ಹೋದನು.

—ದಕ್ಷಿಣ ಹಿಂದುಸ್ಥಾನದ ಫ್ರೆಂಚರ ಅಧಿಪತ್ಯದಲ್ಲಿರುವ ವಲ್ಲಿಯಾನೂರ ಎಂಬಲ್ಲಿ ಜಾತ್ರೆಯ ಕಾಲಕ್ಕೆ ಫ್ರೆಂಚ ಗವ್ಹರ್ನರರು ಉಳಿದ ಜನರೊಡನೆ ತೇರು ಎಳೆದರು.

—ಮುಂಬಯಿಯಲ್ಲಿ ಪೋಲೀಸರು ಬೇರೆ ಬೇರೆ ಕಡೆಗಳಲ್ಲಿ ಹೊಂಚು ಹಾಕಿ ಅಮೇರಿಕನ್ ಫ್ಯೂಚರ್ಸದ ಮೇಲೆ ಜೂಜು ಆಡಿದ ಅಪರಾಧಕ್ಕಾಗಿ ೧೩ ಜನರನ್ನು ಬಂಧಿಸಿದ್ದಾರೆ.

—ಧಾರವಾಡ ಟ್ರೇನಿಂಗ ಕಾಲೇಜದ ೨ ನೇ ೩ ನೇ ವರ್ಗಗಳ ಪ್ರಾರಂಭ ಮಹೋತ್ಸವವು ದಿ. ಬ. ಕಂಬಳಿಯವರ ಹಸ್ತದಿಂದ ಪ್ರಾರಂಭಿಸಲ್ಪಟ್ಟಿತು.

—ಬೆಳಗಾವ ಆಯುರ್ವೇದ ವಿದ್ಯಾಪೀಠಕ್ಕೆ ಗೋಕಾಕದಲ್ಲಿ ೧೫೦ ರೂ. ಸಹಾಯದೊರೆಯಿತು.

—ಗಲಗಲಿಯ ಬಹು ಜನರು ತಮ್ಮೂರಿಗೆ ಪಂಚಾಯತಿ ಬೇಡೆಂದರೂ ಕೇಳದೆ ಸರಕಾರದವರು ಪಂಚಾಯತಿಯನ್ನು ಹೇರಿದರು. ೧೨೫೬ ಜನ ಮತದಾರರಲ್ಲಿ ೪೧೮ ಜನರು ಮತ ಹಾಕಿದರು.

—ಬಂಗಾಲ ಸರಕಾರದ ಒಕ್ಕಲತನದ ಶಾಖೆಯ ಒಬ್ಬ ಯುರೋಪಿಯನ್ ಇಂಜಿನಿಯರನು ಸಕ್ಕರೆ ಸಿದ್ಧಮಾಡುವ ಒಂದು ಸಾದಾ ಯಂತ್ರವನ್ನು ಸಿದ್ಧಗೊಳಿಸಿದ್ದಾನೆ. ಅದಕ್ಕೆ ೨೦ ಸಾವಿರ ರೂ. ವೆಚ್ಚಬರುತ್ತದೆ. ಆ ಯಂತ್ರವನ್ನು ಪ್ರಸಾರಮಾಡಿ ನಿರುದ್ಯೋಗವನ್ನು ಹೋಗಲಾಡಿಸಲು ಶಕ್ಯವಾಗುತ್ತದೆಯೋ ಹೇಗೆಂಬುದನ್ನು ಬಂಗಾಲ ಸರಕಾರದವರು ಪ್ರಯೋಗಮಾಡುವವರಿದ್ದಾರೆ.

—ಸಿಕಂದರಾಬಾದದಲ್ಲಿ ಭಿಕ್ಷೆ ಬೇಡಬಾರದೆಂದು ಕಟ್ಟಳೆ ಮಾಡಲಾಗಿದೆ. ಬಿಕ್ಕೆ ಬೇಡುವಂಥವರಮೇಲೆ ಖ್ಯಾಜ್ಯ ಹೂಡುವದನ್ನು ಈಗ ಪ್ರಾರಂಭಿಸಲಾಗಿದೆ.

—ವಿಜಾಪುರ ಜಿಲ್ಹೆಯ ಸಿಂದೀ ಗಿಡಗಳ ಲಿಲಾವಿನಲ್ಲಿ ಈ ವರ್ಷ ೫ ಸಾವಿರ ರೂ. ಗಳು ಕಡಿಮೆ ದೊರೆತವು.

—ಬಿಲಗಾ (ಪಂಜಾಬ) ಎಂಬ ಪಟ್ಟಣದಲ್ಲಿ ಪೋಲೀಸರು ರಾತ್ರಿಯಲ್ಲಿ ಪುರುಷರಿಲ್ಲದ ಮನೆಯನ್ನು ಹೊಕ್ಕು ಸ್ತ್ರೀಯರ ಮೇಲೆ ಅತ್ಯಾಚಾರ ನಡೆಯಿಸುತ್ತಿರುವರೆಂದು ಸರದಾರ ಸಂತಸಿಂಗ ಮೊದಲಾದವರು ಹೇಳಿಕೊಳ್ಳಲು ಈ ಸಂಗತಿಯನ್ನು ವಿಚಾರಿಸುವದಕ್ಕಾಗಿ ಪಂಜಾಬ ಪ್ರಾಂತಿಕ ಕಾಂಗ್ರೆಸ್ ಕಮೀಟಿ ಅಧ್ಯಕ್ಷರಾದ ಲಾಲಾ ದುನೀಚಂದ ಇವರು ಮೂಲರಾಜ ಶರ್ಮಾ ಎಂಬವರನ್ನು ನಿಯಮಿಸಿದ್ದಾರೆ.

—ಬೈತುಲ ಎಂಬಲ್ಲಿ ಪೋಲೀಸರು ಶ್ರೀ ಕ್ರಾಂತಿಕುಮಾರ ಎಂಬವರನ್ನು ಕೈಸೆರೆ ಮಾಡಿರುವರು. ಇವರು ರಾಮಾಯಣ ಪ್ರವಚನ ನೆಪದಿಂದ ಜನರಲ್ಲಿ ಅತ್ಯಾಚಾರ ಕ್ರಾಂತಿಯನ್ನು ಬೋಧಿಸುತ್ತಿದ್ದರಂತೆ

ವಿ ವಿ ಧ ವಿ ಷ ಯ .

ಇರಾಣದಲ್ಲಿ ಶಿವಾಲಯ

ಇರಾಣದಲ್ಲಿ ಮುಸಲ್ಮಾನರ ಸಂಖ್ಯೆಯು ಅತ್ಯಧಿಕವಾಗಿದೆ. ಆದರೂ ಮುಸಲ್ಮಾನರ ಮಧ್ಯವಸ್ತಿಯಲ್ಲಿ ಒಂದು ಶಿವಾಲಯವು ಈ ವರೆಗೂ ದಿನಾಲು ಅರ್ಚನೆ ಭಜನೆ ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳನ್ನು ಸುರಕ್ಷಿತವಾಗಿ ನಡೆಯಿಸಿಕೊಂಡಿರುವುದು ಆಶ್ಚರ್ಯಕರವಲ್ಲವೆ? ಈ ಸಂಗತಿಯನ್ನು ಸ್ವತಃ ನೋಡಿ ಬಂದ ಶ್ರೀ ಮಹೇಶ ಪ್ರಸಾದಜ ಮೌಲವಿ ಆಲಿಮ್ ಫಾಜಿಲ್ ಇವರು ಈ ಪ್ರಕಾರ ವಿವರಿಸಿದ್ದಾರೆ.

“ಮುತ್ತು ತೆಗೆಯುವ ಬಗ್ಗೆ ಇರಾಣದ ಆಖಾತವು ಪ್ರಸಿದ್ಧವಾಗಿದೆ. ಈ ಆಖಾತದ ದಂಡೆಯಲ್ಲಿ ಅಬ್ಬಾಸ ಎಂಬ ಪಟ್ಟಣವಿದೆ. ಒಳ್ಳೇ ವ್ಯಾಪಾರಸ್ಥಳ. ಇಲ್ಲಿ ಮುತ್ತಿನ ವ್ಯಾಪಾರಕ್ಕಾಗಿ ೬೦-೭೦ ಹಿಂದು ವ್ಯಾಪಾರಸ್ಥರು ವಾಸವಾಗಿದ್ದಾರೆ. ಫಾರಸಿ, ಯಹೂದಿ ಮೊದಲಾದ ಅಲ್ಪಸ್ವಲ್ಪ ವ್ಯಾಪಾರಿಗಳನ್ನು ಬಿಟ್ಟರೆ ಉಳಿದವರೆಲ್ಲ ಮುಸಲ್ಮಾನರೆ. ಈ ಪಟ್ಟಣವು ಇತಿಹಾಸ ಪ್ರಸಿದ್ಧವಾದದ್ದು. ಮುಸಲ್ಮಾನರ ಧರ್ಮಾಂತರದ ಉಪಟಳದಿಂದ ಬೇಸತ್ತು ಫಾರ್ಸಿಗಳು ಕೊನೆಗೆ ಈ ಪಟ್ಟಣದಿಂದಲೇ ಹೊರಟುಬಂದು ಹಿಂದುಸ್ಥಾನದಲ್ಲಿ ನೆಲೆಯೂರಿದರು. ಇಂಥ ಸ್ಥಾನದಲ್ಲಿ ಈಗಲೂ ಒಂದು ಶಿವಾಲಯವು ಸುಸ್ಥಿತಿಯಲ್ಲಿದೆ.

ಇದೊಂದು ಹಳೆ, ಮುರುಕ, ಹೆಸರಿಗೆ ಮಾತ್ರ ಶಿವಾಲಯವಲ್ಲ. ದೇವಾಲಯವೂ ಅದರ ಸುತ್ತಲಿನ ಆವಾರವೂ ಕೂಡಿ ಒಟ್ಟಿಗೆ ೬ ಬಿಘೆ ಭೂಮಿಯದೆ. ಮಹಾದ್ವಾರಕ್ಕೆ ಗುರುದ್ವಾರವೆಂದು ಶೀಖ ಹೆಸರಿಟ್ಟು. ಇದರ ನಾಲ್ಕೂ ಕಡೆಗೆ ಮುಸಲ್ಮಾನರ ಮನೆಗಳೇ ಇವೆ. ಇಂಥ ವಿಶಾಲವಾದ ಪೌಳಿಯುಳ್ಳ ಭವ್ಯ ದೇವಾಲಯವು ಪಟ್ಟಣದ ಮಧ್ಯದಲ್ಲಿಯೇ ಇವೆ. ಇಲ್ಲಿ ಪ್ರತಿನಿತ್ಯ ಭಜನೆ ಪೂಜಾದಿಗಳು ನಡೆಯುತ್ತವೆ. ನಗಾರಿ, ಶಂಖ, ತಾಳ ಮೊದಲಾದವುಗಳ ಧ್ವನಿಯು ನಡೆದೇ ಇರುತ್ತದೆ ಆದರೂ ಲ ಸಾವಿರ ಸಂಖ್ಯಾ ಬಲವುಳ್ಳ ಆ ನಗರದ ಮುಸಲ್ಮಾನರು ಆ ದೇವಾಲಯಕ್ಕೆ ಎಳ್ಳಷ್ಟೂ ತೊಂದರೆಪಡಿಸುವದಿಲ್ಲ.

ಈ ದೇವಾಲಯವು ಪುರಾತನವಾದುದಾಗಿದೆ. ಇದನ್ನು ಕಟ್ಟಲಿಕ್ಕೆ ಸಾಧಾರಣ ೧೫ ಸಾವಿರ ರೂ ಗಳು ವೆಚ್ಚವಾಗಿರಬಹುದು. ಇದರ ರಚನೆಯು ಹಿಂದು ಶಿಲ್ಪ ಶಾಸ್ತ್ರದ ಪದ್ಧತಿಯ ಮೇರೆಗೆ ಇದೆ. ಹಿಂದುಸ್ಥಾನದಿಂದ ತಂದ ಶಿವನ ಮೂರ್ತಿಯೇ ಇಲ್ಲಿ ಇದೆ.

ಇದೇ ದೇವಾಲಯದಲ್ಲಿ ಕೃಷ್ಣ ಭಗವಾನ್, ಮಹಾವೀರ ಸ್ವಾಮಿ, ಜೋಗದ ಮಾಯಾದೇವಿ ಮೊದಲಾದ ದೇವರ ಮೂರ್ತಿಗಳಿವೆ. ಹತ್ತರದಲ್ಲಿಯೇ ಗುರುದ್ವಾರದಲ್ಲಿ ಶೀಖರ ಪವಿತ್ರ ಧರ್ಮ ಪುಸ್ತಕವಾದ ‘ಗುರು ಗ್ರಂಥಸಾಹೇಬ’ ವು ಇಡಲ್ಪಟ್ಟಿದೆ. ಇವುಗಳಲ್ಲಿ ಯಾವುದೊಂದರ ಪೂಜೆ ಮಾಡಿದರೂ ಎಲ್ಲ ದೇವರುಗಳಿಗೆ ಆರತಿಯು ಮಾಡಲ್ಪಡುತ್ತದೆ. ಇಲ್ಲಿ ಎಲ್ಲ ಹಿಂದೂ ದೇವತೆಗಳ ಏಕತ್ರವಾಗಿದ್ದು ಹಿಂದುಗಳೆಲ್ಲರೂ ಈ ದೇವಾಲಯದ ಬಗ್ಗೆ ಭಕ್ತಿಪೂರ್ವಕ ನಡೆದುಕೊಳ್ಳುತ್ತಾರೆ.

ಈ ದೇವಾಲಯದ ಕ್ಷೇತ್ರಕ್ಕೆಲ್ಲ ‘ಹಿಂದು ಬಾಗ’ ಎಂಬ ಹೆಸರು. ಈ ದೇವಾಲಯದ ಎಲ್ಲ ವೆಚ್ಚವನ್ನು ಅಲ್ಲಿಗೆ ವ್ಯಾಪಾರಕ್ಕೆ ಹೋದ ಹಿಂದುಗಳೇ ನಡೆಯಿಸುತ್ತಾರೆ. ಅವರು ಯಾವ ಪ್ರೇಮಾದರಗಳಿಂದ ಅಲ್ಲಿ ಪರಸ್ಪರ ವರ್ತಿಸುತ್ತಿರುವರೋ ಅದನ್ನು ಕಂಡು ನಾನು ಎಂದೂ ಮರೆಯದಂತಾಗಿದೆ.”

ಇದರ ಮೇಲಿಂದ ನಮ್ಮ ದೇಶದ ಹಿಂದುಗಳು ಮತ್ತು ಮುಸಲ್ಮಾನರು ತಮ್ಮ ತಮ್ಮ ನಡವಳಿಕೆಗಳನ್ನರಿತು ಪರಸ್ಪರ ಹೇಗೆ ವರ್ತಿಸಬೇಕೆಂಬುದನ್ನು ಕಂಡುಕೊಳ್ಳಬಹುದಲ್ಲವೇ ?

ತುರ್ಕಸ್ಥಾನದಲ್ಲಿ ಧಾರ್ಮಿಕ ಕ್ರಾಂತಿ.

ತುರ್ಕಸ್ಥಾನದಲ್ಲಿ ಕೇಮಾಲ ಪಾಶಾರವರು ಅಧ್ಯಕ್ಷರಾದಂದಿನಿಂದ ಧಾರ್ಮಿಕ ಮತ್ತು ಸಾಮಾಜಿಕ ರೀತಿ ನಡವಳಿಕೆಗಳಲ್ಲಿ ಅನೇಕ ವ್ಯತ್ಯಾಸಗಳು ಮಾಡಲ್ಪಟ್ಟಿವೆ. ಯಾವದೇ ಧರ್ಮದಲ್ಲಿಯಾಗಲಿ ಗಡ್ಡಕ್ಕೆ ಬಹಳ ಪ್ರಾಶಸ್ತ್ಯವಿರುತ್ತದೆ. ಹಿಂದು ಧರ್ಮದಲ್ಲಿ ಗಡ್ಡಜಡೆಗಳನ್ನು ಉದ್ದವಾಗಿ ಬೆಳೆಯಿಸಿದ ಮನುಷ್ಯನನ್ನು ನೋಡಿದ ಕೂಡಲೇ ಋಷಿಯೆಂದು ತಿಳಿದುಕೊಳ್ಳುವಂತೆಯೇ ಮುಸಲ್ಮಾನ ಮತ್ತು ಕ್ರಿಸ್ತರಲ್ಲಿ ಗಡ್ಡ ಬಿಟ್ಟವರನ್ನು ಕಂಡ ಕೂಡಲೇ ಮೌಲವಿ ಅಥವಾ ಪಾದ್ರಿ ಸಾಹೇಬರನ್ನಾಗಿಯೇ ಅನೇಕರು ತಿಳಿದು ಮೋಸಹೋಗುತ್ತಾರೆ. ಹೀಗಾಗಿ ಗಡ್ಡ, ಜಡೆ, ಕಾವಿ ಕಫನಿ ಮೊದಲಾದವುಗಳು ಅನೇಕರಿಗೆ ವಂಚನೆಯ ಸಾಧನಗಳಾಗಿ ಪರಿಣಮಿಸಿವೆ. ಆದಕಾರಣ ತುರ್ಕಸ್ಥಾನದಲ್ಲಿ ಧರ್ಮಾಧಿಕಾರಿಗಳಿಗೆ ಈ ಪ್ರಕಾರ ಕಟ್ಟಪ್ಪಣೆಯಾಗಿದೆ—

ಧರ್ಮಾಧಿಕಾರಿಗಳು ಗಡ್ಡಬಿಡಕೂಡದು. ತಲೆಯಮೇಲಾದರೂ ಅಲಂಕಾರದ ಮಟ್ಟಿಗೆ ಬಟ್ಟೆ ಹೆಚ್ಚಿಗೆ ಕೂದಲು ಬೆಳಸಲಾಗದು. ಮೌಲವಿ, ಪಾದ್ರಿಗಳು ಧರ್ಮಾಚರಣೆ ಮಾಡುತ್ತಿರುವಾಗ್ಗೆ ಸಾಮಾನ್ಯ ಜನರಂತೆಯೇ ಬಟ್ಟೆ ಧರಿಸಬೇಕು ಅವರಿಗೆ ಸಾದಾ ಬಟ್ಟೆಯ ಮಟ್ಟಿಗೆ ಸರಕಾರದಿಂದ ಸಹಾಯ ಮಾಡಲಾಗುವದು.

ಹಾಗೆಯೇ ಸ್ತ್ರೀಯರು ಶರಣಮ್ಮಗಳಂತೆ ತಲೆ ಬೋಳಿಸುವದನ್ನು ನಿಲ್ಲಿಸಲಾಗಿದೆ ತುರ್ಕಸ್ಥಾನದಲ್ಲಿಯ ಅನೇಕ ಧರ್ಮ ಪ್ರಚಾರಿಕೆಯರು ಈ ತರದ ಆಜ್ಞೆಯಿಂದ ಕಾನ್‌ಸ್ಟ್ಯಾಂಟಿನೋಪಲ್ (ತುರ್ಕಸ್ಥಾನದ ರಾಜಧಾನಿ) ಪಟ್ಟಣವನ್ನು ಬಿಟ್ಟು ಹೋಗಹತ್ತಿದ್ದಾರೆ. ಅಲ್ಲಿಯೇ ಇರಬೇಕೆಂಬವರು ಬೋಳಿಸುವದನ್ನು ನಿಲ್ಲಿಸಿ ಹೆಳಲು ಹಾಕಹತ್ತಿರುವರು.

ಮನುಷ್ಯನ ಆಚಾರ, ನೀತಿ, ಧರ್ಮ ಮೊದಲಾದವುಗಳನ್ನು ಸುಧಾರಿಸುವದಕ್ಕಾಗಿಯೇ ಧರ್ಮ ಗುರುಗಳು ಇರುವರು. ಆ ಗುರುಗಳನ್ನೇ ರಾಜಶಾಸನದಿಂದ ತಿದ್ದುವಂಥ ಕೇಮಾಲ ಪಾಷನು ಗುರುವಿನ ಗುರುವಲ್ಲವೇ?

ತಲೆಯ ರುಮಾಲದಲ್ಲಿ ಮದ್ದಿನ ಗುಂಡು.

ಈಗ ಕೆಲವು ದಿವಸಗಳ ಪೂರ್ವದಲ್ಲಿ ಇಬ್ಬರು ಮುಸಲ್ಮಾನರು ಮತ್ತು ಒಬ್ಬ ಬಾಲಿಕೆಯು ಕ್ವೇಟಾ ಮೋಟಿನಲ್ಲಿ ಪ್ರವಾಸ ಮಾಡುತ್ತಿರುವಾಗ ಪೋಲೀಸರಿಗೆ ಸಂಶಯ ಬಂದು ಉಗಿಬಂಡಿಯಲ್ಲಿ ಅವರನ್ನು ಶೋಧಿಸಹತ್ತಿದರು. ಅಷ್ಟರಲ್ಲಿಯೇ ಒಬ್ಬನು ತನ್ನ ಕೈಯಲ್ಲಿದ್ದ ಗಂಟನ್ನು ಹೊರಕ್ಕೆ ಬೀಸಾಡಿದನು. ಅದನ್ನು ಹುಡುಕಿ ಶೋಧಿಸಲು ಒಳಗೆ ಒಂದು ಪಿಸ್ತೂಲು ಇದ್ದಿತು. ಇನ್ನೊಬ್ಬನು ರುಮಾಲದಲ್ಲಿ ಮದ್ದಿನ ಗುಂಡುಗಳನ್ನಿಟ್ಟುಕೊಂಡು ತಲೆಗೆ ಸುತ್ತಿಕೊಂಡಿದ್ದನು. ಇಬ್ಬರನ್ನೂ ಬಂಧಿಸಲಾಗಿದೆ.

—ಕೊಟ್ಟಾಯಮ (ಮಲೆಯಾಳ) ದ ಹತ್ತರವಿರುವ ಕೊಲ್ಲಾಡು ಎಂಬ ಹಳ್ಳಿಯಲ್ಲಿ ಪುಲ್ಲಯ್ಯನೆಂಬ ಆದಿ ಜನ ಗೃಹಸ್ಥನು ೧೨೦ ವರ್ಷದವನಿದ್ದಾನೆ. ಅವನ ತಮ್ಮನು ೧೧೫ ವರ್ಷದವನಿದ್ದಾನೆ.

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಸ್ಥೈರ್ಯ್ಯವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ: —

ಜಿ. ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ, ತುಮಕೂರು
(ಮೈಸೂರು ಸ್ಟೇಟ್)

ಜಾಹೀರಾತ.

ಸರ್ವ ಜನರಲ್ಲಿ ವಿಜ್ಞಾಪಿಸುವದೇನಂದರೆ—

ಈ ಜಾಹೀರಾತಿನಿಂದ ತಿಳಿಸುವದೇನಂದರೆ ನನ್ನ ಸಹೋದರನಾದ ಬಸಣ್ಣ ಈತನು ಮನೆ ಬಿಟ್ಟು ಒಂದು ವರುಷವಾಯಿತು ಈತನ ಸ್ವಭಾವ ಹುಚ್ಚು, ವಯಸ್ಸು ೪೦, ಬಣ್ಣ ಸಾಧಾರಣ ಕೆಂಪು ಸಾಧಾರಣ ನಿಲುವು, ದುಂಡು ಮುಖ, ಬಲ ಗದ್ದದ ಮೇಲೆ ಒಂದು ಹಸರು ಬಣ್ಣದ ಹೆಬ್ಬೆರಳನಷ್ಟು ಕಲೆ ಇದ್ದು ಅದರ ಮೇಲೆ ಕೂದಲು ಇವೆ. ಒಮ್ಮೊಮ್ಮೆ ಗೋಣು ಹೊರಳಿಸುವನು. ಮತ್ತು ಶೌಚಕ್ಕೆ ಕೂತರೆ ೨-೩ ತಾಸಾದರು ಕೂಡ್ರುವನು. ಮತ್ತು ಕ್ಷೌರಮಾಡಿಸುವದಕ್ಕೆ ಬಹಳ ಪ್ರೀತಿ. ಮೀಸೀಸಹ ತೆಗೆಸುವನು. ಬಾಲ, ವೃದ್ಧರಿಗೆ ಸಹ ತಾತ್ತಾ, ತಾತಾ ಅನ್ನುವನು. ತನ್ನಷ್ಟಕ್ಕೆ ತಾನೆ ಮರಿಯಪ್ಪ ಪಂಪಣ್ಣ, ಟಾಕಣ್ಣ ಎಂದು ಅನ್ನುತ್ತಾನೆ. ಹೆಸರು ಕೇಳಿದರೆ ಬಸಣ್ಣನೆಂದು ಹೇಳುವನು. ಹುಡುಗರು ತಡವಿದರೆ ಚೀರುವನು. ಮತ್ತು ಹಸ್ತ ತಿರಿವಿ ಹಿಡಿದು ಶಂಖಹಚ್ಚುವನು. ಇಷ್ಟು ಚಿಹ್ನಗಳನ್ನು ಕಂಡರೆ ದಯವಿಟ್ಟು ತಮ್ಮಲ್ಲಿ ಇರಿಸಿಕೊಂಡು ನಮಗೆ ತಿಳಿಸಿದರೆ ನಿಮಗೆ ೧೦ ರೂ. ಇನಾಮು ಕೊಡುತ್ತೇವೆ ತಿಳಿದಿರಬೇಕು.

ನಮ್ಮ ವಿಳಾಸ:— **ಪಂಪಣ್ಣ ಗಡ್ಡದ ದೇವಾಂಗ**
ಮುಕ್ಕಾಂ, ಪೋಸ್ಟ ಮಸ್ಕಿ, ತಾಲೂಕಾ
ಲಿಂಗಸೂಗೂರ ಜಿಲ್ಲಾ ರಾಯಚೂರ,

ಮುದ್ದಾದ ಅಕ್ಷರ! ಸುಲಭ ದರ!

ಶ್ರೀ ರಂಗನಾಥ ಟೈಪ್ ಫೌಂಡರಿ

ಬೆಂಗಳೂರು.

ಕನ್ನಡ ಮತ್ತು ಇಂಗ್ಲಿಷ, ಎಲ್ಲಾ ತರದ ಟೈಪುಗಳೂ ಒಳ್ಳೊಳ್ಳೇ ಬಾರ್ಡರಗಳೂ ನಮ್ಮ ಫೌಂಡರಿಯಲ್ಲಿ ತಯಾರಾಗುತ್ತವೆ.

ಒಳ್ಳೇ ಮೆಟಲ್. ಬಹು ಅಂದವಾದ ಅಕ್ಷರಗಳು. ಬಲು ಸುಲಭ ದರ. ಕ್ಯಾಟಲಾಗ ತರಿಸಿಕೊಳ್ಳಿರಿ. ಒಮ್ಮೆ ಟೈಪುಗಳನ್ನು ತರಿಸಿಕೊಂಡು ಅನುಭವ ಹೊಂದಿರಿ. ಹಳೆ ಟೈಪುಗಳಿದ್ದರೆ ಸುಲಭ ಚಾರ್ಜಿಗೆ ಹೊಸದಾಗಿ ಹೊಯಿದು ಕೊಡುತ್ತೇವೆ.

ಪ್ರೊಪ್ರೈಟರ,
ಶ್ರೀ ರಂಗನಾಥ ಟೈಪ್ ಫೌಂಡರಿ
೬೭ ಕುಬೇರ ಸಾಹುಚಿ ಲೈನ್
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪತ್ರಿಫಲದ ದಿವ್ಯಾಭರಣ!

ಲಿಂಗಪೂಜಕರಿಗೆ ಪತ್ರಿಯು ಅತ್ಯಾಗತ್ಯವಲ್ಲವೆ? ಪತ್ರಿಯ ಫಲದಿಂದ ಮಾಡುವ ಈ ದಿವ್ಯಾಭರಣಗಳಲ್ಲಿ ನಿಮಗೆ ಬೇಕಾದುದನ್ನು ತರಿಸಿಕೊಳ್ಳಿರಿ.

ಕರಕಮಲ, ನಾಗಾಭರಣ, ಕಂಠಮಾಲೆ ಮೊದಲಾದವು. ಮಂತ್ರವಿಶಿಷ್ಟ, ಲಿಂಗಪೂಜೆಗೆ ಅಗತ್ಯವಾಗಿರತಕ್ಕವು.

ನಿಮ್ಮ ಇಷ್ಟದಂತೆ ಮಂತ್ರಾಕ್ಷರಗಳನ್ನು ಸ್ಫುಟಗೊಳಿಸಿ ಪತ್ರಿಯ ಕಾಯಿಯ ಚಿಪ್ಪಿನಿಂದ ಬಹು ಅಂದವಾದ ಅಭರಣಗಳನ್ನು ತಯಾರುಮಾಡಿಕೊಡುತ್ತೇವೆ.

ಕ್ರಯ ೧ ರೂಪಾಯಿಯಿಂದ ಮೇಲ್ಪಟ್ಟು ನಿಮ್ಮ ಇಷ್ಟವಿದ್ದಷ್ಟು ರೂ. ಗಳ ವರೆಗೆ.

ವಿಳಾಸ:— ಸಂಗಮೇಶ- ಶ್ರೀ ಸರ್ಪಭೂಷಣ ಶಿವಯೋಗಿ ಮಠ ಬಳೇಪೇಟೆ ಬೆಂಗಳೂರು ಸಿಟಿ.

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! **ಉತ್ತಮ ಸೌಕರ್ಯ!** **ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಡಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .... ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ನಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ	೩೦-೦-೦ ತಿಂಗಳೊಂದಕ್ಕೆ	ಎರಡೂಹೊತ್ತು ಭೋಜನ	೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ	೧-೮-೦ ದಿನ ಒಂದಕ್ಕೆ	ಊಟ ಒಂದಕ್ಕೆ	೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ „ „ „ ೧೬-೮-೦
೩೦ „ „ „ ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಜಯಕರ್ನಾಟಕ

ಕರ್ನಾಟಕದ ಪ್ರಮುಖ ವಾರಪತ್ರಿಕೆ.

ವಾರ್ಷಿಕ ಚಂದಾ ೫-೮-೦

ನಾಟ್ಯಾಂಕ

ವಿವಿಧಚಿತ್ರ! ಸರಸನಾಟಕ ಕಥೆ! ವಿದ್ವತ್‌ಪ್ರಚುರ ಲೇಖಗಳಿವೆ!

ತ್ವರೆಮಾಡಿರಿ—ಬೆಲೆ ೧ ರೂ.—ತೀರುತ್ತಿವೆ.

ಜಯಕರ್ನಾಟಕ ಗ್ರಂಥಮಾಲೆ

ವರ್ಷಕ್ಕೆ ೬ ಪುಷ್ಪ] ವಾ. ಚಂ. ೩-೪-೦ [ಮೇಲೊಂದು ಉಚಿತಪುಷ್ಪ

ಜ. ಕ. ಚಂದಾದಾರರಿಗೆ ೩ ರೂ.

ಮೂರನೆಯ ವರ್ಷದ ನಾಲ್ಕನೆಯ ಪುಷ್ಪವಾದ

ಶ್ರೀ. ಹ. ಪಿ. ಜೋಶಿಯವರ

ಇದೀಗ ಹೊರಟಿದೆ] ರಾಜವಲ್ಲಭ **[ಬೆಲೆ ಹತ್ತು ಆಣೆ.**

ಕೀಚಕ ವಧೆ ಕಥೆಯನ್ನು ಆಧರಿಸಿ ಬರೆದ ಹೊಸ ಸಂಗೀತ ನಾಟಕ. ಉಚಿತ ಸಂಭಾಷಣೆ, ಮಿತವಿನೋದ, ಸುರಮ್ಯ ಪದ್ಯ ಮಾಲಿಕೆ.

ಜಯಕರ್ನಾಟಕ ಕಾರ್ಯಾಲಯ
ಧಾರವಾಡ.

ನಿರಂಜನ ಹಾಲ್.

ಮಹಾಶಯರೇ ನಮ್ಮಲ್ಲಿ ಸಕಲರಿಗು ಪೂಜಾರ್ಹವಾದ ಸಾಮಾನುಗಳು ದೊರೆಯುತ್ತೆ.

ಮಹದೇಶ್ವರ ಸ್ವಾಮಿಯವರು ಎಂಬ ಮಹಾ ವಿರಕ್ತರು ತಮ್ಮ ಬಾಲ್ಯದಲ್ಲಿಯೇ ಹುಲಿಯ ಮೇಲೆ ಕುಳಿತು ಸಂಚಾರ ಮಾಡುತ್ತಿದ್ದ ಫೋಟೋ ೧೦×೧೪ ಸೈಜು ಡಜ಼ ೧ ಕ್ಕೆ ೧-೮-೦

ನಂಜುಂಡೇಶ್ವರ ಸ್ವಾಮಿ ಫೋಟೋ ೧೦ + ೧೪ ಸೈಜು ಡಜ಼ ೧ ಕ್ಕೆ (೧-೮-೦) ಡಿಟೊ ೬ + ೯ ಸೈಜು ಡ. ೧ ಕ್ಕೆ ೦-೧೨-೦ ಮತ್ತು ೦-೬-೦. ಅವಲ್ ದಶಾಂಗ ಧೂಪದ ಘಟ್ಟಿ ಸೇರು ೧ ಕ್ಕೆ (೨-೦-೦) ದುಯಂ ಸೇರು ೧ ಕ್ಕೆ, ೧-೮-೦ ೧-೦-೦ ಎಡೆಯೂರು **ಸಿದ್ಧಲಿಂಗೇಶ್ವರ ಸ್ವಾಮಿಯವರ ಫೋಟೋ** ೧೦೦ ಕ್ಕೆ ೪-೦-೦ ಒಂದಾವರ್ತಿ ತರಿಸಿ ಪರೀಕ್ಷಿಸಿರಿ.

ಹೆಚ್, ಎಂ. ಮಲ್ಲಪ್ಪ ಅಂಡ್, ಬ್ರದರ್ಸ್
ಫೋಟೋಗ್ರಾಫರ್,
ನಂಜನಗೂಡ.

೫೦೦ ರೂಪಾಯಿ ಕ್ಲೇಮು ಸಿಕ್ಕಿತು!

ದಿ

ಸ್ವ ರಾ ಜ್ಯ

[illegible] ಲೈಫ್ ಇನ್ಸ್ಯುಅರನ್ಸ ಕಂಪನಿ, ಲಿಮಿಟೆಡ್, ಧಾರವಾಡ

ಇದರ ಮ್ಯಾನೇಜಿಂಗ ಏಜಂಟ್ಸರಿಗೆ.—

ಚಿತ್ರಕಲ್‌ದುರ್ಗ ಡಿಸ್ಟ್ರಿಕ್ಟ ಹರಿಹರದಲ್ಲಿರುವ

ಎಚ್. ಶಾಮಶಾಸ್ತ್ರಿಯು ಮಾಡುವ ವಿನಂತಿಗಳು

ನಾನು ತಮ್ಮ ಕಂಪನಿಯಲ್ಲಿ ೧೯೩೪ ನೇ ಇಸ್ವಿ ಫೆಬ್ರುವರಿ ತಿಂಗಳಲ್ಲಿ ಜನನ ವಿಮೆ ಮಾಡಿ ಪಾಲಿಸಿ ಪಡೆದು ಇದ್ದು ಒಂದು ವರುಷವಾದನಂತರ, ನನಗೆ ಒಂದು ಮಗು ಜನನವಾಯಿತು. ಈ ಬಗ್ಗೆ ನಾನು ಕಂಪನಿಗೆ ಇದುವರೆಗೆ ಪಾವತಿ ಮಾಡಿರುವದು ೧೯ ರೂಪಾಯಿಗಳು ಮಾತ್ರ. ತಮ್ಮ ಕಂಪನಿ ರೂಲ್ಸಪ್ರಕಾರ ಕರಾವು ಆಗಿರತಕ್ಕ ಮೊಬಲಗು ಈ ದಿವಸ ಕಂಪನಿಯಿಂದ ನನಗೆ (೫೦೦) ಐದುನೂರು ರೂಪಾಯಿಗಳು ಪಾವತಿ ಆಗಿರುತ್ತವೆ. ನಾನು ಪಾವತಿ ಮಾಡಿರುವ ಅಲ್ಪ ಮೊಬಲಗಿಗೆ ಪ್ರತಿಫಲವಾಗಿ ಬಂದಿರುವದನ್ನು ನೋಡಿ ನನಗೆ ಬಹು ಆನಂದವಾಗಿರುತ್ತದೆ. ಇದಕ್ಕಾಗಿ ತಾವು ಕರ್ನಾಟಕದಲ್ಲಿ ಹೊಸದಾಗಿ ಮಾಡಿರುವ ಏರ್ಪಾಡು ಕೇವಲ ಶ್ಲಾಘನೀಯವಾಗಿರುವದಲ್ಲದೆ ಬಡವರಿಗೆ ಕಲ್ಪವೃಕ್ಷವೇ ಆಗಿರುತ್ತದೆಂಬುವದಕ್ಕೆ ಸಂಶಯವಿಲ್ಲ. ನನ್ನಂತೆ ನಮ್ಮ ದೇಶಬಂಧುಗಳು ಎಲ್ಲರೂ ಈ ಕಂಪನಿಗೆ ಪಾಲಿಸಿದಾರರಾಗಿ ಸೇರಿ ಸಂಪೂರ್ಣ ಪ್ರಯೋಜನ ಹೊಂದುತ್ತಾರಾಗಿಯೂ ಈ ಕಂಪನಿಯು ನಮ್ಮ ಕರ್ನಾಟಕದಲ್ಲಿ ತುಂಬಾ ಅಭಿವೃದ್ಧಿಯನ್ನು ಹೊಂದಿ ದೇಶ ಸೇವೆಯನ್ನು ಚಿರಕಾಲ ಮಾಡಿಕೊಂಡಿರಲೆಂದು ನನ್ನ ಅಂತಃಕರಣ ಪೂರ್ವಕವಾದ ಕೋರಿಕೆ.

ಹರಿಹರ
ತಾ. ೫-೬-೩೫ } (ಸಹಿ) ಎಚ್. ಶಾಮಶಾಸ್ತ್ರಿ.

ಹರ್ಡೇಕರ ಮಂಜಪ್ಪನವರು ಬರೆದ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಕಾಯಕವೆ ಕೈಲಾಸ	೦-೩-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ವಿಜಯವಾಣಿ	೦-೨-೦
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.

ಪ್ಲೇಗ ಸಂಜೀವಿನಿ.

ಅತ್ಯಾಶ್ಚರ್ಯಕರವಾದ ಗುಣ! **ಕೇವಲ ೬ ತಾಸುಗಳಲ್ಲಿಯೇ ಗುಣ!**

ಇದನ್ನುಸೇವನೆ ಮಾಡುವದರಿಂದ ಪ್ಲೇಗಿನ ಭಯವೇ ಇಲ್ಲ!

೧೦೦ ಕ್ಕೆ ೧೦೦ ರಂತೆ ಗುಣ!!

ಶ್ರೀ ಮನ್ನಿರಂಜನ ಶಾಂತವೀರ ಸ್ವಾಮಿಗಳು ಗುರುಮಠಕಲ್ ಇವರು ಲೋಕ ಕಲ್ಯಾಣಾರ್ಥವಾಗಿ **ಪ್ಲೇಗ ಸಂಜೀವಿನಿ** ಎಂಬ ದಿವ್ಯ ಔಷಧಿಯನ್ನು ಶೋಧಮಾಡಿರುವರು. ಪ್ಲೇಗ ರೋಗವು ಎಷ್ಟು ಘಾತುಕವದೆಯೆಂಬುದನ್ನು ಹೇಳುವ ಅವಶ್ಯವಿಲ್ಲ. ಈ ಪ್ಲೇಗಿನಿಂದ ಸಾವಿರಾರು ಜನರು ಸಾಯುತ್ತಿರುತ್ತಾರೆ. ಇದನ್ನು ತಡೆಯುವದಕ್ಕಾಗಿ ಎಷ್ಟೋ ಔಷಧಗಳನ್ನು ತಯಾರ ಮಾಡಿರುವರು. ಅವುಗಳಿಂದೇನೂ ಗುಣವಾದದ್ದು ಕಂಡು ಬರುವದಿಲ್ಲ. ಈ ಪ್ಲೇಗ ಸಂಜೀವಿನಿಯಿಂದ ಆರೇ ತಾಸುಗಳಲ್ಲಯೇ ಗುಣವಾಗುತ್ತದೆ. ಇದರ ಒಂದು ಬಾಟ್ಲಿಯ ಕಿಮ್ಮತ್ತು ೧ ರೂ. ೫ ಆಣೆ.

ವಿಶೇಷ ಮಾಹಿತಿಯನ್ನು ಅನುಪಾನ ಪತ್ರಿಕೆಯಲ್ಲಿ ನೋಡಿರಿ.

ವಿಶೇಷ ಸೂಚನೆ— ಅನುಪಾನ ಪತ್ರಿಕೆಯ ಸೂಚನೆಯ ಮೇರೆಗೆ ಔಷಧವನ್ನು ತೆಗೆದುಕೊಂಡಲ್ಲಿ ಖಾತ್ರಿಯಿಂದ ಗುಣವಾಗುವದು. ಎಲ್ಲ ಕಡೆಗೂ ಏಜಂಟರು ಬೇಕು.

ಏಜಂಟ್
ಬಶೆಟ್ಟೆಪ್ಪ ಬಸಪ್ಪ ಹಲಕುರ್ಕಿ,
ಬಾಗಲಕೋಟ.

ವಿಳಾಸ—
ಪ್ಲೇಗ ಸಂಜೀವಿನಿ ಆಫೀಸ್
ಗುಲಬಗಾರ್.

ಮಹಾರೋಗ ಸಂಜೀವಿನಿ.

ಶ್ರೀಮನ್ನಿರಂಜನ ಗುರುಮಠಕಲ್ಲ ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ

ಮಹಾರೋಗ ಸಂಜೀವಿನಿ,

ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.

ಇತ್ತೀತ್ತಲಾಗಿ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ಮಿತಿಮೀರಿ ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. ಈ ಕೆಟ್ಟಬೇನೆಯು (ಪ್ಲೇಗ ಮಾರಿಕಾ,) ಖಜ್ಜಿಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ ತಗಲತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ಮೃತ್ಯುವಿನ ತುತ್ತಾಗುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಖಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ನಾರಸಂಹಾರಿ,** ಕೂಸುಗಳ **ಹೊಟ್ಟೆಯೊಳಗಿನ ಬೇನೆ** ವಗೈರೆ ರೋಗಗಳ ಮೇಲೆ ಆಶ್ಚರ್ಯಕಾರಕ ಔಷಧಿಗಳನ್ನು ಕಂಡು ಹಿಡಿದ ಸದರಿ ಪೂಜ್ಯಪಾದರೇ ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ ಔಷಧಿಯನ್ನು ಶೋಧಮಾಡಿ ಪ್ರಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೆಯುಳ್ಳವರು ಮುದ್ದಾಂ ಬಂದು ತಮ್ಮ ರೋಗ ಲಕ್ಷಣಗಳನ್ನೆಲ್ಲ ತೋರಿಸಿದರೆ ಅದಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ ಮೊದಲು ಔಷಧದ ಅರ್ಧ ಕಿಮ್ಮತ್ತು ಕೊಟ್ಟು ಔಷಧ ತಕ್ಕೊಳ್ಳಲು ಪ್ರಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಅಗ್ಗಿ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳತಕ್ಕದ್ದು. ವಿಶೇಷ ಸಂಗತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು.

ಮ್ಯಾನೇಜರ ಆರೋಗ್ಯ ಮಂದಿರ, ಕಿರೀಟಮಠ ಕಸಬಾ ಕ್ಯಾಂಪ **ಸೊಲ್ಲಾಪುರ ಸಿಟಿ.**

|| ಶ್ರೀ ಸಂಗಮೇಶ್ವರ ಪ್ರಸನ್ನ ||

ತಾಳಿಕೆಯು ಬಟ್ಟೆಯಲ್ಲಿ ಉಳಿತಾಯದ ಗುಟ್ಟಿದೆ !

ಕ್ರಿ. ಶ. ೧೯೩೧ ನೆಯ ಇಚಲಕರಂಜಿಯ ಪ್ರದರ್ಶನದಲ್ಲಿ ಪದಕಗಳನ್ನು ಪಡೆದು ಸುಪ್ರಸಿದ್ಧವಾದ,

ಶ್ರೀರಾಮ ವೀವ್ಹಿಂಗ್ ಮಿಲ್ಸ್

ಇಚಲಕರಂಜಿ.

ಇವರ ಎಲ್ಲ ತರಹದ ಗಟ್ಟಿ ಬಣ್ಣದ ಮತ್ತು ಸುಂದರ ಸುಳವಿನ, ಅಂದಚಂದದ,

ಫ್ಯಾನ್ಸಿ ಸೀರಿಗಳನ್ನೇ ಉಪಯೋಗಿಸಿರಿ!

ಈ ಪತ್ತಲಗಳಲ್ಲಿ ವಿಶೇಷ ಗುಣವೇನೆಂದು ಕೇಳುವಿರಾ?

ಕಣ್ಣಿಗೆ ಚಂದ, ಥಳಥಳ ಹೊಳಪು, ಗಟ್ಟಿ ಬಣ್ಣ, ಉದ್ದ ಅಗಲ ಬೇಕಷ್ಟು, ಅಂದವಾದ ಅಂಚು, ಹುರಿಕಟ್ಟಾದ ನುಣ್ಣನ ನೂಲು. ಬಹು ತಾಳಿಕೆ. **ಹೀಗಿದ್ದರೂ ಬಹು ಅಗ್ಗ.**

ಆದುದರಿಂದಲೇ ಈ ಪತ್ತಲಗಳು ಭಾರತ ಭಗಿನಿಯರಿಗೆ ಬಹು ಪ್ರಿಯವಾಗಿವೆ. ಆದುದರಿಂದ ಗಿರಾಕಿಗಳು ಇತ್ತ ಲಕ್ಷಿಸುವಿರಾ? ಹೆಚ್ಚಿನ ಸಂಗತಿಗಳ ಬಗ್ಗೆ ಪತ್ರ ಬರೆಯಿರಿ.

ಏಜಂಟ-
ಶಿವಸಂಗಪ್ಪಣ್ಣಾ ಕುಪಸ್ತ,
ಬಾಗಲಕೋಟೆ.

ಶ್ರೀರಾಮ ವೀವ್ಹಿಂಗ್ ಮಿಲ್ಸ್ ಇಚಲಕರಂಜಿ.
(ಕಂಪನಿಗೆ ಪತ್ರವ್ಯವಹಾರ ಇಂಗ್ಲಿಷ ಇಲ್ಲವೆ ಮರಾಠಿಯಲ್ಲಿ ಮಾಡಬೇಕು.)

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—
ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ನಾರಿನ ಮೇಲೆ ರಾಮ ಬಾಣ ಔಷಧ.

'ಗಿನೋನಾಲ್'

ನಾರಿನಿಂದ ಬಳಲುವವರು ಈ ನಮ್ಮ ದಿವ್ಯ ಔಷಧವನ್ನು ಎರಡಾವರ್ತಿ ಉಪಯೋಗಿಸಿದರೆ ಖಂಡಿತ ಗುಣಬರುತ್ತದೆ. ಒಮ್ಮೆ ಉಪಯೋಗಿಸಿ ಅನುಭವ ಪಡೆಯಿರಿ. ಒಂದು ಬಾಟ್ಲಿಯ ಕಿಂ. ೧ ರೂ. ಟಪಾಲವೆಚ್ಚ ಬೇರೆ. ಅನುಪಾನ ಪತ್ರಿಕೆ ಔಷಧದ ಜೊತೆಗೆ.

ಮ್ಯಾನೇಜರ—'ಗಿನೋನಾಲ್' **ಡಿಪೋ**
ಗುಲಬರ್ಗಾ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು** ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

REGISTERED No. B. 2891

ಶರಣ ಸಂದೇಶ

Sharana Sandesh

ನ್ಯಾಯನಿಷ್ಠುರಿ| ದಾಕ್ಷಿಣ್ಯಪರನಲ್ಲ| ಲೋಕವಿರೋಧಿ| ಶರಣನಾರಿಗೂ ಅಂಜುವವನಲ್ಲ|
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ || ವ. ೨೨೮ || ಮಹಾನುಭಾವ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು,

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೪.	ಆಲಮಟ್ಟಿ- ಸೋಮವಾರ ತಾರೀಖು ೮ ನೆಯ ಜುಲೈ ೧೯೩೫.	ಸಂಚಿಕೆ ೪೪

ಜನಸೇವೆಯೇ ದೇವರ ಸೇವೆ

ಗಡಿನಾಡಿನಲ್ಲಿ ಹಾಹಾಕಾರ!

ಆ್ಯಬಟಾಬಾದದಲ್ಲಿ ಭಯಂಕರ ಅಗ್ನಿ ಪ್ರಳಯ!!

ಹದಿನೆಂಟು ಮೈಲುಗಳ ವರೆಗೆ ಜ್ವಾಲೆಯ ದೃಶ್ಯ!!!

ಸೀಮಾ ಪ್ರಾಂತದ ಹಜಾರಾ ಜಿಲ್ಲೆಯ ಮುಖ್ಯ ಪಟ್ಟಣವಾದ ಆ್ಯಬಟಾಬಾದದಲ್ಲಿ ಕಳೆದ ೫ ನೆಯ ತಾರೀಖಿನ ದಿವಸ ಪ್ರಾತಃಕಾಲದಲ್ಲಿ ಹಿಂದು ವಸತಿಯ ಭಾಗಕ್ಕೆ ಬೆಂಕಿ ಹತ್ತಿತು.

ಗಾಳಿಯ ರಭಸಕ್ಕೆ ಅಗ್ನಿಯು ವೇಗವಾಗಿ ಹಬ್ಬುತ್ತ ಸ್ವಲ್ಪ ಹೊತ್ತಿನಲ್ಲಿಯೇ ಮುಕ್ಕಾಲು ಅಂಶ ಹಿಂದು ಓಣಿಯು ಸುಟ್ಟು ಭಸ್ಮವಾಯಿತು! ಪೋಲೀಸ ಸುಪರಿಂಟೆಂಡೆಂಟರು ದಂಡಾಳುಗಳ ಸಹಾಯದಿಂದ ಸುತ್ತಲಿನ ಅನೇಕ ಕಟ್ಟಡಗಳನ್ನು 'ಡಾಯನಾಮಾಯಿಟ' ದಿಂದ ಕೆಡವಿ ಬೆಂಕಿಯನ್ನು ನೊಂದಿಸಲು ಪ್ರಯತ್ನಿಸಿದರು.

ಅಲ್ಲಿಂದ ೧೮ ಮೈಲು ದೂರವಿದ್ದ ಕಾಲಾಬಾಗ ಎಂಬಲ್ಲಿ ಈ ಪ್ರಚಂಡವಾದ ಜ್ವಾಲೆಯು ಕಾಣಿಸುತ್ತಿದ್ದಿತು.

ದೇಹವೇ ದೇವಾಲಯ

SANGAM CLOTH STORES
Prop: M. S. Hundekar & [illegible]
P.O: TERDAL-5[illegible]3
Dt. Bijapur, ([illegible])

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

ಗಂಡಾಂತರಕ್ಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯುಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು.

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚಿಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕ್ಯಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರೆ, ನೀವು ನಾಲ್ಕು ಮಂದಿಗೆ ಹೇಳ ವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೋದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ ಧಾರವಾಡದಾಗ, ಗದಗಿನಾಗ, ಹುಬ್ಬಳ್ಯಾಗ ಒಟ್ಟ ನಮ್ಮ ಕರ್ನಾಟಕದಾಗ ಬ್ಯಾಂಕಿನವರ ಆನ್ರಿ ಸರಾಫರ ಆನ್ರಿ ಶ್ರೀಮಂತ ಜನರ ಆನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

೧ ಎ. ಎಂ. ದಿವ
ಸರಾಫ ಶಹಾಪೂರ ...
೨ ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೆರಿ
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, **ಹುಬ್ಬಳ್ಳಿ.**
ಬ್ರ್ಯಾಂಚ್ ಆಫೀಸ್:-
ಆಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ದೆಕ್ಕನ)

ವರನು ಬೇಕು.

P. 18 ಹದಿನಾರು ವರ್ಷ ಪ್ರಾಯದ ಸುರೂಪಿಯೂ, ಗೃಹಕೃತ್ಯದಲ್ಲಿ ನಿಪುಣೆಯೂ, ಕನ್ನಡ ಓದುಬರಹ ಬಲ್ಲವಳೂ ಆದ ಗೌಡ ಸಾರಸ್ವತ ಬ್ರಾಹ್ಮಣ ಕನ್ಯಾ ವಧುವಿಗೆ ೨೨ ವರ್ಷಕ್ಕೆ ಮೀರದ ಸರಕಾರಿ ಉದ್ಯೋಗವಿರುವ ಸ್ವವೃಂದದ ವರನು ಬೇಕು.

ವಧುವು ಬೇಕು.

W. 17 ಸರಕಾರಿ ಕೆಲಸದಲ್ಲಿ ತಿಂಗಳಿಗೆ ೩೦ ರೂ. ಸಂಬಳವಿರುವ ೩೫ ವರ್ಷ ಪ್ರಾಯದ ಆರೋಗ್ಯವಂತರಾದ ಓರ್ವ ಗೌಡ ಸಾರಸ್ವತ ಬ್ರಾಹ್ಮಣ ಯುವಕರಿಗೆ ೨೪ ವರ್ಷಕ್ಕೆ ಮೀರದ ಸುಂದರಿಯೂ, ಗೃಹಕೃತ್ಯಗಳನ್ನು ನಿರ್ವಹಿಸಬಲ್ಲವಳೂ ಆದ ವಿದ್ಯಾವಂತ ವಿಧವೆಯು ಬೇಕು.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ. ಎಸ್. ಪೈ
ಶಿವಪೇಟೆ ಪುತ್ತೂರು.ದ. ಕ.

ಅಂದವಾದ ಮುದ್ರಣ! ಅಚ್ಚುಕಟ್ಟಾದ ಬೈಂಡು!

ಸಂಕ್ಷಿಪ್ತ

ಮಹಾದೇವಿಯಕ್ಕನ ಜೀವನ ಚರಿತ್ರೆ.

ವಚನವಾಙ್ಮಯದಲ್ಲಿ ಉಚ್ಚಸ್ಥಾನವನ್ನು ಪಡೆದು ಪ್ರಸಿದ್ಧಿ ಪಡೆದ ಉಡುತಡಿಯ ಮಹಾದೇವಿಯಕ್ಕನ ಜೀವನ ಕಥೆ. ವಚನಗಳಿಂದ ಕೂಡಿ ಭಾವ ಪೂರ್ಣವಾಗಿ ಬರೆಯಲ್ಪಟ್ಟಿದೆ.

ಬೆಲೆ ಎರಡಾಣೆ ಮಾತ್ರ.

ಲೇಖಕರು:— **ಶ್ರೀಮಾನ್ ಟಿ. ಎನ್. ಮಹಾದೇವಯ್ಯನವರು**

ಪುಸ್ತಕ ದೊರೆಯುವ ವಿಳಾಸ— **ಶ್ರೀ ಸರ್ಪಭೂಷಣ ಮಠ
ಬಳೇಪೇಟೆ.
ಬೆಂಗಳೂರು ಸಿಟಿ.**

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಜುಲೈ ತಾರೀಖು ೮ ನೆಯ ಸೋಮವಾರ | ಸಂಚಿಕೆ ೪೪.

ಸದಸ್ಯತ್ವದ ಬಿಡುಗಡೆ.

ಅಖಿಲ ಭಾರತ ವೀರಶೈವ ಮಹಾಸಭೆಯ ಮಧ್ಯವರ್ತಿ ಮಂಡಲದ ಮಹಾಶಯರಿಗೆ ಕಳೆದ ತಾ-೨೭-೫-೩೫ ನೆಯ ಶರಣ ಸಂದೇಶ ಪತ್ರಿಕೆಯಲ್ಲಿ ಒಂದು ಬಹಿರಂಗವಾದ ವಿಜ್ಞಾಪನೆಯನ್ನು ಮಾಡಿಕೊಂಡಿದ್ದೆನಷ್ಟೆ. ಆ ಪ್ರಕಾರ ೪೦ ಸದಸ್ಯರಲ್ಲಿ ನಾಲ್ಕು ಜನ ಸದಸ್ಯರಾದರೂ ಮಧ್ಯವರ್ತಿ ಮಂಡಲವನ್ನು ಕೂಡಿಸಲು ಅಧ್ಯಕ್ಷ ಮಹಾಶಯರಿಗೆ ವಿಜ್ಞಾಪಿಸಿಕೊಳ್ಳಲಿಲ್ಲ. ಜೂನ್ ತಿಂಗಳ ಕೊನೆಯೊಳಗಾಗಿ ಮಧ್ಯವರ್ತಿ ಮಂಡಲ ಸೇರಲಿಲ್ಲ.

೧೯೩೩ ನೆಯ ಇಸವಿಯಲ್ಲಿ ಮಹಾಸಭೆ ಸೇರಿದನಂತರ ಅಧ್ಯಕ್ಷರು ಮಧ್ಯವರ್ತಿ ಮಂಡಲವನ್ನು ಕರೆದರು. ಅಕ್ಟೋಬರ್ ತಿಂಗಳಲ್ಲಿ ಮಂಡಲವು ಕೂಡಿತು. ಆಗ ಗೊತ್ತಾದ ಕಾರ್ಯಗಳನ್ನು ಕುರಿತು ಯೋಚಿಸಲು ಕಳೆದ ವರುಷ ಅಗಸ್ಟ ತಿಂಗಳಲ್ಲಿ ಮಂಡಲವು ಕೂಡಬೇಕೆಂದು ಅಧ್ಯಕ್ಷರು ಪ್ರಯತ್ನಿಸಿದರು. 'ಕೋರಂ' ತುಂಬುವಷ್ಟಾದರೂ ಸದಸ್ಯರು ಬರಲಿಲ್ಲ. ಮಹಾಸಭೆಯ ವಿಚಾರವಾಗಿ ಮಧ್ಯವರ್ತಿ ಮಂಡಲದ ಈಗಿನ ಬಹು ಸದಸ್ಯರಲ್ಲಿರತಕ್ಕ ಔದಾಸೀನ್ಯ, ಅನಾದರಣೆಗಳನ್ನು ನೋಡಿಯೇ ನಾನು ತಾ. ೨೭-೫-೩೫ ರಲ್ಲಿ ಆ ಪ್ರಕಾರ ವಿಜ್ಞಾಪಿಸಿಕೊಂಡೆನು. ಎಲ್ಲಾ ಸದಸ್ಯರಿಗೂ ಈ ವಿಷಯ ತಿಳಿಯಲೆಂದೇ ಅನೇಕ ಪತ್ರಿಕಾ ಕರ್ತರು ಕೂಡಾ ಆ ನನ್ನ ವಿಜ್ಞಾಪನೆಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದರು. ಇಷ್ಟಾದರೂ ಸದಸ್ಯರು ಮಂಡಲವು ಕೂಡುವಂತೆ ಮಾಡಲಿಲ್ಲ.

ಆದುದರಿಂದ ನಾನು ಆ ಮಂಡಲದ ಜನರಲ್ ಸೆಕ್ರೆಟರಿ ಕೆಲಸದಿಂದ ನಿವೃತ್ತನಾದ ಮತ್ತು ಸದಸ್ಯತ್ವವನ್ನು ಬಿಟ್ಟ ಬಿಡುಗಡೆಯ ಪತ್ರವನ್ನು ತಾ. ೨-೭-೩೫ ನೆಯ ದಿವಸ ಮಹಾಸಭೆಯ ಅಧ್ಯಕ್ಷ ಮಹಾಶಯರಿಗೆ ಬರೆದುಕೊಂಡೆನು.

ತಾ. ೮-೭-೩೫. **ಹರ್ಡೇಕರ ಮಂಜಪ್ಪ.**

ಸಾದರ ಸ್ವೀಕಾರ.

ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಎಂ. ಎಸ್. ಶಿವಪ್ಪನವರು ತಮ್ಮ ತಮ್ಮಂದಿರಾದ ಚಿ|| ನಂಜಪ್ಪನವರಿಗೆ ನಾಯ್ಕನೂರು ಮ|| ರುದ್ರಪ್ಪನವರ ಮಗಳು ಸೌ|| ವೀರವ್ವ ಇವರನ್ನು ತಂದು ತಾ|| ೧೯-೬-೩೫ ರಲ್ಲು ನೆರವೇರಿಸಿದ ವಿವಾಹ ಮಹೋತ್ಸವ ಕಾಲದಲ್ಲಿ 'ಶರಣ ಸಂದೇಶ' ಪತ್ರಿಕೆಯ ಸಂಭಾವನೆಯೆಂದು ಕಳುಹಿಸಿದ ೧ ರೂ. ಯನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿದ್ದೇವೆ.

ಮ್ಯಾನೇಜರ **'ಶರಣ ಸಂದೇಶ'**

ವ್ಯಾಜ್ಯದ ಪರಿಣಾಮ.

ಕಲಬುರ್ಗಿ ಜಿಲ್ಲಾ ಚಿತಾಪುರ ತಾಲೂಕಿನಲ್ಲಿಯ ಹಕೀಮಪೇಟೆ ಎಂಬ ಗ್ರಾಮದ ಗೌಡಕಿಯ ಹಕ್ಕುದಾರಿಕೆಯ ಬಗ್ಗೆ ಸಂಜೀವರಡ್ಡಿ ಮತ್ತು ಬಾಲರಡ್ಡಿ ಎಂಬವರಲ್ಲಿ ವ್ಯಾಜ್ಯ ಹುಟ್ಟಿತು. ಅದರಲ್ಲಿ ಸಂಜೀವರಡ್ಡಿಯು ಗೆದ್ದನು: ಇದನ್ನು ಕಂಡು ಬಾಲರಡ್ಡಿಯು ರೊಚ್ಚಿಗೆದ್ದು ತನ್ನ ಸೇವಕರ ಸಹಾಯದಿಂದ ಸಂಜೀವರಡ್ಡಿಯನ್ನೂ ಮತ್ತು ಅವನ ದತ್ತಕ ಪುತ್ರ ಮಾಲರಡ್ಡಿಯನ್ನೂ ಕತ್ತಿ ಕೋಲುಗಳಿಂದ ಹಗಲು ಹೊತ್ತಿನಲ್ಲಿಯೇ ಕೊಂದು ಹಾಕಿದನು. ಕಲಬುರ್ಗಿ ಸೆಶನ್ಸ ಕೋರ್ಟಿನಲ್ಲಿ ಈ ವ್ಯಾಜ್ಯವು ನಡೆದು ಬಾಲರಡ್ಡಿ ಮತ್ತು ಅವನ ೭ ಜನ ಸೇವಕರಿಗೆ ಗಲ್ಲಿನ ಶಿಕ್ಷೆಯಾಗಿದ್ದಿತು. ಮುಂದೆ ಹಾಯಕೋರ್ಟಿನಲ್ಲಿ ನಡೆದ ಅಪೀಲಿನಲ್ಲಿ ಕಳೆದ ೩ ನೇ ತಾರೀಖಿನ ದಿವಸ ನಾಲ್ವರಿಗೆ ಮರಣದಂಡ ಮತ್ತು ಉಳಿದ ನಾಲ್ವರಿಗೆ ಕರಿನೀರಿನ ಶಿಕ್ಷೆಯಾಯಿತು.

ಸ್ತುತ್ಯ ಉಪಕ್ರಮ.

ಬಾಗಲಕೋಟೆಯ ಸುಪ್ರಸಿದ್ಧ ವೈದ್ಯರಾದ ಡಾ. ಬಸವಪ್ಪ ಸಂಗಪ್ಪ ಪಾಟೀಲ ಇವರು ಬಾಗಲಕೋಟೆ ತಾಲೂಕು ಹಳ್ಳೂರು ಗ್ರಾಮಕ್ಕೆ ದಯಮಾಡಿಸಿ 'ಆರೋಗ್ಯ' (Sanitation) ಹಾಗೂ ಗ್ರಾಮ ಸುಧಾರಣೆಯ ಬಗ್ಗೆ ಒಳ್ಳೇ ಪರಿಣಾಮವಾಗುವಂತೆ ಜನರಿಗೆಲ್ಲ ಬೋಧಿಸಿದರು. ಇದರಿಂದ ಊರ ದೈವದವರೆಲ್ಲ ಒಂದು ಗ್ರಾಮ ಸುಧಾರಣಾ ಕಮೀಟಿಯನ್ನು ಸ್ಥಾಪಿಸಲು ಒಪ್ಪಿರುವರು. ಸುಶಿಕ್ಷಿತರು ಈ ಪ್ರಕಾರ ಹಳ್ಳಿಯ ಜನಗಳನ್ನು ಜಾಗೃತಗೊಳಿಸುವದು ಒಳ್ಳೆಯದಲ್ಲವೆ?

ಪ್ರತ್ಯಕ್ಷದರ್ಶಿ.

ಜಪಾನದ ಹಿಂಗದ ತೃಷೆ.

ಚೀನದ ದೌರ್ಬಲ್ಯವನ್ನು ತಿಳಿದ ಜಪಾನವು ದಿನೇ ದಿನೇ ಕಾಡಹತ್ತಿದೆ ಈಗ ಶಾಂಘಾಯದಲ್ಲಿಯ ಕೆಮಿಂಗ್ಟನ್ ಚೀನೀ ದಂಡಿನವಾಳ್ಯವನ್ನು ನಿಲ್ಲಿಸಬೇಕು. ನೀಲಿ ಅಂಗಿಯವರ ದಲವನ್ನು ಮತ್ತು ಸಿನೋ—ಫೆಸಿಸ್ಟ ಪಕ್ಷವನ್ನು ನಿಲ್ಲಿಸಬಿಡಬೇಕು; ಎಂದು ಕೇಳಿದೆ. ಚೀನೀ ಅಧಿಕಾರಿಗಳು ಆಲೋಚಿಸಹತ್ತಿದ್ದಾರೆ.

ಬಸವಣ್ಣನವರ ವಚನಗಳ ಅನುವಾದ.

SAYINGS OF BASAVANNA.

(ಅನುವಾದಕರು — ಶ್ರೀ. ಎಂ. ವೆಂಕಟೇಶ ಅಯ್ಯಂಗಾರ್ಯರು ಎಮ್. ಎ)

—:ಕಳೆದ ಸಂಚಿಕೆಯಿಂದ ಬಂದುದು:—

೪೯ ದೂಷಕನವನೊಬ್ಬ ದೇಶವ ಕೊಟ್ಟರೆ ಆಸೆ ಮಾಡಿ ಆತನ ಹೊರೆಯಲ್ಲಿರಬೇಡ. ಮಾದರ ಶಿವಭಕ್ತನಾದಡೆ, ಆತನ ಹೊರೆಯಲ್ಲಿ ಭೃತ್ಯನಾಗಿಪ್ಪುದು ಕರಲೇಸಯ್ಯಾ! ಕಾಡ ಸೊಪ್ಪ ತಂದು ಓಡಿನಲ್ಲಿ ಹುರಿದಿಟ್ಟು ಕೂಡಿಕೊಂಡಿಪ್ಪುದೀಗ ನಮ್ಮ ಕೂಡಲ ಸಂಗನ ಶರಣರ.

" If a reviler offer you a Kingdom yield not to desire and stay with him. If the outcaste becomes a servant of God stay as his neighbour and be thou his servant. This would be far better. Bring leaf from the woods, fry it in the pan and eat if only you can stay in the company of my God's devotees. "

೫೦ ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ, ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ, ನಿಮ್ಮಾಣೆ ನಿಮ್ಮ ಪುರಾತರಾಣೆ. ನಿಮ್ಮ ಶರಣಂಗಲ್ಲದೆ, ಮತ್ತೊಂದುವನರಿಯೆ ಕೂಡಲ ಸಂಗಮದೇವಾ.

" If of my gold a single streak or of my clothing a single thread I want for today and tomorrow, I sin before you and your ancient servants. Except for the use of your servants I desire nothing my God."

೫೧ ಕಾಗೆ ಒಂದಗುಳ ಕಂಡರೆ, ಕರೆಯದೆ ತನ್ನ ಬಳಗವನು? ಕೋಳಿ ಒಂದು ಕುಟುಕ ಕಂಡರೆ ಕರೆಯದೆ ತನ್ನ ಕುಲವೆಲ್ಲವ? ಶಿವಭಕ್ತನಾಗಿ, ಭಕ್ತಿ ಪಕ್ಷವಿಲ್ಲದಿದ್ದರೆ, ಆ ಕಾಗೆ ಕೋಳಿಗಳಿಂದ ಕರಕಷ್ಟ ಕೂಡಲ ಸಂಗಮದೇವಾ.

" If a crow sees a grain food, does it not call for its relatives? If a hen see a corn to peck does it not call its tribe? If one is a servant of God and does not work for his other servants, he is truly smaller than that crow and that hen. "

೫೨ ನಾನು ಆರಂಭವ ಮಾಡುವೆನಯ್ಯ ಗುರುಪೂಜೆಗೆಂದು. ನಾನು ಬೆವಹಾರವ ಮಾಡುವೆನಯ್ಯ ಲಿಂಗಾರ್ಚನೆಗೆಂದು. ನಾನು ಪರಸೇವೆಯ ಮಾಡುವೆನಯ್ಯ, ಜಂಗಮ ದಾಸೋಹಕ್ಕೆಂದು. ನಾನಾವ ಕರ್ಮಂಗಳ ಮಾಡಿದಡೆಯೂ, ಆ ಕರ್ಮ ಫಲಭೋಗವ ನೀ ಕೊಡುವೆ ಎಂಬುದ ನಾನು ಬಲ್ಲೆನು. ನೀ ಕೊಟ್ಟ ದ್ರವ್ಯವ ನಿಮಗಲ್ಲದೆ, ಮತ್ತೊಂದಕ್ಕೆ ವ್ರಯಮಾಡೆನು. ನಿಮ್ಮ ಸೊಮ್ಮು ನಿಮಗೆ ಸಲಿಸುವೆನು, ನಿಮ್ಮಾಣೆ ಕೂಡಲಸಂಗಮದೇವಾ.

" Yes, I am working for the worship of my teachers. I traffic in the world for worship of my God. I serve others that I may serve the servants of my God. " " I know that whatever work I do you will give the fruit of that work to me to enjoy. What you give I spend for you. I do nothing else with it. I render unto you that which is yours. I swear this by you my God. "

೫೩ ಹೊತ್ತಾರೆ ಎದ್ದು, ಕಣ್ಣ ಹೊಸೆವುತ್ತ, ಎನ್ನ ಒಡಲಿಂಗೆ ಎನ್ನ ಒಡವೆಗೆ ಎನ್ನ ಮಡದಿ ಮಕ್ಕಳಿಗೆಂದು ಕುದಿದೆನಾದರೆ, ಎನ್ನ ಮನಕ್ಕೆ ಮನವೇ ಸಾಕ್ಷಿ. ಭವಿಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು ಓಲೈಸಿಹನೆಂದು ನುಡಿವರಯ್ಯ ಪ್ರಮಥರು. ಕೊಡುವೆನುತ್ತರವನವರಿಂಗೆ ಕೊಡಲಿಪ್ಪೆ; ಹೊಲೆಹೊಲೆಯರ ಮನೆಯ ಹೊಕ್ಕಾದರೆಯೂ ಸಲೆ ಕೈ ಕೂಲಿಯ ಮಾಡಿದರೆಯೂ, ನಿಮ್ಮ ನಿಲವಿಂಗೆ ಕುದಿವೆನಲ್ಲದೆ, ಎನ್ನ ಒಡಲವಸರಕ್ಕೆ ಕುದಿದೆನಾದರೆ, ತಲೆದಂಡ, ಕೂಡಲಸಂಗಮದೇವಾ.

" If I get up in the morning and rubbing my eyes begin travail for the sake of my body, my wife and my children, be My conscience witness against me The godly blame me that I sit beneath the throne of the unbeliever Bijjala and do him homage. I shall give them a reply. I can give them one. I shall enter the homes of the depraved among the outcaste, I shall slave with my hands but it will be for service of You. If I did it for the needs of my body take thou my head, my God Kudala Sangama. "

೫೪ ಒಡನಿರ್ದ ಸತಿಯೆಂದು ನಚ್ಚಿರ್ದೆನಯ್ಯಾ. ಕೈವಿಡಿದ ಸಜ್ಜನೆಯೆಂದು ನಂಬಿರ್ದೆನಯ್ಯಾ. ಅಯ್ಯೋ! ನಮ್ಮಯ್ಯನ ಕೈ ಯ್ಯುನೊಂದಿತು, ತೆಗೆದು ಕೊಡಾ ಎಲೆ ಚಂಡಾಲಗಿತ್ತಿ, ಕಳ್ಳನಮನೆಗೊಬ್ಬ ಬಲುಗಳ್ಳ ಬಂದೊಡೆ, ಕೂಡಲ ಸಂಗಮದೇವನಲ್ಲದೆ ಆರೂ ಅಲ್ಲ.

" I trusted her because she was the wife of my bosom. I believed her because she was the good woman I married, Alas! my father will hurt his hand. Take out the jewel and give it to him, O hard-hearted woman. If to the house of thief a greater than himself should come it should be my God, it can be none else. "

—(ಮುಂದುವರಿಯುವದು.)—

ಕೈಮಗ್ಗಗಳ ವ್ಯವಸಾಯ.

ಒಕ್ಕಲತನದ ವ್ಯವಸಾಯವು ಹಿಂದುಸ್ಥಾನದಲ್ಲಿ ಬಹು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿರುವಂತೆ ಅದರ ಜೊತೆಗೇನೇ ಬಟ್ಟೆಯ ವ್ಯವಸಾಯವೂ ಸಾಗಿಯೇ ಇದೆ. ಆದರೆ ಕಳೆದ ೬೦-೭೦ ವರ್ಷಗಳಿಂದ ಬಟ್ಟೆಯ ಗಿರಣಿಗಳು ಉದಯವಾಗಿ ಈ ಉಪಯುಕ್ತ ವ್ಯವಸಾಯವನ್ನು ಮೂಲೆಗುಂಪು ಮಾಡಿದವು. ಹಳ್ಳಿಪಳ್ಳಿಗಳಲ್ಲಿ ಮಗ್ಗ ಹಾಕಿಕೊಂಡಿದ್ದ ನೇಕಾರರು ಪಟ್ಟಣಗಳಲ್ಲಿ ತಮಗೆ ಗಿರಣಿಯ ಕೆಲಸದಲ್ಲಿ ಹೆಚ್ಚು ಕೂಲಿ ದೊರೆಯುವದೆಂದು ತಿಳಿದು ತಮ್ಮ ಉದ್ಯೋಗಗಳನ್ನು ನಿಲ್ಲಿಸಿ ಪಟ್ಟಣವಾಸಿಗಳಾದರು. ಈಗ ಹಿಂದುಸ್ಥಾನದಲ್ಲಿ ೪೦೦ ಬಟ್ಟೆಯ ಗಿರಣಿಗಳು ನಡೆಯುತ್ತಲಿವೆ.

ಕೈಮಗ್ಗದ ವ್ಯವಸಾಯವು ಮುಳುಗಿದುದಕ್ಕೆ ಜನರಲ್ಲಿ ಹಬ್ಬಿದ ಗಿರಣಿಬಟ್ಟೆಯ ಮೋಹವೇ ಕಾರಣವಾಯಿತು. ಗಿರಣಿಯ ನಿಜ ಸ್ವರೂಪವು ಈಗ ಅನುಭವಕ್ಕೆ ಬರಹತ್ತಿ ಅಲ್ಲಲ್ಲಿ ಸ್ವದೇಶೀ ಭಾವನೆಯನ್ನು ಬೆಳೆಯಿಸುವ ಪ್ರಯತ್ನವು ನಡೆದಿದ್ದರೂ ಒಮ್ಮೆ ಮುಳುಗಿದ ವ್ಯವಸಾಯವು ಪುನಃ ಚೇತರಿಸಿ ಏಳುವದು ಬಹಳ ಕಠಿಣವಾಗಿದೆ. ಆದರೂ ಅದು ಶಕ್ಯವೇ ಇಲ್ಲವೆಂತಲ್ಲ.

ಪುರುಷರಂತೆ ಸ್ತ್ರೀಯರಾದರೂ ಗಿರಣಿ ಬಟ್ಟೆಗಳನ್ನೇ ಧರಿಸಲು ಪ್ರಾರಂಭಿಸಿದ್ದರೆ ಇಂದಿಗೆ ಕೈಮಗ್ಗಗಳ ಅಸ್ತಿತ್ವವೇ ಇರುತ್ತಿದ್ದಿಲ್ಲ. ಆದರೆ ದೇಶದ ಬಹು ಸಂಖ್ಯಾಕ ಸ್ತ್ರೀ ಸಮಾಜವು ಕೈಮಗ್ಗದಿಂದಾದ ಸೀರೆ ಕುಪ್ಪಸಗಳನ್ನೇ ಉಪಯೋಗಿಸುತ್ತಿರುವುದರಿಂದ ಕೆಲಮಟ್ಟಿಗೆ ಈ ವ್ಯವಸಾಯವು ಉಳಿದುಕೊಂಡಿದೆ. ಈಗೀಗ ಸ್ವದೇಶಿ ಪ್ರಚಾರವಾಗಹತ್ತಿ ಕೈಮಗ್ಗಗಳಲ್ಲಿ ಸ್ವಲ್ಪ ಬೆಳವಣಿಗೆಯಾಗುವ ಲಕ್ಷಣಗಳು ತೋರಹತ್ತಿವೆ.

ಪ್ರತಿಯೊಬ್ಬ ಮನುಷ್ಯನಿಗೆ ಸಾಧಾರಣ ೧೪ ಗಜ ಅರಿವೆಯು ಬೇಕಾಗುತ್ತದೆ. ಅಂದರೆ ಹಿಂದುವಾಸಿಗಳ ಧಾರಣೆಗೆ ಸಾಧಾರಣ ೫೦೦ ಕೋಟಿ ಗಜ ಬಟ್ಟೆಯು ಪ್ರತಿ ವರ್ಷ ಬೇಕಾಗುತ್ತದೆ. ಇದರಲ್ಲಿ ೩೦೦ ಕೋಟಿ ಗಜ ಬಟ್ಟೆಯು ಹಿಂದುಸ್ಥಾನದಲ್ಲಿರುವ ಗಿರಣಿಗಳಿಂದ ಪೂರೈಸಲ್ಪಡುತ್ತದೆ. ಹಾಗೂ ೧೨೫ ಕೋಟಿ ಗಜ ಬಟ್ಟೆಯು ಪರದೇಶದಿಂದ ಬರುತ್ತದೆ. ಇನ್ನುಳಿದ ೭೫ ಕೋಟಿ ಗಜ ಬಟ್ಟೆಯನ್ನು ದೇಶದಲ್ಲಿರುವ ಕೈಮಗ್ಗಗಳು ಪೂರೈಸುತ್ತವೆ.

ಪರದೇಶದಿಂದ ಬರುವ ೧೨೫ ಕೋಟಿ ಗಜ ಅರಿವೆಯನ್ನು ನಿಲ್ಲಿಸಬೇಕಾದರೆ ಎರಡೇ ಉಪಾಯಗಳು. ಗಿರಣಿಗಳು ಹೆಚ್ಚಾಗಿ ಅಷ್ಟು ಅರಿವೆಯನ್ನು ಪೂರೈಸಬೇಕು. ಇಲ್ಲವೆ ಕೈಮಗ್ಗಗಳು ಊರ್ಜಿತವಾಗಿ ಆ ಕೊರತೆಯನ್ನು ಕಳೆಯಬೇಕು. ಇವುಗಳಲ್ಲಿ ಯಾವುದು ಶ್ರೇಯಸ್ಕರ? ಗಿರಣಿಗಳ ಗತಿಯಂತೂ ಈಗ ಅರಿತ ಮಾತಾಗಿದೆ. ಅಲ್ಲಲ್ಲಿ ಕೂಲಿಕಾರರ ಕಟ್ಟುಗಳುಂಟಾಗುವದೂ, ವ್ಯಾಪಾರಕ್ಕಾಗಿ ಪೈಪೋಟಿ ನಡೆಯುವದೂ ಮೇಲಾಗಿ ಕೋಟ್ಯಾವಧಿ ರೂಪಾಯಿಗಳ ಮೊಬಲಗು ಇವುಗಳಲ್ಲಿ ಸುಮ್ಮನೆ ತೊಲಗಿಸಿಡುವದೂ ನಿರಾಶಾಜನಕವಾದ ಕಾರ್ಯವಾಗಿದೆ. ಗಿರಣಿಗಳು ಹೆಚ್ಚಾದಂತೆ ನಿರುದ್ಯೋಗದ ಪ್ರಶ್ನೆಯೂ ಜಟಿಲವಾಗುತ್ತಲೇ ನಡೆದಿದೆ. ಆದುದರಿಂದ ಗಿರಣಿಗಳ ಬದಲು ಕೈಮಗ್ಗಗಳನ್ನು ಊರ್ಜಿತ ಸ್ಥಿತಿಗೆ ತರುವದೇ ಈಗಿನ ಕಾಲದಲ್ಲಿ ತರಣೋಪಾಯವಾಗಿದೆ.

ಸದ್ಯದ ಕಾಲದಲ್ಲಿಯು ನೇಕಾರರ ಪರಿಸ್ಥಿತಿಯೂ ಕೈಮಗ್ಗಗಳ ಉದ್ಧಾರಕ್ಕೆ ಅಡ್ಡಿಯನ್ನುಂಟು ಮಾಡುವಂಥದಿರುತ್ತದೆ. ಒಬ್ಬ ಶ್ರೀಮಂತ ನೇಕಾರನ ಮನೆಯಲ್ಲಿ ಕೂಲಿಯ ನೇಕಾರನು ಕೆಲಸಕ್ಕೆ ತೊಡಗುವ ಪೂರ್ವದಲ್ಲಿಯೇ ನೂರಿನ್ನೂರು ರೂಪಾಯಿಗಳನ್ನು ಬಡ್ಡಿಯಿಲ್ಲದೆ ಸಾಲ ತೆಗೆದುಕೊಳ್ಳುತ್ತಾನೆ. ಆ ರೂಪಾಯಿಗಳನ್ನು ಅವನು ಹೇಗೆ ವೆಚ್ಚ ಮಾಡುವನೋ ಅವನಿಗೇ ಗೊತ್ತು. ಸ್ವಲ್ಪೇ ದಿವಸಗಳಲ್ಲಿ ಆ ಸಾವುಕಾರನಿಗೆ ಕೈ ತೋರಿಸಿ ಅವನನ್ನು ಬಿಟ್ಟು ಮತ್ತೊಬ್ಬನಲ್ಲಿ ಕೆಲಸಕ್ಕೆ ನಿಲ್ಲುತ್ತಾನೆ. ಈ ವ್ಯತ್ಯಾಸದಿಂದ ಆ ಶ್ರೀಮಂತನಿಗೆ ತನ್ನ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವದೇ ಸಾಕುಬೇಕಾಗುತ್ತದೆ. ಅಂದಮೇಲೆ ಮಗ್ಗದ ಸುಧಾರಣೆಗೆ ಅವಕಾಶವೆಲ್ಲಿ?

ಈ ಅನಿಷ್ಟ ಪದ್ಧತಿಯು ನಿವಾರಣೆಯಾಗಬೇಕಾದರೆ ಸಂಘ ಮೂಲಕವೇ ಸರಿ. ಹಲಕೆಲವು ನೇಕಾರರು ಕೂಡಿ ಒಂದು ಗುಂಪು ಮಾಡಿಕೊಂಡು ಕೆಲಸ ನಡೆಯಿಸಬೇಕು. ಅಂದರೆ ಕೈ ಕೆಳಗಿನ ನೇಕಾರರಲ್ಲಿಯ ಹೊಯ್ದಾಟವೂ ಪರಸ್ಪರರಲ್ಲಿಯ ಮೇಲಾಟವೂ ತಪ್ಪುವದು. ಇವೇ ಸಂಘಗಳನ್ನು ಕೂಡಿಸಿ ಒಂದು ಮಧ್ಯವರ್ತಿ ಸಂಘವನ್ನು ಮಾಡಿಕೊಂಡರೆ ಅನೇಕ ರೀತಿಯಿಂದ ಲಾಭವುಂಟು. ಈ ಮಧ್ಯವರ್ತಿ ಸಂಘವು ನೇಯ್ಗೆಯ ವ್ಯವಸಾಯದಲ್ಲಿ ಒದಗುವ ತೊಂದರೆ ತಡೆಗಳನ್ನು ಸರಕಾರಕ್ಕೆ ನಿವೇದಿಸಲು ಶಕ್ಯವಾಗುವದು. ಹಾಗೂ ಸರಕಾರದವರಿಗೆ ಈ ಸಂಘದ ಮೂಲಕ ವಿಚಾರ ವಿನಿಮಯ ಮಾಡಿ ಮಗ್ಗಗಳ ವ್ಯವಸಾಯವನ್ನು ಮುಂದಕ್ಕೆ ತರಲು ಉಪಾಯ ಮಾಡುವದು ಶಕ್ಯವಾಗುವದು.

ಇತ್ತಿತ್ತಲಾಗಿ ಹಿಂದುಸ್ಥಾನ ಸರಕಾರದವರು ಕೈಮಗ್ಗದ ವ್ಯವಸಾಯವನ್ನು ಸುಧಾರಿಸುವ ಬಗ್ಗೆ ಲಕ್ಷವನ್ನು ಪೂರೈಸುತ್ತಿರುವರು. ಐದು ವರ್ಷಗಳ ಕೆಲಸದ ಒಂದು ಯೋಜನೆಯನ್ನು ಸಿದ್ಧಪಡಿಸಿ ಅದರಲ್ಲಿ ೫ ಲಕ್ಷ ರೂ. ಗಳಿಂದ ಕೈಮಗ್ಗದ ಸುಧಾರಣೆಯಾಗುವದೋ ಹೇಗೆಂಬುದನ್ನು ಪ್ರಯೋಗ ಮಾಡಿ ಅವರು ನೋಡುವವರಿದ್ದಾರೆ.

ಮದ್ರಾಸ ಸರಕಾರದವರು ಕೈಮಗ್ಗಗಳ ಉತ್ತೇಜನಾರ್ಥವಾಗಿ ಈ ವ್ಯವಸ್ಥೆ ಮಾಡಲು ಯೋಜಿಸಿದ್ದಾರೆ.—

(೧) ಪ್ರತಿಯೊಬ್ಬ ನೇಕಾರನಿಗೆ ೧೦ ರೂಪಾಯಿಗಳನ್ನು ಬಡ್ಡಿಯಿಲ್ಲದೆ ಕೊಟ್ಟು ಅವನಿಗೆ ದೊರೆಯುವ ಲಾಭದ ಮೇಲಿಂದ ೩-೪ ಆಣೆಗಳಂತೆ ಪ್ರತಿ ವಾರವೂ ತೆಗೆದುಕೊಳ್ಳುವದು.

(೨) ನೂಲು, ಬಣ್ಣ, ರಸಾಯನ ದ್ರವ್ಯಗಳು, ಮೊದಲಾದ ನೇಕಾರನಿಗೆ ಅವಶ್ಯವಾಗಿರುವ ಪದಾರ್ಥಗಳನ್ನು ದೊಡ್ಡ ದೊಡ್ಡ ಕಂಪನಿಗಳಲ್ಲಾಗಲಿ ಅಥವಾ ವ್ಯಾಪಾರಸ್ಥರಲ್ಲಾಗಲಿ ಕೊಂಡುಕೊಂಡು ಪ್ರತಿಯೊಬ್ಬ ನೇಕಾರನಿಗೆ ಮೂಲ ಬೆಲೆಗೇನೇ ಆ ವಸ್ತುಗಳು ದೊರೆಯುವಂತೆ ವ್ಯವಸ್ಥೆ ಮಾಡುವದು.

(೩) ಸನಗಿನ ವ್ಯಾಪಾರವು ಮಂದವಾಗಲು ಆ ಕಾಲಕ್ಕೆ ಅವುಗಳ ಸಂಗ್ರಹ ಮಾಡಿ ಪುನಃ ಯೋಗ್ಯ ಧಾರಣೆ ಬಂದ ಕಾಲಕ್ಕೆ ಮಾರಾಟ ಮಾಡುವದು.

ಇವಲ್ಲದೆ ಪ್ರದರ್ಶನ ತೆಗೆಯುವದು, ಹೊತ್ತು ಮಾರಲು ಏಜಂಟರನ್ನು ನಿಯಮಿಸುವದು, ಪರ ದೇಶಗಳಲ್ಲಿ ಪ್ರಸಾರ ಮಾಡುವದು ಮೊದಲಾದವನ್ನು ಸೂಚಿಸಿರುವರು.

ಜಾತಿಯೂ ಧರ್ಮವೂ.

ಲೇ:- ಶ್ರೀ ಬಸಪ್ಪ ಚನ್ನಪ್ಪ ಪಟ್ಟೇದ ವಂಟಮುರಿ.

ಸಾಂಪ್ರತಕ್ಕೆ ಜಾತಿಗಳು ಈ ಹಿಂದ. ದೇಶದಲ್ಲಿ, ಅದರಲ್ಲಿಯೂ ಮುಖ್ಯವಾಗಿ ನಮ್ಮ ಹಿಂದು ಧರ್ಮದಲ್ಲಿ, ಮಾತ್ರ ಕಂಡುಬರುತ್ತವೆ. ಇವುಗಳು ಚಾತುರ್ವರ್ಣ್ಯದಿಂದ ಆರಂಭವಾಗಿ ಬೆಳೆಯುತ್ತ ಮಿಗೆ ಮೀರಿ ಅಸಂಖ್ಯಾತವಾಗಿ ನಿಂತಿರುವವು. ಇವುಗಳಿಂದ ಹಿಂದು ಸಮಾಜವು ಒಡೆದು ಪುಡಿ ಪುಡಿಯಾಗಿ ಬಿಟ್ಟಿರುವದು. ಪ್ರತಿ ಸಾರಣ ಶಕ್ತಿಯಿಂದ ವಾಯು ಕಣಗಳು ಶಕ್ಯವಿದ್ದಷ್ಟು ದೂರ ದೂರ ಸಾಗಲ್ಪಡುವಂತೆಯೇ ಈ ಜಾತಿಗಳು ನಮ್ಮನ್ನು ಪರಸ್ಪರ ವಾಗಿ ಹಿಂದಕ್ಕೇನೇ ತಳ್ಳುತ್ತಿರುವವು. ಈ ಅನೈಕ್ಯವು ಈಗ ನಮ್ಮನ್ನು ಪ್ರತ್ಯೇಕ ವಿಷಯದಲ್ಲಿಯೂ ಪದೇ ಪದೇ ಕಾಡಹತ್ತಿದೆ. ಆದುದ ರಿಂದಲೇ ಮುಂದಾಳುಗಳು ಹಗಲಿರುಳೂ "ಒಕ್ಕಟ್ಟು-ಸಂಘಟನೆ" ಎಂದು ಕನವರಿಸುತ್ತಿರುವರು. ಹಿಂದು ಮುಸಲ್ಮಾನರಲ್ಲಿ ಐಕ್ಯ ಪ್ರಸ್ಥಾಪಿಸುವ ಸಲುವಾಗಿ ದೇಶದಲ್ಲಿ ಏನೇನು ಕೋಲಾಹಲ ನಡೆ ದದೆಯೆಂಬವನ್ನು ನಾವು ಕಣ್ಣಾರೆ ನೋಡುತ್ತಿರುವೆವು. ಅಸ್ಪೃಶ್ಯತಾ ನಾಶವಾಗಿ ಸಕಲ ಹಿಂದುಗಳೂ ಒಂದಾಗಬೇಕೆಂದು, ಹಿಂದು ಮಹಾಸಭೆ ಮೊದಲಾದವುಗಳ ಪ್ರಯತ್ನವು ಅವ್ಯಾಹತವಾಗಿ ನಡೆದದೆ

ಸುಶಿಕ್ಷಿತ ಸಮಾಜಕ್ಕಂತೂ ಈ ಜಾತಿಗಳು ತೀರ ತಲೆಬೇನೆ ಯನ್ನು ಹುಟ್ಟಿಸಿರುತ್ತವೆ. ಅವರು ಈಗ ಅವುಗಳಿಗೆ ಉಪೇಕ್ಷೆಯನ್ನೇ ಮಾಡಿರುವರು. ಚಹಾ-ಫರಾಳ ನೀರುಗಳನ್ನಂತೂ ಬೇಕು ಬೇಕಾ ದವರಲ್ಲಿ ಸ್ವೀಕರಿಸುತ್ತಿರುವರು. ಸಹಭೋಜನ ಸಮಾರಂಭಗಳನ್ನು ಆಗಾಗ್ಗೆ ನೆರವೇರಿಸುತ್ತಿರುವರು. ಇವುಗಳಲ್ಲಿ ಎಲ್ಲ ಜಾತಿಯ ಹಿಂದು ಗಳೂ, ಮುಸಲ್ಮಾನ, ಕ್ರಿಶ್ಚನ್ ಮೊದಲಾದ ಪರ ಧರ್ಮಿಯರೂ ಸಹ ಕಲೆಯುತ್ತಿರುವರು. ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಜಾತಿ ಜಾತಿಯ ಕ್ಲಬ್ಬುಗಳು ಬರೀ ತೋರಿಕೆಗೆ ಮಾತ್ರ ಇರುತ್ತವೆ. ಪ್ರಸಂಗವಶಾತ್ ಅನೇಕರು ಬೇಕಾದ ಕ್ಲಬ್ಬುಗಳಲ್ಲಿ ಭೋಜನ ಮಾಡುವರು. ಉಗಿಬಂಡಿ ಮೋಟಾರುಗಳಲ್ಲಿ ಪ್ರವಾಸ ಮಾಡುವ ಬಹು ಜನರು ಸಂಗಡ ತಿನಸು ತಿಂಡಿಗಳನ್ನು ಕಟ್ಟಿಕೊಂಡು ಹೋಗ ಲಿಕ್ಕೆ ಹಿಂಜರಿಯುವದಿಲ್ಲ. ಸೆರೆಮನೆಗೆ ಹೋಗಿ ಬಂದವರಿಗೂ ವಿದೇಶ ಯಾತ್ರೆಮಾಡಿ ಬಂದವರಿಗೂ ಪ್ರಾಯಶ್ಚಿತ್ತದ ಆವಶ್ಯಕತೆಯುಳಿದಿಲ್ಲ.

ಇದೆಲ್ಲವರ ಪರಿಣಾಮವು ಸಾಮಾನ್ಯ ಜನತೆಯ ಮೇಲಾ ಆಗಿ, ಹಳ್ಳಿಪಳ್ಳಿಗಳಲ್ಲಿರುವ ಜನರು ಸಹ ಜಾತಿಯ ಕಟ್ಟು ಮುರಿ ದು, ಸ್ವೇಚ್ಛಾಚಾರಿಗಳಾಗಿ ವರ್ತಿಸಲಿಕ್ಕೆ ಸಂಕೋಚಪಡುವದಿಲ್ಲ. ಹ್ಯಾಗೆ ಮಾಡಿದರೂ ಯಾರೂ ಯಾರನ್ನು ಕೇಳುವದಿಲ್ಲ. ಅನೇಕರ ಸ್ಥಿತಿ ಯು ಅಭಕ್ಷ್ಯಭಕ್ಷಣ ಅಪೇಯಪಾನಗಳವರೆಗೂ ಬಂದದೆ

ಇದು ಅನ್ನೋದಕದ ಮಾತಾಯಿತು. ಇನ್ನು ಶರೀರ ಸಂಬಂಧದ ಬಗ್ಗೆ ಆಲೋಚಿಸಿದರೆ, "ಸ್ವಜಾತಿಯವರಲ್ಲಿಯೇ ನಂಟುತನ ಆಗಬೇಕೆಂಬ" ಜಾತಿ ನಿರ್ಬಂಧವು ಈಗ ಬಹು ಮ ಟ್ಟಿಗೆ ಶಿಥಿಲವಾಗಿದೆ. ಮುಖ್ಯ ಜಾತಿಯ ಶಾಖೋಪಶಾಖೆಗಳಲ್ಲಿ ಅದು ಕ್ರಮದಿಂದ ಪಸರಿಸುತ್ತ ನಡೆದದೆ. ಅಂತಹ ಖಂಡ ತುಂಡ ಸ್ವಭಾವ ಶಿಕ್ಷಿತರಂತೂ, ಭಿನ್ನ ಜಾತಿ ಧರ್ಮಗಳವರೊಡನೆಯೂ ಸಹ ನಿಃಶಂಕೆಯಿಂದ ವಿವಾಹ ಬೆಳೆಸುವಷ್ಟು ಮುಂದೆ ಹೋಗಿದ್ದಾರೆ. ಈ ಮೇರೆಗೆ ಜಾತಿಯ ಮುಖ್ಯ ಆಧಾರ ಸ್ತಂಭಗಳಾದ 'ರೋಟಿ ಬೇಟಿ' ವ್ಯವಹಾರಗಳೆರಡೂ ಹೆಚ್ಚೆಚ್ಚು ಸಡಿಲಾಗುತ್ತಲೇ ನಡೆದಿರುತ್ತವೆ.

ಇವನ್ನೆಲ್ಲ ನೋಡಿದರೆ, ಜಾತಿ ಸಂಸ್ಥೆಗೆ ಕ್ಷಯರೋಗ ಹತ್ತಿದ್ದು, ಇನ್ನು ಅದು ಬಹು ದಿನ ಬಾಳಲಾರದೆಂದೂ, ಬಾಳಿ ದರೂ ಅದರ ಸ್ವರೂಪದಲ್ಲಿ ಕಲ್ಪನಾತೀತ ಅಭ್ಯಂತರವಾಗುವ ದೆಂದೂ, ಹೇಳಿದರೆ ತಪ್ಪಾಗಲಾರದು. ಯಾಕೆಂದರೆ ಜಾತಿಯ ಕಟ್ಟುಗಳು ಅಬಾಧಿತವಾದವುಗಳಲ್ಲ; ಕಾಲ-ಪರಿಸ್ಥಿತ್ಯನುರೂಪ ವಾಗಿ ಅವು ಯಾವಾಗಲೂ ಒದಲಾಗುತ್ತಲೇ ಹೋಗತಕ್ಕವುಗಳು. ಆದರೆ ಧರ್ಮದ ಮಾತು ಹಾಗಲ್ಲ. ಅದು ತ್ರಿಕಾಲಾಬಾಧಿತವಾ ದದ್ದು, ಸತ್ಯ ಸ್ವರೂಪವುಳ್ಳದ್ದು, ಮನುಷ್ಯ ಜನ್ಮದ ಅಂತಿಮ ಧ್ಯೇ ಯವಾದದ್ದು. ಹೀಗಿದ್ದು ಅರಿಯದ ಭೋಳೆ ಸ್ವಭಾವದವರು (ಅದೇಕೆ! ಬಲ್ಲಂತಹ 'ನಾ-ನಾ' ಎಂದು ಅಭಿಮಾನ ಪಡುವ ವರು ಸಹ) ಅನೇಕರು, ಕೇವಲ ಜಾತಿಯೇ ಧರ್ಮವೆಂಬಂತೆ, ಅದನ್ನ ಬಲವಾಗಿ ತಕ್ಕೈಸಿಕೊಂಡು ಕೂತಿರುವರು. ಅದನ್ನು ಲವ ಮಾತ್ರವೂ ಬದಲಿಸಲಿಕ್ಕೆ ಆ ರೂಢಿಯ ಸದ್ಭಕ್ತರು ತಾವಾಗಿ ಎಂದೂ ಒಪ್ಪಲಾರರು. ಸೋಜಿಗವೇನಂದರೆ—ಧರ್ಮವು ಹಾಳಾಗಿ ಹೋದರೂ ಅವರಿಗೆ ಅದರಿಂದೇನೂ ಕೆಡಕೆನಿಸುವದಿಲ್ಲ! ಧರ್ಮವು ಅಹಿಂಸೆ, ಸತ್ಯ, ಅಸ್ತೇಯ (ಕದಿಯದಿರುವದು), ಬ್ರಹ್ಮಚರ್ಯ, ದಯೆ, ಕ್ಷಮೆ, ದಾನ, ಪೂಜೆ, ಜಪ, ಧ್ಯಾನಗಳೆಂಬ ಹತ್ತಂಗಗಳಿಂದ ಪ್ರಕಟವಾಗುತ್ತಿರುವದು. ಇವನ್ನು ಪಾಲಿಸಲಿಕ್ಕೆ ಜನರು ಜಾತಿ ಯ ಬಗ್ಗೆ ಜೀವಾ ಕಳಕೊಳ್ಳುವಂತೆ, ಯತ್ನಿಸುತ್ತಿರುವರೇ? ಪಾಲಿ ಸುವದಂತೂ ಒತ್ತಟ್ಟಿಗಿರಲಿ, ತಿರುಗಿ ಧರ್ಮದ ಕುತ್ತಿಗೆ ಹಿಚು ಕುವದರ ಕಡೆಗೆ ಬಹುಶಃ ಸಕಲರ ಪ್ರವೃತ್ತಿ ಇದ್ದದ್ದು ಸರ್ವತ್ರ ಕಂಡುಬರುತ್ತದೆ. ಸುಳ್ಳು, ಕಳವು, ಹಾದರ, ಠಗಲುತನ, ಒಬ್ಬರ ಗಂಟು ಮುಳುಗಿಸುವದು, ಕೊಲೆ, ಹಿಂಸೆ, ಇತ್ಯಾದಿಗಳು ಹೆಚ್ಚು ತ್ತಲೇ ಇವೆ. ಇದು ಬಹಳ ಸೋಜಿಗವು! ಜಾತಿಗೂ ಧರ್ಮಕ್ಕೂ ಯಾವ ತರದ ಹತ್ತಗಡಿಯೂ ಇಲ್ಲ; ಇದು ಅಲ್ಲದೆ ಅವು ಕೇವಲ ಪೂರ್ವ-ಪಶ್ಚಿಮವಾಗಿರುತ್ತವೆಂಬುದು ಕೆಳಗಿನ ತುಲನಾತ್ಮಕ ಟಿಪ್ಪ ಣಿಯಿಂದ ಕಂಡುಬರುವದು.

—ಜಾತಿ—	—ಧರ್ಮ—
೧ ಲೌಕಿಕ	೧ ಪಾರಮಾರ್ಥಿಕ
೨ ಶಾರೀರಿಕ	೨ ಆತ್ಮಿಕ
೩ ಪಂಚಲಕ್ಷಣವಿರಹಿತ ವಾದುದು	೩ ಸಚ್ಚಿದಾನಂದ ನಿತ್ಯ ಪರಿಪೂರ್ಣವಾದುದು
೪ ಕೃತ್ರಿಮವು	೪ ಸ್ವಾಭಾವಿಕವು
೫ ಬಹು ವಿಧವಾದುದು	೫ ಏಕರೂಪತೆಯುಳ್ಳದು
೬ ಚಿಂತಾಸ್ಪದವು	೬ ಶಾಂತಿ ಮಯವು
೭ ಅರ್ಥ ಹೀನವು	೭ ಸಫಲತೆಯುಳ್ಳದು
೮ ಭೇದ ಜನಕವು	೮ ಐಕ್ಯ ರೂಪವು
೯ ಔದಾಸಿನ್ಯಾಸ್ಪದವು	೯ ಉತ್ಕಂಠೆಯಿಂದಾ ಚರಿಸತಕ್ಕುದು
೧೦ ಅಹಂಕಾರರೂಪವು	೧ ವಿನೀತವಾದುದು
(ಇತ್ಯಾದಿ	ಇತ್ಯಾದಿ)

ವಸ್ತುಸ್ಥಿತಿಯು ಹೀಗಿದ್ದರೂ ಜನರು ಮಹತ್ವದ ಧರ್ಮವನ್ನು ಪೂರಾ ಮರೆತು, ಕ್ಷುಲ್ಲಕವಾದ ಜಾತಿಯನ್ನೇ ಅಭಿಮಾನಿಸಿ ವರ್ತಿ ಸುವದು ವಿನಾಶದ ಲಕ್ಷಣವಲ್ಲವೇ? ಇದರಿಂದ ಜಾತಿಯು ತೀರ

ಮಾತಿಗೆ ಬಾರದ ವಿಷಯವೆಂದು ಯಾರೂ ತಿಳಿಯಕೂಡದು, ಆದರಲ್ಲಾದರೂ ಅನೇಕ ವಿಧದ ಲೌಕಿಕ ಹಿತಸಂಬಂಧವದೆ; ಇಷ್ಟರಿಂದಲೇ ಅದನ್ನು ಧರ್ಮಕ್ಕಿಂತ ಹೆಚ್ಚಾಗಿ ಎಣಿಸುವದು ತೀರ ತಿಳಿಗೇಡಿತನವು.

ಈ ವಿವೇಚನವನ್ನೆಲ್ಲ ಸರಿಯಾಗಿ ಗಮನಿಸಿ, ನನ್ನ ವೀರಶೈವ ಬಂಧುಗಳು ಇನ್ನಾದರೂ ತಮ್ಮಲ್ಲಿರುವ ಜಾತಿಯ ಒಳಪಂಗಡ ಗಳನ್ನು ಸಮೂಲ ನಾಶಪಡಿಸಿ, ವೀರಶೈವರಲ್ಲಿ ಅಖಂಡವಾದ ಐಕ್ಯವನ್ನು ನೆಲೆಗೊಳಿಸಿ, ನಿಜವಾದ ಉದ್ಧಾರ ಕಾರ್ಯವನ್ನು ಅವಶ್ಯವಾಗಿ ಕೈಕೊಳ್ಳುವರೆಂದು ನಂಬಬಹುದಲ್ಲವೇ? ನಮ್ಮ ಧರ್ಮ ಶಾಸ್ತ್ರಗಳು, ಮಹಾಸಭೆಯ ಗೊತ್ತುವಳಿಗಳು, ಕಾಲ ಪರಿಸ್ಥಿತಿ, ಅನುಭವಗಳೆಲ್ಲ ಅನುಕೂಲವಿರಲು, ಭಯವೇತರದು? ಆಲಸ್ಯ ದೂರೆದು ಟೊಂಕಾ ಕಟ್ಟಿ ಸಿದ್ಧರಾಗಿರಿ!

ಪಂಚ ಪೀಠಾಧಿಪತಿಗಳು ಯಾವ ಆಶ್ರಮದವರು?

ತಾರೀಖು ೨೪-೬-೩೫ ನೆಯ ಶರಣ ಸಂದೇಶ ಪತ್ರಿಕೆಯಲ್ಲಿ "ಓರ್ವ ಸಮಾಜಿಕ" ಎಂಬುವವರು ವೀರಶೈವರ ಗೋತ್ರ ಬೆಡಗುಗಳು ವಿವಾಹಕ್ಕೆ ಅಡ್ಡ ಬರುವವೆ? ಎಂಬ ಲೇಖನವನ್ನು ಬರೆದಿದ್ದು ಅದರಲ್ಲಿ ಅವರು ಗೋತ್ರ ಬೆಡಗುಗಳನ್ನು ವೀರಶೈವರು ಮನ್ನಿಸ ಬಾರದೆಂದು ಸಿದ್ಧಾಂತ ಮಾಡಿರುವದೇನೋ ಯೋಗ್ಯವೇ ಸರಿ. ಆದರೆ ಅವರು ಪಂಚ ಪೀಠದ ಗುರುಗಳೇನು ಋಷಿಗಳಂತೆ ಗೃಹಸ್ಥಾಶ್ರಮಿಗಳಲ್ಲವೆಂದು ಪ್ರತಿಪಾದಿಸಿದ್ದಾರೆ. ಈ ವಿಷಯವಾಗಿ ನಮಗೆ ಸಂಶಯವಿರುತ್ತದೆ. ಈ ಲೇಖಕರ ಅಭಿಪ್ರಾಯದಂತೆ ಇವರು ಗೃಹಸ್ಥಾಶ್ರಮಿಗಳಲ್ಲ. ಮತ್ತು ಈಗಿದ್ದ ಪಂಚ ಪೀಠಾಧಿಕಾರಿಗಳ ಅಭಿಪ್ರಾಯದಂತೆ ಅವರು ಸನ್ಯಾಸಿಗಳೂ ಅಲ್ಲ. ಏಕೆಂದರೆ ಸನ್ಯಾಸಾಶ್ರಮ ಸ್ಥಿರೀಕರಣವು ವಿರಕ್ತರನ್ನುದ್ದೇಶಿಸಿಯೇ ಹೊರಟದ್ದಾಗಿದೆ. ಬ್ರಹ್ಮಚಾರಿ ಹಾಗೂ ವಾನಪ್ರಸ್ಥ ಆಶ್ರಮಿಗಳಂತೂ ಅಲ್ಲವೇ ಅಲ್ಲ. ಅಂದಮೇಲೆ ಈ ಪೂರ್ವದ ಪಂಚ ಪೀಠಾಧಿಕಾರಿಗಳು ಯಾವ ಆಶ್ರಮಿಗಳಿದ್ದರು? ಸ್ಪಷ್ಟೀಕರಿಸಬೇಕು. ಮತ್ತು ಈ ೧೫-೨೦ ವರ್ಷಗಳೀಚೆಯಲ್ಲಿಯೇ ಹೊರಟ ರೇಣುಕ ವಿಜಯವೆಂಬ ಗ್ರಂಥದ ಹೊರತಾಗಿ ರೇಣುಕರ ವಿಷಯವಾಗಿದ್ದ ಉಳಿದ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳೆಲ್ಲವೂ ರೇಣುಕರು ಗೃಹಸ್ಥಾಶ್ರಮಿಗಳಿದ್ದರೆಂದು ಹೇಳುವವು. ಇದಕ್ಕೆ ಉತ್ತರವೇನು? ಈ ವಿಷಯವಾಗಿ ಸ್ಪಷ್ಟವಾಗಿ ಬರೆದು ಸಂಶಯ ನಿವಾರಣೆ ಮಾಡುವರೆಂದು ಆಶಿಸುತ್ತೇನೆ.

ಓರ್ವ ಸತ್ಯಾನ್ವೇಷಿ.

ಇತಿಹಾಸ ನಿಬಂಧದ ಮೇಲಾಟ.

ಅಮೇರಿಕೆಯ ನ್ಯೂಯಾರ್ಕ ಪಟ್ಟಣದಲ್ಲಿರುವ ಇತಿಹಾಸ ಸಂಸ್ಥೆಯ ವತಿಯಿಂದ ಏಶಿಯಾ ಖಂಡದ ತರುಣರಿಗಾಗಿ ಒಂದು ನಿಬಂಧದ ಮೇಲಾಟವನ್ನಿರಿಸಲಾಗಿದ್ದಿತು. ಆ ವಿಷಯವು ಈ ಪ್ರಕಾರವಾಗಿದ್ದಿತು. How Can Youth Contribute to the Realisation of a Universal Religion? (ಜಾಗತಿಕ ಧರ್ಮ ಸ್ಥಾಪನೆಗಾಗಿ ತರುಣ ವರ್ಗವು ಹೇಗೆ ಸಹಾಯ ಮಾಡಲು ಶಕ್ಯವಿದೆ?)

ಒಟ್ಟಿಗೆ ೨೯ ನಿಬಂಧಗಳು ಬರೆದು ಬಂದಿದ್ದವು. ಇವುಗಳನ್ನು ಪರೀಕ್ಷಿಸಲು ೧೧ ಜನ ಪಂಡಿತರ ಮಂಡಲವು ನಿಯಮಿಸಲ್ಪಟ್ಟಿದ್ದಿತು. ಈ ಪರೀಕ್ಷಕ ಮಂಡಲದಲ್ಲಿ ಹಿಂದೀ ಹಿತೈಷಿಗಳಾದ ಡಾ. ಜೆ. ಟಿ. ಸಂಡರ ಲ್ಯಾಂಡರವರೂ ಮತ್ತು ಹಿಂದೀ ಗೃಹಸ್ಥರಾದ ಡಾ. ಹರಿದಾಸ ಮುಝುಮದಾರ ಇವರೂ ನಿಯುಕ್ತರಾಗಿದ್ದರು.

ಮೇಲಾಟದಲ್ಲಿ ಒಬ್ಬ ಚೀನೀ ಯುವತಿಗೆ ಮೊದಲನೆಯ ಪಾರಿತೋಷಕವು ಕೊಡಲ್ಪಟ್ಟಿತು. ಇದರಿಂದ ಅವಳಿಗೆ ೫೦೦ ಡಾಲರ್‌ಗಳ ಪ್ರತಿಫಲವು ದೊರೆಯಿತು. ೨೦೦ ಡಾಲರ್‌ಗಳ ಎರಡನೆಯ ಪಾರಿತೋಷಕವು ಮದ್ರಾಸದ ಟಿ. ಎಮ್. ಪಿ. ಮಹಾದೇವ ಎಂಬವರಿಗೆ, ಮತ್ತು ಮೂರನೆಯ ೧೦೦ ಡಾಲರ್‌ಗಳ ಇನಾಮು ಡಾ. ಕಾಝಿ ಅಬ್ದುಲ್ ಹಮೀದ ಎಂಬ ಮಹಾರಾಷ್ಟ್ರೀಯ ಕಾಂಗ್ರೆಸ್ ಭಕ್ತನಿಗೆ ದೊರೆಯಿತು. ಡಾ. ಕಾಝಿ ಇವರು ಸಂಪಾದಿಸಿದಷ್ಟೇ ಗುಣಗಳು ಒಬ್ಬ ಜಪಾನಿ ತರುಣನಿಗೂ ಕೊಡಲ್ಪಟ್ಟಿದ್ದರಿಂದ ಅವನಿಗೂ ೧೦೦ ಡಾಲರ್‌ಗಳ ಮತ್ತೊಂದು ಪಾರಿತೋಷಕವನ್ನು ಕೊಡಲಾಯಿತು. ಈ ನಿಬಂಧ ಮೇಲಾಟದಲ್ಲಿ ಹಿಂದುಸ್ಥಾನದ ಬಹು ಜನರು ಭಾಗ ವಹಿಸಿದ್ದರೆಂದು ಕಂಡು ಬರುತ್ತದೆ. ಯಾಕಂದರೆ ಪಾರಿತೋಷಕ ಪಡೆದವರ ನಿಬಂಧಗಳಲ್ಲದೆ ಇನ್ನು ಳಿದ ೭-೮ ನಿಬಂಧಗಳು ಉತ್ಕೃಷ್ಟವಾಗಿವೆಯೆಂದು ಪರೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ.

ಗ್ಯಾರಂಟಿಯಾದ

ಬೀಜಗಳು ಮತ್ತು ಸಸಿಗಳು.

	ರೂ.	ಆ.	ಪೈ.
೧೨ ಪೊಟ್ಟಣ ತಖಂವಾರಿ ಹೂವಿನ ಬೀಜಗಳು	೧	೮	೦
೧೨ ,, ,, ನಾಟ ತರಕಾರಿ ಬೀಜಗಳು	೧	೪	೦
೧೨ ,, — ,, ಇಂಗ್ಲೀಷು — ,,	೨	೬	೦
೧೨ ಜಾತಿ ಗುಲಾಬಿ ಸೊಸಿಗಳು—	೪	೦	೦
೧೨ ,,—ಕಲಮಿ ಮಾವಿನ ಸೊಸಿಗಳು— ೬ ರಿಂದ	೯	೦	೦
೧೨ ,,—ಕಿತ್ತಳೆ. ನಿಂಬೆ, ಪೇರಲ, ಸೇಬು, ಪನ್ನೇರಳೆ, ದಾಳಿಂಬೆ, ಚಕ್ಕೋತ, ಪೀಚಸ್, ಮರಸೇಬು ಮೊದಲಾದವು	೫	೦	೦
೧೨ ,, ದ್ರಾಕ್ಷಿ, ಲಕ್ಕೋಟ, ರಾಜಪುರಿ, ಪೊಪಾಯ, ಅಂಜೂರ, ಸೀತಾಫಲ	೩	೦	೦
೧೨ ,, ಇತರ ಪುಷ್ಪ ಗಿಡಗಳು—	೩	೦	೦

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ದೇವಪ್ಪ ಅಂಡ್ ಸನ್
ಲಾಲ್‌ಬಾಗ್ ರೋಡು, ಬೆಂಗಳೂರು ಸಿಟಿ.

ಗುರು ವಿರಕ್ತರ ಮೇಲೆ ಟೀಕಾಸ್ತ್ರ !

ಇದು ಸ್ವಾತಂತ್ರ್ಯಯುಗ. ತಮ್ಮ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಹೇಳಲು ಎಲ್ಲರಿಗೂ ಸ್ವಾತಂತ್ರ್ಯ. ಅರಮನೆಯ ಅಥವಾ ಗುರುಮಠದ ಗುಣ ದೋಷಗಳನ್ನು ಬಹಿರಂಗವಾಗಿಯೇ ವಿಮರ್ಶಿಸಲು ಸಕಲರಿಗೂ ಅಧಿಕಾರ.

ನಾವು ರಾಜರು. ನೀವು ಪ್ರಜೆಗಳು, ನಾವು ಮಾಡಿದ ಆಜ್ಞೆಯನ್ನು ನೀವು ಅನುಸರಿಸಲೇ ಬೇಕು. ರಾಜಾಜ್ಞೆಯಲ್ಲಿ ಕುಂದು ಕೊರತೆಗಳನ್ನು ಅರಿಸಲು ಪ್ರಜೆಗಳಾದ ನಿಮಗೆ ಅಧಿಕಾರವುಂಟೇ? ಎಂದು ರಾಜರು ನಿರಂಕುಶ ಪ್ರಭುತ್ವವನ್ನು ನಡೆಸುವ ಕಾಲವು ಹೇಗೆ ಮಾಯವಾಗಿದೆಯೋ ಹಾಗೆಯೇ ಗುರುಪೀಠದವರ ಸ್ಥಿತಿ.

ನಾವು ಗುರುಗಳು. ನಾವು ವಿರಕ್ತರು. ನೀವು ಶಿಷ್ಯರು, ಭಕ್ತರು, ಆಗಿದ್ದೀರಿ. ನಮ್ಮ ಅಪ್ಪಣೆಯ ಪ್ರಕಾರವೇ ನಡೆಯಬೇಕು. ಅದೇನು ಇದೇನು? ಅದೇಕೆ ಇದೇಕೆ? ನೀವು ಹೀಗೆ ನಡೆಯಿರಿ, ಹಾಗೆ ನಡೆಯಬೇಡಿರಿ. ಎಂದು ಹೇಳುವ ಅಧಿಕಾರ ನಿಮಗೆಲ್ಲಿ? ನಮ್ಮ ಅಪ್ಪಣೆಯಂತೆ ನಡೆಯಬೇಕು. ಅದೇ ನಿಮಗೆ ಮೋಕ್ಷ. ಹಾಗೆ ನಡೆದರೆ ನೀವೇ ಧಾರ್ಮಿಕರು. ಇಲ್ಲದಿದ್ದರೆ ನಾಸ್ತಿಕರು. ನಮಗೆ ನೀವು ಬುದ್ಧಿ ಹೇಳಲು ಬಂದರೆ ನರಕದಲ್ಲಿ ಬೀಳುವಿರಿ. ಎಂದು ಗುರುಗಳು ಹೇಳುವ ಕಾಲವೂ ಹೋಯಿತು.

ರಾಜಕಾರಣದಲ್ಲಿ ಹೇಗೆ ಪ್ರಜಾ ಪ್ರಭುತ್ವ ಬಂದಿದೆಯೋ ಹಾಗೆಯೇ ಧಾರ್ಮಿಕ ವಿಚಾರದಲ್ಲಿಯೂ ಶಿಷ್ಯಾಧಿಕಾರವುಂಟಾಗಿದೆ. ರಾಜರಿಗೆ ಪ್ರಜಾ ಪ್ರಮುಖರು ಈಗ ಹೇಗೆ ಮಾರ್ಗದರ್ಶಿಗಳಾಗಿದ್ದಾರೆಯೋ ಹಾಗೆಯೋ ಗುರುಗಳಿಗೂ ಶಿಷ್ಯರು ಬುದ್ಧಿಯನ್ನು ಕಲಿಸುವ ಅಧಿಕಾರವುಳ್ಳವರಾಗಿದ್ದಾರೆ. ಕಾಲಸ್ಥಿತಿಯು ಈಗ ಈ ಪ್ರಕಾರ ಬಂದುದನ್ನು ಅರಿತುಕೊಂಡು ಯಾರು ತಮ್ಮ ಗುಣ ದೋಷಗಳನ್ನು ವಿಮರ್ಶಿಸಿದರೂ ಗುರು ವಿರಕ್ತರು ಶಾಂತ ರೀತಿಯಿಂದ ಆ ವಿಮರ್ಶನೆಯನ್ನು ಕೇಳಿ ದೋಷಗಳನ್ನು ಬಿಟ್ಟು ಗುಣಗಳನ್ನು ಹೆಚ್ಚಿಸಿಕೊಳ್ಳಬೇಕು. ಹಾಗೆ ಮಾಡುವದೇ ಅವರಿಗೂ ಸಮಾಜಕ್ಕೂ ಕ್ಷೇಮಕರವಾದುದು.

ಗುರುವರ್ಗದಲ್ಲಿ ಕೆಲವರು ಮೊದಲು ವಿರಕ್ತರನ್ನು ದೂಷಿಸಲಾರಂಭಿಸಿದರು. ಅದನ್ನು ನೋಡಿ ವಿರಕ್ತರು ಅಥವಾ ಅವರ ಪಕ್ಷದವರು ಗುರುವರ್ಗದ ಆ ನಿಂದಕರನ್ನು ಅಲ್ಲಗಳೆಯಲಾರಂಭಿಸಿದರು. ಈ ಪ್ರಕಾರ ಗುರು ವಿರಕ್ತರಲ್ಲಿ ಪರಸ್ಪರ ಟೀಕೆಗಳು ಪುಸ್ತಕ ಪತ್ರಿಕೆಗಳ ಮೂಲಕ ಕಳೆದ ಹತ್ತಾರು ವರುಷಗಳಿಂದ ನಡೆಯುತ್ತಲೇ ಬಂದವು. ಆಗ ಗುರುಗಳ ದೋಷವನ್ನು ವಿರಕ್ತ ಪಕ್ಷದ ಲೇಖಕರು ಬೈಲಿಗೆ ತರುತ್ತಿದ್ದರು. ವಿರಕ್ತರ ದೋಷಗಳನ್ನು ಗುರು ವರ್ಗದವರು ಹೊರಗೆಳೆಯುತ್ತಿದ್ದರು.

ಈ ಗುರು ವಿರಕ್ತರ ತಿಕ್ಕಾಟದಿಂದ ನಿಜಾಂಶಗಳು ವ್ಯಕ್ತವಾಗಿ ಇವರಿಬ್ಬರ ದೋಷಗಳನ್ನು ಬೈಲಿಗೆಳೆಯುವ ಭಕ್ತ ಪಕ್ಷವು ಇತ್ತೀಚಿಗೆ ತಲೆದೋರಿದೆ. ಈ ಪ್ರಕಾರ ವೀರಶೈವರಲ್ಲಿರುವ ಭಕ್ತ ಗುರು ಜಂಗಮ ಅಥವಾ ವಿರಕ್ತರೆಂಬ ಮೂರೂ ವರ್ಗದವರು ತಮ್ಮ ತಮ್ಮ ಪ್ರತ್ಯೇಕ ಪಕ್ಷವನ್ನುಂಟುಮಾಡಿಕೊಳ್ಳುತ್ತಿದ್ದಾರೆಂಬ ಲಕ್ಷಣಗಳು ತೋರಲಾರಂಭಿಸಿವೆ.

ಶ್ರೀ. ಬಸವಾದಿ ಪ್ರಮಥರ ತತ್ವಗಳನ್ನು ಅರಿತು ಆಚರಿಸುವ ನಿಜ ಭಕ್ತ, ಗುರು, ಜಂಗಮರಲ್ಲಿ ಭಿನ್ನಾಭಿಪ್ರಾಯಗಳಿಗೆ ಅವಕಾಶವೇ ಇಲ್ಲ. ಇಂಥವರಲ್ಲಿ ಪಕ್ಷ ಭೇದಗಳಾಗುವದು ಶಕ್ಯವೇ? ಬಸವ, ರೇಣುಕ, ಪ್ರಭು, ಈ ಮಹಾ ವಿಭೂತಿಗಳೆಲ್ಲಾ ಬೋಧಿಸಿ ನಡೆದು ತೋರಿಸಿದ ರೀತಿ ನೀತಿಗಳೆಲ್ಲಾ ಒಂದೇ ವಿ ವಾಗಿರುವಾಗ ಈಗ ಈ ಪ್ರಕಾರ ಪಕ್ಷ ಭೇದಗಳಾಗಿರುವುದೇಕೆ? ಆ ಮಹಾತ್ಮರು ಹೇಳಿದುದೊಂದು. ನಾವು ಈಗ ಅವುಗಳ ಅಥ ಮಾಡುವದು ಮತ್ತೊಂದು. ನಡೆಯುವದಾದರೋ ಇನ್ನೊಂದು ಹೀಗೆ ನಮ್ಮ ನಡೆ ನುಡಿ ಮತಾಚಾರಗಳಲ್ಲಿ ವ್ಯತ್ಯಾಸಗಳುಂಟ ದುದರಿಂದಲೇ ಈ ಪ್ರಕಾರ ಭಿನ್ನ ಭಿನ್ನ ಪಕ್ಷಗಳುಂಟಾಗಿವೆ.

ಕಳೆದ ತಿಂಗಳ ೨೮ ನೆಯ ತಾರೀಖಿನ 'ಬಸವರಾಜ ಪತ್ರಿಕೆಯಲ್ಲಿ ಒಬ್ಬ ಲೇಖಕರು ವಿರಕ್ತ ಸ್ವಾಮಿಗಳ ಮೇಲೆ ಟೀಕಾಸ್ತ್ರವನ್ನು ಬಿಟ್ಟಿದ್ದಾರೆ. ಪ್ರಮಥ ನಿಂದಕರ ಚಟುವಟಿಕೆಗಳನ್ನು ತಡೆಯಲು ವಿರಕ್ತರು ಮುಂದೆ ಬಾರದಿದ್ದುದರಿಂದ ಗುರು ವರ್ಗದವರೂ ಇವರೂ ಒಂದೇ ಸರಿಯೆಂತಲೂ ಭಕ್ತರು ಜಾಗೃ ರಾಗಬೇಕೆಂತಲೂ ಆ ಲೇಖಕರು ಸೂಚಿಸಿದ್ದಾರೆ. ಒಂದು ಮ ತನದಲ್ಲಿಯೇ ಒಬ್ಬರು ಪಟ್ಟದ ದೇವರಾಗುತ್ತಾರೆ. ಇನ್ನೊಬ್ಬರ ವಿರಕ್ತರಾಗುತ್ತಾರೆ. ಎಂದಮೇಲೆ ಇವರಿಬ್ಬರೂ ಹೊರಗೆ ಬೇ ತೋರಿದರೂ ಒಳಗೆ ಒಂದೇ ಸರಿಯೆಂದು ಲೇಖಕರ ಅಭಿಪ್ರಾಯ.

ಅನೇಕ ವಿರಕ್ತರು ಹೀಗಿರುವದೇನೋ ನಿಜ. ಕೆಲವರ ಹೊತ್ತು ಬಂದಂತೆ ಎರಡೂ ಕಡೆಗೆ ತಲೆ ಹಾಕಿ ಸ್ವಾರ್ಥ ಸಾಧಿಸುತ್ತಿರಬಹುದು. ಆದರೆ ಅನೇಕ ಪೂಜ್ಯ ವಿರಕ್ತ ಸ್ವಾಮಿಗಳು ಪ್ರಮಥನಿಂದನೆಯ ದುಷ್ಟ ಚಟುವಟಿಕೆಗಳನ್ನು ನಿಲ್ಲಿಸಲು ಹಗಲಿರುಳೂ ಪ್ರಯತ್ನಿಸುತ್ತಿದ್ದಾರೆ. ಶ್ರೀ. ಬಸವಾ ಪ್ರಮಥರಲ್ಲಿ ಭಕ್ತಿಯುಳ್ಳವರಾಗಿಯೂ ಅವರ ತತ್ವಗಳಂತೆಯೆ ಜನ್ಮ ವಿಶಿಷ್ಟವಾದ ಯಾವ ಮೇಲು ಕೀಳುಗಳನ್ನು ಎಣಿಸ ತಮ್ಮ ನಡೆ ನುಡಿಗಳಿಂದ ಸಮಾಜದಲ್ಲಿ ಜಾಗೃತಿಯನ್ನುಂಟು ಮಾಡುವವರಾಗಿಯೂ ಇದ್ದಾರೆ. ಆದಕಾರಣ ಒಂದು ತತ್ವ ನ್ನನುಸರಿಸಿ ನಾವು ಪ್ರತಿಪಾದಿಸಬೇಕೇ ವಿನಾ ಒಂದು ವರ್ಗ ನ್ನನುಸರಿಸಿ ವಾದಿಸುವದು ವಿಹಿತವಲ್ಲ. ಮತ್ತು ಕ್ಷೇಮಕರವೂ ಅಲ್ಲ.

ಕಳೆದ ತಿಂಗಳ ೨೦ ನೆಯ ತಾರೀಖಿನ 'ಲೋಕಮತ ಪತ್ರಿಕೆಯಲ್ಲಿಯೂ ವೀರಶೈವರ ಮಠಗಳು ಎಂಬ ಸ್ಪಷ್ಟಾ ಪ್ರಾಯದ ಲೇಖನ ಪ್ರಕಟವಾಗಿದೆ. ವೀರಶೈವ ಮಠಗಳೆಲ್ಲಾ ಶುದ್ಧಿ ಸಂಘಟನೆಯ ಸ್ಥಾನಗಳಾಗಬೇಕೆಂದೂ ಮಿಶನರಿಗಳಂ ಸಂಘಟನೆಯ ಕಾರ್ಯ ಮಾಡುವದೇ ಮಠಾಧಿಪತಿಗಳ ಕರ್ತವ್ಯವೆಂದೂ ಸಂಪಾದಕರು ಸ್ಪಷ್ಟವಾಗಿ ಸೂಚಿಸಿದ್ದಾರೆ. ರಕ್ತ ಸಂಬಂಧಿಗಳನ್ನು ಅವರು ಮೂಢರಿದ್ದರು ಕೂಡಾ ಮಠಕ್ಕೆ ಬಿಟ್ಟು ಮಠಗಳ ಪವಿತ್ರತೆಯನ್ನು ಹಾಳು ಮಾಡಿದ್ದರಿಂದಲೇ ಈಗಿ ದುರವಸ್ಥೆ ಬಂದಿದೆಯೆಂದು ಹೇಳಿರುವುದು ಯುಕ್ತವೇ ಸರಿ.

ಗುರು ವಿರಕ್ತರ ಮೇಲೆ ಬರುತ್ತಿರುವ ಈ ಟೀಕಾಸ್ತ್ರ ಳಿಂದಲಾದರೂ ಅನೇಕರು ಎಚ್ಚತ್ತು ಕಾರ್ಯ ತತ್ಪರರಾದ ಒಳ್ಳೆಯದು. ಇಲ್ಲದಿದ್ದರೆ ಇವರ ವಿಚಾರದಲ್ಲಿ ತುಂಬಾ ಅನಾದರಣೆಯುಂಟಾಗಿ ಮಠಗಳಿಗೆ ಈಗಿರುವಷ್ಟು ಆದರವು ಕೂಡಾ ಉಳಿಯದೆ ಮತ ಪ್ರಚಾರಣೆಯ ಕಾರ್ಯವು ಬೇರೆ ಸಂಘ ಸಂಸ್ಥೆಗಳ ಕಡೆಗೆ ಹೋಗದಿರಲಾರದು.

ನಿಜಾಮ ರಾಜ್ಯದ ವೀರಶೈವ ಬಡ ವಿದ್ಯಾರ್ಥಿಗಳು
ಮತ್ತು
ಶಿರಸಂಗಿ ಫಂಡು.

ಲೇಖಕ:—ಶಿಂದಗಿ ಶಿವಲಿಂಗಣ್ಣ ಕಲಬುರ್ಗಿ.

ತ್ಯಾಗವೀರ ಶಿರಸಂಗಿ ಲಿಂಗರಾಜ ದೇಸಾಯರು ತಮ್ಮ ಸಹಸ್ರಾವಧಿ ರೂ. ಉತ್ಪನ್ನವಿರುವ ದೇಶಗತಿಯನ್ನು ವೀರಶೈವ ಸಮಾಜದ ವಿದ್ಯಾಭಿವೃದ್ಧಿಗೆ ಸಹಾಯ ಮಾಡಿದುದರಿಂದಲೇ ಇಂದು ನಮ್ಮ ಸಮಾಜದಲ್ಲಿ ಅನೇಕ ಪದವೀಧರ ವಿದ್ಯಾವಂತರನ್ನೂ, ಸರಕಾರಿ ದೊಡ್ಡ ಅಧಿಕಾರಸ್ಥರನ್ನೂ ಕಾಣಲು ಶಕ್ಯವಾಗಿದೆ. ವೀರಶೈವರ ಆಧುನಿಕ ಅಭಿವೃದ್ಧಿಗೆ ಶ್ರೀಮಾನ್‌ರವರ ಸಹಾಯವೇ ಬಹುಮಟ್ಟಿಗೆ ಕಾರಣವಾಗಿದೆಯೆಂದು ಧಾರಳವಾಗಿ ಹೇಳಬಹುದು. ಇವರ ಉದಾರವಾದ ಸಹಾಯದಿಂದಲೇ ನೂರಾರು ಜನ ಬಡ ವಿದ್ಯಾರ್ಥಿಗಳು ಇಂದು ಅನೇಕ ವಿಶ್ವವಿದ್ಯಾಲಯಗಳಲ್ಲಿ ಓದುತ್ತಾ ಇರುವರು. ವೀರಶೈವ ವಿದ್ಯಾರ್ಥಿಗಳು ಪರದೇಶಗಳಿಗೆ ಹೋಗಿ ಉಚ್ಚ ಶಿಕ್ಷಣವನ್ನು ಪಡೆದು ಬಂದಿರುವುದು—ಅನೇಕರು ಪಡೆಯುತ್ತಿರುವುದು ಇವರ ದಿವ್ಯತರವಾದ ಸಹಾಯದಿಂದಲೇ. ವೀರಶೈವರ ಆಧುನಿಕ ಶಿಕ್ಷಣಾಭಿವೃದ್ಧಿಯ ಮುಕುಟಪ್ರಾಯ ಗುರುತಾದ **'ಲಿಂಗರಾಜ ಕಾಲೇಜ'**ವು ಕೂಡಾ ಇವರ ಉದಾರ ಆಶ್ರಯದಲ್ಲಿಯೇ ನಡೆಯುತ್ತಾ ಇದೆ. ಅಂತು ಬ್ರಿಟಿಶ್ ಕರ್ನಾಟಕದ ವೀರಶೈವರ ಇಂದಿನ ಘನತೆಯು ಶ್ರೀಮಾನ್ ಲಿಂಗರಾಜರಿಗೇನೇ ಹೆಚ್ಚಾಗಿ ಸೇರಿದುದಾಗಿದೆ.

ಮೈಸೂರು ದೇಶದ ವೀರಶೈವರೂ ವಿದ್ಯಾಭಿವೃದ್ಧಿಯಲ್ಲಿ ಮುಂದುವರಿದಿದ್ದಾರೆ. ಶ್ರೀಮನ್ಮಹಾರಾಜ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಲಕ್ಷಾಂತರ ರೂ.ಗಳನ್ನು ವೆಚ್ಚಮಾಡಿ ಬೆಂಗಳೂರು, ತುಮಕೂರು, ಶಿವಪುರ ಮೊದಲಾದ ಅನೇಕ ಪಟ್ಟಣಗಳಲ್ಲಿ ಭವ್ಯವಾದ ಸುಂದರ ಕಟ್ಟಡಗಳನ್ನು ಕಟ್ಟಿಸಿ ನೂರಾರು ಜನ ಬಡ ವಿದ್ಯಾರ್ಥಿಗಳ ಊಟ ವಸತಿಗಾಗಿ ಅನುಕೂಲಪಡಿಸಿ ಕೊಟ್ಟಿದ್ದಾರೆ. ಮೈಸೂರು ದೇಶದ ವೀರಶೈವರಿಗೇನೇ ಸಹಾಯ ಮಾಡುವ ವೀರಶೈವ ವಿದ್ಯಾವರ್ಧಕ ನಿಧಿಯು ಬೆಂಗಳೂರಿನಲ್ಲಿದೆ. ಇದರ ಮತ್ತು ಶ್ರೀ. ಜಗದ್ಗುರುಗಳ ಉದಾರ ಸಹಾಯದಿಂದಲೂ, ಸ್ವಾಭಾವಿಕವಾದ ಚುರುಕು ಬುದ್ಧಿಯ ಬಲದಿಂದಲೂ ಮೈಸೂರು ದೇಶದ ವೀರಶೈವರು ವಿದ್ಯಾಭಿವೃದ್ಧಿಯಲ್ಲಿ ಬ್ರಿಟಿಶ್ ಕರ್ನಾಟಕದ ವೀರಶೈವರಿಗಿಂತ ಒಂದು ಹೆಜ್ಜೆ ಮುಂದೆಯೇ ಹೋಗಿದ್ದಾರೆಂದು ಹೇಳಬಹುದು.

ವೀರಶೈವರು ಹೆಚ್ಚಾಗಿ ವಾಸವಾಗಿರುವುದು ಬ್ರಿಟಿಶ್ ಕರ್ನಾಟಕ, ಮೈಸೂರು ದೇಶ ಮತ್ತು ನಿಜಾಮ ಪ್ರಾಂತಗಳಲ್ಲಿ. ಬ್ರಿಟಿಶ್ ಮತ್ತು ಮೈಸೂರು ದೇಶದ ವೀರಶೈವರಲ್ಲಿ ವಿದ್ಯಾ ಪ್ರಸಾರವು ಇನ್ನೂ ಆಗಲೇ ಬೇಕಾಗಿದ್ದರೂ ಸಾಕಷ್ಟು ಆಗಿದೆಯೆಂದು ನೈಜಾಮಸ್ಥರಾದ ನಾವು ಧೈರ್ಯದಿಂದ ಹೇಳಬೇಕಾಗಿದೆ. ಏಕೆಂದರೆ ನಮ್ಮ ನಿಜಾಮ ಪ್ರಾಂತದಲ್ಲಿರುವ ವೀರಶೈವ ಸಮಾಜದಲ್ಲಾದ ವಿದ್ಯಾ ಪ್ರಸಾರಕ್ಕೂ ಬ್ರಿಟಿಶ್ ಮತ್ತು ಮೈಸೂರು ದೇಶಗಳ ವೀರಶೈವ ಸಮಾಜದಲ್ಲಾದ ವಿದ್ಯಾ ಪ್ರಸಾರಕ್ಕೂ ಹೋಲಿಸಿ ನೋಡಿದರೆ ನಮ್ಮನ್ನು ಬ್ರಿಟಿಶ್ ಮತ್ತು ಮೈಸೂರು ದೇಶದ ವೀರಶೈವರು ಖಂಡಿತ ತಮ್ಮ ಸಮಾಜದವರೆಂದು ತಿಳಿಯಬಹುದೆ? ಎಂಬ ಸಂಶಯ ಕೂಡಾ ಬರುವಂತಿದೆ. ಅಲ್ಲಿ ಒಂದೊಂದೇ ಜಿಲ್ಲಾ ಸ್ಥಳಗಳಲ್ಲಿ ೮೦-೯೦ ಜನ ವೀರಶೈವ ಪದವೀಧರರು ಧಾರಾಳವಾಗಿ ದೊರೆಯುತ್ತಿದ್ದರೆ ಇಲ್ಲಿ ೧೪ ಜಿಲ್ಹೆಗಳಲ್ಲಿರುವ ೯ ಲಕ್ಷ ಜನ ವೀರಶೈವರಲ್ಲಿ ಬಸವಣ್ಣನವರು ಬೋಧಿಸಿದ "ಲಕ್ಷಕ್ಕೊಬ್ಬ ಭಕ್ತ" ನೆಂಬಂತೆ ೮-೯ ಜನ ಪದವೀಧರರು ಕೂಡಾ ದೊರೆಯುವುದು ದುರ್ಲಭ. ಇದು ಅನೇಕರಿಗೆ ಆಶ್ಚರ್ಯವಾಗಿ ಕಂಡರೂ ನಿಜಾಮ ಪ್ರಾಂತದ ಸ್ಥಿತಿಯು ಮಾತ್ರ ಖಂಡಿತ ಇಷ್ಟು ಶೋಚನೀಯವಾಗಿದೆ.

ಇದು ಸಮಾಜ ಸಂಘಟನೆಯ ಕಾಲ. ಸಮಾಜದಲ್ಲಿರುವ ಕುಂದುಕೊರತೆ, ರೀತಿನೀತಿಗಳನ್ನು ಸದ್ಯದ ಪರಿಸ್ಥಿತಿಗನುಸಾರವಾಗಿ ಸುಧಾರಿಸಿಕೊಳ್ಳುವ ಕಾಲ. ಈಗ ಒಂದು ಸಮಾಜವು ಬದುಕಿ ಬಾಳಬೇಕಾದರೆ ಆ ಸಮಾಜದ ನಾಲ್ಕೂ ಕಡೆಗೂ ಸಮಾನಾದ ಶಿಕ್ಷಣ ಪ್ರಸಾರವಾಗುವುದು ಅತ್ಯಂತ ಅವಶ್ಯಕವು. ಸಮಾಜದ ಉನ್ನತಾವನತಿಗಳೂ ಗೌರವಾಗೌರವಗಳೂ ಆ ಸಮಾಜದಲ್ಲಾದ ಶಿಕ್ಷಣ ಪ್ರಸಾರವನ್ನೇ ಮುಖ್ಯವಾಗಿ ಅವಲಂಬಿಸಿರುವವು. ಆದುದರಿಂದ ನಮ್ಮ ವೀರಶೈವ ಸಮಾಜವು ಈಗಿನ ಕಾಲದಲ್ಲಿ ತಲೆಯೆತ್ತಿ ಬದುಕಿ ಬಾಳಬೇಕಾಗಿದ್ದರೆ ಸಮಾಜದ ನಾಲ್ಕೂ ಕಡೆಗೂ ಸಮನಾದ ಶಿಕ್ಷಣ ಪ್ರಸಾರವಾಗುವುದು ಅಗತ್ಯವಾಗಿದೆ. ಬ್ರಿಟಿಶ್ ಮತ್ತು ಮೈಸೂರು ದೇಶದ ವೀರಶೈವರಲ್ಲಿ ಸಾಕಷ್ಟು ಶಿಕ್ಷಣ ಪ್ರಸಾರವಾಗಿದೆಯೆಂದೂ ಈ ವಿಷಯದಲ್ಲಿ ನಮ್ಮ ನಿಜಾಮ ಪ್ರಾಂತದ ವೀರಶೈವರು ಅತ್ಯಂತ ಹಿಂದುಳಿದಿದ್ದಾರೆಂತಲೂ ಈ ಮೊದಲೇ ಹೇಳಿದೆಯಷ್ಟೆ. ಸಮಾಜದ $\frac{1}{4}$ ದಷ್ಟು ಜನಸಂಖ್ಯೆಯುಳ್ಳ ನಮ್ಮ ನಿಜಾಮ ವೀರಶೈವರಲ್ಲಿ ವಿದ್ಯಾಭಿರುಚಿಯನ್ನು ಹುಟ್ಟಿಸುವುದು, ಅದಕ್ಕೆ ಉತ್ತೇಜನ ಕೊಡುವುದು ಇತರ ಪ್ರಾಂತೀಯರ ಕರ್ತವ್ಯವಾಗಿಲ್ಲವೆ? ಸಮಾಜದ ಬಹು ಭಾಗವು ಅಶಿಕ್ಷಿತವಾಗಿ ತೊಳಲಿ ಬಳಲುವದು ಸಮಾಜಕ್ಕಾದರೂ ಭೂಷಣವೆ? ನಿಜಾಮ ಪ್ರಾಂತದ ವೀರಶೈವರ ಕಷ್ಟಗಳು ಇತರ ಪ್ರಾಂತೀಯ ವೀರಶೈವರಿಗೂ ಸಂಬಂಧಿಸಿಲ್ಲವೆ? ಭಗವಾನ್ ಬಸವಣ್ಣನವರ ಅನುಯಾಯಿಗಳಾದ ವೀರಶೈವರು 'ಬಸವ ಭೂಮಿ' ಯಲ್ಲಿರುವ ವೀರಶೈವರನ್ನೇ ಮರೆತು ಬಿಡುವುದು ಯೋಗ್ಯವೇ?

ಸಮಾಜದಲ್ಲಿ ಜಾಗ್ರತಿ ವಿದ್ಯಾ ಪ್ರಸಾರವಾಗಬೇಕಾದರೆ ಸಮಾಜದ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡುವ ನಿಧಿಗಳೂ, ಉಚಿತ ಭೋಜನಾಲಯಗಳೂ ಇರುವುದು ಅತ್ಯವಶ್ಯಕವು. ನಮ್ಮ ನಿಜಾಮ ವೀರಶೈವ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡುವ ಒಂದಾದರೂ ದೊಡ್ಡ ಸಂಸ್ಥೆಯು ಇಲ್ಲಿಲ್ಲ. ಇಲ್ಲಿ ಶ್ರೀಮಂತರ ಸಂಖ್ಯೆಯು ಹೆಚ್ಚಿದ್ದರೂ ಸಮಾಜದ ವಿದ್ಯಾಭ್ಯಾಸದ ಕಡೆಗೆ ಅವರ ಲಕ್ಷ ತಿರುಗದಿದ್ದುದು ಅತ್ಯಂತ ವಿಷಾದಾಸ್ಪದವಾದುದಾಗಿದೆ. ನಿಜಾಮ ಭಾಗದ ಪ್ರಮುಖರು ವಿದ್ಯಾ ವಿಷಯಕ್ಕೆ ಲಕ್ಷವನ್ನೀಯುವವರೆಗೂ ಪರ ಪ್ರಾಂತದವರು ಇಲ್ಲಿಯ ಬಡ ವಿದ್ಯಾರ್ಥಿಗಳಿಗೆ ಶಕ್ಯವಿದ್ದಷ್ಟು ಸಹಾಯ ಮಾಡುವುದು ಅತ್ಯಗತ್ಯವಾಗಿದೆ.

(೧೨ ನೆಯ ಪುಟಕ್ಕೆ ಮುಂದುವರಿದಿದೆ)



ಶಾ. ಶ. ೧೮೫೭ ನೆಯ ಆಷಾಢ ಶು|| ೭ ಸೋಮವಾರ.

ಸಂಘಟನೆಯ ಸುಲಭೋಪಾಯ.

ಹಿಂದು ಸಂಘಟನೆಯು ಅತ್ಯಾವಶ್ಯಕವೆಂದೇ ಈಗ ಸಕಲರೂ ಹೇಳುತ್ತಿದ್ದಾರೆ. ಈ ಸಂಘಟನೆಗಾಗಿ ಅನೇಕ ಪ್ರಯತ್ನಗಳೂ ನಡೆದಿವೆ. ಹಿಂದುಸ್ಥಾನವು ಅನೇಕ ಪ್ರಾಂತ ಮತ್ತು ಭಾಷೆಗಳುಳ್ಳದ್ದಾಗಿ ಬಹು ವಿಸ್ತಾರವಾದುದಾಗಿರುವುದರಿಂದ ರಾಷ್ಟ್ರೀಯ ಐಕಮತ್ಯವು ಹೇಗೆ ಕಷ್ಟಸಾಧ್ಯವಾದುದಾಗಿದೆಯೋ ಹಾಗೆಯೇ ಹಿಂದು ಧರ್ಮವು ಕೂಡಾ ಬೇರೆ ಬೇರೆ ಮತ ಪಂಥ ಸಂಸ್ಕೃತಿಗಳಿಂದ ಕೂಡಿ ಬಹು ಘನವಾದುದಾಗಿರುವುದರಿಂದ ಇದರಲ್ಲಿ ಸಂಘಟನೆಯುಂಟಾಗುವುದೂ ಶ್ರಮಸಾಧ್ಯ.

ಹಿಂದು ಸಂಘಟನೆಯು ಈ ಕಷ್ಟ ಕಾರ್ಯವನ್ನು ಮತ ವಿಶಿಷ್ಟವಾಗಿ ಆಚರಣೆಯಲ್ಲಿ ತಂದದ್ದಾದರೆ ಎಷ್ಟೋ ಸುಲಭವಾಗಬಹುದು. ಪ್ರತಿಯೊಂದು ಮತದವರೂ ತಮ್ಮ ತಮ್ಮ ಮತಗಳಲ್ಲಿಯ ಸಾಮಾಜಿಕ ದೋಷಗಳನ್ನೂ, ಧಾರ್ಮಿಕ ತಪ್ಪು ತಿಳುವಳಿಕೆಗಳನ್ನೂ ದೂರ ಮಾಡಲು ಪ್ರಯತ್ನಿಸಬೇಕು. ತಮ್ಮ ತಮ್ಮ ಮತಗಳಲ್ಲಿರುವ ಅನೇಕ ಪಂಗಡ ಉಪಪಂಗಡಗಳನ್ನು ತೆಗೆದುಹಾಕಿ ಒಟ್ಟುಗೂಡಿಸಬೇಕು.

ಈ ಕಾರ್ಯವನ್ನು ಮಾಡಲು ಆಯಾಯ ಮತೀಯ ಪ್ರಮುಖರು ಮುಂದಾಗಬೇಕು. ಹಿಂದು ಧರ್ಮಾಭಿಮಾನಿಗಳಾದ ವಿದ್ಯಾವಂತರಿಗೆ ಯೋಗ್ಯ ಧಾರ್ಮಿಕ ಶಿಕ್ಷಣವನ್ನು ಕೊಟ್ಟು ಅವರನ್ನು ಪ್ರಚಾರಕರನ್ನಾಗಿ ನಿಯಮಿಸಬೇಕು. ಈ ಪ್ರಚಾರಕರು ತಮ್ಮ ಮತದಲ್ಲಿ ಸಂಘಟನೆಯುಂಟಾಗಲು ಯೋಗ್ಯವಾದ ವ್ಯಾಖ್ಯಾನಾದಿಗಳಿಂದ ಪ್ರಯತ್ನಿಸಬೇಕು. ಮತ್ತು ತಮ್ಮ ಮತದವರಲ್ಲಿ ಯಾರೂ ನಿರಾಶ್ರಯರಾಗಿ ಇಲ್ಲವೆ ಮೋಸ ಹೋಗಿ ಅನ್ಯ ಧರ್ಮದವರ ಬಲೆಯಲ್ಲಿ ಬೀಳದಂತೆ ಈ ಪ್ರಚಾರಕರು ನೋಡಿಕೊಳ್ಳುತ್ತಿರಬೇಕು. ಈ ಪ್ರಕಾರ ಪ್ರತಿಯೊಂದು ಮತದವರೂ ಪ್ರಯತ್ನಿಸಿದ್ದಾದರೆ ಹಿಂದು ಸಂಘಟನೆಯ ಕಾರ್ಯ ಬಹು ಸುಲಭವಾಗುತ್ತದೆ. ಆರ್ಯ ಸಮಾಜದವರು ಈಗ ಹೀಗೆಯೇ ಮಾಡುತ್ತಿದ್ದಾರೆ. ಪ್ರತಿಯೊಂದು ಮತದವರಿಗೂ ಆಯಾಯ ಮತದವರೇ ತಮ್ಮ ತಮ್ಮಲ್ಲಿಯ ದೋಷಗಳನ್ನು ಎತ್ತಿ ಹೇಳಿದರೆ ಅಷ್ಟು ವಿರೋಧವಾಗಿ ತೋರುವುದಿಲ್ಲ. ಪರಮತ ದ್ವೇಷದ ಕಲ್ಪನೆಯೂ ಬರುವುದಿಲ್ಲ. ಕಾರ್ಯವೂ ವಿಭಾಗಿಸಲ್ಪಟ್ಟು ಅಚ್ಚುಕಟ್ಟಾಗಿ ಸಾಗುತ್ತದೆ. ಸ್ವಮತಾಭಿಮಾನವು ಎಷ್ಟಾದರೂ ಇದ್ದೇ ಇರುವುದರಿಂದ ಈ ಕಾರ್ಯಕ್ಕೆ ಬಲ ಬರುತ್ತದೆ.

ಪ್ರಾಂತಿಕ ರಾಜಕೀಯ ಚಟುವಟಿಕೆಗಳು ರಾಷ್ಟ್ರ ಕಾರ್ಯಕ್ಕೆ ಪೋಷಕವಾಗುತ್ತಾ ಇಲ್ಲವೇ? ಹಾಗೆಯೇ ಮತ ವಿಶಿಷ್ಟವಾದ ಈ ಸಂಘಟನೆಯ ಕಾರ್ಯವು ಹಿಂದು ಸಂಘಟನೆಗೇಕೆ ಸಹಾಯವಾಗುವುದಿಲ್ಲ? ಆದರೆ ಹಿಂದುಗಳಲ್ಲಿಯ ಮತ ಮತಾಂತರಗಳ ಖಂಡನಮಂಡನಗಳನ್ನು ಮಾತ್ರ ಈ ಪ್ರಚಾರಕರು ಮಾಡಬಾರದು. ರಾಷ್ಟ್ರೀಯ ಸಭೆಗೆ ಹೇಗೆ ಪ್ರಾಂತಿಕ ಮಂಡಲಗಳು ಅಂಗಭೂತವಾಗಿವೆಯೋ ಹಾಗೆಯೇ ಹಿಂದು ಮಹಾಸಭೆಯ ನಿಯಮಗಳಿಗೆ ಈ ಮತವಿಶಿಷ್ಟ ಸಂಘಟನೆಯ ಕಾರ್ಯಗಳೂ ಸಂಬಂಧಿಸಿದವುಗಳಾಗಿರಬೇಕು.

ಹೀಗೆ ಹಿಂದು ಮಹಾಸಭೆಯ ಕಾರ್ಯಗಳನ್ನು ಪ್ರತಿಯೊಂದು ಮತದವರೂ ತಮ್ಮ ತಮ್ಮ ಮತದ ಮಟ್ಟಿಗಾದರೂ ಆಚರಣೆಯಲ್ಲಿ ತರಲು ಯೋಗ್ಯ ಪ್ರಚಾರಕರನ್ನು ನಿಯಮಿಸಿದರೆ ಹಿಂದು ಸಂಘಟನೆಯ ಕಾರ್ಯವು ಎಷ್ಟೋ ಸುಲಭವಾಗುವುದು. ಈ ಮಹತ್ಕಾರ್ಯವನ್ನು ಆಯಾಯ ಮತಗಳ ಗುರುಗಳ ಕಡೆಗೇನೇ ಬಿಟ್ಟಿರುವುದು ಸರಿಯಲ್ಲ. ಅವರಿಂದ ಈ ಕಾಲದಲ್ಲಿ ಇಂತಹ ಸಂಘಟನೆಯ ಕಾರ್ಯಗಳಾಗುವುದು ಶಕ್ಯವಿಲ್ಲ. ಈಗಿನ ಕಾಲಸ್ಥಿತಿಯನ್ನರಿತ ಸುಶಿಕ್ಷಿತರೇ ಹಿಂದು ಸಂಘಟನೆಯ ಈ ಕಾರ್ಯವನ್ನು ಪ್ರಾರಂಭಿಸಬೇಕು. ಅದು ಮತವಿಶಿಷ್ಟವಾಗಿ ಜರುಗುವುದೇ ಅನುಕೂಲ. ಹಿಂದು ಧರ್ಮಾಭಿಮಾನಿಗಳು ಇತ್ತ ಲಕ್ಷಿಸುವರೇ?

ಸ್ಫುಟ ವಿಚಾರ.

ಸೊಂಡೂರು ವೀರಶೈವರ ಅನುಕರಣೀಯ ಕಾರ್ಯ.

ವೀರಶೈವ ಸಮಾಜದಲ್ಲಿ ಕಲಹಗಳು ಹೆಚ್ಚು. ಅವುಗಳಲ್ಲಿ ಮಠ ಸಂಬಂಧವಾದವುಗಳು ವಿಪರೀತ. ಈ ಮಠ ಕಲಹಗಳಿಂದಲೇ ಊರುಗಳಲ್ಲಿ ನಾನಾ ಪಂಗಡಗಳು ಇಂತಹ ಪಂಗಡಗಳ ತಿಕ್ಕಾಟದಲ್ಲಿ ಅನೇಕರು ಬೆಂದು ಬೆಂಡಾಗಿ ಹೋಗಿದ್ದಾರೆ. ಸಮಾಜದ ಶೋಚನೀಯ ಸ್ಥಿತಿಗೆ ಮಠ ಕಲಹವೂ ಬಲವಾದ ಕಾರಣವಾಗಿಯೇ ಇದೆ.

ಸೊಂಡೂರು ವೀರಶೈವ ಮಹಾಜನರು ಈ ಕಲಹಾಗ್ನಿಗೆ ಕೈ ಚಾಚದಿದ್ದುದು ಅತ್ಯಂತ ಅಭಿನಂದನೀಯವಾದುದು. ಅಲ್ಲಿನ ವಿರಕ್ತಮಠದ ಶ್ರೀ. ಪ್ರಭು ಸ್ವಾಮಿಗಳು ಕಳೆದ ಜನವರಿ ತಿಂಗಳಲ್ಲಿ ಲಿಂಗೈಕ್ಯರಾದನಂತರ ಅವರು ಮುಂಚೆಯೇ ನಿಯಮಿಸಿಕೊಂಡಿದ್ದ ಶ್ರೀ ನಾಗಯ್ಯನವರನ್ನು ಮಠಾಧಿಕಾರಿಗಳನ್ನಾಗಿ ನಿಯಮಿಸಿಕೊಳ್ಳುವ ವಿಚಾರದಲ್ಲಿ ಭಿನ್ನಾಭಿಪ್ರಾಯಗಳುಂಟಾದವು. ಆಗ ಕಲಹಾಗ್ನಿಯುಂಟಾಗಿ ಪುಟಗೊಳ್ಳಲು ಅವಕಾಶವುಂಟಾಗಿದ್ದಿತು. ಆದರೆ ಅಂತಹ ಅನುಚಿತವಾದ ಕಾರ್ಯವು ಅಲ್ಲಿನ ವೀರಶೈವ ಮಹಾಜನರಿಂದ ಸಂಭವಿಸಲಿಲ್ಲ.

ಪ್ರಜಾರಂಜಕರಾದ ಸೊಂಡೂರು ಸರಕಾರದವರೂ ಈ ವಿಷಯದ ಕಡೆಗೆ ಗಮನಿಸಿದರು. 'ಸರಕಾರದ ರಾಜಕೀಯ ಕಾರ್ಯ

ನಿರ್ವಾಹಕರಾದ ಶ್ರೀಮಾನ್ ಪಿ. ನರಸಿಂಹರಾವ ಎಂ. ಎ. ಇವರ ಅಧ್ಯಕ್ಷತೆಯಲ್ಲಿ ವೀರಶೈವರ ಒಂದು ಸಮಿತಿ ಏರ್ಪಟ್ಟು ಆ ಮಠದ ಎಲ್ಲ ಸಂಗತಿಗಳನ್ನೂ ಯೋಚಿಸಿ ಈ ಪ್ರಕಾರ ನಿರ್ಣಯವಾಯಿತು.

“ಶ್ರೀ. ಪ್ರಭುಸ್ವಾಮಿಗಳಿಂದ ಗೊತ್ತುಮಾಡಲ್ಪಟ್ಟ ಶ್ರೀ ನಾಗಯ್ಯನವರು ವಿದ್ಯೆಯಲ್ಲಿ ಈಗಲೇ ಈ ಪೀಠಕ್ಕೆ ಯೋಗ್ಯರಾಗಿ ತೋರುವದಿಲ್ಲ. ಆ ಕಾರಣ ಇವರಿಗೂ ಸರಕಾರದಿಂದ ನಿಯಮಿಸಲ್ಪಡುವ ಇತರ ಮರಿಗಳಿಗೂ ಮಠದ ವೆಚ್ಚದಿಂದ ಸರಕಾರದ ಮೇಲ್ವಿಚಾರಣೆಯಲ್ಲಿ ಸಂಸ್ಕೃತ ಮತ್ತು ಮತ ಸಂಬಂಧವಾದ ವಿದ್ಯಾಧ್ಯಯನಕ್ಕೆ ಒಂದು ಪಾಠಶಾಲೆ ಏರ್ಪಡಬೇಕು. ಅಲ್ಲಿ ಎಂಟು ವರುಷಗಳವರೆಗೆ ವಿದ್ಯಾಭ್ಯಾಸ ಮಾಡಿದಮೇಲೆ ಸರಕಾರದಿಂದ ನಿಯಮಿಸಲ್ಪಟ್ಟ ಪರೀಕ್ಷಾ ಮಂಡಲದವರು ಯಾರನ್ನು ಪರೀಕ್ಷೆಯಲ್ಲಿ ಉತ್ತೀರ್ಣರನ್ನಾಗಿ ಮಾಡಿ ಅಧಿಕಾರಕ್ಕೆ ಯೋಗ್ಯರೆಂದು ಗೊತ್ತುಮಾಡುತ್ತಾರೆಯೋ ಅವರಿಗೆ ಈ ಮಠಾಧಿಕಾರವು ದೊರೆಯಬೇಕು.

ಈ ಎಂಟು ವರುಷಗಳವರೆಗೆ ಕಾರ್ಯ ನಡೆಯಿಸಲು ಸರಕಾರದ ಮೇಲ್ವಿಚಾರಣೆಗೊಳಪಟ್ಟು ಶ್ರೀ ಸಿದ್ಧರಾಮಯ್ಯಸ್ವಾಮಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಏರ್ಪಡಬೇಕು. ಅದರಲ್ಲಿ ಮ|| ರಾ|| ಚಿತ್ರಿಕಿ ತೋಟಪ್ಪನವರು, ||ಮ ರಾ|| ಚಿಕ್ಕಸೊಂಡೂರು ರೆಡ್ಡಿ ಕುಮಾರಗೌಡರು ಮ|| ರಾ|| ಮಾಳಗಿ ಸಿದ್ಧರಾಮಪ್ಪನವರು ಮ|| ರಾ|| ಹಿರೇಮಠದ ಬಸವಯ್ಯನವರು ಸದಸ್ಯರಾಗಿರಬೇಕು.”

ಈ ಪ್ರಕಾರ ಸೊಂಡೂರು ವೀರಶೈವ ಮಹಾಜನರು ಸಕಲರಿಗೂ ಅನುಕರಣೀಯವಾದ ರೀತಿಯಲ್ಲಿ ನಡೆದುದು ಅವರಿಗೆ ಅತ್ಯಂತ ಭೂಷಣಪ್ರದವಾದುದು. ಮಠಾಧಿಕಾರವನ್ನು ವಹಿಸಿಕೊಳ್ಳುವುದು ಭಕ್ತರ ಮನ ಬುದ್ಧಿಗಳ ಮೇಲೆ ಪ್ರಭುತ್ವವನ್ನು ಮಾಡುವುದಕ್ಕೇ ವಿನಾ ಹೊಲ, ಮನೆ, ಮಠ, ಹಣಕಾಸುಗಳನ್ನು ಗಳಿಸಿ ಭೋಗಿಸಿ ಆಳುವದಕ್ಕಲ್ಲ. ಆದುದರಿಂದ ವಿದ್ಯಾವಂತರಾದ ಸುಶೀಲಾಚಾರಗಳುಳ್ಳವರೇ ಮಠಾಧಿಕಾರಿಗಳಾಗಬೇಕೆಂದು ಈ ಪ್ರಕಾರ ಗೊತ್ತುಮಾಡಿಕೊಂಡುದು ಬಹು ಯುಕ್ತವಾಗಿದೆ. ಬೇರೆ ಕಡೆಯ ವೀರಶೈವ ಮಹಾಜನರೂ ಮಠಾಧಿಕಾರಿಗಳನ್ನು ನಿಯಮಿಸಿಕೊಳ್ಳುವಾಗ ಇದೇ ಮಾರ್ಗವನ್ನು ಐಕಮತ್ಯದಿಂದ ಅನುಸರಿಸಿದರೆ ಎಷ್ಟೋ ಅನರ್ಥಗಳು ದೂರಾಗಲಿಕ್ಕಿಲ್ಲವೆ?

ಸಾಮ್ರಾಜ್ಯ ಸಂಚಿಕೆ.

ಕನ್ನಡಿಗರ ಸಾಮ್ರಾಜ್ಯವೂ ಒಂದು ಕಾಲದಲ್ಲಿದ್ದಿತು. ಆದರೆ ಈಗ ಹಿಂದುಸ್ಥಾನದವರಿಗೇನೇ ರಾಜ್ಯವಿಲ್ಲ. ಸಾಮ್ರಾಜ್ಯವೆಲ್ಲಿ ಬರಬೇಕು? ಇಂತಹ ನಿರಾಶೆಯ ಶೋಚನೀಯ ಕಾಲದಲ್ಲಿ ಸಾಮ್ರಾಜ್ಯದ ನೆನಪು ಎಷ್ಟೋ ಉತ್ಸಾಹಕರವಾದುದಾಗಿಲ್ಲವೇ? ನಮ್ಮ ಪೂರ್ವಜರು ಸಾಮ್ರಾಜ್ಯ ಸುಖದಲ್ಲಿದ್ದರು. ನಾವು ಸ್ವರಾಜ್ಯ ಸುಖವನ್ನಾದರೂ ಅನುಭವಿಸಬಾರದೇ? ಎಂಬ ಈ ಅರುವು ಉಂಟಾಗಲು ನಮ್ಮ ಸಾಮ್ರಾಜ್ಯದ ಸಂಗತಿಗಳೂ ನಮ್ಮ ಮುಂದೆ ಆಗಾಗ್ಗೆ ಬರುತ್ತಿರುವುದು ಅನುಕೂಲವಲ್ಲವೇ?

ಬೆಳಗಾವಿಯ **ಅರುಣೋದಯ** ಪತ್ರಿಕಾ ಕರ್ತರು ಬರುವ ಮಹಾನವಮಿಯ ದಿವಸ **ವಿಜಯನಗರ ಸಾಮ್ರಾಜ್ಯ ಸಂಚಿಕೆ**ಯನ್ನು ಹೊರಡಿಸಬೇಕೆಂದು ಯೋಚಿಸಿ ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಇದು ಅತ್ಯಂತ ಅಭಿನಂದನೀಯವಾದ ಪ್ರಯತ್ನ. ಸಕಲ ಕನ್ನಡಿಗರೂ ಈ ಕಾರ್ಯಕ್ಕೆ ಪ್ರೋತ್ಸಾಹಿಸುವರೆಂದು ನಂಬಿದ್ದೇವೆ.

ಬಳ್ಳಾರಿಯವರ ಸ್ತುತ್ಯ ಪ್ರಯತ್ನ.

ಬಳ್ಳಾರಿಯು ಕನ್ನಡ ನಡುನಾಡು. ಇಲ್ಲಿ ಇತ್ತೀಚಿಗೆ ತೆಲುಗಿನ ಹಾವಳಿ ಹೆಚ್ಚಿದೆ. ಬಳ್ಳಾರಿಯನ್ನು ತೆಲುಗು ನಾಡನ್ನಾಗಿ ಮಾಡಿಕೊಳ್ಳಲು ಅನೇಕರು ಹವಣಿಸುತ್ತಿದ್ದಾರೆ. ಈ ನಿಂದ್ಯ ಪ್ರಯತ್ನವನ್ನು ತಡೆಯಲು ಬಳ್ಳಾರಿಯ ಪ್ರಮುಖರು ಇತ್ತೀಚಿಗೆ ವಿಶೇಷವಾಗಿ ಪ್ರಯತ್ನಿಸುತ್ತಿರುವುದು ಅತ್ಯಂತ ಅಭಿನಂದನೀಯವಾದುದು.

ಕಳೆದ ತಿಂಗಳಲ್ಲಿ ಕರ್ನಾಟಕ ಸಪ್ತಾಹವನ್ನು ಬಳ್ಳಾರಿಯಲ್ಲಿ ಏರ್ಪಡಿಸಿ ಕನ್ನಡ ನಾಡಿನ ಪ್ರಮುಖ ಭಾಷಾಭಿಮಾನಿಗಳನ್ನು ಬರಮಾಡಿಕೊಂಡು ಅವರ ಉಜ್ವಲವಾದ ಭಾಷಣಗಳಿಂದ ಕನ್ನಡ ನಾಡಿನ ಬೆಳಕನ್ನು ಬೆಳಗಿಸಿದುದು ತುಂಬಾ ಫಲಕಾರಿಯಾದುದು. ಕನ್ನಡ ಮಾತೆಯ ಈ ಸಪ್ತಾಹವನ್ನು ಉತ್ಸಾಹದಿಂದ ನೆರವೇರಿಸಿದುದಕ್ಕಾಗಿ ಬಳ್ಳಾರಿ ಮಹಾಜನರನ್ನು ನಾವು ಹೃದಯಪೂರ್ವಕ ಅಭಿವಂದಿಸುತ್ತೇವೆ.

ಕನ್ನಡ ಪ್ರಚಾರದ ಈ ಕಾರ್ಯವು ಇನ್ನೂ ಮುಂದುವರಿಯಬೇಕು. ಹಿಂದಿ ಪ್ರಚಾರಕ್ಕೋಸ್ಕರ ಹೇಗೆ ವೇತನ ಕೊಟ್ಟು ಅನೇಕರನ್ನು ನಿಯಮಿಸಿದ್ದಾರೆಯೋ ಹಾಗೆಯೇ ಕನ್ನಡ ಪ್ರಚಾರಕ್ಕಾಗಿ ಈ ಗಡಿನಾಡಿನಲ್ಲಿಯೂ ಕೆಲವರನ್ನು ನಿಯಮಿಸಬೇಕು. ವಿರಾಮ ಕಾಲದಲ್ಲಿಯೂ, ರಾತ್ರಿಯಲ್ಲಿಯೂ ಕನ್ನಡ ಓದು ಬರಹಗಳನ್ನು ಕನ್ನಡ ಮಾತಾಡುವ ವರ್ತಕರೇ ಮೊದಲಾದವರಿಗೆ ಆ ಪ್ರಚಾರಕರು ಕಲಿಸಬೇಕು. ಬಳ್ಳಾರಿಯ ಕನ್ನಡಾಭಿಮಾನಿಗಳು ಈ ವಿಷಯದ ಪ್ರಯತ್ನವನ್ನೂ ಮಾಡುವರೆಂದು ನಂಬಿದ್ದೇವೆ.

ಆಂಧ್ರರು ಜಾಗೃತರಾದರು.

ದಕ್ಷಿಣ ಹಿಂದುಸ್ಥಾನದವರಲ್ಲಿ ಆಂಧ್ರರೇ ಗಟ್ಟಿಗರು. ಕಾಲಮಾನಕ್ಕೆ ತಕ್ಕಂತೆ ಜಾಗ್ರತೆ ಸುಧಾರಣೆಯನ್ನು ಹೊಂದುತ್ತಿದ್ದಾರೆ. ಆಧುನಿಕ ರಾಜಕೀಯ, ಆರ್ಥಿಕ, ಸಾಹಿತ್ಯ ಸಂವರ್ಧಕ ಮುಂತಾದ ಎಲ್ಲ ಚಟುವಟಿಕೆಗಳಲ್ಲಿಯೂ ಬಹು ಮುಂದಾಗಿದ್ದಾರೆ. ಈಗ ಧಾರ್ಮಿಕ ಚಟುವಟಿಕೆಯನ್ನೂ ಪ್ರಾರಂಭಿಸಿರುವರು. ಇದು ಅತ್ಯಂತ ಅಭಿನಂದನೀಯವೂ ಅನುಕರಣೀಯವೂ ಆಗಿದೆ.

ಉತ್ತರ ಹಿಂದುಸ್ಥಾನದಲ್ಲಿ ಹಿಂದುಗಳು ಮುಸಲ್ಮಾನ ಧರ್ಮದ ಪಾಲಾಗುವುದು ಹೇಗೆ ಹೆಚ್ಚೋ ಹಾಗೆಯೇ ದಕ್ಷಿಣ ಹಿಂದುಸ್ಥಾನದ ಹಿಂದುಗಳಲ್ಲಿ ಕ್ರೈಸ್ತರ ಪಾಲಿಗೆ ಹೋಗುವವರು ಹೆಚ್ಚು. ದಕ್ಷಿಣದಲ್ಲಿ ಕ್ರಿಸ್ತ ಮತ ಹಬ್ಬುತ್ತಿದೆ. ಇದಕ್ಕೆ ಹಿಂದುಗಳಲ್ಲಿ ಶುದ್ಧೀ ಸಂಘಟನೆಯ ಚಟುವಟಿಕೆಗಳಿಲ್ಲದಿದ್ದುದೇ ಮುಖ್ಯ ಕಾರಣ. ಆಂಧ್ರದೇಶದ ಹಿಂದುಗಳು ಈ ಕೊರತೆಯನ್ನು ನಿವಾರಣೆ ಮಾಡಿಕೊಂಡರು. ಹಿಂದು ಶುದ್ಧೀ ಸಭೆಯನ್ನು ಏರ್ಪಡಿಸಿ ಧರ್ಮಾಭಿಮಾನಿಗಳೂ ಸಮರ್ಥರೂ ಆದ ವೇತನದ ಪ್ರಚಾರಕರನ್ನು ನಿಯಮಿಸಿದ್ದಾರೆ.

ಈ ಶುದ್ಧೀ ಸಮಿತಿಯು ಏರ್ಪಟ್ಟು ಒಂದೂವರೆ ವರುಷ ಮಾತ್ರವಾಯಿತು. ಈ ಅಲ್ಪಾವಧಿಯಲ್ಲಿ ಪರ ಧರ್ಮದ ಒಂದು ಸಾವಿರಕ್ಕಿಂತ ಹೆಚ್ಚು ಜನರಿಗೆ ಹಿಂದು ಧರ್ಮ ದೀಕ್ಷೆಯನ್ನು ಕೊಟ್ಟು ಹಿಂದುಗಳಲ್ಲಿ ಸೇರಿಸಿಕೊಂಡಿದ್ದಾರೆ. ಆಂಧ್ರ ದೇಶದ ಹಿಂದುಗಳು ಜಾಗೃತರಾಗಿ ಹಿಂದು ಧರ್ಮ ರಕ್ಷಣೆ ಮತ್ತು ಪ್ರಸಾರಣೆಗಳಿಗಾಗಿ ಪ್ರಯತ್ನಿಸುತ್ತಿರುವುದು ಬಹು ಸ್ತುತ್ಯವಾದುದಾಗಿದೆ. ಕರ್ನಾಟಕದ ಹಿಂದುಗಳು ಇನ್ನುಮೇಲಾದರೂ ಕಣ್ಣು ತೆರೆಯುವರೇ? ಹಿಂದು ಮಹಾಸಭೆಯ ಶಾಖೋಪಶಾಖೆಗಳನ್ನು ಸ್ಥಾಪಿಸಿ ಶುದ್ಧೀ ಸಂಘಟನೆಯ ಕಾರ್ಯಗಳನ್ನು ಪ್ರಾರಂಭಿಸುವರೇ?

ನಿಜಾಮು ರಾಜ್ಯದ ವೀರಶೈವ ಬಡ ವಿದ್ಯಾರ್ಥಿಗಳು ಮತ್ತು ಶಿರಸಂಗಿ ಫಂಡು.

—(೯ ನೆಯ ಪುಟದಿಂದ ಬಂದುದು.)—

ಶಿರಸಂಗಿ ಲಿಂಗರಾಜ ಫಂಡಿನವರು ಬ್ರಿಟಿಷ್ ವೀರಶೈವ ವಿದ್ಯಾರ್ಥಿಗಳಿಗೆ ಮಾತ್ರ ಪ್ರತಿ ವರ್ಷ ೩೦-೩೫ ಸಾವಿರ ರೂ. ಗಳನ್ನು ಕೊಡುತ್ತಾ ಇರುವರು. ವೀರಶೈವ ಸಮಾಜದ ವಿದ್ಯಾಭಿವೃದ್ಧಿಗಾಗಿ ಶ್ರೀಮಾನ್ ಲಿಂಗರಾಜರವರು ತಮ್ಮ ಆಸ್ತಿಯನ್ನು ದಾನ ಮಾಡಿದ್ದರೂ ನಮ್ಮ ನಿಜಾಮು ಪ್ರಾಂತದ ಅತ್ಯಂತ ಹಿಂದುಳಿದ ಬಡ ವೀರಶೈವರಿಗೆ ಈ ಫಂಡಿನಿಂದ ಒಂದು ಪೈಯ ಸಹಾಯ ಕೂಡಾ ಆಗದೆ ಇದ್ದುದು ಅತ್ಯಂತ ದುಃಖಕರವಾಗಿದೆ. ಇಲ್ಲಿಯ ಅನೇಕ ಅತ್ಯಂತ ಬಡವರಾದ ಕಾಲೇಜ ವಿದ್ಯಾರ್ಥಿಗಳು ತಮಗೆ ಫಂಡಿನಿಂದ ಸಹಾಯ ದೊರೆಯಬೇಕೆಂದು ಎಷ್ಟೋ ದೀನತನದಿಂದ ಬರೆದುಕೊಂಡರೂ ಒಂದಕ್ಕಾದರೂ ಉತ್ತರವು ದೊರೆತಿರುವುದಿಲ್ಲ. ವೀರಶೈವರ ಜೀವಾಳವಾದ ವೀರಶೈವ ಮಹಾಸಭೆಯಲ್ಲಿ ನಿಜಾಮು ವೀರಶೈವ ಬಡ ವಿದ್ಯಾರ್ಥಿಗಳಿಗೂ ಶಿರಸಂಗಿ ಫಂಡಿನಿಂದ ಸಹಾಯ ದೊರೆಯಬೇಕೆಂದು ಠರಾವಾಗಿದ್ದರೂ ಈ ವರೆಗೂ ಅದರ ವ್ಯವಸ್ಥೆಯಾಗಿಲ್ಲ. ಶಿರಸಂಗೀ ಫಂಡಿನ ಟ್ರಸ್ಟ ಕಮೀಟಿಯವರು ಈಗಿನ ನಿಜಾಮು ಪ್ರಾಂತದ ವೀರಶೈವರ ಹೀನದೀನ ಸ್ಥಿತಿಯನ್ನಾದರೂ ಕಣ್ಣಾರೆ ನೋಡಿ ನಿಜಾಮು ಪ್ರಾಂತದ ಬಡ ವೀರಶೈವ ವಿದ್ಯಾರ್ಥಿಗಳಿಗೂ ಸಹಾಯ ಮಾಡುವಂತೆ ಠರಾಯಿಸಿಕೊಳ್ಳುವುದು ಅತ್ಯವಶ್ಯಕವಾಗಿದೆ. ಹಾಗಾದರೇನೆ ನಿಜಾಮು ಪ್ರಾಂತದ ವೀರಶೈವರಲ್ಲಿ ಜಾಗ್ರತೆ ವಿದ್ಯಾ ಪ್ರಸಾರವು ಹೆಚ್ಚಿ ಸಮಾಜದ ಘನತೆ, ಗೌರವಗಳು ಬೆಳೆಯುವವು.

ಬ್ರಿಟಿಷ್ ಕರ್ನಾಟಕದ ವೀರಶೈವರ ವಿದ್ಯಾಭಿವೃದ್ಧಿ, ಘನತೆ, ಗೌರವಗಳಿಗೆ ಕಾರಣರಾದ ಶ್ರೀಮಾನ್ ಲಿಂಗರಾಜರವರೇ ನಮ್ಮ ನಿಜಾಮು ಪ್ರಾಂತದ ವೀರಶೈವರನ್ನು ಎತ್ತಿ ಹಿಡಿಯಲಿ. ಶಿರಸಂಗೀ ಫಂಡಿನ ಟ್ರಸ್ಟ ಕಮೀಟಿಯವರು ತಮ್ಮ ಹಿಂದುಳಿದ ನಿಜಾಮು ವೀರಶೈವ ಬಾಂಧವರಿಗೆ ಸಹಾಯ ಮಾಡುವ ಗೊತ್ತುವಳಿ ಮಾಡಿಕೊಂಡು ಜಾಗ್ರತೆ ಜಾರಿಯಲ್ಲಿ ತರಲೆಂದೂ, ಅಂಥ ಸುದಿನವು ಜಾಗ್ರತೆ ಪ್ರಾಪ್ತವಾಗಲೆಂದೂ, ಫಂಡಿನ ಉದಾರವಾದ ಸಹಾಯದಿಂದ ನಮ್ಮ ವಿದ್ಯಾವಿಹೀನ ಬಡ ವೀರಶೈವ ಸಮಾಜವು ಬೆಳಗಲೆಂದೂ ಪ್ರಾರ್ಥಿಸುತ್ತೇನೆ.



ಮಹಾತ್ಮರ ವಾಣಿ.

ಜೀವಿಸುವ ಸಲುವಾಗಿ ಉಣ್ಣಬೇಕು. ಉಣ್ಣುವ ಸಲುವಾಗಿ ಜೀವಿಸಕೂಡದು. ಈ ತತ್ವದ ಗುಟ್ಟಿನ ಬಗ್ಗೆ ಯಾರಿಗಾದರೂ ಸಂದೇಹವುಂಟಾದರೆ ಅವನು ಬೆವರಿಳಿಯುವ ವರೆಗೆ ಹೊಟ್ಟೆಯ ಸಲುವಾಗಿ ದುಡಿದು ನೋಡಬೇಕು. ಈ ಪ್ರಕಾರ ದುಡಿದು ಸಂಪಾದಿಸಿದ ಪದಾರ್ಥಗಳಿಂದ ಅವನಿಗೆ ಒಂದು ಬಗೆಯ ಆನಂದವುಂಟಾಗುವದು. ಅವನ ಆರೋಗ್ಯವು ಸುಧಾರಿಸುವದು. ಮತ್ತು ತಾನು ಮೊದಲು ಸೇವಿಸುತ್ತಿದ್ದ ಅನೇಕ ವಸ್ತುಗಳು ಅನಾವಶ್ಯಕಗಳೆಂದು ಅವನಿಗೆ ಕಂಡು ಬರುವದು.

ಬೌದ್ಧಿಕ ಸಾಮರ್ಥ್ಯದಿಂದ ಜನರು ಹೊಟ್ಟೆಯನ್ನು ತುಂಬಿಕೊಳ್ಳಬಹುದಲ್ಲವೆ? ಇಲ್ಲ; ದೇಹಧಾರಣಕ್ಕೆ ಅವಶ್ಯವಿರುವ ವಸ್ತುಗಳು ಶಾರೀರಕ ಶ್ರಮದಿಂದಲೇ ಪೂರೈಸಲ್ಪಡಬೇಕು.

ಮಾನಸಿಕ ಶ್ರಮವು ಅಂದರೆ ಬೌದ್ಧಿಕ ಶ್ರಮವು ಆತ್ಮೋನ್ನತಿಗಾಗಿ. ಅದಕ್ಕೆ ಸಂಬಳವಿಲ್ಲ. ಆದರ್ಶ ಸಮಾಜದಲ್ಲಿ ಡಾಕ್ಟರ ಪಣ್ಡಿತರೇ ಮೊದಲಾದವರು ಕೇವಲ ಸಮಾಜ ಕಲ್ಯಾಣಕ್ಕಾಗಿ ದುಡಿಯುವರು. ಆದರೆ ಸ್ವಾರ್ಥಕ್ಕಾಗಿಯಲ್ಲ. ಹೊಟ್ಟೆಗಾಗಿ ಶಾರೀರಕ ಶ್ರಮ ಮಾಡುವ ತತ್ವವನ್ನು ಎಲ್ಲರೂ ವಿಧೇಯರಾಗಿ ಪಾಲಿಸಹತ್ತಿದರೆ ಸಮಾಜ ರಚನೆಯಲ್ಲಿ ಗೊತ್ತಾಗದಂತೆ ಕ್ರಾಂತಿಯುಂಟಾಗುವದು. ಮಾನವೀ ಜೀವನದ ಜಯವು ಜೀವನ ಹೋರಾಟದ ಬದಲು ಪರಸ್ಪರ ಸೇವೆಯ ಹೋರಾಟವನ್ನು ನೆಲೆಗೊಳಿಸುವದರಲ್ಲಿದೆ. ಪಾಶವೀವೃತ್ತಿಯ ಬದಲು ಮಾನವೀ ಧರ್ಮವು ನೆಲೆಗೊಳ್ಳುವದು.

ಹಳ್ಳಿಗಳಿಗೆ ಹೋಗಿರೆಂದು ಹೇಳುವದರ ಅರ್ಥವೇನಂದರೆ—ಹೊಟ್ಟೆಗಾಗಿ ಕಾಯಕಷ್ಟ ಪಡುವದು ಧರ್ಮವೆಂಬುದನ್ನು ಕಂಡು ಹಿಡಿಯುವದು. ಲಕ್ಷಗಟ್ಟಲೆ ಹಿಂದೀ ಜನರು ಹಳ್ಳಿಗಳಲ್ಲಿರುತ್ತಾರೆ. ಆದರೆ ಅವರೆಲ್ಲರೂ ಅರಹೊಟ್ಟೆಯುಂಡು ಜೀವಿಸುವರು; ಇದೆಲ್ಲ ಸತ್ಯವು. ಅವರೆಲ್ಲರೂ ಸ್ವಸಂತೋಷದಿಂದ ಆ ಸ್ಥಿತಿಗೆ ತಲೆ ಬಾಗಿಸಿಲ್ಲೆಂಬುದು ನಮಗೆ ಸುದೈವದಿಂದ ಗೊತ್ತಿದೆ. ಶಕ್ಯವಿದ್ದರೆ ಕಾಯಕಷ್ಟವನ್ನು ತಪ್ಪಿಸಿಕೊಳ್ಳಲೂ ಪಟ್ಟಣಗಳಲ್ಲಿ ವಾಸಮಾಡಲೂ ಅವರು ಸಿದ್ಧರಿದ್ದಾರೆ. ಬಲುಮೆಯಿಂದ ಒಡೆಯನಿಗೆ ವಿಧೇಯನಾಗಿರುವದು ದಾಸ್ಯವು. ಸ್ವಸಂತೋಷದಿಂದ ತಂದೆಗೆ ವಿಧೇಯನಾಗಿರುವದು ಶ್ರೇಷ್ಠವಾದ ಪುತ್ರ ಧರ್ಮವು. ಇದರಂತೆ ಶಾರೀರಕ ಶ್ರಮಜೀವನ ತತ್ವಕ್ಕೆ ಬಲುಮೆಯಿಂದ ತಲೆ ಬಾಗುವದರಿಂದ ದಾರಿದ್ರ್ಯ, ಬೇನೆ, ಅಸಂತೋಷ ಮೊದಲಾದವುಗಳು ಹುಟ್ಟುತ್ತವೆ. ಅದು ದಾಸ್ಯವು. ಐಚ್ಛಿಕ ವಿಧೇಯತೆಯು ಸೌಖ್ಯವನ್ನೂ ಆರೋಗ್ಯವನ್ನೂ ಉಂಟುಮಾಡುತ್ತದೆ. ಮತ್ತು ಆರೋಗ್ಯವೇ ನಿಜವಾದ ಧನವು. ಬೆಳ್ಳಿ ಬಂಗಾರದ ನಾಣ್ಯಗಳು ಧನವಲ್ಲ. ಗ್ರಾಮೋದ್ಯೋಗ ಸಂಘವು ಇದರ ಪ್ರಯೋಗವು.

"ಹರಿಜನ"

ವಿವಿಧ ವರ್ತಮಾನ.

ಸ್ಮಶಾನದಲ್ಲಿ ಮರಣ.

ಚಿಪಳೂಣ ತಾಲೂಕಿನ ದಹಿವಲಿ ಬದ್ರುಕ್ ಎಂಬ ಊರಲ್ಲಿ ಒಂದು ಶವದ ಅಂತ್ಯ ಸಂಸ್ಕಾರವನ್ನು ಮಾಡುವದಕ್ಕಾಗಿ ಕೆಲವು ಜನರು ಸ್ಮಶಾನಕ್ಕೆ ಹೋಗಿದ್ದರು. ಆಗ್ಗೆ ಒಂದು ಕಾಡಹಂದಿಯು ಅವರ ಮೇಲೆ ಒಮ್ಮಿಂದೊಮ್ಮೆ ನುಗ್ಗಿ ಒಬ್ಬನನ್ನು ಕೊಂದು ಬಿಟ್ಟಿತು, ೯ ಜನರು ಗಾಯಪಟ್ಟರು. ಅಕಸ್ಮಾತ್ ಸಂಭವಿಸಿದ ಈ ಸಂಗತಿಯನ್ನು ಕುರಿತು ವಿಚಾರಿಸಲು ತಿಳಿದುಬಂದದ್ದೇನಂದರೆ ಆ ಗ್ರಾಮದ ಒಬ್ಬ ಒಕ್ಕಲಿಗನು ಆ ಹಂದಿಯ ಐದು ಮರಿಗಳಲ್ಲಿ ಒಂದನ್ನು ಕೊಂದುಹಾಕಿದ್ದನಂತೆ. ಅವನನ್ನು ಕೊಲ್ಲುವದಕ್ಕಾಗಿ ಆ ಹಂದಿಯು ಹೊಂಚು ಹಾಕಿ ಅವನ ಹೊಲದಲ್ಲಿ ಇದ್ದುಕೊಂಡು ಅವನು ಬಂದಕೂಡಲೆ ಏರಿ ಹೋಯಿತು. ಆದರೆ ಆ ಒಕ್ಕಲಿಗನು ಹೇಗೋ ಅದರ ಕೈಯೊಳಗಿಂದ ಪಾರಾಗಿ ಅಡಗಿಕೊಂಡನು. ಸಂತಪ್ತವಾದ ಆ ಹಂದಿಯು ಸಮೀಪದಲ್ಲಿಯೇ ಸ್ಮಶಾನದಲ್ಲಿದ್ದ ಜನರನ್ನು ಕಂಡು ಅವರ ಮೇಲೆ ನುಗ್ಗಿತಂತೆ!

ಕ್ವೇಟಾದಲ್ಲಿ ಪುನಃ ಭೂಕಂಪ.

ಕಳೆದ ತಿಂಗಳ ೨೯ ನೆಯ ತಾರೀಖಿನ ದಿವಸ ಮುಂಜಾನೆ ೭ ಗಂಟೆಗೆ ಮತ್ತು ಮಧ್ಯಾಹ್ನ ೧೨ ಗಂಟೆಗೆ ೨ ಸಾರೆ ಕ್ವೇಟಾದಲ್ಲಿ ಭೂಕಂಪವಾಯಿತು. ಈ ನೆಲನಡುಗು ತೀವ್ರ ತರವಾಗಿಯೇ ಇದ್ದುದರಿಂದ ರೇಲ್ವೆ ಸ್ಟೋರ್ಸ ಕಟ್ಟಡವು ಹಿಂದಿನ ಭೂಕಂಪದ ಕಾಲಕ್ಕೆ ಅರ್ಧ ಬಿದ್ದುದು ಸಂಪೂರ್ಣವಾಗಿ ಬಿದ್ದಿತು.

೨೮ ನೆಯ ತಾರೀಖಿನ ದಿವಸವೇ ಭೂಕಂಪವಾಗುವದೆಂದು ಸಿಂಧ ಪ್ರಾಂತದ ಸಕ್ಕರ ಲಾರಖಾನ ಜಿಲ್ಹೆಗಳಲ್ಲಿ ಸುದ್ದಿಯು ಹಬ್ಬಿದ್ದರಿಂದ ಆ ಎರಡೂ ಜಿಲ್ಹೆಗಳಲ್ಲಿಯ ಸಾಧಾರಣ ನೂರಕ್ಕೆ ೮೦ ರಷ್ಟು ಜನರು ಮನೆಯಲ್ಲಿ ಮಲಗಿಕೊಳ್ಳದೆ ಹೊರಗೆ ಅಂಗಳದಲ್ಲಿಯೇ ಮಲಗಿಕೊಂಡರು. ಅವರೆಲ್ಲರೂ ಪರಮಾತ್ಮನ ಸ್ತೋತ್ರ ಮಾಡುತ್ತ ರಾತ್ರಿ ಕಳೆದರು. ಅನೇಕರು ಅಂಜಿ ಬ್ಯಾಂಕಿನೊಳಗಿನ ತಮ್ಮ ಹಣವನ್ನೆಲ್ಲ ತೆಗೆದುಕೊಂಡು ಹೊರಗೇ ಇದ್ದರು. ಈ ಪ್ರಕಾರ ಜನರು ಹೊರಗೆ ಮಲಗಿದ್ದರಿಂದ ಅವರನ್ನೂ ಅವರ ತೆರವಾದ ಮನೆಗಳನ್ನೂ ಕಾಯಲಿಕ್ಕೆ ಹೆಚ್ಚಿನ ಪೋಲೀಸ ವ್ಯವಸ್ಥೆ ಮಾಡುವ ಭಾಗಬಿತ್ತು.

ಆಂಧ್ರ ಶುದ್ಧೀ ಸಂಘದವರ ಅಮೋಘವಾದ ಕಾರ್ಯವು.

ಗುಂಟೂರು ತಾ|| ೨೦-೧-೧೯೩೪ ರಲ್ಲಿ ಆಂಧ್ರ ಶಾಖೆಯ ಶುದ್ಧೀ ಸಂಘವು ಏರ್ಪಡಿಸಲ್ಪಟ್ಟಿತು. ಇದರ ಧ್ಯೇಯವು ಹಿಂದೂ ಜನ ಸಮುದಾಯವನ್ನು ದೇಶದಲ್ಲಿ ಹೆಚ್ಚಿಸುವದು. ಹಿಂದೂ ಮತ ಪ್ರಾಶಸ್ತ್ಯವನ್ನು ಉಪದೇಶಗಳ ಮೂಲಕ ತಿಳಿಸುವದೂ ಹಿಂದು ಜನರು ಪರಮತೀಯರ ಬಲಿಗೆ ಬೀಳದಂತೆಯೂ, ಹಾಗೆ ಬಿದ್ದಲ್ಲಿ ಪುನಃ ಅವರನ್ನು ಸಂಸ್ಕಾರದಿಂದ ಮತದ ಉಡಿಯಲ್ಲಿ ಹಾಕಿಕೊಳ್ಳುವದೂ, ಇತ್ಯಾದಿ ಸದುದ್ದೇಶಗಳಿರುತ್ತವೆ. ಶ್ರೀಯುತ ಸುಂದರ ವೆಂಕಯ್ಯ ಎಂಬುವವರು ಪಗಾರದಿಂದ ಕೆಲಸ ಮಾಡತಕ್ಕವರಿರುತ್ತಾರೆ, ಇವರು ಈ ತಿಂಗಳಲ್ಲಿ ಉತ್ಸಾಹದಿಂದ ಕೆಲಸ ಮಾಡಿರುವರು. ೭ನೇ ತಾರೀಖಿನಲ್ಲಿ ಇವರು ೪೪ ಜನರುಳ್ಳ ೧೩ ಕುಟುಂಬಗಳನ್ನು ಕ್ರಿಶ್ಚನ್ ಮತದಿಂದ ಹಿಂದು ಮತಕ್ಕೆ ಸಂಸ್ಕಾರದಿಂದ ತೆಗೆದುಕೊಂಡರು. ಈ ಸಂಘವು ಸುಮಾರು ೧|| ವರ್ಷದಲ್ಲಿ ಕಡಪದಲ್ಲಿ ೨೭ ಜನರುಳ್ಳ ೭ ಕುಟುಂಬದವರನ್ನು, ಪಶ್ಚಿಮ ಗೋದಾವರಿಯಲ್ಲಿ ಒಂದು ಕುಟುಂಬವನ್ನು, ಕೃಷ್ಣಾ ಜಿಲ್ಹೆಯಲ್ಲಿ ೪೦೦ ಜನರುಳ್ಳ ೧೨೨ ಕುಟುಂಬದವರನ್ನು, ಗುಂಟೂರು ಜಿಲ್ಹೆಯಲ್ಲಿ ೫೩೨ ಜನರುಳ್ಳ ೧೮೦ ಕುಟುಂಬಗಳನ್ನು, ಶುದ್ಧೀ ಮಾಡಿರುವರು. ಮತ್ತು ೩೦ ಜನರುಳ್ಳ ೧೦ ಕುಟುಂಬಗಳಿಂದ ಅರ್ಜಿಯು ಬಂದಿರುವದು. ಇದೇ ತಿಂಗಳಲ್ಲಿ ಅವರಿಗೂ ಶುದ್ಧಿಯಾಗುವದು. ಆರ್ಯ ಸಮಾಜದ ಸಂಸ್ಕಾರ ಪದ್ಧತಿಯೇ ಇಲ್ಲಿ ಸಹ ಉಪಯೋಗಿಸಲ್ಪಟ್ಟಿರುವದು. ಈ ಶುದ್ಧೀ ಕಾರ್ಯವು ತೃಪ್ತಿಕರವಾಗಿ ಸಾಗಿದೆ.

ಅರ್ಧ ಮಾರ್ಕಿನಲ್ಲಿ ನಪಾಸ?

ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಒಟ್ಟಿನಲ್ಲಿ ನೂರಕ್ಕೆ ೪೦ ಕ್ಕಿಂತ ಹೆಚ್ಚಿಗೆ ಗುಣಗಳನ್ನು ಪಡೆದರೆ ಆ ಉಮೇದವಾರನಿಗೆ ಆ ಹೆಚ್ಚಾದ ಮಾರ್ಕ್ಸಗಳಷ್ಟು ಯಾವದಾದರೊಂದು ವಿಷಯದಲ್ಲಿ ಕಡಿಮೆಯಾಗಿದ್ದರೆ ಹಾಕಬಹುದೆಂಬ ವಿಶ್ವ ವಿದ್ಯಾಲಯದ ನಿಯಮವಿದೆ. ಇದಕ್ಕಾಗಿ ಕೇಶವ ಸೀತಾರಾಮ ತಲಗಿರಿ ಎಂಬ ಮ್ಯಾಟ್ರಿಕ್ ಉಮೇದವಾರನು ತನಗೆ ಒಟ್ಟಿನಲ್ಲಿ ನೂರಕ್ಕೆ ೪೨.೫೭ ಮಾರ್ಕ್ಸ ಅಂದರೆ ೨.೫೭ ಗುಣಗಳು ಹೆಚ್ಚಿಗೆ ಬಿದ್ದದ್ದರಿಂದ ತನ್ನ ಇಂಗ್ಲೀಷ ಪೇಪರಿಗೆ ೩ ಮಾರ್ಕ್ಸ ಗ್ರೇಸ್ ಹಾಕಬೇಕಾಗಿದ್ದಿತೆಂದೂ ಹೀಗೆ ಮಾಡದೆ ವಿಶ್ವ ವಿದ್ಯಾಲಯದವರು ಅನ್ಯಾಯ ಮಾಡಿರುವರೆಂದೂ ಮುಂಬಯಿ ಹಾಯಕೋರ್ಟಿನಲ್ಲಿ ಅರ್ಜಿ ಮಾಡಿದ್ದನು.

ಹಾಯಕೋರ್ಟಿನಲ್ಲಿ ನ್ಯಾ. ಮೂ. ಚಿತ್ರೆ ಇವರು ತಮ್ಮ ನಿರ್ಣಯವನ್ನು ಈ ಪ್ರಕಾರ ಕೊಟ್ಟರು—ವಿದ್ಯಾರ್ಥಿಯ ಹೇಳಿಕೆ ಸರಿಯಾಗಿಲ್ಲ. ಈ ಪ್ರಕಾರ ಸೌಲಭ್ಯ ಬೇಡಿದರೆ ಎಲ್ಲರಿಗೂ ಕೊಡಬೇಕಾದೀತು. ಅಂದಮೇಲೆ ಒಂದು ನಿಯಮವೇ ಉಳಿಯಲಿಕ್ಕಿಲ್ಲ. ಆದ್ದರಿಂದ ಅರ್ಜಿ ತೆಗೆದುಹಾಕಲಾಗಿದೆ.

ವಿಶ್ವ ವಿದ್ಯಾಲಯದ ಸಿಂಡಿಕೇಟಿನವರು ಹೀಗೆ ಹೇಳಿದರು— "ವಿಶ್ವ ವಿದ್ಯಾಲಯದ ನಿಯಮದ ಮೇರೆಗೆ ಈ ಅರ್ಜಿ ಮಾಡಿರುವೆನೆಂಬುದು ಸರಿಯಾದುದಿಲ್ಲ. ಆದ್ದರಿಂದ ನಾವು ಅದನ್ನು ಮಾನ್ಯ ಮಾಡುವದಿಲ್ಲ. ಅರ್ಜಿದಾರನು ಬೇಕಾದರೆ ಬೇರೆ ಉಪಾಯವನ್ನು ಮಾಡಲಿ ಅಂದರೆ ನಾವು ಉತ್ತರ ಕೊಡುವೆವು."

ಸೇತುವಿಗೆ ೨ ಕೋಟಿ ರೂಪಾಯಿ.

ಕಲಕತ್ತಾ ಹೌರಾ ಪಟ್ಟಣಗಳ ಮಧ್ಯದಲ್ಲಿ ಒಂದು ಸೇತುವೆ ಕಟ್ಟಲು ೨ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಸೇತುವೆ ಕಟ್ಟಿಸುವ ಕುರಿತು ಬಂಗಾಲ ಶಾಸನ ಸಭೆಯಲ್ಲಿ ೧೧ ವರ್ಷಗಳ ಪೂರ್ವದಲ್ಲಿಯೇ ಕಟ್ಟಳೆಯಾಗಿದೆ. ಈಗಿರುವ ಸೇತುವೆಯು ಹಳೆಯದಾಗಿದ್ದು ಅದು ವಾಹನಗಳ ಓಡಾಟಕ್ಕೆ ಅಪಾಯಕರವಾದುದೆಂದು ತಿಳಿದು ಹೊಸ ಸೇತುವೆ ಕಟ್ಟಲು ನಿಶ್ಚಯವಾಗಿದೆ. ಹೋದ ವರುಷವೇ ಈ ಸೇತುವೆ ಕಟ್ಟಿಸಲು ಟೆಂಡರ ಬೇಡಲಾಯಿತು. ಆ ಪ್ರಕಾರ ದೇಶಿಯ ಟೆಂಡರಗಳೂ ಗ್ರೇಟಬ್ರಿಟನ್, ಅಮೇರಿಕಾ, ಜರ್ಮನಿ, ಬೆಲ್ಜಮ್ ಮೊದಲಾದ ದೇಶಗಳ ಟೆಂಡರಗಳೂ ಮುಂದೆ ಬಂದಿದ್ದು ಯಾವ ಟೆಂಡರು ಸ್ವೀಕರಿಸಲ್ಪಡುವದೆಂಬ ಬಗ್ಗೆ ಎಲ್ಲರೂ ಕುತೂಹಲದಿಂದ ನೋಡುತ್ತಿದ್ದಾರೆ. ಒಂದು ವೇಳೆ ಈ ಕಾರ್ಯವು ಹಿಂದೀ ಟೆಂಡರರ ವಶಕ್ಕೆ ಒಪ್ಪಿಸಲ್ಪಟ್ಟರೆ ಹಿಂದೀ ಜನರಿಗೆ ಉದ್ಯೋಗ ದೊರೆಯುವದಲ್ಲದೆ ಅವರ ಕಾರ್ಯ ಕ್ಷಮತೆಯೂ ಕಂಡು ಬರುವದು.

ವರ್ತಮಾನಸಾರ.

—ಮುಂಬಯಿ ಹತ್ತರ ಎಲಿಫಂಟಾ ನಡುಗಡ್ಡೆಯಲ್ಲಿದ್ದ ಒಡೆದು ಹೋದ ತ್ರಿಮೂರ್ತಿಯ ಮೂರ್ತಿಯನ್ನು ಪುನಃ ಕಿತ್ತಿಸುವದಕ್ಕಾಗಿ ಹಿಂದುಸ್ಥಾನ ಸರಕಾರದ ಪುರಾಣ ವಸ್ತು ಸಂಶೋಧನ ಶಾಖೆಯವರು ಪ್ರಾರಂಭ ಮಾಡಿರುವರು.

—ಅಮೃತಸರದಲ್ಲಿ ೮ ಪೋಲೀಸ ಸ್ಥಾನಗಳಿಗಾಗಿ ೧೦೦೦ ಅರ್ಜಿಗಳು ಬಂದಿದ್ದವು. ಅವುಗಳಲ್ಲಿ ಅನೇಕ ಅರ್ಜಿಗಳು ಪದವೀಧರರವಿದ್ದವು.

—ಬ್ರಹ್ಮ ದೇಶದ ಒಂದು ಹಳ್ಳಿಯಲ್ಲಿ ಪೋಲೀಸರು ಸಂಶಯದಿಂದ ಒಂದು ಮನೆಯನ್ನು ಶೋಧಿಸಲು ಅಲ್ಲಿ ಅವರಿಗೆ ಮದ್ದು ಗುಂಡಿನ ಒಂದು ಸಣ್ಣ ಕಾರ್ಯಾಲಯವು ಇದ್ದುದು ಕಂಡುಬಂತು.

—ಹಿಂದಿ ರೇಲ್ವೆ ಕಂಪನಿಗಳ ಉತ್ಪನ್ನವು ಹೋದ ವರ್ಷಕ್ಕಿಂತ ೪೮ ಲಕ್ಷ ರೂ. ಕಡಿಮೆಯಾಗಿದೆ.

—ಲಿಂಗರಾಜ ಕಾಲೇಜವಲ್ಲಿಯ ಆಯುರ್ವೇದ ವಿದ್ಯಾಲಯಕ್ಕೆ ಶ್ರೀ ಬೆಳವಿಯವರು ೧೧೧ ರೂ. ಗಳನ್ನು ಕಾಣಿಕೆಯಾಗಿ ಕೊಟ್ಟಿರುವರು.

—ಕಲಘಟಗಿ ಹಾಗೂ ತೊಲಗಿಯಲ್ಲಿ ಜರುಗಿದ ದೇವಿಯ ಜಾತ್ರೆಗಳಲ್ಲಿ ಪಶು ಹಿಂಸೆಯಾಗದೆ ಕಾಯಿ ಕರ್ಪುರಗಳಿಂದಲೇ ದೇವಿಯ ಪೂಜೆ ಮಾಡಲಾಯಿತು.

—ಮಂಗಳೂರು ಬೋರ್ಡಿನವರು ೫೦ ರೂ. ಗಿಂತ ಕಡಿಮೆ ವೇತನವುಳ್ಳ ನೌಕರರ ಮಕ್ಕಳ ಫಿಯನ್ನು ತೆಗೆದುಕೊಳ್ಳಬಾರದೆಂದು ನಿರ್ಣಯಿಸಿದ್ದಾರೆ.

—ಚಿಕ್ಕೋಡಿಯಲ್ಲಿ ನೆರೆದ ಖಾದಿ ಸಂತೆಯಲ್ಲಿ ಒಟ್ಟಿಗೆ ೧೭೫೦ ರೂ. ಗಳ ಖಾದಿ ಮಾರಾಟವಾಯಿತು.

—ಮಮದಾಪುರ (ಗೋಕಾಕ) ದಲ್ಲಿ ೨೨ ನೆಯ ತಾರೀಖಿನ ದಿವಸ ಒಬ್ಬ ಮನುಷ್ಯನ ಭಯಂಕರ ಕೊಲೆಯಾಗಿದೆ. ಕೊಡ್ಲಿ ಕುಡಗೋಲುಗಳಿಂದ ಅವನನ್ನು ಕಡಿದಿದ್ದು ಹೊಟ್ಟೆಯೊಳಗಿನ ಕರಳುಗಳು ಹೊರಗೆ ಬಂದಿವೆ.

—ಮುಂಬಯಿಯಲ್ಲಿ ಕರ್ನಾಟಕ ಸಂಘದ ವತಿಯಿಂದ ಒಂದು ಕನ್ನಡ ಶಾಲೆಯು ಪ್ರಾರಂಭವಾಗಿದೆ. ಶ್ರೀ ಹಬ್ಬು ಎಂಬುವವರು ಶಿಕ್ಷಕರಿದ್ದಾರೆ ೯ ಜನ ವಿದ್ಯಾರ್ಥಿಗಳಿದ್ದಾರೆ.

—ಮಿರಜೆಯಲ್ಲಿ ಒಂದು ಬಾಬಾಜಿ ಮಾಂಗ ಎಂಬ ಕ್ರಿಶ್ಚನ್ನನನ್ನು ಶುದ್ಧೀಕರಿಸಿ ಹಿಂದುಧರ್ಮದಲ್ಲಿ ತೆಗೆದುಕೊಳ್ಳಲಾಯಿತು.

—ಗುಜರಾಥದ ಸೋಶಾಲಿಸ್ಟ ಪರಿಷತ್ತಿನಲ್ಲಿ ಗ್ರಾಮೋದ್ಯೋಗ ಸಂಘವು ಮಾತಿಗೆ ಬಾರದ ಸಂಸ್ಥೆಯೆಂದು ನಿರ್ಣಯವಾಯಿತು.

—ಪಂ. ಜವಾಹರಲಾಲರ ತೂಕವು ೧೫ ಪೌಂಡು ಕಡಿಮೆಯಾಗಿದೆಯೆಂದು ದಟ್ಟ ವಾರ್ತೆ ಇದೆ. ಆದರೆ ಸೌ. ಕಮಲಾ ನೆಹರು ಇವರ ಮೇಲೆ ಶಸ್ತ್ರ ಚಿಕಿತ್ಸೆಯು ಯಶಸ್ವಿಯಾದುದನ್ನು ಕೇಳಿ ಅವರು ಹರ್ಷಭರಿತರಾಗಿರುವರು. ಬಿಡುಗಡೆಯಾದ ಮೇಲೆ ಅವರು ಯುರೋಪಕ್ಕೆ ಹೋಗುವದಿಲ್ಲವಂತೆ.

—ರತ್ನಾಗಿರಿಯಿಂದ ಕೊಲ್ಹಾಪುರಕ್ಕೆ ಟೆಲಿಫೋನ ಹಾಕಲು ಪ್ರಾರಂಭವಾಗಿದೆ. ರತ್ನಾಗಿರಿ, ಪುಣೆ, ಕೊಲ್ಹಾಪುರ, ಬೆಳಗಾವಿ ಮತ್ತು ಮುಂಬಯಿ ಇವುಗಳಲ್ಲಿ ಶೀಘ್ರವೇ ಟೆಲಿಫೋನಿನ ಸಂಯುಕ್ತ ಯೋಜನೆಯಾಗುವುದು.

—ಗಡಿನಾಡಿನ ಗಾಂಧಿ ಖಾನ ಅಬ್ದುಲ್ ಗಫಾರ ಖಾ ಇವರ ತೂಕದಲ್ಲಿ ೮ ಪೌಂಡು ಕಡಿಮೆಯಾಗಿದೆ. ಅವರಿಗೆ ರಾಷ್ಟ್ರೀಯ ವೃತ್ತ ಪತ್ರಗಳನ್ನು ಓದಲಿಕ್ಕೆ ಕೊಡುವದಿಲ್ಲ.

—ಬಾಗಲಕೋಟೆಯಲ್ಲಿ ಎರಡು ಎತ್ತುಗಳು ಒಪ್ಪತ್ತಿನಲ್ಲಿ ೪॥ ಕೂರಿಗೆ ಭೂಮಿಯನ್ನು ಬಿತ್ತಿದವೆಂದು ಊರಲ್ಲಿ ಆ ಎತ್ತುಗಳ ಮೆರವಣಿಗೆ ತೆಗೆದಿದ್ದರು.

—ದಾವಣಗೇರಿ ಖಾದಿ ಭಾಂಡಾರದ ಶ್ರೀ ಸಿದ್ಲಿಂಗಪ್ಪನವರು ಒಂದು ತಿಂಗಳಲ್ಲಿ ೬೦೦ ರೂ. ಖಾದಿ ಮಾರಾಟ ಮಾಡಿದರು

—ಹಿಂದುಸ್ಥಾನ ಸರಕಾರದವರು ಸರ್ವ ಪ್ರಾಂತಿಕ ಸರಕಾರಗಳ ಕಡೆಗೆ ವರ್ತಮಾನ ಪತ್ರಗಳಲ್ಲಿ ಪ್ರಕಟವಾಗುತ್ತಿರುವ ಸುದ್ದಿಗಳ ಮತ್ತು ಸಂಪಾದಕೀಯ ಲೇಖನಗಳ ಮೇಲೆ ಲಕ್ಷವನಿಟ್ಟಿರಬೇಕೆಂದು ಗುಪ್ತವಾಗಿ ಸೂಚಿಸಿದ್ದಾರೆ.

—ಅಫಗಾಣಿಸ್ಥಾನದಿಂದ ೬೫೦ ರೂ. ಗಳ ಅಫುವನ್ನು ಕೆಲ ಪಠಾಣರು ಕಳವು ಮಾಡಿ ತಂದು ಮುಂಬಯಿಯಲ್ಲಿ ಇಟ್ಟಿದ್ದರು. ಪೋಲೀಸರು ಗುಪ್ತವಾಗಿ ಗಿರಾಕಿಗಳಾಗಿ ಹೋಗಿ ಅದನ್ನು ಶೋಧಿಸಿದರು. ಇದು ಗೊತ್ತಾದ ಕೂಡಲೆ ಒಬ್ಬ ಪಠಾಣನು ಪೋಲೀಸ ಇನ್ಸ್ಪೆಕ್ಟರರ ಮೇಲೆ ಏರಿ ಹೋಗಿ ಗಾಯಪಡಿಸಿದನು

—ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಇವರು ಬೆಂಗಳೂರಿನ ವಕೀಲರಾದ ಶ್ರೀ. ಎಸ್. ವೆಂಕಟಸ್ವಯ್ಯ ಇವರೊಡನೆ ಹುಬ್ಬಳ್ಳಿ ಹರಿಜನ ಬಾಲಿಕಾಶ್ರಮಕ್ಕೆ ಭೆಟ್ಟಿ ಕೊಟ್ಟರು.

—ಕರ್ನಾಟಕದಲ್ಲಿ ೨೨೦೦೦ ಜನ ಕಾಂಗ್ರೆಸ್ ಸಭಾಸದರಿದ್ದಾರು.

—ಜಪಾನದಲ್ಲಿ ಎರಡು ಹಡಗಗಳು ಒಂದಕ್ಕೊಂದು ತಾಕಲಾಡಿದ್ದರಿಂದ 'ಮಿಡೋರಿ ಮಾರು' ಎಂಬ ಹಡಗವು ಮುಳುಗಿತು. ಆ ಹಡಗದಲ್ಲಿ ಒಟ್ಟಿಗೆ ೨೫೩ ಜನರಿದ್ದರು. ಅವರಲ್ಲಿ ೧೫೦ ಜನರು ಮುಳುಗಿಹೋದರು.

—೩೦ ಗಂಟೆಗಳ ವರೆಗೆ ಸತತವಾಗಿ ನೀರಿನಲ್ಲಿ ಈಸಿದ ಬಗ್ಗೆ ಶ್ರೀ. ರವಿಂದ್ರನಾಥ ಚಿತರ್ಜಿ ಇವರಿಗೆ ಪುಣೆಯಲ್ಲಿ ಸುವರ್ಣ ಪದಕಗಳು ಕೊಡಲ್ಪಟ್ಟವು. ೧೯೩೬ ನೇ ಇಸ್ವಿಯಲ್ಲಿ ಪುನಃ ಪ್ರಯತ್ನ ಮಾಡಬೇಕೆಂದು ಅವರಿಗೆ ಸೂಚಿಸಲಾಯಿತು

—ಎಮ್. ಎಸ್. ಎಮ್. ರೇಲ್ವೆಯ ವೆಂಕಟಾಚಲಮ್ ಜಿಲ್ಹಾದ ಹತ್ತರ ಉಗಿಬಂಡಿಯಲ್ಲಿ ಕುಳಿತ ೪೦೦ ಜನ ಮುಸಲ್ಮಾನರು ಸರಪಳಿ ಜಗ್ಗಿ ಉಗಿಬಂಡಿಯನ್ನು ನಿಲ್ಲಿಸಿ ಪಾರಾಗಿ ಹೋದರು. ಈ ಬಗ್ಗೆ ವಿಚಾರ ಮಾಡುವದಕ್ಕಾಗಿ ಮದ್ರಾಸದಿಂದ ರೇಲ್ವೇ ಪೋಲೀಸ ಸುಪರಿಂಟೆಂಡಂಟರು ಅಲ್ಲಿಗೆ ಹೋಗಿದ್ದಾರೆ.

—ಗ್ವಾಲ್ಹೇರ ಸಂಸ್ಥಾನಿಕರು ಕುದುರೆಯ ಮೇಲೆ ಕುಳಿತುಕೊಂಡು ಹೊರಟಿರುವಾಗ ಕುದುರೆಯು ಒಮ್ಮಿಂದೊಮ್ಮೆ ಅವರನ್ನು ಕೆಳಕ್ಕೆ ಕೆಡವಿತು. ಇದರಿಂದ ಬಲ ಭುಜಕ್ಕೆ ಸ್ವಲ್ಪ ಗಾಯವಾಗಿದೆ.

—ಮುಂಬಯಿಯ ಪ್ರಸಿದ್ಧ ಜ್ಯೋತಿಷಿಯಾದ ಲೇಖರಾಮನ ಮಗಳಾದ ಚಂದ್ರಿಕಾ ಎಂಬವಳು ಹಜಾರಿ ಮಲ್ಲ ಎಂಬ ಟ್ಯಾಕ್ಸಿ ಡ್ರಾಯವ್ಹರನನ್ನು ಪ್ರೀತಿಸುತ್ತಿದ್ದಳು. ಆದರೆ ಹಜಾರಿ ಮಲ್ಲನು ಬಡವನಾಗಿದ್ದುದರಿಂದ ಅವರಿಬ್ಬರ ವಿವಾಹಕ್ಕೆ ತಡೆಯುಂಟಾಯಿತು. ತಾವು ಎಂದೂ ಅಗಲಿರಬಾರದೆಂದು ಇಚ್ಛಿಸುತ್ತಿದ್ದ ಆ ಇಬ್ಬರೂ ಕಲ್ಯಾಣ ಜಿಲ್ಹಾದ ಹತ್ತರ ಹಸರು ಹುಲ್ಲಿನ ಮೇಲೆ ಅಫು ತಿಂದು ಪರಸ್ಪರಾಲಿಂಗನದಲ್ಲಿಯೇ ಪ್ರಾಣ ಬಿಟ್ಟರು.

ವಿವಿಧ ವಿಷಯ.

ಶ್ರೀ ರಾಜಪುರೋಹಿತರ ಭಾಷಣ.

ಕಳೆದ ತಿಂಗಳ ಕೊನೆಯ ವಾರ ಬಳ್ಳಾರಿಯಲ್ಲಿ ಜರುಗಿದ ಕರ್ನಾಟಕ ಸಪ್ತಾಹದ ಕಾಲಕ್ಕೆ ಪ್ರಸಿದ್ಧ ಇತಿಹಾಸ ಸಂಶೋಧಕರಾದ ಶ್ರೀ. ರಾಜಪುರೋಹಿತರು ಹಿಂದುಸ್ಥಾನದಲ್ಲಿ ಕರ್ನಾಟಕದ ಸ್ಥಾನ ಎಂಬ ವಿಷಯದ ಮೇಲೆ ಭಾಷಣ ಮಾಡಿದರು. ಅದರಲ್ಲಿ ಧಾರ್ಮಿಕ ವಿಷಯವಾಗಿ ಹೇಳಿದ ಅಂಶಗಳನ್ನು ಇಲ್ಲಿ ಕೊಡಲಾಗಿದೆ—

ಮೊದಲು ಧಾರ್ಮಿಕ ದೃಷ್ಟಿಯಲ್ಲಿ ವಿಚಾರ ಮಾಡುತ್ತಾ ನೋಡಿದಲ್ಲಿ ಬೌದ್ಧ ಧರ್ಮವು ಕರ್ನಾಟಕದಲ್ಲಿ ಪಸರಿಸಿದ್ದಿತೆಂದು ಬಲವತ್ತರವಾದ ಪ್ರಮಾಣಗಳಿಂದ ಕಂಡುಬರುವದು. ಅಶೋಕನ ಶಿಲಾ ಶಾಸನಗಳು ಬನವಾಸಿ ಮೈಸೂರು ಸಂಸ್ಥಾನ ಚಿತ್ರದುರ್ಗದ ಶಿದ್ಧಾಪುರಿ ಬ್ರಹ್ಮಗಿರಿ ಕೊಪ್ಪಳದ ಗವಿಮಠದಲ್ಲಿ ರಾಯಚೂರ ಜಿಲ್ಹಾ ಮಸಿಗಿಯಲ್ಲಿ ಸಹ ಉಪಲಬ್ಧವಿದ್ದು ಇಲ್ಲಿಯ ಅನೇಕ ರಾಜರು ಬೌದ್ಧ ಧರ್ಮವನ್ನು ಸ್ವೀಕರಿಸಿದ್ದರೆಂದು ಕಂಡುಬರುತ್ತಿರುವುದು. ಕರ್ನಾಟಕದವರು ಬೌದ್ಧ ಧರ್ಮಕ್ಕೆ ಆಶ್ರಯ ಕೊಟ್ಟದ್ದರಿಂದ ಅವರ ಶಿಲಾ ಶಾಸನಗಳು ಕರ್ನಾಟಕದಲ್ಲಿ ಹೇರಳವಾಗಿ ಸಿಗುತ್ತಿರುವುವು.

ಜೈನ ಮತ:— ಭದ್ರಬಾಹು ಮುನಿಗಳು ಶ್ರವಣ ಬೆಳಗೊಳಕ್ಕೆ ಬಂದು ಮತ ಪ್ರಚಾರಮಾಡಿದರು. ಈಗ ಅಖಿಲ ಭಾರತ ಜೈನರ ಯಾತ್ರಾ ಕ್ಷೇತ್ರವಾಗಿದೆ. ಗಂಗರಸರು, ರಟ್ಟರಸರು ಜೈನ ಧರ್ಮ ಸ್ವೀಕಾರ ಮಾಡಿದರು. ಅಲ್ಲಿಂದ ಕರ್ನಾಟಕದಲ್ಲಿ ಜೈನ ಮತವು ದಿನೇದಿನೇ ಬೆಳೆಯಿತು. ಗೋಮಟೇಶ್ವರ ಶಿಲಾ ವಿಗ್ರಹವನ್ನು ೭೦ ತೀರ್ಥಂಕರರ ಮೂರ್ತಿಯನ್ನು ಸುಂದರವಾಗಿ ಪ್ರಮಾಣ ಬದ್ಧವಾಗಿ ಕಟ್ಟಿಸಿದರು. ಅಖಿಲ ಭಾರತ ದಿಗಂಬರ ಶ್ವೇತಾಂಬರರು ಕರ್ನಾಟಕವನ್ನು ಎಂದಿಗೂ ಮರೆಯುವಂತಿಲ್ಲ. ಮೂಡಬಿದಿರೆ ಕಾರ್ಕಳದಲ್ಲಿ ಜೈನರ ಬಸ್ತಿಗಳನ್ನು ಗೋಮಟೇಶ್ವರನನ್ನು ಸ್ಥಾಪನೆ ಮಾಡಿದರು.

ಇಮ್ಮಡಿಪುಲಿಕೇಶಿಯು ಬೌದ್ಧ ವಿಹಾರಗಳನ್ನು ಚೈತ್ಯಾಲಯವನ್ನು ಸಹಾ ಕಟ್ಟಿಸಿ ಅವರಿಗೆ ಸರ್ವತೋಮುಖವಾಗಿ ಸಹಾಯ ಮಾಡಿರುವುದರಿಂದ ಬೌದ್ಧರೂ ಸಹ ಕರ್ನಾಟಕವನ್ನು ಮರೆಯುವಂತಿಲ್ಲ.

ಅದ್ವೈತ ಮತಸ್ಥಾಪಕರಾದ ಶ್ರೀ. ಶಂಕರಾಚಾರ್ಯರು ಕೇರಳ ದೇಶದವರಾದರೂ ಕರ್ನಾಟಕಕ್ಕೆ ಬಂದು ಶೃಂಗೇರಿಯಲ್ಲಿ ತಮ್ಮ ಮಠವನ್ನು ಸ್ಥಾಪಿಸಿ ತಮ್ಮ ತತ್ವವನ್ನು ಪ್ರಚಾರ ಮಾಡಿದರು.

ವಿಶಿಷ್ಟಾ ಅದ್ವೈತ ಮತ:— ಶ್ರೀ. ರಾಮಾನುಜಾಚಾರ್ಯರು ತಮಿಳು ದೇಶದವರಾದಾಗ್ಯೂ ಅಲ್ಲಿಯ ಚೋಳ ಭೂಪಾಲರು ಮಹಾ ಶೈವರಾದ್ದರಿಂದ ಅಲ್ಲಿ ವೈಷ್ಣವ ಮತ ಪ್ರಸಾರಕ್ಕೆ ಅವಕಾಶವಾಗದೆ ಹೋಗಲು ಅವರು ಸಹ ಕರ್ನಾಟಕಕ್ಕೆ ಬಂದು ತಮ್ಮ ಸಿದ್ಧಾಂತವನ್ನು ಸ್ಥಾಪಿಸಿದರು.

ಶಕ್ತಿವಿಶಿಷ್ಟಾದ್ವೈತ ಮತ:— ಶ್ರೀ. ಬಸವಣ್ಣನವರು ಕರ್ನಾಟಕದಲ್ಲಿಯೇ ಅವತರಿಸಿದರು. ಬುದ್ಧದೇವನ ತರುವಾಯ ಹಿಂದುಸ್ಥಾನದಲ್ಲಿ ಲೋಕೋತ್ತರ ಗುಣವುಳ್ಳ ಧರ್ಮ ಸುಧಾರಕರೆಂದರೆ ಶ್ರೀ. ಬಸವಣ್ಣನವರು. ದಯಾನಂದ ಸರಸ್ವತಿಗಳು ಇವರನ್ನೇ ಅನುಸರಿಸಿರಬೇಕು. ವಿಶಾಲ ದೃಷ್ಟಿಯ ಉದಾರತನ ಲೋಕೋತ್ತರ ಸದ್ಗುಣಗಳುಳ್ಳ ಮತಾಚಾರ್ಯರು ಬಸವಣ್ಣನವರು. ಉತ್ತರ ಹಿಂದುಸ್ಥಾನದಲ್ಲಿ ಬಸವಣ್ಣನವರ ಚರಿತ್ರೆ ಗೊತ್ತಾಗಿದ್ದವರು ಬಸವಣ್ಣನವರಂತಹ ಸಮಾಜ ಸುಧಾರಕರು ಯಾರೂ ಇಲ್ಲವೆಂದು ಹೇಳುತ್ತಿರುವರು.

ದ್ವೈತ ಮತ:— ಬಸವಣ್ಣನವರ ತರುವಾಯ ೩೩ ವರ್ಷಕ್ಕೆ ಶ್ರೀ. ಮಧ್ವಾಚಾರ್ಯರು ಕರ್ನಾಟಕದಲ್ಲಿಯೇ ಅವತರಿಸಿದರು. ಮಾಧ್ವರ ಮತ್ತು ವೀರಶೈವರ ಮಾತೃ ಭಾಷೆಯು ಎಲ್ಲಿಯೇ ಇರಲಿ ಕನ್ನಡವಾಗಿದೆ. ಒಟ್ಟಿನಲ್ಲಿ ಕರ್ನಾಟಕವು ಇಡೀ ಹಿಂದುಸ್ಥಾನಕ್ಕೆ ಗುರುಸ್ಥಾನವಾಗಿದೆ.

ಮೀನಾಕ್ಷಿ ಮತ್ತು ಮಹಾದೇವ.

ಲಂಡನದಲ್ಲಿಯ "ಜನಪದ ರಥಾಸಮಿತಿ." ಎಂಬ ಸಂಸ್ಥೆಯ ಮುಂದೆ ಲೇಡಿ ರಸೆಲ್ ಎಂಬ ಒಬ್ಬ ಇಂಗ್ಲೀಷ ಸ್ತ್ರೀಯು ದಕ್ಷಿಣ ಹಿಂದುಸ್ಥಾನದಲ್ಲಿರುವ "ಮೀನಾಕ್ಷಿಪಂಥ" ಎಂಬ ವಿಷಯದ ಬಗ್ಗೆ ಒಂದು ನಿಬಂಧವನ್ನು ಓದಿದಳು. ಅದರ ಸಾರಾಂಶವು ಈ ಪ್ರಕಾರವಾಗಿದೆ—

ಹಿಂದು ಧರ್ಮವು ಎಲ್ಲ ಪಂಥಗಳನ್ನು ಆತ್ಮಸಾತ್ ಮಾಡಿಕೊಳ್ಳುವದರಲ್ಲಿ ಯಶಸ್ವಿಯಾಗಿದೆ. ಪಶು, ಪಕ್ಷಿಗಳ ಪೂಜೆಯಾಗಲಿ, ನಿಸರ್ಗದ ಪೂಜೆಯಾಗಲಿ ಹಿಂದು ಧರ್ಮವು ಅವುಗಳನ್ನು ತನ್ನಂತೆ ಮಾಡಿದೆ. ದಕ್ಷಿಣ ಹಿಂದುಸ್ಥಾನದಲ್ಲಿ ಮೀನಾಕ್ಷಿ ದೇವಾಲಯವೆಂಬ ಪ್ರಚಂಡ ದೇವತಾ ಮಂದಿರವಿದೆ. ಇದು ಪ್ರಾಚೀನ ಕಾಲದಲ್ಲಿ ಅಂದರೆ ಆರ್ಯರು ಈ ದೇಶಕ್ಕೆ ಬರುವದಕ್ಕಿಂತಲೂ ಪೂರ್ವದಲ್ಲಿ ಅನಾರ್ಯ ಜನರ ದೇವತೆಯಾಗಿದ್ದಿತು. ಇದು ರಾಕ್ಷಸೀ ದೇವತೆಯೆಂದು ಪಾಂಡ್ಯ ರಾಜನೊಬ್ಬನು ಇದನ್ನು ಕೀಳಿಸಲು ದೇವತೆಯು ದುರ್ಗಾ ದೇವಿಯ ಅವತಾರ ತೊಟ್ಟು ಆ ರಾಜನನ್ನು ಕೊಂದುಹಾಕಿದಳೆಂದು ಅಲ್ಲಿಯ ಜನರು ಹೇಳುತ್ತಾರೆ. ಅಂದರೆ ಆ ಅನಾರ್ಯ ದೇವತೆಯನ್ನೇ ಆರ್ಯರು ದುರ್ಗಾದೇವಿಯನ್ನಾಗಿ ಮಾಡಿಕೊಂಡು ಅವಳನ್ನು ಸುಂದರೇಶ್ವರನೆಂಬ ಮಹಾದೇವನ ಮೂರ್ತಿಗೆ ಲಗ್ನ ಮಾಡಿದರು. ಅನಾರ್ಯರ ಈ ದೇವತಾ ಪೂಜೆಯನ್ನು ನಷ್ಟ ಮಾಡುವದು ಶಕ್ಯವಿಲ್ಲವೆಂದೇ ಆರ್ಯರು ಆ ದೇವತೆಯನ್ನು ತಮ್ಮ ದೇವತಾಗಣದಲ್ಲಿ ಸೇರಿಸಿಕೊಂಡು ತಮ್ಮದೊಂದು ದೇವತೆಗೆ ಲಗ್ನವನ್ನೂ ಮಾಡಿಕೊಟ್ಟರು. ಇದೇ ಈ ಕಥೆಯ ರಹಸ್ಯ.

ಈಗ ಮೀನಾಕ್ಷಿ ಮಂದಿರದಲ್ಲಿ ಮೀನಾಕ್ಷಿ ಮತ್ತು ಮಹಾದೇವನ ಗರ್ಭ ಗುಡಿಗಳು ಹೊಂದಿಯೇ ಇದ್ದರೂ ಮೀನಾಕ್ಷಿ ದೇವತೆಗೇನೇ ಪ್ರಾಮುಖ್ಯತೆ ಇದೆ. ತಿಂಗಳಲ್ಲಿ ಹತ್ತು ದಿವಸ ಆ ದೇವಿಯ ಪೂಜೆಯು ಸ್ವತಂತ್ರವಾಗಿ ಆಗುತ್ತದೆ.

ವಿವಿಧ ಜನಾಂಗಗಳನ್ನು ಅವುಗಳ ವೈಶಿಷ್ಟ್ಯವನ್ನು ನಾಶಪಡಿಸದೆ ತನ್ನೊಳಗೆ ಸೇರಿಸಿಕೊಳ್ಳುವ ಈ ಪದ್ಧತಿಯು ಹಿಂದು ಧರ್ಮದಲ್ಲಿ ಅಪೂರ್ವವಾದುದೆಂದು ಹೇಳಬಹುದು.

—ರುಮುಜು ಜೀವರಾಜ ಎಂಬ ೧೫ ವರ್ಷದ ತರುಣಿಯು ಒಬ್ಬಳೇ ಜಿ. ಐ. ಪಿ. ರೇಲ್ವೆ ಡಬ್ಬಿಯೊಳಗೆ ಕುಳಿತಿರುವಾಗ ರೇಲ್ವೆ ಗಾರ್ಡ ಮಹಮ್ಮದ ಅನ್ವರೂಲ ಹಸನ ಕಾಝಿ ಎಂಬವನು ಅವಳ ಡಬ್ಬಿಯಲ್ಲಿ ಹೊಕ್ಕು ಒಂದು ರೂಪಾಯಿ ಕೊಡಲು ಪ್ರಯತ್ನಿಸಿದನು. ಹಾಗೂ ತನ್ನ ಡಬ್ಬಿಗೆ ಬಾರೆಂದು ಅವಳನ್ನು ಎಳೆಯಲು ಅವಳು ಬಿದ್ದು ಮೂಗು ಒಡೆದುಕೊಂಡಳು. ಗಾರ್ಡನ ವಿಚಾರಣೆಯು ಕಲ್ಯಾಣ ಕೋರ್ಟಿನಲ್ಲಿ ನಡೆದದೆ.

೫೦೦ ರೂಪಾಯಿ ಕ್ಲೇಮು ಸಿಕ್ಕಿತು!

ದಿ

ಸ್ವ ರಾ ಜ್ಯ

ಬ್ಯಾಂಕಿಂಗ ಮತ್ತು ಇನ್ಶ್ಯುರನ್ಸ ಕಂಪನಿ, ಲಿಮಿಟೆಡ್, ಧಾರವಾಡ

ಇದರ ಮ್ಯಾನೇಜಿಂಗ ಏಜಂಟ್ಸರಿಗೆ.—

ಚಿತ್ರಕಲ್‌ದುರ್ಗ ಡಿಸ್ಟ್ರಿಕ್ಟ ಹರಿಹರದಲ್ಲಿರುವ

ಎಚ್. ಶಾಮಶಾಸ್ತ್ರಿಯು ಮಾಡುವ ವಿನಂತಿಗಳು

ನಾನು ತಮ್ಮ ಕಂಪನಿಯಲ್ಲಿ ೧೯೩೪ ನೇ ಇಸ್ವಿ ಫೆಬ್ರುವರಿ ತಿಂಗಳಲ್ಲಿ ಜನನ ವಿಮೆ ಮಾಡಿ ಪಾಲಿಸಿ ಪಡೆದು ಇದ್ದು ಒಂದು ವರುಷವಾದನಂತರ, ನನಗೆ ಒಂದು ಮಗು ಜನನವಾಯಿತು. ಈ ಬಗ್ಗೆ ನಾನು ಕಂಪನಿಗೆ ಇದುವರೆಗೆ ಪಾವತಿ ಮಾಡಿರುವದು ೧೯ ರೂಪಾಯಿಗಳು ಮಾತ್ರ. ತಮ್ಮ ಕಂಪನಿ ರೂಲ್ಸಪ್ರಕಾರ ಠರಾವು ಆಗಿರತಕ್ಕ ಮೊಬಲಗು ಈ ದಿವಸ ಕಂಪನಿಯಿಂದ ನನಗೆ (೫೦೦) ಐದುನೂರು ರೂಪಾಯಿಗಳು ಪಾವತಿ ಆಗಿರುತ್ತವೆ. ನಾನು ಪಾವತಿ ಮಾಡಿರುವ ಅಲ್ಪ ಮೊಬಲಗಿಗೆ ಪ್ರತಿಫಲವಾಗಿ ಬಂದಿರುವದನ್ನು ನೋಡಿ ನನಗೆ ಬಹು ಆನಂದವಾಗಿರುತ್ತದೆ. ಇದಕ್ಕಾಗಿ ತಾವು ಕರ್ನಾಟಕದಲ್ಲಿ ಹೊಸದಾಗಿ ಮಾಡಿರುವ ಏರ್ಪಾಡು ಕೇವಲ ಶ್ಲಾಘನೀಯವಾಗಿರುವದಲ್ಲದೆ ಬಡವರಿಗೆ ಕಲ್ಪವೃಕ್ಷವೇ ಆಗಿರುತ್ತದೆಂಬುವದಕ್ಕೆ ಸಂಶಯವಿಲ್ಲ. ನನ್ನಂತೆ ನಮ್ಮ ದೇಶಬಂಧುಗಳು ಎಲ್ಲರೂ ಈ ಕಂಪನಿಗೆ ಪಾಲಿಸಿದಾರರಾಗಿ ಸೇರಿ ಸಂಪೂರ್ಣ ಪ್ರಯೋಜನ ಹೊಂದುತ್ತಾರಾಗಿಯೂ ಈ ಕಂಪನಿಯು ನಮ್ಮ ಕರ್ನಾಟಕದಲ್ಲಿ ತುಂಬಾ ಅಭಿವೃದ್ಧಿಯನ್ನು ಹೊಂದಿ ದೇಶ ಸೇವೆಯನ್ನು ಚಿರಕಾಲ ಮಾಡಿಕೊಂಡಿರಲೆಂದು ನನ್ನ ಅಂತಃಕರಣ ಪೂರ್ವಕವಾದ ಕೋರಿಕೆ.

ಹರಿಹರ
ತಾ. ೫-೬-೩೫

(ಸಹಿ) **ಎಚ್. ಶಾಮಶಾಸ್ತ್ರಿ.**

ಹರ್ಡೇಕರ ಮಂಜಪ್ಪನವರು ಬರೆದ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಕಾಯಕವೆ ಕೈಲಾಸ	೦-೩-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ವಿಜಯವಾಣಿ	೦-೨-೦
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಅಜಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.**

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! **ಉತ್ತಮ ಸೌಕರ್ಯ!** **ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೆಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ ಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೪-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ.

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಜಯಕರ್ನಾಟಕ

ಕರ್ನಾಟಕದ ಪ್ರಮುಖ ಮಾಸಪತ್ರಿಕೆ.

ವಾರ್ಷಿಕ ಚಂದಾ ೫-೮-೦

ನಾಟ್ಯಾಂಕ

ವಿವಿಧಚಿತ್ರ! ಸರಸನಾಟಕ ಕಥೆ! ವಿದ್ವತ್‌ಪ್ರಚುರ ಲೇಖಗಳಿವೆ!

ತ್ವರೆಮಾಡಿರಿ—ಬೆಲೆ ೧ ರೂ.—ತೀರುತ್ತಿವೆ.

ಜಯಕರ್ನಾಟಕ ಗ್ರಂಥಮಾಲೆ

ವರ್ಷಕ್ಕೆ ೬ ಪುಷ್ಪ] ವಾ. ಚಂ. ೩-೪-೦ [ಮೇಲೊಂದು ಉಚಿತಪುಷ್ಪ

ಜ. ಕ. ಚಂದಾದಾರರಿಗೆ ೩ ರೂ.

ಮೂರನೆಯ ವರ್ಷದ ನಾಲ್ಕನೆಯ ಪುಷ್ಪವಾದ

ಶ್ರೀ. ಹ. ಪಿ. ಜೋಶಿಯವರ

ಇದೀಗ ಹೊರಟಿದೆ] **ರಾಜವಲ್ಲಭ** [ಬೆಲೆ ಹತ್ತು ಆಣೆ.

ಕೀಚಕ ವಧೆ ಕಥೆಯನ್ನು ಆಧರಿಸಿ ಬರೆದ ಹೊಸ ಸಂಗೀತ ನಾಟಕ. ಉಚಿತ ಸಂಭಾಷಣೆ, ಮಿತವಿನೋದ, ಸುರಮ್ಯ ಪದ್ಯ ಮಾಲಿಕೆ.

ಜಯಕರ್ನಾಟಕ ಕಾರ್ಯಾಲಯ ಧಾರವಾಡ.

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸನ್ನೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದವುಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B. ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

ಜಿ. ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ, ತುಮುಕೂರು
(ಮೈಸೂರು ಸ್ಟೇಟ್)

ವೀರಶೈವರ

ಹೊಸ ಮುದ್ರಣಾಲಯ! ಮುದ್ದಾದ ಮುದ್ರಣ!!

ನಿಜಾಮ ಕರ್ನಾಟಕ ಮಹಾಜನಗಳ
ಅನುಕೂಲಕ್ಕಾಗಿ
ಹೊಸದಾಗಿ ಪ್ರಾರಂಭಿಸಲ್ಪಟ್ಟ

ಕಲ್ಯಾಣ ಕರ್ನಾಟಕ
ಪ್ರಿಂಟಿಂಗ್ ಪ್ರೆಸ್, ಗುಲಬರ್ಗಾ.

ಕಳೆದ ಜಾನೇವಾರಿ ತಿಂಗಳಿನಲ್ಲಿಯೇ ಕಲ್ಲಬುರ್ಗಿಯಲ್ಲಿ ಮೇಲಿನ ಹೆಸರಿನ ಒಂದು ಮುದ್ರಣಾಲಯವು ಹೊಸದಾಗಿ ಪ್ರಾರಂಭಿಸಲ್ಪಟ್ಟದೆ. ಕನ್ನಡ, ಇಂಗ್ಲೀಷ, ಉರ್ದು ಮತ್ತು ಮರಾಠಿ ಭಾಷೆಗಳಲ್ಲಿ

ಕಾರ್ಡು, ಪಾಕೀಟು, ಹುಂಡೀ ಬುಕ್, ಪ್ರಾಮಿಸರೀ ನೋಟಬುಕ್, ಚಿಟ್ಟಿ ಬುಕ್, ಲೆಟರ್ ಹೆಡ್, ಪೇಟ ಭಾವ, ವ್ಹಿಜಿಟಿಂಗ್ ಕಾರ್ಡ್ಸ; ಲಗ್ನ ಮೊದಲಾದ ಶುಭಕಾರ್ಯಗಳ ಪತ್ರಿಕೆ; ಜಾತ್ರೆಯ ಪತ್ರಿಕೆ; ನಾಟಕದ ಹ್ಯಾಂಡ್‌ಬಿಲ್ ಮತ್ತು ವ್ಯಾಪಾರಿಗಳಿಗೂ; ಇತರರಿಗೂ ಉಪಯೋಗಬೀಳುವ ಇತರ

ಯಾವ

ಮುದ್ರಣ ಕೆಲಸಗಳನ್ನಾದರೂ ಸಕಾಲಕ್ಕೆ ಉತ್ತಮವಾಗಿಯೂ, ಮನೋಹರವಾಗಿಯೂ ಯೋಗ್ಯ ಬೆಲೆಯಿಂದ ಮಾಡಿಕೊಡುವೆವು. ನಮ್ಮಲ್ಲಿ ಎಲ್ಲ ಜಾತಿ ಮತ ಪಂಥದವರಿಗೆ ಉಪಯೋಗಬೀಳುವ ಪಡಿಯಚ್ಚು (ಬ್ಲಾಕು) ಗಳೂ ಇವೆ.

ಕನ್ನಡ ಮರಾಠಿ ಭಾಷೆಗಳಲ್ಲಿ ಪುಸ್ತಕಗಳನ್ನು ಕೂಡಾ ಮುದ್ರಿಸಿಕೊಡುವೆವು.

ಪರಸ್ಥಳದವರು ಟಪಾಲ ಮೂಲಕ ತಮಗೆ ಬೇಕಾದ ಯಾವದೇ ಕೆಲಸಗಳನ್ನು ಮಾಡಿಸಿ ತರಿಸಿಕೊಳ್ಳಬಹುದು.

ನೂತನವಾಗಿ ಪ್ರಾರಂಭವಾದ ಈ ಕಾರ್ಯಕ್ಕೆ
ನಿಜಾಮ ಕರ್ನಾಟಕಸ್ಥರು ಹೆಚ್ಚಾಗಿ ವೀರಶೈವರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಬಾಲಕರಾದಿಯಾಗಿ ಸಕಲರಿಗೂ ಬಹು ಉಪಯುಕ್ತವಾದ ಧಾರ್ಮಿಕ, ಸಾಮಾಜಿಕ, ನೈತಿಕ ಮೊದಲಾದ ವಿಷಯಗಳ ಒಳ್ಳೆಯ ಕನ್ನಡ ಪುಸ್ತಕಗಳೂ ನಮ್ಮಲ್ಲಿ ವಿಕ್ರಯಕ್ಕೆ ದೊರೆಯುತ್ತವೆ.

ಎಸ್. ಸಿ. ಶಿವಲಿಂಗಣ್ಣ
ಮ್ಯಾನೇಜರ್
ಕಲ್ಯಾಣ ಕರ್ನಾಟಕ ಪ್ರೆಸ್, ಗುಲಬರ್ಗಾ.

ಪ್ಲೇಗ ಸಂಜೀವಿನಿ.

ಅತ್ಯಾಶ್ಚರ್ಯಕರವಾದ ಗುಣ! **ಕೇವಲ ೬ ತಾಸುಗಳಲ್ಲಿಯೇ ಗುಣ!**

ಇದನ್ನುಸೇವನೆ ಮಾಡುವದರಿಂದ ಪ್ಲೇಗಿನ ಭಯವೇ ಇಲ್ಲ!

೧೦೦ ಕ್ಕೆ ೧೦೦ ರಂತೆ ಗುಣ!!

ಶ್ರೀ ಮನ್ನಿರಂಜನ ಶಾಂತವೀರ ಸ್ವಾಮಿಗಳು ಗುರುಮಠಕಲ್ ಇವರು ಲೋಕ ಕಲ್ಯಾಣಾರ್ಥವಾಗಿ **ಪ್ಲೇಗ ಸಂಜೀವಿನಿ** ಎಂಬ ದಿವ್ಯ ಔಷಧಿಯನ್ನು ಶೋಧಮಾಡಿರುವರು. ಪ್ಲೇಗ ರೋಗವು ಎಷ್ಟು ಘಾತುಕವದೆಯೆಂಬುದನ್ನು ಹೇಳುವ ಅವಶ್ಯವಿಲ್ಲ. ಈ ಪ್ಲೇಗಿನಿಂದ ಸಾವಿರಾರು ಜನರು ಸಾಯುತ್ತಿರುತ್ತಾರೆ. ಇದನ್ನು ತಡೆಯುವದಕ್ಕಾಗಿ ಎಷ್ಟೋ ಔಷಧಗಳನ್ನು ತಯಾರ ಮಾಡಿರುವರು. ಅವುಗಳಿಂದೇನೂ ಗುಣವಾದದ್ದು ಕಂಡು ಬರುವದಿಲ್ಲ. ಈ ಪ್ಲೇಗ ಸಂಜೀವಿನಿಯಿಂದ **ಆರೇ ತಾಸು**ಗಳಲ್ಲಿಯೇ ಗುಣವಾಗುತ್ತದೆ. ಇದರ ಒಂದು ಬಾಟ್ಲಿಯ ಕಿಮ್ಮತ್ತು ೧ ರೂ. ೫ ಆಣೆ.

ವಿಶೇಷ ಮಾಹಿತಿಯನ್ನು ಅನುಪಾನ ಪತ್ರಿಕೆಯಲ್ಲಿ ನೋಡಿರಿ.

ವಿಶೇಷ ಸೂಚನೆ— ಅನುಪಾನ ಪತ್ರಿಕೆಯ ಸೂಚನೆಯ ಮೇರೆಗೆ ಔಷಧವನ್ನು ತೆಗೆದುಕೊಂಡಲ್ಲಿ ಖಾತ್ರಿಯಿಂದ ಗುಣವಾಗುವದು. ಎಲ್ಲ ಕಡೆಗೂ ಏಜಂಟರು ಬೇಕು.

ವಿಳಾಸ—

ಏಜಂಟ್
ಬಸೆಟ್ಟೆಪ್ಪ ಬಸಪ್ಪ ಹಲಕುರ್ಕಿ,
ಬಾಗಲಕೋಟೆ.

ಪ್ಲೇಗ ಸಂಜೀವಿನಿ ಆಫೀಸ್
ಗುಲಬಗಾರ್.

ಮಹಾರೋಗ ಸಂಜೀವಿನಿ.

ಶ್ರೀಮನ್ನಿರಂಜನ ಗುರುಮಠಕಲ್ಲ ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ

ಮಹಾರೋಗ ಸಂಜೀವಿನಿ,

ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.

ಇತ್ತೀಚಲಾಗಿ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ಮಿತಿಮೀರಿ ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. ಈ ಕೆಟ್ಟಬೇನೆಯು (ಪ್ಲೇಗ ಮಾರಿಕಾ,) ಖಜ್ಜಿಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ ತಗಲತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಸಿಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ಮೃತ್ಯುವಿನ ತುತ್ತಾಗುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಖಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ನಾರಸಂಹಾರಿ, ಕೂಸುಗಳ ಹೊಟ್ಟೆಯೊಳಗಿನ ಬೇನೆ** ವಗೈರೆ ರೋಗಗಳ ಮೇಲೆ ಆಶ್ಚರ್ಯಕಾರಕ ಔಷಧಿಗಳನ್ನು ಕಂಡು ಹಿಡಿದ ಸದರಿ ಪೂಜ್ಯಪಾದರೇ ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ ಔಷಧಿಯನ್ನು ಶೋಧಮಾಡಿ ಪ್ರಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೆಯುಳ್ಳವರು ಮುದ್ದಾಂ ಬಂದು ತಮ್ಮ ರೋಗ ಲಕ್ಷಣಗಳನ್ನೆಲ್ಲ ತೋರಿಸಿದರೆ ಆದಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ. ಮೊದಲು ಔಷಧದ ಅರ್ಧ ಕಿಮ್ಮತ್ತು ಕೊಟ್ಟು ಔಷಧ ತಕ್ಕೊಳ್ಳಲು ಪ್ರಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಅಗ್ಗಿ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳತಕ್ಕದ್ದು. ವಿಶೇಷ ಸಂಗತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು.

ಮ್ಯಾನೇಜರ ಆರೋಗ್ಯ ಮಂದಿರ, ಕಿಂಟಮಠ ಕಸಬಾ ಕ್ಯಾಂಪ **ಸೊಲ್ಲಾಪುರ ಸಿಟಿ.**

ಹೊಸ ವರುಷ ಬಂದಿತು ! **ಜಾಗ್ರತೆ ಚಂದಾದಾರರಾಗಿರಿ !!**

ಧಾರ್ಮಿಕ ಉಜ್ವಲ ಲೇಖನಗಳ ಪತ್ರಿಕೆ!

ಸಂಪಾದಕರು:— ಶ್ರೀ. ಹರ್ಡೇಕರ್ ಮಂಜಪ್ಪನವರು

ಶರಣ ಸಂದೇಶ.

ವಾರ್ಷಿಕ ಚಂದಾ:— ಮೂರು ರೂಪಾಯಿಗಳು ಮಾತ್ರ

ಹೊಸ ವರುಷದಿಂದ ಹೊಸ ಲೇಖನಗಳ ಏರ್ಪಾಟು.

(**ಹೊಸ ವರುಷ ಆಗಸ್ಟ ೧ನೇ ತಾರೀಖಿಗೆ ಪ್ರಾರಂಭ.**)

ಈಗಿನಂತೆಯೇ

ರಾಜಕೀಯ, ಸಾಂಪತ್ತಿಕ, ಮತ್ತು ವಿವಿಧವಿಷಯಗಳನ್ನು ಪ್ರಕಟಿಸುವುದಲ್ಲದೆ ಕೈ. ವೀರಬಸವಪ್ಪ ಶ್ರೇಷ್ಠಿಯವರು ಭಗವದ್ಗೀತೆಯಲ್ಲಿ ವೀರ ಶೈವ ತತ್ವಗಳನ್ನು ಸಂಶೋಧನಾತ್ಮಕ ದೃಷ್ಟಿಯಿಂದ ವಿವೇಚಿಸಿದ್ದರ ಕೆಲವು ಮಹತ್ವದ ವಿಚಾರಗಳು, ಕನ್ನಡ ಭಾಷೆಯಲ್ಲಿಯೇ ಇಲ್ಲದಿರುವ ವೇದಗಳ ಲ್ಲಿಯ ವಿವಿಧ ಸಂಗತಿಗಳು ಮತ್ತು ವೇದಗಳ ಸಂಬಂಧವಾದ ವಿದ್ವಾಂಸರ ವಿಚಾರ ಪರಿಪ್ಲುತ ಶ್ರೇಷ್ಠ ಲೇಖನಗಳು ಈ ಹೊಸ ವರುಷದಿಂದ ಪ್ರಕಟ ವಾಗುವವು.

ಮ್ಯಾನೇಜರ್— "ಶರಣ ಸಂದೇಶ"
ಪೋ. ಆಲಮಟ್ಟಿ ಜಿ. ವಿಜಾಪುರ

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯ ದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯ ಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿ ರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾ ಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕ.

ಪುಸ್ತಕದ ಬೆಲೆಗಿಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—
ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ್. ಮಹಾಗಾಂವ್, ಜಿ. ಗುಲಬರ್ಗಾ

ನಾರಿನ ಮೇಲೆ ರಾಮ ಬಾಣ ಔಷಧ.

'ಗಿನೋನಾಲ್'

ನಾರಿನಿಂದ ಬಳಲುವವರು ಈ ನಮ್ಮ ದಿವ್ಯ ಔಷಧವನ್ನು ಎರಡಾವರ್ತಿ ಉಪಯೋಗಿಸಿದರೆ ಖಂಡಿತ ಗುಣಬರುತ್ತದೆ ಒಮ್ಮೆ ಉಪಯೋಗಿಸಿ ಅನುಭವ ಪಡೆಯಿರಿ. ಒಂದು ಬಾಟ್ಲಿಯ ಕಿಂ. ೧ ರೂ. ಟಪಾಲವೆಚ್ಚ ಬೇರೆ. ಅನುಪಾನ ಪತ್ರಿಕೆ ಔಷಧದ ಜೊತೆಗೆ.

ಮ್ಯಾನೇಜರ—'ಗಿನೋನಾಲ್' ಡಿಪೋ
ಗುಲಬರ್ಗಾ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

REGISTERED No. B. 2891

ಶರಣ ಸಂದೇಶ

The
Sharana Sandesh.

ನ್ಯಾಯನಿಷ್ಠುರಿ! ದಾಕ್ಷಿಣ್ಯಪರನಲ್ಲ! ಲೋಕವಿರೋಧಿ! ಶರಣನಾರಿಗೂ ಅಂಜುವವನಲ್ಲ!
ಕೂಡಲಸಂಗಮದೇವರ ರಾಜತೇಜದಲ್ಲಿ ಪ್ಪನಾಗಿ ॥ ವ. ೨೨೮ ॥ ಮಹಾನುಭಾವಿ ಬಸವಣ್ಣನವರು.

SANGAM CLOTH STORES
Prop: M. S Hundekar & Sons,
P.O: TERDAL - 587 313
Dt. Bijapur, (Karnataka)

ಸಂಪಾದಕರು:-
ಶ್ರೀ. ಹುಂಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೪.	ಆಲಮಟ್ಟಿ- ಸೋಮವಾರ ತಾರೀಖು ೧೫ ನೆಯ ಜುಲೈ ೧೯೬೫.	ಸಂಚಿಕೆ ೪೫

ಜನಸೇವೆಯೇ — ದೇವರ ಸೇವೆ

ಶರಣ ಸಂದೇಶ ಪತ್ರಿಕೆಯ

ನಯಿ ವರುಷವು ಅಗಸ್ಟ ತಿಂಗಳ ೫ ನೆಯ ತಾರೀಖಿಗೆ
ಮುಗಿಯುತ್ತದೆ.

೫ ನೆಯ ವರುಷದ ಮೊದಲನೆಯ ಸಂಚಿಕೆ ಅಗಸ್ಟ ೧೯ ನೆಯ ತಾರೀಖಿಗೆ ಪ್ರಕಟವಾಗುತ್ತದೆ. ತಾರೀಖು ೧೨-೮-೬೫ ನೆಯ ದಿನ ಪದ್ಧತಿಯಂತೆ ಪತ್ರಿಕೆ ಪ್ರಕಟವಾಗುವುದಿಲ್ಲ.

ಈ ವರುಷದ ಚಂದಾದಾರರು ಮುಂದೆಯೂ ಚಂದಾದಾರರಾಗಿರುವರೆಂಬ ನಂಬಿಕೆಯಿಂದಲೇ ಮುಂದಿನ ವರುಷದ ಚಂದಾ ಹಣಕ್ಕಾಗಿ ಇದೇ ತಿಂಗಳ ಕೊನೆಯಲ್ಲಿ ಪತ್ರಿಕೆಯನ್ನು ವ್ಹಿ. ಪಿ. ಇಂದ ಕಳುಹಿಸಲಾಗುವುದು. ದಯವಿಟ್ಟು ವ್ಹಿ. ಪಿ. ಯನ್ನು ಸ್ವೀಕರಿಸಬೇಕಾಗಿ ಪ್ರಾರ್ಥನೆ-

ಇಷ್ಟವಿಲ್ಲದವರು ಜಾಗ್ರತೆ ದಯವಿಟ್ಟು ತಿಳಿಸೋಣಾಗಬೇಕು. ಅವರಿಗೆ ಮುಂದಣ ವರ್ಷದ ಚಂದಾ ಹಣಕ್ಕಾಗಿ ಪತ್ರಿಕೆಯನ್ನು ವ್ಹಿ. ಪಿ. ಮಾಡಲಾಗುವುದಿಲ್ಲ. ಈ ವರುಷದ ಇನ್ನು ಮೂರು ಸಂಚಿಕೆಗಳನ್ನೂ ಕಳಿಸಲಾಗುವುದು.

ಹೊಸದಾಗಿ ಚಂದಾದಾರರಾಗುವವರೂ ಜಾಗ್ರತೆ ತಿಳಿಸಬೇಕಾಗಿ

ಪ್ರಾರ್ಥನೆ-

ದೇಹವೇ — ದೇವಾಲಯ

ಕಳೆದುಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್ ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, **ಹುಬ್ಬಳ್ಳಿ.**
ಬ್ರ್ಯಾಂಚ್ ಆಫೀಸ್:-
ಅಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ್)

ಗಂಡಾಂತರಕ್ಕೊಳಗಾಗಬೇಡಿರಿ!

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು, ಕಳ್ಳರಿಂದ ಗಂಟೆಲ್ಲಾ ಹೋಗಿದೆ ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಿ ಕ ಮುರಿದರೆ ಪಾಪ ಆ ತಿಜೋರಿ ಏನ ಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಟ ಹತ್ತಿ ಸಿಕ್ಕ್ಯಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹಿಂಗಾತಪ್ಪಾ.

ರಾಮುಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳ ವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಯಾಗ ಒಟ್ಟು** ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನಿ ಸರಾಫರ ಅನಿ, ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ **ಹುಬ್ಬಳ್ಳಿ ಸಿದ್ಧೇಶ್ವರ ಕಂಪನಿಯ** ತಿಜೋರಿ ಕೊಂಡಾರೆ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋ... ... ನೀವು ರಾತ್ರಿ ಕಂಡಭಾವಿ ಹಗಲ ಬಿದ್ರ ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು ಸಾಕುಸಾಕು, ಇನ್ನು ಮುಂ ನಿಜವಾದ **ಸಿದ್ಧೇಶ್ವರ** ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ವರನು ಬೇಕು.

P. 18 ಹದಿನಾರು ವರ್ಷ ಪ್ರಾಯದ ಸುರೂಪಿಯೂ, ಗೃಹ ಕೃತ್ಯದಲ್ಲಿ ನಿಪುಣೆಯೂ, ಕನ್ನಡ ಓದುಬರಹ ಒಲ್ಲವಳೂ ಆದ ಗೌಡ ಸಾರಸ್ವತ ಬ್ರಾಹ್ಮಣ ಕನ್ಯಾ ವಧುವಿಗೆ ೨೨ ವರ್ಷಕ್ಕೆ ಮೀರದ ಸರಕಾರಿ ಉದ್ಯೋಗವಿರುವ ಸ್ವಸ್ಥಂದದ ವರನು ಬೇಕು.

ವಧುವು ಬೇಕು.

W. 17 ಸರಕಾರಿ ಕೆಲಸದಲ್ಲಿ ತಿಂಗಳಿಗೆ ೩೦ ರೂ ಸಂಬಳವಿರುವ ೩೫ ವರ್ಷ ಪ್ರಾಯದ ಆರೋಗ್ಯವಂತರಾದ ಓರ್ವ ಗೌಡ ಸಾರಸ್ವತ ಬ್ರಾಹ್ಮಣ ಯುವಕರಿಗೆ ೨೮ ವರ್ಷಕ್ಕೆ ಮೀರದ ಸುಂದರಿಯೂ, ಗೃಹಕೃತ್ಯಗಳನ್ನು ನಿರ್ವಹಿಸಬಲ್ಲವಳೂ ಆದ ವಿದ್ಯಾವಂತ ವಿಧವೆಯು ಬೇಕು.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ. ಎಸ್. ಶೈ
ಶಿವಪೇಟೆ ಪುತ್ತೂರು.ದ. ಕ.

ಅಂದವಾದ ಮುದ್ರಣ! **ಅಚ್ಚುಕಟ್ಟಾದ ಬೈಂಡು!**

ಸಂಕ್ಷಿಪ್ತ

ಮಹಾದೇವಿಯಕ್ಕನ ಜೀವನ ಚರಿತ್ರೆ.

ವಚನವಾಙ್ಮಯದಲ್ಲಿ ಉಚ್ಚಸ್ಥಾನವನ್ನು ಪಡೆದು ಪ್ರಸಿದ್ಧಿ ಪಡೆದ ಉಡುತಡಿಯ ಮಹಾದೇವಿಯಕ್ಕನ ಜೀವನ ಕಥೆ. ವಚನಗಳಿಂದ ಕೂಡಿ ಭಾವ ಪೂರ್ಣವಾಗಿ ಒರೆಯಲ್ಪಟ್ಟಿದೆ.

ಬೆಲೆ ಎರಡಾಣೆ ಮಾತ್ರ,

ಲೇಖಕರು:— **ಶ್ರೀಮಾನ್ ಟಿ. ಎಂ. ಮಹಾದೇವಯ್ಯನವರು**

ಪುಸ್ತಕ ದೊರೆಯುವ ವಿಳಾಸ— **ಶ್ರೀ ಸರ್ಪಭೂಷಣ ಮಠ ಬಳೇಪೇಟೆ.**

ಬೆಂಗಳೂರು ಸಿಟಿ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಜುಲೈ ತಾರೀಖು ೧೫ ನೆಯ ಸೋಮವಾರ | ಸಂಚಿಕೆ ೪೫.

ದುಃಖ ವಾರ್ತೆ

ಬೆಂಗಳೂರಿನ ಯಜಮಾನ ಅಂಡರ್ಸನ್ ಕಂಪನಿಯ ಪ್ರೊಪ್ರೈಟರರಾದ ಶ್ರೀ ಯಜಮಾನ ವೀರಭದ್ರಪ್ಪನವರ ಮಕ್ಕಳಾದ ವೈ. ಎಂ. ಮಲ್ಲಪ್ಪನವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕಳೆದ ಶುಕ್ರವಾರ ತಾ|| ೫-೭-೩೫ ನೆಯ ದಿವಸ ವಿಷಮಶೀತ ಜ್ವರದಿಂದ ಶಿವಾಧೀನರಾದರೆಂಬ ವಾರ್ತೆಯನ್ನು ಕೇಳಿ ವಿಷಾದಿಸುತ್ತೇವೆ. ಇವರು ಕೇವಲ ೨೩ ವರ್ಷ ವಯಸ್ಸಿನವರಿದ್ದು ಏಕಪುತ್ರ ವಿಷಯವಾದ್ದರಿಂದ ಅವರ ಕುಟುಂಬದವರೆಲ್ಲ ಶೋಕಸಾಗರದಲ್ಲಿ ಮುಳುಗಿದ್ದಾರೆ. ಇವರ ಆತ್ಮನು ಚಿರಶಾಂತಿಯನ್ನು ಹೊಂದಲಿ.

ಜಪಾನದಲ್ಲಿ ಭೂಕಂಪ.

ಜಪಾನದ ರಾಜಧಾನಿಯಾದ ಟೋಕಿಯೊ ಪಟ್ಟಣದಿಂದ ೧೦೦ ಮೈಲುಗಳ ಅಂತರದ ಮೇಲೆ ಭೂಕಂಪವಾಗಿ ಶಿಝು ಓಕಾ ಪಟ್ಟಣದಲ್ಲಿ ೪೭ ಮನೆಗಳು ಭೂಗತವಾದವು. ಬೆಂಕಿಯಿಂದಲೂ ಅನರ್ಥವುಂಟಾಗಿದೆ. ಭೂಕಂಪದಿಂದ ೨೪ ಜನರು ಸತ್ತರು. ೫೮ ಜನರು ಗಾಯಪಟ್ಟಿರುವರು.

—ಎರವಡಾ ವಿಮಾನಗೃಹದ ಹತ್ತಿರ ೧೦೦ ಅಡಿ ಎತ್ತರದ ಮೇಲಿಂದ ಒಂದು ವಿಮಾನವು ಕಳಚಿಬಿದ್ದದರಿಂದ ಇಬ್ಬರು ಗಾಯಪಟ್ಟು ಅತ್ಯವಸ್ಥ ಸ್ಥಿತಿಯಲ್ಲಿದ್ದಾರೆ.

ಶೋಚನೀಯ ನಿಧನಗಳು.

—ಬೆಳಗಾಂವ ಜಿಲ್ಲಾ ಕಿತ್ತೂರಿನ ಶ್ರೀ. ಮುತ್ತೂರು ಮಹಾಬಲೇಶ್ವರಪ್ಪನವರು ರಾಷ್ಟ್ರಕಾರ್ಯ ಧುರೀಣರೂ ಭಾಷಾಭಿಮಾನಿಗಳೂ ಆಗಿದ್ದರು. ಇವರು ಆ ಭಾಗದ ಎಲ್ಲ ಸಾರ್ವಜನಿಕ ಕಾರ್ಯಗಳ ಚಾಲಕರಾಗಿದ್ದರು. ಈ ಮಹನೀಯರು ಕಳೆದ ೧೦ ನೆಯ ತಾರೀಖಿನ ದಿನ ಶ್ವಾಸಕೋಶದ ರೋಗದಿಂದ ಶಿವಾಧೀನರಾದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ. ಈಗ ಇವರಿಗೆ ೭೦ ವರ್ಷಗಳಾಗಿದ್ದವು ಇವರ ಆತ್ಮಕ್ಕೆ ಶಾಂತಿಯುಂಟಾಗಲೆಂದು ಹಾರೈಸುತ್ತೇವೆ.

—ಕಲೆಕ್ಟರರ ಚಿಟಣೀಸ ಕೆಲಸವನ್ನು ಮತ್ತು ಮಾಮಲೇದಾರ ಕೆಲಸವನ್ನು ನಡೆಯಿಸಿ ಸೇವಾ ನಿವೃತ್ತರಾಗಿದ್ದ ಶ್ರೀ ಕರ್ಜಗಿ ಬಸವಪ್ಪನವರು ಧಾರವಾಡದಲ್ಲಿ ಮಧುಮೇಹದ ರೋಗದಿಂದ ಶಿವಾಧೀನರಾದರೆಂದು ತಿಳಿಸಲು ತುಂಬಾ ಖೇದವಾಗುತ್ತದೆ. ಇವರು ಸ್ತ್ರೀ ಶಿಕ್ಷಣಾಭಿಮಾನಿಗಳಾಗಿದ್ದರು. ತಮ್ಮ ಮಗಳಿಗೆ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣಳಾಗುವವರೆಗೆ ಶಿಕ್ಷಣ ಕೊಡಿಸಿದ್ದರು. ಇವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಹಾರೈಸುತ್ತೇವೆ.

ಲಾಹೋರದಲ್ಲಿ ಶಾಂತತೆ.

ಶೀಖ ಗುರುದ್ವಾರದಲ್ಲಿದ್ದ ಒಂದು ಮಸೀದೆಯನ್ನು ಶೀಖರು ಕೆಡವಿಹಾಕಿದ ಬಗ್ಗೆ ೨೦೦೦ ಜನ ಮುಸಲ್ಮಾನರು ಕೂಡಿ ಶೀಖ ಗುರುದ್ವಾರದ ಕಡೆಗೆ ಸಾಗಿದರು. ಸಾವಿರಾರು ಜನ ಶೀಖರೂ ನೂರಾರು ಜನ ಶೀಖ ಸ್ತ್ರೀಯರೂ ಆಯುಧಗಳನ್ನು ಧರಿಸಿ ತಮ್ಮ ಗುರುದ್ವಾರ ರಕ್ಷಣೆಗೆ ನಿಂತರು. ಅಲ್ಲಲ್ಲಿ ಒಂದೆರಡು ಕೊಲೆಯಾದರೂ ಕಡೆಗೆ ಶಾಂತತೆಯು ಪ್ರಸ್ಥಾಪಿಸಲ್ಪಟ್ಟಿದೆ. ಸರಕಾರದವರು ಲಾಹೋರದಲ್ಲಿ ಕರ್ಫ್ಯೂ ಆರ್ಡರ ವಿಧಿಸಿದ್ದರು. ಆದರೆ ಈಗ ಅದನ್ನೇ ಸ್ವಲ್ಪ ಸೌಮ್ಯ ಮಾಡಿ ರಾತ್ರಿ ೧೦ ಗಂಟೆಯಿಂದ ಬೆಳಗಿನ ೪ ಗಂಟೆಯ ವರೆಗೆ ಯಾರೂ ಮನೆ ಹೊರಗೆ ಬರಲಾಗದೆಂದು ವಿಧಿಸಲಾಗಿದೆ. ಈಗ ಸರ್ವ ವ್ಯವಹಾರಗಳು ಶಾಂತರೀತಿಯಿಂದ ನಡೆದಿವೆ.

ಬಸವಣ್ಣನವರ ವಚನಗಳ ಅನುವಾದ.

SAYINGS OF BASAVANNA.

(ಅನುವಾದಕರು— ಶ್ರೀ. ಎಂ. ವೆಂಕಟೇಶ ಅಯ್ಯಂಗಾರ್ಯರು ಎಮ್..ಎ.)

—:ಕಳೆದ ಸಂಚಿಕೆಯಿಂದ ಬಂದುದು:—

೫೫ ಎಳ್ಳಿಲ್ಲದ ಗಾಣವ ನಾಡಿದ ಎತ್ತಿನಂತಾಯಿತ್ತೆನ್ನ ಭಕ್ತಿ. ಉಪ್ಪು ಅಪ್ಪುವಿನಲ್ಲಿ ಅದ್ದಿ ಮೆಲದಂತಾಯಿತ್ತೆನ್ನ ಭಕ್ತಿ. ಕೂಡಲ ಸಂಗಮದೇವಾ ಆನು ಮಾಡಿದೆನೆಂಬ ಕಿಚ್ಚು ಸಾಲದೇ?

"My devotion has been like the labour of the bull going round the oil mill which had no oil seed in it, or like eating salt after washing it in water has it been; my God Kudala Sangama. Is not the pride that I did it suficient to burn the good?"

೫೬ ಮಾಡುವಾತ ನಾನಲ್ಲಯ್ಯಾ! ನೀಡುವಾತ ನಾನಲ್ಲಯ್ಯಾ! ಬೇಡುವಾತ ನಾನಲ್ಲಯ್ಯಾ! ನಿಮ್ಮ ಕಾರುಣ್ಯವಲ್ಲದೆ, ಎಲೇ ದೇವಾ! ಮನೆಯು ತೊತ್ತುಲಸಿದರೆ, ಒಡತಿ ಮಾಡಿಕೊಂಬಂತೆ, ನಿನಗೆ ನೀ ಮಾಡಿಕೋ ಕೂಡಲಸಂಗಮದೇವಾ.

"I am not the man who serves, nor am I the man who gives, nor is it I that beg. None of these, O God, except by your mercy. If the servant girl is indifferent, the mistress must do the work of the household herself. So you are serving in your own household, my God Kudala Sangama."

೫೭ ಎನ್ನಲ್ಲಿ ಭಕ್ತಿ ಸಾಸಿವೆಯ ಷಡ್ಭಾಗದಿನಿತಿಲ್ಲ. ಎನ್ನ ಭಕ್ತನೆಂಬರು. ಸಮಯಾಚಾರಿ ಎಂಬರು. ನಾನೇನ ಪಾಪವ ಮಾಡಿದೆನೋ? ಬೆಳೆಯದ ಮುನ್ನವೇ, ಕೊಯ್ವರೆ ಹೇಳಾ? ಇಂಬಿಯದ ವೀರ ಇಲ್ಲದ ಸೊಬಗುವ ಎಲ್ಲ ಒಡೆಯರು ಏರಿಸಿ ನುಡಿವರು. ಎನಗಿದು ವಿಧಿಯೇ ಕೂಡಲಸಂಗಮದೇವಾ?

"I have not a sixth part of a mustard seed of devotion; yet they call me a devotee! What sin is mine? Is it right to reap before the crop is grown? All the teachers praise me for a courage and a goodness that are not mine. Is this the discipline for me, Lord Kudala Sangama!"

೫೮ ಎನ್ನವರೊಲಿದು, ಹೊನ್ನಶೂಲದಲಿಕ್ಕಿದರೆನ್ನ ಹೊಗಳಿ ಹೊಗಳಿ. ಎನ್ನ ಹೊಗಳತೆ ಎನ್ನ ಮೈಗೊಂಡಿತಲ್ಲಾ! ಅಯ್ಯೋ ನಿಮ್ಮ ಮನ್ನಣೆಯೆ ಮಸೆದಲಗಾಗಿ ತಾಗಿತ್ತಯ್ಯಾ ಅಯ್ಯೋ! ನೊಂದೆನು, ಸೈರಿಸಲಾರೆನು. ಕೂಡಲಸಂಗಮದೇವಾ, ನೀನೆನಗೊಳ್ಳಿದನಾದರೆ, ಎನ್ನ ಹೊಗಳತೆಗಡ್ಡ ಬಾರಾ ಧರ್ಮೀ.

"My people who loved me praised me over and over and raised me to a golden cross. Their praise killed me. Friends, your regard was as a sharp dagger to me! Alas! I am hurt; I cannot bear it. O Lord Kudala Sangama, if you would be merciful, come between me and their praise, O Good One!"

೫೯ ಹಾಳು ಮೊರಡಿಗಳಲ್ಲಿ, ಊರ ದಾರಿಗಳಲ್ಲಿ, ಕೆರೆ ಬಾವಿ ಹೂಗಿಡ ಮರಂಗಳಲ್ಲಿ, ಗ್ರಾಮದ ಮಧ್ಯಗಳಲ್ಲಿ, ಚೌಪಥ ಪಟ್ಟಣ ಪ್ರದೇಶದಲ್ಲಿ, ಹಿರಿಯಾಲದ ಮರದಲ್ಲಿ, ಮನೆಯ ಮಾಡಿ ಕರ ವೆಮ್ಮೆಯ, ಹಸುಗೂಸು, ಬಸಿರೆ, ಬಾಣತಿ, ಕುಮಾರಿ, ಕೊಡ ಗೂಸೆಂಬವರ ಹಿಡಿದುಂಬ ತಿರಿದುಂಬ ಮಾರಯ್ಯ, ಬೀರಯ್ಯ, ಕೇತರಗಾವಿಲ, ಅಂತರ ಬೆಂತರ, ಕಾಳಯ್ಯ, ಮಾರಯ್ಯ, ಮಾಳಯ್ಯ, ಕೇತಯ್ಯಗಳೆಂಬ ನೂರು ಮಡಿಕೆಗೆ ನಮ್ಮ ಕೂಡಲಸಂಗಮ ದೇವ ಶರಣೆಂಬುದೊಂದು ದಡಿ ಸಾಲದೇ?

"To the Maraiya and Biraiya, the sky-wanderer and the village-trotter and Antara and Bentara and Kantara, and Maliy- who dwell in the barren hillocks and on the wayside, in the wells and tanks and in the flowering shrubs and trees, in the midst of the village and in the squares of towns and in the large banyan tree; and who want gifts of milch buffaloes and little calves; and who get hold of pregnant women and women in confinement, the young woman and the daughter-in-law; and beg and fill their bellies — to these hundred pots is not the one stick 'The Lord Kudala Sangama is our refuge' a sufficient answer?"

೬೦ ಬಿದಿರೆಲೆಯ ಮೆಲಿದರೆ, ಮೆಲಿದಂತಲ್ಲದೆ, ರಸವನು ಹಡೆಯಲು ಬಾರದು. ನೀರ ಕಡೆದರೆ, ಕಡೆದಂತಲ್ಲದೆ, ಬೆಣ್ಣೆಯ ಹಡೆಯಲು ಬಾರದು. ಮಳಲ ಹೊಸೆದರೆ ಹೊಸೆದಂತಲ್ಲದೆ, ಸರವೆಯ ಹಡೆಯಲು ಬಾರದು. ನಮ್ಮ ಕೂಡಲ ಸಂಗಮದೇವನಲ್ಲದೆ, ಅನ್ಯ ದೈವಕ್ಕೆರಗಿದರೆ, ಹೊಟ್ಟುಕುಟ್ಟಿ ಕೈ ಹೊಟ್ಟೆಯಾದಂತಾಯಿತ್ತಯ್ಯ.

"Chew the bamboo leaf; all you get is the chewing itself and no juice. Churn water; all you get is the churning and no butter. Spin sand; all you have done is to spin merely; you get no rope. Bend to gods other than God Kudala Sangama; you have merely hurt your hand by pounding much bran."

—(ಮುಂದುವರಿಯುವದು.)—

ಶ್ರೀ ರೇಣುಕರು ಮತ್ತು ಸಿದ್ಧಾಂತಶಿಖಾಮಣಿ.

ವೀರಶೈವರಲ್ಲಿಯ ಕೆಲವು ಪುರಾಣ ಮತವಾದಿಗಳು ಅರ್ಥಾತ್ ಸ್ವಾರ್ಥಿಗಳು ರೇಣುಕಾದಿ ಪಂಚಾಚಾರ್ಯರು ಪ್ರತಿಯೊಂದು ಯುಗದ ಆದಿಯಲ್ಲಿ ಅವತರಿಸಿ ವೀರಶೈವ ಮತವನ್ನು ಸ್ಥಾಪಿಸಿದರೆಂದು ಒಳ್ಳೇ ಆಧ್ಯತೆಯಿಂದ ಪ್ರತಿಪಾದಿಸುತ್ತಿರುವರಷ್ಟೆ. ಆದರೆ ಆದೇ ಪುರಾಣ ಮತವಾದಿಗಳು ಯಾವ ಗ್ರಂಥವನ್ನು ಸರ್ವಶ್ರೇಷ್ಠವಾದ ಪ್ರಮಾಣ ಗ್ರಂಥವೆಂದು ಒಮ್ಮನಸ್ಸಿನಿಂದ ಒಪ್ಪುತ್ತಾರೆಯೋ ಆ ಸಿದ್ಧಾಂತ ಶಿಖಾಮಣಿ ಗ್ರಂಥವು ರೇಣುಕಾದಿಗಳ ಅವತಾರ ವಿಷಯದಲ್ಲಿ ಯಾವ ಅಭಿಪ್ರಾಯವುಳ್ಳದ್ದಾಗಿರುವದೆಂಬುದನ್ನು ತಿಳಿದಾವರೂ ಅವರು ತಮ್ಮ ದುರಾಗ್ರಹವನ್ನು ಬಿಡಬಹುದೆಂದೂಹಿಸಿ, ವಾರದ ಅಪ್ಪಾಸಾಹೇಬರ ಉದಾರಾಶ್ರಯದಲ್ಲಿ ಪ್ರಕಟವಾದ ಸಿದ್ಧಾಂತಶಿಖಾಮಣಿಯಲ್ಲಿಯ ಅವತಾರದ ಅಭಿಪ್ರಾಯವನ್ನು ಸಂಕ್ಷಿಪ್ತ ರೀತಿಯಾಗಿ ಕೆಳಗೆ ಉದಾಹರಿಸಿದ್ದಾಗಿದೆ.

ಗ್ರಂಥಕರ್ತನು ಪ್ರಥಮ ಪರಿಚ್ಛೇದದಲ್ಲಿ ಇಷ್ಟದೇವತಾ ನಮಸ್ಕಾರವನ್ನೂ ತನ್ನ ವಂಶದ ವರ್ಣನೆಯನ್ನೂ ಹಾಗೂ ಗ್ರಂಥದ ಮಹತ್ವವನ್ನೂ ಹೇಳಿ ದ್ವಿತೀಯ ಪರಿಚ್ಛೇದದಲ್ಲಿ ಸೃಷ್ಟಿಯ ಉತ್ಪತ್ತಿಯ ಕಾರಣವನ್ನು ಹೇಳಲುಪಕ್ರಮಿಸಿ ಒಂದೇ ಒಂದಾದ ಶಿವರೂಪವಾದ ಬ್ರಹ್ಮಕ್ಕೆ ಜಗತ್ತನ್ನು ನಿರ್ಮಿಸುವ ಇಚ್ಛೆಯುಂಟಾಗಿ ಸಗುಣ ಸ್ವರೂಪವನ್ನು ಧಾರಣಮಾಡಿತು. ಅರ್ಧಚಂದ್ರಧಾರಿಯಾದ ತ್ರಿಲೋಚನನಾದ ಸಾಕಾರನಾದನು ಎಂದಿರುವನು.

ಶಂಕರನು ಪರಾಶಕ್ತಿಯೊಡಗೂಡಿ ಜಗತ್ತನ್ನು ಸೃಷ್ಟಿ ಮಾಡಲಿಕ್ಕೆ ಯೋಗ್ಯನಾದ ಬ್ರಹ್ಮನನ್ನು ಉತ್ಪನ್ನಮಾಡಿ ಆತನಿಗೆ ಜಗತ್ತನ್ನು ಸೃಷ್ಟಿಸುವ ಉಪಾಯವನ್ನು ಹೇಳಿದನು. ಆದರೂ ಬ್ರಹ್ಮನಿಗೆ ಸೃಷ್ಟಿಯನ್ನುಂಟುಮಾಡಲಿಕ್ಕೆ ಬಾರದ್ದರಿಂದ ಆತನು ಪರಮಾತ್ಮನನ್ನು ಕುರಿತು ಭೋ ದೇವಾ, ಮೊದಲು ನೀನು ಸೃಷ್ಟಿಯನ್ನು ಮಾಡಿ ತೋರಿಸು. ಆಮೇಲೆ ನಾನು ಮಾಡುವೆನೆಂದು ಪ್ರಾರ್ಥಿಸಿಕೊಂಡದ್ದರಿಂದ ಶಂಕರನು ಬ್ರಹ್ಮ ಪ್ರಾರ್ಥನೆಗನುಸರಿಸಿ "ತೇಷು ಪ್ರಮಥ ವರ್ಗೇಷು ಸೃಷ್ಟೇಷು ಪರಮಾತ್ಮನಾ। ರೇಣುಕೋದಾರುಕಶ್ಚೇತಿ ದ್ವಾವಭೂತಾಂ ಶಿವಪ್ರಿಯೌ॥ ಶ್ಲೋಕ ೨೭ ಎರಡನೇ ಪರಿಚ್ಛೇದ. "ತನ್ನ ಸಮಾನವಾಗಿಯೇ ಶಕ್ತಿಯುಳ್ಳಂಥಾ ಅನೇಕ ಪ್ರಮಥರನ್ನು ಸೃಷ್ಟಿಸಿ ಅವರಲ್ಲಿ ರೇಣುಕ ದಾರುಕ ಇವರೀರ್ವರನ್ನು ಮಾತ್ರ ವಿಶೇಷ ಪ್ರೀತಿಸಲಿಕ್ಕೆ ಹತ್ತಿದನು. ಮುಂದೆ ಐದು ಶ್ಲೋಕಗಳಿಂದ ಅವರ ಗುಣ ವರ್ಣನೆ ಮಾಡಿ "ಸಮರ್ಥೌ ಸರ್ವ ಕಾರ್ಯೇಷು ವಿಶ್ವಾಸ ಪರಮಾಶ್ರಿತೌ॥ ಅಂತಃಪುರ ದ್ವಾರಪಾಲೌ ನಿರ್ಮಮೆ ನಿಯತೌ ವಿಭುಃ॥ ಶ್ಲೋಕ ೩೩ ಎರಡನೇ ಪರಿಚ್ಛೇದ. "ಸರ್ವ ಕಾರ್ಯಗಳಲ್ಲಿ ಸಮರ್ಥರಾದಂಥಾ ಹಾಗೂ ವಿಶ್ವಾಸಕ್ಕೆ ಪಾತ್ರರಾದ ರೇಣುಕ ಮತ್ತು ದಾರುಕರನ್ನು ಪರಶಿವನು ತನ್ನ ಅಂತಃಪುರವನ್ನು (ಜನಾನ ಖಾನೆಯನ್ನು) ಕಾಯುಲಿಕ್ಕೆ ನೇಮಿಸಿದನು. ಅದರಂತೆ ಉಭಯರು ಆ ಸೇವೆಯನ್ನು ಮಾಡುವವರಾದರು. ಇಲ್ಲಿಗೆ ದ್ವಿತೀಯ ಪರಿಚ್ಛೇದವನ್ನು ಸಮಾಪ್ತ ಮಾಡಿದ್ದಾಗಿರುವದು.

ಗ್ರಂಥಕರ್ತನು ತೃತೀಯ ಪರಿಚ್ಛೇದದಲ್ಲಿ ಮೊದಲು ಕೈಲಾಸ ಪರ್ವತದ ವರ್ಣನೆ, ಆಮೇಲೆ ಶಿವ ಪಾರ್ವತಿಯರ ವರ್ಣನೆ, ಆ ನಂತರ ದೇವತಾಕೃತ ಶಿವ ಸೇವಾ ವರ್ಣನೆ, ಮತ್ತು ಪರಶಿವ ರಾಜ್ಯ ವ್ಯವಹಾರ ವರ್ಣನೆ ಈ ಮೊದಲಾದವುಗಳನ್ನು ಮಾಡಿದ ನಂತರ "ಸಭಾಂತರಗತಂ ತಂತ್ರಂ ರೇಣುಕಂ ಗಣನಾಯಕಂ॥ ಪ್ರಸಾದಂ ಸುಲಭಂ ಜ್ಞಾತುಂ ತಾಂಬೂಲಂ ಸ ತಮಾಹ್ವಯತ್॥ ಶ್ಲೋಕ ೬೬ ತೃತೀಯ ಪರಿಚ್ಛೇದ "ಪರಶಿವನು ಸಭೆಯಲ್ಲಿ ತಾಂಬೂಲವನ್ನು ಹಂಚುವದರಸಲುವಾಗಿ ರೇಣುಕನನ್ನು ಕರೆದನು. "ಶಂಭೋರಾಹ್ವಾನ ಸಂತೋಷ ಸಂಭ್ರಮೇಣೈವ ದಾರುಕಂ॥ ಉಲ್ಲಂಘ್ಯ ಪಾರ್ಶ್ವಮಗಮಲ್ಲೋಕನಾಥಸ್ಯ ರೇಣುಕಃ॥ ಶ್ಲೋಕ ೯೭ ತೃತಿಯಾ ಪರಿಚ್ಛೇದ. "ರೇಣುಕನು ಪರಮಾತ್ಮನು ತನಗೆ ಕೊಟ್ಟ ಅಧಿಕಾರದ ಸಂತೋಷ ಸಂಭ್ರಮದ ಗಡಿಬಿಡಿಯಲ್ಲಿ ದಾರಿಯಲ್ಲಿರುವ ಮಹಾ ಭಕ್ತನಾದ ದಾರುಕನನ್ನು ದಾಟಿ ಪರಶಿವನ ಹತ್ತಿರ ಹೋದನು. "ತಮಾಲೋಕ್ಯ ವಿಭುಸ್ತತ್ರ ಸಮುಲ್ಲಂಘಿತ ದಾರುಕಂ॥ ಮಾಹಾತ್ಮ್ಯಂ ನಿಜಭಕ್ತಾನಾಂ ದ್ಯೋತಯನ್ನಿದಮಬ್ರವೀತ್॥ ಶ್ಲೋಕ ೬೮ ತೃತೀಯ ಪರಿಚ್ಛೇದ. ಪರಶಿವನು ರೇಣುಕನು ದಾರುಕನನ್ನು ದಾಟಿದ್ದನ್ನು ನೋಡಿದಕೂಡಲೇ ತನ್ನ ಭಕ್ತನ ಆಧಿಕ್ಯವನ್ನು ಪ್ರಕಟ ಮಾಡುವದರಸಲುವಾಗಿ ಆ ಸಭೆಯಲ್ಲಿಯೇ ಶಿವನು ರೇಣುಕನಿಗೆ "ರೇರೇ ರೇಣುಕ ದುರ್ಬುದ್ಧೆ ಕಥಮೇಷ ತ್ವಯಾಧುನಾ॥ ಉಲ್ಲಂಘಿತಃ ಸಭಾಮಧ್ಯೆ ಮಮ ಭಕ್ತೋಹಿ ದಾರುಕಃ॥ ಶ್ಲೋಕ ೬೯ ತೃತೀಯ ಪರಿಚ್ಛೇದ. ಎಲೆ ಎಲೆ ದುಷ್ಟನಾದ ರೇಣುಕನೆ, ಸಭಾ ಮಧ್ಯದಲ್ಲಿಯೇ ಮಹಾ ಭಕ್ತನಾದ ದಾರುಕನನ್ನು ದಾಟಿದಿಯಲ್ಲವೆ? "ಲಂಘನಂ ಮಮ ಭಕ್ತಾನಾಂ ಪರಮಾನರ್ಥಕಾರಣಂ॥ ಆಯುಃ ಶ್ರಿಯಂ ಕುಲಂ ಕೀರ್ತಿಂ ನಿಹಂತಿಹಿ ಶರೀರಿಣಾಂ॥ ಶ್ಲೋಕ ೭೦ ತೃತೀಯ ಪರಿಚ್ಛೇದ. "ಇಗೋ ನನ್ನ ಭಕ್ತರ ಅಪಮಾನಮಾಡಿದ ಪ್ರಾಣಿಗಳ ಆಯುಷ್ಯ ಸಂಪತ್ತು, ಕುಲ, ಕೀರ್ತಿ ಮೊದಲಾದವುಗಳು ನಾಶವಾಗಿ ಹೋಗುತ್ತವೆ. ಎಂದು ಹೇಳಿ ಮುಂದೆ ಐದು ಶ್ಲೋಕಗಳಿಂದ ತನ್ನ ಭಕ್ತರಾದ ಮಾರ್ಕಂಡೇಯ, ಭೃಗು, ಶಂಕುಕರ್ಣ, ಧಧೀಚಿ, ದಕ್ಷಯಜ್ಞಕ್ಕೆ ಹೋದ ಗಣೇಶ್ವರ ಶ್ವೇತ, ಮೊದಲಾದವರ ಅಪಮಾನ ಮಾಡಿದ ಯಮ, ವಿಷ್ಣು, ದಕ್ಷ ಮೊದಲಾದವರಿಗೆ ಆದ ಭಯಂಕರ ಹಾನಿಯನ್ನು ಹೇಳಿ ನೀನು ಕೂಡಾ "ಅವಿಚಾರೇಣ ಮದ್ಭಕ್ತೊ ಲಂಘಿತೋ ದಾರುಕಸ್ತ್ವಯಾ॥ ಏಷ ತ್ವಂ ರೇಣುಕಾನೇನ ಜನ್ಮವಾನ್ಭವ ಭೂತಲೆ॥ ಶ್ಲೋಕ ೭೭ ತೃತೀಯ ಪರಿಚ್ಛೇದ. "ಅಜ್ಞಾನದಿಂದ ನನ್ನ ಭಕ್ತನಾದ ದಾರುಕನ್ನು ದಾಟಿದ ಪಾಪದಿಂದ ಭೂಲೋಕದಲ್ಲಿ ಜನ್ಮವನ್ನು ತಾಳು ಎಂದು ಪರಶಿವನು ಹೇಳಿದನು. ಇದನ್ನು ಕೇಳಿ ರೇಣುಕನು ಭೂಲೋಕದಲ್ಲಿ ಮಾನವ ಯೋನಿಯಲ್ಲಿ ಹುಟ್ಟಬರುವ ಕಷ್ಟವನ್ನು ತಿಳಿದು ಐದು ಶ್ಲೋಕಗಳಿಂದ ನಾನು ಮಾಡಿದ ಪಾಪಕ್ಕಾಗಿ ಭೂಲೋಕಕ್ಕೆ ಹೋಗಬೇಕಾದದ್ದೇನೋ ನಿಶ್ಚಯವೇ ಸರಿ. ಆದರೆ ಮಾನವ ಯೋನಿಯಲ್ಲಿ ಹುಟ್ಟುವದು ಬಹಳ ತ್ರಾಸದಾಯಕವಾದ್ದರಿಂದ ಅಲ್ಲಿ ಹುಟ್ಟುವದನ್ನು ಮಾತ್ರ ತಪ್ಪಿಸೆಂದು ಪರಶಿವನನ್ನು ಪ್ರಾರ್ಥಿಸಲು ಆಗ ಪರಶಿವನು "ಇತಿ ಸಂಪ್ರಾರ್ಥಿತೊ ದೇವೋ ರೇಣುಕೇನ ಮಹೇಶ್ವರಃ॥ ಮಾ ಭೈಷೀರ್ಮಮಭಕ್ತಾನಾಂ ಕುತೊ ಭೀತಿರಿಹಸ್ಥಿತಿ॥ ಶ್ಲೋಕ ೮೩ ತೃತೀಯ ಪರಿಚ್ಛೇದ." ಪ್ರಾರ್ಥನೆ ಮಾಡುವ ರೇಣುಕನನ್ನು ಕುರಿತು ನನ್ನನ್ನಾಶ್ರಯಿಸಿದ ಭಕ್ತರಿಗೆ ಭೀತಿ ಇರಲುಂಟೆ? ಪ್ರಯುಕ್ತ ನಿನ್ನ ಇಚ್ಛಾನುಸಾರವಾಗಿಯೇ ಭೂಮಿಯಲ್ಲಿ ಹುಟ್ಟುವಂತೆ ಮಾಡುವೆನು. ಎಂದು ಹೇಳಿ ಮುಂದೆ ಮೂರು ಶ್ಲೋಕಗಳಲ್ಲಿ ಶ್ರೀಶೈಲದ ಉತ್ತರದಲ್ಲಿರುವ ತೆಲಗು ದೇಶದಲ್ಲಿ ಕೊಲ್ಲಿಪಾಕಿ ಎಂಬ ದೊಡ್ಡ ಗ್ರಾಮವದೆ. ಅಲ್ಲಿಯ ಸೋಮೇಶ

ಲಿಂಗದಿಂದ ಉದ್ಭವನಾಗು. ಹಾಗು ಸರ್ವರಿಗೂ ಹಿತವಾಗುವ ವೇದ ವೇದಾಂತ ಸಮ್ಮತವಾದ ಅದ್ವೈತ ಶಾಸ್ತ್ರವನ್ನುಪದೇಶಿಸು; ನನ್ನ ಭಕ್ತರ ಮಹಿಮೆಯು ಭೂಮಿಯಲ್ಲಿ ಪ್ರಕಾಶಿಸುವಂತೆ ಮಾಡು. ಎಂದು ಹೇಳಿ ಪರಶಿವನು ಸಭೆಯನ್ನು ಪೂರೈಸಿ ಎಲ್ಲ ದೇವತೆಗಳನ್ನು ಕಳುಹಿಸಿಕೊಟ್ಟು ತಾನೂ ಪ್ರಮಥ ಗಣದೊಂದಿಗೆ ಅಂತಃಪುರವನ್ನು ಪ್ರವೇಶಿಸಿದನು. ಇಲ್ಲಿಗೆ ತೃತೀಯ ಪರಿಚ್ಛೇದ ಸಮಾಪ್ತ ಮಾಡಿದ್ದಾಗಿದೆ.

ಗ್ರಂಥಕರ್ತನು ಚತುರ್ಥ ಪರಿಚ್ಛೇದದಲ್ಲಿ ಸೋಮೇಶ್ವರ ಲಿಂಗದಿಂದ ಉದ್ಭವಿಸಿದ ರೇಣುಕನನ್ನು ಎಂಟು ಶ್ಲೋಕಗಳಿಂದ ವರ್ಣನೆ ಮಾಡಿದಮೇಲೆ ಲಿಂಗೋದ್ಭವನಾದ ರೇಣುಕನನ್ನು ನೋಡಿ ಜನರು ನಮಸ್ಕರಿಸಿ ನೀನು ಯಾರು? ಏಕೆ ಹೀಗೆ ಬಂದಿ? ಎಂದು ಪ್ರಶ್ನೆ ಮಾಡಿದವರಾದರು. ಅದಕ್ಕೆ ರೇಣುಕನು ನಾನು ಪರಮಾತ್ಮನ ಸೇವಕನಾದ ರೇಣುಕಗಣೇಶ್ವರನು. ಮತ್ತು ಸ್ವಚ್ಛಂದಚಾರಿ ಲೋಕೆಸ್ಮಿನ್ ಶಿವಸಿದ್ಧಾಂತ ಪಾಲಕಃ|| ಖಂಡಯನ್ ಜೈನ ಚಾರ್ವಾಕ ಬೌದ್ಧಾದೀನಾಂ ದುರಾಗಮಂ|| ಶ್ಲೋಕ ೧೨ ಚತುರ್ಥ ಪರಿಚ್ಛೇದ. ನಾನು ಸ್ವೇಚ್ಛಾಚಾರಿಯಾಗಿದ್ದು ಶಿವಸಿದ್ಧಾಂತವನ್ನು ಸಂರಕ್ಷಿಸಲಿಕ್ಕೆಯೂ ಜೈನ ಬೌದ್ಧ ಚಾರ್ವಾಕಾದಿ ದುಷ್ಟ ಮತಗಳನ್ನು ಖಂಡಿಸಲಿಕ್ಕೆಯೂ ಬಂದವನಾಗಿದ್ದೇನೆ. ಎಂದು ಹೇಳಿ ಎಲ್ಲರು ನೋಡುವಂತೆ ಅಂತರೀಕ್ಷ ಮಾರ್ಗದಿಂದ ಮಲಯಾಚಲಕ್ಕೆ ಹೊದನೆಂದು ಹೇಳಿ ರೇಣುಕರ ಅವತಾರ ವಿಷಯವನ್ನು ಮುಗಿಸಿದವನಾಗಿದ್ದಾನೆ.

ವಾಚಕ ಮಹಾಶಯರೇ, ಇಲ್ಲಿಯ ವರೆಗೂ ಸಿದ್ಧಾಂತಶಿಖಾಮಣಿಯಲ್ಲಿಯ ಇದ್ದಕ್ಕಿದ್ದಹಾಗೆ ಅಭಿಪ್ರಾಯವನ್ನು ವಿವೇಚನೆ ಮಾಡಿದ್ದರ ಮೇಲಿಂದಾ ರೇಣುಕರ ಉತ್ಪತ್ತಿಯ ವಿಷಯದಲ್ಲುಂಟಾದ ಸಂಶಯಗಳನ್ನು ಕೆಳಗೆ ಉದಾಹರಿಸಿದ್ದಾಗಿದೆ. ಅದನ್ನು ತಿಳಿದುಕೊಂಡು ಯಾವುದು ಸತ್ಯವೆಂಬುದನ್ನು ನೀವೇ ನಿರ್ಧರಿಸಿರಿ.

(೧) ಕೆಲವು ಸ್ವಾರ್ಥಿಗಳು ಹೇಳುವಂತೆ ಕೃತಯುಗದಾದಿಯಲ್ಲಿ ಏಕಾಕ್ಷರ ದ್ವಿಯಕ್ಷರ ಮೊದಲಾದ ಐವರೂ ತ್ರೈತಾಯುಗದಾದಿಯಲ್ಲಿ ಏಕವಕ್ತ್ರ ದ್ವಿವಕ್ತ್ರ ಮೊದಲಾದ ಐವರೂ ದ್ವಾಪಾರಾದಿಯಲ್ಲಿ ರೇಣುಕ ದಾರುಕ ಘಂಟಾಕರ್ಣ ಮೊದಲಾದ ಐವರೂ ಪರಮಾತ್ಮನ ಸದ್ಯೋಜಾತಾದಿ ಪಂಚಮುಖಗಳಿಂದ ಹುಟ್ಟಿ ವೀರಶೈವ ಮತವನ್ನು ಸ್ಥಾಪಿಸಿದರೆಂದೂ ಮತ್ತು ಕಲಿಯುಗದಾದಿಯಲ್ಲಿ ರೇವಣಸಿದ್ಧ ಮರುಳಸಿದ್ಧ ಮೊದಲಾದ ಐವರು ಶ್ರೀಶೈಲ ಕೊಲ್ಲಿಪಾಕಿ ಮೊದಲಾದ ಪಂಚಲಿಂಗಗಳಲ್ಲಿ ಹುಟ್ಟಿ ವೀರಶೈವ ಮತವನ್ನು ಸ್ಥಾಪಿಸಿದರೆಂಬುದನ್ನು ಕೇಳಿದರೆ ಸಿದ್ಧಾಂತಶಿಖಾಮಣಿಯ ಅಭಿಪ್ರಾಯಕ್ಕೆ ಅದು ಹೇಗೆ ವಿರೋಧವಾಗುವದೆಂಬುದು ಸ್ಪಷ್ಟವಾಗಿ ಕಾಣುವುದಿಲ್ಲವೇ? ಸಿದ್ಧಾಂತಶಿಖಾಮಣಿಯಲ್ಲಿ ಪರಮಾತ್ಮನು ಮೊದಲು ಬ್ರಹ್ಮನನ್ನು ಹುಟ್ಟಿಸಿ ಆತನಿಗೆ ಸೃಷ್ಟಿಯನ್ನು ಮಾಡೆಂದು ಹೇಳಲು ಆದರಂತೆ ಪ್ರಯತ್ನಿಸಿ ತನಗೆ ಸೃಷ್ಟಿಯನ್ನು ಮಾಡಲಿಕ್ಕೆ ಬಾರದ್ದರಿಂದ ಪರಮಾತ್ಮನಿಗೆ ಮೊದಲು ನೀನು ಸೃಷ್ಟಿಯನ್ನು ಮಾಡಿತೋರಿಸು; ಆಮೇಲೆ ನಾನು ಮಾಡುವೆನೆಂದು ಹೇಳಲು ಅದರಂತೆ ಪರಶಿವನು ಮೊದಲು ಅನೇಕ ಪ್ರಮಥರನ್ನು ಸೃಷ್ಟಿಸಿದನು. ಹಾಗು ಆ ಅನೇಕ ಪ್ರಮಥರಲ್ಲಿ ರೇಣುಕ ದಾರುಕ ಇವರೀರ್ವರನ್ನು ವಿಶೇಷವಾಗಿ ಪ್ರೀತಿಸಲಿಕ್ಕೆ ಹತ್ತಿದನು ಎಂದು ಹೇಳಿದ್ದಾಗಿದೆ. ಇದರಿಂದ ಸ್ವಾರ್ಥಿಗಳ ಹೇಳಿಕೆಯಂತೆ ಯುಗ ಯುಗಗಳಾದಿಯಲ್ಲಿ ಏಕಾಕ್ಷರ ಏಕವಕ್ತ್ರ ಮೊದಲಾದ ಐವರೇ ಮೊದಲು ಹುಟ್ಟಿಲ್ಲವೆಂದು ಸಿದ್ಧವಾಗಲಿಲ್ಲವೇ? ಮತ್ತು ರೇಣುಕ ದಾರುಕ ಮೊದಲಾದ ಅನೇಕ ಪ್ರಮಥರೇ ಬ್ರಹ್ಮ ಸೃಷ್ಟಿಯ ಆದಿಯಲ್ಲಿ ಹುಟ್ಟಿದರೆಂದು ಗೊತ್ತಾಗಲಿಲ್ಲವೇ? ಇದರ ಮೇಲಿಂದ ಏಕಾಕ್ಷರ ಏಕವಕ್ತ್ರ ಮೊದಲಾದವರು ಆಗಿ ಹೋಗಿದ್ದುದು ಸುಳ್ಳೆಂದು ಗ್ರಹಿಕೆಯಾಗವುದಿಲ್ಲವೇ? ಅವರೇ ಸುಳ್ಳಾದ ಬಳಿಕ ಅವರಿಂದ ವೀರಶೈವ ಮತವು ಸ್ಥಾಪಿತವಾಯಿತೆಂಬುವುದು ಬಂಜೆಯ ಮಗನಿವನೆಂದಂತಾಗಲಿಲ್ಲವೇ?

(೨) ರೇಣುಕನು ಮಹಾಭಕ್ತನಾದ ದಾರುಕನನ್ನು ದಾಟಿದ ಪಾಪಕ್ಕಾಗಿ ಭೂಮಿಯಲ್ಲಿ ಹುಟ್ಟಬೇಕಾದ್ದರಿಂದ ಆತನೂ ಕೂಡ ವೀರಶೈವ ಮತವನ್ನು ಸ್ಥಾಪಿಸುವದಕ್ಕಾಗಿ ಅವತರಿಸಿದನೆಂಬುದು ಭ್ರಮೆಯಲ್ಲವೇ? ಕೃತಕರ್ಮ ಫಲೋಪಭೋಗಕ್ಕಾಗಿ ಜಗಜ್ಜೀವಿಗಳು ಜನ್ಮಾಂತರವನ್ನು ಹೊಂದುವಂತೆ ರೇಣುಕರೂ ಕೂಡ ಕೃತಕರ್ಮಕ್ಕಾಗಿ ಭೂಮಿಯಲ್ಲಿ ಹುಟ್ಟಲಿಲ್ಲವೇ? -

(೩) ಏಕಾಕ್ಷರ ಏಕವಕ್ತ್ರ ಮೊದಲಾದವರು ವೀರಶೈವ ಮತವನ್ನು ಸ್ಥಾಪಿಸಿದರೆಂಬುದು ಕಾಲ್ಪನಿಕವಾದರೂ ರೇಣುಕಾದಿಗಳಾದರೂ ಜಗದಾದಿಯಲ್ಲಿ ಹುಟ್ಟಿ ವೀರಶೈವ ಮತವನ್ನು ಸ್ಥಾಪಿಸಿದರೆನ್ನಲಿಕ್ಕೆ ಅಡ್ಡಿ ಏನು? ಅಂದರೆ ಅದು ಕೂಡಾ ಸಿದ್ಧಾಂತಶಿಖಾಮಣಿಯ ಅಭಿಪ್ರಾಯದಿಂದ ಕಾಲ್ಪನಿಕವೆನಿಸುತ್ತದೆ. ಶ್ಲೋಕ ೧೨ ಚತುರ್ಥ ಪರಿಚ್ಛೇದದಲ್ಲಿ ರೇಣುಕನು ಲಿಂಗೋದ್ಭವನಾದ ಕಾಲದಲ್ಲಿ ನೀನು ಯಾರು ಏಕೆ ಬಂದಿರುವಿ ಎಂದು ಕೇಳಿದಾಗ್ಗೆ ಶಿವಸಿದ್ಧಾಂತವನ್ನು ಸಂರಕ್ಷಿಸುವದಕ್ಕೂ ಬೌದ್ಧ ಜೈನ ಚಾರ್ವಾಕಾದಿ ಮತಗಳನ್ನು ಖಂಡಿಸಲಿಕ್ಕೂ ಬಂದಿದ್ದೇನೆಂದು ಸ್ವತಃ ರೇಣುಕನೇ ಹೇಳಿದ್ದರಿಂದ ಬೌದ್ಧ ಜೈನ ಚಾರ್ವಾಕಾದಿ ಮತಗಳ ಪ್ರಸಾರವಾದನಂತರವೇ ರೇಣುಕರು ಹುಟ್ಟಿದರೆಂದು ಸ್ವಲ್ಪ ಕೂಡ ಸಂಶಯವಿಲ್ಲದೆ ಸಿದ್ಧವಾಗಲಿಲ್ಲವೇ? ಮತ್ತು ಬೌದ್ಧ ಜೈನಾದಿ ಮತಗಳು ಎಂದು ಹುಟ್ಟಿದನೆಂಬುದ[illegible] ಸ್ಪಷ್ಟವಾಗಿ ಹೇಳುತ್ತದೆ. ಇದರಿಂದ ರೇಣುಕರು [illegible] ದವರೆಂದು ಗೊತ್ತಾಗುವುದಿಲ್ಲವೇ?

(೪) ಆ ರೇಣುಕನು ಲಿಂಗೋದ್ಭವನಾದ[illegible] ಜನರು ನೀನು ಯಾರು ಏಕೆ ಬಂದಿರುವಿ ಎಂದು ಕೇಳಿದ್ದಕ್ಕೆ ನಾನು ವೀರಶೈವ ಮತವನ್ನು ಸ್ಥಾಪಿಸಲಿಕ್ಕೆ ಬಂದಿದ್ದೇನೆಂದು ಹೇಳದೆ ನಾಲ್ಕನೇ ಪರಿಚ್ಛೇದ ಶ್ಲೋಕ ೧೧ "ಕೇನಚಿತ್ಕಾರಣೇನಾಹಂ ಶಿವಲಿಂಗಾದಿಹಾಭವಂ" ಅಂದರೆ (ತಾನು ಮಾಡಿದ ಪಾಪದ ಫಲಕ್ಕಾಗಿ ಬಂದೆನೆಂದು ಹೇಳುವದನ್ನು ಬಚ್ಚಿಟ್ಟು) ಕೆಲವು ಕಾರಣದಿಂದ ಶಿವಲಿಂಗದಿಂದ ಹುಟ್ಟಿ ಬಂದೆನೆಂದೂ ಮುಂದೆ ೧೨ ನೇ ಶ್ಲೋಕದಲ್ಲಿ "ಶಿವಸಿದ್ಧಾಂತ ಪಾಲಕಃ" ಶಿವಸಿದ್ಧಾಂತವನ್ನು ಸ್ಥಾಪಿಸಲಿಕ್ಕಲ್ಲ. ಸ್ಥಾಪಿಸಿದ್ದನ್ನು ಸಂರಕ್ಷಿಸಲಿಕ್ಕೆ ಬಂದೆನೆಂದೂ ಸ್ವತಃ ರೇಣುಕನೇ ಘಂಟಾಘೋಷವಾಗಿ ಹೇಳಿದ್ದರಿಂದ ರೇಣುಕನ ಹೊರ್ತಾಗಿಯೇ ಬೇರೊಬ್ಬರು ವೀರಶೈವ ಮತಸ್ಥಾಪಕರಿರುವರೆಂದು ಸಿದ್ಧವಾಗಲಿಲ್ಲವೆ? ವೀರಶೈವ ಬಂಧುಗಳೇ ಈ ರೇಣುಕನ ಮಹಿಮೆಯನ್ನು ವಿಸ್ತಾರ ಮಾಡುವದಕ್ಕಾಗಿಯೇ ಹೊರಟ ಪೂರ್ವದ ಸಿದ್ಧಾಂತಶಿಖಾಮಣಿಯೆಂಬ ಗ್ರಂಥವೇ ಹೀಗೆ ರೇಣುಕನ ಅವತಾರದ ಕಾರಣವನ್ನು ಹೇಳಿದ ಬಳಿಕ ಇತ್ತೀಚಿಗೆ ಹೊರಟ ಉಳಿದ ಮಿಥ್ಯವಾದ ಆಡಂಬರ ಕೊಚ್ಚುವ ಕಾಲ್ಪನಿಕ ಗ್ರಂಥಗಳಿಗೆ ಬಲಿ ಬೀಳದೆ ಹಿಂದಿನಿಂದ ಆಗಮಗಳಲ್ಲಿ ಸೇರಿಸಿದ ಕಾಲ್ಪನೀಕ ಶ್ಲೋಕಗಳಿಗೆ ಮೋಸ ಹೋಗದೆ ನಿಜವಾದ ವೀರಶೈವ ಮತಸ್ಥಾಪಕನಾರೆಂಬುದನ್ನು ಕಂಡುಹಿಡಿದು ಸತ್ಯ ಮಾರ್ಗಾವಲಂಬಿಗಳಾಗಿರೆಂದು ಹಾರೈಸುವೆನು.

ಯಥಾರ್ಥವಾದಿ.

ಮಹಿಳೆಯರಿಗೆ ಸದುಪದೇಶ.

ಪ್ರೊಫೆಸರ್ ಕರ್ವೆ ಇವರ ಅವಿಶ್ರಾಂತ ಪರಿಶ್ರಮದಿಂದ ಸ್ಥಾಪನೆಯಾಗಿ ಬಹು ಅಭಿವೃದ್ಧಿ ಸ್ಥಿತಿಯಲ್ಲಿರುವ ಭಾರತ ಮಹಿಳಾ ವಿದ್ಯಾಪೀಠದ ೧೯ ನೆಯ ಪದವೀದಾನ ಸಮಾರಂಭವು ಸರ್. ಚಂದ್ರಶೇಖರ ರಾಮನ್‌ರವರ ಅಧ್ಯಕ್ಷತೆಯಲ್ಲಿ ಕಳೆದ ತಿಂಗಳ

ಸರ್. ಸಿ. ವ್ಹಿ. ರಾಮನ್.

೯ ನೆಯ ತಾರೀಖಿನ ದಿನ ಮುಂಬೈಯಲ್ಲಿ ಜರುಗಿತು. ಆಗ ಡಾ. ರಾಮನ್‌ರವರು ಅತ್ಯಂತ ಮಹತ್ವವಾದ ಭಾಷಣವನ್ನು ಮಾಡಿದರು. ಭಾರತ ಮಹಿಳೆಯರಿಗೆ ಮಾಡಿದ ಆ ಸದುಪದೇಶದಲ್ಲಿ ಈ ಕೆಳಗಿನ ಸಂಗತಿಗಳಿದ್ದವು.

ಸ್ತ್ರೀ ಶಿಕ್ಷಣದ ಆವಶ್ಯಕತೆ

ಹೆಣ್ಣುಮಕ್ಕಳಿಗೆ ಯೋಗ್ಯವಾದ ಶಿಕ್ಷಣವು ಬೇಕೇ ಬೇಕೆಂಬ ವಿಷಯದಲ್ಲಿ ಈಗ ಭಿನ್ನಾಭಿಪ್ರಾಯವಿಲ್ಲ. ೩೫ ಕೋಟಿ ಜನಸಂಖ್ಯೆಯುಳ್ಳ ಅತ್ಯಂತ ಪುರಾತನ ಸಂಸ್ಕೃತಿಯ ಈ ಭವ್ಯ ದೇಶಕ್ಕೆ ಈಗಿನ ದುರವಸ್ಥೆ ಬಂದುದೇಕೆ? ಸ್ತ್ರೀ ಶಿಕ್ಷಣವಿಲ್ಲದಿದ್ದುದರಿಂದ ಹೆಣ್ಣುಮಕ್ಕಳು ಶಿಕ್ಷಣ ಹೊಂದಬಾರದೆಂದು ಅವರನ್ನು ವಿದ್ಯಾಮಂದಿರಗಳಿಂದ ಬಹು ದೂರ ತಳ್ಳುತ್ತ ಬಂದಿರುವದರಿಂದಲೇ ರಾಷ್ಟ್ರವು ಈ ಹೀನಸ್ಥಿತಿಗೆ ಬಂದಿದೆ. ಹೆಣ್ಣುಮಕ್ಕಳನ್ನು ಜ್ಞಾನಮಂದಿರಕ್ಕೆ ಬರಗೊಡದೆ ಅವರನ್ನು ಕತ್ತಲೆಯಲ್ಲಿಟ್ಟದ್ದರಿಂದಲೇ ನಾವು ದುಃಖಕ್ಕೊಳಗಾಗಿದ್ದೇವೆ.

ರಾಷ್ಟ್ರದ ಹೆಣ್ಣುಮಕ್ಕಳನ್ನು ಅಶಿಕ್ಷಿತ ಸ್ಥಿತಿಯಲ್ಲಿಟ್ಟು ಯಾವ ರಾಷ್ಟ್ರವೂ ಜಗತ್ತಿನಲ್ಲಿ ಅಭಿವೃದ್ಧಿಯನ್ನು ಹೊಂದಿಲ್ಲ. ಬಾಲಬಾಲಿಕಿಯರ ಶಾರೀರಕ, ಮಾನಸಿಕ ಮತ್ತು ಬೌದ್ಧಿಕ-ಸುಧಾರಣೆಯು ಹೆಚ್ಚಾಗಿ ತಾಯಿಯ ಶಿಕ್ಷಣವನ್ನನುಸರಿಸಿಯೇ ಇದೆ. ತಾಯಿಯ [illegible] ಮಕ್ಕಳ ಭವಿತವ್ಯವು ಹುದುಗಿಕೊಂಡಿದೆ. ಮಕ್ಕಳು ಬಲಶಾಲಿಗಳು, ಧೀರರು ಪವಿತ್ರಾತ್ಮರು ಆಗಬೇಕಾದರೆ ತಾಯಿಯು ಬಹು ಸುಶೀಲಳೂ, ವಿದ್ಯಾವತಿಯೂ ಆಗಿರಬೇಕಾದುದು ಅತ್ಯಾವಶ್ಯಕ.

ಪೂರ್ವಕಾಲದ ಗ್ರೀಸ ದೇಶದ ಸ್ಪಾರ್ಟನ್ ಹೆಣ್ಣುಮಕ್ಕಳೇ ಸ್ಪಾರ್ಟನ್ ಯೋಧರನ್ನು ನಿರ್ಮಾಣ ಮಾಡಿದರು. ತಮ್ಮ ಗಂಡನು ಕೈಯಲ್ಲಿಯ ಕತ್ತಿಯನ್ನು ರಣಭೂಮಿಯಲ್ಲಿಯೇ ಬಿಟ್ಟು ಮನೆಗೆ ಬರಿಗೈಯಿಂದ ಬಾರದಂತೆಯೂ ಆತನು ಕಾಳಗದಲ್ಲಿ ತನ್ನ ಕತ್ತಿಯ ಮೇಲೆಯೇ ತನ್ನ ಕತ್ತನ್ನಿಟ್ಟು ವೀರಸ್ವರ್ಗಕ್ಕೆ ಹೋಗುವಂತೆಯೂ ಮಾಡಿದವರಾರು? ಅವರ ಶೂರ ಪತ್ನಿಯರಲ್ಲವೇ?

ಅಮೇರಿಕೆಯಲ್ಲಿ ೬೦-೭೦ ಉಪ್ಪರಿಗೆಗಳುಳ್ಳ ಭವ್ಯ ಭವನಗಳು ನೆಲಗಟ್ಟಿಲ್ಲದಲೇ ನಿಂತಿವೆಯೆಂದು ಯಾರಾದರೂ ಹೇಳಿದರೆ ಅದು ನಿಜವೆಂದು ನಂಬುವಿರಾ? ಭೂಮಿಯಲ್ಲಿ ಬಹು ಆಳವಾಗಿ ಉಕ್ಕಿನ ಕಂಬಗಳು ಹೋಗಿ ಆ ಭವನಗಳ ಅಡಿಗಲ್ಲಾಗಿವೆ. ಈ ಭವ್ಯವಾದ ಭಾರತ ರಾಷ್ಟ್ರದ ಭಾವೀ ಸುಧಾರಣಾಮಂದಿರಕ್ಕಾದರೂ ಸ್ತ್ರೀ ಶಿಕ್ಷಣವೇ ಅಡಿಗಲ್ಲಾಗಬೇಕು. ಹಾಗಾದರೇನೇ ಈ ರಾಷ್ಟ್ರ ಭವನವು ಶಾಶ್ವತವಾಗಿ ಸುಶೋಭಿಸುವದು.

ಸ್ತ್ರೀ ಶಿಕ್ಷಣದ ರೀತಿ ನೀತಿ.

ಸ್ತ್ರೀಯರಿಗೆ ಶಿಕ್ಷಣ ಬೇಕೆಂದರೆ ಅದು ಪುರುಷರಿಗೆ ಕೊಡಲ್ಪಡುತ್ತಿರುವ ರೀತಿ ನೀತಿಗಳಂತೆಯೇ ಇರಬೇಕೆಂದಲ್ಲ. ತರುಣ ತರುಣಿಯರೆಲ್ಲಾ ಒಂದೇ ವಿಧವಾದ ಶಿಕ್ಷಣವನ್ನು ಹೊಂದಬೇಕಾದುದಿಲ್ಲ. ಪುರುಷರಿಗೆ ಕೊಡುತ್ತಿರುವಂತಹ ಶಿಕ್ಷಣವನ್ನೇ ತಮಗೂ ಕೊಡುವುದಿಲ್ಲವೆಂದು ಸ್ತ್ರೀಯರು ಚಿಂತಿಸಬಾರದು. ತಮಗೆ ಬೇರೆ ಕೊಡುವುದರಿಂದ ತಾವು ಕೀಳಾದೆವೆಂತಲೂ ಪುರುಷರಂತೆ ತಮಗೂ ಸಮಾನತ್ವ ದೊರೆಯಲಿಲ್ಲವೆಂತಲೂ ಮಹಿಳೆಯರು ಮರುಗಬಾರದು

ಸಮಾನತೆ, ಸಮಾನತೆ, ಎಂಬ ಕೂಗು ಎಲ್ಲೆಲ್ಲಿಯೂ ಕೇಳಿಬರುತ್ತಿದೆ. ಅದನ್ನು ಈ ಶಿಕ್ಷಣ ಕ್ಷೇತ್ರದಲ್ಲಿ ತರಕೂಡದು. ಸ್ತ್ರೀಯರ ಸ್ವಭಾವ, ಕರ್ತವ್ಯ, ಮನೋವೃತ್ತಿ ಮೊದಲಾದವುಗಳೆಲ್ಲಾ ಪುರುಷರಿಗಿಂತ ತೀರ ಭಿನ್ನವಾಗಿವೆ. ಆದಕಾರಣ ಅವುಗಳ ಪೋಷಣೆಗೆ ಅನುರೂಪವಾದ ಶಿಕ್ಷಣವನ್ನೇ ಕೊಡಬೇಕು. ಶಿಕ್ಷಣ ಪದ್ಧತಿಯು ಸ್ತ್ರೀ ಪುರುಷರಲ್ಲಿಯೇ ಭಿನ್ನವಾಗಿರಬೇಕಾದುದಿಲ್ಲ. ಪುರುಷರಲ್ಲಿಯು ಕೂಡಾ ಭಿನ್ನ ಭಿನ್ನವಾಗಿರಬೇಕಾದುದು ಕ್ಷೇಮಕರ.

ತರುಣರಲ್ಲಿ ಕೂಡಾ ಬುದ್ಧಿಶಕ್ತಿ-ಮನೋವೃತ್ತಿ ಮೊದಲಾದವುಗಳು ಭಿನ್ನ ಭಿನ್ನವಾಗಿರುತ್ತವೆ. ಮಾನಸ ಶಾಸ್ತ್ರಜ್ಞರು ಕೂಡಾ ಬುದ್ಧಿಯ ಭಿನ್ನತ್ವವನ್ನು ಮಾನ್ಯ ಮಾಡಿ ಶಿಕ್ಷಣ ಪದ್ಧತಿಯನ್ನು ಬೇರೆ ಬೇರೆ ಮಾಡಬೇಕೆಂದು ಹೇಳುತ್ತಿದ್ದಾರೆ. ಈ ಭಾರತ ಮಹಿಳಾ ವಿದ್ಯಾಪೀಠದಲ್ಲಿ ಶಿಕ್ಷಣ ಪದ್ಧತಿಯನ್ನು ಬೇರೆ ಮಾಡಿರುವದು ಅತ್ಯಂತ ಯೋಗ್ಯವಾದುದಾಗಿದೆ.

ಈ ಭಾರತ ಭೂಮಿಯು ಮಹಿಳೆಯರಿಗೆ ತಮ್ಮ ಕಾರ್ಯಕ್ಷೇತ್ರದಲ್ಲಿ ಶ್ರೇಷ್ಠ ಸ್ಥಾನವನ್ನು ಹೊಂದಲು ಬೇಕಷ್ಟು ಸೌಲಭ್ಯಗಳಿವೆ. ಸ್ತ್ರೀ ಪುರುಷರ ಸಮಾನತೆಯ ಪಾಶ್ಚಾತ್ಯರ ಹೋರಾಟವನ್ನು ನಾವೂ ಪ್ರಾರಂಭಿಸಿ ನಾವು ನಮ್ಮ ಮನೆತನ, ಸಂಸಾರಯಾತ್ರೆಗಳನ್ನು ಮೂಲೆಗುಂಪಾಗಿ ಮಾಡಿಕೊಳ್ಳಬೇಕಾದುದಿಲ್ಲ.

ಇಟಲಿ-ಅಬಸೀನಿಯಾ ಯುದ್ಧ.

ಅಬಸೀನಿಯಾ ಎಂಬ ವಿಸ್ತಾರವಾದ ಪ್ರದೇಶವು ಆಫ್ರಿಕಾ ಖಂಡದ ಈಶಾನ್ಯ ದಿಕ್ಕಿನಲ್ಲಿದೆ. ಇಲ್ಲಿಯ ಜನರು ಹಬಸೀ ಜಾತಿಯವರು. ಇವರು ಅಲ್ಲಿಯ ಮೂಲನಿವಾಸಿಗಳಾದುದರಿಂದ ಕಪ್ಪು ವರ್ಣದವರಾಗಿರುವರು. ಆಫ್ರಿಕಾ ಖಂಡದ ಶೋಧವಾದಂದಿನಿಂದ ಯುರೋಪಿಯನ್ನರು ಅದರ ಬಹು ಭಾಗವನ್ನು ಆಕ್ರಮಿಸಿ ವಸಾಹತು ಮಾಡಿಕೊಂಡಿದ್ದರೂ ಈ ಪ್ರದೇಶದವರು ಮಾತ್ರ ಇಲ್ಲಿಯವರೆಗೆ ಮಾತ್ರ ಅವರ ತುತ್ತಿಗೆ ಆಹುತಿಯಾಗಿರುವದಿಲ್ಲ.

ಸಂಘರ್ಷಣೆಗೆ ಪ್ರಾರಂಭ.

ಆದರೆ ಈಗ ಸ್ವಲ್ಪ ಕಾಲದಿಂದ ಇಟಲಿ ಮತ್ತು ಅಬಸೀನಿಯಾ ಇವುಗಳ ಮಧ್ಯದಲ್ಲಿ ಸಂಘರ್ಷಣೆಯುಂಟಾಗಹತ್ತಿದೆ. ಈ ಅಬಸೀನಿಯಾ ದೇಶಕ್ಕೆ ಹೊಂದಿಯೇ ಇಟಲಿಯ ವಸಾಹತು ಪ್ರದೇಶವಿದೆ. ಇಟಲಿಗೂ ಅವುಗಳಿಗೂ ನೇರವಾದ ಮಾರ್ಗವನ್ನು ಮಾಡಿಕೊಳ್ಳಲು ಇಟಲಿಯ ಸರಕಾರವು ಹವಣಿಕೆ ಹಾಕಿದೆ. ಹಾಗೂ ಇಟಾಲಿ ಸೋಮಾಲಿ ಲ್ಯಾಂಡ ಮತ್ತು ಇಟಾಲಿ ಇರಿಟ್ರಿಯಾ ಇವೆರಡು ಪ್ರದೇಶಗಳ ಮಧ್ಯದಲ್ಲಿ ಸಿಕ್ಕಿಕೊಂಡಿರುವ ಅಬಸೀನಿಯಾದ ಒಂದು ಅಂಚನ್ನು ವಶಪಡಿಸಿಕೊಂಡು ತನ್ನ ಪ್ರದೇಶಗಳನ್ನೆಲ್ಲ ಒಂದುಗೂಡಿಸಬೇಕೆಂದು ಅದು ಹೊಂಚು ಹಾಕಿಕೊಂಡಂತೆ ಕಾಣಬರುತ್ತದೆ. ಇದರಿಂದಲೇ ಆವೆರಡರ ತಿಕ್ಕಾಟವು ಪ್ರಾರಂಭವಾದುದು.

ಇಂಥದೊಂದು ಕ್ಷುಲ್ಲಕ ಕಾರಣವು ಇಷ್ಟು ಮಹತ್ವದ್ದಾಗಿ ಕಾಣುತ್ತಿರುವದು ವಿಚಿತ್ರವೆಂದೆನಿಸಬಹುದು. ಆದರೆ ಮದ್ದು ಗುಂಡುಗಳಿಂದ ಸುಸಜ್ಜಿತವಾದ ಒಂದು ಶಸ್ತ್ರಾಗಾರದಲ್ಲಿ ಬೆಂಕಿಯ ಒಂದು ಕ್ಷುಲ್ಲಕ ಕಿಡಿಯು ಬಿದ್ದರು ಕೂಡಾ ಒಮ್ಮಿಂದೊಮ್ಮೆಲೆ ಸ್ಫೋಟವಾಗಿ ಎಲ್ಲವೂ ಹಾರಿ ಹೋಗುವಂತೆ ಈಗಿನ ಕಾಲದ ಯುದ್ಧದ ಪ್ರಸಂಗವಿದೆ.

ಮುರಿಯಲಿಕ್ಕೆ ಬಾರದ ಅತ್ಯಂತ ಕಠಿಣವಾದುದು ಕಬ್ಬಿಣವಲ್ಲ, ಅಥವಾ ಉಕ್ಕಲ್ಲ; ಪರಂಪರಾಗತವಾದ ಕಲ್ಪನೆ. ಆ ರೂಢಿಯೇ ಮುರಿಯಲಿಕ್ಕೆ ಬಾರದಿದ್ದ ಬಹು ಕಠಿಣವಾದ ವಸ್ತು. ಆದುದರಿಂದ ಶಿಕ್ಷಣ ಪದ್ಧತಿಯಲ್ಲಿಯೂ ಮೆಲ್ಲ ಮೆಲ್ಲನೆ ಹೆಜ್ಜೆಯನ್ನಿಡಬೇಕಾಗುತ್ತದೆ. ಶ್ರೀಮಾನ್ ಕರ್ವೆ ಯವರು ಈ ಮಹತ್ಕಾರ್ಯವನ್ನು ಅತ್ಯಂತ ಶ್ರಮ ವಹಿಸಿ ಮಾಡಿ ಭಾರತೀಯರಿಗೆ ಮಾರ್ಗದರ್ಶಿಗಳಾಗಿದ್ದಾರೆ.

ಹೊಸ ರಾಜಕೀಯ ಸುಧಾರಣೆಯಿಂದ ಭಾರತ ಮಹಿಳೆಯರ ಮೇಲೆಯೂ ಹೆಚ್ಚಾದ ಹೊಣೆಗಾರಿಕೆ ಬೀಳುತ್ತದೆ. ಆದಕಾರಣ ಶಿಕ್ಷಣ ಪ್ರಸಾರವು ಮಹಿಳೆಯರಲ್ಲಿ ವಿಶೇಷ ವೇಗದಿಂದಾಗಬೇಕಾದುದು ಅತ್ಯಗತ್ಯ. ಅವರು ವಿಜ್ಞಾನ ಶಾಸ್ತ್ರಗಳಲ್ಲಿಯೂ ಪ್ರವೇಶಿಸಿ ತಮ್ಮ ಬುದ್ಧಿ ವೈಭವವನ್ನು ತೋರಿಸಬೇಕು.

ಹಿಂದಕ್ಕೆ ಆಗಿಹೋದ ಭಾಸ್ಕರಾಚಾರ್ಯರ ಪುತ್ರಿ ಲೀಲಾವತಿ ದೇವಿಯ ಆ ಸುಂದರ ನಾಮವನ್ನು ಮರೆಯಬಹುದೇ ? ಈಗ ಪಾಶ್ಚಾತ್ಯ ದೇಶಗಳಲ್ಲಿ ಅನೇಕ ಮಹಿಳೆಯರು ವಿಜ್ಞಾನ ಶಾಸ್ತ್ರದಲ್ಲಿ ಅನೇಕ ಶೋಧಗಳನ್ನು ಮಾಡುತ್ತಿದ್ದಾರೆ. ಭಾರತ ಮಹಿಳೆಯರು ಇತ್ತ ಕಡೆಗೂ ಲಕ್ಷಿಸಬೇಕು.

ಇಂಗ್ಲೆಂಡದ ಮಧ್ಯಸ್ತಿಕೆ.

ಈಗಿನ ರಾಜಕಾರಣದಲ್ಲಿ ತೊಡಕುಗಳು ವಿಶೇಷ. ಒಂದು ಕಡೆ ಯುದ್ಧವು ಪ್ರಾರಂಭವಾಯಿತೆಂದರೆ ಅದು ಆಯಾ ದೇಶಗಳ ಮಟ್ಟಿಗೇನೇ ಉಳಿಯುವದೆಂದು ಈಗಿನ ಕಾಲದಲ್ಲಿ ಊಹಿಸುವಂತಿಲ್ಲ. ಆದರಲ್ಲಿಯೂ ಇಟಲಿಯು ರಣಕ್ಕೆ ಅಣಿಯಾದುದರಿಂದ ಸ್ವಾಭಾವಿಕವಾಗಿಯೇ ಜಗತ್ತಿನ ಎಲ್ಲ ರಾಷ್ಟ್ರಗಳು ಮುಂದೇನಾಗುವದೆಂದು ನೋಡಹತ್ತಿವೆ. ಅಬಸೀನಿಯಾಕ್ಕೆ ಹೊಂದಿಯೇ ಬ್ರಿಟಿಶರ ಮತ್ತು ಫ್ರೆಂಚರ ವಸಾಹತುಗಳಿರುವುದರಿಂದ ಇಟಲಿಯ ಈ ಕಾಲು ಚಾಚುವಿಕೆಯು ಅವುಗಳಿಗೆ ಸಹನವಾಗದಿರುವದು ಸ್ವಾಭಾವಿಕವೇ ಸರಿ. ಆದುದರಿಂದ ಅವಾದರೂ ಇಟಲಿಯ ಈ ಘೋರ ಕಾರ್ಯದ ಬಗ್ಗೆ ಜಾಗರೂಕವಾಗಿಯೇ ಇರುವವು.

ಈ ಕಲಹದ ನಿರ್ಣಯವನ್ನು ಮಾಡಲು ಬ್ರಿಟಿಶ್ ಮುತ್ಸದ್ದಿಯಾದ ಅಥೋನಿ ಏಡನ್ ಎಂಬುವವರು ಪ್ರಯತ್ನಿಸಿದರು. ಆದರೆ ಇಟಲಿಗೆ ಇದು ಬೇಕಾಗಿರಲಿಲ್ಲ. ಇಟಲಿಯ ಸರ್ವಾಧ್ಯಕ್ಷರಾದ ಸೀ. ಮುಸೋಲಿನಿಯವರು ತಮ್ಮ ಒಂದು ಭಾಷಣದಲ್ಲಿ ಹೇಳಿದ್ದೇನಂದರೆ “ ಗುರುವಿನ ವಿದ್ಯೆಯು ಗುರುವಿಗೆ ಫಲಿಸಿತಂತೆ. ನಮಗೆ ಈಗ ಪಾಠ ಕಲಿಸಲು ಬಂದಿರುವ ಗುರುವಿನ ಹಿಂದಿನ ಕೃತ್ಯಯನ್ನೇ ನಾವು ಕಲಿಯ ಹತ್ತಿದ್ದೇವೆ. ನಮ್ಮ ಗುರುಸ್ಥಾನದಲ್ಲಿರುವ ಆ ರಾಷ್ಟ್ರಕ್ಕೆ ಸಾಮ್ರಾಜ್ಯ [illegible]ವದು ಬೇಕಾಗ ಮತ್ತು ಅದನ್ನು ಕಾಯ್ದುಕೊಳ್ಳುವ ಭಗದಲ್ಲಿರು; ಅದು ಜಗತ್ತೇನಂದೀತೆಂಬುದರ ಬಗ್ಗೆ ಸ್ವಲ್ಪವೂ [illegible]ವಂತಿಲ್ಲ. ಆದುದರಿಂದ ನಾವಾದರೂ ನಮ್ಮ ಕಾಯ[illegible] ಇತರರ ಅಭಿಪ್ರಾಯದ ಕಡೆಗೆ ಲಕ್ಷ ಕೊಡದೆ ವ[illegible] ಬಿಡುವೆವು. ”

ಮುಸೋಲಿನಿಯವರ ಈ ಟೀಕೆಯು ಇಂಗ್ಲಂಡಕ್ಕಾಗಲಿ ಜಪಾನಕ್ಕಾಗಲಿ ಅನ್ವಯಿಸುವಂತಿದೆ. ಏಕೆಂದರೆ ಜಪಾನದ ಬಾದಶಹರೂ ಸ್ವಕೀಯ ರೀತಿಯಿಂದ ಇವೆರಡರ ಸಂಧಾನ ನಡೆಯಿಸಲು ಪ್ರಯತ್ನಪಟ್ಟರಂತೆ ಜಪಾನಕ್ಕೆ ಯುದ್ಧವಾದರೂ ಅಷ್ಟೆ; ಬಿಟ್ಟರೂ ಅಷ್ಟೆ. ಪಶ್ಚಿಮದಿಕ್ಕಿನ ರಾಜಕಾರಣದಲ್ಲಿ ಅದರ ಸಂಬಂಧವೇ ಇಲ್ಲ. ಅಂದಮೇಲೆ ಇದು ಇಂಗ್ಲಂಡಕ್ಕೇ ಅನ್ವಯಿಸುವದೆಂದು ತಿಳಿದೋ ಹೇಗೋ ಮುಂಬಯಿಯ ಟಾಯಿಮ್ಸ ಆಫ್ ಇಂಡಿಯಾ ಪತ್ರಿಕೆಯು ಈ ಭಾಷಣದ ಬಗ್ಗೆ “ ಮುಸೋಲಿನಿಯ ವಿಪ್ಲವಕಾರಕ ಶಬ್ದ ಸಂಪತ್ತಿ” ಎಂದು ಸಂಬೋಧಿಸಿದೆ. ಬ್ರಿಟನ್ನು ಅಬಸೀನಿಯಾಕ್ಕೆ ಗುಪ್ತರೀತಿಯಿಂದ ಶಸ್ತ್ರಪೂರೈಕೆ ಮಾಡುತ್ತಿರುವದೆಂದು ಇಟಲಿಯ ವರ್ತಮಾನ ಪತ್ರಗಳೆಲ್ಲ ಹೂಲಿ ಎಬ್ಬಿಸಿದವು. ಆದರೆ ಈ ಪ್ರಕಾರದ ನಿರಾಧಾರ ಪ್ರಕಟನೆಯನ್ನು ಮಾಡಕೂಡದೆಂದು ಇಟಲಿ ಸರಕಾರದವರು ಒಂದು ಆಜ್ಞಾಪತ್ರವನ್ನು ಪ್ರಸಿದ್ಧಿಸಿದರು.

ಇಟಲಿ ಮತ್ತು ರಾಷ್ಟ್ರ ಸಂಘ.

ರಾಷ್ಟ್ರ ಸಂಘಕ್ಕೆ ಮೂಲಾಧಾರವಾದ ಮುಖ್ಯ ಮೂರು ನಾಲ್ಕು ರಾಷ್ಟ್ರಗಳಲ್ಲಿ ಇಟಲಿಯೂ ಒಂದಾಗಿದೆ. ಆದರೆ ಈ ಯುದ್ಧದ ಪ್ರಸಂಗದಲ್ಲಿ ರಾಷ್ಟ್ರಸಂಘವು ವಿರೋಧಿಸಿದರೆ ಅದನ್ನೇ ತ್ಯಜಿಸಿ ಬಿಡುವದಾಗಿ ಇಟಲಿಯು ಹೆದರಿಕೆ ಹಾಕಿದೆ. ಇಂಥ ಬಲಿಷ್ಠ ರಾಷ್ಟ್ರಗಳಿಗೆ ಬುದ್ಧೀ ಕಲಿಸುವ ಶಕ್ತಿಯು ರಾಷ್ಟ್ರಸಂಘಕ್ಕೆ ಇಲ್ಲವಾಗಿದೆ.

ಸುಯೇಝು ಕಾಲಿವೆಯೊಳಗಿಂದ ಅಬಸೀನಿಯಾ ಅಥವಾ ಸೋಮಾಲಿ ಲ್ಯಾಂಡದ ಕಡೆಗೆ ಶಸ್ತ್ರಾಸ್ತ್ರಗಳನ್ನು ಒಯ್ಯದಂತೆ ಮಾಡಬೇಕೆಂದು ಒಂದು ಪ್ರಶ್ನೆಯು ರಾಷ್ಟ್ರಸಂಘದಲ್ಲಿ ವಿಚಾರಣೆಗೆ ಬರಲು ರಾಷ್ಟ್ರ ಸಂಘವು ಹೀಗೆ ಅಭಿಪ್ರಾಯಪಟ್ಟಿತು.— ಈ ಪ್ರಕಾರ ನಿರ್ಣಯ ಮಾಡಿದ್ದಾದರೆ ಕಾಲಿವೆಯೊಳಗೆ ಸಂಚರಿಸುವ ಸರ್ವ ಹಡಗಗಳನ್ನೂ ಶೋಧಿಸಬೇಕಾಗುವದು. ಮ್ಯಾ ಅನ್ವೆನಾಲ್ ಇವರು ಈ ಪ್ರಶ್ನೆಯ ವಿಚಾರಣೆ ಮಾಡುವ ಬಗ್ಗೆ ಕ್ಷಿಪ್ರದಲ್ಲಿಯೇ ಲಂಡನ್ನಕ್ಕೆ ಹೋಗುವವರಿದ್ದಾರೆ. ಇಂಥ ನಿರ್ಬಂಧವನ್ನು ಹಾಕುವದು ಶಕ್ಯವಾದೀತೋ ಇಲ್ಲವೋ ಸಂಶಯ. ಇಂಗ್ಲಂಡು ಅಬಸೀನಿಯಾಕ್ಕೆ ಕೂಡಿದರೆ ಇಟಲಿಯು ರಾಷ್ಟ್ರ ಸಂಘವನ್ನು ತ್ಯಜಿಸುವದೆಂದೂ ರಾಷ್ಟ್ರಸಂಘದ ಅಸ್ತಿತ್ವಕ್ಕೆ ಬಾಧೆ ತರದಿರುವುದೇ ತನ್ನ ವಿಚಾರವೆಂದೂ ಫ್ರಾನ್ಸವು ಹೇಳುತ್ತಲಿದೆ.

ಆಶೆಯ ನಿರಾಶೆ.

ಅಮೇರಿಕದ ಸ್ವಾತಂತ್ರ್ಯ ದಿನದ ಸಮಯ ಲಾಭವನ್ನು ತಿಳಿದ, ಅಬಸೀನಿಯಾದ ಬಾದಶಹರು ಅಮೇರಿಕೆಯ ಅಧ್ಯಕ್ಷರಿಗೆ ಈ ಯುದ್ಧದ ಬಗ್ಗೆ ಕೆಲಾಗ್ ಪ್ಯಾಕ್ಟಿನ ಮೇರೆಗೆ ಶಾಂತಿ ಸಂಧಾನ ನಡೆಯಿಸಬೇಕಾಗಿ ವಿಜ್ಞಾಪಿಸಿಕೊಂಡರು. ಆದರೆ ಅಮೇರಿಕೆಯು ಇದರಲ್ಲಿ ಕೈ ಹಾಕದೆ, ರಾಷ್ಟ್ರ ಸಂಘವು ಈ ಯುದ್ಧ ನಿರೋಧದ ಬಗ್ಗೆ ಲಕ್ಷವನ್ನು ಹಾಕಿದುದು ಸಮಾಧಾನಕರವೆಂದು ಮೋರೆಯ ಮೇಲೆ ಕೈ ಎಳೆಯಿತು. ಹಾಗೂ ಅಬಸೀನಿಯಾದಲ್ಲಿದ್ದ ೧೨೫ ಜನ ಅಮೇರಿಕನ್ನರಿಗೆ ಅವರ ಸುರಕ್ಷಿತೆಯ ಬಗ್ಗೆ ಹೊರ ಹೊರಡಬೇಕೆಂದು ಅಮೇರಿಕೆಯು ತನ್ನ ಪ್ರತಿನಿಧಿಗೆ ತಿಳಿಸಿದೆ.

ಯುದ್ಧ ಪ್ರಾರಂಭ.

...ಾಗಿ ಸಂಧಾನಗಳೆಲ್ಲ ನಿಸ್ಫಲವಾಗಹತ್ತಿವೆ ಬಗ್ಗೆ ಮೊನ್ನೆ ಮೊನ್ನೆ ಹೇಗದಲ್ಲಿ ಕೂಡಿದ ಸಂಧಾನ ಪ್ರಯವೂ ನಿಷ್ಫಲವಾಯಿತು ಇಟಲಿಯ ಬೇಡಿಕೆಗಳು ಹೆಚ್ಚಾಗಹತ್ತಿವೆ. ಆ್ಯಡಿಸ್ ಅಬೇಬಾದಲ್ಲಿಯ ಇಟಲಿಯ ವಕೀಲನು ತಾನು ಮೋಟಾರಿನಲ್ಲಿ ಕುಳಿತಾಗ ಹಬಸೀ ಸೈನಿಕರು ತೊಂದರೆ ಪಡಿಸಿದರೆಂದು ಮತ್ತು ವಕೀಲಿ ಕಚೇರಿಯನ್ನು ಕಾಯುತ್ತಿದ್ದ ಸೈನಿಕರ ಮೇಲೆ ಹಬಸೀ ಜನರು ಕಲ್ಲುಗಳನ್ನೆಸೆದರೆಂದೂ ಇದರ ವಿಚಾರಣೆಯಾಗಲೇ ಬೇಕೆಂದೂ ತಿಳಿಸಿರುವನು.

ಇಟಲಿಯು ಇವೆಲ್ಲವುಗಳನ್ನು ಸರಿಪಡಿಸುವದು ಯುದ್ಧವೇ ಎಂದು ತಿಳಿದಿದೆ. ಇದಕ್ಕಾಗಿ ಅದು ೧|| ಲಕ್ಷ ಸೈನ್ಯ ಸಿದ್ಧಪಡಿಸಿದೆ. ಇತ್ತ ಅಬಸೀನಿಯಾ ದೇಶವು ೧೦ ಲಕ್ಷ ದಂಡಾಳುಗಳ ಸಿದ್ಧತೆ ಮಾಡಿದೆ. ಸ್ವಲ್ಪ ದಿವಸಗಳಲ್ಲಿಯೇ ಇಟಲಿಯು ಮಹಾ ಸಂಗ್ರಾಮಕ್ಕೆ ಸಿದ್ಧವಾಗುವದೆಂದು ಅದರ ಸೂತ್ರಧಾರಿಯಾದ ಮುಸೋಲಿನಿಯವರ ಈ ಭಾಷಣದಿಂದ ಸ್ಪಷ್ಟವಾಗುತ್ತದೆ—

" ನಾವು ಹೋರಾಡಲು ಸಿದ್ಧರಾಗಿದ್ದೇವೆ. ಈ ನಿರ್ಧಾರದಿಂದ ನಮ್ಮ ಪ್ರಜೆಗಳಾಗಲಿ ಸರಕಾರವಾಗಲಿ ಹಿಂಜರಿಯುವದಿಲ್ಲ. ಕಪ್ಪು ವರ್ಣದ ಜನಾಂಗದವರನ್ನು ಇಟಲಿಯವರು ಯಾವಾಗಲೂ ಸೋಲಿಸಿಯೇ ಇದ್ದಾರೆ. ನಿಷ್ಪ್ರಯೋಜನವಾದ ಜೀವನಕ್ಕಿಂತಲೂ ವೀರ ಸಾಹಸದ ಜೀವನವು ಈಗ ಪ್ರತಿಯೊಬ್ಬ ಇಟಾಲಿಯನ್ನನಿಗೆ ಬೇಕಾಗಿದೆ."

ಲಿಂಗನಗೌಡ ಪಾಟೀಲ.

—ತುರ್ಕಸ್ಥಾನದವರು ಅರ್ವಾಚೀನ ಸಾಧನಗಳಿಂದ ಸಿದ್ಧವಾದ ೫೦೦ ವಿಮಾನುಗಳನ್ನು ತಯಾರಿಸಲು ಒಂದು ಕೋಟಿ ಪೌಂಡುಗಳನ್ನು ವಿನಿಯೋಗಿಸುವವರಿದ್ದಾರೆ.

ಕ್ವೇಟಾ ಪ್ರವೇಶಕ್ಕೆ ನಿರ್ಬಂಧ.

ಕ್ವೇಟಾ ಪಟ್ಟಣವನ್ನು ಅಗಿದು ತೆಗೆಯಲು ಯೋಗ್ಯವೋ ಹೇಗೆಂಬುದನ್ನು ವಿಚಾರಿಸಲು ಸರಕಾರದವರು ಹೆಲ್ಥ ಕಮಿಶನರ ಲೆ. ಕ. ಎ. ಜೆ. ಎಚ್. ರಸೆಲ್ ಇವರನ್ನು ನಿಯಮಿಸಿದ್ದರು. ಅವರು ತಮ್ಮ ವರದಿಯಲ್ಲಿ ಈ ಪ್ರಕಾರ ಸೂಚಿಸಿರುವರು.—

" ಭೂಮಿಯೊಳಗೆ ಇನ್ನೂ ೧೬೦೦೦ ಹೆಣಗಳಿವೆ. ಇವಲ್ಲದೆ ಎಷ್ಟೋ ದನ ಕರಗಳೂ ಸತ್ತಿವೆ. ಈಗಲೇ ಅಗಿದರೆ ದುರ್ಗಂಧ ಮತ್ತು ನೊಣಗಳಿಂದ ರೋಗವು ಹಬ್ಬಬಹುದು. ಅದ್ದರಿಂದ ಮುಂದಿನ ವರ್ಷದ ಮಾರ್ಚದ ವರೆಗೆ ಅದನ್ನು ಹಾಗೇ ಬಿಡುವದೇ ವಿಹಿತ. "

ಹಿಂದುಸ್ಥಾನ ಸರಕಾರದವರು ಇದನ್ನು ಮಾನ್ಯ ಮಾಡಿರುವರು. ಬೀದಿಗಳನ್ನೆಲ್ಲ ಸ್ವಚ್ಛ ಮಾಡಿದಮೇಲೆ ಜನರ ಅಸ್ತಿ ವಸ್ತುಗಳನ್ನು ಯಾರವು ಅವರಿಗೆ ತಿರುಗಿ ಕೊಡಲಾಗುವದೆಂದು ಪ್ರಸಿದ್ಧಿಸಿರುವರು.

ಶ್ರೀ ನರಿಮಾನರಿಗೆ ವಿಜಯ.

ಶ್ರೀ ನರಿಮಾನರ ಮೇಲೆ ಮುಂಬಯಿ ಸರಕಾರದವರು ಮೋಟಾರ ವಾಹನ ಕಟ್ಟಳೆಯ ಮೇರೆಗೆ ವ್ಯಾಜ್ಯ ಹೂಡಿದರು. ಆದರೆ ಮುಂಬಯಿ ಶಾಸನ ಸಭೆಯಲ್ಲಿ ಸರಕಾರದವರು ಈ ಶಾಸನದಲ್ಲಿ ಆವಶ್ಯಕವಾದ ತಿದ್ದುಪಡಿ ಮಾಡುವ ಗೊತ್ತುವಳಿಯನ್ನು ತರಲಿರುವುದರಿಂದ ಸದ್ಯಕ್ಕೆ ಈ ವ್ಯಾಜ್ಯವನ್ನು ಹಿಂತೆಗೆದುಕೊಳ್ಳಲು ಅಪ್ಪಣೆ ದೊರೆಯಬೇಕೆಂದು ವಿಜ್ಞಾಪಿಸಿಕೊಂಡರು. ನ್ಯಾಯಾಧೀಶರು ಈ ಬಗ್ಗೆ ಶ್ರೀ ನರೀಮಾನರ ಅಭಿಪ್ರಾಯವನ್ನು ಕೇಳಲು ಅವರು— " ನನ್ನ ವಿಧಾನವು ನಿರ್ಣಯವಾಗದೆ ಉಳಿಯಬಹುದು. ಶಾಸನ ಸಭೆಯಲ್ಲಿ ಆ ಗೊತ್ತುವಳಿಯು ಬಿದ್ದುಹೋದರೆ ಮುಂದೇನು? " ಎಂದು ಕೇಳಿದರು.

ಕಡೆಗೆ ಆ ವ್ಯಾಜ್ಯವನ್ನು ತೆಗೆದು ಹಾಕಲಾಯಿತು. ಮತ್ತು ಶ್ರೀ ನರಿಮಾನರು ಯಶಸ್ವಿಯಾದರು.

ಚೀನದಲ್ಲಿ ಮಹಾಪೂರ.

ಚೀನ ದೇಶದಲ್ಲಿಯ ಯಾಂಗತ್ಸೆ ಕ್ಯಾಂಗ ನದಿಗೆ ಮಹಾಪೂರ ಬಂದು ೨೦೦೦ ಜನವಸತಿಯುಳ್ಳ ಯೆಂಗಝು ಎಂಬ ಪಟ್ಟಣವೂ ೧೦೦೦ ಜನರಿದ್ದ ಯೆನ್‌ಕಿಂಗ ಎಂಬ ಹಳ್ಳಿಯೂ ಸಂಪೂರ್ಣವಾಗಿ ತೇಲಿ ಹೋಗಿವೆ. ೫೦ ಸಾವಿರ ಜನರು ನಿರಾಶ್ರಿತರಾಗಿದ್ದಾರೆ.

ಜಾತಕ ಪತ್ರಿಕೆ.

ತಮ್ಮ ತಮ್ಮ ಮನೆಗಳಲ್ಲಿ ಶಿಶುಗಳು ಜನನವಾದಕೂಡ್ಲೆ ಜನನ ಟಿಪ್ಪಣಿಯನ್ನು ಚನ್ನಾಗಿ ಬರೆದು ಕಳ್ಸಿದರೆ ನಾವು ಜನನ ಲಗ್ನ ಕುಂಡಲಿ ಅಂಶಕುಂಡಲಿ ದಶಾಂತಾರ್ದಶಾವನ್ನು ಮಾಡಿಕೊಂಡು ನಕ್ಷತ್ರದೋಷ ಬಾಲಾರಿಷ್ಟ ಮಾತಾಪಿತ್ರರಿಷ್ಟ ದೋಷಗಳನ್ನು ಶೋಧಿಸಿ ಇದ್ದರೆ ಶಾಂತಿಮಾಡುವ ಕ್ರಮವನ್ನು ಶಿಶುವಿಗೆ ಹುಟ್ಟಿದ ದಿನದಿಂದ ಆಯುಷ್ಯದವರೆಗೆ ಇಷ್ಟಿಷ್ಟನೇ ವರ್ಷಗಳಲ್ಲಿ ಇಂಥಾ ಕಂಟಕಗಳೇ ಜರುಗುವ ವಿಷಯವನ್ನು ಬರೆದು ಜಾತಕ ಪತ್ರಿಕೆಯನ್ನು ತಯಾರುಮಾಡಿ ವ್ಹಿ. ಪಿ. ಮೂಲಕ ಕಳಿಸುತ್ತೇವೆ

ಜಾತಕ ಪತ್ರಿಕೆಗೆ ಚಾರ್ಜು ರೂ. ೧-೮-೦

ವಿಳಾಸಃ— ಮ್ಯಾನೇಜರ್

ಟಿ. ಹೆಚ್. ಎಂ. ಅಂಡ್ ಕೊ., ಹರಪನಹಳ್ಳಿ.



ಶಾ. ಶ. ೧೮೫೭ ನೆಯ ಆಷಾಢ ಶ || ೧೫ ಸೋಮವಾರ.

ಧರ್ಮ ಪ್ರಚಾರಕರ ತಂಡು.

ಜನಾಂಗದ ಜೀವಾಳವೇ ಧರ್ಮ. ಧರ್ಮಕ್ಕೆ ಸಂಸ್ಕೃತಿಯೇ ಪ್ರಾಣ. ಆದಕಾರಣ ಪ್ರತಿಯೊಂದು ಜನಾಂಗವೂ ತನ್ನ ಸಂಸ್ಕೃತಿಯನ್ನು ಸಂರಕ್ಷಿಸಿಕೊಳ್ಳಲೇಬೇಕು. ಅದು ತನ್ನ ವೈಶಿಷ್ಟ್ಯವಾದ ಸಂಸ್ಕೃತಿಯನ್ನು ಕಳೆದುಕೊಂಡರೆ ಅದಕ್ಕೆ ಮರಣ ಬಂದಿತೆಂದೇ ತಿಳಿಯಬೇಕು. ಏಕೆಂದರೆ ಪರ ಸಂಸ್ಕೃತಿಯಲ್ಲಿ ತನ್ನ ಸುಖ ಶಾಂತಿಗಳಿಗೆ ಬೇಕಾದ ಸೌಲಭ್ಯಗಳಿರುವುದಿಲ್ಲ.

ಬೇರೆ ಬೇರೆ ವನಸ್ಪತಿಗಳಿಗೆ ಬೇರೆ ಬೇರೆ ಭೂಮಿ, ಗೊಬ್ಬರ, ಹವೆಗಳ ಅವಶ್ಯಕತೆಯು ಹೇಗಿದೆಯೋ ಹಾಗೆಯೇ ಬೇರೆ ಬೇರೆ ಜನಾಂಗಗಳಿಗು ಕೂಡಾ ಅವುಗಳ ಸ್ವಭಾವ ಜನ್ಯವಾದ ಬೇರೆ ಬೇರೆ ಧರ್ಮ ಸಂಸ್ಕೃತಿಗಳೇ ಬೇಕು. ಹಾಗಾದರೇನೇ ಅವು ನಿಜವಾದ ಸುಖ ಶಾಂತಿಗಳನ್ನು ಅನುಭವಿಸಿ ಮನುಷ್ಯ ಜಾತಿಯ ಕ್ಷೇಮಕ್ಕೂ ನೆರವಾಗುತ್ತವೆ.

ಹಿಂದುಸ್ಥಾನದಲ್ಲಿ ಕಳೆದೊಂದು ಸಾವಿರ ವರುಷಗಳಿಂದಲೂ ಪರ ಧರ್ಮ ಮತ್ತು ಪರ ಸಂಸ್ಕೃತಿಗಳು ದಿನೇ ದಿನೇ ಹೆಚ್ಚು ಹೆಚ್ಚಾಗಿ ವ್ಯಾಪಿಸುತ್ತಲಿವೆ. ಆದುದರಿಂದಲೇ ಈ ದೇಶದಲ್ಲಿ ಅಶಾಂತತೆ, ಅಪ್ರೀತಿ, ವಿಷಮತ್ವಗಳು ಹೆಚ್ಚುತ್ತಲಿವೆ. ಇಂಗ್ಲಿಷರು ನಮ್ಮ ಮೇಲೆ ಪ್ರಭುತ್ವವನ್ನು ಮಾಡುವುದಿಲ್ಲ; ಅವರ ಸಂಸ್ಕೃತಿಯೇ ನಮ್ಮನ್ನು ಆಳುತ್ತಿದೆಯೆಂದು ಮಹಾತ್ಮಾ ಗಾಂಧಿಯವರು ಹೇಳಿದುದು ವಿಹಿತವಾಗಿದೆ.

ಹಿಂದುಸ್ಥಾನಕ್ಕೆ ರಾಜಕೀಯ ಸ್ವಾತಂತ್ರ್ಯವೊಂದು ದೊರೆತ ಮಾತ್ರದಲ್ಲಿಯೇ ಸುಖ ಶಾಂತಿಗಳುಂಟಾಗುವುದು ಶಕ್ಯವಿಲ್ಲ. ರಾಜಕೀಯ ಸ್ವಾತಂತ್ರ್ಯ ದೊರೆತೊಡನೆ ಸಾಂಸ್ಕೃತಿಕ ವಿಷಮತ್ವದಿಂದುಂಟಾಗಿರುವ ಕಷ್ಟನಷ್ಟಗಳ ಕಡೆಗೆ ಜನಾಂಗವು ಲಕ್ಷಿಸಲೇಬೇಕಾಗುತ್ತದೆ.

ಜರ್ಮನಿಯು ಸ್ವಾತಂತ್ರ್ಯ ಸುಖದಲ್ಲಿದ್ದರೂ ಅಲ್ಲಿ ಈಗ ಧರ್ಮ ಮತ್ತು ಸಂಸ್ಕೃತಿಗಳ ಹೋರಾಟ ಪ್ರಾರಂಭವಾಗಿರುವದೇಕೆ? ಕಲೆಗಿಂಬಿನಲ್ಲಿ ಶಸ್ತ್ರವನ್ನಿಟ್ಟುಕೊಳ್ಳುವ ಜರ್ಮನ್ ರಾಷ್ಟ್ರಕ್ಕೆ ಎಡ ಕೆನ್ನೆಗೆ ಹೊಡೆದರೆ ಬಲ ಕೆನ್ನೆಯನ್ನು ಕೊಡಬೇಕೆಂದು ಹೇಳುವ ಕ್ರಿಸ್ತ ಮತವು ಹೇಗೆ ವಿಹಿತ ತೋರುವುದು? ಅದಕ್ಕಾಗಿ ಕ್ರೈಸ್ತ ಧರ್ಮ ಮತ್ತು ಯಹುದಿ ಸಂಸ್ಕೃತಿಗಳನ್ನು ತಮ್ಮ ದೇಶದಿಂದ ಓಡಿಸಲು ಈಗ ಜರ್ಮನಿಯಲ್ಲಿ ಪ್ರಚಂಡ ಪ್ರಯತ್ನ ನಡೆದಿಲ್ಲವೆ?

ಆದುದರಿಂದ ಹಿಂದುಸ್ಥಾನಕ್ಕೆ ನಿಜವಾದ ಸುಖ ಶಾಂತಿಗಳು ದೊರೆಯಬೇಕಾದರೆ ಹಿಂದು ಧರ್ಮ ಮತ್ತು ಹಿಂದು ಸಂಸ್ಕೃತಿಗಳ ನಿಜ ಸ್ವರೂಪವು ಜನಾಂಗದ ಕಣ್ಣೆದುರಿಗೆ ಈಗ ಬರಲೇಬೇಕಾಗಿದೆ. ಧರ್ಮದ ಹೆಸರಿನಿಂದ ನಡೆಯುತ್ತಿರುವ ಅನೇಕ ಅನಾಚಾರ, ಡಂಭಾಚಾರ, ಮೂಢಾಚಾರಗಳೆಲ್ಲಾ ಅಳಿದು ಹೋಗಬೇಕು. ಧರ್ಮ ಶಬ್ದವನ್ನು ಕೇಳಿದೊಡನೆ ಈಗ ಬಹು ಜನರಿಗೆ ಜಿಗುಪ್ಸೆಯುಂಟಾಗಿರುವುದಕ್ಕೆ ಧರ್ಮದ ಹೆಸರಿನಿಂದ ನಡೆದಿರುವ ಅಸಂಖ್ಯ ತಪ್ಪು, ನಡೆ ನುಡಿಗಳೇ ಕಾರಣ.

ಹಿಂದು ಜನಾಂಗದಲ್ಲಿ ಸಾವಿರಾರು ವರುಷಗಳಿಂದ ಸೇರುತ್ತ ಬಂದಿರುವ ನಾನಾ ದೋಷಗಳನ್ನೆಲ್ಲಾ ತೆಗೆದು ಹಾಕಲು ಈಗ ಧರ್ಮ ಪ್ರಚಾರಕರು ಬೇಕಾಗಿದ್ದಾರೆ. ಜನಾಂಗದ ಮುಂದಿನ ಸಂತತಿಯ ರಕ್ತ ನಾಳಗಳಲ್ಲೆಲ್ಲಾ ನಿಜವಾದ ಹಿಂದು ಸಂಸ್ಕೃತಿಯು ವ್ಯಾಪಿಸಬೇಕಾದರೆ ಈಗಲೇ ಹಿಂದು ಧರ್ಮ ಪ್ರಚಾರಕರು ತಂಡೋಪತಂಡವಾಗಿ ದೇಶದಲ್ಲಿ ಸಂಚರಿಸಿ ಧಾರ್ಮಿಕ ಜಾಗೃತಿಯನ್ನುಂಟು ಮಾಡಬೇಕು.

ಮುಂದಣ ಭಾರತ ರಾಷ್ಟ್ರವು ಹೆಚ್ಚಾದ ಕಾರ್ಯ[illegible] ವನ್ನು ವಹಿಸುವದಿದೆ. ಮುಂದಣ ಭಾರತ[illegible] ಹೆಚ್ಚಿನ ಹೊಣೆಗಾರಿಕೆಯಿದೆ ಅದಕ್ಕಾಗಿ ಈಗಲೇ ಹಿಂದು [illegible] ಉದಾತ್ತ ಆಚಾರ ವಿಚಾರಗಳನ್ನು ಪ್ರಸಾರಗೊಳಿ[illegible] ಪ್ರಚಾರಕರು ಎಲ್ಲೆಲ್ಲಿಯೂ ತಂಡು ತಂಡವಾಗಿ ತ್ವರಬೇಕು.

ವರ್ಹಾಡ ಪ್ರಾಂತದ ಕಾರಂಜಾ ಎಂಬಲ್ಲಿ ಧರ್ಮ ಭಾಸ್ಕ[illegible] ಶ್ರೀ ಪಾಂಚಲೆಗಾಂವಕರ ಮಹಾರಾಜರೆಂಬ ಮಹಾಶಯರು ಧರ್ಮ ಪ್ರಚಾರಕರ ಒಂದು ವಿದ್ಯಾಲಯವನ್ನು ಸ್ಥಾಪಿಸಿದ್ದಾರೆ. ಆ ವಿದ್ಯಾಲಯದಲ್ಲಿ ೫೦ ವಿದ್ಯಾರ್ಥಿಗಳು ಶಿಕ್ಷಣ ಹೊಂದುತ್ತಿದ್ದಾರೆ ಇವರಿಗೆ ಧಾರ್ಮಿಕ ಶಿಕ್ಷಣ ಕೊಡುವುದರಲ್ಲಿ ಈ ಕೆಳಗಿನ ವಿಷಯಗಳಿವೆ.

“ ಭೌತಿಕ ಶಾಸ್ತ್ರ ದೃಷ್ಟಿಯಿಂದ ದೇವರ ಅಸ್ತಿತ್ವ. ಮಾನವ ಶಾಸ್ತ್ರ ಶುದ್ಧಿಸಂಘಟನೆಗಳ ಆವಶ್ಯಕತೆ. ಎಲ್ಲ ಧರ್ಮಗಳ ತುಲನಾತ್ಮಕ ಅಧ್ಯಯನ. ” ಈ ಶಿಕ್ಷಣವನ್ನು ಹೊಂದಿ ೨೫ ವಿದ್ಯಾರ್ಥಿಗಳು ಉತ್ತೀರ್ಣರಾಗಿ ಧರ್ಮ ಪ್ರಚಾರಕರ ತಂಡು ಹೊರಬಿದ್ದಿತು. ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಧರ್ಮಧುರಂಧರ ಮೊದಲಾದ ಪದವಿಗಳೂ ಕೊಡಲ್ಪಡುತ್ತವೆ.

ಈ ಪ್ರಕಾರ ಧರ್ಮ ಪ್ರಚಾರಕರನ್ನುಂಟುಮಾಡುವ ವಿದ್ಯಾಲಯಗಳು ಅಲ್ಲಲ್ಲಿ ಉಂಟಾಗಬೇಕು. ಉದಾರ ಧನಿಕರು ಇಂತಹ ಸಂಸ್ಥೆಗಳಿಗೆ ಧನ ಸಹಾಯಮಾಡಿ ಹಿಂದು ಧರ್ಮ ರಕ್ಷಣೆಯ ಪವಿತ್ರ ಕಾರ್ಯಕ್ಕೆ ನೆರವಾಗಬೇಕು. ರಾಮಕೃಷ್ಣ ಮಿಶನ್ನಿನವರು ಮತ್ತು ಆರ್ಯ ಸಮಾಜದವರು ಈ ಮಹತ್ಕಾರ್ಯವನ್ನು ದೇಶ ವಿದೇಶಗಳಲ್ಲಿ ಈಗ ಮಾಡುತ್ತಲೇ ಇದ್ದಾರೆ. ಹಿಂದು ಮಹಾಸಭೆಯವರು ಪ್ರಾಂತಕ್ಕೊಂದಾದರೂ ಈ ವಿಧವಾದ ಸಂಸ್ಥೆಯನ್ನು ಸ್ಥಾಪಿಸಿ ಧರ್ಮ ಪ್ರಚಾರಕರ ತಂಡನ್ನುಂಟುಮಾಡುವುದು ಯುಕ್ತವಲ್ಲವೆ?

ಸ್ಫುಟ ವಿಚಾರ.

ನಮ್ಮ ರಾಷ್ಟ್ರಲಿಪಿ.

ಸ್ವತಂತ್ರ ರಾಷ್ಟ್ರಕ್ಕೆ ಒಂದು ಸ್ವತಂತ್ರ ರಾಷ್ಟ್ರ ಭಾಷೆಯೂ ಇರಬೇಕಾದುದು ಅತ್ಯವಶ್ಯಕವಾಗಿದೆ. ಹಿಂದುಸ್ಥಾನದಲ್ಲಿರುವ ಭಾಷೆಗಳಲ್ಲೆಲ್ಲ ಹಿಂದೀ ಭಾಷೆಯೇ ಬಹುಜನ ಭಾಷೆಯಾಗಿದೆ. ಇದೇ ರಾಷ್ಟ್ರ ಭಾಷೆಯೆಂದು ಎಲ್ಲರೂ ಸ್ವೀಕರಿಸಿದುದಾಗಿದೆ. ಆದರೆ ಈ ಭಾಷೆಗೆ ಲಿಪಿಯು ಯಾವುದು?

ಶುದ್ಧ ಹಿಂದೀ ಭಾಷೆಯನ್ನು ನಾಗರಿ ಲಿಪಿಯಲ್ಲಾಗಲಿ ಅಥವಾ ಅರಬ್ಬಿ ಲಿಪಿಯಲ್ಲಾಗಲಿ ಬರೆಯಬಹುದೆಂದು ರಾಷ್ಟ್ರೀಯ ಸಭೆಯಲ್ಲಿ ನಿರ್ಣಯವಾಗಿದೆ. ಆದರೆ ಈ ತರದ ವ್ಯವಸ್ಥೆಯಿಂದ ಅನೇಕ ತೊಂದರೆಗಳುಂಟಾಗಬಹುದು. ನಾಗರಿ ಲಿಪಿಯು ಬರೆಯಲು ಕ್ಲಿಷ್ಟವಾಗುತ್ತಿರುವುದರಿಂದ ಜನ ಸಾಮಾನ್ಯರಲ್ಲಿ ಶೀಘ್ರವಾಗಿ ಪ್ರಸಾರವಾಗಲಿಕ್ಕಿಲ್ಲ. ಅರಬ್ಬಿ (ಉರ್ದು) ಲಿಪಿಯಲ್ಲಿ ಅನೇಕ ಅಕ್ಷರಗಳು ಇಲ್ಲದ್ದರಿಂದ ಹಿಂದೀ ಭಾಷೆಯ ಅನೇಕ ಶಬ್ದಗಳನ್ನು ಅಪೂರ್ಣವಾಗಿಯೇ ಬರೆಯಬೇಕಾಗುತ್ತದೆ. ಮೇಲಾಗಿ ಇದು ಮುಸಲ್ಮಾನ ಬಂಧುಗಳ ಮಟ್ಟಿಗೇನೇ ಉಳಿಯುವ ಸಂಭವವಿದೆ. ರಾಷ್ಟ್ರದ ಹಿಂದು, ಮುಸಲ್ಮಾನ ಮೊದಲಾದವರೆಲ್ಲ ಪರಸ್ಪರ ವ್ಯವಹಾರ ಮಾಡಲು ನಾಗರಿ ಮತ್ತು ಉರ್ದು ಹೀಗೆ ಎರಡು ಭಾಷೆಗಳನ್ನೂ ಕಲಿಯಬೇಕಾಗುವದು. ಈ ಉಭಯ ಗಳು ಪ್ರಚಾರವಿಲ್ಲದ ದಕ್ಷಿಣ ಭಾರತದ ಬಂಧುಗಳಿಗಂತೂ ಇದು ಅತಿ ಪ್ರಯಾಸವಾದುದು. ಇದಲ್ಲದೆ ನಾಗರಿ ಲಿಪಿಯಲ್ಲಾಗಲಿ ಅರಬ್ಬಿ ಲಿಪಿಯಲ್ಲಾಗಲಿ ಮುದ್ರಣ ಮಾಡುವದು ಕ್ಲಿಷ್ಟತರವಾಗಿಯೇ ಇದೆ.

ಇವೆಲ್ಲ ತೊಂದರೆಗಳನ್ನು ಗಮನಿಸಿ ಸದ್ಯಕ್ಕಿರುವ ನಾಗರಿ ಲಿಪಿಯನ್ನೇ ಹೆಚ್ಚು ಕಡಿಮೆ ಮಾಡಿ ರಾಷ್ಟ್ರ ಲಿಪಿಗೆ ತಕ್ಕದ್ದಾಗುವಂತೆ ಮಾಡುವದು ಶಕ್ಯವೇ ಹೇಗೆಂಬುದನ್ನು ನಿರ್ಣಯಿಸಲು ಆಚಾರ್ಯ ಕಾಲೇಲಕರ ಇವರ ಅಧ್ಯಕ್ಷತೆಯಲ್ಲಿ ಜೂನ ತಿಂಗಳ ೫ ನೆಯ ತಾರೀಖಿನ ದಿವಸ ವರ್ಧಾದಲ್ಲಿ ಒಂದು ಸಮಿತಿಯು ಕೂಡಿದ್ದಿತು. ಆ ಸಮಿತಿಯವರು ನಾಗರಿ ಲಿಪಿಯಲ್ಲಿ ಮುಖ್ಯವಾಗಿ ಈ ಕೆಳಗಿನ ತಿದ್ದುಪಾಟು ಮಾಡಿರುವರು—

(೧) ನಾಗರಿ ಲಿಪಿಯಲ್ಲಿ ತಲೆಯ ಮೇಲೆ ಗೆರೆಯನ್ನೆಳೆದು ಬರೆಯುವದು ಅವಶ್ಯವಿಲ್ಲ.

(೨) ದಕ್ಷಿಣದ ಭಾಷೆಗಳಲ್ಲಿ, ಎ, ಏ, ಐ, ಅಥವಾ ಒ, ಓ, ಔ ಹೀಗೆ ಮೂರು ಮೂರು ಅಕ್ಷರಗಳಿರುತ್ತವೆ. ಅದೇ ಪ್ರಕಾರ ರಾಷ್ಟ್ರ ಲಿಪಿಯಲ್ಲಿ ಮೂರು ಮಾಡಬೇಕು.

(೩) ಬಳ್ಳಿಗಳನ್ನು ಬರೆಯುವಾಗ್ಗೆ ನಾಗರಿ ಲಿಪಿಯಲ್ಲಿ ಅನೇಕ ಅಕ್ಷರಗಳ ತಲೆಯ ಮೇಲೆ ಇಲ್ಲವೆ ಕೆಳಗೆ ಬಳ್ಳಿಯ ಗುರುತುಗಳು ಬರುತ್ತವೆ. ಅಚ್ಚು ಹಾಕುವವರು ಅವುಗಳಿಗಾಗಿ ಮತ್ತೆರಡು ಸಾಲು ಮಾಡಬೇಕಾಗಿ ಬರುತ್ತದೆ. ಆದ್ದರಿಂದ ಕಾಗುಣಿತಾಕ್ಷರಗಳ ಆಯಾ ಗುರುತುಗಳನ್ನು ಆಯಾ ಅಕ್ಷರಗಳ ಮುಂದೆಯೇ ಹಾಕಬೇಕು.

(೪) ಒತ್ತಕ್ಷರಗಳನ್ನು ಒಂದರ ಕೆಳಗೊಂದು ಬರೆಯದೆ ಉಚ್ಚಾರದ ಮೇರೆಗೆ ಒತ್ತನ್ನು ಅಕ್ಷರದ ಹಿಂದಾಗಲಿ ಮುಂದಾಗಲಿ ಬರೆಯಬೇಕು.

(೫) ಪೂರ್ಣವಿರಾಮಕ್ಕಾಗಿ ಚರಣರೇಖೆಯನ್ನು ಎಳೆಯಬೇಕು. ಉಳಿದ ವಿರಾಮಚಿಹ್ನಗಳೆಲ್ಲ ಈಗಿನಂತೆಯೇ.

(೬) ನಾಗರಿ ಲಿಪಿಯ ಶ, ಟ, ಡ, ಜ, ಛ, ಢ, ಹ, ಮೊದಲಾದ ಅಕ್ಷರಗಳ ತಲೆಯ ಮೇಲಿನ ಜುಟ್ಟವನ್ನು ತೆಗೆದು ಬರೆಯಬೇಕು.

ಈ ಪ್ರಕಾರ ಇನ್ನೂ ಅನೇಕ ತಿದ್ದುಪಡಿಗಳನ್ನು ಸೂಚಿಸಿದ್ದಾರೆ. ಆವರ ಈ ನಿರ್ಣಯವೇನೂ ಕೊನೆಯದಲ್ಲ. ಇನ್ನೂ ಅನೇಕ ತಜ್ಞರ ಸಲಹೆಗಳನ್ನು ತೆಗೆದುಕೊಂಡು ಮಾರ್ಪಾಟು ಮಾಡುವರು.

ಈ ಮಂಡಲವು ಕೂಡಿದ ಎರಡು ದಿವಸಗಳಲ್ಲಿ ಮಹಾತ್ಮಾಜಿಯವರು ಸ್ವತಃ ಉಪಸ್ಥಿತರಾಗಿದ್ದರು. ನಾಗರಿ ಲಿಪಿಯ ಶಿರೋರೇಖವನ್ನು ತೆಗೆದು ಹಾಕಿದುದು ಸಮ್ಮತವೆಂದು ಹೇಳಿದರು. ಹಾಗೂ ಭರತ ಭೂಮಿಯ ಅಸಂಖ್ಯ ನಿರಕ್ಷರ ಕುಕ್ಷಿಗಳನ್ನು ಲಕ್ಷಕ್ಕೆ ತಂದು ಅವರನ್ನು ಸಾಕ್ಷರರನ್ನು ಮಾಡುವದಕ್ಕಾಗಿ ಅತಿ ಸುಲಭವಾಗುವಂತಹ ಏರ್ಪಾಟನ್ನೇ ಮಾಡಬೇಕೆಂದು ಅವರು ಸೂಚಿಸಿದರು.

ಜರ್ಮನಿಯ ಹೊಸ ಹೋರಾಟ.

ಪಾಶ್ಚಾತ್ಯರ ಹೊರಗಿನ ಬೆಳಕನ್ನು ನೋಡಿ ಧರ್ಮ ಮತ್ತು ಸಂಸ್ಕೃತಿಗಳು ಹುರುಳಿಲ್ಲದವೆಂದು ಹೇಳುವವರು ಬಹು ಜನರು. ಅವರಲ್ಲಿ ಹಿಂದು ಸುಶಿಕ್ಷಿತರ ಸಂಖ್ಯೆ ಅತ್ಯಧಿಕ. ಪಾಶ್ಚಾತ್ಯ ಸುಧಾರಣೆಗಳಿಂದ ಬೆಳಗುವ ಜರ್ಮನಿಯಲ್ಲಿ ಈಗ ಹೊಸದಾಗಿ ಪ್ರಾರಂಭವಾದ ಧಾರ್ಮಿಕ ಹೋರಾಟದ ಕಡೆಗೆ ಇಂತಹ ಸುಶಿಕ್ಷಿತರು ಲಕ್ಷಿಸಬಾರದೆ?

ಜರ್ಮನ್ ಜನರು ತಾವು ಆರ್ಯ ಸಂಸ್ಕೃತಿಯವರೆಂದು ತಿಳಿಯುತ್ತಾರೆ. ಕ್ರಿಸ್ತ ಧರ್ಮವು ಯಹುದಿ ಸಂಸ್ಕೃತಿಯಿಂದ ಕೂಡಿದ್ದಾಗಿದೆಯೆಂದೂ ಜರ್ಮನಿಯಲ್ಲಿ ಕ್ರೈಸ್ತ ಧರ್ಮ ಇರಕೂಡದೆಂದೂ ಆ ದೇಶದಲ್ಲಿ ಪ್ರಬಲವಾದ ಚಟುವಟಿಕೆ ನಡೆದಿದೆ. ಡಾ. ವಿಂಟರ ಎಂಬ ಘನಪಂಡಿತರು "ನಾರ್ಡಿಕ್ ರಿಲಿಜನ್" ಎಂಬ ಆರ್ಯ ಧರ್ಮ ವಿಷಯಕವಾದ ಚಟುವಟಿಕೆಯನ್ನು ಪ್ರಾರಂಭಿಸಿದ್ದಾರೆ.

ಈ ಹೊಸ ಪಂಥದಲ್ಲಿ ಜರ್ಮನಿಯ ಅನೇಕ ಪ್ರಮುಖರು ಸೇರಿದ್ದಾರೆ. ಕಳೆದ ಮಹಾ ಯುದ್ಧದಲ್ಲಿ ಪ್ರಸಿದ್ಧರಾಗಿದ್ದ ವ್ಹಾನ್ ಲುಡೆನ್‌ಡಾರ್ಫ್ ಎಂಬುವವರು ಈ ಪಂಥದ ಒಂದು ಪತ್ರಿಕೆಯನ್ನು ತೆಗೆಯುತ್ತಿದ್ದಾರೆ. ಜರ್ಮನ್ ಜನರ ಸಂಸ್ಕೃತಿಗೆ ಕ್ರಿಸ್ತ ಧರ್ಮವು ಅಯೋಗ್ಯವಾದುದಾಗಿರುವುದರಿಂದ ಕ್ರೈಸ್ತಮತವನ್ನು ತ್ಯಾಗ ಮಾಡಬೇಕೆಂದು ಇವರು ಸಾರುತ್ತಿದ್ದಾರೆ.

ಹರ ವ್ಹಾನ್ ಲೀರ್ ಎಂಬುವವರು ರಿಚೆವ್ಹಾರ್ ಎಂಬ ಪತ್ರಿಕೆಯಲ್ಲಿ ಹೀಗೆ ಬರೆದಿದ್ದಾರೆ— ರಾಷ್ಟ್ರೀಯ ವೃತ್ತಿಯ ಲಕ್ಷಾಂತರ ಜರ್ಮನ್ ಜನರು ಕ್ರೈಸ್ತ ಮತವನ್ನು ಪರಿತ್ಯಾಗ ಮಾಡಿದ್ದಾರೆ. ಕ್ರೈಸ್ತ ಮತವನ್ನು ಬಿಟ್ಟದ್ದರಿಂದ ನಾವೇನೂ ನಾಸ್ತಿಕರಾಗಿಲ್ಲ. ನಮ್ಮ ರಾಷ್ಟ್ರೀಯತ್ವಕ್ಕೆ ಶೋಭಿಸತಕ್ಕ ಧರ್ಮವನ್ನೇ ನಾವು ಅನುಸರಿಸುವವರಾಗಿದ್ದೇವೆ.

ಈ ನೂತನ ಪಂಥದ ಪ್ರೊ. ಹೌರ ಎಂಬುವವರು ನಾಲ್ಕು ಜನರ ಪ್ರಚಂಡ ಸಭೆಯಲ್ಲಿ ಹೀಗೆ ಹೇಳಿದರು. ಜರ್ಮನ್ ಇತಿಹಾಸಕ್ಕೂ ಕ್ರಿಸ್ತ ಮತಕ್ಕೂ ಯಾವ ಸಂಬಂಧವೂ ಇಲ್ಲ. ಜರ್ಮನಿಯಲ್ಲಿ ಆಗಿ ಹೋದ ಧಾರ್ಮಿಕ ಮಹಾ ಪುರುಷರ ಉಪದೇಶ

ಕರ್ನಾಟಕ ಚೇಂಬರ ಆಫ್ ಕಾಮರ್ಸದ

೬ ನೇ ವಾರ್ಷಿಕ ಸಾಧಾರಣ ಸಭೆ, ರಾಯಚೂರು.

ಮೊದಲೇ ನಿರ್ದಿಷ್ಟ ಪಡಿಸಿದಂತೆ ತಾ|| ೩೦-೬-೧೯೩೫ ನೇ ದಿವಸ ರಾಯಚೂರು ನಗರದಲ್ಲಿ ಮಧ್ಯಾನ್ಹ ೧ ಗಂಟೆಗೆ ಮ. ರಾ. ರಾ. ಶ್ರೀ ವೈ. ಮಹಾಬಲೇಶ್ವರಪ್ಪನವರ ಅಧ್ಯಕ್ಷತೆಯ ಕೆಳಗೆ, ಮ. ರಾ. ರಾ. ಶ್ರೀ. ಪಿ. ಕಿಶನರಾಯರವರ ಬಂಗ್ಲೆಯಲ್ಲಿ ಕರ್ನಾಟಕ ಚೇಂಬರ ಆಫ್ ಕಾಮರ್ಸದ ೬ ನೇ ವಾರ್ಷಿಕ ಸಾಧಾರಣ ಸಭೆಯು ಕೂಡಿತು. ಸಭೆಗೆ ಗದಗ, ಕೊಪ್ಪಳ, ಬಳ್ಳಾರಿ, ಕೊಟ್ಟೂರು, ರಾಯಚೂರು ಮೊದಲಾದ ಸ್ಥಳಗಳಿಂದ ಸದಸ್ಯರು ಆಗಮಿಸಿದ್ದರು. ಸಂಸ್ಥೆಯ ಅಧ್ಯಕ್ಷರಾದ ಶ್ರೀಮಾನ್ ವೈ. ಮಹಾಬಲೇಶ್ವರಪ್ಪನವರು ಕರ್ನಾಟಕದ ನಾನಾ ಭಾಗಗಳಿಂದ ಸಭೆಗೆ ಬಂದ ಸದಸ್ಯರಿಗೆಲ್ಲ ಸುಸ್ವಾಗತವನ್ನು ಬಯಸಿ, ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಕಳೆದ ವರ್ಷದ ವ್ಯಾಪಾರದ ಪರಿಸ್ಥಿತಿಯನ್ನು ವಿಮರ್ಶಿಸಿ, ಕರ್ನಾಟಕದ ವ್ಯಾಪಾರ ಜೀವನದಲ್ಲಿ ಚೇಂಬರಕ್ಕಿರುವ ಪ್ರಾಶಸ್ತ್ಯವನ್ನು ವಿವರಿಸಿ ಹೇಳಿ, ಎಲ್ಲ ವರ್ತಕರೂ ಚೇಂಬರದ ಸದಸ್ಯರಾಗಬೇಕೆಂದು ಅರಿಕೆ ಮಾಡಿಕೊಂಡರು.

ನಂತರ, ಹಿಂದೊಮ್ಮೆ ಚೇಂಬರದ ಸದಸ್ಯತ್ವವನ್ನು ವಹಿಸಿದ್ದ ಗದಗ ಕಾಟನ್ ಮಾರ್ಕೆಟ್ ಅಸೋಸಿಯೇಶನದ ಪ್ರತಿನಿಧಿಗಳಲ್ಲೊಬ್ಬರಾಗಿದ್ದ ಶ್ರೀ ಕುಬೇರಪ್ಪ ಪರಪ್ಪ ಗದಗ ಇವರು ತಾ|| ೨೬-೬-೩೫ ನೇ ದಿವಸ ಚೇಂಬರದ ಮೇಲೆ ಮಾಡಿದ ದಾವೆಯಲ್ಲಿಯ ಅವರ ಅರ್ಜಿಯ ಮೇರೆಗೆ ಚೇಂಬರದ ಸದ್ಯದ ನಿಯಮಗಳನ್ನು ಅಮಲಿನಲ್ಲಿ ತರಬಾರದೆಂದೂ ಮತ್ತು ಇಂದಿನ ೬ ನೇ ವಾರ್ಷಿಕ ಸಾಧಾರಣ ಸಭೆಯನ್ನು ಜರುಗಿಸಬಾರದೆಂದೂ ಸಂಸ್ಥೆಯ ಅಧಿಕಾರಸ್ಥರಿಗೆ ಗದಗ ೨ ನೇ ವರ್ಗದ ಸಬ್ ಜಜ್ ಕೋರ್ಟಿನಿಂದ ಜಾರಿಯಾದ ಕಚ್ಚಾ ತಾಕೀದಿಯನ್ನು ಶ್ರೀ ವೀರಭದ್ರಪ್ಪ ಬಸವಪ್ಪ ಬಳ್ಳಾರಿ ಇವರ ಅಪೀಲ್ ಅರ್ಜಿಯ ಮೇರೆಗೆ ಧಾರವಾಡದ ಡಿಸ್ಟ್ರಿಕ್ಟ ಜಡ್ಜರು ನಿಲ್ಲಿಸಿ ಮಾಡಿದ ಹುಕುಮನ್ನು ಸದಸ್ಯರ ಗಮನಕ್ಕೆ ತಂದುಕೊಟ್ಟು ಅದನ್ನು ರಿಕಾರ್ಡು ಮಾಡಲಾಯಿತು.

ಘನತೆ ಹೊಂದಿದ ನೈಝಾಂ ಪ್ರಭುಗಳವರನ್ನು ಅವರ ಪ್ರಜಾವಾತ್ಸಲ್ಯಕ್ಕಾಗಿ ಅಭಿನಂದಿಸಿ ಚೇಂಬರದ ಪರವಾಗಿ ಅವರಿಗೆ ರಾಜನಿಷ್ಠೆಯನ್ನು ವ್ಯಕ್ತಪಡಿಸಲಾಯಿತು.

ಕಾರ್ಯಕಾರಿ ಮಂಡಲದವರು ಒಪ್ಪಿಸಿದ ಕಳೆದ ವರ್ಷದ ವರದಿ ಮತ್ತು ಲೆಕ್ಕ ಪರೀಕ್ಷಕರಿಂದ ಪರೀಕ್ಷಿಸಲ್ಪಟ್ಟ ಲೆಕ್ಕಗಳನ್ನು ಗೌರವ ಕಾರ್ಯದರ್ಶಿಗಳಾದ ಶ್ರೀ ಮಾನ್ ಬಳ್ಳಾರಿ ವೀರಭದ್ರಪ್ಪನವರು ಓದಲಾಗಿ ಅವು ತೃಪ್ತಿಕರವಾಗಿವೆಯೆಂದು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟವು.

ಕಳೆದ ಮೂರು ವರ್ಷಗಳಿಂದಲೂ ಕಾರ್ಯಕಾರಿಮಂಡ[ಳದ] ಅತ್ಯಂತ ಉತ್ಸಾಹಿ ಸದಸ್ಯರೂ, ಉಜ್ವಲ ಕರ್ನಾಟಕಾಭಿಮಾನಿಗಳಾದ ಮ. ರಾ. ರಾ. ಶ್ರೀ **ಗೋಗಿ ಕಾಳಪ್ಪನವರ** ಅಕಾಲಿಕ [ಮರಣ]ದಿಂದ ಈ ಚೇಂಬರಕ್ಕಾದ ದುಃಖವನ್ನು ಸದಸ್ಯರೆಲ್ಲರೂ ಎ[ದ್ದು ನಿಂ]ತು ವ್ಯಕ್ತಪಡಿಸಲಾಯಿತು.

ಗೌರವ ಕಾರ್ಯದರ್ಶಿಗಳು ಸಾದರಪಡಿಸಿದ ೧೯೩೫-೩೬ ವರ್ಷದ ಚೇಂಬರದ ಆಯುವ್ಯಯದ ಅಂದಾಜು ಪತ್ರಿಕೆಯು ಮಂಜೂರ ಮಾಡಲ್ಪಟ್ಟಿತು.

ಶ್ರೀ ಮಾನ್ ವೈ. ಮಹಾಬಲೇಶ್ವರಪ್ಪನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀಮಾನ್ ಸಾಂತಪ್ಪ ಸಂಗಪ್ಪ ಯಳಮಲಿ ಮತ್ತು ಶ್ರೀಮಾನ್ ಮುರಿಗೆಪ್ಪ ಶಿದ್ದಪ್ಪ ಸುಗಂಧಿ ಇವರನ್ನು ಉಪಾಧ್ಯಕ್ಷರನ್ನಾಗಿಯೂ ಮತ್ತು ಶ್ರೀಮಾನ್ ವೀರಭದ್ರಪ್ಪ ಬಸವಪ್ಪ ಬಳ್ಳಾರಿ ಇವರನ್ನು ಗೌರವ ಕಾರ್ಯದರ್ಶಿಗಳನ್ನಾಗಿಯೂ ಮುಂದಿನ ಮೂ[ರು] ವರ್ಷಗಳಿಗೆ ಚೇಂಬರದ ಅಧಿಕಾರಸ್ಥರನ್ನಾಗಿ ಸರ್ವಾನುಮತದಿಂ[ದ] ಆರಿಸಲಾಯಿತು.

ಅಧಿಕಾರಸ್ಥರ ಆಯ್ಕೆಯಾದ ನಂತರ, ಸಭೆಗೆ ಬಂದ ಸದಸ್ಯರಿಗೆ ಸಾಮಾನ್ಯ ಸದಸ್ಯರ ಪಟ್ಟಿಯೊಡನೆ ಮತದಾನದ ಚೀಟಿಗಳನ್ನು ಮುಂದಿನ ವರ್ಷದ ಕಮೀಟಿಯ ಆಯ್ಕೆಗಾಗಿ ಹಂಚಲು ಹೊಸ ಅಧ್ಯಕ್ಷರು ಗೌರವಕಾರ್ಯದರ್ಶಿಗಳಿಗೆ ತಿಳಿಸಿದರು ಮತ್ತು ಅವು ಆ ಪ್ರಕಾರ ಹಂಚಲ್ಪಟ್ಟವು. ಮುಂಬಯಿ, ಮದ್ರಾಸ್ ... ನೈಝಾಂ ಕರ್ನಾಟಕದಿಂದ ಸಾಕಷ್ಟು ಪ್ರಾತಿನಿಧ್ಯವು ಇರುತ್ತದೆಂದೂ ಮತ್ತು ಮೈಸೂರು, ಕೊಡಗು ಹಾಗೂ ಉತ್ತರಕರ್ನಾಟಕ ಸಂಸ್ಥಾನಗಳಿಂದ ಸದ್ಯಕ್ಕೆ ಪ್ರಾತಿನಿಧ್ಯವಿರದ ಮೂಲಕ ಆಯಾ ವಿಶಿಷ್ಟ ಭಾಗಗಳು ೨೭ ನೇ ಆರ್ಟಿಕಲ್ಲಿನ ೪ ನೇ ಕಲಮಿನನ್ವಯ ಉಳಿದ ಭಾಗಗಳಿಂದ ತುಂಬಲ್ಪಡಬೇಕೆಂದೂ, ಮತ್ತು ಮತದಾನದ ಚೀಟಿಗಳನ್ನು ಸಂಜೆಯ ೪|| ಗಂಟೆಯೊಳಗಾಗಿ ತುಂಬಿ ಬ್ಯಾಲಟ್ ಪೆಟ್ಟಿಗೆಯಲ್ಲಿ ಹಾಕಬೇಕೆಂದೂ ಸದಸ್ಯರಿಗೆ ತಿಳಿಸಲಾಯಿತು.

ಈ ಮತದಾನದ ಚೀಟಿಗಳನ್ನು ಪರೀಕ್ಷಿಸುವದಕ್ಕೋಸುಗ ಶ್ರೀಮಾನ್ ಜಿ. ಮಧ್ವರಾವ, ವಕೀಲ, ರಾಯಚೂರ ಮತ್ತು ಶ್ರೀಮಾನ್ ಪಿ. ರಾಮಾಚಾರ್ಯ, ವಕೀಲ ರಾಯಚೂರ ಇವರಿಬ್ಬರನ್ನು ನಿರೀಕ್ಷಕರನ್ನಾಗಿ ಅಧ್ಯಕ್ಷರು ನಿಯಮಿಸಿದರು.

ಭಾರತ ವ್ಯಾಪಾರಿ ಮಹಾಸಭೆ (FEDERATION OF INDIAN CHAMBERS OF COMMERCE & INDUSTRY) ಗೆ ಕಳಿಸಬೇಕಾದ ನಾಲ್ವರು ಪ್ರತಿನಿಧಿಗಳಲ್ಲಿ ಚೇಂಬರದ ಅಧ್ಯಕ್ಷರಾದ ಶ್ರೀಮಾನ್ ವೈ. ಮಹಾಬಲೇಶ್ವರಪ್ಪನವರು ಮತ್ತು ಗೌರವಕಾರ್ಯದರ್ಶಿಗಳಾದ ಶ್ರೀಮಾನ್ ಬಳ್ಳಾರಿ ವೀರಭದ್ರಪ್ಪನವರು ಸಾಧಿಕಾರ (Ex- Officio) ಪ್ರತಿನಿಧಿಗಳಾದರು. ಮತ್ತು ಉಳಿದ ಎರಡು ಸ್ಥಳಗಳಿಗೆ ಶ್ರೀಮಾನ್ ಸೆಟ್ಟಿ ಸಿದ್ದಣ್ಣನವರು ರಾಯಚೂರ ಹಾಗು ಶ್ರೀಮಾನ್ ಮುಂಡರಗಿ ರಾಘವೇಂದ್ರರಾಯರು, ಕೊಪ್ಪಳ ಇವರು ಸಾಮಾನ್ಯ ಪ್ರತಿನಿಧಿಗಳೆಂದು ಆರಿಸಲ್ಪಟ್ಟರು.

ಕೆಳಗೆ ಕಾಣಿಸಿದ ಮಹಾಶಯರನ್ನು ಚೇಂಬರದ ಆಜೀವ ಗೌರವಸದಸ್ಯರನ್ನಾಗಿ ಆರಿಸಲಾಯಿತು:—

(೧) ಶ್ರೀ ಮಾನ್ ಪಿ. ಕಿಶನರಾಯರು, ಹೈಕೋರ್ಟ ವಕೀಲರು, ರಾಯಚೂರ. (೨) ಶ್ರೀ ಮಾನ್ ಮೋಕ್ಷಗುಂಡಂ ಕೃಷ್ಣ

ಕ್ರಮದಂತೆ ನಾವು ನಡೆಯಬೇಕು. ಬೈಬಲ್ ಪುಸ್ತಕವನ್ನು ಯಾರೂ ಓದಕೂಡದು. ಜರ್ಮನ್ ಜನರು ತಮ್ಮ ಮಕ್ಕಳಿಗೆ ಕ್ರೈಸ್ತ ಮತದ ಸಂಪರ್ಕವಾಗದಂತೆ ಎಚ್ಚರದಿಂದಿರಬೇಕು. ದೇವರನ್ನು ಕಾಣಲು ನಮಗೆ ದಲ್ಲಾಲನೇನೂ ಬೇಕಾಗಿಲ್ಲ. ಜರ್ಮನಿಯಲ್ಲಿ ಕ್ರಿಸ್ತರ ಯಾವ ಪಂಥದ ಚರ್ಚೆ ಇರಕೂಡದು.

ಜರ್ಮನಿಯು ಧಾರ್ಮಿಕ ಮತ್ತು ಸಾಂಸ್ಕೃತಿಕ ಈ ಹೊಸ ಹೋರಾಟವನ್ನು ನೋಡಿಯಾದರೂ ಹಿಂದು ಸುಶಿಕ್ಷಿತರು ಹಿಂದು ಧರ್ಮ ಮತ್ತು ಸಂಸ್ಕೃತಿಗಳ ಸಂರಕ್ಷಣೆ ಮತ್ತು ಸಂವರ್ಧನೆಗಳ ಕಡೆಗೆ ಗಮನಿಸಬಾರದೆ?

ಸ್ವಾಮಿ, ಎಮ್. ಎ; ಎಲ್ ಎಲ್ ಎಮ್., ಧಾರವಾಡ (೩) ಶ್ರೀಮಾನ್ ದೇವಳೆ ರಾಮರಾಯರು, ಬಿ ಎ, ಎಲ್ ಎಲ್. ಬಿ., ಗದಗ (೪) ಶ್ರೀಮಾನ್ ಬೆಳಗಾಂವಿ ರಾಮಚಂದ್ರರಾಯರು, ಬಿ.ಎ, ಧಾರವಾಡ.

೧೯೩೫-೩೬ ನೇ ವರ್ಷಕ್ಕಾಗಿ ಮೆಸರ್ಸ ಡಿ. ಎಸ್ ಸುಬ್ರಹ್ಮಣ್ಯ ಅಂಡ್ ಕೊ; ರಜಿಸ್ಟರ್ಡ್ ಅಕೌಂಟಟ್ಸ. ಅಂಡ್ ಆಡಿಟರ್ಸ. ಕೊಸಪೇಟೆ, ಇವರನ್ನು ಲೆಕ್ಕ ಪರೀಕ್ಷಕರನ್ನಾಗಿ ನಿಯಮಿಸಲಾಯಿತು.

ನಂತರ ಕೆಳಗೆ ಕಾಣಿಸಿದ ಗೊತ್ತುವಳಿಗಳು ಸರ್ವಾನುಮತದಿಂದ ಸ್ವೀಕೃತವಾದವುಃ— ಶಾಸನ ಮಂಡಲಗಳಲ್ಲಿ ಈ ಜೇಂಬರಕ್ಕೆ ಪ್ರಾತಿನಿಧ್ಯ; ತುಂಗಭದ್ರಾ ಅಣೆಕಟ್ಟು; ಕನ್ನಡದಲ್ಲಿಯೇ ಲೆಕ್ಕಪತ್ರಗಳನ್ನಿಡಬೇಕು; ಕಬ್ಬಿನ ಸಾಗುವಳಿ; ರೇಶಿಮೆಯ ಉದ್ಯೋಗ, ರೇಲ್ವೆ ಪಾವತಿಗಳ ಸಂಧಾನ ಸ್ವರೂಪ, ದೇಶೀಯ ಬ್ಯಾಂಕಿಂಗ, ಹಳ್ಳಿಗಳ ಸಾಲಗಾರಿಕೆ; ಉತ್ಪನ್ನದ ಕರ.

ಅಭಿನಂದನ

“ ಈ ಚೇಂಬರದ ಪೂರ್ವದ ಅಧ್ಯಕ್ಷರಾದ ಶ್ರೀ ಮಾನ್ ನಾಗಪ್ಪಣ್ಣಾ ಅಬ್ಬುಲಪುರಕರ ಇವರು ಸೊಲ್ಲಾಪುರದ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದುದಕ್ಕಾಗಿ ಈ ಸಭೆಯು ಅವರನ್ನು ವಿಶೇಷವಾಗಿ ಅಭಿನಂದಿಸುತ್ತದೆ.”

ಮೇಲಣ ಈ ಮುಖ್ಯ ಗೊತ್ತುವಳಿಗಳಲ್ಲದೆ ಬೇರೆ ಕೆಲವು ಪ್ರಾಸಂಗಿಕ ಗೊತ್ತುವಳಿಗಳೂ ಅಂಗೀಕೃತವಾದವು. ಈ ಕಾರ್ಯಗಳು ನಡೆಯುವಷ್ಟರಲ್ಲಿ, ಹೊಸ ವರ್ಷದ ಕಮೀಟಿಯ ಆಯ್ಕೆಯ ಸಂದರ್ಭದಲ್ಲಿ, ನಿರೀಕ್ಷಕರಾಗಿ ನಿಯಮಿಸಲ್ಪಟ್ಟ ಶ್ರೀಮಾನ್ ಜಿ. [illegible] ಶ್ರೀಮಾನ್ ಪಿ. ರಾಮಾಚಾರ್ಯರು ಇವ[illegible] ಮತದಾನದ ಚೀಟಗಳನ್ನು ಪರೀಕ್ಷಿಸಿ ತಮ್ಮ ವರದಿಯನ್ನು ಒಪ್ಪಿಸಿದರು. ಅದರ ಪ್ರಕಾರ ಮದ್ರಾಸ ಕರ್ನಾಟಕಕ್ಕೆ ಶ್ರೀಯುತರುಗಳಾದ ಟಿ. ಪಂಚಾಕ್ಷರಯ್ಯನವರು, ಜೋತಿ ಈಶ್ವರಪ್ಪನವರು, ಜಡೆ ಶಿದ್ಲಿಂಗಪ್ಪನವರು, ಮಾಚಾನಿ ಸೋಮಪ್ಪನವರು, ಭದ್ರಸೆಟ್ಟಿ ಅಜ್ಜಪ್ಪನವರು, ನೈಝಾಂ ಕರ್ನಾಟಕಕ್ಕೆ ಶ್ರೀಯುತರುಗಳಾದ ಮುಂಡರಗಿ ರಾಘವೇಂದ್ರರಾಯರು, ಅಗಡಿ ವೀರಪ್ಪನವರು, ಬಿ. ಎ. ಪಾಟೀಲರವರು, ಶೆಟ್ಟಿ ಸಿದ್ದಣ್ಣನವರು, ಮೈಲಾಪುರ ಅದೆಣ್ಣನವರು ಮತ್ತು ಮುಂಬಯಿ ಕರ್ನಾಟಕ ಹಾಗು ಮೈಸೂರು, ಕೊಡಗು, ಉತ್ತರ ಕರ್ನಾಟಕ ಸಂಸ್ಥಾನಗಳಿಗೆ ಶ್ರೀಯುತರುಗಳಾದ ಅಬ್ಬುಲಪುರಕರ ನಾಗಪ್ಪಣ್ಣಾನವರು, ಎಮ್. ಸಿ. ತುಮ್ಮಿನಕಟ್ಟಿಯವರು, ವಿಠೋಬಸಾ ಹಂಪೂಸಾ ಕಬಾಡಿಯವರು, ರಾಚಪ್ಪ ಗುರುಶಾಂತಪ್ಪ ಇಂಗಳಳ್ಳಿಯವರು, ಹಣಮಂತಸಾ ಲಕ್ಷ್ಮಣಸಾ ಬೇವಿನಕಟ್ಟಿಯವರು, ಬಸವಣ್ಣೆಪ್ಪ ಬಸಪ್ಪ ಹುಬ್ಬಳ್ಳಿಯವರು, ಅಬ್ದುಲ ಕರೀಮ ಸಾಹೇಬ ಹಣಿಗಿಯವರು, ರತನಶಾ ಫ್ರಾಮ್ಜಿ ಬಿಜಾಪುರವಾಲಾ ಅವರು, ಬಸಪ್ಪ ದುಂಡಪ್ಪ ಅಕ್ಕಿಯವರು, ನರಸಪ್ಪ ವೀರಪ್ಪ ಮಾಮಡಪಲ್ಲಿಯವರು ಮತ್ತು ಬೇಂದ್ರೆ ಲಕ್ಷ್ಮಣರಾಯರು ಆರಿಸಲ್ಪಟ್ಟಿರುವರೆಂದು ಅಧ್ಯಕ್ಷರಿಂದ ಸಾರಲ್ಪಟ್ಟಿತು.

ಬಳಿಕ, ಅಧ್ಯಕ್ಷರು ಸಮಾರೋಪದ ಭಾಷಣವನ್ನು ಮಾಡಿ ಸಭೆಗೆ ಬಂದ ಸದಸ್ಯರೆಲ್ಲರೂ ಅತ್ಯಂತ ಉತ್ಸಾಹದಿಂದ ಸಭೆಯನ್ನು ನೆರವೇರಿಸುವದರಲ್ಲಿ ಸಹಕರಿಸಿದ್ದಕ್ಕಾಗಿ ಅವರೆಲ್ಲರಿಗೂ ವಂದನೆಗಳನ್ನರ್ಪಿಸಿದರು. ಮತ್ತು ಗೌರವ ಕಾರ್ಯದರ್ಶಿಗಳು ಕೊನೆಯಲ್ಲಿ, ಅತ್ಯಂತ ದಕ್ಷತೆಯಿಂದ ಸಭೆಯನ್ನು ಯಶಸ್ವಿಯಾಗಿ ನಡೆಸಿದ್ದಕ್ಕೆ ಅಧ್ಯಕ್ಷರ, ಸಭಾಕಾರ್ಯಕ್ಕೆ ತಮ್ಮ ಬಂಗ್ಲೆಯನ್ನು ಪ್ರೇಮಪೂರ್ವಕವಾಗಿ ಒಪ್ಪಿಸಿದ ಶ್ರೀಮಾನ್ ಪಿ. ಕಿಶನರಾಯರವರ, ಸಭೆಗೆ ಬಂದ ಸದಸ್ಯರಿಗೆಲ್ಲ ಸುವ್ಯವಸ್ಥೆಯ ಆದರಾತಿಥ್ಯವನ್ನು ಮಾಡಿದ ಶ್ರೀಮಾನ್ ಸೆಟ್ಟಿ ಸಿದ್ದಣ್ಣನವರ, ನಿರೀಕ್ಷಕರಾಗಿ ಶ್ರಮವಹಿಸಿದ ಶ್ರೀಮಾನ್ ಜಿ. ಮಧ್ವರಾವ ಮತ್ತು ಶ್ರೀಮಾನ್ ಪಿ. ರಾಮಾಚಾರ್ಯ ಇವರುಗಳ, ಮತ್ತು ಸಭೆಗೆ ಪ್ರಯಾಸದ ಆಯಾಸವನ್ನು ಲೆಕ್ಕಿಸದೆ ಆಗಮಿಸಿದ ಹಾಗು ರಾಯಚೂರಿನ ಸ್ಥಳೀಯ ಸದಸ್ಯರೆಲ್ಲರ ಆಭಾರವನ್ನು ಮನ್ನಿಸಿದರು.

ನಂತರ “ ಘನತೆ ಹೊಂದಿದ ನೈಝಾಂ ಪ್ರಭುಗಳಿಗೆ ಜಯವಾಗಲಿ ” ಎಂಬ ಜಯಜಯಕಾರದ ವಿಜಯ ಘೋಷದಲ್ಲಿ ಸಭೆಯು ಸಮಾಪ್ತವಾಯಿತು.

ಗದಗ
೫-೭-೧೯೩೫

ವೀರಭದ್ರಪ್ಪ ಬಸವಪ್ಪ ಬಳ್ಳಾರಿ.
ಗೌರವ ಕಾರ್ಯದರ್ಶಿ.

ಭಾರತ ರೀಡಿಂಗ ರೂಮು.

ರಾಯಚೂರು.

ಈ ಸಂಸ್ಥೆಯ ವಾರ್ಷಿಕೋತ್ಸವವು ಕಳೆದ ೯-೭-೩೫ ನೆಯ ತಾರೀಖಿನ ದಿವಸ ರಾಯಚೂರ ಜಿಲ್ಲಾ ಕಲೆಕ್ಟರ ಮೌಲ್ವಿ ಗುಲಾಂ ಗೌಸಖಾನ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಅವರು ತಮ್ಮ ಭಾಷಣದಲ್ಲಿ, “ ಈ ಸಂಸ್ಥೆಯನ್ನು ನೋಡಿ ನನಗೆ ಅತ್ಯಾನಂದವಾಗಿದೆ. ಇದನ್ನು ಕಾಪಾಡುವದು ಮುಖ್ಯವಾಗಿ ತರುಣರ ಕೈಯಲ್ಲಿದೆ ಇಂಥ ಸಂಸ್ಥೆಗಳಲ್ಲಿ ಜಾತಿ ಭೇದಕ್ಕೆ ಅವಕಾಶವಿಲ್ಲ ಅಂದಮೇಲೆ ಪ್ರತಿಯೊಂದ ಓಣಿಯಲ್ಲಿ ಇಂಥ ಸಂಘಗಳನ್ನು ಸ್ಥಾಪಿಸಿ ಏಕೆ ಜನಾಂಗದ ಸೇವೆ ಮಾಡಬಾರದು ? ” ಎಂದರು.

ಅಧ್ಯಕ್ಷ — ಕೊರಾ ಮಲ್ಲಯ್ಯ.
ಕಾರ್ಯದರ್ಶಿ. — M. ಶಿವರಾಮ ಶ್ರೇಷ್ಠಿ.

ಗ್ಯಾರಂಟಿಯಾದ

ಬೀಜಗಳು ಮತ್ತು ಸಸಿಗಳು.

	ರೂ.	ಆ.	ಪೈ.
೧೨ ಪೊಟ್ಟ ರಖಂ ವಾರಿ ಹೂವಿನ ಬೀಜಗಳು	೧	೮	೦
೧೨ ,, ,, ನಾಟಿ ತರಕಾರಿ ಬೀಜಗಳು	೧	೪	೦
೧೨ ,, — ,, ಇಂಗ್ಲೀಷು — ,,	೨	೦	೦
೧೨ ಜಾತಿ ಗುಲಾಬಿ ಸೊಸಿಗಳು—	೪	೦	೦
೧೨ ,,—ಕಲಮಿ ಮಾವಿನ ಸೊಸಿಗಳು— ೬ ರಿಂದ	೯	೦	೦
೧೨ ,,—ಕಿತ್ತಲೆ. ನಿಂಬೆ, ಪೇರಲ, ಸೇಬು, ಪನ್ನೇರಳ, ದಾಳಿಂಬೆ, ಚಕ್ಕೋತ, ಪೀಚಸ್, ಮರಸೇಬು ಮೊದಲಾದವು	೫	೦	೦
೧೨ ,, ದ್ರಾಕ್ಷಿ, ಲಕ್ಕೋಟ, ರಾಜಪುರಿ, ಪೊಪಾಯ, ಅಂಜೂರ, ಸೀತಾಫಲ	೩	೦	೦
೧೨ ,, ಇತರ ಪುಷ್ಪ ಗಿಡಗಳು—	೩	೦	೦

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ದೇವಪ್ಪ ಅಂಡ್ ಸನ್

ಲಾಲ್‌ಬಾಗ್ ರೋಡು, ಬೆಂಗಳೂರು ಸಿಟಿ.

ವರ್ತಮಾನಸಾರ.

—ಹುಬ್ಬಳ್ಳಿಯಲ್ಲಿ ಸ್ತ್ರೀಯರ ಸಾರ್ವಜನಿಕ ಸಭೆ ನೆರೆದು ಮುಂಬಯಿ ಶಾಸನ ಸಭೆಯಲ್ಲಿ ಶ್ರೀ ದೇಸಾಯಿಯವರು ತರಲಿರುವ ದತ್ತಕ ಗೊತ್ತುವಳಿಯನ್ನು ನಿಷೇಧಿಸಲಾಯಿತು. ವಿಧವೆಯರಿಗೆ ವಿವಕ್ಷ್ಯಾಂಗಗಳು ತುಂಬಾ ಅಧಿಕಾರವಿರುವೆಯೆಂದು ಮಂಡಲದವರು ಅಭಿಪ್ರಾಯಪಟ್ಟರು.

—೫೦ ವರ್ಷಗಳ ಲಾಗಾಯ್ತು ಇನ್ನು ಮುಂದೆ ಹಿಂದುಸ್ಥಾನದ ರಾಜಕಾರಣದ ಅಗ್ರಗೋಸಾಗುವರೆಂದೂ ಇನ್ನು ೩೦ ವರ್ಷಗಳ ನಂತರ ರೋಮನ್ ಕ್ಯಾಥೋಲಿಕ್ ಮತ್ತು ಪ್ರೊಟೆಸ್ಟಂಟ ಜನರಲ್ಲಿ ಧರ್ಮಯುದ್ಧವಾಗುವದೆಂದೂ ಪ್ರೊಫೆಸರ್ ಮ್ಯಾಂಟೆಸ್ ಎಂಬ ಮುತ್ಸದ್ದಿಯು ಅನ್ನುತ್ತಾನೆ.

—ವ್ಹಾಯಿಸರಾಯರಾದ ಲಾರ್ಡ ವಿಲಿಂಗ್ಡನ್‌ರವರು ಅಮೃತಸರದಲ್ಲಿಯ ಸೀಖರ ಸುವರ್ಣ ಮಂದಿರಕ್ಕೆ ದರ್ಶನಾರ್ಥವಾಗಿ ಹೋದಾಗ್ಗೆ ಸುವರ್ಣ ಮಂದಿರಕ್ಕೆ ೧೧೧ ರೂಪಾಯಿಗಳನ್ನೂ ಅಕಾಲತಕ್ತಕ್ಕೆ ೫೧ ರೂ. ಗಳನ್ನೂ ಕಾಣಿಕೆಯಾಗಿ ಕೊಟ್ಟರು.

—ತ್ರಿವಣಕೋರ ಸಂಸ್ಥಾನದಲ್ಲಿ ಕ್ವೈಲಾನ್ ಎಂಬ ಪಟ್ಟಣದ ಹತ್ತರ ಕೆಂಪು ಮಳೆಯಾಯಿತಂತೆ. ಅನೇಕರು ಆ ನೀರನ್ನು ಬಾಟ್ಲಿಯಲ್ಲಿ ಹಿಡಿದಿಟ್ಟಿರುವರಂತೆ.

—ಮುಂಬಯಿಯಲ್ಲಿ ಧಾರಾವಿಯ ಟಾಟಾ ಇಲೆಕ್ಟ್ರಿಕ್ ರಿಸೀವ್ಹಿಂಗ ಸ್ಟೇಶನದಲ್ಲಿ ತಪ್ಪಿತವಾಗಿ ರಾತ್ರಿ ೬ ಗಂಟೆಯಿಂದ ೧೧ ಗಂಟೆಯ ವರೆಗೆ ಅನೇಕ ಓಣಿಗಳಲ್ಲಿ ಕತ್ತಲೆಯ ಸಾಮ್ರಾಜ್ಯವು ಪಸರಿಸಿತು. ಜನರೆಲ್ಲ ಮೇಣಬತ್ತಿಗಳನ್ನು ಕೊಳ್ಳಲು ಧಾವಿಸಹತ್ತಿದರು. ಅನೇಕರು ದೀವಿಗೆಗಳು ಪುನಃ ಯಾವಾಗ ಹತ್ತಿಸಲ್ಪಡುವವೆಂದು ಟೆಲಿಫೋನಿನಿಂದ ಕಂಪನಿಗೆ ಬಾರಿ ಬಾರಿಗೆ ಕೇಳುತ್ತಿದ್ದರು. ಹೊಸ ಸುಧಾರಣೆಯ ಹಣೇ ಬರಹವಿದು!

—ಕಳೆದ ೮ನೆಯ ತಾರೀಖಿನ ದಿವಸ ಮುಂಜಾನೆ ೮ ಗಂಟೆ ಬಾರಿಸಿ ೫ ನಿಮಿಷಗಳಾದ ಮೇಲೆ ಕ್ವೆಟಾದಲ್ಲಿ ಪುನಃ ಭೂಕಂಪವಾಯಿತು. ಭೂಕಂಪವಾಗುವ ಮೊದಲು ಭಯಂಕರ ಸಪ್ಪಳವಾಯಿತು.

—ರೂಮಾನಿಯಾ ದೇಶದಲ್ಲಿ ನೆಲಿಸಿದ್ದ ೬೦ ಸಾವಿರ ಜನ ತುರ್ಕರಿಗೆ ಪುನಃ ತುರ್ಕಸ್ಥಾನದಲ್ಲಿ ಬಂದು ನೆಲಿಸಲು ತುರ್ಕಸ್ಥಾನದ ಅಧ್ಯಕ್ಷ ಕೇಮಾಲ ಪಾಶಾರವರು ಸೂಚಿಸಿದ್ದಾರೆ. ಈ ಬಗೆಂ ತುರ್ಕರಿಗೆ ಅವರು ಭೂಮಿಯನ್ನು ಕೊಡುವರು. ಈಗಾಗಲೇ ಕೆಲ ಜನರು ಬರಹತ್ತಿರುವರು.

—ಒಬ್ಬ ಕ್ರಿಸ್ತೀ ತರುಣನು ಮಾತು ಕೊಟ್ಟು ತನ್ನನ್ನು ಲಗ್ನ ಮಾಡಿಕೊಳ್ಳಲಿಲ್ಲವೆಂದು ಮಿಸ್ ಡಿಸಿಲ್ವಾ ಎಂಬ ಕ್ರಿಸ್ತೀ ತರುಣಿಯು ಅವನ ಮೇಲೆ ೧೦ ಸಾವಿರ ರೂ. ನಷ್ಟದ ದಾವೇ ಮಾಡಿರುವಳು. ಲಗ್ನದ ಪೂರ್ವದಲ್ಲಿ ಕೊಟ್ಟ ಯಾವ ಮಾತುಗಳೂ ಗೋವೆಯಲ್ಲಿಯ ಕಟ್ಟಳೆಯ ಮೇರೆಗೆ ಬಂಧನಕಾರಕವಾಗುವದಿಲ್ಲವೆಂದು ಪ್ರತಿವಾದಿಯ ವಕೀಲರು ವಾದಿಸಿದರು. ಹೊಸ ಸುಧಾರಣೆಯ ಪ್ರೇಮ ಪ್ರಣಯವಿದು!

—ಅತಿ ಪೂರ್ವ ದಿಗ್ಭಾಗ (Far East)ದಲ್ಲಿಯ ದೇಶಗಳ ಕಡೆಗೆ ಹೋಗುವ ಹಡಗುಗಳಿಗೆ ಕಲ್ಲಿದ್ದಲಿಯನ್ನು ಪೂರೈಸಿ ಕೊಡುವದಕ್ಕಾಗಿ ಕೊಚೀನ ಬಂದರದಲ್ಲಿ ಒಂದು ಕಲ್ಲಿದ್ದಲಿ ಸಂಗ್ರಹ ಸ್ಥಾನವನ್ನು ನಿರ್ಮಿಸುವದಕ್ಕಾಗಿ ಮದ್ರಾಸ ಸರಕಾರದವರೂ, ಮಧ್ಯವರ್ತಿ ಸರಕಾರದವರೂ, ಹಾಗೂ ಕೊಚೀನ ತ್ರಾವಣಕೋರ ಸಂಸ್ಥಾನಗಳ ಸರಕಾರದವರೂ ಕೂಡಿ ಆಲೋಚಿಸುವವರಿದ್ದಾರೆ. ಇದು ನಿರ್ಣಯವಾದದ್ದಾದರೆ ಕೊಚೀನ ಬಂದರವು ಜಗತ್ತಿನ ಮುಖ್ಯ ಬಂದರಗಳಲ್ಲಿ ಒಂದಾಗುವದು.

—ಇಡಾರದ ಮಹಾರಾಣಿಯವರು ಬದರೀನಾಥ ಯಾತ್ರೆಯನ್ನು ವಿಮಾನದಿಂದ ಮಾಡಿದರು. ಕೇದರನಾಥ ಬದರೀನಾಥ ಕ್ಷೇತ್ರಗಳಿಗೆ ಈಗ ಅನೇಕರು ವಿಮಾನಗಳ ಮೂಲಕ ತೀರ್ಥಯಾತ್ರೆ ಮಾಡುತ್ತಿದ್ದಾರೆ.

—ಜಿಲ್ಹೆಗಳಲ್ಲಿರುವ ಶಾಲೆಗಳಲ್ಲಿ ಅಸ್ಪೃಶ್ಯ ಬಾಲಕರನ್ನು ಸ್ಪೃಶ್ಯ ಬಾಲಕರೊಡನೆ ಸಮವಾಗಿ ಕೂಡ್ರಿಸಿಕೊಳ್ಳದಿದ್ದರೆ ಅಥವಾ ಅಸ್ಪೃಶ್ಯ ಶಿಕ್ಷಕರನ್ನು ಶಾಲೆಯಲ್ಲಿ ನೇಮಿಸಿಕೊಳ್ಳದಿದ್ದರೆ ಸರಕಾರ ಗ್ರಾಂಟು ಕೊಡುವದನ್ನು ನಿಲ್ಲಿಸಲಾಗುವದೆಂದು ಮದ್ರಾಸ ಸರಕಾರದವರು ಪ್ರಕಟಿಸಿದ್ದಾರೆ.



ಪ್ರಾಚೀನ ಕಾಲದ ಕಲಾಕೌಶಲ್ಯ

ಪಿರಾಮಿಡ್

ಇಜಿಪ್ತ ದೇಶದ ನೈಲ ನದಿಯ ಎಡಗಡೆಯ ದಂಡೆಯ ಮೇಲೆ ಗಿಝು ಎಂಬ ಸ್ಥಳದಲ್ಲಿ ಪಿರಾಮಿಡ್ ಎಂಬ ಭವ್ಯ ಗೋಪುರಗಳಿವೆ ಆ ಪ್ರದೇಶದಲ್ಲಿ ಇವು ೬೦ ಮೈಲುಗಳ ವರೆಗೆ ವ್ಯಾಪಿಸಿರುವವು. ಇವು ಘನತ್ರಿಕೋಣಾಕೃತಿಯಲ್ಲಿದ್ದು, ೪೮೦ ಅಡಿಗಳ ವರೆಗೆ ಎತ್ತರವಿರುವವು. ಇಜಿಪ್ತದ ಪಿರಾಮಿಡ್ಡಿನ ಬುಡದಲ್ಲಿ ೭೪೬ ಚಚ್ಚೌಕ ಅಡಿ ಇದ್ದು ೧೫ ಮೈಲು ಕ್ಷೇತ್ರವಿರುವ ಪ್ರದೇಶವನ್ನು ವ್ಯಾಪಿಸಿದೆ.

ಇವುಗಳನ್ನು ಕ್ರಿಸ್ತಶಕ ಪ್ರಾರಂಭವಾಗುವ ಪೂರ್ವದಲ್ಲಿಯೇ ೧೮೦೦ ದಿಂದ ೩೦೦೦ ವರುಷಗಳ ಮೊದಲೇ ಕಟ್ಟಲ್ಪಟ್ಟಿರಬೇಕೆಂದು ಚಿಕಾಗೊ-ವಿಶ್ವ ವಿದ್ಯಾಲಯದ ಓರಿಯಂಟಲ್ ಇನ್‌ಸ್ಟಿಟ್ಯೂಟದ ಡಾಯರೆಕ್ಟರ ಜೇಮ್ಸ ಎಚ್ ಬ್ರೆಸ್ಟೆಡ್ ಇವರ ಅಭಿಪ್ರಾಯವಿದೆ. ಆ ಕಾಲಕ್ಕೆ ಇಜಿಪ್ತ ದೇಶವು ಸುಧಾರಣೆಯ ಶಿಖರವನ್ನು ಕಂಡಿದ್ದಿತು. ಈ ಗೋಪುರಗಳನ್ನು ಮೊದಲು ಸೂರ್ಯನ ಪ್ರತಿಬಿಂಬವನ್ನು ಅಳೆಯಲು ಕಟ್ಟಲಾಯಿತು. ಬರಬರುತ್ತ ಅವು ಬಾದಶಹರ ಸಮಾಧಿ ಸ್ಥಾನಗಳಾಗಿ ಉಪಯೋಗಿಸಲ್ಪಟ್ಟವು. ಥೆಬ್ಸ ಎಂಬಲ್ಲಿ ಇದ್ದ ಪಿರಾಮಿಡ್ಡದಲ್ಲಿ ಕ್ರಿ. ಪೂ. ೧೩೫೦ ನೆಯ ವರ್ಷದಲ್ಲಿದ್ದ ತರುಣ ರಾಜನಾದ ತೂತನಖಾನಮ್ ಎಂಬವನ ಸಮಾಧಿ ಇದೆ.

ಈ ಪ್ರದೇಶದಲ್ಲಿ ಸ್ಫಿಂಕ್ಸ ಎಂಬ ಒಂದು ಸಿಂಹದ ಪ್ರತಿಮೆಯು ಕಲಿನಲ್ಲಿ ಕೆತ್ತಲ್ಪಟ್ಟಿದೆ. ಅದರ ಉದ್ದಳತೆಯು ೧೭೨॥ ಅಡಿ ಇದೆ. ...ಕಲ್ಲಿನ ವೇದಿಕೆಯಿದೆ. ಅದರ ಮೇಲಿ ...ನದಿಂದ ನೋಡಲಾಗಿ ಅದು ಕ್ರಿ. ಪೂ ೬೫೦೦ ...ವರ್ಷದಲ್ಲಿ ಉಂಟಾಗಿರಬೇಕೆಂದು ತರ್ಕಿಸಲಾಗಿದೆ.

ಬಾಬಿಲೋನದ ತೂಗಾಡುವ ತೋಟ.

ಅರಬಸ್ಥಾನದಲ್ಲಿ ಸಿರಿಯಾ ಪ್ರಾಂತದ ಬಗದಾದ ಪಟ್ಟಣದ ಹತ್ತಿರವೇ ಸದ್ಯದ ಯುಫ್ರೆಟಿಸ್ ನದಿಯ ದಂಡೆಯ ಮೇಲೆ ಕ್ರಿ. ಶಕವು ಪ್ರಾರಂಭವಾಗುವದಕ್ಕಿಂತ ೬೦೦ ವರ್ಷಗಳ ಪೂರ್ವದಲ್ಲಿ ನೆಬುಚಿದ್ ನಝರ ಎಂಬ ಬಾದಶಹನು ಆಳುತ್ತಿದ್ದನು. ಅವನ ಅರಮನೆಯಲ್ಲಿ ಒಂದು ತೂಗಾಡುವ ತೋಟವಿದ್ದಿತು. ಈ ತೋಟವು ಭೂಪೃಷ್ಠದಿಂದ ೭೫ ರಿಂದ ೩೦೦ ಅಡಿ ಎತ್ತರವಿದ್ದಿತು ಅದರ ಮೇಲೆ ಸಣ್ಣ ಸಣ್ಣ ಹೂ ಬಳ್ಳಿಗಳನ್ನೂ, ಉಪವನ, ಕಂಟಿಗಳನ್ನೂ ಹಚ್ಚಿದ್ದಲ್ಲದೆ ಅಲ್ಲಲ್ಲಿ ಕಾರಂಜಿಗಳನ್ನೂ ನಿರ್ಮಿಸಿದ್ದರು. ಅರಮನೆಯ ಎಲ್ಲಕ್ಕೂ ಮೇಲಿನ ಮಾಳಿಗೆಯಲ್ಲಿ ನೀರಿನ ಒಂದು ದೊಡ್ಡ ಹೌದು ಇದ್ದು ಅಲ್ಲಿಂದ ನಳಗಳ ಮುಖಾಂತರ ಆ ತೋಟಕ್ಕೆ ನೀರು ಬಿಡುತ್ತಿದ್ದರು.

ಚೀನದ ಅದ್ಭುತ ಗೋಡೆ.

ವೈರಿಗಳು ಬಾರದಂತೆ ಒಂದು ಪಟ್ಟಣದ ಸುತ್ತಲೂ ಕೋಟೆ ಕಟ್ಟಬಹುದು. ಅಥವಾ ಒಂದು ಪರ್ವತದ ಶಿಖರದ ಸುತ್ತಲೂ ಕೋಟೆಯನ್ನು ಕಟ್ಟಬಹುದು. ಆದರೆ ಒಂದು ದೇಶಕ್ಕೇ ಪ್ರಚಂಡವಾದ ಗೋಡೆಯನ್ನು ಕಟ್ಟಿರುವುದು ಕಲ್ಪನಾತೀತವೇ ಸರಿ. ಚಿನದಲ್ಲಿ ಇಂಥ ಪ್ರಚಂಡ ಗೋಡೆಯನ್ನು ಕ್ರಿಸ್ತಪೂರ್ವ ಮೂರನೆಯ ಶತಮಾನದಲ್ಲಿಯೇ ಕಟ್ಟಿರುವದನ್ನು ನೋಡಿದರೆ ಆಶ್ಚರ್ಯ ವೆನಿಸುತ್ತದೆ.

ಈ ಗೋಡೆಯು ಪೇಕಿಂಗದ ಉತ್ತರಕ್ಕೆ ಹಳದೀ ಸಮುದ್ರದ ಒಂದು ಆಖಾತದಿಂದ ಪ್ರಾರಂಭವಾಗಿದ್ದು ಹಾವಿನ ಮುರಿಗೆಯಂತೆ ಹೊರಳುತ್ತ ೨೫೫೦ ಮೈಲುಗಳ ವರೆಗೆ ಹಬ್ಬಿಕೊಂಡು ತುರ್ಕಸ್ಥಾನದ ಸೀಮೆಗೆ ಬಂದು ಮುಟ್ಟಿದೆ. ಈ ಅದ್ಭುತ ಗೋಡೆಯ ಮುಂದೆ ವೈರಿಗಳು ಬಂದರೆ ಈ ಗೋಡೆಯಲ್ಲಿ ಕುಳಿತು ಅವರ ಮೇಲೆ ಗುಂಡು ಸುರಿಸಲು ೨೫೦೦೦ ಬುರುಜುಗಳಿವೆ. ಹಾಗೂ ಸ್ವತಃ ಗುಪ್ತವಾಗಿದ್ದುಕೊಂಡು ವೈರಿಗಳಿಗೆ ಕಾಣದಂತೆ ನಿರೀಕ್ಷಣೆ ಮಾಡುವ ೧೫೦೦೦ ಬುರುಜುಗಳಿವೆ.

ಇಂಥ ಪ್ರಚಂಡ ಗೋಡೆಯು ಜನಾಸಿ ವಿಮಾನಗಳ ಮುಂದೆ ನಿರುಪಯುಕ್ತವಾಗುವದೆಂದು ಪಾಪ ಆ ಪ್ರಾಚೀನ ಚೀನಿಗಳಿಗೇನು ಗೊತ್ತು!

ರೋಮದಲ್ಲಿಯ ನಾಟಕ ಗೃಹ. (Colossum)

ಕ್ರಿಸ್ತಶಕ ಪೂರ್ವದಲ್ಲಿ ಇಟಲಿ ದೇಶದ ರೋಮ ಪಟ್ಟಣವು ನಾಗರೀಕತೆಯಲ್ಲಿ ಜಗದ್ವಿಖ್ಯಾತವಾಗಿದ್ದಿತು. ಕ್ರಿಸ್ತಶಕ ಪ್ರಾರಂಭದ ೮೦ ನೆಯ ಇಸ್ವಿಯ ಕಾಲಕ್ಕೆ ಡೊಮಿಟಿಅನ್ ಎಂಬ ಒಬ್ಬ ಸಾರ್ವಭೌಮನು ಒಂದು ಭವ್ಯವಾದ ನಾಟಕ ಗೃಹವನ್ನು ಅಲ್ಲಿ ಕಟ್ಟಿಸಲು ಮೊದಲು ಮಾಡಿದನು. ಮುಂದೆ ಕ್ರಿ. ಶ. ೨೩೮ ನೆಯ ಇಸ್ವಿಯಲ್ಲಿ ಅದಕ್ಕೆ ನಾಲ್ಕನೆಯ ಅಂತಸ್ತನ್ನು ನಿರ್ಮಿಸಲಾಯಿತು. ನಾಟಕ ಗೃಹದಲ್ಲಿಯ ರಂಗಭೂಮಿಯು ೨೮೧ × ೧೭೬ ಅಡಿ ಇದ್ದಿತು. ಹಾಗೂ ಅದರ ಸುತ್ತಿನ ದೀರ್ಘ ವರ್ತುಲಾಕಾರದ ಪ್ರೇಕ್ಷಕರ ಸ್ಥಾನವು ೬೧೫ × ೫೧೦ ಅಡಿ ಇದ್ದಿತು. ಈ ಭವ್ಯ ಭವನದಲ್ಲಿ ೫೦೦೦೦ ಜನ ಪ್ರೇಕ್ಷಕರು ಕುಳಿತುಕೊಂಡೂ ಮತ್ತು ೨೦೦೦೦ ಜನ ಪ್ರೇಕ್ಷಕರು ಎದ್ದು ನಿಂತೂ ನೋಡುವಷ್ಟು ವಿಸ್ತೀರ್ಣವಾಗಿದ್ದಿತು ಇದರ ಬುಡದಲ್ಲಿಯ ನೆಲಮನೆಗಳಲ್ಲಿ ಹುಲಿ, ಸಿಂಹ, ಮೊದಲಾದ ಕ್ರೂರ ಪಶುಗಳನ್ನು ಇಟ್ಟು ಆ ಕಾಲದ ಪದ್ಧತಿಯಂತೆ ಹೊಸದಾಗಿ ಕ್ರಿಸ್ತೀಯರಾದವರನ್ನು ಮತ್ತು ತಮಗೆ ಬೇಡಾದ ಜನರನ್ನು ಸಿಂಹ ಮೊದಲಾದವುಗಳನ್ನು ಹರಿಬಿಟ್ಟು ಕೊಲ್ಲಿಸುವ ಭೀಕರ ದೃಶ್ಯವನ್ನು ತೋರಿಸುತ್ತಿದ್ದರು. ಹಾಗೂ ರಂಗಭೂಮಿಯಲ್ಲಿ ಅನೇಕ ದ್ವಂದ್ವ ಯುದ್ಧಗಳೂ ಜರುಗುತ್ತಿದ್ದವು.

ರೋಮನ್ ಜನರು ಅನೇಕ ರಾಜ್ಯಗಳನ್ನು ಗೆದ್ದು ಅಲ್ಲಲ್ಲಿ ಸೆರೆ ಸಿಕ್ಕ ಜನರನ್ನು ಹಿಡಿತಂದು ಈ ನಾಟಕ ಭವನವನ್ನು ಕಟ್ಟಲು ಹಚ್ಚುತ್ತಿದ್ದರು. ಈ ಪ್ರಕಾರ ಇದನ್ನು ಕಟ್ಟಲು ೧೨೦೦೦ ಜನ ಗುಲಾಮರು ದುಡಿಸಲ್ಪಡುತ್ತಿದ್ದು ಸಾಧಾರಣ ೧॥ ಕೋಟಿ ಡಾಲರುಗಳು ಇದಕ್ಕೆ ವೆಚ್ಚವಾಗಿವೆ. ಈಗ ಇದರ ಅವಶೇಷಗಳು ಮಾತ್ರ ಉಳಿದಿವೆ.

ಸಾರ್ವಜನಿಕ ಕ್ರೀಡಾಗೃಹ.

ಕ್ರಿ. ಪೂ. ೬೦೫ ನೆಯ ವರ್ಷದಲ್ಲಿ ತಾರಕ್ವಿನ್ ಎಂಬ ಇಟಲಿ ಅರಸನು ಇದನ್ನು ಕಟ್ಟಿಸಿದನು ಮತ್ತು ಕ್ರಿಸ್ತನು ಜನ್ಮಿಸುವ ಪೂರ್ವದಲ್ಲಿ ಜ್ಯೂಲಿಯಸ್ ಸೀಝರನು ಅದನ್ನು ಬೆಳೆಯಿಸಿದನು. ಇದು ೩೧೨ ಅಡಿ ಎತ್ತರವೂ ೧೮೭೫ ಅಡಿ ಉದ್ದವೂ ಹಾಗೂ ೬೨೫ ಅಡಿ ಅಗಲವೂ ಇದ್ದಿತು. ಇದರಲ್ಲಿ ೧॥ ಲಕ್ಷ ಜನ ಪ್ರೇಕ್ಷಕರು ಕುಳಿತು ನೋಡುವ ಏರ್ಪಾಟನ್ನು ಮಾಡಲಾಗಿದ್ದಿತು. ಇದನ್ನೇ ಮುಂದೆ ನಾಲ್ಕನೆಯ ಶತಮಾನದಲ್ಲಿ ಮತ್ತಷ್ಟು ಬೆಳೆಯಿಸಿ ೩೮೫೦೦೦ ಜನರು ಕುಳಿತುಕೊಳ್ಳುವಷ್ಟು ವಿಶಾಲವಾಗಿ ಮಾಡಲಾಯಿತು. ಈ ಭವನದಲ್ಲಿ ಕುದುರೆ ರಥಗಳ ಶರ್ಯತ್ತು ನಡೆಯುತ್ತಿದ್ದವು.

೫೦೦ ರೂಪಾಯಿ ಕ್ಲೇಮು ಸಿಕ್ಕಿತು!

ದಿ

ಸ್ವರಾಜ್ಯ

ಬ್ಯಾಂಕಿಂಗ ಮತ್ತು ಇನ್ಶ್ಯುಅರನ್ಸ ಕಂಪನಿ, ಲಿಮಿಟೆಡ್, ಧಾರವಾಡ

ಇದರ ಮ್ಯಾನೇಜಿಂಗ ಏಜಂಟ್ಸರಿಗೆ.—

ಚಿತ್ರಕಲ್‌ದುರ್ಗ ಡಿಸ್ಟ್ರಿಕ್ಟ ಹರಿಹರದಲ್ಲಿರುವ

ಎಚ್. ಶಾಮಶಾಸ್ತ್ರಿಯು ಮಾಡುವ ವಿನಂತಿಗಳು

ನಾನು ತಮ್ಮ ಕಂಪನಿಯಲ್ಲಿ ೧೯೩೪ ನೇ ಇಸ್ವಿ ಫೆಬ್ರುವರಿ ತಿಂಗಳಲ್ಲಿ ಜನನ ವಿಮೆ ಮಾಡಿ ಪಾಲಿಸಿ ಪಡೆದು ಇದ್ದು ಒಂದು ವರುಷವಾದನಂತರ, ನನಗೆ ಒಂದು ಮಗು ಜನನವಾಯಿತು. ಈ ಬಗ್ಗೆ ನಾನು ಕಂಪನಿಗೆ ಇದುವರೆಗೆ ಪಾವತಿ ಮಾಡಿರುವದು ೧೯ ರೂಪಾಯಿಗಳು ಮಾತ್ರ. ತಮ್ಮ ಕಂಪನಿ ರೂಲ್ಸಪ್ರಕಾರ ಠರಾವು ಆಗಿರತಕ್ಕ ಮೊಬಲಗು ಈ ದಿವಸ ಕಂಪನಿಯಿಂದ ನನಗೆ (೫೦೦) ಐದುನೂರು ರೂಪಾಯಿಗಳು ಪಾವತಿ ಆಗಿರುತ್ತವೆ. ನಾನು ಪಾವತಿ ಮಾಡಿರುವ ಅಲ್ಪ ಮೊಬಲಗಿಗೆ ಪ್ರತಿಫಲವಾಗಿ ಬಂದಿರುವದನ್ನು ನೋಡಿ ನನಗೆ ಬಹು ಆನಂದವಾಗಿರುತ್ತದೆ. ಇದಕ್ಕಾಗಿ ತಾವು ಕರ್ನಾಟಕದಲ್ಲಿ ಹೊಸದಾಗಿ ಮಾಡಿರುವ ಏರ್ಪಾಡು ಕೇ[illegible]. ಶ್ಲಾಘನೀಯವಾಗಿರುವದಲ್ಲದೆ ಬಡವರಿಗೆ ಕಲ್ಪವೃಕ್ಷವೇ ಆಗಿರುತ್ತದೆಂಬುವದಕ್ಕೆ ಸಂಶಯವಿಲ್ಲ. ನನ್ನಂತೆ ನಮ್ಮ ದೇಶಬಂಧುಗಳು ಎಲ್ಲರೂ ಈ ಕಂಪನಿಗೆ ಪಾಲಿಸಿದಾರರಾಗಿ ಸೇರಿ ಸಂಪೂರ್ಣ ಪ್ರಯೋಜನ ಹೊಂದುತ್ತಾರಾಗಿಯೂ ಈ ಕಂಪನಿಯು ನಮ್ಮ ಕರ್ನಾಟಕದಲ್ಲಿ ತುಂಬಾ ಅಭಿವೃದ್ಧಿಯನ್ನು ಹೊಂದಿ ದೇಶ ಸೇವೆಯನ್ನು ಚಿರಕಾಲ ಮಾಡಿಕೊಂಡಿರಲೆಂದು ನನ್ನ ಅಂತಃಕರಣ ಪೂರ್ವಕವಾದ ಕೋರಿಕೆ.

ಹರಿಹರ
ತಾ. ೫-೬-೩೫

(ಸಹಿ) ಎಚ್. ಶಾಮಶಾಸ್ತ್ರಿ.

ಹರ್ಡೇಕರ ಮಂಜಪ್ಪನವರು ಬರೆದ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೧-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಕಾಯಕವೆ ಕೈಲಾಸ	೦-೩-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ವಿಜಯವಾಣಿ	೦-೨-೦
ವಿಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.**

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! **ಉತ್ತಮ ಸೌಕರ್ಯ!** **ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಥಕ್ಕ್ಯ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪ ವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ ಲೂ ಬೆಳಕು! ಸುತ್ತಲೂ ಹವ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಭೋಜನ ಮತ್ತು ವಸತಿ ೩೦-೦-೦ ತಿಂಗಳೊಂದಕ್ಕೆ ಎರಡೂಹೊತ್ತು ಭೋಜನ ೧೬-೦-೦ ತಿಂಗಳೊಂದಕ್ಕೆ
ಭೋಜನ ಮತ್ತು ವಸತಿ ೧-೮-೦ ದಿನ ಒಂದಕ್ಕೆ ಊಟ ಒಂದಕ್ಕೆ ೦-೬-೦

ಕೂಪನ್ ಕ್ರಮ— ೧೨೦ ಕೂಪನ್ ಪುಸ್ತಕ ಒಂದಕ್ಕೆ ರೂ. ೩೨-೮-೦
೬೦ ,, ,, ,, ೧೬-೮-೦
೩೦ ,, ,, ,, ೮-೮-೦

ಕಾಯಂ ಗಿರಾಕೀ ಅತಿಥಿಗಳ ಊಟದ ದರವು ರೋಖ ಕೊಟ್ಟಲ್ಲಿ ಮಾತ್ರ ೫ ಆಣೆಗೆ ಇಳಿಸಲಾಗಿದೆ
ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದತ್ತಾಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಜಯಕರ್ನಾಟಕ

ಕರ್ನಾಟಕದ ಪ್ರಮುಖ ಮಾಸಪತ್ರಿಕೆ.

ವಾರ್ಷಿಕ ಚಂದಾ ೫-೮-೦

ನಾಟ್ಯಾಂಕ

ವಿವಿಧಚಿತ್ರ! ಸರಸನಾಟಕ ಕಥೆ! ವಿದ್ವತ್‌ಪ್ರಚುರ ಲೇಖಗಳವೆ!

ತ್ವರೆಮಾಡಿರಿ—ಬೆಲೆ ೧ ರೂ.—ತೀರುತ್ತಿವೆ.

ಜಯಕರ್ನಾಟಕ ಗ್ರಂಥಮಾಲೆ

ವರ್ಷಕ್ಕೆ ೬ ಪುಸ್ತ] ವಾ. ಚಂ. ೩-೪-೦ [ಮೇಲೊಂದು ಉಚಿತಪುಸ್ತ

ಜ. ಕ. ಚಂದಾದಾರರಿಗೆ ೩ ರೂ.

ಮೂರನೆಯ ವರ್ಷದ ನಾಲ್ಕನೆಯ ಪುಸ್ತವಾದ

ಶ್ರೀ. ಹ. ಪಿ. ಜೋಶಿಯವರ

ಇದೀಗ ಹೊರಟಿದೆ] **ರಾಜವಲ್ಲಭ** [ಬೆಲೆ ಹತ್ತು ಆಣೆ.

ಕೀಚಕ ವಧೆ ಕಥೆಯನ್ನು ಆಧರಿಸಿ ಬರೆದ ಹೊಸ ಸಂಗೀತ ನಾಟಕ. ಉಚಿತ ಸಂಭಾಷಣೆ, ಮಿತವಿನೋದ, ಸುರಮ್ಯ ಪದ್ಯ ನಾಲಿಕೆ.

ಜಯಕರ್ನಾಟಕ ಕಾರ್ಯಾಲಯ
ಧಾರವಾಡ.

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಸ್ಥೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ: —

ಜಿ. ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೀ ಪೇಟೆ, ತುಮಕೂರು
(ಮೈಸೂರು ಸ್ಟೇಟ್)

ವೀರಶೈವರ

ಹೊಸ ಮುದ್ರಣಾಲಯ !   ಮುದ್ದಾದ ಮುದ್ರಣ ! !

ನಿಜಾಮು ಕರ್ನಾಟಕ ಮಹಾಜನಗಳ

ಅನುಕೂಲಕ್ಕಾಗಿ

ಹೊಸದಾಗಿ ಪ್ರಾರಂಭಿಸಲ್ಪಟ್ಟ

ಕಲ್ಯಾಣ ಕರ್ನಾಟಕ
ಪ್ರಿಂಟಿಂಗ್ ಪ್ರೆಸ್, ಗುಲಬರ್ಗಾ.

ಕಳೆದ ಜಾನೇವಾರಿ ತಿಂಗಳಿನಲ್ಲಿಯೇ ಕಲ್ಲಬುರ್ಗಿಯಲ್ಲಿ ಮೇಲಿನ ಹೆಸರಿನ ಒಂದು ಮುದ್ರಣಾಲಯವು ಹೊಸದಾಗಿ ಪ್ರಾರಂಭಿಸಲ್ಪಟ್ಟಿದೆ. ಕನ್ನಡ, ಇಂಗ್ಲೀಷ. ಉರ್ದು ಮತ್ತು ಮರಾಠಿ ಭಾಷೆಗಳಲ್ಲಿ

ಕಾರ್ಡು, ಪಾಕೀಟು, ಹುಂಡೀ ಬುಕ್, ಪ್ರಾಮಿಶರೀ ನೋಟಬುಕ್-
ಚಿಟ್ಟಿ ಬುಕ್, ಲೆಟರ್ ಹೆಡ್, ಪೇಟ ಭಾವ, ವ್ಹಿಜಿಟಿಂಗ್
ಕಾರ್ಡ್ಸ; ಲಗ್ನ ಮೊದಲಾದ ಶುಭಕಾರ್ಯಗಳ ಪತ್ರಿಕೆ;
ಜಾತ್ರೆಯ ಪತ್ರಿಕೆ; ನಾಟಕದ ಹ್ಯಾಂಡ್‌ಬಿಲ್
ಮತ್ತು ವ್ಯಾಪಾರಿಗಳಿಗೂ; ಇತರರಿಗೂ
ಉಪಯೋಗಬೀಳುವ ಇತರ
ಯಾವ

ಮುದ್ರಣ ಕೆಲಸಗಳನ್ನಾದರೂ ಸಕಾಲಕ್ಕೆ ಉತ್ತಮವಾಗಿಯೂ, ಮನೋಹರವಾಗಿಯೂ ಯೋಗ್ಯ ಬೆಲೆಯಿಂದ ಮಾಡಿಕೊಡುವೆವು. ನಮ್ಮಲ್ಲಿ ಎಲ್ಲ ಜಾತಿ ಮತ ಪಂಥದವರಿಗೆ ಉಪಯೋಗಬೀಳುವ ಪಡಿಯಚ್ಚು (ಬ್ಲಾಕು) ಗಳೂ ಇವೆ.

ಕನ್ನಡ ಮರಾಠಿ ಭಾಷೆಗಳಲ್ಲಿ ಪುಸ್ತಕಗಳನ್ನು ಕೂಡಾ ಮುದ್ರಿಸಿಕೊಡುವೆವು.

ಪರಸ್ಥಳದವರು ಟಪಾಲ ಮೂಲಕ ತಮಗೆ ಬೇಕಾದ ಯಾವುದೇ ಕೆಲಸಗಳನ್ನು ಮಾಡಿಸಿ ತರಿಸಿಕೊಳ್ಳಬಹುದು.

ನೂತನವಾಗಿ ಪ್ರಾರಂಭವಾದ ಈ ಕಾರ್ಯಕ್ಕೆ
ನಿಜಾಮು ಕರ್ನಾಟಕಸ್ಥರು ಹೆಚ್ಚಾಗಿ ವೀರಶೈವರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಬಾಲಕರಾದಿಯಾಗಿ ಸಕಲರಿಗೂ ಬಹು ಉಪಯುಕ್ತನಾದ ಧಾರ್ಮಿಕ, ಸಾಮಾಜಿಕ, ನೈತಿಕ ಮೊದಲಾದ ವಿಷಯುಗಳ ಒಳ್ಳೆಯ ಕನ್ನಡ ಪುಸ್ತಕಗಳೂ ನಮ್ಮಲ್ಲಿ ವಿಕ್ರಯಕ್ಕೆ ದೊರೆಯುತ್ತವೆ.

ಎಸ್. ಸಿ. ಶಿವಲಿಂಗಣ್ಣ
ಮ್ಯಾನೇಜರ್
ಕಲ್ಯಾಣ ಕರ್ನಾಟಕ ಪ್ರೆಸ್, ಗುಲಬರ್ಗಾ.

ಪ್ಲೇಗ ಸಂಜೀವಿನಿ.

ಅತ್ಯಾಶ್ಚರ್ಯಕರವಾದ ಗುಣ! **ಕೇವಲ ೬ ತಾಸುಗಳಲ್ಲಿಯೇ ಗುಣ!**

ಇದನ್ನು ಸೇವನೆ ಮಾಡುವದರಿಂದ ಪ್ಲೇಗಿನ ಭಯವೇ ಇಲ್ಲ!

೧೦೦ ಕ್ಕೆ ೧೦೦ ರಂತೆ ಗುಣ!!

ಶ್ರೀ ಮನ್ನಿರಂಜನ ಶಾಂತವೀರ ಸ್ವಾಮಿಗಳು ಗುರುಮಠಕಲ್ ಇವರು ಲೋಕ ಕಲ್ಯಾಣಾರ್ಥವಾಗಿ **ಪ್ಲೇಗ ಸಂಜೀವಿನಿ** ಎಂಬ ದಿವ್ಯ ಔಷಧಿಯನ್ನು ಶೋಧಮಾಡಿರುವರು. ಪ್ಲೇಗ ರೋಗವು ಎಷ್ಟು ಘಾತುಕವದೆಯೆಂಬುದನ್ನು ಹೇಳುವ ಅವಶ್ಯವಿಲ್ಲ. ಈ ಪ್ಲೇಗಿನಿಂದ ಸಾವಿರಾರು ಜನರು ಸಾಯುತ್ತಿರುತ್ತಾರೆ. ಇದನ್ನು ತಡೆಯುವದಕ್ಕಾಗಿ ಎಷ್ಟೋ ಔಷಧಗಳನ್ನು ತಯಾರ ಮಾಡಿರುವರು. ಅವುಗಳಿಂದೇನೂ ಗುಣವಾದದ್ದು ಕಂಡು ಬರುವದಿಲ್ಲ. ಈ ಪ್ಲೇಗ ಸಂಜೀವಿನಿಯಿಂದ **ಆರೇ ತಾಸುಗಳಲ್ಲಿಯೇ** ಗುಣವಾಗುತ್ತದೆ. ಇದರ ಒಂದು ಬಾಟ್ಲಿಯ ಕಿಮ್ಮತ್ತು ೧ ರೂ. ೫ ಆಣೆ.

ವಿಶೇಷ ಮಾಹಿತಿಯನ್ನು ಅನುಪಾನ ಪತ್ರಿಕೆಯಲ್ಲಿ ನೋಡಿರಿ.

ವಿಶೇಷ ಸೂಚನೆ— ಅನುಪಾನ ಪತ್ರಿಕೆಯ ಸೂಚನೆಯ ಮೇರೆಗೆ ಔಷಧವನ್ನು ತೆಗೆದುಕೊಂಡಲ್ಲಿ ಖಾತ್ರಿಯಿಂದ ಗುಣವಾಗುವದು. ಎಲ್ಲ ಕಡೆಗೂ ಏಜಂಟರು ಬೇಕು. ವಿಳಾಸ—

ಏಜಂಟ್
ಬಶೆಟ್ಟೆಪ್ಪ ಬಸಪ್ಪ ಹಲಕುರ್ಕಿ,
ಬಾಗಲಕೋಟೆ

ಪ್ಲೇಗ ಸಂಜೀವಿನಿ ಆಫೀಸ್
ಗುಲಬರ್ಗಾ.

ಮಹಾರೋಗ ಸಂಜೀವಿನಿ.

ಶ್ರೀಮನ್ನಿರಂಜನ ಗುರುಮಠಕಲ್ಲ ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ

ಮಹಾರೋಗ ಸಂಜೀವಿನಿ,

ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.

ಇತ್ತಿತ್ತಲಾಗಿ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ಮಿತಿಮೀರಿ ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. **ಈ ಕೆಟ್ಟಬೇನೆಯು (ಪ್ಲೇಗ ಮಾರಿಕಾ,) ಖಜ್ಜಿಗಳಂತೆ** ಒಬ್ಬರಿಂದ ಮತ್ತೊಬ್ಬರಿಗೆ ತಗಲತಕ್ಕ ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ಮೃತ್ಯುವಿನ ತುತ್ತಾಗುವರು. ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಖಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ನಾರಸಂಹಾರಿ, ಕೂಸುಗಳ ಹೊಟ್ಟೆಯೊಳಗಿನ ಬೇನೆ** ವಗೈರೆ ರೋಗಗಳ ಮೇಲೆ ಆಶ್ಚರ್ಯಕಾರಕ ಔಷಧಿಗಳನ್ನು ಕಂಡು ಹಿಡಿದ ಸದರಿ ಪೂಜ್ಯಪಾದರೇ ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ ಔಷಧಿಯನ್ನು ಶೋಧಮಾಡಿ ಪ್ರಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೆಯುಳ್ಳವರು ಮುದ್ದಾಂ ಒಮ್ಮೆ ತಮ್ಮ ರೋಗ ಲಕ್ಷಣಗಳನ್ನೆಲ್ಲ ತೋರಿಸಿದರೆ ಅದಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ. ಮೊದಲು ಔಷಧದ ಅರ್ಧ ಕಿಮ್ಮತ್ತು ಕೊಟ್ಟು ಔಷಧ ತಕ್ಕೊಳ್ಳಲು ಪ್ರಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಅಗ್ಗ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು ಬೇರೆ ದಿವಸಗಳಲ್ಲಿ ಬರಬಾರದು.

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳತಕ್ಕದ್ದು. ವಿಶೇಷ ಸಂಗತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು.

ಮ್ಯಾನೇಜರ ಆರೋಗ್ಯ ಮಂದಿರ, ಕಿರೀಟಮಠ ಕಸಬಾ ಕ್ಯಾಂಪ **ಸೊಲ್ಲಾಪುರ ಸಿಟಿ.**

ಹೊಸ ವರುಷ ಬಂದಿತು ! ಜಾಗ್ರತೆ ಚಂದಾದಾರರಾಗಿರಿ ! !

ಧಾರ್ಮಿಕ ಉಜ್ವಲ ಲೇಖನಗಳ ಪತ್ರಿಕೆ!

ಸಂಪಾದಕರು:— ಶ್ರೀ. ಹರ್ಡೇಕರ್ ಮಂಜಪ್ಪನವರು

ಶರಣ ಸಂದೇಶ.

ವಾರ್ಷಿಕ ಚಂದಾ:- ಮೂರು ರೂಪಾಯಿಗಳುಮಾತ್ರ

ಹೊಸ ವರುಷದಿಂದ ಹೊಸ ಲೇಖನಗಳ ಏರ್ಪಾಟು.

(ಹೊಸ ವರುಷ ಆಗಸ್ಟ್ ೧೫ನೆಯ ತಾರೀಖಿಗೆ ಪ್ರಾರಂಭ.)

ಈಗಿನಂತೆಯೇ

ರಾಜಕೀಯ, ಸಾಂಪತ್ತಿಕ, ಮತ್ತು ವಿವಿಧವಿಷಯಗಳನ್ನು ಪ್ರಕಟಿಸುವುದಲ್ಲದೆ

ಕೈ. ವೀರಬಸವಪ್ಪ ಶ್ರೇಷ್ಠಿಯವರು ಭಗವದ್ಗೀತೆಯಲ್ಲಿ ವೀರಶೈವ ತತ್ವಗಳನ್ನು ಸಂಶೋಧನಾತ್ಮಕ ದೃಷ್ಟಿಯಿಂದ ವಿವೇಚಿಸಿದ್ದರ ಕೆಲವು ಮಹತ್ವದ ವಿಚಾರಗಳು, ಕನ್ನಡ ಭಾಷೆಯಲ್ಲಿಯೇ ಇಲ್ಲದಿರುವ ವೇದಗಳಲ್ಲಿಯ ವಿವಿಧ ಸಂಗತಿಗಳು ಮತ್ತು ವೇದಗಳ ಸಂಬಂಧವಾದ ವಿದ್ವಾಂಸರ ವಿಚಾರ ಪರಿಪ್ಲುತ ಶ್ರೇಷ್ಠ ಲೇಖನಗಳು ಈ ಹೊಸ ವರುಷದಿಂದ ಪ್ರಕ ವಾಗುವವು.

ಮ್ಯಾನೇಜರ್— "ಶರಣ ಸಂದೇಶ"
ಪೋ. ಆಲಮಟ್ಟಿ ಜಿ. ವಿಜಾ|

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಿಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ್. ಮಹಾಗಾಂವ್, ಜಿ. ಗುಲಬರ್ಗಾ.

ನಾರಿನ ಮೇಲೆ ರಾಮ ಬಾಣ ಔಷಧ.

'ಗಿನೋನಾಲ್'

ನಾರಿನಿಂದ ಬಳಲುವವರು ಈ ನಮ್ಮ ದಿವ್ಯ ಔಷಧವನ್ನು ಎರಡಾವರ್ತಿ ಉಪಯೋಗಿಸಿದರೆ ಖಂಡಿತ ಗುಣಬರುತ್ತದೆ. ಒಮ್ಮೆ ಉಪಯೋಗಿಸಿ ಅನುಭವ ಪಡೆಯಿರಿ. ಒಂದು ಬಾಟ್ಲಿಯ ಕಿಂ. ೧ ರೂ. ಟಪಾಲವೆಚ್ಚ ಬೇರೆ. ಅನುಪಾನ ಪತ್ರಿಕೆ ಔಷಧದ ಜೊತೆಗೆ.

ಮ್ಯಾನೇಜರ—'ಗಿನೋನಾಲ್' ಡಿಪೋ
ಗುಲಬರ್ಗಾ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

CONTD IN
NEXT ROLL

END

END

END